ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಣ್ಣ ಕಥೆಗಳು-೨೦೧೨-೨೦೧೩

ಕಂನಾಡಿಗಾ ನಾರಾಯಣ

ಸಣ್ಣ ಕಥೆಗಳು

೨೦೧೨-೨೦೧೩

(ಸಂಯುಕ್ತ ಸಂಚಿಕೆ)

ಸಂಪಾದಕರು

ಕಂನಾಡಿಗಾ ನಾರಾಯಣ

ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.
ದೂರವಾಣಿ:080-22211730/22106460
www.karnatakasahithyaacademy.org
Email: sahithya.academy@gmail.com

SANNA KATHEGALU 2012 AND 2013
A collection of selected Kannada Short Stories published in periodicals during the calendar year of 2012 and 2013

Edited by
Kamnadiga Narayana

Published by
C.H.Bhagya
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

ಪುಟಗಳು	:	viii+
ಬೆಲೆ	:	₹ ೩೨೦/-
ಮೊದಲ ಮುದ್ರಣ	:	೨೦೧೬
ಪ್ರತಿಗಳು	:	೫೦೦

Pages	:	viii+
Price	:	₹ 320/-
First impression	:	2016
Copies	:	500

ಪ್ರಕಾಶಕರು:
ಸಿ.ಎಚ್.ಭಾಗ್ಯ
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-560 002.

ಮುದ್ರಕರು:
ಸರ್ಕಾರಿ ಕೇಂದ್ರ ಮುದ್ರಣಾಲಯ
ಆರ್.ವಿ.ಕಾಲೇಜ್ ಅಂಚೆ
8ನೇ ಮೈಲಿ, ಮುತ್ತುರಾಯನಗರ
ಜ್ಞಾನಭಾರತಿ, ಮೈಸೂರು ರಸ್ತೆ
ಬೆಂಗಳೂರು-560 059.
080- 28483133 / 28484518

ಅಧ್ಯಕ್ಷರ ಮಾತು

2012 ಮತ್ತು 2013ರ ಕಥಾ ವಾರ್ಷಿಕ(ಸಂಯುಕ್ತ ಸಂಚಿಕೆ)ದ ಸಂಪಾದಕರಾದ ಶ್ರೀ ಕಂನಾಡಿಗಾ ನಾರಾಯಣ ಅವರು ಅತ್ಯಂತ ಪರಿಶ್ರಮದಿಂದ, ಪರಿಣತಿಯಿಂದ ಕಥೆಗಳನ್ನು ಆಯ್ಕೆ ಮಾಡಿ ಸಂಗ್ರಹಿಸಿದ್ದಾರೆ. ಆದ್ದರಿಂದ ಅವರನ್ನು ಸಾಹಿತ್ಯ ಅಕಾಡೆಮಿಯು ಹೃದಯಪೂರ್ವಕವಾಗಿ ಅಭಿನಂದಿಸುತ್ತದೆ. ಆಯಾ ವರ್ಷದ ಸಂಗ್ರಹ ಕಾರ್ಯವನ್ನು ಆಯಾ ವರ್ಷದ ಪ್ರಾರಂಭದಲ್ಲಿ ಮಾಡಿದರೆ ಆಯ್ಕೆಯ ಕೆಲಸ ಸುಲಭವಾಗುತ್ತದೆ ಎಂಬ ಸಂಪಾದಕರ ಮಾತು ಸರಿಯಾಗಿದೆ. ಆದರೆ 2011ರಿಂದ 2014ರ ವರೆಗೆ ಅಕಾಡೆಮಿಗೆ ಸರ್ಕಾರವು ಹೊಸ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಿಸದೆ ಇದ್ದದ್ದರಿಂದ ಮೂರು ವರ್ಷಗಳ ಕೆಲಸವು ನಿಂತುಹೋಗಿತ್ತು. ಈ ಹಿಂದೆ ಮಾಡದೆ ಉಳಿದ ಎಲ್ಲ ಕೆಲಸವನ್ನು ವಿಳಂಬವಾದರೂ ಕೈಗೆತ್ತಿಕೊಂಡಿದ್ದಲ್ಲದೆ, ನಮ್ಮ ಅವಧಿಯ ವಾರ್ಷಿಕಗಳನ್ನೂ ಪ್ರಕಟಿಸುತ್ತಿದ್ದೇವೆ. ಹಾಗಾಗಿ ಎರಡು ಪಟ್ಟಿನ ಒತ್ತಡದಲ್ಲಿದ್ದ ನಾವೂ ಅತ್ಯಂತ ಪರಿಶ್ರಮದಿಂದ ವಾರ್ಷಿಕಗಳನ್ನು ಮುದ್ರಿಸುತ್ತಿದ್ದೇವೆ. ಶ್ರೀ ಕಂನಾಡಿಗಾ ನಾರಾಯಣ ಅವರಿಗೆ ಈ ವಿಷಯ ಗೊತ್ತಿದೆ. ಹಾಗೂ ಸಾರ್ವಜನಿಕರಿಗೆ ತಿಳಿಯದ್ದರಿಂದ ಈ ವಿಷಯವನ್ನು ನಾನಿಲ್ಲಿ ನಿವೇದಿಸುತ್ತಿದ್ದೇನೆ. ಓದುಗ ಮಹನೀಯರೂ ನಮ್ಮ ಸಮಸ್ಯೆಗಳನ್ನು, ಪರಿಶ್ರಮವನ್ನು ತಿಳಿದುಕೊಳ್ಳಲಿ ಎಂದು ಇಲ್ಲಿ ವಿನಂತಿಸುತ್ತೇನೆ.

2012ರ ಕಥಾಸಂಗ್ರಹದಲ್ಲಿ ಕುಂ.ವೀ., ಕೆ. ಸತ್ಯನಾರಾಯಣ, ಬಿ.ಟಿ. ಜಾಹ್ನವಿ ಮತ್ತು ಎಂ.ಎಸ್. ವೇದಾರಂಥ ಪಳಗಿದ ಕತೆಗಾರರ ಕಥೆಗಳಿವೆ. ಅದರಂತೆ 2013ರ ಕಥಾಸಂಗ್ರಹದಲ್ಲಿ ಅಮರೇಶ ನುಗಡೋಣಿ, ಪ್ರಹ್ಲಾದ ಅಗಸನಕಟ್ಟೆ, ಸುಮಂಗಲಾ, ಬಸು ಬೇವಿನಗಿಡದ, ಸಂದೀಪನಾಯಕರಂಥ ಸುಪರಿಚಿತ ಕತೆಗಾರರಿದ್ದಾರೆ, ಉಳಿದವರಲ್ಲಿ ಕೆಲವರು ಹೊಸಬರು. ಹೀಗೆ ಹಲವು ತಲೆಮಾರಿನ ಕತೆಗಾರರ ಕತೆಗಳಲ್ಲಿಯ ಮುನ್ನಡೆಗಳ ದಾಖಲಾತಿ ಇಲ್ಲಿದೆ. ಪ್ರಾದೇಶಿಕತೆಯ ದೃಷ್ಟಿಯಿಂದ ಈ ಕತೆಗಾರರು ವಿಭಿನ್ನ ಪರಿಸರದಿಂದ ಬಂದವರಾದ್ದರಿಂದ ಪ್ರಾದೇಶಿಕ ಭಾಷೆಗಳ ಸೊಗಡೂ ಇದೆ. ಅದೇ ರೀತಿ ಕತೆಗಳ ವಸ್ತು, ನಿರೂಪಣೆ, ತಂತ್ರ, ಪಾತ್ರ ನಿರ್ವಹಣೆಯಲ್ಲೂ ವೈವಿಧ್ಯತೆ ಇದೆ. ಒಟ್ಟು ಎರಡೂ ಕಥಾಸಂಗ್ರಹದಲ್ಲಿ ಮನಸ್ಸಿಗೆ ಸಂತಸ ನೀಡುವ ಕತೆಗಳಿದ್ದು ಓದುಗರ ಮನಸ್ಸಿಗೆ ಮುದ ನೀಡಲಿವೆ ಎಂಬ ಭರವಸೆಯೊಂದಿಗೆ ಇಲ್ಲಿಯ ಎಲ್ಲ ಕತೆಗಾರರನ್ನು ಅಭಿನಂದಿಸುತ್ತೇನೆ.

ಹಾಗೆಯೇ ಈ ಪುಸ್ತಕವನ್ನು ಹೊರತರಲು ಸಹಕರಿಸಿ ಶ್ರಮಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀಮತಿ ಸಿ.ಎಚ್. ಭಾಗ್ಯ ಮತ್ತು ಶ್ರೀ ಹರೀಶ್ ಹಾಗೂ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯಬಯಸುತ್ತೇನೆ.

ಬೆಂಗಳೂರು
2016

ಮಾಲತಿ ಪಟ್ಟಣಶೆಟ್ಟಿ
ಅಧ್ಯಕ್ಷರು

ಸಂಪಾದಕರ ಮಾತು

೨೦೧೪ರ ಸಪ್ಟೆಂಬರ್–ಅಕ್ಟೋಬರ್‌ನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ತಮ್ಮ ನಿರಂತರ ಕಾರ್ಯಕ್ರಮಗಳಲ್ಲಿ ಒಂದಾದ ನಿಯತ ಕಾಲಿಕೆಗಳಲ್ಲಿ ಪ್ರಕಟವಾದ ಆಯಾ ವರ್ಷದ ಸಣ್ಣ ಕತೆಗಳ ಪೈಕಿ ೨೦೧೨ ಮತ್ತು ೨೦೧೩ನೇ ವರ್ಷದ ಸಂಯುಕ್ತ ಸಂಚಿಕೆಯನ್ನು ಸಂಗ್ರಹಿಸಿಕೊಡಲು ನನಗೆ ಸೂಚಿಸಿದಾಗ, ಮಹಾತ್ವಾಕಾಂಕ್ಷೆ ಕೆಲಸವೊಂದಕ್ಕೆ ನನ್ನನ್ನು ಬಳಸಿಕೊಂಡದ್ದರ ಬಗ್ಗೆ ಸಹಜವಾಗಿ ಖುಷಿಯಾಯಿತು. ಅದೇ ಹುಮ್ಮಸ್ಸಿನಲ್ಲಿ ಕಥೆಗಾರ ಮಿತ್ರರಿಗೆಲ್ಲ ಇ–ಮೇಲ್, ಮೆಸೇಜ್ ಹಾಗೂ ದೂರವಾಣಿ ಮೂಲಕ ಸಂಪರ್ಕಿಸಿ ಕಥೆಗಳನ್ನು ಕಳಿಸಿಕೊಡಲು ಕೋರಿಕೊಂಡೆ. ಈ ಹಿಂದೆ ಇದೇ ತೆರನಾದ ಸಂಪಾದನೆ ಕೆಲಸ ಕೈಗೊಂಡು ಕನ್ನಡ ಸಾಹಿತ್ಯ ಪರಿಷತ್ತಿಗೆ, ಖಾಸಗಿ ಪ್ರಕಾಶನ ಸಂಸ್ಥೆಯೊಂದಕ್ಕೆ ಮಹತ್ವದ ಪುಸ್ತಕಗಳನ್ನು ಸಂಗ್ರಹಿಸಿಕೊಟ್ಟಿದ್ದ ಅನುಭವದ ಹಿನ್ನೆಲೆಯಲ್ಲಿ ಅತ್ಯುತ್ತಮ ಸಂಗ್ರಹ ಮಾಡಿಕೊಡಬಲ್ಲೆನೆಂಬ ಬಗ್ಗೆ ಯಾವುದೇ ಅನುಮಾನ ಇರಲಿಲ್ಲ. ಆದರೆ ಕಾಲಕ್ರಮೇಣ ಸಂಗ್ರಹವಾದ ಕಥೆಗಳನ್ನು ಮುಂದೆ ಹಾಕಿಕೊಂಡು ಕುಳಿತಾಗ ನಿಜಕ್ಕೂ ನಿರಾಸೆಯಾಯಿತು. ಕೆಲ ಕಥೆಗಾರರು ಈ ಅವಧಿಯಲ್ಲಿ ಪ್ರಕಟವಾಗಿದ್ದ ನಾಲ್ಕೈದು ಕಥೆಗಳನ್ನು ಕಳಿಸಿದ್ದರೂ ಯಾವುದೂ ತೃಪ್ತಿ ಕೊಡುವಂತಿರಲಿಲ್ಲ. ಕೊನೆಗೆ ನಾನೇ ಓದಿದ್ದ ಕಥೆಗಳ ಸಂಚಿಕೆಗಳನ್ನು ಹುಡುಕಾಡಿ ಒಂದಷ್ಟು ಕಥೆಗಳನ್ನು ಸಂಗ್ರಹಿಸಿದೆ. ಅಪರೂಪಕ್ಕೆ ಕಥೆ ಬರೆಯುವ ನನ್ನ ಓರಗೆಯ ಕಥೆಗಾರರು ಎಲ್ಲೆಂದರಲ್ಲಿ ಪ್ರಕಟಿಸದೆ ವಿಶೇಷಾಂಕಗಳಿಗೆ ಆಹ್ವಾನಿತ ಕಥೆಗಳನ್ನು ಬರೆಯುವ ಮಟ್ಟಕ್ಕೆ ತಲುಪಿದ್ದರು. ಸಾಪ್ತಾಹಿಕ, ಮಾಸಿಕಗಳಲ್ಲಿ ಪ್ರಕಟವಾಗಿದ್ದ ಎಷ್ಟೋ ಕಥೆಗಳನ್ನು ಕಾಲ ಕರಗಿ ಹೋದುದರ ಫಲವಾಗಿ ಸಂಗ್ರಹಿಸಲು ಸಾಧ್ಯವಾಗಲಿಲ್ಲ. ಆಗೆಲ್ಲ ಅಕಾಡೆಮಿಯು ಆಯಾ ವರ್ಷದ ಸಂಗ್ರಹ ಕಾರ್ಯವನ್ನು ಆಯಾ ವರ್ಷದ ಆರಂಭದಲ್ಲೇ ನೀಡಿದ್ದರೆ ಒದಗಬಹುದಾದ ಅನುಕೂಲತೆಗಳ ಬಗ್ಗೆ ಚಿಂತಿಸುತ್ತಿದ್ದೆ..

ಅಕಾಡೆಮಿಯು ವರ್ಷಕ್ಕೆ ತಲಾ ೪೦ ಕಥೆಗಳಂತೆ ಸಂಗ್ರಹಿಸಿಕೊಡಲು ಸೂಚಿಸಿದ್ದರೂ ಸಹ ಗುಣಮಟ್ಟದ ದೃಷ್ಟಿಯಿಂದ ಹಾಗೂ ಪುಸ್ತಕದ ಗಾತ್ರದ ದೃಷ್ಟಿಯಿಂದ ಸಂಯುಕ್ತ ಸಂಚಿಕೆಯ ಕಥೆಗಳ ಮಿತಿಯನ್ನು ನಲವತ್ತಕ್ಕೆ ಸೀಮಿತಗೊಳಿಸಿಕೊಂಡೆ. ಕೆಲವರ ಕಥೆಗಳನ್ನು ಗುಣಮಟ್ಟದ ದೃಷ್ಟಿಯಿಂದ ಕೈಬಿಡಬೇಕಾಗಿ ಬಂದರೆ, ಇನ್ನು ಕೆಲವರು ನನ್ನ ಪುನರಾವರ್ತಿತ ಕೋರಿಕೆಗೂ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ಮತ್ತೆ ಕೆಲವರು ತಾವು ಈ ಮಿತಿಗಳನ್ನೆಲ್ಲ ದಾಟಿದವರಂತೆ ಕಥೆಗಳನ್ನು ಬಳಸಿಕೊಳ್ಳಲು ನಯವಾಗಿ ತಿರಸ್ಕರಿಸಿದರು. ಇನ್ನು

ಕೆಲ ಲೇಖಕರ ವಿಳಾಸವಾಗಲೀ, ಸಂಪರ್ಕವಾಗಲೀ ಸಿಗದೆ ಸಂಗ್ರಹಿಸಿದ್ದ ಕಥೆಗಳಲ್ಲಿಯೂ ಕೆಲವನ್ನು ಕೈ ಬಿಡಬೇಕಾಗಿ ಬಂತು. ಹಾಗಾಗಿ ಅನುಮತಿ ಸಿಕ್ಕು ಅಂತಿಮವಾಗಿ ಉಳಿದ ಕಥೆಗಳ ಸಂಖ್ಯೆ ಪ್ರಸ್ತುತ ಇಳಿಕ್ಕೆ ಬಂದು ನಿಂತಿದೆ.

ಇಲ್ಲಿ ಉಳಿದಿರುವ ಕಥೆಗಳೂ ಕೂಡ ಒಂದಕ್ಕಿಂತ ಒಂದು ಭಿನ್ನವಾಗಿವೆ. ವಿವಿಧ ವಸ್ತು, ವಿನ್ಯಾಸ, ಆಕೃತಿಗಳ ದೃಷ್ಟಿಯಿಂದಲೂ ಅಧ್ಯಯನಯೋಗ್ಯವಾಗಿವೆ. ಅನೇಕ ಮಿತಿಗಳ ನಡುವೆಯೂ ಪ್ರಾತಿನಿಧಿಕವಾಗಿ ಉತ್ತಮವಾದ ಸಂಗ್ರಹವೊಂದನ್ನು ಮಾಡಿರುವ ತೃಪ್ತಿಯನ್ನಂತೂ ನನಗೆ ನೀಡಿದೆ.

ಇಂಥದೊಂದು ಜವಾಬ್ದಾರಿಯನ್ನು ವಹಿಸಿಕೊಟ್ಟ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಮಾಲತಿ ಪಟ್ಟಣಶೆಟ್ಟಿ ಅವರಿಗೂ, ರಿಜಿಸ್ಟ್ರಾರ್‌ರಾದ ಶ್ರೀಮತಿ ಸಿ.ಎಚ್.ಭಾಗ್ಯ ಅವರಿಗೂ, ಅಕಾಡೆಮಿ ಸದಸ್ಯರಾದ ಡಾ. ಕುಂಸಿ ಉಮೇಶ್, ಶ್ರೀ ಚಂದ್ರಶೇಖರ್ ತಾಳ್ಯ, ಶ್ರೀಮತಿ ಬಿ.ಟಿ.ಜಾಹ್ನವಿ, ಪ್ರೊ. ಜಿ. ಶರಣಪ್ಪ ಅವರಿಗೂ, ತಮ್ಮ ಕಥೆಗಳನ್ನು ಇಲ್ಲಿ ಬಳಸಿಕೊಳ್ಳಲು ಅನುಮತಿ ನೀಡಿದ ಎಲ್ಲಾ ಸಹ ಕಥೆಗಾರರಿಗೂ ನನ್ನ ನಮನಗಳು ಸಲ್ಲಬೇಕು.

– ಕಂನಾಡಿಗಾ ನಾರಾಯಣ

ಪರಿವಿಡಿ

ಅಧ್ಯಕ್ಷರ ಮಾತು iii
ಸಂಪಾದಕರ ಮಾತು v

2012 :

1. ಕರುಳಿನ ಕರೆ – ಕುಂ ವೀರಭದ್ರಪ್ಪ 03–11
2. ಹೆಗ್ಗುರುತು – ಕೆ.ಸತ್ಯನಾರಾಯಣ 12–26
3. ಆಶ್ರಿತರು – ಬಿ.ಟಿ.ಜಾಹ್ನವಿ 27–35
4. ಪೆಟ್ಟಿಗೆಯಲ್ಲೊಂದು ಜೀವ – ಎಂ.ಎಸ್.ವೇದಾ 36–45
5. ಕುಡಿ ಕಟ್ಟಿದ ದೀಪ – ಸುನಂದಾ ಪ್ರಕಾಶ್ ಕಡಮೆ 46–53
6. ಜಿನ್ನ್ ಖಾದಿರಿಯ ಜನ್ನತ್ ಪ್ರಸಂಗವು – ಬಿ.ಎಂ.ಹನೀಫ್ 54–64
7. ಆಪರೇಷನ್ ಅಶ್ವಮೇಧ – ನಾಗಮಂಗಲ ಕೃಷ್ಣಮೂರ್ತಿ 65–74
8. ಹಾಲು ಹೊಳೆಯಲಿ ಮಿಂದವರು – ಡಿ.ಎಸ್.ಚೌಗಲೆ 75–83
9. ಗಂಡಕೀ ಝೋನ್ – ಕಣಾದ ರಾಘವ 84–93
10. ಕಾಡು ಹಕ್ಕಿ – ಟಿ.ಗೋವಿಂದರಾಜು 94–102
11. ಅವಳ ಸಂಗ – ಇಂದ್ರಕುಮಾರ್ ಎಚ್.ಬಿ. 103–112
12. ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ – ಎಚ್.ಎಸ್.ಅನುಪಮಾ 113–124
13. ಗಾಲಿಬ್‌ನ ಮನೆಯ ಮಾಡು–ಮಮತಾ ಆರ್ 125–131
14. ತಲ್ಲಣಿಸದಿರು ಮನವೇ – ಎಸ್.ಬಿ.ಜೋಗುರ 132–139
15. ಅಮೃತಮತಿ ಇನ್ನೂ ಸತ್ತಿಲ್ಲ – ಮೋದೂರು ತೇಜ 140–146
16. ಕಿಬ್ಬದಿಯ ಕೀಲುಳುಕಿ – ಚನ್ನಪ್ಪ ಅಂಗಡಿ 147–153
17. ದೇವರ ತಂದವರು – ಮಂಜುನಾಥ ನಾಯ್ಕ್ 154–160

2013 :

1. ತೇಲದ ಗುಂಡು, ಮುಳುಗದ ಚೆಂಡು – ಅಮರೇಶ ನುಗಡೋಣಿ 163–180

2. ಭಯೋಮೆಟ್ರಿಕ್ಸ್ – ಪ್ರಹ್ಲಾದ ಅಗಸನಕಟ್ಟೆ 181–189

3. ಒಂದೇ ಒಂದು ಬಿಸಿರೊಟ್ಟಿ – ಸುಮಂಗಲಾ 190–204

4. ಧರೆ ಹತ್ತಿ ಉರಿದೊಡೆ – ಲೋಕೇಶ ಅಗಸನಕಟ್ಟೆ 205–214

5. ಬುದ್ಧ ಗಂಟೆಯ ಸದ್ದು – ಮಹಂತೇಶ ನವಲಕಲ್ 215–224

6. ಬಣ್ಣದ ಜಿಂಕೆ – ಕಂನಾಡಿಗಾ ನಾರಾಯಣ 225–242

7. ಅಮೃತವ ಕಡೆವಲ್ಲಿ – ಬಸು ಬೇವಿನಗಿಡದ 243–252

8. ನಾಳೆಗೆ ಬರುವವನು – ಸಂದೀಪ ನಾಯಕ 253–266

9. ಗೋರುಕನ – ಕನಕರಾಜು ಆರನಕಟ್ಟೆ 267–280

10. ಬಟ್ಟೆ ಇಲ್ಲದ ಊರಿನಲ್ಲಿ – ಮಿರ್ಜಾ ಬಷೀರ್ 281–291

11. ಗರ್ದಿಗಮ್ಮತ್ತ – ಬಸವಣ್ಣೆಪ್ಪ ಕಂಬಾರ 292–302

12. ರೆಕ್ಕೆ ಹಾವು – ಟಿ.ಕೆ.ದಯಾನಂದ 303–314

13. ಮಠದ ಹೋರಿ – ಹನುಮಂತ ಹಾಲಿಗೇರಿ 315–332

14. ಪ್ರೀತಿಯ ಮಡಿಲಲ್ಲಿ ಕುಳಿತ ಪಾತರಗಿತ್ತಿ – ಶ್ರೀನಿವಾಸ ಜೋಕಟ್ಟೆ 333–342

15. ನೆಲದೂರ ಜನರ ಕಥೆ – ಗವಿಸಿದ್ಧ ಹೊಸಮನಿ 343–358

16. ಆಶೀರ್ವಾದ – ಲಕ್ಷ್ಮಣ ಬಾದಾಮಿ 359–364

17. ಮತ್ತೆ ಮಳೆ ಬಂತು – ಶಿವಲಿಂಗಪ್ಪ ಹಂದಿಹಾಳು 365–371

ಅನುಬಂಧ ಲೇಖಕರ ವಿಳಾಸ 372–377

၂၀၈၂

ಕರುಳಿನ ಕರೆ

ಕುಂ. ವೀರಭದ್ರಪ್ಪ

ಕಳೆದೆರಡು ಮೂರು ದಿವಸಗಳಿಂದ ಮಾನಸಿಕವಾಗಿಯೂ ದೈಹಿಕವಾಗಿಯೂ ಅಸ್ತವ್ಯಸ್ತಗೊಂಡಿರುವ ಇಪ್ಪತ್ತಾರು ವರ್ಷ ವಯೋಮಾನದ ಈ ತರುಣನಿಗೆ ಎರಡು ವ್ಯಕ್ತಿತ್ವಗಳಿವೆ. ವರುಣ ಎಂಬ ಹೆಸರು ಸಾಫ್ಟ್‌ವೇರ್ ವಲಯದಲ್ಲಿ ಚಿರಪರಿಚಿತ. ಕಾರಣ ಒಂದೂವರೆ ವರ್ಷದ ಹಿಂದೆ ಅಪರೂಪದ ಸಾಫ್ಟ್‌ವೇರ್ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸದಿದ್ದಲ್ಲಿ ಎಲ್ಲರ ಹಾಗೆ ತಾನೂ ಮಾಮೂಲು ಇಂಜಿನಿಯರಾಗಿರುತ್ತಿದ್ದನೇನೊ! ಆದರೆ ತಾನು ಅಭಿವೃದ್ಧಿಪಡಿಸಿದ್ದು ಕಂಪ್ಯೂಟರ್ ತನ್ನ ಬಳಕೆದಾರನ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ತಂತ್ರಜ್ಞಾನವನ್ನು. ತನ್ನ ಸಂಶೋಧನೆಯನ್ನು ಕೊರಿಯಾ ಮೂಲದ ಅಪಾಚಿ ಎಂಬ ಹೆಸರಿನ ಸಾಫ್ಟ್‌ವೇರ್ ಕಂಪನಿ ಇಷ್ಟಪಟ್ಟಿತಲ್ಲದೆ ಆತನ ವಾರ್ಷಿಕ ಪಗಾರವನ್ನು ದುಪ್ಪಟ್ಟು ಹೆಚ್ಚಿಸಿ ತನ್ನಲ್ಲಿಯೇ ಉಳಿಸಿಕೊಂಡಿತು. ಆತನ ಅಪೇಕ್ಷೆ ಮೇರೆಗೆ ಬೆಂಗಳೂರಿನ ತನ್ನ ಬ್ರಾಂಚಿನ ಉಸ್ತುವಾರಿಯನ್ನು ಆತನ ಹೆಗಲಿಗೆ ವರ್ಗಾಯಿಸಿ ಅನುಕೂಲಗಳನ್ನು ಒದಗಿಸಿಕೊಟ್ಟಿತು. ಇನ್ನು ತನ್ನ ವ್ಯಕ್ತಿತ್ವದ ಇನ್ನೊಂದು ಮಗ್ಗುಲೆಂದರೆ ತಾನು ಸ್ವಭಾವತಃ ಸೃಜನಶೀಲ ಲೇಖಕ. ನಚಿಕೇತ ಎಂಬ ಕಾವ್ಯನಾಮವಿರಿಸಿಕೊಂಡು ಕತೆ ಕವಿತೆಗಳನ್ನು ಬರೆಯುವುದರ ಮೂಲಕ ಕನ್ನಡ ಸಾರಸ್ವತಲೋಕದಲ್ಲಿ ತಕ್ಕಮಟ್ಟಿಗೆ ಹೆಸರಾಗಿರುವನು. ಆ ಹೆಸರಿನಲ್ಲಿ ಬರೆಯುವಂತೆ ತನಗೆ ಸೂಚಿಸಿದ ವ್ಯಕ್ತಿ ತನ್ನ ತಂದೆಯೇ! ಅವರೂ ತನ್ನಂತೆ ಜನಪ್ರಿಯ ಲೇಖಕರಲ್ಲದಿದ್ದರೂ ಹವ್ಯಾಸಿ ವಿಮರ್ಶಕರೆಂದೇ ಸೀಮಿತವಲಯದಲ್ಲಿ ಹೆಸರು ಮಾಡಿರುವ ಪ್ರೊ. ಪ್ರಹ್ಲಾದರಾಯರು. ಆದರೆ ಅಂಥವರು ತನ್ನ ಕೇಳಿದೊಡನೆ ತಾನು ದಿಗ್ಭ್ರಮೆಗೊಳಗಾಗಿದ್ದು ಎಷ್ಟು ನಿಜವೋ, ಕೆಲವು ತಾಸುಗಳ ಬಳಿ ಚೇತರಿಸಿಕೊಂಡದ್ದೂ ಅಷ್ಟೇ ನಿಜ. ಸಂಬಂಧಗಳ ಸ್ಥಾನಕ್ಕೆ ಚ್ಯುತಿಯೊದಗಿದ್ದು ಕಳೆದ ಸೋಮವಾರದಂದು ಕನ್ಯೆ ನೋಡಲೆಂದು ಮೈಸೂರಿಗೆ ಹೋಗಿದ್ದಾಗ. ಚಾಮರಾಜನಗರ ಜಿಲ್ಲೆಯಲ್ಲಿ ಕಂದಾಯ ನೌಕರಿಯಲ್ಲಿದ್ದು ಕಳೆದ ತಿಂಗಳಷ್ಟೆ ನಿವೃತ್ತಿ ಹೊಂದಿರುವ ವಾಸುದೇವರಾಯರ ಚತುರ್ಥ ಸುಪುತ್ರಿ ಜಾಹ್ನವಿಯನ್ನು ನೋಡಲೆಂದು ಹೋಗಿದ್ದಾಗ. ತನ್ನ ಆಕರ್ಷಕ ವ್ಯಕಿತ್ವ, ಮೃದು ಸ್ವಭಾವ ಮತ್ತು ಸಂಪಾದನೆ ಅವರಿಗೆ ಹಿಡಿಸಿತು. ತಮ್ಮ ಮಗಳನ್ನು ಕೊಡಲು ಸಮ್ಮತಿಸಿದರು. ಕೊಡುವುದು ತೆಗೆದುಕೊಳ್ಳುವುದು ಏನೂ ಇಲ್ಲ. ಅವರವರ ಖರ್ಚು ಅವರವರು ನಿಭಾಯಿಸಬೇಕು. ಕಾರಣ ಎರಡೂ ಕಡೆಯವರು ವರದಕ್ಷಿಣೆ ವಿರೋಧಿಗಳು. ಅದೂ ಈ ಕಾಲದಲ್ಲಿ! ಸಂಬಂಧಗಳು ವ್ಯಾವಹಾರಿಕವಾಗಿ ಇರಕೂಡದೆಂದು ವಾದಿಸಿದ್ದು ತನ್ನ ತಂದೆ.

ಎಂಥ ತಂದೆ! ಎಂಥ ಮಗ!! ಇಂಥವರು ಸಿಕ್ಕುವುದು ಮನುಷ್ಯ ಜಗತ್ತಿನಲ್ಲಿ ತುಂಬಾ ಅಪರೂಪ. ಹುಡುಗ–ಹುಡುಗಿ ಪ್ರತ್ಯೇಕ ಕೋಣೆಯಲ್ಲಿ ತಮ್ಮ ತಮ್ಮ ಭಾವನೆಗಳನ್ನು ಅಭಿರುಚಿಗಳನ್ನು ವಿನಿಮಯ ಮಾಡಿಕೊಂಡರು. ತನ್ನ ಕೈ ಹಿಡಿಯಲಿರುವ ತರುಣ ಸರಳ ಹಾಗೂ ಆದರ್ಶ ಜೀವಿ. ಇದು ತನ್ನ ಭಾಗ್ಯವೇ ಸರಿ. ಕಾಣಿಸಿಕೊಂಡ ಮಂದಹಾಸ ಹುಡುಗಿಯ ಮುಖದಲ್ಲಿ ಶಾಶ್ವತವಾಗಿ ನೆಲೆಸಿತು. ಹುಡುಗಿ ತೀರಾ ಸುಂದರಿಯಲ್ಲದಿದ್ದರೂ ಕುರೂಪಿ ಏನಲ್ಲ. ಎಂ.ಎಸ್ಸಿ. ಪದವೀಧರೆ. ಅದೂ ಬಯೋ ಕೆಮೆಸ್ಟ್ರಿಯಲ್ಲಿ! ಅದೆಲ್ಲಕ್ಕಿಂತ ಮುಖ್ಯವಾಗಿ ಸಾಹಿತ್ಯಾಸಕ್ತಳು ಮತ್ತು ತನ್ನ ಅಭಿಮಾನಿ. ವರುಣ ಸಹ ಅದೃಷ್ಟವೆಂದು ಮನಸ್ಸಿನಲ್ಲಿಯೇ ಉದ್ಗರಿಸಿದ. ಎರಡೂ ಕಡೆಯವರು ಒಪ್ಪಿದ ಮೇಲೆ ಇನ್ನೇಕೆ ವಿಳಂಬ! ಮಾತುಕತೆ ಮುಗಿದದ್ದು ಐದೇ ನಿಮಿಷದಲ್ಲಿ. ಹದಿನೈದು ದಿವಸಗಳ ಬಳಿಕ ಮೊದಲಿಯಾರ್ ಕಲ್ಯಾಣ ಮಂಟಪದಲ್ಲಿ ನಿಶ್ಚಿತಾರ್ಥ, ಎರಡು ತಿಂಗಳ ಬಳಿಕ ಬನಶಂಕರಿಯಲ್ಲಿರುವ ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂಟಪದಲ್ಲಿ ವಿವಾಹ ಮಹೋತ್ಸವ.

ಆ ದಿವಸ ಮೊದಲಿಯಾರ್ ಕಲ್ಯಾಣ ಮಂಟಪದಲ್ಲಿ ನಿರೀಕ್ಷೆಗಿಂತಲೂ ಹೆಚ್ಚು ಮಂದಿ ಉಪಸ್ಥಿತರಿದ್ದರು. ಅದಕ್ಕೆ ಕಾರಣ ಸುಸ್ಪಷ್ಟ, ಕನ್ಯಾಪಿತೃ ತನ್ನ ಪ್ರಾಮಾಣಿಕತೆಯಿಂದಾಗಿ, ಸರಳತೆಯಿಂದಾಗಿ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದರು. ಅದೂ ಅಲ್ಲದೆ ಅವಿಭಕ್ತ ಕುಟುಂಬದಲ್ಲಿ ಹುಟ್ಟಿ ಬೆಳೆದಿರುವ ಕಾರಣದಿಂದಾಗಿ ಬಂಧುಬಳಗ, ನೆಂಟರಿಷ್ಟರಿಗೆ ಕೊರತೆ ಇರಲಿಲ್ಲ. ಅದಕ್ಕೆ ಹೋಲಿಸಿದರೆ ತಮ್ಮ ಬಂಧುಗಳ, ಸ್ನೇಹಿತರ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ವರುಣನ ವೃತ್ತಿಪರ ಗೆಳೆಯರಿದ್ದರೇ ವಿನಾ ಲೇಖಕ ನಚಿಕೇತನ ಅಭಿಮಾನಿಗಳ ಪೈಕಿ ಒಬ್ಬರೂ ಇರಲಿಲ್ಲ. ತನ್ನ ಫೇಸ್‌ಬುಕ್‌ನ ಸಂಪರ್ಕ ತಾಣದಲ್ಲಿ ಸಂದೇಶವನ್ನು ಟೂಪ್ ಮಾಡಿದ್ದನಾದರೂ ಅದನ್ನು ತನ್ನೆಲ್ಲ ಗೆಳೆಯರಿಗೆ ಅಪ್‌ಲೋಡ್ ಮಾಡಿರಲಿಲ್ಲ. ಸಾರಸ್ವತ ಲೋಕದಲ್ಲಿ ತಮ್ಮ ಸಂಕೋಚ ಪ್ರವೃತ್ತಿಯಿಂದಾಗಿ ಹೆಸರಾಗಿದ್ದ ಪ್ರೊ.ಬಸವರಾಜ ಸಹ ಅಷ್ಟೆ. ತೀರಾ ಆತ್ಮೀಯರಿಗೆ ಮಾತ್ರ ವಿಷಯ ತಿಳಿಸಿದ್ದರೇ ವಿನಾ ಬಹುಸಂಖ್ಯಾತ ಗೆಳೆಯರಿಗೆ ತಿಳಿಸಿರಲಿಲ್ಲ. ಆದ್ದರಿಂದಾಗಿ ಅವರಿಗೆ ಸಂಬಂಧಿಸಿದಂತೆ ಬೆರಳೆಣಿಕೆ ಮಂದಿ ಮಾತ್ರ ಇದ್ದು ಅವರೆಲ್ಲ ಕನ್ಯಾದಾತೃಗಳ ಸಂಭ್ರಮ ಸಡಗರವನ್ನು ಮೌನದಿಂದ ಗಮನಿಸುತ್ತ ಅಲ್ಲಲ್ಲಿ ಕುಳಿತಿದ್ದರು.

ನಿಶ್ಚಿತಾರ್ಥ ಸಮಾರಂಭ ಅದ್ದೂರಿಯಾಗಿರಲಿಲ್ಲ. ಆದರೆ ಸರಳ ಸುಂದರವಾಗಿತ್ತು ಮತ್ತು ಸಾಂಪ್ರದಾಯಕವೂ ಆಗಿತ್ತು. ಶ್ರೀಮಂತರಿರದಿದ್ದ ಎಲ್ಲರ ಮುಖಗಳಲ್ಲಿ ಮುಗುಳ್ನಗೆ, ಮಂದಹಾಸಗಳಿವೇ ಮೊದಲಾದ ನವರತ್ನಗಳಿದ್ದವು. ತಮ್ಮೆಲ್ಲರ ಕರುಳಬಳ್ಳಿ ಸಂಬಂಧ ಶತಶತಮಾನಗಳಷ್ಟು ಪುರಾತನವೆಂಬಂತೆ ಅವರೆಲ್ಲರೂ ಆಪ್ಯಾಯತೆಯಿಂದ ಮಾತನಾಡಿಸುತ್ತ ಪ್ರೀತಿ ಪ್ರೇಮ ವಿಶ್ವಾಸಗಳಿಗೆ ಹೊಸ ವ್ಯಾಖ್ಯಾನ ಬರೆಯುತ್ತಿದ್ದರು.

ಸರ್ವಾಲಂಕಾರ ಭೂಷಿತರಾಗಿದ್ದ ಭಾವೀ ವಧೂ–ವರರು ಸಹ ತಾವಿಬ್ಬರೂ ಚಿರಪರಿಚಿತರೆಂಬಂತೆ ತಮ್ಮ ನಯನೇಂದ್ರಿಯಗಳ ಮೂಲಕ ಪರಸ್ಪರ ನೋಡುತ್ತಿದ್ದರಲ್ಲದೆ ಕಾಲಾವಕಾಶ ದೊರಕಿದಾಗಲೆಲ್ಲ ಮಾತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ಮುಹೂರ್ತ ಸಮೀಪಿಸುತ್ತಿದ್ದಂತೆ ಅಭಿಮಾನಿಗಳ ಸಂಖ್ಯೆ ದ್ವಿಗುಣಗೊಳ್ಳುತ್ತಲೇ ಹೋಯಿತು.

ನಗರದಾದ್ಯಂತ ದುಬಾರಿ ಸಂಭಾವನೆ ಪಡೆಯುವ ಪುರೋಹಿತರೆಂದೇ ಹೆಸರಾಗಿದ್ದ ಪಂಡಿತ ನಾಗಭೂಷಣ ಶರ್ಮರು ವೇದಿಕೆಯ ಬಲಪಾರ್ಶ್ವದಲ್ಲಿ ವೈದಿಕಕ್ಕೆ ಸಂಬಂಧಿಸಿದ ಪರಿಕರಗಳೊಡನೆ ವಿರಾಜಮಾನರಾಗಿದ್ದರು. ಅವರ ಸ್ಥೂಲ ದೇಹದ ಪ್ರತಿಯೊಂದು ಭಾಗವೂ ಅತ್ಯುತ್ಸಾಹವನ್ನು ಹೊರಸೂಸುತ್ತಿತ್ತು. ಕನ್ಯಾಪಿತೃವಿನೊಂದಿಗೆ ಅವರು ಸಲಿಗೆಯಿಂದ ವರ್ತಿಸುತ್ತಿದ್ದುದನ್ನು ಗಮನಿಸಿದರೆ ಅವರೀರ್ವರೂ ಬಾಲ್ಯ ಸಖರಿದ್ದಿರಬಹುದೆಂದು ಎಂಥವರೂ ಊಹಿಸಬಹುದಿತ್ತು. ಅವರಿಬ್ಬರೂ ಬಾಲ್ಯ ಸಖರಾಗಿರದಿದ್ದರೂ ಆತ್ಮೀಯತೆ ಇತ್ತೆಂಬುದು ನಿಜ. ಅವರು ನಿರರ್ಗಳವಾಗಿಯೂ ಯಥೇಚ್ಛವಾಗಿಯೂ ವಿವಾಹಕ್ಕೆ ಸಂಬಂಧಿಸಿದ ಶ್ಲೋಕಗಳನ್ನು ಎತ್ತರದ ಧ್ವನಿಯಲ್ಲಿ ಉಚ್ಚರಿಸುತ್ತಿದ್ದುದನ್ನು ನೋಡಿದರೆ ನಿಗೂಢ ಋಣಮುಕ್ತರಾಗಬೇಕೆಂಬ ಅಭಿಲಾಷೆ ಅವರಲ್ಲಿ ಇದ್ದಿರಲೂಬಹುದು, ನಿಸ್ಸಂದೇಹವಾಗಿ.

ಕಂದಾಯ ಇಲಾಖೆಯಲ್ಲಿ ಸಾಮಾನ್ಯ ಗುಮಾಸ್ತರಾಗಿದ್ದರೂ ವಾಸುದೇವರಾಯರು ಸಹ ಯಜುರ್ವೇದವನ್ನು ತಕ್ಕಮಟ್ಟಿಗೆ ಅಭ್ಯಾಸ ಮಾಡಿದ್ದಂಥವರೇ. ಆಫೀಸಿಗೆ ಹೊರಡುವ ಪೂರ್ವದಲ್ಲಿ ಅರ್ಧ ತಾಸಾದರೂ ಋಗ್ವೇದ, ಯಜುರ್ವೇದದ ಶ್ಲೋಕಗಳನ್ನು ಗಾಯತ್ರಿಯ ಜೊತೆ ಜೊತೆಗೆ ಪಠಣ ಮಾಡುತ್ತಿದ್ದಂಥವರೇ. ಅಂಥ ಅವರು ವೇದಿಕೆಯನ್ನು ವಿವಿಧ ಅಂತರಗಳಿಂದ ಸಮೀಪಿಸಿ 'ನಾಗಭೂಷಣ, ಅಡುಗೆ ಪರಿಮಳಕ್ಕೆ ಪರವಶನಾಗಿ ತಪ್ಪಾಗಿ ಮಂತ್ರಗಳನ್ನು ಉಚ್ಚರಿಸಬೇಡವೋ! ಇಲ್ಲಿ ನಡೆಯುತ್ತಿರುವುದು ನನ್ನ ಷಷ್ಟ್ಯಬ್ದಿ ಅಲ್ಲವೋ, ನನ್ನ ಮಗಳು ಜಾಹ್ನವಿಯ ನಿಶ್ಚಿತಾರ್ಥ!' ಎಂದು ಗಟ್ಟಿಯಾಗಿ ಹೇಳಿ ಅತಿಥಿಗಳನ್ನು ನಗೆಗೀಡು ಮಾಡುತ್ತಿದ್ದರೇ ವಿನಾ ಪುರೋಹಿತರವನ್ನು ನಗೆಪಾಟಲು ಮಾಡುತ್ತಿರಲಿಲ್ಲ. ಅವರ ಮಾತನ್ನು ಸಮರ್ಥಿಸಲೆಂಬಂತೆ ಪಾಕಶಾಲೆ ಇದ್ದ ನೆಲಮಾಳಿಗೆಯಿಂದ ವಿವಿಧ ಸುಗ್ರಾಸ ಖಾದ್ಯಗಳ ಪರಿಮಳ ಅಲೆ ಅಲೆಯಾಗಿ ಅಲ್ಲೆಲ್ಲ ಹರಡಿತ್ತಲ್ಲದೆ ಅತಿಥಿ ಅಭ್ಯಾಗತರ ನಾಸಿಕಾಗ್ರಗಳನ್ನು ಕೆರಳಿಸುತ್ತಲೇ ಇತ್ತು. ಅದಕ್ಕೆ ಪ್ರತಿಯಾಗಿ ಶರ್ಮರು, 'ಓಹ್ಹೋ ಹಾಗೋ, ಪೌರೋಹಿತ್ಯಾನ ನೀನೇ ವಹಿಸಿಕೊಂಡು ಬಿಡು ವಾಸು, ಕನ್ಯಾದಾತೃ ಸ್ಥಾನಾನ ನಾನೇ ವಹಿಸಿಕೊಳ್ತೇನೆ' ಎಂದು ನಗಿಸುತ್ತಿದ್ದರು. ನಾಗಭೂಷಣ ಶರ್ಮರ ಮಕ್ಕಳು ವಾಸುದೇವರಾಯರ ಮನೆಯಲ್ಲೂ, ವಾಸುದೇವರಾಯರ ಮಕ್ಕಳು ಶರ್ಮರ ಮನೆಯಲ್ಲೂ ಆಯಾ ಪರಿಸರಗಳನ್ನು ಅರಗಿಸಿಕೊಂಡು ಬೆಳೆದಿರುವ ಕಾರಣಕ್ಕೆ

ಅವರಿಬ್ಬರ ನಡುವೆ ಸಲಿಗೆ. ಗಮನಿಸಿದರೂ ಗಮನಿಸದವರಂತಿದ್ದ, ಕೇಳಿಸಿಯೂ ಕೇಳದವರಂತಿದ್ದ ವಧು-ವರರೀರ್ವರೂ ತಮ್ಮ ಜೀವನೋತ್ಸಾಹವನ್ನು ಹೆಚ್ಚಿಸಿಕೊಳ್ಳಲು ತಾಲೀಮು ನಡೆಸಿದ್ದರು. ಅದಕ್ಕೆ ಪ್ರತಿಯಾಗಿ ವರುಣನು ಬಹಿರಂಗವಾಗಿಯೂ, ಜಾಹ್ನವಿಯು ಅವನತಮುಖಿಯಾಗಿಯೂ, ಅದೂ ಮೇಲ್ಸೆರಗಿನ ಮರೆಯಲ್ಲಿ ನಗುತ್ತಿದ್ದಳು. ಆ ಎರಡು ಕರುಳ ಕುಡಿಗಳ ಸಂತೋಷ ಅಲ್ಲೆಲ್ಲ ಸಾಂಕ್ರಾಮಿಕಗೊಂಡಿದ್ದ ಪರಿಣಾಮವಾಗಿ ಅತಿಥಿಗಳು ಅದನ್ನು ಆಸ್ವಾದಿಸುತ್ತಿದ್ದರು. ಇಂಥ ಮಗಳನ್ನು ಪಡೆದ ನೀವೇ ಅದೃಷ್ಟವಂತರೆಂದು ವಾಸುದೇವರಾಯರನ್ನೂ ಅಭಿನಂದಿಸುತ್ತಿದ್ದರು. ಒಂದೇ ಮಾತಿನಲ್ಲಿ ಹೇಳುವುದಾದರೆ ಮೇಡ್ ಫಾರ್ ಈಚ್ ಅದರ್ ಎನ್ನುವರಲ್ಲ ಹಾಗಿತ್ತು ಅವರಿಬ್ಬರ ಜೋಡಿ. ಆದರೆ ತಾತ್ವಿಕವಾಗಿ ಅವರಿಬ್ಬರೂ ಬಿನ್ನಮತೀಯರೇ. ವರುಣ ಮಾರ್ಕ್ಸ್‌ವಾದದ ವಿದ್ಯಾರ್ಥಿಯಾಗಿದ್ದರೆ, ಜಾಹ್ನವಿ ಶಂಕರಾಚಾರ್ಯರ ವಿನಯಶೀಲ ವಿದ್ಯಾರ್ಥಿನಿ. ವಿವಾಹೋತ್ತರವಾಗಿ ಮಾರ್ಕ್ಸ್‌ವಾದಿಗಳು ಸನಾತನವಾದಿಗಳಾಗಿಯೂ, ಸನಾತನವಾದಿಗಳು ಮಾರ್ಕ್ಸ್‌ವಾದಿಗಳಾಗಿಯೂ ಬದಲಾಗಬಹುದಲ್ಲವೆ! ಅದೇ ಸಂಸಾರದ ಶಕ್ತಿಯಲ್ಲವೆ!! ಸಾಕಷ್ಟು ನಿದರ್ಶನಗಳು ತಮ್ಮ ಕಣ್ಣ ಮುಂದಿವೆಯಲ್ಲವೆ! ವರ ಮಹಾಶಯನನ್ನೇ ಉದಾಹರಿಸುವುದಾದರೆ ವೇದಿಕೆ ಏರುವ ಪೂರ್ವದ ವರುಣನೇ ಬೇರೆ, ವಧುವಿಗೆ ಅಭಿಮುಖವಾಗಿ ನಿಂತಿರುವ ಸಾಲಂಕೃತ ವರುಣನೇ ಬೇರೆ. ನಚಿಕೇತ ಎಂಬ ಹೆಸರಿನ ಲೇಖಕನನ್ನು ಮನಸ್ಸಿನಿಂದ ವಿಸರ್ಜಿಸದಿದ್ದಲ್ಲಿ ಪತ್ನಿ ಸ್ಥಾನ ಅಲಂಕರಿಸಲಿರುವ ತರುಣಿ ಅರ್ಥವಾಗುವುದಿಲ್ಲವೆಂದು ಪ್ರಹ್ಲಾದರಾಯರು ಹೇಳಿ ತನ್ನನ್ನು ಒಪ್ಪಿಸಿ ಸಾಂಪ್ರದಾಯಕ ವೇಷ ಭೂಷಣಗಳಿಂದ ಅಲಂಕರಿಸಿದ್ದರು. ಆಕೆಯ ಹಾಗೆ ತಾನೂ ಹಿರಿಯರ ನೀತಿಸಂಹಿತೆಯನ್ನು ಆಚಾರ ವಿಚಾರಗಳನ್ನು ಗೌರವಿಸಿ ವಿಚಿತ್ರ ನೆಮ್ಮದಿಯಿಂದ ಗೋಚರವಾಗುತ್ತಿದ್ದನು.

ವರುಣನ ಇಕ್ಕೆಲದಲ್ಲಿ ತಂದೆ ಪ್ರಹ್ಲಾದರಾಯರು ಮತ್ತು ತನ್ನ ತಾಯಿ ಸುಶೀಲಾಬಾಯಿಯವರು. ತನಗೆ ನಾಚಿಕೆಯೇ ಮೈವೆತ್ತಂತೆ ಅಭಿಮುಖವಾಗಿ ನಿಂತಿದ್ದ ಜಾಹ್ನವಿಯ ಇಕ್ಕೆಲದಲ್ಲಿ ಆಕೆಯ ತಂದೆ ವಾಸುದೇವರಾಯರು ಮತ್ತು ತಾಯಿ ಕೌಸಲ್ಯಾಬಾಯಿಯವರು. ಕೈಯಳತೆ ದೂರದಲ್ಲಿ ಮುಖ್ಯ ಹಾಗೂ ಸಹಾಯಕ ಪುರೋಹಿತರು. ಈ ದೃಶ್ಯಗಳನ್ನು ಅಲ್ಲಲ್ಲಿ ನಿಂತು ಸೆರೆಹಿಡಿಯುತ್ತಿರುವ ಛಾಯಾಚಿತ್ರಗ್ರಾಹಕರು. ದೂರದಿಂದೆಲ್ಲೋ ಶ್ರವಣಾನಂದಕರ ರೀತಿಯಲ್ಲಿ ಕೇಳಿಬರುತ್ತಿರುವ ನಾದಸ್ವರ ವಾದನ. ನಿಶ್ಚಿತಾರ್ಥವನ್ನು ಸಾಕ್ಷಾತ್ಕರಿಸಲೆಂದು ತುದಿಗಾಲಲ್ಲಿ ನಿಂತಿರುವ ಬಂಧುಬಳಗ ವರ್ಗದವರೂ ಹಿತೈಷಿಗಳೂ ಸ್ನೇಹಿತರು. ಅವರೆಲ್ಲರ ಕಣ್ಣುಗಳ ಶುಕ್ಲಪಟಲದ ಮೇಲಿರುವುದು ತಾವಿಬ್ಬರು ಮಾತ್ರ.

ನಿಶ್ಚಿತಾರ್ಥದ ಅಂತಿಮ ದೃಶ್ಯ ಆರಂಭಗೊಂಡಿತು. ಪುರೋಹಿತರು ಒಕ್ಕೊರಲಿನಿಂದ ಓತಪ್ರೋತವಾಗಿ ಶ್ಲೋಕಗಳನ್ನು ಉಚ್ಚರಿಸಲಾರಂಭಿಸಿರುವರು-

ಅದೂ ತಮ್ಮ ತಮ್ಮ ಕೈಗಳಲ್ಲಿ ಫಲ–ತಾಂಬೂಲಗಳ ತಳಿಗೆಗಳನ್ನು ಹಿಡಿದು. ಇಂಥವರ ಮಗಳನ್ನು ಇಂಥವರ ಮಗನಿಗೆ.. ಎಂದು ಹೇಳುವುದೊಂದೇ ಬಾಕಿ. ಪುರೋಹಿತ ಶರ್ಮರವರು ಪ್ರಹ್ಲಾದರಾಯ ದಂಪತಿಗಳ ಸಮಕ್ಷಮ ನಿಂತು ರಾಯರೆ ತಮ್ಮ ಸುಪುತ್ರ ಎಂದು ಹೇಳುತ್ತಿದ್ದರೆ ದಂಪತಿಗಳೀರ್ವರು ಪರಸ್ಪರ ಮುಖಗಳನ್ನು ನೋಡಿಕೊಳ್ಳದೆ ಇರಲಿಲ್ಲ. ನೋಡು ನೋಡುವಷ್ಟರಲ್ಲಿ ಅವರಿಬ್ಬರ ಮುಖಗಳು ಕಳೆಗುಂದದೆ ಇರಲಿಲ್ಲ. ಭಾರವಾದ ಹೆಜ್ಜೆಗಳನ್ನು ಇಡುತ್ತ ಎರಡು ಮೂರು ಅಡಿ ದೂರವನ್ನು ಯೋಜನವೆಂಬಂತೆ ಕ್ರಮಿಸಿ ಶರ್ಮರನ್ನು ಸಮೀಪಿಸಿದ ಪ್ರಹ್ಲಾದರಾಯರು, 'ಸ್ವಾಮಿ, ನಾನು ವರುಣನ ತಂದೆಯಲ್ಲ, ನನ್ನ ಪತ್ನಿ ಸುಶೀಲ ಈ ಹುಡುಗನ ತಾಯಿಯಲ್ಲ' ಎಂದು ನುಡಿದದ್ದನ್ನು ಕೇಳಿಸಿಕೊಂಡ ವರುಣನಿಗೆ ದಿಕ್ಕೇ ತೋಚದ ಅನುಭವವಾಯಿತು. ಕನ್ಯಾದಾತೃಗಳು ಸೇರಿದಂತೆ ಅವರೆಲ್ಲ ಅವರ ಕಡೆ ಪ್ರಶ್ನಾರ್ಥಕ ದೃಷ್ಟಿ ಸಾರಿಸಿದರು. ತಮಾಷೆ ಮಾಡಲು ಇದು ಸೂಕ್ತ ಸಮಯವಲ್ಲ ರಾಯರೇ ಎಂದೂ ಸೂಚಿಸಿದರು. ಅದರಿಂದ ವಿಚಲಿತಗೊಳ್ಳದ ರಾಯರು 'ನಾವು ಈ ತರುಣನನ್ನು ಹೆತ್ತವರಲ್ಲ ಸ್ವಾಮಿ. ಈ ಹುಡುಗನ ತಂದೆಯ ಹೆಸರು ಮಾಧವರಾಯ!' ಎಂದು ನುಡಿಯುವುದೆ! ಹ್ಞಾಂ! ಮಾಧವರಾಯರು! ಎಲ್ಲಿದ್ದಾರೆಂಬುದನ್ನಾದರೂ ಹೇಳಬಹುದಲ್ಲವೆ! ಇಲ್ಲದವರನ್ನು ಎಲ್ಲಿಂದ ಹಾಜರುಪಡಿಸಲಿ ಸ್ವಾಮಿ. ಹಾಗಿದ್ದರೆ ಈ ಹುಡುಗ ಅನಾಥನೆಂದು ಭಾವಿಸೋಣವೋ! ನಾವಿರುವಾಗ ಅನಾಥ ಹೇಗಾದಾನು! ಹಾಗಿದ್ದರೆ ತಂದೆ ಎಂದು ಒಪ್ಪಿಕೊಳ್ಳಬಹುದಲ್ಲವೆ! ಅದು ಹೇಗೆ ಸಾಧ್ಯ! ಹಾಗಾದರೆ ನಿಮಗೂ ಈತನಿಗೂ ಇರುವ ಸಂಬಂಧ! ಓಹ್! ಅದೊಂದು ದೊಡ್ಡ ಕತೆ! ಅದನ್ನು ಹೇಳುವ ಅರ್ಹತೆ ನಮಗಿಲ್ಲ, ಕೇಳುವ ಅರ್ಹತೆ ನಿಮಗೂ ಇಲ್ಲ, ಈ ವೇದಿಕೆ ಅದಕ್ಕೆ ಸೂಕ್ತವಲ್ಲ ಸ್ವಾಮಿ!

ಕೇಳಿಸಿಕೊಳ್ಳುತ್ತಿದ್ದ ವರುಣ ತನ್ನ ಕಣ್ಣುಗಳನ್ನು ತುಂಬಿಕೊಂಡ. ಏನಪ್ಪಾಜಿ, ನೀವು ಹೇಳುತ್ತಿರುವುದು! ಹೌದು ಮಗು. ನಾನು ಹೇಳಿದ್ದು ಸತ್ಯವೇ ಹೊರತು ಸುಳ್ಳಲ್ಲ, ಹಾಗಿದ್ದರೆ ಇಷ್ಟು ವರ್ಷಗಳ ಕಾಲ! ನಿನ್ನನ್ನು ಪಾಲಿಸಿ ಪೋಷಿಸುವ ಹೊಣೆ ನಮ್ಮ ಹೆಗಲ ಮೇಲಿತ್ತು, ನಿರ್ವಂಚನೆಯಿಂದ ನಿರ್ವಹಿಸಿದೆವು. ಸುದೀರ್ಘ ಕಾಲ ನಿನ್ನ ತಂದೆಯಂತೆ ಪ್ರಹ್ಲಾದರಾಯನಾದ ನಾನೂ, ನಿನ್ನ ತಾಯಿಯಂತೆ ಸುಶೀಲಾಬಾಯಿಯಾದ ನನ್ನ ಧರ್ಮಪತ್ನಿಯೂ ಅಭಿನಯಿಸಿದೆವು ಮಗನೇ! ಅಭಿನಯದ ಅಗತ್ಯ ನನಗಿರಲಿಲ್ಲ ಅಪ್ಪಾಜಿ! ಆದರೆ ನಮಗಿತ್ತು ಕಂದಾ!

ವಾಸುದೇವರಾಯರು ಮೆಲ್ಲಗೆ ಚೇತರಿಸಿಕೊಂಡಾದ ಬಳಿಕ ಹತ್ತಿರ ಬಂದವರೆ 'ಈ ಯುವಕನ ಶಾಲಾ ದಾಖಲೆಗಳಲ್ಲಿ ತಂದೆ ತಾಯಿ ಎಂದು ನಮೂದಿಸಲ್ಪಟ್ಟಿರುವುದು ನಿಮ್ಮಿಬ್ಬರ ಹೆಸರುಗಳು ತಾನೆ! ಅದೂ ಅಲ್ಲದೆ ನಿಮ್ಮ ಬಾಯಿಯಿಂದ ಮಗ, ಕಂದಾ ಎಂಬ ಕರುಳ ಸಂಬಂಧೀ ವಾಚಕಗಳು ಬೇರೆ ಪುಂಕಾನುಪುಂಖವಾಗಿ

ಬರುತ್ತಿರುವವೆಂದ ಮೇಲೆ ನೀವೇ ಈತನ ತಂದೆ ನಿಸ್ಸಂದೇಹವಾಗಿ. ಒಪ್ಪಿ ತಂದೆಯ ಸ್ಥಾನದಲ್ಲಿದ್ದು ಮಂಗಳ ಕಾರ್ಯ ನೆರವೇರಿಸಿಕೊಡಿ ಸ್ವಾಮಿ' ಎಂದು ಅಂಜಲೀಬದ್ಧರಾಗಿ ವಿನಂತಿಸಿಕೊಂಡರು. ಅದಕ್ಕೆ ಪ್ರಹ್ಲಾದರು 'ಮನಸ್ಸಾಕ್ಷಿ ಅದಕ್ಕೆ ಒಪ್ಪಬೇಕಲ್ಲವೆ ರಾಯರೇ. ನೀವು ಒಪ್ಪುವುದಾದರೆ ಮಾಧವರಾಯರ ಹೆಸರಿನಲ್ಲಿ ನಿಶ್ಚಿತಾರ್ಥಕ್ಕೆ ಅಣಿಯಾಗುವೆ' ಎಂದು ಸವಿನಯಪೂರ್ವಕವಾಗಿ ನಿವೇದಿಸಿಕೊಂಡರು.

ವರುಣನ ಜನ್ಮರಹಸ್ಯ ಇಷ್ಟೊಂದು ಜಟಿಲವೆಂದು ಈ ಮೊದಲೇ ತಿಳಿದಿದ್ದಲ್ಲಿ! ನಿಡುಸುಯ್ದರು ಮೇಲಿಂದ ಮೇಲೆ. ಪತಿ ಪತ್ನಿ ಸಂಬಂಧವೆಂದರೆ ಸಂಕ್ಷಿಪ್ತ ಅಲ್ಲವೇ ಅಲ್ಲ, ಅದು ಸುದೀರ್ಘವೂ ಶ್ರೇಯಸ್ಕರವೂ ಹೌದು! ವೀಳ್ಯೆ ವಿನಿಮಯಕ್ಕೂ ಪೂರ್ವದಲ್ಲಿ ಕುಲಸಂಬಂಧೀ ಹಿರಿಯರೊಂದಿಗೆ ಸಾಧಕಭಾದಕ ಕುರಿತಂತೆ ಚರ್ಚಿಸುವುದು ಮೇಲಲ್ಲವೇ! ತಮ್ಮ ಪುಣ್ಯವೋ ಎಂಬಂತೆ ಅತಿಥಿಗಳಲ್ಲಿ ಹೆಚ್ಚಿನವರು ಹಿರಿಯರೂ ಹೌದು, ಹಾಗೆಯೇ ಅವರಲ್ಲಿ ಬಹುತೇಕರು ಸುಶ್ರುತರೂ ಹೌದು. ಅದೂ ಅಲ್ಲದೆ ಜಾಹ್ನವಿ ತಮ್ಮ ಕಣ್ಣುಗಳ ಸಮಕ್ಷಮದಲ್ಲಿಯೇ ಬೆಳೆದು ಗೃಹಸ್ಥಾಶ್ರಮ ಪ್ರವೇಶಿಸಲು ಅಣಿಯಾಗಿ ನಿಂತಿರುವ ಮಗು. ಪ್ರಾಜ್ಞರಾದ ಅವರೆಲ್ಲ ತ್ರಾಸುಪಡದೆ ವಾಸುದೇವರ ಆತಂಕವನ್ನು ಅರ್ಥ ಮಾಡಿಕೊಂಡರು. ಪ್ರತ್ಯೇಕ ಜಾಗದಲ್ಲಿ ಗುಂಪುಗೂಡಿ ವರ ಮಹಾಶಯನ ಪಿತೃಸ್ಥಾನ ಕುರಿತಂತೆಯೂ, ನಿಶ್ಚಿತಾರ್ಥದ ಸಾಧಕ ಬಾಧಕಗಳನ್ನು ಕುರಿತಂತೆಯೂ ತರ್ಜನ-ಭರ್ಜನ ನಡೆಸಿದರು. ಯಾಜ್ಞವಲ್ಕ್ಯ ಸ್ಮೃತಿಯಂತೆ ಒಂದು ಪುಷ್ಕರವೆಂದರೆ ಹನ್ನೆರಡು ವರ್ಷ. ಒಂದು ಪುಷ್ಕರ ಪರ್ಯಂತರ ಯಾವ ವ್ಯಕ್ತಿ ಕಾಣೆಯಾಗುವನೋ ಅಂಥ ವ್ಯಕ್ತಿ ತಿಲೋದಕಕ್ಕೆ ಅರ್ಹನು. ಆದರೆ ವರುಣನ ವಿಷಯಕ್ಕೆ ಬಂದರೆ ಆತನ ತಂದೆ ಕಣ್ಮರೆಯಾಗಿ ಎರಡು ಪುಷ್ಕರಗಳಿಗೂ ಮೇಲ್ಪಟ್ಟು ಕಾಲ ಗತಿಸಿರುವುದು. ಅಷ್ಟು ಸುದೀರ್ಘ ಕಾಲಾವಧಿಯಲ್ಲಿ ಪ್ರಹ್ಲಾದರಾಯರೇ ಪಿತೃಸ್ಥಾನಾಧಿಪತಿಗಳು. ಆದ್ದರಿಂದ!

ಅಕ್ಕಿ ಹಿಟ್ಟಿನಿಂದ ಪುರುಷಾಕೃತಿಯನ್ನು ರಚಿಸಿ ಅದಕ್ಕೆ ಮಾಧವರಾಯ ಎಂದು ಆ ಕ್ಷಣವೇ ಶಾಸ್ತ್ರೋಕ್ತ ರೀತಿಯಲ್ಲಿ ನಾಮಕರಣ ಮಾಡಲಾಯಿತು. ನೋಡಯ್ಯಾ, ಈತನೇ ನಿನ್ನ ತಂದೆ ಎಂದು ಹೇಳಿ ವರುಣನನ್ನೂ ಒಪ್ಪಿಸಲಾಯಿತು. ಪ್ರಹ್ಲಾದರಾಯರು ಹಿರಿಯರ ಅಭಿಮತವನ್ನು ಪುರಸ್ಕರಿಸಿದರಲ್ಲದೆ ಅಗೋಚರ ಮಾಧವರಾಯರ ಹೆಸರಿನಲ್ಲಿ ವರುಣನಿಗೆ ಪ್ರಮಾಣ ವಚನ ಬೋಧಿಸಿದರು. ನಿಶ್ಚಿತಾರ್ಥ ಸಮಾರಂಭ ಮುಗಿದ ಬಳಿಕ ಅವರೆಲ್ಲ ಅವರವರ ಊರುಗಳನ್ನು ದೈಹಿಕವಾಗಿ ಸೇರಿಕೊಂಡರೆಂಬುದು ಎಷ್ಟು ನಿಜವೋ, ವರುಣನ ಮನಸ್ಸು ತನ್ನ ತಂದೆಯನ್ನು ಹುಡುಕಲೆಂದು ಆಕಾಶಮಾರ್ಗವಾಗಿ ಪ್ರಯಾಣ ಕೈಕೊಂಡಿತೆನ್ನುವುದು ಅಷ್ಟೇ ನಿಜ.

ಬೆಂಗಳೂರನ್ನು ಸೇರಿದಾದ ಬಳಿಕ ವರುಣ ಅನ್ಯಮನಸ್ಕನಾದ. ಕೇವಲ ಒಂದೇ ಒಂದು ಮಾತಿನ ಅಲಗಿನಿಂದ ಕಾಲು ಶತಮಾನದ ಕರುಳು ಬಳ್ಳಿಯನ್ನು ಕತ್ತರಿಸಿ

ಹಾಕಿದ ಪ್ರಹ್ಲಾದರಾಯ ಮತ್ತು ಸುಶೀಲಾಬಾಯಿ ಕ್ರೌರ್ಯವೆಂಬ ನಾಣ್ಯದ ಎರಡು ಮುಖಗಳೆಂದೆನ್ನಿಸಿತು. ಇವರನ್ನು ಕ್ಷಮಿಸುವುದೋ, ಕ್ಷಮಿಸದೆ ಇರುವುದೋ, ಇವರೆಲ್ಲರ ಸಂಗಡವಿರುವುದೋ! ಅಜ್ಞಾತ ಸ್ಥಳಕ್ಕೆ ಪಲಾಯನಗೈದು ಒಂಟಿಯಾಗಿರುವದೋ.. ಸಂಧಿಗ್ದತೆಯ ನಡುವೆ ಸಿಲುಕಿರುವ ತಾನು ದಗ್ಧಗೊಳ್ಳುತ್ತಿರುವಂಥ ಅನುಭವ. ಕರುಳ ಕೊಂಡಿಗಳನ್ನು ಕಳಚಿಕೊಳ್ಳುವುದು ಸುಲಭ ಸಾಧ್ಯದ ಕಾರ್ಯ. ತೇಲಲೀಯದ ಗುಂಡು ಮತ್ತು ಮುಳುಗಲೀಯದ ಬೆಂಡುಗಳ ನಡುವೆ ಸಿಲುಕಿ ತಮ್ಮ ಔರಸ ಪುತ್ರ ಅನುಭವಿಸುತ್ತಿರುವ ಮಾನಸಿಕ ಕ್ಷೋಭೆಯನ್ನು ಆ ಸುಸಂಸ್ಕೃತ ದಂಪತಿಗಳೀರ್ವರೂ ಅರ್ಥ ಮಾಡಿಕೊಂಡು ಆಂತರಂಗಿಕವಾಗಿ ಬೇಯುತ್ತಿದ್ದರು. ಅವರಿಬ್ಬರ ಮಾತುಗಳನ್ನು ವರುಣ ತನ್ನ ಆರನೆಯ ಇಂದ್ರಿಯದ ಮೂಲಕ ಆಲಿಸುತ್ತಿದ್ದ. ದಂಪತಿಗಳೀರ್ವರ ಮಂತ್ರಾಲೋಚನೆಯ ಮುಖ್ಯ ಸಾರಾಂಶವೆಂದರೆ ವಾಸ್ತವ ಸತ್ಯವನ್ನು ಹೇಳುವ ಹಿಂಸೆಗಿಂತ ಹೇಳದೆ ಇರುವ ಹಿಂಸೆ ಕ್ರೂರವಾದುದು. ಪಾಲಿಸಿ ಪೋಷಿಸಿರುವ ಕರುಳುಗಳಿಗಿಂತ ಹೆತ್ತಿರುವ ಕರುಳು ಶ್ರೇಷ್ಠ. ಎಷ್ಟಿದ್ದರೂ ತಾವು ಕರುಳುಗಳ ಉಸ್ತುವಾರಿ ವಹಿಸಿಕೊಂಡಿರುವವರು ಮಾತ್ರ, ಆದರೆ ಅವುಗಳ ನೈಜ ವಾರಸುದಾರರಲ್ಲ. ಕರುಳುಗಳನ್ನು ಬೆಸೆಯುವ, ಅವುಗಳನ್ನು ಒಗ್ಗೂಡಿಸುವ, ವಂಶವಾಹಿನಿಗಳನ್ನು ವಿಸ್ತರಿಸುವ ಪವಿತ್ರ ಕ್ರಿಯೆಯೇ ನಿಶ್ಚಿತಾರ್ಥ. ನೈಜ ತಂದೆಯನ್ನು ನೆನಪಿಸಿದ ಮಾತ್ರಕ್ಕೆ ವರುಣ ತಮ್ಮನ್ನು ನಿರಾಕರಿಸುವನೇನು! ನಿನ್ನೆಯೂ ತಾವು ತಂದೆ ತಾಯಿಗಳು, ನಾಳೆಯ ಸಂದರ್ಭದಲ್ಲೂ ತಾವು ತಂದೆ ತಾಯಿಗಳೇ. ಸಾಹಿತ್ಯದ ವಿದ್ಯಾರ್ಥಿಯಾಗಿರುವ ಅವನು ಸೂಕ್ಷ್ಮ ಸಂವೇದನಾಶೀಲನು. ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲನು.

ಕೇಳದಿದ್ದರೂ ಪ್ರಹ್ಲಾದರಾಯರು ವರುಣನ ಬೆನ್ನನ್ನು ತಾಯ್ತನದ ಕಕ್ಕುಲಾತಿಯಿಂದ ನೇವರಿಸಿದರು. ಸತ್ಯ ನುಡಿಯುವ ಅನಿವಾರ್ಯತೆ ತಮಗಿತ್ತೆಂದು ಹೇಳುವುದನ್ನು ತಾವು ಮರೆಯಲಿಲ್ಲ. ಕಳೆದಿರುವುದನ್ನು ಹುಡುಕುವ ಬದಲು ಕಳೆಯದೆ ಇರುವುದನ್ನು ಜೋಪಾನ ಜತನದಿಂದ ಕಾಪಾಡಿಕೊಳ್ಳುವುದರಲ್ಲಿ ಸಾರ್ಥಕ್ಯವಿರುವುದಾಗಿ ಹೇಳಿದಾದ ಬಳಿಕ.. ಹೌದು, ತಾನು ಅವರಿಬ್ಬರ ವಾತ್ಸಲ್ಯವನ್ನು ಸೂರೆಗೊಂಡು ಬೆಳೆದಿರುವ ಸುಶಿಕ್ಷಿತ. ಅವರಿಗೆ ತಾನು ಹೇಗೋ, ತನಗೂ ಅವರು. ಪರಸ್ಪರ ಊರುಗೋಲಾಗಿ ದಿನಗಳನ್ನು ನೂಕುವುದು ಮುಖ್ಯ. ತಾನು ದೈಹಿಕವಾಗಿ ಹುಡುಕದಿದ್ದರೂ ತನ್ನ ಮನಸ್ಸು ಭೂತಕಾಲದಾದ್ಯಂತ ವಿಹರಿಸಲು ತೆಗೆದುಕೊಂಡ ವೇಳೆ ಬಹು ಅತ್ಯಲ್ಪ ಹಾಗೂ ಅಮೂಲ್ಯ. ಅದು ಸಂಗ್ರಹಿಸಿದ ಮಾಹಿತಿಯನ್ನು ಆಧರಿಸಿ ಹೇಳುವುದಾದರೆ ತಾನು ಜನಿಸಿದ್ದು ದಾವಣಗೆರೆಯಲ್ಲಂತೆ! ಅಲ್ಲಿ ಮಾಧವರಾಯ ಎಂಬ ಹೆಸರಿನ ವ್ಯಕ್ತಿ ತನ್ನ ತಂದೆಯಂತೆ! ಕೌಸಲ್ಯಾಬಾಯಿ ಎಂಬ ಹೆಸರಿನ ಸಾಧ್ವಿ ತನ್ನ ತಾಯಿಯಂತೆ! ಬಡವನಾಗಿದ್ದ ಆತಗೆ ಆಕೆ ಸ್ಥಿರಾಸ್ತಿಯಾಗಿದ್ದಳಂತೆ! ಆಕೆಗೆ ಆತ ಚರಾಸ್ತಿಯಾಗಿದ್ದನಂತೆ! ಸಂಸಾರ ನಿರ್ವಹಣೆ ಸಲುವಾಗಿ ಮಾಧವರಾಯ

ನಿರ್ವಹಿಸಿದ ಕೆಲಸಗಳು ಒಂದೆರಡಲ್ಲವಂತೆ! ಈ ದಿವಸ ಈ ಚಿತ್ರಮಂದಿರದಲ್ಲಿ ಟಿಕೆಟ್ ಹರಿಯುವ ಕೆಲಸ ಮಾಡಿದರೆ ನಾಳೆ ದಿವಸ ಖಾಸಗಿ ಬಸ್ ನಿಲ್ದಾಣದಲ್ಲಿ ಸ್ಟ್ಯಾಂಡ್ ಏಜೆಂಟ್ ಕೆಲಸ. ನಾಡಿದ್ದು ಅದೇ ನಗರದ ಯಾವುದೋ ಒಂದು ಬಾರ್ ಅಂಡ್ ರೆಸ್ಟೋರೆಂಟಿನಲ್ಲಿ ಇನ್ನೊಂದು ಕೆಲಸ ಮಾಡುತ್ತಿದ್ದನಂತೆ! ತನ್ನ ಪತ್ನಿ ಕೌಸಲ್ಯ ಗರ್ಭ ಧರಿಸಿದಳಲ್ಲದೆ ಗಂಡು ಕೂಸಿಗೆ ಜನ್ಮ ನೀಡಿದಳಂತೆ! ತಂದೆಯ ಸ್ಥಾನ ತನಗಿಷ್ಟವಿತ್ತೋ ಇಲ್ಲವೋ! ಮುಂದೊಂದು ದಿವಸ ಮಾಧವರಾಯ ಇದ್ದಕ್ಕಿದ್ದಂತೆ ಕಣ್ಮರೆಯಾದನಂತೆ! ಮಗುವನ್ನು ತಿಪ್ಪೆಗೆಸೆದು ಆತ್ಮಹತ್ಯೆ ಮಾಡಿಕೊಳ್ಳುವ ಸನ್ನಾಹದಲ್ಲಿದ್ದ ಆಕೆಯನ್ನು ಪ್ರಹ್ಲಾದರಾಯರು ಭೆಟ್ಟಿಯಾದದ್ದು ತೀರಾ ಆಕಸ್ಮಿಕವಂತೆ! ಅನಾಥವಾಗಲಿದ್ದ ಆ ಮಗುವನ್ನು ತಾವು ದತ್ತು ಸ್ವೀಕರಿಸಿದ್ದೂ, ಆ ಬಳಿಕ ಕೌಸಲ್ಯಾಬಾಯಿ ಚಿಂತೆಯಿಂದ ಬಸವಳಿದು ಇಹಲೋಕ ತ್ಯಜಿಸಿದ್ದೂ!

ಓಹ್, ಮನಸ್ಸು ನಿವೇದಿಸಿಕೊಂಡ ತನ್ನ ಭೂತಕಾಲದ ನೆನಪುಗಳು! ಅವು ಒಂದೊಂದೂ ರೋಚಕ, ಭಯಾನಕ. ಅವುಗಳನ್ನಾಧರಿಸಿ ತಾನೊಂದು ಕಥೆ ಅಥವಾ ಕಾದಂಬರಿಯನ್ನು ರಚಿಸಿದರೆ.. ಯೋಚಿಸಿದ್ದೇ ತಡ, ತನ್ನೊಳಗಿನ ನಚಿಕೇತ ಜಾಗೃತಗೊಂಡ. ತನ್ನ ಕಣ್ಣೊಳಗೆ ಕಾದಂಬರಿಯನ್ನು ಸುರುಳಿ ಸುರುಳಿಯಾಗಿ ಬಿಚ್ಚಲಾರಂಭಿಸಿದ. ಎಲ್ಲೆಲ್ಲಿಂದಲೋ ಶಬ್ದಗಳು ಹಾರಿಬಂದು ವಾಕ್ಯಗಳ ರೂಪ ಪಡೆಯಲಾರಂಭಿಸಿದವು. ವಾಕ್ಯಗಳು ದೃಶ್ಯಗಳ ರೂಪ ಪಡೆಯಲಾರಂಭಿಸಿದವು. ವಾಕ್ಯಗಳ ಸಮೂಹದಲ್ಲಿ ಮಾಧವರಾಯ ಧರ್ಮರಾಯನಾದರೆ ಪ್ರಹ್ಲಾದರಾಯರು ಪ್ರಮೋದಾಚಾರ್ಯರಾದರು; ಕೌಸಲ್ಯಾಬಾಯಿ ಸುಗುಣಾಬಾಯಿಯಾದರೆ, ಸುಶೀಲಾಬಾಯಿ ಯಶೋದೆಯಾದಳು. ನೂರಾರು ಪಾತ್ರಗಳಿಂದ, ನೂರಾರು ಘಟನೆಗಳಿಂದ, ನೂರಾರು ವಿವರಗಳಿಂದ ತನ್ನ ಕಾದಂಬರಿ ಕಿಕ್ಕಿರಿದು ಬಿಟ್ಟಿತು. ಕಾದಂಬರಿ ಮುಗಿದೊಡನೆ ಅದನ್ನು ಕಾಣೆಯಾಗಿರುವ, ಮನಸ್ಸಿನಿಂದ ಅಳಿಸಿ ಹೋಗಿರುವ ತನ್ನ ತಂದೆಯವರಿಗೆ ಅರ್ಪಿಸಬೇಕೆಂದು ನಿರ್ಧರಿಸಿದ. ಕಳೆದೊಂದು ತಿಂಗಳಲ್ಲಿ ತನ್ನ ದೈಹಿಕ ಚಹರೆಯನ್ನೇ ಬದಲಾಯಿಸಿರುವ ಕಾದಂಬರಿಯ ಅಂತಿಮ ಭಾಗ ಪೂರ್ಣಗೊಳಿಸಬೇಕು, ತನ್ನೊಳಗಿನ ನಚಿಕೇತನನ್ನು ವಿಸರ್ಜಿಸಿ ನಿರಾಳಗೊಂಡು ಸಹಜ ರೀತಿಯಲ್ಲಿ ಬದುಕನ್ನು ಸವಿಯಬೇಕು ಎಂದು ನಿರ್ಧರಿಸಿದ.

ಮಧ್ಯರಾತ್ರಿಯಲ್ಲಿ ತಾನು ಕಥಾನಕದ ಕೊನೆಯ ಕಂತನ್ನು ಬರೆಯಲಾರಂಭಿಸಿರುವುದು. ಅದು ಮುಗಿಯುವ ಹೊತ್ತಿಗೆ ಅರುಣೋದಯ ಸಮೀಪಿಸುವುದೇನೊ! ಏನೇ ಆಗಲಿ! ಅಷ್ಟರಲ್ಲಿ ಯಾರೋ ಬಾಗಿಲು ತಟ್ಟುತ್ತಿರುವಂಥ ಸದ್ದು ಮೆಲ್ಲಗೆ ಕೇಳಿಸಿತು. ಇಷ್ಟು ಹೊತ್ತಿನಲ್ಲಿ ಯಾರು ಬಾಗಿಲು ತಟ್ಟುತ್ತಿರಬಹುದು! ಪ್ರಾಯಶಃ ತನ್ನ ಔರಸ ತಂದೆ ಪ್ರಹ್ಲಾದರಾಯರೇನಾದರೂ? ಲ್ಯಾಪ್‌ಟ್ಯಾಪನ್ನು ಸೈಲೆಂಟಾಗಿಸಿ ಎದ್ದು ಹೋಗಿ ಬಾಗಿಲು ತೆರೆದ. ಆದರೆ ಹೊಸ್ತಿಲಾಚೆ ಇನ್ಯಾರೋ

ಅಪರಿಚಿತ ವ್ಯಕ್ತಿ! ತನ್ನ ದೇಹದಿಂದ ದುರ್ವಾಸನೆಯನ್ನು ಸೂಸುತ್ತಿರುವ ವೃದ್ಧ ವಯೋಮಾನದ ವ್ಯಕ್ತಿ! ಅದೇ ಸಮಯಕ್ಕೆ ಸರಿಯಾಗಿ ಮೊಗಸಾಲೆಯಲ್ಲಿದ್ದ ದೀಪ ಹೊಯ್ದಾಡಿತು. ಅದರ ಬೆಳಕು ನೇರವಾಗಿ ಆ ವ್ಯಕ್ತಿಯ ಮುಖದ ಮೇಲೆ ಬಿದ್ದಿತು. ಗಡ್ಡ–ಮೀಸೆಯೊಳಗೆ ಮರೆಮಾಚಿರುವ ಮಾಸಲು ಮುಖ! ಕೊಕ್ಕೊಕ್ಕ ಎಂದು ಕೆಮ್ಮುತ್ತಿರುವವನು ಬೇರೆ! ತನ್ನಿಂದ ಹಣವನ್ನು ಬಯಸಿ ಬಂದಿರಬಹುದೋ! ತನ್ನ ಹಸಿದಿರುವ ಹೊಟ್ಟೆಗೆ ಆಹಾರ ಅಪೇಕ್ಷಿಸಿ ಬಂದಿರಬಹುದೋ! ಅದೂ ಹೊತ್ತಲ್ಲದ ಹೊತ್ತಿನಲ್ಲಿ ಭಯೋತ್ಪಾದಕನಂತೆ! ಯಾರು ಏನು ಎಂದು ಕೇಳಿದ್ದಕ್ಕೆ ಆ ವೃದ್ಧ ಇಲ್ಲಿ ವರುಣ ಎಂದರೆ ಯಾರು ಎಂದು ಕೇಳಿದ. ತಾನೇ ವರುಣ, ಮೊದಲು ನೀವ್ಯಾರು ಹೇಳಿ ಎಂದು ಕೇಳಿದ್ದಕ್ಕೆ ಆತ ಕಣ್ಣುಗಳಿಂದ ಬಿಕ್ಕಿದ, ಅಪ್ಪಿಕೊಳ್ಳಲು ಚಾಚಿದ ತನ್ನ ಕೈಗಳನ್ನು ಬೆಚ್ಚಿ ಉಪಸಂಹರಿಸಿಕೊಂಡ, ಒತ್ತಾಯಿಸಿದ್ದಕ್ಕೆ ತಾನೇ ವರುಣನ ನತದೃಷ್ಟ ತಂದೆ ಮಾಧವರಾಯನೆಂದು ಹೇಳಿದೊಡನೆ..

❖

(ವಿಜಯ ಕರ್ನಾಟಕ – ದೀಪಾವಳಿ ವಿಶೇಷಾಂಕ, 2012)

ಹೆಗ್ಗುರುತು

ಕೆ. ಸತ್ಯನಾರಾಯಣ

೧

ವಾರ್ಟನ್ ವಾಣಿಜ್ಯ ಸಂಸ್ಥೆ ಮತ್ತು

ವಿಶ್ವಬ್ಯಾಂಕ್ ಸಾಮಾಜಿಕ ಮಂಡಳಿ,

ಫಿಲ್‌ಡೆಲ್ಫಿಯಾ ಮತ್ತು ವಾಷಿಂಗ್‌ಟನ್

❖

ಅಂತರ್‌ರಾಷ್ಟ್ರೀಯ ವಿಚಾರ ಸಂಕಿರಣ

ಎಪ್ರಿಲ್ ೧೪ ರಿಂದ ೧೮, ೨೦೧..

ಸ್ಥಳ : ಜಾನ್ ಸ್ಟೈನ್‌ಬಕ್ ಕಟ್ಟಡ

ಮೂರನೇ ಮಹಡಿ, ನಾಲ್ಕನೇ ಕೊಠಡಿ (೩೦೪)

ವಿಷಯ : ಇಸ್ಲಾಂ, ಮುಸ್ಲಿಮರು ಮತ್ತು ಮೈಕ್ರೋ ಫೈನಾನ್ಸ್

ಭಾಗವಹಿಸುವವರು : ಏಷ್ಯಾ, ಆಫ್ರಿಕಾ ಖಂಡಗಳ ಮುಸ್ಲಿಂ ದೇಶಗಳ ಸರ್ಕಾರಿ ಧುರೀಣರು, ವಿಷಯತಜ್ಞರು, ಬ್ಯಾಂಕ್ ನಿರ್ದೇಶಕರು, ಅಧಿಕಾರಿಗಳು.

ಸಮಾರೋಪ ಪೂರ್ವ ಭಾಷಣ : ಸಯೀದ್ ಯಾಕೂಬ್

ಮ್ಯಾಗ್ಸೆಸೆ ಮತ್ತು ನೊಬೆಲ್ ಪ್ರಶಸ್ತಿ ವಿಜೇತರು

ಗ್ರಾಮೀಣ ಬ್ಯಾಂಕ್ ಧುರೀಣರು

ಢಾಕಾ, ಬಂಗ್ಲಾದೇಶ.

೨

ಮೇಲಿನ ಸಂಕಿರಣಕ್ಕೆ ನನ್ನನ್ನು ಕಳಿಸಿದ್ದೇಕೆ ಎಂಬುದೇ ಇಂದಿಗೂ ನನಗೊಂದು ಸೋಜಿಗ. ನಿಜ, ಸಾಬರ ಬ್ಯಾಂಕ್ ಎಂದೇ ಬೆಂಗಳೂರಿನಲ್ಲೆಲ್ಲ ಪ್ರಸಿದ್ಧವಾಗಿರುವ ಬ್ಯಾಂಕ್ ಶಾಖೆಯಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ. ಸಿಟಿ ಮಾರ್ಕೆಟ್ ಮತ್ತು ಕಲಾಸಿಪಾಳ್ಯದ ನಡುವೆ ಇರುವ ಪ್ರಸಿದ್ಧವಾದ ಓಣಿಯೊಂದರಲ್ಲಿ ನಮ್ಮ ಬ್ಯಾಂಕಿರುವುದು.

ನಗರದಲ್ಲೇ ತುಂಬಾ ಹಳೆಕಟ್ಟಡ. ಬಹುಪಾಲು ಬಾಡಿಗೆದಾರರು ನೂರಾರು ವರ್ಷಗಳಿಂದ ಹಳೆ ಬಾಡಿಗೆಯ ಮೇಲೇ ಇರುವವರು. ಮುಸಲ್ಮಾನರಾದರು ವಕ್ಫ್ ಮಂಡಳಿಯವರಿಗೆ ಕೂಡ ಖಾಲಿ ಮಾಡಿಸಲೂ ಸಾಧ್ಯವಾಗಿಲ್ಲ. ಬಾಡಿಗೆ ಹೆಚ್ಚಿಸುವುದಂತು ದೂರದ ಮಾತು. ಓಣಿಯ ತುಂಬಾ ಮಾಂಸದಂಗಡಿಗಳು, ಬಣ್ಣ, ಕಬ್ಬಿಣ, ಹಗ್ಗ ಸಾಮಾನುಗಳಂಗಡಿ. ಸಂಜೆಯಾದರೆ ಸಾಕು ನಗರದ ಎಲ್ಲ ಭಾಗಗಳಿಂದ ಜನ ಬಂದು ಕಬಾಬ್‌ಗೆ, ಬಿರಿಯಾನಿಗೆ, ಕೀಮಾಗೆಂದು ಸೇರಿಬಿಟ್ಟರೆ ಬ್ಯಾಂಕ್ ಕೆಲಸ ಮುಗಿಸಿದ ನಮಗೆ ಸ್ಕೂಟರ್‌ನ ಜನಸಂದಣಿಯಲ್ಲಿ ತೂರಿಸಿ ಮೈನ್ ರೋಡಿಗೆ ತಲುಪುವುದೇ ಕಷ್ಟ.

ಸಾಬರ ಬ್ಯಾಂಕೆಂದು ಹೆಸರು ಬಂದಿದ್ದರೂ ನಿಜವಾಗಿ ನೋಡಿದರೆ ಅನ್ವರ್ಥನಾಮವಲ್ಲ. ಮೆಜಾರಿಟಿ ಠೇವಣಿದಾರರು ಮುಸ್ಲಿಮರಲ್ಲ, ಮೊದಲಿಯಾರ್‌ಗಳು, ನಾಯುಡುಗಳು, ತಿಗಳರು ಮತ್ತು ಕೋಮಟಿಗಳು. ಸಾಲ ಪಡೆದವರ ಪೈಕಿಯೂ ಇವರದೇ ಮೆಜಾರಿಟಿ. ಹೀಗಿದ್ದರೂ ಈ ಶಾಖೆಗೆ ವರ್ಗವಾದ ತಕ್ಷಣ ಸಹೋದ್ಯೋಗಿಗಳೆಲ್ಲ ರೇಗಿಸಿದರು. ಏನು ಸ್ವಾಮಿ, ಪಾಕಿಸ್ತಾನಕ್ಕೆ ವರ್ಗವಾಯಿತೇ, ಇನ್ನು ಬಿಡಿ ದಿನವೂ ಬಿರಯಾನಿ ತಿನ್ನಬಹುದು. ಬೆಳಿಗ್ಗೆಯಿಂದ ಸಂಜೆಯ ತನಕ ಸೆಂಟ್ ವಾಸನೆ ಕುಡಿಯಬಹುದು. ಮುಸಲ್ಮಾನ್ ಬಂಧುಗಳು ನಿಮ್ಮ ಬ್ಯಾಂಕಿಂದ ಹಣ ತೆಗೆದುಕೊಂಡು ಹೋಗಿ ನಾಲ್ಕು ಜನ ಹೆಂಡರಿಗೆ ನಗನಗತಾ ಹಂಚುವುದನ್ನು, ಇಲ್ಲ ಪಾಕಿಸ್ತಾನದ ಬ್ಯಾಂಕುಗಳಲ್ಲಿ ಜಮಾ ಮಾಡುವುದನ್ನು ನೋಡಿ ಸಂತೋಷಪಡಬಹುದು. ಇಲ್ಲ ಇಲ್ಲ ವಸ್ತುಸ್ಥಿತಿ, ಹಾಗೇನಿಲ್ಲ ಎಂದು ಬಿಡಿಸಿ ಬಿಡಿಸಿ ಹೇಳಿದರೂ ಯಾರೂ ನಂಬುತ್ತಿರಲಿಲ್ಲ. ಸ್ವಾಮಿ, ನಮ್ಮದು ಸರ್ಕಾರಿ ಬ್ಯಾಂಕ್. ನಮ್ಮ ಬ್ಯಾಂಕ್ ಮುಂದುಗಡೆ ಬೀದಿಯಲ್ಲಿರುವ ಅಮಾನತ್ ಬ್ಯಾಂಕಿದೆಯಲ್ಲ ಅದು ಮುಸ್ಲಿಂ ಜನಾಂಗಕ್ಕೆ ಸೇರಿದ್ದು. ಸ್ನೇಹಿತರ, ಬಂಧುಗಳಿರಲಿ ಸ್ವಂತ ನಮ್ಮ ಬ್ಯಾಂಕಿನ ಹಿರಿಯ ಅಧಿಕಾರಿಗಳು ಕೂಡ ನಂಬೋಲ್ಲ. ನಿಮ್ಮ ಬ್ಯಾಂಕ್ ತುಂಬಾ ಗಲೀಜು, ಕೆಟ್ಟ ವಾಸನೆ, ಮಹಡಿ ಮೆಟ್ಟಿಲುಗಳೆಲ್ಲ ಹಳೆ ಕಾಲದ ಮರದ್ದು, ಯಾವಾಗ ಬೇಕಾದರೂ ಕಟಕಟ ಅಂತಾ ಮುರಿದು ಹೋಗಬಹುದು. ನಿಮ್ಮ ಬ್ಯಾಂಕ್ ಇನ್‌ಸ್ಪೆಕ್ಷನ್ನು ಬೇಡ, ಆಡಿಟ್ಟೂ ಬೇಡ.

ಹೀಗೆ ಹೇಳಿದರೂ ಮೇಲಧಿಕಾರಿಗಳದ್ದು ಜಾಣ ಕುರುಡು, ಜಾಣ ಕಿವುಡು. ಅಲ್ಪಸಂಖ್ಯಾತರು ಬ್ಯಾಂಕಿಂದ ಯಾವ ಯಾವ ರೀತಿ ನೆರವು ಪಡೆದಿರುವರೆಂದು ಕೇಂದ್ರ ಸರ್ಕಾರವೋ, ಪಾರ್ಲಿಮೆಂಟೋ ತಾಕೀತು ಮಾಡಿ ವರದಿ ಕೇಳಿದರೆ, ನಮ್ಮ ಶಾಖೆಯಿಂದಲೇ ವಿವರ ಕೇಳುತ್ತಿದ್ದುದು. ಜನರಲ್ ಮ್ಯಾನೇಜರ್ ಬಾಳಿಗಾರ ಹತ್ತಿರ ಹೋಗಿ ಕುಳಿತುಕೊಂಡು ಕೇವಲ ನಮ್ಮ ಶಾಖೆಯಿಂದ ಮಾತ್ರವೇ ಏಕೆ ಮಾಹಿತಿ ಸಂಗ್ರಹಿಸುತ್ತೀರಿ. ನಿಜವಾಗಿಯೂ ಇದು ಮುಸಲ್ಮಾನರ ಬ್ರಾಂಚಲ್ಲ ಎಂದೆಲ್ಲ

ಬಿಡಿಸಿ ಹೇಳಿದಾಗ ಒಪ್ಪುತ್ತಿದ್ದರು. ನೀವು ಹೇಳೋದು ಸರಿ, ಆದರೆ ಇದೆಲ್ಲ ರೂಢಿಯಿಂದ ನಡೆದುಕೊಂಡು ಬಂದಿದೆ, ನಡೆದುಕೊಂಡು ಹೋಗುತ್ತೆ. ಯಾರು ಬದಲಾಯಿಸುತ್ತಾರೆ ಹೇಳಿ. ಸಮಾಧಾನ ಪಡಿಸುತ್ತ ನನ್ನ ಹಿನ್ನೆಲೆ, ಬರವಣಿಗೆ, ಬೇರೆ ಬೇರೆ ಆಸಕ್ತಿಗಳ ಬಗ್ಗೆ ತಿಳಿದುಕೊಂಡು ಮೆಚ್ಚುಗೆ ಸೂಚಿಸಿದರು. ಇದೇ ಬಾಳಿಗಾರೆ ವಾರ್ಟನ್ ಸೆಮಿನಾರಿಗೆ ನನ್ನನ್ನು ನೇಮಿಸಿದಾಗ ಕೇಂದ್ರ ಕಛೇರಿಗೆ ಕರೆದು ಸುದ್ದಿ ತಿಳಿಸಿ, ಬೆನ್ನು ತಟ್ಟಿ, ಕೈಕುಲುಕಿ ಸೆಮಿನಾರ್ ಸಂದರ್ಭ ವಿವರಿಸಿದ್ದರು. ನೀಲಿ ಬಣ್ಣದ ಟೈ ಒಂದನ್ನು ಉಡುಗೊರೆಯಾಗಿ ಕೂಡ ಕೊಟ್ಟರು.

ನೋಡಿ, ಬಂಗ್ಲಾದೇಶದ ಯಾಕೂಬರಿಗೆ ಗ್ರಾಮೀಣ ಬ್ಯಾಂಕ್ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಮ್ಯಾಗ್ಸೆಸೆ, ನೊಬೆಲ್ ಪ್ರಶಸ್ತಿ ಬಂದ ಮೇಲೆ ಜಗತ್ತಿನಾದ್ಯಂತವೂ ಮುಸ್ಲಿಮರಿಗೆ ಬ್ಯಾಂಕುಗಳು ಇನ್ನೂ ಹೆಚ್ಚು ನೆರವಾಗಬೇಕು, ಉದಾರವಾಗಿ ಸಾಲ ಕೊಡಬೇಕೆಂಬ ಕೂಗೆದ್ದಿದೆ. ಯಾಕೂಬರಿಂದಾಗಿ ಮುಸ್ಲಿಮರ ಬಗ್ಗೆ ಇದ್ದ ಕೆಟ್ಟ ಅಭಿಪ್ರಾಯ ಹೋಗಿದೆ. ತೆಗೆದುಕೊಂಡ ಸಾಲವನ್ನು ಮುಸ್ಲಿಮರು ನಿಯತ್ತಿನಿಂದ ವಾಪಸ್ ಮಾಡತಾರೆ, ಕೊಟ್ಟ ಸಾಲವನ್ನು ಮದುವೆಗೋ, ಜೂಜಿಗೋ, ಶೋಕಿಗೋ ಖರ್ಚು ಮಾಡದೆ ಕೃಷಿಗೋ, ಸಣ್ಣ ಪುಟ್ಟ ಅಂಗಡಿ ಇಡುವುದಕ್ಕೋ, ವಿದ್ಯಾಭ್ಯಾಸಕ್ಕೋ, ಗೃಹಕೈಗಾರಿಕೆಗಳಿಗೋ ಚೆನ್ನಾಗಿ ಉಪಯೋಗಿಸಿಕೊಳ್ತಾರೆ. ನಿಜವಾಗಲೂ ವಿಶ್ವಬ್ಯಾಂಕಿಗೆ ಇದು ಸಕಾಲ–ಮುಸ್ಲಿಮರಿಗೆ ನೆರವಾಗಿ ಮುಖ್ಯವಾಹಿನಿಗೆ ಸೇರಿಸಲು. ಇದೆಲ್ಲಕ್ಕಿಂತ ಮುಖ್ಯವಾಗಿ ತಾವು ನಿಜವಾಗಿಯೂ ಮುಸ್ಲಿಂ ವಿರೋಧಿಗಳಲ್ಲವೆಂದು ತೋರಿಸಿಕೊಳ್ಳಲು ದೊಡ್ಡ ದೊಡ್ಡ ದೇಶಗಳಿಗೆ ಇದೊಂದು ಸದವಕಾಶ. ಈ ಸದವಕಾಶದ ಭಾಗವಾಗಿಯೇ ಸೆಮಿನಾರ್. ನಿಮಗೇನು ನಷ್ಟ. ಸುಮ್ಮನೆ ಹೋಗಿದ್ದು ಬನ್ನಿ.

ಬಾಳಿಗಾರ ಚೇಂಬರ್ ಸುತ್ತ ಕುಳಿತಿದ್ದವರೆಲ್ಲ ಸಂಜೆಯಾದ್ದರಿಂದ ಮನೆಗೆ ಹೊರಡುವ ತರಾತುರಿಯಲ್ಲಿದ್ದುದು ಗಾಜಿನ ಮೂಲಕ ಕಾಣಿಸಿತು. ಬಾಳಿಗಾರಿಗೂ ಮಾತು ಶುರುಮಾಡುವಾಗಿದ್ದ ಉತ್ಸಾಹ ಮುಗಿಸುವಾಗಿರಲಿಲ್ಲ. ಅವರು ಕೂಡ ತಮ್ಮ ಊಟದ ಡಬ್ಬಿಯನ್ನು ಬ್ರೀಫ್‌ಕೇಸ್ ಒಳಗೆ ಇಟ್ಟುಕೊಂಡು ಟೈ ಸರಿಪಡಿಸಿಕೊಳ್ಳುತ್ತಾ ಹೊರಡಲು ಚಡಪಡಿಸಿದರು. ನನ್ನ ಪ್ರಶ್ನೆ, ಸಂದೇಹ ಬಾಯಿಂದ ಹೊರಗೆ ಬಂದೇಬಿಟ್ಟಿತು.

ISLAM AND MICRO FINANCE ಸೆಮಿನಾರಿಗೆ ನಮ್ಮ ದೇಶದವರು, ನಮ್ಮ ಬ್ಯಾಂಕಿನವರು ಏಕೆ ಹೋಗಬೇಕು. ಮುಸ್ಲಿಮರು ನಮ್ಮ ದೇಶದ ನಾಗರೀಕರಲ್ಲವೆ, ಎಲ್ಲರಿಗೂ ಅನ್ವಯವಾಗುವ ಸಾಲದ ನೀತಿ, ಬಡ್ಡಿಯ ದರವೇ ತಾನೇ ಅವರಿಗೂ ಬಾಳಿಗಾ ಕುರ್ಚಿಯಿಂದ ಏಳುತ್ತಾ, ಬಾಯಿ ತುಂಬಾ ನಕ್ಕರು. ನೀನೊಬ್ಬ ಪೆದ್ದನೆನ್ನುವಂತೆ.

ಇಂತಹ ಪ್ರಶ್ನೆಗಳನ್ನೆಲ್ಲ ಇಷ್ಟು ವರ್ಷ ಸರ್ವೀಸಾದ ಮೇಲೆ ನೀವು ಕೇಳಲೇಬಾರದು. ಏಕೆಂದರೆ ನಿಮಗೂ ಉತ್ತರ ಏನೆಂದು ಗೊತ್ತಿರುತ್ತೆ. ಇಷ್ಟಕ್ಕೂ ಅಲ್ಪಸಂಖ್ಯಾತರಿಗೆ ನೆರವಾಗಬೇಕೆನ್ನುವ ಉದ್ದೇಶದಲ್ಲಿ ತಪ್ಪೇನು ಇಲ್ಲವಲ್ಲ.

೩

ಬಾಳಿಗಾರ ಹಿತವಚನವಾಗಲಿ, ಸೆಮಿನಾರ್ ತಯಾರಿಗೆಂದು ಕೊಟ್ಟಿದ್ದ ಸಾಹಿತ್ಯದ ಓದಾಗಲೀ ನನ್ನ ಗೊಂದಲವನ್ನು ಕಡಮೆ ಮಾಡಲಿಲ್ಲ. ಇಸ್ಲಾಂ ಧರ್ಮದ ಪ್ರಕಾರ ಬಡ್ಡಿ ವಿಧಿಸುವುದು ಪಾಪವೆಂದಾದರೆ ನಮ್ಮೂರಾದ ಗುತ್ತಲಿನಲ್ಲಿ, ಏಕೆ ಸಾದಿಕ್ ಸಾಹೇಬರು ಮುಸ್ಲಿಮರಿಗೆ ಮಾತ್ರವಲ್ಲ, ಹಿಂದೂಗಳಿಗೂ ಕೂಡ ಸಾಲ ಕೊಡುತ್ತಿದ್ದರು. ಸಾಲ ವಾಪಸ್ ಕೊಡದೆ ಹೋದರೆ, ಬಡ್ಡಿ ಕಂತು ಕಟ್ಟದೆ ಹೋದರೆ, ಗಿರಿವಿಗಿಟ್ಟಿದ್ದ ಜಮೀನನ್ನು ಬರೆಸಿಕೊಂಡು ಬಿಡುತ್ತಿದ್ದರು. ಜಾನುವಾರುಗಳನ್ನು ಕೊಟ್ಟಿಗೆಯಿಂದಲೇ ಬಿಚ್ಚಿಕೊಂಡು ಹೋಗಿಬಿಡುತ್ತಿದ್ದರು. ತಕರಾರು ಮಾಡುವವರನ್ನು ಹದ್ದುಬಸ್ತಿನಲ್ಲಿಡಲು ಸಾಹೇಬರು ಕುದೇರು, ನರಸೀಪುರದ ಕಡೆಯಿಂದ ಕರೆಸುತ್ತಿದ್ದ ಪಠಾಣರಿಗೆ ಸಾಬರು ಮಾತ್ರವಲ್ಲ, ಗೌಡರು, ಲಿಂಗಾಯಿತರು ಕೂಡ ಗಡಗಡ ನಡುಗೋರು. ಅಂಗಡಿಯ ಅಮೀನ್‌ಸಾಬಿ ಹಾಗೆ ನೋಡಿದರೆ ಸಾದಿಕ್ ಸಾಹೇಬರ ದೂರದ ಸಂಬಂಧದವನಂತೆ. ಆದರೂ ಸಾಲದ ಕಂತು ಸರಿಯಾಗಿ ಕಟ್ಟಲಿಲ್ಲವೆಂದು ಪೆಟ್ಟಿಗೆಯಂಗಡಿಯನ್ನೇ ಸಾಮಾನು ಸಮೇತ ಬಿಡಿಸಿಕೊಂಡು ಮಾದುಗೌಡನಿಗೆ ಮಾರಿದ್ದರು. ಸಣ್ಣಪುಟ್ಟ ಬಡ್ಡಿ ವ್ಯವಹಾರ ಮಾಡುತ್ತಿದ್ದ ನಮ್ಮ ದೊಡ್ಡಜ್ಜಿ ಹತ್ತಿರ ಕೇಳಲು ಬರುತ್ತಿದ್ದ ಎಷ್ಟೋ ಮುಸಲ್ಮಾನರೇ ಸಾದಿಕ್ ಸಾಹೇಬರ ಹತ್ತಿರ ಸಾಲ ಮಾಡಿದ ಯಾರೂ ಉದ್ಧಾರವಾಗುವುದಿಲ್ಲವೆಂದು ಯಾವಾಗಲೂ ಅಲವತ್ತುಕೊಳ್ಳುತ್ತಿದ್ದರು.

ಬಿ.ಎ. ಓದುತ್ತಿದ್ದಾಗ ನನ್ನ ಸಹಪಾಠಿಯಾಗಿದ್ದ ಸಯ್ಯದ್ ಪಾಷಾನ ತಂದೆಗೂ ನಮ್ಮ ಬೀದಿಯ ಕೊನೆ ಮನೆಯಲ್ಲಿದ್ದ ಕೆನರಾ ಬ್ಯಾಂಕ್ ಮ್ಯಾನೇಜರ್ ಶಾಂತಾರಾಮ ಕಾರಂತರಿಗೂ ಗಳಸ್ಯ ಕಂಠಸ್ಯ. ಪಾಷಾರ ಸಾಲಸೋಲ ವ್ಯವಹಾರವೆಲ್ಲ ಇದ್ದದ್ದು ಕೆನರಾಬ್ಯಾಂಕಿನಲ್ಲೇ. ಕಾರಂತರು, ಪಾಷಾ ಸಾಹೇಬರು ಪ್ರತಿ ಭಾನುವಾರವೂ ಮೈಸೂರಿಗೆ ಹೋಗಿ ಹಿಂದಿ ಸಿನಿಮಾ ನೋಡಿ ಬರೋರು. ತಹಶೀಲ್ದಾರರಾಗಿದ್ದ ನಮ್ಮ ತಂದೆ ಹತ್ತಿರವೂ ಪಾಷಾ ಸಾಹೇಬರಿಗೆ ಏನಾದರೂ ಮಾತುಕತೆ–ವ್ಯವಹಾರವಿದ್ದೇ ಇರೋದು. ನಮ್ಮ ತಂದೆ ಕಿಚಾಯಿಸೋರು, ಏನ್ರೀ ಸಾಹೇಬ್ರೇ ಮೂರಂತಸ್ತಿನ ನಿಮ್ಮ ಕ್ರೆಸೆಂಟ್ ಸೆಂಟ್ರಲ್ ಬ್ಯಾಂಕ್ ಇಟ್ಟುಕೊಂಡು ಕಾರಂತರ ಬ್ಯಾಂಕಿನ ಹತ್ತಿರ ಏನು ವ್ಯವಹಾರ ನಿಮ್ಮದು. ಪಾಷಾನು ನಗುತ್ತಲೇ ಉತ್ತರಿಸೋರು. ಹೆಸರಿಗೆ ನಮ್ಮ ಬ್ಯಾಂಕ್ ಸ್ವಾಮಿ ಅದು, ಅಡ್ರಸ್‌ಗು ಮಂಡ್ಯ ಸಿಟಿ. ಸಾಲ ಕೊಡೋದೇನಿದ್ದರು, ಕ್ಲೋಸ್‌ಪೇಟೆ, ಚನ್ನಪಟ್ನ, ಬೆಂಗಳೂರಿನ ಶಿವಾಜಿನಗರದ ದೊಡ್ಡ ದೊಡ್ಡ ಕುಳಗಳಿಗೆ. ನನ್ನಂತ ಜುಜುಬಿ ರೈಸ್ ಮಿಲ್ ಓನರ್‌ನ ಯಾರು ಕೇಳ್ತಾರೆ.

ನಾನು ಹೋಗುತ್ತಿದ್ದುದು ಬ್ಯಾಂಕಿಂಗ್ ಸೆಮಿನಾರಿಗಾದರೂ ದೆಲ್ಲಿಯ ಮಂತ್ರಾಲಯದಿಂದ ಕಳಿಸಿಕೊಟ್ಟಿದ್ದ ಸಾಹಿತ್ಯದಲ್ಲಿ ನಮ್ಮ ಸಂವಿಧಾನದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಸ್ಥಾನ, ಸ್ವಾತಂತ್ರ್ಯ ಬಂದ ಮೇಲೆ ರಾಷ್ಟ್ರಪತಿ, ಉಪರಾಷ್ಟ್ರಪತಿ, ರಾಯಭಾರಿಗಳು, ಉಪಕುಲಪತಿಗಳು, ನ್ಯಾಯಾಧೀಶರುಗಳು ಇಂತಹ ಹುದ್ದೆಗಳನ್ನಲಂಕರಿಸಿದ ಮುಸ್ಲಿಮರ ಜೀವನ ವಿವರಗಳು. ಮದ್ರಸಾಗಳಿಗೆ ನೀಡಿರುವ ನೆರವು, ಒದಗಿಸಿರುವ ಕಂಪ್ಯೂಟರ್‌ಗಳು, ಹಜ್ ಸಬ್ಸಿಡಿ ಪ್ರತಿವರ್ಷವೂ ಹೆಚ್ಚುತ್ತಲೇ ಇರುವುದು. ಇದೆಲ್ಲವೂ ಪುಟ ಪುಟದಲ್ಲೂ ತುಂಬಿಕೊಂಡಿತ್ತು. ಸಾವಿರಾರು ಪುಟಗಳ ಪೂರ್ವಭಾವಿ ಸಾಹಿತ್ಯವನ್ನು ಓದುವುದರಲ್ಲೇ ಸುಸ್ತಾಗುತ್ತಿತ್ತು.

ಈಗ ಕುಟುಂಬದ ವಲಯದವರು, ಬರವಣಿಗೆಯ ಮಿತ್ರರು ಕೂಡ ಗೇಲಿ ಮಾಡಲು ಸೇರಿಕೊಂಡರು. ಸೆಮಿನಾರಿಂದ ವಾಪಸ್ ಬಂದ ಮೇಲೆ ಒಂದು ALL MUSLIM BRANCH ಮಾಡಿ ನಿನ್ನನ್ನೇ ಚೀಫ್ ಮ್ಯಾನೇಜರ್ ಮಾಡ್ತಾರೆ. ಒಳ್ಳೆ ಪ್ರಮೋಷನ್ ಕೊಡ್ತಾರೆ. ಸೆಮಿನಾರ್‌ಗೆಂದು ಯಾಕೂಬರ ಆತ್ಮಚರಿತ್ರೆಯನ್ನು ಮತ್ತೆ ಓದುತ್ತಿದ್ದ ನಾನು ಬಾಂಗ್ಲಾದಲ್ಲಿ ನಿಜವಾಗಿಯೂ ಯಾಕೂಬರು ಉಂಟುಮಾಡಿದ ಕ್ರಾಂತಿ ಸ್ವರೂಪದ ಬದಲಾವಣೆಯನ್ನು ಎಲ್ಲರಿಗೂ ವಿವರಿಸಲು ಹೊರಟರೆ, ಸಾಧನೆಯನ್ನೂ, ಪರಿವರ್ತನೆಯನ್ನೂ ಒಪ್ಪೋರು. ಒಪ್ಪಿದರೂ ಷರಾ ಮಾತ್ರ ಕುಹಕದ್ದೇ. ಬಂಗ್ಲಾದೇಶದ್ದು ಒಂದು EXCEPTION. ಹಾಗೆಂದರೆ ಎಲ್ಲ ಸಾಬರು ಒಳ್ಳೆಯವರೆಂದು ಅರ್ಥವಲ್ಲ. ನೀವೇಕೆ ಯಾವಾಗಲೂ ಅವರನ್ನು ಮುಸಲ್ಮಾನರಾಗೇ ನೋಡುತ್ತೀರೆಂದು ನಾನು ಬೇಸರದಿಂದ ಕೇಳಿದರೆ, ನಿನ್ನದೊಳ್ಳೆ ತಮಾಷೆ. ಮುಸಲ್ಮಾನರನ್ನು ಮುಸಲ್ಮಾನರಂತೆ ತಾನೇ ನೋಡಬೇಕಾದ್ದು. ನಿನ್ನದೊಳ್ಳೆ ವಿಚಿತ್ರದ ಮಾತು ಎಂದು ನನಗೇ ರೇಗುವರು.

೪

ನಮ್ಮ ಭಾರತ ತಂಡದಲ್ಲಿ ನನ್ನಂತವರೇ ಇನ್ನಿಬ್ಬರು ಬ್ಯಾಂಕ್ ಅಧಿಕಾರಿಗಳೇ ಅಲ್ಲದೆ, ವಿತ್ತ ಮಂತ್ರಾಲಯದ ಇಬ್ಬರು ನಿರ್ದೇಶಕರು, ಒಬ್ಬ ಅಧೀನ ಕಾರ್ಯದರ್ಶಿ, ಮೂರು ಜನ ಆರ್ಥಿಕ ಪತ್ರಿಕೆಯ ವರದಿಗಾರರೂ ಇದ್ದರು. ನಮ್ಮೆಲ್ಲರ ನಾಯಕತ್ವ ವಹಿಸಿದ್ದ ಹಿರಿಯ ಕಾರ್ಯದರ್ಶಿಗಳು ಎಲ್ಲರನ್ನೂ ಲಾಬಿಯಲ್ಲಿ ಕೂರಿಸಿಕೊಂಡು ಸೆಮಿನಾರಿನಲ್ಲಿ ನಾವು ನಡೆದುಕೊಳ್ಳಬೇಕಾದ ರೀತಿಯ ಬಗ್ಗೆ ಬುದ್ಧಿಮಾತು ಹೇಳಿದರು. ಚರ್ಚಾಸ್ಪದವಾಗುವಂತಹ ಯಾವುದೇ ಮಾತು ಹೇಳಬಾರದು, ಮಂತ್ರಾಲಯವು ಕೊಟ್ಟಿರುವ ಸಾಹಿತ್ಯದಿಂದಲೇ ಅಂಕಿ–ಅಂಶಗಳನ್ನು ಉಲ್ಲೇಖಿಸಬೇಕು, ಯಾರದೇ ಯಾವುದೇ ಮಾತಿಗೂ ತೀವ್ರ ಪ್ರತಿರೋಧ, ಪ್ರತಿಕ್ರಿಯೆ ವ್ಯಕ್ತಪಡಿಸಬಾರದು. ಪ್ರತಿನಿಧಿಗಳೆಲ್ಲರ ಜೊತೆ ಸ್ನೇಹಮಯವಾಗಿ ವರ್ತಿಸಿ, ಭಾರತದಲ್ಲಿರುವ ಪ್ರೇಕ್ಷಣೀಯ ಸ್ಥಳಗಳ ಬಗ್ಗೆ ತಿಳಿಸಿ, ಭಾರತಕ್ಕೂ ಎಲ್ಲರನ್ನೂ ಆಹ್ವಾನಿಸಬೇಕು.

ಸೆಮಿನಾರಿನಲ್ಲಿ ಮೊದಲ ದಿನ ನನಗೆ ಹಲವು ಆಶ್ಚರ್ಯಗಳು ಕಾದಿದ್ದವು. ಮುಸಲ್ಮಾನರ ಹೆಸರುಗಳಲ್ಲಿ ಎಷ್ಟೊಂದು ವೈವಿಧ್ಯ. ಮಾಸೂಸ್-ಅಲ್-ಖುರಾದ್‌ವಿ ದಾವೂದ್ ಮೊರಾದಿಯ್‌ನ್, ಜಲಾಲುದ್ದೀನ್ ಹರಾನಿ, ಮಹಮ್ಮದ್ ಮೋರಸಿ, ಅಬ್ದೆಲ್-ಮಾನಿಯ್‌ವ್-ಅಬೂಲ್ ಫಾತಾ, ಅಬುಲ್ ಕಾಸಿಮ್ ವಲೇಬಿ, ಅಹಮ್ಮದ್ ಹಿಲೇಬಿ. ಯಾವ ಹೆಸರನ್ನೂ ಪೂರ್ತಿಯಾಗಿ ನೆನಪಿಟ್ಟುಕೊಳ್ಳುವುದು, ಇಲ್ಲ ಉಚ್ಚರಿಸುವುದು ಕಷ್ಟವಾಗುತ್ತಿತ್ತು. ಸರ್ ಎಂದು ಕೂಗಲು ಹೊರಟರೆ ಒಪ್ಪದೆ ತಮ್ಮ ಹೆಸರನ್ನು ಉಚ್ಚರಿಸುವುದು ಹೇಗೆ ಎಂದು ಹೇಳಿಕೊಡುವರು. ಕೆಲವರು ಯುರೋಪಿಯನ್ನರಿಗಿಂತಲೂ ಬೆಳ್ಳಗೆ, ಕೆಂಚಗೆ ಇದ್ದು ಸೂಟುಬೂಟಿನಲ್ಲಿ ಇಂಗ್ಲಿಷ್ ಸಿನಿಮಾ ನಾಯಕರುಗಳಿಗಿಂತಲೂ ಠೀಕುಠಾಕಾಗಿ ಕಾಣುತ್ತಿದ್ದರು. ಮುಸ್ಲಿಂ ನಿಗ್ರೋ ಹೆಂಗಸರನ್ನು ನಾನು ಮೊದಲ ಬಾರಿಗೆ ನೋಡುತ್ತಿದ್ದೆ. ಇಡೀ ದೇಹದಲ್ಲಿ ಕೆಂಪಾಗಿದ್ದುದು ಒರಟು ತುಟಿಗಳು ಮಾತ್ರ. ತುಟಿಗೆ ಏನೋ ದ್ರವ ಸವರಿದ್ದರೆಂದು ಕಾಣುತ್ತದೆ. ಜಿನುಗುತ್ತಿದ್ದ ರಸವನ್ನೇ ನಾಲಿಗೆಯ ತುದಿ ಸವರುತ್ತಿತ್ತು. ಮಾತುಮಾತಿನ ಮಧ್ಯ ನಾಲಿಗೆಯ ತುದಿ ತುಟಿ ಸವರುವಾಗ ಮಾತನ್ನೇ ನಿಲ್ಲಿಸಿಬಿಡೋರು. ಇಂತಹ ಒಬ್ಬಾಕೆ ಲಿಫ್ಟ್ ಒಳಗೆ ನನ್ನ ಪಕ್ಕದಲ್ಲಿ ನಿಂತಾದ ಎದುರು ಕನ್ನಡಿಯಲ್ಲಿ ನನ್ನನ್ನು ನಾನೇ ನೋಡಿಕೊಂಡರೆ ನಾನೊಂದು ಗುಬ್ಬಚ್ಚಿ ಮರಿಯಂತೆ ಕಾಣುತ್ತಿದ್ದೆ.

ಸೆಮಿನಾರಿನಲ್ಲಿ ಚರ್ಚೆಗಿಂತಲೂ ಪ್ರತಿನಿಧಿಗಳು ತಮ್ಮ ತಮ್ಮ ದೇಶಗಳಲ್ಲಿ ಮುಸಲ್ಮಾನರಿಗೆ ದೊರಕುತ್ತಿದ್ದ ಸಾಲ ಸೋಲದ ಸೌಲಭ್ಯಗಳ ಬಗ್ಗೆಯೇ ಹೇಳುತ್ತಿದ್ದರು. ಹೋಟಲುಗಳಿಗೆ, ರಸ್ತೆ ನಿರ್ಮಾಣಕ್ಕೆ, ಕೈಗಾರಿಕೆಗಳಿಗೆ, ರಫ್ತು ವ್ಯಾಪಾರಿಗಳಿಗೆ, ಪ್ರವಾಸಿಗರಿಗೆ ಸೌಲಭ್ಯವು ಯತೇಚ್ಚವಾಗಿದ್ದು, ಸಣ್ಣಪುಟ್ಟ ವ್ಯಾಪಾರಿಗಳಿಗೆ, ತೋಟಗಾರರಿಗೆ, ವಿದ್ಯಾಭ್ಯಾಸಕ್ಕೆ, ಕೂಲಿಕೆಲಸಗಾರರಿಗೆ ಹಂಚಲು ಬ್ಯಾಂಕಲ್ಲಿ ಹಣವೇ ಇರಲಿಲ್ಲ. ಬ್ಯಾಂಕುಗಳಿಗೆ ಇಷ್ಟವೂ ಇರಲಿಲ್ಲ. ಯಾವುದೂ ಬಡ್ಡಿಯಿಲ್ಲದ ವ್ಯವಹಾರವಲ್ಲವಾದ್ದರಿಂದ ಬಡ್ಡಿ ಮೊತ್ತಕ್ಕೇ ತುಂಬಾ ಜನ ಹೆದರುತ್ತಿದ್ದರು. ಗಿರವಿಯಿಡಲು ಕೂಡ ಒಡವೆ-ವಸ್ತುಗಳಿರಲಿಲ್ಲ. ಮನೆಮಠದ್ದಂತೂ ದೂರದ ಮಾತೇ. ವಿಶ್ವಬ್ಯಾಂಕೋ, ಏಷ್ಯನ್ ಬ್ಯಾಂಕೋ ಮುಂದೆ ಬಂದು ಬಂಗ್ಲಾದಲ್ಲಾದಂತೆ ಬಡವರಿಗೆ ಸಾಲ ಸೋಲ ಕೊಟ್ಟರೆ ಮಾತ್ರ ಸಣ್ಣಪುಟ್ಟ ಬದಲಾವಣೆ. ಎಲ್ಲರೂ ಮತ್ತೆ ಮತ್ತೆ ಇದನ್ನೇ ಹೇಳುತ್ತಿದ್ದರು.

ನನ್ನ ರೂಮಿನ ಪಕ್ಕದಲ್ಲಿದ್ದ ಕುವೈತ್‌ನ ಬರೂನಿ ಬ್ಯಾಂಕ್ ಮ್ಯಾನೇಜರ್ ಮಾತ್ರ ನನಗೆ ಚೆನ್ನಾಗಿಯೇ ಗಂಟುಬಿದ್ದ. ಬೆಂಗಳೂರಲ್ಲಿ, ಹೈದ್ರಾಬಾದಲ್ಲಿ, ಮದ್ರಾಸಿನಲ್ಲಿ ನೀನು ನಮ್ಮ ಬ್ಯಾಂಕ್ ಪರವಾಗಿ ಕೆಲಸ ಮಾಡು. ನೀನು ಯಾರಿಗೆ ಹೇಳಿದರೆ ಅಂತವರಿಗೆ ಎಷ್ಟು ಬೇಕಾದರೂ ಸಾಲ ಕೊಡ್ತೇವೆ. ಸ್ವಲ್ಪ ಬಡ್ಡಿ ಜಾಸ್ತಿ ಎನ್ನುವುದು ಬಿಟ್ಟರೆ, ಮರುಪಾವತಿಗೆ ತುಂಬಾ ಟೈಂ ಕೊಡ್ತೇವೆ. ಗಿರವಿಗೆ ಹೆಚ್ಚು ಆಸ್ತಿ ಕೇಳೋಲ್ಲ.

DOCUMENTATION ಕೂಡ ತುಂಬಾ ಕಡಿಮೆ. ನಿನ್ನ ಮೂಲಕ ಸಾಲ ಪಡೆಯುವವರ ಪರವಾಗಿ ನಿನಗೆ ಬ್ಯಾಂಕ್ ಕಡೆಯಿಂದ ಕಮೀಷನ್ ಕೊಡುತ್ತೇವೆ. ಕೆಲಸದಲ್ಲಿದ್ದುಕೊಂಡೇ ನೀನಿದನ್ನು ಮಾಡಬಹುದು. ಕಮೀಷನ್ ಸ್ವರೂಪ ಸೂಚಿಸುವಂತೆ ದುಬಾರಿ ಸೆಂಟ್ ಬಾಟಲ್, ಪೆನ್‌ಗಳು, ಮೊಬೈಲ್ ಫೋನ್, ಸಿಲ್ಕ್ ಬಟ್ಟೆ ಎಲ್ಲವನ್ನೂ ಹಂತ ಹಂತವಾಗಿ ನನಗೆ ಉಡುಗೊರೆ ಕೊಟ್ಟ.

ನಮ್ಮೆಲ್ಲರಿಗೂ ಕುತೂಹಲವಿದ್ದುದು ಗುರುವಾಗ ಬೆಳಿಗ್ಗೆ ಯಾಕೂಬರು ಮಾಡಬೇಕಾಗಿದ್ದ ಭಾಷಣದಲ್ಲಿ. ಯಾಕೂಬ್ ಬುಧವಾರ ಸಂಜೆಯೇ ಬಂದು ಬಿಟ್ಟರು. ಭಾಷಣವಿದ್ದುದು ಗುರುವಾರ. ಪುಸ್ತಕದ ರಕ್ಷಾಕವಚದಲ್ಲಿ, ಫೋಟೋಗಳಲ್ಲಿ ಕಾಣುವುದಕ್ಕಿಂತಲೂ ಸಾಧಾರಣವಾಗಿದ್ದರು. ಮಧ್ಯಮ ಎತ್ತರ, ತೋರುದೇಹ, ಸಾಕಷ್ಟು ಮುಂದೆ ಬಂದಿರುವ ಹೊಟ್ಟೆ, ಮುಕ್ಕಾಲು ಮೂರುವಾಸಿ ಬೋಳಾದ ತಲೆ, ಮುಖದ ಎಡಭಾಗದಲ್ಲಿ ಸಣ್ಣ ಪುಟ್ಟ ಬೊಕ್ಕೆಗಳು. ಹಾಕಿಕೊಂಡಿದ್ದ ನೀಲಿ ಬಣ್ಣದ ತುಂಬು ತೋಳಿನ ಷರ್ಟ್ ಮಂಡಿ ತನಕ ಬಂದಿದ್ದರೂ ಇನ್‌ಷರ್ಟ್ ಮಾಡಿರಲಿಲ್ಲ. ಕಾಲುಚೀಲ ಹಾಕಿಕೊಳ್ಳದೆ ಬೂಟು ಧರಿಸಿದ್ದರಿಂದ ನಡೆದಾಡುವಾಗ ಚೂರು ಚೂರು ಪಾದದ ಚರ್ಮದ ಭಾಗ ಕಾಣುವುದು.

ಯಾಕೂಬರದು ದುಡುದುಡು ನಡಿಗೆ. ತುಂಬುಮಾತು. ಸೆಮಿನಾರಿಗೆ ಬಂದಿದ್ದವರಲ್ಲಿ ಕೆಲವರು ಈಗಾಗಲೇ ಗೊತ್ತಿದ್ದರು. ಇನ್ನು ಕೆಲವರ ಸ್ನೇಹಿತರು ಗೊತ್ತಿದ್ದರು. ಬಂಗ್ಲಾ, ಬರ್ಮೀಸ್, ಹಿಂದಿ, ಇಂಗ್ಲಿಷ್, ಉರ್ದು, ದಖ್ಖನಿ, ಮೈಥಿಲಿ–ಹತ್ತು ಹಲವು ಭಾಷೆಗಳು ಗೊತ್ತಿದ್ದವು. ಭಾರತವಂತೂ ತೀರಾ ಅಂಗೈಯಲ್ಲೇ. ನಾನು ಬೆಂಗಳೂರಿನವನೆಂದು ಗೊತ್ತಾದ ತಕ್ಷಣ, ಹೈದ್ರಾಬಾದಿನ ಕೆಲವು ಸಾಲ ನೀಡುವ ಬ್ಯಾಂಕುಗಳ ಸಂಸ್ಥೆಗಳ ಬಗ್ಗೆ, ಬ್ಯಾಂಕುಗಳ ಸಂಘಟಕರ ಬಗ್ಗೆ ಕೇಳಿದರು. ಸಂಸ್ಥೆಗಳ ಬಗ್ಗೆಯಾಗಲೀ, ಸಂಘಟಕರ ಬಗ್ಗೆಯಾಗಲೀ ನನಗೆ ಏನೂ ಗೊತ್ತಿಲ್ಲದೆ ಇದ್ದರಿಂದ ನಾನೇ ಪೆಚ್ಚುಮುಖ ಮಾಡಿಕೊಂಡು ನಿಂತೆ. ತೆಲುಗಿಗೂ ಕನ್ನಡಕ್ಕೂ ವ್ಯತ್ಯಾಸ ಗೊತ್ತಿಲ್ಲದ ಯಾಕೂಬ್ ಭೋಜನಂ ಹೋಗಯಾ ಎಂದರು. ತಮಾಷೆಯ ಮಾತಿಗೂ ನಾನು ಪೆಚ್ಚಾಗಿಯೆ ನಿಂತಿದ್ದನ್ನು ಕಂಡು ನಿಮ್ಮ ಬೆಂಗಳೂರಲ್ಲಿ ದೊಡ್ಡ ಗಣಪತಿಯಿದೆಯಲ್ಲ–ಬಂಡೆಮೇಲೆ–ಅದಕ್ಕಿಂತಲೂ ದೊಡ್ಡದಾದ ಮಾರುತಿ ಇನ್ನೂ ದೊಡ್ಡ ಬಂಡೆ ಮೇಲೆ ನಮ್ಮ ನಾರಾಯಣ ಗಂಜ್‌ನಲ್ಲಿದೆಯೆಂದು ಹೇಳುತ್ತಾ ಆತ್ಮೀಯ ವಾತಾವರಣ ಹಬ್ಬಿಸಲು ಪ್ರಯತ್ನಿಸಿದರು.

ಒಟ್ಟಿನಲ್ಲಿ ಯಾವಾಗಲೂ ಯಾಕೂಬರ ಸುತ್ತಮುತ್ತ ಸಣ್ಣ ಗುಂಪು. ಪ್ರತಿನಿಧಿಗಳು ಮುಗಿಬಿದ್ದು ತಮ್ಮ ತಮ್ಮ ದೇಶಗಳ ಬೇಡಿಕೆಗಳ ವಿವರಗಳನ್ನು ಮನದಟ್ಟು ಮಾಡಿಕೊಡುತ್ತಿದ್ದರು. ಫಿಲ್‌ಡೆಲ್ಫಿಯಾಗೆ ಇದು ತಮ್ಮದು ಮೂರನೆದೋ, ನಾಲ್ಕನೆದೋ ಭೇಟಿಯೆಂದು, ದಿನದುದ್ದಕ್ಕೂ ಇರುವ ಎಳೆಬಿಸಿಲು ವಾತಾವರಣ, ಕ್ಯಾಂಪಸ್

ತುಂಬಾ ಇರುವ ಆರ್ಕಿಡ್ ಹೂಗಳ ಮರ ತಮಗೆ ಇಲ್ಲಿಗೆ ಬರಲು ಮುಖ್ಯ ಆಕರ್ಷಣೆಯೆಂದರು. ಸೆಮಿನಾರ್ ಸಂಘಟಕರಿಗೆ ಯಾಕೂಬರ ಬಗ್ಗೆ ವಿಶೇಷ ಗೌರವಗಳಿದ್ದುದು ಯಾಕೂಬರ ಪಕ್ಕ ನಿಂತವರ ಮುಖದ ಗೌರವ, ಭಕ್ತಿಯ ಭಾವದಲ್ಲಿ. ಯಾಕೂಬರಾಡಿದ ಪ್ರತಿ ಮಾತನ್ನು ಏಕಾಗ್ರತೆಯಿಂದ ಕೇಳಿಸಿಕೊಳ್ಳುತ್ತಿದ್ದ ತವಕದಲ್ಲಿ ಗೊತ್ತಾಗುತ್ತಿತ್ತು.

ಯಾಕೂಬರು ನಮ್ಮನ್ನುದ್ದೇಶಿಸಿ ಮಾತನಾಡುವುದಕ್ಕೆ ಮುಂಚೆ, ಮುಖದಿಂದ ಕನ್ನಡಕ ತೆಗೆದು ಮಡಿಸಿ ಕೇಸಿನಲ್ಲಿ ಹಾಕಿ ಜೇಬಿನಲ್ಲಿಟ್ಟುಕೊಂಡರು. ಜೇಬಿನಲ್ಲಿದ್ದ ಕಾಗದ ಪತ್ರಗಳನ್ನೆಲ್ಲ ತೆಗೆದು ಮೈಕ್ ಪಕ್ಕ ಪೋಡಿಯಂ ಮೇಲಿಟ್ಟರು. ಪ್ಯಾಂಟಿನ ಎರಡು ಜೇಬಿನೊಳಗೂ ಕೈ ಇಳಿಬಿಟ್ಟು ಜೇಬಿನೊಳಗೇ ಕೈಗಳನ್ನು ಅಲ್ಲಾಡಿಸಿದರು. ಸೆಮಿನಾರ್ ಸಂಘಟಕರೆಲ್ಲ ಸಾಲಾಗಿ ಮೊದಲನೆ ಸಾಲಿನಲ್ಲಿ ಸೂಟುಧಾರಿಗಳಾಗಿ ಗಂಭೀರವದನರಾಗಿ ಕೂತಿದ್ದರು. ಭಾಷಣದ ಧ್ವನಿ ಮುದ್ರಣಕ್ಕೆ ಕೂಡ ವ್ಯವಸ್ಥೆ ಮಾಡಲಾಗಿತ್ತು. ಯಾಕೂಬರಿಗೆ ಬೇಕಾಗಬಹುದೆಂದು ಪವರ್ ಪಾಯಿಂಟ್ ಪ್ರಸೆಂಟೇಶನ್‌ಗಾಗಿ ಪರದೆ, ಪ್ರೊಜೆಕ್ಟರ್, ರಿಮೋಟ್ ಎಲ್ಲವನ್ನೂ ಜೋಡಿಸಿಡಲಾಗಿತ್ತು. ಯಾಕೂಬ್ ಸಣ್ಣದಾಗಿ ಲೊಚಗುಟ್ಟುತ್ತಾ ಎಲ್ಲವನ್ನೂ ಸ್ವಿಚ್ ಆಫ್ ಮಾಡಿಬಿಟ್ಟರು. ಬೆಳಿಗ್ಗೆ ಬ್ರೇಕ್‌ಫಾಸ್ಟ್‌ನಲ್ಲಿ ತುಂಬಾ ಚೆನ್ನಾಗಿದ್ದ ಐಟಂ ಎಂದರೆ ಗಟ್ಟಿಯಾದ ಜೇನುತುಪ್ಪವಲ್ಲವೇ ಎಂದು ಲಹರಿಯಲ್ಲಿ ಕೇಳುತ್ತಾ ಭಾಷಣ ಪ್ರಾರಂಭಿಸಿದರು.

ಎಷ್ಟು ಬೇಗ ಸಿಟ್ಟು ಬಂದುಬಿಟ್ಟಿತು ಯಾಕೂಬರಿಗೆ. ಧ್ವನಿ ಕರ್ಕಶವಾಗಿ ಬಿಟ್ಟಿತು, ಒಂದೇ ಕ್ಷಣದಲ್ಲಿ. ಎರಡೂ ಕೈಗಳಲ್ಲೂ ನಮಸ್ತೆ ಮಾಡುತ್ತಾ, ನಿಮಗೆ ದೊಡ್ಡ ನಮಸ್ಕಾರ ಎಂದು ಸೂಚಿಸಲು ಜೋಡಿಸಿದ ಕೈಗಳನ್ನು ಸಭಾಂಗಣದ ಎಲ್ಲಕಡೆ ನೀಡುತ್ತಾ ನೂರು ನಮಸ್ಕಾರ, ಸಾವಿರ ನಮಸ್ಕಾರ ಹೇಳತೀನಿ ನಿಮಗೆ, ನಮ್ಮ ಹೆಂಗಸರನ್ನು, ಕೂಲಿನಾಲಿಯವರನ್ನು, ಬಡವರನ್ನು, ಸಣ್ಣ ಪುಟ್ಟ ವ್ಯಾಪಾರಿಗಳನ್ನು ದಯವಿಟ್ಟು ದಯವಿಟ್ಟು ಒಳ್ಳೆಯವರು, ನಿಯತ್ತಿನವರು, ನಿಸ್ಪೃಹರೆಂದೆಲ್ಲ ಪ್ರೊಜೆಕ್ಟ್ ಮಾಡಬೇಡಿ. ಪಡೆದ ಸಾಲ ಹಿಂತಿರುಗಿಸುವುದೇನು ದೊಡ್ಡ ಮಾತಲ್ಲ. ಹಾಗೂ ಇಲ್ಲ ನಮ್ಮ ಬಂಗ್ಲಾದಲ್ಲಿ. ಸಾಲ ಪಡೆಯುವುದಕ್ಕೆ ಸುಳ್ಳು ದಾಖಲೆ ಸೃಷ್ಟಿಸುತ್ತಾರೆ. ಒಬ್ಬರೇ ಎರಡು ಬ್ಯಾಂಕ್‌ಗಳಲ್ಲಿ, ಮೂರು ಬ್ಯಾಂಕುಗಳಲ್ಲಿ ಒಂದೇ ಬಾಬ್ತಿಗೆ ಸಾಲ ತೆಗೆದುಕೊಂಡಿದಾರೆ. ವ್ಯಾಪಾರದಲ್ಲಿ ಲಾಭವಿದ್ದರೂ ಸಾಲ ತೀರಿಸಬೇಕಾಗುತ್ತದೆಂದು ನಷ್ಟದ ಲೆಕ್ಕ ಬರೆಸುತ್ತಾರೆ. ಕುಟುಂಬದಲ್ಲಿ ಒಬ್ಬರಿಗೆ ಮಾತ್ರ ಸಾಲವೆಂದರೆ ಇಬ್ಬರು ಮೂವರು ತಾಯಿ–ತಂದೆಗಳ ಹೆಸರು ಬದಲಾಯಿಸಿ, ಮನೆ ವಿಳಾಸ ಬದಲಾಯಿಸಿ ಸಾಲ ಹೊಡೆದುಬಿಡುತ್ತಾರೆ. ಕೆಲವು ಗಯ್ಯಾಳಿ ಹೆಂಗಸರು ಚಾಲೂಕಾಗಿ ವ್ಯಾಪಾರದಲ್ಲಿ ಬೆಳೆದು ಗಂಡಂದಿರ ಆತ್ಮವಿಶ್ವಾಸವನ್ನೇ ನಾಶ ಮಾಡುತ್ತಾರೆ. ವ್ಯಾಪಾರಕ್ಕೆಂದು ಕೊಟ್ಟ ದುಡ್ಡನ್ನು ಮಕ್ಕಳ ಇಂಗ್ಲಿಷ್ ಕಾನ್ವೆಂಟ್‌ಗೆ ತುಂಬುತ್ತಾರೆ. ನಿಜ, ಇದೆಲ್ಲದರ ಜೊತೆಗೆ

ಸಾಲವನ್ನು ತೀರಿಸಿದವರಿದ್ದಾರೆ. ಹಾಗೆಂದ ಮಾತ್ರಕ್ಕೇ ನಾವು ಪ್ರಾಮಾಣಿಕರು, ನಿಸ್ಪೃಹರು, ದಗಲ್‌ಬಾಜಿಗಳಲ್ಲ. ಅದಕ್ಕೆ ಇನ್ನೊಂದಿಷ್ಟು ಸಾಲ ಕೊಡಿಯೆಂದು ಹಾಹಾಕಾರ ಹುಟ್ಟಿಸುವುದು ತಪ್ಪು. ನಾವು ಹೇಗಿದೀವೋ ಹಾಗೆ ಕಾಣಿಸಕೊಬೇಕು. ಹಾಗೆ ಇನ್ನೊಬ್ಬರಿಗೆ ಒಪ್ಪಿಗೆಯಾಗಿ ಗೌರವ ಪಡೆಯಬೇಕು, ಸಮಾನರು ಎಂದೆನಿಸಿಕೊಳ್ಳಬೇಕು. ಸಾಲ ತಗೊಂಡಾಕ್ಷಣಕ್ಕೆ ಹೀಗೇ ಇರಬೇಕು, ಹೀಗೆ ಉಸಿರಾಡಬೇಕು, ಇಷ್ಟೇ ನೀರು ಕುಡಿಬೇಕು ಎಂದು ನಿರೀಕ್ಷಿಸುವುದು ಕೂಡ ದುಷ್ಟತನ. ಮೊದಲ ಸಾಲಿನಲ್ಲಿ ಶಿಸ್ತಾಗಿ ಕುಳಿತಿದ್ದ ಸಂಘಟಕರ ಕಡೆ ದೃಷ್ಟಿ ಕೇಂದ್ರೀಕರಿಸಿದರು.

ಇಲ್ಲಿ ಬಂದಿರುವ ಪ್ರತಿನಿಧಿಗಳು, ಧುರೀಣರೆಲ್ಲ ನಿಮಗೇನಾದರೂ ಅವರವರ ದೇಶದ ಬಗ್ಗೆ, ಜನಗಳ ಬಗ್ಗೆ ಆ ರೀತಿಯ ಭಾವನೆ ಕೊಟ್ಟಿದ್ದರೆ, ದಯವಿಟ್ಟು, ದಯವಿಟ್ಟು ಕ್ಷಮಿಸಿ. IT IS NOT TRUE. IT IS NOT REQUIRED ALSO KINDLY, KINDLY PARDON US. ಭಾವನೆ, ಮಾತು, ಹಾವಭಾವ–ಎಲ್ಲವೂ ನಿಧಾನಗತಿಗೆ ಬಂದು ಪ್ರಶಾಂತವಾಗುತ್ತಾ ಹೋಯಿತು.

ಸಮಾಧಾನದ ಧ್ವನಿಯಲ್ಲಿ, ಮೆಲುಮಾತಿನಲ್ಲಿ ಮುಂದುವರೆಸಿದರು. ಮತ್ತೊಂದೇ ಮಾತು. ಎಲ್ಲಕ್ಕಿಂತ ಮುಖ್ಯವಾದ ಮಾತು. ಯಾರನ್ನಾದರೂ ಸರಿಯೇ, ಏನನ್ನಾದರೂ ಸರಿಯೇ ಬೇಕು ಎಂದು ಕೇಳುವಾಗ ಪರ್ಸೆಂಟೇಜ್ ಲೆಕ್ಕದಲ್ಲಿ, ಕೋಟಾದ ಲೆಕ್ಕದಲ್ಲಿ ಮಾತ್ರ ಕೇಳಬೇಡಿ. ಸಾಲದ ಒಂದರಷ್ಟು ಇಸ್ಲಾಂ ಬಂಧುಗಳಿಗೆ–ಇಂತಹ ಲೆಕ್ಕಾಚಾರವೇ ಆಭಾಸ. ನಮಗೆ ಬೇಕಾಗಿರುವುದು ಇಷ್ಟು ಬೇಕೇಬೇಕು, ಖಂಡಿತಾ ಬೇಕು ಎಂದು ಕರಾರುವಾಕ್ಕಾಗಿ ಕೇಳಿ. ಹೀಗೆ ಧಾರ್ಷ್ಟ್ಯದಿಂದ ಕೇಳೋಕೆ ನಮಗೆ ಹಕ್ಕೇಕಿದೆ ಎನ್ನುವುದಕ್ಕೆ ಸಾವಿರಾರು ಕಾರಣಗಳಿವೆ. ಯಾವ ಕಾರಣವನ್ನೂ ಇಲ್ಲಿ ಮತ್ತೆ ಪ್ರಸ್ತಾಪಿಸಿ ಯಾರನ್ನೂ ನೋಯಿಸುವುದು ಬೇಡ. ಮುಂದಾದರೂ ನಮ್ಮ ಬೇಡಿಕೆಗಳು ಹೇಗಿರಬೇಕೆಂದು ಇಲ್ಲಿಂದ ಹೋದ ಮೇಲೆ, ನಿಮ್ಮ ನಿಮ್ಮ ಸರ್ಕಾರಗಳಿಗೆ, ಬ್ಯಾಂಕುಗಳಿಗೆ ಮನದಟ್ಟು ಮಾಡಿಕೊಡಿ.

ಟೀ ವಿರಾಮದಲ್ಲಿ ಸೆಮಿನಾರ್‌ಗೆ ಬಂದಿದ್ದ ಪ್ರತಿನಿಧಿಗಳು ಸಂಘಟಕರೆಲ್ಲ ಯಾಕೂಬರನ್ನು ಮೆಚ್ಚುಗೆಯಲ್ಲಿ, ಕೃತಜ್ಞತೆಯಲ್ಲಿ ಮುತ್ತಿಕೊಂಡುಬಿಟ್ಟರು. ಯಾಕೂಬರ ವಿಚಾರಕ್ಕೆ ತಮ್ಮ ಸಮ್ಮತಿಯಿದೆಯೆಂದು, ತಾವೂ ಹಾಗೇ ಯೋಚಿಸುತ್ತಿದ್ದೇವೆಂದು ತೋಡಿಕೊಳ್ಳುವ ತವಕ. ಎಲ್ಲರನ್ನೂ ಮಾತಾಡಿಸುತ್ತಾ, ಎಲ್ಲರ ಮೆಚ್ಚುಗೆಯನ್ನು ಸ್ವೀಕರಿಸುತ್ತಾ ಯಾಕೂಬರಿಗೆ ಅರ್ಧ ಕಪ್ ಟೀ ಕುಡಿದು ಒಂದೇ ಒಂದು ಬಿಸ್ಕಟ್ ತಿನ್ನುವುದಕ್ಕೇ ಎಷ್ಟೋ ಹೊತ್ತು ಬೇಕಾಯಿತು. ಹೇಳಬೇಕಾದ್ದನ್ನೆಲ್ಲ ಹೇಳಿಬಿಟ್ಟಂತಿದ್ದ ಯಾಕೂಬರಲ್ಲಿ ಇನ್ನೂ ಏನೋ ಕಸಿವಿಸಿ, ಧಾವಂತ. ಎಲ್ಲರ ನಡುವೆಯೂ ಇರುತ್ತಲೇ ಇದ್ದಕ್ಕಿದ್ದಂತೆ ಒಂದು ಕ್ಷಣ ಮೌನವಾಗಿ ಬಿಡುತ್ತಿದ್ದರು.

❖

'ನಮ್ಮ ಸೆಮಿನಾರ್, ಯಾಕೂಬರ ಕಳಕಳಿ, ಒಳನೋಟ ಎಲ್ಲವೂ ಹಿನ್ನೆಲೆಗೆ ಸರಿಯುವಂತೆ ಮುಸ್ಸಂಜೆಗೆ ಮುನ್ನವೇ ಏಳು ಘೂಟು ಎತ್ತರವಿರುವ ಆಸಾಮಿಯೊಬ್ಬರು ನಮ್ಮ ಕ್ಯಾಂಪಸ್ಸಿಗೆ ಬಂದರು. ಬಂದವರೇ ಯಾಕೂಬರ ಜೊತೆಯಲ್ಲಿ ಮಾತೇಮಾತು. ಮರಗಳ ಕೆಳಗೆ, ಹಾಸ್ಟೇಲಿನ ಕಂಪೌಂಡಿನ ಕಲ್ಲುಬೆಂಚಿನ ಮೇಲೆ, ಡೈನಿಂಗ್‌ಹಾಲ್‌ನಲ್ಲಿ. ಅಷ್ಟೊಂದು ಎತ್ತರದವರು ಕತ್ತನ್ನು ಬಗ್ಗಿಸಿಕೊಂಡು ಮುಖವನ್ನು ಯಾಕೂಬರ ಕಿವಿಯ ಹತ್ತಿರ ತಂದು ಮಾತಾಡುತ್ತಿದ್ದರು. ಮಾತಿನಲ್ಲಿದ್ದ ವಿಶ್ಲೇಷಣೆ, ಹರಿತ, ಹಾವಭಾವಗಳಲ್ಲಿ ಸೂಚಿತವಾಗುತ್ತಿತ್ತು. ಎರಡೂ ಉದ್ದನೆಯ ಕೈಗಳನ್ನು ಒಟ್ಟಿಗೇ ಎತ್ತಿ ಆಕಾಶದ ಕಡೆಗೆ ತೋರಿಸಿಬಿಡುತ್ತಿದ್ದರು. ಬಲಗೈ ಎದೆ ಹತ್ತಿರ ಪದೇ ಪದೇ ಹೋಗುತ್ತಿತ್ತು. ನಂತರ ತಿಳಿದು ಬಂದಿದ್ದೆಂದರೆ ಹಾಗೆ ಬಂದವರು ಕಳೆದ ತಿಂಗಳು ತಾನೇ ಅಮೇರಿಕಾದ ವಾಯು ವಿಭಾಗದ ಮುಖ್ಯ ರಕ್ಷಣಾಧಿಕಾರಿಯಾಗಿ ನಿವೃತ್ತರಾಗಿದ್ದ ಮಾರ್ಷಲ್ ಕಾನೊಲಿ. ನಿವೃತ್ತಿಗೆ ಕೆಲವು ತಿಂಗಳುಗಳು ಮುಂಚೆ ಮತ್ತು ನಿವೃತ್ತಿಯ ನಂತರ ಪತ್ರಿಕೆಗಳಲ್ಲಿ, ಚಾನಲ್‌ಗಳಲ್ಲಿ ಬರೆದು ಬರೆದು, ಸಂದರ್ಶನ ನೀಡಿ ನೀಡಿ ಯಾವುದೇ ವಿಮಾನ ನಿಲ್ದಾಣದಲ್ಲೂ ಈಗಿರುವಷ್ಟು ಸುರಕ್ಷಾ ಭದ್ರತಾ ಕ್ರಮಗಳು ಅಗತ್ಯವಿಲ್ಲವೆಂದು, ಈ ಕ್ರಮಗಳು ಭದ್ರತೆಯ ಅಗತ್ಯಕ್ಕಿಂತ ಹೆಚ್ಚಾಗಿ ಮಾನಸಿಕ ಗೀಳಾಗಿಬಿಟ್ಟಿದೆಯೆಂದು, ಈಗಿರುವ ಕ್ರಮಗಳಲ್ಲಿ ಶೇಕಡಾ ಹತ್ತರಷ್ಟನ್ನು ಅನುಸರಿಸಿದರೂ ಭದ್ರತೆಗೆ ಯಾವ ತೊಂದರೆಯೂ ಇರುವುದಿಲ್ಲವೆಂದು ಪ್ರಚಾರ ಚಳುವಳಿಯನ್ನೇ ಒಡನಾಡಿಗಳೊಡನೆ ನಡೆಸುತ್ತಿದ್ದರು. ಹೆಂಗಸರ ಹೇರ್‌ಪಿನ್ ಕೂಡ ಸಂಶಯಾಸ್ಪದ ಲೋಹದ ಸಾಮಾನುಗಳ ಪಟ್ಟಿಯಲ್ಲಿರುವುದು, ದ್ರವರೂಪದ ಟೂತ್‌ಪೇಸ್ಟ್, ಬಾಯಿ ಶುದ್ಧಿ ಮಾಡುವ ಸಿರಪ್ ಕೂಡ ಅಪಾಯಕಾರಿ ವಸ್ತುಗಳ ಪಟ್ಟಿಯಲ್ಲಿರುವುದು ಹಾಸ್ಯಾಸ್ಪದವೆಂದು ಹೇಳಿ ಭಾರತದ ಮಗುವೊಂದು ತಾಯಿತ, ಕೈಗಡಗ, ಬೆಳ್ಳಿ ಉಡದಾರ ಧರಿಸಿ ನೇವಾರ್ಕ್‌ನಲ್ಲಿ ಬಂದಿಳಿದಾಗ ಮಗುವಿನ ಮೇಲಿರುವ ಲೋಹದ ಪ್ರಮಾಣ ಹೆಚ್ಚಾಗಿದೆಯೆಂದು ಸೆಕ್ಯೂರಿಟಿಯವರು ಮಗುವನ್ನು ಮೂರುವರೆ ಗಂಟೆ ವಿಚಾರಣೆಗೆ ಒಳಪಡಿಸಿದ್ದನ್ನು ಕಾನೊಲಿ ವಿವರವಾಗಿ ವಾಲ್‌ಸ್ಟ್ರೀಟ್ ಪತ್ರಿಕೆಯಲ್ಲಿ ನೀಡಿದ ಸಂದರ್ಶನದಲ್ಲಿ ಉಲ್ಲೇಖಿಸಿದ್ದರೆಂದು ಹಾಸ್ಟೇಲಿನ ವಾರ್ಡನ್ ನಮ್ಮೆಲ್ಲರಿಗೆ ವಿವರಿಸಿದರು. ಮಾರ್ಷಲ್ ಕಾನೊಲಿಯವರು ಪ್ರತಿಯೊಬ್ಬ ಪ್ರಯಾಣಿಕನು ಒಂದು ಪ್ರಮಾಣಪತ್ರ ಸಲ್ಲಿಸಿದರೆ ಸಾಕೆಂದು, ಪ್ರಮಾಣಪತ್ರವನ್ನೇ ನಂಬಬೇಕೆಂದು, ಜನರನ್ನು ನಂಬುವುದೇ ಸುಲಭವೆಂದು, ಸಂಶಯಪಡುವುದೇ ಕಷ್ಟವೆಂದು ಪದೇ ಪದೇ ಹೇಳುತ್ತಿದ್ದರಂತೆ, ಬರೆಯುತ್ತಿದ್ದರಂತೆ. ಇನ್ನೊಬ್ಬರನ್ನು ನಂಬದಿರುವುದರಿಂದ ತೊಂದರೆಯಾಗುವುದು ನಮಗೇ, ನಮ್ಮ ಆತ್ಮವಿಶ್ವಾಸಕ್ಕೇ ಎಂಬುದು ಕಾನೂಲಿಯವರ ವಿಚಾರವಾಗಿದ್ದು, ಜನರ ನಡುವೆ ವಿಚಾರ ಹರಡಲು ಎಲ್ಲ ಸಭೆ, ಸಮಾರಂಭಗಳನ್ನು, ಸ್ನೇಹಿತರನ್ನು ಬಳಸಿಕೊಳ್ಳುತ್ತಿದ್ದರು. ಯಾಕೂಬರನ್ನು ನೋಡಲು ಬಂದಿರುವುದು ಕೂಡ ಹೀಗೆಯೇ ಎಂದು ಎಲ್ಲರೂ ಮಾತಾಡಿಕೊಳ್ಳುತ್ತಿದ್ದರು.

ಯಾಕೂಬರು ಸೇರಿದಂತೆ ಭಾರತದ, ಏಷ್ಯಾದ ಪ್ರತಿನಿಧಿಗಳೆಲ್ಲ ನೇವಾರ್ಕ್ ವಿಮಾನ ನಿಲ್ದಾಣದಿಂದ ಶುಕ್ರವಾರ ಸಂಜೆ ನಾಲ್ಕೂವರೆಗೆ ಹೊರಡುವ ಏರ್-ಇಂಡಿಯಾ ವಿಮಾನದಲ್ಲಿ ಹೊರಟಿದ್ದೆವು. ಯಾಕೂಬರು ಮುಂಬೈಯಿಂದ ಜಕಾರ್ತಾ, ಜಪಾನ್‌ಗೆ ವಿಚಾರ ಸಂಕಿರಣಗಳಿಗೆ ಹೋಗಬೇಕಾಗಿತ್ತು. ಬೋರ್ಡಿಂಗ್ ಪಾಸ್ ಪಡೆಯುವಾಗ ನನ್ನ ಪಕ್ಕದ ಪ್ರಯಾಣಿಕ ಯಾಕೂಬ್ ಎನ್ನುವ ಹೆಸರಿನವರೆಂದು ತಿಳಿದಾಗ ನನಗೆ ತುಂಬಾ ಸಂತೋಷವಾಯಿತು. ಇನ್ನೊಂದಿಷ್ಟು ವಿಚಾರ ವಿನಿಮಯ ಮಾಡಿಕೊಳ್ಳಬಹುದು, ಯಾಕೂಬರಂತಹ ಪ್ರಸಿದ್ಧರ ನೆನಪಿನಲ್ಲಿ ಸದಾ ಉಳಿಯುವಂತೆ ಪರಿಚಯ ಮಾಡಿಕೊಳ್ಳಬೇಕೆಂಬ ಆಸೆ ಜಾಗೃತವಾಯಿತು.

ಮೂರೂವರೆಯಾಯಿತು, ಮೂರು ಮುಕ್ಕಾಲಾಯಿತು, ನಾಲ್ಕರ ಹತ್ತಿರಕ್ಕೇ ಬಂತು. ಯಾಕೂಬರು ಬರಲೇ ಇಲ್ಲ. ನಾನು ಭಾರತ ತಂಡದ ಸದಸ್ಯರೆಲ್ಲ ಸೆಕ್ಯೂರಿಟಿ ಗೇಟ್ ಹತ್ತಿರವೇ ಇದ್ದು ತಪಾಸಣೆಗೆ ಒಬ್ಬರಾದ ಮೇಲೆ ಒಬ್ಬರು ಒಪ್ಪಿಸಿಕೊಳ್ಳುತ್ತಿದ್ದೆವು. ಗೇಟ್ ಸುತ್ತಲೇ ಕೆಲವರು ಠಳಾಯಿಸುತ್ತಿದ್ದರು. ಕೆಲವು ಮುಖಗಳು ಭಾರತೀಯ ಮುಖಗಳಾಗಿದ್ದು, ಇನ್ನು ಕೆಲವರದಂತು ಕನ್ನಡದ ಮುಖಗಳಂತೆಯೇ ಕಂಡವು. ಸ್ಥಳೀಯರು ಕೂಡ ಇವರ ಗುಂಪಿನಲ್ಲಿದ್ದರು. ಕೆಲವರು ಮುಖದಲ್ಲಿ ಹಿಡಿದಿಟ್ಟುಕೊಂಡಿರುವ ನಗೆ, ಮತ್ತೆ ಕೆಲವರ ಮುಖದಲ್ಲಿ ಭಯ, ತಳಮಳ.

ದುಡುದುಡು ಯಾಕೂಬ್ ಧಡಧಡವೆಂದು ದಾಪುಗಾಲು ಹಾಕುತ್ತಾ ಕಾನೊಲಿಯವರೊಡನೆ ಬಂದೇಬಿಟ್ಟರು. ತಂಡದಲ್ಲಿ ಹತ್ತು-ಹನ್ನೆರಡು ಜನ. ಯಾಕೂಬ್-ಕಾನೊಲಿಯವರ ಜೊತೆ ಹೆಜ್ಜೆ ಹಾಕುತ್ತಲೇ ಸರಸರನೆ ಕೆಲ ಪತ್ರಗಳನ್ನು ಹಂಚಿದರು. ಕೆಲವರು ಆತುರಾತುರವಾಗಿ ಪೋಸ್ಟರ್ ಹಚ್ಚಿದರು. ಈ ತಂಡಕ್ಕಿಂತ ಮುಂಚೆ ಬಂದು ಸೆಕ್ಯೂರಿಟಿ ಗೇಟ್ ಹತ್ತಿರ ಠಳಾಯಿಸುತ್ತಿದ್ದವರೆಲ್ಲ ಯಾಕೂಬರನ್ನು, ಕಾನೊಲಿಯವರನ್ನು ಸುತ್ತುವರೆದರು. ಭಾರತೀಯ ಮುಖದ ಯುವಕನೊಬ್ಬ ಯಾಕೂಬರ ಮೊಬೈಲ್ ತೆಗೆದುಕೊಂಡು ಏನೇನನ್ನೋ ಪರೀಕ್ಷಿಸುವವನಂತೆ ಮೊಬೈಲ್ ಸ್ಕ್ರೀನ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದ ಚಿತ್ರಗಳನ್ನು ಪರಿಶೀಲಿಸುತ್ತಾ ತನಗೆ ತಾನೇ ಸರಿ ಎಂದುಕೊಳ್ಳುತ್ತಾ ಯಾಕೂಬರಿಗೆ ಮೊಬೈಲ್ ವಾಪಸ್ ಕೊಟ್ಟನು. ಆ ಹುಡುಗನ ಹತ್ತಿರ ಮಾರ್ಷಲ್ ಕಾಲೊನಿಯವರು ತುಂಬಾ ಮಾತನಾಡುತ್ತಿರುವಂತೆ ಕಂಡಿತು.

ಯಾಕೂಬ್ ತಮ್ಮ ಕೋಟಿನ ಜೇಬಿನಿಂದ ಪಾಸ್‌ಪೋರ್ಟ್‌ನ್ನು, ಬೋರ್ಡಿಂಗ್ ಪಾಸ್‌ನ್ನು ಕೊಟ್ಟು ಜೊತೆಗೆ ಒಂದು ಉದ್ದನೆಯ ಕಾಗದವನ್ನು ಕೂಡ ನೀಡಿದರು. ಸೆಕ್ಯೂರಿಟಿಯವನೊಬ್ಬ ಅದನ್ನೆಲ್ಲ ಎಡಗೈಲಿ ತೆಗೆದುಕೊಂಡು ಪಕ್ಕದ ಟೇಬಲ್ ಮೇಲೆ ಇಟ್ಟು ಮೆಟಲ್ ಡಿಟೆಕ್ಟರನ್ನು ಯಾಕೂಬರ ದೇಹದ ಬಳಿ ತಂದಾಗ ಹಿಂದಕ್ಕೆ ಜಿಗಿದರು. ನನ್ನನ್ನು ಚೆಕ್ ಮಾಡಬೇಡಿ. ನನ್ನ ಹತ್ತಿರ ಅಪಾಯಕಾರಿಯಾದ್ದು

ಏನೂ ಇಲ್ಲ. ಹಾಗಂತ ಪ್ರಮಾಣ ಮಾಡಿ ಪತ್ರ ಬರೆದುಕೊಟ್ಟಿದ್ದೇನೆ. ನನ್ನನ್ನು ನಂಬಿ, ನಿಮ್ಮನ್ನೂ ನಂಬಿ ಎಂದು ಕೊಸರಾಡಲು ಪ್ರಾರಂಭಿಸಿದರು. ಕೊಸರಾಟ ಹೆಚ್ಚಿದಷ್ಟೂ ಯಾಕೂಬರ ಸುತ್ತಮುತ್ತ ನಾಲ್ಕಾರು ಸೆಕ್ಯೂರಿಟಿಯವರು ಸೇರಿಕೊಂಡು ಕಿರುಚಾಡುವುದು, ಗಟ್ಟಿಯಾಗಿ ಹಿಡಿದುಕೊಳ್ಳುವುದು ಹೆಚ್ಚಾಯಿತು. ಕಾನೊಲಿ ಮತ್ತು ಇತರರು ಘೋಷಣೆಗಳನ್ನು ಕೂಗುತ್ತಿದ್ದರು. ನಂಬಿಕೆ ಮುಖ್ಯ, ಭದ್ರತೆಯಲ್ಲ. ಭದ್ರತೆಯಿರುವುದು ಮೆಟಲ್ ಡಿಟಕ್ಟರನಲ್ಲಲ್ಲ, ಮನುಷ್ಯನ ಮನಸ್ಸಿನಲ್ಲಿ.

ಸೆಕ್ಯೂರಿಟಿಯವರಿಂದ ನುಣುಚಿಕೊಂಡ ಯಾಕೂಬ್ ನೆಲದ ಮೇಲೆ ಮಲಗೇಬಿಟ್ಟರು. ಮಲಗಿದ ಯಾಕೂಬ್ ದೇಹದ ಮೇಲೆ ಮೆಟಲ್ ಡಿಟೆಕ್ಟರ್ ಹರಿಸಿ ಚೆಕ್ ಮಾಡಿದರು. ಕಾಲಿನಿಂದ ಬೂಟುಗಳನ್ನು, ಜೇಬಿನಿಂದ ಪರ್ಸ್‌ನ್ನು ತೆಗೆಯಲು ಬಹು ಪ್ರಯಾಸಪಡಬೇಕಾಯಿತು. ಮತ್ತೆ ಇದನ್ನೆಲ್ಲ ಜೇಬಿನೊಳಗೆ ಇಟ್ಟು ಯಾಕೂಬರನ್ನು ಏಳಿಸಲು ಹೊರಟರೆ, ಏಳದೆ ಮುಷ್ಕರ ಮಾಡುತ್ತಿದ್ದರು. ಕೊನೆಗೂ ಯಾಕೂಬರನ್ನು ಎಬ್ಬಿಸಿ, ನಿಲ್ಲಿಸಿ ಅವರ ಪದಾರ್ಥಗಳನ್ನೆಲ್ಲ ಅವರ ಕೈಗೇ ಕೊಟ್ಟು ಸೆಕ್ಯೂರಿಟಿ ಗೇಟ್‌ನ ಆ ಕಡೆ ತಲುಪಿಸಲು ಸೆಕ್ಯೂರಿಟಿಯವರಿಗೆ ಇನ್ನಿಲ್ಲದಷ್ಟು ಪ್ರಯಾಸವಾಯಿತು. ತಮ್ಮತಮ್ಮಲ್ಲೇ ವ್ಯಗ್ರರಾಗಿ ಮಾತಾಡಿಕೊಳ್ಳುತ್ತಾ ಯಾಕೂಬರ ಕಡೆ ವಿಚಿತ್ರವಾಗಿ ಕೈ ತೋರಿಸುತ್ತಿದ್ದರು. ಗೇಟ್‌ನ ಈ ಕಡೆ ಕಾನೊಲಿ ಮತ್ತು ಸಂಗಡಿಗರು ಬಲಗೈ ಹೆಬ್ಬೆರಳನ್ನು ಮತ್ತೆ ಮತ್ತೆ ಮೇಲಕ್ಕೆತ್ತಿ ವಿಜಯದ ಸಂಕೇತವೆಂಬಂತೆ ಸೂಚಿಸುತ್ತಿದ್ದರು.

ವಿಮಾನದೊಳಗೆ ನನ್ನ ಪಕ್ಕ ಕೂತ ಯಾಕೂಬರು ತುಂಬಾ ಬೆವರಿದ್ದರು. ಪುಟ್ಟ ಪುಟ್ಟ ನೀರಿನ ಮೂರುನಾಲ್ಕು ಬಾಟಲನ್ನು ಒಟ್ಟಿಗೇ ಇಸಿದುಕೊಂಡು ಗಟಗಟ ಎಂದು ನೀರು ಕುಡಿದರು. ಕರವಸ್ತ್ರದಿಂದ ಮತ್ತೆ ಮತ್ತೆ ಬೆವರೊರಸಿಕೊಂಡರು. ಗಡಿಬಿಡಿಯಲ್ಲಿ ತುಂಬಾ ಅಯಾಸಗೊಂಡಿರಬೇಕೆಂದು ನಾನೇ ಮಾತನಾಡದೆ ಸುಮ್ಮನೆ ಕುಳಿತೆ.

ಸ್ವಲ್ಪ ಸಮಯದ ನಂತರ ಮೊಬೈಲ್ ತೆಗೆದು ಗುಂಡಿ ಒತ್ತುತ್ತಾ ಒಂದೊಂದೇ ಫೋಟೋಗಳನ್ನು ನೋಡುತ್ತಾ ನೋಡುತ್ತಾ ನನ್ನನ್ನು ಉದ್ದೇಶಿಸಿ ಆದರೆ ನನ್ನ ಕಡೆ ನೋಡದೆ ಹೇಳಿದರು, ಹೇಳಿಕೊಳ್ಳುತ್ತಿದ್ದರು.

ಇವರೇನು ಸುಖವಾಗಿದ್ದಾರಾ, ಧೈರ್ಯದಿಂದ ಇದ್ದಾರಾ, ಖಂಡಿತ ಇಲ್ಲ. ಬಿನ್‌ಲೇಡ್‌ನ್ ಸೋತಿದ್ದರೂ ಸತ್ತಿದ್ದರೂ ಇವರೆಲ್ಲರ ಎದೆಯೊಳಗೆ ಶಾಶ್ವತವಾಗಿ ಭಯವನ್ನು, ದ್ವೇಷವನ್ನು ಬಿತ್ತಿ ಹೋಗಿದ್ದಾನೆ. ನಮ್ಮ ಕಾರ್ತಿಕ್ ಹೊಸನಗರ್ ನೋಡಿ. ಸೆಕ್ಯೂರಿಟಿಯವರು ಅವರವರೇ ಇದ್ದಾಗ ಹೇಗಿರುತ್ತಾರೆ, ಹೇಗೆ ವರ್ತಿಸುತ್ತಾರೆಂದು ಯಾರಿಗೂ ಗೊತ್ತಾಗದ ಹಾಗೆ ಸ್ಕ್ಯಾನರ್ ಕ್ಯಾಮರಾದಲ್ಲಿ ಫೋಟೋ ತೆಗೆದಿದ್ದಾನೆ. ಎಷ್ಟು ವಿಕಾರದ ಜನರು. ಮೊಬೈಲ್‌ನ್ನು ನನ್ನ ಕೈಗೇ ಕೊಟ್ಟರು.

ಎಷ್ಟೊಂದು ಫೋಟೋ, ಎಷ್ಟೊಂದು ವಿಕೃತಿ. ಬ್ಲೇಡಿನಲ್ಲಿ ಒಬ್ಬ ತನ್ನ ಬಲಗೈ ಹತ್ತಿರ ಗಾಯ ಮಾಡಿಕೊಳ್ಳುತ್ತಿದ್ದಾನೆ. ಗಾಯದಿಂದ ರಕ್ತ ಹೀರಲು ಇನ್ನೊಬ್ಬ. ಬೇಡ ಬೇಡವೆಂದು ಗೋಗರೆದುಕೊಳ್ಳುತ್ತಿದ್ದರೂ ಒಬ್ಬನನ್ನು ಮಲಗಿಸಿ ನಗ್ನಗೊಳಿಸುತ್ತಿದ್ದಾರೆ. ಎಲ್ಲರೂ ಪ್ಯಾಂಟು ಬಿಚ್ಚಿ ಪೃಷ್ಠ ತೋರಿಸುತ್ತಾ ಸಾಲಾಗಿ ನಿಂತಿದ್ದಾರೆ. ಟೆಡ್ಡಿ ಬೇರ್‌ನ ಹರಿದು ಚೂರು ಚೂರು ಮಾಡಿ ಚೂರು ಮಾಡಿದ ಭಾಗಗಳನ್ನು ಎಸೆದುಕೊಂಡು ಆಟವಾಡುತ್ತಿದ್ದಾರೆ. ಗಹಗಹಿಸಿ ನಕ್ಕು ಜಿಗಿದಾಡುತ್ತಿದ್ದಾರೆ. ಒಬ್ಬೊಬ್ಬರಾಗಿ ಬಂದು ಗೋಡೆಗೆ ತಲೆ ಗುದ್ದುತ್ತಾ ಗುದ್ದಿದಾಗ ನೋವಾದರೂ ನಗುತ್ತಿದ್ದಾರೆ. ಎಲ್ಲವೂ ಸೆಕ್ಯೂರಿಟಿ ಗೇಟಿನ ಪಕ್ಕದ ರೂಮಿನಲ್ಲಿ.

ವಿಮಾನ ಹೊರಡುವ ಮುನ್ಸೂಚನೆ. ನನ್ನಿಂದ ಮೊಬೈಲ್ ವಾಪಸ್ ಪಡೆದು ತಲೆ ಚಚ್ಚಿಕೊಳ್ಳುತ್ತಾ ಸ್ವಿಚ್ ಆಫ್ ಮಾಡಿದರು. ಗುಂಡಿಯನ್ನು ಒತ್ತಿ ಸೀಟನ್ನು ಹಿಂದಕ್ಕೆ ತಳ್ಳಿಕೊಂಡು ನಿದ್ದೆಗೆ ಜಾರಿದರು. ನಾನು ಕೂಡ ಮೊಬೈಲ್‌ನಲ್ಲಿ ಕಂಡ ಫೋಟೋ ದೃಶ್ಯಗಳನ್ನು ನೆನಸಿಕೊಳ್ಳುತ್ತಾ ಯಾಕೂಬರ ಮುಖ ನೋಡುತ್ತಾ ನಿದ್ದೆಗೆ ಜಾರಿದೆ.

ನಿದ್ದೆ ತಿಳಿದು ಮತ್ತೆ ಎಚ್ಚರವಾದಾಗ ನಾಲ್ಕೈದು ಗಂಟೆಗಳಾದರೂ ಆಗಿ ಹೋಗಿರಬೇಕು. ವಿಮಾನದೊಳಗೆ ಝುಗಝುಗಿಸುವ ಬೆಳಕು. ಹೀಗೆ ಬೆಳಕಿದ್ದರು ಕೆಲವರದು ಗಾಢನಿದ್ರೆ, ಇನ್ನು ಕೆಲವರದು ಸೀಟಿನಲ್ಲೇ ಹೊರಳಾಟ.

ಯಾಕೂಬ್ ಎದ್ದಿದ್ದಾರೆ. ಲ್ಯಾಪ್‌ಟ್ಯಾಪ್ ತೆಗೆದು ಕಂಪ್ಯೂಟರ್ ಪರದೆಯಲ್ಲಿ ಎರಡು ಚಿತ್ರಗಳನ್ನೇ ಮತ್ತೆ ಮತ್ತೆ ನೋಡುತ್ತಿದ್ದಾರೆ. ಮೊದಲ ಚಿತ್ರದಲ್ಲಿ ಆನೆಕಾಲು ರೋಗದಿಂದ ರಣವಾದ, ಕೊಳಕಾದ ದಪ್ಪನೆಯ ವಿಕಾರವಾದ ಕಾಲುಗಳು. ನಂತರದ ಚಿತ್ರ ಒಬ್ಬ ಸ್ಫುರದ್ರೂಪಿ ಯುವಕನದು. ಡಾಕ್ಟರ್ ವೇಷಭೂಷಣದಲ್ಲಿದ್ದಾನೆ. ನಗುತ್ತಾ, ನೋಡುವವರನ್ನೇ ನೋಡುತ್ತಾ ಕಂಪ್ಯೂಟರ್ ಒಳಗಡೆಯಿಂದ ಈ ಕ್ಷಣದಲ್ಲೇ ಇಳಿದುಬರುವಂತಿದೆ.

ದೃಶ್ಯಗಳನ್ನು ನಾನು ಗಮನಿಸುತ್ತಿದ್ದುದು, ದೃಶ್ಯಗಳನ್ನು ಗಮನಿಸುತ್ತಲೇ ಯಾಕೂಬರನ್ನು ಗಮನಿಸುತ್ತಿದ್ದುದು ಯಾಕೂಬರಿಗೆ ಗೊತ್ತಾಗಿತ್ತು. ನನ್ನನ್ನು ಉದ್ದೇಶಿಸಿಯೇ ನಿಧಾನವಾಗಿ ಹೇಳಿದರು.

ನೋಡಿ, ನಿಮ್ಮ ತ್ರಿವೇಂಡ್ರಂ ಮತ್ತು ನಾಗರ್‌ಕೋಯಿಲ್ ಮಧ್ಯೆ ಇರುವ ಸುಮಾರಾದ ಹಳ್ಳಿಯೊಂದರಲ್ಲಿ ಈ ಹುಡುಗ ತನಗೆ ತಿಳಿದಿರುವ ಎಲ್ಲ ಚಿಕಿತ್ಸಾ ಕ್ರಮಗಳನ್ನು ಬೆರೆಸಿ ಆನೆಕಾಲು ರೋಗ, ಚರ್ಮದ ನಾನಾ ವ್ಯಾಧಿಗಳಿಗೆ ಎಲ್ಲರಿಗೂ ಎಟುಕುವಂತಹ ಚಿಕಿತ್ಸಾ ವಿಧಾನ ಕಂಡುಹಿಡಿದಿದ್ದಾನೆ. ಹೊರದೇಶದ ಯೂನಿವರ್ಸಿಟಿಗಳು, ಆಸ್ಪತ್ರೆಗಳು ಹೀಗೆ ಎಲ್ಲವೂ ಬೆರೆತು ಸಮಗ್ರವಾದ ಚಿಕಿತ್ಸಾ

ಕ್ರಮಕ್ಕೆ ಪ್ರೋತ್ಸಾಹಿಸುತ್ತಿವೆ. ಇಲ್ಲಿಯವರಿಗೆ ಬೇಡ, ತಮ್ಮ ಪ್ರಾಕ್ಟೀಸಿಗೆ, ನರ್ಸಿಂಗ್ ಹೋಂಗಳಿಗೆ ವ್ಯಾಪಾರಕ್ಕೆ ತೊಂದರೆಯಾಗಬಾರದೆಂದು ಎಲ್ಲ ಆಸ್ಪತ್ರೆಗಳವರು ಒಗ್ಗಟ್ಟಾಗಿ ಬಿಟ್ಟಿದ್ದಾರೆ. ಕೊಲ್ಲಿ ಹಣದಿಂದ ನಮ್ಮವರು ಸ್ಥಾಪಿಸಿರುವ ನರ್ಸಿಂಗ್ ಹೋಂ, ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್‌ನವರದು ಕೂಡ ವಿರೋಧವಿದೆ. ವಿರುದ್ಧವಾಗಿ ದೊಡ್ಡ ಪ್ರಚಾರನೇ ನಡೀತಾಯಿದೆ. ಹುಡುಗನ Concept ಹೋರಾಟ ನೋಡಿ. ಪ್ರತ್ಯೇಕವಾಗಿ ದೂರ ದೂರ ಉಳಿದು ನಾನೇ ಕೊನೇ ನಾನೇ ಎಲ್ಲ ಎನ್ನುವಂತೆ ಉಳಿದಿರುವ ಎಲ್ಲ ಪದ್ಧತಿಗಳ ಜ್ಞಾನಮಾರ್ಗಗಳನ್ನು ಬೆರಸಿ ಹೊಸದು ಎನ್ನುವ ಕ್ರಮವನ್ನೇ ಪತ್ತೆ ಮಾಡಬೇಕು, ಸ್ಥಾಪಿಸಬೇಕೆಂಬ ಆಸೆ. ಹುಡುಗನ ಕನಸು ಕಳಕಳಿ ಯಾರಿಗೂ ಬೇಡ.

ಯಾಕೂಬ್ ಮತ್ತೆ ಮತ್ತೆ ಎನ್ನುವಂತೆ ಡಾಕ್ಟರ್ ಹುಡುಗನ ಚಿತ್ರವನ್ನೇ ನಾನಾ ಕೋನಗಳಲ್ಲಿ, ಜೂಮ್ ಮಾಡುತ್ತಾ ನೋಡುತ್ತಲೇ ಇದ್ದರು. ಇಳಿದು ಬಾ, ಈಗಲೇ ಇಳಿದು ಬಾ ಎನ್ನುವಂತೆ. ಡಾಕ್ಟರ್ ಹುಡುಗನ ಮುಖದಲ್ಲೂ ನಗೆ, ವಿಶ್ವಾಸ ಹೆಚ್ಚಾಗುತ್ತಲೇ ಇತ್ತು. ಹುಡುಗನ ಬಗ್ಗೆ, ಆತನ ಯೋಜನೆಗಳ ಬಗ್ಗೆ ಏನೂ ತಿಳಿಯದ ನನಗೆ ಯಾಕೂಬ್ ಎಲ್ಲವನ್ನೂ ಮೊದಲಿಂದ ವಿವರಿಸುತ್ತಿದ್ದರು. ನಂತರ ಊಟ, ನಿದ್ರೆ.

ಮತ್ತೆ ಯಾವಾಗಲೋ ನನಗೆ ಎಚ್ಚರವಾದಾಗ ಯಾಕೂಬ್ ನಿದ್ದೆ ಮಾಡುತ್ತಿದ್ದರೂ ಕೈ ಬೆರಳುಗಳು ಮಾತ್ರ ಲ್ಯಾಪ್‌ಟ್ಯಾಪಿನ ಮೌಸಿನ ಮೇಲೇ ಇತ್ತು. ಕಂಪ್ಯೂಟರ್ ಪರದೆ ಮೇಲೆ ಒಂದೆರಡು ವಾಕ್ಯಗಳು ಮತ್ತೆ ಮತ್ತೆ ಕಾಣಿಸಿಕೊಳ್ಳುತ್ತಿದ್ದವು.

All Identities should lead to a new integration, A higher integration of every thing. So far and such integration.. can only..

❖

(ಹೊಸಮನುಷ್ಯ – ವಾರ್ಷಿಕ ವಿಶೇಷಾಂಕ, 2012)

ಆಶ್ರಿತರು

ಬಿ.ಟಿ.ಜಾಹ್ನವಿ

ಬಹಳ ಶಾಂತವಾಗಿ, ಸಾವಧಾನದಿಂದ ಒಂದೇ ಗತಿಯಲ್ಲಿ ಚಲಿಸುತ್ತಿತ್ತು ಆದಿತ್ಯರನ್ನು ಹೊತ್ತ ಆ ಕಾರು! ಏರಿಳಿತ ಚೂರೂ ಇರಲಿಲ್ಲ. ಈ ಹಿಂದೊಮ್ಮೆ ಆದಿತ್ಯ ಅವರು ಹಳ್ಳಿಯಿಂದ ಬಂದ ಮರುದಿನ ಹಾಗೇ ಸುಮ್ಮನೇ ಒಂದು ಸುತ್ತು ಊರು ಸುತ್ತಲು ಎಂದು ಹೀಗೆ ಇದೇ ಕಾರಲ್ಲಿ ಹೋದ ದಿನ ಹೀಗಿರಲಿಲ್ಲ. ಆಗ ಎಷ್ಟೊಂದು ಅಸಹನೆ, ಅಸಡ್ಡೆ, ಅಸಮಾಧಾನ ಪ್ರತಿ ತಿರುವಿನಲ್ಲೂ. ಜೊತೆಗೆ ಮೊಬೈಲ್ ಭರಾಟೆ, ಒದರು ದನಿಯಲ್ಲಿ ಸಂಭಾಷಣೆ. ಅದರೊಟ್ಟಿಗೆ ಎಫ್‌ಎಮ್‌ನಲ್ಲಿ ಬರುವ ಅರ್ಥವಾಗದ, ಬರೀ ಶಬ್ದ ಮಾಡುವ ಆರ್ಭಟದ ಸಂಗೀತ ! ಆದಿತ್ಯರ ಮೆದುಳೆಲ್ಲಾ ಕಲಸಿ ಹೋಗಿತ್ತಂದು. ತನಗೀ ಗದ್ದಲ ಆಗುತ್ತಿಲ್ಲ ಎಂದು ತಿಳಿಸುವ ಪ್ರಯತ್ನ ಮಾಡಿದ ಮೇಲಂತೂ ಅದು ಮತ್ತಷ್ಟು ಇನ್ನಷ್ಟು ಗಟ್ಟಿಗೊಳ್ಳುತ್ತಾ, ಅಧಿಕವಾಗುತ್ತಾ ಸಾಗಿದಾಗ ಅವರು ಅದಕ್ಕೆ ಹೊಂದಿಕೊಳ್ಳುವ ಪ್ರಯತ್ನದತ್ತ ಗಮನ ಹರಿಸಿದ್ದರು.

ಅದೇ ವಾಸ್ತವ ಎಂದು ಒಪ್ಪಿಕೊಂಡ ಅವರಿಗೆ ಇವತ್ತಿನ ಶಾಂತತೆ, ನಿಶ್ಯಬ್ಧ ಗಾಢ ಚಿಂತೆಯಲ್ಲಿ ಮುಳುಗಿಸಿತ್ತು. ಮೈಯಲ್ಲಿ ತ್ರಾಣವಿರದ ಕಾರಣ ಮಾತು ಹೊರಡುತ್ತಿರಲಿಲ್ಲ. ಆದರೆ ಮನಸ್ಸು ಸುಮ್ಮನಿರದಾಯಿತು. ಅಧೈರ್ಯವೊಂದು ಜೀವನದಲ್ಲಿ ಮೊದಲ ಬಾರಿಗೆ ಆದಿತ್ಯರನ್ನು ಮುಟ್ಟಿ ಮುಟ್ಟಿ ನೋಡುತ್ತಿತ್ತು. ಕಷ್ಟಪಟ್ಟು ಕಣ್ಣಗಲಿಸಿ ಯಾರು ಕಾರನ್ನು ಓಡಿಸುತ್ತಿದ್ದಾರೆಂದು ನೋಡುವ ಪ್ರಯತ್ನ ಮಾಡಿದರು. ಅಸ್ಪಷ್ಟವಾಗಿ ಕಾಣಿಸಿದರೂ ಅವನಾರೆಂಬುದು ಸ್ಪಷ್ಟವಾಗಿ ಇನ್ನಿಲ್ಲದ ಚಡಪಡಿಕೆ, ತಳಮಳ.. ಅಲ್ಲಿದ್ದ ನಿಶ್ಯಬ್ಧ ಗಾಢ ವಿಷಾದವನ್ನು ಪ್ರಕಟಿಸುತ್ತಿರುವಂತಿತ್ತು. ಮೈಯೊಮ್ಮೆ ಅದುರಿ, ಹಾಗೇ ಪ್ರಜ್ಞೆ ತಪ್ಪಿದರು.

ಆದಿತ್ಯರನ್ನು ಇಷ್ಟೊಂದು ಅಧೀರಗೊಳಿಸಿದವ ಬೇರಾರು ಅಲ್ಲ. ಅವರ ಮೊಮ್ಮಗ ವೀರು. ಬಿಬಿಎಂ ಮುಗಿಸಿದ್ದ ಅವನು ಓದು ಮುಂದುವರಿಸುವ ಇಚ್ಛೆ ಇರದೆ, ನೌಕರಿ ಮಾಡುವ ಮನಸ್ಸೂ ಇಲ್ಲದೇ, ಅಪ್ಪ ಮಾಡಿಟ್ಟ ಹಣದ ಸದುಪಯೋಗ ಮಾಡುತ್ತಾ ! ಇಂತಹ ಒಂದು ಸುಪ್ಪತ್ತಿಗೆಯ ಅಪೂರ್ವ ಅವಕಾಶವನ್ನು ತನ್ನ ಸಮಾನ ಮನಸ್ಸಿನ ಗೆಳೆಯ ಗೆಳತಿಯರೊಟ್ಟಿಗೆ ಅವನ ಭಾಷೆಯಲ್ಲಿಯೇ ಹೇಳುವುದಾದರೆ ಚಿಂದಿ ಉಡಾಯಿಸುತ್ತಿದ್ದ ! ತುಂಬಾ ಅನುಭವಸ್ಥ. ಎಲ್ಲಾ ಸುಖಭೋಗಗಳ ವಿಷಯದಲ್ಲಿ ಯಾರ, ಯಾವುದರ ಪರಿವೆಯೂ ಇಲ್ಲದೇ ಜೀವನವನ್ನು ಎಂಜಾಯ್‌ಮೆಂಟ್ ಎಂದುಕೊಂಡು ಏನೇ ಮಾಡುವುದಿದ್ದರೂ ವಿದೇಶದಲ್ಲಿಯೇ ಎಂದು ಭಾವಿಸಿದ್ದ ನವ ಯುವಕ. ವೈಪರೀತ್ಯವೆಂದರೆ ಅವನ

೨೪ನೇ ವಯಸ್ಸಿನಲ್ಲಿ ಇದೇ ಮೊದಲ ಬಾರಿಗೆ ತನ್ನ ತಾತನನ್ನು ನೋಡುತ್ತಿದ್ದುದು. ತಂದೆ ಮಲ್ಲೇಶನ ಅಪ್ಪ ಆದಿತ್ಯ. ಆದರೆ ಅವನ ಪಾಲಿಗೆ ಹಳ್ಳಿಯಲ್ಲಿ ಹೊಲ ಹೊಡೆಯುತ್ತಿದ್ದ 'ಸಿಲ್ಲಿ ಓಲ್ಡ್ ಮ್ಯಾನ್ !'

ಮರುದಿನ ಮುಂಜಾನೆ ಆದಿತ್ಯರಿಗೆ ಪ್ರಜ್ಞೆ ಮರಳಿತು. ದೊಡ್ಡ ಡಾರ್ಮೆಂಟರಿಯೊಂದರ ನಡುವಿನ ಮಂಚದ ಮೇಲೆ ಮಲಗಿದ್ದರವರು. ಸುತ್ತಲೂ ಅವರದೇ ರೀತಿಯಲ್ಲಿ ಇರುವ ಗಂಡಸರು. ಅಳು, ನಗು, ನರಳಾಟ. ಆದರೆ ಅವರಿಗದರ ಅರಿವಿರಲಿಲ್ಲ. ಕೋಣೆಯ ಸೀಲಿಂಗ್‌ನಲ್ಲೇ ನೋಟ ನೆಟ್ಟು ಬಿದ್ದುಕೊಂಡಿದ್ದ ಆದಿತ್ಯ ತಮ್ಮ ಸುತ್ತಲಿನ ಗೊಂದಲ, ಗಲಿಬಿಲಿ, ಗದ್ದಲ ಗಮನಿಸದವರಂತೆ ತೋರುತ್ತಿದ್ದರು. ಹೊಸಬರು ಒಡನೆ ನೋಡಿದೊಡನೆ ಎಲ್ಲಾ ಕಳೆದುಕೊಂಡು ಗಾಢ ನಿಶ್ಚಿಂತೆಯಲ್ಲಿರುವ ಭಿಕಾರಿಯಂತೆ ಕಾಣುತ್ತಿದ್ದರು. ಆದರೆ ವಿಷಯ ಅದಲ್ಲ. ಅವರು ಆಘಾತಗೊಂಡಿದ್ದರು. ಮೈ–ಮನಸ್ಸುಗಳೆರಡೂ ಗಾಯಗೊಂಡು ಘಾಸಿಗೊಂಡಿದ್ದವು –ತಳಬುಡವಿಲ್ಲದ ಪ್ರಪಾತದಲ್ಲಿ ಜೋಲುತ್ತಿರುವಂತೆ. ಒಮ್ಮೆ ಕಣ್ಣುಗಳು ಸರಿದವೋ ಒಡನೇ ತಿರುಗುತ್ತಿರುವ ಪಂಕದ ರೆಕ್ಕೆಗಳು ಅವರನ್ನು ಹಿಡಿದವು. ಅವುಗಳ ಸುತ್ತುವಿಕೆ ಅವರನ್ನು ವಾಸ್ತವಕ್ಕೆ, ಸರೀಕ ಸಂಬಂಧಿಕರ ಲೋಕಕ್ಕೆಳೆದು ತಂದಿತ್ತು. ಚಿತ್ತದಾಳದಿಂದ ಝೇಂಕರಿಸುತ್ತಾ ದುಮ್ಮಿಕ್ಕಿದವು ನೆನಪಿನ ಪಾತ್ರಗಳು. ಕಟ್ಟುಮಸ್ತಾದ ಸದಾ ಲಾಠಿ ಹಿಡಿದು ಠಳಾಯಿಸುತ್ತಿದ್ದವರನ್ನು ಹೆಮ್ಮೆಯಿಂದ ನೋಡಿ ಶಹಬ್ಬಾಷ್ ಎನ್ನುತ್ತಿದ್ದ ಹತ್ತಿರದವರೆಲ್ಲರ ಕಣ್ಣುಗಳು, ಅವರು ಕಲಿಸುತ್ತಿದ್ದ ಪಾಠಶಾಲೆ ಊರಿನವರೆಲ್ಲಾ ತೋರುತ್ತಿದ್ದ ಗೌರವ ತನ್ನ ಬಾಳಸಂಗಾತಿಯಾಗಿ ಬಂದ ಮುದ್ದು ಮುದ್ದು ರತ್ನ. ಧರೆಯ ಮೇಲಿನ ದೈವಗಳನ್ನೆಲ್ಲಾ ಪೂಜಿಸಿ, ಪ್ರಾರ್ಥಿಸಿ, ಬಗೆ ಬಗೆದು ಬೇಡಿ ಪಡೆದ ಏಕೈಕ ಕಂದನನ್ನ ಎದೆಗೊತ್ತಿಕೊಂಡ ರತ್ನ.

ಹಠಾತ್ತನೇ ಕೂಗಿದ 'ರತ್ನಾ.. ರತ್ನಾ..' ಎಂದು. ಒಡನೆ ಪುನರ್ವಸತಿ ಕೇಂದ್ರದ ಸಿಬ್ಬಂದಿ ಮಮತಾ ಓಡೋಡಿ ಬಂದು 'ತಾತ.. ಏನಾಯ್ತು.. ಸಮಾಧಾನ ಮಾಡಿಕೊಳ್ಳಿ ಏನಾದ್ರೂ ಬೇಕಾ?' ಎಂದು ಕೇಳಿ ಅರ್ಧ ಲೋಟ ಹಣ್ಣಿನ ರಸ ಕುಡಿಸಿದರು. ಸ್ವಲ್ಪ ಚೇತರಿಕೆ ಕಂಡಿತು. ಸತತವಾಗಿ ನಾಲ್ಕು ದಿನ ಅವನಿಗೆ ಗ್ಲೂಕೋಸ್ ಏರಿಸಿ, ಮೈಮೇಲಿನ ಗಾಯಗಳಿಗೆಲ್ಲಾ ಪಟ್ಟಿ ಹಾಕಿ ಉಪಚಾರ ಮಾಡಿದ ಮೇಲೆಯೇ ಪ್ರಜ್ಞೆ ಮರುಕಳಿಸಿದ್ದು. ಆದರೆ ಮತ್ತೆ ಮತ್ತೆ ಪ್ರಜ್ಞೆ ತಪ್ಪುತ್ತಿದ್ದರಾದ್ದರಿಂದ ಅವರನ್ನು ಯಾರೂ ಇದುವರೆಗೂ ಮಾತನಾಡಿಸಿರಲಿಲ್ಲ.

ಇಂದು ಎಂದಿಗಿಂತಲೂ ವಾಸಿ. ಅದನ್ನು ಗಮನಿಸಿ ಅಲ್ಲಿನ ಸ್ವೀಕೃತ ಅಧಿಕಾರಿ ರಮಾ ಒಂದು ಪುಸ್ತಕ, ಪೆನ್ನು ಹಿಡಿದು ಬಂದು, ಅವರ ಪಕ್ಕ ಕುಳಿತುಕೊಂಡು ಅವರನ್ನು ಒಮ್ಮೆ ದೀರ್ಘವಾಗಿ ನೋಡಿದಳು. ಆವತ್ತು ಆಗ ತಾನೇ ಎಂದಿನ

ಡ್ಯೂಟಿ ಮುಗಿಸಿ, ವಿಚಾರಣೆ ಮಾಡಿ, ಹೆಂಗಸರನ್ನು ಅವರ ಡಾರ್ಮೆಂಟರಿಗೆ, ಗಂಡಸರನ್ನು ಅವರ ಡಾರ್ಮೆಂಟರಿಗೆ ಕಳಿಸಿ, ಚಾರ್ಜ್‌ಶೀಟ್ ರೆಡಿ ಮಾಡಿ ಏಳುವವಳಿದ್ದಳು. ಆದಿತ್ಯನಿದ್ದ ಕಾರು ಪುನರ್ವಸತಿ ಕೇಂದ್ರದೆದುರು ಬಂದು ನಿಂತಿತ್ತು. ಸುಮಾರು ೨೪-೨೫ರ ಯುವಕನೊಬ್ಬ ಬಟ್ಟೆಗಳಿದ್ದ ಒಂದು ಕವರ್ ಹಿಡಿದು ಬಂದು ಪೋಲೀಸರಿಂದ ಎಂದು ಹೇಳಿ ಲೆಟರ್ ಕೊಟ್ಟು ತನ್ನೊಡನಿರುವ ವೃದ್ಧರನ್ನು ಪುನರ್ವಸತಿ ಕೇಂದ್ರಕ್ಕೆ ಸೇರಿಸಿಕೊಳ್ಳಬೇಕು ಎಂದಿದ್ದ. ಅರೆ ಪ್ರಜ್ಞಾವಸ್ಥೆಯಲ್ಲಿ ಬಟ್ಟೆಯೆಲ್ಲಾ ಮಾಸಿ, ಹೊಲಸು ಮೆತ್ತಿಕೊಂಡು, ಕೂದಲೆಲ್ಲಾ ಕೆದರಿ, ಗಬ್ಬುನಾರುತ್ತಿದ್ದ ಈ ಮುದುಕರನ್ನು ಆ ಹುಡುಗನೊಡನೆ ಬಂದ ಮತ್ತೊಬ್ಬ ಗಂಡಸು, ಮೆಲ್ಲನೆ ಎತ್ತಿಕೊಂಡು ಬಂದು ಒಳಗೆ ಮಲಗಿಸಿದ್ದ. ರಮಾ ಕೇಳಿದ್ದಳು ಆ ಹುಡುಗನನ್ನು 'ಎಲ್ಲಿ ಸಿಕ್ಕರು?' 'ನಮ್ಮನೆ ಹತ್ತಿರ ಮೋರಿಯ ಬಳಿ ಭಿಕ್ಷೆ ಬೇಡುತ್ತಿದ್ದರು. ಇಂದು ಬೆಳಿಗ್ಗೆ ಅಲ್ಲಿಯೇ ಪ್ರಜ್ಞೆ ತಪ್ಪಿ ಬಿದ್ದರು.' 'ಪೋಲೀಸ್ ಯಾಕೆ ಬರಲಿಲ್ಲ? ಅವರಿಲ್ಲದೇ ಸೇರಿಸಿಕೊಳ್ಳುವಂತಿಲ್ಲ' ಅನ್ನುವ ಹೊತ್ತಿಗೆ ಅಧೀಕ್ಷಕರ ಫೋನ್. ಇನ್ನೇನು ಕೇಳುವ ಪ್ರಶ್ನೆಯೇ ಇರಲಿಲ್ಲ. ರಮಾಳ ಕೈಗೆ ಕವರ್ ಕೊಟ್ಟು ಹೊರಟು ಹೋಗಿದ್ದ ಅವನು. ಆ ಮುದುಕರನ್ನು ಪೂರಾ ಸ್ವಚ್ಛಗೊಳಿಸಿ, ನೀಟ್ ಮಾಡಿ, ರೆಡಿಗೊಳಿಸಿದಾಗ ರಮಾಗೆ ಇವರು ಖಂಡಿತಾ ಭಿಕಾರಿಯಾಗಿರಲಾರರು ಎನಿಸಿತ್ತು. ಆದರೆ ಬಟ್ಟೆಯ ಕವರ್‌ನಲ್ಲಿಟ್ಟಿದ್ದ ಚಿಲ್ಲರೆಯ ಗಂಟು ಅನುಮಾನಾಸ್ಪದವಾಗಿತ್ತು.

'ರತ್ನಾ..' ಮತ್ತೆ ಆದಿತ್ಯ ಕರೆದಾಗ ರಮಾ 'ಸರ್, ನೀವು ಬೇಗ ಹುಷಾರಾಗ್ಬೇಕು. ಹೊಟ್ಟೆಗೇನಾದರೂ ತಗೊಳ್ಳಿ ಮೊದಲು' ಅಂದು ಮಮತಾಳಿಗೆ ಸನ್ನೆ ಮಾಡಿದಳು. 'ನಿಮಗೊಂದಿಷ್ಟು ಪ್ರಶ್ನೆಗಳಿಗೆ ಸಾರ್ ದಯವಿಟ್ಟು ಉತ್ತರಿಸಿ' ಎಂದು 'ನಿಮ್ಮ ಊರು ಯಾವುದು?' ಎಂದು ಕೇಳಿದಳು. 'ಮದ್ದಿಕೆರೆ..' ಎಂಬ ಉತ್ತರ ಬಂತು ಪ್ರಪಾತದಿಂದ ಬಂದಂತೆ. 'ನಿಮ್ಮೋರು ಇಲ್ಲಿ ಯಾರಾದರೂ ಇದ್ದಾರಾ ಸಾರ್?' ಮತ್ತೆ ಮೌನ. ರಮಾ ಅದನ್ನೇ ಪುನಃ ಕೇಳಿದಳು. 'ಎಲ್ಲಾ ಆವತ್ತೇ ಸತ್ತೋದ್ರಲ್ಲಮ್ಮಾ' ಉದ್ವೇಗವಿಲ್ಲದ ಗಟ್ಟಿ ಮಾತು. ಆದಿತ್ಯರ ಕೈ ಮೆಲ್ಲನೆ ಅದುಮಿದಳು ರಮಾ. 'ನನ್ನ ರೆಕಾರ್ಡ್‌ಗೆ ಸತ್ಯಾಂಶಗಳು ಬೇಕು ಸಾರ್' ಕೊಂಚ ಮೌನದ ನಂತರ ಬಂತು ಮಾತು 'ಅವತ್ತು ಡ್ರೈವ್ ಮಾಡ್ಕೊಂಡು ನನ್ನ ಕರ್ಕೊಂಡು ಬಂದ್‌ನಲ್ಲಾ ಅವನು ನನ್ನ ಮೊಮ್ಮಗ. ನನ್ನ ಒಬ್ಬನೇ ಮಗನ ಒಬ್ಬನೇ ಮಗ..!' ಮಾತು ಅಲ್ಲಿಗೇ ಮುಗಿಯಿತು. ಅವರು ಮತ್ತೆ ಕಣ್ಣು ಮುಚ್ಚಿದರು. ಮಮತಾ ತಂದ ಅನ್ನ ಸಾರು ಎಷ್ಟೇ ಪ್ರಯತ್ನಿಸಿದರೂ ತಿನ್ನಿಸಲಾಗಲಿಲ್ಲ.

ಮುಚ್ಚಿದ್ದ ಕಣ್ಣೊಳಗಿನ ತೆರೆ ಪಕ್ಕನೆ ಸರಿದಿತ್ತು. ಚಿತ್ರಗಳು ಸಾಲು ಸಾಲಾಗಿ ನುಗ್ಗಿ ಬಂದವು. ಹೈಸ್ಕೂಲ್ ಮೇಷ್ಟ್ರಾಗಿದ್ದರೂ ಯಾವುದಕ್ಕೂ ಕೊರತೆ ಇರಲಿಲ್ಲ. ಒಬ್ಬನೇ ಮಗ ಮಲ್ಲೇಶನ್ನ ತಮ್ಮ ಕೈ ಮೀರಿ ಹೆಚ್ಚಿದ್ದನ್ನೇ ಒದಗಿಸಿ ಬೆಳೆಸಿದ್ದರು.

ರತ್ನಳಾದರೂ ಕರುಳ ಕುಡಿ ಜೀವಕ್ಕು ಅಧಿಕ ಎಂದು ಕಣ್ಣಿಗೊತ್ತಿಕೊಂಡು ಕಾಯುತ್ತಿದ್ದಳು. ಆದಿತ್ಯ ಬಾಯಿಬಿಟ್ಟು ಹೇಳದಿದ್ದರೂ, ತೋರಿಸಿಕೊಳ್ಳದಿದ್ದರೂ, ಕಂದನಲ್ಲೇ ತನ್ನ ಜೀವ ಮಿಡುಕುತ್ತಿದೆ ಎಂದು ಭಾವಿಸಿದ್ದ ಜೀವ. ಮಗನಿಗೆ ಇನಿತು ಪೆಟ್ಟಾದರೂ, ಆರೋಗ್ಯದಲ್ಲಿ ವ್ಯತ್ಯಾಸವಾದರೂ, ಭೂಮಿ ಆಕಾಶ ಒಂದು ಮಾಡುತ್ತಿದ್ದರು. ಅದೇನು ವಿಚಿತ್ರವೋ ಅಂತಹ ಗಳಿಗೆಯಲ್ಲಿ ಗಂಡಾಗುತ್ತಿದ್ದಳು. ಅಧೈರ್ಯದಿಂದ ತತ್ತರಿಸುವ ಗಂಡನನ್ನು, ಮಗುವನ್ನು ಒಬ್ಬಳೇ ಸಂಭಾಳಿಸುತ್ತಿದ್ದ ಗಟ್ಟಿಗಿತ್ತಿ, ಹೈಸ್ಕೂಲ್ ವಿದ್ಯಾಭ್ಯಾಸ ತಮ್ಮ ಜೊತೆಯಲ್ಲಿ ಇದ್ದುಕೊಂಡು ಅಮ್ಮನ ಸೆರಗಲ್ಲೇ ಅವಿತುಕೊಂಡು ಮುಗಿಸಿದ್ದ ಮಲ್ಲೇಶ. ಆದರೆ ಪಿಯುಸಿಗೆ ಹಾಸ್ಟೆಲ್ ಸೇರಲೇಬೇಕಿತ್ತು. ಮೊದ ಮೊದಲು ರಂಪ ಮಾಡಿದ ರತ್ನಾ ಮಗನ ಶ್ರೇಯಸ್ಸನ್ನ ನೆನೆನೆನೆದು ಗಟ್ಟಿಗೊಂಡಳು. ರಜೆಗೆ ಬಂದಾಗೊಮ್ಮೆ ಅಮ್ಮನ ಬೆಚ್ಚಗಿನ ಮಡಿಲಲ್ಲಿ ಮುಖ ಹುದುಗಿಸಿ ಕರಗಿ ಹೋಗುತ್ತಿದ್ದ ಮಲ್ಲೇಶ. ಆದರದು ಒಮ್ಮೆಲೆ ಕೊನೆಗೊಂಡಿತ್ತು.

'ಹೇಗೆ..? ಹೇಗೆ..? ಹೇಗೆ..?' ಯೋಚಿಸಿದ. ಯಾವುದೋ ಒಂದು ಹೆಸರು, ಯಾರೋ ಒಬ್ಬ ಮನುಷ್ಯ – ಮಗನನ್ನು ನಮ್ಮಿಂದ ದೂರಕ್ಕೊಯ್ದಿದ್ದ. ಯಾರವನು? ಯೋಚಿಸಿದ, ಏನವನ ಹೆಸರು? ಮಗನನ್ನು ನಾವು ಕಳಕೊಂಡದ್ದು ಎಲ್ಲಿ? ಯಾರು ಕದ್ದೊಯ್ದರು? ಯಾರು? ಯೋಚಿಸುತ್ತಲೇ ಎಲ್ಲಿಂದಲೋ ಹರಿದು ಬರುತ್ತಿದ್ದ ಹಾಡಿನತ್ತ ಹೋಯಿತು ಗಮನ. 'ಸಾಗರ ಹುಣ್ಣಿಮೆ ಕಂಡು ಉಕ್ಕುವ ರೀತಿ..' ಪಕ್ಕನೆ ನೆನಪಾಯಿತು. ಹೌದು, ಸಾಗರ್.. ಸಾಗರ್ ಸರ್ಜೂಕರ್. ಮಲ್ಲೇಶನ ಮೇಷ್ಟ್ರು. ಪ್ರೊ. ಸಾಗರ್ ಸರ್ಜೂಕರ್ ಅದೇನೋ ಮಲ್ಲೇಶನ ಸರಳ ಸ್ವಭಾವ. ಒಳ್ಳೆತನ, ಜಾಣ್ಮೆ ಆ ಮನುಷ್ಯನನ್ನು ಗಾಢವಾಗಿ ತಟ್ಟಿ, ನಾವು ನಿವೃತ್ತಿ ಹೊಂದಿ ಮುಂಬೈಗೆ ಹಿಂದಿರುಗಿ ಹೋಗುವಾಗ ಹೆಚ್ಚಿನ ವ್ಯಾಸಂಗ ಅದೂ ಅತ್ಯುನ್ನತವಾದ ವ್ಯಾಸಂಗದ ಅನುವು ಮಾಡಿಕೊಡುವುದಾಗಿ, ಅದು ತಮ್ಮ ಜವಾಬ್ದಾರಿ ಎಂಬ ಭರವಸೆಯೊಂದಿಗೆ ಭಗೀರಥ ಪ್ರಯತ್ನ ಮಾಡಿ ರತ್ನಾಳನ್ನು ಹೂಂ ಅನ್ನಿಸಿ, ತಮ್ಮೊಂದಿಗೆ ಮಲ್ಲೇಶನನ್ನೂ ಕರೆದೊಯ್ದಿದ್ದರು. ಇವರಿಂದ ಒಂದು ನಯಾ ಪೈಸವನ್ನೂ ತೆಗೆದುಕೊಳ್ಳದೆ, ನಯವಾಗಿಯೇ ತಿರಸ್ಕರಿಸಿ, ಮಲ್ಲೇಶನ ಸಂಪೂರ್ಣ ಹೊಣೆ ಹೊತ್ತ ಸಾಗರ್ ಸರ್ಜೂಕರ್ ಅವನನ್ನು ಮರಳಿ ಊರಿಗೆ ಬರಲು ಬಿಡಲೇ ಇಲ್ಲ. ಇವರನ್ನೂ ಅಲ್ಲಿಗೆ ಕರೆಯಲಿಲ್ಲ. ಅತ್ತಲಿಂದ ಬಂದದ್ದು ಮೂರೇ ಪತ್ರ. ಒಂದು ಮಲ್ಲೇಶನಿಗೆ ಕೆಲಸ ಸಿಕ್ಕಿದಾಗ, ಎರಡು ಅವನು ಸಾಗರ್ ಸರ್ಜೂಕರ್ ಅವರ ಮಗಳನ್ನು ಪ್ರೀತಿಸಿ ಮದುವೆಯಾದಾಗ, ಮತ್ತೊಂದು ಅವರಿಗೊಬ್ಬ ಮಗ ಹುಟ್ಟಿದಾಗ. ದೀರ್ಘಕಾಲದ ಮಗನ ಅಗಲಿಕೆಯ ನೋವಿಗೆ, ಹೆತ್ತೊಡಲ ಸಂಕಟಕ್ಕೆ ಹನಿಯಷ್ಟೂ ಶಮನ ನೀಡದಾದವು ಅವು. ಬದಲಿಗೆ ಮಗನ ಚಿರ ಅಗಲಿಕೆಯ ಸತ್ಯವನ್ನು ಬಿತ್ತಿದ್ದವು. ಆದರೆ, ಮಗನ ನಾಮಕರಣಕ್ಕೆ ಬನ್ನಿ ಅಂತ ಮಲ್ಲೇಶನೇ ಖುದ್ದು

ಫೋನ್ ಮಾಡಿ ಕರೆದಾಗ ಜೀವಶವದಂತೆ ಬದುಕುತ್ತಿದ್ದ ರತ್ನಾಳಲ್ಲಿ ಮತ್ತೆ ಜೀವ ಉಕ್ಕಿ, ಕಣ್ಣುಗಳಲ್ಲಿ ಬೆಳಕೊಂದು ಮೂಡಿ ತುಟಿಯಲ್ಲಿ ನಗುವೊಂದು ಫಳಕ್ಕನೆ ಹೊಳೆದದ್ದು ಕಂಡಿದ್ದರು ಆದಿತ್ಯ.

'ತಾತ.. ತಾತ..' ಎಂದು ಯಾರೋ ಅಲುಗಿಸಿದ್ದು, ಆದಿತ್ಯನನ್ನು ಮರಳಿ ಇಹಲೋಕಕ್ಕೆ ಎಳೆತಂತು. ಬಲವಂತದಿಂದ ಇನ್ನಷ್ಟು ಹಣ್ಣಿನ ರಸ ಕುಡಿಸಿ, ಮುಖ ಒರೆಸಿದರು. ತುಂಬಾ ನಿತ್ರಾಣನಾಗಿದ್ದಕ್ಕೋ, ಮೈ ತುಂಬಾ ಬಿದ್ದಿದ್ದ ಪೆಟ್ಟುಗಳ ನೋವಿಗೋ, ಆದಿತ್ಯರಿಗೆ ಎಲ್ಲವೂ ಮಸುಕು ಮಸುಕಾಗುತ್ತಿತ್ತು. ತನ್ನ ಸುತ್ತಲೂ ಗಂಡಸರು, ಹೆಂಗಸರು ನಿಂತಿರುವುದು ತನ್ನನ್ನೇ ಗಮನಿಸುತ್ತಿರುವುದು ಅವನಿಗೆ ಬೇರೇನನ್ನೋ ನೆನಪಿಸಿದವು. ಹೀಗೆ ಗುಂಪಾಗಿ ಅಲ್ಲಲ್ಲಿ ಜನ ನಿಂತು ನಕ್ಕು ಸಂಭ್ರಮಿಸುತ್ತಿದ್ದರಲ್ಲ. ಎಲ್ಲಿ, ಹೌದು ಎಲ್ಲಿ? ಮತ್ತೆ ಬಿಗಿಯಾಗಿ ಕಣ್ಮುಚ್ಚಿದ. ಆ ಗುಂಪನ್ನು ಎಲ್ಲವನ್ನೂ ಮರೆತು ತನ್ನೊಳಗೇ ಲೀನವಾದ. ಸ್ಪಷ್ಟವಾಗಿ ಯೋಚಿಸಿದ. ಹೌದು ಅಂದು ಅಲ್ಲಿ ನಡೆದದ್ದೇನು? ಗುಂಪು ಯಾಕಿತ್ತು? ಹಾಂ, ಹೊಳೆಯಿತು ನಾಮಕರಣ. ಮೊಮ್ಮಗನ ನಾಮಕರಣ. ಅಷ್ಟು ಉದ್ದದ ಪಯಣದ ಆಯಾಸ, ದಣಿವು ಮಗನ ಮುಖ ನೋಡಿದೊಡನೆ ಓಡಿ ಹೋಗಿತ್ತು. ಅವನು ಮಾತ್ರ ಹಿಂದಿನಂತೆ ಅಮ್ಮನ ಮಡಿಲಿಗೆ ಹಾತೊರೆಯಲಿಲ್ಲ. ಅಪ್ಪನ ಭುಜಕ್ಕೂ ಒರಗಲಿಲ್ಲ. ಔಪಚಾರಿಕ ಮಾತು ನಾಲ್ಕೇ ನಾಲ್ಕು. ಮುಖದಲ್ಲಾದರೂ ಈವರೆಗಿನ ಅಗಲಿಕೆಯ ಬೇಸರ, ಬೇಗುದಿಯಾಗಲಿ, ಎಷ್ಟೋ ಕಾಲದ ನಂತರ ಭೇಟಿಯಾಗುತ್ತಿರುವ ಸಂಭ್ರಮ, ಸಡಗರವಾಗಲಿ ಊಹೂಂ.. ಸೊಸೆ ಕಾಲು ಮುಟ್ಟದ ಶಾಸ್ತ್ರ ಮಾಡಿದ್ದಳು. ಪಾಪು ಅಳ್ತಾನೆ ಎಂದು ಕೈಗೂ ಕೊಡಲಿಲ್ಲ. ಹೌದು, ಆದರೇನೋ ನಡೆಯಿತಾಗ. ಮತ್ತೆ ಆದಿತ್ಯ ಆಳಕ್ಕೋದರು. ಹೌದು, ಬಲವಂತದಿಂದ ಪಾಪೂನ ಎತ್ತಿಕೊಳ್ಳಲು ಹೋದ ರತ್ನಾಳನ್ನು ಗಂಡ-ಹೆಂಡತಿ ಇಬ್ಬರೂ ತಡೆದು 'ಪ್ಲೀಸ್ ಬಿಡಿ ಮಾ.. ಅಳಸ್ಬೇಡಿ' ಎಂದಿದ್ದರು. ಎತ್ತಿ ಆಡಿಸಲು ಹೋದ ಕೈಗಳು ಹಾಗೆಯೇ ಕುಸಿದು ಬಿದ್ದಿದ್ದವು ಕೆಳಕ್ಕೆ. ಮರುದಿನ ನಾಮಕರಣದ ಕಾರ್ಯಕ್ರಮದಲ್ಲಿಯೂ ಯಾರಿಗೂ ಅಪ್ಪ-ಅಮ್ಮ ಎಂದು ತಮ್ಮನ್ನು ಪರಿಚಯಿಸಲೇ ಇಲ್ಲ. ಒಡಲನ್ನು ಬಗೆದು ಹಾಕಿದ ಹೃದಯ ಬಿರಿದ ಮಾಸದ ಹಸಿ ಅನುಭವ!

ರತ್ನ ಚೂರು ಚೂರಾಗಿದ್ದಳು. ಅಷ್ಟು ಮಾತ್ರ ಖಚಿತ. ಅವಳಿಗೆ ಸ್ಥಳ ಬದಲಾವಣೆಯಾದರೆ ಸುಧಾರಿಸಬಹುದೆಂದು ಭಾವಿಸಿ ಕೆಲಸಕ್ಕೆ ರಾಜೀನಾಮೆ ಇತ್ತು. ರತ್ನಾಳೊಡನೆ ಹಳ್ಳಿಯ ತೋಟ ಸೇರಿದ್ದರು. ಮಗುವಿನಂತೆ ಆರೈಕೆ ಮಾಡಿದ್ದರು. ಮಗನ ಕಮ್ಮಿ ಅವಳಿಗೆ ತಾಗದಿರಲೆಂದು ಸದಾ ಹತ್ತಿರವೇ ಇದ್ದು ಓಲೈಸಿದ್ದರು. ಉಣ್ಣಿಸಿದ್ದರು. ತಮ್ಮ ಮಡಿಲಲ್ಲೇ ಆಕೆಯನ್ನು ಮಲಗಿಸಿಕೊಳ್ಳುತ್ತಿದ್ದರು. ಅವಳದೊಂದು ನಗುವಿಗಾಗಿ ಕಾತರಿಸಿ ಕಾಯುತ್ತಿದ್ದರು. ಪ್ರೀತಿಯಿಂದ ಹಣೆ ನೇವರಿಸಿ ಹೇಳುತ್ತಿದ್ದರು:

'ರತ್ನ, ನಮ್ಮೊಂದಿಗಿಲ್ಲದ ಅವನನ್ನು ನೀನು ಇಲ್ಲಿ ಹುಡುಕುತ್ತಾ.. ಆ ಹುಡುಕಾಟದಲ್ಲಿ ಕಳೆದು ಹೋಗುತ್ತ.. ಒಂಟಿಯಾಗುತ್ತಿದ್ದಿ. ನಿನ್ನ ಜೊತೆಗೆ ಇರುವ, ನಿನಗಾಗಿಯೇ ಬದುಕುತ್ತಿರುವ ನನ್ನನ್ನೂ ಒಂಟಿ ಮಾಡುತ್ತಿದ್ದಿ. ನೋಡು, ಇನ್ನು ಜೀವನ ಪೂರ್ತಿ ನಾವಿಬ್ಬರೇ ನಮಗೆ, ನಮ್ಮ ಬದುಕನ್ನ ಬದುಕೋಣ ನಾವು. ಇನ್ನು ಮೇಲೆ ಯಾರ ಹಂಗೂ ಬೇಡ. ಬಿಟ್ಹಾಕು ಅವನನ್ನು..' ಇಲ್ಲ, ಏನೂ ಅರ್ಥವಾಗದ ಅಥವಾ ಅರ್ಥ ಮಾಡಿಕೊಳ್ಳದ ಸ್ಥಿತಿ ತಲುಪಿದ್ದಳಾಕೆ. ಎಲ್ಲಾ ಭಾವನೆಗಳು ತೀರಿದ್ದವು. ಅಂತೆಯೇ ಅವಳೂ ಕೂಡ ಒಂದು ಮುಂಜಾನೆ..!

ರತ್ನ ಹೇಗೆ ತನ್ನ ಹಾದಿ ತಾನು ಆಯ್ದುಕೊಂಡು, ನನಗಾಗಿ ರವಷ್ಟೂ ಮರುಗದೆ, ತನ್ನ ಪಾಡಿಗೆ ತಾನು ಹೊರಟು ಹೋಗಿದ್ದಳು. ಹಾಗೆಯೇ ತಾವೂ ತೋಟಕ್ಕೆ ಅಂಟಿಕೊಂಡು ಬಿಟ್ಟರು. ಇನ್ನೆಂದೂ ಒಂಟಿ ಎಂದು ಕೊರಗಬಾರದೆಂದು ತೀರ್ಮಾನಿಸಿದ್ದರು. ಎಲ್ಲಾ ಕಾರ್ಯಕ್ರಮಗಳು ಮುಗಿದ ಮೇಲೆ ಎರಡೇ ಸಾಲು ಮುಂಬೈಗೆ ಬರೆದಿದ್ದರು. 'ರತ್ನ ಇನ್ನಿಲ್ಲ. ಇಂತಿ, ನಮಸ್ಕಾರಗಳು' ಅವರು ಹೊರಟು ಬರುತ್ತೇವೆ ಎಂದಾಗ 'ಇಲ್ಲಿ ಏನೂ ಕೆಲಸವಿಲ್ಲ, ಬರುವ ಅಗತ್ಯವಿಲ್ಲ' ಅಂದು ತಮ್ಮನ್ನೇ ತೋಟಕ್ಕೆ ಅರ್ಪಿಸಿಕೊಂಡರು. ಅದರಲ್ಲಿಯೇ ಜೀವನವಿಟ್ಟು ಅದನ್ನು ಸಾಕಾರಗೊಳಿಸಿ ತೂಗಿಸಿಕೊಳ್ಳುವ ಶಕ್ತಿ ಇತ್ತು. ಅವರಿಗೂ ತೋಟಕ್ಕೂ ಅವಿನಾಭಾವ ಸಂಬಂಧ ಬೆಳೆದು ಅಲ್ಲಿ ತೆಗೆದ ಬೆಳೆಗಳು ಉಸಿರಾಗಿ ಜೀವನ ಪಥ ತೋರಿಸಿದ್ದವು. ಅವರು ನಿರಾಳವಾಗಿ ನಿಸೂರವಾಗಿದ್ದ ಕಾಲ ಅದು. ತಮಗೆಷ್ಟು ಬೇಕೊ ಅಷ್ಟನ್ನೇ ಇಟ್ಟುಕೊಂಡು ಉಳಿದಿದ್ದನ್ನು ಹಂಚುತ್ತಿದ್ದರು ಇಲ್ಲದವರಿಗೆ.

ಮತ್ತೆ ಮರೆವು.. ಕೆಲ ಕಾಲ ಸ್ತಬ್ಧ. ಹಿಂದೆಯೇ ಏನೋ ಕಳೆದುಕೊಂಡ ಚಡಪಡಿಕೆ, ತಳಮಳ.

ಮತ್ತೆ ಕನವರಿಕೆ. ಏನದು? ಏನೋ ಕಳೆದುಕೊಂಡೆ? ಹೇಗೆ? ಯಾರು ಕಸಿದಿದ್ದು? ಎಲ್ಲಿ? ಯಾವಾಗ? ನನ್ನ ಪಾಡಿಗೆ ನಾನಿದ್ದೆನಲ್ಲಾ.. ಇಲ್ಲಿಗೇಕೆ ಬಂದೆ? ಇವರಾರು? ಯಾರೋ ಬಂದರಲ್ಲಾ ದೋಚಲು? ಅವರನ್ನು ಒಳಬಿಟ್ಟವರು ಯಾರು?

ಬರಿಯ ಪ್ರಶ್ನೆಗಳು, ಉತ್ತಗಳಿಲ್ಲ ! ಜೋರಾಗಿ ಅಳಬೇಕೆನಿಸುತ್ತಿತ್ತು. ಕಣ್ಣಲ್ಲಿ ನೀರೇ ಇಲ್ಲ. ಹೌದು ತಮಗೇನೊ ಬೇಕೆನಿಸುತ್ತಿದೆ. ಏನದು?

'ಸಾರ್ ಸಾರ್' ರಮಾ ಮಾತನಾಡಿಸುತ್ತಿದ್ದಳು. ಪಕ್ಕನೆ ಕಣ್ತೆರೆದರು. 'ತುಂಬಾ ಬಡಬಡಾಯಿಸುತ್ತಿದ್ದೀರಿ. ಇವತ್ತಾದ್ರೂ ಒಂಚೂರು ಊಟ ಮಾಡಿ.' ಊಟ ಎಂದೊಡನೆ ಅಬ್ಬಳಿಕೆ ಬಂದು ತಲೆ ಕೊಡವಿ ಬಿಟ್ಟರು. ರಮಾ ಮತ್ತೆ ಬಲವಂತಪಡಿಸಲಿಲ್ಲ. ಇವರ ಮಂಚದ ಎದುರಿಗೇ ದೊಡ್ಡ ಕಿಟಕಿ ತೆರೆದಿತ್ತು.

ಕಣ್ಣುಗಳು ಅತ್ತ ಚಲಿಸಿ, ದೃಷ್ಟಿಸಲು ಪ್ರಯತ್ನಿಸಿದಾಗ ಹೊರಗಿನ ಬೆಳಕು ರಪ್ಪನೆ ಹೊಡೆಯಿತು. ಅದರ ಹೊಡೆತ ಮತ್ತೆ ವಾಸ್ತವಕ್ಕೆ, ಹೆಣ್ಣು ಗಂಡುಗಳ ಲೋಕಕ್ಕೆ ಅವರನ್ನು ಎಳೆದು ತಂದಿತು.

ನಿಶ್ಚಿಂತ ಎಂದು ಬೀಗುತ್ತಿದ್ದುದೇ ಅಪರಾಧವೋ ಏನೋ – ಇದ್ದಕ್ಕಿದ್ದಂತೆ ಮಲ್ಲೇಶ, ರೇಖ ತೋಟಕ್ಕೆ ಬಂದುಬಿಟ್ಟಿದ್ದರು ಒಂದು ದಿನ. ಜೀವನದಲ್ಲಿ ಸಂತೃಪ್ತಿ ಕಂಡಿದ್ದ ತಮಗೂ ಆ ಕ್ಷಣ ನಿಜಕ್ಕೂ ಏನೂ ಅನ್ನಿಸಿರಲಿಲ್ಲ. ಅವರಿಂದ ಯಾವ ನಿರೀಕ್ಷೆಯೂ ಇರಲಿಲ್ಲ. ಕಾರಣ ಸಿಟ್ಟು ಬರಲಿಲ್ಲ. ಆದರೆ ಅವನೊಂದಿಗೆ ಮಾತನಾಡುವ ಮನಸ್ಸಿರಲಿಲ್ಲ. ವಿಷಯವಂತೂ ಮೊದಲೇ ಇರಲಿಲ್ಲ. ಬಂದವರು ಹಾಗೆಯೇ ಹಿಂದಿರುಗಿದರು. ಆದರೆ ಬಿಡಲಿಲ್ಲ ಅವರು. ಮತ್ತೆ ಮತ್ತೆ ಬರತೊಡಗಿದರು. ನನ್ನ ಸುತ್ತಲಿನವರೂ ನಾನೇ ತಪ್ಪು ಮಾಡುತ್ತಿದ್ದೇನೆ ಎಂದು ಭಾವಿಸುವಂತಾಯಿತು. ಅವರಾದರೂ ಏನೂ ಆಗಿಲ್ಲವೆಂಬಂತೆ ಸಹಜವಾಗಿಯೇ ವರ್ತಿಸುತ್ತಿದ್ದರು. ಪ್ರಾರಂಭದಲ್ಲಿ ಮಲ್ಲೇಶನಲ್ಲಿ ಅಳುಕು ಕಂಡಿತು. ಆದರೆ ಬರುಬರುತ್ತಾ ಸರಿ ಹೋದಂತಿತ್ತು. ತೋಟವೆಲ್ಲಾ ಅಡ್ಡಾಡಿ ಆನಂದ ಪಡುತ್ತಿದ್ದರು. ಸೊಸೆಯಂತು ತೋಟದ ಬಗ್ಗೆ ಇನ್ನಿಲ್ಲದ ಆಸಕ್ತಿ, ಅಕ್ಕರೆ ವ್ಯಕ್ತಪಡಿಸುತ್ತಿದ್ದು ತಾವು ತಡೆಯದಾದರು. ಕರಗಿ ಹೋದರು. ತೋಟ ತಮ್ಮ ದೌರ್ಬಲ್ಯ, ಅದನ್ನ ಯಾರಾದರು ಪ್ರಶಂಸಿಸಿದರೆ, ಅದರ ಕುರಿತು ಕಿಂಚಿತ್ತು ಆಸಕ್ತಿ ಆಸ್ಥೆ ತೋರಿದರೂ ತಾವು ಮೈಮರೆತು ಹೋಗುತ್ತಿದ್ದರು. ಅವರಿಬ್ಬರಿಗೆ ತಮ್ಮೊಡನೆ ಉಳಿದುಕೊಳ್ಳಲು ತುಸು ಕಷ್ಟವೇ ಆಗುತ್ತಿತ್ತು. ಒಲೆಯಲ್ಲಿ ತಮ್ಮ ಅಡುಗೆ, ಒಂದೇ ಒಂದು ಹಾಸಿಗೆ. ತಮಗೊಬ್ಬರಿಗೆ ಎಷ್ಟು ಬೇಕೋ, ಏನು ಬೇಕೋ ಅಷ್ಟೇ ಇತ್ತು. ಅದಕ್ಕಿಂತ ಒಂದು ಹನಿಯೂ ಹೆಚ್ಚಿರಲಿಲ್ಲ. ಅವರೊಡನೆ ಅವರ ಸ್ನೇಹಿತರೂ ಬರತೊಡಗಿದಾಗ ಜೊತೆಯಲ್ಲಿಯೇ ಮನೆಗೆ ಬೇಕಾದ ಸಾಮಾನುಗಳು ಅವರೊಡನೆ ಬರತೊಡಗಿದವು. ಕುರ್ಚಿ, ಮಂಚ, ಪಾತ್ರೆಗಳು, ಪಂಕ ಹೀಗೆ ಪಟ್ಟಿ ಬೆಳೆಯುತ್ತಾ ಹೋಯಿತು. ಬರುವ ಜನ ಮತ್ತು ಸಾಮಾನು ಹೆಚ್ಚಿದಂತೆಲ್ಲಾ ಮನೆ ಚಿಕ್ಕದಾಗತೊಡಗಿತು. ಮಲ್ಲೇಶನ ಹತ್ತಿರದ ಗೆಳೆಯ ಸುನೀಲನು ಇವರಿಗೆ ಹತ್ತಿರದವನಾಗಿ ಬಿಟ್ಟಿದ್ದ. ಅವನೊಂದು ಸಲಹೆ ಇತ್ತ. ಈ ಮನೆಯನ್ನು ವಿಸ್ತರಿಸಬಾರದೇಕೆ ಎಂದು. ಎಲ್ಲರಿಗೂ ಹೌದೆನಿಸಿತ್ತು. ಅವನೇ ಮನೆಯ ಪ್ಲಾನಿಂಗ್ ಜವಾಬ್ದಾರಿ ಹೊತ್ತ. ಮಲ್ಲೇಶ ಹಣ ತಾನು ಕೊಡುವುದಾಗಿ ಹೇಳಿದ್ದ, ಆದರೆ ತಾವು ಸುತರಾಂ ಒಪ್ಪಿರಲಿಲ್ಲ. ಮನೆ ಕಟ್ಟಿಸುವಷ್ಟು ಹಣವು ಇರಲಿಲ್ಲ ತಮ್ಮ ಬಳಿ. ಸುನೀಲನೇ ಮತ್ತೊಂದು ಉಪಾಯ ಸೂಚಿಸಿದ್ದ. ತೋಟದ ಮೇಲೆ ಸಾಲ ತೆಗೆಯುವ ವಿಷಯ. ಬ್ಯಾಂಕಿನಲ್ಲಿ ಗೆಳೆಯರಿರುವುದರಿಂದ ಅದು ಸುಲಭವೂ ಎಂದಿದ್ದ. ನಡುನಡುವೆ ತಮ್ಮ ಸಲಹೆಯನ್ನೂ ಕೇಳುತ್ತ ಮನೆಯ ಪ್ಲಾನೊಂದನ್ನು ತಾವೇ ತಯಾರಿಸಿಬಿಟ್ಟಿದ್ದರು ಸುನೀಲ, ರೇಖಾ ಮತ್ತು ಮಲ್ಲೇಶ್. ಇಷ್ಟಾದ ಮೇಲೆ ಸಾಲಕ್ಕೆ ತೋಟದ ಡಾಕ್ಯುಮೆಂಟ್ಸ್

ಬ್ಯಾಂಕಿಗೆ ಪ್ರೊಡ್ಯೂಜ್ ಮಾಡಬೇಕು ಎಂದು ಆದಿತ್ಯರನ್ನು ಕರೆದುಕೊಂಡು ಮರುದಿನವೆ ಬೆಂಗಳೂರಿಗೆ ಹೊರಟರು.

ಎರಡು ದಿನ ಬೆಂಗಳೂರು ಸುತ್ತಾಡಿಸಿ ಮರುದಿನವೇ ಸುನೀಲ್ ಬ್ಯಾಂಕಿಗೆಂದು ಡಾಕ್ಯುಮೆಂಟ್ಸ್ ಒಯ್ದಿದ್ದ. ಮಲ್ಲೇಶ್ ಮತ್ತು ರೇಖಾ ಪಾಸ್‌ಪೋರ್ಟ್‌ನ ಎರಡು ದಿನದ ಕೆಲಸವೆಂದು ಮುಂಬೈಗೆ ತೆರಳಿದರು. ಎರಡು ದಿನಕ್ಕಾಗುವಷ್ಟು ಅಡುಗೆ ಇದೆ ಎಂದಿದ್ದಳು ರೇಖಾ. ಜೊತೆಯಲ್ಲಿದ್ದ ಮೊಮ್ಮಗ ತಮ್ಮನ್ನೂ ಕ್ಯಾರೇ ಎಂದಿರಲಿಲ್ಲ. ಕೋಣೆಯೊಳಗೇ ಇರುತ್ತಿದ್ದನವ. ಹೊರಗೆಲ್ಲೂ ತಲೆ ಹಾಕಲಿಲ್ಲ. ಯಾಕೋ ಪಿಚ್ಚೆನಿಸಿತ್ತು ಆದಿತ್ಯರಿಗೆ. ತಾವು ಬರಬಾರದಿತ್ತು ಅನಿಸತೊಡಗಿತ್ತು. ಏನೋ ಮಾಡಲು ಹೋಗಿ ಏನೋ ಆಯಿತೇನೋ ಎಂದು ಮೊದಲ ಬಾರಿ ಅನ್ನಿಸಿತ್ತು. ಮೊಮ್ಮಗನಿಗೆ ತಿಳಿಸಿ ಊರಿಗೆ ಹೋಗಿ ಬಿಡೋಣ ಎಂದು ಬಾಗಿಲು ಬಡಿದರೆ ಸಪ್ಪಳವೇ ಇಲ್ಲ. ಅಡ್ಡಾಡಿ ಬರೋಣವೆಂದು ಹೊರ ಹೋಗಲು ಪ್ರಯತ್ನಿಸಿದರೆ ಹೊರಗಿಂದ ಲಾಕ್ ಆಗಿತ್ತು. ಜತೆಗಿದ್ದ ಮೊಮ್ಮಗ ವೀರು ಅದಾವ ಮಾಯದಲ್ಲೋ ಕಾಣೆಯಾಗಿದ್ದ. ಏನೋ ಎಡವಟ್ಟಾಯಿತು ಎಂದು ಆದಿತ್ಯರಿಗೆ ತಿಳಿಯುವಷ್ಟರಲ್ಲಿ ಅವರ ಮೊಬೈಲೂ ಕಾಣೆಯಾಗಿತ್ತು. ಊಟವಿರಲಿಲ್ಲ. ಕುಡಿಯಲೂ, ಬಳಸಲೂ ಹನಿ ನೀರಿಲ್ಲ. ಬರೀ ಪರದಾಟ. ಸಮಯ, ದಿನ, ದಿನಾಂಕ ಏನೊಂದೂ ತಿಳಿಯದಾಗಿತ್ತು. ಎರಡು ದಿನ ಉರಿದ ಬಲ್ಬುಗಳು ನಂತರ ಆರಿ ಹೋಗಿದ್ದವು. ಗಾಡಾಂಧಕಾರ. ಇಡೀ ಮನೆ ಸ್ವಲ್ಪ ದಿನಗಳಲ್ಲಿ ಗಬ್ಬು ನಾರತೊಡಗಿತು. ಮಾಡಿದ ಹೊಲಸನ್ನು ತೊಳೆಯುವಂತಿಲ್ಲ, ಮಾಡದೆಯೂ ಇರುವಂತಿಲ್ಲ. ತಮಗೇ ಸಹ್ಯವಾಗದಷ್ಟು ಅಸಹ್ಯ..! ವಾಂತಿಯೂ ಆಗತೊಡಗಿತ್ತು. ಪೂರಾ ನಿತ್ರಾಣ. ಅವರಿಗೀಗ ನಿಚ್ಚಳವಾಗಿತ್ತು. ತಮ್ಮವರ ಸಂಚಿಗೇ ಬಲಿಯಾಗಿದ್ದರು. ರೋಷವುಕ್ಕಿ ಬಂದು 'ಹೇ..' ಎಂದು ಏಳಲು ಹೋದರು, ಆಗಲಿಲ್ಲ. ಕಾಲು ಮಿಸುಗಿಸಲೇ ಆಗುತ್ತಿಲ್ಲ. ಮೈಯೆಲ್ಲಾ ಜರ್ಜರಿತ ನೋವು. ಜೋರಾಗಿ ಕೂಗಿಕೊಂಡರು 'ಬಿಡು.. ನನ್ನ ಬಿಟ್ಬುಬಿಡು.. ನನ್ನ ಕಾಲುಗಳನ್ನು ಕಟ್ಟಬೇಡ. ಬಿಡು ನನ್ನ' ಕೈಯೆತ್ತಿ ಮುಗಿದರು ಎಲ್ಲರಿಗೂ. ಎದ್ದು ಓಡಲು ಪ್ರಯತ್ನಿಸಿದಾಗ ಅಲ್ಲಿನ ಸಿಬ್ಬಂದಿ, ರಮಾ, ಮಮತಾ ಎಲ್ಲರೂ ಓಡಿ ಬಂದರು. ಅವರನ್ನು ಹಿಡಿದು, ಮಲಗಿಸಿ, ಸಮಾಧಾನಪಡಿಸುವ ಹೊತ್ತಿಗೆ ಸಾಕು ಸಾಕಾಯ್ತು. ಅವರ ಆವೇಗ, ಉದ್ವೇಗವೆಲ್ಲಾ ಒಂದು ತಹಬದಿಗೆ ಬಂದಾಗ ರಮಾ ಮೆಲ್ಲನೆ ಹೇಳಿದಳು. 'ಸರ್, ನಿಮ್ಮ ಕಾಲು ಮುರಿದಿದೆ. ನೀವು ಸದ್ಯ ಎದ್ದು ಓಡಾಡುವುದು ಕಷ್ಟ. ಎಲ್ಲಿ ಬಿದ್ದಿರಿ? ಏನಾಯ್ತು? ನಿಮ್ಮ ಮೈಯೆಲ್ಲಾ ಪೆಟ್ಟಾಗಿದೆ? ಯಾರೋ ನಿಮ್ಮ ಮೇಲೆ ಬಲವಾಗಿಯೇ ಹಲ್ಲೆ ನಡೆಸಿದ್ದಾರೆ..' ಆದಿತ್ಯರಿಗೆ ಏನೂ ಆ ಕ್ಷಣಕ್ಕೆ ನೆನಪಾಗಲೊಲ್ಲದು. ಹೌದು. ಏನೋ ಆಯ್ತು. ಆ ದಿನ ಅವರು.. ನೆನಪಿನಾಳಕ್ಕೆ ಇಳಿಯುವ ಹೊತ್ತಿಗೆ ಸರಿಯಾಗಿ ಅವರಿಗೆ ನಿದ್ದೆ ಬರಿಸಲು ಇಂಜೆಕ್ಷನ್ ಕೊಟ್ಟರು. ನೆನಪುಗಳ ಸಿಕ್ಕುಗಳನ್ನು ಬಿಡಿಸುತ್ತ ಬಿಡಿಸುತ್ತ ಹಾಗೆಯೇ ನಿದ್ದೆ ಹೋಗಿದ್ದರು ಆದಿತ್ಯ.

ಮುಸ್ಸಂಜೆ ಹೊತ್ತಿಗೆ ಸಂಜೆ ರೌಂಡ್ಸ್‌ಗೆ ರಮಾ ಬಂದಾಗಲೂ ಮಲಗಿಯೇ ಇದ್ದರು. ಕರೆಂಟಿರಲಿಲ್ಲ. ಕತ್ತಲು ಆಗ ತಾನೇ ಆವರಿಸಿಕೊಳ್ಳುತ್ತಿತ್ತು. ನೋಡೋಣವೆಂದು ಆದಿತ್ಯರನ್ನು ಮೆಲ್ಲಗೆ ಅಲುಗಿಸಿದಳು. ಮೂರ್ನಾಲ್ಕು ಬಾರಿಯ ನಂತರ ಮೆಲ್ಲನೆ ಕಣ್ತೆರೆದರು. ಏನೂ ಕಾಣಲೊಲ್ಲದು – ಕತ್ತಲು. ಹೌದು ಬರೀ ಕತ್ತಲು. ಮಿಸುಕಾಡಲು ದೇಹದಲ್ಲಿ ತ್ರಾಣವಿರಲಿಲ್ಲ. ವಾಸನೆ, ನೋವು, ದುಃಖ ಏನೂ ತಿಳಿಯದಂತಹ ಸ್ಥಿತಿ ತಲುಪಿದ್ದರು. ಇದ್ದಕ್ಕಿದ್ದಂತೆ ಯಾರೋ ಎತ್ತಿ ಹಿಡಿದಂತಾಗಿತ್ತು. ಕತ್ತಲಲ್ಲಿ ಏನೂ ಗೊತ್ತಾಗುತ್ತಿರಲಿಲ್ಲ. ಎತ್ತಿ ಎತ್ತಿ ಮತ್ತೆ ಕೆಳಕ್ಕೆ ನೂಕುತ್ತಿದ್ದರು. ಯಾವುದರಿಂದಲೋ ತಿಳಿಯದು, ಆದರೆ ಮೈಮೇಲೆ ಬೀಳುತ್ತಿತ್ತು ಪೆಟ್ಟು. ಕಾಲುಗಳನ್ನು ಹಿಡಿದು ಎಳೆದೊಯ್ಯುತ್ತಿದ್ದರು. ಎಲ್ಲಿಗೆಂದು ತಿಳಿಯದು. ಆದರೆ ಒಮ್ಮೆಲೇ ದಡದಡನೆ ಉರುಳುರುಳಿ ಬೀಳುತ್ತಿದ್ದರು. ಎಷ್ಟು ಪ್ರಯತ್ನಪಟ್ಟರೂ ಎದ್ದು ಓಡಬೇಕೆಂದು ಆಗಲೇ ಇಲ್ಲ. ಮತ್ತೆ ಮತ್ತೆ ಬೀಳುತ್ತಿದ್ದರು. ಮತ್ತೆ ಏಳಲೇ ಆಗದಾದಾಗ, ಸತ್ತು ಹೋದೆ ಅನ್ನಿಸುತ್ತಿದ್ದಾಗ ತಕ್ಷಣ ಕೈಯೊಂದು ತಡವಿತ್ತು. ಹೌದು, ರತ್ನಳದ್ದು! ಅಳುತ್ತಿದ್ದಳು ಅವಳು. ಮಾತೂ ಆಡುತ್ತಿದ್ದಳು. 'ನನಗೆ ಸಾರಿ ಸಾರಿ ಹೇಳಿದವ. ನೀನು ಹೇಗೆ ಈ ಮೋಹದ ಉರುಳಲ್ಲಿ ಸಿಕ್ಕಿಬಿದ್ದೆ ಆದಿತ್ಯ?' ರೋಧಿಸುತ್ತಿದ್ದಳು ರತ್ನ. ವ್ಯಾಮೋಹವಲ್ಲ ರತ್ನ, ಪ್ರೀತಿ. ನನ್ನವರು ಎಂಬ ಕಳ್ಳುಬಳ್ಳಿನ ಪ್ರೀತಿ ಯಾರಿಗೆ ಬೇಡ ಹೇಳು. ಎದೆಯ ಹಸಿವಲ್ಲವೆ ಪ್ರೀತಿ? ಆದರೆ ಇದು ಇಷ್ಟೊಂದು ಕಲಬೆರಕೆ ಆಗಿ, ವಿಕೃತವಾಗಿದೆ ಅಂತ ಗೊತ್ತಾಗಲಿಲ್ಲ ರತ್ನ. ಮೋಸ ಹೋದೆ..' ಮುಂದೆ ಏನೂ ಹೇಳಲಾಗಲೇ ಇಲ್ಲ. ರತ್ನಾಳ ಅಳು ಜೋರಾಗುತ್ತಿತ್ತು –ತಡೆಯದಾಗದಷ್ಟು. ಕರುಳ ಕಿತ್ತು ಬರುವಂತೆ 'ರತ್ನಾ ಸಾಕು ಮಾಡು' ಎಂದು ಕೂಗಿ ಕಣ್ಣಿಟ್ಟರು. ಪೂರಾ ಎಚ್ಚರಗೊಂಡರು. ನಿಜಕ್ಕೂ ಮಹಿಳೆಯೊಬ್ಬರು ಅವರ ಮಂಚದ ಎದುರೇ ನಿಂತು ಅಳುತ್ತಿದ್ದರು ಬಿಕ್ಕಿ ಬಿಕ್ಕಿ. 'ಇಲ್ಲ, ನಾನಿಲ್ಲಿ ಇರೋಲ್ಲ. ನನ್ನನ್ನು ಮನೆಗೆ ಕರೆದೊಯ್ಯಿ. ನಾನು ನಿನ್ನ ತಾಯಿ ಕಣೋ ಶತ್ರುವಲ್ಲ' ಅನ್ನುತ್ತಿದ್ದರು. ಆಕೆ ಎದುರು ಓರ್ವ ಪೊಲೀಸ್ ನಿಂತಿದ್ದ. ಬಹುಶಃ ಅವನೇ ಇರಬೇಕು ಮಗ. ರಮಾ, ಮಮತಾ, ಉಳಿದ ಸಿಬ್ಬಂದಿ ಅಸಹಾಯಕರಾಗಿ ನೋಡುತ್ತಿದ್ದರು. 'ಏಯ್ ನನ್ನ ಮನೆಯಲ್ಲಿ ನಿನಗೆ ಜಾಗವಿಲ್ಲ. ಇಲ್ಲಿ ಬಿದ್ದಿರು ಮುಚ್ಕೊಂಡು, ನಾನು ಆಗಾಗ ಬಂದು ಹೋಗ್ತಿರ್ತಿನಿ.'

'ನೀನು ಎಷ್ಟು ಸಲ ಕರ್ಕಂಡು ಬಂದ್ರೂ ನಾನು ಹಿಂಗೆ ಮತ್ತೆ ಮತ್ತೆ ಓಡಿ ಬರ್ತೀನಿ. ಇಲ್ಲಂತು ಇರಲ್ಲ. ನಿನ್ನ ಮನೆ ಎಲ್ಲೈತೋ ಮನೆ ಹಾಳ ! ಅದು ನನ್ನ ಮನೆ. ನನ್ನ ಗಂಡನ ಮನೆ.' ಆಕೆ ಕೂಗಿ ಹೇಳಿ ಮುಗಿಸುವಷ್ಟರಲ್ಲಿ ಮಗ ರಪ್ಪನೆತ್ತಿ ಕೆನ್ನೆಗೊಂದು ಬಾರಿಸಿಬಿಟ್ಟ. ಆ ಹೊಡೆತಕ್ಕೆ ಆಕೆ ಹಾರಿ ಬಿದ್ದಳತ್ತ ಚೀರುತ್ತ. ಆದಿತ್ಯ ಮೈಯೊಮ್ಮೆ ರೋಷಾವೇಶದಿಂದ ಅದುರಿತು. ಮಂಚದ ಪಕ್ಕದಲ್ಲಿ ಮೇಜಿನ ಮೇಲಿದ್ದ ಗಾಜಿನ ಲೋಟವನ್ನೆತ್ತಿ ಅವನತ್ತ ಶಕ್ತಿ ಮೀರಿ ಬೀಸಿದರು. ಹಿಂದೆಯೇ ಪೇಪರ್‌ಗಳ

ಮೇಲಿದ್ದ ಪೇಪರ್ ವೇಟನ್ನು ಎತ್ತಿ ಒಗೆದರು ಅವನತ್ತ. ಗುರಿ ತಪ್ಪಲಿಲ್ಲ. ಅವನ ಹಣೆಯೊಡೆದು ರಕ್ತ ಸುರಿಯಿತು. ಹಠಾತ್ತನೆ ಆದ ದಾಳಿಗೆ ತತ್ತರಿಸಿದ ಅವನು. ಎಲ್ಲರು ಬೆಚ್ಚಿಬಿದ್ದರು. ಆದಿತ್ಯನ ಆವೇಶ ಇಡೀ ಕೋಣೆ ಆವರಿಸುತ್ತಿತ್ತು. ಒಡನೆ ಎಚ್ಚೆತ್ತ ಮಗ ಅಮ್ಮನತ್ತ ಧಾವಿಸಿ 'ಬಾ ಹೋಗೋಣ. ಕೊಡು ಲಗೇಜು' ಎಂದ. ಬ್ಯಾಗೆತ್ತಿಕೊಂಡು ಹೊರಟ. ಓಡಿ ಬಂದವಳೇ ಆ ಅಮ್ಮ ಅವನ ಕೈಯಿಂದ ಬ್ಯಾಗ್ ಕಿತ್ತುಕೊಂಡು ಹೋಗಿ ರಮಾಳ ಹಿಂದೆ ನಿಂತುಕೊಂಡಳು. 'ಹೋಗು ನಾ ಬರಲ್ಲ' ಅಂದುಬಿಟ್ಟಳು.

ಮಂಚಕ್ಕೊರಗಿ ಅರ್ಧ ಕೂತು ಕಣ್ಮುಚ್ಚಿದ್ದರು ಆದಿತ್ಯ. ನಿನ್ನೆಯ ಆ ಘಟನೆಯ ನಂತರ ಬಹಳ ಶಾಂತರಾಗಿದ್ದರು. ಅವರ ಮುಖದಲ್ಲಿ ಗೆಲುವು ಸಮಾಧಾನ ಕನವರಿಕೆ ನರಳಾಟ ಗೊಣಗಾಟ ಉಹೂಂ.. ಎಂಥದ್ದೂ ಇಲ್ಲ. ಬೆಳಿಗ್ಗೆ ಒಂದು ಲೋಟ ಟೀ ಕುಡಿದವರು ಹೀಗೆಯೇ ಕಣ್ಮುಚ್ಚಿ ಕುಳಿತಿದ್ದರು. ಇನ್ನು ಎಷ್ಟೊತ್ತು ಹಾಗೇ ಇರುತ್ತಿದ್ದರೋ.. ಯಾರೋ ಮೆಲ್ಲನೆ ಅಲುಗಿಸಿದಂತಾಯ್ತು. ಪಕ್ಕನೆ ಕಣ್ತೆರೆದರು. ಹಾಗೇ ಕಣ್ಣಿಟ್ಟು ಕೂತರು. ನಿನ್ನೆ ಮಗನಿಂದ ಪೆಟ್ಟು ತಿಂದ ಮಹಿಳೆ! ಉಪ್ಪಿಟ್ಟಿದ್ದ ತಟ್ಟೆಯಿಡಿದು ಅವರ ಮುಂದೆ ನಿಂತಿದ್ದಳು! ಮಾತು ಹೊರಡಲಿಲ್ಲ. ಸುಮ್ಮನೆ ನೋಡಿದರು. ಮೆಲ್ಲನೆ ಅವರ ಕೈ ಹಿಡಿದು ತನ್ನತ್ತ ಎಳೆದುಕೊಂಡು ತಟ್ಟೆಯನ್ನು ಮುಂಚಾಚಿ ಅವರ ಕೈಯೊಳಗಿಟ್ಟಳು. ಆದಿತ್ಯ ತಲೆ ಬಗ್ಗಿಸಿ ಆ ತಟ್ಟೆಯನ್ನು ಬಿಗಿಯಾಗಿ ಹಿಡಿದುಕೊಂಡರು. ಉಹೂಂ ಅಬ್ಬಳಿಕೆ, ವಾಕರಿಕೆ ಏನೂ ಇಲ್ಲ. ಅವರಿಗೆ ಹಸಿವಾಗತೊಡಗಿತ್ತು.

❖

(ಸುಧಾ – ಯುಗಾದಿ ವಿಶೇಷಾಂಕ, 2012)

ಪೆಟ್ಟಿಗೆಯಲ್ಲೊಂದು ಜೀವ

ಎಂ.ಎಸ್.ವೇದಾ

ಬಸ್ಸು ಗುಡ್ಡದ ತಿರುವಿನಲ್ಲಿ ಇದ್ದಕ್ಕಿದ್ದಂತೆ ಗಕ್ಕೆಂದು ಬ್ರೇಕ್ ಹಾಕಿಸಿಕೊಂಡು ನಿಂತುಬಿಟ್ಟಿತ್ತು. ಮಾತಾಡಿಕೊಂಡು, ಮೈ ಸಡಿಲ ಬಿಟ್ಟುಕೊಂಡು, ತೂಕಡಿಸಿಕೊಂಡು ಇತರ ಇತ್ಯಾದಿ ಸ್ಥಿತಿಗಳಲ್ಲಿ ಕುಂತುಕೊಂಡಿದ್ದ ಜನರುಗಳು ತಾವು ತಾವು ಇದ್ದ ಸ್ಥಿತಿಗಳಿಗೆ ತಕ್ಕಂಥ ಹೊಡೆತಗಳನ್ನು ತಿಂದುಕೊಂಡು, ನೇರವಾಗಿ ಕುಳಿತು ಗಾಬರಿಯಿಂದ ಉಸಿರೆಳೆದುಕೊಳ್ಳತೊಡಗಿದ್ದರು.

'ಯಾಕಪ್ಪ ಕಂಡಕ್ಟರು, ನಿಮ್ ಡ್ರೈವರ್ ಸಾಹೇಬ್ರು ಏನಾದ್ರು ನಮ್ಮನ್ನೆಲ್ಲಾ ಕೈಲಾಸಕ್ಕೆ ಹೋಲ್‌ಸೇಲಾಗಿ ಕಳಿಸೋ ಪ್ರೋಗ್ರಾಂ ಏನಾರಾ ಹಾಕಂಡು ಬಂದೋರೇನಪ್ಪ?' ಸಾವಿನ ಬಗೆಗೊಂದು ಕವಿತೆ ಕಟ್ಟಲು ಪದಗಳೊಂದಿಗೆ ಜಗ್ಗಾಡುತ್ತಿದ್ದು ಎಚ್ಚರಗೊಂಡಿದ್ದ ಕವಿಗಳೆಂಬುವವರು ಹಿಂದಲ ಸೀಟಿನಿಂದ ತಮ್ಮ ಗೊಗ್ಗರು ಧ್ವನಿ ಹೊರಡಿಸಿದ್ದರು. ಕವಿಗಳಿಂದ ಉದ್ಘಾಟನೆಯಾದದ್ದೇ ಬಸ್ಸಿನ ಸಕಲ ದಿಕ್ಕುಗಳಿಂದಲೂ ಹತ್ತಾರು ಧ್ವನಿಗಳು ತೂರಿ ತೂರಿ ಬರತೊಡಗಿದ್ದವು. ಸಕಲೆಂಟು ಧ್ವನಿಗಳೂ ಸುಖಾಸುಮ್ಮನೆ ಬ್ರೇಕ್ ಹಾಕಿ ಹಾರ್ಟ್ ಅಟ್ಯಾಕ್ ಆಗುವಂತೆ ಮಾಡಿಬಿಟ್ಟ ಚಾಲಕನನ್ನು, ಅಂತಹ ಚಾಲಕನನ್ನು ತನ್ನ ಖುಷಿಗಾಗಿ ತನ್ನ ಮನೆಯಿಂದಲೇ ಬೇಕಂತ ಕರೆದುಕೊಂಡು ಬಂದನೇನೋ ಎಂಬಂತೆ ಬಸ್ಸಿನ ನಿರ್ವಾಹಕರನ್ನು ತಾರಾಮಾರಾ ಬೈಯ್ಯತೊಡಗಿದ್ದವು. 'ಇತ್ತಿತ್ತಲಾಗಿ ಈ ಕಾಕಿ ತೊಟ್ಟವರ ಕಥೆಯೆಲ್ಲ ಹಿಂಗೇ ಅಂತ ಅನ್ನಿಸ್ತದೆ. ಅವರ ಮರ್ಜಿ ಮೇಲೆ ನಮ್ ಬದುಕು ಅನ್ನೋ ಹಾಗೆ ಆಡ್ತಾರೆ. ನಾವೇನಾದ್ರೂ ಪ್ರಶ್ನೆ ಮಾಡಿದೆವಾ? ಬಸ್ ನಿಲ್ಲಿಸಿಬಿಟ್ಟು ಧೀರಂಗ ಅಂತ ಕುಳಿತು ಸ್ಟ್ರೈಕು ಅಂದುಬಿಡ್ತಾರೆ. ಇಂಥ ಜನಗಳ್ನ ಇಟ್ಕೊಂಡು ದೇಶ ಮುಂದುವರೀಬೇಕು ಅಂದ್ರೆ ಎಲ್ಲಿ ಮುಂದುವರಿಬೇಕೂ ಅಂತೀನಿ. ಅದೇ ಅಮೇರಿಕಾದಲ್ಲಿ ನೋಡ್ಬೇಕು..' ಸೂಟುಬುಟು ಹಾಕಿ ಸೆಕೆಯಲ್ಲಿ ಬೆವರುತ್ತಿದ್ದ ಸಭ್ಯ ಮಧ್ಯ ವಯಸ್ಕರು ಬೋಳಾಗುತ್ತಿದ್ದ ತಲೆಯಲ್ಲಿ ಕೂದಲುಗಳ ಹುಡುಕಾಟಕ್ಕೆ ಬೆರಳುಗಳ ಸವಾರಿ ಹೊರಡಿಸುತ್ತಾ ಬಹಳವೇ ನೊಂದುಕೊಂಡು ನುಡಿದಿದ್ದರು. ದೇಶ ಸಕಲ ಅಭಿವೃದ್ಧಿಯನ್ನೂ ದಿನ ಬೆಳಗಾಗುವುದರೊಳಗೆ ಸಾಧಿಸಿ ಬಿಡುತ್ತದೆ. ಅದಕ್ಕೆ ಈ ಚಾಲಕರೇ ಅಡ್ಡ ಗೋಡೆ ಎಂಬೊಂದು ನೋವು ಅವರ ಮಾತಿನಲ್ಲಿ ತೀವ್ರವಾಗಿತ್ತು.

'ಅಯ್ಯೋ ಸುಮ್ನಿರ್ರಿ. ಹಾಗೆಲ್ಲ ಜೋರಾಗಿ ಮಾತಾಡಬೇಡಿ. ಅವ್ರು ಏನ್ ಮಾಡಿದ್ರೂ ನಾವು ಮೂಗ್ ಮುಚ್ಕಂಡು ಇರ್ಬೇಕು. ಬಸ್ಸೇ ಮುಂದಕ್ಕೆ ಓಡಿಸಲ್ಲ

ಅಂದುಬಿಟ್ರೆ ಈ ಎಡಬಿಡಂಗಿ ಜಾಗದಲ್ಲಿ ನಮ್ಮ ಗತಿ ಅಧೋಗತಿ ಆಗಿಬಿಡ್ತದೆ. ನಾಳೆ ಬೆಳಗ್ಗೇನೇ ನನ್ನ ಮಗಳ್ನ ನೋಡಕ್ಕೆ ಗಂಡಿನ ಮನೆಯೋರು ಬರ್ತಿದ್ದಾರೆ. ಆದಷ್ಟು ಬೇಗ ಊರ್ ಸೇರಿಕೊಂಡು ಎಲ್ಲ ಅರೇಂಜ್ ಮಾಡಿಕೋಬೇಕು. ಅನುನಯವಾಗಿ ಏನಾಯ್ತು ಅಂತ ಕೇಳಿಕೊಂಡು ಮುಂದಕ್ಕೆ ಹೋಗೋ ಬಗೆ ಯೋಚ್ನೆ ಮಾಡಬೇಕು.' ಮಧ್ಯಮ ವರ್ಗದ ಸಭ್ಯ ಗೃಹಸ್ಥರೊಬ್ಬರು ಸಲಹೆ ಕೊಟ್ಟಿದ್ದರು. ಬಸ್ಸಿನಲ್ಲಿದ್ದವರಿಗೆಲ್ಲ ಆ ಮಾತು ಒಪ್ಪುವಂಥದ್ದೇ ಆಗಿತ್ತು. 'ಇದೀಗ ಸರಿಯಾದ ಮಾತು. ಅವರ ಕೈಯಲ್ಲಿ ನಮ್ಮ ಗಾಳಿಪಟದ ಸೂತ್ರ ಇದೆ. ಗಂಟಾಗದೆ ಇರೋ ಹಂಗೆ ಬಿಡಿಸಿಕೊಳ್ಳೋದರಲ್ಲಿ ಜಾಣತನ ಇದೆ. ಅಲ್ವಾ?' ಮೂಲೆಯಲ್ಲಿದ್ದ ಹೆಣ್ಣು ಮಗಳೊಬ್ಬಳು ಬಹಳ ನಯವಾಗಿ ಮಾತುಗಳನ್ನಾಡಿ ತನ್ನ ಜಾಣತನ ಮೆರೆದಿದ್ದಳು.

'ಏನಾಯ್ತು ಅಂತ ಕೇಳಿ ಕಂಡಕ್ಟರ್ ಸಾಹೇಬ್ರೆ ನಿಮ್ಮ ಗೆಳೆಯನನ್ನ. ಬಸ್ಸು ಕೆಟ್ಟು ಹೋಗಿದ್ಯಾ ಏನೂಂತ ವಿಚಾರಿಸಿರಪ್ಪಾ'. ಸೂಟುಬೂಟಿನ ಸಭ್ಯ ಮನುಷ್ಯ ಬೆವರು ಒರೆಸಿಕೊಳ್ಳುತ್ತಾ ಪ್ರಯಾಣಿಕರ ಹೆಗಲ ಮೇಲಿನ ಪ್ರಶ್ನೆಯನ್ನು ನಿರ್ವಾಹಕನ ಹೆಗಲ ಮೇಲೆ ಸೂಕ್ಷ್ಮವಾಗಿ ವರ್ಗಾಯಿಸಿದ್ದ.

'ಅಯ್ಯಾ ಅಯ್ಯಾ. ಅದೇನ್ರಿ ಅಷ್ಟ್ ಮಾತಾಡ್ತೀರಿ? ಒಂದು ಸಣ್ಣ ಬ್ರೇಕ್ ಹಾಕಿಬಿಟ್ಟಿದ್ದಕ್ಕೇ ಎಷ್ಟೆಲ್ಲ ಹಾರಾಡ್ತಾರಪ್ಪ ಈ ಜನ. ಸರ್ಕಾರಕ್ಕೆ ಕೇಳ್ರಿ, ವಿಮಾನದಲ್ಲಿ ಗಗನಸಖೀರು ಇದ್ದುಕೊಂಡು ವಿಮಾನ ಏರ್ತಾ ಇದೆ, ಇಳೀತಾ ಇದೇಂತ ಅನೌನ್ಸ್ ಮಾಡ್ತಾರಲ್ಲ ಹಾಗೇ ಬಸ್ಸಿನಲ್ಲೂ ಸಖೀರ್ನ ಇಟ್ಟು ಬ್ರೇಕ್ ಹಾಕ್ತಾ ಇದ್ದಾರೆ, ಸ್ಟಾರ್ಟ್ ಮಾಡ್ತ ಇದ್ದಾರೆ ಅನ್ನೋದನ್ನ ಅನೌನ್ಸ್ ಮಾಡ್ಸಿ ಅಂತ. ಆವಾಗ ಎಲ್ರೂ ಸೇಫಾಗಿರಬೋದು. ಎಂಥ ಸೂಕ್ಷ್ಮವಾಗಿ ಬಿಟ್ರಪ್ಪಾ ಈ ಜನ. ತಲೆ ಒಳಗೇ ಕೈ ಹಾಕಿಬಿಡ್ತಾರೆ' ಕಂಡಕ್ಟರನ ಅಸಹನೆ ಅಪಾರವಾಗಿತ್ತು.

'ನೀವು ಅಷ್ಟೆಲ್ಲ ಬೇಜಾರು ಮಾಡಿಕೊಳ್ಳಬೇಡಿ. ಕತ್ತಲಾಗಿಬಿಡುತ್ತೆ. ಊರು ಸೇರ್ಕೋಬೇಕು. ಅದೇನೂಂತ ವಿಚಾರಿಸಿಪ್ಪಾ', ಯುವತಿಯೊಬ್ಬಳು ತನ್ನ ಒಂಟಿತನ, ಕತ್ತಲುಗಳನ್ನು ನೆನೆದು ಆರ್ತನಾದ ಹೊರಡಿಸಿದ್ದಳು.

'ಏನಾಯ್ತು ದೊರೆ. ಬಸ್‌ಗೇನಾದ್ರೂ ಪ್ರಾಬ್ಲೆಮ್ಮಾ?' ಬೆಣ್ಣೆಯಲ್ಲಿ ಕೂದಲು ತೆಗೆಯುವಂತೆ ಮೃದುವಾಗಿ ನುಡಿಯುತ್ತಾ ಚಾಲಕನ ಬಳಿ ಸಾರಿದ್ದ ನಿರ್ವಾಹಕ. ಅವನಲ್ಲಿಯೂ ಗಾಬರಿ ಇತ್ತು. ಮೊದಲೇ ಉರಿಸಿಂಗಿಯಂತಾಡುವ ಚಾಲಕ ! ಪ್ರಯಾಣಿಕರ ಮಾತುಗಳು ಅವನ ಬಿ.ಪಿ.ಯನ್ನು ಎಷ್ಟು ಏರಿಸಿದೆಯೋ? ಅವನನ್ನು ನುಡಿಸಿ ತಾನು ಇನ್ಯಾವ ಸ್ಥಿತಿಗೈಯಬೇಕೋ? ಇನ್ನು ನನಗೇನು ಕಾದಿದೆಯೋ? ಹಲವಾರು ಆತಂಕಗಳು ಅವನ ತಲೆಯಲ್ಲಿ ತಕತಕ ಕುಣಿದಾಡಿದ್ದವು.

ಬಸ್ಸಿನಲ್ಲಿದ್ದವರೆಲ್ಲರ ಪುಣ್ಯವೊ? ಪವಾಡವೊ? ಬಸ್ಸಿನೊಳಗೆ ಆ ತನಕ ನಡೆದ ಮಾತುಕತೆಗಳು, ಹಾರಾಟ, ತೂರಾಟಗಳು ಚಾಲಕನಿಗೆ ತಲುಪಿದಂತೆ

ಕಂಡುಬಂದಿರಲಿಲ್ಲ. ಬ್ರೇಕ್ ಹಾಕಿದಾತ ಸ್ಟೇರಿಂಗಿನ ಮೇಲೇ ತನ್ನ ಅರ್ಧ ದೇಹವ ಒರಗಿಸಿ ತನ್ನ ಎಡಗಡೆಗೆ ಬಿಟ್ಟ ಕಣ್ಣು ಬಿಟ್ಟಂತೆ ಧ್ಯಾನಸ್ಥ ಸ್ಥಿತಿಯಲ್ಲಿ ಕುಂತುಬಿಟ್ಟಿದ್ದ. ನಿರ್ವಾಹಕನಿಗೆ ಗಾಬರಿಯಾಗಿತ್ತು. ದೇವರೋ ದೆವ್ವವೋ ಮೈ ಮೇಲೆ ಬಂದುಬಿಟ್ಟಿರಬಹುದೇ? ಕಿಟಕಿಯಿಂದ ಆಚೆ ದೃಷ್ಟಿ ಹರಿಸಿದ್ದ. ಸಣ್ಣ ಸಣ್ಣ ಬೆಟ್ಟಗುಡ್ಡಗಳನಾಂತು ನಿರ್ಜನವಾಗಿದ್ದ ಬಯಲೋ ಬಯಲು. ಏನೋ ಬಂದು ಮೆಟ್ಟಿಕೊಂಡು ಬಿಡಬಹುದೆಂಬ ಭಯ ಹುಟ್ಟಿಸುವ ವಾತಾವರಣ.

'ಯಾಕ್ ಗುರುಗಳೇ, ಹೊರಡುವಾಗ ಎಲ್ಲ ಸರೀನೇ ಇತ್ತಲ್ಲ, ಇದ್ದಕ್ಕಿದ್ದಂಗೆ ಏನಾಯ್ತು ಅಂತೀನಿ' ನಿರ್ವಾಹಕನ ಬಾಯಿ ಕೊಂಚ ಎಳೆದಾಡುತ್ತಿದ್ದರೂ ಕಣ್ಣುಗಳು ಚುರುಕಾಗಿ ಕಾರ್ಯನಿರ್ವಹಿಸಿದವು. ಚಾಲಕನ ಕಣ್ಣುಗಳ ನೋಟದ ದಿಕ್ಕನ್ನೇ ಹಿಡಕೊಂಡು ತುದಿ ಮುಟ್ಟಿದಾಗ ದೊಡ್ಡದೊಂದು ಪೆಟ್ಟಿಗೆಯೊಂದನ್ನು ಇಟ್ಟುಕೊಂಡು, ಅದಕ್ಕೇ ಆತುಕೊಂಡಂತೆ ಮೈಚಾಚಿ ಕುಂತಿದ್ದ ವ್ಯಕ್ತಿಯೊಂದರ ಅನುಭವ ದೊರೆಕೊಂಡಿತ್ತು.

ಹೌದಲ್ಲ. ಬಸ್ಸು ಅದಾಗಲೇ ನಿಲ್ದಾಣದಿಂದ ಹೊರಬಂದು, ಆ ಭಯಂಕರ ಟ್ರಾಫಿಕ್ಕಿನೊಳಗೆ ಸಿಕ್ಕಿ ಹಾಕಿಕೊಂಡು ಆಮೆಯಂತೆ ತೆವಳುತ್ತಿರುವಾಗ ತಲೆಯ ಮೇಲೆ ಆ ಪೆಟ್ಟಿಗೆಯನ್ನು ಪ್ರಯಾಸದಿಂದ ಹೊತ್ತುಕೊಂಡು, ಆದರೂ ಪ್ರಯಾಸದ ಹಂಗಿಲ್ಲದೆ ದೇಹದ ಕಸುವನ್ನೆಲ್ಲ ಕಾಲುಗಳಿಗೆ ಹರಿಸಿ ಜನ ಜಂಗುಳಿಯ ಸೀಳಿಕೊಂಡು ಓಡಿಕೊಳ್ಳುತ್ತಾ ಬಂದಿದ್ದ ಮಧ್ಯ ವಯಸ್ಕ ಗಂಡಸು. ಮೊದಲಿಗೆ ಒಳ್ಳೆಯದೇ ಇದ್ದಿರಬಹುದಾದ ಮಾಸಲು ಪಂಚೆ, ಮಾಸಲು ಷರಟು, ಹೆಗಲ ಮೇಲಿದ್ದ ಟವೆಲ್ಲು, ಬಸವಳಿದಿದ್ದ ಮುಖ.

'ಬೇಗ ಬೇಗ ಬಂದು ಬಸ್ಸು ಸ್ಟ್ಯಾಂಡಿಂದ ಹೊರಡೋಕೆ ಮುಂಚೇನೇ ಹತ್ತಿಕೊಳ್ಳಲಿಕ್ಕೇ ಏನ್ ಕಷ್ಟ ಗೌಡ್ರೆ? ಇಷ್ಟು ಭಾರಾ ಇರಾ ಟ್ರಂಕ್ ಬೇರೆ ತಲೆ ಮೇಲೆ.. ರಾಮ.. ರಾಮಾ.. ತಡೀರಿ ಗುರುಗಳೇ.. ಗೌಡ್ರು ಒಂಚೂರು ಹತ್ತಿಕೊಂಡು ಬಿಡ್ಲಿ.' ನಿರ್ವಾಹಕನು ಚಾಲಕನಿಗೆ ನುಡಿಯುತ್ತಾ, ಪೆಟ್ಟಿಗೆಗೊಂದು ಕೈಕೊಟ್ಟು ಅಂತೂ ಇಂತೂ ಬಸ್ಸಿನೊಳಗೆ ತೂರಿಸಿಕೊಂಡಿದ್ದ. ಟಿಕೇಟು ಹರಿದುಕೊಡುವಾಗಲೂ ಆ ವ್ಯಕ್ತಿಯನ್ನು ಕುರಿತಂತೆ ವಿಶೇಷ ಆಸಕ್ತಿ ಏನೂ ಮೂಡಿರಲಿಲ್ಲ. ಚಾಲಕ ಮಹಾಶಯರ ಚೂಪು ನೋಟ ಆ ವ್ಯಕ್ತಿಯ ಮೇಲೇ ಇದೆ ಎಂದರೆ, ಆತ ಅಚಾನಕ್ಕಾಗಿ ಬ್ರೇಕ್ ಹಾಕಲು ಆ ವ್ಯಕ್ತಿಯೇ ಕಾರಣವಾಗಿರಬಹುದು. ಹಾಗಾದರೆ ಇದೀಗ ತಾನೂ ಗಮನಹರಿಸಲೇಬೇಕಿದೆ. ಆ ವ್ಯಕ್ತಿಯಾದರೋ ಇವರ್‍ಯಾರ ಅರಿವೂ ತನಗಿಲ್ಲವೆಂಬಂತೆ,

ಪೆಟ್ಟಿಗೆಯಲ್ಲಿ ತನ್ನ ಜೀವವೇ ಇದೆಯೇನೋ ಎಂದುಕೊಂಡಂತೆ ಅದರ ಮೇಲೇ ಎರಡೂ ಕೈಗಳನ್ನಾತು ನಿಸ್ತೇಜ ನೋಟವನ್ನು ಬಿಸಾಕುತ್ತಾ ಕುಳಿತಿದ್ದಾರೆ.

'ಏನ್ ಗುರುಗಳೇ ಏನಾಯ್ತು ಅಂತಿದ್ದೀನಿ. ಈ ಗೌಡ್ರು ಏನಾದ್ರೂ ಅಂದ್ರಾ' ನಿರ್ವಾಹಕ, ಚಾಲಕನ ಬೆನ್ನ ಮೇಲೆ ಕೈ ಇಟ್ಟು ಸಮಾಧಾನಿಸುವಂತೆ ಸವರುತ್ತಾ ನುಡಿದಿದ್ದ. ಬಸ್ಸಿನಲ್ಲಿದ್ದವರೆಲ್ಲರ ಚಿತ್ರಗಳು ಇದೀಗ ಯಾರೂ ಗಮನಿಸದಿದ್ದ ಆ ವ್ಯಕ್ತಿಯತ್ತ ಹರಿದಿದ್ದವು.

ಬಸ್ಸಿನಲ್ಲಿ ನಡೆಯುತ್ತಿದ್ದ ನಾಟಕ ಎರಡನೇ ಅಂಕ ಪ್ರವೇಶಿಸಿತ್ತು.

'ಯಾರ್‍ಯಾರೋ ಎಲ್ಲೆಲ್ಲಿಂದಾನೋ ಪ್ರಾರಬ್ಧಗಳ ತರ ವಕ್ರಿಸಿಕೊಂಡು ಬಿಡ್ತಾರೆ. ನಮ್ ಟೈಮ್ನೆಲ್ಲಾ ಕರಾಬ್ ಮಾಡಿಬಿಡ್ತಾರೆ.' ಇಂಟರ್‌ವ್ಯೂ ಎದುರಿಸಲು ಪಯಣ ಮಾಡುತ್ತಿದ್ದ ಯುವಕ ಕಿಟಕಿಯಾಚೆ ಕಾಣುತ್ತಿದ್ದ ದಿಗಂತದತ್ತ ನೋಟ ನೆಟ್ಟು ಗಡ್ಡವನ್ನು ಪರಪರ ಕೆರೆದುಕೊಳ್ಳುತ್ತಾ ಸ್ವಗತವಾಡಿಕೊಂಡಿದ್ದ. 'ನಮ್ ನಮ್ ಬದ್ಕು ನಮ್ದೇ ಆಗಿರಲ್ಲ. ಯಾರ್‍ಯಾರ ಕೈಗೋ ಹೋಗಿಬಿಡುತ್ತೆ. ಎಲ್ಲೆಲ್ಲಿ ಯಾರ್‍ಯಾರು ಹೇಗ್ಹೇಗೆ ನಮ್ ಹಣೇಬರಾ ಕೆತ್ತುತಾರೋ, ಅಳಿಸಿಬಿಡ್ತಾರೋ ಆ ಭಗವಂತನೊಬ್ಬನಿಗೇ ಗೊತ್ತು' ಬ್ರಹ್ಮಾಂಡ ಗುರುವಿನ ಶಿಷ್ಯನಂತಿದ್ದವ ಹಪಹಪಿಸಿದ್ದ.

ತನ್ನ ಸುತ್ತಮುತ್ತ ಜನ ಜಮಾಯಿಸಿ ಏನೆಲ್ಲ ಮಾತುಗಳು ತನ್ನ ಕುರಿತೇ ನಡೆಯುತ್ತಿದ್ದರೂ ಆ ವ್ಯಕ್ತಿಯ ಕೂತ ಭಂಗಿ, ಮುಖದ ಭಾವ ಬದಲಾಗಿರಲಿಲ್ಲ. ಚಾಲಕ, ನಿರ್ವಾಹಕನಿಗೆ ಕಣ್ಸನ್ನೆ ಮಾಡಿದ. ಇಬ್ಬರೂ ಬಸ್ಸಿಂದ ಕೆಳಗಿಳಿದು ಬಿಟ್ಟಿದ್ದರು. ವಂದಷ್ಟು ದೂರ ನಡೆದು ಹೋದವರು ರಸ್ತೆಯ ಪಕ್ಕನಿಂತು ಗಿಡಗಳ ಬುಡಕ್ಕೆ ಮೂತ್ರ ವಿಸರ್ಜಿಸಿ ಸಡಿಲವಾದರು. ಚಾಲಕ ಸಿಗರೇಟು ಹಚ್ಚಿದ. ಬಾಯಿಂದ ಹೊರಟ ಹೊಗೆಯಲೆಯನ್ನೇ ತಲ್ಲೀನನಾಗಿ ನೋಡುತ್ತಾ 'ಆ ಟ್ರಂಕಿನಲ್ಲಿ ಏನೋ ಇರಬಾರದ್ದು ಇದೆ ಅಂತ ಅನ್ನಿಸ್ತಾ ಇದೆ ನಂಗೆ' ಕುರುಚಲು ಗಡ್ಡ ನೀವುತ್ತಾ ನಿಗೂಢವಾಗಿ ನುಡಿದಿದ್ದ. 'ಅಲ್ಲೇ ಹೇಳಿಬಿಡೋದಲ್ವಾ ಗುರುವೇ. ಕೇಳಿಬಿಟ್ಟಿದ್ದರೆ ಆಯ್ತಿತ್ತು. ಆದ್ರೂ ಅಬ್ಬಾಪಾರಿ ಇದ್ದಂಗಿದ್ದಾನೆ. ಏನಿರಾಕೆ ತಾನೇ ಸಾಧ್ಯ ಹೇಳು'. ನಿರ್ವಾಹಕ ಸಂದೇಹಕ್ಕೆ ಬಿದ್ದಿದ್ದ.

'ನೀನು ಸರ್‍ಯಾಗಿ ಗಮನಿಸಿಲ್ಲ. ಹೊಸಾ ಟ್ರಂಕು. ಅವನು ನೋಡಿದ್ರೆ ಹಳೇ ಮನುಷ್ಯ ಇದ್ದಂಗಿದ್ದಾನೆ. ಬಸ್ಸು ಹತ್ತಿದಾಗಿನಿಂದ ಈ ತನಕ ಕೂತ ಭಂಗಿ ಅಲ್ಲಾಡಿಸಿಲ್ಲ. ಟ್ರಂಕೇ ತನ್ನ ಬದುಕು ಅನ್ನೋ ಹಾಗೆ ತಬ್ಕೊಂಡು ಕೂತಿದ್ದಾನೆ. ಅವನ ಸುತ್ತಲಿನ ಯಾವ ಪರಿವೂ ಅವನಿಗಿಲ್ಲ' ಚಾಲಕ ವಿವರಿಸಿದ್ದ.

'ಕಳ್ಳ ಮಾಲು ಏನಾದ್ರೂ ಸಾಗಿಸ್ತಾ ಇದ್ದಾನೆ ಅಂತೀಯಾ.. ಅವನ್ನ ನೋಡಿದ್ರೆ ಹಂಗನ್ನಿಸ್ತದಾ?'

'ಕಳ್ಳ ಮಾಲು ಅಂತಾನೆ ಅಲ್ಲ. ಏನಾದ್ರೂ ಆಗಿರಬೋದು. ಹಣ, ಪಿಸ್ತೂಲು, ಡ್ರಗ್ಸ್.. ಇವನೇ ಕಳ್ಳ ಅಂತಲ್ಲ. ಇಂಥೋನ್ನ ಮುಂದಿಟ್ಟುಕೊಂಡು ಬೇರೆ ಯಾರೋ ಏನೋ ಸಾಗಿಸಾಕೆ ಪ್ರಯತ್ನ ಮಾಡ್ತಾ ಇರಬೋದು. ಇಲ್ಲೇ ಇದು ತೀರ್ಮಾನವಾಗಿ ಬಿಡ್ಲಿ. ಇನ್ನು ಊರು ತಲುಪಿ, ಪೋಲಿಸು ಇಲ್ಲ ಇವನ ಬಾಸು – ಯಾರ್ಗೇ ಎದುರಾಗೋದೂ ಕಷ್ಟವೇ.. ಯಾವನಿಗೆ ಬೇಕಪ್ಪಾ ಇಲ್ಲದ ತೊಂದ್ರೆ.'

'ಈಗ್ಲೇ ಪೊಲೀಸಿನೋರ್ಗೆ ಒಂದ್ ಫೋನ್ ಹಚ್ಚಿಬಿಡಲಾ'

'ಬೇಡ ಮಾರಾಯ. ಫಸ್ಟು ನಾವ್ ಏನೂಂತ ತಿಳಿದುಕೊಳ್ಳುವಾ' ಇಬ್ಬರೂ ಮರಳಿ ಬಸ್ಸಿನ ಕಡೆ ಬಂದಿದ್ದರು.

'ಇವ್ರು ಉಚ್ಚೆ ಹುಯ್ಯೋಕೆ, ಸಿಗರೇಟು ಸೇದೋದಿಕ್ಕೆ ಇದೊಂದು ನೆಪ. ಪಾಪನ ಮನುಷ್ಯನ ಕಡೆ ನಮ್ಮ ಗಮನ ತಿರುಗಿಸಿ ತಾವು ಹೋಗಿ ಎಲ್ಲ ಮುಗಿಸಿಕೊಂಡು ಬಂದ್ರು. ಹಂಗೇ ಹೋಗಿದ್ರೆ ಬ್ಯಾಡಾ ಅಂತಿದ್ದೇವೇನೋ'. ಸಭ್ಯ ಗೃಹಸ್ಥರು ಬೇಸರಿಸಿಕೊಂಡಾಗ ಹತ್ತಾರು ಧ್ವನಿಗಳು ಅವರಿಗೆ ಸಾಥ್ ಕೊಟ್ಟಿದ್ದವು.

'ಎಲ್ರೂ ಸ್ವಲ್ಪ ಬಾಯಿ ಮುಚ್ಕಂಡಿದ್ರೆ ಎಲ್ಲರಿಗೂ ಒಳ್ಳೇದು.' ಮಕ್ಕಳಿಗೆ ಗದರುವ ಮೇಷ್ಟ್ರಂತೆ ಗದರಿಸಿದ್ದ ನಿರ್ವಾಹಕ.

'ಎಲ್ಲಿ ಯಜಮಾನ್ರೆ ಸರಿಯಾಗಿ ಕೂತುಕೊಳ್ಳಿ. ಹೇ, ಸ್ವಲ್ಪ ಜಾಗ ಮಾಡಿಕೊಡಬಾರದೇನ್ರಯ್ಯ. ಕೆಳಗೇ ಕೂರಿಸಿದ್ದೀರಲ್ಲ. ಪೆಟ್ಟಿಗೆಯಾಗೆ ಏನ್ ಇಟ್ಟಿದ್ದೀರಿ. ಬೇಗ ತೆಗೆದು ಸ್ವಲ್ಪ ತೋರ್ಸಿ. ಅದೇನಿದೆ ನೋಡಾಣ. ಚಾಲಕ ಮಾತಾಡುತ್ತ ಏಕ್‌ದಂ ಪೆಟ್ಟಿಗೆಯ ಚಿಲಕದತ್ತ ಕೈ ಹಾಕಿದ್ರೆ ಆ ವ್ಯಕ್ತಿ ಪೆಟ್ಟಿಗೆಯ ಮೇಲೆ ಕುಮಟಿ ಬಿದ್ದಿದ್ದ. ಅವನ ಮುಖ ವಿವರ್ಣವಾಗಿತ್ತು. ಲೋಕದೊಳಗೊಂದು ಲೋಕ ಕಟ್ಟಿಕೊಂಡು ಅದಾವ ಭಾವದಲ್ಲಿ ಮುಳುಗಿ ಹೋಗಿತ್ತೋ ಆ ಜೀವ ! ಚಾಲಕನ ಮಾತು ಮತ್ತು ಕ್ರಿಯೆಗಳಿಂದ ಆ ವ್ಯಕ್ತಿ ವಿದ್ಯುತ್ ಹೊಡೆಸಿಕೊಂಡವನಂತಾಗಿದ್ದ. ಆದರೆ ಆ ನೋಟ?! ನೋವು.. ದುಃಖ.. ಹತಾಶೆ.. ವಿಷಾದ..?! ಸುನಾಮಿ ಉಗುಳುವ ಕ್ಷಣದ ಸಮುದ್ರದಂತೆ. ಬಡಬಾನಲ ಹೊರಚೆಲ್ಲಲು ಕಾದಿದ್ದ ಸಾಗರದಂತೆ.. ಆಳ.. ಆಳ.. ಕಣ್ಣುಗಳು.'

'ನೋಡ್ರಲ್ಲಿ. ಇವರಿಬ್ಬರೂ ಹೊಸ ನಾಟ್ಕ ಶುರು ಹಚ್ಚಿಕೊಂಡ ಹಾಗೆ ಕಾಣ್ತಾ ಇದೆ. ಇವ್ರು ಇವತ್ತಿಗೆ ಬಸ್ಸು ಸ್ಟಾರ್ಟ್ ಮಾಡಲ್ಲ.' ಕನ್ಯಾಪಿತೃ ಅಸಹನೆಯಿಂದ ಚಡಪಡಿಸತೊಡಗಿದ್ದರು.

'ಅದೇನೋ ಆ ಪೆಟ್ಗೆ ತೆರೆದು ತೋರಿಸಿಬಿಡು ಮಹರಾಯ, ಇವರದೆಲ್ಲಾ ಇಂಥಾ ಉಸಾಬರಿನೇ. ಅಬ್ಬೇಪಾರಿಗಳೇ ಇವ್ರ ಕಣ್ಣಿಗೆ ಕಾಣಿಸೋದು. ಹಗಲು ಹೊತ್ತಿನಲ್ಲೇ ಕೋಟಿ ಕೋಟಿ ಕೊಳ್ಳೆ ಕೊಡೀತಾ ಇದ್ದಾರೆ. ಪಕ್ಕದ ಮನೇಲೇ

ಭಯೋತ್ಪಾದಕರನ್ನ ಇಟ್ಟುಕೊಂಡಿರ್ತಾರೆ. ಮನೇ ಒಳಗೇ ಕೊಲೆಗಾರರನ್ನ ಇಟ್ಟುಕೊಂಡು ಗೊತ್ತಿಲ್ಲದೇ ಬದುಕಿರ್ತಾರೆ. ಅದ್ಯಾವುದೂ ಇವರಿಗೆ ಅನುಮಾನ ತರಿಸಲ್ಲ. ಇಂಥೋರ್ನ ನೋಡಿದಾಗ್ಲೆ ಇವರಿಗೆಲ್ಲ ಸಿಬಿಐ ಆಫಿಸರ್‌ಗಳಾಗಿ ಬಿಡೋ ಉಮೇದು ಹತ್ತಿಕೊಂಡು ಬಿಡ್ತದೆ.' ಗಾಂಧಿ ಟೋಪಿ ಧರಿಸಿದ್ದ ವೃದ್ಧರು ಬಹಳವೇ ನೊಂದುಕೊಂಡಂತೆ ನುಡಿದಿದ್ದರು. ಆದರೆ ಅದನ್ನಾರೂ ಕೇಳಿಸಿಕೊಳ್ಳಲಿಲ್ಲ.

ಬಸ್ಸಿನಲ್ಲಿದ್ದವರೆಲ್ಲ ಆ ವ್ಯಕ್ತಿಯೆಡೆಗೆ ಮುತ್ತಿಗೆ ಹಾಕಿದ್ದರು. ತಲೆಗೊಂದು ಮಾತನಾಡಲಾರಂಭಿಸಿದ್ದರು. ಯಾವ ಹುತ್ತದಲ್ಲಿ ಯಾವ ಹಾವಿದೆಯೋ? ತಣ್ಣೀರನ್ನೇ ಆರಿಸಿಕೊಂಡು ಕುಡಿಯುವ ಕಾಲವಿದು. ವೇಷಕ್ಕೂ ಉದ್ದೇಶಕ್ಕೂ ಈ ದಿನಗಳಲ್ಲಿ ಸಂಬಂಧವೇ ಇರುವುದಿಲ್ಲ. ಯಾವುದನ್ನೂ ನಾವು 'ನೆಗ್ಲಿಜೆನ್ಸ್' ಮಾಡಬಾರದು. ಹಾಗಾದರೆ ಹೂವೇ ಹಾವಾಗಿ ಬಿಡುತ್ತದೆ ಇತ್ಯಾದಿ ಇತ್ಯಾದಿ. ಸಾವಿನ ಕುರಿತು ನಾಳಿನ ಕವಿಗೋಷ್ಠಿಯಲ್ಲಿ ಕವಿತೆ ಓದಲು ಕಾವ್ಯ ಹೊಸೆಯುತ್ತಿದ್ದ ಯುವ ಕವಿಗಳು ಇದ್ದಕ್ಕಿದ್ದಂತೆ ಪತ್ತೇದಾರಿ ಕಾದಂಬರಿಗಳ ಡಿಟೆಕ್ಟೀವ್‌ಗಳಾಗಿ ಬಿಟ್ಟಿದ್ದರು. ಏಳು ಹೆಡೆಯ ಸರ್ಪವಿರಬಹುದೇ? ಎ.ಕೆ. ೪೭ ಬಂದೂಕುಗಳಿರ ಬಹುದೇ? ಕಂತೆ ಕಂತೆ ನೋಟುಗಳು ಇರಬಹುದೇ? ಹೆಣವೊಂದನ್ನು ತುಂಡು ತುಂಡು ಮಾಡಿ ನೀಟಾಗಿ ಜೋಡಿಸಿಟ್ಟಿರಬಹುದೇ?!

'ಹೇಳಿ ಬಿಡಿ ಗೌಡರೆ, ಪೆಟ್ಟಿಗೆಯಾಗೆ ಏನಿದೇಂತ. ಕ್ರೈಮ್‌ನ ಮುಚ್ಚಿಡೋದೂ ಒಂದು ಕ್ರೈಮೇ.' ಮುಂದೆ ಬಾಗಿ ವಕೀಲರಂತೆ ನುಡಿದಿದ್ದರು. ಅವರು ಹೇಳಿದ್ದರಲ್ಲಿ ಅರ್ಧ ಅರ್ಥವಾಗಿತ್ತು. ಇನ್ನರ್ಧ ಅರ್ಥವಾಗಿರಲಿಲ್ಲ.

'ಇದರಾಗೆ ನನ್ನ ಜೀವ ಅದೆ. ತೆಗಿಯಾಕೆ ಮಾತ್ರ ಹೇಳಬೇಡಿ ನನ್ನಪ್ಪಗೋಳ'. ಆರ್ತನಾದ, ಗದ್ಗದ ಧ್ವನಿ ಆಳದಿಂದ ಹೊರ ಹೊಮ್ಮಿತ್ತು.

'ನೋಡಿದ್ಯಾ..' ಎಂಬಂತೆ ಚಾಲಕ, ನಿರ್ವಾಹಕನತ್ತ ಕಣ್ಣು ಮಿಟುಕಿಸಿ 'ನಿನ್ನ ಜೀವ ಅದೋ, ಅಥವಾ ಜೀವಾ ತೆಗಿಯಾ ವಸ್ತುಗಳಿದ್ಯೋ? ಇಲ್ಲ ಜೀವಾ ತೆಗೆದು ಹೆಣ ಮಾಡಿ ಸಾಗಿಸ್ತಾ ಇದ್ದೀಯೋ? ನಮ್ಮ ಜನ ಸಿನಿಮಾ, ಟಿವಿ ನೋಡಿ ನೋಡಿ ಬಾಳ ಬುದ್ಧಿವಂತ್ರು ಅಂದ್ಕೊಂಡು ಇವ್ನೆಲ್ಲ ಮಾಡಿಬಿಡ್ತಾ ಇದ್ದಾರೆ. ತೆಗಿ ತೆಗಿ' ಬಲವಂತವಾಗಿ ತೆಗೆಯ ಹೋಗಿದ್ದ. 'ಮುಟ್ಟಕ್ ಬರಬ್ಯಾಡ್ರಿ. ಅದರಾಗೆ ನನ್ನ ಜೀವಾ ಅದೆ.' ಸಿಡಿಲಿನಂಗೆ ಅರಚಿದ್ದ ಆ ವ್ಯಕ್ತಿ. ಅವನ ಸುತ್ತ ಕವಿದು ನಿಂತಿದ್ದ ಜನರ ಜಂಘಾಬಲವೇ ಉಡುಗಿ ಹೋಗಿತ್ತು. 'ಇಂಥಾ ಜನಗಳಲ್ಲಿ ಅದೆಂಥ ಶಕ್ತಿ ಇರುತ್ತೆ ಮಾರಾಯರೇ..' ಸಭ್ಯ ವ್ಯಕ್ತಿ ಬೊಬ್ಬೆಗೆರೆಯುತ್ತಾ ಮೌನದ ಕಣಿವೆಗೆ ಸಣ್ಣದೊಂದು ಕಲ್ಲು ಹೊಡೆಯುವ ಕಾರ್ಯ ನಡೆಸಿದ್ದ.

ಅಲ್ಲಿಂದಾಚೆಗೆ ಎಲ್ಲರೂ ಆತನನ್ನು ಕೊಲೆಗಡುಕನೆಂದೇ ಭಾವಿಸಿ ಮಾತನಾಡತೊಡಗಿದ್ದರು. 'ಅಲ್ಲಿರೋದು ನಿನ್ನ ಜೀವಾನೆ ಹೌದು. ಅದ ನಮ್ಗೂ

ಸ್ವಲ್ಪ ತೋರಿಸಿಬಿಡು ಗುರುವೇ' ನಿರ್ವಾಹಕ ಅನುನಯದ ಧ್ವನಿ ಹೊರಡಿಸಿದ್ದ. 'ನನ್ನ ಜೀವಾ ನೋಡಿ ನೀ ಮಾಡಾಂಥದ್ದು ಏನದೆ ಅಪ್ಪಾ' ಅಷ್ಟೇ ಅನುನಯದ ಧ್ವನಿಯನ್ನು ಆ ವ್ಯಕ್ತಿ ಹೊರಡಿಸಿದ್ದ.

ಎಷ್ಟು ಜನ ಏನೇ ಮಾತನಾಡಿದರೂ ಬಡಪೆಟ್ಟಿಗೆ, ಪೆಟ್ಟಿಗೆಯನ್ನು ತೆರೆಯಲು ಆತ ಸುತರಾಂ ಒಪ್ಪಿರಲಿಲ್ಲ. ತನ್ನ ಭಂಗಿಯನ್ನು ಬದಲಿಸಿರಲಿಲ್ಲ. ಒಬ್ಬ ಅಬ್ಬೇಪಾರಿ ಅದೆಷ್ಟು ಜನರನ್ನು ಯಾಮಾರಿಸಿ ಸೋಲಿನ ಭಾವದಲ್ಲಿ ಮುಳುಗಿಸುತ್ತಿದ್ದಾನಲ್ಲ! ಅವನ ತಾಕತ್ತು ಎಷ್ಟಿರಬಹುದು. ಪ್ರಾಯಶಃ ಅವನ ಬೆನ್ನು ಕಾಯಲು ಮುಂಬೈಯ ಭೂಗತ ಲೋಕದ ದೊರೆಗಳೇ ಇರಬೇಕು ಎಂಬ ಆಲೋಚನೆ ಬರುತ್ತಿದ್ದಂತೆಯೇ ಎಲ್ಲರ ತೊಳ್ಳೆಗಳೂ ನಡುಗತೊಡಗಿದ್ದವು. ಅವನ ಕಡೆಯ ನಾಲ್ಕು ಮಂದಿ ಬಸ್ಸಿನೊಳಗೇ ಇದ್ದರೆ?! ಎಲ್ಲರೂ ಮೌನಕ್ಕೆ ಶರಣಾಗಿಬಿಟ್ಟಿದ್ದರು.

ಚಾಲಕನಿಗೆ ಆ ಯೋಚನೆ ಬರಲಿಲ್ಲವಾಗಿ ಕೆಳಗಿಳಿದು ಕಲ್ಲೊಂದನ್ನು ಕಷ್ಟಪಟ್ಟು ಎತ್ತಿಕೊಂಡು ಬಂದು ಪೆಟ್ಟಿಗೆಯನ್ನು ಹೊಡೆಯಲು ಮೇಲೆತ್ತಿ ನಿಂತಿದ್ದ. ಆ ವ್ಯಕ್ತಿ ಗಾಬರಿಯಾಗಿದ್ದನೀಗ. ಜೀವ ಹೋದಂಥ ಭಾವ ! 'ನನ್ನ ಜೀವಕ್ಕೆ ನೋಯಬೇಡ ನನ್ನಪ್ಪಾ. ಪೆಟ್ಟಿಗೇನಾ ಕಲ್ಲಲ್ಲಿ ವಡೀಬೇಡಾ. ನಾನೇ, ನಾನೇ ತೆಗಿತೀನಿ' ವ್ಯಕ್ತಿ ಆತುರಾತುರವಾಗಿ ಚಡ್ಡಿ ಜೇಬಿನಿಂದ ಕೀ ತೆಗೆದು ಪೆಟ್ಟಿಗೆಯ ಬೀಗ ತೆಗೆಯತೊಡಗಿದ್ದ. ಎಲ್ಲರ ಕಂಗಳೂ ಅದರೊಳಗಿನಿಂದ ಬರಬಹುದಾದ ಪೆಡಂಭೂತವೊಂದನ್ನು ನೋಡಲು ಪ್ರಾಣ ಹೊಗುವಂಥ ಗಾಬರಿ, ತಲ್ಲಣ, ಆತಂಕ, ಕಳವಳಗಳನ್ನೊಳಗೊಂಡಂತೆ ಬರಗೆಟ್ಟಂತೆ ತೆರೆದಿದ್ದವು.

ಆ ವ್ಯಕ್ತಿಯ ಇಡೀ ದೇಹ ಗಡಗಡ ನಡುಗುತ್ತಿದ್ದವು. ಆದರೆ ಧ್ವನಿ ಗಟ್ಟಿಯಾಗಿತ್ತು. ನಡುಗುವ ಕೈಗಳಿಂದ ಬೀಗದ ಎಸಳನ್ನು ರಂಧ್ರಕ್ಕೆ ಸೇರಿಸಲು ಕಷ್ಟಪಡುತ್ತಾ ವಾಚಾಳಿಯಂತೆ ನುಡಿಯತೊಡಗಿದ್ದ.

'ನನ್ನ ಜೀವ ಇಲ್ಲಿ ಮಲಗದೆ, ಇದ್ದಕ್ಕಿದ್ದಂಗೆ ವಂದಿನ – ಆಟ ಆಡ್ಕಂಡು ಚೆಂದಗಂದನಾಗಿತ್ತು ಆ ಜೀವಾ ಬಿದ್ದೋಯ್ತು – ವೂರಾಗೇ ಅದೂ ಇದೂ ಇಲಾಜು ಮಾಡಿಸ್ದೆ. ಜೀವದ ಉರಿ ತಣ್ಣಗಾಗನಿಲ್ಲ. ಪಟ್ಟಣದ ಆಸ್ಪತ್ರೆಗೆ ಕರೆತಂದೆ. ಎಂಟು ತಿಂಗಾ ಹನ್ನೊಂದು ಜಿನಾ. ಅದರವ್ವಾ ವೂರಾಗೆ ಜೀವ ಹಿಡಕಂಡೋಳೆ ಮಗಾ ಚೆಂದಗಂದನಾಗಿ ಬತ್ತನೆ ಅಂತ. ನಂಗೊತ್ತಿತ್ತು ಏನಾಯ್ತದೆ ಅಂತ. ಆದ್ರೆ ಯಾರ್ಗೂ ಏನೂ ಯೇಳಿಲ್ಲ. ನಾಕ್ ಎಕರೆ ಗದ್ದೆ ಮಾರ್ ಬುಟ್ಟಿದ್ದೀನಿ. ಹಂಗೂ ಡಾಕ್ಟರಮ್ಮ ಬ್ಯಾರೆಬ್ಯಾರೆಯೋರಿಂದ ಸಾಯಾ ಮಾಡುಸ್ತೀನಿ ಅಂದ್ರು. ನಾ ವಪ್ಪಿಲ್ಲ. ನನ್ ಜೀವದ್ ಬೆಲೆ ನಂಗೆ ಗೊತ್ತಿದೆ, ಬ್ಯಾಡ ನನ್ನವ್ವಾ' ಅಂದುಬುಟ್ಟೆ. ವೂರ್ನಾಗೆ ಇದ್ದಾಗ ಕೆಲ್ಸಬೊಗ್ಸ ಅಂತ ನನ್ ಕಂದನ್ನ ಜತೆ ಕಳ್ದಿದ್ದು ಅಷ್ಟ್ರಾಗೇ ಇತ್ತು. ಈ ಎಂಟ್ ತಿಂಗಾ ಹನ್ನೊಂದು ಜಿನಾ ಹಗ್ಲೂ ರಾತ್ನಿ ಅನ್ನದೆ ಅವನ ಜತೆಯಾಗೇ

ಇದ್ದೆ. ಇವೊತ್ ಬೆಳಗಿನ ಜಾವ ನಾಕ್ ಗಂಟೆಗೆ ವಸ್ತು ಹೊಂಟೋಯ್ತು. ಕಾರ್ ಮಾಡಿ ತಗಂಡು ಹ್ವಾಗಾ ಯವಸ್ಥೆ ಮಾಡ್ತೀನಿ ಅಂದ್ರು ಡಾಕ್ಟರಮ್ಮ. ನಾನೇ, 'ಬ್ಯಾಡ ಕಣ್ ತಾಯಿ. ನಾನೆ ಯವಸ್ಥೆ ಮಾಡ್ಕಂತೀನಿ' ಅಂತ ಯೋಳಿ ಟ್ಯಾಕ್ಸಿಯೋರತ್ರ ಹ್ವಾದೆ. ಸಾವ್ರಾರು ರೂಪಾಯಿ ಕೇಳುದ್ರು. ನನ್ನತ್ರ ಅಷ್ಟಿರನಿಲ್ಲ. ನನ್ ಜೀವಕ್ಕೆ ನನ್ನ ಕೊನೇ ಸೇವೆ ನನ್ನಿಂದ್ಲೆ ಆಗ್ಬೇಕು ಅನ್ನಾ ಖಯಾಲು. ವಂದು ಪೆಟ್ಗೆ ತಗಂಡು ಅದರಾಗೆ ನನ್ನ ಜೀವಾ ಮಲಗಿಸಿಕ್ಕಂಡು ಹೊಂಟೆವ್ನಿ. ಯಾರ್ಗೂ ತೋರ್‌ಬಾರ್ದು. ನನ್ ಹೆಂಡ್ರಿಗೆ ತೋರ್‌ಬೇಕಂತ. ನನ್ನ ಅಂಗೈಯಗಲ ವಲದಾಗೇ ಮಣ್ಣ್ ಮಾಡ್ಬೇಕೂಂತ ದಾಂಗುಡಿ ಇಟ್ಕಂಡು ಓಡ್ಬೇಕು ಅನ್ನುಸ್ತಾ ಅದೆ. ದೇಹುಕ್ಕೆಲ್ಲಾ ಚುಚ್ಚಿ ಪಚ್ಚಿ ನೋವಾಗಬುಟ್ಟದೆ. ಬೇಗ ದಪನ್ ಮಾಡ್ಬುಡಿ ಅಂದೋರೆ. ಎಂತೆಂಥ ಉದ್ದೇಸ ಇಟ್ಕಂಡು ಎಲ್ಲೆಲ್ಲಿಗೆ ಹೊಂಟಿರಾ ಜನಗಳು ಇಲ್ಲವ್ರೋ? ಯಾರ್ಗೂ ಸೂತಕ ಅನ್ನಿಸ್‌ಬಾರದು ಅಂದ್ಕಂಡು..'

ತಂದೆಯಂತೆ, ಭ್ರಾಂತನಂತೆ, ಹುಚ್ಚನಂತೆ, ಯೋಗಿಯಂತೆ ಜೀವ ಕಳೆದುಕೊಂಡ ಕಳೇಬರದಂತೆ.. ನುಡಿಯುತ್ತಲೇ ಹೋಗಿದ್ದ ಆ ವ್ಯಕ್ತಿ. ಈ ನಡುವೆ ಬೀಗ ಠಕ್ಕೆಂದು ತೆರಕೊಂಡಿತ್ತು. ಚಿಲಕ ತೆಗೆದು ಪೆಟ್ಟಿಗೆಯ ಮುಚ್ಚಳವ ಮೆಲ್ಲನೆ ಮೇಲೆ ಎತ್ತತೊಡಗಿದ್ದ. ಚಾಲಕ ಮುನ್ನುಗ್ಗಿ ಆ ಕೈಗಳನ್ನು ಹಿಂದಕ್ಕೆ ಎಳಕೊಂಡಿದ್ದ. ಪೆಟ್ಟಿಗೆಯ ಮುಚ್ಚಳ ತೆರೆಯುವ ಮುನ್ನ ಮತ್ತೆ ಮುಚ್ಚಿಕೊಂಡಿತ್ತು. ಚಾಲಕ ತಾನೇ ಅದಕ್ಕೆ ಬೀಗ ಜಡಿದಿದ್ದ. ಚಾಲಕನನ್ನು, ಸುತ್ತ ಕವಿದುಕೊಂಡಿದ್ದ ಜನವನ್ನು ಏನೂ ಅರ್ಥವಾಗದವನಂತೆ ಆ ವ್ಯಕ್ತಿ ಪಿಳಿಪಿಳಿ ನೋಡತೊಡಗಿದ್ದ. ಅವನು ಈ ಲೋಕದಲ್ಲಿರಲಿಲ್ಲ ಎಂಬುದು ಸ್ಪಷ್ಟವಾಗಿತ್ತು.

'ಥೇ ಥೇ ಥೇ.. ಇದೆಂಥ ಅಪಶಕುನ ! ನಾವೆಲ್ಲ ಅರಿವಿಲ್ಲದೇ ಒಂದು ಹೆಣದ ಜೊತೆ ಪ್ರಯಾಣ ಮಾಡ್ತಾ ಇದ್ದೇವಲ್ಲ?' ಬ್ರಹ್ಮಾಂಡ ಗುರುವಿನ ಶಿಷ್ಯರು ಬ್ರಹ್ಮಾಂಡವೇ ತಲೆಯ ಮೇಲೆ ಬಿದ್ದ ಆತಂಕದಲ್ಲಿ ನುಡಿದಿದ್ದರು. 'ನಾಳೆ ಒಂದು ಒಳ್ಳೆ ಕೆಲಸ.. ಗಂಡಿನೋರು ಬರ್ತಾ ಇದ್ದಾರೆ. ಶುಭವಾ.. ಅಶುಭವಾ.. ಹೇಳಿ ಮಾರಾಯರೆ?' ಕನ್ಯಾಪಿತೃ ಕಕಮಕಗೊಂಡು ಪ್ರಶ್ನಿಸಿದ್ದರು. ಆ ಮಹಾರಾಯ ಬಸ್ಸಿನಿಂದ ಕೆಳಗಿಳಿದು ಬೆರಳುಗಳನ್ನು ಲೆಕ್ಕಾಚಾರದಿಂದ ಮಡಚುತ್ತಾ ಮುಂದೆ ಮುಂದೆ ಸಾಗಿದ್ದ. ಕನ್ಯಾಪಿತೃ, ಅವನಂಥದೇ ಮನಸ್ಥಿತಿಯ ಏಳೆಂಟು ಜನ ಅವರನ್ನು ಹಿಂಬಾಲಿಸಿದ್ದರು.

ಸಾವಿನ ಬಗೆ ಕವಿತೆ ಹೊಸೆಯುತ್ತಾ, ಪತ್ತೇದಾರಿ ನಡೆಸುತ್ತಾ, ಕಣ್ಣೆದುರೇ ಸಾವಿನೊಂದು ಮೂರ್ತಸ್ಥಿತಿಯನ್ನು ಕಂಡಿದ್ದ ಕವಿಗಳು ತಮಗಾದ ಅನುಭವವನ್ನು ಅರಗಿಸಿಕೊಳ್ಳಲಾರದೆ ತಮ್ಮ ಜಾಗದಲ್ಲಿ ಗಪ್ಪೆಂದು ಕೂತುಬಿಟ್ಟಿದ್ದರು. ಸಾವಿನ ಬಗೆಗೆ ಬರೆಯಬಯಸಿದರೆ ಎದುರಿಗೇ ಪೆಟ್ಟಿಗೆ ರೂಪದಲ್ಲಿ ಧುತ್ತೆಂದು ಪ್ರತ್ಯಕ್ಷವಾಗಿ ಬಿಟ್ಟಿತ್ತಲ್ಲ! ಥತ್ತೇರಿಕಿ.. ಸಾವಿನ ಸಂಗವೇ ಬೇಡ. ಬೇರೊಂದು ವಸ್ತುವನ್ನು ಕುರಿತು ಕವಿತೆ

ಬರೆದುಕೊಳ್ಳಬೇಕು. ಮನಸ್ಸನ್ನು ಬೇರತ್ತ ತಿರುಗಿಸಲು ಯತ್ನಿಸಿದ್ದರು. ಚಾಲಕ, ಅದೇಕೆ ಹೆಣ ನೋಡಬಹುದಾದ ಟೈಮ್‌ನಲ್ಲಿ ಪೆಟ್ಟಿಗೆಯ ಮುಚ್ಚಳ ಹಾಕಿಬಿಟ್ಟ. ಹೆಣ ಅದು ಹೇಗೆ ಆ ಪೆಟ್ಟಿಗೆಯಲ್ಲಿತ್ತೆಂದು ನೋಡಬಹುದಿತ್ತು ಎಂದು ಒಮ್ಮೆ ಕುತೂಹಲದೊಂದಿಗೆ ಮುಚ್ಚಿದ್ದೇ ಒಳ್ಳೇದಾಯ್ತು. ಅದು ಯಾವ ವಿಕಾರ ಸ್ಥಿತಿಯಲ್ಲಿತ್ತೋ.. ನೋಡಿ ಇನ್ನು ಜೀವಮಾನ ಪೂರ್ತಿ ಮರೆಯದೆ ಇರುವಂಥ ನೋಟವಾಗುವ ಭಯದೊಂದಿಗೆ ಮನಸ್ಸು ಪದೇ ಪದೇ ಸಾವಿನತ್ತಲೇ ಚಲಿಸುತ್ತಿತ್ತು. ಈ ಹೆಣದ ಪೆಟ್ಟಿಗೆಯೊಂದಿಗೇ ಇನ್ನೂ ಎರಡು ಗಂಟೆಗಳ ಪ್ರಯಾಣ.. ಕವಿಗಳು ಅಳ್ಳಾಡಿ ಹೋಗಿದ್ದರು. ತಕ್ಷಣ ಒಂದು 'ಪೆಗ್' ಹಾಕಬೇಕೆನ್ನಿಸಿತ್ತು. ಈ ಎಡಬಿಡಂಗಿ ಹಾದಿಯಲ್ಲಿ ಅದೆಲ್ಲಿ ಸಾಧ್ಯ? ಜೇಬು ಮುಟ್ಟಿ ಸಿಗರೇಟು ಪ್ಯಾಕು, ಮ್ಯಾಚ್‌ಬಾಕ್ಸ್ ಇರುವುದು ಖಾತ್ರಿ ಪಡಿಸಿಕೊಂಡು ಪಟಕ್ಕನೆದ್ದು ಬಸ್ಸಿನಿಂದ ಕೆಳಗಿಳಿದು ಹಾದಿಗುಂಟ ನಡೆಯತೊಡಗಿಬಿಟ್ಟರು.

ಸಭ್ಯ ವ್ಯಕ್ತಿ ದಂಗಾಗಿ ಹೋಗಿದ್ದರು. 'ಎಂಥಾ ರೂಕ್ಷ ವ್ಯಕ್ತೀರಿ ಈತ. ಮಗನ ಹೆಣಾನ್ನ.. ಅದೂ ಸ್ವಂತ ಮಗನ ಹೆಣಾನಾ.. ಸತ್ತೋಗಿರಾ ಹೆಣಾನ.. ಹೀಗೆ ಪೆಟ್ಟಿಗೇನಲ್ಲಿ ಹಾಕಿ ಬದುಕಿರೋ ಜನರ ನಡುವೆ ಬಸ್ಸಿನಲ್ಲಿ ಹಾಕ್ಕಂಡು ತಗೊಂಡು ಹೋಗ್ತಾ ಇದ್ದಾನಲ್ಲ.. ಒಂದು ಸ್ವಲ್ಪವಾದ್ರೂ ನಾಗರಿಕ ಪ್ರಜ್ಞೆ ಇರಬೇಡವಾ. ಕೆಎಸ್ಸಾರ್ಟಿಸಿ ಬಸ್ಸಿಗೂ ಕಾರ್ಪೋರೇಷನ್ ವ್ಯಾನಿಗೂ ವ್ಯತ್ಯಾಸ ಇಲ್ವೆ. ಅಮೇರಿಕಾದಲ್ಲೆಲ್ಲ ಈ ರೀತಿ ಇಲ್ಲ. ಸತ್ತವರ ವಾರಸುದಾರ್ರು ವೀಕೆಂಡ್‌ನಲ್ಲಿ ಬರೋತನಕ ಆಸ್ಪತ್ರೆಯೋರೇ ಹೆಣಗಳನ್ನ ಎಷ್ಟು ಜತನದಿಂದ ಕಾಪಾಡಿಕೊಂಡು ಇಟ್ಟಿರ್ತಾರೆ ಗೊತ್ತಾ.. ನಮ್ಮಂಥ ದೇಶದಲ್ಲಿ ಸಾವೂ ಒಂದು ವಿಕಾರವೇ ಮಾರಾಯ್ರೆ.'

ಒಂಟಿ ಯುವತಿ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಒಂದಿಬ್ಬರು ಹೆಂಗಸರು ಅವಳನ್ನು ಸಮಾಧಾನಿಸುತ್ತಿದ್ದರು. ಅವರ ಯಾವ ಸಮಾಧಾನದ ಮಾತುಗಳೂ ಅವಳಿಗೆ ಅರ್ಥವಾಗುತ್ತಿಲ್ಲ.

'ಸಾವಲ್ಲಿ ಸುಂದರ ಸಾವು, ವಿಕಾರ ಸಾವು ಅಂತ ಬೇರೆ ಇದ್ಯೆ. ಸಾವು ಸುಮಧುರವಾಗಿರಲಿಕ್ಕೂ ಸಾಧ್ಯವಿಲ್ಲ. ವಿಕಾರ ಆಗಿರಲಿಕ್ಕೂ ಸಾಧ್ಯವಿಲ್ಲ. ಸಾವು ಸಾವಷ್ಟೆ.' ಗಾಂಧಿ ಟೋಪಿಯ ಹಿರಿಯರು ನಿಧಾನವಾಗಿ ನುಡಿದಿದ್ದರು.

'ಪೆಟ್ಟಿಗೇನಲ್ಲಿ ಏನೋ ಇದೇಂತ ತಾನೇ ಬಸ್ಸು ನಿಲ್ಲಿಸಿದ್ದು. ಅದರೊಳಗೆ ಇರೋದು ಏನೂಂತ ಗೊತ್ತಾಯ್ತಲ್ಲ. ಇನ್ನಾದ್ರೂ ಬಸ್ಸು ಸ್ಟಾರ್ಟ್ ಮಾಡಬಹುದಾ' ಇಂಟರ್‌ವ್ಯೂ ಎದುರಿಸಲು ಸಿದ್ಧನಾಗಿದ್ದ ಯುವಕ ಅಸಹನೆಯಿಂದ ಕಿರುಚಿಕೊಂಡಿದ್ದ.

ಚಾಲಕ ಅನ್ಯ ಮನಸ್ಕನಂತೆ ಮೇಲೆದ್ದ. 'ಗುರುಗಳೇ ಆ ಪೆಟ್ಟಿಗೇನಾ ಸೀಟ್‌ಮೇಲೆ ಇಟ್ಟುಬಿಡೋಣ ಬನ್ನಿ. ಕಾಲದೆಸೆ ಯಾಕೆ? ಸತ್ತೋದವರನ್ನ ದೇವ್ರು ಅಂತಾರೆ.

ಅದೂ ಏನೂ ಅರೀದಿರಾ ವುಡ್ಗ ಬೇರೆ’. ನಿರ್ವಾಹಕ ಕಕ್ಕುಲತೆಯಿಂದ ಭಾರವಾಗಿ ಧ್ವನಿ ಹೊರಡಿಸಿದ. ಇಬ್ಬರೂ ಸೇರಿ ಆ ಪೆಟ್ಟಿಗೆಯನ್ನು ಸೀಟಿನ ಮೇಲೆ ಇಟ್ಟಿದ್ದರು. ಆ ವ್ಯಕ್ತಿಯನ್ನು ಅದರ ಪಕ್ಕ ಕೂರಿಸಿದ್ದರು. ನಿರ್ವಾಹಕ ಸೀಟಿ ಊದಿದ್ದ. ಅಲ್ಲಿ ಇಲ್ಲಿ ನಿಂತು ಚೆಲ್ಲಾಪಿಲ್ಲಿಯಾಗಿದ್ದ ಜನ ಎದ್ದೆನೋ ಬಿದ್ದೆನೋ ಎಂಬಂತೆ ಓಡಿ ಬಂದಿದ್ದರು.

‘ಎಲ್ಲಿಗೆ.. ಎಲ್ಲಿಗೆ.. ಬಸ್ಸು ಓಡಿಸೋದು.. ಎಲ್ಲಿಗೆ.. ಇನ್ನೂ ಏನು ತೀರ್ಮಾನ ಆಗೇ ಇಲ್ಲ.’ ಬ್ರಹ್ಮಾಂಡ ಗುರುವಿನ ಶಿಷ್ಯರು ದಾಂಗುಡಿಯಿಟ್ಟುಕೊಂಡು ಬಂದು ದಸ್‌ಪುಸ್ ಎಂದು ಏದುಸಿರುಬಿಡುತ್ತ ನುಡಿದಿದ್ದರು.

‘ನನ್ ಸೀಟ್ ಮೇಲೇ ಹೆಣಾ ಇಟ್ಟುಬಿಟ್ಟಿದ್ದಾರೆ.. ಪಕ್ಕಾ ಆಸಾಮಿ! ನಾವೆಲ್ಲಿ ಕೂರೋದು? ಮೊದ್ಲು ಎಲ್ಲಿದ್ಯೋ ಅಲ್ಲಿಗೇ ಹೋಗು.’ ಆ ಸೀಟಿನ ವಾರಸುದಾರರೆಲ್ಲ ತಮ್ಮ ಸೀಟನ್ನು ಉಳಿಸಿಕೊಳ್ಳುವಲ್ಲಿ ವ್ಯಸ್ತರಾಗಿಬಿಟ್ಟಿದ್ದರು. ಬಸ್ಸಿನಲ್ಲಿ ಮತ್ತೊಮ್ಮೆ ಗಲಾಟೆ ಆಗುವ ಎಲ್ಲ ಸೂಚನೆಗಳೂ ಕಾಣತೊಡಗಿದ್ದವು.

‘ಎಲ್ಲ ಬಾಯಿ ಮುಚ್ಚಿಕೊಳ್ರಿ..’ ಚಾಲಕ ತನ್ನೆಲ್ಲ ಶಕ್ತಿಯನ್ನೂ ಬಳಸಿ ಕಿರುಚಿದ್ದ. ‘ಯಾರಿಗೆ ಬಸ್ಸಲ್ಲಿ ಪ್ರಯಾಣ ಮುಂದುವರಿಸಬೋದು ಅನ್ನಿಸ್ತದೆ ಅವ್ರು ಬಸ್ ಹತ್ಕೊಳ್ಳಿ. ಹೇ.. ಹೋಗ್ರಿ ಹಿಂದೆ.. ಎಲ್ಲಾದ್ರೂ ಕೂತ್ಕೋ ಹೋಗ್ರಿ. ಈ ಸೀಟನ್ನ ರಿಜಿಸ್ಟರ್ ಮಾಡಿಸಿಕೊಂಡಿರೋ ಹಾಗೆ ಆಡ್ಬೇಡಿ’ ಏಕಕಾಲಕ್ಕೆ ಎಲ್ಲರಿಗೂ ಆಜ್ಞೆ ಮಾಡುವಂತೆ ಮಾತನಾಡಿದ್ದ.

ಮತ್ತೆ ಎಲ್ಲರೂ ಎಲ್ಲವನ್ನೂ ಮರೆತು ತಮ್ಮ ಸೀಟಿನ ಕುರಿತೇ ಧ್ಯಾನಸ್ಥರಾಗಿ ಅವುಗಳ ಹುಡುಕಾಟದಲ್ಲಿ ತೊಡಗಿ ಬೇಗ ಬೇಗ ಆಸೀನರಾಗತೊಡಗಿದರು. ‘ನಮ್ಮನ್ನೆಲ್ಲ ಕುರಿಗಳು ಅಂದುಕೊಂಡುಬಿಟ್ಟಿದ್ದಾನೆ ರ್‍ಯಾಸ್ಕಲ್’. ಬಹಳವೇ ಸಣ್ಣ ಧ್ವನಿಯಲ್ಲಿ ಸಭ್ಯ ಮನುಷ್ಯರು ನುಡಿದಿದ್ದರು.

‘ಕುರಿಗಳೂ ಅಲ್ಲ ನಾವು.. ಅವಕ್ಕಿರೋ ಮುಗ್ಧತೇನೂ ನಮಗಿಲ್ಲ. ಮನುಷ್ಯನಿಗಿಂತ ಬೇರೆ ಇನ್ನಾವುದಾದರೂ ಕನ್ನಿಂಗ್ ಅನಿಮಲ್ ಇದ್ರೆ.. ಅದು ಅಂದುಕೊಳ್ಳೋಣ’. ಗಾಂಧಿ ಟೋಪಿಯ ಹಿರಿಯರ ಮಾತುಗಳನ್ನು ಬಸ್ಸು ಸ್ಟಾರ್ಟಾದ ಧ್ವನಿ ನುಂಗಿ ಹಾಕತೊಡಗಿತ್ತು.

❖

(ವಿಜಯ ಕರ್ನಾಟಕ – ದೀಪಾವಳಿ ವಿಶೇಷಾಂಕ, 2012)

ಕುಡಿ ಕಟ್ಟಿದ ದೀಪ

ಸುನಂದಾ ಪ್ರಕಾಶ ಕಡಮೆ

ಅಪ್ಪ ಈ ಹಿಂದಿನ ಹದಿನೈದು ದಿನಗಳಿಂದಲೂ 'ಹೋಗದಿದ್ದರೆ ತಪ್ಪಾಗುತ್ತದೆ ಮಗಳೇ' ಎನ್ನುತ್ತ ಒತ್ತಾಯಿಸುತ್ತಲೇ ಇದ್ದು, ನಂತರ ಹಾಗೋ ಹೀಗೋ ಮನವೊಲಿಸಿ ಇಲ್ಲಿಗೆ ಕರೆತರುವುದರಲ್ಲಿ ಯಶಸ್ವಿಯಾಗಿದ್ದ. ನನಗೆ ಇಲ್ಲಿಯ ಈ ಮನೆಗೆ ಹೋಗಲು ಮನಸ್ಸಿಲ್ಲ. ದಿನಕರನ ಅಂದಿನ ಆ ಮಾತು, ಆ ಓಡಾಟ ಅವುಗಳದೇ ನೆನಪು ತೀವ್ರವಾಗಿ ಕಾಡಬಹುದು ಅಂದುಕೊಂಡಿದ್ದೆ. ಅವನಿಲ್ಲದ ಮನೆಯಲ್ಲಿ ನನಗೇನು ಕೆಲಸ. ಹಾಗಾಗಿಯೇ ವರುಷದ ಹಿಂದೆ ವೈಕುಂಠ ಸಮಾರಾಧನೆಯ ದಿನವೇ ಅಪ್ಪನೊಂದಿಗೆ ತವರಿಗೆ ಹೊರಟು ಬಂದಿದ್ದೆ. ನನ್ನನ್ನು ಯಾರೂ ತಡೆದಿರಲಿಲ್ಲ. ನಂತರದ ದಿನಗಳಲ್ಲಿ ಒಮ್ಮೆಯೂ ಅಲ್ಲಿಗೆ ಹೋಗುವ ಮಾತನ್ನೂ ಸಹ ಅಪ್ಪನಾಗಲೀ ಅಮ್ಮನಾಗಲೀ ಆಡಿದವರಲ್ಲ. ಅಮ್ಮ 'ನೋಡು ಸುರಿ, ಏನಾದರಾಗಲಿ, ಒಂದು ಬಾರಿ ಹೋಗಿ ಬಾ, ನಿನ್ನ ಗಂಡ ದಿನಕರನ ಆತ್ಮಕ್ಕೆ ಶಾಂತಿಯಾದರೂ ಸಿಗಲಿ, ಬಂದದ್ದನ್ನು ಬಂದಂತೆಯೇ ಸ್ವೀಕರಿಸಬೇಕು ಅಂತೆಲ್ಲ ನನಗೇ ಬುದ್ಧಿ ಹೇಳಿದವಳು ನೀನು' ಅಂತೆಲ್ಲ ರಮಿಸಿದ್ದಕ್ಕೆ ನಾನು ಹೊರಡುವ ಮನಸ್ಸು ಮಾಡಿದ್ದು. 'ಇನ್ನೂ ತುಂಬ ಚಿಕ್ಕವಳು, ಹಾಗೆಲ್ಲ ಹೂವು ಕುಂಕುಮ ಬಳೆ ತೆಗೆಯುವದು ಬೇಡ' ಅಂತ ಅನುಭವಸ್ಥರ್‍ಯಾರೋ ಅಂದು ಠರಾವು ಹೊರಡಿಸಿದ್ದರಿಂದ ಅವೆಲ್ಲದರೊಡಗೂಡಿಯೇ ನನ್ನ ಇಂದಿನ ಪ್ರಯಾಣ ಗಂಡನಿಲ್ಲದ ಮಾವನ ಮನೆಗೆ ಸಾಗಿತ್ತು. ಎಂಥ ವಿಚಿತ್ರ ನೋಡಿ, ನನ್ನ ಮನೆ ಅದು, ಆದರೆ ದಿನಕರನಿಲ್ಲ ಅಲ್ಲಿ. ಆದರೂ ಇಂದು ನಾನು ಅಲ್ಲಿಗೆ ಹೋಗಲೇಬೇಕು. ಈಗ ಹೋಗಿದ್ದು ಪುನಃ ಅಪ್ಪನೊಂದಿಗೆ ಹಿಂತಿರುಗಿ ಬರುವುದೋ ಅಥವಾ ಅಲ್ಲೇ ಉಳಿಯುವದೊ. ಗೊಂದಲ. ನನಗಷ್ಟೇ ಅಲ್ಲ. ಅಪ್ಪ ಅಮ್ಮನಿಗೂ ಸಹ. ಬ್ಯಾಗಿಗೆ ಎಷ್ಟು ಬಟ್ಟೆ ಹಾಕಿಕೊಳ್ಳಬೇಕು, ಸುಮಾರು ಹೊತ್ತು ಬಗೆಹರಿದಿರಲೇ ಇಲ್ಲ. ನಂತರ ಜ್ಞಾಪಕಕ್ಕೆ ಬಂದದ್ದು, ಅಲ್ಲೇ ಕಪಾಟಿನಲ್ಲೇ ನನ್ನ ಬಟ್ಟೆಗಳು ದಿನಕರನ ಬಟ್ಟೆಗಳ ಜೊತೆ ಹಾಗೆಯೇ ಇವೆ. ತಾಸುಗಟ್ಟಲೇ ಬಸ್ಸಿನಲ್ಲಿ ಮೈಮೇಲೆ ಧ್ಯಾಸವೇ ಇಲ್ಲದಂತೆ ಸರಿದುಹೋಯಿತು. ವಿಚಿತ್ರ ಆತಂಕ.

ನಾನು ಬಂದು ಮನೆ ಹೊಕ್ಕಿದ್ದೇ ಎಲ್ಲ ಇದ್ದಲ್ಲೇ ಗಂಭೀರರಾದರು. ಭಟ್ಟರು ವರ್ಷಾಂತಿಕದ ಕ್ರಿಯಾಕರ್ಮಗಳನ್ನು ಮಾವನಿಗೆ ಕೂಡಿಸಿಕೊಂಡು ಮಂತ್ರ ಪಠಣದೊಂದಿಗೆ ನಡೆಸುತ್ತಿದ್ದರು. ಒಂದು ಕ್ಷಣ ಎಲ್ಲರ ಕಣ್ಣು ಇದ್ದಕ್ಕಿದ್ದಂತೆ ತುಸುವೇ ನನ್ನ ಬಳಿ ಹೊರಳಿ ಮತ್ತೆ ದೃಷ್ಟಿ ಬದಲಿಸಿತು. ಸೀದಾ ಹೋಗಿ ನನ್ನ ಕೋಣೆಯ ಮಂಚದ ಮೇಲೆ ಪವಡಿಸಿದೆ. ಯಾರ್‍ಯಾರೋ ಸಂಬಂಧಿಗಳು ಇದ್ದರು. ಯಾರೋ ಕುಡಿಯಲು ಲಿಂಬೆ ಹಣ್ಣಿನ ಶರಬತ್ತು ತಂದು ಕೊಟ್ಟರು. ನಾನು ಕುಡಿದ ಖಾಲಿ ಲೋಟ ಒಳಗಿಡಲು ಸಹ ಏಳದೇ ತಲೆ ತಗ್ಗಿಸಿ ಕೂತೆ.

ಮಾತಿಲ್ಲ, ಕತೆಯಿಲ್ಲ. ಯಾರು ಯಾವ ಪ್ರಶ್ನೆಯನ್ನೂ ಕೇಳಲಿಲ್ಲ. ನಾನೂ ಕೂಡ ಯಾರನ್ನೂ ಆಸ್ಥೆಯಿಂದ ನೋಡಿ ಮುಂಚಿನಂತೆ ಮುಗುಳು ನಗಲು ಹೋಗಲಿಲ್ಲ. ಇವಳು ಇದೇ ರೀತಿ ಇರುವುದು ಸಹಜ ಎನ್ನುವಂತೆ ಅವರೆಲ್ಲ ತೀರ್ಮಾನಿಸಿದಂತಿತ್ತು. ದಿನಕರನ ಸೋದರತ್ತೆಯ ಮಗಳ ಎರಡು ವರ್ಷದ ಮಗುವೊಂದು ಕೇಕೆ ಹಾಕಿ ಆಟವಾಡುತ್ತ, ಆಗಾಗ ರಚ್ಚೆ ಹಿಡಿಯುತ್ತ ಲಲ್ಲೆಗರೆಯುತ್ತಿದ್ದದನ್ನು ವೀಕ್ಷಿಸುತ್ತಲೇ ಅಲ್ಲಿ ಕೂತವರೆಲ್ಲ ಹೇಗೋ ವೇಳೆ ನೂಕಿದರು. ಹೊರಗಡೆ ಕೂತ ಅಪ್ಪನಿಗೆ ಅಷ್ಟು ಸಣ್ಣ ವಯದ ಅಳಿಯನ ಶ್ರಾದ್ಧದ ಪಿಂಡ ಗಿಂಡ ನೋಡಿ ಸಂಕಟವಾಗದೇ ಇರಲಿಕ್ಕಿಲ್ಲ. ಹೂವು, ತುಳಸಿ ಕುಡಿ, ಹೂಬತ್ತಿ, ಅಕ್ಷತೆ ಕಾಳಿನ ತಯಾರಿಗೆಲ್ಲ ನನ್ನ ಮೈದುನ ವಿನೋದ ಅತ್ತಿಂದಿತ್ತ ಓಡಾಡುತ್ತಿದ್ದರೂ ಒಮ್ಮೆಯೂ ನನ್ನ ಎಡೆಗೆ ಮುಖ ಹೊರಳಿಸಿದಂತೆ ಕಾಣಲಿಲ್ಲ. ಅಣ್ಣ ತೀರಿ ಹೋದ ದುಃಖ ನನ್ನಂತೆಯೇ ಅವನನ್ನೂ ಬಾಧಿಸಿರಲು ಸಾಕು ಅಂದುಕೊಂಡೆ.

ಶ್ರಾದ್ಧದ ಕೊನೆಯಲ್ಲಿ ಭಟ್ಟರು ಕರೆದರೆಂದು ಅರ್ಧ ನಿಮಿಷದಲ್ಲಿ ಮಂಚವಿಳಿದು ಬಂದು ಪಿಂಡಕ್ಕೆ ಹೂ ಹಾಕಿ ನಮಸ್ಕಾರ ಮಾಡಿ ತೆರಳಿದ್ದಷ್ಟೇ. ಆನಂತರ ಎಲ್ಲರ ಸರಬರದಲ್ಲಿ ಹೊರಗೆ ವರಾಂಡದಲ್ಲಿಯೇ ಊಟದ ತಯಾರಿಯೂ ನಡೆಯಿತು. ಕೊನೆಯಲ್ಲಿ ನಡೆದ ಹೆಂಗಸರ ಪಂಕ್ತಿಗೆ ನನಗೂ ಕರೆ ಬಂತು. ದಿನಕರನ ಚಿಕ್ಕಪ್ಪನ ಮಗಳು ಆರತಿ ಬಂದು 'ಅತ್ತಿಗೆ ಊಟಕ್ಕೆ ಬನ್ನಿ' ಎಂದು ಮಿದು ಸ್ವರದಲ್ಲಿ ಕರೆದಳು. ಕಾಲು ತೊಳೆದು ಬಂದ ನಂತರ ಕೈ ವರೆಸಲೆಂದು ಟಾವೆಲ್ಲಿಗಾಗಿ ನನ್ನ ಕಪಾಟು ತೆರೆದೆ. ದಿನಕರನ ಅದೇ ಹಳೆಯ ಮಾಸಿದ ಟಾವೆಲ್ಲು ನನ್ನ ಪಾದದ ಮೇಲೆ ತಟ್ಟನೆ ಬಿತ್ತು. ಸುಮ್ಮನೇ ಎತ್ತಿ ಕಪಾಟಿನಲ್ಲಿರಿಸುವಾಗ ಕೈ ತುಸು ಕಂಪಿಸಿದ್ದು ನನ್ನ ಅರಿವಿಗೂ ಬರುವಂತಿತ್ತು. ಅಡಿಗೆ ಕೋಣೆಗೆ ಬಂದು ಪಂಕ್ತಿಯ ಕೊನೆಯ ಬಾಳೆಲೆಯಲ್ಲಿ ಉಣ್ಣಲು ಕೂತಾಗ ಸುತ್ತ ಎಲ್ಲ ನನ್ನನ್ನೇ ಗಮನಿಸುತ್ತಿದ್ದಾರೋ ಎಂಬ ಗುಮಾನಿಯೊಂದು ಎಂಥದೋ ಕಸಿವಿಸಿ ತಂತು.

ಮುಂದಿನ ಸ್ವಲ್ಪೇ ಹೊತ್ತಿನಲ್ಲಿ ಈ ಕಾರ್ಯಕ್ರಮಕ್ಕಾಗೇ ಸೇರಿದವರೆಲ್ಲ ಹೊರಡಲು ಅನುವಾದರು. ದಿನಕರನ ಸೋದರತ್ತೆ ಮಾತ್ರ 'ಸುರೇಖಾ, ಉಳಿದು ಹೋಗು' ತುಸು ದನಿ ಅಡಗಿಸಿಯೇ ಅಂದರು. ನಾನು ತಲೆ ಎತ್ತಿರಲಿಲ್ಲ. ಅವರ ಮಗಳು ತನ್ನ ಕಂದನನ್ನು ಕುರಿತು 'ಆಂಟಿಗೆ ಟಾಟಾ ಮಾಡು' ಅನ್ನುತ್ತಲೇ ಸಮೀಪ ಬಂದು ನಿಂತದ್ದರಿಂದ ನಾನು ಆ ಮಗುವಿನ ಹಸ್ತ ಹಿಡಿದು ಮೆಲ್ಲಗೆ ಅಮುಕಿ ತುಟಿಯಲ್ಲಿ ಕೊಂಚ ನಗು ಅರಳಿಸಿ ಬೀಳ್ಕೊಟ್ಟೆ. ದಿನಕರನ ಚಿಕ್ಕಪ್ಪನ ಮಗಳು ಸಹ, ತನ್ನ ಮಗು ಶಾಲೆಯಿಂದ ಹಿಂತಿರುಗುವ ಹೊತ್ತಾಯಿತೆಂದು, ತಾನೂ ಈಗಲೇ ಹೊರಡಬೇಕಿರುವ ಸೂಚನೆಯನ್ನು ಆಗಲೇ ಕೊಟ್ಟುಬಿಟ್ಟಿದ್ದಳು. ಹೊರಡುವಾಗ ಅವಳೂ 'ಅತ್ತಿಗೆ' ಅಂತ ಒಂದೇ ಶಬ್ದ ಉಚ್ಚರಿಸಿ ನನ್ನ ಹೆಗಲ ಮೇಲೆ ಒಮ್ಮೆ ಮೆಲುವಾಗಿ ತನ್ನ ಹಸ್ತ ಊರಿ, ಹೊರಟು ಹೋದಳು. ಈಗ ಮಾವ ಹಾಗೂ ವಿನೋದ ಬಿಟ್ಟರೆ ಇಡೀ ಮನೆಯಲ್ಲಿ ನಾನು ಹಾಗೂ ಅಪ್ಪ ಇಬ್ಬರೇ.

ವಿನೋದ ತನ್ನ ಅಟ್ಟದ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡದ್ದು ಆ ಸದ್ದಿನ ಮೇಲೆಯೇ ನನ್ನ ಅರಿವಿಗೆ ಬಂತು. ಹೊರಗೆ ಅಪ್ಪ ಮತ್ತು ಮಾವ ಮಾತಿಗಾರಂಭಿಸಿದರು. ಮೊದಲಿಗೆ ಅದೂ ಇದೂ ಕುಶಲ ಸಮಾಚಾರಗಳ ಸಂಭಾಷಣೆಗಳು ಮುಗಿದವು. ನಂತರ ಸ್ವಲ್ಪ ಹೊತ್ತು ದಿನಕರ ಹೋದ ದಿನಗಳ ಮೆಲುಕು. ನಾನು ಸುಮ್ಮನೆ ಅವನ್ನೆಲ್ಲ ಕೇಳಿಸಿಕೊಂಡೆ. ಆನಂತರ ಹಗೂರಕ್ಕೆ ಮಾವನ ವೇದಾಂತದ ಮಾತುಗಳು ಪ್ರವಚನದ ಹಾದಿ ಹಿಡಿದಂತೆ ಕಂಡುಬಂತು. ಈಗ ಒಳಗೆ ಕೂತಿದ್ದ ನನಗೂ ಕೇಳಿಸುವಂತಹ ಎತ್ತರದ ದನಿಯಲ್ಲಿ ಮಾವ ಎಲ್ಲವನ್ನೂ ಬಿಡಿಸೀ ಬಿಡಿಸೀ ಇಡುತ್ತಿದ್ದರು. ಯಾವುದೋ ವಿಷಯಕ್ಕೆ ಇದು ಪೀಠಿಕೆಯಿದ್ದಂತೆ ನನಗೆ ಅನುಮಾನ ಬರತೊಡಗಿತು. ಏನೋ ಹೇಳಲು ಯತ್ನಿಸುತ್ತಿದ್ದಂತೆ ಆದರೆ ಅದು ಹೇಗೆ ಹೇಳಬೇಕೆಂಬ ಜಿಜ್ಞಾಸೆಯಲ್ಲಿದ್ದಂತೆ ಅವರ ಏರಿಳಿತದ ಸ್ವರದಲ್ಲೇ ನನಗೆ ಸುಳಿವು ಸಿಕ್ಕಿತು. ಪುರಾಣ ಕತೆಗಳ ಉದಾಹರಣೆಗಳು ಮತ್ತು ನಮ್ಮ ವೇದಗಳು ಹೇಳುತ್ತಿರುವ ಸತ್ಯದಿಂದ ಹಿಡಿದು, ಸಮಾಜ ಸುಧಾರಣೆಯ ಗಾಂಧೀವಾದದವರೆಗೆ ಮಾತು ಹೊರಳಿತು. ಅಪ್ಪ ಕೆಲವೊಂದಕ್ಕೆ ಬರಿ ಹ್ಞು ಅಷ್ಟೇ ಹಾಕುತ್ತ, ಕೆಲವೊಂದಕ್ಕೆ ತಮ್ಮದೂ ಅಭಿಪ್ರಾಯ ಸೇರಿಸುತ್ತ ಕೂತಿದ್ದರು. ನನಗಿನ್ನೂ ಇಪ್ಪತ್ತೇಳು ಮುಗಿದು ಇಪ್ಪತ್ತೆಂಟು. ನನ್ನ ಕಿರಿಯ ವಯಸ್ಸೂ ಸಹ ಅವರ ಮಾತಿನಲ್ಲಿ ಒತ್ತಿ ಒತ್ತಿ ಸ್ಫುಟವಾಗಿ ಪ್ರಸ್ತಾಪವಾಗಿತ್ತು. ಒಟ್ಟಾರೆ ಅವರ ಮಾತಿನ ಅರ್ಥ ನನಗೆ ಇನ್ನೊಂದು ಮದುವೆಗೆ ಸಿದ್ಧ ಮಾಡುವುದು ಎಂಬ ಸತ್ಯ ನನಗೆ ಕ್ರಮೇಣ ಮನನವಾಗತೊಡಗಿತ್ತು. ನಾನು ಒಳ ಕೋಣೆಯಲ್ಲಿ ಸೆರಗಿನ ಚುಂಗು ತಿರುಪುತ್ತ ಒಮ್ಮೆ ಸಣ್ಣಗೆ ಅದನ್ನು ಮಡಿಚುತ್ತ ಇನ್ನೊಮ್ಮೆ ಬಿಚ್ಚುತ್ತ ಆ ಎಲ್ಲ ಸಂಭಾಷಣೆಗಳ ಬನಿಯನ್ನು ಹಿಡಿದಿಟ್ಟುಕೊಳ್ಳಲು ಯತ್ನಿಸುತ್ತಿದ್ದೆ.

ದಿನಕರ ತೀರಿದ ನಂತರ ಇಷ್ಟು ದಿನ ಎಲ್ಲರೂ ನನ್ನ ದುಃಖ ನೋಡಲು ಇಷ್ಟಪಡುತ್ತಾರೆ, ನನ್ನ ಬೇಸರಗಳನ್ನು ಹಿಡಿದಿಟ್ಟುಕೊಳ್ಳಲು ಕಾಯುತ್ತಾರೆ ಎಂಬುದೆಲ್ಲ ಇಂದು ಸುಳ್ಳಾಗಿ, ಇಂದು ವಾಸ್ತವ ಸತ್ಯದ ಜಗತ್ತಿನ ಕಲ್ಪನೆ ನನ್ನ ಮನಸ್ಸಿಗೆ ಒಂದು ಬಿಡುಗಡೆಯ ನಿರಾಳತೆಯನ್ನು ಒದಗಿಸಿತ್ತು. ಮುಂದಿನ ಕೆಲ ನಿಮಿಷಗಳವರೆಗೆ ಹೊರಗಡೆ ಇಬ್ಬರೂ ಮೌನವಾಗಿದ್ದರು. ಸೂಜಿ ಬಿದ್ದರೂ ಕೇಳಿಸುವ ನಿಶ್ಯಬ್ದ. ನನ್ನನ್ನು ಹೊರ ಕರೆದು ಕೂಡಿಸಿಕೊಂಡರೆ ಎಂಬ ಯೋಚನೆಯೇ ನನಗೆ ಕಸಿವಿಸಿ ತಂತು. ತುಸು ತಡೆತಡೆದು ಮಾವನ ಸ್ವರ 'ನಾನೊಂದು ಪ್ರಸ್ತಾಪ ಹೇಳುವೆ, ನಿಮಗೆ ಒಪ್ಪಿಗೆಯಾದರೆ, ಸುರೇಖಾಳನ್ನು ವಿಚಾರಿಸಬಹುದು' ಅಂದಂತೆ ಕೇಳಿಸಿತು. ಅಪ್ಪ ಅಷ್ಟೇ ಕ್ಷೀಣ ಸ್ವರದಲ್ಲಿ 'ಹ್ಞೂ, ಹೇಳಿ' ಅಂದರು. 'ಬೇರೆ ಯಾರನ್ನೋ ಹುಡುಕುವದು, ನಮ್ಮಲ್ಲಿ ನಡೆದ ಸಂಗತಿಗಳೆಲ್ಲವನ್ನೂ ಅವರಲ್ಲಿ ಬಿಡಿಸಿ ಬಿಡಿಸಿ ನಿವೇದಿಸುವದು, ಎಲ್ಲ ಒಂದು ಬಗೆಯಲ್ಲಿ ಹಿಂಸೆಯೇ' ಅಂದವರೇ ಅಲ್ಲೇ ಅರ್ಧ ನಿಮಿಷ ತಡೆದು ನಿಂತು, 'ಅದಕ್ಕಾಗಿ.. ಅದಕ್ಕಾಗಿ..' ಅಂದರು ಎರಡೆರಡು ಬಾರಿ.

ನಂತರ ಸುಮ್ಮನಾಗಿಬಿಟ್ಟರು. ಅಪ್ಪ ತಗ್ಗಿಸಿ ಕೂತ ತಮ್ಮ ಮುಖವನ್ನು ತಕ್ಷಣ ಮೇಲಕ್ಕೆತ್ತಿರಬೇಕು. ಮಾವನನ್ನೇ ದಿಟ್ಟಿಸುತ್ತಿರಲೂ ಸಾಕು. 'ಅದಕ್ಕಾಗಿ? ಏನು?' ಅಂದದ್ದು ಕೇಳಿತು. ಮಾವ ಅತ್ಯಂತ ಸಣ್ಣ ಸ್ವರದಲ್ಲಿ, ಅದು ತನಗೆ ಒಮ್ಮೆಲೇ ಕೇಳಬಾರದೆಂಬ ಇರಾದೆಯಿಂದ 'ನಮ್ಮ ವಿನೋದ, ನಮ್ಮ ವಿನೋದನೇ ಏನಾಗಿದೆ?' ಎಂಬ ಮಾತು ಮರ್ಮಾಘಾತದಂತೆ ಇರುದದ್ದೇ ನನ್ನೊಳಗೆ ಒಂದು ರೀತಿಯ ವಿಚಿತ್ರ ಸಂಚಲನ ಉಂಟಾಗಿ ಬೆವೆತು ಬಿಟ್ಟೆ.

ಅಪ್ಪ ಅದಕ್ಕೆ ಏನುತ್ತರ ಹೇಳಿದರೋ ನನಗೆ ಕೇಳಲೇ ಇಲ್ಲ. ಆಗಲೇ ಹೊಸ ಸಹ್ಯವಾಗದ ಲೋಕವೊಂದು ನನ್ನ ಮನಸ್ಥಿತಿಯನ್ನು ನಿಯಂತ್ರಿಸಲು ತೊಡಗಿಕೊಂಡಿತ್ತು. ವಿನೋದನ ರೂಪ ಒಮ್ಮೆಲೇ ಕಣ್ಮುಂದೆ ಬಂದು ನಿಂತಿತು. ಅವನು ಬೆಳಿಗ್ಗೆಯಿಂದ ನನ್ನ ಮುಖ ನೋಡದೇ ದೂರದೂರವೇ ಓಡಾಡಿಕೊಂಡಿದ್ದ ಪ್ರಸಂಗಗಳು ಪುನಃ ಮನಸ್ಸಿನಲ್ಲಿ ಮರುಕಳಿಸಿದವು. ಹೊರಗಿನ ಯಾವೊಂದು ಸ್ವರಗಳೂ ಈಗ ಕಿವಿಯನ್ನು ಭೇದಿಸುತ್ತಲೇ ಇಲ್ಲ. ಮನಸ್ಸಿನ ಮೂಲೆಯಲ್ಲೆಲ್ಲೋ ಸಣ್ಣ ಸಂಕಟದ ಸುಳಿ ಎದ್ದು ಬಂದಂತೆ. ದಿನಕರನಿಗೆ ಈ ತಮ್ಮನ ಅಶಿಸ್ತು, ಬೇಜವಾಬ್ದಾರಿತನದ ಕುರಿತು ತುಂಬ ಅಸಹನೆಯಿತ್ತು, ಹಾಗೆಂದು ಅವನು ಬಾಯಿ ಬಿಟ್ಟು ಹೇಳದಿದ್ದರೂ ದಿನಕರನ ವರ್ತನೆಯಲ್ಲೇ ಗೊತ್ತಾಗುತ್ತಿತ್ತು. ಆದರೆ ಈಗ ನೋಡಿದರೆ ವಿನೋದ ಮೊದಲಿನಂತಿಲ್ಲ ಅನಿಸುತ್ತದೆ. ಅಣ್ಣನ ಅನಿರೀಕ್ಷಿತ ಸಾವು ಅವನಿಗೆ ಹೆಚ್ಚಿನ ಜವಾಬ್ದಾರಿಯನ್ನು ಕಲಿಸಿರಲು ಸಾಕು. ನನ್ನ ಈ ಅಳ್ಳಕಿನ ಮನಸ್ಸು ಆತನನ್ನು ಸರ್ವದಾ ಒಪ್ಪಿಕೊಳ್ಳಲು ತಯಾರಿಲ್ಲ.

ಅಪ್ಪ ಮತ್ತು ಮಾವ ಇನ್ನೇನು ಮಾತನಾಡಿದರೋ ಗೊತ್ತಾಗಲಿಲ್ಲ. ಕೇಳಿಸಿಕೊಳ್ಳುವ ಧೈರ್ಯವೂ ನನಗಿರಲಿಲ್ಲ. ಈ ಹಿಂದೆ ಹಬ್ಬ ಹರಿದಿನಗಳಲ್ಲಿ ಅಣ್ಣನ ಕಾಲಿಗೆ ಬಿದ್ದಂತೆ ವಿನೋದ ನನಗೂ ಕಾಲು ಮುಟ್ಟಿ ನಮಸ್ಕಾರ ಮಾಡಿದ್ದಿದೆ. ಆದರೆ ಅದೇನು ಅಂಥ ದೊಡ್ಡ ಕಾರಣವಲ್ಲ ಬಿಡಿ. ಆದರೆ ಈ ರೀತಿಯಲ್ಲಾದ ಬೆಳವಣಿಗೆಯನ್ನು ಆಗಿನ ಸಂದರ್ಭಕ್ಕೆ ಹೇಗೆ ತಾಳೆ ಹಾಕಿ ನೋಡುವುದು? ಇಂಥೆಲ್ಲ ಯೋಚನೆಯಿಂದ ಹೊರಬಂದು ಹೊರಗಿನ ಶಬ್ದಗಳಿಗೆ ಕಿವಿಗೊಡಲು ಹೆಣಗಾಡಿದೆ. ಮಾವ ನನ್ನನ್ನು ಕರೆಯುವ ಕೇಳುವ ಯಾವ ಗೋಜಿಗೂ ಹೋಗದೇ, ಅಟ್ಟದ ಮೇಲೆ ನಡೆದು ಬಾಗಿಲು ಹಾಕಿಕೊಂಡಿದ್ದ ವಿನೋದನನ್ನು ದನಿ ಎತ್ತರಿಸಿ ಕರೆಯುವದು ಕೇಳಿತು. ಇವರಿಗೇನಾಗಿದೆ? ಅವನಿಗಿಂತ ಮೊದಲು ನನ್ನ ಒಪ್ಪಿಗೆ ಬೇಕಲ್ಲವೇ ಇದಕ್ಕೆ? ಅಥವಾ ಇಷ್ಟು ಹೊತ್ತು ಏನೆಂದು ತೀರ್ಮಾನಿಸಿದರು? ನಾನು ಅವರ ಮಾತಿನ ಕಡೆಗೆ ಮುಂಚಿನಂತೆಯೇ ಲಕ್ಷ್ಯ ಕೊಟ್ಟು ಆಲಿಸಬೇಕಾಗಿತ್ತು. ಅಷ್ಟರಲ್ಲಿ ವಿನೋದ ದಡದಡ ಮಾಳಿಗೆ ಮೆಟ್ಟಲು ಇಳಿದು ಬರುವ ಸದ್ದು ಕೇಳಿಸಿತು. 'ಬಾ ಇಲ್ಲಿ ಕೂಡು' ಅಂದರು ಮಾವ. ಮತ್ತೆ ಸ್ವಲ್ಪ ಹೊತ್ತು ಮೌನ. 'ಇವನಿಗೆ ಇತ್ತೀಚಿನ ದಿನಗಳಲ್ಲಿ ತುಂಬ ಸಲ ಈ ಪ್ರಸ್ತಾಪದ ಕುರಿತು ಹೇಳಿದ್ದೇನೆ' ಅಂದರು ಮಾವ. ಆಗ ಅಪ್ಪ 'ಎಲ್ಲ ಸರಿ, ಆದರೆ..' ಎಂದು ಎಂಥದೋ ಸಂಕಟದಿಂದಲೇ ರಾಗ

ಎಳೆದದ್ದು ಕೇಳಿತು. ಅದಕ್ಕೆ ಮಾವ 'ಆದರೆ ಗೀದರೆ ಎಲ್ಲ ಯಾಕೆ? ನೀವು ನೀವೆ ಮಾತಾಡಿಕೊಳ್ಳಿರಿ. ನನ್ನದೇನೂ ಅಭ್ಯಂತರವಿಲ್ಲ' ಅಂದರು. ಮತ್ತೂ ಮುಂದುವರೆದ ಅವರು 'ನಮ್ಮ ನಮ್ಮ ಕೈಗೆಟಕುವ ಮಾನವೀಯತೆಯನ್ನಾದರೂ ನಾವು ಮರೆಯಬೇಕಲ್ಲವೆ?' ಎಂದಂತೆ ಕೇಳಿತು.

ವಿನೋದ ತುಟಿ ಪಿಟಕ್ಕೆನ್ನದೇ ಕೂತಿದ್ದ ಅನಿಸುತ್ತದೆ. ಅವನು ಆಗೆಲ್ಲ ಅತ್ತಿಗೆ ಅತ್ತಿಗೆ ಎಂದು ಬಾಯ್ತುಂಬ ಕರೆಯುತ್ತ ಓಡಾಡಿದವ. ಈ ಪ್ರಸ್ತಾಪ ಅವನಿಗೂ ಸಂದಿಗ್ಧ ತರುವಂಥದೇ. 'ಅದು ಹೇಗೆ ಸಾಧ್ಯ? ಛೆ, ಅದು ಹೇಗೆ ಸಾಧ್ಯ? ಹೇಗೆ ಸಾಧ್ಯ ಅದು?' ಅಪ್ಪ ಈ ಪ್ರಶ್ನೆಯನ್ನು ಮೂರು ಬಾರಿ ನಮಗೂ ಕೇಳಿ, ತನ್ನೊಳಗೂ ತಾನು ಕೇಳಿಕೊಂಡಂತಿತ್ತು. ಮಾವ ಒಂದೇ ಮಾತು ಹೇಳಿದ್ದು ಕೇಳಿತು. 'ಹೇಗೆ ಸಾಧ್ಯ ಅಂದರೆ? ಯಾಕೆ ಅಸಾಧ್ಯ? ಎಂಬೆಲ್ಲ ಪ್ರಶ್ನೆಗಳನ್ನು ಸುರೇಖಾ ಕೇಳಿಕೊಳ್ಳಲಿ, ನಾವು ನೀವು ಇಂಥ ವಿಷಯದಲ್ಲಿ ಏನು ಮಾಡುವ ಹಾಗಿದ್ದೇವೆ? ಹೀಗೊಂದು ಸುಗಮ ದಾರಿಯಿದೆಯೆಂದು ತಿಳಿ ಹೇಳಬಹುದು ಅಷ್ಟೇ ನಮ್ಮ ಕರ್ತವ್ಯ, ಒಪ್ಪುವುದೂ ಬಿಡುವುದೂ ಅವರಿಗೆ ಬಿಟ್ಟದ್ದು' ಎನ್ನುತ್ತಲೇ ಅಡಿಗೆ ಮನೆಗೆ ಹೋದ ಹಾಗೆ ಮಾಡಿದ ಮಾವ ನೀರು ಕುಡಿದು ಹೊರಬಂದರು. ವಾಪಸ್ಸು ಹೋಗುವಾಗ ಮಲುಗುವ ಕೋಣೆಯ ಮಂಚದ ಮೇಲೆ ಹೀಗೆ ತಲೆ ತಗ್ಗಿಸಿ ಕೂತ ನಾನು ಅವರಿಗೆ ಸರೀ ಕಾಣುತ್ತಿದ್ದೆ. ನನ್ನ ದೃಷ್ಟಿಯ ಪಕ್ಕದ ಬೆಳಕಿನಲ್ಲಿ ಅವರ ನೆರಳು ಹಾದು ಹೋದದ್ದು ನನ್ನ ಸ್ಮೃತಿಗೆ ಮಾತ್ರ ಅರಿವಾಯಿತು.

ನಂತರದಲ್ಲೂ ಹೊರಗೆ ಗಾಢ ಮೌನ, ಇದು ನನಗೂ ಅಸಹನೀಯವೇ. ವಿನೋದನೂ ಹೊರಗೆ ಇನ್ನೊಂದು ಕುರ್ಚಿಯಲ್ಲಿ ಯಾಕೋ ನನ್ನಂತೆಯೇ ತಲೆ ತಗ್ಗಿಸಿ ಕೂತಿರಬಹುದು ಅನ್ನಿಸಿತು. ಆ ಇಬ್ಬರು ಹಿರಿಯರಿಗೆ ತಮ್ಮ ಮನಸ್ಸಿನ ಹೊರೆಯನ್ನು ಇಳಿಸಿ ಕೂತ ನಿರಾಳತೆ. ಆದರೆ ನಮಗೆ? ಎಂಥದೋ ಕಗ್ಗಂಟಿನ ರಸ್ತೆಯಲ್ಲಿ ಹೊರಟು ದಾರಿಯೇ ಸಿಗದಂಥ ತಲ್ಲಣ, ಭಯ ಮಿಶ್ರಿತ ಅಸಮಾಧಾನ. ಎಲ್ಲಿಯೋ ಅಸಹಾಯಕತೆಯ ಭಾವ. ತೀರ ಆಳಕ್ಕಿಳಿದು ಯೋಚಿಸಲಾಗುತ್ತಲೇ ಇಲ್ಲ. ಮಾವನಿಗೆ ನನ್ನ ಭವಿಷ್ಯದ ಕುರಿತು ಎಷ್ಟೊಂದು ಅಕ್ಕರೆ, ಎಂಥ ಕಾಳಜಿ, ಎಂದೆಲ್ಲ ಮನಸ್ಸಿನಲ್ಲಿ ಅವರ ಕುರಿತು ಆಪ್ತ ಭಾವವೊಂದು ತೇಲಿಹೋಯಿತು. ಹಾಗಾದರೆ ನಾಳೆ ನಾನು ಅಪ್ಪನೊಡನೆ ನನ್ನ ತವರಿಗೆ ತಿರುಗಿ ಹೊರಡುತ್ತಿದ್ದೇನೆಯೇ? ಅಥವಾ ಇಲ್ಲೇ ಇರುತ್ತಿದ್ದೇನೆಯೇ? ಯಾವುದೂ ಬಗೆಹರಿಯಲಿಲ್ಲ. ಅಲ್ಲಿ ಅಮ್ಮನಿಗೆ ಗೊತ್ತಾದರೆ ಏನೆಂದಾಳು? ಅಥವಾ ಮನೆಗೆ ಹೋಗಿ ಯೋಚನೆ ಮಾಡಿ ತಿಳಿಸುತ್ತೇವೆ ಅಂತ ಹೇಳಿ ಹೊರಟುಬಿಡುವುದೋ? ಅಥವಾ ಈ ಮನೆ ಪುನಃ ನನ್ನ ಮನೆಯೇ ಆಗುತ್ತಿರುವಾಗ, ಆ ಇಬ್ಬರು ಗಂಡಸರಿಗೆ ಸ್ವಂತ ಕೈ ಅಡಿಗೆ ತಿನ್ನುವಂತೆ ತೊಂದರೆಗೀಡು ಮಾಡಿ ಹೊರಡುವದೇ? ಏನು ತೀರ್ಮಾನ ಕೈಕೊಳ್ಳುತ್ತೇವೆ ನಾವು? ಅಥವಾ ಇನ್ನು ಸ್ವಲ್ಪ ದಿನಗಳಲ್ಲಿ ಒತ್ತಡಗಳೆಲ್ಲ ಕಡಿಮೆಯಾಗಿ ಈ ಮಾರ್ಗವೇ ಸರಿ ಅಂತ ನನಗೆ ಅನ್ನಿಸಬಹುದೇ?

‘ಅವರವರೇ ಮಾತಾಡಿಕೊಳ್ಳುವುದು ಸರಿ ಅನಿಸುತ್ತದೆ’ ಅಂದರು ಮಾವ. ‘ಏನು ಹೇಳಬೇಕೆಂದೇ ತಿಳಿಯುತ್ತಿಲ್ಲ’ ಅಂದರು ಅಪ್ಪ. ಅಪ್ಪ ವಿನೋದನ ಕಡೆ ತಿರುಗಿ ಕೇಳಿರಬೇಕು. ಅದಕ್ಕೆ ಪ್ರತಿಯಾಗಿ ಮಾವ ‘ಇವನದೇನೂ ಅಭ್ಯಂತರವಿಲ್ಲ, ನಾವಿಬ್ಬರೂ ತಿಳಿಸಿ ಹೇಳಿದರೆ ಒಪ್ಪುತ್ತಾನೆ’ ಅಂದರು. ವಿನೋದನ ಸ್ವರವೇ ಒಮ್ಮೆಯೂ ಕೇಳಿ ಬರಲಿಲ್ಲ. ನಂತರ ಹದಿನೈದು ನಿಮಿಷಕ್ಕೊಂದೂ ಮಾತು ಕೇಳಲಿಲ್ಲ. ಸಂಜೆ ಎಲ್ಲರಿಗೂ ಉಪವಾಸ. ಶ್ರಾದ್ಧದಲ್ಲಿ ನೈವೇದ್ಯಕ್ಕಿಟ್ಟ ಹಣ್ಣು ಹಂಪಲುಗಳನ್ನೇ ಸೇವಿಸಬೇಕೆಂಬ ಮಾತು ಬಂತು. ‘ವಿನೂ ಏಳು, ಹಣ್ಣುಗಳನ್ನೆಲ್ಲ ಸೇರಿಸಿ ಕತ್ತರಿಸು, ಹಾಲು ಇನ್ನೊಮ್ಮೆ ಕಾಸಿ ಬಿಡು’ ಮಾವನ ದನಿ. ಆ ಮಾತಿಗೆ ನಾನೇ ಒಳ ಎದ್ದು ಹೋಗಿ ಹಣ್ಣುಗಳನ್ನು ಕತ್ತರಿಸಬೇಕೋ ಬೇಡವೋ ಎಂಬ ಯೋಚನೆಯಲ್ಲಿ ಕೊಂಚ ಅನುಮಾನಿಸಿದೆ. ಏನು ಮಾಡಬೇಕೆಂದೇ ಹೊಳೆಯದೇ ಕೂತೇ ಉಳಿದಿದ್ದೆ.

ಎದ್ದು ಈ ಮನೆಗೆಲಸದಲ್ಲಿ ತೊಡಗಿಕೊಂಡರೆ, ಅಪ್ರತ್ಯಕ್ಷವಾಗಿ ನಾನು ಅವರೆಲ್ಲ ಯೋಚನೆಗಳಿಗೆ ಒಪ್ಪಿಕೊಂಡಿದ್ದೇನೆ ಎಂದಾಗಬಾರದೆಂದು ಹಸ್ತದಲ್ಲಿ ಹಣೆ ಒತ್ತಿಕೊಂಡು ಕೂತಲ್ಲೇ ಉಳಿದೆ. ಯಾರೋ ಬಂದ ಹೆಜ್ಜೆ ಸದ್ದು. ಹಾಗೆಯೇ ಮರು ಕ್ಷಣದಲ್ಲೇ ಬಟ್ಟಲಲ್ಲಿ ಒಂದು ಬಾಳೆ ಹಣ್ಣು, ಮೂರು ಕತ್ತರಿಸಿದ ಸೇಬಿನ ತುಂಡುಗಳು, ಒಂದು ಮುಷ್ಟಿಯಷ್ಟು ದಾಳಿಂಬೆಯ ಕೆಂಪು ಬೀಜಗಳು, ಪೇರಲದ ಎರಡು ತುಣುಕುಗಳು ಇದ್ದ ಬಟ್ಟಲು ನನ್ನ ಪಕ್ಕದಲ್ಲಿತ್ತು. ಹಣ್ಣಿನ ತಟ್ಟೆ ಅಪ್ಪ ಅಥವ ಮಾವ ತಂದಿಟ್ಟು ಹೋಗಲು ಬಂದಿದ್ದರೆ, ನನ್ನನ್ನು ಏನಾದರೂ ಮಾತಾಡಿಸಿಯೇ ಹೋಗುತ್ತಿದ್ದರು. ಹಾಗಾದರೆ ಬಂದವನು ವಿನೋದನೇ. ಮೊದಲಾದರೆ ‘ಅತ್ತಿಗೆ, ಹಣ್ಣು’ ಅಂತಾದರೂ ಹೇಳಿ ಇಟ್ಟುಹೋಗುತ್ತಿದ್ದ. ಈ ಪರಿಸ್ಥಿತಿಯಲ್ಲಿ ನನ್ನ ಬಳಿ ಯಾವ ಭಾಷೆಯಲ್ಲಿ ಮಾತಾಡಬೇಕವ? ಅವರಪ್ಪನೇ ಅವನಿಗೆ ತಂದಿಟ್ಟ ಸಂದಿಗ್ಧ ಇದು. ಹಣ್ಣುಗಳನ್ನು ನಿಧಾನವಾಗಿ ತಿಂದು ಮುಗಿಸಿ ತಟ್ಟೆ ಇಡಲು ಅಡಿಗೆ ಮನೆಗೆ ಹೋದಾಗ, ವಿನೋದ ಸಿಂಕಿನಲ್ಲಿ ಪಾತ್ರೆ ತೊಳೆಯುತ್ತ ನಿಂತಿದ್ದ. ಅವನೂ ನನ್ನ ಬದಿ ನೋಡಲು ಹೆದರಿದ. ಮಲುಗುವ ಕೋಣೆಯ ಬಾಗಿಲಿನ ಮೇಲೆ ತೂಗು ಬಿದ್ದ, ಬಣ್ಣದ ಭಾವಚಿತ್ರದ ಗಾಜಿನಲ್ಲಿ ಕಟ್ಟು ಹಾಕಿಸಿಕೊಂಡ ದಿನಕರನ ಫೋಟೋ ಸಣ್ಣಗೆ ನಗುತ್ತಿತ್ತು.

‘ಅವರಿಬ್ಬರೂ ಮಾತಾಡಿಕೊಳ್ಳಲಿ, ನಾವಿಬ್ಬರೂ ಹೊರಗೆ ಹೀಗೇ ಒಂದು ಸುತ್ತು ಹಾಕಿ ಬರೋಣ’ ಅಂತ ಮಾವ ಅಂದದ್ದು ಕೇಳಿಸಿತು. ಇತ್ತ ನನ್ನ ಎದೆಯಲ್ಲಿ ಸಣ್ಣ ನಡುಕ. ‘ನೀನೇ ಒಳ ಹೋಗಿ ಮಾತಾಡು’ ಎಂದರು ಮಾವ. ವಿನೋದ ಅಲ್ಲೇ ಕೂತಿದ್ದನೋ ಏನೋ, ‘ಹ್ಞು’ ಸಹ ಹಾಕಲಿಲ್ಲ. ಬಾಗಿಲು ಮುಂದೆ ಮಾಡಿಕೊಂಡು ಇಬ್ಬರೂ ಚಪ್ಪಲಿ ಮೆಟ್ಟಿ ಗೇಟು ತೆಗೆದ ಸದ್ದು. ವಿನೋದ ಈ ಕ್ಷಣ ಏನು ಯೋಚನೆ ಮಾಡುತ್ತಿರಬಹುದು? ಅವನು ಮಾತಾಡಿದರಲ್ಲವೇ ಅವನ ಮನಸ್ಸಿನೊಳಗಿದ್ದದ್ದು ಏನೆಂದು ನನಗೆ ಗೊತ್ತಾಗುವುದು? ನಾನು ಹೇಗೆ ಮಾತಿಗಾರಂಭಿಸುವದು? ಅಪ್ಪರ ಮೇಲೆ ನಾನೇಕೆ ಮಾತಾಡಬೇಕು? ಇಬ್ಬರಿಗೂ ಈ ಸಂಗತಿ ಮಾತಾಡುವ

ಮನಸ್ಸಿದ್ದಂತಿಲ್ಲ. ಈ ಮಗನ ಒಪ್ಪಿಗೆ ಪಡೆದೇ ಆ ಮಾವ ಈ ವಿಷಯವನ್ನು ತನ್ನ ಅಪ್ಪನ ಕಿವಿಯ ಮೇಲೆ ಹಾಕಿದ್ದೋ, ಗೊತ್ತಿಲ್ಲ. ಅಥವಾ ಈ ಕುರಿತು ಮೊದಲೇ ಹೇಳಿರಲೂಬಹುದು. ಅವನ ಒಪ್ಪಿಗೆ ಇದಕ್ಕೆ ಇದೆಯೇ? ಅಯ್ಯೋ ತಾನೇಕೆ ಹೀಗೆ ಯೋಚಿಸಲಾರಂಭಿಸಿದೆ. ನಮ್ಮಿಬ್ಬರ ಸಂಬಂಧ ಈಗಿರುವದಕ್ಕಿಂತ ಇನ್ನೂ ಹೆಚ್ಚಿನದಾಗಿ ಬೆಳೆಯಲು ಸಾಧ್ಯವೇ ಇಲ್ಲ. ಆ ಕುರಿತು ಯೋಚಿಸಲೇ ಒಂದು ತರಹ ದಿಗಿಲೆನಿಸುತ್ತಿದೆ.

ಹೊರಗೆ ವಿನೋದ ಒಳಗೆ ನಾನು ಇಬ್ಬರೂ ಎಂಟೂವರೆಯಿಂದ ಒಂಬತ್ತೂವರೆಯ ತನಕ ಸುಮ್ಮನೇ ಕೂತೇ ಉಳಿದೆವು. ಪರಸ್ಪರ ಮಾತಾಡಿ ನಿರ್ಣಯ ತೊಗೊಳ್ಳುವ ವಿಷಯವೇ ಇದು? ಛೆ! ವಿನೋದನಾದರೂ ಸರಳವಾಗಿ ಮಾತಾಡಿ 'ಇಂಥದ್ದನ್ನು ಯಾಕಾದರೂ ಈ ಹಿರಿಯರು ಯೋಚಿಸುತ್ತಾರೋ, ಇವರಿಗ್ಯಾಕೆ ಬುದ್ಧಿ ಇಲ್ಲ' ಅಂತೆಲ್ಲ ಬೈದಾದರೂ ಬಿಟ್ಟಿದ್ದರೆ, ನಾನು ಇದನ್ನು ನಿರೀಕ್ಷಿಸಿದ್ದೆ. ನಾನು ಹೀಗೆ ಸುಮ್ಮನಿರುವುದು ಕಂಡು ಅವನು, ನನಗೇನಾದರೂ ಈ ವಿಷಯದಲ್ಲಿ ಆಸಕ್ತಿಯಿದೆ ಎಂದು ಭ್ರಮಿಸಿಕೊಂಡರೆ, ಥೂ, ಹಾಗೇನೂ ಆಗದು, ನನ್ನ ಸ್ಥಿತಿಯಲ್ಲಿ ಯಾರು, ಅದೂ ಮೈದುನನನ್ನು? ಇದೇನು ಮಾಹಾಭಾರತದ ಕಾಲವೇ? ಮದುವೆಯೇ ಆಗಬೇಕೆಂತಿದ್ದರೆ, ನನಗೆ ಬೇರೆ ಗಂಡುಗಳು ಸಿಕ್ಕಾರು, ವಿನೋದನಿಗೆ ಬೇರೆ ಹೆಣ್ಣುಗಳು ಇಷ್ಟಪಟ್ಟಾರು, ಇದು ಎರಡು ಮಧುರ ಸಂಬಂಧಗಳನ್ನು ಎಷ್ಟರ ಮಟ್ಟಿಗೆ ಗೋಜಲಾಗಿಸುವ ಕೆಲಸ ಅಂತ ನಮ್ಮ ಮಾವನಿಗೇಕೆ ಅನ್ನಿಸಲಿಲ್ಲ?

ಅಪ್ಪ ಮತ್ತು ಮಾವ ಹಿಂತಿರುಗಿ ಬಂದ ಸದ್ದಾಯಿತು. ಹೊರ ಕೋಣೆಯಲ್ಲೇ ವಿನೋದನನ್ನು ನೋಡಿದ ಮಾವ, 'ಯಾಕೋ? ಒಳ ಹೋಗಿ ಮಾತಾಡಲಿಲ್ಲವ್ವೋ?' ಸಣ್ಣಗೆ ಉಸುರಿದರು. ಅವನು ತಲೆ ಆಡಿಸಿರಬೇಕು ಅಥವಾ ಹಾಗೇ ತಟಸ್ಥನಾಗಿ ಕೂತಿದ್ದನೋ. 'ಹೋಗಲಿ, ನಾಳೆ ಬೆಳಿಗ್ಗೆ ಅವರು ಹೊರಡುತ್ತಾರಂತೆ, ಅಷ್ಟರೊಳಗೆ ಮಾತಾಡು' ಅಂದಂತೆ ಸುಳಿವು ಸಿಕ್ಕಿತು. ಅಪ್ಪ ಬಚ್ಚಲಿಗೆ ಹೋಗಿ ಬಂದು, ಎಲ್ಲಿ ಮಲಗಿಕೊಳ್ಳಬೇಕು ಎಂಬ ಯೋಚನೆಯಲ್ಲಿರುವಾಗಲೇ ಮಾವ, 'ಅಟ್ಟದ ಮೇಲೆ ಹೋಗಿ, ಅಲ್ಲಿ ಎರಡು ಮಂಚಗಳಿವೆ' ಅಂದಂತೆ ಕೇಳಿತು. ಕ್ಷಣದಲ್ಲೇ ಅಪ್ಪ ಅಟ್ಟವೇರಿದ ಸದ್ದು. ಮಾವ ಹೊರ ಕೋಣೆಯಲ್ಲಿ ತಾವು ದಿನವೂ ಮಲಗುತ್ತಿದ್ದ ದಿವಾನದಲ್ಲೇ 'ಶಿವ ಶಿವಾ' ಅನ್ನುತ್ತ ಮೈ ಚೆಲ್ಲಿದರು. ನಾನು ದೀಪ ಆರಿಸಿ ಎಷ್ಟೋ ಹೊತ್ತು ಕಣ್ಣು ತೆರೆದೇ ಒರಗಿದ್ದೆ. ದಿನಕರನ ಜೊತೆಯಲ್ಲಿದ್ದ ಕೋಣೆ ಈ ಇಡೀ ವರ್ಷದಲ್ಲಿ ಅದನ್ನೆಲ್ಲ ಮರೆಯಿಸಿ, ಈಗ ಹೊಸತೊಂದೇ ದಾರಿಗಾಗಿ ಸಜ್ಜುಗೊಂಡಂತಿದೆ ಅನ್ನಿಸಿತು. ನಂತರ ಎಷ್ಟು ಹೊತ್ತಿನಲ್ಲಿ ಕಣ್ಣು ಮುಚ್ಚಿತೋ ಗೊತ್ತೇ ಆಗಲಿಲ್ಲ.

ಬೆಳಿಗ್ಗೆ ಎದ್ದಾಗ ದೇವರ ಕೋಣೆಯಲ್ಲಿ ಹಚ್ಚಿಟ್ಟ ದೀಪಕ್ಕೆ ಕುಡಿ ಕಟ್ಟಿ ನಿಂತಿತ್ತು. ದಿನಕರ ಹೀಗೆ ಕುಡಿ ಕಟ್ಟಿದ ದೀಪ ಕಂಡರೆ ಸಿಡುಕಿ ಬಿಡುತ್ತಿದ್ದ. ಹಾಗಾಗಿ ನಾನು ದೀಪ ಕುಡಿ ಕಟ್ಟುವ ಮೊದಲೇ ಬತ್ತಿಯನ್ನು ಚುರುಕುಗೊಳಿಸಿ ಹೊಸ ದೀಪ ಹಚ್ಚಿಡುತ್ತಿದ್ದೆ. ಯಾಂತ್ರಿಕವಾಗಿ ನನ್ನ ಕೈಗಳು ಆ ಕುಡಿಗಳನ್ನು ತೆಗೆದು, ಬೇರೆ ದೀಪ

ಹೊತ್ತಿಸಬೇಕೆಂಬ ಯೋಚನೆಯನ್ನು ನಾನು ಪ್ರಜ್ಞಾಪೂರ್ವಕ ತಡೆದೆ. ಒಬ್ಬರಿಗೊಬ್ಬರು ಮಾತಾಡದೇ ನಮ್ಮ ನಮ್ಮ ಕೆಲಸ ಮಾಡಿಕೊಂಡು ಅವಸರದಲ್ಲಿ ವಿನೋದ ಕಲಿಸಿಟ್ಟ ಅವಲಕ್ಕಿ ಗಿವಲಕ್ಕಿ ತಿನ್ನುವ, ಚಹಗಿಹ ಕುಡಿಯುವ ಶಾಸ್ತ್ರ ಮಾಡಿಕೊಂಡು, ಅಪ್ಪ ಮತ್ತು ನಾನು ಮನೆಯಿಂದ ಹೊರಬಿದ್ದೆವು. ತೀರಾ ಹೊರಡುವಾಗ ಬಾಗಿಲಲ್ಲಿ ಮಾವನ ಕಾಲಿಗೆ ವಂದಿಸಿದೆ. ಹಿಂತಿರುಗಿ ನೋಡಬೇಕೆನಿಸಿದರೂ ನಾನು ನೋಡಲಿಲ್ಲ. ಮನಸ್ಸನ್ನು ಹಾಗೆಲ್ಲ ಮಾರಿಕೊಳ್ಳುವುದು ಅದೇನು ಆಟವೇ? ನಾನು ಎಷ್ಟು ಹೊತ್ತಾದರೂ ಮೌನ ಮುರಿಯಲೇ ಇಲ್ಲ. ಬಸ್ ನಿಲ್ದಾಣದಲ್ಲಿ ನಮ್ಮೂರಿನ ಬಸ್ಸು ನಿಂತೇ ಇತ್ತು. ಬಸ್ಸಿನಲ್ಲಿ ಕೂತ ಸ್ವಲ್ಪ ಹೊತ್ತಿನ ನಂತರ ಅಪ್ಪನೇ ಮೆಲ್ಲಗೆ ಬಾಯಿ ಬಿಟ್ಟರು. 'ನಿಮ್ಮ ಮಾವ ಹೇಳಿದ್ದು ಮನಸ್ಸಿಗೆ ಹಚ್ಚಿಕೊಳ್ಳಬೇಡ, ಅವರಿಗೆ ಇತ್ತೀಚೆಗೆ ಬರಿ ಆಸ್ತಿ ವಿಲೇವಾರಿಯ ಚಿಂತೆಯಂತೆ, ವಿನೋದನ ಬಳಿ ಎಲ್ಲ ವಿಚಾರಿಸಿದೆ. ನನಗೂ ಈ ಪ್ರಸ್ತಾಪ ಇಷ್ಟವಾಗಲಿಲ್ಲ. ಕಾನೂನು ರೀತ್ಯಾ ಅರ್ಧ ಆಸ್ತಿ ನಿನಗೆ ಕೊಡಬೇಕಾಗುತ್ತದೆಂದು, ವಿನೋದನಿಗೆ ನಿನ್ನನ್ನೇ ಮದುವೆಯಾಗುವಂತೆ ದುಂಬಾಲು ಬಿದ್ದಿದ್ದಾರಂತೆ, ಈ ಆಸ್ತಿಗಾಗಿ ತಾಯಿ ಸ್ಥಾನದಲ್ಲಿ ಪೊರೆದ ದೇವತೆಯನ್ನು ಬೇರೆ ರೀತಿಯಲ್ಲಿ ಭಾವಿಸಲು ಹೇಗೆ ಸಾಧ್ಯ? ಎಂದು ವಿನೋದನೂ ಆತಂಕದಲ್ಲಿದ್ದಾನೆ' ಅಂದರು ಅಪ್ಪ. ನಾನು ಒಮ್ಮೆ ದೊಡ್ಡ ಉಸಿರೆಳೆದುಕೊಂಡು ಸರಿಯಾಗಿ ಕೂತೆ. ಬಸ್ಸು ಗಾಳಿಯಲ್ಲಿ ಹಗುರವಾಗಿ ತೇಲುತ್ತ ಸಾಗುತ್ತಿತ್ತು.

❖

(ಕಥಾಭೂಮಿ – ಸೆಪ್ಟೆಂಬರ್–ಅಕ್ಟೋಬರ್, 2012)

ಜಿನ್ನ್ ಖಾದಿರಿಯ ಜನ್ನತ್ ಪ್ರಸಂಗವು..

ಬಿ.ಎಂ.ಹನೀಫ್

ಅರೇಬಿಯಾದ ಮರಳುಗಾಡಿನಲ್ಲಿ ನೆತ್ತಿಯ ಮೇಲೆ ಬೆಂಕಿಯಂತಹ ಉರಿಬಿಸಿಲು ಹೊತ್ತುಕೊಂಡು, ಕಾಲ ಕೆಳಗೆ ಬಾಣಲೆಯ ಹುರಿಗಾಳಿನಂತೆ ಉರಿಯುವ ಮರಳಲ್ಲಿ ಬೂಟುಗಾಲನ್ನೂ ಊರಲಾಗದೆ ಒದ್ದಾಡುತ್ತಾ ಖರ್ಜೂರದ ತೋಟಕ್ಕೆ ನೀರು ಹೊರುವ ಕೆಲಸ ಮಾಡುತ್ತಿದ್ದ ಬದ್ರುದ್ದೀನ್, ಕೆಲಸ ಬಿಟ್ಟು ಊರಿಗೆ ಓಡಿ ಬಂದು ಇನ್ನೂ ಎರಡು ತಿಂಗಳಾಗಿಲ್ಲ. ಕೆಲವೊಮ್ಮೆ ಅದೇ ಕೆಲಸ ವಾಸಿಯಿತ್ತು ಎಂದು ಬದ್ರುದ್ದೀನ್‌ಗೆ ಅನ್ನಿಸುತ್ತಿತ್ತು. ಇಲ್ಲಿ ಈ ಏಪ್ರಿಲ್ ಉರಿಬಿಸಿಲಿನಲ್ಲಿ ಫರ್ಲಾಂಗು ದೂರದ ಕೆಳಗಿನ ಹಿತ್ಲಿನ ಮನೆಯ ಹನ್ನೆರಡಾಳು ಆಳದ ಬಾವಿಯಿಂದ ರಾಟೆಯ ಹಗ್ಗದಲ್ಲಿ ಎತ್ತೆತ್ತಿ ಮೊಗೆದು ನೀರು ತುಂಬಿದ ಎರಡು ಕೊಡಪಾನಗಳನ್ನು ಎರಡೂ ಹೆಗಲುಗಳಲ್ಲಿ ಹೊತ್ತುಕೊಂಡು ಮೆಟ್ಟಿಲುಗಳನ್ನು ಓಡುತ್ತೋಡುತ್ತಾ ಹತ್ತಿ ಗುಡ್ಡೆಯ ಮೇಲಿನ ಮನೆ ತಲುಪಿ ಹಂಡೆಗೆ ಸುರಿದು ಮತ್ತೆ ಮರಳಬೇಕು. ಶತಮಾನದ ಹಿಂದೆ ಬದ್ರುದ್ದೀನನ ಅಜ್ಜನ ಅಪ್ಪ ಖರೀದಿಸಿ ತಂದ ಈ ಪಂಚಲೋಹದ ಹಂಡೆಯೋ ಕನಿಷ್ಟ ೨೦ ಕೊಡಪಾನಗಳಷ್ಟು ನೀರನ್ನು ಹೊಟ್ಟೆಯೊಳಗೆ ತುಂಬಿಸಿಕೊಳ್ಳದೆ ತೇಗು ಬಿಡುವುದೇ ಇಲ್ಲ. ಕೆಳಗಿನ ಹಿತ್ಲಿನಿಂದ ಈ ಗುಡ್ಡದ ಮೇಲಿನ ಮನೆವರೆಗೆ ಹತ್ತು ಸಲ ಹತ್ತಿ ಇಳಿದು ನಡೆಯುವುದೇ ದೊಡ್ಡ ಸಾಹಸದ ಕೆಲಸ; ಅದರ ಮೇಲೆ ನೀರು ತುಂಬಿದ ಎರಡು ಕೊಡಗಳನ್ನೂ ಹೊತ್ತುಕೊಂಡು ಬರಬೇಕೆಂದರೆ, ರಬ್ಬುರ್ರಹ್ಮಾನಾಯ ರಾಜ ತಂಬುರಾನೇ.. ಜಹನ್ನಮ್‌ನ ನರಕದ ಬೆಂಕಿಯ ಕಾಠಿಣ್ಯವೂ ಇದಕ್ಕಿಂತ ದೊಡ್ಡದಿರಲಿಕ್ಕಿಲ್ಲ ಎಂದು ಬದ್ರುದ್ದೀನನಿಗೆ ಅನ್ನಿಸುತ್ತಿದ್ದುದೂ ಸುಳ್ಳಲ್ಲ. ಆದರೆ ಅರೇಬಿಯಾದ ಮರಳುಗಾಡಿಗೆ ತೆರಳಲು ಮಾಡಿದ್ದ ಮೈತುಂಬ ಸಾಲ ತೀರಿಸುವ ಅನಾಯಾಸ ದಾರಿಯೊಂದು ಅಣ್ಣ ಖಾದಿರಿಯ ಮನೆಯಲ್ಲಿ ಬಾಯಿ ತೆರೆದು ನಿಂತದ್ದು ಬದ್ರುದ್ದೀನನಿಗೆ ಆಶಾವಾದ ಹುಟ್ಟಿಸಿತ್ತು. ಅದಕ್ಕೆ ತಕ್ಕಂತೆ ಬಾಡಿಗೆ ಮನೆಯಲ್ಲಿದ್ದ ಬದ್ರುದ್ದೀನನ ಹೆಂಡತಿ ಮಕ್ಕಳೂ ಅಣ್ಣನ ಮನೆ ಸೇರಿಕೊಂಡಿದ್ದರು.

ಕಳೆದ ಒಂದು ತಿಂಗಳಿಂದ ಬದ್ರುದ್ದೀನ್ ಹೀಗೆ ದಿನಕ್ಕೆ ಎರಡು ಸಲ ನೀರು ಹೊತ್ತು ಹೊತ್ತೇ ಹೈರಾಣಾಗಿದ್ದಾನೆ. ಹಂಡೆಗೆ ನೀರು ಪೂರ್ಣ ತುಂಬಿ ಉಕ್ಕಿದ ಬಳಿಕವಷ್ಟೇ ತೋಟದಿಂದ ಹೆಕ್ಕಿ ತಂದ ತೆಂಗಿನ ಗರಿ, ತೆಂಗಿನ ಕಾಯಿಯ ಚಿಪ್ಪುಗಳು ಮತ್ತು ಸಂತೆಪೇಟೆಯ ಅಬ್ಬುಕಾಕನ ಸೌದೆ ಡಿಪೋದಿಂದ ತಂದ ಕರ್ಮಾರು ಸೋಂಟೆಗಳನ್ನು ಒಲೆಗೆ ಒಡ್ಡಿ ಬೆಂಕಿ ಹಚ್ಚಬೇಕು. ಬೆಂಕಿಯ ಉರಿ ಹಂಡೆಯ ಸುತ್ತಲೂ ಧಗಧಗನೆ ನಾಲಿಗೆ ಚಾಚಿ, ನೀರು ಚೆನ್ನಾಗಿ ಕಾದ ಬಳಿಕವಷ್ಟೇ ಜಿನ್ನ್ ಖಾದಿರಿಯ ಸ್ನಾನ ಶುರುವಾಗುತ್ತದೆ. ಬಾಯಲ್ಲಿ ಮಣ ಮಣ ಅರೆಬಿಕ್ ಮಂತ್ರಗಳನ್ನು

ಹೇಳುತ್ತಾ, ಒಂದು ಇಡೀ ಹಂಡೆಯ ಕಾದ ಬಿಸಿನೀರನ್ನು ನೆತ್ತಿಯಿಂದ ಉಂಗುಷ್ಟದವರೆಗೂ ಸರಾಗವಾಗಿ ಸುರಿದುಕೊಂಡು, ಅರ್ಧ ಗಂಟೆಯ ಸ್ನಾನ ಮುಗಿಸಿ ಹಬೆಯಾಡುವ ಬರಿಮೈಯನ್ನು ಒರೆಸುತ್ತಾ ಜಿನ್ನ್ ಖಾದಿರಿ ಮನೆಯೊಳಕ್ಕೆ ಬಂದ ನಂತರ, ಮತ್ತೆ ಬದ್ರುದ್ದೀನ್ ಹಂಡೆಯಲ್ಲಿ ಅಳಿದುಳಿದ ನೀರನ್ನೆಲ್ಲ ಬಸಿದು ಸ್ವಚ್ಛ ಬಟ್ಟೆಯಿಂದ ಅದರೊಳಗೆ ಒರಸಬೇಕು. ಅಷ್ಟರಲ್ಲಿ ಮನೆಯ ಮುಂದೆ ಊರಿನಿಂದ, ಪರವೂರಿನಿಂದ ಬಂದ ರೋಗಿಗಳ ಮತ್ತು ಭಕ್ತರ ಉದ್ದನೆಯ ಕ್ಯೂ ಕಾಣಿಸಿಕೊಳ್ಳುತ್ತದೆ. ಬಂದವರನ್ನು ವಿಚಾರಿಸಿ ಹೊರಗೆ ಅಂಗಳದ ಕೊನೆಯ ಚಪ್ಪರದ ಕೆಳಗೆ ಸಾಲಾಗಿ ಹಾಕಿರುವ ಕುರ್ಚಿಯಲ್ಲಿ ಕುಳ್ಳಿರಿಸಿ, ಒಬ್ಬೊಬ್ಬರಿಗೇ ಕೂಪನ್ ಕೊಡಬೇಕು. ಆ ವೇಳೆಗೆ ಜಿನ್ನ್ ಖಾದಿರಿಯ ಬೆಳಿಗ್ಗೆಯ ನಾಷ್ಟಾ ಮುಗಿದಿರುತ್ತದೆ. ಅವಸರದಲ್ಲಿ ಬದ್ರುದ್ದೀನ್ ನಾಷ್ಟ ಮುಗಿಸಬೇಕು. ಆ ಬಳಿಕ ಬಂದವರನ್ನು ಒಬ್ಬೊಬ್ಬರನ್ನಾಗಿ ವಿಚಾರಿಸಿ ಔಳಧಿ ಕೊಡುವ ಕೆಲಸ ಆರಂಭವಾಗುತ್ತದೆ.

ಕೆಲವರಿಗೆ ಚೀಟಿ ಮಂತ್ರಿಸಿ ಕೊಟ್ಟರೆ ಸಾಕು, ಇನ್ನು ಕೆಲವರಿಗೆ ಅಲ್ಲಿಯೇ ತಲೆ ಒತ್ತಿ ಹಿಡಿದು ಕುರಾನಿನ ಆಯತ್‌ಗಳನ್ನು ಓದಿ ಇಶ್ಯೂಪ್.. ಅಂತ ಊದಬೇಕು. ಆಯ್ದ ಕೆಲವರಿಗೆ ಗಿಡಮೂಲಿಕೆಗಳ ಔಷಧಿಯನ್ನು ತಯಾರಿಸಿದ ಬಳಿಕ ಮುಂದಿನ ವಾರ ಯಾವ ದಿನ ಬರಬೇಕು ಎಂದು ಗುರುತು ಹಾಕಿಕೊಡಬೇಕು. ಬದ್ರುದ್ದೀನ್ ಪಕ್ಕದಲ್ಲೇ ನಿಂತು ಖಾದಿರಿಗೆ ಸಾಥ್ ನೀಡದಿದ್ದರೆ ಈ ಯಾವ ಕೆಲಸವೂ ಸುಸೂತ್ರವಾಗಿ ನಡೆಯುವುದಿಲ್ಲ.

ಎಷ್ಟೋ ಸಲ ಖಾದಿರಿ ಯಾವ ಭಾಷೆಯಲ್ಲಿ ಏನು ಹೇಳುತ್ತಾನೆಂಬುದೇ ಬಂದವರಿಗೆ ಅರ್ಥವಾಗುವುದಿಲ್ಲ. ಅರ್ಧ ಮಲಯಾಳಂ, ಅರ್ಧ ತುಳು, ಅರ್ಧ ಕನ್ನಡ, ಅರ್ಧ ಅರೇಬಿಕ್, ನಡುನಡುವೆ ಇಂಗ್ಲಿಷ್, ಕೊಂಕಣಿ, ಉರ್ದು– ಹೀಗೆ ಬರುವ, ಬಾರದಿರುವ ಎಲ್ಲ ಭಾಷೆಗಳೂ ಸೇರಿ ಜಿನ್ನ್ ಖಾದಿರಿ ಮಾತನಾಡತೊಡಗಿದರೆ ಕೆಲವೊಮ್ಮೆ ಬದ್ರುದ್ದೀನನೇ ಅದನ್ನು ಭಾಷಾಂತರಿಸಿ ಹೇಳಲು ಉಬ್ಬಸ ಬಂದವರಂತೆ ಕಷ್ಟಪಡುವುದುಂಟು. ಘಟ್ಟದ ಮೇಲಿನ ದೂರದೂರದ ಹಳ್ಳಿಗಳಿಂದ ಬಂದವರಂತೂ ಭಕ್ತಿಯಿಂದ ನಡುಬಗ್ಗಿಸಿ ನಿಂತು ಹೇಳಿದ್ದೆಲ್ಲ ಅರ್ಥವಾಯಿತೆಂಬಂತೆ ತಲೆಯಾಡಿಸುವುದನ್ನೂ ಕಣ್ಣರಳಿಸುವುದನ್ನೂ ನೋಡುವುದೇ ಒಂದು ಸೊಗಸು! ಎಷ್ಟೋ ಡಾಕ್ಟರುಗಳ ಬಳಿ ಹೋಗಿ ಸಾವಿರಾರು ರೂಪಾಯಿ ಖರ್ಚು ಮಾಡಿದರೂ ಗುಣವಾಗದೆ ಕೈಚೆಲ್ಲಿ ಕೊನೆಗೆ ಗುಡ್ಡೆಮನೆಯ ಜಿನ್ನ್ ಖಾದಿರಿಯ ಬಳಿಗೆ ಬಂದವರಂತೂ ಆತ ಏನು ಹೇಳಿದರೂ ಮಾಡೋದಕ್ಕೆ ಸೈ ಎಂಬಂತೆ ನಿಂತಿರುತ್ತಾರೆ. ದಿನವೊಂದಕ್ಕೆ ಏನಿಲ್ಲವೆಂದರೂ ೪೦ ರಿಂದ ೬೦ ಮಂದಿ ಬರೋದು ಗ್ಯಾರಂಟಿ. ಅದರಲ್ಲೂ ಗುರುವಾರ ವಿಶೇಷ ದಿನ. ಅವತ್ತು ಜನರ ನೂಕುನುಗ್ಗಲು ಹೆಚ್ಚು. ಅವರನ್ನೆಲ್ಲ ಸುಧಾರಿಸಿ ಕಳುಹಿಸುವುದರಲ್ಲಿ ಸಂಜೆ ಸೂರ್ಯ ಕೆಂಪಗಾಗಿರುತ್ತಾನೆ. ಮತ್ತೆ ಸಂಜೆ ಜಿನ್ನ್ ಖಾದಿರಿಯ ಸ್ನಾನಕ್ಕೆ ವ್ಯವಸ್ಥೆಯಾಗಬೇಕು. ಬದ್ರುದ್ದೀನನೇ

ನೀರು ಹೊತ್ತು ತರಬೇಕು. ಹಂಡೆ ಕಾಯಿಸಬೇಕು. ಬೇರೆ ಯಾರೂ ಆ ನೀರನ್ನು ಮುಟ್ಟುವಂತಿಲ್ಲ. ಹೆಂಗಸರಂತೂ ಆ ನೀರಿನ ಹತ್ತಿರ ಸುಳಿಯಬಾರದು. ನೀರು ಮಾತ್ರವಲ್ಲ ಹಂಡೆಗೆ ಉರಿ ಕಾಯಿಸುವ ತೆಂಗಿನ ಸೋಗೆಯನ್ನೂ ಹೆಂಗಸರು ಮುಟ್ಟುವಂತಿಲ್ಲ. ಹಾಗೇನಾದರೂ ಹೆಂಗಸರು ನೀರಿಗೆ ಕೈ ಹಾಕಿದರೆ ಖಾದಿರಿಯ ಮೈಮೇಲೆ ಬಂದಿರುವ ಜಿನ್ನ್‌ಗೆ ಅಸಾಧ್ಯ ಕೋಪ ಉಕ್ಕೇರಿ ಬಂದು ಅಲ್ಲೊಂದು ರಣರಂಗವೇ ನಿರ್ಮಾಣವಾಗಿಬಿಡುತ್ತದೆ.

ಒಮ್ಮೆ ಹೀಗೆ ಗೊತ್ತಿಲ್ಲದೆ ಜಿನ್ನ್ ಖಾದಿರಿಯ ಹೆಂಡತಿ ಜುಬೇದಾ ಒಲೆಯ ಒಂದು ಕರ್ಮಾರು ಸೋಂಟೆಗೆ ಕೈಹಾಕಿ, ಅದು ಜಿನ್ನ್‌ಗೆ ಗೊತ್ತಾಗಿ ಖಾದಿರಿಯ ಇಡೀ ಮೈ ಮೇ ತಿಂಗಳ ಉರಿಬಿಸಿಲಿಗೆ ಒಣಗಿದ ಕಾಷ್ಠದಂತಾಗಿ ಏದುಸಿರು ಬಿಡುತ್ತಾ ಹಾಂ ಹೂಂ ಎಂದು ಗುರುಗುಟ್ಟುತ್ತಾ ಕಣ್ಣು ಗುಡ್ಡೆಗಳೆರಡೂ ತೇಲು ಮೇಲುಗಣ್ಣಾಗಿ, ಕೊನೆಗೆ ಪರಿಸ್ಥಿತಿಯನ್ನು ತಹಬಂದಿಗೆ ತರಲು ಬದ್ರುದ್ದೀನನಿಗೆ ಸಾಕುಬೇಕಾಗಿತ್ತು. ಅವತ್ತು ಪರಿಸ್ಥಿತಿ ಎಷ್ಟು ಹದಗೆಟ್ಟಿತ್ತೆಂದರೆ, ಬದ್ರುದ್ದೀನ್ ಕೂಡಾ ಸಿಟ್ಟು ನೆತ್ತಿಗೇರಿ ಒಂದೇ ಸಮನೆ ಮನೆಯ ಎಲ್ಲ ಹೆಂಗಸರ ಮೇಲೂ ವಾಚಾಮಗೋಚರ ಬೈಗುಳದ ಮಳೆ ಸುರಿಸಿದ್ದ.

ಸೆಲ್ಲುಂಸೆಲ್ಲಾನತ್ತಿಲ್ಲ.. ದಿಂದ ಶುರುವಾದ ಬೈಗುಳ ಮನೆಯ ಎಲ್ಲ ಹೆಂಗಸರ ತಂದೆ ತಾಯಿಯರ, ಅವರ ಅಜ್ಜ ಅಜ್ಜಿಯವರ ಕುಲಗೋತ್ರಗಳನ್ನೆಲ್ಲ ಒಂದೊಂದಾಗಿ ಜಾಲಾಡುತ್ತಾ.. ರಂ.. ಮುಂ.. ಗಳನ್ನು ಒಂದೇ ಸಮನೆ ಉದುರಿಸುತ್ತಾ ಬದ್ರುದ್ದೀನ್ ಅವತ್ತು ಎಷ್ಟು ಕೆಟ್ಟದಾಗಿ ಶಬ್ದಗಳನ್ನು ಗಾಳಿಯಲ್ಲಿ ಹಾರಾಡಿಸಿದನೆಂದರೆ, ಸ್ವತಃ ಖಾದಿರಿಯ ಮೈಮೇಲೆ ಬಂದ ಜಿನ್ನ್ ಕೂಡಾ ಒಂದರೆಕ್ಷಣ ಗಾಬರಿಗೊಂಡು ನಿಂತಂತೆ ಕಾಣಿಸಿತ್ತು. ಅಲ್ಲಿಂದೀಚೆಗೆ ಯಾವ ಹೆಂಗಸರೂ ಖಾದಿರಿಯ ಸ್ನಾನದ ಹೊತ್ತಲ್ಲಿ ಸ್ನಾನದ ಮನೆಯ ಕಡೆಗೆ ತಲೆ ಹಾಕುತ್ತಲೇ ಇರಲಿಲ್ಲ. ಎಲ್ಲ ಶುರುವಾದದ್ದು ಮೂರು ತಿಂಗಳ ಹಿಂದೆ. ಅಲ್ಲಿವರೆಗೂ ಖಾದಿರಿ ಕೊಳ್ತಂಗಡಿಯ ಜನಸಾಮಾನ್ಯರಲ್ಲಿ ಅತಿ ಸಾಮಾನ್ಯರಂತೆ ಓಡಾಡಿಕೊಂಡಿದ್ದ. ಏಳನೇ ಇಯತ್ತೆಗೇ ಸರ್ಕಾರಿ ಪ್ರಾಥಮಿಕ ಶಾಲೆಯ ಗೋಡೆಗೊಂದು ದೊಡ್ಡ ಸಲಾಮು ಹೊಡೆದು ತನ್ನ ಅಪ್ಪನ ಜತೆ ಬಿರಿಯಾನಿ ಪಕ್ವಾನ್ ಕೆಲಸಕ್ಕೆ ಹೊರಟು ನಿಂತವನು ಖಾದಿರಿ. ಅಪ್ಪ ಅಕಾಲದಲ್ಲೇ ತೀರಿಕೊಂಡ ಬಳಿಕ, ಸ್ವಲ್ಪ ದಿನ ಬೇರೆಯವರ ಕೈಕೆಳಗೆ ಬಿರಿಯಾನಿ ಕೆಲಸ ಮುಂದುವರಿಸಿದ. ಆದರೆ ಅದು ಕೈ ಹತ್ತದೆ ಕೊಳ್ತಂಗಡಿಯ ಹೆದ್ದಾರಿ ಕ್ರಾಸ್‌ನಲ್ಲಿ ಸಣ್ಣದೊಂದು ತರಕಾರಿ ಅಂಗಡಿಯನ್ನು ಇಟ್ಟುಕೊಂಡ. ಬೆಳ್ಳಂಬೆಳಿಗ್ಗೆ ಸಿಪಿಸಿ ಬಸ್ಸು ಹತ್ತಿ ಮಂಗಳೂರಿನ ಸೆಂಟ್ರಲ್ ಮಾರ್ಕೆಟ್‌ಗೆ ಹೋಗಿ, ಟೆಂಪೋ ಒಂದರಲ್ಲಿ ತರಕಾರಿ, ಹಣ್ಣುಗಳನ್ನು ತುಂಬಿ ತಂದು ಅಂಗಡಿಯ ಬಾಗಿಲು ತೆರೆದು ಕುಳಿತರೆ ರಾತ್ರಿ ಒಂಭತ್ತಕ್ಕೆ ಬಾಗಿಲು ಎಳೆಯೋದು. ಆದರೆ ತರಕಾರಿ ಅಂಗಡಿಗೆ ಬರುವ ಸುರಸುಂದರಾಂಗಿಯರ ಕುಡಿನೋಟಗಳ ಕೂರಂಬಿಗೆ ಸಿಕ್ಕು ಮೈಮರೆಯತೊಡಗಿದ

ಖಾದಿರಿಗೆ ತರಕಾರಿಯ ತೂಕ ಸರಿಯಾಗಿ ಗಮನಕ್ಕೇ ಬರುತ್ತಿರಲಿಲ್ಲ. ಖಾದಿರಿಯ ಈ ಸ್ತ್ರೀರೋಗದ ಸುಳಿವು ಸಿಕ್ಕ ಕೊಳ್ತಂಗಡಿಯ ಮೋಹನಾಂಗಿಯರೆಲ್ಲ ತರಕಾರಿ, ಹಣ್ಣು ಖರೀದಿಸಲು ದೊಡ್ಡ ಕೈಚೀಲಗಳನ್ನೂ, ಅತ್ಯಂತ ಸಣ್ಣ ಪರ್ಸ್‌ಗಳನ್ನೂ ತಂದು, ಕುಡಿನೋಟವನ್ನು ಧಾರಾಳ ಒದಗಿಸುತ್ತಿದ್ದರು. ಮೀಸೆ ಮೊಳೆಯುತ್ತಿದ್ದಂತೆಯೇ ಮಂಗಳೂರಿನ ನ್ಯೂಚಿತ್ರಾ ಟಾಕೀಸಿನಲ್ಲಿ ಬರುತ್ತಿದ್ದ ಇಂಗ್ಲಿಷ್ ಚೆಕ್ಸ್ ಪಿಕ್ಚರುಗಳನ್ನೂ ಯಥೇಚ್ಛ ನೋಡತೊಡಗಿದ ಖಾದಿರಿ, ಪಕ್ಕದಲ್ಲೇ ಇದ್ದ ಸಂಗಮ್ ಬಾರಿಗೂ ಗುಟ್ಟಾಗಿ ಸಣ್ಣ ಭೇಟಿ ನೀಡತೊಡಗಿದ. ಆ ಬಳಿಕ ಆತ ಅಂಗಡಿಗೆ ಬರುವುದೂ ತಡವಾಯಿತು. ಮೊದಲೆಲ್ಲ ಒಂದು ದಿನವೂ ರಜೆ ಮಾಡದಿದ್ದ ಆತ, ಕೊನೆ ಕೊನೆಗೆ ವಾರದಲ್ಲಿ ೨–೩ ದಿನ ಅಂಗಡಿಗೆ ಬೀಗ ಹಾಕುವುದು ಮಾಮೂಲಾಯಿತು. ಅಳಿದುಳಿದ ತರಕಾರಿಯೂ ಕೊಳೆಯತೊಡಗಿದಂತೆ ಖಾದಿರಿಯ ತರಕಾರಿ ಅಂಗಡಿಗೂ ನವತಾಲ್ ಬೀಗ ಬಿತ್ತು. ಏನೇ ಆದರೂ ಮಾನವನ ಅದಮ್ಯ ಚೇತನದ ಶಕ್ತಿ ದೊಡ್ಡದು. ತರಕಾರಿ ಮಾರ್ಕೆಟ್‌ಗೆ ಸಲಾಂ ಹೊಡೆದ ಖಾದಿರಿ ಊರಿನಲ್ಲೇ ಸೆಟ್ಲ್ ಆಗಿ, ತನ್ನ ಅಪ್ಪನಿಂದ ಕಲಿತ ಬಿರಿಯಾನಿ ಮಾಡುವ ವಿದ್ಯೆಯನ್ನೇ ಮತ್ತೆ ಶುರು ಹಚ್ಚಿಕೊಂಡ. ಹಾಗೆ ಆತ ಬಿರಿಯಾನಿ ಪಕ್ವಾನ್ ಆದ ಘಳಿಗೆ ತುಂಬ ಪ್ರಶಸ್ತವಾಗಿದ್ದುದರಿಂದಲೋ ಏನೊ ಈ ಸಲ ವೃತ್ತಿ ಕೈಹಿಡಿದೆತ್ತಿತು.

ಕೇವಲ ಆರು ತಿಂಗಳಲ್ಲೇ ಹೊಸ ಉದ್ಯೋಗ ಎಷ್ಟು ಕಚ್ಚಿಕೊಂಡಿತೆಂದರೆ, ಸುತ್ತ ಮುತ್ತಲ ಛಪ್ಪನ್ನೈವತ್ತಾರು ಹಳ್ಳಿಗಳಲ್ಲೂ ಈತ "ಬಿರಿಯಾನಿ ಕಾದಿರಿ" ಎಂದೇ ಖ್ಯಾತಿ ಪಡೆದ. ಒಂದೆರಡು ವರ್ಷಗಳಲ್ಲಿ ಗಂಧಸಾಲೆ ಅಕ್ಕಿಗೆ ಯಾವ ಡಾಲ್ಡಾ ಎಷ್ಟು ಹಾಕಬೇಕು ಎಂಬಲ್ಲಿಂದ ಹಿಡಿದು, ಬಾಸ್ಮತಿ ಅಕ್ಕಿಯಲ್ಲಿ ಬಿರಿಯಾನಿ ಮಾಡುವಾಗ ಕರೆಕ್ಟಾಗಿ ಧಮ್ ಬರಲು ದೊಡ್ಡ ತಪ್ಪಲೆಯ ಮುಚ್ಚಳದ ಸುತ್ತ ಎಷ್ಟು ಹೊತ್ತಿಗೆ ಮೈದಾ ಅಂಟಿಸಬೇಕು ಎಂಬಲ್ಲಿಯವರೆಗೆ; ಅಥವಾ ದೊಡ್ಡ ತಪ್ಪಲೆಯಲ್ಲಿ ಬೆಂದ ಬಿರಿಯಾನಿಯ ಮೇಲಿನ ತಾಟನ್ನು ಎಷ್ಟು ನಿಮಿಷ, ಎಷ್ಟು ಸೆಕೆಂಡುಗಳ ಬಳಿಕ ಓಪನ್ ಮಾಡಬೇಕು ಎಂಬಲ್ಲಿಂದ ಹಿಡಿದು, ಯಾವ ಮಾಂಸದೂಟಕ್ಕೆ ಎಷ್ಟು ಚಿಟಿಕೆ ಸಾಫ್ರಾನ್ ಎಷ್ಟು ಹೊತ್ತಲ್ಲಿ ಸೇರಿಸಬೇಕು ಎಂಬಲ್ಲಿಯವರೆಗೆ – ಬಿರಿಯಾನಿ ಮಾಡುವ ಮಹಾವಿದ್ಯೆಯ ಅಣುಕಣಗಳನ್ನೂ ಖಾದಿರಿ ಕರತಲಾಮಲಕ ಮಾಡಿಕೊಂಡಿದ್ದ. ಅದಕ್ಕೆಂದೇ ಆತನಿಗೆ ಪ್ರತಿದಿನವೂ ಒಂದಲ್ಲ ಒಂದು ಕಡೆಯಿಂದ ಬಿರಿಯಾನಿ ಮಾಡಿಸುವ ಆರ್ಡರ್ ಬರುತ್ತಲೇ ಇತ್ತು. ಮದುವೆ ಸೀಸನ್‌ನಲ್ಲಂತೂ ಬಿರಿಯಾನಿ ಖಾದಿರಿಯನ್ನು ಒಂದು– ಎರಡು ತಿಂಗಳು ಮೊದಲೇ ಬುಕ್ ಮಾಡಬೇಕು! ತನ್ನ ಮೂವರು ಸಹಾಯಕರನ್ನು ಕಟ್ಟಿಕೊಂಡು ಬಿರಿಯಾನಿ ಮಾಡುವ ಸಲುವಾಗಿ ಆತ ಓಡಾಡದ ಹಳ್ಳಿಗಳಿಲ್ಲ. ಹೀಗೆ ಬಿರಿಯಾನಿಯಲ್ಲೇ ಖ್ಯಾತಿ ಹೊಂದಿ ಕೈಯಲ್ಲಿ ನಾಲ್ಕು ಕಾಸು ನಲಿದಾಡಿದ ಬಳಿಕ ಸಂಬಂಧಿಕರೇ ಹತ್ತಾರು ಕಡೆಯಿಂದ ಖಾದಿರಿಗೆ ಹೆಣ್ಣು ಕೊಡಲು ನಾ ಮುಂದೆ ತಾ ಮುಂದೆ ಎಂಬಂತೆ

ಓಡಾಡತೊಡಗಿದರು. ಇದ್ದುದರಲ್ಲೇ ಲಕ್ಷಣವಾಗಿದ್ದ ದೂರದ ಸಂಬಂಧಿ ಜುಬೇದಾಳನ್ನು ಮದುವೆಯಾಗಿ ಎರಡು ಮಕ್ಕಳನ್ನೂ ಪಡೆದ ಖಾದಿರಿ, ಇನ್ನೇನು ಊರಿನಲ್ಲಿ ತನ್ನದೇ ಆದ ಅಭಿಮಾನಿಗಳನ್ನೂ, ವೈರಿಗಳನ್ನೂ ಕಟ್ಟಿಕೊಳ್ಳುವ ವಯಸ್ಸಾಯಿತು ಎನ್ನುವ ವೇಳೆಗೆ ಅದೆಲ್ಲಿಂದಲೋ ಫಿಕ್ಸ್ ಆಗಿ ಬಂದಂತಹ ಘಟನೆಯೊಂದು ಅನಾಮತ್ತಾಗಿ ಖಾದಿರಿಯ ಬದುಕಿನ ಟ್ರ್ಯಾಕ್ ಅನ್ನೇ ಬದಲಾಯಿಸಿತು.

ನಡೆದದ್ದು ಬೇರೇನೂ ಅಲ್ಲ – ಒಂದು ಚಿಕ್ಕ ಘಟನೆ. ದೂರದ ಹಳ್ಳಿಯೊಂದರಲ್ಲಿ ಬಿರಿಯಾನಿಯ ಆರ್ಡರ್ ಪಡೆದುಕೊಂಡು, ಮಟಮಟ ಮಧ್ಯಾಹ್ನ ಹೆದ್ದಾರಿ ಕ್ರಾಸ್‌ನಲ್ಲಿ ಬಸ್ಸಿಳಿದು, ಗಣೇಶ ಬೀಡಿಯ ಪುಸಪುಸ ಹೊಗೆ ಉಗುಳುತ್ತಾ ಮನೆಯ ದಾರಿ ಹಿಡಿದಿದ್ದ ಖಾದಿರಿ ಕೊಳ್ತಂಗಡಿಯ ಹೊರವಲಯದ ಬಸ್ತಿಗುಡ್ಡೆಯನ್ನು ದಾಟಿ ಒಬ್ಬನೇ ಬರುತ್ತಿದ್ದಾಗ ಒಮ್ಮಿಂದೊಮ್ಮೆಲೆ ತಲೆತಿರುಗಿ ಬಿದ್ದ. ಎದ್ದು ನಿಂತರೆ ಮತ್ತೊಮ್ಮೆ ಬಿದ್ದ. ಒಂದು ಭಾರೀ ಸುಂಟರಗಾಳಿ ಆತನ ನೆತ್ತಿಯ ಮೇಲೆ ಒಂದೇ ಸಮನೆ ಸುತ್ತತೊಡಗಿ, ಏನಾಗುತ್ತಿದೆ ಎನ್ನುವುದರೊಳಗೇ ಖಾದಿರಿಯ ಮೈ ಎಲ್ಲ ಬೆವರತೊಡಗಿತು. ಹದಿನೈದು ನಿಮಿಷಗಳ ಕಾಲ ಈ ಗಾಳಿಯ ಜತೆ ಗುದ್ದಾಡಿದ ಖಾದಿರಿ ಕೊನೆಗೂ ಯುದ್ಧ ಗೆದ್ದವನಂತೆ ಎದ್ದು ನಿಂತ. ಆದರೆ ಇಡೀ ಮೈ ಭಾರವಾಗಿ, ಕೈಕಾಲೆಲ್ಲ ಸುಸ್ತು ಹೊಡೆದಂತೆ ಬಸವಳಿದಿದ್ದ.

ಅವತ್ತು ಮನೆಗೆ ಬಂದವನೇ ಖಾದಿರಿ ಯಾರಲ್ಲೂ ಒಂದು ಮಾತು ಕಸಕ್ ಕಿಸಕ್ ಎನ್ನದೆ ಕೋಣೆಯೊಳಕ್ಕೆ ಹೋಗಿ ಮುಸುಕು ಹೊದ್ದುಕೊಂಡು ಮಲಗಿಬಿಟ್ಟ. ಮಧ್ಯಾಹ್ನ ಬಂದು ಮಲಗಿದ ಗಂಡ ಸಂಜೆ ಸೂರ್ಯ ಮುಳುಗಿದರೂ ಏಳದೇ ಇದ್ದುದನ್ನು ಕಂಡು ಎಬ್ಬಿಸಲು ಬಂದ ಖಾದಿರಿಯ ಹೆಂಡತಿ ಜುಬೇದಾಳಿಗೆ ಆಶ್ಚರ್ಯ ಕಾದಿತ್ತು. ಖಾದಿರಿ ಒಂದೇ ಸಮನೆ ಇಂಗ್ಲಿಷ್ ಮಾತನಾಡಲು ತೊಡಗಿದ್ದ! ನಡುವೆ ದೊಡ್ಡ ಧ್ವನಿಯ ನಗು! ಮೊದಲು ತಮಾಷೆಯಂತೆ ಕಂಡರೂ ಒಂದರ್ಧ ಗಂಟೆಯ ಬಳಿಕ ಜುಬೇದಾಳಿಗೆ ಭಯ ಶುರುವಾಗಿ ಕೂಗಿ ಕರೆದು ಪಕ್ಕದ ಮನೆಯವರನ್ನೆಲ್ಲ ಒಟ್ಟು ಸೇರಿಸಿದಳು. ಯಾರು ಬಂದು ಮಾತನಾಡಿಸಿದರೂ ಖಾದಿರಿಯ ಇಂಗ್ಲಿಷ್ ಮತ್ತು ದೊಡ್ಡ ನಗು ನಿಲ್ಲಲಿಲ್ಲ. ದೊಡ್ಡ ಮಗನನ್ನು ಮಸೀದಿಗೆ ಓಡಿಸಿದ ಜುಬೇದಾ ಕೂಡಲೆ ಮುಸ್ಲಿಯಾರರಿಗೆ ಹೇಳಿ ಕಳಿಸಿದಳು. ಅವರು ಬಂದು ಮಂಚದ ಮೇಲೆ ಹೊದ್ದು ಮಲಗಿದ್ದ ಖಾದಿರಿಯ ತಲೆ ಪಕ್ಕ ನಿಂತು, "ಏನು ಖಾದಿರಿ.. ಏನು ಸಮಾಚಾರ?" ಎಂದು ಸಮಾಧಾನದಿಂದ ವಿಚಾರಿಸಿದರೆ, ಆತ ಒಂದೇ ಸಮನೆ ಅರೆಬಿಕ್, ಮಲಯಾಳಂ, ತಮಿಳು ಮತ್ತು ಉರ್ದುವಿನಲ್ಲಿ ಮಾತನಾಡಲು ತೊಡಗಿದ! ಒಂದು ಲೋಟ ನೀರು ತರಿಸಿದ ಮುಸ್ಲಿಯಾರರು ಮೂರು ಫಾತಿಹಾ ಮತ್ತು ಮೂರು ಸಲ ಆಯತುಲ್ ಕುರ್ಸಿಯೆಂಬ ಕುರಾನಿನ ಹೃದಯಭಾಗವೇ ಆಗಿದ್ದ ಅಧ್ಯಾಯವನ್ನು ಪಠಿಸಿ, ಆ ನೀರಿಗೆ ಸ್ಫಿಫ್.. ಎಂದು ಊದಿ ಆತನಿಗೆ ಬಲವಂತದಿಂದ

ಕುಡಿಸಿದರು. “ಏನಿಲ್ಲ, ಮಧ್ಯಾಹ್ನದ ಉರಿಬಿಸಿಲಲ್ಲಿ ಬರುವಾಗ ಗಾಳಿ ಮೆಟ್ಟಿರಬೇಕು. ಎಲ್ಲ ಸರಿಯಾಗುತ್ತದೆ” ಎಂದು ಸಮಾಧಾನಿಸಿದ ಮುಸ್ಲಿಯಾರರು ಮಸೀದಿಗೆ ಮರಳಿದರು.

ರಾತ್ರಿ ಹೇಗೋ ಕಳೆಯಿತು. ಆದರೆ ಬೆಳ್ಳಂಬೆಳಿಗ್ಗೆ ಮಸೀದಿಯ ಬಾಂಗ್ ಕೇಳಿ ಎದ್ದ ಜುಬೇದಾಗೆ ಆಶ್ಚರ್ಯ ಕಾದಿತ್ತು.

ಹಾಸಿಗೆಯಲ್ಲಿ ಮಲಗಿದ್ದ ಗಂಡ ಕಾಣಿಸಲಿಲ್ಲ. ಹೊರಬಾಗಿಲು ತೆರೆದಿತ್ತು. ಹೊರಗೆ ಬಂದು ನೋಡಿದರೆ ಇನ್ನೂ ಮಸುಕು ಕತ್ತಲಲ್ಲಿ ಅಂಗಳದ ಮಧ್ಯೆ ಕುರ್ಚಿ ಹಾಕಿಕೊಂಡು ಕುಳಿತಿದ್ದ ಖಾದಿರಿ. ರಾತ್ರಿ ಅದ್ಯಾವ ಘಳಿಗೆಯಲ್ಲಿ ಎದ್ದಿದ್ದನೋ ಗೊತ್ತಿಲ್ಲ, ಬಚ್ಚಲು ಮನೆಯ ಹಂಡೆಗೆ ನೀರು ತುಂಬಿ ಚೆನ್ನಾಗಿ ಬಿಸಿ ನೀರು ಕಾಯಿಸಿ ಸ್ನಾನ ಮುಗಿಸಿ ಬಿಳಿ ಬಣ್ಣದ ಲುಂಗಿ ಮತ್ತು ಬಿಳಿ ಶರ್ಟ್ ಹಾಕಿಕೊಂಡು ಕುಳಿತಿದ್ದ ಗಂಡನನ್ನು ನೋಡಿ ಜುಬೇದಾಗೆ ಬೆನ್ನ ಹುರಿಯಲ್ಲಿ ಚಿಲ್ಲೆಂಬಂತೆ ನಡುಕ ಹುಟ್ಟಿ ಭಯದಿಂದ ಬೆವರಿದಳು. ಏನು ಮಾಡಬೇಕೆಂದು ಗೊತ್ತಾಗದೆ ತಲೆಗೆ ಕೈಹೊತ್ತು ಬಾಗಿಲ ಎದುರೇ ಕುಳಿತುಬಿಟ್ಟಳು.

ಮಧ್ಯಾಹ್ನದ ಹೊತ್ತಿಗೆ ಊರಿಗೆ ಊರೇ ಸುದ್ದಿಯ ಬಾಣಲೆಯಲ್ಲಿ ಬೇಯತೊಡಗಿತ್ತು. ಮತ್ತೆ ಬಂದ ಮುಸ್ಲಿಯಾರರನ್ನು ಕಂಡು ಖಾದಿರಿ ಅರೇಬಿಕ್ ಮಾತನಾಡತೊಡಗಿದ. ಯಾವುಯಾವುದೋ ಕುರಾನಿನ ಶ್ಲೋಕಗಳನ್ನು ಗಟ್ಟಿ ಧ್ವನಿಯಲ್ಲಿ ಪಠಿಸತೊಡಗಿದ. ಖಾದಿರಿಯ ಅವತಾರವನ್ನು ಅರ್ಧ ಗಂಟೆಯ ಕಾಲ ವೀಕ್ಷಿಸಿದ ಬಳಿಕ ಮುಸ್ಲಿಯಾರರಿಗೆ ಅನುಮಾನವೇ ಉಳಿಯಲಿಲ್ಲ. “ಇದು ಯಾವುದೋ ಜಿನ್ನ್ ಮೆಟ್ಟಿಕೊಂಡಿದೆ” ಎಂದು ಅವರು ಘಂಟಾಘೋಷವಾಗಿ ಸಾರಿಹೋದರು.

ಸೈತಾನ್ ಮತ್ತು ಜಿನ್ನ್‌ಗೆ ವ್ಯತ್ಯಾಸವಿದೆ. ಸೈತಾನ್ ಯಾವತ್ತೂ ಕೆಟ್ಟ ಶಕ್ತಿಗಳಿಂದ ಹುಟ್ಟುತ್ತದೆ. ಆದರೆ ಜಿನ್ನ್‌ಗಳು ಹಾಗಲ್ಲ – ಬಹುತೇಕ ಜಿನ್ನ್‌ಗಳು ಒಳ್ಳೆಯ ಮನೆತನದಲ್ಲೇ ಹುಟ್ಟುವುದು. ದಯಾಮಯನಾದ ಅಲ್ಲಾಹು ತನ್ನ ಆರಾಧನೆ ಮಾಡಲು ಮನುಷ್ಯರಂತೆಯೇ ಜಿನ್ನ್‌ಗಳನ್ನೂ ಸೃಷ್ಟಿಸಿದ್ದಾನೆ. ಮನುಷ್ಯರನ್ನು ಮಣ್ಣಿನಿಂದ ಸೃಷ್ಟಿಸಿದರೆ ಜಿನ್ನ್‌ಗಳನ್ನು ಬೆಂಕಿಯಿಂದ ಸೃಷ್ಟಿಸಲಾಗಿದೆ. ಅವು ಕಣ್ಣಿಗೆ ಕಾಣುವುದಿಲ್ಲ. ಗಾಳಿಯಲ್ಲಿ ಚಲಿಸುತ್ತವೆ. ಮನುಷ್ಯನಿಗಿಂತ ಹಲವು ಪಟ್ಟು ಶಕ್ತಿಶಾಲಿಯೂ ಹೌದು. ಇಲ್ಲವಾದಲ್ಲಿ ನಡುರಾತ್ರಿಗೇ ಎದ್ದ ಖಾದಿರಿ, ಫರ್ಲಾಂಗು ದೂರದ ಬಾವಿಯಿಂದ ನೀರು ಹೊತ್ತು ತಂದು ಹಂಡೆ ತುಂಬಿಸಿ, ತಾನೇ ಸ್ವತಃ ಬೆಂಕಿ ಉರಿಸಿ ಬಿಸಿನೀರಲ್ಲಿ ಸ್ನಾನ ಮಾಡಿ, ಬೆಳಿಗ್ಗೆ ಎಲ್ಲರೂ ಏಳುವ ಮೊದಲು ಅಂಗಳದಲ್ಲಿ ಕುರ್ಚಿ ಹಾಕಿ ಕುಳಿತುಕೊಳ್ಳಲು ಸಾಧ್ಯವಿತ್ತೆ? “ಮನುಷ್ಯ ಮಾತ್ರರಿಂದ ಆಗುವ ಕೆಲಸವಲ್ಲ ಇದು.. ಜಿನ್ನ್‌ಗಳು ಯಾವ ಕೆಲಸವನ್ನೂ ಕ್ಷಣ ಮಾತ್ರದಲ್ಲಿ ಮಾಡಿಬಿಡುತ್ತವೆ. ಸುಲೇಮಾನ್ ನೆಬಿಯ ಕಾಲದಲ್ಲಿ ಈ ಜಿನ್ನ್‌ಗಳಿಂದ ಅವರು ಎಷ್ಟೊಂದು ಕೆಲಸಗಳನ್ನು ಮಾಡಿಸುತ್ತಿದ್ದರು..! ಸಬಾದ ಮಹಾರಾಣಿಯ ಭಾರೀ ಗಾತ್ರದ ಸ್ವರ್ಣಖಚಿತ ಸಿಂಹಾಸನವನ್ನು ಇದೇ ಜಿನ್ನ್‌ಗಳಲ್ಲವೇ

ಸುಲೇಮಾನ್ ನೆಬಿಯ ಆಸ್ಥಾನಕ್ಕೆ ಕ್ಷಣ ಮಾತ್ರದಲ್ಲಿ ತಂದು ಇಟ್ಟದ್ದು! ಅದನ್ನು ಕಣ್ಣಾರೆ ನೋಡಿ ಗಾಬರಿಗೊಂಡ ಆ ರಾಣಿ ಸುಲೇಮಾನ್ ನೆಬಿಯ ಸಮ್ಮುಖದಲ್ಲೇ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದು..!" ಎಂದು ಮುಸ್ಲಿಯಾರರೂ ಮೂಗಿನ ಮೇಲೆ ಬೆರಳು ಇಟ್ಟುಕೊಂಡು ಇತಿಹಾಸದ ಪುಟಗಳನ್ನೆಲ್ಲ ಜನರ ಮುಂದೆ ಹರಡಿ, ಕೊಳ್ತಂಗಡಿಯ ಆಬಾಲವೃದ್ಧರಾದಿಯಾಗಿ ಎಲ್ಲರ ಕಣ್ಣಬೊಂಬೆಗಳಲ್ಲಿ ಜಿನ್ನ್‌ಗಳ ಹೊಸಲೋಕವೊಂದನ್ನು ಅನಾವರಣ ಮಾಡಿದ್ದರು.

ಖಾದಿರಿಯ ದಿನಚರಿ ಬದಲಾಯಿತು. ಈ ಹಿಂದೆಲ್ಲಾ ಬಿರಿಯಾನಿ ಹೊಗೆಯಲ್ಲೇ ಸ್ನಾನ ಮಾಡುತ್ತಿದ್ದ ಖಾದಿರಿ ಈಗ ದಿನಕ್ಕೆರಡು ಸಲ ಶಿಸ್ತಾಗಿ ಬಿಸಿನೀರಿನ ಸ್ನಾನ ಮಾಡತೊಡಗಿದ. ಅದೂ ಹಂಡೆಯಲ್ಲಿ ಕಾದ ಕುದಿಯುವ ನೀರೇ ಆಗಬೇಕು. ಬಣ್ಣದ ಬಟ್ಟೆಗಳೆಲ್ಲ ಮೂಲೆ ಸೇರಿದವು. ಏನಿದ್ದರೂ ಬಿಳೀ ಲುಂಗಿ ಮತ್ತು ಬಿಳಿ ಉದ್ದಕೈಯ ಶರ್ಟು. ಸ್ನಾನ ಮುಗಿಸಿ ತಲೆಯ ಮೇಲೊಂದು ಹಸಿರು ಶಾಲು ಸುತ್ತಿ ಕೋಣೆಯೊಳಕ್ಕೆ ಸೇರಿಕೊಂಡರೆ ಕೆಲವೊಮ್ಮೆ ೨–೩ ಗಂಟೆಯಾದರೂ ಆತ ಹೊರಗೆ ಬರುತ್ತಿರಲಿಲ್ಲ. ಆತನ ಮುಖದಲ್ಲೊಂದು ಎಂದೂ ಕಾಣದ ತೇಜಸ್ಸು ಕಾಣತೊಡಗಿದೆಯೆಂದು ಸ್ವತಃ ಜುಬೇದಾಳೇ ಊರ ತುಂಬ ಹೇಳಿಕೊಂಡು ತಿರುಗಾಡಿದಳು. ಪಕ್ಕದ ಮನೆಯ ಖತೀಜಮ್ಮನ ಪುಟ್ಟ ಮಗು ಹೊಟ್ಟೆನೋವಿನಿಂದ ಒದ್ದಾಡುತ್ತಿದ್ದಾಗ ಜಿನ್ನ್ ಖಾದಿರಿ ಹೊಟ್ಟೆಯ ಮೇಲೆ ಎರಡೂ ಕೈಗಳನ್ನು ಸವರಿದ್ದೇ ಪವಾಡದಂತೆ ಹೊಟ್ಟೆನೋವು ಕಣ್ಮರೆಯಾಯಿತಂತೆ. ಮೇಲಿನ ಹಿತ್ಲಿನ ಅಬ್ಬಾಸ್ ಬ್ಯಾರಿ ಒಂದು ವಾರದಿಂದ ಒಂದೇ ಸಮನೆ ವಾಂತಿ ಮಾಡುತ್ತಿದ್ದವನು ಜಿನ್ನ್ ಖಾದಿರಿ ಮಂತ್ರಿಸಿಕೊಟ್ಟ ನೀರು ಕುಡಿದದ್ದೇ ಸರಾಗವಾಗಿ ಓಡಾಡತೊಡಗಿದ. ಹೀಗೆ ದಿನ ಕಳೆದಂತೆ ಜಿನ್ನ್ ಖಾದಿರಿಯ ಖ್ಯಾತಿ ಹಬ್ಬತೊಡಗಿತು. ಬಂದವರು ಕೈಮಡಚಿ ಕೊಟ್ಟದ್ದನ್ನು ಖಾದಿರಿ ಕಣ್ಣೆತ್ತಿಯೂ ನೋಡದೆ ಹಾಗೆಯೇ ಕಿಸೆಗೆ ಇಳಿಬಿಡುತ್ತಿದ್ದ. ಅದರಲ್ಲಿ ಹತ್ತರ ಚಿಲ್ಲರೆಯೂ ಇರುತ್ತಿತ್ತು, ನೂರರ ಗರಿ ಗರಿ ನೋಟುಗಳೂ ಇರುತ್ತಿದ್ದವು. ಗುಣಪಡಿಸುವವನೊಬ್ಬ ಇದ್ದಾನೆಂದು ಗೊತ್ತಾದರೆ ಕಾಯಿಲೆಗಳೂ ಹೇಳಕೇಳದೆ ಬಂದುಬಿಡುತ್ತವೇನೋ.. ಎಂಬಂತೆ ಊರು – ಪರವೂರುಗಳಲ್ಲಿ ಕಾಯಿಲೆ ಬೀಳುವವರ ಸಂಖ್ಯೆಯೂ ಹೆಚ್ಚಾಗತೊಡಗಿತು. ಅದರಲ್ಲೂ ಹೆಣ್ಣು ಮಕ್ಕಳಿಗೆ ಕಾಯಿಲೆ ಕಸಾಯ ಹೆಚ್ಚು. ಮನೆಗೆ ಬಂದುಹೋಗುವವರ ಸಂಖ್ಯೆಯೂ ಹೆಚ್ಚಾಗತೊಡಗಿದಂತೆ, ಖಾದಿರಿಯ ಅಕ್ಕನ ಮಗನೊಬ್ಬ ಸಹಾಯಕ್ಕೆಂದು ಬಂದು ಮನೆಯಲ್ಲೇ ಉಳಿದುಕೊಂಡ.

ಈ ಹಂತದಲ್ಲೇ ದೂರದ ಸೌದಿ ಅರೇಬಿಯಾದಲ್ಲಿ ಖರ್ಜೂರದ ಮರಕ್ಕೆ ನೀರು ಹಾಕಿಕೊಂಡು ಒದ್ದಾಡುತ್ತಿದ್ದ ಖಾದಿರಿಯ ತಮ್ಮ ಬದ್ರುದ್ದೀನ್ ಊರಿಗೆ ಓಡಿ ಬಂದು ಬಿಟ್ಟ. ಬದ್ರುದ್ದೀನ್ ಹೋದದ್ದು ಡ್ರೈವರ್ ಕೆಲಸಕ್ಕೆಂದು. ಮಂಗಳೂರಿನ ವೀಸಾ ಏಜೆಂಟನಿಗೆ ಹೆಂಡತಿಯ ಒಡವೆಗಳನ್ನೆಲ್ಲ ಅಡವಿಟ್ಟು ಎರಡು ಲಕ್ಷ ರೂಪಾಯಿ

ಕೊಟ್ಟು ದೊಡ್ಡ ಕಂಪೆನಿಯ ಡ್ರೈವರ್ ಕೆಲಸ ಎಂದು ಕಳಿಸಿದ ಏಜೆಂಟ್ ಕೈಕೊಟ್ಟಿದ್ದ. ಹೋಗಿ ನೋಡಿದರೆ ದಮಾಮ್‌ನಿಂದ ನಾಲ್ಕುನೂರು ಕಿ.ಮೀ ದೂರದಲ್ಲಿ ಮರಳುಗಾಡಿನ ಕುಗ್ರಾಮದಲ್ಲಿ ಖರ್ಜೂರದ ತೋಟಕ್ಕೆ ನೀರುಣಿಸುವ ಕೆಲಸ. ಹಾಗೂ ಹೀಗೂ ಎಂಟು ತಿಂಗಳ ಕಾಲ ಹಲ್ಲು ಕಚ್ಚಿಕೊಂಡು ಅಲ್ಲಿ ನೀರು ಹೊತ್ತ ಬದ್ರುದ್ದೀನ್ ಊರಿಗೆ ಮರಳಿ ಬರುವ ಹೊತ್ತಿಗೆ ಅಣ್ಣನಿಗೆ ಒಬ್ಬ ಮ್ಯಾನೇಜರ್ ಬೇಕೇಬೇಕೆಂಬಷ್ಟು ಕೆಲಸ ಬೊಗಸೆ ತುಂಬಿನಿಂತಿತ್ತು. ಅಷ್ಟರಲ್ಲಿ ಹಂಡೆಗೆ ನೀರು ಹೊರುವ ಕೆಲಸ ಸಾಧ್ಯವೇ ಇಲ್ಲವೆಂಬ ತೀರ್ಮಾನಕ್ಕೆ ಬಂದಿದ್ದ ಖಾದಿರಿಯ ಅಕ್ಕನ ಮಗನೂ ಜಾಗ ಖಾಲಿಮಾಡಿದ್ದ. ಬಂದವನೇ ಬದ್ರುದ್ದೀನ್ ಮನೆಯ ಆಳು ಮತ್ತು ಮ್ಯಾನೇಜರ್ ಎರಡೂ ಆಗಿ ಬದಲಾಗಿ ಹೋದ. ಜಿನ್ನ್ ಖಾದಿರಿಯ ಖ್ಯಾತಿ ಬೆಳೆದಂತೆ ಊರಿನಲ್ಲಿ ಅವನ ವಿರುದ್ಧ ಹಲ್ಲುಮಸೆಯುವವರೂ ಹುಟ್ಟಿಕೊಂಡರು. ಒಂದೇ ಸಮನೆ ಕಪ್ಪು ಬುರ್ಖಾ ಧರಿಸಿಕೊಂಡು ಹತ್ತಿಪ್ಪತ್ತು ಹೆಣ್ಣುಮಕ್ಕಳು ಜಿನ್ನ್ ಖಾದಿರಿಯ ಮನೆಗೆ ಸಂಜೆ ಹೊತ್ತಿಗೆ ಬರತೊಡಗಿದ್ದು ಊರಿನ ಯುವಕರ ಕಣ್ಣುಗಳನ್ನೂ ಕೆಂಪಾಗಿಸಿತು. ಮನೆಯ ದೊಡ್ಡ ಅಂಗಳದ ಉದ್ದಗಲಕ್ಕೂ ಚಪ್ಪರ ಹಾಕಿ, ಟ್ಯೂಬ್‌ಲೈಟ್‌ಗಳನ್ನು ಉರಿಸಿದ್ದ ಬದ್ರುದ್ದೀನ್ ಪ್ರತಿ ಶುಕ್ರವಾರ ಮಗ್ರಿಬ್ ನಮಾಜಿನ ಬಳಿಕ ಹೆಣ್ಣುಮಕ್ಕಳಿಗೆಂದೇ ವಿಶೇಷ ಪ್ರಾರ್ಥನೆಯ ಮಜ್ಲಿಸ್‌ಗಳನ್ನು ವ್ಯವಸ್ಥೆ ಮಾಡತೊಡಗಿದ. ಪ್ರತಿ ಶುಕ್ರವಾರದ ಎರಡು ಗಂಟೆಯ ವಿಶೇಷ ಮಜ್ಲಿಸ್ ಪ್ರಾರ್ಥನೆಯಲ್ಲಿ ೬೦ ದಿನಗಳ ಕಾಲ ಯಾವುದೇ ತಡೆಯಿಲ್ಲದೆ ಭಾಗವಹಿಸುವ ಯಾವುದೇ ಪ್ರಾಯದ ಹೆಣ್ಣುಮಕ್ಕಳಿಗೆ ಮರಣಾನಂತರ ದಾಟಬೇಕಿರುವ ಸಿರಾತ್‌ಪಾಲ ಎಂಬ ಭಯಾನಕ ಮೊಸಳೆ, ಹಾವುಗಳಿಂದ ಕೂಡಿದ ಆಳ ಕಮರಿಗಳುಳ್ಳ ಕೆಂಪುನೀರಿನ ಭಾರೀ ನದಿಯನ್ನು ದಾಟಲು ಅಲ್ಲಾಹು ಯಾವುದೇ ತೊಂದರೆ ನೀಡುವುದಿಲ್ಲವೆಂದೂ, ಹಾಗೆ ಸಿರಾತ್‌ಪಾಲ ದಾಟಿದವರಿಗೆ ಅಲ್ಲೇ ಕಣ್ಣು ಕಾಣುವಷ್ಟು ದೂರದಲ್ಲೇ ಜನ್ನತುಲ್ ಫಿರ್‌ದೌಸ್ ಎಂಬ ಸ್ವರ್ಗದ ತೋಪಿನಿಂದ ಬೀಸುವ ತಂಪುಗಾಳಿಯ ಅನುಭವವಾಗುವುದೆಂದೂ ಜಿನ್ನ್ ಖಾದಿರಿ ಬಣ್ಣಿಸಿ ಬಣ್ಣಿಸಿ ಹೇಳಿದ್ದನ್ನು ನಂಬದಿರಲಾಗದ ಹೆಣ್ಣುಮಕ್ಕಳ ಸಂಖ್ಯೆಯೇ ಕೊಳ್ತಂಗಡಿಯ ಸುತ್ತಮುತ್ತ ಜಾಸ್ತಿ ಇತ್ತು. ಅದರಲ್ಲೂ ಕೊಳ್ತಂಗಡಿಗೆ ಆರೇಳು ಕಿ.ಮೀ ದೂರದಲ್ಲಿರುವ ಗುಡ್ಡೆಯಂಗಡಿ ಎಂಬ ಊರಿನಿಂದ ತಂಡೋಪತಂಡವಾಗಿ ಬುರ್ಖಾಧಾರಿ ಹೆಣ್ಣುಮಕ್ಕಳು ಜಿನ್ನ್ ಖಾದಿರಿಯ ಮಜ್ಲೀಸ್‌ಗೆ ಬರತೊಡಗಿದ್ದರು. ಸಂಜೆಯಾದರೆ ಸರಕಾರಿ ಕೆಂಪು ಬಸ್ಸು ಹತ್ತಿಕೊಂಡು ಬಂದಿಳಿಯುವ ಈ ಬುರ್ಖಾಧಾರಿ ಹೆಣ್ಣುಮಕ್ಕಳ ಜತೆಗೆ ಆ ಊರಿನ ಯಾರಾದರೊಬ್ಬ ವಯಸ್ಸಾದ ಗಂಡಸರೂ ಇರುತ್ತಿದ್ದರು.

ಈ ಗುಡ್ಡೆಯಂಗಡಿಯದ್ದೂ ವಿಶೇಷವೇ. ನೂರಿಪ್ಪತ್ತಕ್ಕೂ ಹೆಚ್ಚು ಮನೆಗಳಿರುವ ಊರಿನ ಬಹುತೇಕ ಎಲ್ಲ ಮನೆಗಳ ಗಂಡಸರೂ ಸೌದಿ, ಕತಾರ್, ದುಬೈ, ಅಬುಧಾಬಿ ಎಂದು ಕೊಲ್ಲಿ ದೇಶಗಳಲ್ಲಿ ದುಡಿಯುವವರು. ವಯಸ್ಸಾದ ಮುದುಕರಷ್ಟೇ ಇಲ್ಲಿ ಮನೆಯ ವಾರಸುದಾರರು. ಕೊಲ್ಲಿ ದೇಶಗಳಲ್ಲಿ ಸಣ್ಣ ಪುಟ್ಟ ಕೆಲಸ ಮಾಡಿಕೊಂಡು

ಎರಡು ವರ್ಷಕ್ಕೊಮ್ಮೆ ಎರಡು ತಿಂಗಳ ರಜೆಯಲ್ಲಿ ಊರಿಗೆ ಬರುವ ಗಂಡಸರು, ಮತ್ತೆ ಕೊಲ್ಲಿಗೆ ಹೋದ ಮೇಲೆ ಇಲ್ಲಿ ಹೆಂಗಸರಿಗೆ ರೋಗರುಜಿನಗಳು ಬರುವುದೂ ಹೆಚ್ಚಾದವು. ಕೆಲವರಿಗೆ ಮಾನಸಿಕವೂ ಆಗುವುದು ಸಹಜವೇ ಎಂಬಂತೆ ನಡೆಯುತ್ತಿತ್ತು. ಅತ್ತೆ ಸೊಸೆಯ ಜಗಳ, ಮಾವ ಸೊಸೆಯರ ನಡುವಣ ವಿರಸ, ಮೈದುನನ ಜತೆಗೆ ತಿಕ್ಕಾಟ – ಹೀಗೆ ಬಹುತೇಕ ಮನೆಗಳಲ್ಲಿ ರೋಗಲಕ್ಷಣಗಳು ಸಾಮಾನ್ಯವೇ ಆಗಿದ್ದುದು ವೈದ್ಯರಿಗೆ ಅಂತಹ ಸವಾಲಾಗದಿದ್ದರೂ, ಜಿನ್ನ್ ಖಾದಿರಿಯ ಬಳಿಗೆ ಬಂದ ನಂತರ ಅದಕ್ಕೆ ವಿಶೇಷ ಕಾರಣಗಳು ಹೊಳೆಯತೊಡಗಿದವು. ಗುಡ್ಡೆಯಂಗಡಿಯ ಜಮಾತಿನ ಅಧ್ಯಕ್ಷ ಮಿಲ್ಪ್ರಿ ಬಾವುಬ್ಯಾರಿಯವರೇ ಖುದ್ದಾಗಿ ತನ್ನ ಸೊಸೆಯನ್ನು ಜಿನ್ನ್ ಖಾದಿರಿಯ ಬಳಿಗೆ ಔಷಧಿಗಾಗಿ ಕರೆದುಕೊಂಡು ಬರತೊಡಗಿದ ಬಳಿಕ ಅಲ್ಲಿನ ರೋಗಿಗಳ ಹೋಲ್‌ಸೇಲ್ ಗುಂಪು ಖಾದಿರಿಗೆ ಭಾಗ್ಯದ ಬಾಗಿಲನ್ನೇ ತೆರೆಯಿತು. ಶುಕ್ರವಾರ ರಾತ್ರಿಯಂತೂ ಜಿನ್ನ್ ಖಾದಿರಿಯ ಮನೆಗೆ ಬರುವವರ ಸಂಖ್ಯೆ ಇನ್ನೂರನ್ನು ದಾಟತೊಡಗಿತು.

ಅವತ್ತು ಬರುವವರಿಗೆ ವಿಶೇಷ ನೈಚೋರ್ ಮತ್ತು ಕೋಳಿ ಕರಿಯ ಊಟದ ವ್ಯವಸ್ಥೆಗೆಂದು ಮಿಲ್ಪ್ರಿ ಬಾವು ಬ್ಯಾರಿಯವರೇ ಐದು ಮುಡಿ ಅಕ್ಕಿಯನ್ನು ಕಳಿಸಿಕೊಟ್ಟದ್ದು ಊರು ತುಂಬಾ ಸುದ್ದಿಯಾಯಿತು. ಇದು ಹೀಗೇ ಮುಂದುವರಿದರೆ ಸುತ್ತಮುತ್ತಲ ಊರುಗಳಲ್ಲಿ ತಮ್ಮ ಊರಿನ ಮರ್ಯಾದೆ ಮೂರು ಕಾಸಾಗುವುದೆಂದು ತಿಳಿದ ಗುಡ್ಡೆಯಂಗಡಿ ಜಮಾತಿನ ಕಟ್ಟುಮಸ್ತಾದ ಕೆಲವು ವಿದ್ಯಾವಂತ ಯುವಕರು ಇದನ್ನು ತಡೆಯಲೆಂದು ಸಿದ್ಧರಾದರು. ಸಂಜೆಯ ಹೊತ್ತಿಗೆ ತಮ್ಮ ಊರಿನ ಮುಂದೆ ಹಾದುಹೋಗುವ ಏಕೈಕ ಕೆಂಪುಬಸ್ಸನ್ನು ಅಲ್ಲಿ ನಿಲ್ಲಿಸಲೇಬಾರದೆಂದು ಬಸ್ ಕಂಡಕ್ಟರ್‌ಗೆ ಯುವಕರು ತಾಕೀತು ಮಾಡಿದರೂ ಆತ ಕ್ಯಾರೇ ಅನ್ನಲಿಲ್ಲ. "ನಮ್ಮದು ಕೈ ತೋರಿದಲ್ಲಿ ನಿಲ್ಲುವ ಬಸ್ಸು. ಹಾಗೆಂದು ಸರಕಾರವೇ ಬಸ್ಸಿನ ಮೇಲೆ ಬರೆಸಿಕೊಂಡಿದೆ. ನಿಮ್ಮದೇನು ಅಡ್ಡಿ" ಎಂದು ವಾಪಸ್ ದಬಾಯಿಸಿದ ಕಂಡೆಕ್ಟರನ ಮೇಲೆ ಸಿಟ್ಟಿಗೆದ್ದು ಮರುದಿನ ಊರಿನ ಯುವಕರೆಲ್ಲ ಸೇರಿ ಬಸ್ಸಿಗೆ ಕಲ್ಲು ತೂರಿದ್ದೂ, ಆ ಹುಡುಗರ ವಿರುದ್ಧ ಸ್ವತಃ ಬಾವುಬ್ಯಾರಿಯವರೇ ಪೊಲೀಸರಿಗೆ ದೂರು ಕೊಟ್ಟದ್ದೂ ಆಯಿತು. ಖಾದಿರಿಗೆ ವಿಷಯ ತಿಳಿದಾಗ, ನನ್ನ ಮೈಮೇಲೆ ಬಂದಿರುವ ಜಿನ್ನೇ ಇದಕ್ಕೆ ತಕ್ಕ ಉತ್ತರ ಕೊಡಲಿದೆಯೆಂದು ಮುಗುಮ್ಮಾಗಿ ಹೇಳಿದ ಮಾತಿನ ಬಗ್ಗೆಯೂ ಊರಲ್ಲಿ ದೊಡ್ಡ ಚರ್ಚೆಯಾಯಿತು.

ತಮಗಾದ ಅವಮಾನದಿಂದ ಕುದ್ದುಹೋದ ಗುಡ್ಡೆಯಂಗಡಿಯ ವಿದ್ಯಾವಂತ ಯುವಕರು ಅದೊಂದು ಶುಕ್ರವಾರದ ಸಂಜೆಕತ್ತಲ ವೇಳೆಯಲ್ಲಿ ನೇರವಾಗಿ ಜಿನ್ನ್ ಖಾದಿರಿಯ ಮನೆಗೇ ನುಗ್ಗಿದರು. ೩೦–೪೦ ಯುವಕರ ಗುಂಪು ಕಂಡು ಬೆದರಿದ ಬದ್ರುದ್ದೀನ್ ಮಿಲ್ಪ್ರಿ ಬಾವು ಬ್ಯಾರಿಯವರಿಗೆ ಫೋನ್ ಮಾಡಿದಾಗ ಅವರು ತಮ್ಮ ಕೈಕೆಳಗೆ ಕಂಟ್ರಾಕ್ಟು ಕೆಲಸಕ್ಕಿದ್ದ ಬಿಜಾಪುರದ ಕಡೆಯ ಕೂಲಿಯಾಳುಗಳ ಗುಂಪೊಂದನ್ನು

ಲಾರಿಯಲ್ಲಿ ತುಂಬಿಸಿ ಕಳಿಸಿಕೊಟ್ಟದ್ದೇ ಅಲ್ಲದೆ, ಬಿಳೀ ಬಣ್ಣದ ಅಂಬಾಸಿಡರ್ ಕಾರಿನಲ್ಲಿ ಐದಾರು ಪೈಲ್ವಾನರನ್ನು ಕರೆದುಕೊಂಡು ಸ್ವತಃ ತಾವೂ ಬಂದಿಳಿದರು. ಜಿನ್ನ್ ಖಾದಿರಿಯ ಮನೆಯಲ್ಲಿ ಅವತ್ತು ದೊಡ್ಡದೊಂದು ಮಾತಿನ ಕದನವೇ ನಡೆಯಿತು. ಎರಡೂ ಕಡೆಯ ಕಟ್ಟಾಳುಗಳು ಯಾವುದಕ್ಕೂ ಸೈ ಎಂಬಂತೆ ನಿಂತಿದ್ದರು. ಗಲಾಟೆಯ ಸುದ್ದಿ ತಿಳಿದು ಕೊಳ್ತಂಗಡಿಯ ಯುವಕರೂ ಸೇರಿಕೊಂಡರು. "ಸುಳ್ಳು ಸುಳ್ಳೇ ಜಿನ್ನಿನ ಹೆಸರು ಹೇಳಿಕೊಂಡು ಹೆಣ್ಣುಮಕ್ಕಳನ್ನು ಮಂಗ ಮಾಡಿ ದುಡ್ಡು ಎತ್ತುವ ದಂಧೆ ನಡೆಯಲು ಬಿಡುವುದಿಲ್ಲ" ಎಂದು ಗುಡ್ಡೆಯಂಗಡಿಯ ಯುವಕರು ದೊಡ್ಡ ಧ್ವನಿಯಲ್ಲಿ ವಾದಿಸಿದರೆ, "ಜಿನ್ನ್ ಏನಾದರೂ ಸಿಟ್ಟಿಗೆದ್ದರೆ ನೀವೆಲ್ಲ ಇಲ್ಲೇ ಭಸ್ಮವಾಗಿಬಿಡುತ್ತೀರಿ" ಎಂದು ಬದ್ರುದ್ದೀನ್ ಧಮಕಿ ಹಾಕಿದ. "ಯಾವ ಜಿನ್ನ್? ಅದೂ ಈ ಕಳ್ಳ ಖಾದಿರಿಯ ಮೈಮೇಲೆ ಅಲ್ಲಾಹುವಿಗೆ ಪ್ರಿಯವಾದ ಯಾವುದಾದರೂ ಜಿನ್ನ್ ಬಂದು ಕೂರುವುದುಂಟೆ? ಎಲ್ಲ ಬೊಗಳೆ. ಈ ಖಾದಿರಿಗೆ ಇಸ್ಲಾಮ್ ದೀನಿನ ಬಗ್ಗೆ ಏನು ಗೊತ್ತಿದೆ? ಇವನನ್ನು ನಾವು ಚಿಕ್ಕಂದಿನಿಂದಲೂ ನೋಡಿಲ್ಲವೆ? ಅವತ್ತು ಅಯ್ಯಪ್ಪ ಸ್ವಾಮಿಯ ವೇಷ ಹಾಕಿಕೊಂಡು ಕಾಫಿರರ ಜತೆ ಸೇರಿ ಭಜನೆ ಮಾಡುತ್ತಿದ್ದಾಗ ಇವನ ಅಮ್ಮನೇ ಹಿಡಿಸೂಡಿ ಹಿಡಿದು ಬಂದು ರಸ್ತೆಯ ತುಂಬಾ ಅಟ್ಟಾಡಿಸಿಕೊಂಡು ಬಡಿದದ್ದು ಯಾರಿಗೆ ಗೊತ್ತಿಲ್ಲ? ಬಾಲ್ಯದಲ್ಲಿ ಮದ್ರಸದಲ್ಲಿ ಬಾಯಿಪಾಠ ಮಾಡಿದ ಒಂದಿಷ್ಟು ಕುರಾನಿನ ವಾಕ್ಯಗಳು ಬಿಟ್ಟರೆ ಇವನಿಗೆ ಅದೇನು ಗೊತ್ತಿದೆ? ಅರೆಬಿಕ್ ವಾಕ್ಯಗಳ ಅರ್ಥ ಗೊತ್ತಿದೆಯಾ?" ಎಂದು ಯುವಕರು ಖಾದಿರಿಯ ಜನ್ಮ ಜಾಲಾಡುತ್ತಿದ್ದರೆ ಹಾರೆ ಪಿಕಾಸಿ ಹಿಡಿದು ಬಂದಿದ್ದ ಬಿಜಾಪುರ ಕೂಲಿ ಕಾರ್ಮಿಕರೂ ಕಣ್ಣು ಬಾಯಿ ಬಿಟ್ಟು ನೋಡತೊಡಗಿದರು. "ನೋಡಪ್ಪಾ ಗೌಡ.. ಇದು ನಮ್ಮ ನಮ್ಮೊಳಗಿನ ಧರ್ಮದ ವಿಷಯ. ಬಿಜಾಪುರದಿಂದ ಹೊಟ್ಟೆಪಾಡಿಗೆ ಬಂದ ನೀನು ಇದರಲ್ಲೆಲ್ಲ ಕೈ ಹಾಕಬೇಡ" ಎಂದು ಕಾರ್ಮಿಕರ ಗುಂಪಿನ ನಾಯಕ ಶರಣಪ್ಪನಿಗೆ ಒಬ್ಬ ದಬಾಯಿಸಿದಾಗ ಆತನೂ ಹೌದೆಂಬಂತೆ ಅಂಗಳದ ಚಪ್ಪರದಿಂದ ತನ್ನವರ ಜತೆಗೆ ಹೊರಕ್ಕೆ ಬಂದ. ಮಿಲ್ಟ್ರಿ ಬಾವು ಬ್ಯಾರಿಯವರ ಜಂಘಾಬಲವೇ ಉಡುಗಿಹೋಯಿತು. "ಕರೆಯಿರಿ ಆ ಕಳ್ಳ ಖಾದಿರಿಯನ್ನು. ಒಳಗೆ ಕೋಣೆಯಲ್ಲಿ ಚಿಲಕ ಹಾಕಿ ಹೆಂಗಸರ ಹಾಗೆ ಅಡಗಿ ಕುಳಿತುಕೊಳ್ಳುವುದಲ್ಲ. ಇಲ್ಲಿ ಸಭೆಗೆ ಬರಲಿ. ಅದ್ಯಾವ ಜಿನ್ನ್ ಹಿಡಿದಿದೆಯೋ ನಾವೂ ನೋಡಿಬಿಡುತ್ತೇವೆ. ಅವನಿಗೆ ನಿಜಕ್ಕೂ ಜಿನ್ನ್ ಹಿಡಿದಿದ್ದರೆ ಅದು ಬಂದು ನಮ್ಮನ್ನು ಎದುರಿಸಲಿ" ಎಂದೊಬ್ಬ ಸವಾಲು ಹಾಕಿ ನಿಂತಾಗ, ಬಾವು ಬ್ಯಾರಿಯವರೂ ಉಗುಳಿನುಂಗಿ ನಿಂತುಕೊಂಡರು.

ಸಮಯ ಕಳೆದಂತೆ ಯುವಕರ ವೀರಾವೇಶವೂ ಏರತೊಡಗಿತು. ಅದಾಗಲೇ ಸುತ್ತಮುತ್ತಲ ಊರುಗಳಿಂದ ಶುಕ್ರವಾರ ರಾತ್ರಿಯ ಮಜ್ಲೀಸ್‌ಗೆಂದು ಬಂದಿದ್ದ ಹೆಣ್ಣುಮಕ್ಕಳೆಲ್ಲ ಗಲಾಟೆ ನೋಡಿ ಕಾಲು ಕಿತ್ತಿದ್ದರು. ಖಾದಿರಿಯ ಮನೆಯ ಹೆಂಗಸರು ಗಾಬರಿಯಾಗಿ ಬೆಪ್ಪು ಹಿಡಿದು ನಿಂತಿದ್ದರು. ಒಂದಿಬ್ಬರು ಬಿಸಿರಕ್ತದ ಯುವಕರು ಅಂಗಳದಲ್ಲಿ ಜೋಡಿಸಿಟ್ಟಿದ್ದ ಪ್ಲಾಸ್ಟಿಕ್ ಕುರ್ಚಿಗಳನ್ನೆಲ್ಲ ಎಳೆದಾಡಿ ಒಗೆಯತೊಡಗಿದರು.

ಕೆಲವರು ಹೂಕುಂಡಗಳನ್ನು ಎತ್ತಿ ಹಾಕಿದರು. ಅಷ್ಟರಲ್ಲಿ ಜಿನ್ನ್ ಖಾದಿರಿ ಒಮ್ಮಿಂದೊಮ್ಮೆಲೆ ಅಂಗಳಕ್ಕಿಳಿದು ಚಪ್ಪರದಲ್ಲಿ ಪ್ರತ್ಯಕ್ಷನಾದ. ಹೂಂ ಹ್ರೂಂ.. ಎಂದು ಗುರುಗುಡುತ್ತಾ ಜಿನ್ನ್ ಮೈಮೇಲೆ ಬಂದ ಖಾದಿರಿ ಒಂದೇ ಸಮನೆ ಕೈ ಎತ್ತಿ ಕುಣಿಯುತ್ತಾ ಕಣ್ಣುಗುಡ್ಡೆಗಳನ್ನು ದೊಡ್ಡದಾಗಿಸಿ, ಲಾ ಇಲಾಹ ಇಲ್ಲಲ್ಲಾ.. ಎಂದು ಎತ್ತರದ ಧ್ವನಿಯಲ್ಲಿ ಕೂಗತೊಡಗಿದ. ಯುವಕರ ಕಡೆಗೆ ಬೆರಳು ತೋರಿಸುತ್ತಾ ಹೂಂಕರಿಸತೊಡಗಿದ.

ಗುಂಪಿನಲ್ಲಿ ಆವರೆಗೆ ಆವೇಶದಿಂದ ಕೂಗಾಡುತ್ತಿದ್ದ ಯುವಕರಲ್ಲಿ ಕೆಲವರು ತಬ್ಬಿಬ್ಬಾದರು. ಖಾದಿರಿಯ ಕೆದರಿದ ಕೂದಲು ಮತ್ತು ಕೆಂಪಾಗಿದ್ದ ದೊಡ್ಡ ಕಣ್ಣುಗಳನ್ನು ನೋಡಿ ನಿಜಕ್ಕೂ ಇವನ ಮೇಲೆ ಜಿನ್ನ್ ಆವಾಹನೆಯಾಗಿರಬಹುದೆ.. ಎಂಬ ಅನುಮಾನವೂ ಅವರನ್ನು ಕಾಡಿತು. ಅಷ್ಟರಲ್ಲಿ ಒಬ್ಬ ಯುವಕ "ಎತ್ತೊಕ್ಕೊಳ್ರೋ ಅವನನ್ನು" ಎಂದು ಕೂಗಿ ಮುನ್ನುಗ್ಗಿದ. ಅವನ ಜತೆಗಿರುವ ಉಳಿದವರೂ ಖಾದಿರಿಯ ಮೇಲೆ ಮುಗಿಬಿದ್ದರು. ಅವರನ್ನು ತಡೆಯುವ ಬದ್ರುದ್ದೀನ್ ಮತ್ತು ಮಿಲ್ಟ್ರಿ ಬಾವು ಬ್ಯಾರಿಯವರ ಯತ್ನಗಳು ಫಲ ಕಾಣಲಿಲ್ಲ. ಸಿಟ್ಟಿಗೆದ್ದ ಯುವಕರು ಖಾದಿರಿಯನ್ನು ಅನಾಮತ್ತಾಗಿ ಎತ್ತಿಕೊಂಡು ಚಪ್ಪರದಿಂದ ಹೊರಕ್ಕೆ ಬಂದರು. ಅಲ್ಲಿದ್ದ ಹುಲ್ಲಿನ ಬಣವೆಯ ಮೇಲೆ ಫುಟ್‌ಬಾಲ್‌ನಂತೆ ಎಸೆದರು. ಹುಲ್ಲಿನ ಬಣವೆಯ ಮೇಲೆ ಬಿದ್ದ ಖಾದಿರಿ ಹ್ರಾಂ ಹ್ರೂಂ ಎಂದು ಗುರುಗುಡುತ್ತಲೇ ಎದ್ದು ನಿಂತು ಶಾಪ ಕೊಡುವವನಂತೆ ಕೈ ಎತ್ತಿದ. "ಬಡೀರೋ" ಎಂದನೊಬ್ಬ. ಅದರ ಬೆನ್ನಲ್ಲೆ ಯುವಕರು ಪಟಪಟನೆ ಖಾದಿರಿಗೆ ಬರಿಗೈಯಲ್ಲೆ ಬಾರಿಸತೊಡಗಿದರು. ತಡೆಯಲು ಬಂದ ಬದ್ರುದ್ದೀನನಿಗೂ ನಾಲ್ಕೇಟು ಬಿತ್ತು. "ಲಾ ಇಲಾಹ ಇಲ್ಲಲ್ಲಾ.." ಎಂದು ಖಾದಿರಿ ಜೋರಾಗಿ ಕೂಗತೊಡಗಿದ. ಯುವಕರೂ ಲಾ ಇಲಾಹ ಇಲ್ಲಲ್ಲಾ ಎಂದು ಕೂಗುತ್ತಾ ಖಾದಿರಿಯನ್ನು ಎಳೆದಾಡಿ ಕಾಲಿನಲ್ಲಿ ತುಳಿಯತೊಡಗಿದರು. ಎಳೆದಾಟದಲ್ಲಿ ಖಾದಿರಿಯ ಲುಂಗಿ ಜಾರಿತು, ಶರ್ಟು ಹರಿದು ಚಿಂದಿಯಾಯಿತು. "ಬಡ್ಡೀ ಮಗನೆ.. ಜಿನ್ನ್ ಬಂದಿದೆಯಾ ಜಿನ್ನ್? ಎಲ್ಲಿ ಕರೆ ನೋಡೋಣ ನಿನ್ನ ಜಿನ್ನ್‌ನನ್ನು.." ಎಂದು ಯುವಕರು ಮತ್ತಷ್ಟು ರೋಷಾವೇಶದಿಂದ ಬಡಿಯತೊಡಗಿದಾಗ ಅವರ ಕಾಲುಗಳ ನಡುವಿನಿಂದಲೇ ನುಗ್ಗಿ ಖಾದಿರಿ ಓಡತೊಡಗಿದ. ಬೆನ್ನಟ್ಟಿದ ಯುವಕರು ಕಾಲರ್ ಹಿಡಿದು ಎಳೆದಾಡಿ, ಮುಖ ಮೂತಿ ನೋಡದೆ ಬಾರಿಸತೊಡಗಿದರು. "ಪಾಪದ ಹೆಣ್ಣುಮಕ್ಕಳು ಸಿಕ್ಕಿದರೆ ಸಿರಾತ್‌ಪಾಲ ದಾಟಲು ಡೈರೆಕ್ಟ್ ದಾರಿ ತೋರಿಸುತ್ತೀಯಾ? ಜನ್ನತ್ತುಲ್ ಫಿರ್‌ದೌಸ್‌ನಿಂದ ತಂಪು ಗಾಳಿ ತರಿಸುತ್ತೀಯಾ? ಕರೀ ನಿನ್ನ ಜಿನ್ನ್ ಅನ್ನು.." ಎಂದೊಬ್ಬ ಕೂಗಿದ. ಏಟು ತಾಳಲಾರದೆ "ಅಯ್ಯೊ ಅಮ್ಮಾ.." ಎಂದು ಚೀರಾಡತೊಡಗಿದ ಜಿನ್ನ್ ಖಾದಿರಿ ನೆಲಕ್ಕುರುಳಿದಲ್ಲೇ "ದಮ್ಮಯ್ಯ ಹೊಡೀಬೇಡ್ರೊ.. ನಿಮ್ಮ ಕಾಲು ಹಿಡೀತೀನಿ" ಎಂದು ಗೋಗರೆಯತೊಡಗಿದ.

❖

(ಮಯೂರ – ಏಪ್ರಿಲ್ 2012)

ಆಪರೇಷನ್ ಅಶ್ವಮೇಧ !

ನಾಗಮಂಗಲ ಕೃಷ್ಣಮೂರ್ತಿ

"ಜಗತ್ತಿನಲ್ಲಿ ಹಿಂಸೆ, ಕ್ರೌರ್ಯ, ಭೀತಿಗಳು ತಾಂಡವವಾಡುತ್ತಿವೆ. ಮನುಕುಲದ ಬದುಕು ಆತಂಕದಲ್ಲಿದೆ. ಇವಕ್ಕಿಂತ ಭಯಾನಕವಾದವು; ಮನುಷ್ಯನ ಇಂದ್ರಿಯಗಳು. ಅವನ್ನು ನಿಗ್ರಹಿಸದಿದ್ದರೆ ಉಳಿಗಾಲವಿಲ್ಲ. ಮನುಷ್ಯನ ಮನೋರಂಗದಲ್ಲಿ ಇವೆಲ್ಲಾ ಮೊದಲು ನಡೆದು ನಂತರ ಪರಿಣಾಮ ಲೋಕದ ಮೇಲಾಗುತ್ತದೆ.

"ಮೆಚ್ಚಿನ ಭಕ್ತಗಣವೇ ಮನಸ್ಸಿಟ್ಟು ಕೇಳಿ; ಯಾವ ಮನುಷ್ಯನಲ್ಲಿ ಕಾಮ, ಕ್ರೋಧ, ಮೋಹ, ಮದ–ಮಾತ್ಸರ್ಯಗಳೆಂಬ ಮಹಾಮದಗಳು ವಿಜೃಂಭಿಸುವವೋ ಅಲ್ಲಿ ಜೀವಾತ್ಮಗಳು ಹಿಂಸೆಯಿಂದ ಕನಲುತ್ತವೆ. ಜಗತ್ತು ಅಶಾಂತಿಯ ಬೀಡಾಗುತ್ತದೆ. ಈ ಮನಸ್ಸೆಂಬ ಮರುಳಾಶ್ವವನ್ನು ನಿಯಂತ್ರಿಸಿ, ಮಹಾಮದಗಳ ಹುಚ್ಚು ಕುದುರೆಯನ್ನು ಕಟ್ಟಿಹಾಕಿರಿ. ಒಟ್ಟಿನಲ್ಲಿ ಅಶ್ವಮೇಧಯಾಗ ಆಗ್ಬೇಕು ಅಂತಾ ನಮಗೆ ಭಗವತ್ ಪ್ರೇರಣೆ ಆಗಿದೆ.." – ಹೀಗೆ, ಸ್ವಾಮಿ ಸತ್ಯಾನಂದರ ಪ್ರವಚನವು ಜಗತ್ತಿನ ಸಕಲ ಜೀವಾತ್ಮಗಳ ಅಶಾಂತಿಯ ಮೂಲವನ್ನು ಹುಡುಕಿ ತನ್ನ ಅಪಾರ ಭಕ್ತ ಸಮೂಹಕ್ಕೆ ಪರಿಹಾರಾರ್ಥಗಳನ್ನು ಸೂಚಿಸುತ್ತಿತ್ತು. ಭಕ್ತಗಣದ ನಡುವೆ ಒಂದು ಜೀವಾತ್ಮವು ಸದರಿ ಸಂದೇಶದ ಸಾರವನ್ನು ತನ್ನ ಅಂತರಾತ್ಮಕ್ಕೆ ಮೈಯೆಲ್ಲಾ ಕಿವಿಯಾಗಿ ಬಸಿದುಕೊಳ್ಳುತ್ತಿತ್ತು.

❖

ಬೆಳಿಗ್ಗೆ ಕೇಳಿದ ಪ್ರವಚನದ ಪರಿಣಾಮ ಅವಳ ಮೇಲೆ ಜೋರಾಗಿಯೇ ಆಗಿತ್ತು. ಇಡೀ ದಿನ ಮೈಮನಸ್ಸು ಹಗುರಾದಂತೆ ಉಲ್ಲಸಿತಳಾಗಿ ಗೃಹಕೃತ್ಯಗಳಲ್ಲಿ ತೊಡಗಿಸಿಕೊಂಡಿದ್ದಳು. ಹಳೆಯ ಸುಂದರ ಕ್ಷಣಗಳೆಲ್ಲ ನೆನಪಾಗಿ ಮನಸ್ಸು ಮತ್ತೂ ಅರಳುತ್ತಿತ್ತು –

ಸಂಕ್ರಾಂತಿಯ ಸುಗ್ಗಿಕಾಲ. ಹೊಲವೆಲ್ಲಾ ಅವರೆಕಾಯಿಯ ಸೊಗಡಿಗೆ ಘಂ ಅನ್ನುತ್ತಿತ್ತು. ಆ ಗಮಲು ಅವಳ ಮೂಗು–ಮೈಗೂ ಮೆತ್ತಿಕೊಂಡು ವಿಚಿತ್ರ ಉನ್ಮಾದ ಉಂಟುಮಾಡಿತ್ತು. ಅಜ್ಜಿಯ ಊರಿಗೆ ಬಂದಾಗಲೆಲ್ಲ ಹೊಲ–ಗದ್ದೆ, ಕಾಲುವೆ ನೀರು ಅಂತೆಲ್ಲಾ ಅಡ್ಡಾಡುವುದು ಇವಳಿಗೆ ಬಲು ಇಷ್ಟ! ಹಾಗೆ ಅಲ್ಲೆಲ್ಲಾ ಕಾಲಾಡುವಾಗ ರೊಯ್ಯನೆ ಬೀಸುವ ಗಾಳಿ, ಪಚ್ಚೆ–ಪೈರು, ಹೊಲದ ರಾಗಿ, ಅವರೆಕಾಯಿ, ಮುಂತಾದ ಬೆಳೆಗಳ ಸುವಾಸನೆ–ತಂಪು ಮನಸ್ಸನ್ನು ತುಂಬುತ್ತಿತ್ತು. ತಂಗಾಳಿಯು ಎಂಥದೋ ಉನ್ಮಾದರಾಗವ ಬೀಸಿ ತಂದು ಅವಳೊಳಗೆ ಪುಳಕದ ನದಿ ಹರಿಸುತ್ತಿತ್ತು. ಆ

ನಾದವ ಎಲ್ಲೋ ಕೇಳಿದ, ಹಾಡಿದ, ಅನುಭವಿಸಿದ ಹಾಗೆ ಅನ್ನಿಸಿ ಆನಂದ-ತಳಮಳಗಳೆರಡೂ ಒಟ್ಟಿಗೇ ಉಂಟಾಗುತ್ತಿದ್ದವು.

'ನನ್ನೊಳಗೆ ಮಿಡಿಯುವ ನಾದ ಯಾವುದಿದು? ಸೊಲ್ಲು ಸೊಲ್ಲಿಗೂ ಆವರಿಸಿ ಅವುಚಿಬಿಡುವ ಮಾಯಕಾರ ರಾಗವು ಇದ್ಯಾವುದು?' – ಪದೇ ಪದೇ ಚಿಂತಿಸಿ ನಿಡುಸುಯ್ದುದರೂ ಸುಳಿವು ಪತ್ತೆಯಾಗಲೊಲ್ಲದು.

ಇವಳಿಗಾಗ ಹದಿನೇಳರ ಹರೆಯ! ಹೆಸರು ಗೀತಾಲಕ್ಷ್ಮಿ.

..ಕೃಷ್ಣನ ಕೊಳಲ ಗಾನವು ಧುತ್ತನೆ ಬಂದು ಬಿರುಸಾಗಿ ಹರಿದು.. ತುಂಡಾಗಿ, ಮತ್ತೆ ಮೊದಲಿಂದ ಶುರುವಾಗಿ ಬಿರುಸಾಗಿ.. ತುಂಡಾಗುವ ಮೊದಲು ಇವಳು ಹಲೋ.. ಎಂದಳು. ಮೊಬೈಲು ರಿಂಗಾಗಿತ್ತು! ಆ ಬದಿಯಿಂದ-

'ಹಲೋ.. ಗೀತು, ಹಾಫ್‌ಡೇ ರಜೆ ಹಾಕಿ ಬರ್ತೇನೆ, ರೆಡಿಯಾಗಿರು. ಸಂಜೆ ಝೂಗೆ ಹೋಗೋಣ. ಅಲ್ಲಿ ವಿಶೇಷವಾದ ಒಂದು ಕುದುರೆ ಬಂದಿದೆಯಂತೆ. you know, that is very rare and unimaginable ಅಂತೆ! ರೆಡಿಯಾಗಿರು'. ಕರೆ ಕಟ್ ಆಯಿತು. ಗಂಡನ ದೂರಧ್ವನಿಗೆ ತನ್ನ ಗತದ ನೆನಪುಗಳ ಕೊಂಡಿಯು ತುಂಡಾಗಿ ರಸಭಂಗವಾದಂತೆ ಮಿಡುಕಿದಳು ಗೀತಾಲಕ್ಷ್ಮಿ. 'ಯಾಕೆ ಬಂದಾನೋ ರಾಕ್ಷಸ..' ಎಂಬ ಭಾವ ಸುಳಿದುಹೋಯಿತು. ಮದುವೆಯಾದ ದಿನದಿಂದ ಆತ ಅಕ್ಷರಶಃ ರಾಕ್ಷಸನಂತೆ ಆವರಿಸಿ ಕುದುರೆಯಂತೆ ಕೆನೆದು ವಿಜಯಪತಾಕೆ ಹಾರಿಸುತ್ತಿದ್ದ. ಮತ್ತೆ ಮತ್ತೆ ತೀರದ ಅವನ ದಾಹಕ್ಕೆ ಈಕೆ ತತ್ತರಿಸಿಹೋಗಿದ್ದಳು. ಆದ್ದರಿಂದಲೇ ಮನೆಯ ಪಕ್ಕದ ಕ್ರಾಸಿನ ಸ್ವಾಮಿ ಸತ್ಯಾನಂದ ಆಶ್ರಮದ ಬೆಳಗಿನ ಪ್ರವಚನದ ಖಾಯಂ ಶ್ರೋತೃವಾಗಿ ಶಾಂತಿಯನ್ನು, ಸುಖವನ್ನು ಅರಸುತ್ತಿದ್ದಳು.

❖

ಅಂದಿನ ದಿನಪತ್ರಿಕೆಗಳಲ್ಲಿ ವಿಶೇಷ ಸುದ್ದಿಯೊಂದು ಬಾಕ್ಸ್ ಐಟಮ್ಮುಗಳಲ್ಲಿ ರಾರಾಜಿಸುತ್ತಿತ್ತು:

'ವಿಶ್ವದ ಅತಿ ಪ್ರಾಚೀನ ಹಾಗೂ ಬಹು ಅಪರೂಪದ ಕುದುರೆಯೊಂದನ್ನು ಹೊಂದಿದ ಕೀರ್ತಿಗೆ ಇದೀಗ ಮೈಸೂರು ಮೃಗಾಲಯ ಪಾತ್ರವಾಗಿದೆ. ಇರಾಕ್, ಇರಾನ್, ಸಿರಿಯಾ ಸೇರಿದಂತೆ ಅರಬ್ ರಾಷ್ಟ್ರಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ, ಈಗ ಅಳಿವಿನ ಅಂಚಿನಲ್ಲಿರುವ ವಿಶ್ವದ ಅತ್ಯುತ್ತಮ ಗುಣಮಟ್ಟದ, ಬಲಿಷ್ಠವಾದ, ವಿಶಿಷ್ಟ ತಳಿಯ ಕುದುರೆ ಇದಾಗಿದೆ. ಹಲವು ವರ್ಷಗಳ ರಾಜತಾಂತ್ರಿಕ ಪ್ರಯತ್ನದ ಫಲವಾಗಿ ಅರಬ್‌ನಿಂದ ಮೈಸೂರು ಮೃಗಾಲಯವು ಇದನ್ನು ಪಡೆದುಕೊಂಡಿದೆ. ಅಪರೂಪದ ತಳಿ ಸಂರಕ್ಷಣೆ ಹಾಗೂ ಸಂತಾನೋತ್ಪತ್ತಿ ಉದ್ದೇಶವನ್ನು ಹೊಂದಲಾಗಿದೆ.'

ಆದರೆ ಕುದುರೆಯ ವಿಶೇಷತೆ ಬಗ್ಗೆ ಪತ್ರಿಕಾ ವರದಿಗಿಂತ ಹೆಚ್ಚಿನ ಮಾಹಿತಿಗಳು ಜನಮಾನಸದಲ್ಲಿ ವೇಗವಾಗಿ ಹರಿದಾಡುತ್ತಾ ಜನರಲ್ಲಿ ಕೌತುಕವನ್ನು ಹೆಚ್ಚಿಸಿದ್ದವು. ಈ ಅರಬ್ಬೀ ಕುದುರೆಯು ಹಿಂದೆ ಮೊಗಲರ ಕಾಲದಲ್ಲಿ ಮನ್ಸಬ್‌ದಾರರು ಬಳಸುತ್ತಿದ್ದ ಯುದ್ಧದ ಕುದುರೆಗಳ ಜಾತಿಯದ್ದಾಗಿದ್ದು ನಾಗಾಲೋಟದಿಂದ ಓಡಬಲ್ಲುದಾಗಿತ್ತು.

ಬಲಿಷ್ಠ ನೀಳ ಕಾಲುಗಳು, ಸಮೃದ್ಧ ಕೇಶರಾಶಿ, ಸದೃಢದೇಹ, ಚೂಪಾದ ನಾಲಗೆ, ಮೋಹಕವಾದ ಬಣ್ಣ–ರೂಪುಗಳೊಂದಿಗೆ ಕನ್ನಡವೂ ಸೇರಿದಂತೆ ವಿಶ್ವದ ಹಲವು ಭಾಷೆಗಳನ್ನು ಆಲಿಸಿ ಅರ್ಥಮಾಡಿಕೊಳ್ಳುತ್ತದಂತೆ! ಮನುಷ್ಯರಂತೆ ಆಕಳಿಸುತ್ತದೆ.. ಕೂಗುತ್ತದಂತೆ! ಮನುಷ್ಯ ಸ್ನೇಹಿಯಂತೆ ಕಂಡರೂ ಒಮ್ಮೊಮ್ಮೆ ಹಸುವಿನಂತೆ, ಗೂಳಿಯಂತೆ, ಸಿಂಹದಂತೆ, ಸುಂದರ ಪುರುಷನಂತೆ ರೂಪ ಧರಿಸುವ ಸಾಮರ್ಥ್ಯವಿರುವುದರಿಂದ ಬಹಳ ಅಪಾಯಕಾರಿ ಪ್ರಾಣಿ! – ಹೀಗೆ ಚಿತ್ರ ವಿಚಿತ್ರ ಸುದ್ದಿಗಳು ಹರಡಿದ್ದವು. ಅಲ್ಲದೆ ಅದರ ವಿವಿಧ ಅಂಗಗಳು ಪುರುಷತ್ವವರ್ಧಕ, ಕಾಮೋತ್ತೇಜಕವಾಗಿಯೂ ಉಪಯುಕ್ತ ಎಂಬ ಮಾಹಿತಿಯು ಜನರಲ್ಲಿ ಸಂಚಲನೆ ಉಂಟುಮಾಡಿತ್ತು! ಒಟ್ಟಾರೆ ಇಡೀ ಕುದುರೆಯು ಅಸೀಮ ಶಕ್ತಿ–ಯುಕ್ತಿ, ವೀರ್ಯವಂತಿಕೆಯ ಪ್ರತಿರೂಪವಾಗಿ ನಗರದ ಜನತೆಯ ವಿಸ್ಮಯಕ್ಕೆ ಕಾರಣವಾಗಿತ್ತು. ಸದರಿ ಸಂಗತಿಯು ಇಡೀ ರಾಜ್ಯಕ್ಕೆ ಹಬ್ಬಿ ಜನಸಾಗರವು ತಂಡೋಪತಂಡವಾಗಿ ಮೈಸೂರಿನ ಕಡೆಗೆ ಧಾವಿಸತೊಡಗಿತ್ತೆಂದರೆ..

❖

“ಅಷ್ಟಮದಗಳಲ್ಲಿ ರೂಪಮದ, ಯೌವ್ವನ ಮದ, ಹಣಮದಗಳು ಒಂದುಗೂಡಿದರೆ ಅದು ಯಾವ ಕಟ್ಟು–ಕಟ್ಟಲೆಗೂ ದಕ್ಕಲಾರದು. ಸಿಕ್ಕವರನ್ನೆಲ್ಲಾ ತುಳಿಯುತ್ತಾ, ಸಿಕ್ಕಿದ್ದನ್ನೆಲ್ಲಾ ಧೂಳೀಪಟ ಮಾಡುತ್ತಾ ಗೂಳಿಯಂತೆ ಮುನ್ನುಗ್ಗುತ್ತದೆ. ಸದರಿ ಮದಮಾನಸವು ಅಂತರಂಗದ ಅರಿವಿಗೆ ಮಾತ್ರ ಸೋಲಬಲ್ಲದೇ ಪರಂತು ಬೇರೆ ಇಲ್ಲ. ಭಗವತ್ ಚಿಂತನೆಯಲ್ಲಿ ಧ್ಯಾನಮಗ್ನರಾಗದ ಹೊರತು ಮುಕ್ತಿಯಿಲ್ಲ. ಪ್ರೇಮ–ಕಾಮಗಳು ದಾಂಪತ್ಯದ ಅನುಸರಣೆಯಲ್ಲಿ ಸಹಜವೇ ಆದರೂ ಸಂತಾನೋತ್ಪತ್ತಿ, ವಂಶಾಭಿವೃದ್ಧಿಯ ಮೂಲ ಉದ್ದೇಶಕ್ಕೆ ಅದು ಸೀಮಿತವಾಗಬೇಕು. ಕೌಟುಂಬಿಕ ನೈತಿಕತೆಯ ಚೌಕಟ್ಟುಗಳಾಚೆಗೆ..” ಸ್ವಾಮಿ ಸತ್ಯಾನಂದರ ಸಂಜೆ ಪ್ರವಚನದ ನಡುವೆಯೂ ಅವೆರಡು ಕಂಗಳ ಅರಸುವಿಕೆಯು ಅವಳ ಗೈರುಹಾಜರಿಯ ಗಮನಿಸಿ ಸೋತು ಸುಮ್ಮನಾಯಿತು. ಗೀತಾಲಕ್ಷ್ಮಿಯು ಗಂಡನೊಡನೆ ಮೃಗಾಲಯದ ಭೇಟಿಯಲ್ಲಿದ್ದಳು.

ದಿನಕಳೆದಂತೆ ಕುದುರೆಯ ಖ್ಯಾತಿ ಹೆಚ್ಚಾಗತೊಡಗಿತ್ತು. ಮೃಗಾಲಯದ ಇತರ ಪ್ರಾಣಿಗಳು ಮಂಕಾಗತೊಡಗಿದ್ದವು. ಪ್ರತಿದಿನದ ರಾತ್ರಿಗಳಲ್ಲಿ ಕುದುರೆಯ ಕೆನೆತ, ಗೂಳಿಯ ಗುಟುರುಗಳು ಇತರೆ ಪ್ರಾಣಿಗಳ ವಿಭಿನ್ನ ಸದ್ದುಗಳೊಂದಿಗೆ ಮಿಳಿತವಾಗಿ

ಗದ್ದಲದ ಸಂತೆಯಾಗಲಾರಂಭಿಸಿತ್ತು. ಪ್ರತಿ ಬೆಳಿಗ್ಗೆ ಯಾವುದಾದರೊಂದು ಪ್ರಾಣಿಯಲ್ಲಿ ಮುಖ ಮೂತಿ, ಮೈಗಳು ತರಚಿದಂತೆ, ಪರಚಿದಂತೆ ಗುರುತುಗಳು ಮೂಡತೊಡಗಿದವು. ಮೃಗಾಲಯದ ಸಿಬ್ಬಂದಿ ಕಟ್ಟೆಚ್ಚರ ವಹಿಸಿ ಪ್ರತಿ ಪ್ರಾಣಿ-ಪಕ್ಷಿಗಳನ್ನೂ ನಿಗದಿಯಾದ ಪ್ರತ್ಯೇಕ ಕೋಣೆಗಳಲ್ಲಿರಿಸಿ ಬಿಗಿಯಾಗಿ ಬೀಗ ಜಡಿದಿದ್ದರೂ ದಾಳಿಯ ಗುರುತುಗಳು ಮೂಡುವುದು ನಿಂತಿರಲಿಲ್ಲ. ಝೂ ಅಧಿಕಾರಿಗಳಿಗಿದು ಬಿಡಿಸದ ಕಗ್ಗಂಟಾಗಿತ್ತು. ಸಿಂಹದಂಥ ಸಿಂಹವೂ ಗಾಯಗೊಂಡಿತ್ತೆಂದರೆ..

❖

ವರುಷ ಮೂರು ಕಳೆದರೂ ಮಡಿಲು ತುಂಬಿರಲಿಲ್ಲ. ಗರ್ಭ ಕಟ್ಟಲು ಬಿಡುವು ನೀಡದ 'ಮೈದಾಳಿ'ಯಿಂದಾಗಿ ಎರಡು ಬಾರಿ ಗರ್ಭಪಾತವಾಗಿತ್ತು. 'ಇದು ಮತ್ತೆ ರಿಪೀಟ್ ಆದ್ರೆ ಗರ್ಭಧಾರಣೆಯ ಅವಕಾಶ ತೀರಾ ಕಡಿಮೆ' ಎನ್ನುವ ಡಾಕ್ಟರರ ಮಾತು ಇವಳನ್ನು ತಿವಿಯುತ್ತಿತ್ತು.

ಅತುಲ ಪ್ರೀತಿ, ಸುಕೋಮಲ ಭಾವಗಳ ನಿರೀಕ್ಷೆಯಲ್ಲಿ ಹೊಸ ಬಾಳಿಗೆ ಅಡಿಯಿಟ್ಟವಳಿಗೆ ಸುಖೇಶನ ಸುಖಲೋಲುಪತೆ ರೇಜಿಗೆ ಹುಟ್ಟಿಸಿತ್ತು. ಅವನ ಪ್ರತಿಸ್ಪರ್ಶವೂ ಅವಳಿಗೆ ಸುಖದ ನರಳಿಕೆಗಳ ಬದಲಾಗಿ ಸರೀಸೃಪದ ಹರಿದಾಟದಂತೆ ಭಾಸವಾಗತೊಡಗಿತ್ತು. ಮೈ ಮೈಲಿಗೆ ಆಗುತ್ತಿದೆ; ಮನಸ್ಸು ಮಲಿನವಾಗುತ್ತಿದೆ ಎನ್ನಿಸಿ ಶುಭ್ರ ಗಾಳಿಗೆ ಮೈ-ಮನಸ್ಸು ಒಡ್ಡಿ ನಿಲ್ಲಬೇಕೆಂಬ ಧಾವಂತ ಹೆಚ್ಚಾಗುತ್ತಿತ್ತು. ಅಂತಹ ಹೊತ್ತಲ್ಲಿ ಅವಳಿಗೆ ಕಂಡಿದ್ದು ಸ್ವಾಮಿ ಸತ್ಯಾನಂದರ ಆಶ್ರಮ; ಮತ್ತಲ್ಲಿ ಸಿಕ್ಕ, ಅಸೀಮ ಗೌರವ-ಕಾಳಜಿಗಳನ್ನು ತೋರುವ ಶಾಂತ ಹೃದಯದ ಗೆಳೆಯ. ಅವಳಿಗೊಂದು ಓಯಸಿಸ್ ಗೋಚರಿಸಿತ್ತು!

ಇದ್ದಕ್ಕಿದ್ದಂತೆ ಅರಬ್ಬೀ ಕುದುರೆಯು ಮೃಗಾಲಯದಿಂದ ತಪ್ಪಿಸಿಕೊಂಡಿತ್ತು!

ಸುದ್ದಿಯು ನಗರದಾದ್ಯಂತ ಕಾಳ್ಗಿಚ್ಚಿನಂತೆ ಹರಡಿತು. ನಿಜವೋ ಸುಳ್ಳೋ ಖಚಿತಪಡಿಸಿಕೊಳ್ಳಲು ಜನತೆ-ಸುದ್ದಿಮಾಧ್ಯಮಗಳು ಮೃಗಾಲಯಕ್ಕೆ ಮುಗಿಬಿದ್ದರು.

ಸುದ್ದಿ ನಿಜವಾಗಿತ್ತು.

ಮೃಗಾಲಯದ ಅಧಿಕಾರಿಗಳು ಪೋಲೀಸ್ ಕಂಪ್ಲೇಂಟ್ ಕೊಟ್ಟರು. 'ಇದು ನಮ್ಮ ವ್ಯಾಪ್ತಿಗೆ ಬರೋದಿಲ್ಲ. ಅರಣ್ಯ ಇಲಾಖೆಗೆ ದೂರು ಕೊಡಿ' ಎಂದು ಪೋಲೀಸರು ಪ್ರಕರಣವನ್ನು ಕಾಡಿಗೆ ಸಾಗಹಾಕಿದರು. ಅರಣ್ಯಾಧಿಕಾರಿಗಳು ಅಳೆದು ತೂಗಿ- 'ಇದು ನಮ್ಮ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಇದು ನಾಡಿನ ಪ್ರಾಣಿ, ಮೇಲಾಗಿ ಸಾಕುಪ್ರಾಣಿ. ನಮ್ಮದೇನಿದ್ರೂ ವೈಲ್ಡ್ ಅನಿಮಲ್ಸ್ ಮಾತ್ರ' ಎಂದು ದೂರನ್ನೇ ದೂರ ತಳ್ಳಿದರು.

ಕುದುರೆ ಕಾಣೆಯಾದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟಗೊಳ್ಳುತ್ತಲೇ ನಾಡಿನ ಜನತೆಯಲ್ಲಿ ಹೊಸ ಸಂಚಲನವೇ ಸೃಷ್ಟಿಯಾಯಿತು. ಕಿರುತೆರೆ ವಾಹಿನಿಗಳು ಇದೇ ಸುದ್ದಿಯನ್ನು ಮತ್ತೆ ಮತ್ತೆ ಬಿತ್ತರಿಸಿ ಜನರಲ್ಲಿ ಕೆಟ್ಟ ಕುತೂಹಲ, ಅನಗತ್ಯ ಭಯ ಬಿತ್ತಿದವು. 'ಯಃಕಶ್ಚಿತ್ ಒಂದು ಪ್ರಾಣಿ ಕಾಣೆಯಾಗಿದ್ದಕ್ಕೆ ಇಷ್ಟೊಂದು ಆತಂಕ ಬೇಕಿಲ್ಲ. ಇದೊಂದು ಸಾಮಾನ್ಯ ಘಟನೆ. ಶಾಂತಿಯಿಂದಿರಿ' ಎಂದು ಸರ್ಕಾರ ಮನವಿ ಮಾಡಿತು. ಆದರೆ ಜನಮರುಳೋ ಜಾತ್ರೆ ಮರುಳೋ.. ಬಲ್ಲವರಾರು? ಸಮೂಹಸನ್ನಿ ಎಂಬುದು ಯಾವತ್ತಿಗೂ ಒಂದು ಹುಚ್ಚುಕುದುರೆಯೇ ಅಲ್ಲವೆ?

ಕುದುರೆಗೆ ಆರೋಪಿಸಲಾಗಿದ್ದ ಗುಣವಿಶೇಷಗಳೇ ಜನರ ಭೀತಿಗೆ ಮೂಲವಾಗಿದ್ದು ಮಾತ್ರ ಸೋಜಿಗವಾಗಿತ್ತು! ರಾಜ್ಯದಲ್ಲಿ ಚಾಲ್ತಿಯಲ್ಲಿದ್ದ ಧಾರ್ಮಿಕ, ಆರ್ಥಿಕ, ರಾಜಕೀಯ ಅರಾಜಕತೆಗಳು ಕೂಡಿ ಸನ್ನಿವೇಶವನ್ನು ತಂತಮ್ಮ ಅನುಕೂಲಕ್ಕೆ ಬಳಸಿಕೊಳ್ಳಲು ಹವಣಿಸುತ್ತಿದ್ದವು.

❖

ಅತಿಯು ಮಿತಿಯ ಮೀರಿ ತುಟಾಗ್ರವನ್ನು ತಲುಪಿತ್ತು. ಎಂಥೆಂಥದೋ ತಾಯಿತ, ಚೂರ್ಣ, ಲೇಹ್ಯಗಳನ್ನು ಬಳಸಲು ಶುರುವಿಟ್ಟುಕೊಂಡ ಸುಖೇಶ ನೀಲಿಚಿತ್ರಗಳ ಎಲ್ಲ ವರಸೆಗಳನ್ನೂ ಹೆಂಡತಿಯ ಮೇಲೆ ಪ್ರಯೋಗಿಸಲಾರಂಭಿಸಿದ್ದ. ಗಂಡನ ಗೂಳಿಯಂತೆ ಮುನ್ನುಗ್ಗುವ ಪರಿ, ಕುದುರೆಯಂಥ ವರ್ತನೆ ಇವಳಲ್ಲಿ ಅಚ್ಚರಿ ಹುಟ್ಟಿಸಿದ್ದವು. ಆದರೆ ಅಮೃತವೂ ವಿಷವಾದ ಪರಿಯ ಮುಂದೆ ಅದೇನೂ ದೊಡ್ಡದಲ್ಲ ಎಂಬ ವಿಷಾದವು ಅವಳನ್ನು ಆವರಿಸಿತ್ತು.

ಪ್ರಶಾಂತ ಮಠದಂಗಳ, ಹೊಸ ಗೆಳೆಯ.. ಇವು ಮಾತ್ರ ಅವಳ ಪಾಲಿಗೆ ನಂಬಿಕೊಂಡ ಸತ್ಯಗಳಾಗಿ ಗೋಚರಿಸಿದವು. ಎಲ್ಲ ಬಗೆಯ ದಾಳಿ – ದೌರ್ಜನ್ಯಗಳಿಂದ ಮುಕ್ತವಾದ, ಪ್ರೀತಿ–ಪ್ರೇಮ, ಸ್ನೇಹಗಳಾಚೆಯ; ದೈಹಿಕ ವಾಂಛೆಯನ್ನೊಲ್ಲದ ಬಂಧಕ್ಕೆ ಆತ ಆಹ್ವಾನಿಸಿದ್ದ. ಅಲೌಕಿಕದಂಥ ಸಂಬಂಧ! ಇಲ್ಲವೆನ್ನಲಾಗಲಿಲ್ಲ. ದೈಹಿಕ ದೌರ್ಜನ್ಯಕ್ಕೆ ಮಾನಸಿಕ ಸಾಂತ್ವನದ ಪರಿಹಾರ ಪಡೆಯಲು ಒಡಂಬಟ್ಟಳು ಗೀತಾಲಕ್ಷ್ಮಿ.

❖

ಕುದುರೆಯು ಕುಂಬಾರರ ಮನೆಗೆ ನುಗ್ಗಿ ಮಡಕೆ ಕುಡಿಕೆಗಳನ್ನು ಒಡೆಯಿತಂತೆ! ಆಚಾರ್‍ರ ಮನೆಯ ತಿದಿಯನ್ನು ತುಳಿದು ಹರಿಯಿತಂತೆ! ಗೌಡರಟ್ಟಿ ಎಮ್ಮೆ ಹಸು–ಕರುಗಳ ಮೇಲೆ ದಾಳಿ ಮಾಡಿತಂತೆ! ಶೆಟ್ಟರಂಗಡಿ ಧ್ವಂಸ ಆಯಿತಂತೆ! ಲಿಂಗಾಯಿತರ ಮನೆ ನುಗ್ಗಿ, ಹೊಲೇರ ಮನೆಯಿಂದ ಆಚೆ ಬಂದು.. ಬ್ರಾಹ್ಮಣರ ಮನೆಗೂ ಹೊಕ್ಕಿ ಜಾತಿ ಕೆಡಿಸಿತಂತೆ.. ಎಂಬ ಸುದ್ದಿಗಳು ವ್ಯಾಪಕವಾಗಿ ಹಬ್ಬಿದವು. ದಿಟವೋ–ಸಟೆಯೋ

ಒಬ್ಬರೂ ಕಂಡವರಿಲ್ಲ. ಎಲ್ಲರ ಮನೆಗಳಲ್ಲೂ ವಿಚಿತ್ರ ಅನುಭವಗಳು. ಕುದುರೆಯು ಹೊಕ್ಕಾಡಿದಂತೆ.. ಗಂಡಂದಿರ ಮೈಮೇಲೆ ಗೂಳಿ ಬಂದಂತೆ.. ಯಾವುದೋ ದಾಳಿ ನಡೆದ ಕುರುಹುಗಳು ಮೂಡತೊಡಗಿದವು. ದಾಳಿಗೆ ಹೆಣ್ಣುಗಂಡಿನ ಭೇದ ಇರಲಿಲ್ಲವಾದರೂ ಬಹುತೇಕ ಹೆಂಗಸರೇ ಗುರಿ ಆಗಿದ್ದಂತೆ ತೋರುತ್ತಿತ್ತು. ಜನರಲ್ಲಿ ಹಿಂಸಾಪ್ರವೃತ್ತಿಯು ಸಮೂಹ ಸನ್ನಿಯಾಗತೊಡಗಿತು.

ದಾಳಿ–ಆಕ್ರಮಣಗಳಿಂದ ಎಲ್ಲೆಲ್ಲೂ ಪ್ರಕ್ಷುಬ್ಧತೆ, ಅಶಾಂತಿ. 'ಯಃಕಶ್ಚಿತ್ ಒಂದು ಕುದುರೆ ಹಿಡಿಯಲಾರದ ಪೊಲೀಸು–ಕಾನೂನು ನಮಗೆ ಬೇಕಾ? ಏನ್ ಮಾಡುತ್ತೀರೋ ಗೊತ್ತಿಲ್ಲ. ಪೊಲೀಸು–ಅರಣ್ಯ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಮೂರು ದಿನದೊಳಗೆ ಕುದುರೆ ಹಿಡಿದು ತರಬೇಕು' ಸರ್ಕಾರ ತಾಕೀತು ಮಾಡಿತು. 'ಆಪರೇಷನ್ ಅಶ್ವಮೇಧ' ಎಂಬ ಗುಪ್ತ ಸಂಕೇತನಾಮದಲ್ಲಿ ಜಂಟಿ ಕಾರ್ಯಾಚರಣೆ ಶುರುವಾಯಿತು. ಅನುಮಾನ ಬಂದ ನಾಲ್ಕಾರು ಜನರನ್ನು ಬಂಧಿಸಿದರು. ಮೇಲಧಿಕಾರಿಗಳಿಗೆ ಸುದ್ದಿ ಹೋಯಿತು.

ಅಧಿಕಾರಿಗಳ ಪ್ರಶ್ನೆಗಳ ಸುರಿಮಳೆಗೆ ಬೆಚ್ಚಿದ ಬಂಧಿತರು ಜಪ್ಪಯ್ಯ ಅಂದರೂ ತುಟಿಬಿಚ್ಚಲಿಲ್ಲ. ಮನಬಂದಂತೆ ಥಳಿಸಿದರು. ಕಡೆಗೆ ಹಿಡಿದು ತಂದ ಪೊಲೀಸರನ್ನೇ ವಿಚಾರಣೆಗೆ ಗುರಿಪಡಿಸಿ ಅವರು ಕೊಟ್ಟ ಹೇಳಿಕೆಯನ್ನೇ ರೆಕಾರ್ಡ್ ಮಾಡಿದರು.

❖

ಮನೆಯಲ್ಲಿ ಮುದುಡಿದ ತಾವರೆ ಮಡದಂಗಳದಲ್ಲಿ ಅರಳಿ ಹಿಗ್ಗುತ್ತಿತ್ತು. ಎರಡು ಹೃದಯಗಳು ಪರಸ್ಪರ ಮಿಡಿದುಕೊಳ್ಳುತ್ತಿದ್ದವು. ಹೊಸಗಾಳಿಗೆ ಮೈಯೊಡ್ಡಿ ನೋವು–ಭಾವಗಳ ಹಂಚುಂಡವು, ಹೆಣ್ಣುಗಂಡುಗಳ ನಡುವೆ ಪ್ರೇಮ ಕಾಮವಲ್ಲದ ಎದೆಯ ಸಂಬಂಧವೊಂದು ಏಕೆ ಸಾಧ್ಯವಿಲ್ಲ? ಈಗ ನಾವಿಲ್ಲವೆ.. ಎಂಬ ಭಾವ ಅವಳಲ್ಲಿ ವಿಶ್ವಾಸ ತುಂಬುತ್ತಿತ್ತು. 'ಮನವಿತ್ತೆ.. ತನುವೇಕೆ ಹೊಲ್ಲ?' ಎಂಬ ಪ್ರಶ್ನೆಯು ಎದೆಯ ಗೆಳೆಯನ ಕಿಬ್ಬೊಟ್ಟೆಯಾಳದಲ್ಲಿ ಮುಲುಕಲಾರಂಭಿಸಿದ್ದನ್ನು ಇವಳು ಹೇಗೆ ತಾನೆ ಅರಿಯಲು ಸಾಧ್ಯ?

ಪೊಲೀಸರ ತನಿಖೆಯು ಸ್ವಲ್ಪ ಸ್ವಲ್ಪವೇ ಪ್ರಗತಿ ಸಾಧಿಸುತ್ತಿತ್ತು. ಸಿಟಿ ಬಸ್ ಸ್ಟಾಂಡ್, ಮಾರ್ಕೆಟ್, ಗಾಂಧಿ ಚೌಕಗಳಲ್ಲಿ ತಾಯಿತ, ಚೂರ್ಣ, ಲೇಹ್ಯಗಳನ್ನು ಮಾರುತ್ತಿದ್ದವರನ್ನು ಬಂಧಿಸಿದರು. ಅವರು ನೀಡಿದ ಸುಳಿವಿನಿಂದ ಮತ್ತಷ್ಟು ಜನ ಅರೆಸ್ಟಾದರು. ಆದರೆ ಮೂಲಗಮ್ಯವು ಮಾತ್ರ ಅಭೇದ್ಯ ಕೋಟೆಯಂತೆ ಸವಾಲು ಎಸೆದಿತ್ತು. ಈ ಮಧ್ಯೆ ಗೂಳಿ, ಕುದುರೆಯ ಹಾವಭಾವಗಳಿಂದ ಹಿಂಸ್ರಾಪಶುಗಳಂತೆ ವರ್ತಿಸುತ್ತಿದ್ದವರ ಸಂಖ್ಯೆ ದ್ವಿಗುಣಗೊಂಡು ಜೈಲುಗಳು ತುಂಬಿಹೋದವು.

ಸರ್ಕಾರಕ್ಕೆ ತಲೆನೋವು ಶುರುವಾಯಿತು. ತನಿಖಾಧಿಕಾರಿಗಳು ಬದಲಾದರು, ಹೊಸ ತಂತ್ರಗಳು ಜಾರಿಗೆ ಬಂದವು. ಕೊನೆಗೆ ತಾಯಿತ ಮಾರುತ್ತಿದ್ದವರನ್ನು ನಾರ್ಕೋ ಅನಾಲಿಸಿಸ್ ಮತ್ತು ಮಂಪರು ಪರೀಕ್ಷೆಗಳಿಗೆ ಒಳಪಡಿಸಿದಾಗ–'ಕುದುರೆಯ ಬಾಲದ ಕೂದಲು, ಬೆನ್ನಿನ ಕೇಶಗಳಿಂದ ತಾಯಿತಗಳನ್ನೂ, ಕುದುರೆಯ ಯಾವ್ಯಾವುದೋ ಅವಯವಗಳಿಂದ ಲೇಹ್ಯ–ಚೂರ್ಣಗಳನ್ನು ತಯಾರಿಸುತ್ತಿದ್ದುದು.. ಅದರಲ್ಲಿ ಒಣ ಮಾಂಸ ಅಥವಾ ಬ್ರೆಡ್ಡಿನಂಥ ತುಣುಕುಗಳಿದ್ದುದೂ ಬೆಳಕಿಗೆ ಬಂತು. ಚೈನ್‌ಲಿಂಕ್ ಮಾರಾಟದ ತಂತ್ರದಿಂದ ಕೈ ಬದಲಾವಣೆ ಮಾಡಿ ಮಾರಲಾಗುತ್ತಿತ್ತು. ಮಾರುವವರಿಗೆ ಕೈ ತುಂಬಾ ಕಾಸು ಸಿಗುತ್ತಿತ್ತು. ಎಲ್ಲಿಂದ? ಹೇಗೆ? ಸರಬರಾಜಾಗುತ್ತಿವೆ ಎಂಬ ಮೂಲವು ಗೊತ್ತಿರಲಿಲ್ಲ. ಅದು ಅವರಿಗೆ ಬೇಕೂ ಇರಲಿಲ್ಲ. ಜನರು ಹಟಕ್ಕೋ ಚಟಕ್ಕೋ ಬಿದ್ದವರಂತೆ ಖರೀದಿಸುತ್ತಿದ್ದರು ಎಂಬುದೂ ತಿಳಿಯಿತು. ಆದರೆ ತಪ್ಪಿಸಿಕೊಂಡ ಕುದುರೆಯ ಬಗ್ಗೆ ಮಾಹಿತಿ ಸಿಗಲಿಲ್ಲ.

'ತಾಕತ್ ಕಿ ದಾವತ್ ಅಂತಾ ಈ ಸುವ್ವರ್ ನನ್ ಮಕ್ಳು ಕುದುರೇನಾ ಕೊಂದು ತಿಂದ್ಬಿಟ್ಟಿರಬೇಕು..' ಎಂದು ತಮಗೆ ತಾವೇ ಹೇಳಿಕೊಳ್ಳುತ್ತಾ ಕುಸಿದು ಕುಂತರು ತನಿಖಾಧಿಕಾರಿ ಷರೀಫ್ ಸಾಹೇಬರು. 'ಕುದುರೆ–ಗೂಳಿಗಳ ದಾಳಿಗಳಿಗಿಂತ ಮನುಷ್ಯನ ದುರಾಸೆಯೇ ಭೀಕರ. ಸಕಲ ಜೀವಜಂತುಗಳಲ್ಲೂ ಇರುವ ಹಿಂಸಾ ಮನೋವೃತ್ತಿಯು ಯಾವಾಗ? ಹೇಗೆ? ಉದ್ದೀಪನಗೊಳ್ಳುವುದೋ ಬಲ್ಲವರಾರು?' ಎಂದು ಸಾಹೇಬರು ಹಣೆಯ ಬೆವರು ಒರೆಸಿಕೊಂಡರು.

❖

ಸರ್ಕಾರಕ್ಕೆ ವರದಿ ಸಲ್ಲಿಕೆಯಾಯಿತು. ವರದಿಯಲ್ಲಿ ಮುಖ್ಯವಾಗಿ ಎರಡು ಬಗೆಯ ಅಭಿಪ್ರಾಯ ಮಂಡಿಸಲಾಗಿತ್ತು.

ಅಭಿಪ್ರಾಯ ಒಂದು:

ಬಹುಶಃ ಕುದುರೆಯ ಅತಿಮಾನುಷ ಶಕ್ತಿಯನ್ನು, ಕಾಮೋತ್ತೇಜಕ ಗುಣಗಳನ್ನು ತಾವೂ ಹೊಂದಲು ಕುದುರೆಯನ್ನು ಅಪಹರಿಸಿಕೊಂಡು ಕೊಂದು ತಿಂದಿರಬಹುದು. ಇದರ ಪರಿಣಾಮ ಜನರ ಮೇಲಾಗಿರಬಹುದು. ಲೇಹ್ಯ, ಚೂರ್ಣ, ತಾಯಿತಗಳು ಇದಕ್ಕೆ ಪುಷ್ಟಿ ನೀಡುತ್ತವೆ.

ಅಭಿಪ್ರಾಯ ಎರಡು:

ಪ್ರಸ್ತುತ ಸನ್ನಿವೇಶ ಗಮನಿಸಿದರೆ ಕುದುರೆಯ ವಿಶೇಷ ಶಕ್ತಿಗಳು, ವೀರ್ಯವಂತಿಕೆಯ ಗುಣಗಳ ಬಗ್ಗೆ ಜನರಲ್ಲಿ ಉಂಟಾದ ವ್ಯಾಮೋಹ ಮತ್ತು ಕುತೂಹಲಗಳು ಸುಪ್ತವಾಗಿದ್ದ ಮನುಷ್ಯನ ಮೂಲಪ್ರವೃತ್ತಿಗಳಾದ ಕಾಮ ಮತ್ತು ಹಿಂಸಾ ಮನೋವೃತ್ತಿಯನ್ನು ಕೆರಳಿಸಿರಬಹುದು. ಕುದುರೆಯು ತಮಗೆ ಮೈದುಂಬಿದೆ ಅಥವಾ ತಮ್ಮೊಳಗೆ ಹೊಕ್ಕಿ ಗೂಳಿಯಂತಾಡಿಸುತ್ತಿದೆ ಎಂಬ ಭ್ರಮೆಗೆ ಬಿದ್ದು ಹಿಂಸಾಚಾರಕ್ಕೆ ತೊಡಗಿರಬಹುದು. ಇದು ಸಮೂಹ ಸನ್ನಿಯ ರೂಪ ಪಡೆದ ಕಾರಣ ಹಿಂಸೆ ವ್ಯಾಪಕವಾಗಿದೆ.

ಪ್ರಸ್ತುತ ಗುಪ್ತಚರ ವರ್ತಮಾನದ ಪ್ರಕಾರ ಜನಸಾಮಾನ್ಯರ ಆಂತರ್ಯದಲ್ಲಿ ಹಿಂಸೆ ಹೆಚ್ಚಾಗುತ್ತಾ ಇದೆ. ಅದು ರಾಜ್ಯವ್ಯಾಪಿ ಹರಡುತ್ತಿದೆ. ಹಿಂಸಾಗುಣಗಳನ್ನು ತೋರಿದವರನ್ನೆಲ್ಲಾ ಬಂಧಿಸುತ್ತಾ ಹೋದರೆ ಜೈಲುಗಳು ತುಂಬಿ ತುಳುಕುತ್ತವೆ. ಸ್ಥಳಾವಕಾಶದ ಕೊರತೆ ಉಂಟಾಗುವುದಲ್ಲದೆ ಸಮಾಜದ ಸ್ವಾಸ್ಥ್ಯವೂ ಹಾಳಾಗುವ ಸಂಭವವಿರುತ್ತದೆ.

ಸದರಿ ಅಂಶಗಳನ್ನು ಘನ ಸರ್ಕಾರದ ಅವಗಾಹನೆಗೆ ಸಲ್ಲಿಸಲಾಗಿದೆ.

ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ಹಿತದೃಷ್ಟಿಯಿಂದ ಸೂಕ್ತ ತೀರ್ಮಾನ ಕೈಗೊಳ್ಳುವುದು ಸರ್ಕಾರಕ್ಕೆ ಅನಿವಾರ್ಯವಾಯಿತು.

ಮಾನ್ಯ ಮುಖ್ಯಮಂತ್ರಿಗಳು ಸಚಿವ ಸಂಪುಟದ ತುರ್ತು ಸಭೆ ಕರೆದರು. ಸಭೆಯಲ್ಲಿ ಹಲವು ಸಾಧ್ಯತೆಗಳ ಚರ್ಚೆ ನಡೆಯಿತು. ಕಡೆಗೆ ಮುಜರಾಯಿ ಮಂತ್ರಿ ಚೆನ್ನಯ್ಯ ಶೆಟ್ಟರು– 'ಯಾರೋ ಒಬ್ಬ ತಪ್ಪು ಮಾಡಿದ್ರೆ ಹಿಡಿದು ಶಿಕ್ಷೆ ಕೊಡಬೋದು. ರಾಜ್ಯಕ್ಕೆ ರಾಜ್ಯವೇ ಹಿಂಸೆಯಲ್ಲಿ ತೊಡಗಿದ್ರೆ ಯಾರನ್ನ ಹಿಡಿಯೋದು? ಯಾರನ್ನ ಶಿಕ್ಷಿಸೋದು? ಇದು ಪೊಲೀಸು ಕಾನೂನುಗಳಿಂದ ಆಗೋ ಕೆಲ್ಸ ಅಲ್ಲ. ಜನರ ಮನಸ್ಸಿನಲ್ಲಿ ಕುಂತಿರೋ ಹಿಂಸಾ ಮನೋಭಾವನೆಗಳನ್ನ ಕಿತ್ತುಹಾಕದ ಹೊರತು ಶಾಂತಿಯಿಲ್ಲ. ಇದು ಧರ್ಮಸೂಕ್ಷ್ಮದ ಪ್ರಶ್ನೆ. ಶಾಶ್ವತವಾದ ಪರಿಹಾರ ಬೇಕೂಂದ್ರೆ ನಾವು ನಮ್ಮ ಸನಾತನ ಸಂಸ್ಕೃತಿ, ಅಧ್ಯಾತ್ಮದ ಕಡೆಗೆ ಕೈಚಾಚಬೇಕು..' ಎಂದು ಮಂಡಿಸಿದ ಅಭಿಪ್ರಾಯವು ಒಪ್ಪಿತವಾಯಿತು.

ಜನತೆಯ ನಿಯೋಗದೊಂದಿಗೆ ಸ್ವಾಮಿ ಸತ್ಯಾನಂದರ ಬಳಿ ಹೋಗಿ ಅಷ್ಟಮಂಗಲ ಪ್ರಶ್ನೆ ಹಾಕಿಸಿ ಪರಿಹಾರ ಕೇಳಬೇಕು ಎಂಬುದಾಗಿ ಸಚಿವ ಸಂಪುಟವು ನಿರ್ಣಯಿಸಿ ಸಭೆಯನ್ನು ಬರ್ಖಾಸ್ತುಗೊಳಿಸಿತು.

❖

ಅಲ್ಲಾಡಿ ಇಲ್ಲಾಡಿ ಕೊಟ್ಟ ಕೊನೆಗೆ ಮೈಲಾರಕ್ಕೆ ಬಂದಿದ್ದ ಮನಸ್ಸಿನ ಗೆಳೆಯ. ಆಶ್ರಮದ ಧ್ಯಾನ ಮಂದಿರದ ಪಕ್ಕದಲ್ಲಿರುವ ಹೋಮ ಹವನ ನಡೆಸುವ ದೊಡ್ಡ ಕೋಣೆಯಲ್ಲಿ ಅವೆರಡು ಹೃದಯಗಳು ಸಂವಾದಿಸುತ್ತಿದ್ದವು. ಬರಬರುತ್ತಾ ಅದು ಅನೂಹ್ಯವಾದ ಘಟ್ಟ ತಲುಪಿತ್ತು. ಅಲ್ಲಿ ಅಗ್ನಿಕುಂಡದಲ್ಲಿ ಬೂದಿಯು ವಿಭೂತಿಯಂತೆ ಬೆಳ್ಳಗೆ ಹರಡಿತ್ತು. ಬೂದಿಯ ಕೆಳಗಿದ್ದ ಕೆಂಡದುಂಡೆಗಳ ಕಾವು ಇನ್ನೂ ಆರಿರಲಿಲ್ಲ.

'ಜೀವ-ಭಾವ ಒಂದಾದ ಮೇಲೆ ಮಡಿವಂತಿಕೆ ಏಕೆ?' ವಿಷಯಕ್ಕೆ ಬಂದ.

'ಏನು ನಿಮ್ಮ ಮಾತಿನ ಅರ್ಥ?' ಇವಳು ಬೆಚ್ಚಿದಳು.

'ಮನವಿಲ್ಲದವರಲ್ಲಿ ತನುವಿತ್ತು ಘಾಸಿಗೊಳ್ಳುವ ಬದಲು ತನುಮನವೆರಡೂ ಇರುವಲ್ಲಿ ಮೈಯಿ ಮೈಲಿಗೆಯೇ?' ಆಧುನಿಕ ವಚನಕಾರನಂತೆ ನುಡಿದು ಬಾಚಿತಬ್ಬಿ ತುಟಿಗೆ ತುಟಿಯನ್ನೊತ್ತಿ ದೀರ್ಘ ಚುಂಬನವಿತ್ತನು.

ಈಕೆ ಹೌಹಾರಿ, ದೂರ ತಳ್ಳಿ–'ಅವನು ಎದೆಗೆ ಚೂರಿ ಹಾಕಿದ. ನೀನು ಬೆನ್ನಿಗೆ ಹಾಕಿದೆ' ಎಂದು ಕೆನ್ನೆಗೆ ಬಾರಿಸಿದಳು. ಮತ್ತೂ ಹತ್ತಿರಕ್ಕೆ ಬಂದು ಏನೇನೋ ಬಡಬಡಿಸುತ್ತಿದ್ದ. ಅವರ ಮಾತು ಎಳೆದಾಟಗಳ ನಡುವೆ ಅವಳ ಸೀರೆ ಸೆರಗು ಹೋಮಕುಂಡಕ್ಕೆ ಬಿದ್ದಿತ್ತು. ಸೆರಗಿನ ಚುಂಗಿಗೆ ಕೆಂಡವು ಅಂಟಿತ್ತು..

ಜನತೆಯ ನಿಯೋಗದೊಂದಿಗೆ ಮುಜರಾಯಿ ಮಂತ್ರಿಗಳು ಆಶ್ರಮಕ್ಕೆ ಬಂದರು. ಧ್ಯಾನ ಮಂದಿರದಲ್ಲಿ ಕೂತಿದ್ದ ಸ್ವಾಮಿ ಸತ್ಯಾನಂದರ ಪಾದಗಳಿಗೆ ಎರಗಿದರು ಮಂತ್ರಿಗಳು. ಆದರೆ ಅವು ಅಲ್ಲಿರಲಿಲ್ಲ. ಪಾದಕಮಲಗಳು ಪದ್ಮಾಸನ ಭಂಗಿಯಲ್ಲಿದ್ದವು.

ನಿಯೋಗದ ಭಿನ್ನಹದ ಬಳಿಕ– "ನನಗೆ ಗೊತ್ತು, ಇದು ಹೀಗೇ ಆಗುತ್ತೇಂತ. ಅದಕ್ಕೇ ನಾನು ಹೇಳಿದ್ದು 'ಅಶ್ವಮೇಧಯಾಗ' ಆಗ್ಬೇಕು ಅಂತಾ.."

'ಆಗಲಿ ಸ್ವಾಮಿ, ಎಲ್ಲ ವ್ಯವಸ್ಥೆ ಮಾಡ್ಕೊಳ್ಳಿ. ಎಷ್ಟು ಖರ್ಚಾದರೂ ಚಿಂತೆಯಿಲ್ಲ. ಸರ್ಕಾರ ಭರಿಸುತ್ತೆ. ರಾಜ್ಯಕ್ಕೆ, ಜನಗಳಿಗೆ ಒಳ್ಳೇದಾಗಬೇಕು ಅಷ್ಟೇ..' –ಮಂತ್ರಿಗಳ ಮಾತಿಗೆ ಒಮ್ಮೆ ಜೋರಾಗಿ ನಕ್ಕರು ಸ್ವಾಮಿ ಸತ್ಯಾನಂದರು. 'ಹ್ಹಹ್ಹಹ್ಹಾ.. ಹ್ಹಹ್ಹಹ್ಹಾ..' ಜನರು ಸತ್ಯದರ್ಶನವಾದಂತೆ ಬೆಚ್ಚಿದರು! ಸ್ವಾಮಿಗಳ ಕಟಬಾಯಿ ಮತ್ತು ದವಡೆಗಳಲ್ಲಿ ಕೋರೆಹಲ್ಲುಗಳು ಮೂಡಿದ್ದವು. ಯಾಕೋ ಕಿವಿಗಳು ಕೊಂಚ ಉದ್ದವಾಗಿ ನಿಮಿರಿದಂತಿದ್ದವು. ತಲೆಯ ಮೇಲೆ ಎರಡು ಕವೆಗಳು ಕುಡಿಯೊಡೆಯುತ್ತಿರುವ ಸೂಚನೆ ತೋರುತ್ತಿತ್ತು. ಕತ್ತಿನ ಸುತ್ತ ಕೂದಲು.. ಕಣ್ಣ ಕೆಳಗೆ ಕಪ್ಪು; ಕಣ್ಣ ಒಳಗೆ ರಕ್ತವರ್ಣ.. ಬದಲಾದ ಸ್ವಾಮೀಜಿಯ ಚಹರೆಗಳು ನೆರೆದಿದ್ದ ಜನರಲ್ಲಿ ಹತ್ತು ಹಲವು ಅಚ್ಚರಿ, ಅನುಮಾನಗಳನ್ನು ಹುಟ್ಟಿಸಿ ಸಾವಿರ ಪ್ರಶ್ನೆಗಳಿಗೆ ಬೀಜವಾದವು.

..ಸ್ವಾಮೀಜಿಯ ನಗುವು ಅಲೆ ಅಲೆಯಾಗಿ ಹೆಚ್ಚುತ್ತಾ ಹೋದಂತೆ ಆಶ್ರಮದ ಹೆಂಗಸೊಬ್ಬಳು ಬೆಚ್ಚಿಬಿದ್ದಳು, ತಲೆ ಸುತ್ತಿ ಬವಳಿ ಬಂದಿತ್ತು. ತಕ್ಷಣವೇ ಅಲ್ಲಿದ್ದವರು ತಲೆಗೆ ನೀರು ತಟ್ಟಿ, ಬಾಯಿಗೊಂದಿಷ್ಟು ಕುಡಿಸಿದರು. 'ಪಾಪ! ಬಸುರಿ ಹೆಂಗಸು ಅಂತಾ ಕಾಣ್ತದೆ..' ಗುಂಪಿನ ನಡುವೆ ಒಂದು ಕರುಣೆಯ ಹೆಣ್ಣು ಉದ್ಗಾರ ಕೇಳಿಸಿತು.

..ಗೀತಾಲಕ್ಷ್ಮಿಯ ಸೆರಗಿನ ಚುಂಗಿಗೆ ಅಂಟಿದ ಕೆಂಡವು ಕೆರಳಿ ಅವಳ ಸೀರೆಯನ್ನೆಲ್ಲಾ ಕೆನ್ನಾಲಿಗೆಯಿಂದ ನೆಕ್ಕತೊಡಗಿತು. ಅರಿವಿಗೇ ಬರದೆ ಹೊತ್ತಿಕೊಂಡ ಬೆಂಕಿಗೆ ಕಿಟಾರನೆ ಕಿರುಚಿ ಸೀರೆ ಕಿತ್ತೆಸೆದು ಧ್ಯಾನ ಮಂದಿರಕ್ಕೆ ಒಳ ಉಡುಪಿನಲ್ಲೇ ಓಡಿ ಬಂದಳು.

ಸ್ವಾಮೀಜಿಯ ಬದಲಾದ ಚಹರೆ, ಹೆಂಗಸಿನ ಆರೈಕೆಗಳ ಗೊಂದಲದಲ್ಲಿದ್ದ ಜನಕ್ಕೆ ಹೊಸ ಶಾಕ್! ಜನ ಕಣ್ಣು ಬಾಯಿ ಅರಳಿಸಿ ನಿಂತುಬಿಟ್ಟರು. ದಢಕ್ಕನೆದ್ದ ಸ್ವಾಮೀಜಿಗಳು ಪದ್ಮಾಸನ ಕಳಚಿ ಪವಿತ್ರ ಪಾದಗಳನ್ನು ನೆಲಕ್ಕೂರಿದರು. ಅಸಾಧ್ಯ ನೋವಿನಿಂದ ನರಳಿದ ಕುದುರೆಯೊಂದರ ಆರ್ತನಾದವು ಅಲ್ಲೆಲ್ಲಾ ತುಂಬಿದಂತೆ ಭಾಸವಾಯಿತು! ತಮ್ಮ ಪಾದಕಮಲಗಳ ಬದಲಾಗಿ ಕುದುರೆಯ ಗೊರಸಿನ ಪಾದಗಳಲ್ಲಿ ನಿಂತಿದ್ದರು ಸ್ವಾಮೀಜಿ.

ಜನರು ಬೆಚ್ಚಿ ಹಿಂದೆ ಸರಿದರು. ದೃಶ್ಯ–ಶ್ರಾವ್ಯಗಳೆರಡೂ ಅವರೊಳಗೆ ನಂಬಿಕೆ–ಅಪನಂಬಿಕೆಗಳ ಜೋಕಾಲಿ ತೂಗುತ್ತಿದ್ದವು. ಮಂತ್ರಿಗಳು ಭಕ್ತಿಪರವಶರಾಗಿ ಅಡ್ಡ ಬಿದ್ದು ಸ್ವಾಮೀಜಿಗಳ ಪವಿತ್ರ ಪಾದಗಳನ್ನು ತಡಕುತ್ತಿದ್ದರು.

❖

(ಪ್ರಜಾವಾಣಿ – ಫೆಬ್ರವರಿ 19, 2012)

ಹಾಲು ಹೊಳೆಯಲಿ ಮಿಂದವರು..

ಡಿ.ಎಸ್.ಚೌಗಲೆ

ಈ ಜನ ತನ್ನೊಳಗಿನ ಸಂವೇದನೆಗಳನ್ನೆಲ್ಲ ದಹಿಸಿ ಯಂತ್ರದ ಗೊಂಬೆಗಳಂತೆ ಹೆಜ್ಜೆಗಳನ್ನಿಡುತ್ತಿದ್ದಾರೆ. ಬಿಸಿಲಿಗೆ ಮತ್ತಷ್ಟು ಬಾಡಿ ಕರಕಲಾದ ದೇಹ ಹಾಗೂ ಮನಸ್ಸಿಗೆ ಜಡ್ಡು ಹಿಡಿದಿದೆ. ಬದುಕಿನ ಸುಂದರ ಕಲ್ಪನೆಗಳಿಂದ ಬಹುದೂರ ಇರುವ ಈ ಬೆಡಗಿನ ಹಳ್ಳಿಯ ಜನ; ಧೂಳು, ಕಲ್ಲು, ಗುಂಡಿಗಳ ಈ ಕೆಟ್ಟ ರಸ್ತೆಗಳಲ್ಲಿ ಬೆಂಕಿ ಕಾರೋ ಬಿಸಿಲೊಳಗೆ ಬೆವರುತ ಝಳಕ್ಕೆ ಕಣ್ಣು ಕಿರಿದಾಗಿಸಿಯೆ ಸೈಕಲ್ಲೋ, ಬೈಕೋ, ನಡೆದಾಡುತನೋ ಇಲ್ಲವೆ ಎತ್ತಿನ ಗಾಡಿಗಳಲ್ಲಿ ನಿತ್ಯದ ಕರ್ಮದಲಿ ತೊಡಗಿದೋರು. ಹೊಲಗದ್ದೆ, ಕೂಲಿನಾಲಿ, ಹಮಾಲಿಗಳಲಿ ತೆವಳಿ ಸಂಭ್ರಮಿಸುವ ಇವರನ್ನು ದೈವ ಮತ್ತು ದರ್ಪಗಳು ಆಳುತಿವೆ. ಒಂದಕ್ಕಿಂತ ಹೆಚ್ಚು ಗಂಡಂದಿರ ಹೆಣ್ಣಿನ ಪಾಡು. ಒಂದೆಡೆ ಟೋಲ್ ನಾಕಾದಲ್ಲಿ ಹಣ ದೋಚುವ ನುಣುಪಾದ ಚತುಷ್ಪಾದ ರಸ್ತೆಗಳು ಮಾಯಾ ಪ್ರಪಂಚಗಳಿಗೆ ಕೊಂಡೊಯ್ದರೆ ಮತ್ತೊಂದೆಡೆ ನರಕ ಸದೃಶಲೋಕಕೆ ತೆರೆದುಕೊಳ್ಳುವ ಈ ದರಿದ್ರ ಹಳ್ಳೀ ರಸ್ತೆಗಳು. ಅವಿನಾಶ ಪಾಟೀಲ ಆ ಮಾಯೆಯ ಚತುಷ್ಪಾದ ರಸ್ತೆಯಿಂದ ಜುಮ್ಮನೆ ತನ್ನ ನೈಂಟೀನ್ ಫಾರ್ಟಿ ಸೆವೆನ್ ಮಾಡೆಲಿನ ಕಾರು ಅರ್ಥಾತ್ ಹದಿನಾರು ವರ್ಷಗಳ ಹಿಂದಿನ ಮಾರುತಿ ಕಾರಲಿ ಬಂದವ. ಆತನಿಗೆ ಆ ಕ್ವಾಣ್ಯಾಳ ದಿನ್ನೆ ಮೇಲಿರುವ ಶುಗರ್ ಫ್ಯಾಕ್ಟರಿಯಿಂದ ಬೆಡಗಿನಹಳ್ಳಿ ಅಗಸೀತನಕ ಮೂರ್‍ನಾಲ್ಕು ಕಿಲೋಮೀಟರ್ ಕಲ್ಲು ತಗ್ಗಿನ ರಸ್ತೆ ಸವೆಸಲು ಅರ್ಧಗಂಟೆ ಹಿಡಿಯಿತು. 'ಥೂ.. ಈ ಜನ ಆದರೂ ಹೆಂಗ ಬದುಕುತಾರೋ' ಅಂತ ಗೊಣಗುತ್ತ ಆಚೆ ಈಚೆ ಹೋಗಿ ಬರುವವರನ್ನು ನತಮಸ್ತಕ ನೋಡುತ್ತಿದ್ದ. ಅವರೋ ಈ ಹಳ್ಳಿ, ಈ ಜನ, ಈ ಪ್ರಪಂಚಕ್ಕೂ ತಮಗೂ ಎಳ್ಳು ಕಾಳು ಮುಳ್ಳು ಮೊನೆಯಷ್ಟೂ ಸಂಬಂಧವಿಲ್ಲ ಎಂಬುವವರಂತೆ ತಮ್ಮ ಕಾರ್ಯದಲ್ಲಿ ನಿರತರು.

ಬೆಡಗಿನಹಳ್ಳಿ ಸಿದರಾಯಿ ಅವಿನಾಶ ಪಾಟೀಲನ ಮನೆದೇವರು. ಅಮವಾಸ್ಯೆಗೆ ಬಿಡುವಿಗೊಮ್ಮೆ ಬಂದು ಕಾಯಿ ಕರ್ಪೂರ ಮಾಡಿಕೊಂಡು ಹೋಗುತ್ತಿದ್ದ. ಬಂದಾಗ ಗುಡಿಯ ಅರ್ಚಕ ಭಗವಾನ ಎಂಬ ಹಿರಿಯರ ಮನೆಯಲ್ಲಿ ಉಳಿದುಕೊಳ್ಳುತ್ತಿದ್ದ. ಇಂದು ಭಗವಾನ್ ಸಿದರಾಯಿ ಗುಡಿಯಲ್ಲಿಯೇ ಅವಿನಾಶಗೆ ಸಿಕ್ಕರು. ತಂಪಾದ ಪೌಳೀಲಿ ಚಾಪೆ ಹಾಸಿ ಕುಳಿತ ಭಗವಾನ ತಂಬಾಕು ಚಿಲುಮೆ ಜೋಡಣೆಯಲ್ಲಿದ್ದರು. ಭಗವಾನರ ವ್ಯಕ್ತಿತ್ವ ಊರಲ್ಲಿ ಪ್ರಚಲಿತ, ಕಲಬುರ್ಗಿ ಕಲ್ಯಾಣಸಿದ್ಧನ ಅಪರಾವತಾರದಂತೆ ಸಿದ್ಧ ಶರಣರ ಗುಣಾವಗುಣಗಳ ಪಡೆದ ನಿರ್ಲಿಪ್ತ ವ್ಯಕ್ತಿತ್ವ. 'ಕುಂತರ ಕುಂಡಿ ಬಡ್ಯಾಗ, ನಿಂತರ ಹೆಗಲ ಮ್ಯಾಲ' ಎಂಬ ತನ್ನದೇ ಜೀವನಮೌಲ್ಯಕ್ಕೆ ಅಂಟಿಕೊಂಡು ಜನೋಪಕಾರಿ ಕಾರ್ಯ ಚಟುವಟಿಕೆ ನಿರ್ವಹಿಸುತ ನಾಲ್ಕು ಮಂದಿಗೆ ನೆರವಾಗುವ ಎಪ್ಪತ್ತರ ಗಟ್ಟಿ ಘಟ. ಚರ್‍ರನೆ ತೀಡೋ ಉದ್ದನೆ ದಟ್ಟ ಹುರಿ ಮೀಸೆ, ತಲೆಮೇಲೆ ಪಟಗೆ, ಶುಭ್ರ ಬಿಳಿ

ಅಂಗಿ ಧೋತರದ ಭಗವಾನ ಕೆಲವರಿಗೆ ಭಗವಾನ, ಹಲವರಿಗೆ ಭಗವಾನ ಕಾಕಾ, ಚಿಕ್ಕವರಿಗೆ ಭಗವಾನಜ್ಜ.

ಚಿಲುಮಿಯೊಳಗೆ ಹರಳು ಹಾಕಿ ತಂಬಾಕು ಒತ್ತಿ ತುಂಬಿ ಅದಕ್ಕೊಂದು ಸೋಸುವ ಚುಂಗು ಕಟ್ಟಿ ಕಡ್ಡೀಗೀರಿ ಹಚ್ಚಿ ಒಂದು ಸಲ 'ಉಸ್' ಅಂತ ದೀರ್ಘ ದಮ್ಮೆಳೆದು ದೊಡ್ಡದಾಗಿ ಹೊಗೆಯುಗುಳಿದರು. ಪೌಳಿ ತುಂಬ ತಂಬಾಕಿನ ಖಂವಟು ವಾಸನೆ ಅಡರಿತು. ಅವಿನಾಶ ಪಾಟೀಲ ಬಂದವನೆ,

"ಕಾಕಾ ಆರಾಮದೀರಿ.. ನಂದು ಖೂನ ಹತ್ತತತಿ ಯಾನರಿ?" ಅಂದ.

ಚಿಗರಗಣೀಲೆ ನೋಡಿದ ಭಗವಾನ–

"ಯಾನೋ ಪಾರ.. ನಿಂತ ಖೂನ ಹತ್ತದ ಇರತೇತಿ ಯಾನ? ನೀ ಶಾರೂರು ಸೇರಿದರ ಯಾನಾತು. ನಿನ್ನಪ್ಪ, ಅಜ್ಜ ಇದs ಮಣ್ಣಾಗ ಹುಟ್ಟಿದೋರು. ನಾ ಮರತ್ಯಾನು ಸಣ್ಣಗೌಡ!" ಅಂತ ಆತನ ಪಂಚಾಂಗವನ್ನು ಬಿಚ್ಚಿದರು.

"ಕಾಕಾ ಹಂಗs ಚ್ಯಾಷ್ಟಿಗಿ ಅಂದ್ನಿ.. ಬಂದು ಭಾಳ ದಿವಸ ಆತಲ್ಲ.. ಅದಕ್ಕ ಕೇಳಿದ್ನಿ" ಸ್ವಲ್ಪ ತಡೆದು ಅವಿನಾಶ ಮುಂದುವರೆದ–

"ಕಾಕಾ ಊರು ಹಿಂಗ್ಯಾಕ ಹಾಳಬಿದ್ದ ಮನಿ ಆಗೇತಿ.. ಧೂಳು, ಕೊಳಿ, ಹೊಲಸು ಅಷ್ಟs ಅಲ್ಲ ದೊಡ್ಡ ತಗ್ಗು ಕಲ್ಲುಗೋಳ ರಸ್ತಾಕ ರಸ್ತಾ ಅಂತಾರೇನು? ಪೈಲೆ ಹಿಂಗಿರಲಿಲ್ಲ ಬಿಡು.. ರಸ್ತಾಗಳು ಕಚ್ಚಾ ಆದರೂನು ಸಪಾಟನs ಛಂದಾಗಿರುತ್ತಿದ್ದವು. ಸುತ್ತಲೂ ಗಿಡಮರ.. ಹೊಲದಾಗ ಹಸಿರು ಬೆಳಿ, ಹಳ್ಳದಾಗ ಜುಳುಜುಳು ಹರಿಯೋ ತಿಳಿನೀರು.. ಈಗ? ಎಲ್ಲಾ ಕಡಿ ಕಸ ಬೆಳದತಿ, ಉಲ್ಟಾ ಪಲ್ಟಾ ! ಯಾರೂ ಇಚಾರ ಮಾಡಂಗಿಲ್ಲೇನು?"

ಈ ಪುರಾಣ ಕೇಳುತ ಭಗವಾನ ಮತ್ತೊಂದು ಚಿಲುಮಿ ಸೇದಿ ದಮ್ಮೆಳೆದರು. ನಿಧಾನಕ್ಕೆ ಚಿಲುಮಿಯೊಳಗಿನ ಸುಟ್ಟ ಹುಡಿಯನ್ನು ಬೆಳಗ್ಗೆ ಕರ್ಕ ತಿಕ್ಕಲು ಕಾಗದದ ತುಂಡಿನಲ್ಲಿ ತೆಗೆದು ಪುಡಿ ಕಟ್ಟಿಕೊಂಡರು. ನೀಳ ನಿಟ್ಟುಸಿರುಬಿಟ್ಟು ಹೇಳಿದರು–

"ಇದಕ್ಕೆ ನಿಮ್ಮ ಶಾರದ ಭಾಷಾದಾಗ ಪ್ರಗತಿ ಅಂತಾರ.. ಊರು ಹಾಳು ಮಾಡೋದs ಒಂದು ಪ್ರಗತಿ ! ಊರ ಅಗಸ್ಯಾಗ ಸರಕಾರದೋರು ಪ್ರಗತಿ ಮಾಡಿದ್ದರ ಬೋರ್ಡ ಹಾಕ್ಯಾರಂತ.. ನಾ ಹೆಬ್ಬಟ್ಟಿನ್ಯಾಂವ ನಂಗೆಲ್ಲಿಂದ ತಿಳಿಬೇಕು.. ಆದರ ಗೌಡ, ಫರಕಿಷ್ಟ.. ಹಳಿ ಕಾಲದಾಗ ಬೆಲ್ಲ ಬೆಳಿತಿದ್ದರು.. ಇವತ್ತು ಸಕ್ಕರಿ.. ಸಕ್ಕರಿಗಿ ಮುತ್ತೋ ಇರುವಿಗಳು ಬ್ಯಾರೆ ಇರತಾವು.. ವಿಷ ಕಾರೋ ಇರುವಿಗಳು.. ಮನಸ್ಯಾನ ಹಿಡಿದು ಕಚ್ಚಿ ಕಚ್ಚಿ ಸಣ್ಣಾಗ ತಿನ್ನೋ ಇರುವಿಗಳು.. ಅವಕ್ಕ.. ಅಂದರ ಇರುವಿಗಿ ಅರಿವೆಲ್ಲಿ.. ಆದರ ಈ ಕರಿಮಾರಿ ಸಿದ್ಧರಾಯನ ಪಾಂಡರ್‍ಯಾಗ ಯಾನೂ ನಡ್ಯಾಂಗಿಲ್ಲ

ಮತ್ತ.." ಊರುಕೇರಿ ಹಾಳಾಗುತ ನಾಶದಂಚಿಗೆ ಸರಿಯುತ್ತಿರುವುದರ ಕಾಳಜಿಯ ಕರುಳೊಳಗಿನ ಮಾತು ಭಗವಾನರ ಬಾಯಿಂದ ಹೊರಬಿತ್ತು.

ಶುಗರ್ ಪಾಲಿಟಿಕ್ಸೇ ಅಂಥದ್ದು. ಊರೊಳಗೆ ಜನ ಬಹು ನಿರೀಕ್ಷೆಯಿಟ್ಟುಕೊಂಡು ಕಾದ ಸಕ್ಕರೆ ಕಾರಖಾನೆ ತನ್ನ ಸ್ವರೂಪವನ್ನೇ ಬದಲಿಸಿಕೊಂಡಿದೆ. ಆ ಸಕ್ಕರೆ ಕಾರಖಾನೆ ಎರಡು ರಾಜಕೀಯ ಪಕ್ಷಗಳ ಸಂಘರ್ಷಗಳ ಅಖಾಡವಾಗಿದೆ. ರಾಜಕೀಯವಾಗಿ ಬೆಳೆಯಲು, ಅಧಿಕಾರದ ಗದ್ದುಗೆಗೆ ಸಾಗಲು ಸಹಕಾರಿ ಘಟಕಗಳು ಕೆಂಪುಹಾಸು ಹೊದ್ದುಕೊಂಡ ರಾಜಮಾರ್ಗವಿದ್ದಂತೆ. ಹಾಲಿ ಶಾಸಕ ಶಿವನಗೌಡ ಪಾಟೀಲರ ಕೈಯಿಂದ ವಿರೋಧಿ ಪಕ್ಷದ ಬಾಪೂಸಾಬ ತುಬಾಕಿಯವರ ಕೈಗೆ ಕಾರಖಾನೆ ಹೋದದ್ದು ಮುಸುಕಿನ ಗುದ್ದಾಟಗಳಿಗೆ, ತೆರೆಮರೆ ತಂತ್ರಗಳಿಗೆ ಕಾರಣವಾಗಿದೆ. ಎರಡು ಪ್ರಬಲ ಲಾಬಿಗಳ ಚದುರಂಗದಾಟದಲ್ಲಿ ಊರು ಹಾಳಾಗಿ ಹೋಯಿತು. ನೀರಾವರಿಯೊಂದಿಗೆ ಹರಿದು ಬಂದ ನೀರು ಆರ್ಥಿಕ ಸಬಲತೆಯೊಟ್ಟಿಗೆ ಅನೇಕ ದುರಾಸೆ, ದುಶ್ಚಟ ಮತ್ತು ದುರ್ವ್ಯವಹಾರಗಳ ವ್ಯಾಪಾರಿ ಸಂಸ್ಕೃತಿಯನ್ನು ಕಳೆದ ದಶಕದಲ್ಲಿ ಪಸರಿಸಿದೆ. ಅದು ಜನರ ಮೇಲೆ ಅಮೂರ್ತವಾಗಿ ಪ್ರಭಾವಿಸಿತು. ಕಬ್ಬು ಸಾಗಣೆಯ ಕಾರಖಾನೆಯ ರಸ್ತೆಯನ್ನು ಶಾಸಕ ಶಿವನಗೌಡ ಪಾಟೀಲ ಬೇಕೆಂದೇ ಕಾಮಗಾರಿಗೆ ತಡೆಯೊಡ್ಡಿರುವ ವಿಚಾರ ಪ್ರಾಜ್ಞರಿಗೆ ಅರಿವಿದೆ. ಬಾಪೂಸಾಬನನ್ನು ಈ ಮೂಲಕ ಹಣಿಯಲು ಯತ್ನಿಸುವ ಮತ್ತು ಅದಕ್ಕೆ ವಿರುದ್ಧ ಬಾಪೂಸಾಬ ತನ್ನ ಶಕ್ತಿ ಪ್ರದರ್ಶಿಸಲು ನಡೆಸುವ ತಂತ್ರಗಾರಿಕೆಯಲ್ಲಿ ಅನೇಕ ಬಾರಿ ಊರಿನ ಜನ ನಲುಗಿ ನೊಂದಿದ್ದಾರೆ.

"ನೀ ಯಾನ ವಿಚಾರ ಮಾಡಾಕತ್ತಿ ಅಂಬೋದು ನಂಗ ಗೊತ್ತೇತಿ" ಭಗವಾನ ಅಂದರು.

"ಆಂ! ಅದ್ಹೆಂಗ ಹೇಳತಿ ಕಾಕಾ?" ಅವಿನಾಶ ಅಚ್ಚರಿ ವ್ಯಕ್ತಪಡಿಸಿದ.

"ಜನ ನನಗ ಸುಮ್ಮನ ಭಗವಾನ ಅಂತ ಕರೆದಿಲ್ಲೋ ಪಾರ.. ಈ ಊರ ಹಾಳಾಗಲಿಕ್ಕೆ ಈ ರಾಜಕಾರಣ.." ಅವಿನಾಶ ಪಾಟೀಲ ಮಧ್ಯದಲ್ಲಿಯೆ ಭಗವಾನರನ್ನು ತಡೆಯುವನು–

"ಗೊತ್ತಾತು ಬಿಡು ಕಾಕಾ.. ಮತ್ತ ಬಿಡಿಸಿ ಯಾಕ ಹೇಳತ್ತಿ?"

"ಆದರ ಗೌಡ.. ಈ ಪುಣ್ಯದ ನೆಲ ಹಿಂಗಿರಲಿಲ್ಲ.. ಇದಕ್ಕೊಂದು ದೊಡ್ಡ ಕತೀನ ಐತಿ.. ಅದಕ್ಕ ಪುರಾಣ ಅಂತೀನೋ ಇತಿಹಾಸಂತೀನೋ ಗೊತ್ತಿಲ್ಲ.. ಹೇಳತ್ಯಾನು ಕೇಳತಿ ಯಾನ..?" ಅಜ್ಜ ಬೆರಗು ಕಣ್ಣು ಮಾಡಿ ಕೇಳಿದ..

"ಅರೆ ಇದ್ಯಾನ ಕೇಳಾಣ ಕಾಕಾ ! ನೀ ಹೇಳೋದ ಹೆಚ್ಚೋ, ನಾ ಕೇಳೋದ ಹೆಚ್ಚೋ.. ಹೇಳು ಹೇಳು.." ಉತ್ಸುಕತೆಯಿಂದ ಅವಿನಾಶ ಸಿದ್ಧನಾದ.

"ಕಾಕಾ ಯಾನ ಹರಕತ್ತಿಲ್ಲ.."

ಮೈಯೆಲ್ಲ ಕಿವಿಯಾಗಿಸಿ ಅವಿನಾಶ ಸಿದ್ಧನಾಗುತ್ತಿದ್ದಂತೆಯೆ ಭಗವಾನ ಚಿಲುಮೆ ಹೊತ್ತಿಸುವ ಸಿದ್ಧತೆಗೆ ತೊಡಗುವರು. ಚಿಲುಮೆಗೆ ಚೆಡ್ಡಿ ಹಾಕಿಸಿ ತಂಬಾಕು ಇಡುವ ಮುಂಚೆ ಚಿಲುಮೆಗೆ ಹರಳು ಹಾಕಿ ತಂಬಾಕಿಟ್ಟು ಕಡ್ಡಿಗೀರಿ ಬೆಂಕಿಯನ್ನು ಚಿಲುಮಿಯ ಮುಖಕ್ಕಿಟ್ಟು ಜೋರಾದ ದಮ್ಮೆಳೆವರು. ಉತ್ಸಾಹ ಇಮ್ಮಡಿಗೊಳ್ಳುವುದು. ಒಮ್ಮೆ ಚರಚರನೆ ಹುರಿಮೀಸೆ ಸವರಿ ಹೇಳತೊಡಗುವರು.

“ನೂರಾರು ವರ್ಷಗಳ ಹಿಂದಿನ ಮಾತು. ಬೆಡಗಿನಹಳ್ಳದ ದಂಡೇಲಿ ಹರಿಯೋ ಹೊಳಿ ಹಿಂಗಿರಲಿಲ್ಲ.. ಅದು ಸಾಕ್ಷಾತ್ ಗಂಗಾಮಾತೆ ಆಗಿತ್ತು. ಈ ಊರು ಹಸಿರು ಹೊನ್ನಿನ ಐಸಿರಿಯ ತೋಟ. ಊರ ದಂಡಿಗೆ ಹೊಳಿ, ಸುತ್ತಲೂ ಹಳ್ಳ, ಹಳ್ಳದೊಳಗ ನೀರು ಬಾರಾ ಮಹಿನೆ ಚೋವಿಸ ತಾಸ ಹಿಂಗ ಒರತಿ ನೀರ ಜಿನುಗಿದಂಗ ಹರಿತಿತ್ತು. ಸುತ್ತಲಿನ ಹೊಲಗದ್ದೇಲಿ ಮಾವು, ತೆಂಗು, ರಾಮಫಲ, ಸೀತಾಫಲ; ಎರೆ ಮಣ್ಣು ಕೆನೆ ಪದರಿದ್ದಾಂಗ ಇತ್ತು. ಅದರೊಳಗೆ ಬೆಳೆದ ಬೆಳಿ ಸತ್ವವುಳ್ಳ ಆಹಾರ. ಈ ಆಹಾರ ಉಂಡ ಸಮುದಾಯವೊಂದು ಹೊಳಿದಂಡಿ ಮ್ಯಾಲ ಮೋಜಿನಿಂದ ವಾಸ ಮಾಡುತ್ತಿತ್ತು. ಹೊಳಿ ಸಾಧಾರಣ ಹೊಳಿ ಅಲ್ಲ. ಸಾಕ್ಷಾತ್ ಗಂಗೆಯ ಅವತಾರ. ಕಾಮಧೇನು ಕಲ್ಪವೃಕ್ಷದ ಪ್ರತಿರೂಪ ಈ ಹೊಳಿ. ಸ್ವರ್ಗನs ಭೂಮಿಗಿಳಿದಂಗ ಸುಖಾಲವಾದ ಅಂದಿನ ಹೊಳಿಯೊಳಗ ನೀರು ಹರೀತಿರಲಿಲ್ಲ. ಹಾಲು! ಹಾಲು ಹರೀತಿತ್ತು. ಅಲ್ಲಿ ನೆಲೆ ನಿಂತ ಜನ ನೀರಡಿಕೆ ಆದಾಗ ಬೊಗಸೆ ಬೊಗಸೆ ಹೊಳೆಯ ಹಾಲು ಕುಡಿತಿದ್ದರು. ಆ ಹಾಲುಂಡ ಜನ ಆ ಹಾಲ ಹೊಳಿಯಲ್ಲೇ ಮಿಂದೇಳುತ್ತಿದ್ದರು. ಗಂಡು ಹೆಣ್ಣು ಭೇದ ಮಾಡದsನ ಬೆತ್ತಲಾಗಿ ಹಾಲಿನೊಳಗ ಮುಳಿಗೇಳೋ ಅವರ ಮೈ ಬಣ್ಣ ಹಾಲಿನಂಗ, ಕೆನಿಹಂಗ ಸ್ನಿಗ್ಧ ರೂಪೀಲೆ ಹೊಳಿತಿತ್ತು. ಅವರೆಂದೆಂದಿಗೂ ನಿರುತ್ಸಾಹಗೊಳ್ಳುತ್ತಿರಲಿಲ್ಲ, ಶಕ್ತಿಗುಂದುತ್ತಿರಲಿಲ್ಲ. ಅಷ್ಟೇs ಅಲ್ಲ ಮುಪ್ಪುss ಇರಲಿಲ್ಲ. ಚಿರಯೌವನ ಹೊಂದಿದಂಗ ಕಾಣುವ ಆ ಜನಾಂಗದ ಗಂಡು ಹೆಣ್ಣುಗಳು ಮೋಜಿನಿಂದ ಬೆತ್ತಲಾಗಿ ಹೊಳೀದಂಡಿ ಮ್ಯಾಲ ಮಜವಾಗಿರುತ್ತಿದ್ದರು. ಹಸಿರು ಹುಲ್ಲಿನ ಮ್ಯಾಲ ಬಿಸಿಲಿಗಿ ಮೈ ಒಡ್ಡುತ್ತಿದ್ದರು. ಹಿಂಗ ಅವರ ಬದುಕು ಸಾಗಿತ್ತು. ಸುಖದಿಂದ ಸಾಗಿದ ಅವರ ಬದುಕಿಗೊಂದು ಅವಘಡ ಕಾದಿತ್ತು. ಒಂದು ದಿನ ದಡದಾಚೆಗಿನ ಇನ್ನೊಂದು ದೇಶದ ಜನಾಂಗ ಅಲ್ಲಿಗೆ ಬಂತು. ಇಲ್ಲಿ ನೆಲೆ ನಿಂತ ಹಾಲು ಹೊಳೇಲಿ ಮಿಂದೋರ ಬದುಕನ್ನ, ಅದರ ಸೊಗವನ್ನ ನೋಡಿ ಬೆರಗಾಗಿ ಹೊಟ್ಟೆಕಿಚ್ಚು ಪಟ್ಟಿತು. ಅವರಲ್ಲಿ ದ್ವೇಷಾಸೂಯೆ ಮತ್ತು ಸೇಡಿನ ಮನೋಭಾವ ಮಡುಗಟ್ಟಿತು. ಈ ಹಾಲು ಹೊಳೇಲಿ ಮಿಂದೋರಿಗಿ ಬುದ್ದಿ ಕಲಿಸಲು ಆಚೆಗಿನ ಗುಂಪಿನ ಖಳನೊಬ್ಬ ತಲೆಕೆಟ್ಟು ಚಿಂತಿಸಿದ. ಅವನಿಗೆ ಅತ್ಯಂತ ಕೀಳುಮಟ್ಟದ ಮತ್ತು ಹೊಲಸಾದ ಯೋಚನೆ ಹೊಳೆಯಿತು. ಒಂದು ಮುಂಜಾನಿ, ಸೂರ್ಯ ಹುಟ್ಟೋದಕ್ಕ ಪೈಲೆ ಆ ಖಳ, ದುಷ್ಟ ಹೊಳಿದಂಡಿಗಿ ಬಂದು ನಿಂತ. ಒಮ್ಮಿ ನಿರುಕಿಸಿ ಹೊಳೆಯನ್ನು, ಹರಿಯೋ ಹಾಲನ್ನು ಗಮನಿಸಿದ. ಶುದ್ಧವಾದ ನೊರೆನೊರೆ

ಹಾಲು. ಕೆಚ್ಚಲಿಂದ ಧಾರಿಯಾಗಿ ತಂಬಿಗಿಗಿ ಇಳಿದಂಗ ಉಗುರು ಬೆಚ್ಚಗೆ ಹರಿತಿದೆ. ಆ ದುಷ್ಟ ಖಳ ಕೆಟ್ಟ ವಿಚಾರದಿಂದ ಕುದ್ದೆದ್ದವರಂಗ ಎದ್ದ. ಔಡಲೆಣ್ಣೆ ಕುಡಿದಂಗ ಮುಖ ಹುಳಗಡಗಿ ಆಗಿತ್ತು. ಖಳನ ಹೊಟ್ಟೆಂಬೋ ಹೊಟ್ಟ್ಯಲ್ಲ ಗೊರಗೊರನ ತೊಳಸ್ಯಾಡಿದಂಗಾಗಿ ಹೊಳಿದಂಡಿಗಿ ತುಳಕ್ಯಾಡೋ ಹಾಲೊಳಗ ಹೆಡಗಿ ಪಡಿಯಷ್ಟ ಹೇತುಬಿಟ್ಟ. ಹಾಲಿಂದ ತನ್ನ ಕುಂಡೀನ ತೊಳಕೊಂಡ. ಆ ಹೇಲು ನಿಧಾನ ಹಾಲೊಳಗ ಕಣಕಣಗಳಾಗಿ ಮಿಳಿತ ಆಗುತ್ತಿದ್ದಂಗsನ ಹಾಲಿನ ಶುಭ್ರ ಬಣ್ಣವು ಹಳದಿ ಬಣ್ಣದ ರೂಪುಗಳಾಗಿ, ಹೊಲಸು ಅಸಹ್ಯ ಹುಟ್ಟಿಸೊ ದುರ್ಗಂಧ ವಾಸನೆ ಇಡೀ ನಾಡ ತುಂಬಿ ಹಾಲುಂಡು ಬದುಕೋ ಜನಾಂಗವು ವಾಂತಿ ಬೇಧಿಗೆ ತುತ್ತಾಯಿತು. ಹಾಲು ಮಿಂದವರ ಹಾಲು ಬಣ್ಣದ ದೇಹಕ್ಕೆಲ್ಲ ಹೇಲು ಅಂಟಂಟಾಗಿ ಮೆತ್ತಿಕೊಳ್ಳತೊಡಗಿತು. ಈ ಅನಿರೀಕ್ಷಿತ ಪ್ರಸಂಗಕ್ಕೆ ಹೌಹಾರಿದ ಹಾಲು ಮಿಂದವರು ಜೀವಭಯದಿಂದ ಓಡಿ ಹೋದರು. ಸೂರ್ಯ ಮೂಡಲಕ್ಕ ಮೂಡುವ ಹೊತ್ತಿಗಿ ಹಾಲೆಲ್ಲ ಕರಗಿ ವಿಷವೇ ಮೈವೆತ್ತಂತೆ ಉಕ್ಕಿ, ಪ್ರಕ್ಷೋಭಿಸಿ, ಅಲ್ಲೋಲ ಕಲ್ಲೋಲಗೊಂಡು ನಿಧಾನಕ್ಕ ತಣ್ಣಗಾಗುತ ಘಾಣಿ ನೀರಾತು. ಆವತ್ತಿನಿಂದ ಆ ಹೊಳಿಗಿ ಹೇಲುಗಂಗೆ ಅಂತ ಕರದ್ರು. ಇದಿಷ್ಟು ಈ ನೆಲದ ಅರಿಷ್ಟ ಪಾಪದ ಕತಿ".

ಅವಿನಾಶ ಪಾಟೀಲ ಗರಬಡಿದವರಂತೆ ಬಾಯ್ತೆರೆದು ಬೆರಗಾಗಿ ಭಗವಾನರು ಹೇಳಿದ ಕತೆಯ ಪ್ರಸಂಗ ಆಲಿಸಿದ. ಆತನಿಗೆ ಈ ನೆಲದ ಕುರಿತು ಗೌರವ ವೃದ್ಧಿಸಿತು. ಭಗವಾನ ತುಸು ಮೌನವಾದರು, ಮತ್ತೆ ಅಂದರು–

"ಇಂಥ ಪಾಪದ ಹೊಳಿಯ ಪುಣ್ಯದ ನೆಲದಾಗ ಈ ಕರಿಮಾರಿ ಸಿದರಾಯಿ ಬಂದು ಕೂತ. ಇಂವ ಅಷ್ಟಿಷ್ಟು ಸರಳಲ್ಲ.. ಇವನ ಪಾಂಡರ್‍ಯಾಗ ಎಂಥೆಂಥೋರು ಮಣ್ಣ ಮುಕ್ಕ್ಯಾರು. ಅದರ ಖಬರಿ ಮಂದಿಗಿರೋದಿಲ್ಲ. ಅಂವ ಮುಕಳ್ಯಾಗ ಕೈ ಹಾಕಿ ಲಗಾ ಹೊಡೆಸಿದಾಗsನ ಗೊತ್ತಾಗತೇತಿ.."

ತಾನು ಆಗಾಗ ಬರುವ ಈ ದೈವದ ನಿಗೂಢ ಶಕ್ತಿಯ ಕುರಿತು ಭಗವಾನರ ನುಡಿಗೆ ಅವಿನಾಶ ಭಕ್ತಿಪರವಶನಾದ.

ಅಷ್ಟರಲ್ಲಿ ಪೌಳಿಯಲ್ಲಿ ಗದ್ದಲ ಕೇಳಿ ಬಂತು. ಆ ಕೋಣೆಯೊಳಗಿನಿಂದ ಸುಮಾರು ಇಪ್ಪತ್ತೈದರ ವಯಸ್ಸಿನ ವಿವಾಹಿತ ಹೆಂಗಸೊಬ್ಬಳು ಹುಚ್ಚೆದ್ದು ಓಡತೊಡಗಿದ್ದು ಕಂಡು ಬಂತು. ಆಕೆಯನ್ನು ಹಿಡಿಯಲು ಜತೆಗಿದ್ದ ಪುರುಷನೊಬ್ಬ ಹಾಗೂ ಮಧ್ಯ ವಯಸ್ಸು ಮೀರಿದ ಮಹಿಳೆಯೂ ದೌಡಾಯಿಸುವರು. "ಹಿಡಿರಿ ಹಿಡಿರಿ" ಎಂದು ಕೂಗುತ್ತ ಪೋಷಕರು ಹರಸಾಹಸ ಮಾಡುವರು. ಆ ಹುಚ್ಚೆದ್ದ ಹೆಂಗಸು ತಾನು ಮೆಟ್ಟಿದ್ದ ಚಪ್ಪಲಿಯನ್ನು ಬಿಸಾಕುವಳು ಮತ್ತು ದೇವರ ಎದುರಿನ ಅಂಗಳಕ್ಕೆ ಬಂದು ನಿಲ್ಲುವಳು. ಆಕೆಗೆ ದೆವ್ವ ಬಡಿದಿದೆ ಎಂದೆಲ್ಲರೂ ಪಿಸುಗುಡುತ್ತಿದ್ದರು. ಎದೆ ಮೇಲಿನ ಸೀರೆ ಜಾರಿದ್ದನ್ನು ಆ ಮಹಿಳೆ ಸರಿಪಡಿಸಲು ಹೋಗುತ್ತಿದ್ದಳು. ಏದುಸಿರು ಬಾತೆ ಹೊಡೆದಂತೆ ಹೊಡೆಯುತ್ತಿರುವುದರಿಂದ ಆಕೆಯ ಮೊಲೆಗಳು ಮೇಲೆ ಕೆಳಗೆ ತೂಗುತ್ತಿದ್ದವು.

ಅಸ್ತವ್ಯಸ್ತಗೊಂಡ ಕೂದಲು. ಗಂಡಸಿನ ಧ್ವನಿ ತೆಗೆದು ಏನೇನೋ ಕೂಗುತ್ತಿದ್ದಳು. ಪೋಷಕರು ಈಗ ಆಕೆಯ ರಟ್ಟೆ ಬಿಗಿ ಹಿಡಿದಿದ್ದರು. ಆಕೆ ಬಿಡಿಸಿಕೊಳ್ಳಲು ಯತ್ನಿಸಿದಳು. ಗುಡಿಯೊಳಗಿನಿಂದ ಅರ್ಚಕ ಬಂದ. ಬೆತ್ತದ ಏಟು ನೀಡುತ್ತ ದೆವ್ವದ ವಿಚಾರಣೆ ನಡೆಸಿದ–

"ನೀ ಯಾರು? ಈಕೀನ ಯಾಕ ಹಿಡಿದಿದ್ದೀ?"

"ನಾ ಮೂರು ಹಾದಿ ಮಸೋಬಾ.. ನೀ ಯಾಂವ ಕೇಳಾಂವ ಕಿಸ್ಮಾರಖಾನ?"

ಮತ್ತೆ ಗಡುಸಾಗಿ ಕಿರುಚಿದಳು. ಆ ಗಡುಸಿಗೋ ಆರ್ಭಟಕ್ಕೋ ಅರ್ಚಕನ ಕಚ್ಚೆ ತುದು ಸಡಿಲಗೊಂಡಿತು. ಮತ್ತೆ ಸಾವರಿಸಿಕೊಂಡು ಜೋರು ಮಾಡಿದ.

"ಈ ಸಿದರಾಯನ ಮುಂದ ಖರೆ ಹೇಳು.. ಈ ಪೋರಿಗಿ ಯಾಕ ತ್ರಾಸ ಕೊಡತಿ?" ಅರ್ಚಕನೆಂದ.

"ಈಕಿನಿ ನಾ ಬೇಕಾಗೇನಿ, ನನಗ ಈಕಿ! ಅದಕ್ಕ ಹಿಡಕೊಂಡೇನಿ.." ಅಂತಂದು ವಿಕಟವಾಗಿ ನಗಲಾರಂಭಿಸಿದಳು.

"ಬಿಟ್ಟು ಹೋಗ್ತೀಯೋ ಇಲ್ಲೋ, ಇಲ್ಲಾಂದರ.." ಅರ್ಚಕ ಬೆತ್ತದ ಏಟು ನೀಡಿ ಅಂಗಾರ ಊದಿದ. ಆಕೆ 'ಹೋ'ಅಂತ ಕೂಗಿ ಮೆಲ್ಲಗೆ ನೈಜಸ್ಥಿತಿಗೆ ಬಂದಳು. ಪೋಷಕರು ತುಸು ನಿರಾಳವಾದರು. ಆಕೆ ತಾನೆಲ್ಲಿ ಹೇಗೆ ಬಂದೆ? ಎಂಬುವಂತೆ ಸನ್ನೆ ಮಾಡಹತ್ತಿದಾಗ ನೋಡಲು ಬಂದವರು ಕರಗಹತ್ತಿದರು. ಆಕೆಯನ್ನು ಪೋಷಕರು ಪೌಳಿಯ ಕೋಣೆಗೆ ಕರೆದುಕೊಂಡು ಹೋದರು.

ಅವಿನಾಶ ಬೆರಗಾಗಿ ನಡೆದ ಪ್ರಸಂಗ ನೋಡಿದ ಮತ್ತು ಅಂದ – "ಕಾಕಾ, ಈ ದೆವ್ವ ಭೂತ ಎಲ್ಲ ಸುಳ್ಳಲ್ಲ? ಆಕಿ ವರ್ತನಿ ನೋಡಿ ಗಾಬರ್‍ಯಾತು. ಮಾನಸಿಕ ಆಗಿರತತಿ.."

"ಮನಸ್ಯಾನಗಿಂತ ಇನ್ನೊಂದ ದೆವ್ವ ಎಲ್ಲಿ ಐತ್ಯೊ ಪಾರ.. ಇದು ಐತಂದರ ಐತಿ ಇಲ್ಲಂದರ ಇಲ್ಲಂಬೊ ಒಗಟಿದ್ದಂಗಪಃ" ತುಸು ತಡೆದು ಭಗವಾನರು ಹೇಳುವರು.

"ಒಟ್ಟು ಹೇಳೋದಂದರ ಆ ಪೋರಿಗಿ ಸುಖಯಿಲ್ಲ.. ಯಾವುದಾದರೂ ಕೊರತಿ ಆಧಾರ ಇಲ್ಲದ ಅನಾಥ ಇಚಾರ ಕಾಡತಿರತತಿ, ಮತ್ತದರ ಮಿತಿ ದಾಟಿದಾಗ ಹೆಂಗಾರ ಪಡಕೊಳ್ಳಾಕ ಧಡಪಡಸಿದಾಳ ಅಷ್ಟ. ಮನಸ್ಸಿನ ನೆಮ್ಮದಿ ಮುಂದ ಎಲ್ಲಾನು ಖಾಲಿ. ನೀ ಹಿಂದೊಮ್ಮಿ ಬಂದಾಗ ಇದಃ ರೀತಿ ಒಂದ ಪ್ರಸಂಗ, ಅದರ ಸ್ಥಿತಿ ಬ್ಯಾರೆ. ಆ ಹುಡುಗಿ ದೆವ್ವ ಬಿಡಿಸಿದಿನಿ. ಆಮ್ಯಾಲ ಆರಾಮ ಆದಳು.. ನಿನ್ನ ಕಾಲಿಗಿ ನಮಸ್ಕಾರ ಮಾಡಿದಳು ನೆನಪ ಐತಿ..? ಆಕೀ ಆ ಸ್ಥಿತಿಗಿದ್ದ ಮೂಲ ಕಾರಣಾನೂ ನೆನಪ ಮಾಡಿಕೋ.." ಭಗವಾನ ಮತ್ತೊಮ್ಮೆ ಚಿಲುಮಿಗೆ ಶರಣಾಗಲು ಸಿದ್ಧತೆ ನಡೆಸುವರು. ಅವಿನಾಶ ಪಾಟೀಲನ

ಸ್ಮೃತಿಪಟಲದಲ್ಲಿ ಆ ಹುಡುಗಿ ನೆನಪಾಗಿ ಬರುವಳು. ಆಕೆ ಹುಚ್ಚಿಗೆ ಕಾರಣವಾದ ಮೂಲವು ಬಿಚ್ಚಿಕೊಳ್ಳುವುದು..

ಆಕೆ ಚೆಲುವಿನ ಖನಿ. ಆಕೆಯ ಅಸ್ವಸ್ಥತೆಗೆ ಕಾರಣ ಮೂಲಪ್ರವೃತ್ತಿಯ ಕಾಟ. ಆ ಚೆಲುವಿಗೆ ತಕ್ಕ ಗಂಡ ಆತನಲ್ಲ. ಆ ಯೋಗ್ಯತೆಯೆ ಇರಲಿಲ್ಲವೇನೋ? ಆ ಚಿಂತೆ ಚಿತೆಯಾಗಿ ಅವಳನ್ನು ದಹಿಸುತ್ತಿತ್ತು. ಚಿಂತೆಯ ಗೆರೆಗಳು ಮೊಗದಲ್ಲಿದ್ದರೂ ಕಂಗಳ ಆಳದಲ್ಲಿ ಪ್ರೀತಿಯ ಒರತೆಯಿತ್ತು. ಆದರೆ ಆ ಒರತೆಯ ಹನಿಗೆ ಬಾಯಾರಿದವನಿಲ್ಲ! ಹಾಗೆ ನೋಡಿದರೆ ಆಕೆಯ ಗಂಡ ಹಣ ಮತ್ತು ರಾಜಕಾರಣದ ಹಿಂದೆ ಬಿದ್ದವ. ಈಚೆಗೆ 'ಬ್ರೇಕಿಂಗ್ ನ್ಯೂಸ್' ಒಂದರಲ್ಲಿ ಆತನೂ ಇದ್ದ. ಹೊಳೆದಂಡೆ ತೋಟದಲ್ಲಿ ಘಟಿಸಿದ ಪ್ರಸಂಗ. ರಾತ್ರಿ ಡಿನ್ನರ್‌ಗೆ ಕರೆಸಿದ ಕರೆಹೆಣ್ಣನ್ನು ಕುಣಿಸಿ ಆಕೆಯನ್ನು ಬೆತ್ತಲುಗೊಳಿಸಿ ಬೀರಿನ ಅಭಿಷೇಕ ನಡೆಸಿದ ಕೀರ್ತಿ ಟಿವಿಗಳಲ್ಲಿ ಬಿಸಿ ಸುದ್ದಿಯಾಗಿತ್ತು.

ಒಂದೆಡೆ ಅತ್ತೆಮಾವಂದಿರ ಹಂಬಲ ಕೈಗೊಂದು ಕೂಸಿರಲಿ ಅಂತ. ಇನ್ನೊಂದೆಡೆ ಷಂಡ ಗಂಡನ ನಿರ್ವಿಣ್ಣತೆ. ಧರ್ಮದ ಕಟ್ಟಳೆಯ ಇಂದ್ರೀಯ ನಿಗ್ರಹಗಳ ಪರಂಪರೆಯ ಕುಟುಂಬ. ಆ ಸೂತ್ರಗಳು ಬದುಕಿನ ಅಳವಡಿಕೆಗಳು. ನಿರ್ದಿಷ್ಟ ಆಹಾರ ಪದ್ಧತಿ ಮತ್ತು ನಿತ್ಯ ವ್ಯವಹಾರಗಳ ವ್ಯವಸ್ಥೆಯ ಫಲವೋ.. ಗೊತ್ತಿಲ್ಲ. ಅವನಲ್ಲಿ ಪೌರುಷದ ಕೊರತೆಯಿತ್ತು. ಆಧುನಿಕ ಜೀವನಶೈಲಿಯ ಹಣ, ವ್ಯವಹಾರ ಮತ್ತು ತತ್ಸಂಬಂಧಿ ಹವ್ಯಾಸಗಳು ಹೊಸ ನಾಗರಿಕ ವ್ಯವಸ್ಥೆಯನ್ನು ಗ್ರಾಮೀಣಕ್ಕೂ ತಂದೊಡ್ಡಿವೆ. ಅದಕ್ಕೆ ಪೂರಕವೆಂಬಂತೆ ಈಚೆಗೊಂದು ವರದಿ ಹೇಳಿದ್ದು– 'ಆಧುನಿಕ ಅತಿರೇಕಗಳ ಪರಿಣಾಮವು ಆರೋಗ್ಯದ ಮೇಲೆ ಭೀಕರ ರೂಪದಲ್ಲಿ ಅಪ್ಪಳಿಸಿದುದರಿಂದ ಪುರುಷರಲ್ಲಿ ನಪುಂಸಕತೆ ಅಧಿಕವಾಗಿದೆ..'

ಆಕೆ ಇರುಳುಗಳನ್ನು ಕೆಂಡದ ಮೇಲೆ ಕಳೆವಳು. ರಾತ್ರಿಯಿಡೀ ಕೋಣೆ ಹರಿದು ತಿನ್ನಲು ಹವಣಿಸುತ್ತದೆ. ಹಾಸಿಗೆಯಲ್ಲಿ ಹೊರಳಾಡಿ ಸುಡುವ ಮೈಗೆ ತಂಪೆರೆಚಲು ತನ್ನೆಲ್ಲ ಬಟ್ಟೆಗಳನ್ನು ಸರಸರನೆ ಬಿಚ್ಚಿ ಒಗೆವಳು. ನಿಶೆಯ ಮಂದಬೆಳಕು. ನಿಲುವುಗನ್ನಡಿ ಎದುರು ನಿಲ್ಲುವಳು. ತನ್ನ ಬಿರುಸಾದ ಮೊಲೆತೊಟ್ಟು, ಕಿಬ್ಬೊಟ್ಟೆ, ತೊಡೆ, ಸಂದಿಗಳನ್ನೆಲ್ಲ ಮೆಲ್ಲಗೆ ಉಜ್ಜಿ ಮುಲುಗುವಳು. ಸ್ವಮೈಥುನ ಸುಖದಲ್ಲಿ ಮಿಂದೆದ್ದ ಆಕೆ ತನ್ನ ದೇಹ ಐಸಿರಿಯ ಚೆಲುವನ್ನು ಮೋಹದಿಂದ ಮೊಗೆಮೊಗೆದು–ಅಳೆಅಳೆದು ಸ್ವಕಾಮಸುಖವನ್ನು ಅನುಭವಿಸುವಳು. ಯಾವ ಹೆಣ್ಣು ಬೆತ್ತಲಾಗಿ ತನ್ನ ದೇಹವನ್ನು ಅನುಭವಿಸುವಳೋ ಅವಳ ಅತೃಪ್ತಿ ವೃದ್ಧಿಗೊಳ್ಳುತ್ತ ಹೋಗುತ್ತದೆ.

ಒಮ್ಮೆ ಹೀಗೆಯೆ ಆಕೆ ಬೆತ್ತಲಾಗಿ ಕನ್ನಡಿ ಎದುರು ನಿಂತಾಗ ಆತ ಬಂದು ಕದ ತಟ್ಟಿದ. ದಿಗಂಬರೆಯಾಗಿಯೇ ಬಾಗಿಲು ತೆರೆದಳು. ಆ ಕ್ಷಣದ ಮೋಹಕ್ಕೆ ಅವನ ಮೇಲೆ ನುಗ್ಗಿದಳು. ಆದರೆ ಸರಿಯಾಗಿ ಸ್ಪಂದಿಸದ ಆತ ಅರ್ಧದಾರಿಗೂ ಬರದೆ ವಾಪಸ್ಸಾದ. ಆಕೆ ಅತೃಪ್ತಿಯ ಎರಡು ಕುಲುಮೆಗಳಲ್ಲಿ ಬೇಯುತ್ತಿದ್ದಳು. ಕಾಮ ಮತ್ತು

ಸಂತಾನ. ಇವೆರಡರ ಸ್ಥಿತ್ಯಂತರವೇ ಹುಚ್ಚಾಟದ–ಭೂತಾಟದ ಜ್ವಾಲಾಮುಖಿ..

ಅವಿನಾಶ ನೆನಪಿನಿಂದ ಹೊರಬಂದು–

"ಕಾಕಾ, ಇವತ್ತ ಇಲ್ಲೆ ಗುಡ್ಯಾಗ ಪ್ರಸಾದ ತಗೋತೇನು. ಇಲ್ಲೆ ಅಂಗಳದಾಗ ಮಲಗತೇನು. ದಿಂಬು ಚಾಪಿ ಕಳಿಸು.." ಅಂದ.

"ಏ ಪಾರ.. ಇವತ್ತ ಬೇಸ್ತಾರ ಗಂಡಮಾಸಿ.. ಇವತ್ತು ಯಾರೂ ಇಲ್ಲಿ ಮಲಗೋದಿಲ್ಲ.. ನೋಡು ಮತ್ತ, ಹೆಣ್ಣ ದೆವ್ವಗಳ ಕೈಯಾಗ ಸಿಕ್ಕಿ–ಗಿಕ್ಕಿ!" ಅಂತಂದು ಉಪಹಾಸದಿಂದ ನಕ್ಕರು.

"ಕಾಕಾ ನೀನꞩ ಹೇಳಿ ಅಲ್ಲ.. ಮನಸ್ಯಾನಗಿಂತ ಮತ್ತೊಂದು ದೆವ್ವ ಎಕ್ಕು ಅಂತ" ಮರುನಗೆ ಬೀರಿದ.

❖

ರವಿವಾರ ಮತ್ತು ಗುರುವಾರ ಗಂಡ ಅಮವಾಸ್ಯೆ. ಗಂಡ ಅಮವಾಸ್ಯೆ ದಿವಸ ಗುಡಿಯೊಳಗೆ ಯಾರೂ ಮಲಗುವುದಿಲ್ಲ. ದೇವರು ಮತ್ತು ದೆವ್ವಗಳ ಮಧ್ಯೆ ಸಂಪರ್ಕ ಏರ್ಪಡುತ್ತದೆಂದು ಮುಖ್ಯ ದರವಾಜೆಯನ್ನು ತೆರೆದೆ ಇಟ್ಟಿರುವುದು ವಾಡಿಕೆ. ಗಂಡ ಅಮವಾಸ್ಯೆ ದಿನದಂದು ಹೆಣ್ಣು ದೆವ್ವಗಳು ಅಡ್ಡಾಡುತ್ತವೆ ಎಂಬ ನಂಬಿಕೆಯಿದೆ. ಚಾಪೆ ಹಾಸಿ ಅವಿನಾಶ ಮಲಗಿದ್ದ. ನಿದ್ದೆ ಸುತಾರಾಂ ಸುಳಿತಿರಲಿಲ್ಲ. ಪ್ರಾಂಗಣ ತಂಪಾಗಿತ್ತು. ಇವತ್ತಿನ ದೆವ್ವ ಹಿಡಿದವಳ ಪ್ರಸಂಗ ಮತ್ತು ಆ ಚೆಲುವೆಯ ಮುಖವೊಮ್ಮೆ ಸುಳಿದಾಡಿ ಮಾಯವಾಯಿತು. ಸುತ್ತಲೂ ಗವ್ವನ್ನೋ ಕತ್ತಲೆ. ದೇವರಿಗೆ ಬಂದವರು, ಪ್ರಸಾದ ಹಾಕಿದವರು ಎಲ್ಲರೂ ಟೆಂಟು ಕಿತ್ತುಕೊಂಡು ಮಾಯವಾಗಿದ್ದರು. ಹೊರಳಾಡಿ ಮಗ್ಗಲು ಬದಲಿಸಿ ನಿದ್ದೆಗೆ ಯತ್ನಿಸಿ ಪ್ರಯತ್ನಿಸಿ ಅವಿನಾಶ ಸೋತ. ಮಧ್ಯರಾತ್ರಿ ಆಗಿರಬಹುದು. ಅಥವಾ ಅದಕ್ಕೂ ಹೆಚ್ಚು ಎಷ್ಟೋ ಹೊತ್ತು ಚಡಪಡಿಸಿದ ಬಳಿಕ ಮೆಲ್ಲಗೆ ಜೋಂಪು ಹತ್ತಿತು. ಅಷ್ಟರಲ್ಲಿ ಯಾರದೋ ಹೆಜ್ಜೆ ಸಪ್ಪಳ ಕೇಳಿಸಿದಂತಾಯಿತು. ಕನಸೋ ನನಸೋ ಎಂಬ ಭ್ರಮೆಯ ಗುಂಗಿನಲ್ಲಿರುವಾಗಲೇ ಹೆಜ್ಜೆ ಸಪ್ಪಳ ಮತ್ತೂ ಹತ್ತಿರವಾಯಿತು. ಅವಿನಾಶ ಕಣ್ಣು ತೆರೆದ. ಎದುರಿಗೆ ಧುತ್ತೆಂದು ನಿಂತ ಅರೆಬೆತ್ತಲೆ ಹೆಣ್ಣು..! ಕೆಲವು ಕ್ಷಣ ಗಾಬರಿಯಾಗಿ ಎದೆ ಹೊಡೆದುಕೊಳ್ಳತೊಡಗಿತು. ಹೆಣ್ಣು ದೆವ್ವವೋ ಏನೋ!? ಧೈರ್ಯ ಒಟ್ಟುಗೂಡಿಸಿ ಸೂಕ್ಷ್ಮವಾಗಿ ನಿರುಕಿಸಿದ. ಅರೆ! ಅದೇ ಸುಂದರಿ..! ಅಬ್ಬಾ! ಮಂದ ಬೆಳಕಲ್ಲಿಯೂ ಚೆಲುವು ಇಮ್ಮಡಿಯಾಗಿ ಹೊರಹೊಮ್ಮಿದೆ. ಪೂರ್ತಿ ಬೆತ್ತಲಾಗಿದ್ದಾಳೆ. ಕೈಯಲ್ಲಿ ಪುಟ್ಟ ಹಣತೆಯ ಆರತಿ ತಟ್ಟೆ. ಅದರಲ್ಲೊಂದು ನಿಂಬೆ ತುದಿಗೆ ಚುಚ್ಚಿದ ಹರಿತ ಚೂರಿ. ಇಳಿಬಿಟ್ಟ ಕೂದಲು. ಆ ಬೆಳಕಲ್ಲಿ ಇಡೀ ದೇಹ ಜೇನಿನಲ್ಲಿ ಒದ್ದೆಯಾದಂತೆ ಹೊಳಪು ಹೊಂದಿದೆ. ಸೊಕ್ಕಿದ ಮೊಲೆ ಮತ್ತು ತೊಟ್ಟುಗಳು ಹೆಜ್ಜೆ ಸದ್ದಿಗೆ ಮೆಲ್ಲಗೆ ಕುಲುಕುತ್ತಿದ್ದವು. ಅವನ ತೊಡೆ ಸಂದಿ ಬೆಚ್ಚಗಾಗಿ ಕಾಮೋತ್ತೇಜಿತನಾದ.

ಆಕೆ ನಿಧಾನಕ್ಕೆ ದೆವ್ವ ಬಿಡಿಸುವ ಅಂಗಳಕೆ ನಡೆದು ಬಂದಳು. ದೇವರಿಗೆ ಆರತಿ ಎತ್ತಿದಳು. ಆಕೆ ನಾಲ್ಕೈದು ಸುತ್ತು ಆರತಿ ಎತ್ತುತ್ತಿದ್ದಂತೆ ಅವಳ ಹಾಗಿರುವ ಹಲವಾರು ಬೆತ್ತಲೆ ಹೆಣ್ಣುಗಳು ಆರತಿ ಹಿಡಿದು ಸಾಲಾಗಿ ನಿಲ್ಲತೊಡಗುವರು. ಈ ಹಲವಾರು ಸಂಖ್ಯೆ ನೂರಾರು ರೂಪುಗಳಾಗಿ ಆರತಿ ಎತ್ತಿ 'ಚಾಂಗಭಲೋ' ಕೂಗುಗಳು ಮೊಳಗುವವು. ಅವಿನಾಶನ ತೊಡೆ ಸಂದಿಯ ಕಾವು ತಣ್ಣಗೆ ಹಿಮಗಡ್ಡೆಯಂತಾಗಿ ಮೈ ಬೆವರತೊಡಗುವದು.

ಅಷ್ಟರಲ್ಲಿ ಎಲ್ಲಿಂದಲೋ ಆ ಬೆತ್ತಲೆ ಹೆಣ್ಣುಗಳ ಗಂಡಂದಿರು ಒಬ್ಬೊಬ್ಬರಾಗಿ ಬೆತ್ತಲೆ ಬಂದು ನಿಲ್ಲುವರು. ಹಲವಾರು.. ನೂರಾರು ಸಂಖ್ಯೆಯ ಬೆತ್ತಲೆ ಗಂಡುಗಳು.. 'ಚಾಂಗಭಲೋ' ಕೂಗು ಮಾರ್ದನಿಗೊಳ್ಳುವುದು. ಹೆಣ್ಣುಗಳ ಮೈಯಲ್ಲಿ ಕಾಮವು ಉಕ್ಕುವುದು. ಕಾಮ ಮತ್ತು ಸಂತಾನ ! ಸಂತಾನದ ಬಯಕೆ ಉತ್ಕಟಗೊಂಡು ಉಕ್ಕಿ ಸೊಕ್ಕಿ ನರನಾಡಿಗಳಲ್ಲಿ ಹರಿದು ಕಣ್ಣು ಕಿಡಿ ಕಾರತೊಡಗುವುವು. ತಟ್ಟನೆ ಪಕ್ಕದ ಗಂಡಂದಿರ ಶಿಶ್ನಗಳತ್ತ ಆ ಹೆಣ್ಣುಗಳ ಗಮನ ಹರಿಯಿತು. ಅವರ ಶಿಶ್ನಗಳು ಜೋತು ಬಿದ್ದಿದ್ದವು. ಆ ಜೋತು ಬಿದ್ದ ಶಿಶ್ನಗಳನ್ನು ಕಂಡು ಉನ್ಮತ್ತಗೊಂಡ ಹೆಣ್ಣುಗಳು ಆರತಿ ತಟ್ಟೆಯನ್ನು ನೆಲಕ್ಕೆ ಕುಕ್ಕಿ ಗಕ್ಕನೆ ಚೂರಿಗಳನ್ನು ಎತ್ತಿಕೊಂಡರು. ಅದಕ್ಕಿದ್ದ ನಿಂಬೆಗಳನ್ನು ಕಿತ್ತು ಬಿಸಾಕಿದರು ಮತ್ತು ಅವರ ಶಿಶ್ನಗಳನ್ನು ಕಚಕಚನೆ ಕೊಚ್ಚಿ ಹಾಕಿದರು. ನೆತ್ತರು ಛಲ್ಲೆಂದು ಚಿಮ್ಮಿತು. ಹೆಣ್ಣುಗಳ ವಿಕಟ ನಗೆ. ಗಂಡಂದಿರ ಆಕ್ರಂದನ ಅನುರಣಿಸಿತು. ಬೆದರಿ ಚೆಡ್ಡಿಯನ್ನು ಹಸಿಮಾಡಿಕೊಂಡ ಅವಿನಾಶ ಪಾಟೀಲ ಚಾಪೆಯನ್ನು ಬಿಟ್ಟು ಎದ್ದವನೇ ಒಂದೇ ನೆಗೆತಕ್ಕೆ ಓಡುವನು. ಎದ್ದೆನೋ ಬಿದ್ದೆನೋ ಎಂದು ಓಡೇ ಓಡಿದನು. ಓಡುತ್ತಿದ್ದ ಆತ ಕಲ್ಲೊಂದಕ್ಕೆ ಎಡವಿ ದೊಪ್ಪನೆ ಬೀಳುವನು. ಕಣ್ಣು ತೆರೆದು ನೋಡಿದರೆ ಎದುರಿಗೆ ಅಚ್ಚರಿ ಮತ್ತು ಆಘಾತ. ತಾನು ಬಂದು ಬಿದ್ದಿದ್ದು ಹೇಲುಗಂಗೆಯ ದಡಕ್ಕೆ! ಎದ್ದು ಸುತ್ತಲೂ ನೋಡುವನು. ಅಲ್ಲಿ ಅಕರಾಳ ವಿಕರಾಳ ದೇಹಗಳ ವಿಕೃತಿರೂಪಿ ಹಾಲುಂಡ ದೇಹಗಳು ವಿಚಿತ್ರವಾಗಿ ಆಕ್ರಂದನ ಮಾಡುತ್ತ ಇವನತ್ತಲೇ ಧಾವಿಸುತ್ತ ಬರುತ್ತಿದ್ದವು. ಆತ ದಿಗ್ಭ್ರಾಂತನಾಗಿ ಬೆದರಿ ಹಿಂದೆಯೂ ಹೊರಳಿ ನೋಡದೆ ಓಡುತ್ತ ಕತ್ತಲೆಯಲ್ಲಿ ಕರಗುವನು.

❖

(ಪ್ರಜಾವಾಣಿ – ಮೇ 13, 2012)

ಗಂಡಕೀ ಜೋನ್

ಕಣಾದ ರಾಘವ

ಒಟ್ಟು ಹನ್ನೊಂದು ಹಾಲಿನ ಬಾಟಲಿಗಳನ್ನು ಖಾಕೀ ಬಣ್ಣದ ತನ್ನ ಕೈ ಚೀಲದಿಂದ ಒಂದೊಂದಾಗಿ ತೆಗೆದು ಬಚ್ಚಲು ಮನೆಯ ಕಟ್ಟೆಯ ಮೇಲೆ ಒಂದರ ಪಕ್ಕದಲ್ಲೊಂದರಂತೆ ಜೋಡಿಸುತ್ತ ಸುನೀತಾ ಕೂಗಿದಳು. "ಯಾರೂ ಏಳಬೇಡಿ. ನನ್ನನ್ನು ಬಿಟ್ಟರೆ ಇಡೀ ಪೋಖರಾದಲ್ಲಿ ಯಾರಿಗೂ ಬೆಳಗಾಗೋದಿಲ್ಲ!" ಅವಳು ಹಾಗೆ ಕೂಗಿದ್ದು ಕೇಳಿ ಬಚ್ಚಲ ಮನೆಯ ಮೂಲೆಯಲ್ಲಿ ರಾತ್ರಿಯ ಚಳಿಯಿಂದ ರಕ್ಷಣೆಗೆಂದು ಬಿದಿರ ಗೂಡಿನಲ್ಲಿ ಕುಳ್ಳರಿಸಿದ್ದ ನಾಲ್ಕಾರು ಹುಂಜಗಳೂ, ಎರಡು ರಾಜಾಹೇಟೆಗಳೂ "ಕೊ..ಕ್ಕೊ..ಕ್ಕೊ" ಎಂದು ಗಾಬರಿಯಲ್ಲಿ ಅರಚತೊಡಗಿದವು. "ನೀವು ಕೂಗಿದರೆ ಸೂರ್ಯನಿಗೆ ಬೆಳಗಾಗುತ್ತೆ. ನಿಮ್ಮನ್ನೆಬ್ಬಿಸಲು ನಾನು ಕೂಗಬೇಕು" ಸುನೀತಾ ಸಣ್ಣ ಸಮಾಧಾನದ ಮುಗುಳನ್ನು ತನ್ನ ಗುಳಿಕೆನ್ನೆಗಳಲ್ಲಿ ಅರಳಿಸುತ್ತ ಹೇಳಿದಳು. ಕೋಳಿಗಳು ಕೂಗುತ್ತಲೇ ಇದ್ದವು. ನೋಡಲು ಮನುಷ್ಯರು ವಾಸಿಸುವಂಥ ಮನೆಯ ಆಟಿಕೆಯಂತೆ ಕಾಣುತ್ತಿದ್ದ ಆ ಬಿದಿರುಗೂಡಿನ ಒಳಗೆ ಕೂತಲ್ಲೆ ಚಡಪಡಿಸುತ್ತ ಹಾರಲಾರದೆ ರೆಕ್ಕೆಗಳನ್ನು ಬಡಿಯುತ್ತಿದ್ದವು, ಮೈಮುರಿದು ಆಕಳಿಸುವಂತೆ, ಆಗಾಗ ಇಡೀ ಮೈಯನ್ನು ಕೊಡವುತ್ತ. "ರುಕ್ಸೂಸ್, ನನ್ನ ಕೆಲಸವಿನ್ನೂ ಮುಗಿದಿಲ್ಲ. ಈ ಬಾಟಲಿಗಳಿಗೆ ಬಿಸಿನೀರು ಹಾಕಿ ತುಸು ಬಿಟ್ಟು ತೊಳೆದು ಮಗುಚಿಡದಿದ್ದರೆ ನಾಳೆ ಆ ಗುರುಂಗ್ ಸಾಹೇಬನ ಹೆಂಡತಿ ಬಯ್ಯುತ್ತಾಳೆ, ವಾಸನೆ ಹಾಲು ಕೊಡ್ತೀಯ ನೀನು ಅಂತ. ಡ್ರೈವರ್ ಗೂರ್ಖಾನ ಹೆಂಡತಿಗೆ ಹಾಲು ಸ್ವಲ್ಪವಾದರೂ ವಾಸನೆ ಹೊಡೆದರೆ ಸಾಕು, ಮಾರನೆಯ ದಿನ ನಾನು ಹಾಗೆಯೇ ಆ ಒಡೆದ ಹಾಲನ್ನು ವಾಪಸು ತಂದು ಇದೇ ಬಚ್ಚಲಿಗೆ ಚೆಲ್ಲಬೇಕು" ಬೆಳಿಗ್ಗೆ ತಾನು ಹಾಲು ಕರೆಯಲು ಹೊರಡುವಾಗ ಬಚ್ಚಲಿನ ಪುಟ್ಟ ಹಿತ್ತಾಳೆಯ ಹಂಡೆಯ ಬುಡಕ್ಕೆ ಕಿಚ್ಚೊಟ್ಟಿ ಹೋಗಿದ್ದರಿಂದ ಈಗ ಕುದಿಯುತ್ತಿರುವ ನೀರನ್ನು ಎಲ್ಲ ಬಾಟಲಿಗಳ ಮುಚ್ಚಳವನ್ನು ತೆಗೆದು ಆ ಪ್ಲಾಸ್ಟಿಕ್ ಬಾಟಲಿಗಳೊಳಗೆ ಬಿಸಿನೀರನ್ನು ತುಂಬ ತೊಡಗಿದಳು ಸುನೀತಾ. ವರ್ಷಗಳಿಂದ ಬಳಸಿ ಬಳಸಿ ನಪ್ಪಿಹೋದ ಹಸಿರು ಬಣ್ಣದ ಸೆವೆನಪ್ಪಿನ ಬಾಟಲಿಗಳು, ಕಪ್ಪು ಬುರುಬುರುದ್ರವವನ್ನು ಬಿಟ್ಟು ಹಾಲಿನಂಥ ಹಾಲಿನ ಮಿದುವನ್ನಪ್ಪಿಕೊಂಡ ಥಮ್ಸಪ್ಪಿನ ಬಾಟಲಿಗಳು, ಮಿರಿಂಡಾ, ಸೋಡಾ, ಮಾಜಾದ ಬಾಟಲಿಗಳು, ಈಗ ತಮ್ಮೊಳಗೆ ಸೇರಿದ ಸುಡು ಬಿಸಿನೀರಿನ ಹದವಾದ ಹಬೆಯಲ್ಲಿ ಪೋಖರಾದ ಬೆಳಗಿನ ಹುಚ್ಚು ಚಳಿಯನ್ನು ಮರೆಯತೊಡಗಿದವು.

ಸುನೀತಾ ನಿತ್ಯ ನಾಲ್ಕು ಗಂಟೆಗೆ ಎದ್ದುಬಿಡುತ್ತಾಳೆ. ವರ್ಷಕ್ಕೊಮ್ಮೆ ಥಾಯ್‌ಲ್ಯಾಂಡಿನಿಂದ ಬರುವ ತನ್ನ ಗಂಡ ಎರಡು ವರ್ಷಗಳ ಹಿಂದೆ ಬಂದಾಗ ತಂದುಕೊಟ್ಟಿದ್ದ ಬುದ್ಧನ ಫೈಬರ್ ಪ್ರತಿಮೆಯ ಹೊಟ್ಟೆಯಲ್ಲಿದ್ದ ಗಡಿಯಾರವು

ಅವಳನ್ನು ನಿತ್ಯ ಬೆಳಗಿನಲ್ಲಿ ಎಬ್ಬಿಸುತ್ತದೆ. ಆ ಪ್ರತಿಮೆಯು ಮನೆಗೆ ಬರುವುದಕ್ಕಿಂತ ಮುಂಚೆಯೂ ಅವಳು ಏಳುತ್ತಿದ್ದಳು. ಆಗ ಅವಳು ನಿದ್ದೆಗಣ್ಣಿನಲ್ಲಿ ಪುಟ್ಟ ವಾಚಿನ ಮುಳ್ಳುಗಳನ್ನು ಕೀಲಿಸಿ ನೋಡುತ್ತಿದ್ದಳು. ಈಗ ಕಾಲ ದೊಡ್ಡದಾಗಿದೆ. ಹಾಗೆ ಎದ್ದವಳು ಹಿಂದಿನ ರಾತ್ರಿಯೇ ನೀರು ತುಂಬಿಸಿಟ್ಟಿದ್ದ ಹಂಡೆಯ ಬುಡಕ್ಕೆ ಬಗೂಲಾ ಮರದ ಕಟ್ಟಿಗೆಗಳಿಂದ ಬೆಂಕಿ ಹಚ್ಚುತ್ತಾಳೆ ಮತ್ತು ತುಸು ಹೊತ್ತು, ಹೊತ್ತಿದ ಬೆಂಕಿಯ ಬುಡದಲ್ಲಿ ಕುಳಿತು ಚಳಿಗೆ ಒಣಗಿದ ಚರ್ಮವನ್ನು ಬಿಸಿಗೆ ಒಣಗಿಸುತ್ತಾಳೆ. ಕೆಲವು ನಿಮಿಷಗಳು ಕಳೆದು ದೇಹವಿಡೀ ಆ ಬೆಂಕಿಯ ಶಾಖಕ್ಕೆ ಬೆಚ್ಚಗಾದಾಗ ಐದು ನಿಮಿಷಗಳ ಮಟ್ಟಿಗಾದರೂ ತನ್ನ ಗಂಡನನ್ನು ನೆನದು ಬಯ್ದುಕೊಳ್ಳುತ್ತಾಳೆ, ತನ್ನನ್ನು, ತನ್ನ ಅಪ್ಪನನ್ನು ಮತ್ತು ಗಂಡನನ್ನು. ಅಗತ್ಯಕ್ಕಿಂತ ಹೆಚ್ಚು ಕಾವು ಏರಿದಾಗ ಎದ್ದು ಹಿಂದಿನ ಕೊಟ್ಟಿಗೆಯ ಎರಡು ಎಮ್ಮೆಗಳ ಮೊಲೆಗಳನ್ನು ಸಿಟ್ಟಿನ ಹತಾಶೆಯ ಆವೇಶದ ವೇಗದಲ್ಲಿ ಕಿತ್ತುಬಿಡುವಂತೆ ಹಾಲುಕರೆಯುತ್ತಾಳೆ. ಹಾಲು ಕಡಿಮೆ ಹುಟ್ಟಿದರೆ, ಆ ಎಮ್ಮೆಗಳಿಗೂ ಬಯ್ಯುತ್ತಾಳೆ. ಕರೆದ ಹಾಲನ್ನು ಪಾಲು ಮಾಡಿ, ಬೇಕಾದರೆ ತುಸು ನೀರು ಬೆರೆಸಿ ಮನೆಯ ಖರ್ಚಿಗೆ ತುಸು ಹಾಲನ್ನಿಟ್ಟು ಫುಲ್ ಬಾರಿ ಗುಡ್ಡದ ಮೇಲಿನ ಹನ್ನೊಂದು ಮನೆಗಳ ಬಾಗಿಲಿನಲ್ಲಿ ತುಂಬಿದ ಹಾಲಿನ ಬಾಟಲಿಯನ್ನಿಟ್ಟು, ಅಲ್ಲಿ ವಾಡಿಕೆಯಂತೆ ಇರುತ್ತಿದ್ದ ಹಿಂದಿನ ದಿನದ ಖಾಲೀ ಬಾಟಲಿಯನ್ನು ಚೀಲದಲ್ಲಿ ಹಾಕಿಕೊಂಡು ಅದೇ ಫುಲ್ ಬಾರಿ ಗುಡ್ಡದ ತುತ್ತ ತುದಿಯಲ್ಲಿದ್ದ ತನ್ನ ಮನೆಯತ್ತ ಹತ್ತುತ್ತ ನಡೆಯುವಂತೆ ಓಡುತ್ತಾಳೆ. ಇಷ್ಟಾದರೂ ಸೂರ್ಯನಿಗೆ ಅವಳ ಮೇಲೆ ಕರುಣೆ ಹುಟ್ಟಿರುವುದಿಲ್ಲ. ಅಲ್ಲಿ ಕೋಳಿಗಳನ್ನು ಎಬ್ಬಿಸಬೇಕು, ಅಡುಗೆ ಮಾಡಿ ಮಗನನ್ನೆಬ್ಬಿಸಿ ಶಾಲೆಗೆ ಕಳಿಸಬೇಕು. ಇತ್ತೀಚೆಗೆ ಅವನು ಶಾಲೆಗೆ ಸರಿಯಾಗಿ ಹೋಗದೇ ರಸ್ತೆ ಬದಿಯಲ್ಲಿ ಕೇರಮ್ ಆಡುತ್ತಾ ಸಮಯ ಹಾಳು ಮಾಡುತ್ತಾನಂತೆ, ಅವನನ್ನು ಶಾಲೆಗೆ ಕಳಿಸುವಾಗ ಸರಿಯಾಗಿ ಬುದ್ಧಿ ಹೇಳಬೇಕು. ಒಂದು ಲೀಟರಿಗೆ ಐವತ್ತು ರೂಪಾಯಿಯಾದರೆ ತಾನು ನಿತ್ಯ ಕೊಡುವ ಏಳೂವರೆ ಲೀಟರಿಗೆ ಒಟ್ಟು ತಿಂಗಳ ಉತ್ಪತ್ತಿಯೆಷ್ಟು? ತನಗಿನ್ನೂ ಲೆಕ್ಕ ಮಾಡುವುದಕ್ಕೆ ಸರಿಯಾಗಿ ಯಾಕೆ ಬರುವುದಿಲ್ಲ? ಆ ಡ್ರೈವರ್ ಗೂರ್ಖಾನ ಹೆಂಡತಿ ಯಾಕೆ ಯಾವಾಗಲೂ ಕಡಿಮೆ ಹಣ ಕೊಡುತ್ತಾಳೆ? ಗುರುಂಗ್ ಸಾಹೇಬ ಯಾವಾಗಲೂ ಬೆಳಿಗ್ಗೆ ಅಷ್ಟು ಹೊತ್ತಿಗೇ ಊರಿಗೆ ಮುಂಚೆ ಯಮಚಳಿಯಲ್ಲಿ ಎದ್ದು ನಾನು ಹಾಲು ಕೊಡಲು ಹೋಗುವುದನ್ನೇ ಕಾದು ನಿಂತು ಹಾಲಿನ ಬಾಟಲಿಯನ್ನಿಡಲು ನಾನು ಬಗ್ಗುವಾಗ ನನ್ನ ಎದೆಯನ್ನೇ ಯಾಕೆ ನೋಡುತ್ತಾನೆ? ಹೆಂಡತಿಯಿದ್ದರೂ? ಮನೆಯ ಗುಡ್ಡದ ಏರುದಾರಿಯನ್ನು ಹತ್ತುವಾಗ ಅವಳ ಏದುಸಿರಿನ ಸಂಖ್ಯೆಗಳನ್ನು ಅವಳ ದೀನ ಹೋರಾಟದಲ್ಲಿ ಹುಟ್ಟುವ ಪ್ರಶ್ನೆಗಳು ಯಾವಾಗಲೂ ಮೀರಿ ನಿಲ್ಲುತ್ತವೆ. ಎದೆಯ ಭಾರ ತಾಳದೆ ಹೊರಚೆಲ್ಲುವ ಏದುಸಿರಿನಂತೆಯೇ ಪೋಖರಾದ ಕೊರೆಯುವ ಆ ಮುಂಜಾವುಗಳ ಹಸೀಹವೆಯಲ್ಲಿ ಉತ್ತರಕ್ಕಾಗಿ ಹಂಬಲಿಸದ ಖಾಲೀ ಸರಳ ರೇಖೆಯಂಥ ತನ್ನ ಪ್ರಶ್ನೆಗಳನ್ನು ಚೆಲ್ಲಿ

ಮನೆಗೆ ಬರುತ್ತಾಳೆ ಸುನೀತಾ. ಕೋಳಿಗಳನ್ನು ಹಿತ್ತಲಿನ ಅಂಗಳದಲ್ಲಿ ಕಾಳುಚೆಲ್ಲಿ ಮೇಯಲು ಬಿಟ್ಟು ಹಿತ್ತಾಳೆಯ ಪಾತ್ರೆಯಲ್ಲಿ ಅನ್ನಕ್ಕಿಟ್ಟು ಇನ್ನೂ ತನಗೊಂದು ಗ್ಯಾಸ್ ಕನೆಕ್ಷನನ್ನು ತೆಗೆದುಕೊಳ್ಳಲಾಗದ್ದಕ್ಕೆ ಹಪಹಪಿಸುತ್ತ ಬಯ್ದುಕೊಳ್ಳುತ್ತಾಳೆ, ತನ್ನನ್ನು, ಗಂಡನನ್ನು ಮತ್ತು ತನ್ನ ಅಪ್ಪನನ್ನು. ಹಾಗೆ ಬಯ್ದುಕೊಳ್ಳುತ್ತಲೇ ತಾನೇ ಬೆಳೆಯುವ ಹೂಕೋಸಿನ ಮಿದುವಾದ ಹೂಗಳನ್ನು ಬಿಡಿಸುತ್ತ ಅಡುಗೆಗೆ ಸಜ್ಜು ಮಾಡುತ್ತಾಳೆ. ಆ ದಿನದ ದಾಲ್ ಭಾತ್ ತಯಾರಾಗುವ ಹೊತ್ತಿಗೆ ಅತ್ತ ಋತುಪರ್ಣ ಎದ್ದು ಬರುತ್ತಾನೆ. ಸೂರ್ಯ ಮೂಡಿ ತಾಸುಗಳ ನಂತರ, ದಾಲ್‌ನ ಘಮಕ್ಕೆ ಮೂಗರಳಿಸಿಕೊಂಡು ಕಣ್ಣುಜ್ಜಿಕೊಳ್ಳುತ್ತ.

ಆದರೆ ಇಂದೇಕೋ ಋತುಪರ್ಣ, ಅತ್ತ ಹಿತ್ತಲಿನಲ್ಲಿ ಕೋಳಿಗಳ ಜಗಳವನ್ನು ಬಿಡಿಸುತ್ತಿದ್ದ ಅಮ್ಮನ ಗಲಾಟೆಗೆ ಎದ್ದು ತೆರೆದ ಬಾಗಿಲಿನ ಬುಡದಲ್ಲಿ ರಜಾಯಿ ಹೊದ್ದು ಕುಳಿತ. ಪೋಖರಾ ಎಂಬ ನೇಪಾಳದ ಅತೀವ ಸಿರಿದೇಹದ ಊರಿನ ಬಹಳ ಎತ್ತರವಾದ ಆ ಫುಲ್ ಬಾರಿ ಗುಡ್ಡದ ತುದಿಯಲ್ಲಿದ್ದ ಅವನ ಮನೆಯ ಬಾಗಿಲಿನಿಂದ ಎದುರು ಅಷ್ಟೇ ಎತ್ತರವಿದ್ದ ಸಾರಂಗ್ ಕೋಟ್ ಎಂಬ ಗುಡ್ಡದ ತುದಿಯಲ್ಲಿದ್ದ ಅವನ ಮನೆಯ ಬಾಗಿಲಿನಿಂದ ಎದುರು ಅಷ್ಟೇ ಎತ್ತರವಿದ್ದ ಸಾರಂಗ್ ಕೋಟ್ ಎಂಬ ಗುಡ್ಡದ ತುದಿ ಅವನಿಗೆ ಕಾಣಿಸಿತು. ಸೂರ್ಯನೂ ಆಗಷ್ಟೆ ಸಾರಂಗ್ ಕೋಟ್ ಗುಡ್ಡವನ್ನು ಹತ್ತಿ ನಿಂತಿದ್ದ. ಬೆಳಗಾಗುವುದನ್ನೆ ಕಾಯುತ್ತಿದ್ದವರಂತೆ ಪ್ಯಾರಾಚೂಟಿನ ಅಷ್ಟಗಲದ ರೆಕ್ಕೆಯನ್ನು ಹಾರಿಸುತ್ತ ಪ್ಯಾರಾಗ್ಲೈಡಿಂಗ್‌ನ ಸಾಹಸಿಗಳು ಜಗತ್ತಿನ ಅತೀ ಸುಂದರ ಸೂರ್ಯೋದಯವೊಂದನ್ನು ನಭದ ಅಂಕಣದಲ್ಲಿ ಆಡುತ್ತ ಸವಿಯುತ್ತಿದ್ದರು. ಋತುಪರ್ಣನ ಕಣ್ಣಿನ ಕ್ಷಿತಿಜಕ್ಕೆ ಆ ಪ್ಯಾರಾಚೂಟ್‌ಗಳು ಸಾರಂಗ್ ಕೋಟ್ ಬೆಟ್ಟಕ್ಕೆ ಮುತ್ತಿಗೆ ಹಾಕಿದ ದಿವ್ಯ ಹಕ್ಕಿಗಳಂತೆ ಕಂಡವು.

ಆ ಕನಸನ್ನು ಋತುಪರ್ಣ ಕಾಣಲು ಶುರುವಿಟ್ಟು ಬಹಳ ಕಾಲವಾಗಿತ್ತು. ತಾನೊಂದು ದಿನ ಹಾಗೆ ಹಕ್ಕಿಯಂತೆ ಸಾರಂಗ್ ಕೋಟ್ ಬೆಟ್ಟದ ತುದಿಯಲ್ಲಿ ಹಾರುತ್ತ ಈ ಫುಲ್ ಬಾರಿ ಗುಡ್ಡದ ಶಿಖರದಲ್ಲಿದ್ದ ತನ್ನ ಮನೆಯನ್ನು ನೋಡಬೇಕೆಂಬ ಕನಸನ್ನು ಅವನು ತನ್ನ ಸಣ್ಣ ಕಣ್ಣುಗಳಿಂದ ಕಾಣುತ್ತಲೇ ಬಂದಿದ್ದ. ಒಂದು ತಾಸು ಹಾಗೆ ಹಾರಲು ಐದು ಸಾವಿರ ರೂಪಾಯಿಗಳು ಬೇಕು ಎಂಬುದನ್ನು ಅದು ಹೇಗೋ ಪತ್ತೆ ಹಚ್ಚಿ ಅದಕ್ಕಾಗಿ ಅವನು ಈಗಾಗಲೇ ಕೂಡಿಡುತ್ತ ಬಂದ ಆರುನೂರು ರೂಪಾಯಿಗಳನ್ನು ನೆನೆಯುತ್ತ, ಜತೆಗೆ ತಾನು ಮಾಡದಿದ್ದ ಹಿಂದಿನ ದಿನದ ಗಣಿತದ ಲೆಕ್ಕವನ್ನು, ಅದನ್ನೊಪ್ಪಿಸದಿದ್ದರೆ ತನ್ನ ಜಾತಿಯನ್ನು ಹಿಡಿದು ಅವಮಾನಿಸುತ್ತಿದ್ದ ಗಣಿತದ ಮೇಷ್ಟರನ್ನು ನೆನೆಯುತ್ತ ಎದ್ದು, ಹೊದ್ದ ರಜಾಯಿಯನ್ನು ಮತ್ತಷ್ಟು ಹಿತವಾಗಿ ತಬ್ಬಿಕೊಳ್ಳುತ್ತ ಇನ್ನೂ ಹಿತ್ತಲಿನಲ್ಲೆ ಕೋಳಿಗಳ ಜಗಳವನ್ನು ನಿಭಾಯಿಸಲು ಹೆಣಗುತ್ತಿದ್ದ ಅಮ್ಮನ ಬಳಿ ನಡೆದು, “ಅಮ್ಮಾ, ನಾನಿವತ್ತು ಸ್ಕೂಲಿಗೆ ಹೋಗೋಲ್ಲ.

ಆ ಲೆಕ್ಕದ ಮೇಷ್ಟ್ರು ಬಯ್ತಾರೆ ಯಾವಾಗ್ಲೂ.. ಅರೆ ಓ ಗಂಧರ್ವಾ.. ನಿಂಗ್ಯಾಕ್ ಲೆಕ್ಕ? ಹೋಗು, ಗಾನಾಬಾಜ್ ಮಾಡ್ಕೊಂಡಿರು ಅಂತಾರೆ" ಎಂದ.

ಸುನೀತಾ ಕೈಯಲ್ಲಿ ಹಿಡಿದಿದ್ದ ಆ ಒರಟು ಹುಂಜವನ್ನು ಅಲ್ಲೆ ಧೊಪ್ಪನೆ ಬಿಸಾಡಿದಳು. ಆ ಹುಂಜ ಹಾಗೆ ತಾನು ಒದೆಸಿಕೊಂಡ ಪರಿಗೆ ಹೆದರಿ ನೆಲಕ್ಕೆ ಬಿದ್ದು ಎರಡು ಪಕ್ಕಗಳನ್ನುದುರಿಸಿ ಕೊಕ್ಕೊಕ್ಕೊ ಎಂದು ಒರಲುತ್ತ ಹಿತ್ತಲಿನ ತುಂಬ ಹುಚ್ಚುಚ್ಚಾಗಿ ಕುಣಿಯಿತು. ಹಿತ್ತಲಿನಿಂದ ಬಚ್ಚಲಿನ ಹಿಂಬಾಗಿಲಿನ ಮೂಲಕ ಅಲ್ಲಿ ನಿಂತಿದ್ದ ಮಗನನ್ನು ಹಾದು ಒಳಬಂದ ಸುನೀತಾ, "ಇವತ್ತು ಗಂಡಕೀ ಝೋನ್ ಬಂದ್ ಅಂತೆ. ಶಾಲೆಗೆ ರಜೆ ಇರುತ್ತೆ. ಊಟ ಮಾಡಿ ಆಡಿಕೋ ಹೋಗು ಎಂದಳು." ಪೋಖರಾದ ಎಲ್ಲ ಗುಡ್ಡಗಳ ಹಸಿರು ಜಗತ್ತಿಗೆ ತನ್ನ ಮಾಯಾ ಪ್ರಭಾವದಿಂದ ಕಾಂಟ್ರಾಸ್ಟ್ ಎಫೆಕ್ಟನ್ನೂ ಬ್ರೈಟ್ನೆಸ್ಸಿನ ಎಫೆಕ್ಟನ್ನೂ ಒಟ್ಟಿಗೆ ನೀಡುತ್ತಾ ತನ್ನ ಮುಂಜಾವೆಂಬ ಫೋಟೋಶಾಪಿನ ಕೈಚಳಕದಲ್ಲಿ ಅರಳಿಸುತ್ತಿದ್ದ ಬೆಳಗುರವಿಯ ಲವಲವಿಕೆಯಷ್ಟೆ ಖುಷಿಯಲ್ಲಿ ಹೊದ್ದ ರಜಾಯಿಯನ್ನು ಹಾಸಿಗೆಯಲ್ಲಿ ಬಿಸುಟು ಮನೆಯ ಹೊರಮೂಲೆಯಲ್ಲಿದ್ದ ಫುಟ್‌ಬಾಲಿಗೆ ಋತುಪರ್ಣ ರಪ್ಪನೆ ಒದ್ದ. ಒಳಗೆ ಹವೆ ಕಡಿಮೆಯಾಗಿದ್ದ ಆ ಫುಟ್‌ಬಾಲು, ಕೋಣೆಯ ತುಂಬ ಒದ್ದಾಡುತ್ತ ಅಸಹಾಯಕತೆಯಲ್ಲಿ ಬದಿಯ ಗೋಡೆಗಳಿಗೆ ಬಡಿದುಕೊಳ್ಳುತ್ತ ಉರುಳಾಡಿತು.

❖

ಹದವಾಗಿ ಬೆಂದ ಹೂಕೋಸಿನ ನವಿರುಹೂಗಳ ಪಲ್ಯವನ್ನು, ದಾಲ್ ಭಾತಿನೊಂದಿಗೆ ನೆಂಜಿಕೊಂಡು ತಿಂದು ಋತುಪರ್ಣ, ತನ್ನ ಹಿಸಿದ ಹವೆಯ ಫುಟ್‌ಬಾಲನ್ನು ಹಿಡಿದು ಬಿಳೀ ಕಲ್ಲುಗಳ ಪೇಲವ ಇಳಿದಾರಿಯನ್ನಿಳಿದು ಗೆಳೆಯ ನಾರಾಯಣನ ಮನೆಯೆದುರು ಬಂದು ನಿಂತ. ಅದಾಗಲೇ ಯಾವುದೋ ಮಾಯಿಕೆಯಲ್ಲಿ ಋತುಪರ್ಣ ಬಂದೇ ಬರುತ್ತಾನೆಂದು ಅರಿತಿದ್ದವನಂತೆ ತನ್ನ ಮನೆಯ ಪುಟ್ಟ ಅಂಗಳದಲ್ಲಿ ನಾರಾಯಣ್, ಕೈಯಲ್ಲಿದ್ದ ಫುಟ್‌ಬಾಲನ್ನು ಒಂದು ಕ್ಷಣವೂ ಸುಮ್ಮನಿರಲು ಬಿಡದೆ ತಲೆಯ ಮೇಲೆ, ಎದೆಯ ಮೇಲೆ, ಮೊಣಕಾಲಿನ ಮೇಲೆ ಕುಣಿಸುತ್ತ ಆಡುತ್ತಿದ್ದ. ಅವನೆದುರು ಋತುಪರ್ಣ ಬಂದು ನಿಲ್ಲುತ್ತಿದ್ದಂತೆಯೇ ಫುಟ್‌ಬಾಲಿನೊಂದಿಗಿನ ಅವನ ಸರ್ಕಸ್ಸಿನಂಥ ಆಟಗಳು ಮತ್ತೂ ಹೆಚ್ಚಾದವು. ಋತುಪರ್ಣ ಸ್ವಲ್ಪ ಹೊತ್ತು ಹಾಗೆಯೇ ನಿಂತು ಅವನಾಡುತ್ತಿದ್ದ ಫುಟ್‌ಬಾಲನ್ನು ನೋಡಿದ. ಇದುವರೆಗೆ ಅಷ್ಟು ಸುಂದರವಾದ ಫುಟ್‌ಬಾಲನ್ನು ಅವನು ನೋಡಿರಲಿಲ್ಲ. ಒಂದೊಂದು ಪಂಚಭುಜಗಳ ಒಳಗೂ ಬಗೆ ಬಗೆಯ ಬಣ್ಣಗಳನ್ನು ತುಂಬಿಕೊಂಡು ಆ ಫುಟ್‌ಬಾಲು ಕಂಗೊಳಿಸುತ್ತಿತ್ತು. ಅದರ ಮೇಲೆ ವಿಚಿತ್ರವಾದ ನಮೂನೆಯ ಇಂಗ್ಲಿಷ್ ಅಕ್ಷರಗಳಲ್ಲಿ ಬಾಡಿದಾಸ್ ಎಂದು ಬರೆದಿತ್ತು. ನಾರಾಯಣನ ಮನೆಯೆದುರಿನ

ಅಂಗಳದ ಹೊರಗೆಯೇ ಅದುವರೆಗೆ ನಿಂತು ಅವನ ಹೊಸ ಘುಟ್‌ಬಾಲನ್ನು ನೋಡುತ್ತಿದ್ದ ಋತುಪರ್ಣ, ಆ ಅಂಗಳದ ಒಳಗೆ ಕಾಲಿಡುವ ಹೊತ್ತಿಗೆ, ತನ್ನ ಮುಂದಲೆಯ ಮೇಲೆ ಪುಟಿಯುತ್ತಿದ್ದ ಆ ಘುಟ್ ಬಾಲನ್ನು ನಾರಾಯಣ, ಹಾಗೆಯೇ ಋತುಪರ್ಣನತ್ತ ನೂಕಿದ. ಗಾಬರಿಯಲ್ಲಿ ತನ್ನ ಕೈಲಿದ್ದ ವರ್ಷಗಳಷ್ಟು ಹಳೆಯದಾದ ಹಿಸಿದ ಹವೆಯ ಘುಟ್‌ಬಾಲನ್ನು ಅಲ್ಲೆ ನೆಲಕ್ಕೆ ಬಿಸಾಡಿ, ಋತುಪರ್ಣ, ಆ ಹೊಸ ಘುಟ್‌ಬಾಲನ್ನು ತನಗೆ ಸಾಧ್ಯವಾದ ರೀತಿಯಲ್ಲೆಲ್ಲ ತನ್ನ ಶರೀರದ ಬೇರೆ ಬೇರೆ ಅವಯವಗಳ ಮೇಲೆಳೆದುಕೊಂಡು ಕುಣಿಸುತ್ತ, "ನಾರಾಯಣ್, ರಾಮ್ರೋ ಚ್ಛ ಘುಟ್‌ಬಾಲ್, ಕತಿ ರುಪ್ಯೆ?" ಎನ್ನುತ್ತ ನಾರಾಯಣನತ್ತ ಹೊರಳಿ ಘುಟ್‌ಬಾಲಿನ ಕುಣಿತವನ್ನು ಈಗ ಅವನ ಮೊಣಕಾಲಿಗೆ ವರ್ಗಾಯಿಸಿದ. "ದುನ್ ಹಜಾರ್, ಅಪ್ಪ ಕಾತ್ಮಂಡು ಇಂದ ತಂದಿದಾರೆ ನಿನ್ನೆ", ನಾರಾಯಣ್ ಆಡುತ್ತ ಹೇಳಿದ. ಒಮ್ಮೆ ಅದೇನೋ ಯೋಚಿಸಿದವನಂತೆ ಕ್ಷಣ ಕಾಲ ನಿಂತ ಋತುಪರ್ಣ, "ಬಂದೆ ತಡಿ" ಎಂದವನೇ ಅಲ್ಲಿ ಬಿದ್ದಿದ್ದ ತನ್ನ ಘುಟ್‌ಬಾಲನ್ನು ತೆಗೆದುಕೊಂಡು ಮನೆಯ ಏರುದಾರಿಯಲ್ಲಿ ಓಡುವವನಂತೆ ಹತ್ತತೊಡಗಿದ.

ಏದುಸಿರು ಬಿಡುತ್ತ ಕಣ್ಣ ತುಂಬ ಆ ಬಾಡಿದಾಸ್ ಘುಟ್‌ಬಾಲನ್ನು ತುಂಬಿಕೊಂಡು ಅಸಾಧಾರಣ ಆವೇಶದಲ್ಲಿ ಮನೆಯ ಬಾಗಿಲನ್ನು ಹೊಕ್ಕು ಅಲ್ಲಿ ಟ್ರಂಕಿನಲ್ಲಿ ಅದೇನನ್ನೋ ತಡವುತ್ತಿದ್ದ ಅಮ್ಮನ ಎದುರು ತನ್ನ ಘುಟ್‌ಬಾಲನ್ನು ಬಿಸಾಕಿದ ಋತುಪರ್ಣ ಎರಡೂ ಕೈಗಳ ಮುಷ್ಟಿಗಳನ್ನು ಕಟ್ಟಿಕೊಂಡು ಹೊಡೆಯಲು ನಿಂತವನಂತೆ ಅವಳೆದುರು ನಿಂತ. "ಮೂರ್ ವರ್ಷದಿಂದ ಕೇಳ್ತಾ ಇದೀನಿ", (ಅವನ ಮುಖ ಕೆಂಪಡರಿತ್ತು) "ಒಂದ್ ಘುಟ್‌ಬಾಲ್ ಕೊಡ್ಸಿಲ್ಲ ನಂಗೆ," (ಅವನ ಕಣ್ಣುಗಳು ನೀರಾದವು) "ಅಪ್ಪ ಬಂದಾಗ್ ಕೊಡ್ಸ್ತೀನಿ ಅಂತೀಯ" (ಕಣ್ಣ ಪಾಪೆಯನ್ನು ಆವರಿಸಿದ ಕಣ್ಣೀರ ಬ್ಯಾಕ್ ಗ್ರೌಂಡು ಬಣ್ಣ ಬದಲಿಸಿ ಕೆಂಪಗೆ ರಾಚತೊಡಗಿತು) "ಎರಡು ವರ್ಷದಿಂದ ಅವನ್ ಮುಖ ನೋಡಿಲ್ಲ" (ಆವೇಶದ ಅತಿಶಯದಲ್ಲಿ ಅವನು ಬಿಗಿಯಾದ ಮುಷ್ಟಿಯಿಂದ ತನ್ನ ಹಣೆಯನ್ನು ಕುಟ್ಟಿಕೊಂಡ!) "ಯಾವಾಗ್ ಬರ್ತಾನೆ ಅವ್ನು?" (ಅವನ ಧ್ವನಿಯ ಆರೋಹದ ತಾರಕವು ಈಗ ತುತ್ತ ತುದಿಯಲ್ಲಿತ್ತು.)

ಸರಸರನೆ ತನ್ನ ಅಂಗಿಯ ಅರ್ಧ ತೋಳಿನಿಂದ ಕಣ್ಣೀರೊರೆಸಿಕೊಳ್ಳುತ್ತ ಸುನೀತಾಳ ಯಾವುದೇ ಉತ್ತರಕ್ಕೂ ಕಾಯದೆ ಋತುಪರ್ಣ ಮನೆಯಿಂದ ಹೊರನಡೆದು ನಾರಾಯಣನ ಮನೆಯತ್ತ ಇಳಿಯತೊಡಗಿದ.

ಇದ್ದಕ್ಕಿದ್ದಂತೆ ಹೀಗೆ ಒಂದು ಭರ್ರನೆ ಆವೇಶದ ಭರದಲ್ಲಿ ಕಿರುಚಿ ಹೋದ ಮಗನ ಅರಚಾಟದ ಪ್ರಭಾವಕ್ಕೆ ಒಂದಿನಿತೂ ತುತ್ತಾಗದವಳಂತೆ ಸುನೀತಾ ಎದ್ದು ಹೊರಬಂದು ಬಾಗಿಲ ಚೌಕಟ್ಟಿಗೆ ಆತು ನಿಂತು ಎದುರು ಸಾರಂಗ್ ಕೋಟ್ ಗುಡ್ಡದ ತುದಿಯನ್ನೂ, ಮಗ ಹೋದ ದಾರಿಯನ್ನೂ ನೋಡತೊಡಗಿದಳು.

ಹೆಗಲಿಗೆ ಹಾಕಿದ ಮಣಭಾರದ ಚೀಲವನ್ನೂ, ಕೈಯಲ್ಲೊಂದೆರಡು ವಿಶಿಷ್ಟ ಬಣ್ಣಗಳ ಮೇಳದ ವಾಹಕಗಳಂತಿದ್ದ ಚೀಲಗಳನ್ನೂ ಹೊತ್ತು ಇದೇ ಈ ಮಗ ಈಗ ಇಳಿದ ದಾರಿಯನ್ನು ಏರಿ ಬರುತ್ತಿದ್ದ ತನ್ನ ಗಂಡನನ್ನು ಅವಳು ಕಂಡಳು. ಅವನ ತಲೆಯ ಮೇಲೆ ಥಾಯ್‌ಲ್ಯಾಂಡಿನ ಅವನ ಕಂಪನಿ ಹಾಕಿದ ಹ್ಯಾಟು ತನ್ನ ಮನೆಯನ್ನೂ, ಪೋಖರಾದ ಈ ಫುಲ್ ಬಾರಿ ಗುಡ್ಡವನ್ನೂ ಒಮ್ಮೆಗೇ ಏರಿ ಹತ್ತಿ ಕುಣಿಯುತ್ತಿರುವಂತೆ ಕಂಡಿತು ಅವಳಿಗೆ. ಆದರೆ ಇಂದೇಕೋ ಅವನು ಹಾಗೆ ಹತ್ತಿ ಬಂದವನು ತನ್ನನ್ನು ನೋಡಿದವ ಮೈಮೇಲೆ ಬಂದವನಂತೆ ಹೆಗಲ ಮೇಲಿದ್ದ ಬ್ಯಾಗನ್ನೂ ಕೈಯಲ್ಲಿ ಹಿಡಿದಿದ್ದ ಚೀಲಗಳನ್ನೆಲ್ಲ ಅಂಗಳದಲ್ಲಿ ಕೊಡವಿ ವಾಪಾಸು ಧುಮುಧುಮನೆ ಬಂದ ದಾರಿಯನ್ನು ಹಾರುತ್ತ ಇಳಿದು ಓಡಿಹೋದಂತೆ ಭಾಸವಾಗುವ ಹೊತ್ತಿಗೆ ಖುಖುರೋ ಸಿಗರೇಟಿನ ದಟ್ಟವಾದ ಹೊಗೆಯು ಅವಳ ಅಂಗಳವನ್ನು ಆವರಿಸಿಕೊಂಡಿತು.

ಅದೇ ಗುಡ್ಡದ ಇವಳ ಮನೆಯ ಮತ್ತೊಂದು ಮಗ್ಗುಲಿನಲ್ಲಿ ಬಾಳೆಯ ಹತ್ತಾರು ಗಿಡಗಳನ್ನು ನೆಟ್ಟುಕೊಂಡು ಇದ್ದ ಅರೆಬರೆ ಜಾಗದಲ್ಲಿ ಹೂಕೋಸು, ಪಾಲಕ್ಕು, ಕ್ಯಾರಟ್ಟು, ಪರವಲ್ ಮೊದಲಾದ ತರಕಾರಿಗಳನ್ನು ಬೆಳೆಸುತ್ತ ತನ್ನ ಒಂಟಿ ಬದುಕನ್ನು ಆ ಹಸೀ ಮಣ್ಣಿನಲ್ಲಿ ಹದವಾಗಿ ನೆಟ್ಟು ಘಮಘಮಿಸುವ ಹಸಿರು ತರಕಾರಿಗಳ ಫಸಲಿನ ಹಬ್ಬದ ಸಂತೆಯಲ್ಲಿ ಪ್ರೀತಿಯಿಂದ ವಿಕ್ರಯಿಸಿ ಅಸಾದೃಶ್ಯವಾದ ನೆಮ್ಮದಿಯಲ್ಲಿದ್ದ ಎಂಭತ್ತು ದಾಟಿದ ಶ್ರೀ ಬಹಾದ್ದೂರ್, ಇಷ್ಟು ಹೊತ್ತಿಗೆ ನಿತ್ಯ ಸುನೀತಾಳ ಮನೆಗೆ ಖುಖುರೋ ಸಿಗರೇಟಿನ ಹೊಗೆಯನ್ನು ಪಸರಿಸುತ್ತ ಬಿಜಯಂಗೈಯುತ್ತಿದ್ದ. ಆ ಹೊತ್ತಿನಲ್ಲಿ ತನ್ನ ಕೆಲಸಗಳಿಂದ ಬಿಡುವು ಮಾಡಿಕೊಳ್ಳುತ್ತಿದ್ದ ಸುನೀತಾ ಫಖವಾಜ್‌ನಂತಿದ್ದ ಮದ್ದಳೆಯನ್ನು ಹಿಡಿದು ಅಂಗಳದ ಒಂದು ಬದಿಯಲ್ಲಿ ಚೌಪಾಟಿಯನ್ನು ಹಾಕಿ ಕೂರುತ್ತಿದ್ದಳು, ಶ್ರೀ ಬಹಾದ್ದೂರ್ ಗಂಧರ್ವ್ ಸಾರಂಗಿಯನ್ನು ಹಿಡಿದು ನುಡಿಸುತ್ತಿದ್ದ. ಅವರಿಬ್ಬರ ಈ ಲಹರಿಯಲ್ಲಿ ವರ್ಷಗಳಿಂದ ಯಾವುದೇ ಬದಲಾವಣೆಯಾಗಿರಲಿಲ್ಲ. ಬೆಳಗಿನ ಆರಂಭದ ಪ್ರಾಕೃತಿಕ ಚಟುವಟಿಕೆಗಳು ಆ ಫುಲ್ ಬಾರಿ ಗುಡ್ಡವನ್ನು ಲವಲವಿಕೆಯ ಉತ್ತುಂಗದಲ್ಲಿ ಅರಳಿಸಿ, ಇನ್ನೇನು ಆ ಸಂಭ್ರಮವು ಕೊನೆಗೊಂಡು ಮಧ್ಯಾಹ್ನದ ಮೊದಲ ಉದಾಸಯಾಮವು ಅಲ್ಲಿ ನೆಲೆಗೊಳ್ಳುವ ಹೊತ್ತಿಗೆ ಈ ಗಂಧರ್ವರ ಸಂಗೀತವು ಸುನೀತಾಳ ಮನೆಯ ಅಂಗಳದಲ್ಲಿ ಹದವಾಗಿ ಹೊಮ್ಮುತ್ತ ಕೇವಲ ನಾದದ ಬೆರಗಿನ ಸಂಭ್ರಮವು ಅಲ್ಲಿ ಅಯಾಚಿತವಾಗಿ ಹರಡುತ್ತಿತ್ತು.

ನಾರಾಯಣ್ ಮತ್ತು ಋತುಪರ್ಣ, ಫುಲ್ ಬಾರಿ ಗುಡ್ಡವನ್ನಿಳಿದು ಪೋಖರಾ ಕಣಿವೆಯ ಮುಖ್ಯರಸ್ತೆಯ ಮೇಲೆ ಹೆಜ್ಜೆಯೂರಿ ಆಚೆಗೂ ಈಚೆಗೂ ಒಮ್ಮೆ ನೋಡಿದರು. ರಸ್ತೆ ಬದಿಯ ಮನೆಗಳ ಜನವೆಲ್ಲ ಒಟ್ಟಿಗೆ ಇಂದು ತಮ್ಮ ಮನೆಯೆದುರಿನ

ಮೆಟ್ಟಿಲ ಕಟ್ಟಲುಗಳ ಮೇಲೆ ಕುಳಿತು ಎಂದಿನ ಜೀವನದ ಕಟ್ಟಳೆಗಳ ಹೊರ ನಿಂತು ಹರಟೆ ಹೊಡೆಯುತ್ತಿದ್ದರು. ಕೆಲವರು ಸಿಗರೇಟು ಸೇದುತ್ತಿದ್ದರು, ಮತ್ತೆ ಕೆಲವರು ಚಹಾ ಕುಡಿಯುತ್ತಿದ್ದರು. ರಸ್ತೆಯ ಮೇಲೆ ಅಪರೂಪಕ್ಕೆ ಕೆಲವು ಬೈಸಿಕಲ್ಲುಗಳು ಹಾದು ಹೋಗುವುದನ್ನು ಬಿಟ್ಟರೆ ಒಂದೇ ಒಂದು ಮೋಟಾರು ವಾಹನಗಳ ಸದ್ದಿರಲಿಲ್ಲ. ರಸ್ತೆಗುಂಟ ದೊಡ್ಡ ಹುಡುಗರು ಫುಟ್‌ಬಾಲನ್ನು ಮನಬಂದಂತೆ ಒದೆಯುತ್ತ ಆಡುತ್ತಿದ್ದರು, ಸಣ್ಣ ಮಕ್ಕಳು ಎಲ್ಲೆಂದರಲ್ಲಿ ತಮಗೆ ಕಂಡಂತೆ ಕುಣಿಯುತ್ತ ತಮ್ಮ ವಯಸ್ಸಿಗೆ ಮತ್ತು ಶರೀರಕ್ಕೆ ತಕ್ಕುದಾದ ಫುಟ್‌ಬಾಲುಗಳನ್ನು ಹಿಡಿದು ಆಗಾಗ ಒದೆಯುತ್ತ ಆಗಾಗ ಕುಣಿಯುತ್ತ ಒಟ್ಟಿನಲ್ಲಿ ಸ್ವಚ್ಛಂದವಾಗಿ ನಲಿಯುತ್ತ ಇದ್ದವು. ಪುಟ್ಟಪುಟ್ಟ ಮಕ್ಕಳೂ ತಾವೇನು ಕಮ್ಮಿಯೆಂಬಂತೆ ನಡೆಯಲಾರದ ಹೆಜ್ಜೆಗಳನ್ನು ನಡೆಸುತ್ತ ನಿಲ್ಲಲಾಗದ ತಮ್ಮ ಪುಟ್ಟ ಮುದ್ದು ಆಕೃತಿಗಳನ್ನು ತೂಗುತ್ತ ಕೈಯಲ್ಲೊಂದು ಆಟಿಕೆಯನ್ನೋ, ತಿಂಡಿಯನ್ನೋ ಹಿಡಿದು ಸ್ವತಃ ತಾವೂ ನಲಿಯುತ್ತ ನೋಡುಗರನ್ನೂ ನಲಿಸುತ್ತಿದ್ದವು.

ನಾರಾಯಣ್ ತನ್ನ ಫುಟ್‌ಬಾಲನ್ನು ಆ ಟಾರು ರಸ್ತೆಯ ನೆಲಕ್ಕೆ ಹಾಕಿದವನೇ ಅದನ್ನು ಹಿಂದೂ ಮುಂದೂ ಅಡ್ಡಡ್ಡ ಉದ್ದುದ್ದ ಒದೆಯುತ್ತ ಆಡತೊಡಗಿದ. ಋತುಪರ್ಣನೂ ಅವನ ಕಾಲುಗಳ ಹಿಡಿತದಿಂದ ಆಗಾಗ ತನ್ನ ಕಾಲುಗಳ ಬಂಧನಕ್ಕೆ ಆ ಫುಟ್‌ಬಾಲನ್ನು ತೆಗೆದುಕೊಂಡು ಆಡತೊಡಗಿದ. ವಾಸ್ತವದಲ್ಲಿ ನಾರಾಯಣನಿಗಿಂತ ಋತುಪರ್ಣನೇ ಹೆಚ್ಚು ಬಲಶಾಲಿಯೂ ಉತ್ತಮವಾಗಿ ಫುಟ್‌ಬಾಲನ್ನು ಆಡುವವನಾದರೂ ಆ ಫುಟ್‌ಬಾಲು ನಾರಾಯಣನದ್ದಾದ್ದರಿಂದ ಋತುಪರ್ಣ ತನಗರಿವಿಲ್ಲದಂತೆಯೆ ಬಹಳ ಸಲ ಸೋತವನಂತೆ ಸುಲಭವಾಗಿ ತನ್ನ ಕಾಲುಗಳ ಹಿಡಿತದಿಂದ ಆ ಫುಟ್‌ಬಾಲನ್ನು ಅವನ ಸುಪರ್ದಿಗೊಪ್ಪಿಸಿಬಿಡುತ್ತಿದ್ದ. ಹಾಗೆ ಒಮ್ಮೆ ಋತುಪರ್ಣ ಬಿದ್ದ ಫುಟ್‌ಬಾಲು ಅಲ್ಲೇ ತುಸುದೂರದಲ್ಲಿ ಕೆಲವು ದೊಡ್ಡ ಹುಡುಗರು ಸೇರಿ ಆಡುತ್ತಿದ್ದ ಜಾಗಕ್ಕೆ ಹೋಯಿತು. ಅವರಲ್ಲೆ ಒಬ್ಬ ಹುಡುಗ ಆ ಫುಟ್‌ಬಾಲನ್ನೆತ್ತಿನೊಂಡು, ಹೊಸತೂ ಸುಂದರವೂ ಆಗಿದ್ದ ಆ ಫುಟ್‌ಬಾಲನ್ನು ನೋಡಿ, ನೀವೂ ಇಲ್ಲೆ ಬನ್ನಿ, ಒಟ್ಟಿಗೆ ಆಡುವ ಎಂದು ಇವರಿಬ್ಬರನ್ನೂ ಕರೆದ. ಇಬ್ಬರೂ ಒಟ್ಟಿಗೆ ಖುಷಿಯಲ್ಲಿ ಓಡಿದರು. ಆ ಗುಂಪಿನಲ್ಲೆ ಒಬ್ಬ ರಸ್ತೆಯ ನಡುವೆ ಆಚೆಯೀಚೆ ತನ್ನ ಒಂದೊಂದು ಚಪ್ಪಲಿಗಾಲನ್ನಿಟ್ಟು ತಾತ್ಕಾಲಿಕ ಗೋಲನ್ನು ನಿರ್ಮಿಸಿದ, ಮತ್ತೊಬ್ಬ ಹುಡುಗ ರಸ್ತೆಯ ಮತ್ತೊಂದು ಬದಿಗೆ ತನ್ನ ಚಪ್ಪಲಿಗಳನ್ನು ಹಾಗೆಯೇ ಇಟ್ಟು ಮತ್ತೊಂದು ಗೋಲನ್ನು ನಿರ್ಮಿಸಿದ. ಹಗಲು ರಾತ್ರಿಯೆನ್ನದೇ ವಾಹನಗಳ ಭಾರವನ್ನು ಹೊತ್ತು ಹೊತ್ತು ಸಾಕಾಗಿದ್ದ ಆ ಕಣಿವೆಯ ಕಪ್ಪು ಟಾರಿನ ರಸ್ತೆಯು, ಹೀಗೆ ಎಲ್ಲೆಂದರಲ್ಲಿ ಆ ಒಂದು ದಿನದ ಫುಟ್‌ಬಾಲ್ ಅಂಕಣಗಳನ್ನು ನಿರ್ಮಿಸಿಕೊಂಡು ಕಣಿವೆಯ ಸಾವಿರಾರು ಮಕ್ಕಳನ್ನು ತನ್ನ ಉದ್ದ ಮೈಮೇಲೆ ಸುರುವಿಕೊಂಡು ತಾನೂ ಆಡುತ್ತ ನಲಿಯತೊಡಗಿತು. ಕೆಲವು ತಾಸುಗಳವರೆಗೆ ಅವರಿಬ್ಬರು ಆ

ದೊಡ್ಡ ಹುಡುಗರ ನಡುವೆ ಹರಸಾಹಸಪಟ್ಟು ಚೆಂಡನ್ನು ಹಿಡಿಯಲೆತ್ನಿಸುತ್ತ ಆಡಿದರು. ಒಮ್ಮೆ ತನ್ನನ್ನು ಹೀನಾಯವಾಗಿ ಒದೆಸಿಕೊಂಡ ಆ ಫುಟ್‌ಬಾಲು ರಸ್ತೆಯ ಬದಿಯ ಮೋರಿಯನ್ನು ಹೊಕ್ಕು ಆ ಮೋರಿಯ ಗಲೀಜು ನೀರಿನ ಧಾರೆಯಲ್ಲಿ ಉರುಳುತ್ತ ಬಹಳ ದೂರದವರೆಗೆ ಸಾಗಿ ನಿಂತಿದ್ದನ್ನು ಕಂಡು ನಾರಾಯಣನಿಗೆ ಬೇಸರವಾಯಿತು. ಅವನು ಓಡಿ ಹೋಗಿ ಆ ಚೆಂಡನ್ನು ಮೆಲ್ಲನೆ ಮೋರಿಯಿಂದ ಎತ್ತಿದ. ಅದನ್ನು ಕಂಡು ಬಳಿಯಲ್ಲೇ ತನ್ನ ಮನೆಯಿದ್ದ ಹುಡುಗನೊಬ್ಬ ಓಡಿ ಹೋಗಿ ತಾಮ್ರದ ಚೊಂಬಿನಲ್ಲಿ ನೀರು ತಂದು ಆ ಚೆಂಡಿನ ಮೇಲೆ ಸುರಿದ. ಈಗ ಆ ಚೆಂಡು ಸಾಫ್ ಆಯಿತಾದರೂ ತನ್ನ ಹೊಸ ಫುಟ್‌ಬಾಲಿಗೆ ಹೀಗೆ ಒದಗಿದ ದುಃಸ್ಥಿತಿಯನ್ನು ಸಹಿಸಲಾಗದ ನಾರಾಯಣ, ನಾವು ಬರೋದಿಲ್ಲ, ಎಂದು ಕೂಗುತ್ತ, ಅದೇ ರಸ್ತೆಯಲ್ಲಿ ಫುಟ್‌ಬಾಲನ್ನು ಕೈಯಲ್ಲಿ ಹಿಡಿದು ಓಡತೊಡಗಿದ. ಅಲ್ಲಿಯೇ ಆ ಫುಟ್‌ಬಾಲ್ ಅಂಗಳದಲ್ಲಿ ಅದುವರೆಗೆ ನಿಂತಿದ್ದ ಋತುಪರ್ಣನೂ ಅವನು ಓಡುವುದನ್ನು ಕಂಡು ಅವನ ಹಿಂದೆ ತಾನೂ ಓಡತೊಡಗಿದ.

ಪೋಖರಾ ಕಣಿವೆಯ ಮುಖ್ಯ ವಹಿವಾಟಿನ ಕೇಂದ್ರವಾದ ಚಿಪ್ಲೆಡುಂಗಾ ರಸ್ತೆಯ ನಡುವೆ ಒಂದು ಬಲಕ್ಕೆ ಆಗಷ್ಟೆ ಹುಟ್ಟಿದ ಆನೆಮರಿಯ ಗಾತ್ರದಷ್ಟಿದ್ದ ಆ ಬಂಡೆಯು ಇಂದು ಆ ರಸ್ತೆಯ ಮುಖ್ಯ ಆಕರ್ಷಣೆಯಾಗಿ ಕಾಣುತ್ತಿತ್ತು. ಉಳಿದ ದಿನಗಳಲ್ಲಿ ದಿನದ ಹದಿನಾರು ತಾಸುಗಳಲ್ಲಿಯೂ ಬಗೆ ಬಗೆಯ ಟೂ ವ್ಹೀಲರು, ಫೋರ್ ವ್ಹೀಲರುಗಳಿಂದ ಮರೆಯಾಗಿರುತ್ತಿದ್ದ ಆ ಬಂಡೆಯು ಅಂಥ ಮುಖ್ಯ ರಸ್ತೆಯಲ್ಲಿದ್ದರೂ ಕಾಣುತ್ತಿರಲಿಲ್ಲ. ಆದರೆ ಇಂದು ಮಾತ್ರ ಆ ಬಂಡೆಗೆ ಎಲ್ಲಿಲ್ಲದ ಬೇಡಿಕೆಯು ಹುಟ್ಟಿದಂತಿತ್ತು. ಸಣ್ಣ ಮಕ್ಕಳು ಆ ಪುಟ್ಟ ಬಂಡೆಯ ಮೇಲೆ ಜಾರುಬಂಡಿಯಾಡಲು ಇನ್ನಿಲ್ಲದಂತೆ ಪೈಪೋಟಿಯಲ್ಲಿದ್ದವು. ಸಕ್ಕರೆಯ ಒಂದೇ ಒಂದು ಕಣಕ್ಕೆ ಮುತ್ತಿಗೆ ಹಾಕಿ ಕ್ಷಣಾರ್ಧದಲ್ಲಿ ಅದನ್ನು ಕರಗಿಸುವ ಜಂಬಿರುವೆಗಳಂತೆ ಆ ಮಕ್ಕಳು ಚಿಪ್ಲೆಡುಂಗಾದ ಆ ಪುಟ್ಟ ಕಲ್ಲುಬಂಡೆಯನ್ನ ತಮ್ಮ ಕುಂಡೆಗಳಿಂದ ಯಥಾಶಕ್ತಿ ಸವೆಸಿ ಹಾಕಲು ಯತ್ನಿಸುತ್ತಿದ್ದಂತಿತ್ತು.

ಅಲ್ಲಿಯವರೆಗೂ ಅದುವರೆಗೆ ರಸ್ತೆಯುದ್ದಕ್ಕೂ ಅಡ್ಡಡ್ಡ ಮನಸೋ ಇಚ್ಛೆ ಫುಟ್‌ಬಾಲ್ ಆಡುತ್ತ ಬಂದಿದ್ದ ನಾರಾಯಣ್ ಮತ್ತು ಋತುಪರ್ಣ ತುಸು ಹೊತ್ತು ದಣಿವಾರಿಸಿಕೊಳ್ಳಲೆಂಬಂತೆ ಅಲ್ಲೆ ಬಾಗಿಲು ಮುಚ್ಚಿದ ಅಂಗಡಿಯ ಎದುರಿನ ಫುಟ್ಪಾತಿನ ಮೇಲೆ ತಾವು ಮನೆಯಲ್ಲಿ ಗೋಡೆಗೆ ಸಾದುಕೊಂಡು ಕಾಲ್ನೀಡಿ ಕುಳಿತುಕೊಳ್ಳುವಂತೆಯೇ ಕುಳಿತುಕೊಂಡರು. ದೂರದಲ್ಲೆಲ್ಲೋ ಸಾವಿರಾರು ಜನ ಒತ್ತಟ್ಟಿಗೆ ಮೆಲುವಾದ ಮತ್ತು ತೀವ್ರವಾದ ದನಿಯಲ್ಲಿ "ಜೇಕೋ.. ಬುಡೊ.." "ಜೇಕೋ.. ಬುಡೊ.." ಎಂದು ಹೇಳುತ್ತ ಈಗ ಆ ಚಿಪ್ಲೆಡುಂಗಾದ ರಸ್ತೆಯನ್ನು ಹೊಕ್ಕುತ್ತಿರುವುದು ಅವರಿಗೆ ಕಂಡಿತು. ಸಾವಿರಾರು ಜನರು ಕಪ್ಪು ಪಟ್ಟಿಯನ್ನು ತಲೆಗೆ ಕಟ್ಟಿಕೊಂಡು ಆ ಮಾರ್ಗದಲ್ಲಿ ಸಾಗುತ್ತಿದ್ದರು. ಅವರಲ್ಲಿ ಹಲವಾರು ಮಂದಿ

ತಮ್ಮ ಕೈಯಲ್ಲಿ ಹಿಡಿದಿದ್ದ ಫಲಕಗಳ ಒಕ್ಕಣೆ ಹೀಗಿತ್ತು. "ನಮ್ಮ ಅಕ್ಕಿಯನ್ನು ತಿನ್ನಲು ಬಿಡಿ" "ವಿದೇಶದ ಅನ್ನಕ್ಕೆ ನಮ್ಮ ದಾಲ್ ಒಗ್ಗುವುದಿಲ್ಲ" "ಅಕ್ಕಿ ಆಮದು ಸಲ್ಲ" "ನಾವು ಬೆಳೆಯುವ ಜೇಠೋ ಬುಡೊ ಅಕ್ಕಿಯ ಮೇಲೆ ತೆರಿಗೆ ವಿನಾಯಿತಿ ನೀಡಿ."

ಅವರಲ್ಲಿ ಬಹಳಷ್ಟು ಜನ ತಮ್ಮ ಕೈಗಳಲ್ಲಿ ಕೆಂಪು ಬಾವುಟಗಳನ್ನು ಹಿಡಿದಿದ್ದರು. ಅವರ ಆ ಬಿರುಸಿನ ನಡಿಗೆಯನ್ನೂ ಅವರ ಉಸಿರಿನೊಂದಿಗೆ ಬಿಸಿಯಾಗಿ ಬೆರೆತು ಹೊಮ್ಮುತ್ತಿದ್ದ ಸಾವಿರ ಜನರ ಕಂಠನಾದದ "ಜೇಠೋ ಬುಡೋ" ಎಂಬ ಶಬ್ದವು ಪೋಖರಾ ಕಣಿವೆಯ ಶಾಂತತೆಯ ಸೌಂದರ್ಯಕ್ಕೆ ಆ ದಿನದ ಮಟ್ಟಿಗೆ ಗಾಂಭೀರ್ಯದ ಛಾಯೆಯನ್ನೂ ಕರುಣಿಸುತ್ತಿತ್ತು.

ಪೋಖರಾ ಕಣಿವೆಯ ಆ ದೈನಂದಿನ ಚಟುವಟಿಕೆಗಳನ್ನು ಮಧ್ಯಾಹ್ನಕ್ಕೇ ನಿಲ್ಲಿಸಲೋ ಎಂಬಂತೆ, ಆಗಸವು ಕಪ್ಪಾಗತೊಡಗಿತು. ಮೊದಲೇ ಈ ದಿನ ಗಂಡಕೀ ಜೋನ್ ಬಂದ್‌ನಿಂದಾಗಿ ಶೇಕಡಾ ತೊಂಭತ್ತರಷ್ಟು ತಣ್ಣಗಿದ್ದ ಕಣಿವೆಯು, ಇನ್ನೇನು ನೂರಕ್ಕೆ ನೂರರಷ್ಟು ಒಳಸದ್ದಿಲ್ಲದೆ, ಕೇವಲ ಪ್ರಕೃತಿಯ ಸೀದಾ ಸಾದಾ ಗಾಂಭೀರ್ಯದ ಮಳೆಯ ಸದ್ದನ್ನು ಅದು ಹೇಗಿದ್ದರೂ ಆನಂದಿಸುತ್ತ ಮಲಗಬೇಕಾದ ಸ್ಥಿತಿಯು ಕೆಲವೇ ಘಂಟೆಗಳಲ್ಲಿ ನಿರ್ಮಾಣವಾಗುತ್ತದೆ ಎಂಬುದನ್ನು ಅರಿತ ಜನರು ಇನ್ನು ಮಾರನೆಯ ದಿನದ ಸೂರ್ಯನ ದರ್ಶನದವರೆಗೆ ಕಳೆಯಬೇಕಾದ ಏಕತಾನತೆಯ ಬಗ್ಗೆ ಕಿಂಚಿತ್ತೂ ಯೋಚಿಸದೇ ಆ ಸಂಜೆಯ ಸ್ತಬ್ಧ ಚಟುವಟಿಕೆಗಳತ್ತ ಕಾರ್ಯೋನ್ಮುಖರಾದರು.

ನಾರಾಯಣ ಋತುಪರ್ಣನತ್ತ ನೋಡಿದ. ಇಬ್ಬರೂ ಆಗಸವನ್ನು ನೋಡತೊಡಗಿದರು. ದಿಗಂತದ ಆಚೆಯಲ್ಲೆಲ್ಲೋ ಸಾಗರದ ಒಡಲಿನಲ್ಲಿ ಹುಟ್ಟಿದ್ದ ಪವನಪರ್ವತವು ಅತ್ತ ಹಿಮಪರ್ವತಗಳೊಂದಿಗೆ ಕುಸ್ತಿಗಿಳಿಯಲು ಆಗಸದ ಹಸೀ ಮೇಘರಂಗದಲ್ಲಿ ಮೇಳೈಸತೊಡಗಿದ್ದುದನ್ನು ತಮ್ಮ ಕ್ಷಣಕಾಲದ ನೋಟದಲ್ಲಿ ಅರ್ಥೈಸಿಕೊಂಡ ಇಬ್ಬರು ತಮ್ಮ ಮನೆಗಳತ್ತ ಓಡತೊಡಗಿದರು.

ಅಲ್ಲಿ ಸುನೀತಾಳ ಮನೆಯ ಅಂಗಳದಲ್ಲಿ ಶ್ರೀ ಬಹದ್ದೂರ್ ಗಂಧರ್ವ ಸಾರಂಗಿಯನ್ನು ನುಡಿಸುತ್ತ ಹಾಡುತ್ತಿದ್ದ.

"ಎಂಥೆಂಥಾ ನೀರು ಕುಡಿದೆ, ಬೀರು ಕುಡಿದೆ, ಬಾರು ಕುಡಿದೆ.
ಗಂಟಲ ಪಸೆ ಆರದೇ..
ಆ ಕಾಲದ ಸಂಜೆಯಲ್ಲಿ ನಿನ್ನ ಸೊಂಟವೇರಿ ಬಂದ
ಮಡಿಕೆಯೊಡಲ ನೀರ ರುಚಿಯು, ಇಂದು ಕಾಣದೇ.."

ಸುನೀತಾ ಮದ್ದಳೆಯ ಕಪ್ಪು ಕರ್ಣದ ಮೇಲೆ ತನ್ನ ಬೆರಳುಗಳನ್ನು ರಪ್ಪರಪ್ಪನೆ ಬಡಿಯುತ್ತ ನುಡಿಸುತ್ತಿದ್ದಳು. ಏದುಸಿರನ್ನೂ ಲಯಬದ್ಧವಾಗಿ ಬಿಡುವುದನ್ನು

ರಕ್ತಗತವಾಗಿ ಕಲಿತಿದ್ದ ಜಗತ್ತಿನ ಕೊನೆಯ ಗಂಧರ್ವನಾಗಬಹುದಾದ ಎಲ್ಲ ಸಾಧ್ಯತೆಗಳನ್ನೂ ಆಗಾಗ ತೋರಿಸುತ್ತಿದ್ದ ಋತುಪರ್ಣ, ಆಗಷ್ಟೆ ಅಲ್ಲಿಗೆ ಬಂದವ, ಇನ್ನೇನು ಕರಗಿ ಹರಿಯಲಿರುವ ಮೋಡವೊಂದನ್ನು ಬಾಚಿ ತಬ್ಬುವವನಂತೆ ತನ್ನ ಎರಡೂ ಕೈಗಳನ್ನು ಮೇಲಕ್ಕೆತ್ತಿ ಆ ಮೇಳಕ್ಕೆ ಹೆಜ್ಜೆ ಹಾಕತೊಡಗಿದ.

"ಧಿನಕ್ಕ್ ಧಿನ್ನಾ..ಧಿನ್ನಕ್ಕ್ ಧಿನ್ನಾ..ಧಿನ್ನಕ್ ಧಿನ್ನಾ..ಧಿನ್ನಕ್ ಧಿನ್ನಾ.."

❖

(ಕನ್ನಡ ಪ್ರಭ – ಜೂನ್ 5, 2012)

ಕಾಡುಹಕ್ಕಿ

ಟಿ. ಗೋವಿಂದರಾಜು

ಚಳಿ, ಕುಲುಕಾಟ, ಜೋಲಿ, ಅರೆಬರೆ ಹೊದಿಕೆಯ ಮಂಪರು.. ಅಮೂಲ್ಯ ನಿದ್ದೆ ಕಳೆದುಹೋದೀತೆಂಬ ಆತಂಕ; ಬಲವಂತವಾಗಿ ಕಣ್ಣು ಅದುಮಿಕೊಂಡಾಗ ಆಗುವ ಸಿಹಿ ನಿದ್ದೆಯ ಅನುಭವ. ಒಂದು ರೀತಿಯ ಹಿತವೇದನೆ. ಎಲ್ಲೋ ಗಾಳಿಯಲಿ ತೇಲಿಸಿಕೊಂಡು ಹೋದಂತಹ ಆಹ್ಲಾದ.. ಆಗೀಗ, ಹೊ! ನಾವು ಬದುಕಿನಲ್ಲಿ ಏನೇನದರ ಜೊತೆಗೆಲ್ಲಾ 'ಸ್ಪರ್ಧೆ' ಮಾಡುತ್ತೇವಲ್ಲಾ..!!

ಪಕ್ಕದ ಗೆಳೆಯ 'ಎದ್ದೋಳು, ಇಳಿ..' ಮೊಣಕೈನಲ್ಲಿ ತಿವಿದಾಗಲೇ ಬಲವಂತವಾಗಿ ಕಣ್ಣರೆಪ್ಪೆ ಕಿತ್ತದ್ದು. ಎತ್ತರ ಬಯಲಿನ ತಿರುವಿನಲ್ಲಿ ನಮ್ಮಿಂದ ಕಳಚಿಕೊಂಡ ಆ ಮಿನಿ ವ್ಯಾನು ಅದೇ ವೇಗದಲ್ಲಿ ಹೊರಳು ಹಾದಿಯಲ್ಲಿ ತಿರುಗಿ, ಇಳಿಜಾರಲ್ಲಿ ಇಳಿದು ಮಾಯವಾಯಿತು.

ಬ್ಯಾಗುಗಳನ್ನು ಕೆಳಗಿಟ್ಟು ಮೊದಲು ಮಾಡಿದ್ದು 90^0ಗೆ ಮೈ ನಿಮಿರಿಸಿ ದೀರ್ಘವಾಗಿ ಆಕಳಿಸಿದ್ದು. ಕುಗ್ಗಿ, ಹಿಡಿದುಕೊಂಡಿದ್ದ ನರನಾಡಿಗಳೆಲ್ಲಾ, ಬಾಣಲೆಯಲ್ಲಿ ಬಿದ್ದ ಜೋಳದ ಕಾಳುಗಳಂತೆ ಪಟ ಪಟಾ ಹವಳಾದವು.

ಹೌದು. ಸ್ಥಳ ಅಷ್ಟು ನಿಶ್ಯಬ್ಧವಾಗಿತ್ತು.

ವಿಸ್ತಾರವಾದ ಹುಲ್ಲುಗಾವಲು. ಎತ್ತರದ ಸಮತಟ್ಟಾದ ಜಾಗ. ನಿರ್ಜನ ಪ್ರದೇಶ ಅಲ್ಲಿಂದ ಎಡಕ್ಕೆ ತಿರುಗಿ ಇಳಿಜಾರಿನಲ್ಲಿಳಿದು ಅದೆಷ್ಟೋ ದೂರ ಸಾಗಿದರೆ ಅಲ್ಲಿಂದ ದಟ್ಟ ಕಾಡಿನ ಪ್ರಾರಂಭ; ನಮ್ಮ ಗಮ್ಯಸ್ಥಾನ.

ಶೀತಲ ಇಬ್ಬನಿಯಲ್ಲಿ ತೊಯ್ದ ಗಿಡಗಂಟೆಗಳು ತೆಳ್ಳಗೆ ಹೊಮ್ಮುತಿದ್ದ ಹೊಂಬಣ್ಣದ ಹಿತದ ಚುಮು ಚುಮು ಬಿಸಿಲ ಕಿರಣಗಳಲ್ಲಿ ಮೈಕಾಯಿಸಿಕೊಳ್ಳುತ್ತಿರುವಂತೆ ಅಪ್ಯಾಯಮಾನವಾಗಿದ್ದವು. ಬಣ್ಣದ ಪಕ್ಷಿಗಳಂತೂ ಶೀತಕ್ಕೆ ಕಟ್ಟಿಕೊಂಡ ಗಂಟಲನ್ನು ಸರಿಪಡಿಸಿಕೊಳ್ಳುತ್ತಿರುವಂತೆ ನಿಧಾನಕ್ಕೆ ಕೊಕ್ಕು ತೆರೆದು ಹಾಡುತ್ತಾ, ಗೆರೆ ಬಿಚ್ಚಿ ತಾವೂ ಮೈಕಾಯಿಸಿ ಹದ ಮಾಡಿಕೊಳ್ಳುತ್ತಿದ್ದವು. ಅಷ್ಟು ದೂರದಲ್ಲೊಂದು ಕಪ್ಪಲು ನರಿ ಗೊಳ್ಳೆಂದು ಕೂಗು ಹಾಕಿ ಇನ್ನೊಂದು ದಿಕ್ಕಿಗೆ ಓಡಿದ್ದು ಕಾಣಿಸಿತು.

ನಾವು ಬಂದಿದ್ದು ವನ್ಯ ಜೀವಿಗಳ ಛಾಯಾಗ್ರಹಣಕ್ಕೆ. ನಾವು ಬಹು ಪ್ರೀತಿಯಿಂದ ಹುಡುಕಿ ಹೋಗುವ ನಿಸರ್ಗ–ಜೀವ ತಾಣ, ನಮಗದು ಸ್ವರ್ಗ ಸಮಾನ.

ವನ್ಯ ಜೀವಿ ಆಸಕ್ತರು ಸದಾ ಇಂಥಾ ಸ್ಥಳಗಳನ್ನು ಅರಸುತ್ತಿರುತ್ತಾರೆ. ಆಕಸ್ಮಿಕವಾಗಿ, ಇತ್ತೀಚೆಗೆ ಇದು ಗೆಳೆಯರೊಬ್ಬರ ಮೂಲಕ ನಮ್ಮ ಕಿವಿಗೆ ಬಿದ್ದಿತ್ತು. ಅದಕ್ಕಾಗಿ ನಾವಿಬ್ಬರೇ ಅಲ್ಲಿ ಬೆಳ್ಳಂಬೆಳಿಗ್ಗೆ ಬಂದಿದ್ದೆವು. ಹೆಚ್ಚು ಜನಕ್ಕೆ ಗೊತ್ತಾದರೆ ಗೌಜು–ಗದ್ದಲು. ಒಳ್ಳೇ ಅವಕಾಶ ನಮಗೇ ಸಿಗಲಿ ಎಂಬ ಆಸೆ.

ನವೆಂಬರ್–ಡಿಸೆಂಬರಿನ ಇಂಥಾ ಕಾವಳ, ಇಬ್ಬನಿ, ಚುಮು ಚುಮು ಹದದ ಬಿಸಿಲಲ್ಲಿ ಪ್ರಾಣಿ ಪಕ್ಷಿಗಳ ನಿಸರ್ಗದ ಸೊಬಗಿನ ಚಿತ್ರಗಳು ಬಹು ಸುಂದರವಾಗಿ ಮೂಡಿ ಬರುತ್ತವೆ. ಅಂಥಾ ಉನ್ನತ ಮಟ್ಟದ ತಾಂತ್ರಿಕ–ವ್ಯಾಕರಣ, ಕೌಶಲ್ಯ, ಸೌಂದರ್ಯಾನುಭೂತಿ–ಎರಡನ್ನೂ ಒಳಗೊಂಡು ಸೃಷ್ಟಿಯಾದ ಚಿತ್ರಗಳನ್ನು ತೆಗೆಯುವುದೇ ಒಂದು ಸಾಹಸ. ಅಂಥಾ ಚಿತ್ರಗಳು ಕರಗತವಾಗುವುದೇ ಒಂದು ದಿವ್ಯಕ್ಷಣ, ಅಂತಾರಾಷ್ಟ್ರೀಯ ಛಾಯಾಚಿತ್ರ ಸಲೂನ್(ಸ್ಪರ್ಧೆ)ಗಳಲ್ಲಿ ಆ ಚಿತ್ರಗಳಿಗೆ ವಿಶೇಷ ಮಾನ್ಯತೆ. ಅಂಥಾ ಕೀರ್ತಿ, ಪ್ರಶಸ್ತಿ ಪಡೆವ ಆಕಾಂಕ್ಷೆ ಛಾಯಾಗ್ರಾಹಕನಿಗೆ ಸಹಜವಾಗಿಯೇ ಇರುತ್ತದೆ.

ಅಲ್ಲೊಂದು ಗಿಡದ ಪಕ್ಕ ತಿರುಗಿ 'ಒಂದ' ಮಾಡಿ, ಒಂದಿಷ್ಟೇ ನೀರಿನಲ್ಲಿ ಬಾಯಿ ಮುಕ್ಕಳಿಸಿ, ಫ್ಲಾಸ್ಕಿನಲ್ಲಿದ್ದ ಕಾಫಿಯಿಂದ ಚೂರು ಚೂರು ಗಂಟಲು ಬಿಸಿ ಮಾಡಿಕೊಂಡು, ಬ್ಯಾಗುಗಳನ್ನು ಹೆಗಲ ಮೇಲೆ, ಕ್ಯಾಮರಾಗಳನ್ನು ಎದೆಯ ಮೇಲೆ ನೇತಾಕಿಕೊಂಡು, ತಲೆ ಮೇಲಿನ ಟೋಪಿಯನ್ನು ಇನ್ನಷ್ಟು ಎಳೆದು ಬಿಗಿ ಮಾಡಿಕೊಂಡು ಹೆಜ್ಜೆ ಹಾಕಿದೆವು.

ಇಲ್ಲದ ಹಾದಿಯಲ್ಲಿ ಕಾಲುಗಳು ನಿಧಾನಕ್ಕೆ ದಾರಿ ಹುಡುಕಿಕೊಳ್ಳುತ್ತಿದ್ದರೂ, ನಮ್ಮ ಕಣ್ಣುಗಳೆಲ್ಲಾ ಅಕ್ಕ ಪಕ್ಕದ ಗಿಡ–ಗಂಟೆ, ಬಂಡೆ, ಹುತ್ತಗಳ ಮೇಲೆಯೇ. ನಮ್ಮ ಕಣ್ಣು ಕಿವಿಗೆ ಮೊದಲೇ ಈ ಕಾಡುಹಕ್ಕಿಗಳು ನಮ್ಮನ್ನು ಗಮನಿಸಿ, ಸಿಳ್ಳೆ ಹಾಕಿ ಕರೆದು, ಕುಪ್ಪಳಿಸಿ ಹಾರುತ್ತವೆ. ಕ್ಯಾಮೆರಾ ಕಿಂಡಿಯಲ್ಲಿ ನಮ್ಮ ಕಣ್ಣು ತೂರುವ ಕಸರತ್ತು ಮಾಡುವುದರ ಒಳಗಾಗಿ ಅವು ಇನ್ನಷ್ಟು ದೂರ ಹೋಗಿರುತ್ತವೆ. ಅದನ್ನು ಏಮಾರಿಸುವಂತೆ ನಾವು ಉಸಿರು ಬಿಗಿ ಹಿಡಿದು ಮೆಲ್ಲಗೆ ತಿರುಗಿ ಒಂದು ಹೆಜ್ಜೆ ಮುಂದಿಟ್ಟರೆ ಪಟ್ಟನೆ ಬಾಲ ಕುಣಿಸಿ, ಕ್ಯಾಕೆ ಹಾಕಿ, ತೊಡೆ ತಟ್ಟಿದಂತೆ ರೆಕ್ಕೆ ಬಡಿದು ಅಷ್ಟಷ್ಟೇ ದೂರಕ್ಕೆ ಹಾರಿ ಜೂಟಾಟ ಆಡುತ್ತವೆ!

ಈ ಪುಟ್ಟೇಕ್ಯಾತನದು ಒಂದು ಒಳ್ಳೇ ಆಕ್ಷನ್ ಪೋಟೋ ತಗೀಬೇಕೂಂತ ಬಾಳಾ ಕಾಲದಿಂದ ಪ್ರಯತ್ನ ಮಾಡ್ತಿದ್ದೀನಿ; ಕಡೆಗೂ ಪೋಸ್ ಕೊಡಲಿಲ್ಲ ಮಗಂದು..

ನಡೆಯುತ್ತಿದ್ದ ಗೆಳೆಯ ನಿಂತು ಉಸುರಿದ. ಅವನ ಅಸಹನೆಗೆ ಕಾರಣ ಇತ್ತು. ಗೂಚಕ್ಕಿ ಗಾತ್ರದ ಈ ಕರೇ ಹಕ್ಕಿ ಪೊದೇಲಿ ತೀರಾ ಸಾಮಾನ್ಯ, ನಮ್ಮ ಪಕ್ಕದಲ್ಲೇ ಕೂತು ಬಾಲಕುಣಿಸಿರ್ತದೆ; ನಾವು ತಿರುಗಿ, ನಿಂತರೆ ಸಾಕು, ಬಾಲ ತೋರಿಸಿ ಹಾರಿ ಬಿಡುತ್ತದೆ;

'ಗೂಡು ಮಾಡಿ, ಮರೀಗೆ ಮೇವು ಕೊಡೋವಾಗ ಸುಲಭ..' ಎಂದೆ. 'ಹಾಳಾದ್ದು.. ಅಂಥಾ ದೃಶ್ಯಾನೂ ಕಣ್ಣಿಡೀಲಿಲ್ಲ..' ಎಂದ, ಬಹಳ ನೋವಿನಿಂದ ಎಂಬಂತೆ..

ಅನುಭವಗಳನ್ನು ಹಂಚುತ್ತಾ, ಸುತ್ತುಮುತ್ತು ನೋಡುತ್ತಾ, ಅಲ್ಲಲ್ಲಿ ಸಾಧ್ಯವಾದ ಒಂದೊಂದು ಸಂಗತಿಯನ್ನು ಕ್ಲಿಕ್ಕಿಸುತ್ತಾ ಕಾಡಿನತ್ತ ಬಹುದೂರ ಸಾಗಿದೆವು. ಸುಂದರವಾಗಿ ಗರಿ ಬಿಚ್ಚಿ ಹಾರುವ ನೊಣಹಿಡುಕಗಳ ಮೈಮಾಟ, ತಿಳಿ ಹಸುರು ಬಣ್ಣದ ಸೊಬಗು, ಗಾಳಿಯಲ್ಲಿ ಹಾರುತ್ತಲೇ ನೊಣವನ್ನೋ, ಹುಳುವನ್ನೇ ಲಬಕ್ಕನೆ

ಹಿಡಿದು, ಕೊಂಬೆಗೆ ಬಡಿದು, ಗುಳುಂ ಮಾಡುವ ಅದರ ಸಾಹಸದ ಕ್ರಿಯೆಗಳನ್ನೂ ಅಷ್ಟೇ ನಾಟಕೀಯವಾಗಿ ಚಿತ್ರಿಸುವ ಸಾಹಸವನ್ನು ನಾವೂ ಮಾಡುತ್ತಿದ್ದೆವು. ಆದರೆ, ಯಶಸ್ಸು ಸಿಕ್ಕಿದ್ದು ಕಡಿಮೆ. ರೆಪ್ಪೆ ತೆಗೆಯುವಷ್ಟರಲ್ಲಿ ಅವು ತನ್ನ ಭಂಗಿ ಬದಲಿಸುತ್ತಿದ್ದವು; ಒಳ್ಳೆಯ ಕೋನದಿಂದ ಬೆಳಕು ಬೀಳುತ್ತಿರಲಿಲ್ಲ ಅಥವಾ ಕ್ಯಾಮೆರಾ ಶೇಕ್ ಅಬ್ದುಲ್ಲ ಆಗಿರುತ್ತಿತ್ತು. ಅಥವಾ ಈವರೆಗೂ ಯಾರೂ ತೆಗೆದಿರದ ಫೋಸಿನ ಚಿತ್ರ ಅನ್ನುವುದು ಸಿಕ್ಕಿರಲಿಲ್ಲ..

ಹಾಗೆ ನಡೆಯುತ್ತಿದ್ದಂತೇ ಬಂಡೆಗಳ ಸಾಲು ಎದುರಾಯಿತು. ಅದರ ಕೊರಕಲಿನಲ್ಲಿ ಹುಷಾರಾಗಿ ಕಾಲಿಡುತ್ತಾ, ಇನ್ನಷ್ಟು ತಗ್ಗಿಗೆ ಇಳಿದೆವು. ಬಂಡೆಯ ಮೇಲೆ ಬಣ್ಣದ ಯೂನಿಫಾರಂನ ಗಾರ್ಡ್‌ನಂತೆ ನಿಂತಿದ್ದ ಬಣ್ಣದ ಓತಿಕ್ಯಾತವೊಂದು ನಮ್ಮನ್ನು ಅಣಕಿಸುವಂತೆ ತಲೆತೂಗಿತು. ಅದರ ಮೈ ಚರ್ಮದ ವಿನ್ಯಾಸ, ಬಣ್ಣದ ತಾಜಾತನದಿಂದ ಆಕರ್ಷಿತನಾಗಿ ಒಂದು ಭಾವಚಿತ್ರ ಮಾಡೋಣ ಅಂತ ಅದರತ್ತ ಬಗ್ಗಿದರೆ ಹಾಳಾದ್ದು ಸಂದಿಗೆ ನುಸುಳಿತು..

ಇಂಥಾ ಪಕ್ಷಿ, ಜಂತುಗಳು ಬೇರೆಡೆ ಸಿಗುವುದಿಲ್ಲ ಅಂತ ಅಲ್ಲ; ಹೊಸ ಹೊಸ ಪರಿಸರದಲ್ಲಿ ತೆಗೆದರೆ ಚಿತ್ರಕ್ಕೊಂದು ಹೊಸತನ ದಕ್ಕೀತು; ಹೆಚ್ಚು ಜನ ಸಂಚಾರವಿರದಲ್ಲಿ ಚಿತ್ರಣ ಸುಲಭವಾದೀತು.. ಎಂಬ ನಿರೀಕ್ಷೆ; ಮಿಗಿಲಾಗಿ ಈ ಕಾಡಿನ ಅಂಚಿನ ಒಂದು ಕೊಳಕ್ಕೆ ದೂರ ದೇಶದ ಅಪರೂಪದ ಪಕ್ಷಿಗಳು ಈ ಬಾರಿ ಬಂದಿವೆ ಎಂಬುದು ಗೊತ್ತಾಗಿ, ಮಿಕ್ಕವರು ಬಂದು ಅಲ್ಲಿ ದಾಂಧಲೆ ಮಾಡುವ ಮುನ್ನವೇ ನಾವು 'ಬೇಟೆ' ಮುಗಿಸಿಬಿಡಬೇಕೆಂದು ಗಪ್‌ಚುಪ್ ಆಗಿ ಹೊರಟು ಬಂದಿದ್ದೆವು. ಇತರರ ಓಡಾಟ ಇಲ್ಲದೆಡೆ ನಾವು ತೃಪ್ತಿಯಾಗುವಷ್ಟೂ ಕಾಲ ಇದ್ದು, ಚಿತ್ರ ತೆಗೆಯಬಹುದಲ್ಲ!

'ಅದು ಗೊತ್ತಿದ್ದರೆ ನೇರವಾಗಿ ಅಲ್ಲಿಗೇ ಕರಕೊಂಡು ಹೋಗುತ್ತಿದ್ದೆ. ಬಂದದ್ದಾಗಿದೆ; ಹುಡುಕಬೇಕು, ಬಾ?' ಎಂದ.

ಹೊಳೆಯ ಅಂಚಿನ ಗಿಡ, ಮರ, ಕಲ್ಲು-ಕೊರಕಲಿನಲ್ಲಿ ಹ್ಯಾಗೆ ಹ್ಯಾಗೋ ನಡೆಯುತ್ತಾ ಸಾಗಿದೆವು. ಮಾತಿಗೇನೂ ಕೆಲಸ ಇರಲಿಲ್ಲ. ಅಲ್ಲೊಂದೆಡೆ ಜುಳುಜುಳು ನೀರಲಿ ಬಣ್ಣದ ಮೀನು ಆಡುತ್ತಿದ್ದವು. ಒಂದು ಕ್ಷಣ ನಿಂತು ನೋಡಿದ್ದಾಯಿತು. ಸ್ವಲ್ಪ ಸ್ತಬ್ಧವಾಗಿ ನಿಂತಿದ್ದ ನೀರಿನ ಮಡುವಿನಲ್ಲಿ ರಂಗೋಲಿ ಹುಳುಗಳು ಕಂಪ್ಯೂಟರಿಗೂ ಅಸಾಧ್ಯವಾದ ವೇಗದಲ್ಲಿ, ಅಸಂಖ್ಯವಾದ ವಿನ್ಯಾಸಗಳನ್ನು ಹಾಕುತ್ತಿದ್ದವು! ಮುಖಕ್ಕಿಷ್ಟು ನೀರು ಹಾಕಿ, ಬೊಗಸೆ ನೀರು ಕುಡಿದಾಗ, ಜೀವಕ್ಕಿಷ್ಟು ತಂಪಾಯಿತು. ನೀರಲ್ಲಿ ಕಾಲು ಬಿಟ್ಟು, ಬಂಡೆ ಮೇಲೆ ಕೂತದ್ದೂ ಆಯಿತು. ಏನಾದರೇನು?

ನಮ್ಮ ಗಮ್ಯ ಸ್ಥಾನಕ್ಕೆ ದಿಕ್ಕು-ದೆಸೆ ತಿಳಿಯಲಿಲ್ಲವಲ್ಲ! ಶಿವಪ್ಪಾ.. ಕಾಯೋ ತಂದೆ..!!

ಚುಮು ಚುಮು ಬಿಸಿಲೇರಿದಂತೆ, ನಚ್ಚಗಾಗುತ್ತಿದ್ದ ಬಂಡೆ ಮೇಲೆ ಅಂಗಾತ ಬಿದ್ದುಕೊಳ್ಳುವ ಆಸೆ ದೇಹಕ್ಕಾದರೂ, ಸಮಯದ ಭಯದಿಂದ ಮನಸ್ಸು, ಬಲವಂತದಿಂದ ಮೇಲೆಬ್ಬಿಸಿತು. ಹಾಗೇ, ಇನ್ನಷ್ಟು ದೂರ ನಡೆದೆವು. ಮುಗಿಲುದ್ದದ

ಆ ಮರಗಳ ನಡುವೆ, ದಿಕ್ಕು ಕಾಣದೆ ನಿಂತು ನಿಂತು ಸಾಗಬೇಕಾಗಿತ್ತು. ಅಂಥಾ, ಅಲ್ಲೊಂದೆಡೆ ಸಣ್ಣ ಜಲಪಾತ; ನೀರು ಧುಮ್ಮಿಕ್ಕಿ ಆದ ಹೊಂಡ. ವಾಹ್! ಅಲ್ಲೊಂದು ಬೆಡಗಿನ, ಬಹು ಬಣ್ಣದ ಮಿಂಚುಳ್ಳಿ.. ನಮ್ಮನ್ನು ಕಂಡು ಕಿರುಚುತ್ತಾ ಹಾರಿತು. ಫೋಟೋಗೆ ಒಳ್ಳೇ ಜಾಗ. ಮಿಗಿಲಾಗಿ ನೀರಿಗೆ ಡೈವ್ ಹೊಡೆದು, ಹರಿವ ಮೀನನ್ನು ಹೆಕ್ಕಿ ಕೊಂಬೆ ಮೇಲೆ ಕುಳಿತು ಅದನ್ನು ಗಬಕ್ಕನೆ ನುಂಗುವಾಗಿನ, ಮೇಲೆದ್ದಾಗ ತುಂತುರಾಗಿ ಚಿಮ್ಮುವ ನೀರು, ಸೊಬಗು.. ಈ ಒಂದೊಂದೂ ಚಿತ್ರಗಾರನಿಗೆ ಬಹು ಪ್ರಿಯವಾದ, ಅಷ್ಟೇ ಸಾಹಸದ ಸಂದರ್ಭಗಳು.. ಮಿಂಚುಳ್ಳಿಯ ಅಂಥಾ ಬೆಡಗಿನ ಸಂದರ್ಭಗಳನ್ನು ತಪ್ಪಿಸಿಕೊಳ್ಳುವ ವನ್ಯಜೀವಿ ಛಾಯಾಗ್ರಾಹಕ ಜಗತ್ತಿನಲ್ಲಿ ಯಾರಾದರೂ ಇದ್ದಾರೆಯೇ!

ಒಂದಾದರೂ ತೆಗೆಯಬೇಕೆಂದು ಹಠ ಮಾಡಿ ಬಂಡೆಮರೆ ಕುಳಿತೆ. ನಮ್ಮ ನಿರೀಕ್ಷಿತ ಆಗಮನಕ್ಕೆ ಹೆದರಿದಂತೆ ಅದು ಬೇಗ ಮರಳಿ ಬರಲೇ ಇಲ್ಲ. ಗೆಳೆಯ ಒತ್ತಾಯಿಸಿದ. 'ಹೀಗಾದರೆ ಆಗೊಲ್ಲಪ್ಪಾ'. ನೀನು ಈ ಕವಲಿನಲ್ಲಿ ಹುಷಾರಾಗಿ ಹೋಗು. ನಾನು ಹಾಗೇ ಮುಂದುವರೆಯುತ್ತೇನೆ.

ಕೊಳ ಕಂಡಾಗ ವಾಪಸು ಬಂದು ಇಲ್ಲಿ ಕೂರು. ಸ್ವಲ್ಪ ಹೊತ್ತಿಗೆ ನಾನೂ ಹಿಂದಿರುಗುತ್ತೇನೆ – ಆಮೇಲೆ ಜೊತೆ ಆಗಿ ಹೋಗೋಣ. ಹುಷಾರು; ಶಾನೇ ದೂರ ಹೋಗಬೇಡ; ಕಳೆದು ಹೋದೀಯೇ..! ಎಂದು ದಾರಿ ಹಿಡಿದು ಅದೆತ್ತೋ ಹೊರಟೇ ಬಿಟ್ಟ.

'ಅರೇ, ಇರು ಇರು..' ಎಂದು ತಲೆ ಎತ್ತಿ ನೋಡುವಷ್ಟರಲ್ಲಿ ಅವ ಮಾಯ! ನಂಬಿದವರ ನಡು ನೀರಲ್ಲಿ ಕೈ ಬಿಡುವುದೆಂದರೆ ಇದೇಯ? ಇವನಿಲ್ಲದೆ ನಾನು ಕಾಡು ಸುತ್ತಲಾರೆ ಎಂಬ ಅಹಂ ಇವನಲ್ಲಿದೆ. ಇರಲಿ; ಛಾಲೆಂಜ್ ಆಗೇ ಸ್ವೀಕರಿಸುತ್ತೇನೆ' ಎಂದು ಮನದಲ್ಲೇ ಸದ್ದು ಹೊಡೆದೆ; ಮೇಲೆದ್ದು ನಡೆದೆ.

ಏಕಾಂತಕ್ಕೊಂದಿಷ್ಟು ಹುರುಪು ತಂದುಕೊಳ್ಳುವಂತೆ ಮನಸ್ಸಲ್ಲಿ ಮೂಡಿದ ರಾಗರಂಜಿನಿ ಆಲಾಪವನ್ನೇ ಗುನುಗುತ್ತಾ ಮುನ್ನಡೆದೆ. ಅದೇ ಹಳ್ಳ, ಹರಿವ ನೀರು, ಕಲ್ಲು ಬಂಡೆ, ಮುಗಿಲ ಮರ; ಅದೂ ಇದೂ ಹಕ್ಕಿ, ಕೀಟ.. ನೋಡಿ, ಸಾಕಾಗಿ ತಲೆ ಬಗ್ಗಿಸಿ ನಡೆಯುತ್ತಿದ್ದೆ. ಅಲ್ಲೆಲ್ಲೋ ಒಂದೆಡೆ ಇದ್ದಕ್ಕಿದ್ದಂತೆ ಹಕ್ಕಿ ಶಿಳ್ಳು. ಜೊತೆಗೊಬ್ಬರು ಸಿಕ್ಕಿದಂತಾಗಿ ಖುಷಿಯಾಗಿ ತಲೆ ಎತ್ತಿದೆ. ಓ! ಇದಾ! ಜೇನು ಹಕ್ಕಿ!!

ಇದು ಇದೆಯಲ್ಲಾ; ಇದೊಂದು ಪಾಕಡಾ ಹಕ್ಕಿ. ಇದಕ್ಕೆ ಜೇನು ತುಪ್ಪ ತಿನ್ನಬೇಕು; ಹುಟ್ಟಿನಲ್ಲಿನ ಮೊಟ್ಟೆ ಹುಳು ಮುಕ್ಕಬೇಕು.. ಅನ್ನೋ ಆಸೆ ಆದರೆ, ಹುಳು ಕಚ್ಚುವ ಭಯಕ್ಕೆ ತಾನಾಗಿ ಹತ್ತಿರ ಹೋಗಬಾರದು. ಬೇರಾವುದಾದರೂ ಪ್ರಾಣಿಯೋ, ನಮ್ಮಂತಹವರೋ ಅದಕ್ಕೆ ನೆರವಾಗಬೇಕು. ಮಾಡಬೇಕಾದುದಿಷ್ಟೆ: ಅದು ಕರೆದಲ್ಲಿ ಹೋಗಬೇಕು. ಹೌದು; ಅದು ಸಿಳ್ಳೆ ಹಾಕುತ್ತಾ ಹೋದಂತೆ, ಹಿಂಬಾಲಿಸಿದರೆ ಅಲ್ಲೊಂದೆಡೆ ಜೇನು ಗ್ಯಾರಂಟಿ.

ಎತ್ತಾದರೂ ಹೋಗಬೇಕು; ಇತ್ತೇ ಹೋದರೆ ತಪ್ಪೇನು? ದಣಿದ ಮನಕ್ಕೆ ಒಂದಿಷ್ಟು ಜೇನಾದರೂ ಸಿಕ್ಕೀತು ಎಂದು ತೀರ್ಮಾನಿಸಿ, 'ನಡಿ ಮಗನೇ ಬತ್ತೀನಿ..' ಅನ್ನುತ್ತಾ ಹೊರಟೆ. ಅಲ್ಲಲ್ಲಿ ಕೊಂಬೆ ಮೇಲೆ ಕೂರುತ್ತಾ, ಕೂಗುತ್ತಾ, ನಾನು ಸರಿ ದಾರಿಯಲ್ಲಿ ಹತ್ತಿರ ಬಂದಂತೆ, ಹಾರುತ್ತಾ ಎತ್ತೋ ಕರೆದೋಯ್ತು. ತಲೆ ಎತ್ತಿ ನೋಡುತ್ತಾ ನಡೆದೆ, ನೆಲ ಹಾದಿಯ ಅರಿವಿರದೆ.

ಅಲ್ಲೊಂದೆಡೆ ತುಸು ಬಯಲು. ಅಲ್ಲಲ್ಲಿ ಬಂಡೆ; ಕುರುಚಲು ಗಿಡ; ಬೆಳೆದ ಹುಲ್ಲು. ಒಂದು ಗಿಡದ ಕೊಂಬೆ ಮೇಲೆ ಕುಳಿತು ಅಲ್ಲೇ ಕೂಗುತ್ತಿತ್ತು. ನಾನು ಹತ್ತಿರ ಬಂದರೂ ಮತ್ತೆ ಮುಂದೆ ಹಾರಲಿಲ್ಲ. ಅಂದರೆ, ಅಲ್ಲೇ ಎಲ್ಲೋ ಜೇನಿದೆ. ಹುಡುಕಬೇಕು; ಇನ್ನು ನನ್ನ ಬುದ್ಧಿಶಕ್ತಿ ಖರ್ಚು ಮಾಡಬೇಕು. ಅದೂ ಒಂಥರಾ ಛಾಲೆಂಜ್. 'ಆಯ್ತು, ಮಗನೇ...' ಅಂತ, ಬೆನ್ನ ಮೇಲಿನ ಬ್ಯಾಗು ತೆಗೆದು, ಜಿಪ್ಪು ಎಳೆದು, ಕೈಲಿದ್ದ ಕ್ಯಾಮರಾವ ಹಾಗೇ ಅದರೊಳಗಿಟ್ಟು –ಇಲ್ಲಿ ಇನ್ನಾರು ಬಂದಾರು, ಅಂತ– ಹಾಗೇ ಹುಲ್ಲಿನ ಮೇಲೇ ಕಾಣುವಂತಿಟ್ಟು, ಹುಡುಕ ಹೊರಟೆ.

ಜೇನು ಎಲ್ಲಾದರೂ ಇರಬಹುದು. ಮರದ ಪೊಟರೆ ಕೊಂಬೆ, ಗಿಡದ ಪೊದೆ, ಹುತ್ತ, ಕಲ್ಲು ಬಂಡೆ ನಡುವೆ.. ಹೀಗೆ ಸದ್ಯ ನೀರಿನ ಒಳಗಂತೂ ಇರುವುದಿಲ್ಲ. ಚಿಟ್ಟೆಜೇನು, ತುಡುಬೆಜೇನು, ಕೋಲುಜೇನು, ಹೆಜ್ಜೇನು, ನಸರಿಜೇನು.. ಇತ್ಯಾದಿ. ಈ ಹಕ್ಕಿ ನಸುರಿ ಜೇನಿಗಂತೂ ಬರಲಾರದು. ಗುಬ್ಬಚ್ಚಿ ಹೊಡೆದರೆ ಹೆಬ್ಬೆರಳಷ್ಟೂ ಬಾಡು ಸಿಗದಲ್ಲ; ಹಾಗೆ. ಅಂತೂ, ನಮ್ಮ ಲೋಕಜ್ಞಾನ ಬಳಸಿ ಹುಡುಕಬೇಕು.

ಜೇನು ಕುರುಬರು, ಸೋಲಿಗರಂತಹ ಕಾಡಿನ ಜೀವಿಗಳು ಜೇನು ಬೇಟೆಯಲ್ಲಿ ಪರಿಣತರು. ನಾನೊಬ್ಬ ಹಳ್ಳಿ ಒಕ್ಕಲು ಮಗ. ಚಿಕ್ಕಂದಿನಲ್ಲಿ ಬೇಸಿಗೆಯ ಧಗೆಗೆ ಬಾವಿ, ಕಟ್ಟೆಯಲ್ಲಿ ಈಜು ಹೊಡೆದು, ಜೇನು ಹುಡುಕ ಹೋಗುತ್ತಿದ್ದುದು ನೆನಪಾಯಿತು. ಜೇನು ಹುಡುಕುವ ಉಪಾಯವನ್ನು ಜೊತೆಯ ಅನುಭವಿಗಳು ಹೇಳಿಕೊಟ್ಟಿದ್ದೂ ಆಗಲೇ. ಅದೊಂದು ರೀತಿ ಸುಲಭವೇ. ನಡು ಬಿಸಿಲಲಿ ನಿಂತು ಗಿಡ, ಪೊದೆ, ಹುತ್ತಗಳ ಮೇಲೆ ಕಣ್ಣಿಟ್ಟು ದಿಟ್ಟಿಸಿದರೆ, ಹುಳುಗಳು ಹೊರ ಹೋಗುವುದು, ಬರುವುದು ಕಾಣುತ್ತದೆ. ಒಂದೇ ಜಾಗದಲ್ಲಿ ಅದು ನಡೆಯುತ್ತಿದ್ದರೆ ಅಲ್ಲಿ ಗೂಡಿರುವುದು ಕುರುತೇಟು. ಹಾಗೇ ಮಾಡಿದೆ. ಹಕ್ಕಿ ತಲೆ ಅತ್ತ ಇತ್ತ ತಿರುಗಿಸಿ ಕೂಗುತ್ತಲೇ ಇತ್ತು. ಗಿಡಗಳ ಹತ್ತಿರ ಹೋಗಿ, ಅಲ್ಲಲ್ಲಿ ನಿಂತು ಕೊಂಬೆ, ಪೊದೆ ಮೇಲೆ ಕಣ್ಣಿಟ್ಟು ಸುತ್ತಾ ತಿರುಗಿದೆ.

ವಾಹ್! ಅಲ್ಲೊಂದು ಪೊದೆ ಮೇಲೆ ಹುಳು ಗುಂಡಾಗಿ ಆಡುತ್ತಿದ್ದವು. ಸರಿ; ಹತ್ತಿರ ಹೋಗಿ. ನಿಧಾನಕ್ಕೆ ಎಚ್ಚರಿಕೆಯಿಂದ ಎಲೆ, ಕೊಂಬೆ ವಾರೆ ಮಾಡಿ, ಕಣ್ಣಾಡಿಸಿದೆ. ಕರ್ರನೆಯ ಗೂಡು ಕಣ್ಣಿಗೆ ಬಿತ್ತು. ಬಿಸಿಲಿಗೆ ಹುಳುಗಳ ಮೈ ಮಿಂಚುತ್ತಿತ್ತು. ಚಿಟ್ಟೆ ಜೇನು; ಸ್ವಲ್ಪ ದೊಡ್ಡದಾಗೇ ಇತ್ತು. ಆದರೂ, ಭಯವಿಲ್ಲ. ಏಕೆಂದರೆ ಅದು ಕಚ್ಚುವುದು ಕಡಿಮೆ; ಕಚ್ಚಿದರೂ ಜೀವವಂತೂ ಹೋಗುವುದಿಲ್ಲ.

ಆದರೂ ಮುನ್ನೆಚ್ಚರಿಕೆಯಿಂದ, ಕಣ್ಣಿಗೆ ಕನ್ನಡಕ ಹಾಕಿಕೊಂಡು, ಮೈಮೇಲಿನ ಜರ್ಕಿನ್‌ನಿಂದ ಆದಷ್ಟೂ ತಲೆ, ಮುಖ ಮುಚ್ಚಿಕೊಂಡು, ಹತ್ತಿರ ಬಾಗಿ, ಕೊಂಬೆ ಹಿಡಿದು ಜೋರಾಗಿ ಉರುಬಿದೆ. ಬೆದರಿದ ಹುಳು ಹಿಂದೆ ಸರಿದು ಮೇಲೆದ್ದವು.

ಹಳದಿ ಬಣ್ಣದ ಕೊಡ ತುಂಬಿತ್ತು. ಮೊಹರು ಒಡೆದಿರಲಿಲ್ಲ. ಇನ್ನೇನು ಅಮಾವಾಸ್ಯೆಯೋ, ಹುಣ್ಣಿಮೆಯೋ ಹತ್ತಿರ ಬಂದಿದ್ದರೆ, ಮರಿಹುಳು ಜೇನು ಕುಡಿದುಬಿಡುತ್ತಿದ್ದವು..

ಅಲ್ಲೇ ದೊಡ್ಡ ಎಲೆಯೊಂದನ್ನು ಕಿತ್ತು ಜೊನ್ನೆಯಾಗಿ ಮಾಡಿಕೊಂಡು ಅದಕ್ಕೆ ತುಪ್ಪ ತುಂಬಿಕೊಳ್ಳಲು ಮುಂದಾದೆ. ಕೊಡದಲ್ಲಿ ಬೆರಳು ಹಾಕಿ, ಒಂದಿಷ್ಟೇ ಮೀಟಿ ತೆಗೆದು, ಬಾಯಿಗಿಟ್ಟೆ. ವಾಹ್! ಅದ್ಭುತ. ಹಾಗೆ ಕೊಡ ಒಡೆದದ್ದೇ, ಒಳಗಿನ ತಾಜಾ ಜೇನು ತೂತು ಕೊಡದಿಂದ ಎಣ್ಣೆ ಹರಿದಂತೆ ಬಳಬಳ ಸೋರ ತೊಡಗಿತು. ಛೇ; ವೇಸ್ಟಾಗುತ್ತಲ್ಲಾ ಅಂತ ಆತಂಕ ಆಗಿ, ಆತುರದಿಂದ ಕೊಂಬೆ ತುದಿ ಬಾಗಿಸಿ ಎಳೆದು ಕೊಡಕ್ಕೆ ಕೈ ಹಾಕಿ ಜೋರಾಗಿ ಗೋರಲು ಹೋದರೆ, ಕೊಂಬೆಯೇ ಪಟಕ್ಕನೆ ಮುರಿಯಿತಲ್ಲಾ; ಸಿವನೇ!

ಇನ್ನೇನು ಮಾಡುವುದು ಅಂತ, ಜತನದಿಂದ ಎತ್ತಿ, ಬಯಲಿಗೆ ತಂದೆ. ಬಂಡೆ ಮೇಲೆ ಕುಳಿತು ಕೊಡವನ್ನೆಲ್ಲಾ ಕೆರೆದು, ಎಲೆ ತುಂಬಿದೆ. ಅಷ್ಟೊತ್ತಿಗೆ ಹಕ್ಕಿಯೂ ಕೂಗುತ್ತಾ ಒಂದಿಷ್ಟು ಸನಿಹ ಬಂದು ಸಣ್ಣ ಬಂಡೆ ಮೇಲೆ ಬಾಲ ಕುಣಿಸುತ್ತಾ ಕೂತಿತು. 'ಥ್ಯಾಂಕ್ಸ್ ತಗೋ ನಿನ್ನ ಪಾಲು' ಅಂತ ಅದಕ್ಕೊಂದಿಷ್ಟು ಕೊಡದ ಉಂಡೆ ಎಸೆದೆ. ಲಾರ್ವ ಹುಳುಗಳಿದ್ದ ರೊಟ್ಟಿಗೂಡನ್ನೂ ಅದರತ್ತ ಎಸೆದೆ. ಅದು ಹತ್ತಿರ ಬಂದು ಕುಕ್ಕಿ ತಿಂದು, ಒಂದೊಂದು ಗುಕ್ಕಿಗೂ ಬಾಲ ಕುಣಿಸಿ, ಖುಷಿಗೊಂಡಿತು.

ಅವನೂ ಇದ್ದರೆ, ಪಾಪ ತಿನ್ನುತ್ತಿದ್ದನಲ್ಲಾ ಅಂತ ಅನ್ನಿಸಿದರೂ, ನನ್ನನ್ನು ಬಿಟ್ಟು ಹೋದವನಿಗೆ ಹೀಗೇ ಆಗಬೇಕು.. ಅಂದು, ಚೆನ್ನಾಗಿ ಚಪ್ಪರಿಸಿದೆ. ಹೊಟ್ಟೆ ತುಂಬಿ, ದೇಕು ಬಂತು. ಕಾಡಿಗೆಲ್ಲಾ ಪ್ರತಿಧ್ವನಿಯಾಗುವಂತೆ ದೇಕಿದೆ. ಅಷ್ಟಾಗುತ್ತಿದ್ದಂತೆ ಕೈ ಬಾಯೆಲ್ಲಾ ಅಂಟಂಟು.. ತೊಳೆಯಬೇಕು.. ಮರುಘಳಿಗೆಯೇ ಒಂದುಕಡೆ ತಗ್ಗು ಕಾಣಿಸಿತು. ಹೋದೆ. ಸದ್ಯ ಸಣ್ಣ ಝರಿ ಹರಿಯುತ್ತಿತ್ತು. ಜೇನು ತಿಂದು ನೀರು ಕುಡಿದರೆ ತಂಪು ಎಂದೋ, ಉಷ್ಣ ಎಂದೋ ಚಿಕ್ಕಂದಿನಲ್ಲಿ ಹೇಳುತ್ತಿದ್ದದ್ದು ನೆನಪಿಗೆ ಬಂದು ಗೊಂದಲವಾಯಿತು. ಏನಾದರಾಗಲಿ ಅಂತ ಒಂದಿಷ್ಟು ಕುಡಿದು ಬಿಟ್ಟೆ.

ಮುಖಕ್ಕೆ ನೀರು ಎರಚಿಕೊಂಡದ್ದರಿಂದ ಒಂದಿಷ್ಟು ಹಾಯ್ ಅನ್ನಿಸಿತು. ಕಣ್ಣು ಮುಚ್ಚಿ, ಅದೇ ಹಿತ ಅನುಭವಿಸುತ್ತಾ ನಿಧಾನಕ್ಕೆ ಬ್ಯಾಗಿನತ್ತ ಬಂದೆ. ಕ್ಯಾಮರಾ ಅಲ್ಲೇ ಇತ್ತು. ಅದೂ ಒಂದು ಸಂತೋಷ ಆಗಿ ಏನೋ ವಿಜಯ ಸಾಧಿಸಿದಂತೆ. ಬಲಗೈಲಿ ಕ್ಯಾಮೆರಾ, ಎಡಗೈಲಿ ಬ್ಯಾಗು ಹಿಡಿದು, ಹೆಗಲಿಗೆ ಹಾಕಲು ಮೇಲೆತ್ತಿದರೆ.. ಅವ್ವಯ್ಯಾ! ಹಾವು! ಬ್ಯಾಗಿನ ಕೆಳಗೆ ನೆರಳಿಗೆಂಬಂತೆ ಮಲಗಿಬಿಟ್ಟಿದೆ!! ಅಥವಾ, ಒಳ ಹೊಕ್ಕು ಈಚೆ ಬಂದಿತ್ತೋ..!

ಹಿಂದೆ ಮುಂದೆ ನೋಡದೆ ವಾಟ ಕಿತ್ತೆ. ಎತ್ತ–ಏನು ಅನ್ನೋದಕ್ಕೂ ಗಮನ ಕೊಡದೆ, ಕಣ್ಣು ಮುಚ್ಚಿಯೇ ಓಡಿದೆ. ಯಾವ ಕಡೆ, ಎಷ್ಟು ದೂರ ಅನ್ನೋ ಅರಿವೂ ಇರದೆ. ಏದುಸಿರು ಬಂದು, ಕಾಲು ಸುಸ್ತಾದಲ್ಲೇ ನಿಂತಿದ್ದು. ನೋಡಿದರೆ ದಿಕ್ಕು ತಪ್ಪಿದ ಅನುಭವ!

ಇಳಿಜಾರು ಸಿಕ್ಕ ಕಡೆ ಓಡಿ ಬಂದಿದ್ದೆ. ಸುತ್ತ ಕಣಿವೆಯಂಥಾ ಜಾಗ; ಅಲ್ಲಲ್ಲಿ ದೊಡ್ಡ ಬಂಡೆ. ಹೋಗಬೇಕಾದ ಜಾಗ ಇರಲಿ; ಬಂದ ದಾರಿಗೆ ವಾಪಸ್ಸು ಹೋಗುವುದೂ ಆಗದೇನೋ ಎಂಬ ಅಧೀರತೆ. ತಲ್ಲಣಗೊಂಡೆ. ಈಗೇನು ಮಾಡುವುದು?

ಸುತ್ತ ಏನಾದರೂ ಕಂಡೀತೇನೋ.. ಅಂತ ಮೆಲ್ಲಗೆ ಕೋಡುಗಲ್ಲೊಂದನ್ನು ಏರಿದೆ. ದೂರದಲ್ಲೆಲ್ಲಾದರೂ ಕಾಲು ದಾರಿಯ ಸುಳಿವಾದರೂ ಕಂಡೀತೇನೋ ಅಂತ. ಕ್ಯಾಮೆರಾವನ್ನೇ ದುರ್ಬೀನಾಗಿಸಿಕೊಂಡು, ಕಣ್ಣ ಬಳಿ ಹಿಡಿದು ಹುಡುಕಾಡುತ್ತಿದ್ದೆ. ತಟ್ಟನೆ ಕೇಳಿ ಬಂತೊಂದು ಅಕ್ರೋಶದ ಕಿಡಿನುಡಿ:

'ಇಲ್ಲೂ ಬಂದ್ರಾ, ನಮ್ಮ ಜೀವ ತಿನ್ನೋಕೆ.. ತಗೀಬ್ಯಾಡ್ರಿ ನಮ್ಮ ಪೋಟೋನ'

ಆಶ್ಚರ್ಯ ಅಲ್ಲ; ಭಯಾನೇ ಆಯ್ತು. ಎದೆ ಧಿಲ್ಲೆನಿಸಿ ಬೆವತು ಬಿಟ್ಟೆ. ದಿಕ್ಕಿಲ್ಲದ ಕಾಡಿನಲ್ಲಿ ಯಾರೋ ಮಹಿಳೆಯ ಆಕ್ರೋಶ! ಜೊತೆಗೇ ಕೇಳಿ ಬಂದದ್ದು ಅಳುವ ಕಂದನ ಆಲಾಪ! ಕ್ಯಾಮೆರಾ ಸರಿಸಿ ದನಿ ಬಂದತ್ತ ಹುಡುಕಿದೆ.

ಅಷ್ಟು ದೂರದ ಬಂಡೆಗಳ ಸಂಧಿಯಲಿ ಅವಿತಂತೆ ನಿಂತ ಯಾರೋ ತರುಣಿಯತ್ತ ಕಣ್ಣು ನಿಧಾನಕ್ಕೆ ಫೋಕಸ್ ಆಯಿತು. ಕ್ಯಾಮರಾವನ್ನು ಕೊರಳಿಗೆ ಇಳಿಬಿಟ್ಟು, ಕೈ ಕಟ್ಟಿ ಒಂದು ಕ್ಷಣ ಹಾಗೇ ನಿಂತೆ.

'ಮತ್ತೇನು ನೋಡುತ್ತೀರಾ? ಹೋಗಿ; ಈ ಕಡೆ ಬಂದರೆ ಜೋಕೆ..' ಬಂಡೆ ಮರೆ ಅವಿತುಕೊಂಡೇ ಆಕೆ ಮತ್ತೆ ಗದರಿಸಿದಳು.

ಈಕೆ ಯಾರು? ಹೀಗೇಕೆ ಮಾಡುತ್ತಿದ್ದಾಳೆ..? ಹೇಗೆ ಗೊತ್ತಾಗಬೇಕು.. ಅದೂ ಇಲ್ಲಿಗೆ ಆಕೆ ಬಂದದ್ದಾದರೂ ಏಕೆ?

ಯಾರಾದರೂ ನಕ್ಸಲರು ಇರಬಹುದಾ? ಅರಣ್ಯ ಲೂಟಿಯ ತಂಡದವರಿಂದ ಬೇರ್ಪಟ್ಟಿರಬಹುದಾ..? ಒಂಟಿ ಹೆಣ್ಣಂತೂ ದಾರಿ ತಪ್ಪಿ ಈ ಕಡೆ ಬರುವುದು ಸಾಧ್ಯವಿಲ್ಲವಲ್ಲಾ.

ಅತ್ತಲಿಂದ ಗುಂಡೇಟು ಏನಾದರೂ ತೂರಿ ಬಂದರೆ ಏನಪ್ಪಾ ಗತಿ..! ನೆನಪಾಗುತ್ತಿದ್ದಂತೇ ಕಾಲುಗಳು ಗಡಗಡ ನಡುಗಿಬಿಟ್ಟವು. ಹಾಗೇ ಕುಸಿದು, ಕೂತು ಬಿಟ್ಟೆ. ದನಿ ಎಲ್ಲಾ ಒಣಗಿತು. ಆದದ್ದಾಗಲಿ ಎಂದು ಅತ್ತಲೇ ಕಣ್ಣಾಡಿಸಿದೆ. ಬೇರಾರ ಸುಳಿವೂ ಕಾಣಲಿಲ್ಲ. ಆಕೆಯ ಕೈಲಿ ಮಗು ಬಿಟ್ಟು, ಬಂದೂಕು ಇತ್ಯಾದಿ ಯಾವ ಹತಾರವೂ ಕಾಣಲಿಲ್ಲ. ಹೆಚ್ಚೆಂದರೆ, ಆಕೆ ಒಂದು ಕಲ್ಲನ್ನು ನನ್ನತ್ತ ಬೀಸಿಯಾಳು..! ಅದೂ ಅಪಾಯವೇ..!

ಕ್ಷಣಹೊತ್ತು ಸುಮ್ಮನಿದ್ದು ಕೊನೆಗಿಷ್ಟು ಧೈರ್ಯ ತಂದುಕೊಂಡು ಗೋಗರೆದೆ. 'ದಯಮಾಡಿ ಕ್ಷಮಿಸಿ. ನಾನು ನಿಮ್ಮ ಫೋಟೋ ತೆಗಿಯೋಕೆ ಬರಲಿಲ್ಲ. ಆಕಸ್ಮಾತ್ ದಾರಿ ತಪ್ಪಿದೆ. ಪ್ಲೀಸ್ ಊರು ಕಡೆ ಹೋಗೋಕೆ ದಾರಿಯನ್ನಾದರೂ ತೋರಿಸಿ.. ಹಿಂದಿರುಗಿ ನೋಡದೆ ಹೋಗಿ ಬಿಡುತ್ತೇನೆ..' ಆಕೆಗೆ ನಂಬಿಕೆ ಬರುವುದು ಸಾಧ್ಯವೇ ಇರಲಿಲ್ಲ. 'ನಿಮ್ಮಂಥಾ ಪಾಪರಾಜಿಗಳ ಆಟ ಇಲ್ಲಿ ನಡೆಯೋಲ್ಲ; ಹುಷಾರ್..' ಮತ್ತೆ ಅಬ್ಬರಿಸಿ ಎಚ್ಚರಿಕೆ ನೀಡಿದಳು.

ಅಯ್ಯೋ! ಈಗೇನು ಮಾಡುವುದು! ಆಕೆಯನ್ನು ನಂಬಿಸದಿದ್ದರೂ ಬೇಡ; ಇಲ್ಲಿಂದ ತಪ್ಪಿಸಿಕೊಂಡು ಹೋಗುವ ದಾರಿಯಾದರೂ ತಿಳಿದರೆ ಸಾಕಲ್ಲ. ಅದಕ್ಕಾಗಿಯಾದರೂ ಮಾತಾಡಿಸಲೇಬೇಕು. ಕೊನೆಗೊಂದು ಉಪಾಯ ಮಾಡಿ ಕೂಗಿದೆ: 'ಖಂಡಿತಾ ನನ್ನ ಮೇಲೆ ಅನುಮಾನ ಪಡಬೇಡಿ, ನಾನು ನಿಮ್ಮನ್ನು ಹುಡುಕಿ ಬಂದವ ಅಲ್ಲ. ನಿಮ್ಮ ಫೋಟೋವೂ ನನಗೆ ಬೇಕಿಲ್ಲ. ದಯಮಾಡಿ ನನಗೆ ಇಲ್ಲಿಂದ ಆಚೆ ಹೋಗುವ ದಾರಿ ತೋರಿಸಿ.. ಪ್ಲೀಸ್..'

ಹಾಗೆ ಹೇಳುತ್ತಲೇ ಮೆಲ್ಲನೆ ಕೆಳಗೆ ಜಾರಿ, ಎರಡೂ ಕೈ ಮೇಲೆತ್ತಿ ಶರಣಾಗತನಂತೆ ಆಕೆಯತ್ತ ಹೆಜ್ಜೆ ಹಾಕಿದೆ. ಆಕೆ ಒಂದಷ್ಟು ಅಳುಕಿದಂತೆ ಪ್ರತಿಭಟಿಸಲೂ ಆಗದಂತೆ ಬಂಡೆ ಮರೆಗೆ ಸರಿದಳು. ನಾನು ಸ್ವತಃ ಹೆದರಿದವನಂತೆ, ವಿನೀತನಂತೆ ಮೆಲ್ಲಗೆ ಸ್ವಲ್ಪ ಮುಂದೆ ಹೋಗಿ, ನಿಂತೆ. ಬಂಡೆ ಮರೆಯಿಂದ ಆಕೆಯ ಮುಖ ಮಾತ್ರ ನನ್ನತ್ತ ನೋಡುತ್ತಿದ್ದದ್ದು ಕಾಣಿಸುತ್ತಿತ್ತು.

ಈಕೆ ಹೀಗೇಕೆ ಹೆದರಿದ್ದಾಳೆ? ಏನಿದ್ದಿರಬಹುದು ಕತೆ?.. ಎಂಬಿತ್ಯಾದಿ ಪ್ರಶ್ನೆಗಳು. ಯಾರಿಗೆ ಕೇಳುವುದು? ಅವಳನ್ನಂತೂ ಮಾತಾಡಿಸುವುದೇ ಸಾಧ್ಯವಿಲ್ಲದಂತಹ ಪರಿಸ್ಥಿತಿ..

ಮೆಲ್ಲಗೆ ವಾರೆಗಣ್ಣಲ್ಲೆಂಬಂತೆ ಆಕೆ ಮುಖವನ್ನೇ ದಿಟ್ಟಿಸಿದೆ. ಆಶ್ಚರ್ಯ! ಅವಳೇ ಇವಳಾ..!!

ಕೆಲವೇ ದಿನಗಳ ಹಿಂದೆ ಈಕೆಯದೇ ಸುದ್ದಿಯಾಗಿತ್ತಲ್ಲಾ, ಟೀವಿಗಳಲ್ಲಿ, ಪತ್ರಿಕೆಗಳಲ್ಲಿ! ಸಾರ್ವಜನಿಕ ಚರ್ಚೆಯ ವಿಷಯವಾಗಿಯೂ ಜನರ ಬಾಯಿ ತುಂಬಿತ್ತಲ್ಲಾ! ಎಲ್ಲದರ ಪರಿಣಾಮ, ಮನೆಯವರ ವಿರೋಧವೂ ಹೆಚ್ಚಾಗಿ ಇವರಿಬ್ಬರೂ ಕಾಣೆಯಾದ ಸುದ್ದಿಯೂ ದೊಡ್ಡ ಪತ್ತೇದಾರಿ ಸುದ್ದಿಯಾಗಿತ್ತಲ್ಲಾ..! ಆಕೆಯೇ ಅಲ್ಲವೇ ಇವಳು? ಹಾಗಾದರೆ, ಅವನೆಲ್ಲಿ..?

ಸದ್ಯ ನಕ್ಸಲರಾಗಲೀ, ಕೇಡಿಗಳಾಗಲೀ ಅಲ್ಲವೆಂಬುದು ಖಾತ್ರಿಯಾದಂತೆ, ಧೈರ್ಯವೂ ಬಂದಂತಾಯಿತು. ಹಾಗೆಂದು ನೇರವಾಗಿ ಪ್ರಶ್ನಿಸಿದರೆ ಸತ್ಯ ಹೊರ ಬೀಳದೆಯೂ ಇರಬಹುದು. ಉಪಾಯ ಮಾಡಿದೆ:

'ಮೇಡಂ, ನೀವು ಯಾರೆಂದು ನನಗೆ ಈಗ ಅರ್ಥವಾಯಿತು. ಆದರೆ ಸತ್ಯ ಹೇಳ್ತೀನಿ: ನಾನು ನಿಮ್ಮನ್ನು ಹುಡುಕಿ ಬಂದವನಲ್ಲ; ಅಚಾನಕ್ಕಾಗಿ ದಾರಿ ತಪ್ಪಿ ಬಂದೆ. ನಿಮ್ಮ ಬದುಕಿನ ಬಗ್ಗೆ ಕೆದಕುವುದು ನನಗೂ ಇಷ್ಟವಿಲ್ಲ. ಆದರೆ, ಒಂದು ಕುತೂಹಲಕ್ಕಾಗಿ, ಸಾಮಾಜಿಕ ಕಾಳಜಿಗಾಗಿ ಒಂದು ಪ್ರಶ್ನೆ ಕೇಳುತ್ತೇನೆ. 'ನೀವು ಹೀಗೇಕೆ ಮಾಡಿದಿರಿ..?'

ತಕ್ಷಣ ಆಕೆ ಮುನ್ನುಗ್ಗಿ ಬಂದು ರೇಗಿದಳು:

'ಏನು ಏನು ಮಾಡಿದ್ದು? ಜಗತ್ತಿನಲ್ಲಿ ಯಾರೂ ಮಾಡದ್ದು ನಾವೇನು ಮಾಡಿದ್ದೇವೆ? ನೀವೂ ಅದೇ ಕೇಳ್ತೀರಾ..?

ಶಟಪ್ ಅಂಡ್ ಗೆಟೌಟ್ ಫ್ರಂ ಹಿಯರ್..

'ದಯಮಾಡಿ ಕೋಪ ಮಾಡಿಕೋಬೇಡಿ. ಹೇಳಲು ಇಷ್ಟವಿಲ್ಲದಿದ್ದರೆ ಹೋಗಲಿ, ಆದರೆ ನಿಮ್ಮೊಬ್ಬ ಆಪ್ತನಂತೆ ತಿಳಿದಾದರೂ ಹೇಳಿದರೆ, ಕೇಳಿ ಹೋಗಿ ಬಿಡುತ್ತೇನೆ. ನೀವು ಸಾಮಾಜಿಕವಾಗಿ ನಿಷಿದ್ಧವಾದ್ದನ್ನ ಮಾಡಬಹುದಾ..?'

'ಮತ್ತದೇ ಕೇಳ್ತೀರಲ್ಲ? ನಾವೇನು ಮಾಡಿದ್ದು..? ಒಂದು ಹೆಣ್ಣು, ಒಂದು ಗಂಡು ಮೆಚ್ಚಿ ಒಂದಾಗೋದು ತಪ್ಪಾ?'

'ಅದು ತಪ್ಪಲ್ಲ. ಆದರೆ ಅಣ್ಣ-ತಂಗಿಯರು..?'

'ಮತ್ತದೇ ಹೇಳ್ತೀರಿ. ಅವರೂ ಗಂಡು-ಹೆಣ್ಣು ಅಲ್ಲವಾ? ಗಂಡು-ಗಂಡೇ, ಹೆಣ್ಣು-ಹೆಣ್ಣೇ. ಇಷ್ಟಪಟ್ಟು ಮದುವೆ ಆಗ್ತಿದ್ದಾರೆ. ಇಂಥಾ ಕಾಲದಲ್ಲಿ ನಾವು ಹಾಗೆ ಮಾಡಿಲ್ಲವಲ್ಲ..'

'ಹಾಗಲ್ಲ. ಅಣ್ಣ-ತಂಗಿಯರೇ..?'

'ಇದೂ ಹೊಸದೇನೂ ಅಲ್ಲ; ಆಡಂ-ಈವ್ ಯಾರು? ಯಮ-ಯಮೆ ಮಾಡಿದ್ದು ಏನು? ನಿಮ್ಮ ಪುರಾಣಗಳ ತುಂಬಾ ಇಂಥಾ ಬೇಕಾದಷ್ಟು ನಿದರ್ಶನಗಳಿವೆ. ಅಂಥಾ ಪುರಾಣಗಳನ್ನು ಪೂಜೆ ಮಾಡೋ ನೀವು, ಅದನ್ನೇ ನಾವು ಮಾಡಿದರೆ ತಪ್ಪು ಅನ್ತೀರಿ; ಶಿಕ್ಷೆ ಕೊಡಬೇಕು.. ಅಂತೀರಿ.'

'ಅಷ್ಟಕ್ಕೂ ಇದು ನಮ್ಮ ವೈಯಕ್ತಿಕ ವಿಷಯ. ನಾವು ಬೇರಾರಿಗೂ ಮೋಸ ಮಾಡಿಲ್ಲ. ಒಬ್ಬರನ್ನೊಬ್ಬರು ಮನಸಾರೆ ಪ್ರೀತಿಸಿದ್ದೇವೆ. ಒಂದಾಗಿದ್ದೇವೆ. ನಿಮ್ಮ ಜತೆ ನಮಗೆ ಜಾಗ ಕೊಡದಿದ್ದರೆ ಕಾಣದ ಕಾಡಿನಲ್ಲಾದರೂ ಬದುಕೋಣ ಅಂತ ಬಂದರೆ, ಇಲ್ಲಿಗೂ ಬೆನ್ನತ್ತಿ ಬರುತ್ತೀರಿ. ನಿಮ್ಮಂಥಾ ನರ ಪ್ರಾಣಿಗಳಿಗಿಂತ, ಈ ಕಾಡಿನ ಜೀವಿಗಳೇ ಎಷ್ಟೋ ಮೇಲು: ಅವು ನಮ್ಮನ್ನು ಎಂದೂ ಪ್ರಶ್ನೆ ಮಾಡಿಲ್ಲ..'

'ಹಾಗಲ್ಲ ಮೇಡಂ..'

'ನೋಡ್ರಿ ಮಿಸ್ಟರ್.. ಹಾಗೂ ಅಲ್ಲ; ಹೀಗೂ ಅಲ್ಲ. ಇಟ್ ಈಸ್ ನನ್ ಆಫ್ ಯುವರ್ ಬಿಸಿನೆಸ್. ನನ್ನ ಗಂಡ ಗೆಡ್ಡೆ ಗೆಣಸು ತರೋಕೆ ಕಾಡಿನೊಳಗೆ ಹೋಗಿದ್ದಾನೆ. ಆತ ಬರೋದರೊಳಗೆ ಇಲ್ಲಿಂದ ಕಾಲು ತೆಗೆದು ಜೀವ ಉಳಿಸಿಕೊಳ್ಳಿ..'

'ಆಯಿತು' -ಎಂದಷ್ಟೇ ಹೇಳಿ. ಹಿಂದಿರುಗಿ ಕ್ಯಾಮರಾ, ಬ್ಯಾಗನ್ನು ಎತ್ತಿಕೊಂಡು, ಮೆಲ್ಲಗೆ ಸಿಳ್ಳೆ ಹಾಕಿಕೊಳ್ಳುತ್ತಾ ಕಾಲು ತಿರುಗಿದ ಕಡೆ ದಾರಿ ಮಾಡಿಕೊಳ್ಳುತ್ತಾ ನಡೆದ.

ಹಿಂದೆ ಯಾವುದೋ ಹಕ್ಕಿಯ ಜೋರು ಸಿಳ್ಳೆ ಬೆನ್ನತ್ತಿದಂತಾಯಿತು.

ಹಿಂದಿರುಗಿದ.. ಎರಡು ತಲೆ ಒಂದೇ ಮೈಯ ಭೇರುಂಡ! ರೆಕ್ಕೆ ಬಿಚ್ಚಿತ್ತು!! ದಿಗಿಲಾಗಿ ದೌಡಾಯಿಸಿದ..

❖

(ಕಥಾಭೂಮಿ – ಜುಲೈ-ಆಗಸ್ಟ್, 2012)

ಅವಳ ಸಂಗ

ಎಚ್.ಬಿ.ಇಂದ್ರಕುಮಾರ್

ಅವಳು ಅಲ್ಲಿದ್ದಾಳೆಂದು ಗೊತ್ತಾದ ತಕ್ಷಣ ಅವನಗೆ ಈವರೆಗೆ ಕಾಡುತ್ತಿದ್ದ ಅನಾಥಭಾವವನ್ನು ಕರಗಿಸಿದ ನಿರುಮ್ಮಳತೆ ಆವರಿಸಿತು. ಹಿಂದಿನಂತೆ ಊಟದ ಹೊತ್ತಿಗೆ ಸಿಹಿ ತುಣುಕೊಂದು ಪ್ರತ್ಯಕ್ಷವಾಗುವ ಆಸೆಯಲ್ಲಿ ಕಾಟಲಿಂಗೇಶಪ್ಪ ಅರ್ಧಮರ್ಧ ಸಂಭ್ರಮಪಟ್ಟ.

ಡೊಳ್ಳುಹೊಟ್ಟೆ ಅಲ್ಲಾಭಕ್ಷಿಯ 'ರುಕ್ಸಾನಾ' ಲೇಡೀಸ್ ಟೈಲರ್ ಶಾಪಿನ ಒಳಗೆ ನುಗ್ಗಿದ್ದ ಮೆರವಣಿಗೆಯ ಗದ್ದಲ ಹಾಗೂ ಮದುವೆ ದಿಬ್ಬಣದ ವಿಶಿಷ್ಟ ವಾಸನೆ, ಏನೋ ಕಳೆದುಕೊಂಡವನಂತೆ ಯಾಂತ್ರಿಕವಾಗಿ ಖಾಜಾ ಮಾಡುತ್ತಿದ್ದ ಕಾಟಲಿಂಗೇಶಪ್ಪನ ಬಡಿದೆಬ್ಬಿಸಿದ್ದವು. ಎಂದಿನಂತೆ ತನ್ನ ಜೀವವಿಲ್ಲದ ಕಾಲುಗಳನ್ನು ಎಳೆದುಕೊಂಡು ಆ ಅಂಗಡಿಯ ದೊಡ್ಡ ಕಮಾನಿನ ಕಿಟಕಿಗೆ ಬಂದು ಕೂತು ಜಂಗು ಹಿಡಿದ ಸರಳುಗಳಿಂದ ಹೊರಕ್ಕೆ ಕೈ ಚಾಚಿಕೊಂಡು ಈಗಷ್ಟೇ ಹೊರಟ ಯಾರದ್ದೋ ಮದುವೆ ದಿಬ್ಬಣದ ಜನರನ್ನು ದಿಟ್ಟಿಸಿದ್ದ. ಆ ಜನರೆದುರು ನಾನೂ ನಿಮ್ಮಲ್ಲಿ ಒಬ್ಬ ಎನ್ನುವಂತಹ ಪುಳಕವನ್ನು ತನ್ನ ದೊಡ್ಡ ಮುಖದ ಚಿಕ್ಕ ಕಣ್ಣುಗಳಲ್ಲಿ ಪ್ರಕಟಪಡಿಸಲು ಸುಲಭವಾಗಿ ಪರಿಚಯವಾಗಬಲ್ಲ ಮುಖಗಳಿಗಾಗಿ ಹುಡುಕ ತೊಡಗಿದ್ದ. ನಿತ್ಯ ಮದುವೆ ಛತ್ರಗಳಲ್ಲಿ ಮದುವೆಗಳು ನಡೆದಂತೆ ನಿತ್ಯ ಗಟ್ಟಿಮೇಳದ ಸದ್ದಿಗೆ ತಲೆಕೆಟ್ಟು ಅಲ್ಲಾಭಕ್ಷಿ ಸಂಡಾಸಿಗೆ ಹೋಗುವ ಸಮಯಕ್ಕೆ ಸರಿಯಾಗಿ ಕಾಟಲಿಂಗೇಶಪ್ಪ ಈ ಕೆಲಸ ಮಾಡುತ್ತಿದ್ದ. ಲೇಡೀಸ್ ಟೈಲರ್ ಶಾಪಿನೊಳಗೆ ಖಾಜಾಗುಂಡಿ ಸ್ಪೆಷಲಿಸ್ಟ್ ಆಗಿ ಲೈಫ್‌ಟೈಮ್ ಕೆಲಸ ಮಾಡುತ್ತಿದ್ದವನ ಎರಡೂ ಕಾಲು ಕೈಕೊಟ್ಟು ವರ್ಷವಾದರೂ ಅಪಾರ ಜೀವನಾಸಕ್ತಿಯನ್ನು ತನ್ನ ಕಣ್ಣುಗಳಲ್ಲಿ ಮಿನುಗಿಸುತ್ತಿದ್ದ. ರುಕ್ಸಾನಾ ಟೈಲರ್ ಶಾಪಿನ ಮೂಲೆಗಳಲ್ಲಿ ಬಿದ್ದಿರುತ್ತಿದ್ದ ತುಂಡು ಬಟ್ಟೆಗಳಂತೆ ಎಲ್ಲೋ ಒಂದು ಕಡೆ ರಾವಿಕೊಂಡು ಮಲಗಿಬಿಡುತ್ತ, ಮಧ್ಯ ರಾತ್ರಿ ಎಚ್ಚರವಾದರೆ ಮತ್ತೇನೂ ಮಾಡಲು ಆಗದ, ತೋಚದ ಸ್ಥಿತಿಯಲ್ಲಿ ಮತ್ತೆ ಖಾಜಾ ಗುಂಡಿ ಮಾಡುತ್ತಾ, ತುಂಡು ಬಟ್ಟೆಗಳಲ್ಲಿ ಬುಡ್ಡಿಚೀಲ ಹೊಲಿಯುತ್ತ ಅಲ್ಲಾಭಕ್ಷಿಯ ಹೆಚ್ಚಿನ ಲಾಭಕ್ಕೆ ಕಾರಣನಾಗುತ್ತಿದ್ದ. ನಿರಂತರವಾಗಿ ಕೆಲಸ ಮಾಡಿ ಹುಟ್ಟಿದ ಬೇಸರಕ್ಕೆ ಮತ್ತೂ ಅದೇ ಕೆಲಸವನ್ನು ಮಾಡಿಯೇ ಸರಿಪಡಿಸಿಕೊಳ್ಳುತ್ತಿದ್ದ ಕಾಟಲಿಂಗೇಶಪ್ಪ ವಿಚಿತ್ರ ವ್ಯಕ್ತಿತ್ವ ಅಲ್ಲಾಭಕ್ಷಿಯ ವಿಚಿತ್ರವಾಗಿ ಕಾಡಿರಲಿಲ್ಲ. ತನಗೆ ಮದುವೆಯಾಗಿದ್ದೇ ಸುಳ್ಳೆಂಬಂತೆ ಆಗಿಹೋಗಿದ್ದ ಕಾಟಲಿಂಗೇಶಪ್ಪನಿಗೆ ತನ್ನ ಹೆಂಡತಿಯ ಮುಖ ಎಂದೂ ನೆನಪಾಗುತ್ತಿರಲಿಲ್ಲ. ಭಾವನೆಗಳಿಗೆ ಸ್ಪಂದಿಸುವ ಜೀವವೇ ಆಗಿರಲಿಲ್ಲ ಅದು. ಹೀಗಾಗಿ

ತಾನು ಮದುವೆಯೇ ಆಗಿಲ್ಲವೆಂದು ಎಲ್ಲೆಡೆ ಹೇಳಿಕೊಳ್ಳಲು ಪ್ರಾರಂಭಿಸಿ ಅದು ನಿಜವೇ ಎನ್ನುವಂತಾಗಿ ಬಿಟ್ಟಿತ್ತು.

ವರ್ಷದ ಹಿಂದೆ ನಡೆದ ಘಟನೆ. ಯಾರನ್ನೂ ಸುಲಭಕ್ಕೆ ನಂಬದ ರಸಿಕರ ರಾಜ ಅಲ್ಲಾಭಕ್ಷಿಗೆ ಅದೇನು ಮೆಚ್ಚುಗೆಯಾಗಿತ್ತೋ, ಆ ಕ್ಷಣಕ್ಕೆ ಕಳ್ಳನಂತೆ ಗೋಚರಿಸುತ್ತಿದ್ದ ಕಾಟಲಿಂಗೇಶಪ್ಪನ ತನ್ನ ಟೈಲರ್ ಅಂಗಡಿಯೊಳಗೆ ಬಿಟ್ಟುಕೊಂಡಿದ್ದ. ಜೋರು ಮಳೆಗೆ ಹೊರಗೆ ನಡುಗುತ್ತ ಒಂದೇ ಕಾಲಿನ ಮೇಲೆ ಭಾರ ಬಿಟ್ಟುಕೊಂಡು ನಿಂತಿದ್ದ ಕಾಟಲಿಂಗೇಶಪ್ಪನ ಒಳಗೆ ಬಂದು ಕೂರುವಂತೆ ಹೇಳಿದ್ದ ಅಲ್ಲಾಭಕ್ಷಿಗೆ ಒಂದೇ ಘಂಟೆಯ ಅವಧಿಯೊಳಗೆ ತಾನು ಸರಿಯಾದ ಕೆಲಸವನ್ನೇ ಮಾಡಿದ್ದೇನೆ ಅನ್ನಿಸುವಂತೆ ಈವರೆಗೆ ಮುಕ್ತಿ ಕಾಣದ ಎಲ್ಲ ಜಾಕೀಟುಗಳ ಹುಕ್ಸ್ ಹಾಕಿಮುಗಿಸಿದ್ದ ಈ ಅಪರಿಚಿತ ಅತಿಥಿ. ಅಲ್ಲಾಭಕ್ಷಿಯ ಬಾಯಲ್ಲಿ 'ಲಿಗ್ನೇಸಪ್ಪಾ' ಆದ ಇವನು ನಾಲ್ಕು ತಿಂಗಳಲ್ಲಿ ತನ್ನ ಇನ್ನೊಂದು ಕಾಲಿನ ಸ್ವಾಧೀನವನ್ನೂ ಕಳೆದುಕೊಂಡು ಖಾಯಂ ಆಗಿ ರುಕ್ಸಾನಾ ಶಾಪಿನೊಳಗೇ ಹೂತುಹೋಗಿಬಿಟ್ಟಿದ್ದ. ನಾಲ್ಕು ತಿಂಗಳಲ್ಲಿ ರುಕ್ಸಾನಾ ಟೈಲರ್ ಶಾಪಿನ ಆದಾಯ ನಲವತ್ತು ಪಟ್ಟು ಹೆಚ್ಚಾಗಿ, ಗಿರಾಕಿಗಳು ಇಪ್ಪತ್ತು ಪಟ್ಟು ಹೆಚ್ಚಾಗಿ ಬಿಟ್ಟಿದ್ದರು. ಅಲ್ಲಾಭಕ್ಷಿಯ ಅಲ್ಲಲ್ಲಿ ಆಡಾಡಿ ಬರುವ ಗುಣಕ್ಕೆ ರೋಸಿಹೋಗಿದ್ದ ಉಮ್ಮೆಸಲ್ಮಾಳಿಗೆ ಈತ ನೋವು ತೋಡಿಕೊಳ್ಳುವ ಗೋಡೆಯಂತಾದ. ಖಾಜಾ-ಗುಂಡಿ ಹೊಲಿದುಕೊಡುತ್ತಾ, ಹೊಸ ಸಿನಿಮಾದ ಚಿತ್ರಗಳನ್ನು ಕತ್ತರಿಸಿ ಅಂಟಿಸುತ್ತಾ, ಅಲ್ಲಾಭಕ್ಷಿ ಇಲ್ಲದಿದ್ದಾಗ, ಹಿಡಿದು ಹೊಡೆಯಲು ಬಂದ ಗಿರಾಕಿಗಳ ಸಮಾಧಾನ ಮಾಡುವ ಹಾಗೂ ಅಲ್ಲಾಭಕ್ಷಿಯ ಪರಮಾಸಕ್ತಿಯ ಕಾಮೋತ್ತೇಜಕ ಪೋಲೀ ಜೋಕ್ಸ್‌ಗಳನ್ನು ಹೇಳುತ್ತ ಕಾಟಲಿಂಗೇಶಪ್ಪ ಎರಡು ಕಾಲು ಕಳೆದುಕೊಂಡರೂ ಆ ಮನೆಗೆ ಭಾರವೆನಿಸದೇ ಉಳಿದುಕೊಂಡು ಬಿಟ್ಟಿದ್ದ. ಕಾಲುಗಳ ಸ್ವಾಧೀನ ತಪ್ಪಿ ಸ್ಥಾವರಕ್ಕಿಳಿದ ಬದುಕನ್ನು ತನ್ನ ವಿಶೇಷ ಕೌಶಲಗಳ ಮೂಲಕ ಚಾಲನೆ ನೀಡಿದ್ದ. ಆಘಾತಗಳನ್ನು ನೀರು ಕುಡಿದಷ್ಟು ಸಲೀಸಾಗಿ ತೆಗೆದುಕೊಳ್ಳುತ್ತ ಸುತ್ತಲಿನ ಜನರಿಗೂ ಪರೋಕ್ಷವಾಗಿ ಮಾದರಿಯಂತಾಗಿದ್ದ.

ಕೆಂಪುಹಂಚಿನ ಎತ್ತರದ ಮಾಡಿನ ಐವತ್ತು ವರ್ಷಗಳಷ್ಟು ಹಳೆಯ ಬಿಲ್ಡಿಂಗಿನಲ್ಲಿ ಹುಟ್ಟಿಕೊಂಡಿದ್ದ ರುಕ್ಸಾನಾ ಟೈಲರ್ ಶಾಪ್ ಕಂ ಮನೆಗೆ ಕಂ ಬೀಡಿ ಕಟ್ಟುವ ಮಿನಿ ಫ್ಯಾಕ್ಟರಿಗೆ ಅಲ್ಲಾಭಕ್ಷಿ ಮತ್ತು ಉಮ್ಮೆಸಲ್ಮಾ ಒಡೆಯರು. ಅವರಿಗೆ ಮೂರುವರ್ಷದ ಮಗ ಸಿಂಬಳದ ಸರದಾರ ಆಸೀಫ್. ರುಕ್ಸಾನಾ ಟೈಲರ್ ಶಾಪಿಗೆ ಬಂದ ಐದಾರು ಕೆಲಸಗಾರರು ಅಲ್ಲಾಭಕ್ಷಿ ಕೈಯಲ್ಲಿ ಏಗಲಾರದೇ ತಿಂಗಳೆನ್ನುವುದರೊಳಗೆ ಸಂಬಳವನ್ನೂ ಕೇಳದೇ ಓಡಿಹೋಗಿದ್ದರು. ಕೆಲಸಕ್ಕೆ ಬಂದು ಸೇರಿಕೊಂಡಾಗ ಅವರಿಗೆ ಅದೇನು ರೋಗ ಬರುತ್ತಿತ್ತೋ ಏನೋ, ಏನಾದರೊಂದನ್ನು ಕದ್ದು ಸಿಕ್ಕುಬೀಳುತ್ತಿದ್ದರು. ಹಾಗಾಗಿಯೇ ಅಲ್ಲಾಭಕ್ಷಿ ಸುಲಭಕ್ಕೆ ಯಾರನ್ನೂ ನಂಬುತ್ತಿರಲಿಲ್ಲ. ಕಾಟಲಿಂಗೇಶಪ್ಪ

ಇರಲು ಪ್ರಾರಂಭಿಸಿ ಒಂದು ವರ್ಷ ಕಳೆದಿದ್ದರೂ ಒಂದು ಸೂಜಿಯೂ ಕಾಣೆಯಾಗಿರಲಿಲ್ಲ. ಕಸದಲ್ಲೇ ಕಳೆದುಹೋಗುತ್ತಿದ್ದ ಟೈಲರ್ ಅಂಗಡಿ ಸಾಮ್ರಾಜ್ಯದ ಸೂಜಿ, ಹುಕ್ಸ್, ಗುಂಡಿಗಳನ್ನು ಹುಷಾರಾಗಿ ತೆಗೆದಿಡುತ್ತ, ಗಂಡ ಹೆಂಡಿರಿಬ್ಬರೂ ಇದ್ದಕ್ಕಿದ್ದಂತೆ ಮಧ್ಯಾಹ್ನದ ಹೊತ್ತು ಬ್ಯುಸಿಯಾದಾಗ ಆಸೀಫನ ದೇಖರೇಖಿ ಮಾಡುತ್ತ, ಅವನ ಸಿಂಬಳ ಒರೆಸುತ್ತಾ, ಮುಕಳಿ ತೊಳೆಯುತ್ತ ಸಮಗತಿಯ ತನ್ನ ಬದುಕಿನ ದಿನಗಳನ್ನು ಕಳೆಯುತ್ತಿದ್ದ ಕಾಟಲಿಂಗೇಶಪ್ಪ. ಅಳತೆಗೆಂದು ಬಂದ ಹೆಂಗಳೆಯರೆದುರು ಎಗ್ಗಿಲ್ಲದೆ ಪ್ರಾರಂಭವಾಗುತ್ತಿದ್ದ ಅಲ್ಲಾಭಕ್ಷಿಯ ಕಾಮುಕ ಕಣ್ಣುಗಳ ಕುಚೇಷ್ಟೆಯನ್ನು ಅರ್ಧದಲ್ಲೇ ತುಂಡರಿಸಿ ಪರಿಸ್ಥಿತಿ ಹಗುರಾಗಿಸಿ ಉಮ್ಮೆಸಲ್ಮಾಳ ಮಾಂಗಲ್ಯಭಾಗ್ಯ ಕಾಪಾಡುತ್ತ, ಯಾವ ಹಬ್ಬವೆಂದೂ, ಯಾವುದರ ಮಾಂಸವೆಂದೂ ಕೇಳದೇ ಕೊಟ್ಟಿದ್ದನ್ನು ಸುಮ್ಮನೆ ತಿಂದು ಬಿಡುತ್ತ ಯಾರಾದರೂ ಸಾಕಬಲ್ಲ ರೀತಿಯಲ್ಲಿ ಫ್ಲೆಕ್ಸಿಬಲ್ ಆಗಿಹೋಗಿದ್ದ. ಹಾಗಾಗಿ ಕಳ್ಳನಲ್ಲದ ಏಕೈಕ ಅರ್ಹತೆಯೇ ಮುಖ್ಯವಾಗಿ ಈ ಅಂಗಡಿಯೊಳಗೆ ಜಾಗ ಪಡೆದುಕೊಂಡ ಕಾಟಲಿಂಗೇಶಪ್ಪ ಪರಮ ಕಳ್ಳನಾಗಿದ್ದ. ಆಸೀಫನ ಪೆಪ್ಪರಮೆಂಟು, ಚಾಕಲೇಟು, ಲಾಲಿಪಾಪ್‌ಗಳನ್ನು ಕದ್ದು ಮುಕ್ಕುತ್ತಿದ್ದುದು ಯಾರಿಗೂ ಗೊತ್ತಾಗಿರಲಿಲ್ಲ.

ಇಂದಿನ ಮದುವೆ ಯಾರೋ ದೊಡ್ಡ ಪಾರ್ಟಿಯದ್ದೇ ಇರಬೇಕು, ಏನು ಜನ, ಏನು ಗದ್ದಲ ಅಂತಾ ಕಿಟಕಿಯಿಂದಲೇ ಗ್ರಹಿಸಿದವನಿಗೆ ಇಂದಾದರೂ ವಾರದಿಂದ ದಕ್ಕದ ಲಾಡೂ ಒಂದು ಸಿಕ್ಕುಬಿಡಲಿ ಎಂಬ ವಿನಂತಿಯ ಮುಖಭಾವವಿತ್ತು. ದೇವರು ಕಣ್ಣು ಬಿಟ್ಟಂತೆ ಆಕೆ ತನ್ನ ಕಣ್ಣನ್ನು ಇವನೆಡೆ ಬಿಟ್ಟು ಇವನ, ಇವನ ಕಣ್ಣು ಹೊರಳಿ ಆಕೆಯ ನೋಡಿಬಿಟ್ಟಿದ್ದರು. ಮೆರವಣಿಗೆಯಲ್ಲಿ ಆಕೆಯನ್ನು ಕಂಡಾಕ್ಷಣ ತಿಕ್ಕಲು ಮೈ ಏರಿದಂತೆ ಕಂಬಿ ಹಿಡಿದೇ ಮೈಕುಲುಕಿಸಿ ಸಂತಸ ವ್ಯಕ್ತಪಡಿಸಿದ ಕಾಟಲಿಂಗೇಶಪ್ಪನ ಸಿಹಿಯ ಹುಚ್ಚಿಗೆ ಆಕೆಯೇ ಪರಮಗುರು.

ತಿನ್ನಲು ಗತಿಯಿಲ್ಲದೇ ಬೆಳೆದರೂ ಊಟದಲ್ಲಿ ಸಿಹಿಯಾದದ್ದೂ ಏನಾದರೂ ಇರಲೇ ಬೇಕೆಂಬಂತೆ ಅವನ ಬದಲಾಯಿಸಿದ್ದ ಆಕೆ ಹತ್ತು ವರ್ಷಗಳ ನಂತರ ಈ ಮದುವೆಯ ದಿಬ್ಬಣದಲ್ಲಿ ಕಂಡಿದ್ದಳು. ಹಾಗೆ ಸಿಹಿಗಾಗಿ ಬದುಕುವ ಬಾಳು ಸೃಷ್ಟಿಯಾದ ಸಮಯವೂ ಅಂತಹುದಿತ್ತು. ಮದುವೆ ಮನೆಗಳಲ್ಲಿ ಲಾಡೂ ಕಟ್ಟಲು ಹೋಗುತ್ತಿದ್ದವಳು ಬಿಸಿ ಬಿಸಿ ಲಾಡೂ ತಂದು ತಿನ್ನಿಸಲು ಪ್ರಾರಂಭಿಸಿ, ನಿತ್ಯ ಒಂದಲ್ಲ ಒಂದು ರೀತಿಯ ಸಿಹಿ ತಿಂಡಿಗಳನ್ನು ಅವನಿಗೆ ಪರಿಚಯಿಸಿದ್ದಳು. ಅವಳಿದ್ದ ಓಣಿಯಲ್ಲಿನ ಯಾವುದಾದರೂ ಮನೆಯಲ್ಲಿ ಏನಾದರೂ ಶುಭ ಸಮಾರಂಭಗಳು ಅವಳನ್ನು ಕರೆಸಿಕೊಂಡು ಶಾವಿಗೆ ಪಾಯಸದಲ್ಲಿ ಕೈಯಾಡಿಸುತ್ತ ಕೂರುವಂತೆಯೋ, ಕೇಸರಿಬಾತಿಗಾಗಿ ರವೆ ಹುರಿಯಲು ನಿಲ್ಲಿಸಿಯೋ, ಜಿಲೇಬಿಗಾಗಿ ಹಿಟ್ಟನ್ನು ಹದವಾಗಿ ಕಲಸುತ್ತಿರುವಂತೆಯೋ ಮಾಡಿಬಿಟ್ಟಿದ್ದವು. ಮಧುರಲೋಕದ ಈ ಕೆಲಸ ಮುಗಿದ

ನಂತರ ತನಗೆ ಸಿಕ್ಕ ಅಷ್ಟಷ್ಟು ಸಿಹಿ ತಿಂಡಿಗಳನ್ನು ಬ್ಯಾಂಕಿನಿಂದ ಹಣದ ಪೆಂಡಿ ಕಟ್ಟಿಕೊಂಡು ಬರುವ ಭಾವದಲ್ಲಿ ಕಟ್ಟಿಕೊಂಡು ಬರುತ್ತಿದ್ದಳು. ರಾತ್ರಿ ಊಟಕ್ಕೆ ತಪ್ಪಿಸದೇ ಅವನು ಬಂದಾಕ್ಷಣ ಮನೆಯಲ್ಲಿದ್ದ ಏಕೈಕ ಸ್ಟೀಲ್ ತಟ್ಟೆಗೆ ತನ್ನ ಇಂದಿನ ಮಹಾನ್ ಸಾಧನೆ ಎಂಬಂತೆ ಸಂಭ್ರಮದಿಂದ ಸಿಹಿಯನ್ನು ಬಡಿಸುತ್ತಿದ್ದಳು. ಆ ಕ್ಷಣದಲ್ಲಿ ಅವಳ ಮುಖದಲ್ಲಿ ಎಂತಹುದೋ ನಿರುಮ್ಮಳತೆ. ಯಾವುದೋ ತೀರದ ದಾಹ ತೀರಿದಂತೆ ಹೊಮ್ಮುತ್ತಿದ್ದ ಸಮಾಧಾನಭಾವವನ್ನು ಅವನು ಅರ್ಥ ಮಾಡಿಕೊಂಡಿರಲಿಲ್ಲ.

ಅವಳು ಇವನಿಗಾಗಿ ಈ ಸಿಹಿಸಂತರ್ಪಣೆಯ ಡ್ಯೂಟಿ ಪ್ರಾರಂಭ ಮಾಡಿದ್ದ ದಿನಗಳಲ್ಲಿ ಸಕ್ಕರೆ ತುಟ್ಟಿಯಾಗಿ ಸಿಹಿ ಅನ್ನುವುದು ಗಗನಕುಸುಮವಾಗಿ ಜನರೆಲ್ಲ ಹೊಸರೀತಿಯ ನೋವಿಗೆ ವಿವಿಧ ರೀತಿಯಲ್ಲಿ ಸ್ಪಂದಿಸುತ್ತಿದ್ದರೆ, ಇವನ ಬದುಕು ಛಿದ್ರವಾಗಿ ಒಡೆದು ಕಹಿ ಕಲಸಿಟ್ಟ ಅನ್ನದಂತಾಗಿ ಹೋಗಿತ್ತು. ಹೊಸ ಸಂಸಾರವನ್ನೂ, ನಿಸ್ಸಾರ ಬದುಕನ್ನೂ ಏಕ್ ಧಂ ಬದಲಿಸಿಬಿಡಲು ಯೋಚಿಸಿದ್ದವನ ಯೋಜನೆ ಕೈಗೂಡುವ ಮೊದಲು ನಿಧಾನ ಪರಿವರ್ತನೆಗೊಳ್ಳುವಂತೆ ಈ ಖಾದ್ಯ ಮಾಡಿತ್ತೆಂದು ಈಗಲೂ ಅವನಿಗೆ ನಂಬಲಾಗುತ್ತಿರಲಿಲ್ಲ. ಆದರೆ ಅಂತಹ ದುಬಾರಿಯ ಸಮಯದಲ್ಲೂ ಆಕೆ ಮಾಡಿದ ಕೆಲಸ ಫಲಕೊಟ್ಟಿತ್ತು. ಮೋಡಿಗೆ ಒಳಗಾದವನಂತೆ ಹೋಳಿಗೆ ಮೆಲ್ಲುತ್ತ, ಪಾಯಸದ ತಟ್ಟೆ ನೆಕ್ಕುತ್ತ, ಹಲ್ವಾ ಬಾಯಲ್ಲಿ ಕರಗುವುದ ಗಮನಿಸುತ್ತ ತನ್ನೆಲ್ಲ ಅಸಹನೆಗಳ ಮೇಲೆ ನಿಯಂತ್ರಣ ಸಾದಿಸತೊಡಗಿದ್ದ. ಎಲ್ಲೇ ಇದ್ದರೂ ರಾತ್ರಿ ಊಟಕ್ಕೆ ಓಡಿ ಬರುತ್ತ ಬಿಸಿ ಗೋಧಿ ಉಗ್ಗಿಯ ಅಮಲಿನಲ್ಲಿ ಅನಿಷ್ಟ ಯೋಚನೆಗಳನ್ನು ಕೈಬಿಡತೊಡಗಿದ. ಆದರೆ ಅಕಸ್ಮಾತ್ ಅಂದಿನ ಊಟದಲ್ಲಿ ಸಿಹಿ ಇಲ್ಲದೇ ಹೋದರೆ ತನ್ನ ಪಾಲಿನ ಏಕೈಕ ಸುಖಕ್ಕಾಗಿ ಧರಣಿ ಕೂರುವಂತೆ ಕೂಗಾಡಿಬಿಡುತ್ತಿದ್ದ. ಒಂದಿಷ್ಟು ಬೇಳೆ ಬೇಯಿಸಿ ಬೆಲ್ಲ ಕಲಸಿಯಾದರೂ ಆಕೆ ಕೊಡಲೇ ಬೇಕಿತ್ತು.

ಆ ತರಹದ ದರ್ಬಾರು ನಡೆಸಿ, ಅಂತವಳ ಸಂಗ ತೊರೆದು ಹತ್ತು ವರ್ಷಗಳಾಗಿಹೋಗಿದ್ದವು. ಅವಳ ಸಂಗದಲ್ಲಿ ಕಂಡುಕೊಂಡ ಜೀವನದ ಪ್ರೀತಿಯ ಸಿಹಿಯೂಟವನ್ನು ಅವಳ ತೊರೆದ ನಂತರದ ದಟ್ಟದಾರಿದ್ರ್ಯದ ಏಕಾಂಗಿ ಜೀವನದಲ್ಲೂ ಸಾಕಿಕೊಂಡು ಬಂದಿದ್ದ. ಬೇಕರಿಯಲ್ಲಿ ಕೇಕು ಬೇಯಿಸುತ್ತ, ಶಾವಿಗೆ ಮಾರುತ್ತ, ಬಸ್ ಸ್ಟಾಂಡಿನಲ್ಲಿ ನಿಂಬೆಹುಳಿ ಪೆಪ್ಪರಮೆಂಟು ಮಾರುತ್ತ ಸಿಹಿಯ ವಾಸನೆಯಲ್ಲೇ ಹೇಗೋ ದಿನ ತಳ್ಳಿದ್ದ. ಆದರೆ ಐದು ವರ್ಷಗಳಿಂದೀಚೆ ಕಾಲುಗಳಲ್ಲಿ ಶಕ್ತಿ ಕ್ಷೀಣಿಸಿ ಓಡಾಡಲು ಕಷ್ಟವಾದಾಗ ತನ್ನ ಹೆಳವ ದೇಹವನ್ನು ಪೋಷಿಸುವ ಜಾಗಕ್ಕಾಗಿ ಹುಡುಕಾಡುತ್ತಾ ಹುಡುಕುತ್ತಾ ಕೊನೆಗೆ ಇಲ್ಲಿಗೆ ಬಂದು ನಿಂತಿದ್ದ.

ಆದರೆ ಸಿಹಿಯನ್ನು ದ್ವೇಷಿಸುವಂತೆಯೇ ಇತ್ತು ಅಲ್ಲಾಭಕ್ಷಿಯ ಮನೆ. ಖಾರವಾದದ್ದು ಎಷ್ಟು ಬೇಕಾದರೂ ಮಿಕ್ಕಿದೆ ತಿನ್ನು ಅನ್ನುವಂತೆ ನಿತ್ಯ ಗರಮ್ ಮಸಾಲೆಯಲ್ಲೇ ಮುಳುಗೇಳುತ್ತಿದ್ದ ಮನೆಯಲ್ಲಿ ಉಮ್ಮೇಸಲ್ಮಾ ವರ್ಷಕ್ಕೆರಡು ಬಾರಿ ಮಾತ್ರ ಹಬ್ಬಕ್ಕೆಂದು ಸುರಕುಂಭಿ ಖೀರ್ ಮಾಡುತ್ತಿದ್ದಳು. ಎರಡು ಪಾತ್ರೆಗಳಷ್ಟು ಖೀರನ್ನು ಕಾಟಲಿಂಗೇಶಪ್ಪ ಒಬ್ಬನೇ ಉಸಿರುಕಟ್ಟಿಕೊಂಡು ಗಟಗಟ ಕುಡಿದು ಮುಗಿಸುವುದನ್ನು ಅಚ್ಚರಿಯಂತೆ ನೋಡುತ್ತಿದ್ದಳು. ನಿತ್ಯ ಮೀನು, ಮಟನ್ನು, ಮೊಟ್ಟೆಗಳಲ್ಲಿ ಹೊರಳಾಡುತ್ತಿದ್ದ ಅಲ್ಲಾಭಕ್ಷಿ ಮನೆಯಲ್ಲಿ ಅಕಸ್ಮಾತ್ ಪ್ರತ್ಯಕ್ಷವಾಗುವ ಖೀರಿನಲ್ಲಿ ಕಾಟಲಿಂಗೇಶಪ್ಪ ಕೈಲಾಸ ಕಾಣುತ್ತಿದ್ದ. ಋಣ ತೀರಿಸುವಂತೆ ಅಂದು ಮಾತ್ರ ನಿದ್ರೆಗೆಟ್ಟು ಕೆಲಸ ಮಾಡುತ್ತಿದ್ದ. ಆದರೆ ಮನೆಯಲ್ಲಿ ಬೆಲ್ಲ ಒಂದು ಕೇಜಿ ಹೆಚ್ಚಿಗೆ ತರಿಸಿದರೆ ಹಳೆಯ ಹೆಂಚು ಹಾರಿ ಬೀಳುವಂತೆ ಕೂಗಾಡುತ್ತಿದ್ದ ಅಲ್ಲಾಭಕ್ಷಿಯ ಕಾರಣವಾಗಿ ತನ್ನ ಸಿಹಿಮೋಹವನ್ನು ಪ್ರಕಟಪಡಿಸದೇ ಮೌನಿಯಾಗಿಬಿಟ್ಟಿದ್ದ. ಇಲ್ಲಿಂದಲೂ ಹೊರಬೀಳಲು ಯೋಚಿಸಿದವನಿಗೆ ಅವನ ದೇಹ ಜೊತೆ ನೀಡಲಿಲ್ಲ. ತನ್ನೊಳಗಿನ ಚಡಪಡಿಕೆಯನ್ನು ಸಹಿಸಿಕೊಳ್ಳುತ್ತಲೇ ದಿನತಳ್ಳತೊಡಗಿದ್ದ.

ಮದುವೆಗೆ ಹೋಗುವ ಜನರ ಜೊತೆ ನಿತ್ಯ ಮಾತಿಗಿಳಿಯುತ್ತಿದ್ದವನ ಕಂಡು 'ವೋ ಭೀ ಕ್ಯಾ ಕರ್ತಾ, ಉಸೆ ಬೆಜ್ಜಾರ್ ಹೋ ರಹಾ' ಅನ್ನುತ್ತಿದ್ದ ಅಲ್ಲಾಭಕ್ಷಿಯ ಗಮನ ಬೇರೆಡೆ ತಿರುಗಿದ್ದೇ ಮಾತಿಗಿಳಿದ ಜನರ ಬಳಿ ತನಗೊಂದು ಲಾಡು ತರುವಂತೆ ಸಭ್ಯತೆಯ ಪರಿಧಿಯಲ್ಲಿ ಅಂಗಾಲಾಚುತ್ತಿದ್ದ. ಹತ್ತು ಜನರಲ್ಲಿ ಒಬ್ಬರಾದರೂ ಕರ್ಚೀಫಿನಲ್ಲಿ ಲಾಡು ಕಟ್ಟಿಕೊಂಡು ತಂದುಕೊಟ್ಟು ಅವನ ಅಭಿರುಚಿಯನ್ನು ರುಚಿಕಟ್ಟಾಗಿ ಕಾಯುತ್ತಿದ್ದರು. ಉಳಿದಂತೆ ದಿವ್ಯ ಮೌನದಲ್ಲಿ ಗಾಢ ಏಕಾಗ್ರತೆಯಲ್ಲಿ ಬ್ಲೌಸ್‌ಗಳ ರಾಶಿಯಲ್ಲೇ ಹುಕ್ಸ್, ಸೂಜಿ, ದಾರದಲ್ಲಿ ಕಳೆದುಹೋಗುತ್ತಾ ನಾಲ್ಕು ಜನ ಕೆಲಸಗಾರರ ಕೆಲಸ ಒಬ್ಬನೇ ಮಾಡಿಬಿಡುತ್ತಿದ್ದ. ವರ್ಷಕ್ಕೊಮ್ಮೆ ಖುಷಿಯಾಗುತ್ತಿದ್ದ ಅಲ್ಲಾಭಕ್ಷಿ ಎಂಟಾಣೆಯ ಎರಡು ಗಾರಿಗೆ ತರಿಸಿ, ಅವನ ಬಾಯಿ ಸಿಹಿ ಮಾಡಿ ಪುಣ್ಯ ಕಟ್ಟಿಕೊಳ್ಳುತ್ತಿದ್ದ. ಆದರೆ ನಾಲ್ಕು ತಿಂಗಳಿನಿಂದ ಮತ್ತೆ ಸಕ್ಕರೆ ಬೆಲ್ಲದ ಬೆಲೆ ಕೈಗೆಟುಕದಂತಾಗಿ ಕಾಟಲಿಂಗೇಶಪ್ಪನ ಜೀವವೇ ಕರಗಿಹೋಗತೊಡಗಿತ್ತು. ಆರು ತಿಂಗಳು ಯಾವುದೋ ತಕರಾರಿಗೆ ನಿಲ್ಲಿಸಿದ್ದ ಮದುವೆ ಛತ್ರ ಮತ್ತೆ ತೆರೆದುಕೊಂಡಿತ್ತು. ತೆರೆದುಕೊಂಡ ಮೊದಲ ಮದುವೆಯ ದಿಬ್ಬಣದಲ್ಲೇ ಆಕೆ ಕಂಡದ್ದು ಅವನಲ್ಲಿ ಏನೆಲ್ಲಾ ಭಾವಗಳನ್ನು ತಂದೊಡ್ಡಿತ್ತು. ಇನ್ನು ಇಷ್ಟೇ ನನ್ನ ಜೀವನ ಅಂದುಕೊಂಡಿದ್ದವನು ಒಮ್ಮೆ ತನ್ನಿಡೀ ದೇಹವನ್ನು, ಬುದ್ಧಿಸ್ಮರಣೆಯನ್ನೂ ಕೊಡವಿಕೊಂಡು ಹೊಸತಾಗಿ ಯೋಚಿಸಲು ಪ್ರಾರಂಭಿಸಿಬಿಟ್ಟಿದ್ದ.

ಬಿಸಿಲು ಬೆವರನ್ನು ಹೊತ್ತು ಸಂಭ್ರಮದ ಅವಸರದಲ್ಲಿದ್ದ ಜನರದ್ದು ಅಪೂರ್ವ ಮಿಶ್ರಣವಾಗಿರುತ್ತಿತ್ತು. ಅಪರೂಪಕ್ಕೆ ಉಟ್ಟಿದ್ದ ಸೀರೆಯ ರವಿಕೆ ಕಚ್ಚಿದಂತೆ ಎಲ್ಲೋ

ಹಿಡಿದುಕೊಂಡಂತೆ, ಇನ್ನೆಲ್ಲೋ ಜಾರಿದಂತೆ ಹಾಗೂ ತಮ್ಮದೇ ಮದುವೆಯೆಂಬಂತೆ ಅರಳಿದ ಮುಖದಲ್ಲಿದ್ದ ಹೆಣ್ಣುಮಕ್ಕಳ ಗುಂಪಿನಲ್ಲಿ ಅಕಸ್ಮಾತ್ ಅವಳ ಕಂಡಿದ್ದ ಕಾಟಲಿಂಗೇಶಿಗೆ ಅವಳಿದ್ದ ಹೇಲುಕೊಂಪೆ ಗಬ್ಬುನಾತಕ್ಕಿಂತಾ ಅವಳು ತಂದಿಡುತ್ತಿದ್ದ ಬೆಂಡು ಬತ್ತಾಸು ಬರ್ಫಿಗಳು ನೆನಪಾಗಿಬಿಟ್ಟವು. ಜೀವನದಲ್ಲಿ ಏನೇನನ್ನೋ ಕಳೆದುಕೊಂಡಿದ್ದ. ಹೆಂಡತಿ, ಮೈಥುನ ಹಾಗೂ.. ಎರಡು ಕಾಲುಗಳು. ಆದರೆ ಅವೆಲ್ಲವನ್ನೂ ಮೀರಿಸಿದ ಸಿಹಿ ತಿನಿಸು ತಿನ್ನುವ ಖಯಾಲಿ ಅವನ ಹೇಗೋ ಹತಾಶ ಭಾವದಿಂದ ಹೊರಬರಲು ಸಹಾಯಮಾಡುತ್ತಿತ್ತು. ಆ ತರಹದ ವಿಚಿತ್ರ ರೀತಿಯ ಜೀವನಪ್ರೇಮವನು ಕಲಿಸಿಕೊಟ್ಟಾಕೆಯ ಉದ್ದನೆಯ ಬತ್ತಾಸಿನಂತೇ ಇದ್ದ ಮೂಗು ಈಗಲೂ ಹಾಗೇ ಇದ್ದದ್ದು ಗಮನಿಸಿದ. ಬಿಸಿಲು ಮಳೆ ಬಾರಿಸಿದಂತೆ ರಪರಪನೆ ಬಾರಿಸುತ್ತ ಎಲ್ಲರನ್ನೂ ಅವರ ಅರಿಶಿಣ ವಾಸನೆಯ ಹೊಸ ಬಟ್ಟೆಯಲ್ಲೇ ಬೆವೆತು ಮುದ್ದೆಯಾಗುವಂತೆ ಮಾಡಿತ್ತು. ರುಕ್ಸಾನಾ ಟೈಲರ್ ಶಾಪಿನ ಎದುರಿನ ರಸ್ತೆ ಇನ್ನೊಂದು ರಸ್ತೆಗೆ ಅಡ್ಡಲಾಗಿದ್ದು, ಅಲ್ಲಿದ್ದ ಚರಂಡಿಯಲ್ಲಿ ಸೈಕಲ್ಲು ಸಿಕ್ಕಿಕೊಂಡ ಕಾರಣ ಮೆರವಣಿಗೆ ನಿಂತಲ್ಲೇ ನಿಂತು ಬಿಟ್ಟಿತ್ತು. ಇವನ ಗುರುತಿಸಿದ ಆಕೆ ತದೇಕ ಚಿತ್ತದಿಂದ ನೋಡುತ್ತಲೇ ನಿಂತಿದ್ದಳು. ಆ ಅಸಂಖ್ಯ ಜನರ ಬೆವೆತ ಮುಖಗಳ ಮಧ್ಯೆ ಉಬ್ಬು ಹಲ್ಲುಗಳ ಗುಳಿ ಕಣ್ಣುಗಳ ಮುಖ ಕಾಟಲಿಂಗೇಶಪ್ಪನಿಗೆ ಅಪ್ಯಾಯಮಾನವಾಗಿ ಕಂಡುಬಿಟ್ಟಿತ್ತು. ಒಂದು ಕ್ಷಣ ಕೂಗಿ ಕರೆವಂತೆ ತನ್ನಿಡೀ ದೇಹವನ್ನು ಎರಡು ಕೈಗಳ ಸಹಾಯದಿಂದ ಎತ್ತಿ ಕಿಟಕಿಯಿಂದ ಹೊರಕ್ಕೆ ಹಾರುವಂತೆ ತರಸಾಡಿದ್ದವನ ಹಾಗೂ ಅವನ ಬಿದ್ದು ಹೋದ ಕಾಲುಗಳ ಅಂತೂ ಆಕೆ ಕಂಡುಬಿಟ್ಟಿದ್ದಳು.

ಅವರಿಬ್ಬರ ಮೊಟ್ಟಮೊದಲ ಭೇಟಿಯಲ್ಲಿ ಅವನಿಗೆ ನಲವತ್ತು ಅವಳಿಗೆ ಐವತ್ತು ವರ್ಷ ವಯಸ್ಸಾಗಿತ್ತು. ಅವಳ ಏಕೈಕ ಮಗಳಿಗೆ ತಾಳಿ ಕಟ್ಟಿದ ಏಕೈಕ ಕಾರಣಕ್ಕೆ ಅವನು ಅವಳ ಕಣ್ಣೆದುರಿದ್ದಷ್ಟು ದಿನ ಪೊರೆದಿದ್ದಳು. ಒಂದು ಕ್ಷುಲ್ಲಕ ಕಾರಣಕ್ಕೆ ಜಗಳ ತೆಗೆದು ರಂಪ ಮಾಡಿಬಿಟ್ಟಿದ್ದಳು. ಅವಳ ಚಿತ್ತಸ್ವಾಧೀನವಿಲ್ಲದ ಮಗಳ ಮದುವೆಯಾಗಿ ಅವಳಿಗೆ ಅಳಿಯನಾಗಿ ಅವಳಿದ್ದ ಹೇಲುವಾಸನೆಯ ಕೊಂಪೆಗೆ ಕಾಲಿಟ್ಟಾಗ, ತನಗೇ ಮದುವೆಯಾದಂತಹ ಸಂಭ್ರಮದಲ್ಲಿದ್ದವಳನ್ನು ಕಂಡು ಬೆರಗಾಗಿದ್ದ. ಇಟ್ಟಂಗಿ, ಸಿಮೆಂಟಿನ ವಾಸನೆಯೂ ತೋರಿಸದಂತೆ ಕಟ್ಟಿಕೊಂಡಿದ್ದ ತಗಡಿನ ಶೆಡ್ಡಿನ ಮನೆಯೊಳಗೆ ಆರತಿ ಎತ್ತಿ ತನ್ನ ಬರಮಾಡಿಕೊಂಡಿದ್ದ ಆಕೆ ಅದೆಷ್ಟು ಚುರುಕಾಗಿ ಕೆಲಸ ಮಾಡುತ್ತಿದ್ದಳು. ಕಾಟಲಿಂಗೇಶಪ್ಪನಿಗೆ ಕೆಲಸದಲ್ಲೇ ಮುಳುಗಿರುವ ಹುಚ್ಚು ಆಕೆಯಿಂದಲೇ ತಗುಲಿರಬೇಕು.

ಗಂಡನ ಕಳೆದುಕೊಂಡು ಎಷ್ಟು ವರ್ಷವಾಗಿತ್ತೋ, ಇದ್ದೊಬ್ಬಳು ಮಗಳ ತಲೆ ಕೆಟ್ಟು ಅವಳ ಕಷ್ಟ ಎಷ್ಟು ಸಹಿಸಿದ್ದಳೋ ಅಂತೂ ಪೇಪರ್ ಹಾಕಿಕೊಂಡಿದ್ದ

ಕಾಟಲಿಂಗೇಶಪ್ಪನ ಯಾರಿಂದಲೋ ಹುಡುಕಿಸಿ ತನ್ನ ಮಗಳ ಪೌಡರು ಬಳಿದ ಚಂದದ ಮುಖ ತೋರಿಸಿ ಮದುವೆ ಮಾಡಿಸಿದ್ದಳು. ಹಾಗೆ ಮದುವೆ ಮಾಡಿಸುವ ಕ್ಷಣದಲ್ಲೂ ಮುಂದೊಂದು ದಿನ ಅಳಿಯನಿಗೆ ಸತ್ಯ ಗೊತ್ತಾಗಿ ಎರಡು ದಿನಕ್ಕೊಮ್ಮೆ ದೆವ್ವ ಮೈಮೇಲೆ ಬಂದಂತೆ ಕೂಗಾಡಿ ಚೀರಾಡಿ ಎದುರಿಗಿದ್ದವರ ಹೊಡೆಯುತ್ತಿದ್ದ ಮಗಳಿಗೂ ಅಳಿಯನಿಗೂ ಬಿರುಕು ಬಿಟ್ಟಾಗ ಏನು ಮಾಡಬೇಕೆಂದೂ ಯೋಚಿಸಿದಂತೆ ಇದ್ದಳು. ಮದುವೆಯಾದ ದಿನ, ಮಾರನೆಯ ದಿನ ಮತ್ತು ಅದರ ಮಾರನೆಯ ದಿನವೂ ಆಕೆಯೇ ತನಗೆ ಊಟಕ್ಕಿಡುತ್ತಾ, ಹಾಸಿಕೊಡುತ್ತಾ, ಕೆಲಸಕ್ಕೆ ಹೋಗಲು ಬೆಳಗ್ಗೆ ನಾಲ್ಕು ಗಂಟೆಗೆ ಎಬ್ಬಿಸಿ, ಟೀ ಕುದಿಸಿ ಕೊಡುವ ಕೆಲಸ ಮುಂದುವರೆಸಿದಾಗ ತನ್ನ ಹೆಂಡತಿ ಇವಳೋ ಅವಳೋ ಎನ್ನುವಂತಹ ಗೊಂದಲಕ್ಕೆ ಸಿಕ್ಕಿದ್ದ. ಅವನಿಗೆ ದಿನದ ದಣಿವು ತಣಿವಂತೆ, ರಾತ್ರಿ ಬಿಸಿ ಬಿಸಿ ಪಾಯಸ ಬಡಿಸಿ ಎಚ್ಚರವಿದ್ದು ಹುಚ್ಚಾಗುವ ಬದಲು ಗಾಢ ನಿದ್ರೆಗೆ ಜಾರುವಂತೆ ಮಾಡುತ್ತಿದ್ದಳು. ಅಂತೂ ಮೂರು ತಿಂಗಳಲ್ಲಿ ಮುನ್ನೂರು ಬಾರಿ ನನಗೆ ಮೋಸ ಮಾಡಿದ್ರಿ ಅಂತಾ ಜಗಳ ಶುರುವಿಟ್ಟುಕೊಂಡವನು ಹೊಡೆದರೂ ಹೊಡೆಸಿಕೊಳ್ಳುವ ಭಾವದಲ್ಲಿ ಸುಮ್ಮನಿದ್ದು ಬಿಡುತ್ತಿದ್ದವಳು, ಅವನೇ ತನ್ನ ಕೂಗಾಟಕ್ಕೆ ತನ್ನ ಮಗಳ ಮರುಳುತನಕ್ಕೆ ಹೊಂದಿಕೊಳ್ಳುವಂತೆ ಮಾಡಿಬಿಟ್ಟಿದ್ದಳು.

ಬೀದಿಯಲ್ಲಿ ಕಣ್ಣುಬಿಟ್ಟಿದ್ದ ಕಾಟಲಿಂಗೇಶಪ್ಪನ ಬದುಕೂ ಅಂತಹುದಿತ್ತು. ಹೇಗೋ ಅವರಿವರ ಬೇಡಿ, ಅವರಿವರ ಜೊತೆ ಸೇರಿ ಹೊಟ್ಟೆಗೊಂದಿಷ್ಟು ಮಾಡಿಕೊಳ್ಳುವುದು ಕಲಿತು ಮೂವತ್ತು ವರ್ಷ ಸವೆಸಿದ್ದ. ಮದುವೆ ಬಗ್ಗೆ ಯಾವ ಭಾವವನ್ನಿಟ್ಟುಕೊಳ್ಳದಿದ್ದವನಿಗೆ ತನ್ನ ನಿತ್ಯದ ದುಡಿಮೆ ಕೈತಗುಲಿದರೆ ಸಾಕೆನ್ನುವಂತೆ ಏಕಾಗ್ರನಾಗಿದ್ದವನು ಮದುವೆಯ ನಂತರ ಪಿಸಿದು ಹೋದ ತನ್ನ ವೈವಾಹಿಕ ಹೊದಿಕೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಲಿಲ್ಲ. ನಿತ್ಯ ಸೂಳೆಯರ ಜೊತೆಗೇ ಸಣ್ಣ ಪುಟ್ಟ ಹಮಾಲಿ ಕೆಲಸಗಳನ್ನು ಮಾಡುತ್ತಿದ್ದವನಿಗೆ ಅನೈತಿಕ ಕಾಮದ ಯಾವ ಟಿಸಿಲೂ ಚಿಗುರಲೇ ಇಲ್ಲ. ಯಾವ ಕೆಲಸವನ್ನಾದರೂ ಮಾಡಿ ಕೈಗಾಸು ಸಂಪಾದಿಸಿ ರಾತ್ರಿಯ ಊಟಕ್ಕೆ ಲಜ್ಜೆಯಿಲ್ಲದವನಂತೆ ಬಂದು ಕೂರುತ್ತಿದ್ದವನ ನೀಯತ್ತನ್ನು ಸೋಲಿಸುವಂತೆ ಅತ್ತೆಯಾದ ಆಕೆ ಬೇಡಿಕೊಂಡಾದರೂ ಸಿಹಿ ತಂದಿಡುತ್ತಿದ್ದಳು. ಅದರ ಕಣಕಣವನ್ನೂ ಜೊಲ್ಲು ಸುರಿಸುತ್ತಾ ಶಬ್ದ ಮಾಡುತ್ತಾ ಕಣ್ಮುಚ್ಚಿ ಆನಂದಿಸುತ್ತಾ ಸವಿಯುತ್ತಿದ್ದವನ ಪರವಶತೆಯನ್ನು ಕಾಯುತ್ತಿದ್ದವಳು ಇದ್ದಕ್ಕಿದ್ದಂತೆ ವಿಚಿತ್ರ ಹುಚ್ಚಿಗೆ ಸಿಕ್ಕಂತೆ ಬದಲಾಗಿಬಿಟ್ಟಿದ್ದಳು. ಐದು ವರ್ಷ ಬಿಡದೇ ಅವನ ಬದುಕಿನ ಮಾಧುರ್ಯವನ್ನು ಕಾದಿದ್ದವಳು, ತನ್ನ ಕಣ್ಣಶಕ್ತಿ ಕ್ಷೀಣಿಸಿ ರವೆಪಾಯಸದಲ್ಲಿನ ಕಲ್ಲು, ಬಿಚ್ಚಿಕೊಳ್ಳುವ ಲಾಡು ಉಂಡೆಗಳ ಕಾರಣವಾಗಿ ಕೆಲಸ ಕಳೆದುಕೊಂಡಿದ್ದು ಅವನಿಗೆ ಹೇಳಿರಲಿಲ್ಲ. ಆನಂತರವೂ ಬೇಡುವುದು ತಪ್ಪದೇ ವಾರಕ್ಕೆ ಎರಡು ಮೂರು ಬಾರಿ ಸಿಹಿ ತಿನ್ನಿಸುತ್ತಾ ಗಂಡನ ಸಾಕುವಂತೆ ಸಾಕಿದ್ದಳು.

ಪಕ್ಕದ ಓಣಿಯ ರಮಣಿಯ ಮನೆಯಲ್ಲಿ ಹೋಳಿಗೆ ತಿನ್ನಲು ಒಬ್ಬನೇ ರಾತ್ರಿ ಹತ್ತು ಗಂಟೆಗೆ ಹೋಗುವವರೆಗೂ ಅವನ ಎಲ್ಲ ಸಿಟ್ಟು ಸೆಡವು, ಬೈಗುಳಗಳನ್ನು ಸಹಿಸಿಕೊಂಡು ಅವನ ಸಾಕಿದ್ದಳು. ಆದರೆ ರಮಣಿ ಮನೆಯಲ್ಲಿ ಪರಮಾನ್ನ ತಿಂದು ಬಂದವನಿಗೆ ರೌದ್ರಾವತಾರದಿಂದ ಸ್ವಾಗತಿಸಿ, ಆ ಕ್ಷಣವೇ ಅವಳ ತಗಡಿನ ಮನೆಯಿಂದ, ಅವಳ ಮನದಿಂದ, ಅವಳ ಬೇವರ್ಸಿ ಬದುಕಿನಿಂದ ಅವನ ಹೊರದೂಡಿದ್ದಳು. ಒಂದು ವಾರ ಅಲ್ಲೇ ಗಿರಕಿ ಹೊಡೆಯುತ್ತಿದ್ದವನಿಗೆ ರಮಣಿ ಏಯ್ಡ್ಸ್ ರೋಗದಿಂದ ಸತ್ತ ಸುದ್ದಿ ತಿಳಿದು ಅಂದು ರಮಣಿಯ ಕೈ ಹೋಳಿಗೆ ತಿಂದ ಬಳಿಕ ರಮಣಿಯ ಜಾರಿದ ಸೆರಗಿಗೆ ತಲೆಕೆಡಿಸಿಕೊಳ್ಳದೇ ಎಂತಹ ಒಳ್ಳೆಯ ಕೆಲಸ ಮಾಡಿದೆ ಎಂಬುದು ಹೊಳೆದಿತ್ತು. ತನ್ನ ಅತ್ತೆಯ ರೌದ್ರಾವತಾರಕ್ಕೆ ಕಾರಣವೂ ಹೊಳೆದು ಬಿಟ್ಟಿತ್ತು. ಆದರೆ ಆಕೆ ಅವನ ಹೊರಗೆ ಹಾಕಿದ್ದ ಘಟನೆ ನೆನೆಪಿಸಿಕೊಂಡವನು ಆ ಗಲ್ಲಿಯನ್ನೇ ಬಿಟ್ಟು ಬಿಟ್ಟಿದ್ದ.

ಆ ಘಟನೆ ನಿನ್ನೆ ಮೊನ್ನೆ ನಡೆದಂತೆ ಅನ್ನಿಸುವಂತಹ ಭಾವದಲ್ಲಿ ಅವಳ ನೋಡುತ್ತಿದ್ದವನಿಗೆ ಅಂತೂ ಜೀವನ ಮತ್ತೆ ತೆರೆದುಕೊಂಡಿತೆನ್ನುವಂತೆ ನಕ್ಕ. ಆಕೆಯೂ ನಕ್ಕು ಅವನಿದ್ದ ಆ ಮನೆ, ಅವನ ಜೋಲು ಕಾಲುಗಳು, ಅವನ ಕಳೆಗುಂದಿದ ಮುಖ ಎಲ್ಲವನ್ನೂ ಗಮನಿಸಿದ್ದಳು. ಆದರೆ ಹತ್ತು ವರ್ಷಗಳ ನಂತರ ಆಕೆ ಸಿಕ್ಕ ಸಂಭ್ರಮವನ್ನು ಆಕೆ ಅವನ ಮನೆಯಿಂದ ಹೊರಗೆ ಹಾಕಿದ ನೆನಪು ಅಳಿಸಿಹಾಕಿತ್ತು. ಆಕೆಯ ಕೊನೆಯ ದರ್ಶನದ ರೌದ್ರಾವತಾರದ ಚಿತ್ರಣ ನೆನಪಾಗಿ ಇನ್ನೂ ಅದು ಆಕೆಗೆ ನೆನಪಿರಬಹುದೋ ಎಂಬ ಅಂಜಿಕೆ ಅವನ ಒಳಗೆ ಮುಳ್ಳಾಡಿಸತೊಡಗಿತು.

ಅಲ್ಲಾಭಕ್ಷಿ ಯಾವಾಗಲೋ ಬಂದು ಬರ್‍ರೆನ್ನುವ ರಾಟೆಯನ್ನು ತಿರುಗಿಸಲು ತೊಡಗಿದ್ದ. ನಿನ್ನೆ ರಾತ್ರಿ ಎರಡು ಗಂಟೆಯವರೆಗೆ ತನ್ನ ಜೊತೆ ಕ್ರಿಕೆಟ್ ಮ್ಯಾಚ್ ನೋಡುತ್ತಲೇ ಎಂಟು ಜಾಕೀಟುಗಳಿಗೆ ಪೀಸು ಕಟ್ ಮಾಡಿದ್ದ ಕಾಟಲಿಂಗೇಶಪ್ಪನಿಗೆ ಅವನ ಲೋಕದಿಂದ ಕರೆತರದೇ ಸುಮ್ಮನಿದ್ದ ಅಲ್ಲಾಭಕ್ಷಿ. ಆಕೆ ನಿಂತೇ ಇದ್ದಳು, ಮೆರವಣಿಗೆ ಆಗಲೇ ಹೋಗಿತ್ತು. ಅವಳ ಹಿಂದೆ ಮತ್ತೊಂದು ಮೆರವಣಿಗೆ ಇತ್ತು. ಛತ್ರದಿಂದ ಅರ್ಧ ಕಿಲೋಮಿಟರ್ ದೂರದಲ್ಲಿದ್ದ ಸ್ಮಶಾನದ ಕಡೆ ಹೊರಟಿದ್ದ ಮೆರವಣಿಗೆಯ ಭಾಗವಾಗಿದ್ದಾಕೆ ಅಂತೂ ಅವನ ಕಂಡದ್ದೇ ದೊಡ್ಡ ಸಾಧನೆ ಮಾಡಿದಂತೆ ದುಡುದುಡು ಮೆಟ್ಟಿಲೇರಿ ಬಂದಳು. ಅಲ್ಲಾಭಕ್ಷಿಯೂ ಬೆಚ್ಚಿಬೀಳುವಂತೆ ಒಳಗೆ ನುಗ್ಗಿದವಳು ಕಾಟಲಿಂಗೇಶಪ್ಪನ ಎದುರು ಬಂದು ನಿಂತು, ಅವನ ದಯನೀಯ ಸ್ಥಿತಿ ಕಂಡು ಕ್ಷಣ ನಿಟ್ಟುಸಿರಿಟ್ಟು ತಡಮಾಡದೇ ಅವನು ಆತುಕೊಂಡಿದ್ದ ಕಿಟಕಿ ಬಳಿ ಧಾವಿಸಿ ಅವನ ಮಗುವಂತೆ ಎತ್ತಿಕೊಂಡುಬಿಟ್ಟಳು.

"ಎಲ್ಗೆ.. ಎಲ್ಲೀಗ್ ಕರ್ಕಂಡು ಹೊಂಟೀಯಾ?" ಅನ್ನುತ್ತಿದ್ದವನಿಗೆ ಉತ್ತರಿಸಬೇಕೆಂಬ ದರ್ದು ಇದ್ದಂತಿರಲಿಲ್ಲ ಅವಳಿಗೆ. ದಂಗು ಬಡಿದ ಅಲ್ಲಾಭಕ್ಷಿಯನ್ನೂ ದಾಟಿ ಹೊರಟವಳು, ಕ್ಷಣ ನಿಂತು..

"ನನ್ನ ಮಗ್ಳು ಹೆಣ ಹೊಂಟೈತೆ.. ಇವ್ನು ನನ್ನಳಿಯ.. ಕರ್ಕಂಡ್ ಹೊಂಟೀನಿ.. ಎಲ್ಲ ಮುಗುಸುದ್ ಮೇಲೆ ತಂದ್ ಬಿಡ್ತೀನಿ.." ಅಂದು ಮೆಟ್ಟಿಲಿಳಿದಳು.

ಕಾಟಲಿಂಗೇಶಪ್ಪನ ತಿಂಗಳುಗಳ ಸ್ನೇಹಿತೆ, ಜೊತೆಗಾತಿಯಾಗಿದ್ದವಳು ಮಣ್ಣಲ್ಲಿ ಮಣ್ಣಾಗಿ ಹೋಗಿದ್ದಳು. ಎಲ್ಲ ಮುಗಿಸುವಷ್ಟರಲ್ಲಿ ಸಂಜೆಯಾಗಿ ಹೋಗಿತ್ತು. ಹತ್ತೇ ಜನ ಇದ್ದ ಆ ಮಣ್ಣಿನ ಕಾರ್ಯಕ್ರಮದಲ್ಲಿ ಎಲ್ಲರೂ ಸರಿದ ಮೇಲೆ.. ಕತ್ತಲಲ್ಲಿ ಇವನ ಹೊತ್ತು ನಡೆದಿದ್ದಳು. ಇವಳ ಜೊತೆ ಇನ್ನಿಬ್ಬರು ಜೋರಾಗಿ ಕಾಲು ಹಾಕುತ್ತಿದ್ದರು. ಅಲ್ಲಾಭಕ್ಷಿ ಅಂಗಡಿಯೂ ದಾಟಿಹೋಗಿದ್ದು ಇಬ್ಬರ ಅರಿವಿಗೂ ಬಂದಿತ್ತು. ಎರಡೂ ಕಾಲುಗಳನ್ನು ಅವಳ ಸೊಂಟಕ್ಕೆ ಬಿಗಿದು ಕೈಗಳನ್ನು ಅವಳ ಕುತ್ತಿಗೆಗೆ ಬಿಗಿದು ಅವಳ ಮುಖದ ಸಮೀಪವೇ ಮುಖವಿಟ್ಟುಕೊಂಡು ಅವಳ ನಡಿಗೆಗನುಗುಣವಾಗಿ ಜೀಕುತ್ತಿದ್ದ.

"ಇವರ್ಯಾರು?" ಅಂದ ಮೌನ ಮುರಿಯಲು.

"ಇವ್ರಾ.. ನನ್ ಮಗಳು.. ಅಳಿಯ.." ಅಂದು ಅವನ ಕಟ್ಟೆಯ ಮೇಲೆ ಕೂರಿಸಿದಳು. ಬೀದಿ ದೀಪದ ಹಳದಿ ಬೆಳಕಲ್ಲಿ ಇಬ್ಬರನ್ನೂ ಗಮನಿಸಿದ. ತನ್ನ ಹೆಂಡತಿಯಂತೆಯೇ ಅರೆಹುಚ್ಚಿಯಂತೆ ಆಡುತ್ತಿದ್ದ ಹುಡುಗಿಯೂ, ತನ್ನಂತೆಯೇ ನಲವತ್ತನೆಯ ವಯಸ್ಸಿಗೆ ಯಾವುದೋ ಕಾರಣಕ್ಕೆ ಮದುವೆಯಾದಂತಿದ್ದ ಗಂಡಸು ಕಂಡರು.

"ಯಾವ್ ಮಗಳು..?" ಅಂದ. "ಯಾರೋ.. ಯಾರಿಗ್ಗೊತ್ತು.. ಕಲ್ಲು ಹೊಡೆಸಿಕೊಂಡು ಸಾಯೋದ್ಕಿಂತ ನನ್ಜೊತಿ ಇರ್ಲಿ ಅಂತಾ ಕರ್ಕಂಡ್ ಬಂದೀನಿ.. ಅವನಿಗೂ ಯಾರೂ ದಿಕ್ಕಿರ್ಲಿಲ್ಲ.. ಹೆಂಗೋ ಬದುಕ್ಕಂಡ್ ಹೊಕ್ಕಾರೆ.. ಎಲ್ರೂ ನಿನ್ನಂಗೆ ಇರ್ತಾರಾ?"

"ಹಂಗಾರೆ ಇವ್ನಿಗೂ ಸೀ ತಿನ್ಸೀ ಮೋಡೀ ಮಾಡೀ ಬಿಡು.." ಅಂದ. ಅವನ ಮತ್ತೆ ಎತ್ತಿಕೊಂಡು ನಡೆಯತೊಡಗಿದಳು. ಈಗವಳ ಹಿಡಿತ ಹಿತವೆನಿಸುವಂತಿತ್ತು. ಮಗಳ ದುಃಖ ಈಗ ಮೈಯಿಂದ ಇಳಿದಂತೆ ಹಗುರಾಗಿದ್ದಳು. ಯಾರದ್ದೋ ಮಗಳನ್ನ, ಹುಚ್ಚು ಹಿಡಿದ ಸ್ಥಿತಿಯಲ್ಲಿ ತಂದು ಸಾಕುವ ಹುಚ್ಚು ಸಾಹಸಿಯ ಕಂಕುಳಲ್ಲಿ ಮಗುವಂತಾಗಿದ್ದ.

ಅವಳು ತನ್ನದೇ ಗುಂಗಿನಲ್ಲಿದ್ದುದಕ್ಕೆ ಮತ್ತೊಮ್ಮೆ ಅಂದ. "ಇಲ್ಲಾ ಬುಡು.. ನಂಗೆ ಕಣ್ಣು ಸರಿಯಾಗೆ ಕಾಣಂಗಿಲ್ಲ.. ನಿಂಗೇನೂ ಚಿಂತೆ ಬ್ಯಾಡ.. ನನ್ನ ಅಳಿಯ

ತಳ್ಳೋ ಗಾಡಿನಾಗೆ ಸ್ವೀಟ್ ಅಂಗ್ಡಿ ಇಟ್ಟವ್ನೆ.. ದಿನಾ ಪೇಡಾ ತಿನ್ನುಸ್ತೀನಿ.. ತಿನ್ಕಂಡು ಇದ್ಬಿಡು..” ಅಂದಳು. ಹಿಂದೆ ಹಿಂದೆ ಓಡಿದಂತೆ ನಡೆದು ಬರುತ್ತಿದ್ದ ಅವಳ ಹೊಸ ಮಗಳು ಪುರ್ರ್ ಪುರ್ರ್ ಎಂದು ಸದ್ದು ಮಾಡುತ್ತಿದ್ದಳು.

ನಾಳೆಯಿಂದ ನನ್ನ ಬದುಕು ಬದಲಾಗುವುದು. ಬದುಕಿನಲ್ಲಿ ಇನ್ನಷ್ಟು ಸುಖ ಸಂತೋಷಗಳು ಬರಬಹುದು ಎಂದು ಯೋಚಿಸತೊಡಗಿದ್ದ ಕಾಟಲಿಂಗೇಶಪ್ಪ. ಅಲ್ಲಾಭಕ್ಷಿ ಕಾಟಲಿಂಗೇಶಪ್ಪ ಏನು ಕದ್ದು ಹೋಗಿರಬಹುದೆಂದು ಮನೆಯೆಲ್ಲ ಹುಡುಕತೊಡಗಿದ.

❖

(ವಿಜಯ ವಾಣಿ – ನವೆಂಬರ್ 8, 2012)

ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ

ಎಚ್.ಎಸ್.ಅನುಪಮಾ

ರಾತ್ರಿಯಿಡೀ ನಿದ್ದೆಯಿಲ್ಲದೆ ಐನೂರು ಕಿಲೋಮೀಟರ್ ಪ್ರಯಾಣ ಮಾಡಿ ಬಂದಿದ್ದೆ. ಕೊರೆಯುವ ಚಳಿಯಲ್ಲಿ ವಜ್ಜೆ ಚೀಲ ಹೆಗಲಿಗೇರಿಸಿ ಮೂರು ಮೈಲಿ ನಡೆದಿದ್ದೆ. ಖಾಲಿ ಹೊಟ್ಟೆ ಚುರುಗುಡುತ್ತಿತ್ತು. ತುಂಬಿದ ಬ್ಲಾಡರ್ ರಸ್ತೆ ಪಕ್ಕ ಇಲ್ಲೇ ಎಲ್ಲಾದರೂ ಕೂತುಬಿಡುವ ಎನಿಸುವಂತೆ ಮಾಡಿತ್ತು. ತಲೆಯೆತ್ತಿದರೆ ಚಳಿಗಾಲದ ಆಗಸದಲ್ಲಿ ಮಿನುಗುತ್ತಿದ್ದ ನೂರಾರು ತಾರೆಗಳು ಮಸುಕಾಗತೊಡಗಿದ್ದವು. ಇದ್ದಕ್ಕಿದ್ದಂತೆ ನಿನ್ನೆ ರಾತ್ರಿಯ ಪ್ರಯಾಣ ಧುತ್ತನೆ ಕಣ್ಣೆದುರು ಬಿಚ್ಚಿಕೊಂಡಿತು..

ನಾನಿದ್ದ ಪ್ರೈವೇಟ್ ಬಸ್ಸು ಬೆಳಗಿನ ಜಾವ ಒಂದು ಕಡೆ ಟಾಯ್ಲೆಟ್–ಟೀಗೆಂದು ನಿಂತಿತು. ಲೇಡೀಸ್ ಟಾಯ್ಲೆಟ್ ಇಲ್ಲದ ಕಡೆ ನಿಲಿಸಿದ ಡ್ರೈವರನಿಗೆ ಸರೀ ಕಾಯಿಸಬೇಕೆಂದುಕೊಳ್ಳುತ್ತ ಕತ್ತಲ ಹುಡುಕಿ ಹೊರಟೆ. ಹಿಂತಿರುಗಿ ಬರುವುದರಲ್ಲಿ ನೋಡನೋಡುತ್ತಿದ್ದಂತೆ ನನ್ನ ಬಸ್ ಹೊರಟೇಹೋಯಿತು. ಗೂಡಂಗಡಿ ಹುಡುಗರ ಯಾವ ಸಿಳ್ಳೆಯೂ ವೇಗಗೊಳ್ಳತೊಡಗಿದ ಆ ಬಸ್ಸಿಗೆ ಕೇಳಲಿಲ್ಲ. ನನ್ನ ಪುಸ್ತಕ, ಹಣ, ಬ್ಯಾಗು, ಮೊಬೈಲು ಎಲ್ಲ ಬಸ್ಸಿನಲ್ಲೇ. ಅಲ್ಲಿದ್ದ ಟೀ ಅಂಗಡಿಯವರು ನನಗಿಂತ ಹೆಚ್ಚು ಗಲಿಬಿಲಿಗೊಂಡರು. ಬೈಕ್‌ನಲ್ಲಿ ಬಸ್ ಫಾಲೋ ಮಾಡಿ ಎಂದು ಸಲಹೆಯಿತ್ತರು. ನಿಮಿಷಾರ್ಧದಲ್ಲಿ ಅವನು ಬೈಕ್ ತಂದು ನಿಲಿಸಿದ. 'ಗಟ್ಟಿಯಾಗಿ ಕೂರಿ ಮೇಡಂ, ಏ ಬೇಗ್ ಹೋಗೋ' ಎಂದು ಅಲ್ಲಿರುವವರು ಬೈಕ್ ಸವಾರನಿಗೆ ಹೇಳುವಾಗ ಆ ಕ್ಷಣದ ಗೊಂದಲದಲ್ಲಿ ಹಿಂದೆಮುಂದೆ ಯೋಚಿಸದೇ ಬೈಕ್ ಹತ್ತಿದೆ.

ನೂರಾಹತ್ತು ಕಿಲೋಮೀಟರ್ ವೇಗದಲ್ಲಿ ಬೈಕ್ ಓಡುತ್ತಿದೆ! ಇವನ ಹಿಂದಲ್ಲದೆ ಮತ್ಯಾರ ಹಿಂದೆಯೂ ಕುಳಿತು ರೂಢಿಯಿಲ್ಲ. ಬಿದ್ದುಹೋಗುವಂತೆನಿಸಿದರೂ ಹಿಡಿದುಕೊಳ್ಳಲಾಗುತ್ತಿಲ್ಲ. ಇಳಿಜಾರು ರಸ್ತೆಯ ಎರಡೂ ಕಡೆ ಕಗ್ಗತ್ತಲ ಹೊಲಗಳ ಮೇಲಿಂದ ಬೀಸುವ ಕುಳಿಗಾಳಿ. ಕಣ್ಣು, ಕಿವಿ, ಮೂಗು, ಬಾಯೊಳಗೆಲ್ಲ ನುಗ್ಗುವ ರುಮುರುಮು ಚಳಿಗೆ ನಾನು ಉಸಿರಾಡುತ್ತಿರುವೆನೋ ಅಥವಾ ಗಾಳಿಯೇ ನನ್ನನ್ನು ಉಸಿರಾಡುತ್ತಿದೆಯೋ ಒಂದೂ ತಿಳಿಯಲಿಲ್ಲ. ಹದಿನೈದಿಪ್ಪತ್ತು ಕಿಲೋಮೀಟರು ಹೋದರೂ, ಎಷ್ಟೋ ಕೆಂಪು ಲೈಟುಗಳನ್ನು ಹಿಂದೆ ಹಾಕಿದರೂ ನನ್ನ ಬಿಟ್ಟುಹೋದ ಬಸ್ಸು ಸಿಗಲಿಲ್ಲ.

ಕಗ್ಗತ್ತಲ ರಾತ್ರಿ. ಇದ್ದಕ್ಕಿದ್ದಂತೆ ಹೊಟ್ಟೆಯೊಳಗೊಂದು ನಿರ್ವಾತ ಸೃಷ್ಟಿಯಾದಂತೆನಿಸಿ ದಿನವೂ ಓದುವ ವರದಿಗಳು ಕಣ್ಣೆದುರು ಸುಳಿಯತೊಡಗಿದವು. ಈತ ಯಾರೋ? ಎಂಥವನೋ? ಇದು ಯಾವ ಊರೋ? ಅತ್ಯಾಚಾರಕ್ಕೊಳ

ಗಾಗುವುದನ್ನು ತಡೆಯಲು ಪ್ರತಿ ಹೆಣ್ಣೂ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ನಾನೇ ಬರೆದ ಲೇಖನ ನೆನಪಾಯಿತು. ವಾಪಸ್ ಹೋಗುವ ಎಂದೆ. 'ತಡೀರಿ ಮೇಡಂ, ಈ ಡೌನ್ ಆದ್ಮೇಲೆ ಒಂದು ಹಂಪ್, ಆಮೇಲೊಂದು ಅಪ್ ಇದೆ. ಅಲ್ಲಿ ಗಾಡಿ ಸ್ಲೋ ಆಗ್ತಾವೆ. ನೋಡುವ' ಎಂದು ಶರವೇಗದಲ್ಲಿ ಓಡಿಸಿದ. ಆತನ ಮೈಮೇಲೆ ಬೀಳದಂತೆ ಕೂರುವುದರಲ್ಲಿ ಸುಸ್ತಾಯಿತು. ಗಂಡುಹೆಣ್ಣು ಎಂದು ಏಕಾದರೂ ಸೃಷ್ಟಿಯಾಗಿದೆ ಎಂದು ಕೂಗಬೇಕೆನಿಸುವಾಗ ಮನಸ್ಸಿನಲ್ಲಿ ಅಂಜಿಕೆ ಹಣಕಿಕ್ಕಿತು. ಹಿಂತಿರುಗೋಣವೆಂದು ಮತ್ತೆಮತ್ತೆ ಒತ್ತಾಯಿಸತೊಡಗಿದೆ. ಅವನಿಗೇನನಿಸಿತೋ, ರೊಂಯ್ಯನೆ ಬೈಕು ಹಿಂತಿರುಗಿಸಿದ. ಬಂದ ದಾರಿಯಲ್ಲಿ ವಾಪಸಾದೆವು. ನನ್ನ ನೋಡಿ ಅಲ್ಲಿದ್ದವರು ತಮ್ಮ ಕೈಲಾದ ಏನೇನೋ ಮಾಡತೊಡಗಿದರು. ತಮಗೆ ಗೊತ್ತಿದ್ದ ಟ್ರಾವೆಲ್ ಏಜೆಂಟಿಗೆ ಫೋನ್ ಮಾಡಿ, ಆ ಗಾಡಿಯ ಡ್ರೈವರ್ ಫೋನ್ ನಂಬರ್ ದೊರಕಿಸಿಕೊಂಡರು. ಆದರೆ ಆತ ಎತ್ತಲೇ ಇಲ್ಲ. ಕೊನೆಗೆ ಇನ್ನೊಂದು ಬಸ್ ಹತ್ತಿ ಹೊರಟೆ. ಒಂದು ತಾಸು ಪ್ರಯಾಣ ಮಾಡುವುದರಲ್ಲಿ ನನ್ನ ಬಿಟ್ಟುಬಂದ ಬಸ್ಸು ರಸ್ತೆ ಪಕ್ಕವೇ ನಿಂತಿದ್ದು ಕಾಣಿಸಿತು. ಅದರ ಡ್ರೈವರ್, ಕ್ಲೀನರ್, ಎಲ್ಲ ಬಸ್ಸುಗಳನ್ನು ನಿಲಿಸಿ ವಿಚಾರಿಸುತ್ತಿದ್ದರು.

ಬಿಟ್ಟುಬಂದ ಬಸ್ಸಿನ ಕ್ಲೀನರ್ ಹುಡುಗ, ಡ್ರೈವರನನ್ನು ಎಲ್ಲರೂ ಸಿಕ್ಕಸಿಕ್ಕ ಬೈಗುಳ ಉಪಯೋಗಿಸಿ ಬೈದರು. ಆ ಡ್ರೈವರ್ ತನ್ನ ಭಯನಿವಾರಣೆಗೆ ಕ್ಲೀನರ್ ಹುಡುಗನನ್ನು ಒದೆಯತೊಡಗಿದ. ಬಿಟ್ಟುಬಂದ ಬಸ್ ಹತ್ತುವಾಗ ನನ್ನ ಕಾಲ ಬಳಿ ಆ ಕಪ್ಪು ಎಳೆಯ ದೇಹ ಬಂದು ಬಿತ್ತು. 'ಬೋ..ಮಗನೆ, ಮೇಡಂ ಒಳ್ಳೇವ್ರು, ನಡಿತು. ಅವ್ರು ಕಂಪ್ಲೇಂಟ್ ಕೊಟ್ಟರೆ ನಂ ಕೆಲಸ ಹೋಗದಷ್ಟೆ ಅಲ್ಲ, ನಾವೆಲ್ಲ ಲಾಕಪ್ಪಲ್ಲಿ ಇರ್ತಿವಿ ತಿಳ್ಕ. ಅವ್ರ ಕಾಲಿಗ್ ಬಿದ್ದು ಕೇಳ್ಕ. ಇವ್ನು ಎಲ್ಲ ಪ್ಯಾಸೆಂಜರ್ ಇದಾರೆ ಅಂದ, ನಾನೂ ಹೊರ್ಟೆ ಮೇಡಂ. ಇಂಥ ಭಾಡ್‌ಕೋವ್ ನಂಬಿದ್ರೆ ನೇಣು ಹಾಕಳಬೇಕು ಅಷ್ಟೆ. ಈಗಂತೂ ಲೇಡೀಸ್ ಸೀಟ್ನ ಹಾಕದೇ ಅಪಾಯ. ಬಿಟ್ಟು ಬರೋ ಹಂಗೆ ಇಲ್ವೇ ಇಲ್ಲ. ಕಾಲ ಕೆಟ್ಟೋಗ್ಬಿಟ್ಟಿದೆ ಮೇಡಂ. ಸದ್ಯ, ದೇವ್ರು ದೊಡ್ಡವನು..'

ನರಳುವ ಆ ಎಳೆಯ ಹುಡುಗನನ್ನು ಮೇಲೆಬ್ಬಿಸಿ 'ಸಾಕ್ ಬರ್ರಿ' ಎಂದು ಬಸ್ ಹತ್ತಿದೆ. ಯಾವುದಕ್ಕೆ ಯಾರು ಕಾರಣ? ಆ ಎಳೆಯ ಹುಡುಗನ ತೂಕಡಿಕೆಯೋ? ವಿಳಂಬವಲ್ಲದ ನನ್ನ ವಿಳಂಬವೋ? ಚಾಲಕನ ಅವಸರವೋ? 'ಕೆಟ್ಟುಹೋಗದ' ಕಾಲವೋ? ಏನೂ ಆಗದಿದ್ದರೂ ಏಕೋ ಮನಸ್ಸು ಭಯದಿಂದ ಪ್ರಕ್ಷುಬ್ಧವಾಗಿತ್ತು. ಮನುಷ್ಯರಲ್ಲಿ ನಾವು ನಂಬಿಕೆಯನ್ನೇ ಕಳೆದುಕೊಳ್ಳುತ್ತಿದ್ದೇವೆಯೇ? ಬಡಬಡಿಸುವ ಡ್ರೈವರನ ಮಾತುಗಳಲ್ಲಿ ನಾಳೆ ನಾನು ಕಂಪ್ಲೇಂಟು ಕೊಟ್ಟರೆ ಕಳೆದುಕೊಳ್ಳಲಿರುವ ಕೆಲಸದ ಬಗೆಗೆ ಕನಲಿಕೆಯಿತ್ತು.

ಬೆಂಗಳೂರಿನಲ್ಲಿ ಅತ್ಯಾಚಾರ ವಿರೋಧಿಸಿ ನಡೆವ ಜಾಥಾ, ಸಮಾವೇಶದಲ್ಲಿ ಪಾಲ್ಗೊಳ್ಳಬೇಕೆಂದು ಹೊರಟಿದ್ದವಳು ನಾನು. ಇದ್ದಕ್ಕಿದ್ದಂತೆ ರಸ್ತೆ ಪಕ್ಕ ಆ ಊರಿನ

ಬೋರ್ಡು ನೋಡಿದ್ದೇ ಅಲ್ಲೇ ಇಳಿಸುವಂತೆ ಡ್ರೈವರನಿಗೆ ಕೂಗಿದೆ. ಬೆಂಗಳೂರಿನಿಂದ ಐವತ್ತು ಕಿಲೋಮೀಟರ್, ಜಿಲ್ಲಾ ಕೇಂದ್ರದಿಂದ ಹದಿನೈದು ಕಿಲೋಮೀಟರ್ ದೂರವಿದ್ದ ಹಳ್ಳಿ ಅದು. ಅಂತರ್ಜಾತಿ ಮದುವೆ ನೆಪದಲ್ಲಿ ಜಾತಿ ದೌರ್ಜನ್ಯ ನಡೆದು ಇನ್ನೂರೈವತ್ತು ಕುಟುಂಬಗಳ ಕೇರಿ ಸುಟ್ಟುಬೂದಿಯಾಗಿ ಎರಡು ದಿನಗಳಾಗಿದ್ದವು. ಆ ಊರಿನಲ್ಲಿ ನೆಂಟರ ಮನೆಯಿದೆಯೆಂದೂ, ಅಲ್ಲೇ ಇಳಿವೆನೆಂದೂ ಹೇಳಿ ಕೂಗತೊಡಗಿದೆ. ಡ್ರೈವರ್ ಗಕ್ಕನೆ ನಿಲ್ಲಿಸಿದ. ಬಿಟ್ಟುಹೋದ ತಪ್ಪಿಗೆ ನಡುವೆ ಎಲ್ಲೋ ಇಳಿಯುತ್ತಿರುವೆನೆಂದು ಭಾವಿಸಿದನೋ ಏನೋ, ಒಬ್ಬರೇ ಇಳಿಯಬಾರದೆಂದು ಪರಿಪರಿ ಕೇಳಿದ. ಮೊದಲು ಗದರಿಸಿ, ನಂತರ ಮನವೊಲಿಸಿ ಅಂತೂ ಇಳಿದುಬಿಟ್ಟೆ. ಮಾಧ್ಯಮದ, ರಾಜಕೀಯದ ಮಂದಿ ಗಿಜಿಗುಡುವ ಮೊದಲೇ ಅಲ್ಲಿ ಹೋಗಿಬರುವ ಇರಾದೆ..

❖

ಪಾದದಡಿಯ ಇಬ್ಬನಿ ಹನಿ ಚಪ್ಪಲಿಯ ಗಿರಕಿ ಸದ್ದನ್ನು ದೊಡ್ಡ ಮಾಡಿತ್ತು. ಮೆಲ್ಲ ಕಣ್ತೆರೆಯಲು ಹೊಂಚುತ್ತಿರುವ ಹಗಲ ಮರಿ. ದಾರಿಯ ಎರಡೂ ಬದಿ ಅಸ್ಪಷ್ಟವಾಗಿ ಕಾಣುವ ನಾನಾ ಆಕಾರದ ನೆಲದ ಚೂರುಗಳು. ಡಿಸೆಂಬರಿನ ಚಳಿಗೆ ಹಸಿರು ಚಾದರವಿಲ್ಲದ ಬೋಳು ಹೊಲಗಳು ನಡುಗುತ್ತಿದ್ದವು. ಅರೆಬರೆ ಬೆಳೆದು ಕರಟಿದ ಗಿಡಗಳು, ಕೂರಿಗೆಯ ಅಸ್ಪಷ್ಟ ಗುರುತುಗಳು. ಇಬ್ಬನಿಯ ಹನಿಯನ್ನೇ ಮಳೆಯೆಂದು ಸಂಭ್ರಮಿಸಿ ಹಸಿರಾಗತೊಡಗಿದ್ದ ಹೊಲದಂಚಿನ ಕಂಟಿಗಿಡಗಳು.

ರಸ್ತೆ ದಿಬ್ಬದ ಮೇಲೆ ಸಾಗುತ್ತಿತ್ತು. ಹೊಲಗಳ ಮೇಲೆ ಬೆಳ್ಳಕ್ಕಿ ಸಾಲು ತೇಲುತ್ತ ಇಳಿಯುತ್ತಿರುವಾಗ ಏದುಸಿರಿಗೆ ಬಾಯಿಂದ ಚಿಮ್ಮುವ ಆವಿ ಕಾಣುವಷ್ಟು ಬೆಳಕಾಯಿತು. ಅಷ್ಟು ದೂರದಲ್ಲಿ ಮಂಜು ಕಡಲಲ್ಲಿ ಮುಳುಗಿರುವ ಹಳ್ಳಿ, ಗುಡ್ಡದ ಇಳಿಜಾರಿನಲ್ಲಿ ಚಲ್ಲಾಪಿಲ್ಲಿ ಚದುರಿದ ಗುಡಿಸಲು, ಮನೆಗಳು..

ಆ ಕೇರಿ ಪ್ರವೇಶಿಸುವಲ್ಲಿ ಲೋಹದ ತಡೆಗೋಡೆ ಕಟ್ಟಿಕೊಂಡು ಶೆಡ್ಡಿನಲ್ಲಿ ತೂಕಡಿಸುತ್ತ ಕೂತಿದ್ದ ಪೊಲೀಸ್ ಇಷ್ಟು ಬೆಳಿಗ್ಗೆ ಬಂದವರು ಯಾರು ಎಂಬ ಅಸಹನೆಯಿಂದ ಎದುರು ಹಿಡಿದ ಗುರುತು ಕಾರ್ಡನ್ನು ಸರಕ್ಕೆಂದು ಎಳೆದುಕೊಂಡ. ನನ್ನ ಇತಿಹಾಸ, ಭೂಗೋಳ ಎಲ್ಲ ಕೆದಕಿದ. ನಾನು 'ಆ' ಕೋಮಿಗೆ ಸೇರಿದವಳೇ ಅಲ್ಲವೇ ಎಂದು ಖಚಿತಪಡಿಸಿಕೊಂಡ. ಗುಂಪು ಕಟ್ಟಿಕೊಂಡು ಬರದ ನನ್ನ ಬಗ್ಗೆ, ವೈದ್ಯವೃತ್ತಿಯ ಹಿನ್ನೆಲೆಯ ಬಗೆಗೆ ಸಮಾಧಾನವಾಗಿರಬೇಕು. ಇವತ್ತು ಮೂರು ಪಕ್ಷಗಳ ದೊಡ್ಡ ಮುಖಂಡರು ಈ ಹಳ್ಳಿಗೆ ಬರಲಿದ್ದು ಅವರಿಗೆ ಒದಗಿಸಬೇಕಾದ ಭದ್ರತೆಗಾಗಿ ಇದೆಲ್ಲ ಎಂದು ನಡುಗುತ್ತ ನಿಂತವಳೆದುರು ಅರ್ಧತಾಸು ಹರಟಿ ಎಚ್ಚರಗೊಂಡ.

ಕೇರಿ ಒಳಹೊಕ್ಕು ನಿಂತದ್ದೇ ನನ್ನ ಚಳಿ ಹಾರಿಹೋಯಿತು. ವಿಲಕ್ಷಣ ವಾಸನೆಯೊಂದು ಮಂಜಿನಂತೆ ಅಲ್ಲೆಲ್ಲ ಆವರಿಸಿತ್ತು. ಹೊಟ್ಟೆಯ ತಾಳ ಹಸಿವಿಗೋ, ಸಂಕಟಕ್ಕೋ ಒಂದೂ ತಿಳಿಯಲಿಲ್ಲ. ಅರೆಬರೆ ಸುಟ್ಟ ಮನೆ, ಸಾಮಾನು, ಗಿಡಮರಗಳು. ಬಾಗಿಲಿಲ್ಲದ ಮನೆಗಳು ಒಳಹೊರಗನ್ನು ಬಯಲುಮಾಡಿ ನಿಂತಿದ್ದವು. ನಿರ್ಜನವಾಗಿರಬಹುದೆಂದುಕೊಂಡಿದ್ದೆ, ಆದರೆ ಅಲ್ಲಲ್ಲೇ ಪಾತ್ರೆ ತಿಕ್ಕುತ್ತ, ಬಟ್ಟೆ ತೊಳೆಯುತ್ತ, ಹಲ್ಲುಜ್ಜುತ್ತ ಕುಳಿತವರು ಭಯ, ಅನುಮಾನಗಳಿಂದ ನೋಡುತ್ತಿದ್ದರು. ಪರಿಚಯದ ನಗೆ ಬಲು ತುಟ್ಟಿಯೆನಿಸಿತು.

ಆ ಚಳಿಯಲ್ಲೂ ಮಕ್ಕಳು ಬೆಳಗಿಗೆ ಸಂಭ್ರಮಗೊಂಡಂತೆ ಅತ್ತಿಂದಿತ್ತ ಓಡಾಡತೊಡಗಿದ್ದವು. ಸುಟ್ಟ ಬಟ್ಟೆ, ಮೇಜುಮಂಚಕುರ್ಚಿಗಳ ಕಬ್ಬಿಣದ ಚೌಕಟ್ಟು, ಪಾತ್ರೆ ಮುಂತಾದ ನಿರುಪಯೋಗಿ ವಸ್ತುಗಳನ್ನು ದೊಡ್ಡವರು ಹೊರಗೆ ತಂದು ರಾಶಿ ಹಾಕುತ್ತಿದ್ದರೆ ಮಕ್ಕಳು ಅದೇ ರಾಶಿಯಲ್ಲಿ ಏನಾದರೂ ಸಿಗಬಹುದೆಂದು ಹುಡುಕುತ್ತಿದ್ದವು. ಪೋರನೊಬ್ಬ ಅರೆಸುಟ್ಟ ಗಡಿಯಾರದ ಮುಳ್ಳನ್ನು ಹಿಡಿದೆಳೆಯುತ್ತಿದ್ದ. ಕರಕಲು ಗೋಡೆಯೆದುರು ಚೌಕಾಸಿಯಾಗಿ ನೀರು ಬಳಸಿ ಬಟ್ಟೆ ತೊಳೆಯುತ್ತಿದ್ದವಳು ಬಿಳಿಸೀರೆ ಒಣಹಾಕಿದಳು. ನೀರು ಹನಿಯುವ ಸೀರೆಯ ಒಡಲ ತುಂಬ ಹಬ್ಬಿರುವ ಹೂಬಳ್ಳಿ..

ಗಟ್ಟಿಕಾಳು ಹುಡುಕಿ ಕೆದಕುತ್ತ ಕೋಳಿಹಿಂಡು ಮೇಯುತ್ತಿದೆ, ಆ ಬೂದಿರಾಶಿಯಲ್ಲಿ ಹೊಗೆಯ ಸುಳಿವಿಲ್ಲ. ಕೆಂಡವೂ ಇದ್ದಂತಿಲ್ಲ.

ಮನೆಯೊಂದರ ಹೊರಗೆ ಮೂರು ಕಲ್ಲಿನ ನಡುವೆ ಪಾತ್ರೆಯಿಟ್ಟು ಬೇಯಿಸುತ್ತಿದ್ದವಳು ನನ್ನ ಕಡೆ ನೋಡಿದಳು. ತೇಲಿಬಂದ ಪರಿಮಳದಿಂದ ಆ ಒಲೆಮೇಲೆ ಏನು ಕುದಿಯುತ್ತಿರಬಹುದೆಂದು ಊಹಿಸುತ್ತಿರುವಾಗ ಆತ ಅಬ್ಬರಿಸುತ್ತ ಒಳಗಿಂದ ಬಂದ. ಬೆಂಕಿ ಸುರಿಸುವ ರೌದ್ರ ಮುಖ. ಅವಳ ರಕ್ತದಲ್ಲಿರಬಹುದಾದ ಹೆಂಗಸರ ವಂಶವಾಹಿಯನೆಲ್ಲ ನಾನಾ ವಿಶೇಷಣ ಬಳಸಿ ಬೈಯುತ್ತ ಮುಖಮೋರೆ ನೋಡದೇ ಚಚ್ಚತೊಡಗಿದ. ಅಯ್ಯೋ, ಅತ್ತ ಓಡಿ ಬಿಡಿಸಿಕೊಳ್ಳುವಂತೆ ನನ್ನ ಕಾಲು ಕಂಪಿಸಿದರೂ ನೇರನಿಂತ ಅಪರಿಚಿತನ ವ್ಯಗ್ರನೋಟಕ್ಕೆ, ಬೆಂಕಿ ಸುರಿಸುವ ಕಣ್ಣುಗಳಿಗೆ ಹಿಮ್ಮೆಟ್ಟಿಸುವ ಅಟ್ಟಹಾಸವಿತ್ತು. ನನ್ನ ಕೈಯ ಕ್ಯಾಮೆರಾ ನೋಡಿ ಬಿರಬಿರ ಒಳಸರಿದ.

ಯಾವ ಸಮಸಮಾಜ, ಸಮಾನತೆ ಕುರಿತು ಕನಸುತ್ತಿರುವೆ ಜೀವವೇ? ಒಳಗಿನ ದನಿ ಕನಲಿ ಕೇಳಿತು.

ಮನೆಗಳ ಫೋಟೋ ತೆಗೆಯಹೊರಟೆ. ಅಲ್ಲೆಲ್ಲೋ ಚೊಂಬಿಟ್ಟುಕೊಂಡು ಕುಳಿತಾಕೆ ಸೆರಗೆಳೆದುಕೊಳ್ಳುತ್ತ ಮೌನವಾಗಿ ಎದ್ದು ಹೋದಳು. ಕ್ಯಾಮೆರಾ ನೋಡುತ್ತ ನನ್ನ ಹಿಂದೆಹಿಂದೆ ಒಬ್ಬ ಎಳೆಯ ಹುಡುಗ, ಅವನ ಹಿಂದೆ ಕುಂಯ್ಗುಡುತ್ತ ಬಾಲ ಅಲ್ಲಾಡಿಸುತ್ತ ಒಂದು ನಾಯಿಮರಿ. 'ಅದೇನದು?' ಎಂದು ಕಣ್ಣಲ್ಲೆ ಪ್ರಶ್ನಿಸುತ್ತ

ಕ್ಯಾಮೆರಾ ಕಡೆ ಕೈತೋರಿದ. ಇದುವರೆಗು ಸೆಟೆದುಕೊಂಡಿದ್ದ ಕ್ಯಾಮೆರಾ ಎಳೆಯನ ಕುತೂಹಲಕ್ಕೆ ಮೆಲ್ಲ ಅರಳತೊಡಗಿತು. ನಾಯಿಮರಿ ಸಮೇತ ಅವನ ಫೋಟೋ ತೆಗೆತೆಗೆದು ತೋರಿಸಿದೆ. ದೋಸ್ತನಂತೆ ಮಾತಾಡಿದ.

'ಅವತ್ತು ಅಪ್ಪ ಜಾತ್ರೆಗ್ ಕರ್ಕಂಡ್ ಹೋಗ್ತಿನಂದಿದ್ದ. ಸಾಲಿ ಮುಗಸಿ ಬರೋವಾಗ ದೂರ್ದಲ್ಲಿ ನಮ್ಮನಿ ಹತ್ರ ಜನ ಕಂಡ್ರು. ಆಚೆ ಕೇರಿಯ ನನ್ ದೋಸ್ತಿ ಗಣೇಶ, ಸುಬ್ರಮಣಿ, ಆಮೇಲ್ ಬೇರೆಯೋರೆಲ್ಲ ಇದ್ರು. ಅವ್ರೆಲ್ಲ ಅವತ್ ಸಾಲಿಗ್ ಬಂದಿರ್ಲಿಲ್ಲ, ರಾತ್ರಿ ಜಾತ್ರೆಲಿ ಸಿಗತಿವಿ ಅಂದಿದ್ರು. ಅವ್ರು ನಂ ಮನೆ ಒಡದು ಹಾಕ್ತಿದ್ರು. ಅವ್ವಿ ಓಡ್‌ಹೋಗು ಅಂತ ಕೂಗ್ತಿದ್ಲು. ಪಾಟಿಚೀಲ ಹಿಡಕಂಡೇ ನಾನು, ಅಣ್ಣಿ ಹೊಲಕ್ ಓಡೋದ್ವಿ. ಅವ್ರು ನಂ ಕಪಾಟು, ಪುಸ್ಕ ಎಲ್ಲ ಸುಟ್ರು. ಕೋಳಿ, ಆಕಳನು ತಗಂಡ್ ಹೋದ್ರು.. ಕೆಂದ್ ಹಸದ ಸಣ್ಣ ಕರುನೂ. ನಂ ಬೆಕ್ಕಿನ ಮರಿ ಅವತ್ಲಿಂದ ಎಲ್ಲೋ ಹೋಗದೆ, ಬಂದೇ ಇಲ್ಲ. ಸುಟ್ಹೋಯ್ತೋ ಏನೋ. ಈ ನಾಯಿಮರಿ ಮಾತ್ರ..'

ಬೆಕ್ಕು, ಕರುವಿನ ನೆನಪಾಗಿ ಎಳೆಯದನಿ ಮಂಕಾಯಿತು. ಅವನಮ್ಮ ಎಲ್ಲಿಂದಲೋ ಓಡಿಬಂದವಳು ಮಗನನ್ನು ಸೆಳೆದುಕೊಂಡು ಅರ್ಧ ತೊದಲುತ್ತ, ಅರ್ಧ ಬಡಬಡಿಸುತ್ತ ಫೋಟೋ ತೆಗೆಯಬಾರದೆಂದಳು. ಕ್ಯಾಮೆರಾ ಒಳಗಿಡತೊಡಗಿದೆ. ಹತ್ತಿರ ಬಂದು ತೆಗೆದ ಫೋಟೋ ತೋರಿಸುವಂತೆ ಕೇಳಿದಳು. ನಾಯಿಮರಿ ಹಿಡಿದುಕೊಂಡ ಅವಳ ಮಗನ ಫೊಟೋ ನೋಡಿ ಕೊಂಚ ತಣ್ಣಗಾದಳು.

'ಎಲ್ಲ ಸರಿಯಾಗಿದ್ದಾಗ ಬರದೆ ಈಗ ಬಂದ್ ಪೋಟ ತೆಗಿತಿರಿ. ಸುಟ್ ಮನೆದೆಲ್ಲ ಯಾಕ್ ಪೋಟ? ಬೇಸ್ತವಾರ ಜಾತ್ರೆ ಅಂತ ಮನೆ ಸಾರ್ಸಿ, ಸುಣ್ಣ ಅಚ್ಚಿ ಇಟ್ಕಂಡಿದ್ದೆ..'

ಹೇಳುತ್ತ ಹೋದಳು. ಅವಳು ಜಾತ್ರೆಗೆ ಬರಲಿರುವ ನೆಂಟರು, ಮದುಮಕ್ಕಳಿಗೆಂದು ಕೋಳಿ ಇಟ್ಟುಕೊಂಡಿದ್ದಳು. ಯಾವತ್ತಿನ ಹಾಗೆ ಅವತ್ತೂ ರೇಷನ್ ಅಂಗಡಿಯಲ್ಲಿ ಜಗಳವಾಗಿತ್ತು, ಆಚೆ ಕೇರಿಯೋರದ್ದು ತಮ್ಮ ಜಾತಿ ಜನರ ರೇಶನ್ ಕ್ಯೂ ಮುಗಿದಮೇಲೇ ಇವರು ಕ್ಯೂ ಹಚ್ಚಲಿ ಎಂಬ ಆರ್ಡರು. ಇವರೆಲ್ಲ ಅದನ್ನೊಪ್ಪದೇ ಮೊದಲೇ ನಿಂತು ರೇಷನ್ ತಂದುಬಿಟ್ಟರು. ಆ ಸಿಟ್ಟು ಇಲ್ಲಿಯ ತನಕ ಬರಬಹುದು ಎಂದು ಯಾರೂ ಅಂದುಕೊಂಡಿರಲಿಲ್ಲ. 'ದೀಪಳಿ ಹಬ್ಬ ಮಾಡಿ ಇಪ್ಪತ್ತು ವರ್ಷಾಗಿದೆ, ಇವತ್ತು ರಾತ್ರಿಡೀ ದೀಪಳಿ ಮಾಡುವ' ಎಂದು ಕೂಗುತ್ತ ಅವರು ಕೇರಿಗೆ ಬೆಂಕಿ ಕೊಟ್ಟದ್ದು ನೆನಪಿಸಿಕೊಳ್ಳುತ್ತ ಹನಿಗಣ್ಣಾದಳು.

'ಈ ನನ ಮಕ್ಳು ಮೊಬೈಲು, ಬೈಕು, ಚಿನ್ನ ಅಂತ ಸೊಕ್ಕಂಡವ್ರೆ, ಕೂಲಿಗೆ ಬರ್ರೋ ಅಂದ್ರೆ ದುಡ್ಡು ಹೆಚ್ಚು ಅಂತಾರೆ' ಅಂತ ಕೂಗ್ತಾ ನಾನ್ ನೋಡ ನೋಡುವಂಗೇ

ಎಲ್ಲದ್ಕೂ ಬೆಂಕಿ ಹಚ್ಚಿದ್ರು. ಕೆಲವ್ರು ಕುಡದಿದ್ರು. ಒಂದೇ ಒಂದು ಮನೆ ಸೈತ ಬಿಡಲಿಲ್ಲ. ಚಿಮಣಿಎಣ್ಣೆ, ಪೆಟ್ರೋಲು ಬಾಟಲೀಲಿ ತುಂತುಂಬಿ ಬೆಂಕಿ ಹಚ್ಚಿ ಬಿಸಾಡಿದ್ರು.'

'ಏನ್ ಹಿಂಗ್ ಮಾಡ್ತಿದಿರಿ ಅಂತ ನೀವ್ಯಾರೂ ಕೇಳಲಿಲ್ವಾ?'

'ಏನ್ ಕೇಳ್ತೀ? ನಾವು ಹತ್ ಜನ, ಅವ್ರು ಸಾವ್ರ ಜನ. ಅವ್ರ ಕೇರಿ ಎಂಗುಸ್ರು ಮಕ್ಳು, ಜಾತ್ರೆಗ್ ಬಂದಿದ್ದ ನೆಂಟ್ರೂ ಸೈತ ಬಂದಿದ್ರು. ಅವ್ರ ಕ್ಯಾಕೆ ಸದ್ದು ಕೇಳೇ ನಂ ತೊಳ್ಳೆ ನಡುಗೋದ್ವು. ಆದ್ರೆ ಮನುಷ್ರಿಗೆ ಅವ್ರು ಏನೂ ಮಾಡ್ಲಿಲ್ಲ. ಹೊಲದಲ್ಲಿ ಅಡಕ್ಕಂಡಿದ್ವಿ ನಾವು ಅಂತ ಅವ್ರಿಗೆ ಗೊತ್ತಿತ್ತು, ಆದ್ರೂ ನಂ ಕಡೆ ಬರಲಿಲ್ಲ. ಓಡಿ ಹೋಗೋರ ಮೊಬೈಲು, ವಾಚು ಕಸ್ತು ಬೆಂಕಿಗ್ ಹಾಕಿದ್ರು ಅಷ್ಟೆ. ನಾವೇನೋ ಉಟ್ಟಬಟ್ಟೆ ಮೇಲೆ ಪಾರಾದ್ವಿ. ಆದ್ರೆ, ಆದ್ರೆ, ಪಾಪಿಗಳು, ನೋಡು ಆ ಮನೆ ಸುಡ್ದೆ ಉಳಿದಿದೆಯಲ್ಲ, ಅಲ್ಲಿ ಈ ಹುಡುಗನ ಜೋಡಿದೇ ಒಂದ್ ಹುಡುಗಿ ಅಡಕ್ಕಂಡಿತ್ತು. ಯಾರಿರ್ಲಿಲ್ಲ ಮನೇಲಿ, ಎಲ್ಲ ಕೂಲಿಗೆ ಹೋಗಿದ್ರು. ಅವಳಣ್ಣ ಆಚೆ ಕೇರಿ ಹುಡುಗಿನ ಲವ್ ಮಾಡಿ ಮದಿವಾಗಿ ಬಂದಿದ್ದ ಅಂತ ಎಲ್ರಿಗು ಸಿಟ್ಟಿತ್ತು. ತಂ ಕೇರಿ ಹುಡಗೇರ ಲವ್ ಮಾಡಿ ಹಾರುಸ್ಕಂಡ್ ಹೋಗ್ತಾರೆ ಈ ಜಾತಿ ಜನ ಅಂತ ಸಿಟ್ಗೆ ಆ ಸಣ್ಣೋರಿನ ಕೆಡಿಸಿಬಿಟ್ರು ಅವ್ರು..?!'

'ಅಯ್ಯೋ! ಪೊಲೀಸಿಗೆ ಕಂಪ್ಲೇಂಟು ಕೊಟ್ರೋ ಇಲ್ವೋ?'

'ಕಂಪ್ಲೇಟು ಯಾರು ಕೊಡ್ಬೇಕು? ನಾವಿರೋರೆಲ್ಲ ಎಂಗುಸ್ರು, ಮಕ್ಕಳು, ಕುಡುಕ ನನಗಂಡ್ರು. ಗಟ್ಟುಳ್ಳ ನಂ ಉಡುಗ್ರೆಲ್ಲ ಕೆಲ್ಸ ಬಗ್ಸೆ ಅಂತ ದೂರದೂರದ ಊರಾಗವ್ರೆ. ಅವ್ರಿದ್ರೆ ಕತೆನೇ ಬೇರೆ ಆಗ್ತಿತ್ತು. ಪೊಲೀಸ್ನೋರ್ಗೆ ಅಂತೂಇಂತೂ ಎಂಗೋ ಸುದ್ದಿ ತಿಳ್ದು ಬಂದ್ರು. ನಿಂನಿಂ ಮನೆಗ್ ಬರ್ರಿ ಅಂತ ಕರದ್ಮೇಲೇ ಅಡಕ್ಕಂಡಿದ್ದ ನಾವ್ ಹೊಲ್ದಿಂದ ಮನೆಗ್ ಹೋಗಿದ್ದು.'

'ಎಲೆಕ್ಷನ್ ಹೊತ್ಗೆ ಬರ್ತಾರಲ್ಲ ಪಾರ್ಟಿಯೋರೇ, ನ್ಯಾಯ ಕೊಡಿಸಿದೋರಿಗೆ ಮಾತ್ರ ವೋಟು ಅಂತ ಹೇಳಿಬಿಡಿ ಎಲ್ರಿಗು. ಅಲ್ಲ, ಕೇರಿಲಿ ಸಂಘಗಿಂಗ ಮಾಡ್ಕಂಡಿರ್ಲಿಲ್ವ?'

'ಎಲ್ಲ ಇದೆ ಕಣಮ್ಮೋ. ಆ ಸಂಘದ್ ಕೋಲಿ ನೋಡಲ್ಲಿ ಎಂಗ್ ಸುಟ್ಹೋಗದೆ ಅಂತ. ದಿನಾ ನಂ ಮಕ್ಳುಮರಿ ಎಲ್ಲ ಅಲ್ಲೇ ಒಟ್ಟು ಮಲಗ್ತಿದ್ವು, ಓದ್ಕತಿದ್ವು. ಅಲ್ಲೇ ಹೊಡದಾಟನೂ ಮಾಡ್ತಿದ್ವು. ನಂ ಕೇರಿ ಜನ ಎಲ್ಲ ಪಾರ್ಟೀಲೂ ಇದಾರೆ. ನಾನೂ ಒಂದ್ ಪಾರ್ಟಿಲಿ ಇದೀನಿ. ಆದ್ರೆ ಅಲ್ಲಿ ಇಂಥದೆಲ್ಲ ಕೇಳಕ್ ಬಾಯೇ ಇರಲ್ಲ. ಒಂದ್ ವಿಷ್ಯ ಹೇಳ್ತಿನಿ, ಅವತ್ ಸುಡಕ್ ಬಂದಿದ್ರಲ, ಅವ್ರಲ್ಲಿ ಆಚೆಕೇರಿಯ ನಂ ಪಾರ್ಟಿ ಜನನೂ ಇದ್ರು. ನಾ ನೋಡ್ತನೇ ಇದ್ದಂಗೆ ನಮ್ಮನೆಗೆ ಬಂದೋದವ್ರೆ ಕೈಗೆ ಸಿಕ್ಕಿದ್ನೆಲ್ಲ ಸುಟ್ಹಾಕಿದ್ರು. ಸಿಕ್ರೆ ನನ್ನೂ ಸುಟ್ಟಿರೋರೊ ಏನೋ. ಜಾತಿ ಅಂದ್ರೆ ಹಂಗೇ, ಮತ್ತೆಲ್ಲ ಮರ್ತೆ ಹೋಗ್ತದೆ. ಇರ್ಲಿ, ದೇವ್ರು ನೋಡ್ಕತಾನೆ ಅವ್ರುನ್ನ..'

ಫೋಟೋ ಕಟ್ಟಿನೊಳಗಿದ್ದ ದೇವರು ಸಂಸಾರ ಸಮೇತ ಸುಟ್ಟುಹೋಗಿ ಭಕ್ತರನ್ನು ಬೀದಿಯಲ್ಲಿ ನಿಲಿಸಿದ್ದ. ಮಾತಾಡುತ್ತ ಆಡುತ್ತ ಅವಳ ಗಂಟಲು ಕಟ್ಟಿತು. ಸೆರಗು ಹೊದೆಯುತ್ತ ತಿರುವಿನಲ್ಲಿ ಮರೆಯಾದಳು. ಅವಳ ಹಿಂದೇ ಹುಡುಗನೂ, ನಾಯಿಮರಿಯೂ..

ಕವಿದ ಮಂಜು ಪೂರಾ ತಿಳಿಯಾಗಿ, ಚಳಿ ಇಂಚಿಂಚೇ ಸರಿಯತೊಡಗಿತ್ತು. ಮೇಲೇರುವ ಸೂರ್ಯ ಧಗಧಗಿಸುವ ಕಾಯಕಕ್ಕೆ ಸನ್ನದ್ಧನಾಗತೊಡಗಿದ. ಪೊಲೀಸ್ ವಾಹನ, ಜನ ಜಮಾಯಿಸತೊಡಗಿದರು.

ವಾಪಸ್ ಹೊರಟೆ. ಅಷ್ಟು ದೂರ ಹೋಗಿ ತಿರುಗಿ ನೋಡಿದರೆ ಮೋಟು ಗೋಡೆಗಳ ಮೇಲಿಂದ ಕಾಣುತ್ತಿತ್ತು ಅಂಬೇಡ್ಕರ್ ಲೋಹಮೂರ್ತಿಯ ಎತ್ತಿದಕೈ..

❖

ಆ ಹಳ್ಳಿಯಿಂದ ಹದಿನೈದು ಕಿಲೋಮೀಟರು. ಜಿಲ್ಲಾ ಕೇಂದ್ರವಾದ ಆ ಪುಟ್ಟ ಪಟ್ಟಣದ ಹೋಟೆಲುಗಳೆಲ್ಲ ಭರ್ತಿಯಾದಂತಿತ್ತು. ನಾನು ಹೋಟೆಲಿಂದ ಹೋಟೆಲಿಗೆ ಅಲೆಯುವುದನ್ನು ಗಮನಿಸಿ ಆಟೋ ಡ್ರೈವರನೊಬ್ಬ ರೂಮು ಕೊಡಿಸುತ್ತೇನೆಂದು ನನ್ನ ಬ್ಯಾಗ್ ಕಿತ್ತು ಒಳಗಿಟ್ಟು ಕೂರಿ ಮೇಡಂ ಎಂದ. ಸೋತು ಬಳಲಿದ ಕಾಲುಗಳು ಒಳನುಸುಳಿ ಕೂತವು.

ಅಂತೂ ಕೊಳಕು ಹೋಟೆಲೊಂದರಲ್ಲಿ ಒಂದು ರೂಮು ಸಿಕ್ಕಿತು. ವಾಚಾಳಿ ರಿಸೆಪ್ಷನಿಸ್ಟ್ 'ಇಲ್ಲಿ ಏನಾದ್ರೂ ಫಂಕ್ಷನ್ ಅಂತ ಬಂದ್ರಾ? ನೀವ್ ಜರ್ನಲಿಸ್ಟಾ?' ಎಂದು ಕೇಳಿದ. 'ಓ ಆ ಹಳ್ಳಿ ಕೇಸಿಗೆ ಬಂದಿದ್ರಾ? ಅದಕ್ಕೆಲ್ಲ ಕಾರಣ ಬೇರೆನೇ ಇದೆ. ಈಗ ಕಾಲ ಒಳ್ಳೇದಿಲ್ಲ. ಕೆಲ್ಸದವ್ರ ಸೊಕ್ಕು ಎಷ್ಟು ಏರ್ಬಿಟ್ಟಿದೆ ಅಂದ್ರೆ ಅವ್ರೇ ಈಗ ರಾಜ ಮಾರಾಜ್ರು. ನಮ್ಮತ್ರನೂ ಕೆಲ್ಸ ಕೇಳ್ಕಂಡ್ ಬರ್ತಾರೆ ಮೇಡಂ ಆ ಹುಡುಗ್ರು. ನಿಯತ್ತೇ ಇಲ್ಲ ಅವಕ್ಕೆ, ನೂರು ರೂಪಾಯಿ ಹೆಚ್ಚು ಕೊಡ್ತೀನಂದ್ರೆ ಮತ್ತೆಲ್ಲೋ ಹಾರಿಹೋಗ್ಬಿಡ್ತಾರೆ. ಆ ಹುಡುಗ್ರಿಗೆ ಮೈ ಬಗ್ಸೋ ಕೆಲ್ಸ ಬೇಡ. ಜೊತೆಗೆ ದೊಡ್ಡ ಜಾತಿಯೋರ್ನ ಲವ್ ಮಾಡೊ ಆಸೆ. ಅದ್ಕೆ ಗಲಾಟೆ ಆಗಿದ್ದು. ಅಂದಂಗೆ ನೀವು.. ಯಾವ ಜನ?'

'ಅಲ್ರೀ, ದುಡ್ಡು ಹೆಚ್ಚು ಬರುತ್ತೆ ಅಂದ್ರೆ ಡಾಕ್ಟ್ರು, ಇಂಜಿನಿಯರು, ರಾಜಕಾರಣಿಗಳು ಎಲ್ರೂ ಒಂದ್‌ಕಡೆಯಿಂದ ಇನ್ನೊಂದ್ ಕಡೆ ಹಾರ್ತಾರೆ. ಅಂಥದ್ರಲ್ಲಿ ಕೂಲಿ ಕೆಲ್ಸ ಮಾಡೋರು ಮಾತ್ರ ನಿಯತ್ತಾಗಿ ಒಂದೇ ಕಡೆ ಮಾಡ್ತಾ ಇರಬೇಕು ಅಂದ್ರೆ ಹೇಗೆ?'

ಅವನಿಗೆ ನನ್ನ ಮಾತು ಯಾವಕಡೆ ಇದೆಯೆಂದು ಅರ್ಥವಾಗಲು ಕ್ಷಣಕಾಲ ಹಿಡಿಯಿತು. ಇದ್ಯಾವ ಜೀವಿಯೆಂದು ಕಣ್ಣು ಕಿರಿದಾಗಿಸಿ ನೋಡಿದ. ಮಾತಿನ ಪ್ರವಾಹ ನಿಂತಿತು.

ಎರಡನೆಯ ಮಹಡಿಯಲ್ಲಿ ರೂಮು. ಲಿಫ್ಟ್ ಇಲ್ಲ. ಕಾಲೆಳೆಯುತ್ತ ಹತ್ತುತ್ತಿದ್ದೆ. ಬಾಣದಂತೆ ಚಿಮ್ಮಿ ಬಾಗಿಲಿಂದ ಹೊರಬಂದ ಅವಳು ನನ್ನ ಕಂಡು ಬೆಚ್ಚಿ ನಿಂತಳು.

ಏದುಸಿರಿನಿಂದ ಹಾರಿ ಬೀಳುವ ಎದೆ. ಮುಖದ ಗೀರು ಗಾಯ ಎತ್ತಿ ತೋರಿಸುವ ಗಾಬರಿ. ಏನಾಯಿತಿವಳಿಗೆ?

ರೂಮು ಹೊಕ್ಕವಳು ಮತ್ತೆಮತ್ತೆ ರೂಮಿನ ಬಾಗಿಲು ಭದ್ರಪಡಿಸಿದೆಯೇ ಇಲ್ಲವೇ ನೋಡಿದೆ. ನಾಲ್ಕು ಚೊಂಬು ತಣ್ಣೀರು ಸುರಿದುಕೊಂಡು ಮಲಗಿದ್ದೊಂದೇ ಗೊತ್ತು. ಚೀರಾಡುವ ದನಿ. ಎಳೆಯ ಧ್ವನಿ. ಅಷ್ಟೇನೂ ಜೋರಾಗಿ ಕೇಳಿಸುತ್ತಿಲ್ಲ, ಆದರೆ ಎಲ್ಲಿಂದ ಬರುತ್ತಿದೆ? ಬಾಗಿಲು ತೆರೆದು ಹೊರಹೋದೆ. ಕಾರಿಡಾರು ನಿರ್ಜನ, ನಿಶ್ಶಬ್ದ. ಇದ್ದಕ್ಕಿದ್ದಂತೆ ಯಾರೋ ಹಿಂದಿನಿಂದ ಬಾಯಿ ಮುಚ್ಚಿದರು. ಕೂಗಲೂ ಆಗುತ್ತಿಲ್ಲ. ಅಯ್ಯೋ.. ಕೈಕಾಲು ಒದರುವಾಗ ಧಿಗ್ಗನೆ ಎಚ್ಚರವಾಯ್ತು. ಬೆವರುತ್ತಿದ್ದೆ, ಗಂಟೆ ಆಗಲೇ ಸಂಜೆಯ ನಾಲ್ಕು..

ಸೈಲೆಂಟ್ ಮೋಡಿನಲ್ಲಿದ್ದ ಮೊಬೈಲು ತುಂಬ ಮೆಸೇಜು, ಕಾಲ್ ತುಂಬಿದ್ದವು. ಪತ್ತೆಯಿಲ್ಲದಂಗೆ, ಫೋನೆತ್ತದಂಗೆ ಎಲ್ಲಿ ಹಾಳಾಗಿ ಹೋದೆ ಅಂತ ಸರಸ್ವತಿ ಸಿಟ್ಟಿನಿಂದ ಬೈದಿದ್ದಳು. ನನಗೇನಾದರೂ ಆಯಿತೋ ಎಂದು ಗಾಬರಿ ಆಗಿದ್ದಳು. ಬೆಂಗಳೂರು ಅತ್ಯಾಚಾರ ವಿರೋಧಿ ಪ್ರತಿಭಟನೆಯ ಮೆರವಣಿಗೆಯ ವರದಿ ಮೆಸೇಜಿನಲ್ಲೆ ಸಿಕ್ಕಿತು. 'ಅನಿವಾರ್ಯ ಕಾರಣಗಳಿಂದ ಬರಲಾಗಲಿಲ್ಲ, ಕ್ಷಮಿಸಿ' ಎಂಬ ಎರಡು ಸಾಲಿನ ಕಾಮನ್ ಮೆಸೇಜು ಎಲ್ಲರಿಗೂ ಕಳಿಸಿ ಜಿಲ್ಲಾ ಸರಕಾರಿ ಆಸ್ಪತ್ರೆಗೆ ಹೊರಟೆ.

ಭೇಟಿಕೊಡುವ ಸಮಯ ಮುಗಿದಿದ್ದರಿಂದಲೋ ಏನೋ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ಒಂದಿಬ್ಬರು ಪೊಲೀಸರ ಹೊರತು ಹೆಚ್ಚು ಜನ ಕಾಣಿಸಲಿಲ್ಲ. ನೇರ ಡ್ಯೂಟಿ ಡಾಕ್ಟರ್ ರೂಮಿಗೆ ಹೋದೆ. ಸಮಯ ಮೀರಿದ ಮೇಲೆ ಬಂದರೆಂಬ ಅಸಹನೆಗೆ ಡಾಕ್ಟರರ ಹುಬ್ಬುಗಳ ನಡುವೆ ನಿರಿಗೆ ಇಣುಕಿತು. ರಿಜಿಸ್ಟರಿನಲ್ಲಿ ಮುಖ ಹುದುಗಿಸಿದವರು ಬೈಫೋಕಲ್ ಲೆನ್ಸಿನ ಮೇಲಿಂದಲೇ ದೃಷ್ಟಿ ಹಾಯಿಸಿ ಕಣ್ಣಲ್ಲೇ ಏನೆಂದು ಪ್ರಶ್ನಿಸಿದರು. ವೃತ್ತಿಬಾಂಧವರೆಂದು ತಿಳಿದ ಕೂಡಲೇ ಬೆನ್ನು, ಕಿವಿ ನೆಟ್ಟಗಾಗಿಸಿ ಮಾತನಾಡತೊಡಗಿದರು.

'ದಟ್ ಕೇಸ್ ಈಸ್ ಬಿಟ್ ಕಾಂಪ್ಲಿಕೇಟೆಡ್ ಅಸ್, ಷಿ ಈಸ್ ಹೈಲಿ ನಾನ್ ಕೋಆಪರೇಟಿವ್. ಆ ಹುಡುಗಿ ಅಣ್ಣನೇ ಮತ್ತೊಂದ್ ಜಾತಿ ಹುಡುಗಿ ಜೊತೆ ಓಡಿಹೋಗಿ ಮದುವೆಯಾಗಿ ಇಷ್ಟೆಲ್ಲಕ್ಕೆ ಕಾರಣ ಆಗಿರೋದು. ಅವಳ ಎಕ್ಸಾಮಿನೇಷನ್ನೇ ಸಾಧ್ಯ ಇಲ್ಲ. ಪೊಲೀಸ್ನೋರೂ ಸುಸ್ತು ಹೊಡೆದು ಹೋದ್ರು. ರೆಫರ್ ಮಾಡ್ತಿನಿ, ಮುಂದ್ ಕರ್ಕಂಡ್ ಹೋಗಿ ಅಂದ್ರೂ ನಂ ಹುಡುಗ್ರು ಬರ್ಬೇಕು ಅಂತಾರೆ ಅವಳಪ್ಪ ಅಮ್ಮ. ಆ ಜನವೇ ಹಾಗೆ. ಇಲಿ ಹೋದ್ರೆ ಹುಲಿ ಹೋದಷ್ಟು ಗದ್ದಲ ಎಬ್ಸೋದು. ಅವ್ರು ಹೇಳಿದ್ನೆಲ್ಲ ಪೂರ್ತಿ ನಂಬಕ್ಕೂ ಆಗಲ್ಲ. ಆಚೆ ಕೇರಿಯ ಐದು ಜನ ಇವಳನ್ನ ರೇಪ್ ಮಾಡಿದ್ರು ಅಂತಾರೆ. ಬರೀ ಎಂಟು ವರ್ಷ ಅವಳಿಗೆ. ಜೆನೈಟಲ್ಸ್ ಮೇಲೆ ಕೆಲವು ಸ್ಕ್ರ್ಯಾಚ್ ಇಂಜುರೀಸ್ ಇದಾವೆ. ಹೈಮೆನ್ ರಪ್ಚರ್ ಆಗಿದೆ. ಸ್ಯಾಂಪಲ್

ಕಳ್ಸಿದೀವಿ. ಆದ್ರೆ ಹೇಳಕ್ಕಾಗಲ್ಲ, ಅದ್ರ ಅಪ್ಪನೇ ಕುಡ್ದು ಬಂದು ರೇಪ್ ಮಾಡಿರ್ಬೋದು. ಅವೆಲ್ಲ ಅಂಥ ಕೇರಿಗಳಲ್ಲಿ ಕಾಮನ್. ನಾವೇ ಈ ಬ್ಲಡಿ ಮಿಡಲ್‌ಕ್ಲಾಸ್ ಜನ ಮೊರಾಲಿಟಿ ಮಣ್ಣುಮಸಿ ಅಂತ ಪ್ರಾಣ ಬಿಡ್ತೀವಿ. ಅವಕ್ಕೆ ಅಂಥದ್ದೇನಿಲ್ಲ. ನೋಡಿ, ಇವತ್ ಮಿನಿಸ್ಟರ್ ಬಂದವ್ರು ಸ್ಪಾಟ್‌ನಲ್ಲಿ ೫೦ ಸಾವ್ರ ಕೊಟ್ರು. ಇನ್ನೂ ಪರಿಹಾರ ಕೊಡ್ತಿವಿ ಅಂದಿದಾರೆ. ಅವುಕ್ ಲಾಟರಿ ಹೊಡದಂಗೆ ಇದು, ದುಡ್ ಸಿಕ್ರೆ ಎಲ್ಲ ಮರ್ತು ಬಿಡ್ತಾರೆ. ಡು ಯು ವಾಂಟು ಟು ಸೀ ದ ಕೇಸ್? ಬೇಕಾದ್ರೆ ತೋರಿಸ್ತಿನಿ..'

'ನೋಡುವಂಥದು ಏನಿಲ್ಲ. ಯಾವ ಜನನೇ ಆಗ್ಲಿ, ಆ ಎಳೆಯ ಹುಡುಗಿ ಹೆಣ್ಣೇ ತಾನೇ? ಯಾರೇ ಮಾಡ್ಲಿ, ಅದು ಅತ್ಯಾಚಾರವೇ ತಾನೇ?'

'ಆಫ್‌ಕೋರ್ಸ್, ಆಫ್‌ಕೋರ್ಸ್.. ಅದೇನೋ ಹೌದು ಬಿಡಿ. ಪಾಪ. ಅಂದ್ಹಾಗೆ ನಿಂ ಸರ್ ನೇಮ್ ಏನಂದ್ರಿ? ನೀವು ಬಂದಿದ್ದು..?'

ನನಗೆ ಕರೆಯಲೊಂದು ಹೆಸರಷ್ಟೆ ಇದೆ, ಸರ್‌ನೇಮ್ ಇಲ್ಲವೆಂದು ಹೇಳಿ ಮೇಲೆದ್ದೆ. ವ್ಯಂಗ್ಯದ ಕಿರುನಗೆ ನಮ್ಮಿಬ್ಬರ ಮುಖದಲ್ಲೂ ಸುಳಿದುಹೋಯಿತು.

ಮತ್ತೆ ಆ ಕೊಳಕು ಹೋಟೆಲಿನೆದುರು ಬರುವಾಗ ತಿರುವಿನಲ್ಲಿ ಕಾಸಗಲ ಬಿಂದಿಯಿಟ್ಟುಕೊಂಡವಳು ನೆಲ ಗೆಬರುತ್ತ ಸಂಜೆಬಿಸಿಲ ಕಟ್ಟಡದ ನೆರಳಲ್ಲಿ ನಿಂತಿದ್ದಳು. ಅವಳ ದೊಡ್ಡ ದೇಹ ದುಂಡಗಾಗಿ, ಬಿಂದಿಯಾಗಿ ಆಕೆಯ ಹಣೆ ಸೇರಿ ರಸ್ತೆಯಲ್ಲಿ ಚಲಿಸುವ ಪಾದಗಳತ್ತಲೇ ತನ್ನ ದೃಷ್ಟಿ ನೆಟ್ಟಿತ್ತು.

❖

ಸಂಜೆ ಕರಗಿ ರಾತ್ರಿ ಮೆಲ್ಲನಿಳಿಯತೊಡಗಿತ್ತು. ಅಮಾವಾಸ್ಯೆಯ ಕದ್ದಿಂಗಳು. ಬೆಳಿಗ್ಗೆ ಇಳಿದಲ್ಲೆ ಬಸ್ ಹತ್ತುವೆನೆಂದು ಡ್ರೈವರನಿಗೆ ಫೋನಾಯಿಸಿದೆ. ನನ್ನ ಬಸ್ ಬರಲು ಇನ್ನೂ ಮೂರೂವರೆ ತಾಸು ಸಮಯವಿದೆ ಎಂದು ಮೊಬೈಲು ಬ್ಯಾಟರಿಯ ಬೆಳಕಿನಲ್ಲಿ ಮತ್ತದೇ ಹಳ್ಳಿಯ ಹಾದಿ ಕ್ರಮಿಸುತ್ತಿದ್ದೆ. ಚಳಿ ಇಳಿಯತೊಡಗಿತ್ತು.

ಪೊಲೀಸ್ ಬ್ಯಾರಿಕೇಡ್ ನಿರ್ಜನವಾಗಿತ್ತು. ಚಿಮಣಿ ದೀಪಗಳ ಹೊಗೆ ಬೆಳಕಿನಲ್ಲಿ ಕೇರಿ ಮಿನುಗುತ್ತ ಗಾಯದ ಸುಳಿವೇ ಇಲ್ಲದೆ ಮನೆವಾರ್ತೆಯ ನಿತ್ಯಕರ್ಮಗಳಲ್ಲಿ ಮುಳುಗಿರುವಂತೆ ಕಾಣುತ್ತಿತ್ತು. ಸುತ್ತ ಕವಿದ ಕಗ್ಗತ್ತಲು, ದೀಪವಿಲ್ಲದ ಬೀದಿ. ತರತರದ ಸದ್ದುಗಳು. ಬೆಂದ, ಬೇಯುತ್ತಿರುವ ಅಡಿಗೆಯ ಪರಿಮಳ. ಮಿಣುಕು ಬೆಳಕು, ಪರಿಮಳ, ರೇಡಿಯೋ–ಟೇಪು–ಮೊಬೈಲು ಮಾತುಗಳ ನಾನಾ ಸದ್ದುಸನ್ನೆಗಳು ಹಗಲಿಗಿಂತ ರಾತ್ರಿಯನ್ನು ಜೀವಂತವಾಗಿಟ್ಟಿದ್ದವು. ಕತ್ತಲು ಜಗದ ವಿಸ್ತಾರವನ್ನು ಕಣ್ಣಿಗೆ ಕಿರಿದುಗೊಳಿಸಿ ಮನೆಯೇ ಜಗತ್ತಾಗಿ ಬೆಚ್ಚನೆಯ ಭಾವ ಹುಟ್ಟಿಸಿದಂತಿತ್ತು.

ಎಷ್ಟೊತ್ತು ಆ ಕೇರಿಯ ಸೆರಗಲ್ಲಿ ಹೀಗೆ ಕುಳಿತಿದ್ದೆ? ಇಳಿವ ಚಳಿ ಕತ್ತಲೊಳಗೆ ಕರಗುತ್ತಲಿತ್ತು. ಇದ್ದಕ್ಕಿದ್ದಂತೆ ಕತ್ತಲ ಗರ್ಭದಿಂದ ಆಕ್ರಂದನ ತೂರಿಬಂತು. ಎಳೆದನಿಯ

ಕೀರುಗೊರಳಿನ ಕೊಸರಾಟ. ಆ ದಿಕ್ಕಿನತ್ತ ನೋಡಿದೆ, ಏನೂ ಕಾಣಲಿಲ್ಲ. ಪೊಲೀಸರನ್ನು ಕರೆಯೋಣವೆಂದು ಹತ್ತಾರು ಮಾರು ದೂರದ ಚೆಕ್‌ಪೋಸ್ಟಿನ ಬಳಿ ಹೋದೆ. ದೀಪವಿತ್ತು, ಆದರೆ ನಿರ್ಜನವಾಗಿತ್ತು. ಟೇಬಲ್ಲಿನ ಮೇಲೆ ಕೊಳೆ ಕರವಸ್ತ್ರ, ಬಂದುಹೋದವರ ಲೆಕ್ಕವಿಟ್ಟ ದಫ್ತರ, ಪೆನ್ನು. ಅಷ್ಟು ದೂರದಲ್ಲಿ ಒಂದು ಬಂದೂಕು. ಕುರ್ಚಿ ಕೆಳಗೆ ಪೊಲೀಸು ಬೂಟು.

ಕಿರುಚಿದ ಕೂಗು ನನ್ನ ಭ್ರಮೆಯಲ್ಲವಷ್ಟೆ? ಯಾರಲ್ಲಿ ದೂರಲಿ? ಯಾರಿಗಾಗಿ? ಕಾಲೆಳೆಯುತ್ತ ಬಂದ ದಾರಿ ಹಿಡಿದು ವಾಪಸು ಹೊರಟೆ. ಎಲ್ಲ ಭಾರ. ಹಿಂದಿನಿಂದ ಬೂಟುಗಾಲ ಸದ್ದು, ಬ್ಯಾಟರಿ ಸಮೀಪ ಬಂದವು. ಅದೇ ಆರಡಿ ಧಡೂತಿ ದೇಹದ ಪೊಲೀಸು. 'ಈ ಹೊತ್ತಿನಲ್ಲಿ ಒಬ್ಬರೇ ಏಕೆ ಬಂದಿರಿ?' ದರ್ಪದಿಂದ ಕೇಳುತ್ತ ಮುನ್ನಡೆದ.

'ಇವತ್ತು ಎಲ್ಲರೂ ಬಂದುಹೋದರೆ?' ಎಂದೆ. ವ್ಯಂಗ್ಯದನಿಯಲ್ಲಿ ಬಂದುಹೋದ ನಾಯಕರ ವರ್ಣನೆ ಮಾಡಿದ.

'ಈಗೇನ್ ಮೇಡಂ, ಎಲ್ಲಕ್ಕೂ ಪರಿಹಾರ. ಜನ್ರಿಗೆ ಬದುಕಿದ್ರೂ ಪರಿಹಾರ, ಸತ್ರೂ ಪರಿಹಾರ. ಅತ್ಯಾಚಾರ ಆದ್ರೆ ಪರಿಹಾರ, ಗಾಯ ಆದ್ರೂ ಪರಿಹಾರ. ಈಗ ಪ್ರಪಂಚ ಪರಿಹಾರದ ಮೇಲೇ ಬದುಕಿದೆ. ಪರಿಹಾರ ತಗೊಳಿ, ಎಲ್ಲ ಬಾಯ್ಮುಚ್ಚಿ, ಅಷ್ಟೆ. ನಾವು ಮಾತ್ರ ನೋಡಿ, ಈ ಖಾಕಿ ಹಾಕಿದ್ ತಪ್ಗೆ ಈ ನನ ಮಕ್ಳ ಹೆಣ, ಬೂದಿನ ಹೇಲುಉಚ್ಚೆ ನಾತ ಕುಡೀತಾ ಕಾಯಬೇಕು. ಥೂ ಈ ಕೆಲಸಕ್ ಇಷ್ಟು ಬೆಂಕಿ ಹಾಕ. ಯಾವ್ ಕೆಲಸನಾದ್ರೂ ಸೈ, ಈ ಹೆಣ ಕಾಯೋ ಕೆಲಸಕ್ಕ್ ಮಾತ್ರ ಬರಬಾರ್ದು ನೋಡಿ. ನೂರಾರು ಮೈಲು ದೂರ ಇಂಥ ಊರಲ್ಲಿ ಅನ್ನನೀರಿಲ್ಲದೆ ಕೊಳಸ್ತಿದಾನೆ ನಂ ಬಾಸು. ನನ್ ಮಗನ ಕಾಲೇಜ್ ಅಡ್ಮಿಷನ್‌ಗೆ ರಜ ಕೇಳಿದ್ದೆ ಮೇಡಂ, ಆದರೂ ಕೊಡದೆ ಸತಾಯಿಸಿ ಇಲ್ಲಿ ಕಳ್ಸಿದಾನೆ.'

'ರಾತ್ರಿ ಡ್ಯೂಟಿಗೆ ಇಬ್ರೇ ಇದೀರಿ, ಅವತ್ತಿನಂಗೇ ಸಾವ್ರ ಜನ ಕೈಲಿ ದೊಂದಿ ಹಿಡ್ದು ಬಂದ್ರೆ ಏನ್ಮಾಡ್ತೀರಾ?'

'ಈ ಕೇರಿಗೆ ಇಬ್ರು. ಆದ್ರೆ ಆ ಸಾವ್ರ ಜನರ ಆಚೆ ಕೇರಿಗೆ ಒಂದಿಡೀ ಬೆಟಾಲಿಯನ್ನೇ ಹಾಕಿದಾರೆ ಮೇಡಂ, ಅವ್ರು ತಪ್ಪಿಸ್ಕಂಡ್ ಹೋಗದೇ ಇರ್ಲಿ ಅಂತಲ್ಲ, ಪಂಚಾಯ್ತಿ ಅಧ್ಯಕ್ಷೆ ಅವ್ರ ಕೇರಿಯೋಳೇ. ತಮಗೆ ಜೀವಭಯ ಅಂತ ಅವ್ರೇ ಮೊದ್ಲು ಪೊಲೀಸ್ ಕಂಪ್ಲೇಂಟು ಕೊಟ್ಟು ಅಲ್ಲಿಗೇ ಹೆಚ್ಚು ಪೊಲೀಸ್ ಪ್ರೊಟೆಕ್ಷನ್ ಹಾಕುಸ್ಕಂಡಿದಾರೆ.'

'ಆದರೆ ಇದು ನ್ಯಾಯವೇ? ಜೀವಭಯದಲ್ಲಿರುವವರು ಯಾರು? ಪ್ರೊಟೆಕ್ಷನ್ ಯಾರಿಗೆ ಬೇಕು? ಅಲ್ಲದೆ ಅಟ್ರಾಸಿಟಿ ಆಕ್ಟ್ ಎಷ್ಟು ಸ್ಟ್ರಾಂಗಾಗಿದ್ದರೂ, ಬೆಂಗಳೂರು ಇಷ್ಟು ಹತ್ರ ಇದ್ರೂ ಇಂಥದ್ದು ನಡೆಯುತ್ತೆ ಅಂದ್ರೆ?'

‘ಹಹಹ್ಹಾ. ಮೇಡಂ, ಸತ್ಯ ಸುಳ್ಳು, ನ್ಯಾಯ ಅನ್ಯಾಯ ಎಲ್ಲ ಈಗ ಯಾರಿಗ್ ಬೇಕಾಗಿದೆ? ಎಮ್ಮೆಲ್ಲೆಗೆ ವೋಟು ಬೇಕು. ನಮ್ಮ ಬಾಸ್‌ಗೆ ಎಮ್ಮೆಲ್ಲೆ ಆಶೀರ್ವಾದ ಬೇಕು. ಅವರಿಬ್ರೂ ಆಚೆ ಕೇರಿ ಜನರ ಜಾತಿಯೋರೇ. ಅಷ್ಟೇ ಅಲ್ಲ, ಜಿಲ್ಲಾ ಉಸ್ತುವಾರಿ ಮಂತ್ರಿನೂ ಅದೇ ಜಾತಿ. ನೋಡಿ, ಅವತ್ ಈ ಇಡೀ ಕೇರಿ ಸುಟ್ಟು ಆಮೇಲೆ ಸುಟ್ಟಾಕಿದ್ವಿ ಅಂತ ಪೋಲೀಸ್ನೋರಿಗೆ ಫೋನು ಮಾಡಿದ್ದು ಯಾರಂತ ತಿಳ್ಕಂಡ್ರಿ? ಆಚೆಕೇರಿ ಜನನೇ. ಅಷ್ಟು ಧೈರ್ಯ ಅವ್ರಿಗೆ. ಆ ಧೈರ್ಯನ ಅವ್ರ ಜಾತಿನೇ ಮೇಡಂ ಕೊಟ್ಟಿರದು. ಈಗ ಬಲವಾದ ಜಾತಿ ಜನ ಹೇಳೋದೇ ಸತ್ಯ, ಅವ್ರ ಕಡೆಗೇ ನ್ಯಾಯ, ತಿಳ್ಕಳಿ. ದುಸರಾ ಮಾತಾಡಿದ್ರೆ ಮಕತಿಕ ಎಲ್ಲ ಹೊಲಿಗೆ ಹಾಕಿ ಬಂದ್ ಮಾಡ್ತಾರೆ.’

‘ಆದ್ರೆ ಕಾನೂನು ಎಲ್ರಿಗೂ ಒಂದೇ ತಾನೇ?’

‘ಎಲ್ಲಿದಿರ ನೀವು? ಬರೀ ಕಾನೂನಿಂದ ಒಂದ್ ಹುಲ್ಲುಕಡ್ಡಿನೂ ಅತ್ತಿತ್ತ ಸರ್ರಕ್ಕಾಗಲ್ಲ ತಿಳ್ಕಳಿ. ಅದ್ಕೆ ಮನುಷ್ಯನೇ ಬರಬೇಕು. ಕಾನೂನು ಇಪ್ಪತ್ನಾಕು ಗಂಟೆ ಕಾಯಲ್ಲ ಮೇಡಂ, ಅದು ಕಾಗ್ದದ ಮೇಲಿರುತ್ತೆ. ಕೊನೆಗೂ ನೀವು ಬದುಕ್ಬೇಕಾಗದು ಸುತ್ತಮುತ್ತ ಇರೋರ ಜೊತೆನೇ. ಅದಿರ್ಲಿ, ನೀವು ಯಾವ ಜನ?’

‘ಬೆಳಿಗ್ಗೆ ಒಂದ್ಸಲ ನನ್ನ ಜಾತಿ ಅದಾ ಅಂತ ಕೇಳಿದ್ರಿ. ಈಗ ಮತ್ತೆ ಕೇಳ್ತಿದೀರಿ. ನನ್ನ ಪ್ರಯತ್ನವಿಲ್ಲದೆ ಒಂದು ಜಾತಿಯಲ್ಲಿ ಹುಟ್ಟಿದೆ. ಅಪ್ಪ, ಅಮ್ಮ, ಅಜ್ಜಿ, ಗಂಡ ಎಲ್ಲ ಒಬ್ಬೊಬ್ರು ಒಂದೊಂದು ಜಾತಿಯೋರು. ಯಾರ ಜಾತಿ ನಂದು ಅಂತ ಹೇಳಲಿ? ಇಂಥ ಘಟನೆಗಳಿಗೆ ಕೊನೆನೇ ಇಲ್ವ ಹಾಗಾದ್ರೆ?’

‘ಮೇಡಂ, ನಮ್ತಂಗಿ ತರ ಇದೀರ, ನಿಮ್ಮತ್ರ ಹೇಳ್ತಿದೀನಿ ಕೇಳಿ. ನಮ್ಮಿಬ್ರನ್ನ ಇಲ್ಗೆ ಎಷ್ಟೋ ದೂರದಿಂದ ಇಲ್ಯಾಕೆ ತಂದು ಹಾಕಿದಾರೆ ಗೊತ್ತಾ? ನಾವು ಈ ಸುಟ್ಟುಹೋಗಿರೋ ಕೇರಿ ಜಾತಿಯೋರು ಅಂತ. ಜನಕ್ಕೆ ತಂ ಜಾತಿ ಪೋಲೀಸ್ ಕಾಯ್ತಿಲ್ಲ ಅಂದ್ರೆ ನಂಬ್ಕೆ ಬರಲ್ಲ ಅಂತ ನಮ್ಮುನ್ನ ಕರ್‍ಸಿ ಹಾಕಿದಾರೆ. ಈಗ ಜಾತಿ ಬಿಟ್ ಏನೂ ಹಂದಾಡಲ್ಲ ಮೇಡಂ, ಅದ್ರಲ್ಲೂ ಸರ್ಕಾರೀ ಇಲಾಖೇಲಿ ಕೆಲಸ ಮಾಡೋದೇ ಜಾತಿ. ಬಲವಾನರಿಗೇ ಕಾಲ..’

ಪಕ್ಕದ ಹೊಲದ ಬದುವಿನ ಪೊದೆಯಲ್ಲಿ ಸರಸರ ಸದ್ದು. ಪೊಲೀಸ್ ಬ್ಯಾಟರಿ ಬಿಟ್ಟು ಅತ್ತ ಕಡೆ ನಡೆದ. ಅದೇ ಹೆಣ್ಣುಮಗಳು, ಬೆಳಿಗ್ಗೆ ಗಂಡನ ಕೈಲಿ ಹೊಡೆತ ತಿಂದವಳು. ಲಾಟೀನು ಬೆಳಕಲ್ಲಿ ಮುಳ್ಳು, ಕಂಟಿ ಗಿಡಗಳನ್ನಾಯ್ದು ರಾಶಿ ಮಾಡುತ್ತಿದ್ದಳು. ‘ಇಷ್ಟೊತ್ನಲ್ಲಿ ಕಟ್ಗೆ ಮಾಡಕ್ಕೆ ಟೈಂ ಸಿಕ್ತೇನೇ ಗರತಿ? ನಡಿ ಮನೆಗೆ. ಇಲ್ಲಿ ನಿನ್ ಯಾರಾದ್ರೂ ಹುಗದು ಹೂತ ಹಾಕಿದ್ರೆ ನಾನು ನೇಣು ಹಾಕ್ಕಬೇಕು. ನಡಿಯೇ ಮನೆಗೆ ಭಾಂಚದ್..’

ಅವನ ಅಬ್ಬರಕ್ಕೆ ಆಚೆ ಪೊದೆಯಲ್ಲಿದ್ದಾತ ಈಚೆ ಬಂದ. ಅವನೇ, ಕಟ್ಟಿಗೆಯಿಂದ ಹೆಂಡತಿಗೆ ಹೊಡೆದವ. 'ಏನ್ ಸಾಯೇಬ್ರೆ? ಹಗಲೆಲ್ಲ ಹೊರಗ್ ಬರ್ಬ್ಯಾರ್ದು, ಕರ್ಫ್ಯೂ ಅಂತ ಹೆದರುಸ್ತಿರ, ರಾತ್ರಿನೂ ಬರಬ್ಯಾಡಂದ್ರೆ ಕುಳ್ಳುಕಟಿಗೆ, ನೀರ್ಗೆ ಏನ್ ಮಾಡನ? ಹಸಿ ಕಟಿಗಿ ತುಂತುಂಬಿ ಗಂಜಿ ಬೇಯ್ತಿಲ್ಲ, ಮಕ್ಳು ಮರಿ ಕಣ್ಣಲ್ಲಿ ನೀರ್ ತಪ್ಪತಿಲ್ಲ..'

'ಕತ್ತಲಲ್ಲಿ ಕಟ್ಟಿಗೆ ಒಟ್ಟು ಮಾಡಬೇಕು, ರಾತ್ರಿ ಹೊತ್ತು ನೀರು ತುಂಬಿಟ್ಟಬೇಕು. ಹಗಲು ಮನೆಯೊಳಗೆ ಭಯದಲ್ಲಿ ಪತರಗುಟ್ತ ಕೂರಬೇಕು. ಎಲ್ಲದ್ಕೂ ಪರಿಹಾರ ಕೊಡ್ತಾರೆ ಅಂದ್ರಿ. ಇಂಥ ಬದುಕಿಗೆ ಯಾವ ಪರಿಹಾರ ಇದೆ ಪೋಲೀಸ್ನೋರೇ?'

ನನ್ನ ಪ್ರಶ್ನೆಗೆ ಅವನ ಗೊಣಗಾಟವಷ್ಟೇ ಕೇಳಿತು. ಅಷ್ಟರಲ್ಲಿ ಹೈವೇ ರಸ್ತೆ ಬಂದಿತ್ತು. ಒಂದು ಬಸ್‌ನಿಂದ ಒಂದಷ್ಟು ಹುಡುಗರು ಇಳಿದು ಲೋಡುಗಟ್ಟಲೆ ಲಗೇಜು ಇಳಿಸತೊಡಗಿದರು. ಪೊಲೀಸು ಅವರ ಕಡೆಗೇ ದಿಟ್ಟಿಸುತ್ತ 'ಯಾಕಡೆ ಹೋಗ್ತಿದೀರಿ?' ಎಂದು ಕೇಳಿದ. ಅವರಲ್ಲೊಬ್ಬ ಉಪೇಕ್ಷೆಯಿಂದ ಇವನ ಕಡೆ ನೋಡಿ ಉತ್ತರಿಸದೆ ಲಗೇಜು ಇಳಿಸತೊಡಗಿದ. ಒಂದೆರೆಡು ನಿಮಿಷ ಕಳೆದದ್ದೇ ಅವರೆಲ್ಲ ಆ ಕಡೆ ಹೊರಟರು. 'ಮಗ್ನೇ, ಕಿವಿ ಇಲ್ವಾ? ಎಲ್ಲಿ ಹೊರಟಿದಿರಿ?' ರೇಗಿದ ಪೊಲೀಸು ಕೋಲನ್ನು ನೆಲಕ್ಕೆ ಕುಟ್ಟಿದ. ಅವರ ಬಾಕ್ಸುಗಳ ಮೇಲೂ ಕೋಲಿನಿಂದ ಕುಟ್ಟತೊಡಗಿದ. 'ಊರುಕೇರಿ ಎಲ್ಲ ಸುಟ್ಟು ಕರಕಲಾಗಿದೆ, ಇನ್ನೆಲ್ಲಿ ಹೋಗೋದು, ಸುಡುಗಾಡಿಗೆ ಹೋಗ್ತಿದೀವಿ' ಎಂದೊಬ್ಬ ಘಟ್ಟಿಸಿ ಹೇಳಿದ. 'ಆಯ್ತಪ್ಪ, ಸುಡಗಾಡಿಗಾದ್ರೂ ಹೋಗಿ, ಅದರಾಚೆ ಕೈಲಾಸಕಾದ್ರೂ ಹೋಗಿ, ಗುಂಪು ಗದ್ಲ ಎಬ್ಬಿಸಂಗಿಲ್ಲ. ಹ್ಞಂ, ಸೆಕ್ಷನ್ ಹಾಕಿದೀವಿ..' ಶಾಂತಿ ಕಾಪಾಡುವ ತನ್ನ ಕೆಲಸದ ನಿಮಿತ್ತ ಮೊದಲ ಗುಟುರು ಹಾಕಿದ ಪೊಲೀಸು.

'ಹೋಗ್ರಿಹೋಗ್ರಿ, ಇಲ್ಲೇನ್ ಸೆಕ್ಷನ್ ಹಾಕ್ತಿರಿ. ಅಲ್ಲಿ, ಆ ಕೇರಿಗ್ ಹಾಕ್ರಿ. ಹೊಡ್ತ ಹೊಡಸ್ಕೊಂಡೋರಿಗೆ ಹಾಕ್ತಾರಂತೆ ಸೆಕ್ಷನ್ನು' ಎನ್ನುತ್ತ ಆ ಯುವಕ ಮೇಲೇರಿ ಹೋದ. ಅಲ್ಲೊಂದು ಸಣ್ಣ ಗುಂಪು ಸೃಷ್ಟಿಯಾಯಿತು.

ಅಷ್ಟರಲ್ಲಿ ನನ್ನ ಬಸ್ಸು ಬಂತು. ಈ ಚಳಿಯಲ್ಲಿ ಮೂರು ಮೈಲಿ ಜೊತೆಗೆ ನಡೆದು ಬಂದ ಪೊಲೀಸಪ್ಪನಿಗೆ ಏನು ಹೇಳುವುದೆಂದು ಯೋಚಿಸುತ್ತ ಬ್ಯಾಗ್‌ನಲ್ಲಿದ್ದ ನನ್ನೊಂದು ಪುಸ್ತಕ ತೆಗೆದುಕೊಟ್ಟೆ. ನಿರ್ಲಿಪ್ತನಾಗಿ ಒಂದು ಸುಳಿನಗೆ ಚೆಲ್ಲಿ, 'ಮೇಡಂ, ಇವತ್ತಿಡೀ ಗದ್ಲದಲ್ಲಿ ತಲೆನೋವು. ನನ್ಜೊತೆಯವನಿಗಂತೂ ಜ್ವರ ಬಂದೋಗಿದೆ. ಈ ಹಾಳೂರಲ್ಲಿ ಮೆಡಿಕಲ್ ಶಾಪೂ ಇಲ್ಲ. ಡಾಕ್ಟ್ರು ಅಂತಿರ, ಏನಾದ್ರೂ ಮಾತ್ರೆ ಇದ್ರೆ ಕೊಡ್ತಿರಾ' ಎಂದು ರಾಗವೆಳೆದ.

ಅಂಥವರಿಗಾಗಿ ಅದು ಇದ್ದೇ ಇತ್ತು.

❖

(ಸಂವಾದ – ವಿಶೇಷಾಂಕ, 2012)

ಗಾಲಿಬ್‌ನ ಮನೆಯ ಮಾಡು

ಮಮತಾ ಆರ್

ಮಂಕು ಕವಿದ ಮುಂಜಾನೆ ಸುಲಿದ ಬಾದಾಮಿಯನ್ನು ಬಾಯೊಳಗಿಡುತ್ತ ಗಾಲಿಬ್ ಕುಳಿತಿದ್ದ. ಹಾಸಿಗೆ ಮತ್ತು ದುಪ್ಪಟ್ಟಿಗಳ ನಡುವೆ ಮುದುರಿಕೊಂಡು ಮಲಗಿ ಬೇರೆಯವರ ಸೂಚನೆಗಳನ್ನು ಸರಿಯಾಗಿ ಪಾಲಿಸುತ್ತ ಆರೈಕೆ ಮಾಡಿಕೊಳ್ಳಬೇಕಿದ್ದ ವಯಸ್ಸಿಗೆ ಅವನಾಗಲೇ ಬಂದು ತಲುಪಿದ್ದ. ಆದರೆ ವಿಧಿ ಅವನ ಬಗೆಗೆ ಹೊಂದಿದ್ದ ಕ್ರೂರ ಆಶಯಗಳಲ್ಲಿ ಒಂದನ್ನಾದರೂ ಅವನ ವೃದ್ಧಾಪ್ಯದ ಹಂತದಲ್ಲಿಯೂ ಸಡಿಲಿಸಿರಲಿಲ್ಲ. ಅದರ ಅತ್ಯಂತ ದೊಡ್ಡ ಅಣಕವೆಂದರೆ ಆಡುವ ವಯಸ್ಸಿನಲ್ಲಿ ಅವನು ಕವಿಯಾಗಿಬಿಟ್ಟಿದ್ದು ಈಗವನಿಗೆ ಮನವರಿಕೆಯಾಗಿದೆ. ಆಯ್ಕೆಯ ಅಧಿಕಾರವಿರದ, ಒಪ್ಪಿಕೊಳ್ಳುವ ಅಸಹಾಯಕತೆಗಷ್ಟೇ ಪದೇ ಪದೆ ಒಳಗಾದ ಮನಸ್ಸು ಪಾರಾಗಲು ಹುಡುಕಿಕೊಂಡ ದಾರಿಯದು. ಆ ದಾರಿಯಲ್ಲಿ ಮುಂಬರುವ ಪಯಣಿಗ ನಿಂತು ಈ ದಾರಿಯಲ್ಲಿ ನಿಜಕ್ಕೂ ನಡೆದಿರುವವನು ಒಬ್ಬನೇ ಎಂದು ವಿಸ್ಮಯಪಡುವುದನ್ನು ಕಲ್ಪಿಸಿಕೊಳ್ಳುವಾಗಲೆಲ್ಲ ಆ ಮುಖದ ಸುಕ್ಕುಗಳಲ್ಲಿ ಪಸರಿಸಲು ಸಂತೋಷದ ಕಣಗಳು ಧಾವಿಸುತ್ತಿದ್ದವು. ಆದರೆ ಆ ದಿನಗಳಿಗೆ ಸಂಬಂಧಿಸಿದಂತೆ ಎಲ್ಲವೂ ಇಷ್ಟು ಆಕರ್ಷಕವಾಗಿರಲಿಲ್ಲ.

ಅದಾಗಲೆ ಅವನಿಗೆ ಒಬ್ಬ ತಂದೆ ಮತ್ತು ಒಬ್ಬ ಚಿಕ್ಕಪ್ಪನನ್ನು ಕಳೆದುಕೊಂಡು ಎರಡು ಬಾರಿ ಅನಾಥನಾದ ಅಗಾಧವಾದ ಅನುಭವವಿತ್ತು. ಚೇಷ್ಟೆ ತಮಾಷೆಗಳಲ್ಲಿ ಹಗುರಾಗಿ ವಿಹರಿಸುತ್ತಿದ್ದವನನ್ನು ಗದರಿಸಿ ಮದುವೆಯ ಪಂಜರದಲ್ಲಿ ಇರಿಸಲಾಗಿತ್ತು. ಈ ಮಧ್ಯೆ ಅಮೃತ ಹನಿಗಳಿಂದ ಅವನ ಹೃದಯದ ನೆಲ ಕೆಲಕಾಲ ಒದ್ದೆಯಾಗಿದ್ದುದು ನಿಜ. ಅದರ ಆರ್ದ್ರತೆಯೇ ಬರಡಾಗಲು ಸಾಧ್ಯತೆಯಿದ್ದ ಹೃದಯವನ್ನು ಜೀವಂತವಾಗಿರಿಸಿದೆ ಎಂದು ಬಲವಾಗಿ ಭಾವಿಸಿಕೊಂಡಿರುವದರ ಜತೆ ತಾನು ಮಾಡುವ ಅತ್ಯಂತ ಅಕ್ಷಮ್ಯ ಅಪರಾಧಕ್ಕಾದರೂ ಸಿಗುವ ಸಾವಿನ ಶಿಕ್ಷೆಯಾದರೂ ತಾನು ಅನುಭವಿಸಿದ ಆ ಸುಂದರ ದಿನಗಳನ್ನು ತನ್ನಿಂದ ಕಸಿದುಕೊಳ್ಳಲಾರದು ಎಂಬ ದೃಢವಾದ ನಂಬಿಕೆಯಿತ್ತು ಗಾಲಿಬನಿಗೆ.

ಹೊರಗೆ ಜನಸಂಚಾರ ಪ್ರಾರಂಭವಾಗಿರಬಹುದೆಂದು ತನ್ನಷ್ಟಕ್ಕೆ ಅಂದುಕೊಂಡ. ಅವನು ಕ್ಷೌರಿಕನನ್ನು ಕಾಯುತ್ತಿರುವುದರಿಂದ ಮತ್ತು ಆತನು ಬರುವುದರಿಂದ ಇವತ್ತಿನ ಕೆಲ ತಾಸುಗಳ ದಿನಚರಿ ಬದಲಾಗುವುದಿತ್ತು. ಮುಂದಿನ ಸ್ವಲ್ಪ ದಿನಗಳಿಗೆ ತನ್ನ ಬದುಕು ಭಿನ್ನವಾಗಿರುತ್ತದೆ ಎಂಬ ಭಾವನೆಯಿಂದ ಅವನು ಪುಳಕಿತಗೊಂಡನು.

ಪರಿಚಿತವಾದ ನೋವೊಂದು ಒಮ್ಮೆಲೇ ದೇಹದ ತುಂಬ ಹರಿದಾಡಿತು. ಇದಾಗಲೇ ಮೂಳೆಗಳನ್ನೂ ಭೇದಿಸಿಬಿಟ್ಟಿರುವ ನೋವಿನೊಡನೆ ಆತ್ಮೀಯ ಸಂಬಂಧವೊಂದನ್ನು ಅವನು ಸಾಧಿಸಿರುವುದು ಸಹಜವೇ ಸಾಗಿತ್ತು. ತನ್ನ ಗಂಡನೊಬ್ಬ ಯಾವುದರಿಂದಲೂ ಬಾಧಿಸಲ್ಪಡದ ಒಬ್ಬ ಬೇಜವಾಬ್ದಾರಿ ಮನುಷ್ಯ ಎಂದು ಅವನ ಹೆಂಡತಿ ತೀರ್ಮಾನಿಸುವುದಕ್ಕೆ ಅದು ಆಧಾರ ಒದಗಿಸಿತ್ತು. ಪತ್ರಗಳನ್ನು ಬರೆಯುವುದು ಮತ್ತು ತನ್ನ ಆಶ್ರಯದಾತರ, ಹೆಚ್ಚಿನ ಸಂಖ್ಯೆಯಲ್ಲಿರುವ ತನ್ನ ಶಿಷ್ಯರ ಪತ್ರಗಳನ್ನು ಪಡೆಯುವುದು ಅವನ ಬಾಳಿನ ನೆಚ್ಚಿನ ಸಂಗತಿಯಾಗಿದ್ದಿತು. ಪತ್ರಗಳನ್ನು ಪಡೆದಾಗ ಕುಣಿದು ಕುಪ್ಪಳಿಸಬೇಕು ಎಂಬ ಮನಸ್ಸಿನ ಇಚ್ಛೆಗೆ ಹೆಂಡತಿಯೆದುರು ಮುಜುಗರಪಡುವಂತಾಗುತ್ತಿತ್ತು. ಮುಪ್ಪಿನಲ್ಲಿ ಇದೊಳ್ಳೆ ಪೀಕಲಾಟದ ವಿಷಯವಾಗಿತ್ತು ಕವಿಗೆ. ಪತ್ರಗಳಲ್ಲೇ ಅವನು ಹುಟ್ಟುಹಬ್ಬಕ್ಕೆ ಹಾಡಿನ ಉಡುಗೊರೆಗಳನ್ನು ಕಳುಹಿಸುತ್ತಿದ್ದ. ಅಲ್ಲದೇ, ಈ ಭೂಮಿಯ ಭಾರದಿಂದ ಕುಸಿದ ಬಡ ವ್ಯಕ್ತಿಯೊಬ್ಬ ಆಕಾಶಕಾಯಗಳ ಬಗ್ಗೆ ಅವುಗಳಲ್ಲಿ ಚರ್ಚಿಸಲು ಇಷ್ಟಪಟ್ಟರೆ ಅದನ್ನು ಯಾರೂ ಆಕ್ಷೇಪಿಸುವ ಅಗತ್ಯವಿದ್ದಿರಲಿಲ್ಲ. ಅದಲ್ಲದೆ, ತನ್ನನ್ನು ದುಃಖಿಕ್ಕೀಡುಮಾಡುವ ತನ್ನ ಕೃತಿಗಳ ಪ್ರಕಟಣೆಗಳಲ್ಲಿ ಆಗುವ ಗೊಂದಲ ಪ್ರಮಾದಗಳಿಗಾಗಿಯೂ ಅವನು ತಲೆ ಚಚ್ಚಿಕೊಳ್ಳಬೇಕಿತ್ತು ಆ ಪತ್ರಗಳಲ್ಲಿ.

ವ್ಯವಹಾರದಲ್ಲಿ ಜಾಗರೂಕತೆಯನ್ನು ತಾನು ಎಂದಿನಿಂದಲೂ ರೂಢಿಸಿಕೊಂಡು ಬರಬೇಕಿತ್ತು. ಜಗತ್ತಿನ ಯೋಜನೆಗಳಿಗೆ ತಾನು ಹೊಂದದೇ ಇರುವುದಕ್ಕೆ ನಂತರ ಪರಿತಪಿಸುವುದೇ ಸುಲಭವಾಗಿತ್ತು. ಅನಂತರ ಅದೇ ಸ್ವಭಾವವಾಗಿ ಪರಿಣಮಿಸಿತು. ಮತ್ತೊಮ್ಮೆ ನಿರ್ಧರಿಸುವ ಅವಕಾಶವಿದ್ದರೂ ತಾನು ಇಂತಹ ಬದುಕನ್ನೇ ಆಯ್ದುಕೊಳ್ಳುವವನಾಗಿದ್ದೆ. ಆದ್ದರಿಂದ ಈಗ ಹತಾಶನಾಗಬೇಕಿಲ್ಲ ಎಂಬ ಸಮಾಧಾನ ಕಂಡುಕೊಳ್ಳುತ್ತಿದ್ದನು. ಉತ್ತರಿಸಬೇಕಿದ್ದ ಪತ್ರಗಳ ರಾಶಿಗಳ ಕಡೆಗೊಮ್ಮೆ ಅವನ ಗಮನ ಹೋಯಿತು. ಆದರೆ ತಾನು ಕುಳಿತ ಒಣಗಿದ ಒಳ್ಳೆಯ ಸ್ಥಳದಿಂದ ಏಳುವ ಮನಸ್ಸಾಗಲಿಲ್ಲ ಅವನಿಗೆ. ಇದು ಎಷ್ಟು ವರ್ಷಗಳಿಂದ ನಡೆದುಬಂದಿದೆ ಎಂದು ಸ್ವತಃ ಗಾಲಿಬ್ ಮರೆತುಬಿಟ್ಟಿದ್ದಾನೆ. ಆದರೆ, ಅವನ ವಯಸ್ಸಿನ ಲೆಕ್ಕೆ ಬಗೆಗಿನ ಅವನ ಪ್ರಜ್ಞೆಯನ್ನು ಪತ್ರಗಳಲ್ಲಿ ಕಾಣಬಹುದಿತ್ತು. ಸೂಕ್ಷ್ಮ ಬುದ್ಧಿಯ ಓದುಗನಿಗೆ ಇಷ್ಟು ದೊಡ್ಡ ಮೊತ್ತದ ಆಯುಷ್ಯದ ವ್ಯರ್ಥತೆಯನ್ನು ಮನಗಾಣಿಸುವಂತಿದ್ದರೂ ವಯಸ್ಸಿನೊಡನೆ ಬರುವ ದೌರ್ಬಲ್ಯದಿಂದಾಗಿ ಹೆಚ್ಚಿರುವ ತನ್ನ ಅಸಹಾಯಕತೆಯನ್ನು ಅವರು ಅರಿಯಲಿ ಎಂದೇ ಅವನ ಅಂತರಾಳದ ಆಸೆಯಾಗಿತ್ತು. ಅಂತಹ ಒಂದಾದರೂ ಆಸೆ ಆ ಮನೆಯಲ್ಲಿ ಸಾಕಾರಗೊಳ್ಳು ವಂತಿರಲಿಲ್ಲ.

ಯೌವ್ವನವನ್ನು ಉಪಯೋಗಿಸಿ ದುಡಿದವರಿಗೆ ಮಾತ್ರ ಮುದುಕರಾಗುವ ಹಕ್ಕಿದೆ ಎಂಬ ಹೆಂಡತಿಯರ ರೂಢಿಗತ ನಂಬಿಕೆಯನ್ನೇ ಅವಳು ಹೊಂದಿದ್ದಳು.

ಅದಕ್ಕೆ ಗಾಲಿಬನೂ ಸಮ್ಮತಿಸಿದ್ದ. ಇದೊಂದೇ ಅಲ್ಲ, ತನ್ನ ಸೋಲಿನ ಬಗ್ಗೆ ಎಲ್ಲರೂ ಹೊಂದಿರುವ ಅಭಿಪ್ರಾಯಗಳನ್ನು ಅವನು ಸಮ್ಮತಿಸಿದ್ದ. ತನ್ನ ಗಂಡನ ಅಂತ್ಯಹೀನ ಬರವಣಿಗೆಯಿಂದ ಪ್ರಯೋಜನ ಎಂದು ಉಂಟಾಗಬಹುದೆಂಬ ನಿರೀಕ್ಷೆ ಅವಳ ನರಗಳನ್ನು ಇಷ್ಟು ವರುಷವೂ ಹಿಂಸಿಸಿತ್ತು. ಸ್ವತಃ ತಾನೂ ಇಂತಹುದೇ ನಿರೀಕ್ಷೆಯಲ್ಲಿ ಈ ಎಲ್ಲ ವರುಷಗಳೂ ಮುಳುಗಿದ್ದೆ ಎಂದು ತೋರ್ಪಡಿಸಿದ ಸಮಯದಲ್ಲಿ ಅವಳು ಅವನ ಬಗೆಗೆ ಸ್ವಲ್ಪ ಮೃದುವಾಗುತ್ತಿದ್ದಳು. ಈ ನಿರೀಕ್ಷೆಯೊಂದೇ ದೀರ್ಘವಾದ ಅದಕ್ಕಾಗಿಯೇ ಕೆಲವೊಮ್ಮೆ ಸಹಿಸಲಸಾಧ್ಯವೆನಿಸ ತೊಡಗಿದ ದಾಂಪತ್ಯವನ್ನು ನಡೆಸಿಕೊಂಡು ಸಾಗಿತ್ತು.

ಕ್ಷೌರಿಕನ ಕನ್ನಡಿಯನ್ನು ನೋಡುವಾಗ ಅತ್ಯಂತ ನಿಶ್ಶಕ್ತ ಮುಖವನ್ನು ಹೊಂದಿದ ವ್ಯಕ್ತಿಯೊಬ್ಬನನ್ನು ಎದುರುಗೊಂಡು ಗಾಲಿಬ್ ಬೆಚ್ಚಿದ. ಕ್ಷೌರಿಕ ತನ್ನ ಸಲಕರಣೆಗಳಲ್ಲಿ ಮಗ್ನವಾಗಿರುವುದನ್ನು ಕಂಡು ಅತ್ಯಂತ ನಿಧಾನವಾಗಿ ಮತ್ತೆ ಕನ್ನಡಿಗೆ ತನ್ನ ಮುಖವನ್ನೊಡ್ಡಿದ. ಮುಂಚಿನಿಂದಲೂ ತಾನು ಹೆಮ್ಮೆಪಡುತ್ತಿದ್ದುದು ತನ್ನ ಮೈಕಟ್ಟಿಗಾಗಿ ಎಂದು ನೆನಪಾದಾಗ ಗಾಲಿಬ್‌ನಿಗೆ ಸ್ವಲ್ಪ ನಿರಾಳವಾಯಿತು. 'ನೀನು ಆಶ್ಚರ್ಯಚಕಿತನಾಗುವಷ್ಟು ನನ್ನ ಚರ್ಮ ಹೊಳಪಿನ ಗೋಧಿಬಣ್ಣ ಹೊಂದಿತ್ತು' ಎಂದು ಗಾಲಿಬ್ ಆ ಕ್ಷೌರಿಕನಿಗೆ ವಿವರಿಸತೊಡಗಿದ. ಕ್ಷೌರಿಕರೂ ಅಷ್ಟೇ, ತಮ್ಮ ಕೆಲಸಕ್ಕೆ ಸಹಾಯವಾಗುವ ಲಯಗಾರಿಕೆಯಲ್ಲಿ ಮಾತನ್ನು ಬಳಸುತ್ತಾರೆ ಎಂದು ಗಾಲಿಬ್ ಕಂಡುಕೊಂಡಿದ್ದ. ನಂತರ ಇಬ್ಬರೂ ಸೇರಿ ಆಯ್ದುಕೊಂಡಿದ್ದು ದಿಲ್ಲಿಯನ್ನು. ಗಾಲಿಬ್ ಊಹಿಸುತ್ತಿದ್ದ ರೀತಿಯಲ್ಲಿ ಕ್ಷೌರಿಕ ಮಾತನಾಡುತ್ತ ಹೋದ. ಸಣ್ಣ ಅವಧಿಯ ಸಮಯದಲ್ಲಿ ತೇಲಿ ಹೋಗಲು ಸಾಧ್ಯವಾಗುವಂತಹ ಹಗುರಾದ ಸಂಭಾಷಣೆಯಾಗಿದ್ದಿತು ಅದು.

ಕ್ಷೌರಿಕನು ಹೊರಟು ಹೋದ ನಂತರವೇ ಗಾಲಿಬ್‌ನಲ್ಲಿ ದಿಲ್ಲಿಯ ಬಗೆಗೆ ರೋಗಗ್ರಸ್ತ ಅನಿಸಿಕೆಗಳು ಸ್ಪಷ್ಟ ರೂಪ ತಾಳಿದವು. ಎಂದಿಗೂ ಇದು ಇತಿಹಾಸಕ್ಕೆ ಸೇರಲು ಅವಸರಿಸುವ ನಗರವೆಂದು ನಿಷ್ಕರ್ಷಿಸಿದನು. ತನ್ನನ್ನು ಅವಶೇಷವಾಗಿಸಿ ಕೊಳ್ಳುವ ಆತುರದಲ್ಲಿ ಹಳೆಯದನ್ನೆಲ್ಲ ಚೆಲ್ಲಾಪಿಲ್ಲಿಯಾಗಿ ಹರಡಿಬಿಡುತ್ತದೆ. ಇದೊಂದು ಇತಿಹಾಸಕಾರನ ಹುಬ್ಬಿನ ಮೇಲಿನ ಬೆವರನ್ನು ಬೇಡುವ ನಗರವಷ್ಟೇ. ಇತಿಹಾಸಕಾರ ಹರಿಯುವ ಇತಿಹಾಸದ ನೀರಿನಷ್ಟೇ ಬರೆಯುತ್ತಾನೆ. ಅದು ಹೊತ್ತು ತರುವ ಕಲ್ಮಶ ಅವನ ಅಧ್ಯಯನಕ್ಕೆ ಸಂಬಂಧಿಸಿದ ಸಂಗತಿಗಳಾಗಿರುವುದಿಲ್ಲವೇನೋ? ಅವನ ರಕ್ತವನ್ನು ಬಿಸಿಯಾಗಿಸದೇ ದಿಲ್ಲಿಯ ಬಗೆಗಿನ ಅವನ ಭಾವನೆಗಳಿರುತ್ತಿರಲಿಲ್ಲ.

ಆ ಕ್ಷಣ ಅವನು ನೋಡಿದ ಸೋರುತ್ತಿರುವ ಮಾಡು ಸಹ ದಿಲ್ಲಿಯ ನಿಯತಿಯೊಡನೆ ಬೆಸೆದುಕೊಂಡ ಬಲಿಷ್ಠ ಭಾಗವಾಗಿದ್ದಿತು. ಹೆಂಡತಿಯ ಕಹಿ ಮಾತುಗಳನ್ನು ಕೇಳಿಯೂ ಅವನು ಅದರ ಬಗೆಗೆ ಕಾಳಜಿ ವಹಿಸಿರಲಿಲ್ಲ. ಮಾಡಿನ

ಜತೆ ಶಿಥಿಲಗೊಂಡ ಗೋಡೆಗಳ ಆ ಮನೆ ಕುಸಿದು ಮುದಿ ದಂಪತಿಗಳಿಗೊಂದು ಸಮಾಧಿ ಒದಗಿಸಿದ್ದಲ್ಲಿ ಅವಳು ಸಮಾಧಾನವೇ ಪಟ್ಟುಕೊಳ್ಳುತ್ತಿದ್ದಳು. ಉಳಿದ ನಿಷ್ಫಲ ಸಂತೈಕೆಗಳಿಗಿಂತ ಅದು ಸುಲಭವಾಗಿತ್ತು. ಅವಳ ಗಂಡನಾದರೂ ಒಮ್ಮೊಮ್ಮೆ ಅನುಮಾನಿಸುವಂತೆ ಅವಳಿಗೆ ಅವನ ಮೇಲೆ ಸೇಡಿನಂತಹ ಸಾಂದ್ರವಾದ ಭಾವನೆಯಿರಲಿಲ್ಲ. ಒಂದು ಒಳ್ಳೆಯ ಬದುಕು ಅವಳ ಹಕ್ಕಾಗಿತ್ತು. ಅದನ್ನು ಇನ್ನೂ ಅವನಿಂದ ಬಯಸಿದ್ದಳು. ಅದಕ್ಕಾಗಿ ಅವನನ್ನು ಬಲವಂತಪಡಿಸುವುದ ರಿಂದಲೇ ಅವಳ ಸಿಟ್ಟು ಶಮನಗೊಳ್ಳುತ್ತಿತ್ತು. ಅದು ಅಸಹಾಯಕ ಹೆಂಗಸಿಗೆ ಎಟುಕಬಹುದಾದ ಅಗ್ಗದ ತೃಪ್ತಿಯೂ ಆಗಿತ್ತು. ಕಾವ್ಯವನ್ನು ಅನುಭವಿಸುವ ಮನಸ್ಸು ತನ್ನಲಿಲ್ಲ. ಈ ಜರ್ಜರಿತ ಶರೀರಕ್ಕೆ ಒಂದು ಮನೆಯ ಅವಶ್ಯಕತೆಯಿದೆ ಎಂದು ಅವಳು ಹೇಳುತ್ತಿರುವಂತೆ ಅವನಿಗೆ ತೋರುತ್ತಿತ್ತು. ಕಣ್ಣನ್ನು ಮಾಡಿನಿಂದ ಕದಲಿಸಿದ, ಬಳಲಿಸುವ ಯೋಚನೆಗಳನ್ನು ಬಹಳ ಹೊತ್ತಿನವರೆಗೆ ಆ ಹೃದಯ ಉಳಿಸಿಕೊಳ್ಳಲಾರದೆ ತಾನು ಹೋಗಲಿರುವ ಊರಿನ ಬಗೆಗಿನ ಕಲ್ಪನೆಯನ್ನು ಬರಮಾಡಿಕೊಂಡಿತು. ನೆನಪುಗಳು ಹೇಳಿದ ಕೂಡಲೇ ಹೊರಟುಹೋಗುವುದಿಲ್ಲ. ಕಲ್ಪನೆ ಅಲ್ಲಿಗೆ ಬರುತ್ತದೆಯೆಂದರೆ ಹೇಗೋ ಸ್ವಲ್ಪ ಬದಿಗೆ ಸರಿಯುತ್ತವೆ.

ನವಾಬನ ಬಂಗಲೆಯ ಅತಿಥಿಯಾಗಿ ನವಾಬನಿಗಾಗಿ ಕಾಯುತ್ತ ಹತ್ತು ದಿನಗಳನ್ನು ಕಳೆದ ಗಾಲಿಬ್. ಚಾಕರಿಗಿದ್ದ ಹುಡುಗನೊಡನೆ ಗಾಲಿಬ್‌ನ ಸಮಯ ಸಾಗುತ್ತಿತ್ತು. ದಿಲ್ಲಿ, ಲಖ್ನೋ, ಬನಾರಸ್, ಹೈದರಾಬಾದ್‌ಗಳಷ್ಟೇ ಅಲ್ಲ, ತಾನು ಇನ್ನೂ ಕೇಳಿರದ ಹೆಸರುಗಳ ಊರು ದೇಶಗಳ ಜನರಿಗೂ ಮಿರ್ಜಾ ಗಾಲಿಬ್ ಗೊತ್ತು. ಅವರ ನಾಲಿಗೆಯ ಮೇಲೆ ಈ ಕವಿಯ ಪದಗಳಿವೆ ಎಂದು ಅರಿತಿದ್ದ ಆ ಹುಡುಗ ಗಾಲಿಬನ ಆಗಮನದಿಂದ ಉತ್ಸುಕನಾಗಿದ್ದ. ಹುಡುಗ ಹುಕ್ಕ ತುಂಬಿಕೊಡುವಾಗಲೆಲ್ಲ ಸಲ್ಜುಕಿ ತುರ್ಕಸ್ಥ ಗಾಲಿಬನು ಅಭಿಮಾನ ವಿಷಾದದ ಛಾಯೆಗಳ ನಗೆ ಹೊತ್ತು ಹುಡುಗನೆಡೆ ನೋಡುತಿದ್ದ. ಅವರಲ್ಲಿ ಸಲಿಗೆ ಬೆಳೆದದ್ದು ಕವಿ ಕಾವ್ಯದ ಬಗ್ಗೆ ಆ ಹುಡುಗನೊಡನೆ ಮಾತನಾಡಲು ತೊಡಗಿದ ಮೇಲೆಯೇ, ಮೊದಲಿಗೆ ಗಾಲಿಬ್ ರುಚಿಯಾದ ಮಾತುಗಳಲ್ಲಿ ಪರ್ಶಿಯನ್ ಭಾಷೆ ಕಾವ್ಯಕ್ಕೆ ಎಷ್ಟು ಸೊಗಸಾದ ಭಾಷೆ ಎಂದು ವಿವರಿಸಿ ಹೇಳಿದ. ಒಂದು ಸಂಜೆ ತನ್ನ ಅಜ್ಜ ನೈಲ್ ನದಿಯಾಚೆಯಿಂದ ಬಂದವನೆಂದು ಹೇಳುತ್ತ ಸ್ಮೃತಿಯ ಧೂಳನ್ನು ಆ ಹುಡುಗನ ಮಡಿಲಿಗೆ ಕೊಡವಿದ ಕವಿ. ಆ ಮಾತಿನಿಂದ ಹುಡುಗನಲ್ಲಿ ತುಂಬಿಕೊಂಡ ಪ್ರಸನ್ನತೆಯನ್ನು ಗಮನಿಸಿ ತನ್ನಿಂದ ದೂರ ಸರಿದಿದ್ದ ಉಲ್ಲಾಸವನ್ನು ಕವಿ ಅನುಭವಿಸಿದ.

ಒಳ್ಳೆಯ ಪದ್ಯ ಜೂಜಿನಂತೆ ಎಲ್ಲ ಪಣಕ್ಕಿಡುವ ಆತುರದಿಂದ ಪಾಲ್ಗೊಳ್ಳಬೇಕೆ ಹೊರತು ಕಳೆದುಕೊಳ್ಳುವ ಆತಂಕದಿಂದಲ್ಲ. ಅದು ಬಹಳವಾಗಿ ಇರುತ್ತದೆ. ಆದರೆ ನಂಬಲು ನಿನ್ನಲ್ಲಿ ಯಾವ ಆಧಾರಗಳೂ ಇರುವುದಿಲ್ಲವಾದ್ದರಿಂದ ಅದರಿಂದ

ಪಾರಾಗಿ ಉಳಿಯುವುದೂ ಸುಲಭ. ಅದರ ಸೆಳೆತಕ್ಕೆ ಒಳಗಾಗುತ್ತೇವೆ ಎಂದು ಜನ ತಪ್ಪಾಗಿ ಭಾವಿಸುತ್ತಾರೆ. ಹೌದು.. ಜೂಜು ಸಹ ಪದ್ಯದಂತೆ. ಈ ಕಸುಬಿನಿಂದ ನಾನು ಸಂಕಟವನ್ನಷ್ಟೇ ಅನುಭವಿಸಿದ್ದೇನೆ ಎಂದು ಹೇಳಲಾರೆ. ಒಮ್ಮೆ ಅದರಿಂದ ಸೆರೆಮನೆಗೂ ಹೋಗಬೇಕಾಯ್ತು. ಅದೇನೂ ಅಷ್ಟು ಕೆಡುಕಿನದಲ್ಲ. ಆ ಸಂಗತಿ ತನಗೆ ಗೊತ್ತಿದೆ ಎಂಬಂತೆ ಹುಡುಗ ತಲೆ ತಗ್ಗಿಸಿದ. ಯಾಕೆಂದರೆ ಅದಕ್ಕಿಂತಲೂ ಹೀನಾಯವಾದ ಕಾರಣಕ್ಕೆ ಸೆರೆಮನೆಗೆ ಹೋಗಿದ್ದೇನೆ. ಸಾಲ ತೀರಿಸಲಾರದೆ ಶೂನ್ಯದಲ್ಲಿ ನೋಡುತ್ತಿರುವಂತೆ ಗೋಡೆ ದಿಟ್ಟಿಸಿದ.

'ನಿಜಕ್ಕೂ ಸಮಾಜ ನಿಮಗೆ ಋಣಿಯಾಗಿರಬೇಕು. ಎಲ್ಲರ ಪರವಾಗಿ ತಾನೊಂದು ಮಾತು ಹೇಳುತ್ತಿದ್ದೇನೆ' ಎಂಬ ಭಾವನೆಯಿಂದಲೇ ಸಂಕೋಚಪಡದೆ ದೇಶದ ಅತ್ಯಂತ ದೊಡ್ಡ ಕವಿಯೆದುರು ಆ ಮಾತನ್ನು ಹೇಳಿದ್ದ ಹುಡುಗ.

'ಈ ಮಾತಿಗಾಗಿ ನಾನು ನಿನಗೆ ಧನ್ಯವಾದಗಳನ್ನಷ್ಟೇ ಹೇಳಬಲ್ಲೆ ಹೊರತಾಗಿ ಸಮಾಜ, ಒಬ್ಬರು ಮತ್ತೊಬ್ಬರ ಮೇಲೆ ನಗಲು ಮಾಡಿಕೊಂಡ ಸಂಕೀರ್ಣ ಆದರೆ ಪೊಳ್ಳು ವ್ಯವಸ್ಥೆಯಷ್ಟೇ. ಇದನ್ನಾದರೂ ಏಕೆ ಹೇಳಿದೆಯೆಂದರೆ ಕವಿಯಾದವನು ಕ್ಷಣಕ್ಷಣದ ಜೀವನಕ್ಕೆ ಆಧಾರವಾಗಿರಬೇಕು. ಇಂತಹ ವ್ಯವಸ್ಥೆಗೆ ಹೆಗಲು ನೀಡಿ ನಿಂತಿರುವುದಿಲ್ಲ. ಸಮಾಜವಾದರೂ ತನ್ನ ತಲೆಯ ಮೇಲೆ ಏನನ್ನೂ ಹೊತ್ತುಕೊಳ್ಳುವುದಿಲ್ಲ. ಜನರೂ ಅಷ್ಟೇ, ಅದರ ಬಗೆಗೆ ಕಾಳಜಿ ಕಳವಳವನ್ನು ವ್ಯಕ್ತಪಡಿಸುತ್ತ ಕೈಯಲ್ಲಿ ಹಿಡಿದಿರುವುದು ಅದರ ದುರ್ಬಲ ಸೂತ್ರವನ್ನು, ಉಳಿದಂತೆ ಅದನ್ನು ದೂರದೂರ ಹಾರಿಸಿ ಎಲ್ಲೋ ಮೇಲೆ ಇರಿಸಿರುತ್ತಾರೆ. ತಮ್ಮ ಎರಡೂ ಕೈಗಳನ್ನು ಸ್ವತಂತ್ರವಾಗಿರಿಸಿಕೊಂಡು ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿ ಆನಂದಿಸುವವರು ಇಲ್ಲಿ ಅಪವಾದಕ್ಕೆ ಗುರಿಯಾಗುತ್ತಾರೆ. ಇದನ್ನು ನೀನು ನೋಡಿಯಲ್ಲ ಮನಸ್ಸಿನ ತಿಳಿವಳಿಕೆಯಿಂದಷ್ಟೆ ಕಲಿಯಬಲ್ಲೆ. ನಮ್ಮ ಕಣ್ಣುಗಳು ಮನಸ್ಸಿನಷ್ಟು ಸ್ವತಂತ್ರವಾಗಿಲ್ಲ. ನಾನು ಬಹಳ ಬುದ್ಧಿವಂತನೇನಲ್ಲ. ಆದರೆ ಎಂದಿನಿಂದಲೂ ಮನಸ್ಸಿನ ಈ ಸ್ವಾಸ್ಥ್ಯವೆಂದು ಒಪ್ಪಿಕೊಂಡಿದ್ದೇನೆ ಮತ್ತು ಆ ಸ್ವಾತಂತ್ರ್ಯವನ್ನೇ ಯಾವುದೇ ಪಶ್ಚಾತ್ತಾಪ ನಿರ್ಬಂಧನೆಗಳಿಲ್ಲದೆ ಅನುಭವಿಸಿದ್ದೇನೆ'.. ಮಾತುಗಳು ನಿರಂತರವಾಗಿ ಕೇಳಿ ಬರುತ್ತಿದ್ದರೂ ತುಟಿಗಳು ಸ್ವಲ್ಪವಷ್ಟೇ ಚಲಿಸುವುದನ್ನು ಹುಡುಗ ಗಮನಿಸಿದ.

'ಹಾಗೂ ನೀನೆನ್ನುವ ಸಮಾಜ ನನಗೆ ಕೊಡಬೇಕಾಗಿರುವುದನ್ನು ಕೊಟ್ಟಿದೆ ಎಂದೇ ನಾನು ಭಾವಿಸುತ್ತೇನೆ. ಅದು ನನಗೆ ಒಂದು ನಾಣ್ಯ ನೀಡಿದೆ, ಹೆಸರಿನ ನಾಣ್ಯ. ಆ ನಾಣ್ಯದ ಒಂದು ಮುಖ ಒಳ್ಳೆಯದಾಗಿದೆ. ಮತ್ತೊಂದು ಅದಕ್ಕೆ ವಿರುದ್ಧವಾಗಿದೆ. ಆ ನಾಣ್ಯದ ಕೆಡುಕಿನ ಮುಖದಿಂದ ಉಂಟಾಗುವ ನಷ್ಟಗಳ ಬಗ್ಗೆ ಗಮನ ಹರಿಸದೆ ಇರಲು ಅನೇಕ ಇತರ ಕಷ್ಟಗಳನ್ನು ದೇವರು ನನಗೆ ದಯಪಾಲಿಸಿದ್ದಾನೆ. ಇನ್ನು ಅದರ ಒಳ್ಳೆಯ ಮುಖದಿಂದ ನಾನು ಸಣ್ಣಪುಟ್ಟ

ಪ್ರಯೋಜನಗಳನ್ನು ಪಡೆಯಲು ಪ್ರಯತ್ನಿಸುವುದುಂಟು. ಆ ಹೂವನ್ನು ನಾನು ಹತ್ತಿರದಿಂದ ನೋಡಬೇಕಿದೆ' ಎಂದು ಗಾಲಿಬ್ ನೇರದೃಷ್ಟಿಯಿಂದ ದಿಟ್ಟ ಹೆಜ್ಜೆಗಳನ್ನಿಡುತ್ತ ನವಾಬನ ಉದ್ಯಾನದೆಡೆಗೆ ನಡೆದ. ಕತ್ತಲು ಆವರಿಸುವವರೆಗೂ ಹುಲುಸಾಗಿ ಬೆಳೆದಿರುವ ಉದ್ಯಾನವನದಲ್ಲಿ ಅಲೆದ ಕವಿ ಅಲ್ಲಲ್ಲಿ ಹೂವುಗಳನ್ನು ಪರೀಕ್ಷಿಸುತ್ತ ನಿಂತಿರುವಾಗ 'ಈಗ ಯಾರೂ ಬಳಸದ ಸರಳವಾದ ಭಾಷೆಯಲ್ಲಿ ಅವುಗಳೊಡನೆ ಕವಿ ಸಂವಾದಿಸುತ್ತಿದ್ದಾನೆ' ಎಂದೆನಿಸಿತು ಹುಡುಗನಿಗೆ.

ಮರುದಿನ ಹುಡುಗನ ಮನಸ್ಸು ವ್ಯಾಕುಲಗೊಂಡಿತ್ತು. ಈ ಒಂದು ಆಸೆ ಮುಂಚಿನಿಂದಲೂ ತನ್ನಲ್ಲೇ ಇದ್ದಿತೋ ಅಥವಾ ಕವಿಯ ಸಹವಾಸದಿಂದ ಹೊಸದಾಗಿ ಉದಯಿಸಿರುವುದೋ ಎಂಬ ಗೊಂದಲಕ್ಕೊಳಗಾದ ಹುಡುಗ. ಅದನ್ನು ತಿಳಿದುಕೊಳ್ಳಲು ಹುಡುಗ ಕವಿಯಾಗಬೇಕೆನ್ನುವ ತನ್ನ ನಿರ್ಧಾರವನ್ನು ಖುಷಿಯಿಂದ ಕವಿಯೆದುರು ನಿವೇದಿಸಿಕೊಂಡ. ಆ ಕ್ಷಣ ಹುಡುಗನ ಕಣ್ಣುಗಳಲ್ಲಿ ಅಂತಃಕರಣಕ್ಕೆ ಸಂಬಂಧಿಸಿದ ಅತಂಕವೊಂದು ಕಂಡಿತು ಕವಿಗೆ.

'ಬರವಣಿಗೆಯಿಂದ ಪ್ರಯೋಜನ ಮಾಡಿಕೊಳ್ಳಬೇಕು ಎಂಬ ಪ್ರಜ್ಞೆ ಬೆಳೆಯುವ ಮುಂಚೆಯೇ ನೀನು ಬರೆಯಲು ಪ್ರಾರಂಭಿಸಿದ್ದಲ್ಲಿ ಆ ದೇವರೂ ನಿನ್ನನ್ನು ರಕ್ಷಿಸಲಾರ. ಆದರೆ ನಿನ್ನನ್ನು ಬಹಳವಾಗಿ ಇಷ್ಟಪಡಬಲ್ಲ. ಏಕೆಂದರೆ ಆಗ ನೀನು ಉಳಿದವರಿಗಿಂತ ಚೆನ್ನಾಗಿ ಪ್ರಾರ್ಥಿಸಬಲ್ಲವನಾಗಿರುತ್ತಿ'. ತನ್ನ ಯೋಗ್ಯತೆಯಷ್ಟು ಬದುಕು ತನಗೆ ನೀಡಿದ್ದಿಲ್ಲ ಎಂದು ತಿಳಿದಿದ್ದ ವ್ಯಕ್ತಿ ತನ್ನ ಯೋಗ್ಯತೆಯ ಬಗ್ಗೆ ತನಗಿನ್ನೂ ಅಭಿಮಾನವಿದೆ ಎಂದು ವ್ಯಕ್ತಪಡಿಸುವ ಭಂಗಿಯಲ್ಲೇ ಅವನೆಂದೂ ಕುಳಿತು ಮಾತನಾಡುತ್ತಿದ್ದನು. ಇಂತಹ ಮಾತುಗಳಿಂದ ಮಾತ್ರ ಅವನ ಚಹರೆ ಕೆಲವೊಮ್ಮೆ ಕನಿಕರ ಬಯಸುತ್ತಿದ್ದುದುಂಟು. ಸಂಕೋಚ ಮತ್ತು ಅಭಿನಯದ ಕೃತಕತೆಯಿಂದ ಹುಡುಗನನ್ನು ಮುಕ್ತಗೊಳಿಸಿದ್ದಕ್ಕೆ ಮುಚ್ಚುಮರೆಯಿಲ್ಲದೆ ಹುಡುಗನೊಡನೆ ಸಂಭಾಷಿಸುವುದು ಗಾಲಿಬನಿಗೆ ಸಾಧ್ಯವಾಗಿತ್ತು.

ಬದುಕಿನದಷ್ಟೇ ಅಲ್ಲ ಕಾವ್ಯದ ಚರ್ಮಕ್ಕೂ ದಿಲ್ಲಿ ಅಂಟಿಕೊಂಡುಬಿಟ್ಟಿದೆ. ದಿಲ್ಲಿಯಲ್ಲಿ ಎಲ್ಲವೂ ವಿಚಿತ್ರವೇ. ಅಲ್ಲಿಯ ಮಳೆಯಂತೆ ಸೆಕೆಯೂ ಅದನ್ನಾಳಿದ ಮುಘಲರೂ. ಈ ಮುಘಲರೂ ಎಷ್ಟು ವಿಚಿತ್ರರಾಗಿದ್ದರೆಂದರೆ ತಾವು ಪ್ರೀತಿಸಿರುವುದನ್ನೇ ಕೊಲ್ಲುತ್ತಿದ್ದರು. ಅಂತಹ ಹರಾಮಖೋರ ದಿಲ್ಲಿಯ ವಂಶಸ್ಥನು ನಾನು. ಪ್ರೀತಿಸಿದ ಹುಡುಗಿಯನ್ನೇ ಕೊಂದಿರುವೆ. ಅಂತಹ ಒಂದು ನೋವು ನಿನ್ನೆದೆಯಲ್ಲಿ ಕಾವ್ಯದ ಉರಿ ಆರದಂತೆ ಕಾಪಾಡುತ್ತದೆ. ತನ್ನನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದು–ಇವು ಸ್ವರ್ಗಕ್ಕೆ ತೀರ ಸನಿಹವಾಗಿರುವ ಅನುಭವಗಳೆಂದೇ ತೀರ್ಮಾನಿಸಿದ್ದೇನೆ. ನೋವಿನ ತೇವವನ್ನು ನಾನು ತಿಳಿಯಬೇಕೆಂದು ದೇವರು ನನ್ನನ್ನು ವಿರಹದ ನೀರಿನಲ್ಲಿ ಅದ್ದಲು ಬಯಸಿದ್ದನೇನೊ. ಆದರೆ ಅವನಿಗೂ ತಿಳಿದಿರಲಿಲ್ಲ. ಅವಳಿಗಾಗಿ ಸುಳಿಯ

ಸೆಳತಕ್ಕೆ ಒಳಗಾಗಲೂ ನಾನು ಸಿದ್ಧನಿದ್ದೆನೆಂದು. ನನ್ನ ನೆಚ್ಚಿನ ಕವಿಯ ದುರದೃಷ್ಟಕರ ಪ್ರೇಮ ಪ್ರಸಂಗವನ್ನು ಹುಡುಗ ಅಸ್ಪಷ್ಟವಾಗಿ ಗ್ರಹಿಸಿದ. ಒಟ್ಟಿನಲ್ಲಿ ಅವಳು ಬಹಳ ಹಿಂದೆಯೇ ಸತ್ತುಹೋದಳು ಎಂದು ತನಗೀಗ ತಿಳಿದಿರುವುದರಿಂದ ತಾನು ಹೇಗೆ ವರ್ತಿಸಬೇಕೆಂದು ಕ್ಷಣ ಮಾತ್ರದಲ್ಲಿ ನಿರ್ಧರಿಸಿ ಕಳಾಹೀನವಾಗಿ ಕುಳಿತುಕೊಂಡ. ಭ್ರಮೆಗಳ ಬಗೆಗೆ ನಂಬಿಕೆ ಹುಟ್ಟಿಸುವ ಯೌವ್ವನ ನಿಜಕ್ಕೂ ಅತ್ಯಂತ ಸ್ಫೂರ್ತಿದಾಯಕ ಎಂದು ನಿಟ್ಟುಸಿರಿಟ್ಟ ಕವಿ.

❖

(ವಿಜಯ ಕರ್ನಾಟಕ – ಯುಗಾದಿ ವಿಶೇಷಾಂಕ, 2012)

ತಲ್ಲಣಿಸದಿರು ಮನವೇ..

ಎಸ್.ಬಿ.ಜೋಗುರ

ಹೀಗೆ ಕಥೆಯೊಂದು ಕನಸಾಗಿ ಆ ಪರಿ ಕಾಡುತ್ತದೆ ಎಂದು ಮೊದಲೇ ತಿಳಿದಿದ್ದರೆ ಲೇಖಕ ಶಿವಪ್ರಕಾಶ ಆ ಕಥೆಯನ್ನೇ ಬರೆಯುತ್ತಿರಲಿಲ್ಲ. ಹೌದು. ಆ ಕಥೆ ಅವನನ್ನು ಮತ್ತೆ ಮತ್ತೆ ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ ಜೊತೆಗಿರುವವರು ಕೂಡಾ ಹೈರಾಣಾಗುವಂತೆ ಅಮೂರ್ತವಾಗಿ ಅವನ ಬೆನ್ನಿಗೆ ಬಿದ್ದು ಕಾಡುತ್ತಿದೆ. ಆಂಗ್ಲಭಾಷೆಯ ಅಧ್ಯಾಪಕನಾದ ಶಿವಪ್ರಕಾಶ ತರಗತಿಯಲ್ಲಿ ಪಾಠ ಮಾಡುವಾಗ ಆ ಕಥೆಯ ಯಾವದೋ ಒಂದು ಎಳೆ ನೆನಪಾಗಿ ತಗುಲಿಕೊಂಡರೂ ಸಾಕು ವಿಚಲಿತನಾದಂತೆ ತೋರುತ್ತಿದ್ದ. ಏನೋ ಹೇಳಲು ಹೊರಟು, ಏನೋ ಹೇಳುತ್ತಿದ್ದ. ವಿದ್ಯಾರ್ಥಿಗಳು ತಮ್ಮಲ್ಲಿಯೇ ಗುಸು ಗುಸು ಎನ್ನುತ್ತಿರುವದನ್ನು ಕಂಡು ಮತ್ತೆ ವಾಸ್ತವಕ್ಕೆ ಮರಳುತ್ತಿದ್ದ. ಧಾರವಾಡದ ಖಾಸಗಿ ಕಾಲೇಜೊಂದರಲ್ಲಿ ಕಳೆದ ಎರಡು ದಶಕಗಳಿಗಿಂತಲೂ ಹೆಚ್ಚು ಕಾಲ ಆಂಗ್ಲಭಾಷೆಯ ಅಧ್ಯಾಪಕನಾಗಿ ಕೆಲಸ ಮಾಡಿದ ಶಿವಪ್ರಕಾಶ, ಇಲ್ಲಿಯವರೆಗೆ ನೂರಾರು ಕಥೆಗಳನ್ನು ಬರೆದು, ಹತ್ತಾರು ಪ್ರಶಸ್ತಿಗಳನ್ನು ಪಡೆದುಕೊಂಡರೂ ಕೀರ್ತಿ ಶನಿಯ ಅರಿವಿನಿಂದ ಹೊರಗುಳಿದಿರಲಿಲ್ಲ. ಹಾಗಾಗಿಯೇ ಪ್ರಶಸ್ತಿ ಘೋಷಣೆಯಾದ ದಿನದಿಂದ ಒಂದು ವಾರದವರೆಗೆ ಮೊಬೈಲನ್ನು ಸ್ವಿಚ್ ಆಫ್ ಮಾಡಿ ಇಡುವ ಇವನ ಮನಃಸ್ಥಿತಿಯನ್ನು ಗೆಳೆಯರೆಲ್ಲರೂ ಛೇಡಿಸುವದಿತ್ತು. ತನ್ನ ಒಂದು ಕಥೆ ತನ್ನನ್ನು ಆ ಹಂತಕ್ಕೆ ಕರೆದೊಯ್ಯಬಹುದು ಎಂದು ಆತ ಎಣಿಸಿರಲೇ ಇಲ್ಲ. ಪಾಠ ಮಾಡುವ ವೇಳೆಯಲ್ಲಿ ರಸ್ತೆ ಮೇಲೆ ಯಾವದೋ ಒಂದು ವಾಹನ ವಿಕಾರವಾಗಿ ಹಾರ್ನ್ ಮಾಡಿದರೂ ಸಾಕು ಶಿವಪ್ರಕಾಶ ಒಂದು ಕ್ಷಣ ತತ್ತರಿಸಿ ಹೋದವನಂತೆ ತೋರುತ್ತಿದ್ದ. ಅದೊಂದು ದಿನ ಹೆಮಿಂಗ್ವೇ ಕಾದಂಬರಿಯನ್ನು ಪಾಠ ಮಾಡುವ ಗಳಿಗೆಯಲ್ಲಿ ಆತ ತನ್ನನ್ನೇ ತಾನು ಮರೆತು, ಆ ಕಾದಂಬರಿಯ ಸನ್ನಿವೇಶವೊಂದನ್ನು ಅತ್ಯಂತ ಭಾವಪರವಶನಾಗಿ ಚರ್ಚಿಸುವ ವೇಳೆ, ಕಾಲೇಜಿನ ಎದುರಿನ ರಸ್ತೆಯಲ್ಲಿ ವಾಹನವೊಂದು ಜೋರಾಗಿ ಚೊಂಯ್.. ಎಂದು ಬ್ರೇಕ್ ಹಾಕಿದ ಸದ್ದಾಗಿ ಕೈಯಲ್ಲಿ ಹಿಡಿದಿದ್ದ ಕಾದಂಬರಿಯನ್ನೇ ಬಿಟ್ಟಿದ್ದ. ಎರಡೂ ಕೈಗಳನ್ನು ಬಲವಾಗಿ ಕಿವಿಗೆ ಮುಚ್ಚಿದ್ದ. ಅವನ ತುಟಿಗಳು ಅದರುತ್ತಿದ್ದವು. ವಿದ್ಯಾರ್ಥಿಗಳು ಆ ರೂಪದಲ್ಲಿ ತರಗತಿಯೊಳಗೆ ಹಿಂದೆಂದೂ ಶಿವಪ್ರಕಾಶನನ್ನ ಕಂಡಿರಲಿಲ್ಲ. ಇಡೀ ಕಾಲೇಜಿನಲ್ಲಿಯೇ ಒಳ್ಳೆಯ ಅಧ್ಯಾಪಕ ಎಂದು ಹೆಸರು ಗಳಿಸಿದ ಶಿವಪ್ರಕಾಶ ಈಗೀಗ ಅದೇಕೋ ಕೊಂಚ ಮಾನಸಿಕವಾಗಿ ವಿಚಲಿತನಾದಂತೆ ತೋರುತ್ತಿದ್ದ. ಏನೋ ಮಾಡಲು ಹೊರಟು ಇನ್ನೇನೋ ಮಾಡುತ್ತಿದ್ದ. ಜೊತೆಗಿದ್ದವರನ್ನು ಅಲ್ಲಿಯೇ ಬಿಟ್ಟು ನಡೆದುಬಿಡುತಿದ್ದ. ಆಮೇಲೆ ನೆನಪಾಗಿ ಛೇ..! ಎಂದು ಅವರನ್ನು ಹುಡುಕುತ್ತಿದ್ದ.. ಕ್ಷಮೆ ಕೇಳುತ್ತಿದ್ದ. ಒಂದು ಬಾರಿಯಂತೂ

ಹೊಟೇಲ್ ಒಂದರಲ್ಲಿ ತನ್ನ ಸಹ ಅಧ್ಯಾಪಕರೊಂದಿಗೆ ಚಹಾ ಕುಡಿಯಲೆಂದು ತೆರಳಿದವನು ಅದೇನೋ ಒಂದು ಫೋನ್ ಕಾಲ್ ರಿಸೀವ್ ಮಾಡಲೆಂದು ತೆರಳಿ ಸೀದಾ ಸ್ಟಾಫ್ ರೂಮಿಗೆ ಬಂದು ತಲುಪಿದ್ದ. ಇನ್ನೊಂದು ವಿಚಿತ್ರವೆಂದರೆ ಹಾಗೆ ಎಲ್ಲರನ್ನು ಚಹಾ ಕುಡಿಯಲು ಕರೆದುಕೊಂಡು ಹೋದವನೇ ಅವನಾಗಿತ್ತು. ಎಷ್ಟೋ ಹೊತ್ತಿನ ಮೇಲೆ ಅವನಿಗೆ ನೆನಪಾಗಿ ಪಶ್ಚಾತ್ತಾಪ ಪಟ್ಟಿರುವದಿತ್ತು.

ದೀಪಾವಳಿ ಹಬ್ಬಕ್ಕೆಂದು ಊರಿನಿಂದ ಬಂದಿದ್ದ ತಮ್ಮ ತಂದೆಯನ್ನು ಬಸ್ ಹತ್ತಿಸಲು ತೆರಳಿದ್ದ ಶಿವಪ್ರಕಾಶ ಯಾವದೋ ಒಂದು ಬೇರೆ ಊರಿನ ಬಸ್ ಹತ್ತಿಸಿ 'ಊರಿಗೆ ಹೋದ ಮೇಲೆ ಫೋನ್ ಮಾಡು' ಎನ್ನುತ್ತಿರುವಾಗ ಕಂಡಕ್ಟರ್ ಎಲ್ಲಿಗೆ ಎಂದು ಕೇಳಿದ್ದೇ ತಡ 'ಮಾರಾಯರೇ ಇದು ಜಮಖಂಡಿಗೆ ಹೋಗೂದಿಲ್ಲ, ಬೋರ್ಡ್ ನೋಡಬಾರದಾ..?' ಎಂದಾಗ ಶಿವಪ್ರಕಾಶ ನಾಲಿಗೆ ಕಚ್ಚಿ ತನ್ನ ಕೈಯಿಂದ ನೆತ್ತಿಯ ಹಿಂಬದಿಯನ್ನು ಚೆಚ್ಚಿಕೊಂಡಿರುವದಿತ್ತು. ಅವನ ತಂದೆಯೂ ಮಗನ ಈ ಅವಸ್ಥೆಯನ್ನು ಕಂಡು ಕನಿಕರ ಪಟ್ಟಿರುವದಿತ್ತು. ಸದಾ ತುಂಬಾ ಅಲರ್ಟ್ ಆಗಿರುವ ಶಿವಪ್ರಕಾಶ ಹೀಗೆ ಮಹಾನ್ ಮರೆಗುಳಿಯಾಗಿರುವದು, ಸದಾ ಏನೋ ಧ್ಯಾನಿಸುವಂತಿರುವ ಸ್ಥಿತಿಯನ್ನು ಕಂಡು ಅವನ ಕುಟುಂಬದವರಿಗೆಲ್ಲಾ ಅಚ್ಚರಿಯಾಗಿದೆ. ಹೆಂಡತಿ ಪ್ರಮಿಳಾ ಗಂಡನ ಆ ಬಗೆಯ ವರ್ತನೆಯನ್ನು ಕಂಡಾಗಲೊಮ್ಮೆ 'ಅತಿಯಾಗಿ ಓದಿದರೆ, ಬರೀತಾ ಕೂತರೆ ಇನ್ನೇನಾಗಬೇಡ..? ನಿಮ್ಮನ್ನ ಮದುವೆಯಾದ ಹೊಸತರಲ್ಲಿಯೇ ನಮ್ಮ ತಂದೆ ನಿಮಗೆ ಈ ಮಾತ ಹೇಳಿದ್ದರು' ಅಂತಿದ್ದಳು. ಶಿವಪ್ರಕಾಶ ಆಕೆಯ ಮಾತನ್ನು ಕೇಳಿ ಮುಗುಳ್ನಗುವದನ್ನು ಬಿಟ್ಟು ಬೇರೆ ಏನನ್ನೂ ಮಾತನಾಡುತ್ತಿರಲಿಲ್ಲ. ಈಗೀಗ ಮಕ್ಕಳಾದ ನವೀನ ಮತ್ತು ರೂಪಾ ಇಬ್ಬರೂ ಶಿವಪ್ರಕಾಶನನ್ನು ತಮಾಷೆ ಮಾಡಲು ಶುರು ಮಾಡಿದ್ದಾರೆ. ಡೈನಿಂಗ್ ಟೇಬಲಲ್ಲಿ ಏನೇನು ಇದೆ ಎನ್ನುವದನ್ನು ಅವನ ಊಟ ಮುಗಿಯುವ ವರೆಗೂ ನೆನಪು ಮಾಡುತ್ತಿರಬೇಕು. ಅನೇಕ ಬಾರಿ ರೈಸ್ ಊಟ ಮಾಡದೇ ಕೈ ತೊಳೆದು ಆಮೇಲೆ ಮತ್ತೆ ಅನ್ನ ಸಾರು ಊಟ ಮಾಡಿದ ದಿನಗಳೆಷ್ಟೋ.. ಮಗಳು ರೂಪಾ 'ಮಮ್ಮೀ ಪಪ್ಪಾ ಏನೋ ಯೋಚನೆಯಲ್ಲೇ ಇರ್ತಾರೆ. ನೋಡು ಮತ್ತೆ ನಿನಗೆ ಗೊತ್ತಾಗದ ಹಾಗೆ ಎಲ್ಲಾದರೂ ಒಂದು ಸೆಟಪ್ ಮಾಡಿರಬಾರದು' ಎಂದಾಗ 'ಹಂಗ ಮಾಡಿ ಅಲ್ಲೆ ಉಳದರೆ ನನಗೂ ಸಾಕಾಗೈತಿ' ಅಂದಾಗ ಶಿವಪ್ರಕಾಶ 'ಇವಳೊಬ್ಬಳನ್ನೇ ನನಗೆ ಸರಿಯಾಗಿ ನೆನಪಿಡಲಿಕ್ಕೆ ಆಗ್ತಾ ಇಲ್ಲ. ಇನ್ಯಾವ ಸೆಟಪ್ ಕರ್ಮ..?' ಅನ್ನುತ್ತಾ ಮೊಸರು – ಅನ್ನ ಊಟ ಮಾಡದೇ ಕೈ ತೊಳೆದು ಎದ್ದಾಗಿತ್ತು.

❖

ಆ ದಿನ ಸ್ನೇಹಿತನ ಮಗಳ ಮದುವೆ. ದಾವಣಗೇರಿಗೆ ತೆರಳುವದಿತ್ತು. ಇಡೀ ಫ್ಯಾಮಿಲಿ ಬರಬೇಕು ಎಂದು ಆತ ಕರೆ ನೀಡಿರುವದಿತ್ತು. ಪಿ.ಜಿ.ಯಲ್ಲಿ ಇಬ್ಬರೂ

ಕ್ಲಾಸಮೇಟ್ಸ್. ಹೀಗಾಗಿ ಮದುವೆಯನ್ನಂತೂ ತಪ್ಪಿಸುವಂತಿಲ್ಲ. ಎಲ್ಲರಿಗಿಂತಲೂ ಬೇಗ ಎದ್ದು ಸ್ನಾನ ಮಾಡಿ ರೆಡಿಯಾದ ಶಿವಪ್ರಕಾಶ ಹೆಂಡತಿ ಮತ್ತು ಮಕ್ಕಳನ್ನೂ ಎಬ್ಬಿಸಿದ. ತಾನು ಬರುವದಿಲ್ಲ ಎನ್ನುವದು ಮಗಳ ಹಟ. ಆಕೆಗೆ ದಾವಣಗೇರಿಯಲ್ಲಿ ಬಟ್ಟೆ ಇಸಿದುಕೊಡುವ ಮಾತು ಕೊಟ್ಟು ರೆಡಿ ಮಾಡಲಾಯಿತು. ಮಗನದೂ ಅದೇ ರಾಗ. ತನಗೆ ಈ ಮದುವೆ ಗಿದುವೆ ಎಲ್ಲಾ ಬೋರಿಂಗ್, ನೀವು ಹೋಗಿ ಬನ್ನಿ ಅಂತ ಖಂಡಿತವಾಗಿ ಆತ ಹೇಳಿದ್ದ. ಅವನು ಬರದಿದ್ದರೆ ಕಾರ್ ಡ್ರೈವಿಂಗ್ ಮಾಡಿಕೊಂಡು ಹೋಗುವದು ಶಿವಪ್ರಕಾಶಗೆ ಕಷ್ಟ. ತನ್ನ ಪರೀಕ್ಷೆ ಬೇರೆ ಹತ್ತಿರ ಬಂತು, ತಾನು ಬರೋದಿಲ್ಲ ಎಂದು ಮಗ ಒಂದೇ ರಾಗ ತೆಗೆದಿದ್ದ. ಎಂದಿನಂತೆ ಹೆಂಡತಿ ಕೂಡಾ ಮಗನನ್ನೇ ಬೆಂಬಲಿಸಿದಳು. ಒಬ್ಬ ಡ್ರೈವರನ್ನ ಕರಕೊಂಡು ಹೋದರಾಯ್ತು ಅಂತ ತೀರ್ಮಾನಿಸಿದರು. ನಿಮಗೆ ಎಷ್ಟು ಹೊತ್ತಾದರೂ ಟೈಮ್ ಸಾಲುವದಿಲ್ಲ, ಬೇಗ ಬೇಗ ರೆಡಿಯಾಗಿ, ಅಕ್ಷತೆ ಟೈಮಲ್ಲಿ ಅಲ್ಲಿರಬೇಕು ಎಂದು ಶಿವಪ್ರಕಾಶ ಗಡಿಬಿಡಿ ಮಾಡುತ್ತಿರುವಾಗಲೇ ಹೆಂಡತಿ ಹೊರಬಂದಳು. ಶಿವಪ್ರಕಾಶ ಗಲಿಬಿಲಿಗೊಂಡ. ಹೆಂಡತಿ ಪ್ರಮಿಳಾ ಎಂದೂ ಚೂಡಿದಾರ್ ಹಾಕಿದವಳಲ್ಲ. ಅಂದು ಅದೇನೋ.. ಆಕೆ ಮಗಳ ಚೂಡಿದಾರ್ ಧರಿಸಿರುವದಿತ್ತು. ಮಗಳು ಅಮ್ಮನ ಸೀರೆ ತೊಟ್ಟಿರುವದಿತ್ತು. 'ಇದೇನಿದು.. ಈ ವಯಸ್ನಲ್ಲಿ ನೀನು ಚೂಡಿದಾರ್..?' ಅಂದಾಗ ಪ್ರಮೀಳಾ 'ನೀವೂ ಜೀನ್ಸ್ ಪ್ಯಾಂಟ್ ಹಾಗೂ ಟೀ ಶರ್ಟ್ ಹಾಕೊಳ್ಳರಿ, ಯಾರು ಬೇಡ ಅಂತಾರೆ' ಅಂದಾಗ ಶಿವಪ್ರಕಾಶ ನಗುತ್ತಾ 'ನೀನೇ ಮದುವಿ ಹುಡುಗಿ ಆಗಿಯಲ್ಲೇ..? ಬನ್ನಿ ಬನ್ನಿ, ಬೇಗ ಕಾರ್ ಹತ್ತಿ, ಮತ್ತೆ ತಡ ಮಾಡೂದು ಬೇಡ' ಎನ್ನುತ್ತಿರುವಂತೆ ಎಲ್ಲರೂ ಕಾರ್ ಹತ್ತಿದರು. ಇವರನ್ನು ಬೀಳ್ಕೊಡಲು ಮಗ ನವೀನ ಮನೆಯ ಮೇಲಿನ ಬಾಲ್ಕನಿಯಲ್ಲಿ ನಿಂತಿದ್ದ. ಕಾರ್ ಸ್ಟಾರ್ಟ್ ಆಗುತ್ತಿರುವಂತೆ ಒಂದು ಸಾರಿ ಭೂಮಿ ಅಲ್ಲಾಡಿದಂತಾಯ್ತು. ಡ್ರೈವರ್ ಸರ್ ಭೂಕಂಪ.. ಭೂಕಂಪ ಅನ್ನುವದರೊಳಗೆ ಮನೆ ನೆಲಸಮವಾಗಿತ್ತು. ಮಗ ನವೀನ ಆ ಕಟ್ಟಡದ ಅವಶೇಷಗಳ ಅಡಿ ಸಿಕ್ಕು ನರಳುತ್ತಿದ್ದ. ತಕ್ಷಣವೇ ಶಿವಪ್ರಕಾಶ ಕಾರಿನ ಬಾಗಿಲು ತೆಗೆದು ಧಾವಿಸಿ ಕೆಳಗಿಳಿದ.. ಸುತ್ತಲೂ ಕತ್ತಲು ಮುಸುಕಿದೆ. ದೇವರ ಕೋಣೆಯ ಜೀರೋ ಬಲ್ಬು ಕೂಡಾ ಕಣ್ಣು ಮುಚ್ಚಿದೆ. ಆಗಲೇ ಆತನಿಗೆ ವಿದ್ಯುತ್ ಇಲ್ಲ ಎನ್ನುವದು ಖಾತ್ರಿಯಾಯಿತು. ಶಿವಪ್ರಕಾಶ ಹೆದರಿ ಪೂರ್ತಿ ಹಸಿ ಹಸಿಯಾಗಿದ್ದ. ಹೊರಗಡೆ ನಾಯಿಗಳು ಬೊಗಳುವ ಸದ್ದು. ಸಮಯ ಆಗ ರಾತ್ರಿ ಎರಡು ಘಂಟೆ. ಎದ್ದು ನೀರು ಕುಡಿದು 'ಛೇ.. ದರಿದ್ರ ಕನಸು..' ಎಂದು ಗೊಣಗಿ ಮತ್ತೆ ಮಲಗಿದ.

❖

ಶಿವಪ್ರಕಾಶಗೆ ಈಗೀಗ ಏಕಾಗ್ರತೆಯಿಂದ ಕೆಲಸ ಮಾಡಲಾಗುತ್ತಿಲ್ಲ. ಏನೋ ಒಂದು ಬಗೆಯ ಮಾನಸಿಕ ಕಿರಕಿರಿ ಬೆನ್ನಿಗೆ ಬಿದ್ದ ಅನುಭವ. ಕಾಲೇಜಿನಲ್ಲಿ

ವಿದ್ಯಾರ್ಥಿಗಳೊಂದಿಗೂ ಈಗ ಮುಂಚಿನಂತೆ ಅಂತರಕ್ರಿಯೆಯಲ್ಲಿ ತೊಡಗುತ್ತಿಲ್ಲ. ಏನೋ ಯೋಚನೆ. ಯಾವದೋ ನೆನಪು.. ಇದ್ದಕ್ಕಿದ್ದಂತೆ ಕಳೆದು ಹೋಗಿಬಿಡುವ ಅನುಭವ ಅವನನ್ನು ಬಾಧಿಸುತಿತ್ತು. ಅವನನ್ನು ನಂಬಿ ಈಗ ಯಾವ ಕೆಲಸವನ್ನೂ ಮಾಡುವಂತಿಲ್ಲ. ಮತ್ತೆ ಮತ್ತೆ ಅದೇ ಕನಸು.. ಅದೇ ಅಪಘಾತ. ಅದೇ ಬಗೆಯ ರಸ್ತೆ.. ರಕ್ತ ಆದರೆ ಅಲ್ಲಿರುವ ಮುಖಗಳು ಮಾತ್ರ ಮಸುಕು ಮಸುಕು. ಕೆಲ ಬಾರಿ ತನ್ನ ಮಗ–ಮಗಳು ಆ ಅಪಘಾತದಲ್ಲಿ ಸಿಲುಕಿದ ದೃಶ್ಯಗಳು ಕನಸಿನಲ್ಲಿ ತೇಲಿ ಬಂದಿರುವದಿದೆ. ಶಿವಪ್ರಕಾಶನ ಮಗ ಮತ್ತು ಮಗಳು ಇಬ್ಬರೂ ಇಂಜನಿಯರಿಂಗಲ್ಲಿ ಓದುತ್ತಿದ್ದಾರೆ. ಮಗ ಈಗ ಕೊನೆಯ ಸೆಮ್‌ಲ್ಲಿದ್ದರೆ, ಮಗಳು ಎರಡನೆಯ ಸೆಮ್‌ಲ್ಲಿ ಓದುತ್ತಿದ್ದಳು. ಅವರಂತೂ ತಮ್ಮ ತಂದೆಯ ಇತ್ತೀಚಿನ ವರ್ತನೆಗಳನ್ನು ಕಂಡು ಈ ಕತೆಗಾರರು–ಸಾಹಿತಿಗಳೇ ಹೀಗೆ ಎಂದು ಷರಾ ಎಳದುಬಿಟ್ಟಾಗಿದೆ. ಶಿವಪ್ರಕಾಶ ಇಲ್ಲಿಯವರೆಗೆ ನೂರಾರು ಕಥೆಗಳನ್ನು ಬರೆದಿದ್ದರೂ ಯಾವ ಕಥೆಯ ಪಾತ್ರಗಳೂ ಇಷ್ಟು ಗಾಢವಾಗಿ ಅವನನ್ನು ಬೆನ್ನಟ್ಟಿರಲಿಲ್ಲ. ಕಲಘಟಗಿ ರಸ್ತೆಯ ಆ ಬೈಪಾಸ್‌ಲ್ಲಿ ತಲೆ ಎತ್ತಿದ ಆ ಅಪಘಾತದ ಕಥೆ ಮಾತ್ರ ಅವನನ್ನು ಮತ್ತೆ ಮತ್ತೆ ಕ್ಷಣ ಹೊತ್ತು ವಿಚಲಿತಗೊಳಿಸುವಷ್ಟು ಆಪ್ತವಾಗಿರುವದಿತ್ತು. ಶಿವಪ್ರಕಾಶನ ದೈನಂದಿನ ಬದುಕಿನ ಒಟ್ಟು ವ್ಯವಹಾರಗಳಲ್ಲಿ ಚೂರುಪಾರು ಆ ಕಥೆಯ ಸನ್ನಿವೇಶ, ಪಾತ್ರ, ಸಂಭಾಷಣೆ ಇಣುಕುವದಿತ್ತು. ಆತ ಅವೆಲ್ಲವುಗಳಿಂದ ತಪ್ಪಿಸಿಕೊಳ್ಳಲೆತ್ನಿಸಿದಷ್ಟೂ ಅವು ಗಾಢವಾಗುತ್ತಿದ್ದವು. ಅದು ಏಕೆ ಹಾಗೆ..? ಎನ್ನುವ ಪ್ರಶ್ನೆ ಶಿವಪ್ರಕಾಶನನ್ನು ಮತ್ತೆ ಮತ್ತೆ ಕಾಡಿರುವದಿತ್ತು. ಶಿವಪ್ರಕಾಶ ತನ್ನ ಕಾರನ್ನು ಡ್ರೈವ್ ಮಾಡುವಾಗಲಂತೂ ಆ ಅಪಘಾತದ ಕಥೆಯೊಳಗಿನ ತಿರುವುಗಳು ಮತ್ತು ಆ ಅಪಘಾತದ ದೃಶ್ಯ ತನ್ನ ಕಣ್ಣೆದುರಿಗಿನ ರಸ್ತೆಯ ಮೇಲೆ ಇದ್ದಕ್ಕಿದ್ದಂತೆ ಒಂದು ಸಿನೇಮಾ ದೃಶ್ಯದಂತೆ ಚಕ್ಕನೇ ಮೂಡಿ ಮಾಯವಾಗಿಬಿಡುತಿದ್ದವು. ಹೀಗೆ ಚಕ್ಕನೆ ಮೂಡಿ ಮಾಯವಾಗುವ ಮನಸಿನ ಮಾಯಾಲೋಕ ಎರಡು ಬಾರಿ ಶಿವಪ್ರಕಾಶನನ್ನು ದೊಡ್ಡ ಅಪಘಾತದಿಂದ ತಪ್ಪಿಸಿರುವದಿದೆ. ಈಗೀಗ ದೂರದ ಸ್ಥಳಗಳಿಗೆ ತೆರಳುವದಿದ್ದರೆ ಒಬ್ಬ ಡ್ರೈವರನನ್ನು ಗೊತ್ತುಪಡಿಸಿಕೊಂಡೇ ಆತ ಹೊರಡುವದಿದೆ. ಶಿವಪ್ರಕಾಶ ಮನೆಯಲ್ಲಿ ತಾನು ತುಂಬಾ ಅಲರ್ಟ್ ಆಗಿ ಡ್ರೈವಿಂಗ್ ಮಾಡ್ತೇನೆ ಎಂದಾಗಲೆಲ್ಲಾ ಹೆಂಡತಿ ಪ್ರಮಿಳಾ 'ನೋಡಿದಿನಲ್ಲಾ ಹಾವೇರಿ ಕ್ರಾಸ್ ಬಳಿ ಕೂದಲೆಳೆ ಅಂತರದಲ್ಲಿ ನಾವೆಲ್ಲಾ ಬಚಾವಾದದ್ದು' ಎಂದಾಗ ಅವನಿಗೆ ಮರು ಮಾತನಾಡಲಾಗುತ್ತಿರಲಿಲ್ಲ.

ಸ್ಟಾಫ್‌ರೂಮಲ್ಲಿ ಒಬ್ಬನೆ ಕುಳಿತಿರುವಾಗ ತನ್ನ ಅಪಘಾತ ಅನ್ನೋ ಕಥೆಯನ್ನು ನೆನಪು ಮಾಡಿಕೊಂಡು ಎಲ್ಲ ಕಥೆಗಳೂ ಒಂದೊಮ್ಮೆ ಕತೆಗಾರನನ್ನ ಹೀಗೆಯೇ ಬೆನ್ನಿಗೆ ಬಿದ್ದರೆ ಅವನ ಮನಃಸ್ಥಿತಿ ಹೇಗಿರಬೇಡ ಎಂದು ಯೋಚಿಸಿ ಒಬ್ಬನೇ ನಗುತ್ತಾ ಕುಳಿತಿರುವ ವೇಳೆಯಲ್ಲಿ ಪಿನ್ಸಿಪಾಲ್ ವೇಣುಗೋಪಾಲ್ 'ಶಿವಪ್ರಕಾಶ

ನಿಮ್ಮ ಪಿರಿಯಡ್ ಇದೆಯಂತಲ್ಲ.. ಹುಡುಗರು ಕೇಳ್ತಾ ಬಂದಿದ್ದರು' ಅಂದಾಗ ಶಿವಪ್ರಕಾಶ ಗಡಬಡಿಸಿ 'ಓ ಸಾರಿ ಸರ್, ಮರೆತುಬಿಟ್ಟಿದ್ದೆ' ಎನ್ನುತ್ತ ತರಗತಿಗೆ ನಡೆದ. ಇತ್ತೀಚಿನ ದಿನಗಳಲ್ಲಿ ಶಿವಪ್ರಕಾಶ ಮತ್ತೆ ಕತೆ ಬರೆಯಲೇ ಇಲ್ಲ. ಬರೆಯಬೇಕೆಂದು ಕುಳಿತಾಗಲೆಲ್ಲಾ ಮತ್ತದೇ ಕಲಘಟಗಿ ಬೈಪಾಸ್ ಹೈವೇ.. ರಸ್ತೆಯ ತಿರುವು.. ಅಪಘಾತ.. ರಕ್ತ.. ಪೊಲೀಸು.. ಹೀಗೆ ಇನ್ನೂ ಏನೇನೋ ನೆನಪಾಗಿ ಬರೆಯಬೇಕೆಂದು ಹೊರಟ ಕತೆ ತುಂಡು ತುಂಡಾಗುತ್ತಿತ್ತು.

ಶಿವಪ್ರಕಾಶನ ಆ ಅಪಘಾತದ ಕಥೆಯಲ್ಲಿ ಮದುವೆಯಾದ ಮೊದಲ ದಿನವೇ ಕಲಘಟಗಿ ಕ್ರಾಸಿನ ಅಪಘಾತದಲ್ಲಿ ಹುಡುಗ-ಹುಡುಗಿ ಇಬ್ಬರೂ ಇಲ್ಲವಾಗುತ್ತಾರೆ. ಜೊತೆಗಿರುವ ಹುಡುಗನ ತಂದೆ-ತಾಯಿ ಬದುಕಿ ಉಳಿದಿರುತ್ತಾರೆ. ಒಬ್ಬನೇ ಮಗನ ಸಾವು ಕಣ್ಣಾರೆ ಕಂಡ ಹೆತ್ತವರ ಆಕ್ರಂದನಗಳು ಕತೆಗಾರ ಶಿವಪ್ರಕಾಶನ ಮನದ ಮೂಲೆಯಲ್ಲಿ ಅಮೂರ್ತವಾಗಿ ಉಳಿದು ಬಿಟ್ಟಿದ್ದವು. ಹೇಗಾದರೂ ಮಾಡಿ ಅದನ್ನು ಮರೆಯಲೇಬೇಕು ಎಂದು ಪಯತ್ನಿಸುತ್ತಿರುವಾಗಲೇ ಅಪಘಾತದ ಸುದ್ದಿಯ ಚಿತ್ರಣಗಳು ಟಿ.ವಿ.ಇಲ್ಲವೇ ಪತ್ರಿಕೆಯಲ್ಲಿ ಬಂದದ್ದೇ ಮತ್ತೆ ಆ ಕಥೆಯ ಪಾತ್ರಗಳು ಜೀವಂತವಾಗಿ ಕಾಡುತ್ತಿದ್ದವು. ಈಗೀಗ ಶಿವಪ್ರಕಾಶನಿಗೆ ಒಬ್ಬ ಮನೋವೈದ್ಯರನ್ನು ಭೇಟಿಯಾಗುವ ಅವಶ್ಯಕತೆಯಿದೆ ಎಂದೆನಿಸುತ್ತಿದೆ. ಆ ದಿಶೆಯಲ್ಲಿ ಅದಾಗಲೇ ಆತ ಡಾಕ್ಟರ್ ಪ್ರದೀಪಕುಮಾರ ಅವರ ಭೇಟಿಗಾಗಿ ಸಮಯವನ್ನು ನಿಗದಿಪಡಿಸಿ ಕೊಂಡಿರುವದಿತ್ತು.

ಶಿವಪ್ರಕಾಶನಿಗೆ ಈ ಮುಂಚೆ ಕನಸುಗಳು ಬೀಳುವದೇ ಅಪರೂಪವಾಗಿತ್ತು. ಕಳೆದ ಒಂದು ವರ್ಷದಿಂದ ಕನಸುಗಳು ಅವನ ನಿದ್ದೆಯನ್ನೇ ಗುತ್ತಿಗೆ ಹಿಡಿದಂತೆ ಬೀಳುತ್ತಿವೆ. ತೀರಾ ಅಪರೂಪಕ್ಕೊಮ್ಮೆ ಒಳ್ಳೆಯ ಕನಸುಗಳು, ಬಿಟ್ಟರೆ ಬಹುತೇಕವಾಗಿ ಸಾವು-ನೋವುಗಳಿಗೆ ಸಂಬಂಧಿಸಿದ ಕನಸುಗಳೇ.. ಅದರಲ್ಲೂ ತನ್ನ ಕುಟುಂಬದವರೇ ಹೀಗೆ ಮತ್ತೆ ಮತ್ತೆ ಕನಸಿನಲ್ಲಿ ಸಾಯುವದಿತ್ತು. ಒಂದು ಬಾರಿ ಸ್ವತಃ ಶಿವಪ್ರಕಾಶ ತನ್ನ ಸಾವನ್ನು ಅದಕ್ಕೆ ಸಿಗಬಹುದಾದ ಪ್ರತಿಕ್ರಿಯೆಯನ್ನು ಕೂಡಾ ಕನಸಿನಲ್ಲಿ ಕಂಡಿರುವದಿತ್ತು. ಮರುದಿನ ತಾನು ಕನಸಿನಲ್ಲಿ ಹೇಗೆ ಸತ್ತೆ.. ಯಾಕೆ ಸತ್ತೆ ಎನ್ನುವ ಉತ್ತರಗಳನ್ನು ಹುಡುಕಲೆತ್ನಿಸಿ ಸೋತಿರುವದಿತ್ತು. ಕೊನೆಗೆ ಕನಸಿನಲ್ಲಿಯ ಸಾವು ಆಯುಷ್ಯವನ್ನು ಹೆಚ್ಚಿಸುತ್ತದೆ ಎನ್ನುವ ತನ್ನ ಅವ್ವನ ಮಾತನ್ನು ನೆನೆದು ನಿಟ್ಟುಸಿರು ಬಿಟ್ಟಿರುವದಿತ್ತು. ಕತೆಯೊಂದು ಕನಸಾಗಿ ಈ ಪರಿ ಕಾಡುತ್ತದೆ ಎಂದು ಆತ ಕನಸು ಮನಸಿನಲ್ಲಿಯೂ ಯೋಚಿಸಿರಲಿಲ್ಲ. ಹೀಗೆ ಬೆಂಬಿಡದೇ ಕಾಡುತ್ತಿರುವ ಆ ಕಥೆಯ ಪಾತ್ರಗಳು.. ಸನ್ನಿವೇಶಗಳು.. ಇವನ್ನಾಧರಿಸಿದ ಕನಸನ್ನು ಕುರಿತೇ ಒಂದು ಕತೆ ಬರೆಯಬೇಕೆಂದು ಹೊರಟ ಶಿವಪ್ರಕಾಶನಿಗೆ ಬೀಳುವ ಬಹುತೇಕ ಕನಸುಗಳಲ್ಲಿಯ ಆರಂಭ ಮತ್ತು ಅಂತ್ಯಗಳೆರಡೂ ಅಸ್ಪಷ್ಟವಾಗಿರುತ್ತಿದ್ದುದೇ ಆತ ಕತೆ ಬರೆಯುವಲ್ಲಿ ಒಂದು ಬಹು ದೊಡ್ಡ ತೊಡಕಾಗಿತ್ತು.

❖

ಧಾರವಾಡದ ಕೆಲಗೇರಿ ರಸ್ತೆಯಲ್ಲಿರುವ ಡಾ ಪ್ರದೀಪ ಅವರ ಮಾನಸೋಲ್ಲಾಸ ಆಸ್ಪತ್ರೆ ಈಗೀಗ ತುಂಬಾ ಗಿಜಿಬಿಜಿ. ಸ್ವತಃ ಡಾಕ್ಟರೇ ಶಿವಪ್ರಕಾಶ ಮುಂದೆ ಹೇಳುವಂತೆ ಹಿಂದೆಂದಿಗಿಂತಲೂ ಈಗ ನಗರಗಳಲ್ಲಿ ಮನೋರೋಗಿಗಳ ಪ್ರಮಾಣ ತುಂಬಾ ಹೆಚ್ಚಾಗುತ್ತಿದೆಯಂತೆ. ಮಹಾನಗರಗಳಲ್ಲಿ ಪ್ರತಿ ಹತ್ತು ಜನರಲ್ಲಿ ಒಬ್ಬಾತ ಒಂದಿಲ್ಲಾ ಒಂದು ಮನೋರೋಗದಿಂದ ಬಳಲುವವರಿದ್ದಾರೆ ಎನ್ನುವದನ್ನು ದೆಹಲಿ ಮೂಲದ ಆಂಗ್ಲ ಪತ್ರಿಕೆಯೊಂದನ್ನು ಉಲ್ಲೇಖಿಸಿ ಹೇಳುತ್ತಿರುವದಿತ್ತು. ಶಿವಪ್ರಕಾಶ ಗುರಿಕೇಂದ್ರಿತ ವಿದ್ಯಾರ್ಥಿಯಂತೆ ಅತ್ಯಂತ ಏಕಾಗ್ರತೆಯಿಂದ ಡಾಕ್ಟರ್ ಹೇಳುವದನ್ನೆಲ್ಲಾ ಕಣ್ಣಗಲಿಸಿ ಕೇಳುತ್ತಿದ್ದ. ಇನ್ನೊಂದು ಬದಿ ಡಾಕ್ಟರ್ ಬಳಿ ತನ್ನ ವಿಷಯವನ್ನು ಪ್ರಸ್ತಾಪಿಸುವದು ಎಲ್ಲಿಂದ..? ತನಗೆ ಈಗೀಗ ನಿದ್ದೆ ಸರಿಯಾಗಿ ಬರುವದಿಲ್ಲ ಎಂದೋ.. ಇಲ್ಲವೇ ಬರೀ ಕೆಟ್ಟ ಕೆಟ್ಟ ಕನಸುಗಳು ಬೀಳುತ್ತವೆ ಎಂದೋ.. ಬರೀ ಅಪಘಾತದ ಕನಸುಗಳೇ ಯಾಕೆ ಬೀಳುತ್ತವೆ ಎಂದೋ..? ಹೀಗೆ ಹತ್ತಾರು ಪ್ರಶ್ನೆಗಳು ನಾ ಮುಂದು.. ತಾ ಮುಂದು ಎಂದು ಆತನ ಮನದ ಮೊನೆಯ ಕೊನೆಯ ಮೇಲೆ ನಿಂತಿರುವದಿತ್ತು. ಶಿವಪ್ರಕಾಶ ಆಂಗ್ಲಭಾಷಾ ಅಧ್ಯಾಪಕ ಎಂದು ತಿಳಿದದ್ದೇ ಡಾಕ್ಟರ್ ಮನುಷ್ಯನ ಮನಸಿನ ವಿವಿಧ ಪದರುಗಳನ್ನು.. ಸಿಗ್ಮಂಡ್ ಫ್ರೈಡ್‌ನ ಕನಸುಗಳ ವಿಶ್ಲೇಷಣೆಯನ್ನು ತುಂಬಾ ರೋಚಕವಾಗಿ ಹೇಳಿರುವದಿತ್ತು. ಆ ಮೂಲಕ ತಾನು ಮನಃಶಾಸ್ತ್ರವನ್ನು ತುಂಬಾ ಆಳವಾಗಿ ಓದಿರುವೆ ಎನ್ನುವದನ್ನು ಸಾಬೀತು ಪಡಿಸಿರುವದಿತ್ತು.

ಈಗ ನಿಮ್ಮ ವಿಷಯಕ್ಕೆ ಬರೋಣ 'ಹೇಳಿ ಏನು ಸಮಸ್ಯೆ..?' ಎಂದಾಗ ಅತ್ಯಂತ ಚುಟುಕಾಗಿ ಶಿವಪ್ರಕಾಶ ತಾನು ಬರೆದ ಕಥೆ, ಅಪಘಾತ, ಬೈಪಾಸ್ ರಸ್ತೆ, ಕಲಘಟಗಿ ಕ್ರಾಸ್ ಇವೆಲ್ಲವೂ ಕನಸಿನಲ್ಲಿ ಇನ್ನೊಂದು ರೂಪದಲ್ಲಿ ಬಂದು ತನ್ನನ್ನು ಕಾಡುವ ಬಗ್ಗೆ, ಆ ಕನಸಿನಲ್ಲಿ ತನಗೆ ಆಪ್ತರಾದವರೊಬ್ಬರು ಸಾಯುವ ಬಗ್ಗೆ ಕನಸು ಮೂಡುವದನ್ನು ಡಾಕ್ಟರ್ ಎದುರು ಹೇಳಿಕೊಂಡ. ಆತ ಹಾಗೆ ಹೇಳುತ್ತಲೇ ಇದ್ದ. 'ಕೆಲ ಬಾರಿ ಹಗಲು ಹೊತ್ತಿನಲ್ಲಿಯೂ ಈ ಬಗೆಯ ಮೂರ್ನಾಲ್ಕು ರಸ್ತೆಗಳು ಕೂಡುವ ತಿರುವುಗಳನ್ನು ಕಂಡಾಗಲೊಮ್ಮೆ ತಕ್ಷಣ ನನ್ನ ಕಥೆಯೊಳಗಿನ ಪ್ರತಿಮೆಗಳು, ಸನ್ನಿವೇಶಗಳು ನೆನೆಪಾಗುವದಿದೆ. ಒಂದು ಬಾರಿಯಂತೂ ಕೂದಲೆಳೆಯ ಅಂತರದಲ್ಲಿ ನನ್ನದೇ ಕಾರು ಅಪಘಾತದಿಂದ ಬಚಾವ್ ಆದದ್ದಿದೆ. ಇದೆಲ್ಲಾ ಏನು..? ಯಾಕೆ ಹೀಗೆ..? ಎನ್ನುವ ಪ್ರಶ್ನೆ ನನ್ನನ್ನು ಅನೇಕ ಬಾರಿ ಕಾಡುವದಿದೆ. ಒಂದು ಬಾರಿಯಂತೂ ತರಗತಿಯಲ್ಲಿ ನಾನು ಪಾಠ ಮಾಡುವ ವೇಳೆ ರಸ್ತೆಯಲ್ಲಿ ಯಾವದೋ ಒಂದು ವಾಹನ ಚೊಂಯ್.. ಎಂದು ತೀಕ್ಷ್ಣವಾಗಿ ಬ್ರೇಕ್ ಹಾಕಿದ್ದೇ ನಾನು ಪ್ರಜ್ಞಾತೀತನಾಗಿ ಕೈಯಲ್ಲಿಯ ಪುಸ್ತಕವನ್ನೇ ಬಿಟ್ಟಿರುವದಿದೆ..' ಎಂದು ಕಣ್ಣು ಮುಚ್ಚಿ ವಿಶ್ರಮಿಸಿ ಕುಳಿತ. ಒಂದು ದೀರ್ಘವಾದ ಉಸಿರು.. ನಿಟ್ಟುಸಿರು. ಡಾಕ್ಟರ್ ಪ್ರದೀಪ ಶಿವಪ್ರಕಾಶ ಹೇಳುವದನ್ನು ಅವನ ಮುಖದಲ್ಲಿಯ ಹಾವ ಭಾವವನ್ನು ಅತ್ಯಂತ ಸೂಕ್ಷ್ಮವಾಗಿ

ಗಮನಿಸಿದ್ದ. ಅವಶ್ಯಕತೆ ಎನಿಸಿದಲ್ಲಿ ಎದುರಲ್ಲಿರುವ ಲೆಟರ್‌ಹೆಡ್‌ಲ್ಲಿ ನೋಟ್ ಮಾಡಿಕೊಂಡಿದ್ದ. ಶಿವಪ್ರಕಾಶ ತನ್ನ ಕಥೆಯನ್ನೆಲ್ಲಾ ಕೇಳಿ ಮುಗಿಸಿದ ಮೇಲೆ ಡಾಕ್ಟರ್ ತನ್ನ ಕೈಯಲ್ಲಿಯ ಪೆನ್ನನ್ನು ಹಾಗೇ ಕೈ ಬಿಟ್ಟು ಹಿಂದೆ ಸರಿದು ಆರಾಮ ಖುರ್ಚಿಯ ಮೇಲೆ ಕುಳಿತು ತಿರುಗುತ್ತಿರುವ ಫ್ಯಾನನ್ನು ದಿಟ್ಟಿಸುತ್ತಾ ಏನನ್ನೋ ಯೋಚಿಸುತ್ತಿದ್ದ. ನಂತರ ಶಿವಪ್ರಕಾಶನೆಡೆಗೆ ನೋಡಿ,

'ಹೀಗೆ ನಿಮಗೆ ಕನಸು ಬೀಳುವದು, ಡ್ರೈವಿಂಗ್ ಮಾಡುವಾಗ ಭಯವಾಗುವದು ಯಾವಾಗಿನಿಂದ ಶುರುವಾಗಿದೆ..?'

'ಹೆಚ್ಚೂ ಕಡಿಮೆ ಒಂದು ವರ್ಷ ಆಗಿರಬೇಕು'

'ಖಚಿತವಾಗಿ ದಿನ.. ತಿಂಗಳು.. ಏನಾದರೂ..'

'ಇದೇ ದಿನ ಅಂತ ಗೊತ್ತಿಲ್ಲ. ಕಳೆದ ಫೆಬ್ರುವರಿ ತಿಂಗಳು ಅಂತ ಗೊತ್ತಿದೆ'

'ನಥಿಂಗ್ ಟು ವರಿ ಪ್ರೊಫೆಸರ್, ಇದು ನಗರಗಳಲ್ಲಿ ಈಗ ಮಾಮೂಲು.. ನೀವು ಫೋಬಿಯಾ ಅಂತ ಕೇಳಿದ್ದಿರಾ..?'

'ಹೌದು ಕೇಳಿರುವೆ'

'ಅದೇ ಇದು. A fear becomes phobia when an object or a situation is so dreaded that an individual goes to almost any length to aviod it. ಬೇಸಿಕಲೀ ಹೇಳಬೇಕಂದ್ರೆ ಬಹುಶಃ ನಿಮಗೆ ಕಂಫರ್ಟ್ ಆಗಿ ಕಾರ್ ಡ್ರೈವಿಂಗ್ ಮಾಡಲಾಗಲಿಕ್ಕಿಲ್ಲ. ಇಜ್ ಇಟ್ ರೈಟ್..?' ಅಂತ ಕೇಳುತ್ತಿರುವಂತೆ ಶಿವಪ್ರಕಾಶ,

'ಹೌದು ಹೌದು.. ಈಗಂತೂ ಭಯ ಇನ್ನೂ ಜಾಸ್ತಿ'

'ಅದನ್ನೇ ನಾನೂ ಹೇಳ್ತಾ ಇರೋದು. ಈ ಸ್ಥಿತಿಯನ್ನ ನಾವು ಮನೋ ವಿಜ್ಞಾನದಲ್ಲಿ 'ಅಮಾಕ್ಸೋ ಫೋಬಿಯಾ' ಎನ್ನುತ್ತೇವೆ. ಅಂದರೆ fear of automobiles ಅಂತ. ನೀವು ಹೇಳುವದನ್ನೆಲ್ಲಾ ಕೇಳಿದರೆ ಇದರ ಜೊತೆಗೆ ನಿಮ್ಮಲ್ಲಿ ಸೋಶಿಯಲ್ ಫೋಬಿಯಾದ ಕೆಲ ಲಕ್ಷಣಗಳೂ ಇವೆ ಎನಿಸುತ್ತದೆ. ಇಲ್ಲಿ ನೀವು ಬರೆದಿರೋ ಆ ಕಥೆ ಒಂದು ನೆಪ ಮಾತ್ರ. ಹೆದರಬೇಡಿ ಏನೂ ಆಗಲ್ಲ. ತಕ್ಷಣದಿಂದಲೇ ಟ್ರೀಟಮೆಂಟ್ ಶುರು. ಸದ್ಯಕ್ಕೆ ಈ ಮಾತ್ರೆಗಳನ್ನ ದಿನಕ್ಕೆ ಎರಡರಂತೆ ತಗೊಳ್ಳಿ. ಒಂದು ವಾರ ಬಿಟ್ಟು ಬನ್ನಿ. ಕೂಲಾಗಿ ಡ್ರೈವ್ ಮಾಡಿ. ಏನೂ ಆಗಲ್ಲ, ಹೆದರಕೋಬೇಡಿ. ಸಿಟಿಯೊಳಗೆ ಸರ್ಕಲ್ ಇರೋ ಜಾಗೆಯಲ್ಲಿ ಕಾರ್ ಓಡಿಸಿ,

ಭಯ ಬೇಡ. ಅರಾಮ್‌ಸೇ ಓಡಿಸಿ. ಒಂದು ವಾರ ಕಳೀಲಿ.. ಮುಂದಿನ ಸೋಮವಾರ ಬನ್ನಿ' ಎನ್ನುತ್ತ ಮಾತ್ರೆ ಚೀಟಿಯನ್ನು ಶಿವಪ್ರಕಾಶನ ಕೈಗಿಟ್ಟರು.

❖

ಡಾಕ್ಟರ್ ಸಲಹೆಯಂತೆ ದಿನಾಲು ಬೆಳಿಗ್ಗೆ ಒಂದು ಸುತ್ತು ಸಿಟಿಯಲ್ಲಿ ಮೂರು ರಸ್ತೆ ಸೇರುವ ಸರ್ಕಲ್‌ಗಳಲ್ಲಿ ಕಾರ್ ಓಡಿಸತೊಡಗಿದ. ಡ್ರೈವ್ ಮಾಡುವಾಗ ತುಂಬಾ ಅಲರ್ಟ್ ಆಗಿರುತ್ತಿದ್ದ. ರಸ್ತೆಯನ್ನು ಬಿಟ್ಟರೆ ಯಾವುದನ್ನೂ ಗಮನಿಸುತ್ತಿರಲಿಲ್ಲ. ಮೊದಲಿನ ಹಾಗೆ ಹೆದರಿಕೆಯಾಗಲೀ, ಆ ಬಗೆಯ ಅಪಘಾತದ ಕನಸುಗಳಾಗಲೀ ಅವನನ್ನು ಕಾಡಲಿಲ್ಲ. ಶಿವಪ್ರಕಾಶ ಈಗ ತುಸು ಗೆಲುವಾಗಿದ್ದ ಎನ್ನುವದನ್ನು ಅವನ ಮನೆಯವರೆಲ್ಲರೂ ಗುರುತಿಸಿರುವದಿತ್ತು. ಆ ದಿನ ರವಿವಾರ. ಹೀಗೇ ಒಂದೆರಡು ಸುತ್ತು ಕಾರನ್ನು ಓಡಿಸಿ, ಮನೆಯ ಕಂಪೌಂಡಲ್ಲಿ ಅದನ್ನು ಹಚ್ಚುವಾಗ ಗೇಟಿಗೆ ಕಾರು ತಾಗಿ ಅದರ ಮುಂಬಾಗ ಕೊಂಚ ವಿಕಾರವಾಯಿತು. ಅತ್ಯಂತ ಖಾಳಜಿಯಿಂದ ಇಲ್ಲಿಯವರೆಗೆ ಒಂದೇ ಒಂದು ಗೆರೆ ಮೂಡದಂತೆ ಖಾಳಜಿ ತೆಗೆದುಕೊಂಡಿದ್ದ ಶಿವಪ್ರಕಾಶಗೆ ಆ ದಿನದ ಘಟನೆಯಿಂದ ತುಂಬಾ ಬೇಜಾರಾಗಿತ್ತು. ಇಡೀ ದಿನ ಅದೇ ಯೋಚನೆ ತಲೆ ಸುತ್ತಿದಂತಿತ್ತು. ಮನಸು ಗಟ್ಟಿ ಮಾಡಿಕೊಂಡ. ಹೆದರಿದರೆ ಇನ್ನೂ ಕಷ್ಟ. ತಾನು ಆ ಅಮಾಕ್ಸೊ ಫೋಬಿಯಾದಿಂದ ಹೊರಬರಲೇಬೇಕು ಎಂದೆಲ್ಲಾ ಯೋಚಿಸಿ, ಆ ದಿನ ಬೆಳಿಗ್ಗೆ ಡ್ರೈವ್‌ಗೆಂದು ಹುಬ್ಬಳ್ಳಿ ಧಾರವಾಡ ಬೈಪಾಸ್ ಕಡೆ ಕಲಘಟಗಿ ರಸ್ತೆಯ ಮೇಲೆ ನಡೆದ. ಮನೆಯಲ್ಲಿ ಹಾಗೆಂದು ಹೇಳಿರಲಿಲ್ಲ. ಅದೇನಾಗುತ್ತೋ ನೋಡೋಣ ಎಂದು ನಡೆದು ಬಿಟ್ಟಿದ್ದ. ಸೀಟ್ ಬೆಲ್ಟ್ ಧರಿಸಿ ತುಂಬಾ ಫ್ರೀ ಆಗಿ ಡ್ರೈವಿಂಗ್ ಮಾಡತೊಡಗಿದ. ಕಾರು ರಸ್ತೆಯನ್ನು ಹಾಗೇ ನುಂಗುತ್ತಲೇ ಇತ್ತು. ನುಗ್ಗಿಕೇರಿ ಕ್ರಾಸ್ ದಾಟುವವರೆಗೂ ಎಲ್ಲವೂ ವ್ಯವಸ್ಥಿತವಾಗಿಯೇ ಇತ್ತು. ಬೈಪಾಸ್ ಹತ್ತಿರ ಬರುತ್ತಿರುವಂತೆ ಅದೇನಾಯಿತೋ ಏನೋ.. ಶಿವಪ್ರಕಾಶ ಕಾರಲ್ಲಿ ಎ.ಸಿ.ಇದ್ದರೂ ವಿಪರೀತ ಬೆವರತೊಡಗಿದ. ಅವನಿಗೆ ಇದ್ದಕ್ಕಿದ್ದಂತೆ ತನ್ನ ಕಥೆಯ ಪ್ರತಿಮೆಗಳು.. ಸನ್ನಿವೇಶಗಳು.. ನಿಚ್ಚಳವಾಗಿ ನೆನಪಾಗತೊಡಗಿದವು. ಮನಸನ್ನು ಬೇಡ ಬೇಡ ಎಂದು ತಡೆದರೂ ಅದು ಕಥೆಯೊಳಗಿನ ಅಪಘಾತದ ಜಾಗ, ಜಬ್ಬಿ ಹೋದ ಕಾರು, ಹೆತ್ತವರ ಆಕ್ರಂದನ, ಗಿಡಕ್ಕೆ ಜಬ್ಬಿದ ಟ್ರಕ್, ಚೆಲ್ಲಿದ ರಕ್ತ ಎಲ್ಲವೂ ನೆನಪಾಗಿ ತಟ್ಟನೇ ವಾಸ್ತವಕ್ಕೆ ಬರುವದರೊಳಗಾಗಿ ಎಡಬದಿಯ ತಿರುವಿನಿಂದ ಜೋರಾಗಿ ಬಂದ ಟ್ರಕ್ಕೊಂದು 'ಏಯ್..!' ಎಂದು ಶಿವಪ್ರಕಾಶ ಚೀರುವದರೊಳಗೆ ಆತನ ಕಾರನ್ನು ಜೋರಾಗಿ ಅಪ್ಪಳಿಸಿಯೇ ಬಿಟ್ಟಿತ್ತು. ಕಾರು ಆ ಹೊಡೆತಕ್ಕೆ ರಸ್ತೆಯ ಅಂಚಿನ ಹತ್ತಡಿ ಆಳದ ತಗ್ಗಿಗೆ ಮುಖ ಕೆಳಗಾಗಿ ಅಂಗಾತ ಬಿದ್ದುಕೊಂಡಿತ್ತು. ಜನರೆಲ್ಲಾ ಓಡಿ ಬಂದರು. ಡ್ರೈವರ್ ಬದಿಯ ಬಾಗಿಲ ಸಂದಿಯಿಂದ ರಕ್ತ ಹನಿ ಹನಿಯಾಗಿ ವಸರುತ್ತಿತ್ತು.

❖

(ತರಂಗ – ಜೂನ್ 21, 2012)

ಅಮೃತಮತಿ ಇನ್ನೂ ಸತ್ತಿಲ್ಲ...

ಮೋದೂರು ತೇಜ

ಬೆದೆಯೋ ಕ್ಷಣಿಕ

ಒಲವು ಜೀವವಿರುವ ತನಕ

– ಪು.ತಿ.ನ

ಅಲೆಗಳ ದಾಳಿಗೆ ತುತ್ತಾಗದಷ್ಟು ಇಸ್ರಾಮಾಗಿ ಕಡಲ ದಡದಲ್ಲಿ ಮರಳಿನ ಮನೆ ಕಟ್ಟುತ್ತಿದ್ದಾನೆ–ತನ್ನದೇ ಗೂಡಿನ ಪ್ರತಿರೂಪವೆಂಬಂತೆ. ತನ್ನ ಕನಸಿನ ಸೌಧವನ್ನ ಸಾಕಾರಗೊಳಿಸಲು ತಲ್ಲೀನನಾದವನಿಗೆ ಹಿನ್ನೆಲೆಯೆಂಬಂತೆ, ಅನಂತ ನೀಲಾಕಾಶಕ್ಕೆ ಹೆಗಲೆಣೆಯಾಗಿ ನಿಂತ ಸಮುದ್ರವಿತ್ತು. ವಿಶಾಲವಾದ ದಂಡೆಗೆ ಮುತ್ತಿಡಲೆಂಬಂತೆ; ಬಿಡುವಿಲ್ಲದೆ ಬಳುಕಾಡುತ್ತಾ ಸಾಗಿ ಬರುವ ಅಲೆಗಳ ಮೆರವಣಿಗೆಯಿತ್ತು. ಅವನದೇ ಏಕಾಂತದಲ್ಲಿ ಪೂರ್ಣಗೊಂಡ ಮರಳಿನ ಮನೆಯನ್ನ ಎಳೆ ಮಗುವಿನಂತೆ ತದೇಕ ಚಿತ್ತದಿಂದ ನೋಡುತ್ತಿರುವಾಗ; ನೋಡ ನೋಡುತ್ತಲೆ ಕೋಳಿಪಿಳ್ಳೆಯನ್ನ ರಣಹದ್ದೊಂದು ಗಬಕ್ಕನೆ ಬಾಚಿಕೊಂಡು ಹೋದಂತೆ ದೈತ್ಯ ಅಲೆಯೊಂದು ಬಂದು ಅನಾಮತ್ತಾಗಿ ಎತ್ತಿಕೊಂಡು ಹೋಗಿ ಕಡಲೊಡಲೊಳಗೆ ಬಚ್ಚಿಟ್ಟುಕೊಂಡಾಗ, ನಿಟ್ಟುಬಿದ್ದು ಅಲೆಯ ರೂಪದಲ್ಲಿ ಸಾವಿನ ಸ್ವರೂಪ ಕಂಡ ನಿಂಗಣ್ಣನ ಗುಂಡಿಗೆ 'ಝುಲ್' ಎಂದಿತ್ತು. ಕಣ್ಣು ಬಿಟ್ಟು ನೋಡಿದ; ಆಸ್ಪತ್ರೆಯ ಜನರಲ್ ವಾರ್ಡಿನ ಐದ್ನೆ ನಂಬರಿನ ಕೋಣೆಯಲ್ಲಿ ತಿರುಗುವ ಸೀಲಿಂಗ್ ಪ್ಯಾನಿನ ಬಿಸಿ ಗಾಳಿಯೊಂದಿಗೆ ಬೆರೆತ ನಿಂಗಣ್ಣನ ನಿಟ್ಟುಸಿರು ಹೊರತು ಪಡಿಸಿ; ಕಡಲು, ಅಲೆ, ಮರಳಿನ ಮನೆ ಯಾವುದೂ ಇರಲಿಲ್ಲ. ಇದೊಂದು ಕನಸೆಂದುಕೊಂಡರೂ ತಾನೇ ಅಲೆಯ ಅಬ್ಬರಕ್ಕೆ ಬಲಿಯಾದವನಂತೆ ನಿಂಗಣ್ಣನ ಎದೆ ಜೋರಾಗಿ ಹೊಡೆದುಕೊಳ್ಳುತ್ತಿತ್ತು.

ಕನಸಿನಿಂದ ತಿಳಿದೆದ್ದ ನಿಂಗಣ್ಣನಿಗೆ ನಿದ್ದೆಯೆಂಬುದು ನಾಪತ್ತೆಯಾಗಿತ್ತು. ಹಾಸಿಗೆಯಲ್ಲಿ ಉರುಳಾಡಿದ್ದು ಸಾಕೆನಿಸಿ ಆ ಕೋಣೆಯನ್ನು ದಾಟಿ ಆಸ್ಪತ್ರೆಯಿಂದ ಹೊರ ಬಂದು ನಿಂತಾಗ, ಅಸಂಖ್ಯ ನೋವುಗಳ ಯಾತನೆಗಳ ಆರ್ತನಾದವನ್ನ ತನ್ನ ಮಡಿಲೊಳಗೆ ಮೌನವಾಗಿ ಮುಚ್ಚಿಟ್ಟುಕೊಂಡ ಅಸ್ಪತ್ರೆಯ ಕಟ್ಟಡ ಶರದ್ ಋತುವಿನ ಹಾಲು ಬೆಳದಿಂಗಳಲ್ಲಿ ತೋಯ್ದು ನಿಂತಿತ್ತು. ಬಹಳ ಹೊತ್ತಿನ ತನಕ ವಿನಾಕಾರಣವಾಗಿ ನಿಂತಿದ್ದ ನಿಂಗಣ್ಣನಿಗೆ ಸುತ್ತಲೂ ನೋಡಿದ್ದು ಸಾಕೆನಿಸಿ ಒಳಗಡೆ ಹೋಗಿ ಹಾಸಿಗೆಯ ಮೇಲೆ ಕುಳಿತ. ಊರಲ್ಲಿದ್ದಾಗ ಊಟ ಮಾಡಿದಾಗ ಮಾತ್ರ

ತಾಂಬೂಲ ಹಾಕುತ್ತಿದ್ದವನು, ಆಸ್ಪತ್ರೆಗೆ ಬಂದಾಗಿನಿಂದ ಬೇಸರವನ್ನ ನೀಗಿಸಿಕೊಳ್ಳಲು ಅಡಿಕೆಲೆ ಮೆಲ್ಲುವುದು ಜಾಸ್ತಿಯಾಗಿತ್ತು. ಈಗ ಹೊತ್ತಲ್ಲದ ಹೊತ್ತಲ್ಲಿ ಎಚ್ಚರ ವಾಗಿದ್ದರಿಂದ ಕಾಲನ ವ್ಯವಕಲನಕ್ಕೋಸ್ಕರ ಅಡಿಕೆಲೆ ಜಗಿಯುತ್ತಾ ಕುಳಿತಿದ್ದ. ಆ ಒಂಟಿತನದ ನಡು ನಡುವೆ ಆಸ್ಪತ್ರೆಯ ಹಾಸಿಗೆಯಲ್ಲಿ ನರಳುತ್ತಾ ಮಲಗಿರುವ ಮಗನ ದಾರುಣ ಸ್ಥಿತಿ ಕಂಡು ನಿಂಗಣ್ಣನ ಗುಂಡಿಗೆಯಲ್ಲಿ ನೋವಿನ ಬೈರಿಗೆ ಹಿಡಿದಂತಾಗುತ್ತಿತ್ತು.

ನಡೆಯಲಾರದವನಿಗೆ ಮಣಭಾರ ಹೊರಿಸಿದಂತೆ ಅನಾವೃಷ್ಟಿಯಿಂದ ಬಿತ್ತಿದ ಬೀಜ ಭೂಮಿ ಪಾಲಾಗಿ ನೆಲವ ನಂಬಿದ ರೈತ ಸಾಲಗಾರನ ಪಾಲಾಗಿ ದಿಕ್ಕೇ ತೋಚದಂತಹ ದುಃಸ್ಥಿತಿಯಲ್ಲಿರುವಾಗ ದೇವರೆಂಬ ನಿಷ್ಕರುಣಿ ನಿಂಗಣ್ಣನ ಎದೆಗೆ ಮತ್ತೊಂದು ನೋವಿನ ಬರೆ ಎಳೆದಿದ್ದ. ಮಗನಿಗೆ ವಕ್ಕರಿಸಿಕೊಂಡಿರುವ ಕಪ್ಪು ಕಾಮಾಲೆ ಕಾಯಿಲೆ ಮೀರಿದೆ ಅಂತ ಗೊತ್ತಾದಾಗ ನಿಂತ ನೆಲವೆ ಬಾಯಿ ಬಿಟ್ಟಂತಾಗಿತ್ತು. ಹಾಗಂತ ಕಣ್ಣೆದುರಿಗೆ ಕಮರಿ ಹೋಗುವ ಸ್ಥಿತಿ ನನ್ನ ಕರುಳ ಕುಡಿಗೆ ಬರಬಾರದೆಂದು ಬಾರ್ದಾಡಿ ಆಸ್ಪತ್ರೆಯ ಖರ್ಚಿಗೆ ಸರಿದೂಗುವಂತ ಹಣವನ್ನ ತನ್ನ ಭಾಗದ ನಾಕೆಕರೆ ಎರೆ ಹೊಲವನ್ನ ಮಾರಿ ಅದರ ಹಣ ತಂದು ಹತ್ತು–ಹದಿನೈದು ದಿನದಿಂದ ನಲ್ಲಿಯಲ್ಲಿ ನೀರು ಬಿಟ್ಟಂಗೆ ಹಣ ಸುರುದ್ರು ಮಗನ ಮುಖದಲಿ ಸಾಸಿವೆ ಕಾಳಿನೋಟು ಗುಣಮುಖವಾಗುವ ಲಕ್ಷಣಗಳು ಕಂಡಿರಲಿಲ್ಲ. ಆಸ್ಪತ್ರೆಯಲ್ಲಿ ಇದ್ದಷ್ಟು ದಿನ ನಿಂಗಣ್ಣ ಅನುಭವಿಸಿದ ಮೂಕ ವೇದನೆ ತನ್ನ ಶತ್ರುವಿಗೂ ಬೇಡವನಿಸಿತ್ತು. 'ಬರೀ ಅಕ್ರೆ, ಮೊಲೆಯಾಗೆ ಹಾಲಿಲ್ಲ' ಎನ್ನುವಂತೆ ನಿಂಗಣ್ಣನ ಹೆಂಡತಿಯ ತಮ್ಮಂದಿರನ್ನ ಹೊರತು ಪಡಿಸಿ ಉಳಿದ ಸಂಬಂಧಿಕರ್‍ಯಾರು ಆಸ್ಪತ್ರೆ ಕಡೆ ತಲೆ ಹಾಕಿರಲಿಲ್ಲ. ನಿಂಗಣ್ಣನ ಭಾವಮೈದುನರು ಸಹ ಸ್ಥಿತಿವಂತರಾಗಿರ ಲಿಲ್ಲ. ಕೂಲಿ ಮಾಡಿ ಜೀವನ ಸಾಗಿಸೊ ಅವರ ಅನುಕೂಲಕ್ಕೆ ತಕ್ಕಂತೆ ಮಾವನ ಕೈಗೊಂದಿಷ್ಟು ಹಣಕೊಟ್ಟು ಅಳಿವಿನಂಚಿನಲ್ಲಿರುವ ಅಳಿಯನ ಮುಖ ನೋಡಿ ತಮ್ಮ ಅಸಹಾಯಕ ಸ್ಥಿತಿಗೆ ಗದ್ಗದಿತರಾಗಿ ಬಿಸಿ ಕಂಬನಿಯ ಕಾಣಿಕೆ ಅರ್ಪಿಸಿ ಹೋಗಿದ್ದರು.

ಯಾವ ಯಾವುದೊ ಯೋಚನೆಯಲ್ಲಿ ಮಗ್ನವಾಗಿದ್ದ ನಿಂಗಣ್ಣನಿಗೆ ಮೂಡಲು ಕೆಂಪೇರಿದ್ದೇ ತಿಳಿದಿರಲಿಲ್ಲ. ಕಿಟಕಿ ಸಂದಿಯಿಂದ ನೇಸರನ ಹೊಂಬಣ್ಣದ ಕಿರಣಗಳು ಒಳ ತೂರಿ ದಿನದ ಬದುಕಿನ ನಾಟಕಕ್ಕೆ ಅಂಕ ಬದಲಿಸಲು ಕಪ್ಪು ಪರದೆ ಸರಿಸಿ ಬೆಳಕಿನ ಪರದೆ ಇಳಿ ಬಿಟ್ಟಿದ್ದವು. ಇಷ್ಟೊತ್ತಿಗೆದ್ದು ಮಾಡೋದೇನಿದೆ ಎಂದುಕೊಂಡ ನಿಂಗಣ್ಣ ಇನ್ನೂ ಹಾಸಿಗೆ ಮೇಲೆ ಕುಳಿತಿದ್ದ. ಅಷ್ಟೊತ್ತಿಗೆ ಪಕ್ಕದ ಬೆಡ್ಡಿನ ಪೇಷಂಟಿನ ಕಡೆಯವರು ಸಂತಸದ ನಗೆ ಬೀರುತ್ತಾ ಒಳ ಬಂದು ನಿಂಗಣ್ಣನ ಸಮೀಪ ಕುಳಿತು; 'ದೇವರು ದೊಡ್ಡೋನು ನಿಂಗಣ್ಣ, ಬೆಟ್ಟದಂಗೆ ಬಂದ ಕಷ್ಟ ಮಂಜಿನಂಗೆ ಮರೆಯಾಯ್ತು. ನನ್ನ ತಮ್ಮನಿಗೆ ಪೂರ್ತಿ ವಾಸಿಯಾಯ್ತು. ಈ ದಿನ ಡಿಸ್ಚಾರ್ಜ್ ಮಾಡಿಸಿಕೊಂಡು ಊರಿಗೆ ಹೊರಡ್ತಿದೀವಿ' ಎಂದಾಗ ಅವರ್ಣನೀಯ ಆನಂದವೆಂಬುದು ಆತನ

ಮುಖದಲ್ಲಿ ತುಂಬಿ ತುಳುಕಾಡುತ್ತಿತ್ತು. ಹತ್ತುಹದಿನೈದು ದಿನದಲ್ಲಿ ಪರಿಚಯವಾದವರು ಆಸ್ರ-ಬೇಸ್ರಕ್ಕೆಂದು ಜೊತೆಗಿದ್ದ ಆತನು ಹೊರಟು ನಿಂತ ಅಗಲಿಕೆಯ ಭಾರಕ್ಕಿಂತ ಅವರ ತಮ್ಮ ಗುಣಮುಖನಾದ ವಿಚಾರವೇ ಮನಸನ್ನ ಹಗುರಗೊಳಿಸಿತ್ತು. ನಾವು ಇವತ್ತೊ, ನಾಳೆ ಹೊರಡ್ತಿವಿ. ದೇವರಿಟ್ಟಂತಾಗ್ಲಿ ಎಂದ ನಿಂಗಣ್ಣನ ಮಾತಿನಲ್ಲಿ ನಿರಾಸೆಯ ಲೇಪನದೊಂದಿಗೆ ನೋವಿನ ಭಾರ ತುಂಬಿ ತುಳುಕಾಡುತಿತ್ತು.

ಹೋಗೊ ಮುಂದುಗಡೆ ಈ ಮಾತು ಕೇಳ್ತಿನಂತ ತಪ್ಪು ತಿಳಿ ಬೇಡ ನಿಂಗಣ್ಣ, ಈ ಮಗು ಅಮ್ಮ.. ಅಮ್ಮ.. ಅಂತೇಳಿ ಕನವರಿಸಿಕೊಳ್ಳೊ ಇಂಥಾ ಸಮಯದಾಗೆ ಒಂದಿನನಾದ್ರು ನಿಮ್ಮಾಕೆ ಬರ್ಲಿಲ್ವಲ್ಲ ನಿಂಗಣ್ಣಿ? ಆತ ಸಹಜವಾಗಿ ತನ್ನ ಕುತೂಹಲ ವ್ಯಕ್ತಪಡಿಸಿದಾಗ, ಅನಿರೀಕ್ಷಿತವಾಗಿ ತೂರಿ ಬಂದ ಪ್ರಶ್ನೆಗೆ ಗಲಿಬಿಲಿಗೊಂಡಂತಾದರು ತನಗೆ ತಾನೆ ಸಾವರಿಸಿಕೊಂಡ ನಿಂಗಣ್ಣ; ಮನೇಲಿ ಇಸ್ಕೂಲಿಗೆ ಹೋಗೊ ಇಬ್ರು ಮಕ್ಕಳು, ಕೈಲಾಗದ ನನ್ನ ತಾಯಿ, ಮನೆ ಮುಂದೆ ಎರಡೆಮ್ಮೆ ಹತ್ತು ಮೇಕೆ ಇದಾವೆ. ಇವನ್ನೆಲ್ಲ ನೋಡಿಕೊಳ್ಳೊಕೆ ಆಕೆ ಅಲ್ಲೇ ಇದಾಳೆ. ಆದ್ರೂ ಎದ್ದಾಗ-ಬೈಗಿಂದ ಪೋನು ಮಾಡಿ ಮಗನ ಬಗ್ಗೆ ಇಚಾರಿಸಿ ಕೊಳ್ತಾಳೆ ಎಂದೇಳಿದ ನಿಂಗಣ್ಣನ ಮಾತು ಕೇಳಿದ ಆತ ತನ್ನ ಕೌತುಕವನ್ನ ತಣಿಸಿಕೊಂಡ ತೃಪ್ತಿಯಲ್ಲಿ ನಿಂಗಣ್ಣನ್ನ ತಿಂಡಿ ತಿನ್ನೋಕೆ ಕರೆದ. ನೀವು ದೂರಬಾರ ಪ್ರಯಾಣ ಮಾಡೋರು, ನಿಮ್ಮದಾಗಲಿ ಎಂದು ಪರಿಚಯದ ಸಲುಗೆಯಿಂದ ಆತನನ್ನ ಕಳುಹಿಸಿ ಕೊಟ್ಟ.

ಆತ ಹೊರಟು ಹೋದ ಮೇಲೆ 'ನಿಮ್ಮಾಕೆ' ಎಂದು ಹೇಳಿದ ಮಾತು, ನಿಂಗಣ್ಣನ ತನುವಿನ ತಂಬೂರಿಯಲ್ಲಿ ಹೆಸರಿಡದ ನೋವಿನ ನಾದವೊಂದು ಮಿಸುಕಾಡಿದಂತಾಯಿತು. ಆದರೂ ಅದಕ್ಕೆ ಮನಸು ಕೊಡದೆ ನಿತ್ಯ ಕರ್ಮ ಮುಗಿಸಿಕೊಂಡು, ತಿಂಡಿ ತಿಂದ ಮೇಲೆ ಹೋಟೆಲ್‌ನವರಿಗೆ ಹಣ ಕೊಡಲು ಜೇಬು ತಡಕಾಡಿದಾಗ ಅಳಿದುಳಿದ ಹಣ ಲೆಕ್ಕ ಹಾಕಿದರೆ, ಊರಿಗೆ ಹೊರಟರೆ ದಾರಿ ಖರ್ಚಿಗೆ ಆಗುವಷ್ಟಿತ್ತು. ಮತ್ತೇನಾದರು ಗುಳಿಗೆ-ಪಳಿಗೆ ಬೇಕಂತ ಹೇಳಿದರೆ ಏನು ಮಾಡೋದೆಂದುಕೊಂಡು ಮಗನ ಬಳಿ ಬರುವಾಗ ಜಗತ್ತಿನ ದುಃಖದ ಭಾರವನ್ನೆಲ್ಲ ತನ್ನ ಹೆಗಲ ಮೇಲೆ ಹೊತ್ತವನಂತೆ ನಿಧಾನವಾಗಿ ಹೆಜ್ಜೆ ಹಾಕುತ್ತಾ ಆಸ್ಪತ್ರೆಯ ಎಂಟ್ರೆನ್ಸ್ ಕಡೆ ಬರುತ್ತಿದ್ದ. ಅದೇ ಹೊತ್ತಿಗೆ ಯಾರೊ ಒಬ್ಬಾತ ಆಟೋದಿಂದ ಇಳಿದು ಆಟೋದವನಿಗೆ ಹಣ ನೀಡಿದ. ಆಟೋದವನು ಹೊರಟು ಹೋದ ಮೇಲೆ ಕೈಯಲ್ಲಿ ಹಿಡಿದ ಹಣವನ್ನ ಪ್ಯಾಂಟ್ ಜೇಬಿನಲ್ಲಿ ಇಟ್ಟುಕೊಂಡಿದ್ದೇನೆಂದು ಭಾವಿಸಿ ಕೆಳಗಡೆ ಉದುರಿಸಿ, ಧಾವಂತದಲ್ಲಿ ಕೈಯಲ್ಲೊಂದು ಬ್ಯಾಗಿಡಿದು ಆಸ್ಪತ್ರೆಯ ಒಳ ಹೋಗಲು ಅವಸರದಲ್ಲಿ ಹೋಗುತ್ತಿದ್ದಾನೆ. ಆ ಸ್ಥಳದಲ್ಲಿ ನಿಂಗಣ್ಣನ್ನ ಹೊರತುಪಡಿಸಿ ಯಾರು ಇಲ್ಲ. ಕೆಳಗೆ ಬಿದ್ದ ಹಣವನ್ನ ಕೈಗೆ ತೆಗೆದುಕೊಂಡ ನಿಂಗಣ್ಣ; ಮಗನ ಖರ್ಚಿಗೆ ಹಣದ ಅವಶ್ಯಕತೆ ಇರೋ ಟೈಮಲ್ಲಿ ದೇವರಾಗಿ

ದೇವರೇ ಜೊತೆ ಮಾಡಿದ ಎಂದು ಹಣವನ್ನ ಬಚ್ಚಿಟ್ಟುಕೊಳ್ಳುವ ಹೊತ್ತಲ್ಲಿ ಆತನ ಮನಸು ನಿಯತ್ತಿನ ತಕ್ಕಡಿಯಲ್ಲಿ ತುಯ್ದಾಡಿದಾಗ ಅಂತರಾತ್ಮ ಜಾಗೃತಿಗೊಂಡಿತ್ತು. ನನ್ನ ಹಾಗೆ ಆತನು ಕಷ್ಟದಲ್ಲಿರುವಂತೆ ಕಾಣ್ತಿದ್ದಾನೆ. ಇಂಥ ಹೊತ್ತಲ್ಲಿ ದುಡ್ಡು ಕಳೆದುಕೊಂಡಾತ ಎಷ್ಟು ಒನತಿಪ್ಲು ಪಡ್ತಾನೋ ಏನೊ? ಈ ಹಣಾನ ನಾನು ಬಚ್ಚಿಟ್ಟುಕೊಂಡ್ರೆ, ಅದರಿಂದ ಆತನ ಬದುಕಿನಲ್ಲಿ ತುಂಬಿಕೊಡಲಾಗದ ನಷ್ಟ ಜರುಗಿದರೆ? ಆ ಪಾಪದ ಹೊರೆ ನನಗೆ ತಾನೆ? ಎಂದು ಕೈಯಲ್ಲಿ ಹಣ ಹಿಡಿದ ನಿಂಗಣ್ಣ ಇಷ್ಟೆಲ್ಲಾ ಯೋಚಿಸಿ, ಆತ ಇನ್ನೇನು ಮರೆಯಾಗುತ್ತಾನೆನ್ನುವುದ ರೊಳಗೆ ಕೂಗಿ ಕರೆದು; 'ಸಂಕಟದ ಮೇಲೊಂದು ಸಂಕಟವೆಂಬಂತೆ ಇಂಥ ಜಾಗದಾಗೆ ದುಡ್ಡು ಉದುರಿಸಿಕೊಂಡು ಹೋಗ್ತಿರಲ್ಲ ಸ್ವಾಮಿ' ಅಂತೇಳಿ ಆತನ ಕೈಗೆ ಹಣ ನೀಡಿದಾಗ, ಒಂದು ಕ್ಷಣ ತಬ್ಬಿಬ್ಬಾಗಿ ಜೇಬು ತಡಕಾಡಿಕೊಂಡಾಗ ಆತನ ಜೀವ ತಣ್ಣಗಾಗಿತ್ತು. ಮನಸುಗಳು ಮರುಭೂಮಿಯಾಗಿರುವ ಈ ಮಾಯಾನಗರಿಯಲ್ಲಿ ಓಯಾಸಿಸ್‌ನಂತಿರುವ ನಿಂಗಣ್ಣನ ಪ್ರಾಮಾಣಿಕತೆ ಕಂಡು ಹಣ ಕಳೆದುಕೊಂಡಾತನಿಗೆ ಹೃದಯ ತುಂಬಿ ಬಂದಿತ್ತು. ಎತ್ತರವಾದ ನಿಲುವು. ಸಾಧಾರಣ ಮೈಕಟ್ಟು. ಮಾಸಿದ ಪಂಚೆ, ಸುಕ್ಲು ಸುಕ್ಲಾದ ಅಂಗಿ, ಹೆಗಲ ಮೇಲೊಂದು ಟವೆಲ್ಲು, ಜಲ ಬತ್ತಿದ ಬಾವಿಯಂತೆ ಗುಳಿಬಿದ್ದ ಕಣ್ಣುಗಳು, ಮುಖದಲ್ಲಿ ಮಡುಗಟ್ಟಿದ ಅಸಹಾಯಕತೆ, ಮಾನವೀಯತೆಯ ಪ್ರತಿರೂಪದಂತಿರುವ ನಿಂಗಣ್ಣನಿಗೆ ಇನಾಮು ರೂಪದಲ್ಲಿ ಹಣ ನೀಡಲು ಹೋದಾಗ, ನನ್ನ ನಿಯತ್ತಿಗೆ ಬೆಲೆ ಕಟ್ತಿರ? ಎಂದು ನಯವಾಗಿ ತಿರಸ್ಕರಿಸಿದ ಆತ ತನ್ನ ಮಗನ ಬಳಿ ಬಂದಾಗ ಮನಸು ಸಾರ್ಥಕ ಕ್ಷಣದ ಸಂತಸದಲ್ಲಿ ಲೀನವಾಗಿತ್ತು.

ಗಾಳಿ ತುಂಬಿದ ಚೆಂಡಿನಂತೆ ಸದಾ ಪುಟಿಯುತ್ತಿದ್ದಂತವನು ಇಂದು ಬಿಸಿ ನೀರಿನಲ್ಲಿ ಅದ್ದಿ ಬಿಸಿಲಲ್ಲಿ ಬಿಸಾಕಿದಂತ ಗುಲಾಬಿಯಂತಾಗಿರುವ ಮಗನನ್ನು ಕಂಡಾಗಲೆಲ್ಲ ನಿಂಗಣ್ಣನ ಕಂಗಳು ತೇವಗೊಳ್ಳುತ್ತಿದ್ದವು. ಬೇರು ಕೊಯ್ದು ಬಳ್ಳಿಗೆ ನೀರೆರೆದಂತೆ ವೈದ್ಯರ ಶ್ರಮವೆಲ್ಲ ವ್ಯರ್ಥವಾಗಿತ್ತು. ಗಾಣಕ್ಕೆ ಸಿಕ್ಕ ಕಬ್ಬಿನಂತೆ ಅವನ ಅಂಗಾಂಗವೆಲ್ಲ ಕಾಂತಿಹೀನವಾಗಿತ್ತು. ತುಟಿಗಳು ರೇಷ್ಮೆಹಣ್ಣಿನ ಬಣ್ಣಕ್ಕೆ ತಿರುಗಿದ್ದವು. ನೋವಿಗೆ ಅತ್ತೂ ಅತ್ತು ಅವನ ದನಿಯೂ ಸಹ ಕೀರಲಾಗಿತ್ತು. ಜೀವಂತ ಶವದಂತೆ ಮಲಗಿದ್ದ ಮಗನ ಮುಂಗುರುಳು ನೇವರಿಸಿದಾಗ ನಿಸ್ತೇಜವಾಗಿದ್ದ ಕಣ್ರೆಪ್ಪೆಯನ್ನ ತೆರೆದ ಆ ಮಗು; 'ಅಪ್ಪ ನನ್ನ ಊರಿಗೆ ಕರಕೊಂಡು ಹೋಗು. ನಾನು ಅಮ್ಮನ್ನ ನೋಡಬೇಕು' ಅಂತೇಳಿ ಕಣ್ತುಂಬ ನೀರು ತುಂಬಿಕೊಂಡಾಗ ಅಷ್ಟೊತ್ತು ಉಕ್ಕಿ ಬರುವ ಸಂಕಟವನ್ನ ಹೇಗೊ ತಡೆದುಕೊಂಡಿದ್ದ ನಿಂಗಣ್ಣನಿಗೆ ದುಃಖದ ಒಡ್ಡು ನಿಲ್ಲಲೇ ಇಲ್ಲ. ಕಂಗಳ ಕೆರೆಯಲ್ಲಿ ಕಂಬನಿಯ ಕೋಡಿ ಬಿದ್ದಿತ್ತು.

ಸಾವು ಬದುಕಿನ ನಡುವೆ ಹೋರಾಡುತ್ತಿರುವ ಮಗನ ಮುಂದೆ ಕಣ್ಣೀರಾಕುವುದು ಶ್ರೇಯಸ್ಸಲ್ಲ ಎಂದು ಕೊಂಡ ನಿಂಗಣ್ಣ; 'ಇವತ್ತು ಸಂಜೆ ವೋಟೊತ್ತಿಗೆ ಕರಕಂಬತ್ತಿನಿ ಕಣೊ. ನೀನು ಮಾತ್ರ ಹಟ ಮಾಡ್ದೆ ನರ್ಸಮ್ಮ ಹೇಳ್ದಂಗೆ ಕೇಳಬೇಕು' ಅಂತೇಳಿ

ಮಗನನ್ನ ಮುದ್ದಿಸಿ ಹೊರಗಡೆ ಎದ್ದು ಬಂದ. ಒಂದೇ ಒಂದು ಸಲ ಅಮ್ಮನ ಮುಖ ನೋಡಬೇಕೆಂದು ಕೇಳಿದ ಮಗನ ಮಾತು ಶೂಲದ ಹಾಗೆ ನಿಂಗಣ್ಣನ ಎದೆಯನ್ನ ಇರಿಯುತ್ತಲೇ ಇತ್ತು. ಕರುಳ ಕುಡಿಯ ಆಸೆ ಪೊರೈಸುವ ನೆಪದಲ್ಲಾದರು ಅವಳನ್ನ ಕ್ಷಮಿಸೋಣ ಎಂಬ ಔದಾರ್ಯದಿಂದ ಹೆಂಡತಿಯ ತಮ್ಮಂದಿರಿಗು, ಊರಿಗು, ಆಪ್ತ ಬಳಗಕ್ಕು ಪೋನು ಮಾಡಿ ವಿಚಾರಿಸಿದಾಗ, ಆಕೆಯ ಸುಳಿವೇ ಸಿಕ್ಕಿಲ್ಲ ಎಂಬ ಕಹಿ ಮಾತನ್ನ ಕೇಳಿದ ನಿಂಗಣ್ಣನಿಗೆ ಮಗನ ಬಯಕೆ ತೀರಿಸಲಾಗದ ಸಂಕಟ, ಹೆಂಡತಿಯ ಮೇಲಿನ ಸಿಟ್ಟು ಒಟ್ಟೊಟ್ಟಿಗೆ ದಟ್ಟೈಸಿದ್ದರಿಂದ ಮನಸು ಹಗುರವಾಗುವ ತವಕ ಅಳಬೇಕೆಂದುಕೊಂಡರು, ಅದು ಹಗುರವಾಗುವ ದುಗುಡವಾಗಿರಲಿಲ್ಲ. ಆಸ್ಪತ್ರೆಯ ಮುಂಭಾಗದಲ್ಲಿದ್ದ ಚಿಗುರು ಮರದಡಿಯಲ್ಲಿ ಹಾಕಿದ್ದ ಕಲ್ಲುಬೆಂಚಿನ ಮೇಲೆ ಕುಳಿತಿದ್ದ ನಿಂಗಣ್ಣನಿಗೆ ದೀಪ ಹಚ್ಚುವ ನೆಪದಲ್ಲಿ ಮನೆಗೆ–ಮನಸಿಗೆ ಕಿಚ್ಚುಹಚ್ಚಿ ಹೋದ ಹೆಂಡತಿಯ ನೆನಪು ನೋವು ನೀಡುತ್ತಾ ನೆನಪಾಗಿತ್ತು.

❖

ಮೈಮುರಿಯ ದುಡಿದು ಬನದ ಕರಡಿಯ ಪ್ರೀತಿಯಂತೆ ಮನೆಗೆ ತಂದಾಕುತ್ತಿದ್ದ ನಿಂಗಣ್ಣನದು ಒಂದು ಸುಖೀ ಸಂಸಾರವಾಗಿತ್ತು. ಗಂಡನನ್ನು ಕಳೆದುಕೊಂಡಿದ್ದ ನಿಂಗಣ್ಣನ ಅಕ್ಕನಿಗೆ ತವರಿನ ಆಸರೆ ಅನಿವಾರ್ಯವಾಗಿತ್ತು. ತವರುಮನೆ ನಡಾವಳಿ ಮುಂದುವರಿಯಬೇಕೆಂದು ಅಕ್ಕನ ಅಂಗ್ಲಾಪಿಗೆ ಮಣಿದು ಆಕೆಯ ಮಗಳನ್ನ ಮದುವೆಯಾಗಿದ್ದ ನಿಂಗಣ್ಣ ತನ್ನ ಹೆಂಡತಿ ಓದಿಕೊಂಡಿದ್ದ ಹುಡುಗಿ, ಬಿಸಿಲಮುಖ ನೋಡಿದವಳಲ್ಲ ಅಂತೇಳಿ ಹೊರಗೆ ದುಡಿಯಲು ಎಂದೂ ಕೂಲಿ ಕಳುಹಿಸಿದವನಲ್ಲ. ನಾಕೆಕರೆ ಎರೆ ಹೊಲ ಎರಡೆಕರೆ ನೀರಾವರಿಯಲ್ಲಿ ಹೊಲ–ಮನೆ ಕೆಲಸ ಮಾಡಿಕೊಂಡು ಮುಚ್ಚಟೆಯಾಗಿ ಕಾಪರ ಮಾಡಿಕೊಂಡಿದ್ದ ಭಾಗ್ಯಮ್ಮನ ಹಾಲಿನಂಥ ಸಂಸಾರದಲ್ಲಿ ಹುಳಿ ಹಿಂಡಲೆಂದು ಹಲವಂಗದ ಹೆಂಗಸರು ಹೊಂಚುಹಾಕಿದ್ದರು. ಲಂಚಪಡೆಯುವವರ ನಡುವೆ ನಿಷ್ಠೆಯಿಂದ ಕೆಲಸ ಮಾಡುವವರನ್ನ ನಿಕೃಷ್ಟವಾಗಿ ನೋಡುವಂತೆ, ಹಾದರತನದ ಹಾದಿಗೆ ಬಿದ್ದು ಕೆಟ್ಟು ಅಂಡಾವರಣ ಎದ್ದೋದ ಹೆಂಗಸರು ಭಾಗ್ಯಮ್ಮನನ್ನ ಅಸೂಯೆಯಿಂದ ನೋಡುತ್ತಿದ್ದರು. ನಮ್ಮ ಹಾಗೆ ಇವಳ ಬಾಳು ನಗುಪಾಟ್ಲಾಗಲಿ ಅಂತ ಹರಕೆ ಹೊತ್ತಿರುವಾಗ, ಆ ಊರಿನ ಕಚ್ಚೆಹರಕ ಮುದ್ದಪ್ಪನಿಗೆ ಭಾಗ್ಯಮ್ಮನ ಮೇಲೆ ಮನಸಿರೋದು ತಿಳಿದುಕೊಂಡ, ಭಾಗ್ಯಮ್ಮನ ಪಕ್ಕದ ಮನೆ ಸಾಂತಕ್ಕ ನಿಮ್ಮಿಬ್ಬರನ್ನ ನಾನು ಒಂದು ಮಾಡ್ತಿನಿ ಅಂತೇಳಿ ಮುದ್ದಪ್ಪನ ಮನೆಮುರುಕತನದ ಆಸೆಯ ಬೇರಿಗೆ ನೀರೆರೆದಿದ್ಲು.

ಮಾರ್ನಾಮಿ ಹಬ್ಬದಾಗೆ ಸೀ ಅಡಿಗೆ ಮಾಡಿ, ಬಾಯಲ್ಲಿ ಬೆಲ್ಲ ಎದಿಯಾಗೆ ಕತ್ರಿ ಅನ್ನುವಂತೆ ಭಾಗ್ಯಮ್ಮನ್ನ ಬಲವಂತ ಮಾಡಿ ಊಟಕ್ಕೆ ಕರೆದ ಸಾಂತಕ್ಕ; ಮೊದ್ಲು ಮುದ್ದಪ್ಪನಿಗೆ ಉಣ್ಣಾಕಿಟ್ಟು, ಅವನು ಉಂಡು ಬಿಟ್ಟ ಎಂಜಲು ಪಾಯಾಸವನ್ನ

ಭಾಗ್ಯಮ್ಮನಿಗೆ ಗೊತ್ತಾಗದಂತೆ ಇಟ್ಟುಕೊಟ್ಟು ಪಕ್ಕದ ಮನೆಯಲ್ಲಿದ್ದ ಮುದ್ದಪ್ಪನಿಗೆ ಸನ್ನೆ ಮಾಡಿ ಕರೆದಿದ್ದಳು. ಆಕೆ ಉಣ್ಣುವ ಹೊತ್ತಿಗೆ ಸರಿಯಾಗಿ ಬಂದ ಮುದ್ದಪ್ಪ; 'ನಾನು ತಿಂದು ಬಿಟ್ಟ ಎಂಜಲು ತಿಂದಿದಿಯ ಅಂದಮೇಲೆ ನೀನು ನನ್ನ ಸೊತ್ತು. ಇಲ್ಲಾಂದ್ರೆ ನನ್ನ ಎಂಜಲು ನನಗೆ ಕೊಡು' ಅಂತೇಳಿ ಆ ದಿನ ಕುವ್ವಾಟದ ಮಾತಾಡಿ ಕಣ್ಣು ಮಿಟುಕಿಸಿ ಹೋಗಿದ್ದ. ಮತ್ತೆ ಮುಖ ಕಂಡಾಗಲೆಲ್ಲ ನನ್ನ ಎಂಜಲು ನನಗೆ ಕೊಡು ಅಂತ ಪೀಡಿಸುತ್ತಾ ನಗಸಾರ ಆಡೋ ನೆಪದಲ್ಲಿ ಭಾಗ್ಯಮ್ಮನಿಗೆ ಹತ್ತಿರವಾದಾಗ ಅದಕ್ಕೆ ನೆರೆಹೊರೆಯ ಹೆಂಗಸರ ಕುಮ್ಮಕ್ಕು ಇತ್ತು. ಮೊದಮೊದಲು ಸಿಡಿಮಿಡಿಗೊಳ್ಳುತ್ತಿದ್ದ ಭಾಗ್ಯಮ್ಮ ದಿನಪರ್ತೆ ಮೇಲೆ ಮುದ್ದಪ್ಪನ ಮಾತಿನ ಮೋಡಿಗೆ ಪರವಶವಾಗಿದ್ದಳು. ತನಗಿರುವ ಸ್ವೇಚ್ಛಾಚಾರವನ್ನ ಬಂಡವಾಳ ಮಾಡಿಕೊಂಡು, ಗಂಡನ ಒಳ್ಳೆಯ ತನವನ್ನ ಅಡಿವಾಳ ಮಾಡಿಕೊಂಡು ಚೇತರಿಸಿ ಕೊಳ್ಳಲಾಗದಂತಹ ಸ್ಥಿತಿ ತಲುಪಿ ಹಾಸಿಗೆ ಹಿಡಿದ ಮಗನನ್ನೂ ಲೆಕ್ಕಿಸದೆ ಮೂರು ಮಕ್ಕಳ ತಾಯಿಯಾದ ಭಾಗ್ಯಮ್ಮ ವಾತ್ಸಲ್ಯದ ಹಾಲಿನ ಬಟ್ಟಲಿನಲ್ಲಿ ವಿಷ ತೊಟ್ಟಿಕ್ಕಿಸಿ ಮುದ್ದಪ್ಪನ ಹಿಂದೆ ಪಯಣ ಬೆಳೆಸಿದ್ದಳು!

ಆಸ್ಪತ್ರೆಗೆ ಬಂದಾಗಿನಿಂದ ಅಮ್ಮನ ಕನವರಿಕೆಯಲ್ಲಿದ್ದ ಮಗನ ಕೋರಿಕೆಯನ್ನ ನೆರವೇರಿಸುವುದಕ್ಕಾಗಿಯಾದರೂ ತನ್ನ ಮನಸು ಸಾಯಿಸಿಕೊಂಡು, ಹಾದಿ ತಪ್ಪಿ ಹೋದ ಹೆಂಡತಿಯ ಹಾದಿ ಎದುರು ನೋಡಿದ ನಿಂಗಣ್ಣನ ನಿರೀಕ್ಷೆಯೆಲ್ಲ ನಿಷ್ಫಲವಾಗಿತ್ತು. ತನ್ನ ಸಂಸಾರದ ಸುದ್ದಿಯ ತಾಂಬೂಲವನ್ನ ಜಗಿದು ಜಗಿದು ಬೀದಿಗೆ ಉಗುಳುವ ಮಂದಿಯಿಂದ, ಅವರು ಹೊಸೆದ ಅವಮಾನದ ಕುಣಿಕೆಗೆ ಕೊರಳೊಡ್ಡಿದ ಆತ ಕ್ಷಣಕ್ಷಣ ಅಣುವಣುವಾಗಿ ಸಾಯುತ್ತಿದ್ದ. ನಂಬಿಕೆಯ ನೀರಿನಿಂದ ಸೊಂಪಾಗಿ ಬೆಳೆಸಿದ ಬಾಳೆದಿಂಡಿನಂಥ ಬದುಕಿನ ಬುಡವನ್ನ ನಿರ್ದಯವಾಗಿ ಕಾಮದ ಕುಡುಗೋಲಿನಿಂದ ಕಡಿದು ಹೋದ ಹೆಂಡತಿಯ ಘನಕಾರ್ಯ ನೆನೆದಾಗ, ನಿಂಗಣ್ಣನ ಮನಸು ಬಿಸಿನೀರಿನಲ್ಲಿ ಬಿದ್ದ ಹೊಸ ಸುಣ್ಣ ಕುದ್ದಂತೆ ಕುದಿಯುತ್ತಿತ್ತು.

ಕಾಲನ ಹೊಳೆಯಲ್ಲಿ ಕೊಚ್ಚಿ ಹೋಗುವ ಮಗನನ್ನ ರಕ್ಷಿಸಲು ಕೈಗಳೇ ಇಲ್ಲದ ವ್ಯಕ್ತಿಯೊಬ್ಬ ದಡದಲ್ಲಿ ನಿಂತು ಪರಿತಪಿಸುವಂತೆ ತನ್ನ ಅಸಹಾಯಕ ಸ್ಥಿತಿ ನೆನೆದು ಗದ್ಗದಿತನಾದ ನಿಂಗಣ್ಣ; ಗ್ವಾಂದ್ಲಿಯಲ್ಲಿ ಮೇವಿಲ್ಲದಿದ್ದರೆ ಮೇವಿದ್ದ ಕಡೆ ಹೋಗಿ ಕಳ್ಳ ಮೇವು ಮೇದು ಬರೋದು ಸಹಜ. ಆದ್ರೆ ಗ್ವಾಂದ್ಲಿ ತುಂಬ ಹುಲ್ಲಿದ್ರು ಕಣ್ಣಿ ಹರಕೊಂಡು ಹೋಗಿ ಕಳ್ಳ ಮೇವು ಮೇಯೋದು ಯಾಕೆ? ತನ್ನ ಕರುಳು ಕತ್ತರಿಸಿ ಜನ್ಮ ಕೊಟ್ಟ ಮಗನ ಮೇಲಿನ ಪ್ರೀತಿಗಿಂತ ಹಾಸಿಗೆ ಸುಖನೆ ಮುಖ್ಯ ಅಂದುಕೊಂಡು ಮನೆ ಬಿಟ್ಟು ಹೋಗುವ ನನ್ನ ಹೆಂಡತಿಯಂಥವರ ಹಾದರತನಕ್ಕೆ ಕೊನೆನೇ ಇಲ್ವೆ? ಎಂದು ತನಗೆ ತಾನೇ ಪ್ರಶ್ನಿಸಿಕೊಂಡ ನಿಂಗಣ್ಣ ನಿಟ್ಟುಸಿರು ಬಿಡುತ್ತಾ ಮರದಡಿಯಲ್ಲಿ ಕುಳಿತಿರುವಾಗ, ಆತನ ಮಗನ ಪಕ್ಕದ ಬೆಡ್ಡಿನ ಪರಿಚಯದವರು ಆತಂಕದಿಂದ

ಓಡಿ ಬಂದು; 'ನಿಮ್ಮ ಮಗ ತೇಲ್ಗಣ್ಣು-ಮೇಲ್ಗಣ್ಣು ಮಾಡ್ತಿದಾನೆ ಬೇಗ ಬನ್ನಿ' ಎಂದು ಅವಸರಪಡಿಸಿದರು. ಗಾಬರಿಗೊಂಡ ನಿಂಗಣ್ಣ ತನ್ನ ಮಗನ ಬಳಿ ಬಂದಾಗ; ಪ್ರಾಣ ಹೋಗುವ ಕಿಚ್ಚಿಗೆ ಹಾಸಿಗೆಯಲ್ಲಿ ನರಳುತ್ತಾ ಸಾಯುವ ಕೊನೆ ಘಳಿಗೆಯಲ್ಲಿ ತಾಯಿಯನ್ನ ಕನವರಿಸಿಕೊಳ್ಳುವುದು ಕಂಡು ಅಲ್ಲಿ ನೆರೆದವರ ಕಂಗಳು ತೇವಗೊಡಿದ್ದವು. ಸಾವಿನ ವೈಭವ ತಣ್ಣಗೆ ಆವರಿಸಿಕೊಳ್ಳುವ ಆ ನೀರವ ಮೌನವನ್ನ ಸೀಳಿಕೊಂಡು 'ಅಮ್ಮಾ..' ಎಂಬ ಕ್ಷೀಣ ದನಿ ನಿಂಗಣ್ಣನ ಸಂಕಟದ ಉರಿಗೆ ಕೊಳ್ಳಿ ಸಾಸಿದಂತಾಗಿತ್ತು. ಮಗನ ಬಳಿ ಕುಳಿತು ಅತೀವ ವಾಂಛೆಯಿಂದ ಮುಂಗುರುಳು ನೇವರಸಿದಾಗ. ಕಷ್ಟಪಟ್ಟು ತನ್ನ ಕತ್ತನ್ನ ತಂದೆ ಕಡೆ ಹೊರಳಿಸಿ, ಕೊಳದ ತಾವರೆಯಂತಿದ್ದ ಕಣ್ಣುಗಳಲ್ಲಿನ ಕೋರಿಕೆಯನ್ನ ಹೊರಸೂಸುವಂತೆ 'ಅಮ್ಮಾ..' ಎಂದು ಮೆಲುದನಿಯಲ್ಲಿ ಹಂಬಲಿಸುತ್ತಾ ಫಳಕ್ಕನೆ ಕಣ್ಣೀರು ಉದುರಿಸಿ, ನೆಟ್ಟ ನೋಟವನ್ನ ಹಾಗೇ ನಿಲ್ಲಿಸಿದ ಮಗನ ಸ್ಥಿತಿ ಕಂಡ ನಿಂಗಣ್ಣನಿಗೆ ಸೇದಿ ಬಿಟ್ಟ ಬಾಣ ಎದೆಗೆ ನಾಟಿದಂತಿತ್ತು.

❖

(ವಿಜಯ Next – **ಡಿಸೆಂಬರ್ 27, 2012**)

ಕಿಬ್ಬದಿಯ ಕೀಲುಳುಕಿ

ಚನ್ನಪ್ಪ ಅಂಗಡಿ, ಬಮ್ಮನಹಳ್ಳಿ

ವೈದ್ಯರ ಮಾತು ಕಿವಿಯ ಲಾಳಿಕೆಯಲ್ಲಿ ತಿರುತಿರುಗಿ ರಟ್ಟಿಸುತ್ತಿತ್ತು. ಸಕ್ಕರೆ ಹೆಚ್ಚಿಗೆ ಹಾಕಿದ ಸುಡುಸುಡು ಚಹ ಹೀರಬೇಕೆನ್ನುವವನಿಗೆ ಸಕ್ಕರೆಯ ಹರಳು ಕೂಡ ಸೋಕಕೂಡದೆಂದು ಆಜ್ಞೆಯಾಗಿತ್ತು. ಚಿಕ್ಕವನಿದ್ದಾಗ ಸಿಹಿ ತಿಂಡಿಯನ್ನು ಕದ್ದು ತಿಂದಿದ್ದಕ್ಕೆ ಡುಬ್ಬ ಕೆತ್ತುವಂತೆ ಒದೆ ತಿಂದಿದ್ದ. ಆಗೆಲ್ಲ ಸೆಣಬಿನ ಹುರಿ ಕಟ್ಟಿದ ಕಂದು ಸೀಸೆಯಲ್ಲಿ ಪಾವುಸೇರೋ, ಅರ್ಧಸೇರೋ ಗಾಣದ ಎಣ್ಣೆಯನ್ನು ಬಿಲ್ಲೆಗೆ ಬಿಲ್ಲೆ ಸೇರಿಸಿ ತಂದು ಕರಿಮಸಿಯಂತ ಡಬರಿಯಲ್ಲಿ ಎಣಿಕೆಯ ಎಳೆ ಬಿಟ್ಟು ಒಗ್ಗರಣೆ ಮಾಡುವಷ್ಟರಲ್ಲಿ ಹತ್ತು ಹೊಟ್ಟೆಗಳು ಹಸಿದು ನಿಂತಿರುತ್ತಿದ್ದವು. ಈಗ ಡಬಲ್ ರಿಫೈನ್ಡ್ ಎಣ್ಣೆ ಪಾಕಿಟುಗಳ ಕೇಸುಗಳೇ ಮನೆಗೆ ಬರುತ್ತವೆ. ರಕ್ತದಲ್ಲಿ ಕೊಲೆಸ್ಟ್ರಾಲ್ ಅಂಶ ಒಂದೇ ಸಮನೆ ಏರುತ್ತಿದ್ದು ಎಣ್ಣೆ ಜಿಡ್ಡು ವರ್ಜಿಸದಿದ್ದರೆ ಹೃದಯಕ್ಕೇ ಕುತ್ತೆಂದು ಮೆಡಿಕಲ್ ರಿಪೋರ್ಟ್‌ಗಳು ಹೇಳುತ್ತಿವೆ. ಆಗಲೂ ಕದ್ದು ತಿನ್ನುತ್ತಿದ್ದ, ಈಗಲೂ ಕದ್ದು ತಿನ್ನುತ್ತಾನೆ. ಕಾರಣಗಳು ಮಾತ್ರ ಬೇರೆ. ಮನೆಯವರೆಲ್ಲರೂ ತರತರದ ಭಕ್ಷ್ಯಗಳನ್ನು ಚಪ್ಪರಿಸುತ್ತಿದ್ದರೆ ಇವನು ಮುಖ ಕಿವುಚಿಕೊಂಡು ಗಂಜಿಯನ್ನು ನುಂಗಬೇಕು. ಎರಡು ಹಳ್ಳು ಉಪ್ಪು ಹೆಚ್ಚಾದರೆ ರಕ್ತದೊತ್ತಡ ಏರುತ್ತದೆ. ಹಾಳು ಜನ್ಮಕ್ಕೆ ಬೆಂಕಿ ಹಚ್ಚಲಿ !

ಚಂಡಮುರಕ ಬಸಪ್ಪ ಹೆಂಗ ಗೂಗಿಯ್ಹಂಗ ಕಟ್ಟಿ ಹಿಡಿದು ಕುಂತಾನ ನೋಡು ಅಂತ ಮಾತನಾಡಿಕೊಂಡ ಒಂದಿಬ್ಬರು ಹತ್ತಿರ ಬಂದ ಮೇಲೆ ನಮಸ್ಕಾರ ಬಸಪ್ಪ ಸಾವ್ಕಾರ, ಪ್ಯಾಟ್ಯಾಗ ಹೋಗಿಲ್ಲೇನ್ರಿ? ಎಂದು ಭಯಭಕ್ತಿ ತೋರಿದರು. ಇವರ ಬೇಳೆ ಬೇಯಲೂ ಒಂದು ಹದ ಬೇಕಲ್ಲ, ಬಸಪ್ಪನಿಂದ ಬಡ್ಡಿ ಸಾಲ ಪಡೆದು ಸೊರಗಿದ ನರಪಿಳ್ಳೆಗಳ ಸಾಲಿನಲ್ಲಿ ಅವರೂ ಸೇರಿದ್ದಾರೆ. ಸಾಲ ಪಡೆದವರು ಅಸಲು ಬಡ್ಡಿ ಹಿಂತಿರುಗಿಸಿ ಕೈ ತೊಳೆದುಕೊಳ್ಳುವವರೆಗೂ ಬಸಪ್ಪನ ಮೀಟರು ರೊಂಯ್.. ಎಂದು ಸುತ್ತುತ್ತಲೇ ಇರುತ್ತದೆ. ಅವನು ಹಣದ ಭದ್ರತೆಯನ್ನು ಮಾತ್ರ ಖಚಿತಪಡಿಸಿಕೊಳ್ಳುತ್ತಾನೆ. ಕಾಗದಪತ್ರ ಸೃಷ್ಟಿಸಲು ಹೋಗುವುದಿಲ್ಲ. ಹಳೆಹುಲಿ. ಅವನ ಘರಾಣೆ ಸುತ್ತಮುತ್ತಲಿನ ಹತ್ತೂರಿನವರಿಗೂ ಸಾಲ ಕೊಟ್ಟು ಹಿಡಿಯುವಷ್ಟು ಬಂದೋಬಸ್ತಿಯಾಗಿದೆ.

ಅದು ಶನಿವಾರವಾಗಿದ್ದರಿಂದ ಹಣದ ವಸೂಲಾತಿ ನಾಲ್ಕು ಪಟ್ಟಾಗಬೇಕು. ಸಂತೆಯ ವ್ಯಾಪಾರ ಮಾಡಿರುವ ಅಂಗಡಿಕಾರರ ಗಲ್ಲಾಪೆಟ್ಟಿಗೆಯಲ್ಲಿ ಅಂಗಾತ ಮಲಗಿರುವ ನೊಟುಗಳು ಒಂದಕ್ಕೊಂದು ತಬ್ಬಿಕೊಂಡು ಬಸಪ್ಪನ ಹೊಟ್ಟೆಗೆ ಸೇರಬೇಕು.

ಇನ್ನೂರು ಪುಟದ ನೋಟ್ ಬುಕ್ಕನ್ನು ಹಿಡಿದು ಆನೆಯಂತೆ ಕಾಲೆಳೆದುಕೊಂಡು ಬಂದರೆ ಜನರು ಅಸಲಲ್ಲದಿದ್ದರೂ ಬಡ್ಡಿಯನ್ನು ಕಾರಲೇಬೇಕು. ಅಡಚಣೆಯಿದ್ದಾಗ ಕಾಡಿಬೇಡಿ ಹಣ ಪಡೆದವರು ಬಡ್ಡಿ ಕಟ್ಟುವಾಗ ಹೊಟ್ಟೆಯುರಿಸಿಕೊಂಡು ಇನ್ನೂ ಎಷ್ಟು ಗಳಿಸ್ಬೇಕಂತ ಮಾಡ್ಯಾನು ಈ ರೊಕ್ಕದ ಹುಳಾ ಎಂದು ಗೊಣಗಿಕೊಳ್ಳುತ್ತಾರೆ. ಕೆಲವರು ಬಸಪ್ಪನನ್ನು ಮನೆಯಲ್ಲಿ ಕಂಡ ಮರುಕ್ಷಣವೇ ಕಲಾಲ ವಸಂತನ ಅಂಗಳದಲ್ಲಿ ತೇಲಾಡುವುದು ಗುಟ್ಟೇನಲ್ಲ. ಅವೇ ಮುಖಗಳು ದದ್ದರಿಸಿಕೊಂಡು ತಂತಮ್ಮ ಮನೆಮುಂದೆ ನೇತಾಡುವ ಬೆದರಿನಂತಾದಾಗ ಲಟಿಕೆ ಮುರಿದು ಶಪಿಸುವರೆಷ್ಟೋ, ಕಣ್ಣು ಕಿತ್ತು ಹೋಗುವಂತೆ ನೀರು ರಾಚುವರೆಷ್ಟೋ, ಬಾಗಿಲನ್ನು ಭದ್ರಗೊಳಿಸಿ ಹೊಟ್ಟೆ ನೆಲಕ್ಕೆ ಹಚ್ಚಿಕೊಂಡು ಬೀಳುವರೆಷ್ಟೋ ಮದಿರೆಯ ಮಹಾತ್ಮರಿಗೇ ಗೊತ್ತು. ವಡ್ಡರ ಸಿದ್ಧಮ್ಮಳಂತೂ ಆ ಬಸ್ಯಾನ ಹೆಂಡ್ತಿ ರಂಡಿ ಆಗ್ಲಿ. ಮನಿಮುರಕ ಭಾಡ್ಯಾನ ಮನಿ ಹೆಂಗಸ್ರು ಬಳಿ ತಗೀಲಿ ಎಂದು ಬಾಯ್ತುಂಬ ಹರಸದ ದಿವಸ ಕ್ಯಾಲೆಂಡರಿನಲ್ಲಿ ದಾಖಲಾಗಿಲ್ಲ. ಭೋವಿ ಶಂಕ್ರ ಓಸಿ ಆಟಕ್ಕೆ ದುಡ್ಡು ಹಾಕಿ ಹಾಕಿ ಮಣ್ಣು ತಿಂದು ಮಣ್ಣಾಗಿ ಹೋದ. ಇವರೆಲ್ಲ ಹಡೆದ ತಾಯಿಗಾದರೂ ಮೋಸ ಮಾಡಿಯಾರು. ಕಲಾಲ ವಸಂತನ ಆಣೆಗೂ ಬಸಪ್ಪನ ನಂಬಿಕೆ ಕಳೆದುಕೊಳ್ಳುವರಲ್ಲ, ತಳದಿಂದ ತಲೆಯವರೆಗೆ ಅಂಗಾಂಗಗಳೆಲ್ಲ ಕಂಪಿಸುತ್ತಿರುವಾಗ ಕೈ ಹಿಡಿದು ನಡೆಸುವ ಕರುಣಾಳು, ಬಡ್ಡಿ ಬಸಪ್ಪ–ದುಡ್ಡಿನ ದೊಡ್ಡಪ್ಪ.

ಯಾರು ಏನೇ ಹೇಳಲಿ ಬಸಪ್ಪನ ಪ್ರಕಾರ ಬಡ್ಡಿ ವ್ಯವಹಾರ ಮಾಡುವುದಾದರೆ ನೌಕರದಾದರ ಜೊತೆಗೆ ಮಾಡಬೇಕು. ಪಗಾರ ಸಣ್ಣದಿರಲಿ ದೊಡ್ಡದಿರಲಿ, ಒಂದನೇ ತಾರೀಖು ಬಂತೆಂದರೆ ಸಾಕು ಗಂಟೆ ಹೊಡೆದಂತೆ ಹಾಜರಾಗುತ್ತಾರೆ. ಕೊಡಬೇಕಾದ್ದನ್ನು ಕೊಟ್ಟು ನಮ್ಮ ಪಾನಾದಾಗ ವಜಾ ಹೊಡ್ದು ಬಿಡ್ರಿ ಸವ್ಕಾರ ಎಂದು ಶಾಲಾ ಹುಡುಗರಂತೆ ವಿನೀತರಾಗುತ್ತಾರೆ. ಹೀಗೆ ನಂಬುಗೆಯಲ್ಲಿ ನಾಯಿಯನ್ನು ಮೀರಿಸಿದವನು ಕಟ್ಟಿಮನಿ ಶಿವಪ್ಪ. ಸ್ಥಳೀಯ ಕಚೇರಿಯೊಂದರಲ್ಲಿ ಸಿಪಾಯಿ ನೌಕರಿಯಲ್ಲಿರುವ ಶಿವಪ್ಪನ ತಿಜೋರಿಯೆಂದರೆ ಬಸಪ್ಪ. ಬೇರೆಯವರ ಸಂಗತಿಯಲ್ಲಿ ಏನೇ ಕಲಕುಮಲಕಾಗಲಿ ಶಿವಪ್ಪನಿಗೆ ಸಾಲ ನಿರಾಕರಿಸಲು ಬಸಪ್ಪನಲ್ಲಿ ಕಾರಣಗಳೇ ಇಲ್ಲ.

ಬಸಪ್ಪನಲ್ಲಿ ದೀರ್ಘಕಾಲದಿಂದ ವಸತಿ ಮಾಡಿರುವ ಹಲವು ಬಾಧೆಗಳಲ್ಲಿ ಮಂಡಿನೋವೂ ಒಂದು. ಪ್ರತಿದಿನ ಸಂಜೆಯಾಯಿತೆಂದರೆ ಶಿವಪ್ಪ ಬಸಪ್ಪನ ಕಾಲಿಗೆ ಅದ್ಯಾವುದೋ ಮಂಗಳೂರಿನಿಂದ ತಂದ ತೈಲವನ್ನು ಹಚ್ಚಿ ಮಸಾಜು ಮಾಡುತ್ತಾನೆ. ಆ ನಂತರವೇ ಬಸಪ್ಪನ ಕಾಲುಗಳಿಗೆ ಸಾಲ ವಸೂಲಿಗೆ ತೆವಳಲು ಒಂದಷ್ಟು ತಾಕತ್ತು ಬರುತ್ತದೆ. ಈ ಕಾರಣಕ್ಕಾಗಿ ಅವರಿಬ್ಬರ ನಡುವೆ ತೆಳುವಾದ ಸ್ನೇಹ ಬೆಳೆದಿದೆ. ಅಂದ ಮಾತ್ರಕ್ಕೆ ಶಿವಪ್ಪ ತನ್ನ ಸೀಮೆ ಮೀರುವನಲ್ಲ. ಕೆಲಸದ ಗಡಿಬಿಡಿಯಲ್ಲಿ ಶಿವಪ್ಪನಿಗೆ ಬಸಪ್ಪನ ಮನೆ ಕಡೆಗೆ ಬರಲಾಗಿರಲಿಲ್ಲ. ಅವನನ್ನು ಕರೆಕಳಿಸಿ ಕೇಳಿದ

ನಿನ್ನ ಮಗನ್ನ ಯಾವ್ದೋ ಡಿಗ್ರೀಗೆ ಸೇರಿಸಬೇಕಂದಿದ್ದಿ, ರೊಕ್ಕ ಏನರ ಬೇಕಾಗಿತ್ತೇನು? ಅಡ್ಮಿಷನ್‌ಗೆ ಇನ್ನೂ ಟೈಮಿತ್ತು, ಆಮೇಲೆ ಕೇಳಿದರಾತು ಅಂತ ಸುಮ್ನಿದ್ದೆ ಎನ್ನುತ್ತ ಶಿವಪ್ಪ ಎದುರಿಗೆ ಬಂದು ಕುಳಿತ. ಓದಿನಲ್ಲಿ ಚುರುಕಾಗಿರುವ ಮಗ ಪ್ರಕಾಶನ ಭವಿಷ್ಯವನ್ನು ಹೇಗೆ ರೂಪಿಸಬೇಕೆಂದು ಆತ ಯೋಚಿಸುತ್ತಿದ್ದಾನೆ. ಹತ್ತಿರದಲ್ಲಿರುವ ಕಾಲೇಜಿಗೆ ಸೇರಿಸಿ ಒಂದು ಡಿಗ್ರಿ ಮಾಡಿಸುವ ನಿರ್ಧಾರಕ್ಕೆ ಬಂದಿದ್ದ. ಇವತ್ತಂತೂ ಕಾಲು ಬಾಳ ಹಿಡಿದಾವು. ಒಂಚೂರ ಎಣ್ಣಿ ಹಚ್ಚು ಎನ್ನುವ ಬಸಪ್ಪನ ಮಾತು ಪ್ರಕಾಶನ ಶಿಕ್ಷಣ ಕುರಿತಾಗಿ ಚಿಂತಿಸುತ್ತಿದ್ದವನನ್ನು ಎಚ್ಚರಿಸಿತು.

ಬಸಪ್ಪ ಹೇಗೆ ಹಣ ವಸೂಲಿಗೆ ಶಿವಪ್ಪನ ಮನೆಗೆ ಹೋಗುವುದಿಲ್ಲವೋ ಹಾಗೆ ಶಿವಪ್ಪ ಕೂಡ ಬಡ್ಡಿ ಸಂದಾಯಕ್ಕೆ ಬಸಪ್ಪನ ಮನೆಗೆ ಬರುವುದಿಲ್ಲ. ಆತ ದುಡ್ಡನ್ನು ಹಿಂತಿರುಗಿಸಲು ಯಾವಾಗಲೂ ಪ್ರಕಾಶನನ್ನೇ ಕಳಿಸುವುದು. ಚಿಗುರು ಮೀಸೆಯ ಹುಡುಗ, ಹಣ ಬಸಪ್ಪನ ಕೈಗಿತ್ತವನು ಮನೆಯವರು ಏನನ್ನಾದರೂ ಮಾತನಾಡಿಸಬೇಕೆನ್ನುವಷ್ಟರಲ್ಲಿ ಅರ್ಧ ದಾರಿ ದಾಟಿರುತ್ತಾನೆ. ಮಗಳು ನಂದಾಳ ಸಹಪಾಠಿಯನ್ನು ಬಸಪ್ಪನ ಹೆಂಡತಿ ಒಳಕರೆಯಬೇಕೆಂದರೆ ಅವನು ಚಿಗರೆಯಂತೆ ಪುಟಿದು ಮಾಯವಾಗುವನು. ಬಸಪ್ಪನ ವಂಶಾವಳಿಯಲ್ಲಿ ವಿದ್ಯೆ ಹತ್ತದ ಗೊದ್ದದ ತಲೆಗಳ ಪರಂಪರೆಯೇ ಇದೆ. ನಂದಾ ತಮ್ಮ ಸತ್ಸಂಪ್ರದಾಯವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾಳೆ. ಉಳ್ಳವರ ಮನೆ ಹುಡುಗಿ. ಥಳಥಳ ಹೊಳೆಯುವುದಕ್ಕಂತೂ ಕೊರತೆಯಿಲ್ಲ. ತನ್ನ ಮಗನ ಪ್ರತಿಭೆ ಮನವರಿಕೆಯಾದ ಮೇಲಿಂದ ಶಿವಪ್ಪ ಅವನನ್ನು ಮುಂದೆ ಓದಿಸಬೇಕೆಂದು ದೃಢಸಂಕಲ್ಪ ಮಾಡಿದ್ದಾನೆ. ಆದರೆ ಅವನ ಹೆಂಡತಿ ನಮ್ಮ ಪ್ರಕಾಶಗ ದುಡ್ಯಾಕ ಹಚ್ಚಿ ಒಂದು ಹೊತ್ತಿನ ಗಂಜಿ ಕುಡದಾದ್ರೂ ಈ ಸಾಲದ ಪರ್ಲುಕ ಹರ್ಕೋಬೇಕು ಎನ್ನುತ್ತ ಆಕೆ ಮುಖ ಸಣ್ಣದು ಮಾಡಿಕೊಳ್ಳುತ್ತಾಳೆ.

ಬಸಪ್ಪನಾಗಲೀ ಅವನ ಮನೆತನದವರಾಗಲೀ ಮೊದಲಿನಿಂದಲೂ ಬಡ್ಡಿಕುಳಗಳೇನೂ ಅಲ್ಲ. ಅವನನ್ನು ಆ ವ್ಯಾಪಾರಕ್ಕೆ ಹಚ್ಚಿದವನು ಇದೇ ಕಟ್ಟಿಮನಿ ಶಿವಪ್ಪ. ಪಿತ್ರಾರ್ಜಿತ ಮನೆಯ ಮುಂದೆ ಗೂಡಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ಹದಿಹರೆಯದ ಬಸಪ್ಪ ಯಾರೊಬ್ಬರ ದುಡ್ಡಿಗೂ ಆಸೆಪಟ್ಟವನಲ್ಲ. ಸಣ್ಣ ವಯಸ್ಸಿಗೇ ಹಿರಿಯರು ಮದುವೆ ಮಾಡಿದಾಗ ಬರುವ ಆದಾಯದಲ್ಲಿ ಸಂಸಾರವನ್ನು ಅಚ್ಚುಕಟ್ಟಾಗಿ ತೂಗಿಸಿಕೊಂಡು ಹೋಗುತ್ತಿದ್ದ ದುಂದುಗಾರಿಕೆ ಮಾಡದೇ ಬಂದ ಲಾಭದಲ್ಲಿ ನಾಲ್ಕು ಕಾಸು ಕೂಡಿಡುವ ಹವ್ಯಾಸ ಬೆಳೆಸಿಕೊಂಡಿದ್ದ. ಅಂಥ ಸೋವಿ ಕಾಲದಲ್ಲಿ ವಾರಕ್ಕೆ ಹತ್ತಿಪ್ಪತ್ತು ರೂಪಾಯಿ ಕಪಾಟನ್ನು ಸೇರಿದಾಗ ಖುಷಿಪಟ್ಟಿದ್ದ. ಹತ್ತು ನೂರಾಗಿ, ನೂರು ಸಾವಿರಾಗಿ, ಪುರಾತನ ಎಲೆ ಅಡಿಕೆ ಡಬ್ಬಿಯಲ್ಲಿ ಸುರುಳಿ ಸುರುಳಿಯಾಗಿ ತುಂಬಿದಾಗ ಬದುಕಿಗೆ ಭದ್ರತೆ ಬಂದಿತು. ಕೂಡು ಕುಟುಂಬದ

ಅರೆ ಹೊಟ್ಟೆಯಲ್ಲಿ ಬೆಳೆದವನು ಈಗ ಹೆಂಡತಿ ಮಕ್ಕಳೊಂದಿಗೆ ಹೊಟ್ಟೆ ತುಂಬುವಂತೆ ಉಂಡ. ನಿರುಪದ್ರವಿ ಬಸಪ್ಪನ ಏಳಿಗೆ ಕಂಡು ನೆರೆಹೊರೆಯವರೂ ಸಂತಸಪಟ್ಟಿದ್ದರು.

ಬಸಪ್ಪನಿಗಿಂತ ಚಿಕ್ಕವನಾದ ಶಿವಪ್ಪ ಆಗಷ್ಟೇ ನೌಕರಿ ಸೇರಿದ್ದ. ಅಂಗಡಿಯ ಖಾಯಂ ಗಿರಾಕಿಗಳಲ್ಲಿ ಅವನೂ ಒಬ್ಬ. ಸಾಮಾನು ಖರೀದಿಸುತ್ತ ಬಂದಂತೆ ಅವರಿಬ್ಬರ ಒಡನಾಟ ಹೆಚ್ಚುತ್ತ ಹೋಯಿತು. ಭಾರೀ ಸ್ವಾಭಿಮಾನಿಯಾದ ಶಿವಪ್ಪ ಉದ್ರಿ ಕೇಳಿದವನಲ್ಲ, ಮೇಲಿನ ಚಿಲ್ಲರೆಯನ್ನೂ ಸರಿಯಾಗಿ ಎಣಿಸಿಕೊಟ್ಟು ಸಾಮಾನಿನ ಚೀಲ ಎತ್ತುತ್ತಿದ್ದ. ಚೊಚ್ಚಲು ಬಸುರಿಯಾದ ಶಿವಪ್ಪನ ಹೆಂಡತಿ ಒಂಭತ್ತು ತಿಂಗಳಾದ ಅದೊಂದು ರಾತ್ರಿ ನೋವು ತಡೆದುಕೊಳ್ಳದೇ ಒದ್ದಾಡುತ್ತಿದ್ದಳು. ಕಡುಬಡತನದಲ್ಲಿರುವ ತವರಿಗೆ ಆಕೆಯನ್ನು ಕಳಿಸುವಂತಿರಲಿಲ್ಲ. ಅರ್ಧ ರಾತ್ರಿ ಕಳೆದರೂ ಹೆರಿಗೆಯಾಗದೇ ಇದ್ದಾಗ ಸೂಲಗಿತ್ತಿ ನಿಂಗಮ್ಮ ಕೈ ಚೆಲ್ಲಿದಳು. ನಿಂಗಮ್ಮನಿಗೇ ನೀಗದಿದ್ದರೆ ಹುಬ್ಬಳ್ಳಿಗೆ ತೆಗೆದುಕೊಂಡು ಹೋಗುವುದೇ ಸರಿಯೆಂದು ಅನುಭವಿ ಹೆಂಗಸರು ಗಾಬರಿ ಹೆಚ್ಚಿಸಿದರು. ಒಬ್ಬರು ಗೌಡರ ಟ್ರ್ಯಾಕ್ಟರ್ ತಂದರು. ಹೆಂಗಸರು ಚೀಲಗಳಿಗೆ ಸೀರೆ, ಹಳೆ ಅರಿವೆ, ಕೌದಿ, ಚಾದರು, ತಾಟು, ತಂಬಿಗೆ ತುಂಬಿದರು. ಎಲ್ಲವೂ ಸಿದ್ಧವಾಯಿತು. ಹಣ? ತಡವರಿಸಿಕೊಂಡು ಓಡಾಡುತ್ತಿದ್ದ ಶಿವಪ್ಪನಿಗೆ ತನ್ನ ಕಿಸೆಯಲ್ಲಿರುವುದು ನಾಲ್ಕು ಚಿಲ್ಲರೆ ಮಾತ್ರ ಎಂದು ನೆನಪಾಯಿತು. ರೊಕ್ಕ ಇಲ್ದಂಗ ಶಾರದೂರಿಗೆ ಹೋದ್ರ ನಾ ಮಂಗ್ಯಾ ಆದಂಗ ಅಂತ ತಿಳಿದವನು ಬಸಪ್ಪನಿದ್ದಲ್ಲಿಗೆ ಧಾವಿಸಿದ. ಬಸಪ್ಪನಿಗೆ ಕುತ್ತಿಗೆಯವರೆಗೆ ಅದೇನೋ ಏರಿದಂತಾಯಿತು. ಎತ್ತ ಕಡೆಯಿಂದ ನೋಡಿದರೂ ಶಿವಪ್ಪ ಸಹಾಯಕ್ಕೆ ಅರ್ಹ ವ್ಯಕ್ತಿ. ಆದರೆ ಹಲ್ಲಿಗೆ ಹಲ್ಲು ಕೂಡಿಸಿ ದುಂಡಗೆ ಮಾಡಿದ ಕಾಸನ್ನು ಹೇಗೆ ತೆಗೆಯುವದು? ಈ ಧರ್ಮ ಸಂಕಟವನ್ನು ಅರ್ಥೈಸಿಕೊಂಡ ಶಿವಪ್ಪ ಬಸಪ್ಪನ ಸಾಲಕ್ಕೆ ನೂರಕ್ಕೆರಡರಂತೆ ಬಡ್ಡಿ ಸೇರಿಸಿ ಒಂದೆರಡು ತಿಂಗಳಲ್ಲಿ ಹಿಂತಿರುಗಿಸುವದಾಗಿ ವಾಗ್ದಾನ ಮಾಡಿದ. ಬಡ್ಡಿ ವಿಷಯ ಬಾಣದಂತೆ ತಟ್ಟಿ ಬಸಪ್ಪನನ್ನು ಕರಗಿಸಿತು. ಎಂಥಾ ಮಾತಾಡ್ತಿ ಶಿವಪ್ಪ, ನಾ ಎಲ್ಲಿ ಬಡ್ಡಿ ತಿನ್ನಾಕ ಹೋಗ್ಲಿ? ಎನ್ನುತ್ತ ಮನೆದೇವರನ್ನು ನೆನೆಸಿ ಸಾವಿರ ಎಣಿಸಿದ. ಸಾವಿರ ರೂಪಾಯಿಗೆ ಆಗ ಒಂದು ತೊಲೆ ಬಂಗಾರ ಬರುತ್ತಿತ್ತು. ಏನಾದರೂ ಅಪಾಯ ಸಂಭವಿಸುವ ಮೊದಲೇ ಚಿಕಿತ್ಸೆ ದೊರೆತು ಸುರಕ್ಷಿತ ಹೆರಿಗೆಯಾಯಿತು. ಮುಂದೆ ಎರಡು ತಿಂಗಳಲ್ಲಿ ಹಣ ಹೊಂದಿಸಿ ಶಿವಪ್ಪ ಹಿಂದಿರುಗಿಸಿದ. ಅಸಲಿನ ಮೇಲೆ ಬಡ್ಡಿಯನ್ನು ಮುಂದಿಟ್ಟ ಪರಿಸ್ಥಿತಿ ನೋಡಿ ಕೈಲಾದ ಸಹಾಯ ಮಾಡೇನಿ, ಬಡ್ಡಿ ಕೊಟ್ಟು ನನ್ನ ಸಣ್ಣವ್ನ ಮಾಡಬ್ಯಾಡಾ ಎಂದು ಬಸಪ್ಪ ಪರಿಪರಿಯಾಗಿ ಹೇಳಿದ. ಆದರೆ ಋಣಭಾರವನ್ನು ಕಿಂಚಿತ್ತಾದರೂ ಕಡಿಮೆ ಮಾಡಿಕೊಳ್ಳಲು ಶಿವಪ್ಪ ನಿರ್ಧರಿಸಿದ್ದ.

ಮುಂದೊಂದು ತಿಂಗಳಲ್ಲಿ ಮಗುವಿನ ನಾಮಕರಣವನ್ನು ಶಾಸ್ತ್ರೋಕ್ತವಾಗಿ ಬಂಧುಗಳನ್ನೆಲ್ಲ ಸೇರಿಸಿ ಮಾಡುವುದೆಂದು ಶಿವಪ್ಪನ ಮನೆಯಲ್ಲಿ ನಿಷ್ಕರ್ಷೆಯಾಯಿತು. ಒಲ್ಲೆ ಎನ್ನಲಾಗದೇ ಖರ್ಚಿಗಾಗಿ ದಾರಿ ಹುಡುಕಲು ತೊಡಗಿದ. ಬಸಪ್ಪನ ಹತ್ತಿರ

ಐನೋರಿಗಾಗಿ ಮತ್ತೆ ಬೇಡಿಕೆಯಿಟ್ಟ ಬಡ್ಡಿ ಮಾತ್ರ ತೊಗೊಳ್ಯಾಕ ಬೇಕು ಅಂತ ಮೊದಲೇ ಷರತ್ತು ಇಟ್ಟ ಬಸಪ್ಪ ಹುಳಿಹುಳಿಯಾಗಿ ನಗುತ್ತ ಸಮ್ಮತಿಸಿದ. ಕಪಾಟಿನಲ್ಲಿ ಸಾವಿರವಿದ್ದರೆ ಸಾವಿರಾಗಿಯೇ ಉಳಿಯುತ್ತದೆ. ಹೀಗೆ ಹೊರತೆಗೆದು ಕೊಡುಕೊಳ್ಳುವಿಕೆ ಮಾಡಿದರೆ ಒಂದಿಷ್ಟು ಗಳಿಕೆಯಾಗುತ್ತದೆ.

ಶಿವಪ್ಪ ಪರಸ್ಥಳದ ಕೆಲವರನ್ನು ಬಸಪ್ಪನಿಗೆ ಪರಿಚಯಿಸಿದ. ಅವರಿಗಾದರೆ ನೂರಕ್ಕೆ ಮೂರು ಎಂದು ಬಸಪ್ಪನೇ ಮುಂದಾಗಿ ಹೇಳಿದ. ಬಂದವರು ಗೋಣು ಹಾಕಿದರು. ಇದುವರೆಗೂ ತಾನು ಮಾತ್ರ ದುಡಿಯಬಲ್ಲೆನೆಂದು ತಿಳಿದಿದ್ದ ಬಸಪ್ಪನಿಗೆ ತನ್ನಲ್ಲಿರುವ ಹಣವೂ ದುಡಿಯಬಲ್ಲದು ಎಂದು ತೋರಿಸಿಕೊಟ್ಟವನು ಶಿವಪ್ಪ. ನೂರಾರು ಗಳಿಸಿದ ಬಸಪ್ಪನಲ್ಲಿಗೆ ನಾನಾ ರೀತಿಯ ಜನರು ಬರತೊಡಗಿದರು. ಬರಿ ಬಾಯ್ಲೆಕ್ಕ ನಡೆಯುವುದಿಲ್ಲವೆಂದು ಖಾತೆ-ಕಿರ್ದಿ ಪುಸ್ತಕ ಹಿಡಿದು ಓಡಾಡಲು ಪ್ರಾರಂಭಿಸಿದ. ಕಿರಾಣಿ ಅಂಗಡಿ ಲೇವಾದೇವಿ ಅಡ್ಡೆಯಾಗಿ ಪರಿಣಮಿಸಿತು. ದೀಪಾವಳಿ ಹಿಂದಿನ ದಿನ ಬುಕ್ಕು ಹಿಡಿದು ಲೆಕ್ಕಕ್ಕೆ ಕುಳಿತ ಬಸಪ್ಪನಿಗೆ ತಾನು ಲಕ್ಷಾಧಿಪತಿಯಾಗಿರುವುದು ಮನವರಿಕೆಯಾಯಿತು. ದಂಧೆಯನ್ನು ವಿಸ್ತರಿಸದೇ ಅನ್ಯಮಾರ್ಗವಿರಲಿಲ್ಲ. ಹೀಗೆ ಸಾಲ ಮಾಡಿದವರಲ್ಲಿ ಅತೀ ಹೆಚ್ಚು ಹೊರೆ ಹೊತ್ತಿದ್ದ ಮಲ್ಲೇಶಪ್ಪನಿಗೆ ಹಣವನ್ನೆಲ್ಲ ಹಿಂದಿರುಗಿಸುವಂತೆ ಬಸಪ್ಪ ತಾಕಿತು ಮಾಡುತ್ತಲೇ ಇದ್ದ. ಇಪ್ಪತ್ತೆಂಟು ರಗಳೆಯಲ್ಲಿ ಸಿಕ್ಕು ಬಿದ್ದಿದ್ದ ಮಲ್ಲೇಶಪ್ಪ ಎರಡು ಎಕರೆ ಹೊಲವನ್ನು ಬಸಪ್ಪನ ಹೆಸರಿಗೆ ವರ್ಗಾಯಿಸಿದ. ವರ್ಷ ತುಂಬುವುದರಲ್ಲಿ ಎಂಟಂಕಣದ ಮನೆ ಪುಟಿದೆದ್ದು ಜನ ನಿಂತು ನೋಡುವಂತಾಯಿತು. ಮನಿ ತುಂಬ ದೋ ನಂಬರ್ ಸಾಗವಾನಿ ಕಟ್ಟಿಗೀನ ತುಂಬೇತಿ ಎಂದು ಜನರು ಈಗಲೂ ಮಾತನಾಡಿಕೊಳ್ಳುತ್ತಾರೆ.

ದೊಡ್ಡಮನೆ ಸೇರಿದ ಬಸಪ್ಪನಿಗೆ ಜನರಿಂದ ಅಂತರ ಕಾಯ್ದುಕೊಳ್ಳಲು ಅನುಕೂಲವಾಯಿತು. ವ್ಯವಹಾರಕ್ಕಾಗಿ ಮಾತ್ರ ಅವನ ಒಡನಾಟ ಸೀಮಿತವಾಯಿತು. ಸದರ ಬೆಳೆದರೆ ದಂಧೆಗೇ ಕುತ್ತು. ಭಿಡೇ ಬಿಟ್ಟು ಅಸಲು ಬಡ್ಡಿ ವಸೂಲು ಮಾಡಬೇಕೆಂದರೆ ಮನೆಯವರೂ ಊರ ಜನರೊಂದಿಗೆ ಸಲುಗೆ ಬೆಲೆಸಿಕೊಳ್ಳಬಾರದೆಂದು ಹೇಳುತ್ತಿದ್ದ. ಶಿವಪ್ಪನ ಕುಟುಂಬವೂ ದೂರವಾಯಿತು. ಆದರೆ ಅವರಿಬ್ಬರ ಸ್ನೇಹ ಮಾತ್ರ ಮುಂದುವರೆದಿತ್ತು. ಮೇಲಿಂದ ಮೇಲೆ ಸಾಲ ಕೇಳುವ ಪ್ರಸಂಗಗಳು ಒಕ್ಕರಿಸಿಕೊಂಡು ಶಿವಪ್ಪನ ತಲೆ ಮೇಲಿನ ಬಡ್ಡಿ ಗುಡ್ಡದಂತಾಯಿತು. ಬಸಪ್ಪ ಕಡಿಮೆ ಮಾಡಲಿಲ್ಲ. ಇವನು ಕೇಳಲಿಲ್ಲ. ಅರ್ಧಕ್ಕಿಂತ ಹೆಚ್ಚಿನ ಸಂಬಳವನ್ನು ಬಡ್ಡಿಗಾಗಿಯೇ ತೆತ್ತಿದ್ದಾನೆ. ಬಸಪ್ಪನ ತಲೆಯಲ್ಲಿ ಹೊಕ್ಕ ಬಡ್ಡಿಹುಳ ಹೆಬ್ಬಾವಾಗಿ ಸುತ್ತಿಕೊಂಡಿದೆ. ಆ ಹೆಬ್ಬಾವಿನ ಹೊಟ್ಟೆ ಸೇರಿದ ಕೆಲವರು ಜೀರ್ಣವಾಗಿ ಹೋಗಿದ್ದಾರೆ. ವಹಿವಾಟು ಮಿತಿಮೀರಿ ದೂರುಗಳು ಹೋದಾಗ ಮೀಸೆ ತಿರುವಿಕೊಂಡು ಬಂದ ಪೊಲೀಸರು ಬಸಪ್ಪನ ಮನೆ ಹೊಕ್ಕ ನಂತರ

ಬಾಲ ಮುದುರಿಕೊಂಡು ತಿರುಗಿ ಹೋದರು. ಆ ನಂತರ ದೂರು ಕೊಡಲು ಹೋದವರಿಗೆ ಸಾಕ್ಷಿ ಇಲ್ಲ, ಸುಡುಗಾಡಿಲ್ಲ, ನಾವೇನು ಮಾಡೋಣು? ಕಾಗದ ಪತ್ರ ಇದ್ದರ ತೂಗೊಂಡು ಬರ್ರಿ ಎಂದು ಗದರಿಸಿದರು.

ಚೌಕಾಸಿಗೆ ನಿಂತವರಿಗೆ ಸಣ್ಣ ದನಿಯಲ್ಲಿ ಹೇಳುತ್ತಾನೆ. ನಾನೂ ದೀಡ ಪರ್ಸೆಂಟ್ ಮ್ಯಾಲ ಹುಬ್ಬಳ್ಳಿಯಿಂದ ತಂದು ನಿಮಗ ಕೊಟ್ಟಿರ್ತೇನಿ. ಅವ್ರು ನಂಗ ಬಿಡ್ತಾರೇನು? ಜನರ ಬಾಯಿಗೆ ಬೀಗ ಬೀಳುತ್ತದೆ. ನಾಲ್ಕಾರು ಬಸಪ್ಪರ ತಲೆ ಮೇಲೆ ಕೈಯಾಡಿಸಿದ ಆಸಾಮಿಗಳು, ನಿಮ್ಮ ರೊಕ್ಕ ಸಾಯುಮುಂದ ಕೊಡ್ತೇನ್ರಿ ಸಾವ್ಕಾರ. ಲಾಟರಿ ಹತ್ತಲಿ, ಅಸಲು ಬಡ್ಡಿ ಎಲ್ಲಾ ಚುಕ್ತಾ ಮಾಡ್ತೇನಿ. ಮಗಗ ನೌಕರಿ ಸಿಗಲಿ, ಒನ್ನೆ ಪಗಾರ ನಿಮ್ಮ ಕೈಯಾಗ.. ಎನ್ನುವ ಡೈಲಾಗುಗಳು ಬಸಪ್ಪನನ್ನು ಕೆರಳಿಸುತ್ತವೆ. ಮನೆ ಮುಂದೆ ನಿಂತು ಕೂಗಾಡುತ್ತಾನೆ. ಬೇಕಿದ್ದರೆ ಒಂದು ಹೊಡೆಯಲಿ ಎಂದು ಅವರು ಕಾಯುತ್ತಾರೆ. ಬೈದಿಯಲ್ಲ, ನಿನ್ನ ರೊಕ್ಕ ಮುಟ್ಟು ಹೋಗು ಎಂದು ಭಂಡತನ ಪ್ರದರ್ಶಿಸುತ್ತಾರೆ. ಅದಕ್ಕೆಲ್ಲ ಬಸಪ್ಪ ಸೊಪ್ಪು ಹಾಕುವುದಿಲ್ಲ. ಯಥಾ ಪ್ರಕಾರ ನೋಟು ಹಿರಿಯುತ್ತಾನೆ. ಕಿಸೆ ತುಂಬಿಸಿಕೊಳ್ಳುತ್ತಾನೆ. ಹದಗೆಟ್ಟ ಆರೋಗ್ಯ ಮಾತ್ರ ಅವನ ಮಗ್ಗುಲ ಮುರಿದಿದೆ. ಒಮ್ಮೊಮ್ಮೆ ಹೋದಾಗ ಒಂದೊಂದು ಹೊಸಾ ಬ್ಯಾನಿ ಹೆಸರು ಹೇಳ್ತಾರು. ಅನ್ನಾನೂ ಬ್ಯಾಡಾ, ರೊಟ್ಟೀನೂ ಬ್ಯಾಡಾ, ನಾವು ಕೊಟ್ಟ ಗುಳಿಗಿಯಷ್ಟ ತಿಂದು ಸಾಯಿ ಅಂತಾರು ಎಂದು ಡಾಕ್ಟರನ್ನು ಶಪಿಸುತ್ತಾನೆ. ಎರಡು ಕಾರುಗಳಿದ್ದರೂ ನಡೆದುಕೊಂಡೇ ಓಡಾಡಲು ಹೇಳುತ್ತಾರೆ. ಗಾದಿಯನ್ನುಪಯೋಗಿಸದೇ ನೆಲಕ್ಕೆ ಜಮಖಾನೆ ಹಾಕಿಕೊಂಡು ಮಲಗಲು ಆಜ್ಞಾಪಿಸುತ್ತಾರೆ. ಅವರ ಉಪದೇಶ ಪಾಲಿಸುವಂತೆ ನೋಡಿಕೊಳ್ಳಲು ಹೆಂಡತಿ ಮಕ್ಕಳಿದ್ದಾರೆ. ಸಂಪತ್ತನ್ನು ತಿಂದುಂಡು ಅನುಭವಿಸುವ ಯೋಗವಿರುವುದು ಅವರಿಗೆ ಮಾತ್ರ.

ಬಸಪ್ಪ ಇಷ್ಟು ಹಣ್ಣಾದದ್ದು ತನ್ನ ಬಲಗೈ ಬಂಟನಂತಿದ್ದ ಮಗನ ಸಾವಿನಿಂದ. ಹಳ್ಳಿಹಳ್ಳಿ ತಿರುಗಿ ವಸೂಲಿ ಮಾಡಿಕೊಂಡು ಮೋಟಾರ್ ಸೈಕಲ್ ಮೇಲೆ ಹಿಂದಿರುಗುತ್ತಿದ್ದಾಗ ಬಿದ್ದು ಬೀದಿ ಹೆಣವಾದ. ಜನ ಎಮ್ಮೆ ಅಡ್ಡ ಬಂದಿತೆನ್ನುತ್ತಾರೆ. ಕತ್ತಲಲ್ಲಿ ಗುಂಡಿ ಕಾಣದೇ ನೆಲ ಕಚ್ಚಿದ ಎನ್ನುತ್ತಾರೆ. ಮಲ್ಲೇಶಪ್ಪನ ಭೂತ ಬಲಿ ತೆಗೆದುಕೊಂಡಿತು ಎನ್ನುತ್ತಾರೆ. ಯಾರೋ ಹೊಡೆದು ಹಾಕಿದರು ಎಂಬ ಮಾತು ಕೂಡ ಹಸಿಕಟ್ಟಿಗೆ ಸುಟ್ಟ ಹೊಗೆಯಂತೆ ಸುಳಿದಾಡುತ್ತದೆ. ಪಾಪದ ಫಲ! ಎಂದು ನಿಟ್ಟುಸಿರಿಟ್ಟವರು ಅನೇಕರು.

ಒಂದು ತಿಂಗಳಲ್ಲಿ ಸುಧಾರಿಸಿಕೊಂಡ ಬಸಪ್ಪ ಖಾತೆ ಪುಸ್ತಕ ಹಿಡಿದು ಅವೇ ಹಳ್ಳಿಗೆ ವಸೂಲಿಗೆ ಹೋದಾಗ ನಾನೂ ಕೊಟ್ಟೇನಿ, ನೀನೂ ಕೊಟ್ಟೇನಿ ಎಂದು ಕಿವಿ ತೂತಾಗುವಂತೆ ಬೊಬ್ಬೆಯಿಟ್ಟರು. ಎಕ್ಸಿಡೆಂಟ್ ಆದ ದಿನ ನಿಮ್ಮ ಮಗನ ಕೈಯಾಗ ಝುಣಾಝುಣಾ ಎಣಿಸೇವಿ ಎಂದರು. ಆದರೂ ಪಾಪ ಹಿಂಗಾಗಬಾರ್ದಿತ್ತು. ಸಂತಾಪದ

ಮುಸಲಧಾರೆ ಸುರಿಯಿತು. ಕೊಟ್ಟು ಕೋಡಂಗಿಯಾದ ಬಸಪ್ಪ ಬಿಸಿನೀರಿಗೆ ಹಾಕಿದ ಸುಣ್ಣವಾದ. ಇನ್ನುಳಿದ ಮಕ್ಕಳ್ಯಾರೂ ಬಡ್ಡಿ ವ್ಯವಹಾರ ಮಾಡಲು ಮುಂದೆ ಬರಲಿಲ್ಲ. ಚಂಡಮುರಕ ವಂಶದವ್ರು ಎಂದು ಹಿಂದೆ ಮುಂದೆ ಆಡಿಕೊಳ್ಳುವ ಮಾತಿಗೆ ಅವರು ಕುಗ್ಗಿ ಹೋಗಿದ್ದರು. ಕೆಲದಿನದಿಂದ ಬಸಪ್ಪನಿಗೆ ಎದೆಯಲ್ಲಿ ಹುಳಿ ಸುಡುತ್ತಿತ್ತು. ನೀರು ಕುಡಿದರೂ ಉರಿದುಕೊಂಡೇ ಗಂಟಲಲ್ಲಿಳಿಯುತ್ತಿತ್ತು. ಎದೆಯ ಮೇಲೆ ಕಲ್ಲು ಹೇರಿದಂತೆ ಅನುಭವ. ಸಂಜೆಯವರೆಗೆ ದವಾಖಾನೆಯಲ್ಲಿ ಆ ಪರೀಕ್ಷೆ ಈ ಪರೀಕ್ಷೆ ಅಂತ ಮಾಡಿದ ಡಾಕ್ಟರು ನೀವು ಇನ್ಮುಂದ ಭಾಳ ಹುಷಾರಿರ್ಬೇಕು. ವ್ಯವಹಾರವೆಲ್ಲ ಬಿಟ್ಟು ಬರೇ ರೆಸ್ಟ್ ತೊಗೊಳ್ರಿ ಎಂದರು. ಪ್ರಿಸ್ಕ್ರಿಪ್ಷನ್ ಹಾಳೆಯ ಎರಡೂ ಮಗ್ಗುಲಲ್ಲಿ ಮಾತ್ರೆ, ಔಷಧಿ, ಟಾನಿಕ್, ಇಂಜಕ್ಷನ್ ಏನೇನೋ ಬರೆದರು. ಮನೆಗೆ ಮರಳಿ ಬರುತ್ತಿದ್ದಾಗ ಎದುರಾದ ಶಿವಪ್ಪನಿಗೆ ಯಾವ ಕಡೆ? ಎಂಬಂತೆ ಕಣ್ಣಿನಲ್ಲಿಯೇ ಪ್ರಶ್ನಿಸಿದ. ನಮ್ಮ ಪ್ರಕಾಶ ಬೆಳಗಿಂದ ಕಾಣ್ವಲ್ಲ, ಹುಡುಕಿ ಹುಡುಕಿ ಸಾಕಾತು ಎಂದು ಚಿಂತಿತನಾದ.

ಗಂಡು ಮಗ ಬಿಡು ಮಾರಾಯ, ಅಷ್ಟ್ಯಾಕ ಗಾಬರಿ ಆಗ್ತಿ? ಎನ್ನುತ್ತ ಮುನ್ನಡೆದ. ಮನೆಗೆ ಬಂದಾಗ ಹೆಂಡತಿ, ಮಕ್ಕಳಿಬ್ಬರ ಮುಖದಲ್ಲೂ ಕಳೆಯಿಲ್ಲ. ಬಸಪ್ಪನ ಪ್ರಶ್ನಾರ್ಥಕ ದೃಷ್ಟಿ ಎದುರಿಸಲಾಗದೇ ತಲೆ ಕೆಳಗೆ ಹಾಕಿದರು. ಹೆಂಡತಿ ಅದುರುವ ದನಿಯಲ್ಲಿ ಉಸುರಿದಳು. ನಂದಾ ಮುಂಜೇಲಿ ಹೋದಾಕಿ ಇನ್ನೂ ಬಂದಿಲ್ಲ. ಕಾಲೇಜಿಗೂ ಹೋಗಿಲ್ಲಂತ ಸೆರಗಿನಿಂದ ಕಣ್ಣನ್ನು ಒರೆಸಿಕೊಂಡಳು. ಹೊಸ್ತಿಲು ಬಳಿಯೇ ಕುಸಿದ ಬಸಪ್ಪನನ್ನು ಎತ್ತಿ ತಂದು ಫ್ಯಾನಿನ ಕೆಳಗೆ ಹಾಕಿದರು. ನಿಧಾನವಾಗಿ ಕಣ್ತೆರೆಯಲು ಪ್ರಯತ್ನಿಸುತ್ತಿದ್ದ ಬಸಪ್ಪನಿಗೆ ಫ್ಯಾನೊಂದೇ ಕಾಣುತ್ತಿದೆ. ಅದು ಬಡ್ಡಿ ಮೀಟರ್‌ನಷ್ಟೇ ವೇಗವಾಗಿ ತಿರುಗುತ್ತಿತ್ತು. ಅವುಗಳೊಂದಿಗೆ ಸ್ಪರ್ಧಿಸಲು ಕಣ್ಣುಗುಡ್ಡೆಯಲ್ಲಿ ಶಕ್ತಿಯುಳಿದಿರಲಿಲ್ಲ.

❖

(ಹೊಸ ದಿಗಂತ – ಆಗಸ್ಟ್ 26, 2012)

ದೇವರ ತಂದವರು

ಮಂಜುನಾಥ ನಾಯ್ಕ್

ನಾವು ಗೋವಾದ ಮೂಲದವರು ಎಂಬ ವಿಷಯ ತಿಳಿಸಿದವಳೇ ನಮ್ಮಜ್ಜಿ. ಅವಳು ಮಾತನಾಡುವ ಕನ್ನಡದಲ್ಲಿ ಆಗಾಗ ಇಣುಕುವ ಕೊಂಕಣಿ ಶಬ್ದಗಳು ಮತ್ತು ಅದನ್ನು ತಡೆಯಲು ಅವಳು ಪಡುತ್ತಿದ್ದ ಪ್ರಯತ್ನ, ಜೊತೆಗೆ ಪೊಂಡಾದಲ್ಲಿ ಒಂದು ದೇವಸ್ಥಾನ ಇದೆ ಅಂತಲೂ ಅದು ನಮ್ಮ ಕುಲ ದೇವರು ಅಂತಲೂ, ಸಾಧ್ಯವಾದರೆ ಒಮ್ಮೆ ಅಲ್ಲಿಗೆ ಹೋಗಿ ಬರಬೇಕೆಂತಲೂ ಹೇಳುತ್ತಿದ್ದಳು. ಅವಳ ಯೌವ್ವನದ ಕಾಲದಲ್ಲಂತೆ, ಗೋವಾದಿಂದ ನಮ್ಮ ಕುಲದೇವರ ಛತ್ರಿ ಚಾಮರ ಹಿಡಿದು ಹತ್ತಾರು ಜನ ಬಂದು ಊರ ಮುಂದಿನ ಅರಳಿಕಟ್ಟೆ ಮೇಲೆ ಕೂರುತ್ತಿದ್ದರಂತೆ. ದೇವಸ್ಥಾನದ ನಮ್ಮ ಕುಲ ದೇವರ ಸಣ್ಣ ಬೆಳ್ಳಿಯ ಮುಖವಾಡವನ್ನೂ, ಬೆಳ್ಳಿಯ ಹಸ್ತವನ್ನೂ ತರುತ್ತಿದ್ದರಂತೆ. ಜಾತ್ಯಸ್ಥರು ಅಂದುಕೊಂಡ ಆ ಕುಲದ ಒಕ್ಕಲಾದ ಒಂದೊಂದು ಕುಟುಂಬದವರೂ ಅವರನ್ನು ತಮ್ಮ ಮನೆಗೆ ಕರೆಸಿ, ಅವರ ಪಾದ ತೊಳೆದು ಅಕ್ಕಿ ಕಾಯಿ ಬೇಳೆ ಬೆಲ್ಲ ಮತ್ತು ನಿತ್ಯ ಉಪಯೋಗದ ವಸ್ತುಗಳನ್ನು ಕೊಡುತ್ತಿದ್ದರಂತೆ. ಅಜ್ಜಿ ತನ್ನ ಕೊನೆಯ ದಿನಗಳಲ್ಲೂ ಈಗಲೂ ಇರುವ ಆ ಅರಳಿ ಕಟ್ಟೆ ತೋರಿಸಿ ಅದರ ಬದಿಯಲ್ಲಿ ಒಲೆ ಹೂಡಿ ಅವರು ಅಡುಗೆ ಮಾಡುತ್ತಿದ್ದ ಸ್ಥಳ ತೋರಿಸಿದ್ದಳು. ಆಗಲೂ ನನಗೆ ಕೇಳಿದ ನೆನಪು 'ಯಾಕಜ್ಜಿ? ಅವರಿಗೆ ನಮ್ಮವರೇ ಊಟ ಮಾಡಿ ಹಾಕಬಹುದಿತ್ತಲ್ಲಾ..' ಎಂದು. 'ಇಲ್ಲಾ ಮಗ ಅವರು ನಮ್ಮವರ ಮನೆಗಳಲ್ಲಿ ಊಟ ಮಾಡ್ತಿರ್ಲಿಲ್ಲಾ..' ಆಗಿನ ಯೋಚನೆಯ ಜಾಲದಲ್ಲಿಯೋ ಅಥವಾ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ಜಾತಿ ಪದ್ಧತಿಗಳ ಬಗ್ಗೆ ಇದ್ದ ಸಣ್ಣ ಅರಿವಿನಿಂದಲೋ ಕೇಳಿದ್ದೆ. 'ಯಾಕೆ? ಅವರೂ ನಮ್ಮ ಜಾತಿಯವರಲ್ವಾ..?' 'ಮಗಾ.. ಅವರೂ ನಮ್ಮ ಜಾತಿಯವರೇ, ಆದರೆ ದೇವರ ತಂದವರಲ್ವಾ.. ಅದಕ್ಕೇ ಮಡಿ ಮೈಲಿಗೆ ಅಂತ..' ತಲೆ ಕೆರೆದುಕೊಂಡಿದ್ದೆ.. ಜಾತಿಯೊಳಗೊಂದು ಜಾತಿ, ಅದರೊಳಗೆ ಗೋತ್ರ, ಅದರಲ್ಲೂ ಮಡಿ..! ಅಜ್ಜಿಯ ಮಾತು ನನ್ನ ಮತ್ತು ಅಜ್ಜಿಯ ಸುತ್ತ ವರ್ತುಲವಾಗಿ ಸುತ್ತಿದಂತೆ. ಕ್ರಮೇಣ ಅದು ಅಜ್ಜಿಗೊಂದು ವರ್ತುಲವಾಗಿ, ನನ್ನ ಸುತ್ತಲೂ ಇನ್ನೊಂದು ವರ್ತುಲವಾಗಿ.. ಒಟ್ಟಿಗೆ ಏನೇನೋ..!

ಅಜ್ಜಿಯ ಕಡೆ ತಿರುಗಿದೆ. ಅವಳೂ ಮೌನವಾಗಿದ್ದಳು. ಅವಳ ಸುತ್ತ ಸುತ್ತುತ್ತಿದ್ದ ಆ ವರ್ತುಲ ಈಗ ಅವಳ ಮನಸ್ಸಿನಲ್ಲಿ ಸುತ್ತುತ್ತಿರಬೇಕು. ಅರಳಿ ಕಟ್ಟೆಯ ಸುತ್ತಲಿನ ಭತ್ತದ ಗದ್ದೆಯ ಮೇಲೆ ಬೀಸುತ್ತಿದ್ದ ಗಾಳಿ ಪೈರಿನ ತಲೆಯ ಮೇಲೆ ಅಲೆಯೆಬ್ಬಿಸಿ ಸಾಗುತ್ತಿರುವುದರ ಎಡೆಯಲ್ಲಿ ಅವಳ ದೃಷ್ಟಿ ನೆಟ್ಟಿತ್ತು. ಅಜ್ಜಿಯ ಮನಸ್ಸಿನ ಅಲೆಗಳು

ಶಬ್ದ ಅಥವಾ ಅರ್ಥದ ವ್ಯಾಪ್ತಿಗೆ ಬರುವ ಮಟ್ಟದಲ್ಲಿರಲಿಲ್ಲ. ಎದುರಿನ ಇಗರ್ಜಿ ಗುಡ್ಡೆಯ ಆ ಕಡೆಯಿಂದ ಈ ಕಡೆಗೆ ಬಣ್ಣ ಬಣ್ಣದ ಕಾಮನ ಬಿಲ್ಲೊಂದು ಕಟ್ಟಿತ್ತು. ಆದರೆ ನಮ್ಮಲ್ಲಿ ಹನಿ ಮಳೆಯೂ ಬಿದ್ದಿರಲಿಲ್ಲ. 'ಅಜ್ಜಿ.. ಕಾಮನಬಿಲ್ಲು ನೋಡು.. ಆದರೆ ಮಳೇನೆ ಬಂದಿಲ್ವಲ್ಲಾ.. ಇಲ್ಲಿ!' ಎಂದಿದ್ದೆ. 'ಸುಮ್ಮನಿರು ಮಗಾ.. ಕಾಮನಬಿಲ್ಲು ಬರೀ ಮಳೆ ಬಿದ್ರೆ ಮಾತ್ರ ಬರೋದಲ್ಲಾ.. ಮಳೆಗಾಲದಲ್ಲಿ ಭೂಮಿಗೂ ಬಾನಿಗೂ ಪ್ರೀತಿ ಹುಟ್ಟುತ್ತದಲ್ಲಾ.. ಜೀವ ಚೈತನ್ಯ ಹಸಿರು ಹುಟ್ತದಲ್ಲಾ.. ಈ ಎಲ್ಲಾ ಹುಟ್ಟೋದಕ್ಕೆ ಪ್ರಕೃತಿ ಅಥವಾ ದೇವರು ಕಾಮಕ್ಕೆ ಒಳಗಾದಾಗ ಈ ಬಿಲ್ಲು ಮೂಡ್ತದೆ.. ಅದು ಹುಟ್ಟಿನ ಸಂಭ್ರಮ ಮಗಾ.. ಮನೇಲಿ ನೋಡಿದ್ಯಾ.. ಕೋಳಿ ಹೆಂಟೆ (ಹೆಣ್ಣು ಕೋಳಿ) ಮೊಟ್ಟೆ ಇಡುವ ದಿನಗಳಲ್ಲಿ ಅದರ ಜುಟ್ಟು ಮೊಕ ಕೆಂಪಾಗುವುದಿಲ್ಲವಾ.. ಹಾಗೇ ಇದು. ಕಲೆಯುವಿಕೆಯ ಸೂಚನೆ ಕೂಡಾ..'. ಇನ್ನೂ ಏನೇನೋ ಹೇಳುವವಳಿದ್ದಳು ಕಾಣಿಸುತ್ತದೆ. ಆದರೆ ತಿರುಗಿ ನೋಡಿ 'ನೀನು ಚಿಕ್ಕವನು ಇದೆಲ್ಲಾ ನಿನಗೆ ಅರ್ಥ ಆಗೂದಿಲ್ಲಾ ಬಿಡು.. ದೊಡ್ಡವನಾಗು ಆಗ ಅರ್ಥ ಆಗುತ್ತೆ' ಎಂದಿದ್ದಳು. ನನಗೂ ಕಸಿವಿಸಿ. ಈ ಅಜ್ಜಿ ನೋಡಿದರೆ ನಾನು ಚಿಕ್ಕವನು ಎನ್ನುತ್ತಾಳೆ. ಆದರೆ ವರ್ಷದ ಹಿಂದೆ ಅಪ್ಪ ಅಮ್ಮ 'ಮಗೂ ನೀನು ದೊಡ್ಡವನು, ಇನ್ನು ಮೇಲೆ ಅಣ್ಣನ ಜೊತೆಗೆ ಮಲಗಬೇಕು ಆಯ್ತಾ..?' ಎಂದು ತಮ್ಮ ಕೋಣೆಯಿಂದ ಅಣ್ಣನ ಕೋಣೆಗೆ ವರ್ಗಾಯಿಸಿದ್ದು. ಅದೂ ಅಲ್ಲದೇ ನಾನು ನಾಲ್ಕನೇ ಕ್ಲಾಸಿನ ಹುಡುಗ, ಕಾಮನಬಿಲ್ಲಿನ ಬಗ್ಗೆ ಶಾಲೆಯಲ್ಲಿ ಪಾಠ ಕೇಳಿದವನು ಎಂಬ ಗರ್ವದಿಂದಲೇ ಹೇಳಿದ್ದೆ. 'ಸುಮ್ನಿರಜ್ಜಿ.. ನಮ್ಮೇಷ್ಟ್ರು ಹೇಳಿಲ್ವಾ.. ಕಾಮನಬಿಲ್ಲು ಮಳೆ ಬಿದ್ದಾಗ ಸೂರ್ಯನ ಕಿರಣ ವಕ್ರೀಭವನಕ್ಕೆ ಒಳಗಾಗಿ ಮೂಡ್ತದೆ..' ಮಾತಿನ ಮಧ್ಯೆಯೇ ಅಜ್ಜಿ ಅಂದಿದ್ದಳು. 'ಹಾಗಾದರೆ ಎಲ್ಲೋ ಮಳೆ ಬಿದ್ದಿರಬೇಕು..' ನನ್ನ ಮನಸ್ಸಿನ ತುಂಬಾ ಯೋಚನೆ. ಅಜ್ಜಿಯ ಮೊದಲಿನ ಮಾತನ್ನು ನಂಬಲೇ ಅಥವಾ ಈಗಿನ ಮಾತನ್ನೇ..? ಮೇಷ್ಟ್ರು ಮತ್ತು ವಿಜ್ಞಾನದ ಪಾಠ ಮನಸ್ಸಿಗೆ ಗಟ್ಟಿಯಾಗಿ, ಮಳೆ ಬಿದ್ದದ್ದಕ್ಕೆ ಕಾಮನಬಿಲ್ಲು ಕಟ್ಟಿದ್ದು ಎಂದು ಅಜ್ಜಿಯೂ ಒಪ್ಪಿಕೊಂಡಳಲ್ಲಾ.. ಎಂದು ಖಡಾಖಂಡಿತವಾಗಿಸಿಕೊಂಡೆ. ಆದರೆ ಮಳೆ ಬಿದ್ದದ್ದೆಲ್ಲಿ..!? ಎಲ್ಲೋ ಮಳೆಯಾದಲ್ಲಿ ಇಲ್ಲಿ ಕಾಮನಬಿಲ್ಲೇ..!? ಆಕಾಶದಲ್ಲೇ ಮಳೆಯಾಗಿ ಆ ವಕ್ರಿಭವನದಿಂದಲೇ ಕಾಮನಬಿಲ್ಲು ಮೂಡಿದ್ದಾದರೆ ಆ ಮಳೆಯ ಹನಿ ಭೂಮಿಗೇಕೆ ಬೀಳಲಿಲ್ಲ..!?

❖

ಮತ್ತೆ ನೆನಪಾಗುತ್ತಾನೆ ಮನೆ ಬಿಟ್ಟು ಹೋದ ಚಿಕ್ಕಪ್ಪ. ಅವನು ಓಡಿಹೋದ ಮೇಲೆ ಅಜ್ಜಿಗೆ ನನ್ನ ಅಪ್ಪನ ಮೇಲೆ ಕಾಳಜಿ ಬಂದಿದ್ದಂತೆ. ಅಜ್ಜ ಎರಡು ಪುಟ್ಟ ಗಂಡುಮಕ್ಕಳನ್ನು ಬಿಟ್ಟು ಸತ್ತು ಹೋದ ಮೇಲೆ ಕಂಡವರು ಅಂದಿದ್ದರಂತೆ. 'ಇನ್ನು ಸುಬ್ಬಿಗೆ ವೆಂಕಟು(ನನ್ನ ಚಿಕ್ಕಪ್ಪ)ನೇ ಗತಿ' ಎಂದು. ಅದಕ್ಕೇ ಅಜ್ಜಿ ಅವನನ್ನು ಕೋಳಿಮರಿ

ಸಾಕಿದ ಹಾಗೆ ಸಾಕಿದ್ದರಂತೆ. ಆದರೆ ಅವನು ಕೈಗೆ ದಕ್ಕಲಿಲ್ಲ. ಅಪ್ಪ ಇಗರ್ಜಿ ಶಾಲೆಯಲ್ಲಿ ನಾಲ್ಕನೇ ತರಗತಿ ಓದಿ ಯಾರೋ ಪುಣ್ಯಾತ್ಮರು ಸ್ಟೇಟ್ ಬ್ಯಾಂಕಿನಲ್ಲಿ ದಿನಗೂಲಿ ನಾಲ್ಕನೇ ದರ್ಜೆ ನೌಕರನನ್ನಾಗಿ ಸೇರಿಸಿದ್ದರು. ಆಗ ಆ ಕೆಲಸಕ್ಕೆ ಈಗಿನ ತರಹ ತರಹೇವಾರು ಜಾತಿ ಆಧಾರಿತ ರಿಸರ್ವೇಷನ್ ಅದೂ ಇದು ಇರಲಿಲ್ಲವೋ ಏನೋ, ಒಟ್ಟಿಗೆ ಜನಿವಾರ ಹಾಕಿಕೊಂಡ ಅಪ್ಪ ಬ್ಯಾಂಕಿನ ಪಾಯಿಖಾನೆಯಲ್ಲಿನ ಬಕೇಟಿಗೆ ನೀರು ಸುರಿಯುವಾಗ ಇವನ ಜೊತೆಗೆ ಓದಿ ಡಿಗ್ರಿ ಪಾಸು ಮಾಡಿದ ಗೋವಿಂದ ಹರಿಜನ ಮ್ಯಾನೇಜರ್ ಆಗಿ ಬಂದಿದ್ದ. ಶಿಕ್ಷಣವೊಂದೇ ಸಮಾನತೆಗೆ ದಾರಿ ಎಂಬ ವಿಷಯವನ್ನು ಅಪ್ಪ ಬ್ಯಾಂಕಿನ ಕಕ್ಕಸ್ಸಿನ ಬಕೇಟಿಗೆ ಒಂದೊಂದು ಬಕೇಟು ನೀರು ಸುರಿಯುವಾಗಲೂ, ಬ್ಯಾಂಕಿನ ಸಿಬ್ಬಂದಿ ಟೀ ಕುಡಿದ ಲೋಟ ಎತ್ತಿ ತೊಳೆಯುವಾಗಲೂ ತನ್ನ ಜನಿವಾರ ಮುಟ್ಟಿ ಮನದಟ್ಟು ಮಾಡಿಕೊಂಡ. ತನ್ನ ಇದ್ದೂ ಇಲ್ಲದ ಒಂದು ಕೈ ಮತ್ತು ನಲವತ್ತೈದು ಡಿಗ್ರಿ ತಿರುಗಿ ಸೊಟ್ಟವಾದ ಕಾಲಿನ ಜೊತೆಗೆ 'ಪಾಪದ ಮನುಷ್ಯ' ಎಂಬ ಜನರ ಅನುಕಂಪದ ಬಂಡವಾಳಕ್ಕೆ ತನ್ನ ಪರಿಶ್ರಮದಲ್ಲಿ ರಕ್ತವನ್ನೇ ಬೆವರಹನಿಗಳನ್ನಾಗಿಸಿ ತನ್ನ ಐದೂ ಮಕ್ಕಳನ್ನು ಪದವಿ ಓದಿಸಿ ಪದವಿಗೇರಿಸಿದ. ತಾನು ಹುಟ್ಟಿನಿಂದ ಇಲ್ಲಿಯವರೆಗೂ ಕಾಲಿಗೆ ಚಪ್ಪಲಿ ಧರಿಸಲಿಲ್ಲ. ಕಾರಣ ಚಪ್ಪಲಿ ಹೊಲಿಯುವವನಿಗೆ ನಮ್ಮಪ್ಪನ ವಕ್ರವಾಗಿ ತಿರುಗಿನಿಂತ ಒಂದೂವರೆ ಪಾದದ ಅಳತೆ ಸರಿಯಾಗಿ ಸಿಗಲಿಲ್ಲವೋ ಅಥವಾ ದೇವರು ದಿಂಡಿರು ಕಂದಾಚಾರಗಳನ್ನು ಮೀರಿನಿಂತ ಅಪ್ಪ ವಾಮನನಾಗಿ ಅವನ ಪಾದ ವಾಮನ ಪಾದವಾಗಿ ಅಳತೆಗೆ ನಿಲುಕದೇ ಹೋಯಿತೋ. ಒಟ್ಟಿಗೆ ನಮ್ಮ ಪ್ರಗತಿ ಪಥದ ಆ ಕಾಲದ ಜೀವನಚಕ್ರದಲ್ಲಿ ಅಪ್ಪ ನನ್ನ ಅಳತೆಗೂ ಸಿಕ್ಕಲೇ ಇಲ್ಲ. ಇದರ ನಡುವಿನ ತಮಾಷೆಯಾಗಿ ತೆಗೆದುಕೊಳ್ಳಬಹುದಾದ ವಿಷಯವೆಂದರೆ ನಮ್ಮಮ್ಮ ಉಳ್ಳವರ ಮನೆಯವಳು ಎಂಬುದು. ಮದುವೆಯಲ್ಲಿ ಬುಟ್ಟಿಗಟ್ಟಲೇ ಚಿನ್ನ ತಂದವಳಂತೆ. ಇಂತಹ ಮನೆತನದವಳು ಈ ಕುಂಟನ ಕೈ ಹಿಡಿದದ್ದು ಯಾಕೆ ಗೊತ್ತಾ..? ಅವಳದ್ದು ಜಾತಕದಲ್ಲಿ ಮೂಲನಕ್ಷತ್ರವಂತೆ. ಮೂಲ ನಕ್ಷತ್ರದ ಹುಡುಗಿಗೆ ಅತ್ತೆ ಮಾವ ಭಾವ ಮೈದುನ ಯಾರೂ ಇಲ್ಲದ ಮನೆ ಆಗ್ಬೇಕಂತೆ. ಅದಕ್ಕೇ ವೆಂಕಟ ಚಿಕ್ಕಪ್ಪ ಓಡಿಹೋದ ಮೇಲೆಯೇ, ಅಲ್ಲದೇ ಅವನು ಬದುಕಿರುವ ಯಾವ ಕುರುಹೂ ಸಿಕ್ಕದ ಮೇಲೆಯೇ ನಮ್ಮಜ್ಜಿ ಈ ಸಂಬಂಧಕ್ಕೆ ಒಪ್ಪಿದ್ದಂತೆ. ಆಗಲೂ ಯಾರೋ ಕೇಳಿದ್ದರು. 'ಸುಬ್ಬಕ್ಕಾ.. ನೀನು ಬದುಕಿದ್ಯಲ್ಲೇ?.. ಮೂಲನಕ್ಷತ್ರದ ಹುಡುಗಿ ಸೊಸೆಯಾಗಿ ಬಂದ್ರೆ ನಿನ್ನ ಗತಿ..?

ಅಜ್ಜಿಯೂ ಆತಂಕಕ್ಕೆ ಒಳಗಾಗಿದ್ದಳು. ಆದರೆ ಈ ಕುಂಟ ಮಗನಿಗೆ ಅನುಕೂಲಸ್ಥರ ಮನೆ ಹುಡುಗಿ ಸಿಕ್ತದಲ್ಲಾ.. ಅಲ್ಲದೇ ಈ ಮೂಲ ನಕ್ಷತ್ರದ ಹುಡುಗಿ ಬಿಟ್ಟರೆ ಇನ್ನು ಹೆಣ್ಣು ಕೊಡುವವರಾದರೂ ಯಾರು ಅನ್ನಿಸಿರಬೇಕು. ಆದರೂ ಚಾಕಚಕ್ಯತೆಯ ಬಿಂಗಿ ಸುಬ್ಬಕ್ಕ 'ಹಾಂಗೇನಿಲ್ಲ ಬಿಡಿ, ಮೂಲನಕ್ಷತ್ರದ ತೊಂದರೆ

ಗಂಡು ಸಂತಾನಕ್ಕೆ ಮಾತ್ರ. ಹುಡುಗನಿಗೆ ಅಣ್ಣ, ತಮ್ಮ, ಅಪ್ಪ ಇರದಿದ್ರೆ ಆಯ್ತು..' ಎಂದು ಪುರೋಹಿತರ, ಶಾಸ್ತ್ರಗಳ, ಜ್ಯೋತಿಷ್ಯಕ್ಕೇ ತನ್ನದೇ ಆದ ತಿದ್ದುಪಡಿ ಕೊಟ್ಟು ವ್ಯವಹಾರ ಕುದುರಿಸಿದ್ದಳು. ಇದಕ್ಕೆ ಸರಿಯಾಗಿ ಈ ಸಂಬಂಧ ಕುದುರಿಸಲು ಬರುವಾಗ ನಮ್ಮಮ್ಮನ ಮಗನಿಗೆ ಜೋಯಿಸರ ಮನೆಯ ತೋಡಿನಲ್ಲಿ ಸಿಪ್ಪೆ ಸಹಿತ ತೆಂಗಿನಕಾಯಿ (ನಮ್ಮಲ್ಲಿ ಶುಭವೆಂದು ತಿಳಿದದ್ದು) ಸಿಗಬೇಕೆ..! ಒಟ್ಟಿಗೆ ಮದುವೆಯಾಯಿತಂತೆ. ಇದೆಲ್ಲಾ ತಲೆಹರಟೆ ವಿಷಯ. ನಾನು ಬರೀ ಕೇಳಿ ತಿಳಿದದ್ದು. ಆದರೆ ನಮ್ಮ ಕುಟುಂಬದ ಪ್ರಗತಿ ಪಥದ ಮೈಲಿಕಲ್ಲುಗಳು.. ಎಂದು ನಾನು ದೃಢವಾಗಿ ನಂಬಿದ್ದೇನೆ.

❖

ಅಜ್ಜಿ ಹೇಳಿದ ಆ ಕುಲದೇವರು ಮತ್ತೆ ನಮ್ಮೂರಿಗೆ ಬಂದ ನೆನಪು ನನಗಿಲ್ಲ. ಆ ಕಾಲದಲ್ಲಿ ಒಮ್ಮೆ ಅರಳೀಕಟ್ಟೆ ಮೇಲೆ ಬಂದು ಕುಳಿತ ದೇವರು ಮತ್ತು ಪರಿವಾರದವರನ್ನು ಯಾವ ಮನೆಯವರೂ ಕರೆಯಲೇ ಇಲ್ಲವಂತೆ. ದೊಡ್ಡ ದೊಡ್ಡ ಹೆಂಚಿನ ಮನೆಗಳಿಗೆ ದೇವರು ಹೊತ್ತವರೇ ಹೋದರೂ ಅವರೂ ಕ್ಯಾರೇ ಅನ್ನಲಿಲ್ಲವಂತೆ. ಆಗ ಗಂಡನ ಕಳಕೊಂಡು ಮುಂಡೆಯಾದ ಅಜ್ಜಿ ನನ್ನಪ್ಪ ಕುಂಟನ ಜೊತೆಗೆ ಹೋಗಿ 'ನಮ್ಮನೆಗೆ ತನ್ನಿ ದೇವರನ್ನ.. ಏನೋ ಇದ್ದದ್ದು, ನಮ್ಮ ಕೈಲಾದದ್ದು ಕೊಡ್ತೇವೆ..' ಎಂದು ಬೇಡಿಕೊಂಡರೂ ಕೊಂಕಣಿಯಲ್ಲಿ 'ಈ ಮುದುಕಿ ಏನು ಕೊಟ್ಟಾಳು.. ಕರ್ಮ..' ಎಂದು ತಮ್ಮತಮ್ಮಲ್ಲೇ ಮಾತಾಡಿಕೊಂಡು 'ನಮ್ಮ ಗೋತ್ರದವರು ಈ ಊರಿನಲ್ಲೇ ಇಲ್ಲ.. ನಾಶವಾಗಿ ಹೋದರು..' ಎಂದು ಶಾಪ ಹಾಕಿ ಇನ್ನು ಮುಂದೆ ಈ ಊರಿಗೆ ಬರುವುದಿಲ್ಲ ಎಂಬ ನಿರ್ಧಾರ ತಳೆದು ಪಲ್ಲಕ್ಕಿ ಸಮೇತ ರಾತೋರಾತ್ರಿ ಹೋದರಂತೆ ಮನೆಗೆ ಕರೆದ ಅಜ್ಜಿಯೂ ಅದೇ ಗೋತ್ರದವಳು ಎಂಬುದನ್ನೇ ಮರೆತು. ಹತ್ತು ಜನಕ್ಕೆ ಊಟಹಾಕುವ ಯೋಗ್ಯತೆಯಿಲ್ಲದ, ಗಂಡ ಸತ್ತ, ಕುಂಟ ಮಗನ ತಾಯಿಯಾದ ಅಜ್ಜಿ ಬೇವಾರ್ಸಿಯಾಗಿ ಕುಲದೇವರು ತಂದವರಿಗೆ ಕಾಣಿಸಿರಬೇಕು. ಬೇವಾರ್ಸಿಗಳಿಗೆ ಕುಲವೆಲ್ಲಿಯದು.. ಗೋತ್ರವೆಲ್ಲಿಯದು..! ಆ ದಿನವೂ ಅದೇ ಇಗರ್ಜಿಗುಡ್ಡದ ಸಂದಿನಲ್ಲಿ ಕಾಮನಬಿಲ್ಲು ಕಟ್ಟಿತ್ತು ಎಂದು ಅಜ್ಜಿ ಹೇಳಿದ ನೆನಪು. ಅದು ಸತ್ಯವೋ ಸುಳ್ಳೊ.. ಯಾರಿಗೆ ಗೊತ್ತು. ಆದರೆ ಸತ್ಯ ಇರಬಹುದು ಎಂದು ನನ್ನ ಭಾವನೆ. ದೇವರೇ ಇವರನ್ನು ತುಚ್ಛೀಕರಿಸಿದ ಆ ದಿನದ ಆತ್ಮಹತ್ಯೆ ಮಾಡಿಕೊಳ್ಳಬಹುದಾದಷ್ಟರ ಮಟ್ಟಿನ ಮನಸ್ಥಿತಿಯನ್ನು ಬದಿಗೊತ್ತಿ ಬದುಕಿನ ಆಸೆ ಮತ್ತು ಭರವಸೆಯ ಬಣ್ಣ ಕಟ್ಟಿಕೊಟ್ಟದ್ದು ಇದೇ ಕಾಮನ ಬಿಲ್ಲು ಇರಬಹುದು ಅಲ್ಲವೇ..!

ಇದರ ಜೊತೆಗೆ ತನಗೆ ಬರುವ ಅಲ್ಪ ಸ್ವಲ್ಪ ಕೊಂಕಣಿ ಅಜ್ಜಿ ಮಾತಾಡಿದ ಕೊನೆಯ ಕೊಂಕಣಿ ಮಾತಂತೆ. ಆದರೆ 'ಮಾವ್‌ಶಿ' ಎಂಬ ಕೊಂಕಣಿ ಶಬ್ದ

ಮಾತ್ರ ಅವಳ ಕನ್ನಡದಿಂದ ಆಚೆ ಹೋಗಿರಲಿಲ್ಲ. ಅದೇ ಈ ತಲೆಮಾರಿನಲ್ಲೂ ತನ್ನ ಮೂಲ ಹುಡುಕುವ ನನ್ನಂತಹ ತಲೆಹರಟೆಗೆ ದಾರಿ ಮಾಡಿ ಕೊಟ್ಟದ್ದು. 'ದೇವರು ನಮ್ಮ ಮನೆಗೆ ಬರಲಿಲ್ಲಾ..!' ಅಜ್ಜಿಯ ಎದೆಯಿಂದ ಹೊರಹೊಮ್ಮುವ ವಿಷಾದದ ಉಸಿರಿಗೆ ಅಪ್ಪ ತಲೆ ಕೆಡಿಸಿಕೊಳ್ಳುವುದಿಲ್ಲ. ಅವನು ನಂಬಿಕೆಗಳಲ್ಲಿ ನಂಬಿಕೆ ಕಳಕೊಂಡವನು. ವಾಸ್ತವಕ್ಕೆ ಮರ್ಯಾದೆ ಕೊಟ್ಟೇ ನಮ್ಮನ್ನು ದುರ್ಭಿಕ್ಷದಿಂದ ಈಚೆ ತಂದವನು. ಈಗಲೂ ಅವನು ದೇವರೆನ್ನುವುದು ಬರೀ ದುಡಿಮೆಯನ್ನ, ಪ್ರಯತ್ನವನ್ನ ಮತ್ತು ಜ್ಞಾನವನ್ನ. ಕೈಯೆತ್ತಿ ಕೈ ಮುಗಿಯದ ಅವನನ್ನು ಕಂಡರೆ ಎಲ್ಲರಿಗೂ ಒಂಥರಾ.. ಅಮ್ಮನೂ ಆಗಾಗ ಸಿಡುಕುತ್ತಾಳೆ, 'ಕೈ ಮುಗಿಯಬಾರದೇ..?' ಎಂದು, ಕೈಜೋಡಿಸಿ ಮುಗಿಯುವುದಕ್ಕೆ ಅವನಿಗಿರುವ ಒಂದೇ ಒಂದು ತೊಂದರೆಯನ್ನೂ ಮರೆತು. ಅದೇನು ಗೊತ್ತೇ.. ಓದಿನ ಭರದಲ್ಲಿ ನೀವೂ ಮರೆತಿರಾ ಹೇಗೆ.. ನಮ್ಮಪ್ಪನಿಗೆ ಇರುವುದು ಒಂದೇ ಕೈ...!

❖

ಅಷ್ಟಕ್ಕೆ ಜಾತ್ಯಸ್ಥರು ಬಿಟ್ಟಾರೇ.. ಜಾತಿಗಿರುವ ನರಸಿಂಹಸ್ವಾಮಿ ದೇವಸ್ಥಾನದಲ್ಲಿ ಹತ್ತಾರು ವರ್ಷಗಳ ನಂತರ ಸಭೆ ಸೇರಿದರು. ಯಾರೋ ಹಿರಿಯರು ಹೇಳಿದ ಕುಲದೇವರ ಬಗ್ಗೆ ತಿಳಿದರು, ಚರ್ಚಿಸಿದರು. 'ಇನ್ನು ಮುಂದೆ ಇಂತಹ ಅನರ್ಥ ಸಲ್ಲ. ಇರುವ ಒಂದು ಕುಲದೇವರಿಗೆ ನಾವು ಬದುಕಿರುವವರೆಗೂ ಅವಮಾನವಾಗುವುದು ಬೇಡ. ಜಾತ್ಯಸ್ಥರು ಬದುಕಿರುವಾಗ, ಗೋತ್ರವೆಂಬುದು ನಮಗೆ ಇರುವಾಗ, ಜನಿವಾರದ ಹಬ್ಬದಂದು ಜನಿವಾರ ಬದಲಾಯಿಸುವ ಪದ್ಧತಿ ಇರುವಾಗ ನಾವು ಕುಲದೇವರಿಗೆ ಹೊರತಾಗುವುದು ಖಂಡಿತಾ ಸರಿಯಲ್ಲ' – ತೀರ್ಮಾನ. ತೀರ್ಮಾನದ ಮೂರ್ತರೂಪವಾಗಿ ದೇವಸ್ಥಾನದಲ್ಲಿ ಕಮಿಟಿಯೊಂದು ಅಸ್ತಿತ್ವಕ್ಕೆ ಬಂತು. ವಂತಿಗೆ, ದೇಣಿಗೆ ಅದೂ ಇದೂ ಅಂತ ಅನುಕೂಲಸ್ಥರಿಂದ ವಶೀಲಾತಿಯೂ ಆಯಿತು. ಈ ಕಮಿಟಿ ವಶೀಲಾತಿಯ ದುಡ್ಡಿನಲ್ಲೇ ಕಾರು ಮಾಡಿಕೊಂಡು ಗೋವಾಕ್ಕೆ ಹೋಗಿ ಕುಲದೇವರ ದೇವಸ್ಥಾನದಲ್ಲಿ ತಪ್ಪು ಕಾಣಿಕೆ ಕಟ್ಟಿ ತಪ್ಪೊಪ್ಪಿಗೆ ಸಲ್ಲಿಸಿದ್ದೂ ಆಯಿತು. ಮತ್ತೆ ದೇವರು ಬರಬೇಕು ಎಂಬ ಕೋರಿಕೆ ಸಲ್ಲಿಸಿದ್ದೂ ಆಯಿತು. ಜಾತಿಯ ಸಮಸ್ಥರ, ಪ್ರಮುಖರ ಒತ್ತಾಯ, ತಪ್ಪೊಪ್ಪಿಗೆ, ಅವರ ಆಸ್ತಿಕತನಕ್ಕೆ ಕುಲದೇವತೆ ಪ್ರಸನ್ನಳಾದಂತೆ ಅಲ್ಲಿನ ದೇವಸ್ಥಾನದ ಸಮಿತಿ ಒಪ್ಪಿಗೆ ಕೊಟ್ಟಿತು. ಮತ್ತೆ ದೇವರ ತಂದರು..! ಆದರೆ ಒಂದು ಸಣ್ಣ ಬದಲಾವಣೆ. ಇನ್ನು ಮುಂದೆ ಕುಲದೇವರು ಈ ಹಿಂದಿನ ತರಹ ಅರಳಿಕಟ್ಟೆಯ ಮೇಲೆ ಬಂದು ಕೂರುವುದಿಲ್ಲ. ಬದಲಾಗಿ ಗೋತ್ರದವರ ದೇವಸ್ಥಾನವಾದ ನರಸಿಂಹಸ್ವಾಮಿ ದೇವಸ್ಥಾನಕ್ಕೆ ವರ್ಷಕ್ಕೊಂದು ಬಾರಿ ಕರೆ ತರುವುದು. ಅಲ್ಲಿ ಜಾತ್ಯಸ್ಥರು ಆಡಳಿತ ಮಂಡಳಿ ನಿರ್ಧರಿಸಿದ ವಂತಿಗೆ ಕೊಟ್ಟು ಪೂಜೆ, ಪುನಸ್ಕಾರ, ಕಾಣಿಕೆ, ಅನ್ನಸಂತರ್ಪಣೆ ನಡೆಸುವುದು ಎಂದು ತೀರ್ಮಾನವಾಯಿತು.

ಈಗ ಅಜ್ಜಿ ಹಣ್ಣುಹಣ್ಣು ಮುದುಕಿ. ನಾಸ್ತಿಕನಂತಿರುವ ಅಪ್ಪನ ಹತ್ತಿರ ಜಗಳವಾಡಿ ಜಾತಿವ್ಯವಸ್ಥೆಗೆ, ಸಮಾಜಕ್ಕೆ ಬೆಲೆಕೊಡುವಂತೆ ಒತ್ತಾಯಿಸಿ ಅಪ್ಪನಿಂದ ಐದು ರೂಪಾಯಿ ಪಡೆದು ಅಕ್ಕಿ ಕಾಯಿಯೊಂದಿಗೆ ವಂತಿಗೆ ಕೊಡಲು ಕಾದು ನಿಂತಳು. ಆದರೆ ದೇವರನ್ನು ತಂದ ದೇವಸ್ಥಾನದ ಸಮಿತಿಯವರು ನಮ್ಮ ಮನೆಗೆ ಬರಲಿಲ್ಲ. 'ನೆಕ್ಕಲು ಗತಿಯಿಲ್ಲದವನು. ಬರೀ ಕೊಬ್ಬು.. ಜನಿವಾರ ಹಾಕಿಕೊಂಡು ಬ್ಯಾಂಕಿನಲ್ಲಿ ಕಕ್ಕಸು ತೊಳೀತಾನೆ. ಅವನಿಗೆಲ್ಲಿಯ ಜಾತಿ.. ಗೋತ್ರ..!?' ಎಂದರಂತೆ, ಅದರ ಮೇಲಿನ ಧೂಳು ಹಗುರಾದ ನಮ್ಮ ಅಪ್ಪನ ವ್ಯಕ್ತಿತ್ವವಾಗಿ ನಮ್ಮ ಕುಟುಂಬದ ಮರ್ಯಾದೆಯಾಗಿ ಗಾಳಿಯಲ್ಲಿ ತೂರಿತ್ತು. ಈ ಬಾರಿಯೂ ಕುಲದೇವರು ನಮ್ಮ ಮನೆಗೆ ಬರಲಿಲ್ಲ.

❖

'ಅಪ್ಪಾ.. ಯಾರೋ ಬಂದಿದ್ದಾರೆ..!' ನನ್ನ ಮಗ ಹೇಳಿದಾಗ ಸೊಂಟದಿಂದ ಸಡಿಲವಾದ ಪಂಚೆಯನ್ನು ಸರಿಪಡಿಸಿಕೊಳ್ಳುತ್ತಲೇ ಮುಂಬಾಗಿಲಿಗೆ ಹೋದೆ. ಏನಾಶ್ಚರ್ಯ..! ಊರಿನ ನಮ್ಮ ಹುಡುಗರು. 'ಬನ್ನಿ.. ಬನ್ನಿ..' ಒಳಗೆ ಕರೆದೆ. ಮನಸ್ಸಿನಲ್ಲಿ ಅತೀವ ಆನಂದ. ಸುಮಾರು ಇಪ್ಪತ್ತೈದು ವರ್ಷದಿಂದ ಕಾಣದಿದ್ದ ಅಪರೂಪದ ಮುಖಗಳು. ಒಟ್ಟಿಗೆ ಈಗಲಾದರು ನನ್ನನ್ನು ಗುರುತಿಸಿದರಲ್ಲಾ..!' ಅಂತೂ ಒಳ್ಳೇ ಸಾಧನೆ ಮಾಡಿದ್ದೀರಿ ಅಣ್ಣಾ..' ಒಬ್ಬ ಹುಡುಗ ಆರಂಭಿಸಿದ. 'ಈ ಬೆಂಗಳೂರಿನಲ್ಲಿ ಕಾರ್ಪೋರೇಟರ್ ಆಗಿದ್ದೀರಿ..' ಇನ್ನೊಬ್ಬನೆಂದ. ಅದೂ ಇದೂ ಅಂತ ಮಾತನಾಡುತ್ತಿರುವಾಗಲೇ ನನ್ನ ಹೆಂಡತಿ ಗ್ಲಾಸಿನಲ್ಲಿ ಜ್ಯೂಸ್ ತಂದಿಟ್ಟಳು. ಜ್ಯೂಸ್ ಕುಡಿದು ಮುಗಿಯುತ್ತಲೇ 'ಈಗ ನೀವು ಬಂದದ್ದು..?' ಎಂದು ಕೇಳಿದೆ. 'ಏನಿಲ್ಲಾ.. ಈಗ ನಾವೆಲ್ಲಾ ಬೆಂಗಳೂರಿನಲ್ಲೇ ಇದ್ದೇವೆ.. ಇಲ್ಲಿ ಒಂದು ನರಸಿಂಹಸ್ವಾಮಿ ದೇವಸ್ಥಾನವನ್ನೂ ಕಟ್ಟಿಸಿದ್ದೇವೆ.. ಹಾಗೇ ಜಾತಿ ಸಂಘ ಕೂಡಾ ಮಾಡಿದ್ದೇವೆ. ಅದಕ್ಕೆ ನಿಮ್ಮದೂ ಒಂದು ಮೆಂಬರ್‌ಷಿಪ್ ಬೇಕು. ಮೆಂಬರ್ ಏನು.. ನೀವೇ ಮಾರ್ಗದರ್ಶನ ಮಾಡಬೇಕು ಕೂಡಾ..' ಅವನ ಮಾತು ಮುಗಿಸಿರಲಿಲ್ಲ.

'ಎಂಥಾ ಜಾತಿ.. ಅದು.. ಇದು.. ಈ ಇಪ್ಪತ್ತನೇ ಶತಮಾನದಲ್ಲಿ. ನಾನು ಈ ಜಾತಿ ನಂಬಿ ಕಾರ್ಪೋರೇಟರ್ ಆದವನಲ್ಲ. ಜನಸೇವೆ ಮಾಡಿದೆ. ಓಟು ಕೊಟ್ಟರು. ಈ ಜಾತಿ ರಾಜಕೀಯ ಮಾಡುವುದಾದರೆ ನನಗೆ ಸರಿಯಾಗಿ ಎರಡು ಓಟು ಬರ್ತಿರಲಿಲ್ಲ ಗೊತ್ತಾ..?' ಮಾತು ಮುಗಿಸಿರಲಿಲ್ಲ. 'ಅದು ಹಾಗಲ್ಲಾ ಅಣ್ಣಾ, ಇದರ ಜೊತೆಗೆ ನಮ್ಮ ಜಾತಿ ಸಂಘ ಆಗಿ ಎಲ್ಲಾ ಜಾತ್ಯಸ್ಥರ ಓಟೂ ಸಿಕ್ಕಿದರೆ ನೀವು ಎಮ್ಮೆಲ್ಲೆ ಗ್ಯಾರಂಟಿ. ನಮ್ಮ ಜಾತಿಗೊಬ್ಬ ಎಮ್ಮೆಲ್ಲೆ ಸಿಕ್ಕಿದಂತೆ ಆಗ್ತದೆ. ಅಷ್ಟಕ್ಕೂ ಈ ಜನ ನಿಮ್ಮನ್ನ ಕಾರ್ಪೋರೇಟರ್ ಮಾಡಿದ್ದಾರೆ ಅಂತ ಹೆಮ್ಮೆ ಪಟ್ಕೋತಿದ್ದೀರಾ.. ನಿಮ್ಮ ಎಬಿಲಿಟಿ ಎಂಥದ್ದು ಗೊತ್ತಾ ಅಣ್ಣಾ.. ನಿಜ ಹೇಳ್ಬೇಕು ಅಂದ್ರೆ ನೀವು ಮಿನಿಷ್ಟ್ರು

ಕ್ಯಾಂಡಿಡೇಟ್ ಗೊತ್ತಾ.. ಇನ್ನೂ ಒಂದು ವಿಷಯ, ಈ ಜಾತಿ ಅದೂ ಇದೂ ಬಣ್ಣ ಕಳ್ಕೊಂಡಿದೆ ಅಂತ ಮಾತ್ರ ಹೇಳ್ಬೇಡಿ. ಇತ್ತೀಚೆಗೆ ಜಾತಿ ಮತ್ತೆ ಮಹತ್ವ ಪಡ್ಕೋತಿದೆ ಗೊತ್ತಾ. ಈಗ ವಿಧಾನಸೌಧ ನಡ್ಯೋದು ಜಾತಿ ಮೇಲಲ್ವಾ..?' ಅವರ ಮಾತು ಸಾಗಿತ್ತು. ನಾನು ಅವರ ಜೊತೆಗೆ ಜಾಸ್ತಿ ಮಾತಿಗಿಳಿಯಲಿಲ್ಲ. ಸುಮ್ಮನೇ ವ್ಯರ್ಥ ವಾದ ಯಾಕೆ? ಎರಡು ಸಾವಿರ ವಂತಿಗೆ ಕೊಟ್ಟೆ. ಆದರೆ 'ಮೆಂಬರ್‌ಷಿಪ್ ಬೇಡ. ನನಗೆ ಜಾತಿಯಿಂದ ಗುರುತಿಸಿಕೊಳ್ಳಲು ಇಷ್ಟ ಇಲ್ಲ' ಎಂದೆ. 'ನೀವೇ ಹೀಗಂದರೆ ಹೇಗೆ..? ನೀವು ನಮ್ಮ ಜಾತಿಯವರು..' ಅವನ ಮಾತು ಮುಗಿದಿರಲಿಲ್ಲ.

'ಅಲ್ಲಾ ಮಾರಾಯ. ನನ್ನ ಹೆಂಡತಿ ಬೇರೆ ಜಾತಿಯವಳು. ನಮ್ಮದು ಇಂಟರ್‌ಕ್ಯಾಸ್ಟ್..'

'ಅದಕ್ಕೇನಂತೆ.. ನಿನ್ನ ಜಾತಿಯೇ ಅವರಿಗೂ ಬರ್‍ತದಪ್ಪಾ.. ಅಣ್ಣಾ.. ಅದೆಲ್ಲಾ ಈಗ ಬೇಡ.. ಮುಂದಿನ ಶನಿವಾರ ದೇವಸ್ಥಾನದ ಉದ್ಘಾಟನೆ. ಅಲ್ಲದೇ ಗೋವಾದಿಂದ ಕುಲದೇವರನ್ನ ಕರೆಸ್ತಿದ್ದೇವೆ. ಹಾಗೆ ತಗೊಳ್ಳಿ ಇದು ಕುಲದೇವರ ಫೋಟೋ. ನಮ್ಮ ಜಾತಿಯ ಎಲ್ಲಾ ಮನೆಯಲ್ಲೂ ಇರಬೇಕು ಅಂತಾ ಎಲ್ಲರಿಗೂ ಕೊಡ್ತಿದ್ದೇವೆ. ಫ್ರೇಮ್ ಹಾಕಿ ಎದುರಿಗೇ ಕಾಣುವಂತೆ ಹಾಕಿ. ಹಾಗೆ ಬರುವುದನ್ನು ಮರೆಯಬೇಡಿ. ನಿಮ್ಮಂತಹ ಸಮಾಜದಲ್ಲಿ ಮುಂದಿನ ಸಾಲಿನಲ್ಲಿರುವವರೆ ಬರದಿದ್ದರೆ ಹೇಗೆ..? ಖಂಡಿತಾ ಬರಲೇ ಬೇಕು ಅಣ್ಣಾ..' ಎಂದು ಒತ್ತಾಯಿಸಿ ಕುಲದೇವರ ಫೋಟೋ ಕೊಟ್ಟರು.

ಫ್ರೇಮ್ ಹಾಕಿ ಎಲ್ಲಿಡಲಿ..? ಎಂದು ದೇವರ ತಂದವರು ಕೊಟ್ಟ ಕುಲದೇವರ ಫೋಟೋ ಹಿಡಿದು ಎದುರುಗಡೆಯ ಗೋಡೆಯಲ್ಲಿ ಜಾಗ ಹುಡುಕಿದರೆ ಅಜ್ಜಿ ಮತ್ತು ಅಪ್ಪ ತಮ್ಮ ಫೋಟೋದ ನಡುವೆ ಜಾಗ ಕೊಡಲೇ ಇಲ್ಲ. ಮನೆಯ ಹೊರಗಡೆ ಬಂದೆ. ಆಗಷ್ಟೇ ಸಣ್ಣಗೆ ಮಳೆ ಬಂದು ನಿಂತಿತ್ತು. ಮಧ್ಯಾಹ್ನವಾದ್ದರಿಂದ ಸೂರ್ಯ ಆಕಾಶದ ನಡುವಿನಲ್ಲಿದ್ದ. ಕಾಮನಬಿಲ್ಲೇನಾದರೂ ಕಂಡೀತೆ..? ಎಂದು ದಿಗಂತ ಕಂಡೆ. ಅಲ್ಲಿ ಗುಡ್ಡದಿಂದ ಗುಡ್ಡಕ್ಕೆ ಕಾಮನಬಿಲ್ಲಿನ ಆ ತೋರಣ ಇರಲಿಲ್ಲ. ಅನುಮಾನ ಬಂದು ಸೂರ್ಯನ ಕಡೆ ಕಣ್ಣು ಹಾಯಿಸಿದೆ. ಆಶ್ಚರ್ಯ..! ಕಾಮನಬಿಲ್ಲು ಸೂರ್ಯನಿಗೆ ವರ್ತುಲವಾಗಿ ಕಟ್ಟಿತ್ತು.

❖

(ಕನ್ನಡಪ್ರಭ – ಜನವರಿ 15, 2012)

൨൦൧൮

ತೇಲದ ಗಂಡು ಮುಳುಗದ ಬೆಂಡು

ಅಮರೇಶ ನುಗಡೋಣಿ

೧

ಕಾಲಲಿ ಕಟ್ಟಿದ ಗುಂಡು, ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು, ಮುಳುಗಲೀಯದು ಬೆಂಡು
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ ಕಾಯೋ
ಕಾಲಾಂತಕನೆ, ಕೂಡಲಸಂಗಮದೇವ

– ಬಸವಣ್ಣ

ಮಾದೇವಿಗೆ ಎಚ್ಚರಾಗಿತ್ತು. ಸುಮ್ಮನೆ ಮಲಗಿದ್ದಳು! ನಿನ್ನೆ ರಾತ್ರಿ ಮಲಗುವಾಗ ದೀಗಿ ದೊಡ್ಡದು ಮಾಡಿ, ಕೋಣ್ಯಾಗಿನ ಹಾಸಿಗ್ಯಾಗ ಅಡ್ಡಾದಾಗ ಯಾಕೋ ನಿರುಮ್ಮಳ ಅನ್ನಿಸಲಿಲ್ಲ. ಪಡಸಾಲ್ಯಾಗ ಮಲಗಿದ್ದ ಹೆತ್ತವ್ವನ ತಮ್ಮ ಕಲ್ಲಯ್ಯ ಗಿರ್ದತಾಸು ಮಾತಾಡಿದ್ದನೋ ನಿದ್ದೆಗೆ ಸೇರಿಬಿಟ್ಟಿದ್ದ. ಅದರಾಗ ತಪತಪಾಂತ ಒಂದೇ ಸಮ ಸುರಿತಿದ್ದ ಮಳೆಸದ್ದಿಗೆ ಈಕೆಯ ಮಾತು ಆತನಿಗೆ, ಆತನ ಮಾತು ಈಕೆಗೆ ಸರಿಯಾಗಿ ಕೇಳ್ತಿದ್ದಿಲ್ಲ. ಮಾದೇವಿಗೆ ನಿದ್ದೆ ಒತ್ತಿ ಬಂದಿದ್ದರೂ ಕಣ್ಣು ಮುಚ್ಚಿದ್ರೆ ಸಾಕು ಮೈ ಜುಂ ಅಂದು ದಿಗ್ಗನೆ ಎಚ್ಚರಾಗುತ್ತಿತ್ತು. ಮಗ್ಳು ಸಂಗವ್ವ–ಅಳಿಯ ಶಂಕ್ರ ಕೊನೆಗೂ ದುಡಿಯಲು ಪುಣೆಗೆ ಹೋದದ್ದು ಮಾದೇವಿಗೆ ಸಂಕಟ ತಂದಿತ್ತು. 'ನಿಮ್ಮ ಹೊಲ–ಮನಿ ಸಾವಾಸ ನನ್ಗ ಬ್ಯಾಡ. ಬೇಕಿದ್ರ ಹೇಣ್ತಿನ್ನ ಕಳಸ್ರಿ. ಇಲ್ಲಂದ್ರ ಇಲ್ಲಿ ಇಟಗಳ್ರಿ' ಅಂತ ನಿಂತ ಕಾಲಮ್ಯಾಲೆ ಹೇಳಿದ್ದ. 'ಅವ್ವ, ನೀನೂ ಬಂದುಬುಡು. ಈ ಮನ್ಯಾಗ ಏನೈತಂತ ಇರ್ತಿದ್ದಿ?' ಅಂತ ಹೇಳಿ ಗಂಡನ ಜತೆ ಹೊಂಟೇಬಿಟ್ಟಳು. ಮಾದೇವಿಯ ಜೀವ ಹೊರ ಹೋಗಿ ಒಳ ಬಂದಂಗಾಗಿತ್ತು! ಇಂಥ ದೆವ್ವದಂತ ಮನ್ಯಾಗ ಕಲ್ಲಯ್ಯಮಾವ ಜತೆಗಿದ್ದನಂತ ಮಾದೇವಿ ಉಳಕಂಡಿದ್ದಳು. ಕಲ್ಲಯ್ಯ ಸುರುವಿನಿಂದ ಮಾದೇವಿಯ ಈ ಮನೆಗೆ ಬರ್ತಿದ್ದ, ಹೋಗ್ತಿದ್ದ. ಮಾದೇವಿನ್ನ ಮಗಳಂತ ತಿಳಿದಿದ್ದ. ಮಾದೇವಿಗೂ ಕಲ್ಲಯ್ಯ ಮಾವಂದ್ರ ಹೆತ್ತಪ್ಪನೇ ಆಗಿದ್ದ. ಮಾದೇವಿಗೆ ಎಚ್ಚರಿತ್ತಲ್ಲ.. ಆದ್ರೆ ಕೋಣ್ಯಾಗ ಗೌವ್ವೆನ್ನುವ ಕತ್ಲ ತುಂಬಿತ್ತು. ರಾತ್ರಿ ಮಲಗುವಾಗ ಹೆಂಗಿತ್ತೋ ಈಗೂ ಹಂಗೇ ಇತ್ತು. ನಾಕೈದು ದಿನದಿಂದ ಮಳೆ ತಪತಪಾಂತ ಸುರಿತಿತ್ತು. ಅದರ ಸಪ್ಪಳ ಮಾದೇವಿಯ ಮೈಮನ ಸೇರಿಹೋಗಿತ್ತು..

ಪಡಸಾಲಿಯಲ್ಲಿ ಕಲ್ಲಯ್ಯಮಾವ ಯಾರ ಜತೆಗೋ ಮಾತಾಡುವುದು ಕೇಳಿಸಿತು. ಗದ್ದಲವೂ ಜಾಸ್ತಿಯಿತ್ತು. ನೆರೆಗಂಜಿ ಬಂದು ಹೋಗುತ್ತಿದ್ದ ಸಂಸಾರಗಳ ಸಂತೆಯಂಥ ಗದ್ದಲ ನಿನ್ನೆಯಿಂದ ನಡದಿತ್ತು. ಮಾದೇವಿ ಎದ್ದು ಕೋಣೆಯಿಂದ ಪಡಸಾಲಿಗೆ ಬಂದಳು. ನೆರಳಿನಂಥ ಕತ್ತಲು ತುಂಬಿತ್ತು. ಗಂಟು ಮೂಟೆಗಳು ರಾಶಿರಾಶಿಯಾಗಿ ಕುಂತಿದ್ದು ಮೆಲ್ಲಗೆ ಕಂಡವು. ಗಂಡಸರು ಬೀಡಿ ಸೇದುತ್ತ ಕೆಲವರು ಕುಂತಿದ್ದರು. ಕೆಲವರು ನಿಂತಿದ್ದರು. ಹೆಂಗಸರು ತಮ್ತಮ್ಮ ಕೂಸುಕುನ್ನಿಗಳ ಜತೆ ಗಂಟುಗದಡಿಗಳ ನಡುಕ ಕುಂತದ್ದು ಕಂಡಿತು. ಎಲ್ಲರೂ ತೊಯ್ದು ಹೋಗಿದ್ದರು. ಮಾದೇವಿ ಮೆಲ್ಲಕ ಪಡಸಾಲಿ ಕೆಳಗ ನೋಡಿದಳು. ತಲಬಾಗಿಲನಲ್ಲಿ ಆಡು, ಕುರಿ, ನಾಯಿಗಳು ತೊಯ್ದು ಮುದುಡಿ ಮಲಗಿದ್ದವು. ಬಾಗಿಲ ಆಚೆ ಮಳೆ ಸಪ್ಪಳ. ಕಲ್ಲಯ್ಯ ಮಾವ ಕಾಣಲಿಲ್ಲ.

"ಕಲ್ಲಯ್ಯ ಮಾವ.." ಮಾದೇವಿ ಜೋರು ಗಟ್ಟಿಯಾಗಿ ಕರೆದಳು. ಪಡಸಾಲಿಯಲ್ಲಿದ್ದವರೆಲ್ಲ ದಿಗ್ಗನೆದ್ದು ಕೂಗು ಬಂದ ಕಡೆ ನೋಡಿದರು. ನಾಯಿ ಬೊಗಳಿದವು. ಕೋಳಿಗಳೂ ಎದ್ದು ರೆಕ್ಕೆ ಬೀಸಿ ಪಟಪಟ ಮಾಡುತ್ತ 'ಕೊಕ್ಕೋಕ್ಕೋ..' ಅಂತ ವಟಗುಟ್ಟಿದವು.

"ಮಾದೇವಿ, ಇಲ್ಲಿದ್ದೀನಿ ತಡಿ ಬಂದೆ" ಎಂದ ಕಲ್ಲಯ್ಯ ಪಡಸಾಲೆಯ ಎಡಗಡೆ ಕೋಣೆಯಿಂದ ಮೆಲ್ಲಗೆ ಹೊರಬಂದ ಗಂಟು ಮೂಟೆಗಳನ್ನು ದಾಟುತ್ತ.

"ನೀನು ಮಕ್ಕಂಡಿದ್ದಿ. ಮತ್ಯಾಕ ಎಬ್ಬಿಸಲಿ ಅಂತ ಸುಮ್ಮನಾಗಿದ್ದೆ" ಅಂದು "ಹಗ್ಗದ ಪೆಂಡೆಗಳನ್ನ ಕೋಣ್ಯಾಗಿನ ಬೋದಿಗೆಗೆ ಸಿಗಾಕುತ್ತಿದ್ದೆ. ಯಾಕಂದ್ರ ಹೊಳೆ ನೀರು ನಮ್ಮ ಮನೆಮುಂದಿನ ಬೇವಿನ ಮರಕ್ಕೆ ಬಂದು ನಿಂತಾವ ನೋಡು!" ಅಂದ ಗಾಬರಿಯಿಂದ. "ಹೌದೌದು! ಮಳೆ ಹೊರಪಾಗಿಲ್ಲ. ಹೊಳೆ ಹೆಂಗ ಇಳದೀತು!" ಅಂದಳು. "ಹೊಳೆ ಸಾಲಿನ ಊರು, ಹಟ್ಟಿ, ದೊಡ್ಡಿಗಳು ನೀರಿನ್ಯಾಗ ತೇಲ್ಯಾವಂತ. ಮಂದಿ ಸಂಸಾರ ಹೊತಗಂಡು ಹೊಳೆ ಸರಹದ್ದು ಬುಟ್ಟು ದೂರ ನಡದಾರ. ನೆರೆಗಂಜಿ ನಿನ್ನೇ ಮೊನ್ನೆಯಿಂದ ಜನ್ರು ಸಾಲಿಡಿದೇ ಹೊಂಟಾರ. ಇವತ್ತೂ ಇವರೆಲ್ಲ ಹೊಂಟಾರ ನೋಡು." ಅಂತ ಹೇಳುತ್ತ ಮಾದೇವಿ ಮುಖ ನೋಡಿದ. 'ನಾವೂ ಹೋಗಮು' ಅಂತ ಹೇಳಾಕ ಅಂಜಿದ ಅಷ್ಟೆ.

"ಯಕ್ಕ, ನಾನಕ್ಕ ಚಿಕ್ಕಟ್ಟಿ ರಂಗಮ್ಮ" ಅಂತ ಒಬ್ಬ ಹೆಂಗಸು ಎದ್ದು ಬಂದು ಮಾದೇವಿ ಕೈ ಹಿಡಕಂಡಳು. ತವರು ಮನೆ ಕಡೆಯಿಂದ ನಂಟು ಹತ್ತುವ ರಂಗಮ್ಮನನ್ನು ಗೊತ್ತಿಡಿದು "ಅಯ್ಯಯ್ಯ ಯಕ್ಕ, ಇದೇನ್ಕತೆ ಅಂತೀನಿ" ಅಂತ ಮಾದೇವಿ ಗಾಬರಿಯಾದಳು.

"ಹೊಳೆ ಸಾಲಿನ ಊರು ಹಟ್ಟಿ ದೊಡ್ಡಿಗಳೆಲ್ಲ ನೀರಿನ ಸೆಳವಿಗೆ ಕೊಚ್ಚಿಕೊಂಡು ಹೋದವಮ್ಮ. ಏಸೋ ಮನೆ ಕುಸುದವು. ಗುಡಿಸಲು ನೀರಿಗೇ ಹೋದವು. ದನಕರ,

ಕುರಿ, ಆಡು ಹರಕಂಡು ಹೋದವು. ಉಳದವುಗಳನ್ನು ಹೊಡಕಂಡು ಬಂದೀವಿ. ಸರ್ಕಾರ್ದೋರು ಊರು ಖಾಲಿ ಮಾಡ್ರಿ ಅಂತ ಬೆನ್ನತ್ತಿದ್ರು. ಹಳ್ಳಿ ಕ್ರಾಸಿನಲ್ಲಿ ಗಂಜಿ ಕೇಂದ್ರ ತೆಗದಾರಂತ. ಅಲ್ಲಿಗೆ ಹೊಂಟಿದ್ವಿ. ನಾವು ಉಳದದ್ದೇ ಹೆಚ್ಚು" ಅಂದ ರಂಗವ್ವನ ಗಂಡ. ಗಂಡ-ಹೆಂಡತಿ, ಮಕ್ಕಳು ಮೊಮ್ಮಕ್ಕಳು ಎಲ್ಲರೂ ಸಂಸಾರ ಹೊತ್ತು ಬಂದು ಸುಸ್ತಾಗಿದ್ದರು. ನಾಕೈದು ದಿನದಿಂದ ಶುರುವಾದ ಮಳೆ ಮೊನ್ನೆ ನಿನ್ನೆಗೆಲ್ಲ ತಾರಕಕ್ಕೇರಿತ್ತು. ಅರ್ಧ ಹರದಾರಿ ದೂರದಲ್ಲಿದ್ದ ಹೊಳೆ, ಸುರಿವ ಮಳೆಗೆ ತುಂಬಿ ಹೊರಹರಿದು ಮಾದೇವಿಯ ದೊಡ್ಡ ಕಲ್ಲಿನಮನೆ ಮುಂದಿದ್ದ ಬೇವಿನಮರಕ್ಕೆ ಬಂದು ನಿಂತಿತ್ತು. ಅದಕಂಡೇ ಕಲ್ಲಯ್ಯನ ಎದೆ ಒಡದಿತ್ತು. ತವರಮನೆಗೆ ಮಾದೇವಿಯನ್ನು ಕರ್ಕಂಡು ಹೋಗಲು ಗಡಬಡಿಸಿದ್ದರೂ ಹೋಗುವುದಕ್ಕೆ ಸಾಧ್ಯವಿರಲಿಲ್ಲ. ಇಲ್ಲಿ ತಾನೇ ಹೊಸೆದಿದ್ದ ಹಗ್ಗದ ಪೆಂಡೆಗಳಿದ್ದವು. ಕಾಳುಕಡಿ ತುಂಬಿದ ಚೀಲಗಳಿದ್ದವು. ಮಳೆ ನಿಂತಿಲ್ಲ. ಊರಲ್ಲಿದ್ದ ಮಗನಿಗೆ ಬಂಡಿ ಕಟ್ಟಿಕೊಂಡು ಬರಲು ಹೇಳಬೇಕೆಂದರೂ ತಾನೇ ಹೋಗಬೇಕು. ತಾನು ಹೋದರೆ ಇಲ್ಲಿ ಮಾದೇವಿ ಗತಿಯೇನು ಎಂಬ ಚಿಂತೆ. ಹೋದರೆ ಮರಳಿ ಬಂದೇನೆಂಬುದು ಖಾತ್ರಿ ಇರಲಿಲ್ಲ ಈ ಮಳೆಯಿಂದ. ಕಲ್ಲಯ್ಯನ ಸಂಕಟ ಮಾದೇವಿಗೆ ಗೊತ್ತಿದ್ದರೂ ತನಗೆ ಮಾತ್ರ ಮಗಳ ಚಿಂತೆ ಬಡಿದಿತ್ತು. ಪುಣೆಗೆ ಹೋದ ಮಗಳು-ಅಳಿಯನ ಸುದ್ದಿ ತಿಳಕೊಳ್ಳುವುದೇ ಮಾದೇವಿಯ ವಾರದ ಕತೆಯಾಗಿತ್ತು. ಅದರಾಗ ಸಂಗವ್ವನ ಸೆರಗು ನಿಂತಾದೆಂಬೋ ಸುದ್ದಿ ಬರುವುದಿತ್ತು. ಖಾತ್ರಿ ಮಾಡಿಕೊಂಡು ಹೇಳ್ತೀನಿ ಅಂತ ಹೇಳಿದ್ದ ಅಳಿಯನ ಸುದ್ದಿಗಾಗಿ ತುದಿಗಾಲಿನ ಮ್ಯಾಲೆ ನಿಂತು ಕಾಯ್ತಿದ್ದಳು. ಹಟ್ಟಿಯಿಂದ ಹಳ್ಳಿಕ್ರಾಸ್‌ಗೆ ಸಾಲಿಗೆಂದು ಹೋಗಿ ಬರುವ ಹುಡುಗ ಮಾಲಿಂಗನೇ ಸುದ್ದಿ ತರ್ತಿದ್ದ. ವಾರದಿಂದ ಮಾಲಿಂಗ ಕಲ್ಲಿನಮನೆ ಕಡೆ ಬಂದಿರಲಿಲ್ಲ. ಅದರಾಗ ಈಗ ಮಳೆ ಹತ್ತಿಕೊಂಡು ನಿಲ್ಲದಂಗ ಸುರಿತಿತ್ತು. ಇದೇ ಸಂಕಟದಾಗ ಮುಳುಗಿದ್ದ ಮಾದೇವಿ ಕೋಣಿ ಹೊಕ್ಕು ಮಲಗಿದ್ದಳು.

ಆದ್ರೂ ಕೆಳಗಡೆ ಊರು ಹಟ್ಟಿ ದೊಡ್ಡಿಗಳ ಮಂದಿ ನೆರೆ ಹಾವಳಿಗಂಜಿ ಬದುಕನ್ನೇ ಹೊತ್ತು ಗಂಜಿ ಕೇಂದ್ರದ ಕಡೆಗೆ ಮೊನ್ನೆಯಿಂದನೇ ಹೊಂಟದ್ದನ್ನು ಮಾದೇವಿ ನೋಡುತ್ತಿದ್ದಳು. ಹೋಗುವಾಗ ದಾರಿಯಲ್ಲಿದ್ದ ಮಾದೇವಿಯ ಕಲ್ಲಿನ ದೊಡ್ಡಮನೆ ದಿನ್ನೆಮ್ಯಾಲಿದ್ದದ್ದು ಕಂಡು ದಮ್ಮು ಆರಿಸಿಕೊಂಡು ಹೋಗಲು ಬಂದು ತಂಗುತ್ತಿದ್ದರು. ಬಂದು ತಂಗಿದವರ್‍ಯಾರಿಗೂ ಈ ಕಲ್ಲಿನ ಮನೆಯೂ ಇಂಥ ಮಳೆಗೆ ತಮ್ಮನ್ನು ಜತನ ಮಾಡಂಗಿಲ್ಲವೆಂದು ತಿಳಿದು ಠಾಸತ್ತಿದ್ದು ತಮ್ಮ ಬದುಕನ್ನು ಹೊತ್ತು ಮುಂದೆ ಹೋಗಿ ಬಿಡುತ್ತಿದ್ದರು. ಹೊಳೆ ಸಾಲಿನ ಊರುಕೇರಿಗಳು, ಹಟ್ಟಿದೊಡ್ಡಿಗಳು ನೀರಿಗೆ ಮುಳುಗಿದವೆಂದು ದನಕರಗಳು, ಕುರಿ ಆಡುಗಳು ನೀರಿಗೆ ಕೊಚ್ಚಿ ಹೋದವೆಂದು ಹೇಳುತ್ತಿದ್ದರು. ಆ ಊರ ಗುಡಿ ಬಿತ್ತು. ಈ ಊರ ವಾಡೆ ಕುಸಿಯಿತೆಂದು, ಕೆಲವರು

ಹರಕಂಡು ಹೋದರೆಂದು, ಗುಳೆ ಹೊರಟಿದ್ದ ಮಂದಿ ಮಾತಾಡುತ್ತ ಹೋಗುತ್ತಿದ್ದರು. ಆಗ ಕಲ್ಲಯ್ಯನಿಗೂ ಭೀತಿ ತುಂಬುತ್ತಿತ್ತು.

"ಯಕ್ಕ, ಈ ಮಳೆ ಇನ್ನೂ ಎರಡು ಮೂರು ದಿನ ಹಿಂಗ ಸುರಿತಾದಂತ. ನೀನೂ ನಮ್ಗೂಡ ಬಂದು ಬುಡು" ಎಂದು ಕರೆದಳು ರಂಗಮ್ಮ. ರಂಗಮ್ಮನ ಕೊಂಕಳಲ್ಲಿ ಆಕೆಯ ಮೊಮ್ಮಗಳಿತ್ತು. ಅದು ನಗುತ್ತಿತ್ತು. ಅದಕಂಡು ಮಾದೇವಿಗೆ 'ಬನಶಂಕ್ರಿ ಕಣ್ಣು ತೆಗದ್ರೆ ನಮ್ಮ ಸಂಗವ್ವಗೂ ಇಂಥ ಜೀವ ಮನ್ಯಾಗ ಆಡ್ತದ' ಅಂದುಕೊಂಡಳು. ರಂಗಮ್ಮನ ಮಂದಿ ಗಂಟುಮೂಟೆಹೊತ್ತು, ದನಕರ, ಆಡು, ಕುರಿ, ಕೋಳಿಗಳ ಜತೆ ಹೊರಟರು. ಮಾದೇವಿ, ಕಲ್ಲಯ್ಯ ತಲಬಾಗಿಲು ದಾಟಿ ಬಂದು ನಿಂತು ನೋಡಿದರು. ಅರ್ಧ ಹರದಾರಿ ದೂರದ ಹೊಳೆ ನೀರು ದೊಡ್ಡಕಲ್ಲಿನ ಮನೆಗೆ ಬಂದಿತ್ತು. ನಮ್ಮ ನೆಪ್ಪಿಲೇ ಇಂಥ ಮಳೆ, ಇಂಥ ನೆರೆ ಬಂದಿದ್ದಿಲ್ಲ ಅಂತ ಇಬ್ಬರೂ ಅಂದುಕೊಂಡರು. ನೀರಿನಲ್ಲೇ ಆ ಮಂದಿ ಹೋದರು. ಮಾದೇವಿಗೆ ಗಪ್ಪಂತ ಪರಮ ನೆಪ್ಪಾದ! "ಕಲ್ಲಯ್ಯ ಮಾಮಾ, ಪರಮ ಎಲ್ಲಿದ್ದಾನು?" ಅಂತ ಕೇಳಿದಳು. ಕಲ್ಲಯ್ಯ ತಲೆ ತೂರಿಸಿಕೊಳ್ಳುತ್ತ ಮಾದೇವಿಯನ್ನು ನೋಡಿ "ದೇವ್ರೇ ಬಲ್ಲ!" ಅಂದ. ಕಲ್ಲಯ್ಯನ ಚಿಂತೆ ಬ್ಯಾರೆ. ಮಾದೇವಿ ಚಿಂತೆ ಬ್ಯಾರೆ. ಮಳೆಗೆ ಅಂಜಿ ಇಬ್ಬರೂ ಒಳಗೆ ಬಂದರು. ಮುಂಜಾನೆಯ ತುರ್ತ ಕೆಲಸಗಳನ್ನು ಮಳೆಯಲ್ಲೇ ಮುಗಿಸಿಕೊಂಡು ಇಬ್ಬರೂ ಪಡಸಾಲೆಯಲ್ಲಿ ಕುಂತರು. ಮಾದೇವಿ ಹೊರಸಿನ ಮ್ಯಾಲೆ ಕುಂತು ಎಲೆ ಚೀಲ ಬಿಚ್ಚಿಕೊಂಡು, ಎಲೆ ಹಾಕಿಕೊಳ್ಳುವಾಗ ಮತ್ತೆ ಪರಮನ ನೆನಪಾಯ್ತು. ತುಂಬಿದ್ದ ಮನೆ ಖಾಲಿಯಾಗುತ್ತಲೇ ಹೋಗಿದ್ದು ಕಂಡು ಕಣ್ಣಲ್ಲಿ ನೀರೂರಿತು..

೨

..ಕುರುಮದೊಡ್ಡಿಯಲ್ಲಿ ಕಲ್ಲಯ್ಯ ಕುರಿ, ದನಕರ ಸಾಕಿಕೊಂಡು ಸಂಸಾರದೊಂದಿಗಿದ್ದ. ಹಗ್ಗ ಹೊಸೆದು ದನಕರಗಳಿಗೆ ಮಗಡ, ಕಣ್ಣಿ ಮಾಡಿ ಛಾವಣಿ ಸಂತೆಯಲ್ಲಿ ಮಾರುತ್ತಿದ್ದ. ಹೆಂಡ್ರು-ಮಕ್ಳು ಬಿದಿರಿನ ಪುಟ್ಟಿ ಹೆಣದು ಮಾರುತ್ತಿದ್ದರು. ಕಲ್ಲಯ್ಯನ ತಂಗಿ ಚಿಕ್ಕವಯಸ್ಸಿನಲ್ಲಿ ಗಂಡನನ್ನು ಕಳಕೊಂಡು ಇದ್ದೊಬ್ಬ ಮಗಳು ಮಾದೇವಿಯೊಂದಿಗೆ ಅಣ್ಣ ಕಲ್ಲಯ್ಯನ ಮನೆಯಲ್ಲಿದ್ದಳು. ಕಲ್ಲಯ್ಯನೇ ಮಾದೇವಿಯನ್ನು ಜೋಪಾನ ಮಾಡಿ, ಬೆಳಸಿ ಹಟ್ಟಿಯ ಈರಯ್ಯನಿಗೆ ಮದುವೆ ಮಾಡಿಕೊಟ್ಟಿದ್ದ. ಈರಯ್ಯನಿಗೆ ಎರಡನೇ ಸಂಬಂಧ ಅಂತ ತಿಳಿದೇ ಮದುವೆ ಮಾಡಿಕೊಡಲಾಗಿತ್ತು. ದೊಡ್ಡಕಲ್ಲಿನ ಮನೆಯ ಹಟ್ಟಿ ಈರಯ್ಯನ ಹೇಣ್ತಿಯಾಗಿ ಮಾದೇವಿ ಬಂದಾಗ ಚಿಕ್ಕವಳೇ. ಮನೆ ತುಂಬ ಮಂದಿ. ಗಂಡನೇ ಹಿರಿಯ. ನಾಲ್ಕು ಮಂದಿ ತಮ್ಮಂದಿರು. ಕೊನೆಯ ತಮ್ಮ ಪರಮ ಚಿಕ್ಕವನು. ಮಾದೇವಿಯ ವಯಸ್ಸು. ಉಳಿದ ಮೂವ್ವರಿಗೆ ಮದುವೆಯಾಗಿತ್ತು. ಮಕ್ಕಳೂ ಇದ್ದರು. ಪರಮನನ್ನು

ಎಲ್ಲರೂ ಜೀವ ಮಾಡುತ್ತಿದ್ದರು. ಆದ್ರೆ ಪರಮ ಮನೆಯಲ್ಲಿ ಇರದೇ ಕಮ್ಮಿ. ಎಲ್ಲರಂತೆ ಮನೆಮಾರು, ತನ್ನವರು ಅಂತ ಹಚ್ಚಿಕೊಂಡಿರಲಿಲ್ಲ. ಮಾದೇವಿ ಗಂಡನ ಮನೆಗೆ ಬಂದಾಗ ಪರಮ ಯಾವಾಗೋ ಬರ್‍ತಿದ್ದ. ಇದ್ದರೆ ಇದ್ದ, ಉಂಡರೆ ಉಂಡ. ಇಲ್ಲದಿದ್ದರೆ ಮನೆಮಂದಿ ಯಾರೂ ಬಾಧೆ ಪಡುತ್ತಿದ್ದಿಲ್ಲ. ಹಂಗಂತ ಮನೆಮಂದಿ ಯಾರೂ ಪರಮನನ್ನು ಕಡೆಗಣಿಸಿ ನೋಡುತ್ತಿದ್ದಿಲ್ಲ. ಪರಮ ಯಾರ ಕೈಯಲ್ಲಿರಲಿಲ್ಲ. ತಾಯಿ ಸತ್ತಾಗ ಪರಮ ಚಿಕ್ಕವನಂತೆ. ಅದಕ್ಕೆ ಅಣ್ಣಂದಿರಿಗೆಲ್ಲ ತಮ್ಮನೆಂದರೆ ಜೀವ. ಹಿರಿಯಣ್ಣನಿಗಂತೂ ಪರಮನೆಂದರೆ ಮಗನೇ ಆಗಿದ್ದ. ಹಟ್ಟಿಮಂದಿ, ದೊಡ್ಡಿಮಂದಿ 'ಹುಚ್ಚು ಪರಮ' ಅಂತನೇ ಕರಿತಿದ್ದರು.

ಮಾದೇವಿಗೆ ಪರಮನೆಂದರೆ ಎಂಥದೋ ಸೆಳೆತ ಮೂಡುತ್ತಿತ್ತು. ಅದು ಆಕೆಯ ಅರಿವಿಗೆ ಮೀರಿತ್ತು. ಪರಮ ಯಾರನ್ನಾದರೂ ಕಡೆಗಣಿಸುವ ಸ್ವಭಾವದವನು. ಆದರೆ ಮಾದೇವಿಯನ್ನು ಕಂಡರೆ ಬಾಗುತ್ತಿದ್ದ. ಇದು ಮನೆಮಂದಿಯ ಅರಿವಿಗೆ ಬರದಷ್ಟು ನಾಜೂಕಾಗಿತ್ತು. ಪರಮ ಬಿಳಿಪಂಜೆಯನ್ನು ನಡುವಿಗೆ ಕಟ್ಟಿಕೊಳ್ಳುತ್ತಿದ್ದ. ಮೈಯಿಗೆ ಕಂದು ಬಣ್ಣದ ಅಗಲವಾದ ಸೆಲ್ಲೆಯನ್ನು ಹೊದ್ದುಕೊಂಡಿರುತ್ತಿದ್ದ. ಅಂಗಿಯನ್ನು ಬಿಟ್ಟುಬಿಟ್ಟಿದ್ದನಂತೆ. ಹಜಾಮರ ಮಾಂತಪ್ಪನಿಗೆ ತಲೆ ಕೊಟ್ಟರೆ ಕೊಟ್ಟ, ಇಲ್ಲದಿದ್ದರೆ ಇಲ್ಲ. ಹೀಗಿದ್ದ ಪರಮ. ಗಂಡ ಈರಯ್ಯನಿಗೆ ಮಾದೇವಿಗಿಂತ ಬಹಳ ವಯಸ್ಸಾಗಿತ್ತು. ಆದರೂ ಸಂಸಾರ ನಡೆದಿತ್ತು. ಮಾದೇವಿ ಬರುವುದಕ್ಕಿಂತ ಮೊದಲು ಗಂಡ ತಮ್ಮಂದಿರೊಂದಿಗೆ ಹೊಳೆಸಾಲಿನ ಇಚಲಗಿಡಗಳನ್ನು ಕೆತ್ತಿ ಹೆಂಡ ಇಳಿಸುವ ಕಸುಬು ಮಾಡಿಕೊಂಡಿದ್ದನಂತ. ದಣಿಯೇ ಹೆಂಡದ ಗುತ್ತಿಗೆದಾರ. ಈರಯ್ಯ ಗಿಡದಿಂದ ಇಳಿಸುತ್ತಿದ್ದ ನೀರಾ ಅಂದ್ರೆ ದಣಿಗೆ, ದಣಿಯ ಮನೆಮಂದಿಗೆ ತುಂಬಾ ಇಷ್ಟವಾಗಿತ್ತಂತ. ದಣಿಯ ಪರಿವಾರಕ್ಕೂ ಈರಯ್ಯ ಇಳಿಸಿದ ನೀರಾನೇ ಬೇಕೆಂದು ಹಂಬಲಿಸಿ ಬರುತ್ತಿದ್ದರಂತ. ಹೀಗಾಗಿ ಈರಯ್ಯ ದಣಿಗೂ, ದಣಿಯ ಪರಿವಾರಕ್ಕೂ ಹತ್ತಿರದವನಾಗಿದ್ದನಂತ. ಮಾದೇವಿ ಈ ಮನೆಗೆ ಬರುವುದಕ್ಕಿಂತ ಮುಂಚೆ, ದಣಿಗೆ ಅರವತ್ತು ವರ್ಸ ಆದ ಮ್ಯಾಲೆ ಬೆನ್ನು ನೋವು ಕಾಣಿಸಿಕೊಂಡು, ಯಾರಿಂದಲೂ ನೋವನ್ನು ಗುಣ ಮಾಡಲಾಗಲಿಲ್ಲವಂತ. 'ದಣಿ, ನಿನ್ನ ಸಂಕಟ ನೋಡದು ನನ್ನಿಂದ ಆಗದಿಲ್ಲ. ನಾನು ಮದ್ದು ಮಾಡಿಕೊಡುವವನಲ್ಲ. ನಮ್ಮಪ್ಪ ನಮ್ಮ ಮನೆಮಂದಿಗೆ ಮದ್ದು ಮಾಡಿ ಕೊಡ್ತಿದ್ದ. ಅದರ ಕೂನ ನನಗೈತೆ. ಬೆನ್ನ ಬ್ಯಾನಿಗೆ ಹೊಳೆಸಾಲಿನ್ಯಾಗ ಒಂದು ಬಳ್ಳಿ ಸಿಗತೈತೆ. ಅದರ ಮದ್ದು ಮಾಡಿ ತರ್‍ತಿನಿ. ವಾರ ಹತ್ತು ದಿನ ತಗಂಡು ನೋಡು, ದಣಿ' ಅಂತ ಬೇಡಿಕೊಂಡನಂತ. ದಣಿ 'ಆಯ್ತು' ಅಂದನಂತ. ಈರಯ್ಯ ಮದ್ದು ಮಾಡಿ ಕೊಟ್ಟನಂತ. ತಿಂಗಳೊಳಗಾಗಿ ನೋವು ಇಳಿತಂತ. ವರ್ಸದಿಂದ ಮಲಗಿದಲ್ಲೇ ಮಲಗಿದ್ದ ದಣಿ ಎದ್ದು ಕುಂತು, ನಡದಾಡತೊಡ

ಗಿದನಂತ. ಮುಂದ ನೋವು ಅಂಬೋದೇ ಕಾಣಲಿಲ್ಲಂತ. ದಣಿನೇ ಹಟ್ಟಿಗೆ ಬಂದು ಈರಯ್ಯನಿಗೆ, ಮನೆಮಂದಿಗೆ ಮರ್ಯಾದಿ ಮಾಡಿ ಹೋದನಂತ. ಮರ್ಯಾದೆ ಮಾಡದ ಕುರುಹು ಅಂದ್ರೆ ಈಗಿನ ಕಲ್ಲಿನಮನೆ ಕೊಟ್ಟು ಐದು ಕೂರಿಗೆ ಮಸಾರಿ ಹೊಲವನ್ನು ಇನಾಮು ಕೊಟ್ಟನಂತ. ದಣಿಯ ಮನೆಯಲ್ಲಿ ಹಬ್ಬ ಇದ್ದರೆ, ಮದುವೆ ನಡೆದರೆ, ಈರಯ್ಯನಿಗೆ ಕರೆ ಬರ್ತಿತಂತ. ಈರಯ್ಯನಿಗೆ ಮಕ್ಕಳಿಲ್ಲದ್ದು ದಣಿಗೆ ಗೊತ್ತಾಗಿ, ಇನ್ನೊಂದು ಮದುವೆ ಮಾಡಿಕೊಳ್ಳಲು ಒತ್ತಾಯ ಮಾಡಿದನಂತ. ಹೆಂಡತಿಯೂ ಒಪ್ಪಿದಳಂತ. ಆದ್ರೆ ಈರಯ್ಯನೇ ಮದುವೆಗೆ ಒಪ್ಪಲಿಲ್ಲಂತ. ತಮ್ಮನ ಮಕ್ಕಳನ್ನೇ ತನ್ನ ಮಕ್ಕಳೆಂದು, ಪರಮನನ್ನು ಮಗನೆಂದು ತಿಳಿದುಕೊಂಡು ಬಂದಿದ್ದನಂತ. ಮಾದೇವಿಯ ದೈವದಲ್ಲಿ ಈ ಮನೆಗೆ ಸೊಸೆಯಾಗಿ ಬರುವುದಿತ್ತೋ ಏನೋ. ಈರಯ್ಯನ ಹೆಂಡತಿಗೆ ಕಾಮಣಿಯಾಗಿ ವರ್ಸದ ಒಳಗೇ ಸತ್ತಳಂತ. ಇದು ದಣಿಗೆ ಗೊತ್ತಾಯಿತು. ತಮ್ಮಂದಿರನ್ನು ಕರೆಸಿ ಮದುವೆ ಮಾಡಲು ಹೇಳಿದನಂತ. ಈರಯ್ಯನ ಹೆಂಡತಿಯಾಗಿ ಮಾದೇವಿ ಮನೆ ಸೇರಿದ್ದಳು.

ಮಾದೇವಿ ಮದುವೆಯಾಗಿ ಬಂದು ಎರಡು ವರ್ಸದ ಒಳಗೇ ಸಂಗವ್ವನನ್ನು ಹಡೆದಳು. ಮನೆಮಂದಿಗೆ ಸಡಗರವಾಗಲಿಲ್ಲ! ಯಾಕೆಂದರೆ, ಕೈ ಹಿಡಿದಿದ್ದ ದಣಿ ಮೆತ್ತಗಾಗಿ ಮನೆ ಸೇರಿದ್ದ. ದಣಿಯ ತಮ್ಮ ಆದೆಪ್ಪಯ್ಯನೇ ಮನೆತನದ ಹಿರಿಸ್ತನ ಕೈಗೆ ತಗಂಡು ಮೆರೆಯುತ್ತಿದ್ದ. ದರ್ಪಕ್ಕೆ ಸರಹದ್ದಿನ ಊರು, ಹಟ್ಟಿಗಳು, ದೊಡ್ಡಿಗಳು ಬೇಸತ್ತಿದ್ದವು. ಜನ ನಲುಗುತ್ತಿದ್ದರು. ಗಂಡನನ್ನು ಹೆಂಡ ಇಳಿಸುವ ಕೆಲ್ಸದಿಂದ ಬಿಡಿಸಿದ್ದ. ಗಂಡನಿಗೆ ವಯಸ್ಸಾಗುತ್ತಿತ್ತು. ತಮ್ಮಂದಿರು, ಅವರ ಹೆಂಡರು ಮಕ್ಕಳು ಸೇರಿ ಮನೆ ತುಂಬ ಉಂಬುವ ಮಂದಿ. ದಣಿ ನೀಡಿದ್ದ ಇನಾಮು ಹೊಲದಿಂದ ಎಲ್ಲರ ಹೊಟ್ಟೆ ತುಂಬುವುದು ಕಷ್ಟವಾಯ್ತು. ಹೊಟ್ಟೆ ಬಟ್ಟೆಗೂ ಸಾಲದಾಯ್ತು. ತಮ್ಮಂದಿರು ದನಕರ, ಆಡು, ಕುರಿ, ಕೋಳಿ ಸಾಕಿಕೊಂಡು ಬದುಕಲು ನಿಂತರು. ಪರಮ ಮಾತ್ರ ತಿಂತಣಿ, ಕೊಡೇಕಲ್ಲು, ಜಲದುರ್ಗ, ಸಿದ್ಧನಕೊಳ್ಳ ಎಂಬಲ್ಲಿ ಇದ್ದನೆಂದು ಹಟ್ಟಿಮಂದಿ ಮಾತಾಡುತ್ತಿದ್ದರು. ಸಂಗವ್ವ ಹುಟ್ಟಿದ ಮ್ಯಾಲೆ ಒಮ್ಮೆ ಬಂದಿದ್ದಷ್ಟೆ. ಮಾದೇವಿ ಕರದು ಉಣ್ಣಿಸಿದ್ದಳು. ಗಂಡನೂ ಹಿಗ್ಗಿದ್ದ. 'ನಿನ್ನ ಮಾತು ಕೇಳ್ತಾನ. ಅದೇನು ಕಂಡನೋ ನಿನ್ನಲ್ಲಿ' ಅಂತ ಖುಷಿಯಿಂದ ಗಂಡ ಹೇಳುತ್ತಿದ್ದ. ಒಮ್ಮೊಮ್ಮೆ ಅಕ್ಕಪಕ್ಕದ ಊರು, ಹಟ್ಟಿ, ದೊಡ್ಡಿಗಳಲ್ಲಿ ಕಂಡದ್ದನ್ನು ಮಂದಿ ಹೇಳುತ್ತಿದ್ದರು. ಆದ್ರೆ ಕಲ್ಲಿನ ಮನೆ ಕಡೆ ಬರ್ತಿರಲಿಲ್ಲ. ಬಂದರೂ ಒಳ ಬಂದರೆ ಬಂದ. ಇಲ್ಲದಿದ್ದರೆ ಇಲ್ಲ..

"ಮಾದೇವಿ, ಮಾದೇವಿ.." ಕಲ್ಲಯ್ಯ ಮಾವ ಕರೆದದ್ದು ಕೇಳಿ ಮಾದೇವಿ ಎಚ್ಚತ್ತಳು.

"ಕರ್ದೇನು ಮಾವ?" ಅಂತ ಕೇಳಿದಳು.

"ಮಳೆ ನಿಲ್ಲುವಂಗ ಕಾಣದಿಲ್ಲ. ಹೆಂಗ ಮಾಡಮು? ನಾನು ಊರಿಗೆ ಹೋಗ್ತೀನಿ. ಬಂಡಿ ಕಟ್ಟಿ ಮಗನ್ನ ಕಳಸ್ತೀನಿ. ಬಂಡ್ಯಾಗ ನೀನು ಬಾ. ಹೊಳೆ ಸಾಲಿನ ಈ ಮನೆಗೂ ನೀರು ಬಂದಾವ. ಒಳಗೂ ಬಂದಾವಂತ" ಎಂದು ಕಲ್ಲಯ್ಯ ಕುಂತುಕೊಳ್ಳದೇ ಚಡಪಡಿಸುತ್ತಿದ್ದ.

"ಅಯ್ಯ ಮಾವ, ನಿನ್ಗ ವಯಸ್ಸಾಗ್ಯಾದ. ಇಂಥ ಮಳ್ಯಾಗ ಹೆಂಗ ಹೋಗ್ತಿದ್ದಿ? ಏನಾಗದಿಲ್ಲ ಸುಮ್ನೆ ಕುಂತ್ಗ. ಈಗ ಒಲೆ ಹಚ್ಚಿ ಅಡಿಗೆ ಮಾಡ್ತಿನಿ. ಮತ್ತೆ.." ಏನೋ ಹೇಳಲು ನೋಡಿ ಸುಮ್ಮನಾದಳು. 'ಪರಮ ಬಂದಾನಂತ ಮನಸ್ಸು ಹೇಳ್ತದ' ಅಂತ ಹೇಳಲು ಬಾಯಿಗೆ ಬಂದಿತ್ತು. ಕಲ್ಲಯ್ಯನಿಗೆ ಪರಮನೆಂದರೆ ನಂಬಿಗೆ ಇಲ್ಲದವ ಮನೆಮಾರು, ತನ್ನವರೆಂಬ ಕೂನ ಇಲ್ದ ಮನ್ಸಿಕರಾಯ ಅಂತ ತಿಳಿದಿದ್ದ. ಅದಕ್ಕೆ ಮಾದೇವಿ ಹೇಳಲು ಅಂಜಿ ಸುಮ್ಮನಾಗಿದ್ದಳು. ಅನುಭಾವದಿಂದ ಮಾದೇವಿಗೆ ಗೊತ್ತಿದೆ ಪರಮ ಯಾವಾಗ ಹೇಗೆ ಬರ್ತಾನ ಅಂಬೋದು..

..ಒಂದು ದಿನ ಕಲ್ಲಿನ ಮನೆ ಕಡೆ ಆದೆಪ್ಪಯ್ಯ ದಣಿ ಬರ್ತಾನಂಬೋ ಸುದ್ದಿ ಈರಯ್ಯನಿಗೆ ಬಂತು. ಈಗ ಈರಯ್ಯನಿಗೆ ವಯಸ್ಸಾಗುತ್ತಿತ್ತು. ತಮ್ಮಂದಿರ ಜತೆ ನಿಂತು ದಣಿಗಾಗಿ ಬುಗುಲಿನಿಂದ ಕಾಯ್ದ. ಇದೇ ದಿನಗಳಲ್ಲಿ ಪರಮ ಒಮ್ಮೆ ಕಲ್ಲಿನ ಮನೆಯ ಮುಂದಿದ್ದ ಬೇವಿನ ಮರದ ನೆರಳಲ್ಲಿ ಕಂಡ. ಮಾದೇವಿ ಕರದರೂ ಬರಲಿಲ್ಲ. ಆತ ಸಿಡಿಮಿಡಿಯಿಂದಲೇ ಓಡಾಡಿದ. ಮರು ತಾಸಿನಲ್ಲೇ ಮಾಯವಾಗಿದ್ದ. ಒಂದು ದಿನ ಆದೆಪ್ಪಯ್ಯ ದಣಿ, ತನ್ನ ಬಂಟರ ಜತೆಗೆ ಜೀಪಿನಲ್ಲಿ ಕಲ್ಲಿನ ಮನೆಗೆ ಬಂದ. ಗಂಡ-ಮೈದುನರು ಕೈ ಮುಗಿದು ಕರದು ಕಲ್ಲಿನ ಮನೆ ಪಡಸಾಲಿಯಲ್ಲಿ ಹೊಸ ಕಂಬಳಿ ಹಾಸಿ ಕೂಡಿಸಿದರು. ಮನೆ ಹೆಂಗಸರೂ ಬಂದು ಕೈ ಮುಗಿದು ಅಡಿಗೆ ಮನೆ ಸೇರಿದರು. ಮಾದೇವಿನೂ ಅವರಲ್ಲಿದ್ದಳು. ಆಡಿನ ಹಾಲು ಕಾಸಿ, ಬೆಲ್ಲ ಹಾಕಿ ಎಲ್ಲರಿಗೂ ಕೊಟ್ಟು ಕುಡಿಸಿದ ಈರಯ್ಯ. 'ಈ ಮನೆ ಬೇಸಿದಂಗಾದಲ್ಲೋ ಈರಯ್ಯ' ಅಂತ ಆದೆಪ್ಪಯ್ಯ ದಣಿ ಅಂದ. 'ದಣಿ, ದೊಡ್ಡ ದಣಿ ನೆರಳಿನ್ಯಾಗ ನಾವೀವಿ,' ಅಂದ ಈರಯ್ಯ. 'ಹೌದು ಗೊತ್ತದಲ್ಲ! ಮಸಾರಿ ಹೊಲ, ಈ ಮನೆ ಎಲ್ಲ ನಮ್ದೆ' ಅಂದ. ಈರಯ್ಯ ಹೌದು ಎಂಬಂತೆ ಕೈ ಮುಗಿದ. ಎಲ್ಲರೂ ಎದ್ದು ಜೀಪಿನಲ್ಲಿ ಹೋದರು. ಕಲ್ಲಿನ ಮನೆಮಂದಿ ನಿಟ್ಟುಸಿರು ಬಿಟ್ಟು ನಿಂತರು! ಪರಮ ಬೇವಿನ ಮರದ ಕೆಳಗಿದ್ದ, ಬೆಂಕಿ ಮ್ಯಾಲೆ ನಿಂತಂಗಿದ್ದ. 'ಕೂಡದು ಲಯ ತಪ್ಪ ಕೂಡದು' ಎಂದು ತನ್ನಷ್ಟಕ್ಕೆ ಸೆಲ್ಲೆಯನ್ನು ಬೀಸಿ ಬೀಸಿ ಕೂಗಿದ. ಈರಯ್ಯ ಬಳಿ ಹೋಗಿ ನಿಂತಾಗ ಸುಮ್ಮನಾದ. ಸಲುಪೊತ್ತು ಬುಟ್ಟು ಮನೆಯೊಳಗೆ ಬಂದು ಪಡಸಾಲೆ ಏರುವ ಪಾಂಟಣಿಗೆ ಮ್ಯಾಲೆ ಕುಂತ. ಪರಮನು ಕೂಡುವ ಜಾಗ ಅದೇ. ಮಾದೇವಿ ಮಗಳನ್ನು ಕರಕೊಂಡು ಬಂದು ಬಗಲಾಗೇ ಕುಂತಳು. ಪರಮ ತಣ್ಣಗಾಗಿದ್ದ. ಮಾದೇವಿಯನ್ನು, ಮಗಳನ್ನು ಸಮಾಧಾನದಿಂದ ನೋಡಿದ. ಮಾದೇವಿ ನಾಜುಕಿನಿಂದ

ಮಾತಾಡಿಸಿ ಉಣ್ಣಲಿಕ್ಕಿದಳು. ಈರಯ್ಯ ಕಣ್ಣುತುಂಬ ನೋಡಿದ! ಆ ದಿನ ಸಂಜೆ ವೇಳೆಗೆ ಪರಮ ಮಾಯವಾಗಿದ್ದ!

ಅದಾಗಿ ಎರಡು ತಿಂಗಳೂ ಕಳೆದಿದ್ದಿಲ್ಲ. ಒಂದು ಮಟಮಟ ಹಗಲು ಜೀಪಿನಲ್ಲಿ ಬಂದು ಮನೆಮುಂದಿದ್ದ ಬೇವಿನ ಮರದ ಕೆಳಗೆ ಆದೆಪ್ಪಯ್ಯ ದಣಿ ನಿಂತ. ಆದೆಪ್ಪಯ್ಯ ದಣಿ, ಆತನ ಬಂಟರು ಇಳಿದು ನಿಂತರು. ಈರಯ್ಯ ಮನೇಲಿದ್ದ. ಕೆಳಗಿನ ಹಟ್ಟಿ, ದೊಡ್ಡಿ ಜನ ಜೀಪು ಬಂದದ್ದು ಕಂಡು ಬಂದು ಬಂದು ದೂರ ನಿಂತರು. ಮಾದೇವಿ ಸಿಹಿನೀರಿಗಂತ ಹೋಗಿ ಹೊಳೆಯ ಚಿಲುಮೆ ನೀರೊತ್ತು ಅದೇ ವ್ಯಾಳೆ ಬಂದಳು. ಆದೆಪ್ಪಯ್ಯದಣಿ ಮುಂದನೆ ಬಂದು ಕಲ್ಲಿನ ಮನೆ ಹೊಕ್ಕಳು. ಅಷ್ಟತ್ತಿಗೆ ಈರಯ್ಯ ಬಂದು ಕೈ ಮುಗಿದು ಒಳ ಕರೆದ. 'ಈರಯ್ಯ, ನಮ್ಮ ಜಮೀನು ನೋಡ್ಕಂಡು ಹೋಗಮಂತ ಈ ಕಡೆ ಬಂದಿದ್ದೆ. ಇನ್ನಮ್ಯಾಲೆ ನೀನ ಮುಂದ ನಿಂತು ಹೆಂಡ ಇಳಸದು' ಅಂದ. 'ಆಯ್ತು ದಣಿ. ಒಳಗ ಬಂದು ಹಾಲು ಕುಡುದು ಹೋಗ್ರೀ..' ಅಂತ ಈರಯ್ಯ ಹೇಳುತ್ತಿದ್ದ. 'ಮತ್ತೊಮ್ಮೆ ಬರ್ತೀನಿ' ಅಂತ ಕಲ್ಲಿನ ಮನೆ ತಲಬಾಗಿಲ ಕಡೆ ನೋಡುತ್ತಲೇ ಜೀಪತ್ತಿದ. ಜೀಪು ಹೋಗ ತನಕ ಈರಯ್ಯ ನಿಂತು ನೋಡಿದ. ಹಟ್ಟಿ ದೊಡ್ಡಿ ಮಂದಿಗೆ ಈರಯ್ಯನ ಮನೆಗೆ ಸಣ್ಣದಣಿನೂ ಬಂದು ಹೋದದ್ದು ಗಾಬರಿಯಿಂದ ನೋಡಿದರು. ಈರಯ್ಯನಿಗೆ ಯಾಕೋ ಬುಗುಲತ್ತಿತ್ತು. ಮಾದೇವಿಗೂ ಅದು ತಗಲಿತು. ಓಡಾಡುವ ಮಗಳು ಸಂಗವ್ವನನ್ನು ಕಂಡು ನಿರುಮ್ಮಳಾಗಲು ಯತ್ನಿಸಿದರು. ಅದೇ ರಾತ್ರಿ ಪರಮ ಬೇವಿನ ಮರದ ಕೆಳಗಿದ್ದ. 'ಲಯ ತಪ್ಪುತ್ತಿದೆ' ಅಂತ ಕೂಗಿದ್ದನ್ನು ಈರಯ್ಯ ಕೇಳಿ, ಎದ್ದು ಹೊರ ಬಂದರೆ ಪರಮ ಕಾಣಿಸಲಿಲ್ಲ. ಈರಯ್ಯ ಸಂಕಟದಿಂದ ಗಿಡದ ಕೆಳಗೇ ಕುಂತಿದ್ದು, ಪರಮನ ಕೂಗು ಚಿಂತೆಗೆ ತಳ್ಳಿತ್ತು. ಆಮ್ಯಾಲೆ ಎದ್ದು ಒಳ ಬಂದ.

ಅದಾಗಿ ವಾರ ಹತ್ತು ದಿನ ಕಳದಿದ್ದವು. ಈರಯ್ಯನ ತಮ್ಮಂದಿರು ದನಕರ, ಆಡು ಕುರಿಗಳೊಂದಿಗೆ ಅಡವಿಗೆ ಹೋಗಿದ್ದರು. ಅವರ ಹೆಂಡತಿಯರು ಮಸಾರಿ ಹೊಲದ ದಗದಕ್ಕೆ ಹೋಗಿದ್ದರು. ಮಾದೇವಿ ಮೈದುನರ ಮಕ್ಕಳೊಂದಿಗೆ ಮನೆಯಲ್ಲಿದ್ದಳು. ಮನೇಲಿ ಕುಡಿಯಲು ನೀರಿರಲಿಲ್ಲ. ಮಾದೇವಿ ನಡುಹಗಲಲ್ಲಿ ಗಂಡನಿಗೆ 'ಒಂದು ಕೊಡ ಸಿಹಿ ನೀರು ತರ್ತಿನಿ' ಅಂತ ಹೇಳಿ ಹೊಳೆಕಡೆ ನಡೆದಳು. ಮಾಗಿ ದಿನಗಳವು. ದಾರಿ ಎಡ ಬಲ ಬಿಳಿಜೋಳದ ಪೈರು ತೂಗುತ್ತಿತ್ತು. ಹೊಳೆಗೆ ಇಳಿದು, ಚಿಲುಮೆಯಲ್ಲಿ ಕುಂತು, ಕೊಡಕ್ಕೆ ಬಟ್ಟಲಿಂದ ನೀರೆತ್ತಿ ತುಂಬ ತೊಡಗಿದಳು. ಉಸುಕಿನಲ್ಲಿ ಯಾರೋ ಓಡಿ ಬರುವ ಹೆಜ್ಜೆ ಸಪ್ಪಳ ಕೇಳಿತು. ಗಾಬರಿಯಾಗಿ ನೋಡಲು ತಿರುಗಿದಳು. ಮೂರು ನಾಲ್ಕು ಮಂದಿ ಬೆನ್ನಿಂದನೇ ಬಂದು ನಿಂತೇ ಬುಟ್ಟಿದ್ದರು. ಏಳುತ್ತಿದ್ದಂತೆ ಮಾದೇವಿಯನ್ನು ಎತ್ತಿಕೊಂಡರು. ಹೆದರಿ 'ಅಯ್ಯಯ್ಯ..! ಪರಮಾ..' ಅಂತ ಕೂಗಿದಳು. ಬಾಯಿಗೆ ಬಂದದ್ದೇ ಅದು.

ಬಾಯಿ ಮುಚ್ಚಿ, ಎತ್ತಿಕೊಂಡು ಓಡಿದರು. ಅಷ್ಟೇ ಅರಿವಿತ್ತು. ಆ ಮ್ಯಾಲೆ ಅರಿವು ಬಂದಾಗ ಎಲ್ಲಿದ್ದೀನಿ ಅಂತ ತಿಳಿಲಿಲ್ಲ. ಕಣ್ಣು ಬಿಟ್ಟು ನೋಡಿದಳು. ಕತ್ತಲಲ್ಲಿ ಏನೂ ಕಾಣಲಿಲ್ಲ. ಮೆಲ್ಲಗೆ ಒಂದು ಕೋಣ್ಯಾಗ ಇದ್ದದ್ದು ಅರಿವೆಗೆ ಬಂತು. ಎದ್ದು ನಾಜೂಕಿನಿಂದಲೇ ಕಣ್ಣಾಡಿಸಿದಳು. ಕೋಣೆಯ ಬಾಗಿಲನ್ನು ಕಂಡುಕೊಂಡು ತೆರೆಯಲು ನೋಡಿದಳು. ಹೊರಗಿನಿಂದಲೇ ಚಿಲಕ ಹಾಕಿದಂತಿತ್ತು. ಹೊರಗ ಯಾರೋ ಮಾತಾಡುವುದು ಕೇಳಿಸ್ತು. ಮಾದೇವಿಗೆ ಪಟ್ಟಂತ ನೆಪ್ಪಾಯ್ತು. ಬಾಗಿಲಿಗೆ ಒಳಗಿನಿಂದಲೇ ಚಿಲಕ ಹಾಕಿಕೊಳ್ಳಲು ಯತ್ನಿಸಿದಳು. ಚಿಲಕವೇ ಕೈಗೆ ತಗುಲಲಿಲ್ಲ. ಭಯದಿಂದ ಬೆವರುತ್ತಿದ್ದಳು. ಬಾಗಿಲಿಗೆ ಬೆನ್ನಚ್ಚಿ ನಿಂತಳು. ದೊಡ್ಡ ಕೋಣೆ ಅಂಬೋದು ಅರಿವೆ ಬಂತು. ಅಷ್ಟರಲ್ಲಿ ಬಾಗಿಲನ್ನು ನೂಕಿದರು. ಮಾದೇವಿ ಹಿಂದೆ ಸರಿದು ನಿಂತಳು. ಕಂದೀಲು ಹಿಡಿದು ಇಬ್ಬರು ಒಳ ಬಂದರು. ಅವರಿಂದ ಬಂದಾತನೇ ಆದೆಪ್ಪಯ್ಯ ದಣಿ ಅಂತ ಮಾದೇವಿಗೆ ತಿಳಿತು. 'ಏನು ಗಾಬರಿ ಬೀಳಬ್ಯಾಡ. ನಾನು ದಣಿ ಇದ್ದೀನಿ! ಆ ಮುದಿಗೊಡ್ಡಿನ ಸಂಗಡ ಅದೇನು ಬಾಳ್ವೆ ಮಾಡಿಗಿ? ಸುಖ ಉಂಡಿಗಿ? ಇಲ್ಲೇ ತೋಟದ ಮನ್ಯಾಗ ರಾಣಿಯಂಗಿರು. ಏನ?' ಅಂದ. ಮಾದೇವಿಗೆ ಮಾತು ಬರದಷ್ಟು ಗಂಟಲ ಆರಿತ್ತು. ಆದ್ರೂ 'ತುಡಗಿಲೇ ನನ್ನ ಹೊರಿಸಿಕೊಂಡು ಬಂದು ಈ ಕತ್ಲ ಕೋಣ್ಯಾಗ ಇಟ್ಟಿದ್ದೇನು?' ಅಂದಳು. 'ಅಯ್ಯಯ್ಯ, ಚಿಂತ್ಯಾಕ ಮಾಡ್ತಿದ್ದಿ? ನಿನ್ನ ಮೈ ಬಣ್ಣನೇ ದೀಗಿ ಉರದಂಗ ಉರಿತದ. ಅದೇ ಬೆಳಕು ಸಾಕು ಈ ಕೋಣೆಗೆ' ಅಂದ ನಗುತ್ತ. ಬಿಳಿಪಂಜೆ, ಬಿಳಿ ಅಂಗಿ ತೊಟ್ಟಿದ್ದ ದಣಿ 'ಲ್ಹೇ, ಈಕಿನ್ನ ರಮಿಸಿ, ಅನ್ನ-ನೀರು ಕೊಡ್ರಿ. ನಾ ಆಮ್ಯಾಲೆ ಬರ್ತೀನಿ' ಅಂದು ಹೋದ. ಕಂದೀಲನ್ನು ಕೋಣೆಯಲ್ಲಿಟ್ಟು ಜೀತದಾಳುಗಳೂ ಹೋದರು. ಮಾದೇವಿ ಕೋಣೆ ಬಾಗಿಲನ್ನು ಮುಚ್ಚಿಕೊಂಡಳು. ಬೆಳಕಿನಲ್ಲಿ ನೋಡಿದರೂ ಒಳಗೆ ಹಾಕಲು ಚಿಲಕವೇ ಇರಲಿಲ್ಲ. ಹೌಹಾರಿದ ಮಾದೇವಿಗೆ ದಿಕ್ಕು ಕಾಣಲಿಲ್ಲ. ಅಷ್ಟರಲ್ಲಿ ಕೋಣೆ ಹೊರಗೆ ಒದರಾಟ, ಚೀರಾಟ ಕೇಳಿಬಂತು. 'ಹಿಡಿರಲ್ಹೇ! ಬರ್‍ರೆಲ್ಹೆ!' ಅಂತ ಕೆಟ್ಟದಾಗಿ ಕೂಗಿದ್ದು ಕೇಳಿತು. ಮಾದೇವಿಗೆ ಇದ್ದಕ್ಕಿದ್ದ ಹಾಗೆ ಮೈಯಲ್ಲಿ ಕಸುವು ಮೂಡಿತು. ಹೊರಗೆ ಹೊಡೆದಾಟ ನಡೆದಂಥ ಗದ್ದಲ! ಆ ಗದ್ದಲ ಕೋಣೆ ಕಡೆ ಬಂದಂಗಾಯ್ತು. ಅಷ್ಟರಲ್ಲೇ ಕೋಣೆ ಬಾಗಿಲನ್ನು ಝಾಡಿಸಿ ಒದ್ದರೋ ತೆರೆಯಿತು. ಮಾದೇವಿಗೆ ಪರಮ ಕಂಡ! ಕಂದೀಲಿನ ಕಂದು ಬೆಳಕಿನ್ಯಾಗ ಬೆಂಕಿಯಾಗಿದ್ದ ಪರಮ ಕಂಡ! ಬರೀ ಮೈಲಿದ್ದ! ಕೈಯಲ್ಲಿ ಕೊಡಲಿ! ತಡ ಮಾಡದೆ ಮಾದೇವಿಯ ಬಲಗೈಯನ್ನು ತನ್ನ ಎಡಗೈಯಿಂದ ಹಿಡದು ಕರಕಂಡು ನಡೆದ. ಪರಮನ ಕೊಡಲಿ ಹಿಡಿದ ಬಲಗೈ ಎತ್ತಿದ್ದು ಎತ್ತೇ ಇತ್ತು. ಅಲ್ಲಿಂದ ಹೊರ ಬಂದರು. ಅದೊಂದು ಮಂದಿಯಿಲ್ಲದ ದೊಡ್ಡಮನೆ. ಅಲ್ಲಿಂದ ಕತ್ತಲಲ್ಲಿ ಹೊಲ, ಒಡ್ಡು, ಕಾಲುದಾರಿಯಲ್ಲಿ ಗಿಡಮರಗಳ ನಡುವೆ ನಡದದ್ದೇ ನಡೆದದ್ದು. ಒಂದು ಕಡೆ ಹಳ್ಳದಲ್ಲಿ ನೀರು ಕುಡಿಯಲು ಮಾದೇವಿಗೆ ಕೈಸನ್ನೆಯಲ್ಲೇ ಹೇಳಿದ. ಮತ್ತೆ ಹಿಡಿದ ಕೈಯನ್ನು ಬಿಡದಂಗ ನಡಸಿಕೊಂಡು ಬಂದು ಕಲ್ಲಿನ ಮನೆ

ಮುಂದ ಬುಟ್ಟ ! ಗಂಡ, ಮೈದುನರು, ಅವರ ಹೆಂಡತಿಯರು–ಮಕ್ಕಳು ಎಲ್ಲರೂ ತೆರೆದ ತಲಬಾಗಿಲಿನ ಒಳಗೆ ಪಡಸಾಲೆಯಲ್ಲಿ ದೀಗಿ ಬೆಳಕಲ್ಲಿ ಕಾಯ್ದು ಕುಂತಿದ್ದರು. ಮಾದೇವಿ ಬಂದು ಮಗಳನ್ನು ತೆಕ್ಕೆ ಹಾಯ್ದು ದುಕ್ಕಿಸಿದಳು. ಮನೆಮಂದಿ ದಿಗ್ಗನೆದ್ದು 'ಮಾದೇವಿ' ಅಂತ ಮುತ್ತಿಕೊಂಡರು.

ಅದಾಗಿ ಎರಡು ದಿನದ ಮ್ಯಾಲೆ ಜೀಪಿನ ತುಂಬ ಪೊಲೀಸ್ರು ಬಂದು 'ಪರಮ ಎಲ್ಲಿ?' ಅಂತ ಕಲ್ಲಿನಮನೆ ಹೊಕ್ಕು ಹುಡುಕಿದರು. ಮಾದೇವಿಯನ್ನು ಕರೆತಂದ ಪರಮನನ್ನು ಮನೆಮಂದಿಯೇ ಆಮೇಲೆ ಕಂಡಿರಲಿಲ್ಲ. ಪರಮನ ಬದಲಿಗೆ ಈರಯ್ಯ, ಆತನ ತಮ್ಮಂದಿರನ್ನು ಪೊಲೀಸರು ಕರಕಂಡು ಹೋದರು. ವಾರ ತಿರುಗಿದ್ದಿಲ್ಲ ಈರಯ್ಯ ತಮ್ಮಂದಿರೊಂದಿಗೆ ಮನೆಗೆ ಮತ್ತೆ ಬಂದ. ದೊಡ್ಡ ದಣಿ ಪೊಲೀಸರನ್ನು ಕರೆಸಿ, ಮಾತಾಡಿದ್ದರಿಂದ ಈರಯ್ಯ ಮನೆಗೆ ಬಂದಿದ್ದ. ಆದ್ರೆ ಪರಮನಿಗಾಗಿ ಪೊಲೀಸ್ರು ಹುಡುಕಿದ್ದೇ ಹುಡುಕಿದ್ದು. ತಿಂತಿಣಿ, ಕೊಡೇಕಲ್ಲು, ಜಲದುರ್ಗದ ನದಿ, ಗುಡ್ಡಗಳ ಕೊರಕಲಲ್ಲಿ ಅವರಿವರು ಕಂಡಿದ್ದನ್ನು ಕೇಳಿ ಹುಡುಕಿದರಂತೆ. ಕೊನೆಗೆ ಕೃಷ್ಣಾನದಿ ದಂಡೆ ಮ್ಯಾಲೆ ಕುಂತಿದ್ದನ್ನು ಪತ್ತೆ ಹಚ್ಚಿ ಪೊಲೀಸ್ರು ಬೆನ್ನತ್ತಿದರಂತೆ. ಪರಮ ಅವರ ಮುಂದೆ 'ಕೂಡದು.. ಕೂಡದು..' ಅಂತ ನದಿ ನೀರಿಗೆ ಇಳಿದು, ನದಿ ನಡುವಿದ್ದ ದೊಡ್ಡ ಬಂಡೆಯ ಮ್ಯಾಲೆ ಕುಂತ. ಕುಂತದ್ದನ್ನು ನೋಡುತ್ತ ನಿಂತರಂತೆ. ಪೊಲೀಸರು ಈ ದಂಡೆ, ಆ ದಂಡೆಯಲ್ಲಿ ಪರಮನನ್ನು ನೋಡುತ್ತ ಬೀಡಾರ ಹೂಡಿದರಂತೆ. ಪರಮ ಕುಂತದ್ದು ಕಾಣುತ್ತಿತ್ತಂತೆ. ಆದ್ರೆ ಮೂರು ದಿನದ ಮ್ಯಾಲೆ ಪರಮ ತಿಂತಿಣಿ ಮೌನೇಶ್ವರನ ಗುಡಿ ಮುಂದ ಕುಂತದ್ದನ್ನು ಮಂದಿ ಕಂಡು ಗಾಬರಿಯೂ, ಬೆರಗೂ ಆದರಂತೆ. ಕಂಡವರು ಪೊಲೀಸರಿಗೆ ಹೇಳಿ, 'ಸಾಬ್ರೇ, ಪರಮನ ಗೊಡವೆ ಬುಟ್ಟುಬುಡಿ. ನಿಮ್ಗೂ ಸಂಸಾರ ಐದಾವಲ್ಲ' ಅಂದರಂತೆ. ಆ ಮ್ಯಾಲೆ ಪರಮನ ಗೊಡವೆಗೆ ಹೋಗಲಿಲ್ಲವಂತೆ. ಮಾದೇವಿಗೂ ಈ ಸುದ್ದಿಗಳು ಮುಟ್ಟಿದವು. ಆ ಸರಹದ್ದಿನಲ್ಲಿ 'ಆದೆಪ್ಪಯ್ಯ ದಣಿ ಕೊಲೆಯಾದದ್ದೇ ಪಾಡಾಯ್ತೆಂದು' ಮಾತಾಡಿಕೊಂಡರಂತೆ ಮಂದಿ. ದಣಿ ಮನೆಮಂದಿಯೂ ಸುಮ್ಮನಿದ್ದರಂತೆ. ದಣಿ ಊರಿನ ಜಾತ್ರೆಯನ್ನು ಆ ವರ್ಸ ಭರ್ಜರಿಯಾಗಿ ಊರ ಮಂದಿ ಜತೆ ಕೂಡಿಕೊಂಡು ಮಾಡಿದರು. ಪರಮನನ್ನು ಜಾತ್ರೆಯಲ್ಲಿ ಕಂಡದ್ದೇ ಜನ ಬಟ್ಟೆಬರೆ ಕೊಡಲು ನೂಕಾಡಿದ್ದನ್ನು ಮಾದೇವಿ, ಮನೆಮಂದಿ ಕಂಡರು. ಜನರ ಕಾಟಕ್ಕೆ ಪರಮ ಅದಕಂಡೇ ಅಲ್ಲಿಂದ ಮಾಯವಾಗಿ ಹೋದನು.

ಗಂಡ ಹಾಸಿಗೆ ಹಿಡಿದ. ಮಾದೇವಿಯನ್ನು ದಣಿಯಿಂದ ಪಾರು ಮಾಡಿಕೊಂಡು ಬಂದ ಪರಮ ಪೊಲೀಸರಿಂದಲೂ ಪಾರಾದದ್ದು ಈರಯ್ಯನಿಗೆ ನಿರುಮ್ಮಳ ಅನ್ನಿಸಿದರೂ ಹಟ್ಟಿ, ದೊಡ್ಡಿಗಳ ಮಂದಿ ಮಾದೇವಿಯನ್ನು ದಣಿ ಹೊತ್ತು ಒಯ್ದ ಸುದ್ದಿಯನ್ನು ಮಾತಾಡಿಕೊಂಡರು. ಅದು ಕೇಳಿಯೇ ಹಾಸಿಗೆ ಹಿಡಿದಿದ್ದ. ಮನೆ ಮಂದಿಯೂ

ಮೊದಲಿನಂಗ ಮಾದೇವಿಯನ್ನು ಕಾಣಲಿಲ್ಲ. ಮೇಲಾಗಿ ಇನಾಮು ಹೊಲದಿಂದ ಬೆಳೆದ ಕಾಳುಕಡಿಯಲ್ಲಿ ಕಲ್ಲಿನ ಮನೆಮಂದಿಯ ಹೊಟ್ಟೆ ತುಂಬದಾಯ್ತು. ಮ್ಯಾಲಿಂದ ಮ್ಯಾಲೆ ಎರಡು ಮೂರು ವರ್ಷ ಮಳೆನೂ ಸರಿಯಾಗಿ ಆಗಲಿಲ್ಲ. ದನಕರ, ಆಡು ಕುರಿಗಳಿಗೆ ಮೇವು ಸಿಗದಂತಾಯ್ತು. ಸುತ್ತಲ ಹಟ್ಟಿ, ದೊಡ್ಡಿ ಮಂದಿ ಗುಳೆ ಹೋಗತೊಡಗಿದ್ದರು. ಸೊಲ್ಲಾಪುರ, ಪುಣೆ ಕಡೆಗೆ ದುಡಿಯಲು ಹೋಗುವುದನ್ನು ಕಂಡು ಈರಯ್ಯನ ತಮ್ಮಂದಿರು ತಮ್ತಮ್ಮ ಹೆಂಡರು–ಮಕ್ಕಳೊಂದಿಗೆ ಹೋಗಲು ಯತ್ನಿಸುತ್ತಲೇ ಇದ್ದರು. ಈರಯ್ಯ ತಡೆದು ನಿಲ್ಲಿಸಿದ್ದ. ದನಕರ, ಆಡು, ಕುರಿ, ಒಂದೊಂದಾಗಿ ಸಂತೆಗೆ ಒಯ್ದು ಮಾರಿ ಬದುಕನ್ನು ಸಾಗಿಸಿದರು. ಕೊನೆಗೆ ಮಾದೇವಿ–ಈರಯ್ಯ–ಮಗಳು ಸಂಗವ್ವನನ್ನು ಮನೆಯಲ್ಲಿರಿಸಿ ವರ್ಷದೊಳಗೆ ಗುಳೆ ಹೋಗಿಬಿಟ್ಟರು. ಈರಯ್ಯ ಮನೆಮಂದಿ ಇಲ್ದ ಮನೆಯಲ್ಲಿ ಬಾಳ ದಿನ ಬದುಕಿ ಉಳಿಯಲಿಲ್ಲ. ಅಣ್ಣ ಸಾಯುವ ವಾರವೆಲ್ಲ ಪರಮ ಆಗಾಗ ಬರುತ್ತಿದ್ದ. ಒಂದು ಸಲ ಅಣ್ಣನ ಜತೆ ಉಂಡಿದ್ದ. ತಮ್ಮನ ಜತೆ ಈರಯ್ಯ ಜೀವ ತುಂಬಿ ಮಾತಾಡಿದ್ದ! ಆದರೂ ಪರಮ ಮನೆಯಲ್ಲಿ ಉಳಿಯಲಿಲ್ಲ. ಮಾದೇವಿ ಮಗಳ ಜತೆಗೆ ಇಷ್ಟು ದೊಡ್ಡ ಕಲ್ಲಿನ ಮನೆಯಲ್ಲಿ ಇರಲಾಗದೆ ಮಾವ ಕಲ್ಲಯ್ಯನನ್ನು ಕರೆಸಿಕೊಂಡಳು. ಮಾದೇವಿಯ ಹೆತ್ತವ್ವ ಸತ್ತು ಎರಡು ವರ್ಷಗಳಾಗಿದ್ದವು. ಕಲ್ಲಯ್ಯನ ಮಕ್ಕಳು ದೊಡ್ಡವರಾಗಿದ್ದರಿಂದ ಹೊಲ–ಮನೆ–ಕಸುಬನ್ನು ನೋಡಿಕೊಳ್ಳುತ್ತಿದ್ದರು. ಕಲ್ಲಯ್ಯ ತನ್ನೂರಿನ ಬಾಳ್ವೆಯನ್ನೂ, ಮಾದೇವಿ ಬಾಳ್ವೆಯನ್ನು ನೋಡಿಕೊಂಡು ಇರುತ್ತಿದ್ದ. ಮಗಳೂ ಆಡಿಕೊಂಡು ಬೆಳೆಯುತ್ತಿದ್ದಳು. ಒಂಟಿಯಾದಂತೆ ಕಂಡ ಮಾದೇವಿಗೆ ಪರಮನ ಸೆಳೆತ ಜಾಸ್ತಿಯಾಯ್ತು! ಆದರೆ ಪರಮ ಹೋದರೆ ಅತ್ತಗ, ಬಂದರೆ ದರ್ಶನ ಅಂಬಂತಾಯ್ತು. ಆದ್ರೂ ಮಾದೇವಿ ಬಂದಾಗೊಮ್ಮೆ 'ಇನ್ನಾರು ನನ್ನ ಗತಿ? ನೀನಾದ್ರೂ ಮನ್ಯಾಗಿರು' ಅಂತ ಹೇಳುತ್ತಿದ್ದಳು. ಕಲ್ಲಯ್ಯನೂ ಹೇಳಿ ನೋಡಿದ. ಪರಮನಿಗೆ ಹೇಳದೂ ಒಂದೇ. ಗಾಳಿ, ನೀರಿಗೆ ಹೇಳದೂ ಒಂದೇ ಅಂತ ಅನ್ನಿಸಿತ್ತು. ಕಲ್ಲಯ್ಯ ಹಗ್ಗ ಹೊಸೆದು ತಿಂಗಳಿಗೊಮ್ಮೆ ಸಂತೆಗೆ ಹೋಗಿ ಮಾರಿ ಬರುತ್ತಿದ್ದ. ಹಗ್ಗ ಹೊಸೆವ ಕಸುಬನ್ನ ಜಾಸ್ತಿ ಮಾಡಿದ್ದ ಮಾದೇವಿ ಮನೆಯಲ್ಲಿ. ಸುಗ್ಗಿ ಮುಂದ ಈರಯ್ಯನ ತಮ್ಮಂದಿರು ಬರುತ್ತಿದ್ದರು. ಇನಾಮು ಹೊಲದಲ್ಲಿ ಕಣ ಆಗುವ ತನಕ ಇದ್ದು ಜೋಳ, ಕಾಳು ಕಡಿ ಒಯ್ತಿದ್ದರು. ಪಟ್ಟಣ ಸೇರಿದ ಮ್ಯಾಲೆ ಮೈದುನರು, ಅವರ ಹೆಂಡರ ಆಶೆಗಳು ಜಾಸ್ತಿಯಾಗಿದ್ದವು. ಮಾದೇವಿ ವರ್ಸವೆಲ್ಲ ಕಲ್ಲಯ್ಯನ ಜತೆ ಹೊಲದಲ್ಲಿ ದುಡಿದು ಬೆಳೆದದ್ದನ್ನು ಬಂದು ಒಯ್ವದನ್ನು ಕಂಡು ಮಾದೇವಿಗೆ ಸಹಿಸುವುದಾಗಲಿಲ್ಲ. ತನ್ನ ಮಗಳೂ ಕೈಗೆ ಬರುವುದು ದೂರವಿರಲಿಲ್ಲ. 'ನಿಂತು ಮದುವೆ ಮಾಡ್ತಾರೇನು ಇವರು' ಅಂತ ಮಾದೇವಿ, ಕಲ್ಲಯ್ಯ ಮಾತಾಡಿಕೊಂಡು ಕಾಲ ನೂಕುತ್ತಿದ್ದರು..

..ಆ ದಿನ ಮುಂಜಾನೆ ಕಲ್ಲಯ್ಯ ಹೊಸೆದ ಹಗ್ಗದ ಪೆಂಡೆಗಳನ್ನು ಮಾರಿಕೊಂಡು ಸಂಗವ್ವನಿಗೆ ಬಟ್ಟೆ ತರಕ ಸಂತೆಗೆ ಆಕೆಯನ್ನು ಕರಕಂಡು ಹೋದ. ಮಾದೇವಿ ಬುತ್ತಿ ಮಾಡಿ, ಕಟ್ಟಿ ಕಳಿಸಿದ್ದಳು. ಉಂಬತ್ತು ಮೀರಿತ್ತು. ಮಾದೇವಿ ಜಳಕಮಾಡಿ ಪಡಸಾಲಿಯ ಕೊನೆಗೆ, ಪಾಂಟಣಗಿ ಮ್ಯಾಲೆ ಕಾಲಿಟ್ಟು ಕುಂತು ತಲೆಕೂದನ್ನು ಆರಿಸಿ, ಬಾಚಿಕೊಳ್ಳುತ್ತಿದ್ದಳು. ಯಾವ ದಗದವೂ ಇರಲಿಲ್ಲ. ಸುಮ್ಮನೆ ಕುಂತಿದ್ದಳು. ಮನೆ ಮುಂದಿನ ಬೇವಿನ ಮರದ ಕೆಳಗೆ ಪರಮ ಇದ್ದದ್ದು ಕಂಡಿತು. ಮಾದೇವಿಗೆ ಅದು ಹೊಸದಲ್ಲ. ಆದ್ರೂ ಆವತ್ತು ಉಮೇದಿಗೊಂಡಳು. 'ಬಾ' ಅಂದ್ರೆ ಬರುವವನೂ ಅಲ್ಲ. ಆದ್ರೆ ಪರಮನೇ ಅಂದು ಒಳಗೆ ಬಂದು, ಪಡಸಾಲಿ ಏರುವ ಪಾಂಟಣಗಿ ಮ್ಯಾಲೆ, ಮಾದೇವಿ ಕಾಲಿಟ್ಟುಕೊಂಡಿದ್ದಲ್ಲಿ ಕುಂತ. ಸೊಂಟಕ್ಕೆ ಪಂಜೆ ಸುತ್ತಿ ಕಟ್ಟಿಕೊಂಡಿದ್ದ. ಮೈಯಿಗೆ ಕಂದು ಬಣ್ಣದ ಸೆಲ್ಲೆ ಹೊದ್ದಿದ್ದ. ಎಲ್ಲಿಂದ ಬಂದಿದ್ದನೋ ಗಾಳಿಗೆ ತಲೆಕೂದಲು ಅಡ್ಡಬಡ್ಡವಾಗಿದ್ದವು. ಮಾದೇವಿಯನ್ನು ನೋಡಿದನೋ ಇಲ್ಲವೋ ಆಕೆಗೇ ತಿಳಿಯಲಿಲ್ಲ. ತಲೆಬಾಚಿಕೊಳ್ಳತ್ತಿದ್ದ ಮಾದೇವಿ ಅದನ್ನು ನಿಲ್ಲಿಸಿ ಪರಮನನ್ನು ನೋಡಿದಳು. ನೋಡುತ್ತ ಬಾಚಣಿಕೆಯನ್ನು ತೋರಿಸಿದಳು 'ಬಾಚಲೇನು?' ಎಂಬಂತೆ. ಪಟ್ಟನೆ ಪರಮ ಹೊದ್ದ ಸೆಲ್ಲೆಯನ್ನು ತೆಗೆದು, ಮಾದೇವಿಗೆ ಬೆನ್ನುಮಾಡಿ ಕುಂತು ತಲೆ ಕೊಟ್ಟ! ಮಾದೇವಿಯ ಮಡಿಸಿದ ಎರಡು ಕಾಲುಗಳ ನಡುವೆ ಪರಮ ಕುಂತಿದ್ದ. ಮುಖ ತಲಬಾಗಿಲ ಕಡೆ ಮಾಡಿದ್ದ. ಕೂದಲನ್ನು ಬಾಚಣಿಕೆಯಿಂದ ಬಾಚಿದಳು. ಮೆತ್ತನೆ ಕೂದಲು. ಗಂಟುಗಳೆ ಇಲ್ಲ. ಮೇಲಿನಿಂದ ಕೆಳಗೆ ಬಾಚಣಿಕೆ ಸುಮ್ಮನೇ ಜಾರುತ್ತಿತ್ತು. ಮೊಳ ಉದ್ದದ ಕೂದಲು ಕುತ್ತಿಗೆ ದಾಟಿ ಬೆನ್ನಮೇಲೆ ಇಳಿದಿತ್ತು. ನುಣ್ಣನೆಯ ಒಣಗಿದ ಬೆನ್ನು. ಮಾದೇವಿಯ ಉಸಿರಾಟ ಬಿಸಿಯಾಗಿ ಜೋರಾಯಿತು. ಮೈ ನರಗಳು ಒಳಗೇ ಬಿಗಿದುಕೊಂಡವು. ಗಂಟಲು ಆರಿತು. ಉಗಳೂ ಬತ್ತಿತು. ಇರುವು ಮರೆಯಾಯ್ತು. ಮೆಲ್ಲಗೆ ಸೆರಗು ತೆಗೆದು, ಕುಬುಸದ ಗುಂಡಿಗಳನ್ನು ಬಿಚ್ಚಿ, ಬಾಗುತ್ತ ಪರಮನ ಬೆನ್ನಿಗೆ ತಗುಲಿಸುತ್ತ ಒತ್ತಿದಳು! ತೆಕ್ಕೆಯಿಂದ ಪರಮನನ್ನು ಬಿಗಿಯಬೇಕು.. 'ವಾಸ್ನೆ.. ಕೆಟ್ಟ ವಾಸ್ನೇ..' ಅನ್ನುತ್ತ ತಲಬಾಗಿಲತ್ತ ಜಿಗಿದ, ಚಿರತೆಯಂತೆ! ಹೊಸ್ತಿಲು ದಾಟಿಯೇ ಜಿಗಿದಿದ್ದ. ಅಂಗೇ ಕಣ್ಮರೆಯಾದ! ಕಲ್ಲೊಂದು ತಲೆಮ್ಯಾಲೆ ಬಿದ್ದಂತಾಯ್ತು, ಮಾದೇವಿಗೆ!

ಪರಮ ಕೈ ತಪ್ಪಿದನೆಂಬ ಚಿಂತೆಯಲ್ಲಿ ಮಾದೇವಿ ಬೆಂಕಿಗೆ ತಗುಲಿದ ಗಿಡದಂತಾದಳು. ಏನೂ ಗೊತ್ತಿಲ್ಲದ ಕಲ್ಲಯ್ಯ ಗಾಬರಿಗೊಂಡು ದರ್ಗಾಕ್ಕೆ ಹೋಗಿ ಹರಕೆ ಹೊತ್ತು ಬಂದ. ಮೋನಪ್ಪನಿಗೆ ಕಾಯಿ ಸಕ್ರಿ ಕೊಟ್ಟು ಬಂದ. ತಿಂಗಳಾದರೂ ಮಾದೇವಿ ಎದ್ದು ಓಡಾಡಲಿಲ್ಲ. ಪರಮನ ಸುಳಿವಿಲ್ಲ. ಎಳ್ಳಮಾಸಿ ಕಳದು, ಹುಣ್ಣಿವೆ ಬಂತಲ್ಲ ಅಂದು ಜ್ವಾಳದಿಟ್ಟಿನಂತ ಬೆಳದಿಂಗಳಲ್ಲಿ ಪರಮ ಮನೆ ಮುಂದಿದ್ದ. ಬೇರಿಗೆ ಜೀವ ಬಂದಂತೆ ಮಾದೇವಿ ಚಿಗುರಿದಳು. ಪಟ್ಟನೆ ಅಡಿಗೆ ಮನೆಗೆ ಹೋಗಿ,

ಕಂಚಿನ ಗಂಗಾಳದಲ್ಲಿ ಜ್ವಾಳದ ನುಚ್ಚಿನನ್ನ ಇಕ್ಕಿ, ಬೆಳದಿಂಗಳಂತಹ ಮಜ್ಜಿಗೆ ಸುರಿದು, ಹುಣಸೇಕಾರಯಿಕ್ಕಿ ಎತ್ತಿ ತಂದು ಪರಮನ ಮುಂದಿಡಿದಳು. ಕೈಯಿಲಿ ತಗಂಡು, ಕಲಸಿಕೊಂಡು ಸುರಿಯುತ್ತ ಉಂಡ! ಅದಕಂಡು ಮಾದೇವಿ ನೆಲ–ಆಕಾಶಕ್ಕೆ ಕೈ ಮುಗಿದು, ಮೈಯಲ್ಲಿ ಹೊಸ ಉಸಿರು ತುಂಬಿಕೊಂಡಳು. ಪರಮನೇ ಮಾದೇವಿ ಪಾಲಿಗೆ ದೈವವಾಗಿ ನಿಂತ.

"ಏನಣ್ಣ, ಏನ್ಮಾಡ್ತಿದ್ದಿ?" ಮಾದೇವಿ ಗುಂಗಿನಿಂದ ಎಚ್ಚತ್ತು ನೋಡಿ ಕೇಳಿದ್ದಳು. ಕಲ್ಲಯ್ಯ ತಿಂಗಳಿಂದ ಹೊಸೆದ ಹಗ್ಗ, ಮಾಡಿದ್ದ ಕಣ್ಣಿ, ಮಗಡ, ಬಾರುಕೋಲುಗಳನ್ನೆಲ್ಲ ತಂದು ಪಡಸಾಲಿ ಕೊನೆಕಟ್ಟಿಗೆ ಇಟ್ಟಿದ್ದ. ಕುಂತಲ್ಲಿ ಕೂಡದೆ, ನಿಂತಲ್ಲಿ ನಿಲ್ಲದೆ ಚಡಪಡಿಸುತ್ತಿದ್ದ.

"ಮಾದೇವಿ, ನಮ್ಮ ಕಲ್ಲಿನ ಮನ್ಯಾಗೂ ನೀರು ಬರುವಂಗ ಕಾಣ್ತದ. ವರ್ಸಕ್ಕ ಆಗುವಷ್ಟು ಕಾಳು ಕಡಿ ಮನ್ಯಾಗ ಐದಾವಲ್ಲ ಅವುಗಳ ಗತಿಯೇನು? ಮನ್ಸು ನಿಂತ್ಗವಲ್ದು. ಮೆಲ್ಕ ಊರಿಗೆ ಹೋಗಿ ಮಗನ್ನ ಬಂಡಿ ಕಟ್ಟಿ ಕಳಸ್ತೀನಿ. ನೀನು, ಕಾಳುಕಡಿ ಚೀಲ ಹೇರಿಕೊಂಡು ಊರಿಗೆ ಬಂದು ಬುಡು" ಅಂದ. ಮಾದೇವಿ ಎಲೆಚೀಲ ಕೆಳಗಿಟ್ಟು ಎದ್ದು ಬಂದು ತಲಬಾಗಿಲ ಹೊರಗ ನೋಡಿದಳು. ಮಳೆ ಬರ್ತಿತ್ತು. ಬಯಲೆಲ್ಲ ಕತ್ತಲುಗೌದಿತ್ತು. ಹೊಳೆ ನೀರು ಬೇವಿನಮರ ದಾಟಿ ಒಳಗೆ ಚಾಚಿತ್ತು. ಅದನ್ನ ನೋಡಿ ಗಾಬರಿಯಾದ್ರೂ "ಮಾವ, ಇಂಥ ಮಳ್ಯಾಗ, ನೀರಿನ್ಯಾಗ ಹೋಗ್ತೀನಿ ಅಂತ ನಿಂತಿದ್ದಿ. ವಯಸ್ಸಾಯ್ತು ನಿನ್ಗ. ಎಲ್ಲೆನ್ನ ದಾರ‍್ಯಾಗ ಬಿದ್ದು ಸತ್ತೋದಿಗಿ ಸುಮ್ನೆ ಕುಂತ್ಗ! ಬಿಸೆ ರಟ್ಟಿ, ಬ್ಯಾಳಿ ಮಾಡ್ತೀನಿ ಉಂಡು ಮಲ್ಗು. ದೇವರಿಟ್ಟಾಂಗಾಗ್ತದ" ಅಂತ ಕಡ್ಡಿ ಮುರದಂಗ ಹೇಳಿದಳು.

"ಮಾದೇವಿ, ತಿಂಗಳದಿಂದ ಹಗ್ಗ ಹೊರದು, ಸಾಮಾನೂ ಮಾಡಿದ್ದೀನಿ. ನೀರು ತಗಲಿದ್ರ ಹಗ್ಗ ಹೆಂಗ ಉಳಿತಾದ? ತೋದು ಹಾಳಾದೀತಂತ.."

"ಮನುಷ್ಯರಿಗಿಂತ ಹಗ್ಗ, ಕಣ್ಣಿ, ಮಗಡಗಳೆ ಹೆಚ್ಚಾದ್ವೇನು ನಿನ್ಗ. ಹೋದುಗೀದಿಗಿ..!" ಅಂತ ಗದರಿಸಿ ಕುಂದ್ರಿಸಿದಳು. ಕಲ್ಲಯ್ಯ ಸುಮ್ಮನಾದ.

ಮಾದೇವಿ ಒಲೆ ಹಚ್ಚಿದಳು. ಬ್ಯಾಳೆ ಕುದಿಯಲಿಟ್ಟಳು. ರೊಟ್ಟಿಮಾಡಲು ತಯ್ಯಾರಿ ಮಾಡಿಕೊಳ್ಳತೊಡಗಿದಳು. 'ಪರಮ ಎಲ್ಲಿದ್ದಾನು' ಅಂತ ಮನಸ್ಸಿಗೆ ಬಂದು ಹೋಯ್ತು. ಮೈದುನರ ಕಾಟ ತಪ್ಪಿಸಿದ್ದೇ ಪರಮ. ಅದು ನೆನಪಾಯ್ತು..

..ಸಂಗವ್ವ ಮೈನೆರೆತ ವರ್ಸ ಅದು. ಪುಣೆಯಿಂದ, ಸೊಲ್ಲಾಪುರದಿಂದ ಮೈದುನರು ಬಂದು ಕುಂತರು. ಪ್ರತಿವರ್ಸ ಸುಗ್ಗಿಮುಂದ ಬರೋರು. ಈ ಸಲ ಎಳ್ಳಮವಾಸಿಗೆ ಬಂದು ಕುಂತದ್ದು ಕಂಡು ಮಾದೇವಿಗೆ ಗಾಬರಿಯಾಯ್ತು. ಗಂಡ ಇರತನಕ, ತಾನು ಮದುವಿಯಾಗಿ ಬಂದಾಗ ಈ ಮೈದುನರು ತನ್ನನ್ನು

ತಂಗಿಯಂಗ ಕಂಡವರು. ತುಂಬಿದ ಮನ್ಯಾಗ ಎಂಥ ಚಂದ ಬಾಳ್ವೆ ನಡದಿತ್ತು? ಈಗಂತೂ ರಾಕ್ಷಸರಾಗಿದ್ದರು. ಪಟ್ಟಣಕ್ಕ ಗುಳೆ ಹೋದರು ನೋಡು ಅಲ್ಲಿಂದ ಮನುಷ್ಯರೇ ಆಗಿ ಉಳುದಿಲ್ಲ. ಆ ಸಲ ಬಂದವರೆ 'ಏನವ್ವ, ಪರದೇಶದ ಕಂಪ್ನಿ ಇಲ್ಲಿಗೆ ನಮ್ಮಟ್ಟಿ ಸರಹದ್ದಿನಲ್ಲಿ ಬಂದು ನೆಲಸ್ತಾದಂತ. ದೊಡ್ಡ ಕಂಪ್ನಿ. ನಮ್ಗ ಕೆಲ್ಸ ಸಿಗ್ತಾವ. ಆದ್ರೆ ನಮ್ಮ ಮಸಾರಿ ಹೊಲನ್ನ ಅವುರಿಗೆ ಮಾರ್ಬೇಕು' ಅಂದ್ರು. 'ಮಸಾರಿ ಹೊಲನ್ನ ಮಾರ್ಬೇಕೇನು? ನಮ್ಮ ಹೊಟ್ಟೆ-ಬಟ್ಟೆಗೆ? ಮಗ್ಳು ಮೈನೆರತು ಕುಂತಾಳ. ಮದುವಿ..?'

'ಹೊಲ ಹೋದ್ರೇನಾಯ್ತು? ನೌಕ್ರೀ ಸಿಗ್ತಾದ. ಪಗಾರ ಬರ್‍ತಾದ. ನಾವೂ ಇಲ್ಲೇ ಬಂದಿರ್‍ತೀವಿ. ನೀನೂ ಒಂಟಿಯಾಗಿರದು ತಪ್ತದಲ್ಲ..' ಅಂತ ಬೆನ್ನತ್ತಿದರು. ಮೂವ್ವರು ಮೈದುನರು ಭೂಮಿಕೊಳ್ಳುವ ದಲ್ಲಾಳಿಗಳನ್ನು ಕರಕೊಂಡು ಬಂದು ಮಾತುಕತೆಯಾಡಲು ಒತ್ತಾಯ ಮಾಡಿದ್ರು. ಮಾದೇವಿ ದಿಕ್ಕುಕಾಣದಾದಳು. ಗಂಡನಿಗೆ ದಣಿ ಕೊಟ್ಟ ಇನಾಮು ಹೊಲ ಅದು. ಗಂಡ ಸಾಯುವಾಗ ಮೈದುನರ ಎದುರಿಗೇ 'ಹೊಲ ಮಾದೇವಿಗೆ ಇರ್‍ಲಿ. ಮಗ್ಳು ಇದ್ದಾಳ. ಏನೋ ನಿಮ್ಮ ಹೊಟ್ಟಿಗೆ ಕಾಳುಕಡಿ ಒಯ್ದು ಉಣ್ರೀ' ಅಂತ ಹೇಳಿದ್ದು ನೆಪ್ಪು ಮಾಡಿಕೊಂಡು ಹೇಳಿದರೂ ನಡಿಲಿಲ್ಲ. ಭೂಮಿಕೊಳ್ಳಲು ದಿನಕ್ಕೆ ಒಬ್ಬಿಬ್ಬರು ದಲ್ಲಾಳಿಗಳು ಬಂದು ಮನೆ ಬಾಗಿಲಿಗೆ ನಿಂತರು. ಮಾದೇವಿಗೆ ಎಲ್ಲ ಹೊಸದು. ಏನೂ ತಿಳಿಲಿಲ್ಲ. ಮೂರು ತಿಂಗಳಾಯ್ತು, ಆರು ತಿಂಗಳಾಯ್ತು ಹಟ್ಟಿ-ದೊಡ್ಡಿಮಂದಿಯ ಭೂಮಿನ್ನ ಸರ್ಕಾರ ಖರೀದಿಸಿ ಮಂದಿನ್ನ ದೂರ ಕಳಸ್ತಾದೆಂಬೋ ಸುದ್ದಿಗಳು ದಿನದಿನ ಮುತ್ತಿಕೊಂಡವು. ಕಣ್ಣಿಗೆ ಕಾಣುವ ತನಕ ಎಲ್ಲ ಭೂಮಿನ್ನ ಕಂಪನಿ ಖರೀದಿಸಿ, ಊರು, ಹಟ್ಟಿ, ದೊಡ್ಡಿಗಳನ್ನು, ಜನರನ್ನು ಇಲ್ಲಿಂದ ದೂರ ಕಳಿಸುತ್ತದೆ ಎಂದರೆ ಮಾದೇವಿ ತಾನೆಲ್ಲಿಗೆ ಹೋಗಲಿ? ಅಂತ ಚಿಂತೆ ಹಚ್ಚಿಕೊಂಡು ಕೊನೆಗೆ 'ನಾನು ಮಸಾರಿ ಹೊಲನ್ನ ಮಾರದಿಲ್ಲ' ಅಂತ ಕಡ್ಡಿ ಮುರದಂಗ ಮೈದುನರಿಗೆ ಹೇಳಿಬಿಟ್ಟಳು. ದಿಕ್ಕುಕಾಣದೆ ಪರಮ ಬಂದಾಗ 'ನೀನಾದರೂ ಅಣ್ಣಂದಿರಿಗೆ ಹೇಳು. ಹೊಲನ್ನ ಮಾರಿದ್ರ ಹಣವನ್ನು ತಗಂಡು ಅವುರು ಹೋಗ್ತಾರ. ನಾನೆಲ್ಲಿರ್‍ಲಿ?' ಅಂತ ಅತ್ತಳು. ಪರಮ ಮೈಯಿಗೆ ಸುತ್ತಿಕೊಂಡಿದ್ದ ಸೆಲ್ಲೆಯನ್ನು ಬಿಚ್ಚಿಕೊಂಡು ಝಾಡಿಸಿ, ಮತ್ತೆ ಹೊದ್ದುಕೊಂಡು ಎದ್ದು ಹೋದ! ಮೈದುನರು ತುದಿಗಾಲಿನ ಮ್ಯಾಲೆ ನಿಂತು ಕಿರಿಕಿರಿ ಮಾಡುತ್ತ 'ಹೊಲ ಮಾರು' ಅಂತ ಬೆನ್ನತ್ತಿದ್ದರು. ಅದೇ ದಿನಗಳಲ್ಲಿ 'ಭೂಮಿ ನಮ್ಮ ತಾಯಿ! ಭೂಮಿ ನಮ್ಮ ಸಂಸಾರದ ಕಣ್ಣು! ಭೂಮಿಯನ್ನು ಯಾರೂ ಮಾರಬಾರದು! ಭೂಮಿ ನಮ್ಮದು! ಯಾರಿಗೂ ಕೊಡೆವು!' ಎಂದು ಕೂಗುತ್ತ ಜನ ಹಟ್ಟಿ, ದೊಡ್ಡಿಗಳಿಗೆ ಬಂದು, ಮನೆಮನೆಗೆ ಅಡ್ಡಾಡಿ ತಿಳುವಳಿಕೆ ನೀಡಿದರು. ಮಾದೇವಿಗೆ ಬಲ ಬಂತು. ಚಳುವಳಿ ಮಾಡುವ ಮಂದಿಯನ್ನೇ ಕಂಡು ತನ್ನ ಸಂಕಟ ತೋಡಿಕೊಂಡಳು. ಚಳುವಳಿಗಾರರು ಮಾದೇವಿ ಮೈದುನರನ್ನು ಕಂಡು ಮಾತುಕತೆಯಾಡಿದರು.

ಮೈದುನರು ಚೂರು ಹಿಂದಕ್ಕ ಸರಿದರು. ಯಾರೋ ಭೂಮಿ ಮಾರುವಾಗ ಮನೆಮಂದಿಯಲ್ಲಿ ಯಾರ ತಕರಾರು ಇರಬಾರದೆಂದು ಮೈದುನರಿಗೆ ಹೇಳಿದ್ದರಿಂದ ಮಾದೇವಿಯ ತಕರಾರಿನಿಂದ ಬೇಸತ್ತಿದ್ದರು. ಮೂವ್ವರು ಕೂಡಿ ಮಾತನಾಡಿಕೊಂಡು 'ಮಾದೇವಿನ್ನ ಮುಗಿಸಿ ಬಿಡಮು' ಅಂತ ತೀರ್ಮಾನ ಮಾಡಿಕೊಂಡು ಕಾಯ್ದರಂತೆ. ಆ ದಿನ ರೂಢಿಯಂತೆ ನಸುಕಿನಲ್ಲಿ ಹೊಳೆಗೆ ಹೋಗಿ ಸಿಹಿ ನೀರು ತರುವುದಕ್ಕೆ ಮಾದೇವಿ ಹೋದಾಗ ಮೈದುನರು ಹೊಂಚು ಹಾಕಿದವರಂತೆ ಹಿಂದೆ ಹೋಗಿ, ಸಮಯ ನೋಡಿ ಹೊಳೆಗೆ ನೂಕಲು ಯತ್ನಿಸಿದಾಗ ಅದೆಲ್ಲಿದ್ದನೋ ಪರಮ ನುಗ್ಗಿ ಬಂದು ಮಾದೇವಿಯನ್ನು ಜೀವದಿಂದ ಪಾರುಮಾಡಿ ಮನೆಗೆ ತಂದು ಬಿಟ್ಟನು! 'ಅಯ್ಯೋ ಸಂಗಮನಾಥ' ಎಂದು ಕೈ ಮುಗಿದಳು. ಮೈದುನರು ಪರಾರಿಯಾಗಿ ಹೋದರು. ಮೈದುನರ ದರ್ಪಕ್ಕೆ ಬೇಸತ್ತು ಹೋಗಿದ್ದ ಮಾದೇವಿ ಕಲ್ಲಯ್ಯ ಮಾವನನ್ನು ಕರೆತಂದಳು. ಹಾಗೇ ವಿಚಾರಿಸಿದಾಗ ಮಸಾರಿ ಹೊಲವನ್ನು ಇನಾಮು ಕೊಟ್ಟಿದ್ದರು. ಈರಯ್ಯ ಬಿತ್ತಿ ಬೆಳೆದು ಉಣ್ಣುತ್ತ ಬಂದಿದ್ದನೇ ಹೊರತು ಈರಯ್ಯನ ಹೆಸರಿಗೆ ಪಟ್ಟ ಆಗಿರಲಿಲ್ಲ. ಮಾದೇವಿಗೂ ಮಾರಲು ಯಾವ ಹಕ್ಕೂ ಇರಲಿಲ್ಲ ಎಂದು ತಿಳಿಯಿತು. ಕೈಹಿಡಿಯಲು ದೊಡ್ಡ ದಣಿ ಇರಲಿಲ್ಲ. ಆದೆಪ್ಪಯ್ಯ ದಣಿಯ ಕತೆ ಹಂಗಾಗಿತ್ತು. ಮಾದೇವಿ ನಿರ್ವಾಯಿಲ್ಲದೆ ಸುಮ್ಮನಾದಳು..

ಮಾದೇವಿಯ ಮೈ ಜುಂ ಅಂತು! ಮೈದುನರು ಹೊಳೆ ನೀರಿಗೆ ನೂಕಲು ನಿಂತದ್ದು ಕಣ್ಣಮುಂದೆ ಕಟ್ಟಿತ್ತು. ಇತ್ತ ಪರಮ ಒಗಟಾಗಿಯೇ ನಿಂತಿದ್ದ. ಆದೆಪ್ಪಯ್ಯ ದಣಿ ಕೈಯಿಂದ ಪಾರು ಮಾಡಿದ್ದು ಯಾಕ? ಮೈದುನರ ಕೈಯಿಂದ ಪಾರು ಮಾಡಿದ್ದು ಯಾಕಂತ? ಆವತ್ತು ನಾನೇ ಆಸೆಪಟ್ಟಿದ್ದರ ಫಲ ಅವಮಾನಮಾಡಿ ಕೂರ್‍ರಿಸಿದ್ದ..! ಪರಮ..ಪರಮಾ..!

"ಮಾದೇವೀ... ಮಾದೇವಿ" ಕಲ್ಲಯ್ಯ ಕೂಗುತ್ತಲೇ ಒಳ ಬಂದ.

"ಹಾಂ.. ಮಾಮಾ.." ಅಂತ ಎಚ್ಚತ್ತಳು.

"ಕರದಂಗಾಯ್ತು ಅದ್ಕ ಬಂದೆ" ಅಂದ.

"ಹೌದೇನು? ಹೋಗಿ ಮುಖ ತೊಳಕೊಂಡು ಬಿಸೆರಟ್ಟಿ, ಗಟ್ಟಿಬ್ಯಾಳಿ ತಿಂದು ಕುಂತ್ಗ" ಅಂದಳು. ಇಬ್ಬರೂ ರೊಟ್ಟಿ ತಿಂದು ಕುಂತರು. ಹೊರಗಿನ ಮಳೆ, ಗೂಳೆ ಹೋಗುವ ಮಂದಿ ನಿಂತಿದ್ದಿಲ್ಲ. ಮಾದೇವಿ ತನ್ನ ಕೋಣೆಗೆ ಹೋಗಿ ಕುಂತು ಎಲೆಚೀಲ ಬಿಚ್ಚಿದಳು. ಕಲ್ಲಯ್ಯನ ಚಡಪಡಿಗೆ ಚೂರೂ ಕಮ್ಮಿಯಾಗಿರಲಿಲ್ಲ. ಅದುಕಂಡು "ನೀನೂ ಚೂರು ಅಡ್ಡಾಗು. ಗಂಗವ್ವಗ ದೆವ್ವ ಬಡಗಂಡದ. ಒಂದೇ ಸವನ ಸುರಿತಾಳ. ಈ ಕಲ್ಲಿನ ಮನ್ಯಾಗ ಗಂಗವ್ವ ಬರಬೇಕಂದ್ರ ಹುಡುಗಾಟೇನು?" ಅಂದಳು. ಸಾಲಿಗೆ ಹೋಗಿ ಬರ್‍ತಿದ್ದ ಮಾಲಿಂಗ ಮಳೆ ಬರದ್ಕ ಇತ್ತ ಬಂದಿಲ್ಲ. ಸಾಲಿಗೆ ಇನ್ನೆಂಗ ಹೋದಾನು? ಛೇ ಈ ಗಂಗವ್ವಗ ಏನ ಬಂದಿದ್ದಾತು? ಅಂತ ಪೇಚಾಡಿದಳು. ಮಗಳು ಸಂಗವ್ವ ನೆನಪಾದಳು..

..ಮಾದೇವಿದು ಒಂದೇ ಹಠ. ಮಗಳು ಸಂಗವ್ವನ ಗಂಡನಾಗಿ ಬರುವ ಅಳಿಯ ಮನೆ ಅಳಿಯನಾಗಿ ಮಗಳ ಜತೆಗೆ ಕಲ್ಲಿನ ಮನೆಯಲ್ಲಿ ಉಳಿಬೇಕು. ಮಸಾರಿ ಹೊಲವನ್ನು ಮಗಳು–ಅಳಿಯನ ಪಾಲಿಗೆ ಇರಬೇಕು. ಅಂತ ಛಲ ತೊಟ್ಟವರಂಗ ಮಾತಾಡಿದಳು. ಕಲ್ಲಯ್ಯ ಮೂರು ನಾಲ್ಕು ವರಗಳನ್ನು ಕರಕೊಂಡು ಬಂದು ಸಂಗವ್ವನನ್ನು ತೋರಿಸಿದ. ಸಂಗವ್ವನನ್ನು ನೋಡಿದವರು ಯಾರೂ ಒಲ್ಲೆ ಅನ್ನಲಿಲ್ಲ. ಆದ್ರೆ ಮನೆ ಅಳಿಯನಾಗಿರಲು ಯಾರೂ ಒಪ್ಪಲಿಲ್ಲ. ವರದಕ್ಷಿಣೆ ಕೊಟ್ಟರೆ ಸಾಕು ಅಂತಿದ್ದರು. ಯಾಕೆಂದರೆ ಮಸಾರಿ ಹೊಲ ಮಾದೇವಿ ಹೆಸರಿನಲ್ಲಿ ಇಲ್ಲದ್ದು ಎಲ್ಲರಿಗೂ ಗೊತ್ತಾಗಿ. ಇನಾಮು ಭೂಮಿ ಯಾವತ್ತಾದರೂ ದಣಿಗಳ ಪಾಲೀಗೇ ಸೇರಿದ್ದೆಂದು ಮಂದಿ ಮಾತಾಡುತ್ತಿದ್ದರು. ಮಾದೇವಿ ಇದರಿಂದ ಹೆದರಿಕೊಂಡಿದ್ದಳು. ಆದರೂ ಮಗಳಿಗೆ ವರಗಳನ್ನು ಹುಡುಕುವುದನ್ನು ಬಿಡಲಿಲ್ಲ. ಕೊನೆಗೆ ಇದೇ ಸರಹದ್ದಿನಲ್ಲಿದ್ದ ಹುಡುಗ ಶಂಕರ ಒಪ್ಪಿದ್ದೇ ತಡ. ಮದುವೆಯನ್ನು ಬನಶಂಕರಿ ಮಂದಿರದಲ್ಲಿ ಮಾಡಿ ಮುಗಿಸಿದಳು. ಅಂದು ಪರಮ ಮಂದಿರದ ಹೊರಗೆ ಓಡಾಡಿದ್ದನ್ನು ಹಟ್ಟಿಮಂದಿ ನೋಡಿದ್ದರು. ಅದನ್ನು ಕೇಳಿಯೇ ಮಾದೇವಿ ಹಿಗ್ಗಿದ್ದಳು. ಮದುವೆಯಾಗಿ ಮೂರು ವರ್ಸ ಕಳದು ನಾಲ್ಕನೇ ವರ್ಸದಲ್ಲಿ ಬಿದ್ದರೂ ಮಗಳಿಗೆ ಸೆರಗು ನಿಲ್ಲಲಿಲ್ಲ. ಏನೇನೋ ಕಾಡಾಟವೆಂದು ಎಲ್ಲೆಲ್ಲೋ ಹೋಗಿ ಸಾಂತಿ ಮಾಡಿಸಿಕೊಂಡು ಕಾಯುತ್ತ ಕಾಲ ಕಳೆದಳು. ಅಳಿಯ ಮನೆಯಲ್ಲಿದ್ದು ಬೇಸತ್ತನು. ಮದುವೆಗಿಂತ ಮುಂಚೆ ಡ್ರೈವಿಂಗ್ ಕಲ್ತು ಕಾರು, ಜೀಪುಗಳ ಡ್ರೈವರ್‌ನಾಗಿ ಕೆಲ್ಸ ಮಾಡಿದ್ದು ನೆಪ್ಪಾಗಿ ಕಾಡಿತು. ಮಾದೇವಿಯ ಕಕ್ಕಲಾತಿಗೆ, ಹೆಂಡತಿ ಮಾತಿಗೆ ಕಟ್ಟುಬಿದ್ದು ಮನೆಯಲ್ಲಿದ್ದೇ ಒದ್ದಾಡಿದ್ದ. ಮಕ್ಕಳು ಆಗಲಿಲ್ಲ. 'ಅತ್ತೆ ಕೊಡು ರೊಕ್ಕದಲ್ಲಿ ಸಂತೆಗೆ ಹೋಗಿ ಕಾಲ ಕಳದು, ಮನೆಗಿಷ್ಟು ಕಿರಾಣಿ ಸಾಮಾನು ತಂದು ಕುಂತಿದ್ದು ಸಾಕಾಗಿ ಹೋಯ್ತು' ಅಂತ ಹೆಂಡತಿಗೆ ಬಯ್ಯತೊಡಗಿದ. ಕೊನೆಗೆ ಪಟ್ಟಣಕ್ಕೆ ಹೋಗಿಬಿಟ್ಟ. ಮತ್ತೆ ಡ್ರೈವರನಾಗಿ ಕೆಲ್ಸಕ್ಕೆ ನಿಂತು ಹಟ್ಟಿ ಕಡೆಗೆ ಬರಲಿಲ್ಲ. ಸಂಗವ್ವನೇ ಗಂಡನ ಬೆನ್ನತ್ತಿ ಕಲ್ಲಿನಮನೆ ತೊರೆದು ಹೋಗಲು ನಿಂತಳು. ಮಕ್ಕಳಾದರೂ ಆಗಿದ್ದರೆ ಬೇಸಿತ್ತೆಂದು ಹಲುಬಿದಳು. ಅವ್ವನನ್ನು ಸಮಾಧಾನ ಮಾಡಲು ಏನೋ ನೆವ ಹೇಳಿ ಗಂಡನಿಂದ ಸಂಗವ್ವ ಹೋದಳು. ಮಗಳು–ಅಳಿಯ ಪಟ್ಟಣದಲ್ಲಿ ತಳವೂರಿದ್ದರೂ ಆಗಾಗ ಬಂದು ಕಾಳುಕಡಿ, ಬಟ್ಟಬರೆ ಒಯ್ಯುತ್ತಿದ್ದರು. ಮೊನ್ನೆ ಸಲ ಬಂದಾಗ ಎರಡು ತಿಂಗಳಾದರೂ 'ಹೊರಗಾಗಿಲ್ಲ' ಅಂತ ಅಂದು ಹೋಗಿದ್ದಳು. ಏನಾದರೂ ಖುಷಿ ಸುದ್ದಿ ಇದ್ರ ಖಾತ್ರಿ ಮಾಡಿಕೊಂಡು ಫೋನ್ ಮಾಡ್ತೀನಿ ಅಂತ ಹೇಳಿ ಹೋಗಿದ್ದ. ಮಾದೇವಿ ಆ ಸುದ್ದಿ ಕಾಯಲು ನಿಂತು ಎಷ್ಟೋ ತಿಂಗಳಾಗಿತ್ತು..! ಈಗ ಮೂರು ನಾಕು ದಿನದಿಂದ ಮಳೆ ಹತ್ತಿ, ನೆರೆ ಬಂದು ಹಟ್ಟಿ, ದೊಡ್ಡಿಗಳ ಮಂದಿಯೆಲ್ಲ ನೆರೆ ಸಂತ್ರಸ್ತರಾಗಿ ಗಂಜಿ ಕೇಂದ್ರದ ಕಡೆ ಹೊಂಟಿದ್ದರೂ ಮಾದೇವಿ ಮಗಳ ಸುದ್ದಿಗಾಗಿ ದಾರಿ ಕಾಯುತ್ತಿದ್ದಳು. ಕೋಣೆಯಲ್ಲಿ ಗೌವ್ವೆನ್ನುವ ಕತ್ತಲೆ ತುಂಬಿತ್ತು. ಮಾದೇವಿಯ

ಚಿತ್ತವೂ ಎತ್ತೆತ್ತಲೋ ಹೋಗಿ ಬರ್ತಿತ್ತು. ಕೊನೆಗೆ ಆಕಳಿಕೆ ಬಂತು. ಅಂಗೇ ಅಡ್ಡಾದಳು. ಕಣ್ಣು ಮುಚ್ಚಿದವು..

..'ಮಾದೇವಿ, ನಾನು ಹೋಗ್ತಿನವ್ವ, ನೀನೂ ಬಾ.' ಅಂತ ಕಲ್ಲಯ್ಯ ಹೊಸೆದ ಹಗ್ಗದ ಪೆಂಡೆಗಳನ್ನು ಹೊತ್ತು ನಿಂತ. 'ಮಾವ, ನಿನ್ಗ ಅರುವು ಆದ ಇಲ್ಲ? ಹೊರಗ ಮಳೆ ಸುರಿತಾದ. ಹೊಳೆ ಬಾಗಿಲಿಗೆ ಬಂದದ! ಇಂಥದ್ರಲ್ಲಿ ಹೋಗ್ತಿನಂತ ನಿಂತಿದ್ದಿ?' ಎಂದು ಮಾದೇವಿ ತಡೆದು ನಿಲ್ಲಿಸಿದಳು. 'ಇಲ್ಲವ್ವ, ನನ್ನಟ್ಟಿ ಕಡೆ ಜೀವ ನೆನಸ್ತಾದ. ಹೋಗ್ತೀನಿ' ಅಂತ ಹಗ್ಗದ ಪೆಂಡೆಗಳನ್ನು ಹೊತ್ತು ತಲಬಾಗಿಲಿಂದ ಹೊರ ಬಿದ್ದು ನೀರಿನಲ್ಲೇ ನಡದ. ಮಾದೇವಿ 'ಬ್ಯಾಡ ಮಾವ' ಅಂತ ಬಡಕಂಡಳು. ಆತ ಕಣ್ಮರೆಯಾದ. ಮಾದೇವಿ ಕಲ್ಲಿನ ಮನ್ಯಾಗಿದ್ದ ಪಾಂಟಣಗಿ ಏರಿ ಮಾಳಿಗಿ ಮ್ಯಾಲೆ ನಿಂತು ನೋಡಿದಳು. ಎತ್ತಗ ಕಣ್ಣಾಡಿಸಿದ್ರೂ ನೀರೇ ನೀರು! ಕತ್ತಲು ಇಳಿಯುತ್ತಿತ್ತು. ಅಂತದರಾಗ ಕಲ್ಲಯ್ಯ ಮಾವ ಹೊಂಟಿದ್ದು ಕಾಣುತ್ತಿತ್ತು. 'ಮಾವ ಬಾಡ್ಯ ಬಾ'. ಅಂತ ಕಲ್ಲಿನಮನೆ ಮಾಳಿಗೆ ಮ್ಯಾಲೆ ನಿಂತ ಕೂಗಿದಳು. ಎದೆಮಟ್ಟ ನೀರಿನಲ್ಲಿ ಹೊಂಟಿದ್ದ. ಹಗ್ಗದ ಪೆಂಡೆ ತಲೆಮ್ಯಾಲಿತ್ತು. ವಯಸ್ಸಾದ ಕಲ್ಲಯ್ಯ ಮಾವನಿಗೆ ಅದೇನಾಯ್ತೋ ನೀರಿನಲ್ಲೇ ಕೈಕಾಲು ಬಡಿಯುತ್ತ ಒದ್ದಾಡುತ್ತಿದ್ದ! ಮುಂದಕ್ಕೆ ಹೋಗುವಲ್ಲ! ಮಳೆ ಸುರಿತಿತ್ತು! ಬಯಲಿಗೆ ಮಬ್ಬು ಕವಿದಿತ್ತು. 'ಮಾವ' ಅಂತ ಕೂಗುತ್ತಲೇ ಇದ್ದಳು. ನೋಡು ನೋಡುತ್ತ ಮಾವ ಕಾಣಲಿಲ್ಲ. ದಿಟ್ಟಿಸಿ ನೋಡುತ್ತ ಹುಡುಕಿದಳು. ನೀರು! ಬರೀ ನೀರು! 'ಮಾವ' ಅಂತ ಅಬ್ಬರಿಸಿ ಕೂಗಿದಳು..

ಮಾದೇವಿಗೆ ದಿಗ್ಗನೆ ಎಚ್ಚರಾಯ್ತು! ಎದೆ ಹೊಡೆದುಕೊಳ್ಳುತ್ತಿತ್ತು! ಮೈ ಬೆವರಿತ್ತು! "ಮಾವ" ಅಂತ ಕೂಗಿದಳು. ಕೋಣೆಯಲ್ಲಿದ್ದೀನಿ ಅಂತ ಜಲ್ದಿ ಅರಿವೆಗೆ ಬರಲಿಲ್ಲ. ಕಣ್ಣು ತೆರೆದರೂ ಕತ್ತಲೇ. ಮೆಲ್ಲಗೆ ಎದ್ದಳು. ಹಗಲುಗನ್ನು ಕಂಡದ್ದು ಅರಿವಿಗೆ ಬಂತು! ಕೆಟ್ಟ ಕನ್ಸು 'ಸಂಗಮನಾಥ' ಅಂದು ನೆನೆಯುತ್ತಲೇ "ಮಾವ" ಅಂತ ಕೋಣೆಯಿಂದ ಪಡಸಾಲಿಗೆ ಕಾಲಿಟ್ಟಳೋ "ಹ್ಹಾಂ" ಅಂತ ನಿಂತಳು. ನೀರಿನಲ್ಲೇ ಕಾಲಿಟ್ಟಿದ್ದಳು. 'ಶಿವನೇ' ಅಂದು ನೀರಿನಲ್ಲೇ ನಡೆಯುತ್ತ ಬಂದಳು. ತಲಬಾಗಿಲು ತೆರೆದಿತ್ತು. ಮಾವ ಕಾಣಿಸಲಿಲ್ಲ. ಪಡಸಾಲಿ ತುಂಬ ನೀರು! ಮೂಲೆಯಲ್ಲಿದ್ದ ಹೊರಸು ನೀರಿನಲ್ಲಿ ನಿಂತು ತಲೆತೂಗುತ್ತಿತ್ತು. 'ಮಾಮಾ' ಅಂತ ಕೂಗಿದಳು. ಆತನ ಕೋಣೆ ಕಡೆ ಹೋಗಿ ನೋಡಿದರೆ ಕಾಣಲಿಲ್ಲ. ಹಗ್ಗದ ಪೆಂಡೆಗಳೂ ಕಾಣಲಿಲ್ಲ. "ತನ್ನಟ್ಟಿಗೆ ಹೋದನೋ" ಅಂತ ಅಳು ಒತ್ತಿ ಬಂದಿತ್ತು. ಹೊತ್ತು ಕಂದುವ ಹೊತ್ತಿನಲ್ಲಿ ಕಂಡ ಕನಸ್ಸನ್ನು ನಿಂತು ನೆಪ್ಪು ಮಾಡಿಕೊಂಡಳು. ಅದು ಕನಸ್ಸೇನು? ಅಂತ ಅನುಮಾನ ಬಂತು! ಮಾದೇವಿ ಎದೆ ಎದೆ ಬಡಕಂಡಳು. "ಬ್ಯಾಡಾ.. ಬ್ಯಾಡಾ.. ಹೋಗ ಬ್ಯಾಡ.. ಅತ ಬಡಕಂಡೆ ಮಾವ! ಬುಟ್ಟು ಹೋಗಂತದ್ದು ಏನಿತ್ತು ದಗದಾ.." ಅಂತ ಅಳತೊಡಗಿದಳು. ತನ್ನ ಗತಿಯೇನು? ಮುಂಜಾನೆ ರಂಗಮ್ಮ ಕರದದ್ದು

ನೆಪ್ಪಾಯ್ತು. ಅಷ್ಟರಲ್ಲಿ ತಲಬಾಗಿಲಲ್ಲಿ ನೀರಿನ ಸಪ್ಪಳವಾಯ್ತು. ಯಾರೋ ಬಂದಂತೆ ಕಂಡರು. ಮಾದೇವಿ ದಿಟ್ಟಿಸಿ ನೋಡಿದರೆ ಪರಮ! "ಪರಮಾ" ಅಂತ ಅಬ್ಬರಿಸಿ ಕರೆದಳು. ಬುಸುಗುಡುತ್ತ ಪಡಸಾಲಿ ಏರಿ ಬಂದ. ಮಾದೇವಿಯನ್ನು ನೋಡಿದ್ದೇ ತಡ ಆಕೆ ಅವನತ್ತ ಬಂದಳು. ಆ ಮಬ್ಬು ಬೆಳಕಿನಲ್ಲಿ ಪರಮನ ಮಿಂಚುವ ಕಣ್ಣುಗಳು ಕಂಡವು. ಪರಮ ಅತ್ತ ಇತ್ತ ನೋಡಿದ. ತೂಗಾಡುತ್ತಿದ್ದ ಹೊರಸನ್ನು ಎಳದು ತಲಬಾಗಿಲ ಹೊರಗೆ ತೇಲಿಬಿಟ್ಟು. ಮಾದೇವಿಯನ್ನು ಕರದು ಕೈ ಹಿಡಿದು ತಲಬಾಗಿಲು ದಾಟಿಸಿ, ಹೊರಸಿನ ಮ್ಯಾಲೆ ಕೂಡಿಸಿದ. ಒಂದು ಕೈಯಿಂದ ಹೊರಸನ್ನು ಹಿಡಿದು ಎಳೆಯುತ್ತ ಇನ್ನೊಂದು ಕೈಯಿಂದ ಈಜುತ್ತ ಸಾಗಿದ. ನೀರು! ಬರೀ ನೀರು! ಮಾದೇವಿಗೆ ನೀರಿನ ಮ್ಯಾಲೆ ಕುಂತಂತಾಗಿತ್ತು. ಭಯಕ್ಕೆ ಮಾದೇವಿ ಕಣ್ಣಿಗೆ ಕತ್ತಲು ತುಂಬಿತು.

❖

(ಉದಯವಾಣಿ – ದೀಪಾವಳಿ ವಿಶೇಷಾಂಕ, 2013)

ಭಯೋಮೆಟ್ರಿಕ್ಸ್

ಪ್ರಹ್ಲಾದ ಅಗಸನಕಟ್ಟೆ

ಆ ಕಚೇರಿಯ ಅಧೀರ ಅಧೀಕ್ಷಕ ನೀರಲಗಿ, ತನ್ನ ಕಚೇರಿಯ ಮುಂಭಾಗದಲ್ಲಿ ಇತ್ತೀಚೆಗಷ್ಟೇ ನೌಕರರ ಅನಿಯಂತ್ರಿತ ಚಲನವಲನಗಳನ್ನು ನಿಗ್ರಹಿಸಲೆಂದೇ ಪ್ರತಿಷ್ಠಾಪಿಸಿರುವ ಬಯೋಮೆಟ್ರಿಕ್ಸ್ ಮೇಲೆ ಮುಂಜಾನೆ ಮುಂಜಾನೆ ತನ್ನ ತೋರಬೆರಳನ್ನ ಒತ್ತುತ್ತಿದ್ದಂತೆ.. ಅದು ಟ್ರೈ ಒನ್ಸ್ ಎಗೈನ್.. ಟ್ರೈ ಒನ್ಸ್ ಎಗೈನ್... ಎಂದು ಉಗ್ರ ದನಿಯಲ್ಲಿ ರಚ್ಚೆ ಹಿಡಿದ ಮಗುವಿನಂತೆ ಒದರಾಡಿತು. ನೀರಲಗಿಯವರಿಗೆ ಏನಾಯಿತೋ ಏನೋ ಧಡ್ಡನೆ ನೆಲಕ್ಕೆ ಉರುಳಿ ಬೇಹೋಷ್ ಹೋದರು. ಮಧ್ಯಾಹ್ನದ ಊಟಕ್ಕೆ ಅಂತ ತಮ್ಮ ಹೆಗಲ ಚೀಲದಲ್ಲಿ ಕಟ್ಟಿಕೊಂಡು ಬಂದಿದ್ದ ಅವರ ಊಟದ ಡಬ್ಬಿ.. ನೀರಿನ ಬಾಟಲು.. ನಾಲ್ಕಾರು ಕಾಗದದ ಪತ್ರಗಳು.. ಗುಟ್ಕಾ ಎಲಿ ಅಡಿಕೆ ತಂಬಾಕಿನ ಕಟ್ಟುಗಳು ಅವರೊಟ್ಟಿಗೆ ಧರೆಗುರುಳಿ ದಿಕ್ಕಿಗೊಂದರಂತೆ ಅಂಗಾತ ಬಿದ್ದವು. ನೀರಲಗಿಯೊಟ್ಟಿಗೆ ಬಯೋಮೆಟ್ರಿಕ್ಸ್ ಬಾಯಿಗೆ ತಮ್ಮ ಬೆರಳೊಡ್ಡಲು ಪಾಳಿ ಹಚ್ಚಿದ್ದ ಉಳಿದ ನೌಕರರೆಲ್ಲಾ "ಸರ್ ಏನಾತ್ರಿ" "ಎಲ್ಲಾ ದೂರ ಸರಕ್ಕಳ್ರಿ" "ಸ್ವಲ್ಪ ಗಾಳಿ ಹಾಕ್ರಿ" "ನೀರ ತರ್ರಿ" "ಅಂಬುಲೆನ್ಸ್‌ಗೆ ಫೋನ್ ಮಾಡ್ರಿ" ಅಂತ ಗದ್ದಲ ಎಬ್ಬಿಸಿ ಯಾರೂ ಒಂದು ಹೆಜ್ಜೆ ಮುಂದಿಕ್ಕದೆ ಅಂಗಾತ ಬಿದ್ದ ನೀರಲಗಿಯವರನ್ನು ಹಂಗೆ ನೋಡುತ್ತಾ ತಾವು ಒಂದು ದಿನ ಹಿಂಗೆ ಕವುಚಿ ಬೀಳಬಹುದೇ ಎಂಬ ದೂರದ ಅಗ್ರಾಹ್ಯ ಭಯಕ್ಕೆ ಬಿದ್ದರು.

ನೀರಲಗಿಯವರ ಸೇವೆ ಮುಕ್ತಾಯಗೊಳ್ಳಲು ಇನ್ನೊಂದು ವರ್ಷವಷ್ಟೇ ಬಾಕಿಯಿದೆ.. ಮುವ್ವತ್ತಾರು ವರ್ಷಗಳ ಸುದೀರ್ಘ ಸೇವೆಯನ್ನು ಆರೋಗ್ಯ ಇಲಾಖೆಯಲ್ಲಿ ಸಲ್ಲಿಸಿದ್ದಕ್ಕೆ ಅವರ ಇಲಾಖೆ ಅವರಿಗೆ ಕೊಟ್ಟ ಕಾಣಿಕೆಯೋ ಎನ್ನುವಂತೆ ಅವರ ದೇಹ ಸಕಲ ರೋಗಗಳ ಆಡಂಬೊಲವಾಗಿದೆ. ಅದರಲ್ಲೂ ಮಧುಮೇಹ.. ರಕ್ತದೊತ್ತಡಗಳೆಂಬುವವು ಅವರೇ ಹೆತ್ತ ಅವಳಿ ಮಕ್ಕಳಂತೆ ಹಗಲಿರಳು ಅವರ ಪ್ರಾಣ ಹಿಂಡುತ್ತಿವೆ. ತಾರುಣ್ಯದಲ್ಲಿ ಉಕ್ಕುಕ್ಕಿ ಹರಿದ ಜೀವನೋತ್ಸಾಹ ಈ ಇಳಿ ವಯಸ್ಸಿನಲ್ಲಿ ಇಳಿದಿಳಿದು ಅವರ ದೇಹದ ಸರ್ವಾಂಗಗಳು ರಿಪೇರಿಗೆ ಬಂದಿವೆ. ಹಾಗೆ ನೋಡಿದರೆ ಅವರ ಮುದಿದೇಹವೆಂಬ ಲಡಕಾಸು ಎಂಜಿನ್ ಚಲಿಸುವುದೇ ಅವರು ನಿತ್ಯ ನುಂಗುವ ಮಾತ್ರೆ – ಮದ್ದುಗಳೆಂಬ ಪೆಟ್ರೋಲ್ – ಡೀಸಲ್‌ಗಳಿಂದ.

ನೀರಲಗಿಯವರು ಪರಿಸ್ಥಿತಿಯ ನಿಷ್ಪಾಪಿ ಕೂಸು. ಈಗ ನೆನೆದರೆ ಅವರ ಬದುಕು ಕಾಲ ಪ್ರವಾಹದಲ್ಲಿ ಯಾವ ಪ್ರತಿರೋಧ – ಪ್ರತಿಭಟನೆ ತೋರದೆ ಸುಮ್ಮನೆ

ತೇಲಿ ಹೋದ ಒಂದು ಸಣ್ಣ ಅಲೆಯಂತೆ ಭಾಸವಾಗುತ್ತದೆ. ಅವರು ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಾ ಬಂದಿದ್ದರೂ ಅವರು ತಮ್ಮ ಆರೋಗ್ಯದ ಬಗ್ಗೆ ನಿಷ್ಕಾಳಜಿಯನ್ನು ತೋರುತ್ತಾ ಬಂದರೆಂದು ಧಾರಾಳವಾಗಿ ಹೇಳಬಹುದು. ಅವರ ಇಲಾಖೆ ಮಂದಿಗೆ ಒತ್ತೊತ್ತಿ ಹೇಳುವ ಕುಟುಂಬ ಯೋಜನೆಯ ಬಗ್ಗೆ ಅವರು ದಿವ್ಯ ನಿರ್ಲಕ್ಷ್ಯ ತಾಳಿದ್ದರಿಂದಲೋ – ಅಥವ ತಮ್ಮ ಇಲಾಖೆಯ ಮೇಲೆ ತಮಗಿರುವ ಗುಪ್ತ ದ್ವೇಷದಿಂದಲೋ ಅವರು ಮಕ್ಕಳ ಮೇಲೆ ಮಕ್ಕಳ ಹುಟ್ಟಿಸಿ ಐದು ಜನ ಪಂಚ ಪಾಂಡವರ ತಂದೆಯಾದರು.. ಹುಟ್ಟಿಸಿದ ದೇವರು ಹುಲ್ಲು ಮೇಯಿಸದಿರುತ್ತಾನೆಯೇ ಎಂದು ತಿಂಗಳ – ತಿಂಗಳಾ ಬರುವ ಸಂಬಳವನ್ನು ನಾಳೆಗೆ ಉಳಿಸದೆ ಮೇಯಿದಿದ್ದರಿಂದ ಅವರ ಮಕ್ಕಳಿಗೆ ಈಗ ಹುಲ್ಲು ಮೇಯುವ ಪರಿಸ್ಥಿತಿ ಬಂದೊದಗಿದೆ. ಆ ದ್ವಾಪರ ಯುಗದ ಪಾಂಡವರೋ ಅಲ್ಪಮಟ್ಟಿನ ರಾಜಸುಖವನ್ನು ಉಂಡ ಬಳಿಕ ವನವಾಸ – ಉಪವಾಸಗಳಿಗೆ ಪಕ್ಕಾದರೆ.. ಈ ಕಲಿಗಾಲದ ಪಾಂಡವರಿಗೆ ಬಾಲಾರಭ್ಯವೇ ವನವಾಸದ ಉಪಟಳಗಳ ಕಾಟ ಶುರುವಾಯ್ತು. ಗತಿಯಿಲ್ಲದೆ ಅವರೀಗ ಊರೊಳಗೆ ದಕ್ಕುವ ನಾನಾ ಉಪವೃತ್ತಿಗಳ ಮಾಡುತ್ತಾ ಉದರಂಭಣೆಗೆ ಮುಂದಾಗಿದ್ದಾರೆ.. ಉಪವೃತ್ತಿಗಳು ಹುಟ್ಟಿಸುವ ಹಗಲ ಅಸಮಾಧಾನದ ಕಿಡಿಗಳಿಗೆ – ಸಂಜೆ ಹಲವು ಚಟಗಳ ನೀರು ಹುಯ್ದುಕೊಂಡೇ ಅಪರಾತ್ರಿ ಮನೆಯೊಳಕ್ಕೆ ಕಾಲಿಕ್ಕಿ ಕರ್ಣಕಠೋರ ಗದ್ದಲಗಳ ಸೃಷ್ಟಿಸುವಲ್ಲಿ ನೈಪುಣ್ಯತೆ ಸಾಧಿಸಿದ್ದಾರೆ.

ನೀರಲಗಿಯವರು ಸೇವೆಗೆ ಸೇರಿದ್ದು ದ್ವಿತೀಯ ದರ್ಜೆ ಕಾರಕೂನರಾಗಿ. ಚಿಕ್ಕ ಪುಟ್ಟ ಹಳ್ಳಿ–ಗ್ರಾಮಗಳಲ್ಲಿ ಅವರ ಸೇವೆ ನಿರಾತಂಕವಾಗಿ ನೀರಂತೆ ಸಲೀಲವಾಗಿ ಸಾಗಿ ಬಂತು. ಆಗಾದರೂ ಆರೋಗ್ಯ ಇಲಾಖೆಯಲ್ಲಿ ಈಗಿನಂತೆ ನೂರೆಂಟು ಕಾರ್ಯಕ್ರಮಗಳು.. ಗುರಿಗಳು.. ಖಾಯಿಲೆಗಳು.. ಮದ್ದುಗಳು.. ಜಡ್ಡು ಜಾಪತ್ರೆಗಳೇನು ಇರಲಿಲ್ಲ.. ಜನ ಕೂಡ ರೋಗ ರುಜಿನ ಹುಟ್ಟು – ಸಾವು ಬದುಕಿನ ಅವಿಭಾಜ್ಯ ಅಂಗವೆಂಬಂತೆ ಅವು ಬಂದಂತೆ ಸ್ವೀಕರಿಸಿ ಜೀವನ ಯಾತ್ರೆಯನ್ನು ಮುಗಿಸುತ್ತಿದ್ದರು. ನೀರಲಗಿಯವರಿಗೆ ಒಂದಾದರೊಂದರ ಮೇಲೆ ಭಡ್ತಿ ಸಿಗುತ್ತಿದ್ದಂತೆ.. ಹೊಸ ಹೊಸ ನಮೂನೆಯ ಖಾಯಿಲೆಗಳು.. ಅವುಗಳನ್ನು ನಿಯಂತ್ರಿಸಲು ನೂರೆಂಟು ಕಾರ್ಯಕ್ರಮಗಳು.. ಅದಕ್ಕೆ ಬೇಕಾದ ಸಿಬ್ಬಂದಿ ವರ್ಗದ ನೇಮಕಾತಿಗಳು ಹುಟ್ಟಿಕೊಂಡವು. ಮಂದಿಯ ಹುಟ್ಟು – ಸಾವುಗಳಿಗೆ ಆಸ್ಪತ್ರೆಯೇ ತೊಟ್ಟಿಲಾಗುತ್ತ ಸರಳ ನೌಕರಿ ಬರುಬರುತ್ತಾ ಸಂಕೀರ್ಣ ರೂಪ ತಾಳತೊಡಗಿತು. ಈಗ್ಗೆ ನಾಲ್ಕು ವರ್ಷಗಳ ಹಿಂದೆ ಅವರು ಕಚೇರಿಯ ಅಧೀಕ್ಷಕ ಅಂತ ಭಡ್ತಿ ಪಡೆದು ಈ ಮಹಾನಗರದ ಕಾರ್ಪೋರೇಷನ್ನಿನ ಆಸ್ಪತ್ರೆಗೆ ಬಂದ ಮೇಲೆ ಹೊಸ ಪಡಿಪಾಟಲುಗಳು ಅವರ ಬದುಕಲ್ಲಿ ಧುತ್ತನೆ ಕಾಣಿಸಿಕೊಂಡವು..

ಗ್ರಾಮಾಂತರ ಪ್ರದೇಶಗಳಲ್ಲಿ ನೌಕರಿ ಮಾಡುವಾಗ ಇಲ್ಲದ ಒತ್ತಡಗಳು.. ಉದ್ವೇಗಗಳು.. ಆತಂಕಗಳು ಅವರು ನಗರಕ್ಕೆ ಬಂದ ಕೂಡಲೇ ಅವರನ್ನು ಆವರಿಸಿಕೊಂಡವು.. ಮನೆ ಹುಡುಕುವುದರಿಂದ ಹಿಡಿದು ಗ್ಯಾಸ್ ಕನೆಕ್ಷನ್ ಪಡೆಯುವುದರೊಳಗೆ ಅವರು ಚಪ್ಪಲಿಗಳು ಹರಿದು ಹೋದವು. ನಗರ ಅಂದರೇನೇ ನರಗಳನ್ನು ಉರಿದು ಮುಕ್ಕುವ ತಾಣ ಅಂಬುದು ಅವರಿಗೆ ಬಹು ಬೇಗ ಅರ್ಥವಾಯಿತು.. ಇನ್ನೊಬ್ಬರಿಂದ ಕೆಲಸ ತೆಗೆದುಕೊಳ್ಳುವ ಕಷ್ಟಕ್ಕಿಂತ ಇನ್ನೊಬ್ಬರ ಕೈ ಕೆಳಗೆ ಕೆಲಸ ಮಾಡುವುದು ಸುರಕ್ಷಿತ ಮತ್ತು ಕ್ಷೇಮ ಎಂಬ ಭಾವವೂ ಅವರಿಗೆ ಮನವರಿಕೆಯಾಯಿತು.

ಬಹುವರ್ಷ ಆ ಕಾರ್ಪೊರೇಷನ್ನಿನ ಆಯಕಟ್ಟಿನ ಜಾಗೆಯಲ್ಲಿ ಬೇರು ಬಿಟ್ಟು ಬಲಿತ ಅಧೀನ ನೌಕರರು ನೀರಲಗಿಯವರ ಯಾವ ಮಾತಿಗೂ ಕ್ಯಾರೇ ಅನ್ನುತ್ತಿರಲಿಲ್ಲ.. ಅವರೊಬ್ಬ ಏನು ತಿಳಿಯದ ಗುಗ್ಗು, ಪಿರಿಪಿರಿಗಟ್ಟಿಸುವ ಮುದಿಯ.. ಹಳ್ಳಿಯ ಗಮ್ಮಾರ ಅನ್ನುವಂತೆ ನೋಡುತ್ತಿದ್ದರು. ಬಂದಾಗ ಬಂದಾರು.. ಹೋದಾಗ ಹೋದಾರು.. ಕೆಲಸ ಮಾಡಿದರೆ.. ಮಾಡಿದರು ಇಲ್ಲವಾದರೆ ಊರೊಳಗಿನ ನಾನಾ ವ್ಯವಹಾರ–ದಂಧೆಗಳಲ್ಲಿ ದಿನಗಳ ದೂಡುವರು. ಹೆಸರಿಗೊಂದು ಅಟೆಂಡೆನ್ಸು.. ಮೂವ್‌ಮೆಂಟ್ ರಿಜಿಸ್ಟರ್.. ಒಮ್ಮೊಮ್ಮೆ ವಾರಗಟ್ಟಲೆ ನಾಪತ್ತೆಯಾದವರು ಧಿಡೀರ್ ಪ್ರತ್ಯಕ್ಷರಾಗಿ – ನೀರಲಗಿಯವರ ಕಣ್ಣ ಮುಂದೆಯೇ – ನೀಟಾಗಿ ಠಾಕುಟೀಕಾಗಿ ಇಡೀ ವಾರದ ಸಹಿ ಒತ್ತುತ್ತಿದ್ದರು.

ಇನ್ನು ಅಲ್ಲಿದ್ದ ಒಂದಿಬ್ಬರು ವೈದ್ಯರು ಸಾಕ್ಷಾತ್ ದೈವಾಂಶ ಸಂಭೂತರು.. ಯಾವಾಗ ಪ್ರತ್ಯಕ್ಷವಾಗುತ್ತಾರೋ.. ಯಾವಾಗ ಅಂತರ್ಧಾನರಾಗುತ್ತಾರೋ.. ಅವರು ನಿಯಮಾತೀತರು.. ಅವರದ್ದು ಒಂದೇ ವಾದ.. ಸಮಯಕ್ಕೆ ಸರಿಯಾಗಿ ನಾವು ಬರಲಾರೆವು – ಸಮಯ ಇದ್ದಾಗ ನಾವು ಬರುವೆವು.. ಹಿಂಗೆ ಸಮಯ ಇದ್ದಾಗ ಬಂದರಾದರೂ.. ಅವರು ರೋಗಿಗಗಳನ್ನು ತಪಾಸಿಸುತ್ತಿದ್ದಕ್ಕಿಂತಲೂ "ತಮ್ಮ ಪಗಾರದ ಬಿಲ್ಲು ಆಯಿತಾ" "ಟಿ.ಎ – ಡಿ.ಎ ಬಂತಾ" "ಬಜೆಟ್ ರಿಲೀಸ್ ಆಯ್ತಾ" ಮೊದಲಾದ ಕುಶಲೋಪರಿಯ ಮಾತುಗಳ ಗಾಳಿಯಲ್ಲಿ ತೇಲಿಸಿ ಗಾಯಬ್ ಆಗುವರು.. ಯಾವಾಗ ಹೋದರು ಆ ದವಾಖಾನೆಯಲ್ಲಿ ವೈದ್ಯರಿರುವುದಿಲ್ಲ ಎಂಬ ಮಾತು ನಗರದಲ್ಲಿ ಲೋಕ ಪ್ರಸಿದ್ಧವಾಗಿ ಮಂದಿ ದಿನೇ ದಿನೇ ಏನೇ ಬೇನೆ ಬಂದರೂ ಈ ದವಾಖಾನೆಯ ಕಡೆ ತಲೆ ಹಾಕುವುದನ್ನು ಬಿಟ್ಟುಬಿಟ್ಟರು. ಕಾಲಾಂತರದಲ್ಲಿ ಇಲ್ಲೊಂದು ದವಾಖಾನೆ ಇದೆ ಎಂಬುದು ಜನರ ಮನಸ್ಸಿನಿಂದ ಮರೆಯಾಗಿ ಹೋಯ್ತು..

೨

ಒಮ್ಮೊಮ್ಮೆ ಮಂದ ಮಾರುತ ಇದ್ದಕ್ಕಿದ್ದಂತೆ ಝಂಝಾವಾತವಾಗಿ ರೂಪಾಂತರಗೊಳ್ಳುವಂತೆ ಆ ಮಹಾನಗರದ ಮಾಹಾಪಾಲಿಕೆಗೊಬ್ಬ ನವ ತರುಣ

ಕಮೀಷನರ್ ಬಂದ. ಬಂದ ವಾರದಲ್ಲಿಯೇ ಕಂಪನಗಳ ಅಲೆಗಳನ್ನ ಎಬ್ಬಿಸಿದ. ಅವನನ್ನು ಆ ಗೊಬ್ಬು ಹಿಡಿದ ಊರಿಗೆ ಆ ಊರ ಸ್ಥಳೀಯ ರಾಜಕಾರಣಿಗಳೇ ಖುದ್ದು ಮುಖ್ಯಮಂತ್ರಿಗಳ ಬೆನ್ನು ಬಿದ್ದು ಎಳಕೊಂಡು ಬಂದಿದ್ದಾರೆಂಬ ಸುದ್ದಿಯೂ ಇದೆ. ಹತ್ತಿರ ಬರುತ್ತಿರುವ ಚುನಾವಣೆ – ಮತ ಕೇಳಲು ಮಾರಿ ಮುಂದೆ ಮಾಡಿ ಹೋದರೆ ಜನ ಉಗಿದಾರೆಂಬ ಭಯ, ಇರುವ ಅಲ್ಪ ಸಮಯದಲ್ಲಿ ಅಗಾಧ ಮಾಡಿದ್ದೇವೆಂದು ತೋರಿಸುವ ಚಪಲದಿಂದಾಗಿ ರಾಜಕಾರಣಿಗಳು ಹೈ ಡ್ರಾಮಾ ಸೃಷ್ಟಿಸಲೆಂದೆ ಅತನನ್ನು ಇಲ್ಲಿಗೆ ಕರತಂದಿದ್ದಾರೆಂದು ಪತ್ರಿಕೆಗಳು ಟೀಕಾ ಪ್ರಹಾರ ನಡೆಸಿದವು.

ಕಮೀಷನರ್ ದಿನಕ್ಕೊಂದು ಮೀಟಿಂಗ್ ನಡೆಸುವವ.. ದಿನಕ್ಕೊಂದು ಸುತ್ತೋಲೆ ಹೊರಡಿಸುವವ.. ಕಾರ್ಪೊರೇಟರಗಳ ಸಭೆ ಕರೆಯುವವ, ಅವರಿಗೆ ಡೆವಲಪಮೆಂಟ್ ಮತ್ತು ಟೈಂ ಮ್ಯಾನೇಜಮೆಂಟ್ ಬಗ್ಗೆ ಪವರ್ ಪಾಯಿಂಟ್ ಪ್ರಸೆಂಟೇಶನ್ ಮಾಡುವವ.. ಜೀಪು ಹತ್ತಿ ಮಿಂಚಿನ ನಗರ ಸಂಚಾರ ಮಾಡುವವ. ಈಗ ಬೇಕಿರುವುದು ಆಮೆಯ ನಡಿಗೆಯಲ್ಲ; ಜಿಂಕೆಯ ವೇಗ.. ಪೆನ್ನು–ಹಾಳೆ–ಕಡತ–ಫೈಲ್‌ಗಳೆಲ್ಲಾ ಬಂದ್.. ಈಗ ಎಲ್ಲಾ ಇ–ಮೇಲ್‌ಗಳ ಮಿಂಚಿನೋಲೆ.. ಯಾರಿಗೆ ಕಂಪ್ಯೂಟರ್ ಜ್ಞಾನವಿಲ್ಲವೋ ಅವನು ಇಲ್ಲಿಟರೇಟ್.. ಅವರಿಗೆ ಗೇಟ್ ಪಾಸ್ ಅಂದ.. ಹೀಗೆ ದಿನಕ್ಕೊಂದು ಆಡುವವ.

ವಾರದೊಪ್ಪತ್ತಿನಲ್ಲಿ ಹೊಸ ಕಮೀಷನರ್ ಕಣ್ಣು ನೀರಲಗಿಯವರ ಕಚೇರಿಯ ಮೇಲೆ ಬಿತ್ತು.. ಕೆಳಗಿನದನ್ನು ಬಿಗಿ ಮಾಡಿದರೆ ಮೇಲಿನದು ತನ್ನಿಂದತಾನೆ ಸುಧಾರಿಸುತ್ತೆ ಎನ್ನುವ ನಂಬಿಗೆ ಅವನದು. ಆರೋಗ್ಯ ಇಲಾಖೆಯ ವರದಿ ಓದಿ ಅವನ ಕಣ್ಣು ಕೆಂಪಾದವು. "ಇದೇನು ಮುನ್ಸಿಪಾಲಿಟಿಯ ದವಾಖಾನೆಯೋ.. ದನ ಕೂಡಿ ಹಾಕುವ ಪಾಂಜರಪೋಳೊ.. ಕಾಲ್ ದಟ್ ಬ್ಲಡಿ ಸೂಪರಿಂಟೆಂಡೆಂಟ್". ನೀರಲಗಿಯವರಿಗೆ ಬುಲಾವ್ ಬಂದಾಗ ಸಂಜೆಯಾಗಿತ್ತು.

ನೀರಲಗಿ ಇದೇ ಪ್ರಪ್ರಥಮ ಬಾರಿಗೆ ಹೊಸ ಕಮೀಷನರ್ ಭೇಟಿಯಾಗಲು ಹೊರಟದ್ದರಿಂದ ಅವರ ಮನಸ್ಸು ಇನ್ನಿಲ್ಲದ ಭಯಗಳಿಂದ ತತ್ತರಿಸುತ್ತಿತ್ತು. ಬಿ.ಪಿ. ನೆತ್ತಿಗೇರಿ ಎದೆ ಢವ ಢವ ಅನ್ನತೊಡಗಿತು.. ಮನ ಇಲ್ಲದ ಘೋರ ಕಲ್ಪನೆಗಳಿಗೆ ಸಿಕ್ಕು ತತ್ತರ ನಡುಗತೊಡಗಿತು. ಕೊನೆಗಾಲದ ಸರ್ವೀಸ್ ಸುಸೂತ್ರವಾಗಿ ಮುಗಿಯಲಾರದೇನೋ ಎಂಬ ಅಂಜಿಕೆ ಅವರನ್ನು ಅಲ್ಲಾಡಿಸತೊಡಗಿತು. ಅವರು ಗಾಬರಿಯಿಂದಲೇ ಕಮೀಷನರ್ ಛೇಂಬರ್ ಹೊಕ್ಕರು.

ಬಿಳಿಯ ಅಫ್ ಷರ್ಟ್, ಕಪ್ಪು ಟೈ, ಗೋಲ್ಡನ್ ಕಟ್ಟಿನ ಕನ್ನಡಕಧಾರಿ ಕಮೀಷನರ್ ತನ್ನ ಎದುರಿನ ಕಂಪ್ಯೂಟರಿನಲ್ಲಿ ಜಗತ್ತನ್ನು ಸುತ್ತುತ್ತಿದ್ದ.. ಆ ಕೋಣೆಯ ಮೌನವೇ

ಭಯ ಹುಟ್ಟಿಸುವಂಗಿತ್ತು.. ಅಧಿಕಾರ ಸೃಷ್ಟಿಸಿದ ಕಂಪನಗಳು ಅಲ್ಲಿಗೆ ಕಾಲಿಟ್ಟವರ ಕಾಲಿಡಿದು ಅಲ್ಲಾಡಿಸುವಂಗೆ ಅದೃಶ್ಯವಾಗಿ ಅಲ್ಲಿ ಅವಿತುಕೊಂಡಿವೆಯೇನೋ? ನೀರಲಗಿಯವರು ಅಂಥ ಹೆದರಿಕೆ ಪಕ್ಕಾಗಿ ಸುತ್ತೂ ನೋಡಿದರು. ಕಿಟಕಿಗಳಿಗೆ ನೇತು ಬಿಟ್ಟಿದ್ದ ಕೆಂಪು ಕರ್ಟನಗಳು 'ನಿನಗೊಂದು ಗತಿ ಕಾದಿದೆ' ಎಂದು ಹೆದರಿಸುವಂತೆ ಗಾಳಿಗೆ ಪಟ ಪಟ ಸದ್ದು ತೆಗೆದು ಅಲ್ಲಿನ ಮೌನವನ್ನು ಕಲಕುತ್ತಿದ್ದವು.

"ಹೂ ಆರ್ ಯೂ" ಕಮೀಷನರ್ ಕಂಪ್ಯೂಟರ್ ಲೋಕದಿಂದ ಈ ಲೋಕಕ್ಕೆ ಇಳಿದು ನೀರಲಗಿಯವರ ಕಡೆ ತಿರುಗಿ ಪ್ರಶ್ನೆಯನ್ನು ಬಾಣದಂತೆ ಬಿಟ್ಟರು. ಆ ಬಾಣದ ತೀಕ್ಷಣತೆಗೆ ತತ್ತರಿಸಿದವನಂತೆ ನೀರಲಗಿ ತಲೆ ಕರೆಯುತ್ತಾ "ಸಾರ್.. ನಾನು ನೀರಲಗಿ ಅಂತ.. ಆಫೀಸ್ ಸೂಪರಿಡೆಂಟ್.." ಅಂದವ ತನಗೆ ತಾನೆ ಆತ್ಮವಿಶ್ವಾಸ ತುಂಬಿಕೊಳ್ಳಲೋ ಎಂಬಂತೆ "ಮುವ್ವತ್ತು ವರ್ಷ ಲಾಂಗ ಸರ್ವೀಸ್ ಆಗ್ಯೆದ.. ನನಗೆ ಐದು ಜನ ಗಂಡು ಮಕ್ಕಳು ಸಾರ್" ಅಂದ.

"ಐ ಸಿ.. ಎಷ್ಟು ಹೆಂಡತಿಯರೂ ಅಂತ ಹೇಳಲಿಲ್ಲ.." ಅಂದ ಕಮೀಷನರ್ ತನ್ನ ಎದುರಿನ ಫೈಲ್‌ಗಳಲ್ಲಿ ಅವಿತಿದ್ದ ಆಸ್ಪತ್ರೆಯ ಫೈಲ್‌ಗಳನ್ನು ಹೊರಗೆಳೆದು "ಮುವ್ವತ್ತು ವರ್ಷ ಲಾಂಗ ಸರ್ವೀಸ್ ಆಗಿದೆ ಅಂತೀರಿ.. ನಿಮ್ಮನ್ನ ನೋಡಿದರೆ ನೆಟ್ಟಗೆ ಲಾಂಗ ಹಾಕ್ಕೊಳಕೆ ಬರದೋರ ತರ ಕಾಣ್ತೀರಿ.. ನೆಟ್ಟಗೆ ಕನ್ನಡನೂ ಬರಂಗ ಕಾಣಲ್ಲ–ಇಂಗ್ಲೀಷೂ ಬರಂಗ ಕಾಣಲ್ಲ.. ನೋಡ್ರಿ ನಿಮ್ಮ ಫೈಲ್ಸ್ ಹೆಂಗವಾ.. ಇನ್ನ ಮೇಲೆ ಎಲ್ಲಾ ಫೈಲ್ಸ್ ಬಂದ್.. ನನ್ನತ್ರ ಯಾವ ಮ್ಯಾಟರ್ ಇದ್ದರು ಕಂಪ್ಯೂಟರ್‌ನಲ್ಲೇ ಡ್ರಾಫ್ಟ್ ಆಗಿ ಬರಬೇಕು.. ನಿಮ್ಗೆ ಕಂಪ್ಯೂಟರ್ ಬರುತ್ತಾ"

ನೀರಲಗಿಯವರ ಗಂಟಲಾರಿ ಉಸಿರು ನಿಂತಂತಾಯಿತು.. ಕಣ್ಣಿಗೆ ಕತ್ತಲ ಇಳಿಯಿತು.. ಏನಾದರೊಂದು ಹೇಳೋಣವೆಂದರೂ ದನಿ ಹೊರಬರದೆ ಗೊರಗೊರ ಅಂದು ತಲೆ ತಗ್ಗಿಸಿದರು.

"ಕಲ್ತಿಲ್ಲವಾ.. ಮೂರು ತಿಂಗಳ ಟೈಂ ಕೊಡ್ತಿನಿ.. ಅಂಡರ್‌ಸ್ಟಾಂಡ್.. ಕಾಲಕ್ಕೆ ತಕ್ಕಂತೆ ಅಪ್‌ಡೇಟ್ ಆಗಬೇಕು.. ಕಾಲ.. ಸಮಯ–ಟೈಂ ಇಂಪಾರ್ಟೆಂಟ್.. ಕಚೇರಿ ಮುಂದ ಬಯೋಮೆಟ್ರಿಕ್ಸ್ ಫಿಕ್ಸ್ ಮಾಡ್ಸತೀನಿ.. ದಿನಕ್ಕೆ ನಾಲ್ಕು ಸಾರಿ ಫಿಂಗರ್ ಪ್ರಿಂಟ್ ಅಟೆಂಡನ್ಸ್ ಮಾಡಬೇಕು.. ಎಲ್ಲಾ ಕಡೆ ಸಿ.ಸಿ.ಟಿ.ವಿ ಕ್ಯಾಮರ ಫಿಕ್ಸ್ ಮಾಡ್ಸತೀನಿ. ನೀವೆಲ್ಲಾ ದಡ್ಡು ಬಿದ್ದಂಗ ಕಾಣುತ್ತೆ. ಈಗ ಹೋಗಿ ಎಲ್ಲರಿಗೂ ಈ ಮೆಸೇಜ್ ಸರ್ಕ್ಯೂಲೇಟ್ ಮಾಡಿ"

ನೀರಲಗಿ ಹ್ಞಾಂ ಎನ್ನದೆ ಹ್ಞೂಂ ಅನ್ನದೆ ಹೊರ ಬಂದರು.

ಕಚೇರಿಯ ಕಟಾಂಜನದ ಮುಂದೆ ಬಯೋಮೆಟ್ರಿಕ್ಸ್ ಬೆದರುಗೊಂಬೆಯಂತೆ ಬಂದು ಕೂತ ಕೂಡಲೆ ಎಲ್ಲರ ಬಿ.ಪಿ. ಒಮ್ಮೆಲೆ ಏರತೊಡಗಿತು. ಮುಂಜಾನೆ

ಮುಂಜಾನೆ ದೇವರ ದರ್ಶನಕ್ಕೆ ದೇವಸ್ಥಾನದ ಮುಂದೆ ಪಾಳಿ ಹಚ್ಚಿ ನಿಲ್ಲುವ ಭಕ್ತರಂತೆ ಎಲ್ಲರೂ ಅದರ ಬಾಯಿಗೆ – ತಮ್ಮ ಬೆರಳೊಡ್ಡಲು ಗಡಿಬಿಡಿಯಿಂದ ಸಾಲಿಡಿದು ನಿಲ್ಲತೊಡಗಿದರು.. ಅವರಲ್ಲಿ ಉಶ್ಯ ಅನ್ನುವವರಷ್ಟೋ, ಬೆವರ ತೀಡಿ ಕೊಳ್ಳುವವರೆಷ್ಟೋ, ಹೊಸ ಕಮೀಷನರ್‌ಗೆ ಶಾಪ ಹಾಕುವವರೆಷ್ಟೋ, ನೀರಲಗಿಯವರ ಪಡಿಪಾಟಲಂತೂ ಹೇಳತೀರದು.. ಅದರ ಜೊತಿಗೆ ಕುಸ್ತಿ ಬಿದ್ದಂತೆ ದಿನ ಅರ್ಧ ತಾಸು ಒದ್ದಾಡುವವರು.. ಆ ಹೊಸ ಯಂತ್ರಕ್ಕೂ ಮುದುಕರನ್ನು ಕಂಡರೆ ಅಗುವುದಿಲ್ಲವೋ ಅನ್ನುವಂತೆ ಅವರ ಫಿಂಗರ್ ಪ್ರಿಂಟ್ ದಾಖಲಿಸಲು ನಿರಾಕರಿಸುತ್ತಾ ಅವರನ್ನು ಸತಾಯಿಸುತ್ತಿತ್ತು.. ನೀರಲಗಿಯವರ ಒದ್ದಾಟ ಕಂಡು ಅವರ ಸಹೊದ್ಯೋಗಿಗಳು "ನೀರಲಗಿ ಸಾಹೇಬರೇ–ನಿಮ್ಮ ಬೆರಳ ಚರ್ಮ ಸವೆದು ಹೋಗಿರಬೇಕ್ರಪಾ.. ವಯಸ್ಸಾತು ನೋಡ್ರಿ.. ನೀವು ಲಗೂನರಾ ಬರ್ರೀ.. ಇಲ್ಲಾ ತಡಗ್ಯಾರ ಬರ್ರಿ.. ನಡುಕ ಬಂದು ಅಡ್ಡ ನಿಲ್ಲಬ್ಯಾಡ್ರಿ.. ಉಳಿದ ಮಂದಿಗ ತ್ರಾಸ ಅಕ್ಕತಿ" ಅನ್ನುವರು.

ಭಯೋಮೆಟ್ರಿಕ್ಸ್ ಭಯ ನೀರಲಗಿಯ ಬದುಕಲ್ಲಿ ಎಬ್ಬಿಸಿದ ಬಿರುಗಾಳಿಯ ಭಯವನ್ನು ಅವರೇನು ಬಲ್ಲರು. ಮುಂಜಾನೆ ಎದ್ದ ಕೂಡಲೆ ಎದೆಯ ಮೇಲೆ ಅದರ ಭಾರ ಬಿದ್ದಂತಾಗುತ್ತದೆ. ಸ್ನಾನಕ್ಕೆ ಹೋಗಲಿ–ಸಂಡಾಸಿಗೆ ಹೋಗಲಿ ಅದು ಹ್ಞಾಂ ಹೊರಡು ಹೊರಡು ಎಂದು ಹುಕುಂ ಹೊರಡಿಸಿದಂತಾಗುತ್ತದೆ. ಕಾಲದ ಅಡಕೊತ್ತಿನಲ್ಲಿ ಕೂಳು ಕೂಡ ಸರಿಯಾಗಿ ಗಂಟಲಲ್ಲಿ ಇಳಿಯುವುದಿಲ್ಲ.. ಆರು ಕಿಲೋಮೀಟರ್ ದೂರದ ಅವರ ಬಾಡಿಗೆ ಮನಿಯಿಂದ ಲೂನಾ ಏರಿ ಅವರು ಕಚೇರಿ ಮುಟ್ಟಲು ಎನಿಲ್ಲವೆಂದರೂ ಅರ್ಧ ತಾಸೇ ಬೇಕು.. ಒಮ್ಮೊಮ್ಮೆ ಅವರ ಹಳೆಗಾಲದ ಲೂನ ದಾರಿ ಮಧ್ಯೆ ಕೈ ಕೊಡುತ್ತಿತ್ತು.. ಕೆಲಸದ ಭಾರಕ್ಕಿಂತ ವೇಳಿಯ ಪಾಳಿ ಅವರ ಮೇಲೆ ದಾಳಿ ಅವ್ಯಾಹತ ಆರಂಭಿಸಿತು..

ಈಗೀಗ ಕಮೀಷನರ್ ಪ್ರತಿ ಕೊಠಡಿಗೆ ಕೂಡಿಸಿರುವ ಕದ್ದು ನೋಡುವ ಸಿ.ಸಿ.ಟಿ.ವಿ. ಕ್ಯಾಮರಗಳಿಂದ ಕಚೇರಿಯಲ್ಲಿ ಮಾತುಗಳು ಬಂದದಾವು.. ಸಂಶಯದ –ಗುಮಾನಿಯ ಯಾವುದೋ ಕಣ್ಣುಗಳು ತಮ್ಮ ಬೆನ್ನ ಹಿಂದೆ ನಿಂತು ಪ್ರತಿ ಕ್ಷಣಗಳನ್ನು ದಾಖಲಿಸುತ್ತಿರಬಹುದೇನೋ ಭಯ ಎದ್ದಿತು. ಚಟ ಮಹಾರಾಜರುಗಳಿಗಂತು ವಿಪರೀತ ಪಿಕಲಾಟ ಬಂತು. ಚಟಕೊಗ್ಗಿದ್ದ ಮನಸ್ಸುಗಳು ಅವುಗಳ ಅಲಭ್ಯತೆಯಿಂದ ಮಂಕು ತಬಾಕಿಕೊಂಡು ಕೂತಲ್ಲೇ ತೂಗಡಿಸತೊಡಗಿದವು.

"ಏನ್ರಪಾ ಹೊಸ ಕಮೀಷನರ್ ಬಂದ ಮ್ಯಾಗ ಒಂದಕ್ಕೂ ಎದ್ದು ಹೋಗೋದು ಕಷ್ಟ ಆಯ್ತು" ಅಂತ ಒಬ್ಬ ಉಗ್ಗಡಿಸಿದರೆ..

"ಒಂದದ ಮನಿ ಹಾಳಾಯಿತು... ಬಾಯಿ ಚಟ ಹೆಂಗೊ ತಡಕಳ್ಳಾದು.. ಅದಿಲ್ಲಂದರ ನನ ತಲಿನಾ ಓಡದು.. ಹಿಂದಕ ನಾನಾರ ಗಂಟೆಗೊಮ್ಮಿ ಹೊರಗೋಗಿ

ಮೆಲ್ಕಾಡಿ ಬಂದವ.. ಈಗ ಕುಂತತ್ತಾಕ ಮೂರು ತಾಸು ಸುಮ್ಕ ಕುತ್ಗ ಅಂದರ ಹೆಂಗಾದೀತು"

"ಹೇ ಮೆಲ್ಲಕ ಮಾತಾಡೋ.. ನಿನ್ನ ಮಾತೂ ರೆಕಾರ್ಡ ಅಕ್ಕತಿ.. ಈಗ ಎಲ್ಲಿ ನೋಡಿದ್ರೂ ಈ ಸಿ.ಸಿ.ಟಿ.ವಿ.ದ ದರ್ಬಾರು. ಹೊಟೇಲಿಗೋಗು.. ಅಂಗಡಿಗೋಗು.. ಲಾಡ್ಜಿಂಗಿಗೋಗು.. ಸಿನೇಮಾಕ್ಕೋಗು.. ಬೀದ್ಯಾಗಳ ಲೈಟಿನ ಕಂಬಕ್ಕೂ ಈ ಸಿ.ಸಿ.ಟಿ.ವಿ.ನ ಫಿಕ್ಸ್ ಮಾಡ್ಯರಂತೆ.. ಇಂದಲ್ಲ ನಾಳಿ ನಮ್ಮ ಮನಿಗೂ ಕುನ್ರಸಂಗ ಕಾಣತೈತಿ.."

ನೀರಲಗಿಯವರ ಟೇಬಲ್ ಎದುರು ನಿನ್ನೆ ಬಂದು ಕೂತ ಹೊಸ ಕಂಪ್ಯೂಟರ್ ಇಂದು ಅವರ ಚಿತ್ತವನ್ನು ಮತ್ತಷ್ಟು ಕಲಕಿತು.. ಕಾಲ ಮತ್ತು ಬದಲಾವಣೆಗಳ ವೇಗಕ್ಕೆ ಹೊಂದಿಕೊಳ್ಳಲಾರದ ಅಸಹಾಯಕತೆ ಅವರ ಮನೋಸ್ಥೈರ್ಯವನ್ನು ಆಳವಾಗಿ ಕಲಕಿತು.. ಕಾಲ ಸೃಷ್ಟಿಸಿದ ನವ ಆಹ್ವಾನಗಳು ಅವರ ಹದ್ದುಬಸ್ತಿನಲ್ಲಿದ್ದ ಹಳೆಯ ರೋಗಗಳಿಗೆ ರೆಕ್ಕೆಗಳ ಅಂಟಿಸಿ ಅವರನ್ನ ಮನಬಂದಂತೆ ಗಿರಗಟ್ಟಲೆಯಾಟಕ್ಕೆ ಎಳೆದವು.

ನೀರಲಗಿಯವರಿಗೆ ತಾವು ಹೊಸದಾಗಿ ಕೆಲ್ಸಕ್ಕೆ ಸೇರಿದ್ದಾಗಿನ ದಿನಗಳು ನೆನಪಾದವು.. ಸಮಯ ಮತ್ತು ಪರಿಸ್ಥಿತಿಗಳು ಅವರ ಅಂಕೆಯಲ್ಲಿದ್ದ ದಿನಗಳವು.. ಕೆಲಸ ಯಾವುದೋ ಕ್ರೀಡೆ ಅನ್ನಿಸುತ್ತಿದ್ದ ಕಾಲ ಅದು.. ಸಮಯಕ್ಕಿಂತ ಕೆಲಸ.. ಕಾನೂನಿನ ಸಂಬಂಧಕ್ಕಿಂತ ಕರುಳ ಸಂಬಂಧಗಳಿಗೆ ಬೆಲೆ ಇದ್ದ ಕಾಲ.. ಕಚೇರಿ ಒಂದು ರೀತಿ ಮನೆ ಅನ್ನಿಸುತ್ತಿತ್ತು.. ಸಂಜೆ ಆರಾದರೇನು ಏಳಾದರೇನು.. ಎಲ್ಲ ಕುಂತು ಅಂದಿನ ಕೆಲಸ ಮುಗಿಸಿಯೇ ಮನಿಗೆ ಹೋಗುತ್ತಿದ್ದದ್ದು.. ಎಲ್ಲ ಕೂಡಿ ಉಣ್ಣುವುದೇನು.. ಆಡುವುದೇನು.. ಹಬ್ಬಗಳ ಆಚರಿಸುವುದೇನು... ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಆಗುವುದೇನು... ಸಂಜಿ ಮನಸ್ಸು ಉಲ್ಲಾಸದ ಹಕ್ಕಿಯಂತೆ ಹಾರುತ್ತಿತ್ತು.. ಕಣ್ಣ ತುಂಬ ನಿದ್ದೆ ಮಾಯಾಂಗನೆಯಂತೆ ಮುಸುಗು ಹೊದಿಸುತ್ತಿತ್ತು.. ಈಗ ಕಣ್ಣ ತುಂಬ ನಿದ್ದಿ ಮಾಡಿ ಏಸು ದಿನಗಳಾದವೋ ಏನೋ.

ತಮ್ಮ ಸುತ್ತಾ-ಎದುರು ಕೂತ ಈಗಣ ನೌಕರ ಸಹೋದ್ಯೋಗಿಗಳು ಹಿಂದಣ ಜನ್ಮದ ರಾಗ-ದ್ವೇಷಗಳನ್ನು ಈ ಜನ್ಮದಲ್ಲಿ ತೀರಿಸಿಕೊಳ್ಳಲೆಂಬಂತೆ ಮಾತು ಮಾತಿಗೂ ಕೊಂಕಿನ ಕೊಕ್ಕೆ ಹಾಕಿ ಕಾಲೆಳೆಯಲು ನೋಡುತ್ತಾರೆ.. ಕಂಪ್ಯೂಟರ್ ಕಲಿತ.. ಇಂಟರನೆಟ್.. ವೆಬ್‌ಸೈಟ್.. ಟ್ಯಾಲಿ-ಎಕ್ಸೆಲ್ ಬಲ್ಲ ಒಂದಿಬ್ಬರು ಹೊಸ ತರುಣ ಕಾರಕೂನರು ನೀರಲಗಿಯವರನ್ನು ಒಬ್ಬ ವೇಸ್ಟ್ ಬಾಡಿ.. ಪಗಾರಕ್ಕೆ ದಂಡ ಅನ್ನುವಂತೆ ಅವರತ್ತ ಕುತಿತ್ಸದ ಕಣ್ಣು ಬೀರುತ್ತಾರೆ.. ಭುಜ ಕುಣಿಸಿಕೊಂಡು 'ಕಮಿಷನರ್ ಹತ್ರ ಹೋಗಿದ್ದೆ.. ಅವರ ಸ್ಪೀಚ್‌ನ ಪವರ ಪಾಯಿಂಟನಲ್ಲಿ ಸ್ಲೈಡ್ ಮಾಡಿಕೊಟ್ಟು ಬಂದೆ"

ಅನ್ನುತ್ತಾ ಆಫೀಸ್ ತುಂಬ ಕೊಂಬು ಕಹಳೆ ಊದಿಕೊಂಡು ಓಡಾಡುತ್ತಾರೆ.

"ಮಿಸ್ಟರ್ ನೀರಲಗಿ.. ನೀವೆಲ್ಲಾ ಹೆಂಗ ಕೆಲ್ಸ ಮಾಡ್ತಾ ಇದ್ದೀರಂತ ನಿಮಗೆ ತೋರಿಸ್ತಿನಿ, ಇಲ್ಲಿ ಕುತ್ಕೊಳ್ರಿ.."

ಬಯೋಮೆಟ್ರಿಕ್ಸ್ ಮೇಲೆ ಬೆರಳಿಟ್ಟು ಬೇಹೋಷ್ ಆದ ಹಿಂದಿನ ದಿನ ನೀರಲಗಿಯವರನ್ನು ಕಮೀಷನರ್ ತನ್ನ ಕಚೇರಿಗೆ ಕರಸಿಕೊಂಡಿದ್ದರು.. ಕಳೆದ ಒಂದು ತಿಂಗಳ ಸಿ.ಸಿ.ಟಿ.ವಿ. ಕ್ಯಾಮರದಲ್ಲಿ ಸೆರೆ ಹಿಡಿಯಲಾದ ಹಲವು ಕ್ಲಿಪಿಂಗ್‌ಗಳನ್ನು ಯಾವುದೋ ಹಾರರ್ ಸಿನೇಮಾ ತೋರಿಸುವವರಂತೆ ನೀರಲಗಿಯವರ ಮುಂದೆ ಪ್ಲೇ ಮಾಡಿದರು. ಅದಕ್ಕೆ ಅವರೇ ಕಾಮೆಂಟರಿಯನ್ನು ಕೊಡತೊಡಗಿದರು..

"ಸೀ ನೀರಲಗಿ.. ಇದು ತಾರೀಖು ಹತ್ತರ ಕ್ಲಿಪಿಂಗ್.. ಹನ್ನೊಂದು ಗಂಟೆ.. ನಿಮ್ಮ ಕಚೇರಿಯನ್ನು ನೋಡ್ರಿ.. ಯಾರಾದ್ರು ಒಬ್ಬರು ಕಚೇರಿಯಲ್ಲಿ ಇದ್ದಾರಾ.. ನೀವೇನು ಮಾಡ್ತ ಇದ್ದೀರಿ.. ಆಫೀಸ್ ಸೂಪರಿಂಟೆಂಡೆಂಟ್.. ಪೇಪರ್ ಹಿಡ್ಕಂಡು ಓದೋರಂಗೆ ನಾಟ್ಕ ಮಾಡ್ತ ತೂಗಡಿಸ್ತಾ ಇದ್ದೀರಿ.. ಇಸ್ ಇಟ್ ರೈಟ್.. ರಾತ್ರಿ ನೀವು ಮನೆಯಲ್ಲಿ ನಿದ್ದಿ ಮಾಡಲ್ವಾ? ಸೀ ದಿಸ್.. ತಾರೀಖು ಇಪ್ಪತ್ತು.. ರಾಜಾರೋಷವಾಗಿ ಎಸ್ಟಾಬ್ಲಿಷಮೆಂಟ್ ಕ್ಲರ್ಕ್ ಆಫೀಸಗೆ ಬಂದ ಮನುಷ್ಯನತ್ರ ಹೇಗೆ ಡೀಲ್ ನಡೆಸ್ತಾವನೆ.. ನೀವೇನು ಮಾಡ್ತ ಇದ್ದೀರಿ.. ನಾಲ್ಕು ಜನನ ಸುತ್ತಾ ಕೂರಿಸಿಕೊಂಡು ನಗಿಚಾಟಿಕೆ ಮಾಡ್ತ ಕೂತಿದಿರಿ.. ನಗಿ ಚಾಟಕಿ ಮಾಡೋ ವಯಸ್ಸಾ ನಿಮ್ದು.."

ಇಂಥವೆ ಹತ್ತಾರು ಕ್ಲಿಪಿಂಗಗಳು.. ಕಚೇರಿಯ ಪ್ರತಿಯೊಂದು ಚಲನ ವಲನಗಳನ್ನು – ಸೂಕ್ಷ್ಮಾತಿಸೂಕ್ಷ್ಮಗಳನ್ನು ಆ ಸಿ.ಸಿ.ಟಿ.ವಿ. ಕಲೆಹಾಕಿತ್ತು.. ಕೆಮ್ಮಿದ.. ಸೀನಿದ.. ಆಕಳಿಸಿದ.. ತೂಗಡಿಸಿದ.. ಮೈ–ಕೈ ಮುರಿದ.. ಯಾವುದನ್ನೋ ಬಾಯಿಗೆ ಹಾಕಿ ನುರಿದ.. ಉಗಿದ.. ಯಾರ ಜೊತೆಗೆ ಏನೋ ಮಾತಾಡಿದ.. ನಕ್ಕ.. ಚಿತ್ರ ವಿಚಿತ್ರ ದೃಶ್ಯಗಳು.

ಇದಕ್ಕೆಲ್ಲಾ ಏನು ಹೇಳುತ್ತಿರಿ ಅನ್ನುವಂತೆ ಕಮೀಷನರ್ ಕಂಪ್ಯೂಟರ್ ಬಂದ್ ಮಾಡಿ ನೀರಲಗಿಯವರ ಮುಖ ನೋಡಿದರು.. ನಿಮ್ಮನ್ನೆಲ್ಲಾ ಒಂದು ಶಿಸ್ತಿಗೆ ತರದೆ ಬಿಡುವವನಲ್ಲ ನಾನು – ಕಾಲದ ಹಗ್ಗದಿಂದ ನಿಮ್ಮನ್ನು ಕಟ್ಟಿ ಹಾಕದೆ ವಿರಮಿಸಲಾರೆ ಎಂಬ ಠೀವಿಯಲ್ಲಿ ಅವರು ಅಗಲೇ ಟೈಪ್ ಆಗಿ ಸಿದ್ಧವಾದ ಒಂದು ಸುದೀರ್ಘ ಮೆಮೋವನ್ನು ನೀರಲಗಿಯವರ ಕೈಗೆ ಇಟ್ಟರು.. ಈ ಕಮೀಷನರ ನಾವು ಕೆಲಸ ಮಾಡುವುದನ್ನು ರೆಕಾರ್ಡ್ ಮಾಡಲು ಸಿ.ಸಿ.ಟಿ.ವಿ. ಕೂರಿಸಿದ್ದಾನೋ.. ಅಥವ ಯಾವುದೋ ಗಳಿಗೆಯಲ್ಲಿ ನಾವು ಮಾಡಬಹುದಾದ ಅಸಹಜ–ಅಚಾತುರ್ಯದ–ಅನೈಸರ್ಗಿಕ ಚಹರೆಗಳನ್ನು ಕಲೆ ಹಾಕಿ ಅದರಿಂದ ತನ್ನ ಬೇಸರದ ಮನಸ್ಸಿಗೆ ಮನರಂಜನೆ ಪಡೆಯುಲು ಬಯಸುತ್ತಿದ್ದಾನೋ–ಒಂದು ತಿಳಿಯದೇ

ದಿಗ್ಭ್ರಾಂತರಾಗಿ ತಮ್ಮ ಮಗನ ವಯಸ್ಸಿನ ಕಮೀಷನರ್‌ನಿಂದ ತಮಗಾದ ಅವಮಾನ ನುಂಗಿಕೊಂಡು ನೀರಲಗಿಯವರು ತಮ್ಮ ಕಚೇರಿಗೆ ಕಾಲಿಟ್ಟಾಗ ಹೊಸ ಕಾರಕೂನರು ಅವರನ್ನು ನೋಡಿ ಮುಸುಮುಸು ನಕ್ಕರು. "ನಾವೇ ಆ ಕ್ಲಿಪಿಂಗ್ಸ್‌ಗಳ ಸೆಲಕ್ಟ್ ಮಾಡಿ ಕಮಿಷನರ್‌ಗೆ ಕೊಟ್ಟಿದ್ದು" ಎಂಬ ಅವರುಗಳ ಪಿಸುಮಾತು ಕಾದ ಸೀಸದಂತೆ ಅವರ ಕಿವಿ ಹೊಕ್ಕಿತು.

ಅಂದು ರಾತ್ರಿ ನೀರಲಗಿಯವರಿಗೆ ಹಲವು ದುಸ್ವಪ್ನಗಳು ಬಿದ್ದವು.. ಅಸಂಖ್ಯ ಕಪ್ಪು ಕುದುರೆಗಳು ಹೇಷಾರವದಿಂದ ಓಡುತ್ತಿವೆ.. ಆ ಕುದುರೆಗಳ ಮೇಲೆ ಜಗದ ಜನರೆಲ್ಲಾ ಕೂತು ವಾಯುವೇಗದಲ್ಲಿ ಎತ್ತಲೋ ನಾಗಲೋಟದಿಂದ ಕುಪ್ಪಳಿಸುತ್ತಾ ಕುಪ್ಪಳಿಸುತ್ತಾ ಕ್ಷಣ ಮಾತ್ರದಲ್ಲಿ ಮಾಯವಾಗುತ್ತಿದ್ದಾರೆ. ಧೂಳು ಬಯಲ ತುಂಬುತ್ತಿದೆ. ಹಿಂದಿನಿಂದ ಕಮೀಷನರ್ ರೀತಿಯ ಮನುಷ್ಯರು ಕೈಯಲ್ಲಿ ಸ್ಟಾಪ್ ವಾಚಗಳ ಹಿಡಕೊಂಡು ಓಡಿ–ಇನ್ನೂ ಓಡಿ.. ಎಂದು ಚಾಟಿ ಬೀಸುತ್ತಿದ್ದಾರೆ. ಹಲವರು ಹೀಗೆ ಓಡಲಾರದೆ ಕುದುರೆಗಳಿಂದ ಕೆಳಕ್ಕೆ ಉರುಳುತ್ತಿದ್ದಾರೆ.. ಹೀಗೆ ಬಿದ್ದವರ ಮೇಲೆ ಹಿಂದಿನಿಂದ ಬರುವ ಕುದುರೆಗಳು ಅವರ ಎದೆ ಮೇಲೆ ಕಾಲಿಟ್ಟು ಚಿಮ್ಮುತ್ತಿವೆ.. ನೀರಲಗಿಯವರು ಒಂದು ಮುದಿ ಕುದುರೆ ಏರಿದ್ದಾರೆ.. ಅದು ಏಕೋ ವಯೋಭಾರದಿಂದಲೋ ಏನೋ ಮುಂದೆ ಹೆಜ್ಜೆ ಇಡಲ್ಲೊಲ್ಲದು.

ಕುದುರಿಯ ಜೊತೆ ಅವರು ಹೀಗೆ ಗುದುಮುರಿಗೆ ನಡೆಸುತ್ತಿರುವಾಗಲೇ ಅವರ ಬೆನ್ನಿಗೆ ಪಟಾರ್ ಎಂಬ ಚಾಟಿ ಏಟು ಬಿತ್ತು.. ತಿರುಗಿ ನೋಡಿದರೆ ಕಮೀಷನರ್.. "ಓಡು ಓಡು" ಅನ್ನುತ್ತಿದ್ದಾರೆ "ಎಲ್ಲಿಗೆ ಸಾರ್" ಅನ್ನಲು "ಎಲ್ಲಿಗೆ, ಯಾಕೆ ಅಂತ ಕೇಳಿ ಟೈಮ್ ವೇಸ್ಟ್ ಮಾಡಬೇಡ್ರಿ, ಎಲ್ಲರೂ ಓಡ್ತಾ ಇರೋದು ಕಾಣಲ್ಲವಾ? ಕುದುರೆಯನ್ನ ಓಡ್ಸರಿ" ಕಮೀಷನರ್ ಅರಚುತ್ತಿದ್ದಾರೆ. ನೀರಲಗಿ ಸಿಟ್ಟಿನಿಂದ ತಮ್ಮ ಕುದುರೆಯ ಪಕ್ಕೆಯನ್ನು ತಿವಿಯುತ್ತಿದ್ದಂತೆ ಒಮ್ಮೆಲೆ ಅದು ತನ್ನ ಎರಡು ಕಾಲ ಮೇಲೆ ನಿಂತು ಆಕಾಶ ಅದುರುವ ಹಾಗೆ ಭೂಮಿ ನಡುಗುವ ಹಾಗೆ ಘೀಳಿಟ್ಟು ನೀರಲಗಿಯವರನ್ನು ನೆಲಕ್ಕೆ ಕೆಡವಿ ಹಂಗೆ ಮಾಯವಾಯಿತು..

ಮುಂಜಾನೆ ಬಯೋಮೆಟ್ರಿಕ್ಸ್ ಮೇಲೆ ಅವರು ತಮ್ಮ ತೋರು ಬೆರಳ ಇಡುತ್ತಿದ್ದಂತೆ ಆ ಕಾಥೆವಾಡದ ಕುದುರೆಯ ಹೇಷಾರವ ಅವರ ಎದೆ ಗುಂಡಿಗೆಯನ್ನಲ್ಲಾಡಿಸಿತು.

❖

(ಪ್ರಜಾವಾಣಿ – ಮೇ 5, 2013)

ಒಂದೇ ಒಂದು ಬಿಸಿರೊಟ್ಟಿ

ಸುಮಂಗಲಾ

ಸೂರಿ ಉರುಫ್ ಸುರೇಶ ಬಸವಣ್ಣೆಪ್ಪ ಪಾಟೀಲ ಈಸ್ಟ್ ಎಂಡ್‌ನಿಂದ ಜಯದೇವ ಕಡೆಗೆ ಹೊರಳೇಬೇಕು ಎಂದುಕೊಳ್ಳುವಷ್ಟರಲ್ಲಿ ಸಿಟಿಬಸ್ ಒಂದು ವೇಗವಾಗಿ ಬಂದು ಅಲ್ಲಿದ್ದ ಬಸ್ ನಿಲ್ದಾಣದಲ್ಲಿ ನಿಂತಿತು. ಸಿಟಿಬಸ್ ಹೊರಡುವವರೆಗೆ ಕಾರನ್ನು ಬಲಕ್ಕೆ ತೆಗೆದುಕೊಳ್ಳಲಿಕ್ಕೆ ಆಗದೇ, ಹಾರ್ನ್ ಹಾಕಲಿಕ್ಕೂ ಮನಸ್ಸಾಗದೇ ಸೂರಿ ಹಾಗೇ ನಿಂತ. ಆ ಬಸ್ಸು ಹೋಗಿ, ಅಲ್ಲಿದ್ದ ಬಸ್‌ನಿಲ್ದಾಣ ದಾಟಿ ಇನ್ನೇನು ಕಾರು ವೇಗ ಪಡೆದುಕೊಳ್ಳಬೇಕು ಅಷ್ಟರಲ್ಲಿ ಸೂರಿಗೆ ಯಾವುದೋ ಪರಿಚಿತ ಚಹರೆ ಕಂಡಂತೆ ಅನ್ನಿಸಿತು. ಕೊಳಕಾದ ಸೀರೆ, ತಲೆ ಮೇಲೆ ಹೊದ್ದಿದ್ದ ಸೆರಗು, ಕಪ್ಪಾದ ಮುಖದಲ್ಲಿ ಮಿಂಚುವ ಕಳೆ, ಅವಳ ಪಕ್ಕದಲ್ಲಿ ಮಾಸಿದ ಪ್ಯಾಂಟು ಅಂಗಿಯ ವ್ಯಕ್ತಿ.. ಅವರು ಯಾರು ಎಂದು ನೆನಪಾಗುವಷ್ಟರಲ್ಲಿ ಕಾರು ಮುಂದಕ್ಕೋಡಿತ್ತು. ಮುನಾ ಚೂರು ಹಿಂದಕ್ಕೆ ಹೋಗಿ ಸರಿಯಾಗಿ ನೋಡಲೇ ಎಂದುಕೊಂಡರೆ ಹಿಂದೆ ಅದಾಗಲೇ ಹನುಮಂತನ ಬಾಲದಂತೆ ಕಾರು, ಆಟೋಗಳು ಪೊಂಯ್ಗುಡುತ್ತಿದ್ದವು.

ಜಯದೇವನ ಒಳಗೆ ಹೋದವನೇ ಕಾರನ್ನು ಪಾರ್ಕ್ ಮಾಡಿ, ಅದೇ ಬಸ್ ನಿಲ್ದಾಣಕ್ಕೆ ಹೋಗಿ ನೋಡಲೇ ಎಂದು ಅರೆಕ್ಷಣ ಎಂದುಕೊಂಡನಾದರೂ ಕೈಗಡಿಯಾರದ ಮುಳ್ಳು ಆಗಲೇ ಆಫೀಸಿನಿಂದ ಬಂದಿದ್ದ ಎರಡು ಮೆಸೇಜುಗಳು ಅದ್ಯಾವುದೂ ಸಾಧ್ಯವೇ ಇಲ್ಲ ಎಂದು ಸಾರಿ ಹೇಳುತ್ತಿದ್ದವು. ಐಸಿಯುನಿಂದ ಸ್ಪೆಶಲ್ ವಾರ್ಡಿಗೆ ನಿನ್ನೆಯಷ್ಟೇ ಕರೆತಂದಿದ್ದ ಅಪ್ಪನನ್ನು ನೋಡಿಕೊಂಡು ವೈಟ್‌ಫೀಲ್ಡೆಂಬ ಟೆಕ್‌ಮಾಯಾಲೋಕಕ್ಕೆ ರಸ್ತೆಗಳೆಂಬ ಹೊಂಡಗುಂಡಿಗಳಿಂದ ಅಲಂಕೃತವಾದ ಟಾರಿನ ತೇಪೆತುಣುಕುಗಳು, ಎಲ್ಲರಿಂದ ಪ್ರತಿದಿನ ಬೈಸಿಕೊಳ್ಳುವ ಒಂಥರದ ಶಾಪಗ್ರಸ್ತ ದೇವತೆಯಾದ ಟ್ರಾಫಿಕ್ ಜಾಮುಗಳು, ೩೦ ಸೆಕೆಂಡ್‌ಗಳಿಂದ ಹಿಡಿದು ೧೨೦ ಸೆಕೆಂಡ್‌ಗಳಷ್ಟು ದೀರ್ಘವಾದ ಸಿಗ್ನಲುಗಳು ಇತ್ಯಾದಿ ಎಲ್ಲವನ್ನೂ ದಾಟಿಕೊಂಡು ಹೋಗುವುದು ಎಂದರೆ ಯಾವುದೋ ಕಡಿದಾದ ಪರ್ವತಚಾರಣದಷ್ಟು ಸುಲಭವಾಗಿರಲಿಲ್ಲ.

ಸ್ಪೆಶಲ್ ವಾರ್ಡಿನಲ್ಲಿ ಸೂರಿಯ ಅಪ್ಪ ಬಸವಣ್ಣೆಪ್ಪ ತನಗೆ ಯಾವುದೋ ಚಿಕ್ಕಪುಟ್ಟ ಕಾಯಿಲೆ ಬಾರದೇ ಒಮ್ಮೆಲೇ ಹೀಗೆ ಆಂಜಿಯೋಗ್ರಾಮ್, ಆಂಜಿಯೋಪ್ಲಾಸ್ಟಿ ಎಂಬ ದೊಡ್ಡ ಆಪರೇಶನ್ನು ಮಾಡಿಸಿಕೊಂಡ ಒಂಥರದ ಪುಳಕದಲ್ಲಿದ್ದಂತೆ ನಿನ್ನೆ ಸಂಜೆಯಿಡೀ ಭೇಟಿಯ ಸಮಯದಲ್ಲಿ ಊರಿನ ಕಡೆಯಿಂದ ಬಂದ ದೊಡ್ಡದೊಡ್ಡ ಕುಳಗಳೆದುರು ಇಲ್ಲಿಯ ವೈದ್ಯರ ನೈಪುಣ್ಯವನ್ನು ದುಡ್ಡೆಷ್ಟು ಖರ್ಚಾಯಿತೆಂಬುದನ್ನು ಮಗ ಮತ್ತು

ಸೊಸೆ ಎಲ್ಲರೊಂದಿಗೆ ಇಂಗ್ಲಿಷ್‌ನಲ್ಲಿಯೇ ಮಾತಾಡುತ್ತ ಎಲ್ಲ ಕೆಲಸವನ್ನು ಸಲೀಸಾಗಿ ಮಾಡಿದರೆಂಬುದನ್ನು 'ಏನರ ಹೇಳ್ರೀ, ಈಗೀಗ ದೊಡ್ಡ ದೊಡ್ಡ ಖಾಯಿಲೆಗೋಳು ಯಾವ ಮಂದಿ ಮ್ಯಾಗ ಅಟ್ಯಾಕ್ ಮಾಡಬೇಕು ಅಂತ ತೆಲಿ ಓಡಿಸಿ, ಅಟ್ಯಾಕ್ ಮಾಡ್ತಾವರಿ. ಯಾವ್ನೋ ಗರೀಬ ಸೂಳಿಮಗಂಗ ಅಟ್ಯಾಕ್ ಆದ್ರ ಅಂವ ಅಲ್ಲೇ ಗಪ್ ಅನ್ನಬಕು ಅಥ್ವಾ ಸಮೀಪಿರೋ ಗೌರ್ಮೆಂಟು ದವಾಖಾನಿ ಒಳಗ ಗಪ್ ಆಗ್ತಾನ. ಹಂಗಾಗಿ ಅವ್ರಿಗಿ ಹಿಂತಾವೆಲ್ಲ ಬರಂಗಿಲ್ರೀ, ನಮ್ಮಂಥ ಜರಾ ದೊಡ್ಡ್ ಮಂದಿಗಿ ಅಟ್ಯಾಕ್ ಆದ್ರ ಹಿಂತಾ ಚಲೋ ದವಾಖಾನಿಗಿ ಬರ್ತೇವು, ಮತ್ತ ಆ ಜಡ್ಡಿಗಿ ಇಷ್ಟ್ ಛಲೋ ಉಪಚಾರ ಮಾಡ್ತಾರ, ಇಷ್ಟ್ ಛಲೋ ಇಲಾಜ್ ಮಾಡ್ತಾರ.. ಹ್ಹೆಹ್ಹೆ..' ಅಂತ ನಕ್ಕಿದ್ದನ್ನು ಸೂರಿಯ ಹೆಂಡತಿ ಮಾಲಿನಿ ರಾತ್ರಿ ಹೇಳಿದ್ದಳು. ವರ್ಣನೆಯ ಕೊನೆಯಲ್ಲಿ 'ನಿಮ್ಮಪ್ಪ ಹಿಂಗ ಆಪರೇಶನ್ ಮಾಡಿಸಿಕೊಂಡಿದ್ದರ ಮೂಲಕವೂ ತಾ ಭಾರೀ ದೊಡ್ಡ ಕುಳ ಅಂತನ್ನೋದನ್ನು ಸಾಬೀತು ಪಡಿಸೋಹಂಗ, ಮತ್ತ ಅಗದಿ ಹಿಂತಾ ದೊಡ್ಡ ಆಪರೇಶನ್ ಮಾಡಿಸಿಕೊಂಡೀನಿ ಅಂತ ಎಂಜಾಯ್ ಮಾಡೂಹಂಗ ಕಾಣಿಸ್ತದಪ್ಪ' ಎಂದಿದ್ದಳು. ಅವಳು ಅದರ ಕೊನೆಯಲ್ಲಿ, 'ಛೀ ಎಂಥಾ ಮಂದಿ' ಎಂದು ಬಾಯಿಬಿಟ್ಟು ಹೇಳದಿದ್ದರೂ ಅವಳು ಅದನ್ನು ಮನಸ್ಸಿನಲ್ಲಿಯೇ ಅಂದುಕೊಂಡಿರ್ತಾಳೆ ಎನ್ನೋದು ಅವಳ ಹಾವಭಾವದಲ್ಲಿಯೇ ಸೂರಿಗೆ ಅರ್ಥವಾಗಿತ್ತು. ಖಾಸಗಿ ಕಂಪನಿಯೊಂದರಲ್ಲಿ ಅಡ್ಮಿನ್ ಕಮ್ ಅಕೌಂಟೆಂಟ್ ಆಗಿರುವ ಮಾಲಿನಿ ಪ್ರತಿಯೊಂದನ್ನೂ ಏನೋ ಲೆಕ್ಕಾಚಾರದಿಂದಲೇ ನೋಡ್ತಾಳೆ ಎಂದು ಸೂರಿ ಆಗೀಗ ರೇಗುವುದೂ, 'ನಾನಾಗೇ ಎದಕ್ಕ ಹಂಗ ನೋಡಲಿ, ಮಂದಿ ಹೆಂಗ ಯಾವಾಗೂ ಎನರ ಒಂದು ಲೆಕ್ಕಾಚಾರದಾಗ ಇರ್ತಾರ ಅನ್ನೋದು ನನಗ ಲಗೂನೆ ತಿಳಿತೈತಿ ಅಷ್ಟೆ' ಎಂದು ಮಾಲಿನಿ ವಾದಿಸುವುದೂ ಅವರ ಮಧ್ಯೆ ನಡೆದೇ ಇತ್ತು.

ಹೀಗೆ ಸ್ಪೆಶಲ್ ವಾರ್ಡಿನಲ್ಲಿರುವ ಅಪ್ಪನನ್ನು ನೋಡಬೇಕಾದ ಕಾಲಮಿತಿ ಬೆಳಗ್ಗೆ ಎಂಟರಿಂದ ಎಂಟೂವರೆಗೆ ಒಳಗೆ ಮಾತ್ರವೇ ಇದ್ದಿದ್ದರಿಂದ ಸೂರಿ ಎಂಟೂ ಹತ್ತು ಆಗೇ ಹೋಯ್ತು ಎಂದುಕೊಳ್ಳುತ್ತ ಧಾವಿಸಿದ. ಇವತ್ತಿನಿಂದ ಇಡ್ಲಿ ತಿನ್ನಬಹುದು ಎಂದಿದ್ದರಿಂದ ಇದೀಗ ಅಲ್ಲಿಯೇ ಕೊಡುವ ಇಡ್ಲಿ ತಿಂದು, ರಾತ್ರಿ ನೋಡಿಕೊಳ್ಳಲು ಜೊತೆಗಿದ್ದ ಚಿಗಪ್ಪ ಹೇಳುತ್ತಿದ್ದ ಮಾತನ್ನು ಕಿರುನಗೆಯಿಂದ ಆಲಿಸುತ್ತ ಸೂರಿಯ ಅಪ್ಪ ಬಸವಣ್ಣೆಪ್ಪ ಕುಳಿತಿದ್ದ. ಸ್ಪೆಶಲ್ ವಾರ್ಡಿಗೆ ಬಂದೊಡನೆ ಐದಾರು ದಿನದ ದಾಡಿಯನ್ನು ತೆಗೆಯಲೇಬೇಕೆಂದು ನಿನ್ನೆ ಮಧ್ಯಾಹ್ನ ಡಾಕ್ಟ್ರಿಗೆ ಭಾರೀ ಬೇಡಿಕೊಂಡ ಅಪ್ಪನಿಗೆ ಅವರು ಇಲ್ಲವೆನ್ನಲಾಗದೇ ಹೂಂ ಎಂದಿದ್ದರಿಂದ ಅಲ್ಲಿಯೇ ಎಲ್ಲ ತಂದು ತಾನೇ ದಾಡಿ ಮಾಡಿದ್ದಾಗಿ, ಸಂಜೆ ನೋಡಲಿಕ್ಕಾಗಿ ಊರಿನಿಂದ ಬಂದ ಮಂದಿ ಎದುರು ಹ್ಯಾಪುಮೋರೆ ಹಾಕ್ಕೊಳದೇ ನಕ್ಕೋತ ಮಾತಾಡಿ ಕಳಿಸಿದ್ದನ್ನು, ಬಂದವರೆಲ್ಲ 'ಎಷ್ಟ್ ಕಳೆಕಳೆಯಾಗಿ ಅದೀರಿ ಸಾಹೇಬ್ರ, ನಿಮ್ಮನ್ನ ನೋಡಿದ್ರ ಮನ್ಯಾಗ ಈಗ

ಜಳಕಾ ಮಾಡಿ ಕುತ್ತೀರಿ ಅನ್ನೂಹಂಗ ಕಾಣ್ತೀರಿ' ಎಂದಿದ್ದನ್ನು ಚಿಗಪ್ಪ ಇವನೆದುರು ಈಗಷ್ಟೆ ದಾಡಿ ಮಾಡಿ ಮುಗಿಸಿದ ನೊರೆ ಕೈಗೆ ಇನ್ನೂ ಅಂಟಿದೆಯೇನೋ ಎಂಬಂತೆ ವರ್ಣಿಸಿದ. ರಾತ್ರಿ ಮಾಲಿನಿ ಹೇಳಿದ್ದು ನೆನಪಾಯಿತು. 'ಛೀ, ಈ ಮಾಲಿ ಏನರ ಒಂದ್ ಹೇಳ್ತಾಳ, ಇಷ್ಟ್ ಜೀವನಪ್ರೀತಿ ಯಾರಿಗಿರ್ತದ ಎಂದುಕೊಂಡ. ಸೂರಿ ತಾನು ದೊಡ್ಡ ಡಾಕ್ಟ್ರಿಗೆ ಫೋನು ಮಾಡಿ ಯಾವಾಗ ಡಿಸ್ಚಾರ್ಜ್ ಮಾಡ್ತಾರ ಎಂದು ಕೇಳ್ತೀನಿ ಎಂದ, ಮತ್ತ ರಾತ್ರಿ ರೌಂಡ್ಸಿಗಿ ಡಾಕ್ಟ್ರ ಬಂದಿದ್ದರಿಲ್ಲೋ, ನರ್ಸುಗೋಳು ರಾತ್ರಿ ಅವಗವಾಗ ಬಂದು ಸಲೈನ್ ಬಾಟಲಿ ಏರಿಸಿದ್ದನ್ನು ನೋಡಿಹೋಗಾಕ ಹತ್ಯಾರಿಲ್ಲೋ ಎಂದೆಲ್ಲ ಕಾಳಜಿಯಿಂದ ವಿಚಾರಿಸಿದ. ಔಷಧಿ ಏನೇನು ಕೊಟ್ಟಾರ ಅಂತ ಅಲ್ಲಿದ್ದ ಕವರ್‌ನಲ್ಲಿದ್ದ ಔಷಧಗಳ ಲೇಬಲ್ ಅನ್ನು ಜೋರಾಗಿ ಓದಿ, ತನಗೇನೂ ತಿಳಿಯದಿದ್ದರೂ, ಓ ಇದು ಹಿಂತಾದಕ್ಕ ಕೊಟ್ಟಾರ ಎಂದು ವಿವರಿಸಿದ. 'ಇನ್ನಾ ಏನರ ಬೇಕೇನು, ನೀ ನಾಷ್ಟಾ ಮಾಡಿ ಬಂದಿಯೇನು?' ಎಂದು ಚಿಗಪ್ಪನಿಗೆ ಕೇಳಿದ. ಹೀಗೆ ಹತ್ತು ಹಲವು ಬಗೆಯ ಪರಸ್ಪರ ವಿಚಾರಣೆಗಳು ಮುಗಿದ ಅನಂತರ ಇನ್ನೇನು, 'ಎಂಟೂವರೆಗೆ ನಾಲ್ಕು ನಿಮಿಷ ಬಾಕಿ ಇದೆ, ನಾ ಹೋಕ್ಕೀನಿ ಹಂಗಾರ' ಎನ್ನುತ್ತ ಬಾಗಿಲ ಬಳಿ ಬಂದ ಸೂರಿಗೆ ತಟ್ಟನೆ ಇದೀಗ ಈಸ್ಟ್ ಎಂಡ್ ಬಸ್ ನಿಲ್ದಾಣದ ಎದುರು ನೋಡಿದ ಇಬ್ಬರು ನೆನಪಾದರು. ತನ್ನ ಕಾರು ಹೆಂಗೆ ನಿಂತಿತ್ತು, ಅವರು ಹೆಂಗೆ ನಿಂತಿದ್ದರು ಎಂಬುದನ್ನೆಲ್ಲ ವಿವರಿಸಿದ ಸೂರಿ, 'ನನಗರ ಅವ್ರು ಸಿದ್ದಣ್ಣ, ಅಂವ್ನ ಹೆಂಡ್ತಿ ಕಮಲವ್ವನ ಹಂಗ ಕಂಡ್ರು, ಊರಾಗ ಅವ್ರುದೂ ತುಸು ಹೊಲ ಇತ್ತಿಲ್ಲೋ, ಮತ್ತ ಇಲ್ಲಿಗಿ ಏನರ ಕೆಲಸಕ್ಕೆ ಗುಳೇ ಬಂದಾರೇನು' ಎಂದು ಚಿಗಪ್ಪನ್ನ ಕೇಳಿದ. 'ನಾಕೈದು ವರ್ಸ ಆತ್ ಕಾಣ್ತೈತಿ, ಅವ್ರಿಬ್ರೂ ಇಲ್ಲೇ ಬೆಂಗಳೂರಾಗನ ಬಿಲ್ಡಿಂಗ್ ಕಟ್ಟೂ ಕೆಲಸಕ್ಕೆ ಸೇರ್‍ಯಾರಂತ, ಊರ ಕಡಿಗಿ ಬರೂದೆ ಬಿಟ್ಟಾರ' ಎಂದು ಚಿಗಪ್ಪ ಹೇಳಿದ.

ಅಲ್ಲಿಂದ ಹೊರಬಂದ ಸೂರಿ ಒಮ್ಮೆ ಟ್ರಾಫಿಕ್ ಎಂಬ ಮಹಾಸಾಗರಿಯಲ್ಲಿ ಬಿದ್ದು ಎದ್ದು ಅಂತೂ ಇಂತೂ ಆಫೀಸು ತಲುಪಿ ಮತ್ತೆ ಕಂಪ್ಯೂಟರಿನಲ್ಲಿ ಮುಳುಗಿದ ಅನಂತರ ಅವನಿಗೆ ಸಿದ್ದಣ್ಣ ಅವನ ಹೆಂಡತಿ ಇರಲಿ, ಡಾಕ್ಟ್ರಿಗೆ ಫೋನ್ ಮಾಡಿ ಅಪ್ಪನ ಡಿಸ್ಚಾರ್ಜ್ ಯಾವಾಗ ಮಾಡ್ತೀರಿ ಎಂದು ಕೇಳಬೇಕು ಎನ್ನುವುದೂ ನೆನಪಾಗಲಿಲ್ಲ. ಹಿಂದಿನ ರಾತ್ರಿಯಷ್ಟೇ ಊರಿಗೆ ಮರಳಿದ ಅವ್ವನಿಗೆ ಆರಾಮಾಗಿ ಹೋಗಿಮುಟ್ಟೀಯಿಲ್ಲೋ ಎಂದು ಊರಿನ ಮನೆಗೆ ಫೋನಾಯಿಸ ಬೇಕೆನ್ನುವುದೂ ನೆನಪಾಗಲಿಲ್ಲ. ಅವನಿಗೆ ಇದೆಲ್ಲ ಮತ್ತೆ ನೆನಪಾಗಿದ್ದು ವಾಪಸು ಮನೆಗೆ ಬರುವಾಗಲೇ. ಆಫೀಸಿಂದ ಬರೂ ಮುಂದ ಮಾಲಿ ಹೆಂಗೂ ದವಾಖಾನಿ ಹಾದು ಬಂದಿರ್ತಾಳ, ಆಕಿಗಿ ಫೋನ್ ಮಾಡಿ ಕೇಳಿದ್ರಾತು ಎಂದುಕೊಂಡು ಫೋನ್ ಹಚ್ಚಿದ. 'ಇನ್ನಾ ನಾಕೈದು ದಿನ ಅಲ್ಲೇ ಇಟ್ಟುಗೋತಾರಂತ. ಅವ್ವಾರಿಗಿ ಬಸ್ ಜರಾ ತಡಾಗಿ ಹೋದ್ನಂತ,

ಮನಿ ಮುಟ್ಟೂದ್ರಾಗ ಹತ್ತಾಗಿತ್ತಂತ' ಎಂದು ಅವಳು ಚುಟುಕಾಗಿ ಹೇಳಿ, 'ನಾ ಈಗ ಅಡಗಿ ಮಾಡಾಕಹತ್ತೀನಿ, ಹೆಂಗೂ ಮನಿಗಿ ಬರ್ತೀಯಲ್ಲ, ಆವಾಗೇ ಹೇಳ್ತೀನಿಬಿಡು' ಎನ್ನುತ್ತ ಮೊಬೈಲ್ ಇಟ್ಟಿದ್ದಳು. ಜಯದೇವ ಫ್ಲೈ ಓವರ್ ಬಳಿ ಬರುವಾಗಲೇ ಎಂಟೂವರೆಯಾಗಿತ್ತು. ಈಗ ಅಲ್ಲಿ ಒಳಗೆ ಬಿಡೋದು ಇಲ್ಲ ಎಂದುಕೊಂಡು ಚಿಗಪ್ಪನಿಗೆ ಫೋನಾಯಿಸಿ, ತಾನು ಬೆಳಿಗ್ಗೆ ಬರುವುದಾಗಿ, ಮನೆಯಿಂದ ಏನರ ಬೇಕಾದ್ರ ತರುವುದಾಗಿ ಹೇಳಿ, ರೊಕ್ಕ ಏನರ ಬೇಕಾಗಿತ್ತೇನು ಎಂದೂ ವಿಚಾರಿಸಿದ.

ಸೂರಿಗೆ ಮತ್ತೆ ಸಿದ್ದಣ್ಣ, ಮತ್ತವನ ಹೆಂಡತಿ ನೆನಪಾಗಿದ್ದು ರಾತ್ರಿ ಮಲಗಲು ಹೋದಾಗ. ಅವರಿಗಿದ್ದ ಸ್ವಲ್ಪವೇ ಹೊಲ ತಮ್ಮ ಹೊಲಕ್ಕೆ ಹೋಗುವ ದಾರಿಯಲ್ಲಿ ಮೊದಲಿಗೇ ಸಿಗುತ್ತಿದ್ದು, ಅವರಿಬ್ಬರೂ ಕಷ್ಟಪಟ್ಟು ದುಡಿಯುತ್ತಿದ್ದುದು, ಸಿದ್ದಣ್ಣನ ಆಗೀಗ ಕುಡಿಯುವ ಚಟ, ನಾಲ್ಕು ಮಕ್ಕಳಲ್ಲಿ ಎರಡೇ ಮಕ್ಕಳು ಬದುಕುಳಿದಿದ್ದು, ಹಲವಾರು ಬಾರಿ ಅವನ ಹೆಂಡತಿ ಕಮಲವ್ವ ತಮ್ಮ ಹೊಲದಲ್ಲಿ ಬೆಳೆದಿದ್ದ ಸೀತೆನೆಯನ್ನು ಅಲ್ಲಿಯೇ ಸುಟ್ಟುಕೊಟ್ಟಿದ್ದು, ಅನಂತರ ಹಯಸ್ಕೂಲಿಗೆ ತಾನು ಬೆಳಗಾವಿ ರೆಸಿಡೆನ್ಷಿಯಲ್ ಶಾಲೆಯೊಂದನ್ನು ಸೇರಿದ ಅನಂತರ ತನಗೆ ಊರಿನ ಸಂಪರ್ಕ ತಪ್ಪಿ ಹೋಗಿದ್ದನ್ನು, ಅನಂತರ ಇಂಜಿನಿಯರಿಂಗ್ ಮಾಡುತ್ತಿದ್ದಾಗ ಎಲ್ಲೋ ಒಂದೆರಡು ಸಲ ಊರಿಗೆ ಹೋದಾಗ ಅವರನ್ನು ನೋಡಿದ್ದನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ. 'ಎಲ್ಲಾದ್ರಾಗೂ ನೀ ಏನರ ಹುಳುಕು ತೆಗಿತಿ ನೋಡು' ಎಂದು ಮಾಲಿಗೆ ಸೂರಿ ಆಗೀಗ ರೇಗಿದರೂ ಹೀಗೆ ಯಾವಾಗಲಾದರೂ ಹುಕಿ ಬಂದಾಗ ತನ್ನ ಬಾಲ್ಯ, ಯೌವನದ ಕಾಲಘಟ್ಟದ ತುಣುಕೊಂದನ್ನು ತೆರೆದು ತೋರಿಸುವಾಗ ಅತ್ಯಂತ ಆಸಕ್ತಿಯಿಂದ ಅರಳುಗಣ್ಣು ಮಾಡಿ, ಯಾವುದನ್ನೂ ತಾತ್ಸಾರ ಮಾಡದೇ ಹೌದಾ, ಓಹೋ ಇತ್ಯಾದಿಗಳೊಡನೆ ಕೇಳಿಸಿಕೊಳ್ಳುವ ಮಾಲಿನಿಯೊಂದಿಗೆ ಮಾತ್ರವೇ ಸೂರಿಗೆ ಹೀಗೆ ಚಿಕ್ಕಪುಟ್ಟ ಅನ್ನಿಸಿಕೆಗಳನ್ನೂ ಹೇಳಿಕೊಳ್ಳುವುದು ಸಾಧ್ಯವಾಗುತ್ತಿತ್ತು.

'ಮತ್ತ ಈಗ ಅವ್ರ ಹೊಲಾನ ಯಾರು ಮಾಡ್ತಾರಂತ.. ಹೊಲ ಇಲ್ಲೇನು ಈಗ' ಕೊನೆಯಲ್ಲಿ ಮಾಲಿನಿ ಕುತೂಹಲದಿಂದ ಕೇಳಿದಾಗಲೇ ಹೌದಲ್ಲ, ತಾನು ಕೇಳಿದ ಈ ಪ್ರಶ್ನೆಗೆ ಚಿಗಪ್ಪ ಉತ್ತರಿಸಲೇ ಇಲ್ಲ. ತನಂತೂ ಊರಿನಾಚೆಯ ಅವರ ಹೊಲ ದಾಟಿ ಇದ್ದ ತಮ್ಮ ಹೊಲದ ಬಳಿ ಹೋಗದೇ ನಾಕ್ಕೈದು ವರ್ಷವಾಗಿರ ಬಹುದು, ಹಿಂಗಾಗಿ ತನಗೂ ಗೊತ್ತಿಲ್ಲ. 'ಹೌದ್ ನೋಡ, ನಾ ಕೇಳಿದ್ರ ಚಿಗಪ್ಪ ಏನೂ ಹೇಳ್ಲೇ ಇಲ್ಲ' ಎನ್ನುತ್ತ ಮಲಗಲು ಸಜ್ಜಾದವನಿಗೆ ಮತ್ತೆ ಅವ್ವನಿಗೆ ಫೋನು ಹಚ್ಚಿ ಕೇಳಿಯೇ ಬಿಡೋಣ ಎಂಬ ಹುಕಿ ಹುಟ್ಟಿ ಊರಿಗೆ ಫೋನು ಮಾಡಿದ. ಮೊದಲು ಮಾತಾಡಿದ ವೈನಿಯ ಜೊತೆ ಒಂದಿಷ್ಟು ಮಾತನಾಡಿ, ಕೊನೆಗೆ ಸಿದ್ದಣ್ಣ ಮತ್ತು ಕಮಲವ್ವನನ್ನು ನೋಡಿದ್ದನ್ನು ಹೇಳಿ, 'ಅವ್ರಿಗಿ ಸ್ವಲ್ಪ ಹೊಲಾ ಇತ್ತಲ್ಲಬೇ, ಮತ್ತ ಬ್ಯಾರೆಯವ್ರ ಹೊಲಾನೂ ಪಾಲಿಗಿ ಹಿಡೀತಿದ್ರಲ್ಲ, ಮತ್ತ ಈಗವ್ರು ತಮ್ಮ

ಹೊಲಾನು ಮಾಡಂಗಿಲ್ಲೇನು.. ಈಗ ಹೊಲ ಅಂದ್ರೆ ಯಾರಿಗೂ ಮೈಬಗ್ಗಂಗಿಲ್ಲ ನೋಡು, ಮಂದಿಗಿ ಹೊಲದಾಗ ದುಡಿದು ತಿನ್ನಬಕು ಅನ್ನೂದೇ ಉಳಿದಿಲ್ಲ ಈಗ' ಎಂದು ನಾಕೈದು ವರ್ಷಗಳಿಂದ ಹೊಲದ ಮಣ್ಣನ್ನು ಬೂಟಿಗೂ ತಾಗಿಸದೇ, ಬೆರಳಿಗೆ ಕಂಪ್ಯೂಟರ್ ಕೀಲಿಮಣೆ ಸ್ಪರ್ಶ ಬಿಟ್ಟು ಇತ್ತೀಚಿನ ವರ್ಷಗಳಲ್ಲಿ ಜೋಳ ಗೋದಿಯನ್ನು ಮುಟ್ಟಿಯೂ ನೋಡದಿದ್ದ ಸೂರಿ ವೇದಾಂತ ಮಾತಾಡಿದ.

ಅವ್ವ ಅರೆಕ್ಷಣ ಸುಮ್ಮನಿದ್ದಳು. ಇವನು ಮತ್ತೆ ಅವ್ರ ಹೊಲಾ ಎನ್ನುತ್ತಿದ್ದ ಹಾಗೆ, 'ಅಯ್ಯ, ಅದೇನು ಹೊಲಾ ಅಂತ ಅವಾಗಿಂದ ಬಡ್ಕೊಳಾಕಹತ್ತಿ, ಅವ್ರ ಹೊಲಾನ ನಾಕೈದು ವರ್ಷದ ಕೆಳಗೇ ನಿಮ್ಮಪ್ಪ ತನ್ನ ಹೆಸ್ರಿಗಿ ಮಾಡ್ಸಿಕೊಂಡಾರ, ಸುಮ್ನೆ ಏನರ ಎದಕ್ಕ ಒದರ್ತಿ' ಎಂದಳು. ಅವ್ವನ ಧ್ವನಿಯಲ್ಲಿ ಅಪ್ಪನ ಬೈಯುವ ಧ್ವನಿಯಿತ್ತೋ, ಹೊಲ ಮಾರಿದ ಸಿದ್ದಪ್ಪನ ಬಗ್ಗೆ ಅನುಕಂಪವಿತ್ತೋ, ಇಲ್ಲಾ ತನ್ನನ್ನು ದೂಷಿಸುವಂತೆ ಇತ್ತೋ ಅರ್ಥವಾಗದೇ ಅರೆಕ್ಷಣ ಮಾತು ಹೊರಡದೇ ಸೂರಿ ಸುಮ್ಮನಾದ.

'ನಮ್ಮ ಹೊಲಕ್ಕ ಹೋಗೋ ದಾರ್‍ಯಾಗ ಅದ, ಟ್ರ್ಯಾಕ್ಟರ್ ಓಡಾಟಕ್ಕ ಅದಕ್ಕ ಇದಕ್ಕ ಅಂತ ನಮಗೆ ದಾರಿ ಬೇಕಾಗ್ತೈತಿ, ನಮಗೆ ಮಾರಿಬಿಡ್ರೀ ಅಂತ ನಿಮ್ಮಪ್ಪ, ಚಿಗಪ್ಪ ಇಬ್ರೂ ಸೇರಿ ಅವ್ರ ಜೀಂವಾ ಹಿಂಡಾಕಹತ್ತಿದ್ರು. ಗಂಡ ಹೆಂಡತಿ ಇಬ್ರೂ ಕೇಳ್ಕಂಡ್ರು, 'ಯಪ್ಪಾ, ನಮ್ಮ ಹೊಟ್ಟಿಮ್ಯಾಗ ಹೊಡೀಬ್ಯಾಡ್ರಿ, ನಿಮಗ ದಾರಿಗೆಷ್ಟು ಜಾಗ ಬೇಕು ಅಷ್ಟ ಹಂಗನ ಬಿಟ್ಟಕೊಡ್ತೀವಿ, ಇರೂದ ಮೂರೆಕೆರಿ ಹೊಲಾ, ಅದ್ನೂ ಮಾರಿ ನಾವೆಲ್ಲಿಗೆ ಹೋಗೂಣು. ಒಬ್ಬ ಮಗ ಅದಾನ, ಮಗಳ ಮದ್ವಿ ಮಾಡಬಕು, ಹೊಲ ಇಲ್ಲಂದ್ರ ಹೆಂಗ ಬಾಳೇ ಮಾಡೂಣು' ಅಂತ ರಗಡ ಬೇಡ್ಕಂಡ್ರು. ಒಂದೆರಡು ತಿಂಗಳು ಇವ್ರೂ ಗಪ್ಪಾಗಿದ್ದರು. ಆಮ್ಯಾಗ ಏನಾತೋ ಯಾಂವ ಬಲ್ಲ. ಇವ್ರು ಕೊಟ್ಟಷ್ಟು ರೊಕ್ಕಕ್ಕೆ ಹೊಲ ಮಾರಿದ್ರು. ಮುಂದ ಒಂದು ತಿಂಗ್ಳದಾಗೇ ಕಮಲವ್ವನ ತಮ್ಮ ಬೆಂಗಳೂರ್‍ನಾಗ ಕೆಲಸ ನೋಡೋಣು ಬರ್‍ರಿ ಅಂತ್ಹೇಳಿ ಕರ್‍ಕೊಂಡು ಹ್ವಾದ. ಹೊಲದ ರೊಕ್ಕನಾರ ಬ್ಯಾಂಕನಾಗ ಇಟ್ಕಂಡಾರೋ ಏನ ಮಾಡಿದ್ರೋ ಯಾಂವ ಬಲ್ಲ..' ಅವ್ವ ಅತ್ತ ಕಡೆಯಿಂದ ನಿಡುಸುಯ್ದಳು.

ಸೂರಿ ಇದನ್ನು ನಿರೀಕ್ಷಿಸಿರಲಿಲ್ಲ. ತನ್ನಪ್ಪ ಊರಲ್ಲಿ ದೊಡ್ಡ ಮನುಷ್ಯ, ತಮ್ಮದು ಭಾಳ ದೊಡ್ಡ ಮನೆತನ, ಊರಾಗ ಎಲ್ಲಾ ಭಾಳ ಮರ್‍ವಾದಿ ಕೊಡ್ತಾರ ಎಂದೆಲ್ಲ ಮಾಲಿಯೊಡನೆ ಹೇಳಿಕೊಂಡಿದ್ದ ಸೂರಿಗೆ ನಿಜವೆಂದರೆ ಅಪ್ಪ ಚಿಗಪ್ಪನ ಈ ಯಾವ ಹಕೀಕತ್ತುಗಳೂ ಗೊತ್ತಿರಲಿಲ್ಲ. ಹೈಸ್ಕೂಲಿಗೆ ಸೇರಿದ್ದೆ ಮನೆಯ ಹೊರಗೆ ಬೆಳೆಯತೊಡಗಿದ ಸೂರಿಗೆ ಬರುಬರುತ್ತ ಊರಿನ ವ್ಯವಹಾರಗಳಲ್ಲಿ ಆಸಕ್ತಿಯೂ ಇರಲಿಲ್ಲ. ರಜೆಯಲ್ಲಿಯೂ ನಾಲ್ಕಾರು ದಿನ, ಹೆಚ್ಚೆಂದರೆ ವಾರವಷ್ಟೇ ಹಳ್ಳಿಯಲ್ಲಿರುವುದು, ಇನ್ನುಳಿದ ರಜೆ ಏನಿದ್ದರೂ ಅಮ್ಮನ ತವರು ಮನೆಯಾದ ಧಾರವಾಡದಲ್ಲಿ. ಇವನನ್ನು,

ತಂಗಿಯನ್ನು ಅಮ್ಮನೂ ಏನೋ ನೆವಮಾಡಿ ಧಾರವಾಡದಲ್ಲಿಯೇ ಹೆಚ್ಚು ಸಮಯ ರಜೆ ಕಳೆಯುವಂತೆ ಮಾಡುತ್ತಿದ್ದಳು.

ಸೂರಿಗೂ ಮುಂದೆ ಮಾತು ಹೊರಡಲಿಲ್ಲ. ಇವನ ಮುಖ ಗಾಳಿಹೋದ ಬಲೂನಿನಂತಾಗಿದ್ದು ಕಂಡು ಮಾಲಿನಿಯೂ ಅವನಾಗಿಯೇ ಹೇಳಿದ್ರೆ ಹೇಳಲಿ, ತಾನು ಕೇಳುವುದು ಬೇಡ ಎಂದುಕೊಂಡು ಸುಮ್ಮನಾದಳು. ಬಾತ್‌ರೂಮಿಗೆ ಹೋಗಿಬಂದು, ಬೆಳಗ್ಗೆ ಆರೂವರೆಗೆ ಅಲಾರಂ ಇಟ್ಟು ಹೊದಿಕೆ ಎಳೆದುಕೊಂಡವನು ಮಾಲಿನಿಗೆ ಒತ್ತಿ ಮಲಗಿಕೊಳ್ಳುವಾಗ ಅವ್ವ ಹೇಳಿದ್ದನ್ನು ಮಾಲಿಗೆ ಹೇಳದೇ ಇರಲೂ ಆಗದೇ ಒಂದಕ್ಷರ ಬಿಡದೇ ವಿವರಿಸಿದ. ಆಫೀಸು, ಆಸ್ಪತ್ರೆ, ಪುನಾ ಮನೆಗೆ ಬಂದು ಅಡುಗೆ ಎಂದು ಅಂದು ವಿಪರೀತ ಸುಸ್ತಾಗಿದ್ದ ಮಾಲಿನಿಗೆ ಕೊನೆಯಲ್ಲಿ ಆಕಳಿಕೆ ತಡೆಯಲಾಗದೇ, 'ನಾಳಿ ಮುಂಜಾನಿ ಅವ್ರು ಅಲ್ಲೇ ಎಲ್ಲರ ಕಾಣ್ತಾರೇನ ನೋಡಾಕಂತಿ, ಈಗ ಮಕ್ಕೋ, ಊಂ' ಎನ್ನುತ್ತ ನಿದ್ರೆಗೆ ಜಾರಿದ್ದಳು. ಮಾತು ನಿಲ್ಲಿಸಿದ ಐದು ನಿಮಿಷಗಳ ಅನಂತರ ಮಾಲಿನಿಯ ದೀರ್ಘ ಉಸಿರಾಟ ಕೇಳುತ್ತ ಇನ್ನೇನು ಕಣ್ಣರೆಪ್ಪೆಗಳು ಭಾರವಾಗುತ್ತಿವೆ ಎನ್ನಿಸುವಾಗ ಇದ್ದಕ್ಕಿದ್ದಂತೆ ಅರೆ, ಇದೀಗ ಮಾಲಿಗೆ ವಿವರಿಸಿವಾಗ ಅಪ್ಪ, ಚಿಗಪ್ಪ ಸೇರಿ ಅವರು ಹೊಲ ಮಾರುವ ಸ್ಥಿತಿ ತಂದಿಟ್ಟರು ಎಂಬುದು ಧ್ವನಿಸದೇ ಅವರಾಗಿಯೇ ಹೊಲ ಮಾರಿದರು ಎನ್ನುವ ಧ್ವನಿಯಲ್ಲಿ ವಿವರಿಸಿದೆನೇ ಎಂಬ ಚಿಕ್ಕ ಎಳೆಯೊಂದು ಸೂರಿಯನ್ನು ಅಲುಗಾಡಿಸುತ್ತ ಮತ್ತೆ ಸುಮಾರು ಹೊತ್ತು ನಿದ್ರೆ ಬರಲಿಲ್ಲ. ನಾಳೆ ಸ್ವಲ್ಪ ಮೊದಲೇ ಮನೆಬಿಟ್ಟು ಹೊರಟು, ಅಲ್ಲಿ ಎಂಟು ಗಂಟೆಗೆ ಮೊದಲೇ ಹೋಗಿ ಸೈಡಲ್ಲಿ ನಿಂತು ನಾಳೆಯೂ ಅವರು ಅದೇ ಬಸ್ ನಿಲ್ದಾಣಕ್ಕೆ ಬರ್ತಾರ ನೋಡೋಣ, ಏನಾದರಾಗಲೀ ಅವರು ಕಂಡ್ರೆ ಮಾತಾಡಿಸಲೇಬೇಕು ಎಂದು ಗಟ್ಟಿ ನಿರ್ಧಾರ ಮಾಡಿದ ಮೇಲೆ ಚೂರು ಸಮಾಧಾನವೆನ್ನಿಸಿ ನಿದ್ರೆಗೆ ಜಾರಿದ.

ಮರುದಿನ ಏಳೂಹದಿನೈದಕ್ಕೇ ಕೋಣನಕುಂಟೆ ಕಡೆಗಿದ್ದ ತನ್ನ ಮನೆಯಿಂದ ಹೊರಟ ಸೂರಿ ಏಳೂನಲವತ್ತೈದಕ್ಕೆಲ್ಲ ಈಸ್ಟ್ ಎಂಡ್ ಬಸ್‌ನಿಲ್ದಾಣದತ್ತ ಬರುವ ಜನರತ್ತ ದೃಷ್ಟಿ ನೆಟ್ಟು ಕೂತ. ಮತ್ತೆ ಐದು ನಿಮಿಷಕ್ಕೆಲ್ಲ ತಾನು ಕಾರಿನೊಳಗೆ ಕೂರುವುದಕ್ಕಿಂತ ಹೊರಗೆ ನಿಂತು ನೋಡುವುದು ವಾಸಿ ಎನ್ನಿಸಿ, ಗಾಜು ಏರಿಸಿ, ಕೀಹಾಕಿ ಹೊರಗೆ ನಿಂತ. ಎಂಟು ಗಂಟೆಯಾಗ್ತಿದೆ, ಹೊರಟು ಬಿಡಲೇ, ಅದಾಗಲೇ ಫ್ಲೈಓವರ್ ಮಾಲೆ ಸಾಲುಸಾಲು ವಾಹನಗಳು ಮುಂದೆಲ್ಲೋ ಟ್ರಾಫಿಕ್ ಜಾಮ್ ಆಗಿದೆ ಎಂಬುದರ ಪೂರ್ವ ಸೂಚನೆಯಾಗಿತ್ತು. ಇನ್ನು ಜಯದೇವದ ಒಳಹೋಗಿ, ಅಲ್ಲೊಂದು ಹಾಜರಿ ಹಾಕಿ ಆಫೀಸು ತಲುಪುವಷ್ಟರಲ್ಲಿ ಇವತ್ತು ಕೂಡ ಇನ್ನು ಪ್ರಾಣವೇ ಬಾಯಿಗೆ ಬರುತ್ತೆ ಎಂದೆಲ್ಲ ಒಳಗೊಳಗೇ ಅವಲತ್ತುಕೊಳ್ಳುವಷ್ಟರಲ್ಲಿ ಜೆಪಿ ನಗರದ ಕಡೆಯಿಂದ ಬಂದ ಬಸ್ಸೊಂದರಿಂದ ಇಳಿದ ಕಮಲವ್ವ ಕಾಣಿಸಿದಳು.

ಗಂಡಸರು ಇಳಿಯುವ ಕಡೆಯಿಂದ ಇಳಿದ ಸಿದ್ದಣ್ಣ ಗಾರೆ ಸಾಮಾನುಗಳಿದ್ದ ಚೀಲವೊಂದನ್ನು ಹಿಡಿದಿದ್ದ. ಅವರಿಬ್ಬರನ್ನೂ ಹತ್ತಿರದಿಂದ ನೋಡಿದ ಸೂರಿಗೆ ಅನುಮಾನವೇ ಇಲ್ಲ, ಅವರು ಅವರೇ ಎಂದುಕೊಂಡು ಇಷ್ಟೊತ್ತು ಕಾದಿದ್ದು, ಇನ್ನೊಂದಿಷ್ಟು ಹೊತ್ತು ಟ್ರಾಫಿಕ್ ಜಾಮಿನಲ್ಲಿ ಕಾಯಬೇಕಿರುವುದು ಎಲ್ಲ ನೆನೆದು ಅಂತೂ ಕಾದಿದ್ದು ದಂಡವಾಗಲಿಲ್ಲ ಎಂದು ಖುಷಿಯಾಗಿ ಅವರ ಬಳಿ ಹೋದವನಿಗೆ ಹೇಗೆ ಮಾತು ಶುರು ಮಾಡಬೇಕು ಎನ್ನುವುದು ತಿಳಿಯದೇ, ಮೊದಲಿಗೆ ನೀ ಎಂದು ಏಕವಚನದಲ್ಲಿ ಮಾತಾಡಿಸಲು ಬಾಯಿ ತೆಗೆದವನು ಇದು ತನ್ನ ಹಳ್ಳಿಯಲ್ಲ, ಬೆಂಗಳೂರು ಎಂಬುದು ತಟ್ಟನೆ ಅರಿವಿಗೆ ಬರುತ್ತ, ನೀವು ಸಿದ್ದಣ್ಣಾರು ಹೌದಿಲ್ಲೋ ಅಂದ. ಹೈಸ್ಕೂಲಿನ ಕಡ್ಡಿ ಪೈಲ್ವಾನ್ ಸೂರಿಗೂ ಈಗ ನಿಜಾರ್ಥದಲ್ಲಿ ಆರಡಿ ಎತ್ತರದ ಹುರಿಗಟ್ಟಿದ ದೇಹದ ಸೂರಿಗೂ ಅಜಗಜಾಂತರ ವ್ಯತ್ಯಾಸವಿದ್ದುದರಿಂದ ಸಿದ್ದಣ್ಣನಿಗಾಗಲೀ, ಕಮಲವ್ವನಿಗಾಗಲೀ ಈತ ಯಾರೆಂದು ಬೇಗ ತಿಳಿಯದೇ, 'ಹೌದ್ರೀ ಸರ, ಮಾಫ್ ಮಾಡ್ರೀ ಸರ, ಯಾರಂತ ಖೂನಾಗ್ಲಿಲ್ಲರೀ' ಎಂದ. ತಾನು ಸೂರಿ ಉರುಫ್ ಸುರೇಶ ಬಸವಣ್ಣೆಪ್ಪ ಪಾಟೀಲ ಎಂದು ಸೂರಿ ಪ್ರವರ ಒಪ್ಪಿಸುತ್ತಿದ್ದಂತೆ ಸಿದ್ದಣ್ಣ, ಕಮಲವ್ವನ ಮುಖಬಣ್ಣವೇ ಬದಲಾಯಿತು. ಕಮಲವ್ವ ಅವನತ್ತ ನೋಡುವುದನ್ನು ತಪ್ಪಿಸಿ ಬಸ್ಸು ಬರುವ ಕಡೆ ನೋಡಹತ್ತಿದಳು. ಸೂರಿ ಎಷ್ಟೇ ಮಾತನಾಡಿಸಲು ಪ್ರಯತ್ನಿಸಿದರೂ ಸಿದ್ದಣ್ಣ ಒಂದು ಎರಡು ಪದಗಳಲ್ಲಿ ಉತ್ತರಿಸಿ, ಎತ್ತಲೋ ನೋಡಲು ಶುರುಮಾಡಿದ. ಅಷ್ಟರಲ್ಲಿ ಬಿಳೇಕಲ್‌ಹಳ್ಳಿ ಕಡೆ ಹೋಗುವ ಬಿಸಿ4 ಬಸ್ಸು ಕಂಡಿದ್ದೇ ಕಮಲವ್ವ ಬರ್ತೀನಣ್ಣೋ ಎನ್ನುತ್ತಲೇ ಹೆಂಗಸರು ಏರುವ ಕಡೆ ಹೊರಟಳು. ಸಿದ್ದಣ್ಣ ಅಲ್ಲೊಂದು ಅಪಾರ್ಟ್‌ಮೆಂಟ್ ಕಟ್ಟುವಲ್ಲಿ ಕೆಲಸ ಮಾಡುತ್ತಿದ್ದೇವೆಂದು, ಈ ಬಸ್ಸು ತಪ್ಪಿದರೆ ತಡಾತದಪ್ಪ ಎನ್ನುತ್ತಲೇ ಹೊರಟೇಬಿಟ್ಟ. ತನ್ನಪ್ಪನ್ನ ನೋಡಲು ಬೆಳಗಾಂವ, ಚಿಕ್ಕೋಡಿ, ಧಾರವಾಡದಿಂದ ದೊಡ್ಡ ದೊಡ್ಡ ಕುಳಗಳೆಲ್ಲ ಬಂದುಹೋಗುತ್ತಿರುವಾಗ, ತಮ್ಮೂರಿನವರೇ, ತಮ್ಮ ಹೊಲದ ಪಕ್ಕವೇ ಹೊಲವಿದ್ದ ಈ ಗಂಡಹೆಂಡತಿ ಅಪ್ಪನನ್ನು ನೋಡುವ ಕುತೂಹಲ ಇರಲಿ, ಹೀಗೆ ದೊಡ್ಡ ಆಪರೇಷನ್ ಆಗೇತಿ ಎಂದು ತಾನು ಹೇಳಿದಾಗ, ಮತ್ತ ಈಗ ಹ್ಯಂಗದಾರ ಎಂದೂ ಕೇಳದೇ 'ಅಯ್ಯೋ ಇವೆಲ್ಲ ಪ್ರತಿದಿನ ಇದ್ದಿದ್ದೇ ಬಿಡ್ರೀ, ಕಾರ್ಡು ಸ್ವೈಪ್ ಮಾಡ್ಲಿಕ್ಕೆ ಲೇಟ್ ಆಗುತ್ತೆ, ನಾನಿನ್ನು ಬರ್ಲಾ' ಎನ್ನುವ ಮಹಾನಗರಿ ಶೈಲಿಯಲ್ಲಿ ಈ ಬಸ್ಸು ತಪ್ಪಿದರೆ ತಡಾತದಪ್ಪ ಎಂದು ಹೇಳಿ ಆಗಲೇ ಜನರಿಂದ ಇಡುಕಿರಿದಿದ್ದ ಬಸ್ಸಿನಲ್ಲಿ ತೂರಿಕೊಂಡ ಅವರಿಬ್ಬರನ್ನೂ ಕಂಡು ಸೂರಿ ದಂಗುಬಡಿದು ನಿಂತ. ಬರ್ತೀನಣ್ಣೋ ಎಂದು ಕಮಲವ್ವ ಹೇಳಿದ್ದು ಕೂಡ ಥೇಟ್ ಇಲ್ಲಿಯ ಕೆಲಸದ ಹೆಣ್ಣುಮಕ್ಕಳ ಶೈಲಿಯಲ್ಲಿ ಎನ್ನಿಸಿದ ಸೂರಿಗೆ ಆ ಬಸ್ಸು ಹೋದ ಮೇಲೆಯೇ ತಾನಿನ್ನೂ ಅಲ್ಲಿಯೇ ನಿಂತಿದ್ದೇನೆ ಎನ್ನುವುದು ಅರಿವಿಗೆ ಬಂದದ್ದು. ಸ್ಪೆಷಲ್ ವಾರ್ಡಿಗೆ ಬಂದವ ಚಿಗಪ್ಪ, ಅಪ್ಪನೊಂಡಿಗೆ ವಿಚಾರಿಸಿಕೊಳ್ಳಲೇಬೇಕಾದ ಅನಿವಾರ್ಯವೆಂಬಂತೆ

ವಿಚಾರಿಸಿಕೊಂಡವ, ತಡೆಯಲಾರದೇ ಕೊನೆಗೆ ಹೊರಡುವಾಗ ಇದೇ ಈಗ ಬಸ್‌ನಿಲ್ದಾಣದಲ್ಲಿ ಸಿದ್ದಣ್ಣ, ಕಮಲವ್ವನನ್ನು ಕಂಡು ಮಾತಾಡಿಸಿದ್ದನ್ನು ಹೇಳಿದ. ಹೇಳುವಾಗ ತಾನು ಮೊದಲೇ ಬಂದು ಅವರಿಗೆ ಕಾದು ನಿಂತಿದ್ದೆ ಎನ್ನುವುದಾಗಲೀ, ಅವರು ತನ್ನೊಂದಿಗೆ ಮಾತುಕತೆಗೆ ಉತ್ಸಾಹ ತೋರಿಸಲಿಲ್ಲ ಎಂದಾಗಲೀ ಧ್ವನಿಸದಂತೆ ಎಚ್ಚರವಹಿಸಿ, ಸುಮ್ಮನೆ ಸುದ್ದಿಯೊಂದನ್ನು ಅರುಹುವಂತೆ ಹೇಳಿದ. ರಾತ್ರಿ ಅವ್ವನೊಂದಿಗೆ ಅವರ ಹೊಲದ ವಿಚಾರವನ್ನು ಕೇಳಿ ತಿಳಿದಿದ್ದನ್ನೂ ಹೇಳಲಿಲ್ಲ. 'ಹೌಂದೇನು, ಮನಿ ಎಲ್ಲಿ ಮಾಡ್ಯಾರ ಕೇಳ್ಬಕಿತ್ತು.. ಮತ್ತ ಹುಡುಗಿದು ಲಗ್ನ ಮಾಡ್ಯಾರಂತೇನು' ಇತ್ಯಾದಿ ಪ್ರಶ್ನೆಗಳನ್ನು ಅಪ್ಪ ಚಿಗಪ್ಪ ಇಬ್ಬರೂ ಕೇಳುತ್ತ, ಇನ್ನು ಇವರಿಬ್ರೂ ಸೇರಿ ತಲೆಚಿಟ್ಟು ಹಿಡಿಸ್ತಾರ ಎನ್ನಿಸಿ, ಆಫೀಸಿಗಿ ತಡಾಗ್ತದ ಎಂದು ಹೊರಟ.

ಆಫೀಸಿಗೆ ಹೋಗುವಾಗ ಮಧ್ಯೆ ಮಾಲಿಗೆ ಫೋನು ಮಾಡಿ, ಹಿಂಗ್ಹಿಂಗೇ ಅಂದ. ಅಳಿದುಳಿದ ಕೆಲಸ ಮಾಡಿಮುಗಿಸಿ, ಡಬ್ಬಿ ಸಿದ್ಧಮಾಡಿಕೊಂಡು ಹೊರಡುವ ಗಡಬಡೆಯಲ್ಲಿದ್ದರೂ ಮಾಲಿ, ಹೌದಾ ಎನ್ನುತ್ತಾ ಕೇಳಿಸಿಕೊಂಡವಳು, ನೀ ಈಗ ಮತ್ತ್ ಅದೇ ವಿಚಾರ ತಲ್ಯಾಗ ಇಟ್ಕೋಬ್ಯಾಡ, ರಾತ್ರಿ ವಿಚಾರ ಮಾಡೂಣು ಎನ್ನುತ್ತಲೇ ನಂಗೂ ತಡಾಗೈತಿ ಎನ್ನುತ್ತ ಮೊಬೈಲ್ ಇಟ್ಟಿದ್ದಳು.

'ಇಬ್ರೂ ಗಂಡ ಹೆಂಡತಿ ಎಷ್ಟು ಸ್ವಾಭಿಮಾನದಿಂದ ಹೊಲದಾಗ ದುಡಕಂಡು ಉಣತಿದ್ರು, ನಮಗ ಇಷ್ಟ್ ಹೊಲ, ಇಷ್ಟ್ ಆಸ್ತಿ ಅದಾವು, ಎಕ್ಕ ಇವರಿಬ್ರೂ ಇಷ್ಟ್ ದುರಾಸೆ ಮಾಡ್ತಾರ' ಎಂದೆಲ್ಲ ರಾತ್ರಿ ಮಾಲಿಯ ಮುಂದೆ ಅಲವತ್ತುಕೊಂಡ ಸೂರಿಗೆ ತಾನು ಇದರಲ್ಲಿ ಏನು ಮಾಡಬಹುದು ಎಂಬುದೇ ಬಗೆಹರಿಯಲಿಲ್ಲ.

ಮರುದಿನವೂ ಅವರನ್ನು ಭೇಟಿಯಾಗಲೇಬೇಕು ಎಂದುಕೊಂಡ ಸೂರಿ ಕಾದಿದ್ದೇ ಬಂತು, ಇಬ್ಬರೂ ಎಂಟೂ ಹದಿನೈದಾದರೂ ಜೆಪಿನಗರದ ಕಡೆಯಿಂದ ಬರುವ ಯಾವುದೇ ಬಸ್ಸಿಗೆ ಬರಲೇ ಇಲ್ಲ. ಇನ್ನು ತಡವಾಗುತ್ತೆ ಎಂದುಕೊಂಡ ಸೂರಿ ಅಪ್ಪನನ್ನು ನೋಡಲು ಹೋದ. ಬಿ.ಪಿ. ಸ್ವಲ್ಪ ಏರುಪೇರು ಆಗುತ್ತಿರುವುದರಿಂದ ಇನ್ನೂ ನಾಲ್ಕೈದು ದಿನಗಳಾದರೂ ಇಲ್ಲಿಯೇ ಇರಬೇಕೆಂದು, ಅನಂತರ ಡಿಸ್ಚಾರ್ಜ್ ಮಾಡಿದರೂ, ಪುನಾ ಹತ್ತು ದಿನಗಳ ಬಳಿಕ ಚೆಕ್‌ಅಪ್‌ಗೆ ಬರಬೇಕೆಂದು, ಹೀಗಾಗಿ ಡಿಸ್ಚಾರ್ಜ್ ಆಗಿ, ಹತ್ತುದಿನ ಇಲ್ಲಿಯೇ ಸೂರಿಯ ಮನೆಯಲ್ಲಿ ಇರುವುದೆಂದೂ, ಈಗ ಹೊಲಮನಿಯ ಹೆಚ್ಚಿನ ಕೆಲಸಗಳೇನೂ ಇಲ್ಲದ್ದರಿಂದ ಚಿಗಪ್ಪನೂ ಇಲ್ಲಿಯೇ ಇರುವುದೆಂದೂ ಮಾತುಕತೆಯಾಯಿತು.

ಮಧ್ಯಾಹ್ನ ಊಟದ ಸಮಯದಲ್ಲಿ ಫೋನಾಯಿಸಿದ ಚಿಗಪ್ಪ ಅಪ್ಪನ ಹೊಸ ಬಯಕೆಯೊಂದನ್ನು ಮುಂದಿಟ್ಟಿದ್ದ. ಈಗ ಹತ್ತುಹನ್ನೆರಡು ದಿನದಿಂದ ಬರೀ ಅನ್ನ,

ಸಪ್ಪೆ ಸಾರು, ಅವೇ ಇಡ್ಲಿ, ಉಪ್ಪಿಟ್ಟುಗಳನ್ನು ತಿಂದೂ ತಿಂದೂ ಬಾಯಿ ಜಡ್ಡುಗಟ್ಟಿದೆಯೆಂದೂ, ಬಿಸಿಬಿಸಿ ಮೆತ್ತನೆಯ ಬಿಳಿಜ್ವಾಳದ ರೊಟ್ಟಿ ತಿನ್ನಬೇಕೆಂದು ಅನ್ನಿಸುತ್ತಿದೆಯೆಂದೂ, ಬೆಳಿಗ್ಗೆ ಒಂದೇ ಒಂದು ಇಡ್ಲಿ ತಿಂದ ಅಪ್ಪ, ಮಧ್ಯಾಹ್ನವೂ ನಾಕೇನಾಕು ತುತ್ತು ಅನ್ನ ತಿಂದನೆಂದೂ, ಹಿಂಗ ಊಟ ಸರೀಗಿ ಮಾಡ್ಲಿಕ್ಕಂದ ಬ್ಯಾನಿ ಹ್ಯಂಗ ಕಡಿಮೆ ಆಗ್ತೈತಿ ಎಂದು ಬೇಸರಪಟ್ಟುಕೊಂಡಿದ್ದರು. ಸೂರಿಗೆ ಫಜೀತಿಗಿಟ್ಟುಕೊಂಡಿತು. ಮಾಲಿನಿಗೆ ಎಲ್ಲ ಅಡುಗೆ ಮಾಡಲಿಕ್ಕೆ ಬಂದರೂ, ರೊಟ್ಟಿ ಬಡಿಯೋದು ಮಾತ್ರ ಬರುತ್ತಲೇ ಇರಲಿಲ್ಲ. 'ನಾಳಿ ಗಂಡನ ಮನಿಗಿ ಹ್ವಾದ ಮೇಲೆ ಕಲ್ಯೋತಾಳ ಬಿಡು' ಎಂದು ತವರು ಮನೆಯಲ್ಲಿಯೂ ಅದನ್ನೊಂದು ಸಮಸ್ಯೆಯಾಗಿ ನೋಡಿರಲಿಲ್ಲ. ಇಲ್ಲಿ ಸೂರಿಯ ಅಣ್ಣನ ಹೆಂಡತಿ, ಚಿಗವ್ವ ಕಲ್ತುಕೋ ಎಂದರೂ ಸೂರಿಯ ಅವ್ವ ಮಾತ್ರ, 'ರೊಟ್ಟಿ ಮಾಡಕ್ಕೆ ಬರದಿದ್ರ ಏನಾತೀಗ, ಚಪಾತಿ ಮಾಡ್ತಾಳ ಬಿಡು, ಎಲ್ಲ ಹೆಂಗಸ್ರು ಎಲ್ಲ ಅಡಗಿ ಕೆಲಸನೂ ಕಲಿಲೇಬೇಕು ಅಂತ ಏನದ..' ಎಂದು ಮಾಲಿನಿಯನ್ನು ಅವಳಿರುವಂತೆಯೇ ಒಪ್ಪಿಕೊಂಡು ಬಿಟ್ಟಿದ್ದರು.

'ರೊಟ್ಟಿ ಮಾಡಕ್ಕ ಬರಂಗಿಲ್ಲ ಅಂತ ನಿಮ್ಮವ್ವ ನನ್ನ ಜನ್ಮ ಜಾಲಾಡ್ತಾರ ಅಂದ್ಕಂಡು ನನಗ ಎಷ್ಟು ಅಂಜಿಕಿ ಆಗಿತ್ತು.. ಅದರ ಅವ್ರು ಒಂದೇ ಮಾತಿನಾಗ ನಿನಗೇನ್ ಬರತೈತೋ ಅದ್ನೇ ಛಲೋತ್ನಾಗು ಮಾಡವಾ ತಾಯಿ ಅಂದುಬಿಟ್ಟರು, ನನಗರ ಹೋದ ಜೀಂವಾ ಬಂದಂಗಾಂತು' ಎಂದು ಮಾಲಿನಿ ಅವ್ವನನ್ನು ಕೊಂಡಾಡಿದ್ದಳು. ಆ ನಂತರ ಎಂದೂ ಮಾಲಿನಿ ಅತ್ತೆ ಎನ್ನದೇ, ನಿಮ್ಮವ್ವ ಎನ್ನದೇ ತಾನೂ ಅವ್ವಾರೆ ಎಂದು ಕರೆಯುವುದನ್ನು ರೂಢಿಸಿಕೊಂಡಿದ್ದಳು.

ಅಂದು ರಾತ್ರಿಯೂ ಚಿಗಪ್ಪ ಮತ್ತೆ ಫೋನಾಯಿಸಿ 'ಊಟನೇ ಸರಿಯಾಗಿ ಮಾಡಿಲ್ಲ, ಎಲ್ಲ ವಯಕ್ ಅನ್ನಲಾಕ ಹತ್ತೇದ ಅಂತನ್ನಾಕ ಹತ್ಯಾನ, ಅಂವ ಉಣ್ಣದಿದ್ದು ನೋಡಿ, ನನಗೂ ಊಟ ಮಾಡಾಕ ಮನಸಾಗವಲ್ದು' ಎಂದಿದ್ದರು.

ಮರುದಿನ ಶನಿವಾರ ಮನೆಯಲ್ಲೇ ಇಮೇಲ್‌ಗಳನ್ನೆಲ್ಲ ನೋಡಿ ಮುಗಿಸಿದವ, ಮಾಲಿ ಆಫೀಸಿನಿಂದ ಬರುವ ಮೊದಲೇ ಅಪ್ಪನನ್ನು ನೋಡಿ ಬಂದರೆ, ರಾತ್ರಿ ತಾವಿಬ್ರೂ ಎಲ್ಲಾದ್ರೂ ಹೊರಗೆ ತಿರುಗಾಡಿಕೊಂಡು, ಊಟ ಮುಗಿಸಿ ಬರಬಹುದು, ಅಪ್ಪನ ಆಪರೇಶನ್ ರಗಳೆಯಲ್ಲಿ ಎಲ್ಲೂ ಹೋಗಿಯೇ ಇಲ್ಲ, ಅವಳಿಗೂ ಬೇಜಾರಾಗಿರುತ್ತೆ ಎಂದುಕೊಂಡವ ಐದು ಗಂಟೆಗೇ ಆಸ್ಪತ್ರೆಗೆ ಹೋದ. ಅಪ್ಪ ನಿನ್ನೆ ಬೆಳಿಗ್ಗೆಯಿಂದಲೇ ಸರಿಯಾಗಿ ಏನೂ ತಿಂದಿರದಿದ್ದಕ್ಕೋ, ಇಲ್ಲಾ ಬಿ.ಪಿ. ಏರುಪೇರಿಗೋ ಚೂರು ಸುಸ್ತಾಗಿರುವಂತೆ ಕಂಡ.

'ಆ ಕಮಲವ್ವನ ಹತ್ರನಾರ ಒಂದೆರಡು ಬಿಸಿರೊಟ್ಟಿ ಮಾಡ್ಸಿಕಂಡು ಬರ್ತೀಯೇನಪ್ಪ ಸೂರಿ, ಖರೇ, ನನಗ ರಗಡ ಆಗೇದೋ.. ಅನ್ನ, ಚಪಾತಿ ಕಂಡ್ರ ವಾಂತಿನ ಬರ್ತದ'

ಎಂದ ಅಪ್ಪನ ಕಣ್ಣಾಲಿಯಲ್ಲಿ ಎಂದೂ ಇಲ್ಲದ ಆರ್ದ್ರತೆ, ಆ ಧ್ವನಿಯಲ್ಲಿದ್ದ ಯಾಚನೆ ಸೂರಿಯನ್ನು ಅಲ್ಲಾಡಿಸಿತು. ರಗಡ ಕಡೆ ಉತ್ತರ ಕರ್ನಾಟಕದ ರೊಟ್ಟಿ ಅಂಗಡಿ ಅದಾವು, ತರ್ತೀನೇಳು ಅಂದ್ರೆ ಬ್ಯಾಡಪ್ಪ ಅವ್ರು ಯಾವಾಗ ಮಾಡಿ ಇಟ್ಕಂಡಿರ್ತಾರೋ ಏನೋ, ದಪ್ಪಗೊಂದು ಬಿಸಿರೊಟ್ಟಿ ಮಾಡಿ, ಒಂದ್ ಹನಿ ಒಳ್ಳೆಣ್ಣೆ, ನಾಕು ಜೀರಿಗಿ, ಒಂದ್ ಹಸಿಮೆಣಸಿನಕಾಯಿ ಹಾಕಿ ಮುಟಗಿ ಮಾಡ್ತಾರಲ್ಲ ಅದ್ನ ತಿನ್ನೂ ಹಂಗ ಆಗೇದ..' ಎಂದು ಅಪ್ಪ ಬಿಡಿಸಿ ಬಿಡಿಸಿ ಬಾಯಲ್ಲಿ ಎಂಜಲು ತುಂಬಿಕೊಂಡು, ಕಣ್ಣಲ್ಲಿ ನೀರು ತುಂಬಿಕೊಂಡು ಹೇಳಿದಾಗ ಹಿಂದಿನವರಿಗಿರುವ ಈ ಜೀವಪ್ರೀತಿ, ಏನೋ ಒಂದು ತಿಂದರಾಯ್ತು ಎನ್ನುವ ತನ್ನ ಜಮಾನಾದವರಿಗೆಲ್ಲಿ ಬರಬೇಕು ಎಂಬ ಅಚ್ಚರಿಯಲ್ಲಿಯೇ ಏನಾದರಾಗಲೀ ಕಮಲವ್ವನ ಹತ್ತಿರ ಹೋಗಿ ಮಾಡಿಕೊಡಲು ಕೇಳಿಯೇಬಿಡುವುದು, ಏನೇ ಆದರೂ ತನ್ನೂರಿನ ಕಡೆಯ ಮಂದಿ, ಒಂದು ಬಿಸಿರೊಟ್ಟಿಯ ಮುಟಗಿ ಮಾಡಿಕೊಡಲು ಇಲ್ಲ ಎನ್ನುವುದುಂಟೇ ಎಂಬ ಭರವಸೆಯಲ್ಲಿಯೇ ಸೂರಿ ಅಂದು ಸಿದ್ದಣ್ಣ ಒಂದೆರಡೇ ಮಾತಿನಲ್ಲಿಯೇ ಜೆಪಿನಗರ ೩ನೇ ಹಂತದ ಬಳಿ ಇರುವ ಸ್ಲಂ ಎಂದಿದ್ದು ನೆನಪಾಗಿ, ಅಲ್ಲಿ ಹೋಗಿ ಹೆಂಗಾರು ಮಾಡಿ ಮನೆ ಪತ್ತೆ ಹಚ್ಚುವುದು ಎಂಬ ತೀರ್ಮಾನಕ್ಕೆ ಬಂದ. ಸೂರಿಗೆ ಅಪ್ಪನ ಬಯಕೆ ತೀರಿಸಿಯೇಬಿಡೋಣ ಎನ್ನಿಸಲು ಇನ್ನೊಂದು ಕಾರಣವೂ ಇತ್ತು. ಇಷ್ಟೆಲ್ಲ ನಿಗಾದಲ್ಲಿದ್ದರೂ ಹೀಗೆ ಬಿಪಿ ಏರುಪೇರು ಆಗುತ್ತಿರುವುದರಿಂದ ಎಲ್ಲಾದ್ರೂ ಮ್ಯಾಸೀವ್ ಹಾರ್ಟ್ ಅಟ್ಯಾಕ್ ಗಿಟ್ಯಾಕ್ ಆದರೆ, ಕೊನೆಯ ಘಳಿಗೆಯಲ್ಲಿ ಹೀಗೆ ಎಲ್ಲಾ ಬಿಟ್ಟು ಒಂದು ಬಿಸಿರೊಟ್ಟಿ ತಿನ್ನುವ ಬಯಕೆಯನ್ನೂ ತಾನು ಪೂರೈಸಲಿಲ್ಲ ಎಂದಾಗಿಬಿಟ್ಟರೆ ಎನ್ನಿಸಿ, ಆಸ್ಪತ್ರೆಯಿಂದ ಹೊರಬಂದವನೇ ಕಾರನ್ನು ಜೆಪಿನಗರ ೩ನೇ ಹಂತದ ಬಳಿ ತಿರುಗಿಸಿದ.

ದಾರಿಯಲ್ಲಿ ಮಾಲಿನಿಗೆ ಫೋನಾಯಿಸಿ ಹೀಗ್ಹೀಗೆ ಎಂದ. 'ಅಲ್ಲಿ ಕಿರಾಣಿ ಅಂಗಡಿ, ಡಬ್ಬಾ ಗೂಡಂಗಡಿ, ಚಾದುಕಾನು ಇರ್ತಾವು ನೋಡು ಹಂತಲ್ಲಿ ಮೊದ್ಲು ಕೇಳು, ಅವ್ರಿಗಿ ಗೊತ್ತಿರ್ತದ' ಎಂದು ಮಾಲಿನಿ ಹೇಳಿದಾಗ ಅವನಿಗೆ ಹೌದಲ್ಲ, ಒಂದು ಬಿಸಿರೊಟ್ಟಿ ಮುಟಗಿ ತರಬೇಕು ಎಂಬ ವೀರಾವೇಶದಿಂದ ಹೊರಟ ತಾನು ಅಲ್ಲಿ ಹೋಗಿ ಅವರ ಮನೆ ಹೇಗೆ ಹುಡುಕುವುದು ಎಂಬುದನ್ನು ಆಲೋಚಿಸಿಯೇ ಇರಲಿಲ್ಲ ಎನ್ನಿಸಿ, 'ಮಾಲಿ, ನೀ ಭಲೋ ತೆಲಿ ಓಡುಸ್ತೀ ನೋಡು' ಎಂದು ಅಭಿಮಾನದಿಂದ ಹೇಳಿದ. ಮೊದಲಿಗೆ ಕಂಡ ಗುರುಪ್ಪನಪಾಳ್ಯದ ಸ್ಲಂ ಬಳಿ ಒಂದೆಡೆ ಕಾರು ನಿಲ್ಲಿಸಿ, ಹತ್ತಿರದ ಎರಡು ಮೂರು ಅಂಗಡಿಗಳವರನ್ನು ಕೇಳಿದ. ಆ ಕಡೆ ತುದಿಗೆ ಇನ್ನೊಂದು ಅಂಗಡಿ ಇದೆ ಸಾರ್, ಅಲ್ಲಿ ಹೋಗಿ ಕೇಳಿ, ಆ ಕಡೆಯವ್ರೆಲ್ಲ ಆ ಅಂಗಡಿಗೆ ಹೋಗ್ತಾರೆ' ಎಂದು ಅಲ್ಲಿದ್ದವರು ಹೇಳಿದರು. ಆ ತುದಿಯ ಅಂಗಡಿಯವ ಚಿತ್ರದುರ್ಗದ ಕಡೆಯವನಂತೆ. ಹೀಗಾಗಿ ಉತ್ತರ ಕರ್ನಾಟಕದ ಕಡೆಯಿಂದ ಗುಳೇಬಂದು ಇಲ್ಲಿರುವ ಜನರೆಲ್ಲ ತನ್ನ ಅಂಗಡಿಗೆ ಬರುತ್ತಾರೆಂದು

ಸವಿವರವಾಗಿ ಹೇಳಿದ ಆತ, ತನಗೆ ಸಿದ್ದಣ್ಣ, ಕಮಲವ್ವ ಗೊತ್ತೆಂದೂ, ಹಿಂಗೆ ಹೋಗಿ, ಹಂಗೆ ತಿರುಗಿ, ಬಲಕ್ಕೆ ಸಣ್ಣಜೋಪಡಿ ಅಂತೆಲ್ಲ ವಿವರಣೆ ಕೊಟ್ಟ ಆತ ಹೇಳಿದಂತೆ ನಸುಗತ್ತಲಾಗತೊಡಗಿದ್ದ ಆ ರಸ್ತೆಗಳೆಂಬ ಓಣಿಗಳಲ್ಲಿ ನಡೆದು ಹೋದ ಸೂರಿ ಕೊನೆಗೂ ಇನ್ನೂ ಒಂದಿಬ್ಬರನ್ನು ಕೇಳಿಕೊಂಡು ಅವರ ಮನೆಯನ್ನು ಪತ್ತೆಹಚ್ಚಿದ.

ಹೀಗೆ ಅಲ್ಲೆಲ್ಲೋ ದೂರದಲ್ಲಿ ಕಾರು ನಿಲ್ಲಿಸಿ ಮನೆ ಹುಡುಕಿಕೊಂಡು ಬಂದ ಸೂರಿಯನ್ನು ಕಂಡು ಸಿದ್ದಣ್ಣನಿಗೆ ಅಯ್ಯ, ಮತ್ತೇನು ಅವಾಂತ್ರ ಮೈಮ್ಯಾಗ ಬಂತಪ್ಪ ಎಂಬ ದಿಗಿಲೂ ಆಯಿತು. ಮೊದಲು ಬಾಗಿಲಲ್ಲೇ ನಿಂತ ಸೂರಿ ಹೀಗೆ ಎರಡು ದಿನದಿಂದ ತನ್ನಪ್ಪ ಒಂದು ಬಿಸಿರೊಟ್ಟಿಯ ಮುಟಿಗೆಗಾಗಿ ಹಂಬಲಿಸುತ್ತಿರುವು ದಾಗಿ, ಎರಡು ದಿನದಿಂದ ಸರಿಯಾಗಿ ಊಟ ತಿಂಡಿ ಮಾಡದೇ ಇರುವುದನ್ನು ತನ್ನ ಹೆಂಡತಿಗೆ ಎಲ್ಲ ಅಡುಗೆ ಬಂದರೂ ರೊಟ್ಟಿ ಮಾಡುವುದು ಮಾತ್ರ ಬರುವುದಿಲ್ಲ, ಮನೆಯಲ್ಲಿ ಜೋಳದ ಹಿಟ್ಟ ತರೋದೆ ಇಲ್ಲವೆಂದೂ ಸಾದ್ಯಂತ ವಿವರಿಸಿದ. ಒಳಗ ಬಾರಣ್ಣ, ಸಣ್ಣ ಮನಿ.. ಕುರ್ಚಿ ಇಲ್ಲ ಕುಂದ್ರಾಕ, ಇಲ್ಲೇ ಮ್ಯಾಗ ಕುಂತ್ಕಳಪ್ಪ ಎಂದು ಇಬ್ಬರೂ ಉಪಚರಿಸಿದರು.

ಎರಡು ಟ್ರಂಕ್ ಅನ್ನು ಜೋಡಿಸಿಟ್ಟು ಹಾಸಿಗೆ ಹೊದಿಕೆಗಳನ್ನಿಟ್ಟು ಹಗಲು ಹೊತ್ತಿನಲ್ಲಿ ಕೂರಲು ಮಾಡಿದ್ದರು. ಅದರ ಮೇಲೆ ಕೂತ ಸೂರಿ ಮನೆಯನ್ನೆಲ್ಲ ವೀಕ್ಷಿಸಿದ. ಒಂದೇ ಕಣ್ಣಳತೆಗೆ ಅಲ್ಲಿರುವುದೆಲ್ಲ ಕಾಣುವಂತಿತ್ತು. ಚಿಕ್ಕ ಜೋಪಡಿ, ಒಂದು ಮೂಲೆಯಲ್ಲಿ ಸ್ಟವ್, ಒಂದಿಷ್ಟು ಚಿಕ್ಕಮಟ್ಟ ಬಣ್ಣಗೆಟ್ಟಿದ್ದ ಪ್ಲಾಸ್ಟಿಕ್ ಡಬ್ಬಿಗಳು, ಇನ್ನೊಂದು ಮೂಲೆಯಲ್ಲಿ ಕಿರಿದಾದ ಬಚ್ಚಲು, ಒಂದು ಟ್ರಂಕಿನ ಮೇಲೆ ಚಿಕ್ಕ ಬಣ್ಣದ ಟಿವಿ, ಅದಕ್ಕೆ ಇಳಿಬಿದ್ದ ಕೇಬಲ್ ವೈರು, ಅದರ ಮೇಲೆ ಹಗ್ಗದಲ್ಲಿ ನೇತಾಡುತ್ತಿದ್ದ ಒಂದೆರಡು ಜೊತೆ ಪ್ಯಾಂಟುಶರ್ಟುಗಳು, ಒಂದೆರಡು ಮಾಸಿದ ಸೀರೆಗಳು ಇಷ್ಟೇ ಅಲ್ಲಿದ್ದಿದ್ದು. ಸೂರಿ ಕೆದಕಿಕೆದಕಿ ಕೇಳಿದ ಅನಂತರ ಸಿದ್ಧಣ್ಣ ಮಗಳು ದೊಡ್ಡಾಕಿ ಆಗ್ಯಾಳ, ತನ್ನ ಹತ್ರ ಇದ್ದು ಟೈಲರಿಂಗ್ ಕಲೀಲಿ ಅಂತ ಕಮಲವ್ವನ ತಮ್ಮನ ಹೆಂಡತಿ ತಮ್ಮ ಮನೆಯಲ್ಲಿಯೇ ಇಟ್ಟುಕೊಂಡಿದ್ದಾಳೆ. ಹಿಂಗಾಗಿ ಇಲ್ಲಿ ಇಬ್ರೇ ಇರೋದು, ತಮ್ಮ ತಿಲಕ್‌ನಗರದ ಹತ್ತಿರ ಮನೆ ಮಾಡಿದ್ದಾನೆ, ಮಗನನ್ನ ಯಾವುದೋ ಮೊರಾರ್ಜಿ ಶಾಲೆಯಲ್ಲಿ ಕಲಿಸುತ್ತಿರುವುದಾಗಿ ಹೇಳಿದ.

ಕಮಲವ್ವ ಕೊಮ್ಮಟಿಗೆಯಲ್ಲಿ ಹಿಟ್ಟು ನಾದಿಕೊಂಡು ಸ್ಟವ್ ಮೇಲೆ ಹಂಚಿಟ್ಟು ರೊಟ್ಟಿ ಬಡಿಯಲು ತಯಾರಾಗಿದ್ದಳು. ನಾಲ್ಕಾರು ರೊಟ್ಟಿ ಬುಟ್ಟಿಯಲ್ಲಿ ಬಿದ್ದವು. ಸೂರಿ ಅದನ್ನೇ ನೋಡುತ್ತ ಮತ್ತೆ ತನ್ನಪ್ಪನ ಬಯಕೆಯನ್ನು ಬೇರೆಯದೇ ಮಾತಿನಲ್ಲಿ ಮುಂದಿಟ್ಟ.

'ಯಪ್ಪ ನೀ ಬೇಕಾದ್ರ ನಾಕಲ್ಲ, ಎಂಟು ರೊಟ್ಟಿ ಇಲ್ಲೇ ತಿನ್ಕಂಡು ಹೋಗು, ಆದರ ನಿಮ್ಮಪ್ಪಗ ಮಾತ್ರ ನಾ ಮುಟಗಿಗಿಟಗಿ ಎಲ್ಲ ಮಾಡಿಕೊಡಂಗಿಲ್ಲಪ್ಪೊ. ಹೊಲ ಮಾರಿದ ಮ್ಯಾಲ ಮುಗೀತು, ನಮಗ ಅವ್ರಿಗಿ ಸಂಬಂಧನ ಇಲ್ಲಪ್ಪೊ' ಎಂದೇಬಿಟ್ಟಳು. ಒಂದು ಬಿಸಿರೊಟ್ಟಿ ಕೊಡಲು ಅವಳು ಹೀಗೆ ನಿರಾಕರಿಸಬಹುದು ಎಂಬುದರ ಕಲ್ಪನೆಯೇ ಇಲ್ಲದ ಸೂರಿಗೆ, ಒಳಕರೆದು ಕೂರಿಸಿದ ಆಹ್ವಾನ ಮಾತ್ರದಿಂದಲೇ ರೊಟ್ಟಿ ಕೊಟ್ಟೇ ಕೊಡುತ್ತಾರೆ ಎಂಬ ಊಹೆಯಿಂದ ಆರಾಮಾಗಿ ಕೂತಿದ್ದ ಸೂರಿಗೆ ರಪ್ಪೆಂದು ಕಪಾಳಕ್ಕೆ ಹೊಡೆದಂತೆನ್ನಿಸಿತು.

'ನೋಡಬೇ.. ನಮ್ಮಪ್ಪ ಫೈವ್ ಸ್ಟಾರ್ ಹೋಟೆಲಿಂದು ಏನರ ಬೇಕು ಅಂದ್ರೂ ತಂದುಕೊಡೋ ತಾಕತ್ತು ನನಗದ. ಏನ ಮಾಡ್ಲಬೇ.. ಎಲ್ಲ ಬಿಟ್ಟು ಅಂವ ಯಾವಾಗೋ ನಿಮ್ಮ ಹೊಲದಾಗ ನೀವು ಉಣ್ಣು ಮುಂದ ದಾರ್‍ಯಾಗ ಹೊಂಟಿದ್ದ ಅವನ್ನೂ ಕರ್‍ದು, ಅಂವಂಗೂ ನಿಮ್ಮ ಬುತ್ತಿಯಾಗಿಂದ ಇನ್ನಾ ಬಿಸಿಯಿದ್ದ ರೊಟ್ಟಿ ತೆಗೆದು ಕೊಟ್ಟಿದ್ರಂತ, ಅದ್ನೇ ನೆನಪು ಮಾಡ್ಕಂಡು ಜೀಂವಾ ಬಯಸೇದ ಅನ್ನಲಾಕ ಹತ್ಯಾನ. ನಮ್ಮವ್ವಾರ ಮೊನ್ನಿ ರಾತ್ರಿ ಊರಿಗಿ ಹೋಗ್ಯಾಳ, ಆಕಿನೂ ಈಗ್ಲೇ ಬರಂಗಿಲ್ಲ, ನನ್ನ ಹೆಂಣ್ತಿಗೆ ರೊಟ್ಟಿ ಮಾಡಕ್ಕ ಬರವಲ್ದು. ಕಮಲವ್ವ.. ಇಲ್ಲಂತ ಹೇಳ್ಬೇಡಬೇ, ನಾ ಎಲ್ಲಿಂದರ ಎಷ್ಟರ ಜ್ವಾಳ ತಂದ್ಕೊಡ್ತೀನಬೇ.. ಮಾಡ್ಕೊಡಬೇ' ಸೂರಿ ಈಗ ಅಕ್ಷರಶಃ ಬೇಡಿಕೊಳ್ಳತೊಡಗಿದ.

ಕಮಲವ್ವ ಮಾತಾಡಲೇ ಇಲ್ಲ. ಸಿದ್ದಣ್ಣನ ಕಡೆ ತಿರುಗಿದ ಸೂರಿ, 'ಸಿದ್ದಣ್ಣ ನೀ ಅರ ಹೇಳಪ್ಪ, ಜ್ವಾಳ ತಂದುಕುಡ್ತೀನು, ನ ಏನ ಭಾಳಾ ಕೇಳಾಕಹತ್ತಿಲ್ಲ, ಒಂದ್ ಬಿಸಿರೊಟ್ಟಿ ಮುಟಗಿ ಅಷ್ಟೇ.. ಅಪ್ಪಾ ಆಸ್ಪತೆಯೊಳಗ ಅದಾನ, ಈಗ್ಲೂ ಅಂವಂದೊಂದು ಸಣ್ಣ ಆಸಿ ತೀರಿಸಲಿಲ್ಲ ಅಂದ್ರ ಹೆಂಗ..'

ಸಿದ್ಧಣ್ಣ ಮಾತಾಡಲಿಲ್ಲ. ಮತ್ತೆ ಹತ್ತು ನಿಮಿಷ ಅಲ್ಲಿ ರೊಟ್ಟಿ ತಟ್ಟುವ ಶಬ್ದ, ಸ್ಟವ್‌ನ ಸರ್‌ಬರ್ ಸದ್ದು ಬಿಟ್ಟರೆ ಬೇರೇನೂ ಶಬ್ದವಿರಲಿಲ್ಲ. ರೊಟ್ಟಿ ತೆಗೆದುಕೊಳ್ಳದೇ ಇವತ್ತು ಇಲ್ಲಿಂದ ಹೋಗುವವನಲ್ಲ ಎಂಬಂತೆ ಟ್ರಂಕ್ ಮೇಲಿಂದ ಕೆಳಗೆ ಇಳಿದು ನೆಲದ ಮೇಲೆ ಕಾಲು ಚಾಚಿ, ಟ್ರಂಕಿಗೆ ಒರಗಿ ಕೂತ ಸೂರಿಯಲ್ಲಿ ಕ್ಷಣಕ್ಷಣಕ್ಕೂ ಅಸಹನೆ ಹೆಚ್ಚುತ್ತಿತ್ತು. ರೊಟ್ಟಿ ಮಾಡಿ ಮುಗಿಸಿದ ಕಮಲವ್ವ ಎರಡು ಚಿಕ್ಕ ತಟ್ಟೆಯಲ್ಲಿ ಎರಡೆರಡು ರೊಟ್ಟಿ ಇಟ್ಟು ಮೇಲೆ ಹಸಿಮೆಣಸಿನಕಾಯಿ ಚಟ್ನಿ, ಬದನೇಕಾಯಿ ಪಲ್ಯದ ಎರಡು ಹೋಳನ್ನಿಟ್ಟು ಒಂದು ತಟ್ಟೆ ಸಿದ್ದಣ್ಣನಿಗೆ ಕೊಟ್ಟು, ಇನ್ನೊಂದನ್ನು ಸೂರಿಯ ಮುಂದಿಟ್ಟಳು. ಇದನ್ನೇ ಪ್ಯಾಕ್ ಮಾಡಿಕೊಂಡು ಹೊರಟುಬಿಡಲೇ ಎಂದುಕೊಳ್ಳುವಷ್ಟರಲ್ಲಿ, ಸಿದ್ಧಣ್ಣ ಕಮಲವ್ವನ ಬಳಿ ಹೋದವ ಸಣ್ಣ ಧ್ವನಿಯಲ್ಲಿ, 'ಅತ್ಲಾಗೆ ಎರಡು ಕೊಟ್ಟು ಕಳಿಸಿಬಿಡ್ತೀಯೇನು ನೋಡ' ಎಂದ. 'ರೊಟ್ಟಿ ಮಾಡಾಕಿ ನಾ, ಯಾರಿಗಿ ಕೊಡಬಕು, ಯಾರಿಗ್ ಕೊಡಬಾರದು ಅನ್ನೂದು ನನಗೂ ತಿಳಿತೈತಿ'

ಎಂದು ಗಡುಸಾಗಿ ಹೇಳಿದವಳೇ, 'ಸೂರಣ್ಣ, ನೀ ಇಲ್ಲೇ ತಿನ್ನತಿದ್ರೆ ತಿನ್ನಪ್ಪ, ಇಡೀ ದಿನ ಕೆಲಸ ಮಾಡಿ ನನಗೂ ರಗಡಾಗೇದಪ್ಪ, ಲಗೂನೆ ರೊಟ್ಟಿ ತಿಂದು ನಾ ಮಲ್ಕಂತೀನಪ್ಪ' ಎಂದವಳೇ ಇನ್ನೊಂದು ತಟ್ಟೆಯಲ್ಲಿ ಎರಡು ರೊಟ್ಟಿ ಹಾಕಿಕೊಂಡು ಒಲೆಯ ಬುಡದಲ್ಲಿ ಕೂತಳು, ಇವರಿಬ್ಬರೂ ಬೆಳಗಿನ ನಾಷ್ಟಾದ ಅನಂತರ ಏನೂ ಸರಿಯಾಗಿ ತಿಂದಿರಲಿಕ್ಕಿಲ್ಲ, ತನ್ನಿಂದಾಗಿ ಅವರೂ ಹಸಿದುಕೊಂಡಿರುವುದು ಬೇಡ ಎನ್ನಿಸಿತು ಸೂರಿಗೆ, ಜೊತೆಗೆ ಬಿಸಿರೊಟ್ಟಿಯ ಹದವಾದ ಕಂಪು ಕೂಡ ಅವನಿಗೆ ತಟ್ಟೆಗೆ ಕೈಹಾಕುವಂತೆ ಮಾಡಿತು. ಮೂರನೇ ರೊಟ್ಟಿಗೆ ಸಾಕು ಎಂದವ ಮತ್ತೆ ಇನ್ನೊಂದು ರೊಟ್ಟಿ ತಿಂದು, ಹೊರಗೆ ಕೈ ತೊಳೆದುಕೊಂಡ. ಬಹಳ ದಿನಗಳ ಅನಂತರ ಇಷ್ಟು ಮೃದುವಾದ ಬಿಸಿರೊಟ್ಟಿ ನೆತ್ತಿಗೆ ಹತ್ತುವಷ್ಟು ಖಾರವಾಗಿದ್ದ ಚಟ್ನಿ, ಪಲ್ಯ.. ಸೂರಿಗೆ ಒಂಥರಾ ತೃಪ್ತಿಯೆನ್ನಿಸಿತು. ರೊಟ್ಟಿಯ ಬುಟ್ಟಿಯಲ್ಲಿ ಇನ್ನೂ ಏಳೆಂಟು ರೊಟ್ಟಿಯುಳಿದಿತ್ತು. ಬೆಳಗ್ಗೆ ಇದ್ನೇ ನಾಷ್ಟಾಗೆ ತಿಂದು ಓಡಬೇಕಪ್ಪ, ಭಾಳಾಂದ್ರ ಬೆಳಗ್ಗಿ ಅನ್ನ ಒಂದ್ ಮಾಡೂದು ಎನ್ನುತ್ತ ಕಮಲವ್ವ ರೊಟ್ಟಿಗಳನ್ನು ತೆಗೆದು ಒಂದು ಡಬ್ಬದಲ್ಲಿ ಎತ್ತಿಡತೊಡಗಿದಳು. ಏನಾದರಾಗಲೀ ಕೊನೆಯ ಪ್ರಯತ್ನ ಕೇಳಿಯೇಬಿಡೋಣ ಎಂದು ಸೂರಿ ಮತ್ತೆ ಬಾಯಿತೆರೆದ. 'ಏನಬೇ.. ಅಪ್ಪಾ ಆಸ್ಪತ್ರೆಯೊಳಗದಾನ, ಒಂದೇ ಒಂದ್ ಬಿಸಿ ರೊಟ್ಟಿ ಕೊಡು ಅಂದ್ರೂ ಇಲ್ಲ ಅಂತೀಯಲ್ಲಬೇ..' ಕಮಲವ್ವ ಅರ್ಧಕ್ಕೆ ಮಾತು ತುಂಡರಿಸಿದಳು. 'ಸೂರಣ್ಣ, ನಿನಗ ಮತ್ತ ನಮಗ ಯಾವ ದುಶ್ಮನಿನೂ ಇಲ್ಲ, ಸುಮ್ನೆ ಅವ್ರ ಮಾತು ಯಾಕ ಬಿಡಪ್ಪ, ನಮ್ಮನಿ ಬಾಗಿಲಿಗಿ ಬಂದಿದಿ, ನಿನಗ ಬರಿಗೈಯಾಗ ಕಳಿಸಿಲ್ಲ, ಹೊಟ್ಟೆತುಂಬ ಊಟ ಹಾಕಿ ಕಳಿಸಾಕಹತ್ತೇವಿಲ್ಲೋ.. ನನ್ನ ಕೈಯಾನ ರೊಟ್ಟಿ ಯಾರು ತಿನ್ನಬಕು, ಯಾರು ಬ್ಯಾಡ ಅಂತ ಹೇಳಾಕ ನನಗೂ ತಿಳಿತೈತೆ' ಎಂದಳು.

ಸೂರಿ ತೀರಾ ಹತಾಶನಾಗಿ ಮೇಲೆದ್ದ. ಬಾಗಿಲಿನವರೆಗೆ ಬಂದವನಿಗೆ ಕೊನೆಯದಾಗಿ ಕೇಳಿಯೇಬಿಡೊನ ಎನ್ನಿಸಿ, ಆತಬೇ, ನೀ ಅಷ್ಟ್ ಮನಸ್ಸು ಮುರಕಂಡು ಕೊಂಡಂಗಿಲ್ಲ ಅಂದಮ್ಯಾಲ ಮುಗೀತು, ನನಗರ ಹೊಟ್ಟಿತುಂಬ ಹಾಕೀಯಲ್ಲ, ಭಾಳಾ ವರ್ಸದ ಮ್ಯಾಲ ಛಲೋ ರೊಟ್ಟಿ ಊಟ ಮಾಡಿದ್ನವ್ವ. ಹೋಗ್ಲಿ, ಕೊಡಂಗಿಲ್ಲ ಅಂತ ಎದಕ್ಕ ಇಷ್ಟ್ ಹಠ ಹಿಡಿದೀ ಅನ್ನೂದರ ಹೇಳಲಾ.. ನಮ್ಮಪ್ಪ, ಚಿಗಪ್ಪ ನಿಮಗ ಹಂತಾದೇನ ಮಾಡ್ಯಾರ ಎಂದು ಓಲೈಕೆಯಿಂದಲೇ ಕೇಳಿದ.

'ಅದೆಲ್ಲ ಮುಗ್ದುಹೋದ ಕಥಿ ಬಿಡಪ್ಪ, ಈಗ ಎದಕ್ಕ ಅದ್ರ ಮಾತು'. ಈಗ ಸಿದ್ದಣ್ಣ ಸ್ವಲ್ಪ ಗಡುಸಾಗಿ ಹೇಳಿದ.

'ಹಂಗಲ್ಲ ಸಿದ್ಧಣ್ಣ, ನನಗ ಇಷ್ಟ್ ಪ್ರೀತಿಯಿಂದ ರೊಟ್ಟಿ ಉಣಿಸೀರಿ, ಅದಾ ನಮ್ಮಪ್ಪಗ ಒಂದ್ ರೊಟ್ಟು ಕೊಡಾಕೂ ಇಲ್ಲ ಅಂದೀರಲ್ಲ, ಎದಕ್ಕ ಅಂತ ಕೇಳ್ದೆ ಅಷ್ಟೆ.'

'ನೀ ನಿಮ್ಮಾಫೀಸಿನಾಗ ದೊಡ್ಡ ನೌಕ್ರಿಯಾಗ ಅದೀ ಹೌದಿಲ್ಲೋ.' ಈಗ ಮಾತಾಡಿದ್ದು ಕಮಲವ್ವ.

'ಹೂಂ'

'ನಿನ್ನ ಮ್ಯಾಗ ಯಾರರ ಬಾಸು ಅನ್ನೋರು ಅದಾರ ಹೌಂದಿಲ್ಲೋ' ಎಂದು ಕೇಳಿದಳು. ಮಾತು ಎಲ್ಲಿಂದ ಎಲ್ಲಿಗೆ ಹೋಗ್ತಿದೆ ತಲೆ ಬುಡ ತಿಳಿಯಲಾಗದೇ ಸೂರಿ 'ಹೌಂದಬೇ, ನಾ ಸೀನಿಯರ್ ಮ್ಯಾನೇಜರ್ ಆದ್ರೂ ನನ್ನ ಮ್ಯಾಗ ಜನರಲ್ ಮ್ಯಾನೇಜರ್ ಅಂತಿರ್ತಾರ, ಮತ್ತ ಮ್ಯಾಲ ಸಿಇಓ ಅಂತ್ರಿರ್ತಾರ, ನನ್ನ ಮ್ಯಾಲ ಏನಿಲ್ಲಂದ್ರೂ ಮತ್ತ ಐದಾರು ಮಂದಿ ಅದಾರ' ಎಂದ.

'ಅದ್ರಾಗೊಬ್ಬ ನಿಮ್ಮ ಬಾಸು ಒಂದಿನ ನಿನ್ನ ಹೇಣ್ತಿ ಮ್ಯಾಲ ಕಣ್ಣಾಕ್ತಾನ, ನಾಳೆ ಏನೋ ಜೀಂವಾ ಬಯಸೇದ, ಆಸ್ಪತ್ರೆಯಾಗ ಅದೀನಿ ಅಂತ್ಹೇಳಿ ದ್ವಾಸಿ ಮಾಡಿಕೊಡು ಅಂತಾನ. ನಿನ್ನ ಹೇಣ್ತಿ ಮಾಡ್ಕೊಳ್ತಾಳ ಅಂತ ಕೇಳ್ಹೋಗು. ನಿನ್ನ ಹೇಣ್ತಿ ಅಂತಲ್ಲ, ಯಾ ನನ್ನ ಹೆಣಮಗಳೂ ಮಾಡ್ಕೊಡಂಗಿಲ್ಲ.. ಆಸ್ಪತ್ರೆಯೊಳಗ ಮಕ್ಕೊಂಡಾನಂತ, ಈಗ ಬಿಸಿರೊಟ್ಟಿ ನೆನಪಾಗೇದಂತ. ಯಾಕ, ನಮ್ಮ ಹೊಲಾ ಕಿತ್ತಕೊಳಾಕ ಎಷ್ಟರ ಕಂತ್ರಾಟು ಮಾಡಿದ್ನಲ್ಲ ನಿಮ್ಮಪ್ಪ, ನನ್ನ ಮೈಮ್ಯಾಗೂ ಕೈ ಹಾಕಿದ್ನಲ್ಲ, ಆವಾಗ ಬಿಸಿರೊಟ್ಟಿ ನೆಪ್ಪಾಗಿದ್ದಲ್ಲಂತಾ..' ಈಗ ಕಮಲವ್ವ ಜೋರಾಗಿ ಬೈಯತೊಡಗಿದಳು. ಕಡೆಗೆ ಒಲೆಯ ಬಳಿ ಕೂತು ಮುಖಮುಚ್ಚಿಕೊಂಡು ಮುಸುಮುಸು ಮಾಡತೊಡಗಿದಳು. ಸಿದ್ದಣ್ಣ ಬಾಗಿಲ ಬಳಿ ಕುಸಿದಂತೆ ಕೂತಿದ್ದ.

ಸೂರಿ ಮಾತೇ ಹೊರಡದೇ ನಿಂತುಬಿಟ್ಟ. ತನ್ನಪ್ಪ ಜಮೀನು ಕಸಿದುಕೊಳ್ಳುವ ಕಂತ್ರಿಬುದ್ಧಿಯಲ್ಲದೇ ಕಮಲವ್ವನ ಮೇಲೂ ಕಣ್ಣುಹಾಕಿದ್ದ ಎಂದರೆ ಥೇ.. ಅವ್ವನಿಗೆ ಇದೆಲ್ಲ ಗೊತ್ತಾಗಿರಬಹುದೇ, ಅವ್ವ ಎಷ್ಟು ನೊಂದುಕೊಂಡಿರಬಹುದು, ಅಸಲಿಗೆ ಕಮಲವ್ವ ಹೆಂಗೆ ಇದನ್ನು ಸಹಿಸ್ಯಾಳೆ.. ಇದನ್ನು ಅರಗಿಸಿಕೊಳ್ಳುವುದೇ ಆಗುವುದಿಲ್ಲ ಎನ್ನಿಸಿತು. ಒಲೆಯ ಬಳಿ ಹೋದವನೇ, ಕಾಲಿಗೆ ಬಿದ್ದ. ತಪ್ಪಾತ ಕಮಲವ್ವ, ನನಗೆ ಖರೇ ಇದೆಲ್ಲ ಗೊತ್ತಿದ್ದಿಲ್ಲಬೇ, ನಮ್ಮಪ್ಪ ಇಂಥಾ ಖೂಳ ನನ್ಮಗ ಅಂತ್ಲೂ ಖರೇ ಗೊತ್ತಿರಲಿಲ್ಲಬೇ.. ಅಂವಾ ಮಾಡಿದ್ ತಪ್ಪಿಗಿ ನಾ ಮಾಫಿ ಕೇಳ್ತೀನವ್ವ, ತಪ್ಪಾತವ್ವ' ಎನ್ನುತ್ತ ಕೆನ್ನೆಕೆನ್ನೆ ಬಡಿದುಕೊಂಡ. ಕೊನೆಗೆ 'ನಾ ಬರ್ತೀನವ್ವ' ಎಂದವನೇ ಮತ್ತೆ ಅಲ್ಲಿ ಸಿದ್ದಣ್ಣನಿಗೆ ಹೇಳುವ ತ್ರಾಣವೂ ಇಲ್ಲದಂತೆ ವೇಗವಾಗಿ ಓಣಿಗಳನ್ನು ಹಾದುಕೊಂಡು ಬಂದು ಕಾರನ್ನೇರಿದ.

ಸ್ಟಿಯರಿಂಗ್ ಹಿಡಿದು ಕೂತವ ಸಿಡಿದು ಹೋಗುವುದೇನೋ ಎನ್ನುತ್ತಿದ್ದ ತಲೆಯನ್ನು ಒತ್ತಿ ಹಿಡಿದ. ಐದು ನಿಮಿಷ ದೀರ್ಘವಾಗಿ ಉಸಿರೆಳೆದುಕೊಂಡ. ಮನಸ್ಸು ಸ್ವಲ್ಪ ಹತೋಟಿಗೆ ಬಂದಿತು. ಸೈಲೆಂಟ್ ಮೋಡ್‌ನಲ್ಲಿದ್ದ ಮೊಬೈಲ್ ನಾಲ್ಕು ಮಿಸ್ ಕಾಲ್ ತೋರಿಸುತ್ತಿತ್ತು. ಒಂದು ಮಾಲಿಯದು, ಮೂರು ಚಿಗಪ್ಪನದು.

ಮಾಲಿಗೆ ಮನಗೆ ಬರ್ತಿದ್ದೀನಿ, ತನ್ನ ಊಟ ಆಗಿದೆ, ಅಡುಗೆ ಮಾಡಬೇಡ, ನಿಂಗೆ ಏನಾದ್ರೂ ಪಾರ್ಸೆಲ್ ತರ್ತೀನಿ ಅಂತ ಮೆಸೇಜ್ ಮಾಡಿದವನಿಗೆ ಅವ್ವ ರಜೆಯಲ್ಲಿ ತನ್ನನ್ನು ತಂಗಿಯನ್ನು ಹೆಚ್ಚು ಸಮಯ ಧಾರವಾಡದ ಅಜ್ಜನ ಮನೆಯಲ್ಲಿ ಬಿಡುತ್ತಿದ್ದುದು ನೆನಪಾಯಿತು. ಕಳೆದ ದೀಪಾವಳಿಯಲ್ಲಿ ಸೀರೆಯುಟ್ಟ ಮಾಲಿನಿ ತುಂಬ ಮುದ್ದಾಗಿ ಕಾಣ್ತಿದ್ದಳು. ಊಟದ ವೇಳೆಗೆ ಸೀರೆ ಬಿಚ್ಚಿ ಸಲ್ವಾರ್‌ಕಮೀಜ್ ಹಾಕಿಕೊಂಡ ಮಾಲಿನಿಗೆ ಸೀರ‍್ಯಾಗ ಎಷ್ಟರ ಛಂದ ಲಕ್ಷ್ಮೀ ಹಂಗ ಕಾಣ್ತಿದ್ದಿ, ಇವತ್ತೊಂದಿನಾ ಅರ ಸೀರ‍್ಯಾಗ ಇರೂದಿತ್ತವ್ವ ಎಂದಿದ್ದ ಅಪ್ಪ ಆಕಿಗಿ ಯಾವ್ದು ಆರಾಮೆನ್ನಿಸ್ತದ ಅದ್ನ ಹಾಕ್ಕೋತಾಳ ಬಿಡ್ರಿ ಎಂದು ಮಾಲಿಯ ಪರವಹಿಸಿದ್ದ ಅವ್ವ.. ಬಡಿಸೂ ಮುಂದ ನಿನಗೆ ಸೀರಿ ಕಾಲಿಗಿ ತೊಡರ್ದಂಗ ಅನ್ನಿಸಿದ್ರ ನಿನ್ನ ಡ್ರೆಸ್ ಹಾಕ್ಕೊಳವ್ವ ಅಂತ ಅವ್ವಾನೆ ತನಗೆ ಹೇಳಿದ್ದು ಎಂದಿದ್ದ ಮಾಲಿ, ಏನೇ ಹೇಳು ಸೂರಿ, ಅವ್ವಾಗ ಒಂದ್ ಒಳಗಣ್ಣು ಇದ್ದಂಗ ನಿಮ್ಮನ್ಯಾಗ ಮತ್ಯಾರಿಗೂ ಇಲ್ಲ ಎಂದು ಅಭಿಮಾನದಿಂದ ಹೇಳಿದ್ದಳು. ಆಸ್ಪತ್ರಿ ಎಷ್ಟ್ ಕ್ಲೀನ್ ಅದ, ಡಾಕ್ಟ್ರು ಬಿಡು, ಇಲ್ಲಿ ನರ್ಸ್‌ಗೋಳನೂ ಎಷ್ಟ್ ಛಂದ, ಅಗದಿ ಸ್ವಚ್ಛ ಅರಿವಿ ಹಾಕ್ಕಂಡು, ಎಷ್ಟ್ ಛಲೋತ್ನಾಗ ಆರೈಕೆ ಮಾಡ್ತಾರ ಅಂತ ನಿಮ್ಮಪ್ಪಾರು ನರ್ಸ್‌ಗಳನ್ನೂ ಭಾಳ ಹೊಗಳಾಕಹತ್ತಿದ್ರು ಎಂದು ಮಾಲಿ ಮೊನ್ನೆ ಹೇಳಿದ್ದು.. ಇವೆಲ್ಲವೂ ಯಾಕೋ ಈಗಲೇ ನೆನಪಾಗಬೇಕೆ.. ಸೂರಿ ಒಂಥರದ ರೋಷದಲ್ಲಿಯೇ ಕಾರನ್ನು ಜೋರಾಗಿ ಓಡಿಸಿದ. ಒಂದು ಬಿಸಿರೊಟ್ಟಿ ತಿನ್ನೂ ಆಸೆ ಎಷ್ಟರ ಐತಲ್ಲ, ಅದು ಜೀವನಪ್ರೀತಿಯಲ್ಲ, ಒಂಥರದ ವಾಂಛಲ್ಯ ಅಷ್ಟೆ ಎಂದುಕೊಂಡ ಸೂರಿಗೆ ಮತ್ತೆ ಜಯದೇವದತ್ತ ಹೋಗಲು ಮನಸ್ಸು ಬರಲಿಲ್ಲ. ಅಷ್ಟರಲ್ಲೇ ಪುನಾ ಚಿಗಪ್ಪನ ಫೋನು. ಎಂದೂ ಇಷ್ಟೆಲ್ಲ ಮಲಗದ ಅಪ್ಪನಿಗೆ ಡೆಟಾಲ್, ಫಿನಾಯಿಲ್‌ಗಳ ವಾಸನೆಯ ನಡುವೆಯೇ ಏಳೆಂಟು ದಿನದಿಂದ ಉಂಡೂ ತಿಂದೂ, ಮಲಗಿ ಬ್ಯಾಸರಕಿ ಬಂದಿರಬೌದು ಎನ್ನಿಸಿ ಅಪ್ಪನ ಬಗ್ಗೆ ಮನದ ಮೂಲೆಯಲ್ಲಿ ಕೊಂಚ ಪಾಪ ಎಂದೂ ಅನ್ನಿಸಿತು. ಎಷ್ಟೆಲ್ಲ ಆಸ್ತಿ ಏನಿದ್ರೇನು ಬಂತು, ಕಡೇಗಾಲದಲ್ಲಿ ಜಡ್ಡಾಗಿ ಮಲಗಿದಾಗ ಬಾಯಿ ಬಯಸಿದ್ದನ್ನು ತಿನ್ನಲಾಗದ ಸ್ಥಿತಿ ಮುಂದೊಂದು ದಿನ ತನಗೂ ಬಂದೀತು ಎಂಬ ಆಲೋಚನೆ ಸಣ್ಣ ನಡುಕವನ್ನೂ ಹುಟ್ಟಿಸಿತು. ಅವ್ರ ಮನೆ ಸಿಗಲಿಲ್ಲ ಎಂದು ಸುಳ್ಳು ಹೇಳಲೇ ಅಥ್ವಾ ರಾಗಿಗುಡ್ಡದ ಬಳಿ ಇರುವ ಉತ್ತರ ಕರ್ನಾಟಕದ ರೊಟ್ಟಿ ಅಂಗಡಿಯಿಂದ ಎರಡು ರೊಟ್ಟಿ ಕಟ್ಟಿಸಿಕೊಂಡು ಹೋಗಲೇ ಎಂದುಕೊಂಡವ ಅರೆ, ತಾನ್ಯಾಕೆ ಸುಳ್ಳು ಹೇಳೋದು, ಇವತ್ತೇನಿದ್ರೂ ಸತ್ಯ ಒದರಲೇಬೇಕು ಎಂದುಕೊಂಡು ಕಾರು ಪಕ್ಕಕ್ಕೆ ನಿಲ್ಲಿಸಿದ. ಚಿಗಪ್ಪ ಅಪ್ಪನ ಕೈಯಾಗ ಫೋನು ಕೊಡು ಎಂದ ಸೂರಿ ಅಪ್ಪನನ್ನು ಡಿಸ್ಚಾರ್ಜ್ ಮಾಡಿದ ಅನಂತರ ಮನೆಗೆ ಕರೆದೊಯ್ಯಬೇಕೆ, ಇಲ್ಲಕ್ಕಂದ್ರ ಅಂಬುಲೆನ್ಸ್ ಮಾಡಿಸಿ, ಊರಿಗೆ ಕಳುಹಿಸಿಬಿಡಲೇ ಎಂಬ ಇನ್ನೊಂದು ಗೊಂದಲದಲ್ಲಿ ಬಿದ್ದ.

❖

(ಉದಯವಾಣಿ – ದೀಪಾವಳಿ ವಿಶೇಷಾಂಕ, 2013)

ಧರೆ ಹೊತ್ತಿ ಉರಿದೊಡೆ

ಲೋಕೇಶ ಅಗಸನಕಟ್ಟೆ

ಕುಲುಮೆ ತಿದಿಯ ತಾನೇ ಒತ್ತಿ ಒತ್ತಿ, ಕಚಕ್ಕನೆ ಕತ್ತರಿಸುವಂತೆ ಹರಿತವಾಗಿ ಹಣಿಸಿಕೊಂಡು ಬಂದಿದ್ದ ಕೊಡಲಿ ಮಚ್ಚುಗಳ ಅಡಕೆ ಮರಕ್ಕೆ ಒರಗಿಸಿ, ತೆಂಗಿನಮರಕ್ಕೆ ತಲೆಯಾನಿಸಿ ಗೊಳೋ–ಅಂತ ಕಣ್ಣೀರುಗರೆಯುತ್ತಿರುವ ಮಾದೇವನನ್ನು ಪಾರೂತಿ ನೊಡಲಾರದೆ ತಾನೊಂದು ಬಾಳೆಮರಕ್ಕೆ ಒರಗಿಕೊಂಡು ನಿಟ್ಟುಸಿರುಬಿಟ್ಟಳು. ಮರಗಳ ಕಡಿಯದೆ.. ಅವನೇನಾದ್ರೂ ತ್ವಾಟಕ್ಕೆ ಕಾಲಿಕ್ಕಿದರೆ ಕಾಲ್ನೆ ಕಡೀಬೇಕೂಂತ ಕಾದು ಕೂತವರೋ ಹೇಗೋ ಅನ್ತಾ ಮಾದೇವ್ನ ಕಡೆ ನೋಡಿ ಸೆರಗಿನಿಂದ ಕಣ್ಣೀರ ಒರೆಸಿಕೊಂಡಳು.

ಹೆದ್ದಾರಿ ಮೇಲೆ ಹಾದು ಹೋಗ್ತಾ ಇದ್ದ ಲಾರಿ ಬಸ್ಸು ಕಾರುಗಳ ಸದ್ದಿನಲ್ಲಿ ಇವರ ಅಳುವಾದ್ರೂ ಯಾರಿಗೆ ಕೇಳಬೇಕು? ಮಾದೇವನ ದುಃಖ ಪಾರೂತಿಗೆ, ಪಾರೂತಿಯ ಯಾತ್ನೆ ಮಾದೇವನಿಗಷ್ಟೇ ಅರ್ಥವಾದೀತು. ಇವರಿಬ್ಬರ ದುಃಖವನ್ನು ಅರ್ಥ ಮಾಡಿಕೊಂಡ ಜೀವವೊಂದು ಮನೆಯಲ್ಲಿ ಹಾಸಿಗೆ ಮೇಲೆ ಹೊರಳಾಡ್ತ, ಆಗಾಗ ಬಾರದ ಕಫ್ಫವ ಕೀಳುತ್ತಾ ಯಡೂರಿನ ಕಡೆ ಕೈಮುಗುದು ಸಿದ್ಧಲಿಂಗೇಶ ಕಾಪಾಡು ಎನ್ನುವುದು.

ಅದ ಬಿಟ್ಟರೆ ಅದು ಈಗೇನೂ ಮಾಡಲಾಗದು. ತನ್ನ ಬಾಳಸಂಜೆಲಿ ಇಂಥದ್ದೊಂದು ರಣಹದ್ದು. ತಮ್ಮ ಮೇಲೆ ಎರಗಬಹುದೆಂಬ ಕಲ್ಪನೆಯೂ ಇಲ್ಲದ ಆ ಜೀವ ಸುಮ್ಮಕೆ ಮಾಳಿಗೆಯ ನೋಡುತ್ತ ಕಣ್ಣ ಪಿಳಿಪಿಳಿ ಬಿಡ್ತಾ ಅಂಗಾತವಾಗಿತ್ತು.

ಹೊರಗೆ ಪಡಸಾಲೆಯಲ್ಲಿ ಕೂತವರ ಗುನುಗುನು.. ಗುಸುಗುಸು. ತಿಮಿರು ಮಾತು, ನಡುನಡುವೆ ಸೇದಿ ಬಿಡುತ್ತಿದ್ದ ಹೊಗೆಸುರುಳಿ, ಮಂಚದ ಸುತ್ತ ಗಿರಕಿ ಹೊಡೆದು ತಾಳಲಾಗದ ಉಬ್ಬಸ.

ಪಾರೂತಿ ಯಾಕಿಷ್ಟು ತಡ ಮಾಡಿದಳು? ತ್ವಾಟದಲ್ಲಿ ಮಾದೇವ ಇದ್ನೋ ಇಲ್ಲವೋ? ಬ್ಯಾಡ ಬ್ಯಾಡಾಂದ್ರುನು ಕೇಳ್ದೆ ಸೆಡವಿನಲಿ ಮರಗಳ್ನ ಕಡ್ದಾಕ್ತಿನಿ ಅಂತ ಹೊಂಟೋದ್ನಲ್ಲಾ! ಛೇ, ಛೇ. ಏಕಾಏಕಿ ಎಳೆಗೂಸುಗಳ ಬಾಯಿಗೆ ಹಾಲಾಕಿ ಆಕಾಶದೆತ್ತರಕೆ ಬೆಳೆವಂತೆ ಮಾಡಿದ ತ್ವಾಟವ ಹಿಂಗೆ ಬಿಟ್ಟುಕೊಡು ಅಂತಾಂದ್ರೆ ಅವನ ಹೊಟ್ಟೆಗೆ ಬೆಂಕಿ ಬೀಳ್ದೆ ಇರುತ್ತಾ? ಅವ್ನಿಗೇನು ಯಾರಿಗೆ ತಾನೆ ಬೀಳೊಲ್ಲ.. ಎಂದು ಅಂದುಕೊಳ್ಳುತ್ತಿರುವಷ್ಟರಲ್ಲೇ ಹೊರಗೆ ಮಿಣಿ ಮಿಣಿ.. ಮಿಣಿ ಮಿಣಿ.. ಮೊಬೈಲ್‌ನ ಸದ್ದು.

..ಪೋನು ಮಾಡಬ್ಯಾಡಾಂತ ಹೇಳಿದ್ನಲ್ಲಾ.. ಮತ್ಯಾಕೆ ಮಾಡ್ದೆ.. ಊಂ.. ಅದಾರೆ.. ಮಲಗಿದ್ದಾರೆ. ಅವ್ರತಾಗೇನು ಮಾತಾಡ್ತಿ ನೀನು.. ಕ್ಷಮಾ ಕೇಳಾಂತದ್ದೇನು..? ಪೋನಿಡು.. ಅಂದು.. ಈಯಮ್ಮ ಎತ್ಲಾಗೆ ಹೋತು. ಅಂದು ಧುಮುಧುಮುಗುಡುವ ದನಿ ಕೇಳಿ ಮಂಚದ ಮೇಲಿನ ಜೀವ ವಿಲವಿಲ ಒದ್ದಾಡ್ತು. ಈಗ ಮಾತಾಡಿದವ ವೆಂಕಟೇಶನ ತಮ್ಮನಿರಬೇಕು. ಗೋವಿಂದ.. ಅಪ್ಪನಿಗೆ ಹೇಗೆ ದಬಾಯಿಸ್ತಿದ್ದಾನಲ್ಲಾ..! ತಿಮ್ಮಾಬೋವಿಯ ಜೀವಾತ್ಮವು ಇದಕ್ಕೆ ಸುತರಾಂ ಒಪ್ಪಿರಲಾರದು. ಅವನ ಕೈಕಾಲುಗಳು ಬಿದ್ಹೋಗಿರದಿದ್ದರೆ ಇಲ್ಲಿ ತನಕ ಅವನು ಬರುವವನೆ. ಅಂಥಾ ಮನುಷ್ಯ..!

ಇದ್ದಕ್ಕಿದ್ದ ಹಾಗೆ ಈ ವೆಂಕಟೇಶನಿಗೆ ಯಾಕೆ ಇಂಥಾ ಕೆಟ್ಟ ಬುದ್ಧಿ ಬಂತೊ? ಸಣ್ಣ ಹುಡುಗನಾಗಿದ್ದಾಗಿನಿಂದ ನೋಡಿ ಗೊತ್ತು. ನಮ್ಮ ಮಾದೇವ್ನ ಜೊತೆಗಾರ್ನೂ ಆಗಿದ್ದ, ಜೊತೆಗೂ ಓದ್ತಿದ್ದ. ಸಾಲೆಲಿ ಸಾಧಾರಣವೆ. ಹರಿದ ಚೀಲದಲ್ಲಿ ಸ್ಲೇಟು ಬಳಪ.. ಆಮೇಲಾಮೇಲೆ ಪೆನ್ನು ನೋಟುಬುಕ್ಕು ಎದೆಗವಚಿಕೊಂಡು ನನ್ನ ಕಣ್ಣಳತೆಯಲ್ಲೇ ಬೆಳೆದವನಲ್ಲವೆ? ತಿಮ್ಮಾಬೋವಿಗೋ ಮನೆತುಂಬ ನಾಕಾರು ಮಕ್ಕಳು. ಸೈಜುಗಲ್ಲು ಹೊಡೆದು ಮನೆಗಿನೆಗೆ ತಳಪಾಯವ ತೆಗೆದು ಏಗಿಕೊಂಡು ಜೀವನ ಮಾಡುತ್ತಿದ್ದ ಅವನ ಮಕ್ಕಳಲ್ಲಿ ಈ ವೆಂಕಟೇಶನೇ ಒಂದಿಷ್ಟು ದಿಕ್ಕಾಗಬಲ್ಲವನಂತೆ ಕಾಣುತ್ತಿದ್ದ. ದಿನವೂ ಸಂಜೆ ಮುಂಜೆಗೆ ಸಾಲೆತಾವ ಬಂದು ತಿಮ್ಮಾಬೋವಿ, 'ಅವ್ನಿಗೆ ನೀವೇ ದಿಕ್ಕು ಸಾ..' ಅಂತ ಎರಡೂ ಕೈ ಮುಗಿಯುವವ, ಕಕ್ಕುಲಾತಿಯಿಂದ ಮಾತನಾಡುವವ. ಅಕ್ಕರೆಯಿಂದ ಮಾದೇವನ ಗಲ್ಲ ಜಿವುಟಿ.. 'ಮೇಷ್ಟ್ರು ಮಗ ಕಣಪ್ಪಾ ನೀನು.. ಜಾಣ್ನೆ ಅಕ್ತಿಯಾ.. ನಮ್ಮ ಯೆಂಕಟೇಸನ್ದು ಯಂಗೋ..' ಅಂತ ಅಂದು ಮುಖ ಸಣ್ಣಗೆ ಮಾಡಿಕೊಂಡು ತಿಮ್ಮಾಬೋವಿ ಹೊಂಟೋಗುತ್ತಿದ್ದ.

ಆ ಸರಸೋತಿ ಅನ್ನೋಳಿಗೇನು ಗೊತ್ತು.. ಇವ್ನು ಮೇಷ್ಟ್ರು ಮಗ.. ಅವ್ನು ಡಾಕ್ಟ್ರು ಮಗ.. ಅವ್ನು ಬೋವಿ ಮಗಾಂತ? ನಾಲಿಗೆ ಮಸೆದು ಹಲ್ಲು ಕಚ್ಚಿ ಕೂತವನ ಮಿದುಳಿಗಿಳಿವುದಷ್ಟೇ ಆಕೆಗೂ ಗೊತ್ತಿರೊ ವಿದ್ಯೆ. ವೆಂಕಟೇಶನಿಗೆ ಆಕೆಯ ಈ ನಡಾವಳಿ ತಿಳಿದಂತೆ ಕಾಣುತ್ತಿತ್ತು. ಪಡಸಾಲೆಲೆ ಪಟ್ಟಾಗಿ ಕೂತು ಬರೆದೂ ಬರೆದು ತಿದ್ದಿ ತಿದ್ದಿ ಮಂಡಲವ ಬರೆದಂತೆ ಬರೆದು ಅದಕ್ಕೆ ಸರಸೋತಿಯನ್ನು ಆಹ್ವಾನಿಸಿ ಅವಳನ್ನು ಆವಾಹಿಸಿಕೊಂಡು ಬಿಡುತ್ತಿದ್ದ. ಅವನ ಮಂಡಿಗೆಯ ಮುಂದೆ ಮಾದೇವನದು ದಂಡನೆ. ಹಸಿದ ವೆಂಕಟೇಶನಿಗೂ ತಿಮಿರು ತುಂಬಿಕೊಂಡ ಮಾದೇವನಿಗೂ ಫಲಗಳನ್ನು ಸರಸೋತಿ ಬೇರೆ ಬೇರೆಯಾಗಿಯೆ ತೆಗೆದಿರಿಸಿದ್ದಳು. ಓದುವ ಈ ಪಯಣದಲಿ ವೆಂಕಟೇಶನದು ನಿಲ್ಲದ ಧ್ಯಾನವಾದರೆ ಮಾದೇವನದು ಕುಂಟು ಪಯಣ. ಹೂತ ಗಾಲಿಗಳ ಕಿತ್ತು ಕಿತ್ತು ನಡುವೆ ಯಾನ. ಕೊನೆಗೊಂದು ದಿನ ಹೂತ ಚಕ್ರವ ಕೀಳಲಾಗದೆ ಕೈ ಸೋತು ಈ ಕ್ರಿಯೆಗೆ ಕಾರಣರಾದ ನನ್ನಿಗೆ

ಮರುಗಿದ ಕರ್ಣನಂತೆ ಅರ್ಧದಾರಿಯಲ್ಲೇ ಮಾದೇವ ಕೈ ಚಲ್ಲಿ ಕೂತ. ವೆಂಕಟೇಶನ ರಥ ಮಾತ್ರ ರಭಸದಿಂದಲೇ ಓಡುತ್ತಿತ್ತು.

ಓಡುವ ರಥಕ್ಕೆ ಕಲ್ಲೋ.. ಬೆಕ್ಕೋ ಅಡ್ಡ ಬರಬಾರದೆಂಬುದೇನೂ ಇಲ್ಲವಲ್ಲಾ..! ಬರೀ ನರಮನುಷ್ಯರಿಗೆ ಅಡ್ಡ ಬಂದರೆ ಹೇಗೆಂಬಂತೆ ವೆಂಕಟೇಶನ ರಥದ ಗಾಲಿಗೂ ಕಲ್ಲೊಂದು ಅಡ್ಡ ಬಂತು. ಬೆಳದಿಬ್ಬರು ಹೆಣ್ಣು ಮಕ್ಕಳನ್ನು ದಾಟಿಸುವುದೆ ಏಡುಕೊಂಡಡವಾಗಿರುವಾಗ ಇವನನ್ನು ಓದಿಸೋದು ಹೇಗೆ?.. ಅವರಿವರನ್ನು ಕೇಳಲಾಗಿ ಇರುವ ನಾಕು ಎಕರೆ ಹೊಲವ ಯಾರಿಗೊ ಸುಟ್ಟಾದರೂ ಸರಿ ವೆಂಕಟೇಶನನ್ನು ದಡ ಮುಟ್ಟಿಸು. ಅವನೇ ಮುಂದೆ ದೋಣಿಯೋ.. ತೆಪ್ಪವೋ ಆಗಿ ನಿಮ್ಮನ್ನು ಈ ಭವಸಾಗರದ ಸುಳಿಯಿಂದ ಮೇಲೆತ್ತುತ್ತಾನೆ–ಎಂಬ ಮಾತುಗಳಿಗೆ.. ಅವುನಾ, ಅವುನಾ.. ಅಂತ ತಲೆಯಾಡಿಸಿದ ತಿಮ್ಮಾಭೋವಿಗೆ ಮುಂದೊಂದು ದಿನ ವೆಂಕಟೇಶನು ದೊಡ್ಡ ಹಡಗಾಗುವನೆಂಬ ಕಲ್ಪನೆಯೂ ಇರಲಿಲ್ಲ. ಬೋವಿಯು ಸುಡಲಿರುವ ಹೊಲವ ಗೆಬರಿಕೊಳ್ಳಲು ನಾಮುಂದು ತಾಮುಂದು ಎಂಬ ಜಗ್ಗಾಟಕೆ ಬೀಳದ ಕಾಲದಲ್ಲಿ ಒಂದು ನಾಕು ಕಾಸು, ದಮ್ಮಡಿ ಅನ್ನುವಂತಾದ್ದು ಏನಾದ್ರೂ ಇದ್ರೆ ಈ ಮೇಷ್ಟ್ರು ತಾವನೆಯಾ ಎಂಬ ಊಹೆಯಿಂದ ನನ್ನ ಬಳಿಗೆ ಈ ತಿಮ್ಮಣ್ಣ ಬಂದಿದ್ದನಲ್ಲಾ.. ಅದೆ.. ಅದೇ ಪಡಸಾಲೆಯ ಬಾಗಿಲಿಗೆ ಆತು ನಿಂತು ತನ್ನ ಐದು ಮಕ್ಕಳ ಸಾಲಿಗೆ ನಿಲ್ಲಿಸಿ.. ಒಮ್ಮೆ ನನ್ನ ಕಾಲಿಗೆ ಬೀಳಿಸಿಯೂ.. ಹೀಗೀಗೆ ಅಂತ ಹೇಳಿ ನೀವು ಹೊಲವ ತಕ್ಕಳಿ.. ಅಂತ ಗೋಗರೆದ. ಅವನ ಪ್ರಾರ್ಥನೆಗೆ ಹಸಾದವೆನ್ನಲು ಈ ಬಡಮೇಸ್ಟ್ರ ಟ್ರೆಝುರಿ ಎಂಬ ಟ್ರಂಕಿನಲ್ಲಿ ಲಕ್ಷ್ಮಿಯೇನೂ ಕಾಲು ಮುರಿದುಕೊಂಡು ಬಿದ್ದಿಲ್ಲ.. ಸೊತಾ ಟ್ರಂಕೇ ಮುರಿದಿದೆಯೆಂಬ ಅರಿವು ತಮಗಾಗ ಚೆನ್ನಾಗಿಯೇ ಇತ್ತು. ಆದ್ರೆ ಮಾದೇವನಿಗಿದೊಂದು ದಿಕ್ಕಾದ್ರೂ ಆಗಲಿ ಅಂತ ಅವಳ ಕೊರಳಲ್ಲಿದ್ದ ಕಾಸಿನ ಸರ, ವಂಕಿ, ಡಾಬುಗಳನ್ನ ಬಡ್ಡಿಗೆ ಅಡವಿಕ್ಕಿ, ಅವನ ಹೊಲವ ತನ್ನೆಸರಿಗೆ ಮಾಡಿಸಿಕೊಂಡಿದ್ದರಲ್ಲೂ ಸ್ವಾರ್ಥ ಇದ್ದೇ ಇತ್ತೆಂಬ ಗಂಧಗಾಳಿಯೂ, ತಿಳಿಯದಂತವನು ತಿಮ್ಮಾಭೋವಿ. ಅವನಿಗದು ಮಹದುಪಕಾರವಾಗಿ ಕಂಡದ್ದರ ಕಾರಣವಿರಬೇಕು ಮೊನ್ನೆ ಮೊನ್ನೆಯವರೆಗೂ ವೆಂಕಟೇಶ ನಡ ಎತ್ತದೆ ವಿನೀತನಾಗಿ ಇರುತ್ತಿದ್ದುದು.

ಅಂದುಕೊಂಡಂತೆ ಮಾದೇವನ ಊರ್ಜಿತಕ್ಕೆ ಅದೊಂದು ದಿಕ್ಕಾಯಿತು. ಹಂಗೂ ಹಿಂಗೂ ಮಾಡಿ ಹೊಲವೆಲ್ಲ ಹದನು ಮಾಡಿ ಬೀಜ ಇಕ್ಕಿದರೆ ಸೈ ಅನ್ನುವಂತೆ ಬೆಳೆ ಹೊಲವಾದರೂ ಎಂತಾದ್ದು? ಸಿದ್ದರ ಬೆಟ್ಟದ ಬೆಟ್ಟ ಗುಡ್ಡಗಳ ಸಾಲನ್ನು ಒಂದು ದಿಕ್ಕಿಗೆ ಬಿಟ್ಟರೆ ಇನ್ನೊಂದು ದಿಕ್ಕಿಗೆ ನಾಕಾರು ಹೊಲವ ದಾಟಿ ರಾಜರಸ್ತೆ, ರಾಜರಸ್ತೆಯಿಂದ ಬಲಕ್ಕೆ ಹೊರಳಿ ನಾನು ನೀನೆಂದು ನಾಕು ಹೆಜ್ಜೆ ಹಾಕಿದರೆ ಹೊಲದ ನಡುವೆ, ಪಕ್ಕಕ್ಕೆ ಎತ್ತರೆತ್ತರದ ಬಂಡೆಗಳು, ಅದರಲ್ಲೊಂದರಲ್ಲಿ ತಿಮ್ಮಣ್ಣನೇ

ಕಲ್ಲು ಹೊಡೆಯುತ್ತಿದ್ದ. ಉಳಿದದ್ದೆಲ್ಲ ಖಾಲಿಖಾಲಿ. ಸಂಜೆಯಾದರೆ ಸಾಕು ನವಿಲುಗಳ ಸಾಲುಸಾಲು. ಅವುಗಳ ಕುಣಿತವೇನು, ಮಣಿತವೇನು? ಕಣ್ಣ ಸನ್ನೆಯೇನು, ಭಾವಭಂಗಿ ಬಿನ್ನಾಣವೇನು?.. ಸಿದ್ದೂರ ಬೆಟ್ಟದ ಸಾಮಿ ಆಗಾಗ ಹಾಗೆ ಹಾದು ಹೋಗುವಾಗ ಅದರ ಪಾದಧೂಳಿಯ ಗಮಕೇನು? ಪುಣ್ಯ ಮಾಡಿದಿಯೆಲ್ಲೋ ಮಾದೇವ ನಿನ್ನ ಊರ್ಜಿತಕ್ಕೆ ತಿಮ್ಮಾಬೋವಿಯೆ.

ಬೆಳಕಾದನಲ್ಲಾ.. ಎಂದು ಅಂದುಕೊಂಡು ನಗೆ ಚೆಲ್ಲುತ್ತಾ ಏಸೊಂದು ಕಾಲ ಆ ಹೊಲದಾಗ ಕಳೆದೇವು! ತ್ವಾಟುಕುಡಿಕೆಗಳ ಮಾಡುವ ಗಾಳಿ ಬೀಸಿ ಜನ ನಾಮುಂದು ತಾಮುಂದು ಅಂತ ಹರಹರಾ ಸಿದ್ಧಲಿಂಗೇಶಾಂತ ನೆಲದಾಳದಿಂದ ನೀರ ತೆಗೆದು ಬಾಳೆ ಅಡಿಕೆ ತೆಂಗಿನ ಗರಿಯ ಗಿಲಕಿಯಾಡಿಸಿದರು. ಮಾದೇವನಿಗೂ ಅಂತವೇ ಕನಸು. ಆದರೆ ಕಲ್ಲುಬಂಡೆಯ ಸಾಲಲ್ಲಿ ನೀರೆಂಬ ಜೀವಜಲವು ದಾರಿ ಕಾಣದೆ ಮಂಕಾಗಿದೆಯೆಂಬ ಸುದ್ದಿ ಕೇಳಿ ಮಾದೇವನು ಮಂಕಾದನು–ಇರಲಿ ಹೆಂಗಾದ್ರು ಆಗ್ಲಿ–ಅಂತ ಸಿದ್ದೂರ ಬೆಟ್ಟದ ಸಿದ್ದರನ್ನು ಕೇಳಲಾಗಿ ಅವರು ಹಂಚಿಕಡ್ಡಿ ಇಡ್ದು–ಹೊಲನೆಲ್ಲಾ ಅಳೆದು ಸುರಿದು ನೋಡಿ ತಾಸೊತ್ತು ತಾಸು ಕುಮದೇಂದುವೆಂಬ ಜ್ಞಾನಿಯ ಸಿರಿಭೂವಲಯವೆಂಬ ಹೊತ್ತಿಗೆಯ ಪರಾಯಣಿಸಿ ಒಂದು ದಿಕ್ಕಲ್ಲಿ ತೆಂಗಿನಕಾಯಿ ಇರಿಸಿ, ಇಲ್ಲಿದೆ ನೋಡು ನಿನ್ನ ಜೀವ ಜಲವೆಂದು ಆಶೀರ್ವದಿಸಿ ಹೊಂಟೋದರು. ಅಲ್ಲಿಂದೇ ಬೀಸಿತು ಮಾದೇವನ ಊರ್ಜಿತದ ಗಾಳಿ. ಹೊಲತುಂಬ ನೀರಾಟವಾಡಿತು. ಇಟ್ಟ ಗಿಡ, ನೆಟ್ಟ ಸಸಿ ಚಿಗುರೊಡೆದು ಬಾನೆ ನಮಗೆ ಮಿತಿಯೆಂಬಂತೆ ಕೈ ಮೈತುಂಬಿ ಬೆಳೆ ಬೆಳೆದಂತೆ ನವಿಲ ವಂಶ ಹೆಚ್ಚಾಯಿತು. ಕೋಗಿಲೆ, ಗಿಳಿ, ಪಾರಿವಾಳಗಳು ಹಾರಾಡಿದರೆ ಅವು ಇವೆಯೆಂದು ಸರ್ಪಗಳೂ ಹರಿದೋಡಿದವು. ಸಕಲ ಜೀವ ಹನ್ನೊಂದರ ನಡುವೆ ಕಣಿವೆಯಾಳದ ತೋಟ ಕಣ್ಮನ ತಣಿಸುವಂತಾಯಿತು. ತಿಮ್ಮಾಬೋಯಿಯ ವಂಶ ತಣ್ಣಗಿರಲೆಂದು ನಾನಾನ ಏಸುಕಾಲ ಹಾರೈಸಿದ್ದೆನು.

ಮೇಷ್ಟ್ರ ಹಾರೈಕೆಯ ಫಲವೋ ಬೋವಿತಿಮ್ಮಣ್ಣನ ಪುಣ್ಯದ ಫಲವೋ–ಎಂಬಂತೆ ಆತನ ಹೆಣ್ಣುಮಕ್ಕಳಿಗೆ ಮಕ್ಕಳು ಮರಿಗಳಾಗಿ ಉಂಡುಟ್ಟು ನಲಿಯಲು ಏನೂ ಕೊರತೆ ಕಾಣದಂತೆ ವೆಂಕಟೇಶನೆ ಎಲ್ಲವನ್ನೂ ಮಾಡುತ್ತಿದ್ದನು. ಇನ್‌ಕಂ ಟ್ಯಾಕ್ಸ್ ಆಫೀಸರನಾಗಿ ವೆಂಕಟೇಶ ಶಿವಮೊಗ್ಗದಲ್ಲಿ ಮೊಕ್ಕಾಂ ಮಾಡಿದಾಗಿನಿಂದ ಅವನು ಘನಗಾತ್ರ ಹರಡಿಕೊಂಡಂತೆ ತಿಮ್ಮಣ್ಣನ ಕುಟುಂಬವ ಸಾಗಿಸುವ ಹಡಗೇ ಆಗಿ ರೂಪಾಂತರ ಹೊಂದಿದ್ದು ಸಿದ್ದೂರ ಬೆಟ್ಟದ ಸುತ್ತಮುತ್ತಲ ಮಾತು. ಬೆಂಗ್ಳೂರಾಗೆ ನಾಕೈದು ಸೈಟು, ತುಮಕೂರ ಬಟವಾಡೆತಾಗೆ ಒಂದು ಬಂಗ್ಲೆ. ದಿನದಿಪ್ಪತ್ನಾಕು ಗಂಟೆ ಗೋವಿಂದಾ.. ಗೋವಿಂದಾ ಅನ್ನೋ ಸಾಧ್ವಿ ಶಿರೋಮಣಿ ಸೊಸೆ ಒಂದೇ ಎರಡೇ ತಿಮ್ಮಣ್ಣನ ಪಾಲಿನ ಭಾಗ್ಯ.

ಭಾಗ್ಯದ ಬಾಗಿಲು ತೆರೆದ ಕಾಲದ ನಡುವೆ ಒಂದೆರಡು ಸಣ್ಣಪುಟ್ಟ ಜಟಾಪಟಿಗಳೂ ಕುಟುಂಬದಲ್ಲಿ ನಡೆದದ್ದೂ ಉಂಟು. 'ವೆಂಕಟೇಶ ಏನೇ ಮಾಡಿಕೆಂಡ್ರು ತನಗೇ ಮಾಡ್ಕೆಂತಾನೆ ಹೊರ್ತು ನಮ್ಗೇನು ಮಾಡ್ತಿಲ್ಲ' ಎನ್ನುವ ತಗಾದೆ ತೆಗೆದು ತಿರುಗಿ ಬಿದ್ದವನು ಶ್ರೀನಿವಾಸ. ತಿಮ್ಮಾಬೋವಿಯ ಎರಡನೇ ಮಗ. ಮೂರನೇ ಮಗ ಗೋವಿಂದನಂತೂ ಆ ಪಾರ್ಟಿ.. ಈ ಪಾರ್ಟಿ ಅಂತ ಹಗ್ಲೂ ರಾತ್ರಿ ಝಂಡಾ ಏರಿಸಿಕೊಂಡು ಗಂಟಲೆತ್ತಿ ಕೂಗಿ, ಸಂಜೆಯಾದ ಮೇಲೆ ಥರಾವರಿ ದ್ರವಗಳಿಂದ ಗಂಟಲ ದಣಿವಾರಿಸಿಕೊಂಡೇ ಬೆಳೆಯುತ್ತಿದ್ದನಾದ್ದರಿಂದ ಇತ್ತ ತಿರುಗಿಯೂ ನೋಡದೆ ಪಾರ್ಟಿ ಆಫೀಸುಗಳಲ್ಲೇ ಹೊರಳಾಡುತ್ತಿದ್ದ.

'ಎಷ್ಟು ದಿನ ನಾನು ಹಿಂಗೇ ಕಲ್ಲು ಒಡೆದೂ ಒಡೆದೂ ಬಾಳ ಮಾಡಾಕೆ ಸಾಧ್ಯ? ನೀವು ನಿಮ್ಮಣ್ಣನಂಗೆ ಆಗೋದ್ಯಾವಾಗ?' ಅಂತ ಅವನ ಹೆಂಡತಿ ಕಿವಿ ತಿರುವಿದಾಗಲೇ ಶ್ರೀನಿವಾಸ ತಿಮ್ಮಾಬೋಯಿಯ ಮೇಲೆ ದನಿಯೇರಿಸಿದ್ದ. ವಾಜಪೇಯಿಯ ಸಡಕ್ ರಸ್ತೆಗೆ ಜಲ್ಲಿ ಕಲ್ಲು ಬೇಗ ಬೇಗ ಹೊಡುದ್ರೆ ನಾನೂ ಸಡನ್ ಆಗಿ ಊರ್ಜಿತವಾಗ್ತೀನಿ–ಅನ್ನೋ ಆಸೆ ಇಟ್ಟುಕೊಳ್ಳುವ ಹೊತ್ತಿಗೆ ಹೆದ್ದಾರಿಗೂ ಇನ್ನೆರಡು ಹೊಸ ರಸ್ತೆಗಳ ಮಾಡಬೇಕೆಂಬ ಸುದ್ದಿಯಿಂದ ಉದ್ರೇಕಗೊಂಡ ಶ್ರೀನಿವಾಸ, 'ನನಗೊಂದು ಜಲ್ಲಿ ಹೊಡೆಯುವ ಕ್ರಷರ್ ಹಾಕಿಕೊಡು' ಎಂದು ವೆಂಕಟೇಶನಿಗೆ ದುಂಬಾಲು ಬಿದ್ದ. ವೆಂಕಟೇಶನಾದರೂ ಅವರೆಂಡಿರ ಮಾತು ಕೇಳಿ 'ಏ! ಅದಾಗದ ಮಾತು.. ನೀನೇ ಏನಾರ ಮಾಡ್ಕ್ಯಾ' ಎಂದು ದೂರೀಕರಿಸಿದಾಗ ಶ್ರೀನಿವಾಸ ಅಡ್ಡದಾರಿಯನ್ನೇ ಆಯ್ಕೆ ಮಾಡಿಕೊಂಡ. ಬೆಂಗ್ಳೂರಾಗಿರು ಸೈಟಿನ ಫೋಟೋ, ಬಡವಾಡೆಯ ಬಂಗ್ಲೆಯ ಫೋಟೋ ತೆಗಿಸಿ ವೆಂಕಟೇಶನ ಮುಂದಕ್ಕಿಕ್ಕಿ ನೀನು ನನಗೆ ಕ್ರಷರ್ ಹಾಕಿಕೊಡಲ್ಲಾಂದ್ರೆ.. ನೋಡು ಅಂತಂದು ಧಮಕಿ ಹಾಕಿದ. ಬಡ್ಡಿಗೆ ಬಿಟ್ಟಿರುವ ದುಡ್ಡು ಅಗಾಧವಾಗಿರೋ ಷೇರುಪತ್ರಗಳೂ, ತಿಜೂರಿಯಲ್ಲಿರುವ ಒಡವೆ-ವಸ್ತ್ರವನ್ನು ಶ್ರೀನಿವಾಸನೇನಾದರೂ ನೋಡಿದ್ದರೆ ಅವುಗಳ ಫೋಟೋವನ್ನು ತೆಗೆಯುತ್ತಿದ್ದನೇನೋ–ಎಂದು ಹೆದರಿಕೊಂಡ ವೆಂಕಟೇಶ ಶ್ರೀನಿವಾಸನ ಕ್ರಷರ್‌ಗೆ 'ಅಸ್ತು' ಎಂದ.

ಇದೊಂದು ಶ್ರೀನಿವಾಸನಿಗೆ ಅಮೃತ ಗಳಿಗೆ. ಮಾದೇವನಿಗೆ ವಿಷ ಗಳಿಗೆಯೆಂದೇ ತಿಳಿಯಬೇಕು. ಮಾದೇವನ ಹೊಲದ ಪಕ್ಕದಲ್ಲಿದ್ದ ತಿಮ್ಮಾಬೋವಿಯ ಕಲ್ಲುಗುಡ್ಡದ ಬುಡಕ್ಕೆ ಕುಳಿತುಕೊಂಡು ಕ್ರಷರ್ ಹಗ್ಲೂ–ರಾತ್ರಿ ಕಲ್ಲು ಅರೆಯ ಹತ್ತಿತ್ತು. ಲಾರಿ, ಜೀಪು, ಕಾರುಗಳ ಭರಾಟೆ ಮಾದೇವನ ಹೊಲದ ಮುಂದೆ ಸಾಲಿಟ್ಟವು. ನಿಧಾನಕ್ಕೆ ಗರಿಕೆದರಿ ಕುಣಿಯುತ್ತಿದ್ದ ನವಿಲು, ಪಾರಿವಾಳ, ಗೊರವಂಕಗಳು ಎತ್ತಲೋ ಹಾರಿ ಹೋದವು. ಸರಿದಾಡುವ ಸರ್ಪಗಳು ನಿಧಾನಕ್ಕೆ ತಳವೂರತೊಡಗಿದವು.

ಕಲ್ಲಿನ ಧೂಳು ಗಿಡ ಮರ ಬಳ್ಳಿಗಳ ಮೇಲೆ ಕೂತಂತೆ ಮಾದೇವನಿಗೆ ಚಿಂತೆ ಶುರುವಾತು. ಒಂದೆರಡು ಬಾರಿ ಶ್ರೀನಿವಾಸನಿಗೆ ಅದನ್ನು ಹೇಳಿಯೂ ನೋಡಿದ. ಅವನು ಸುಮ್ಮಗೆ ನಕ್ಕು ತೇಂಕಾರವ ತುಟಿಯಿಂದ ಎಸೆದು ಹೋದನೇ ಹೊರತು ಮತ್ತೇನೂ ಮಾಡಲಿಲ್ಲ. ಇನ್ನೊಂದು ಬಾರಿ ನಡೆದು ಬರುತ್ತಿದ್ದ ಮಾದೇವನನ್ನು ತನ್ನ ಜೀಪಿನಲ್ಲಿ ಕೂರಿಸಿಕೊಂಡು ಬರುವಾಗ, 'ಆ ತ್ವಾಟ ನಮ್ಮದು.. ನಿಮ್ಮಪ್ಪ ನಮ್ಮಪ್ಪನಿಗೆ ಮಂಕುಬೂದಿ ಎರಚಿ ತನ್ನದಾಗಿಸಿಕೊಂಡಿದ್ದಾನೆ. ಈಗ ನಾನು ನಿಮಗೆ ಬೂದಿ ಎರಚ್ತಾಯಿದ್ದೀನಿಂತ ಅನ್ನಬೇಡ ಮಾದೇವ.. ನಮ್ಮಣ್ಣನ ಮೇಷ್ಟ್ರೂಂತ ಸುಮ್ಮಕೆ ಅದೀವಿ.. ಅಷ್ಟೇಯಾ' ಅಂತ ಧಮಕಿನೂ ಹಾಕಿದ್ದ. ಆ ಧಮಕಿಯ ಹಿಂದೆ ಜಿಲ್ಲಾಧಿಕಾರಿಯನ್ನ ಮಾದೇವ ಭೇಟಿಯಾಗಲಿರುವನೆಂಬ ಸುದ್ದಿಯ ಕಾರಣವೂ ಇದ್ದೀತು. ಗಾಳಿ ಬಂದ ಕಡೆ ಧೂಳಿನ ದಿಕ್ಕ ಬದಲಾಗುತ್ತಿದ್ದುದೊಂದು ಮಾದೇವನ ಪುಣ್ಯವೆನ್ನಬೇಕು. ನಾಕು ತಿಂಗಳು ಸುಧಾರಿಸಿಕೊಳ್ಳುವ ಗಿಡಗಳು ಇನ್ನಾರು ತಿಂಗಳು ಸುಸ್ತು ಹೊಡೆಯುವವು. ಉಳಿದೆರಡು ತಿಂಗಳಲ್ಲಿ ಉಸಿರಾಡದೆ ನಿಶ್ಚಲವಾಗಿ ನಿಲ್ಲುವುದಾದರೂ ಫಲ ಕೊಡಲು ಹಿಂದೆ ಬೀಳಲಿಲ್ಲ.

ಆದರೆ, ಶ್ರೀನಿವಾಸನ ಕಣ್ಣಂತೂ ಹಚ್ಚ ಹಸುರಾಗಿದ್ದ ತ್ವಾಟದ ಮೇಲೆ ಪ್ರತಿಕ್ಷಣವೂ ಬಿದ್ದಿತ್ತು. ಅದನ್ನು ಹೇಗಾದರೂ ಮಾಡಿ ದಕ್ಕಿಸಿಕೊಳ್ಳಲೇಬೇಕೆನ್ನುವ ಸಂಚಿನ ಹುಳಗಳು ಅವನ ತಲೆಯೊಳಗೆ ಚುಟುಕು ಮುಳ್ಳು ಆಡಿಸುತ್ತಿದ್ದವು. ಹಂಗೇ ಇನ್ನೊಂದು ಸಾರಿ ತೋಟದ ಮುಂದೆ ಜೀಪು ನಿಲ್ಲಿಸಿ ಮಾದೇವನನ್ನು ಕೂಗಿ ಕರೆದು.. ಅದೂ ಇದೂ ಮಾತಾಡಿ.. 'ನಮ್ಮಿಂದ ನಿನಗೆ ತೊಂದ್ರೆ ಆಕ್ತಿದ್ರೆ ತ್ವಾಟವ ನಮಗೇ ಮಾರಿ ಬಿಡು..' ಎಂದು ಅಂದು ನೋಡಿದನು. ಪಾರೂತಿ ಮಾದೇವ, ಪ್ರಾಣ ಬಿಟ್ಟೇವು ತೋಟವ ಬಿಲ್ ಕುಲ್ ಕೊಡುವುದಿಲ್ಲವೆಂದೂ ಹೇಳಿದರು. 'ಆಯ್ತು, ನಾನೂ ನೋಡ್ತೀನಿ' ಎಂದು ಜೀಪಡರಿ ಹೋದದ್ದು ಇನ್ನೂ ಮಾಸಿರಲಿಲ್ಲ. ಆಗಲೇ ವೆಂಕಟೇಶ ಮನೆಗೆ ಬಳ್ಳಾರಿಯಿಂದ ಬಂದಿದ್ದ.

ದೊಡ್ಡ ಹಣ್ಣಿನ ಬುಟ್ಟಿ, ಹೂಹಾರ, ಮೇಲೊಂದು ಶಾಲು ತಂದವನು ಮೇಷ್ಟ್ರಪಾದಕ್ಕೆ ತಲೆ ಹಚ್ಚಿ ಕುಳಿತನು. 'ಅಯ್ಯೋ! ಎಂಥಾ ಹೊತ್ನಲ್ಲಿ ಬಂದೆಯೋ ವೆಂಕಟೇಶ. ಮಾದೇವ ಇಲ್ಲ.. ಪಾರೂತಿನೂ ಇಲ್ಲ.. ನಾನೇನೂ ಮಾಡಿಕೊಡುವ ಹಂಗೂ ಇಲ್ಲ..' ಎಂದು ಕುಳಿತಲ್ಲೇ ಅತಿಥಿ ಸತ್ಕಾರ ಮಾಡಲು ಆಗುತ್ತಿಲ್ಲವಲ್ಲಾ ಎಂದು ವದ್ದಾಡಿದರು ಮೇಷ್ಟ್ರು. ಮಗ ಸೊಸೆ ಇಲ್ಲದ ಹೊತ್ತನ್ನೇ ವೆಂಕಟೇಶ ಆಯ್ಕೆ ಮಾಡಿಕೊಂಡು ಬಂದಿದ್ದಾನೆಂದು ಪಾಪ ಅವರಿಗಾದರೂ ಹೆಂಗೆ ತಿಳಿಯಬೇಕು?

ಅದೂ ಇದೂ ಮಾತಾಡಿದ ವೆಂಕಟೇಶ ನೇರವಾಗಿ ವಿಷಯಕ್ಕೆ ಸಂಬಂಧಿಸಿದ ಪೀಠಿಕೆಯನ್ನೂ ಹಾಕಿದ. 'ಮಣ್ಣು ಬುಡದಲ್ಲಿದ್ದರೆ ಜೀವ ಕೊಡುತ್ತದೆ. ಮೇಲೆ

ಬಿದ್ದರೆ ಜೀವ ತೆಗೀತದೆ' ಅನ್ನುವಂಥಾ ಅವಧೂತ ಯರ್ರಿತಾತನ ಮಾತನ್ನೂ ಹೇಳಿ, 'ಬಳ್ಳಾರಿಲೆಲ್ಲಾ ಗಿಡಗಳು ಹೇಗೆ ನಾಶವಾಗ್ತಿವೆ. ಊರು ಕೇರಿ ಕುಲ ಸರ್ವ ಹನ್ನೊಂದು ಕೆಂಪುಬಣ್ಣಕ್ಕೆ ತಿರುಗಿವೆ' ಎಂದೂ ಹೇಳಿದ. ವೆಂಕಟೇಶನ ತತ್ವಜ್ಞಾನಕ್ಕೆ ತಲೆದೂಗಿದ ಮೇಷ್ಟ್ರು, 'ಸರಸೋತಿ ನಿನ್ನಲ್ಲಿ ಐಕ್ಯವಾಗಿದ್ದಾಳೆ ತೆಗೆಯಪ್ಪಾ' ಎಂದು ಬೇಷ್‌ಗಿರಿ ನೀಡಿ ನನ್ನ ಕಣ್ಣ ಮುಂದಲ ಶಿಷ್ಯ ಎಂಥ ಎತ್ತರಕ್ಕೇರಿರುವನಲ್ಲಾ ಎಂದೂ ಪ್ರಶಂಶಿಸಿದರು. ಈ ಪ್ರಶಸ್ತಿಗೆ ಇನ್ನಷ್ಟು ರೆಕ್ಕೆ ಮೂಡಿಸಬೇಕೆಂದು, ಗಿಣಿ ಕೆಂಪಾದ ಕಥೆಯ ಹೇಳಿ ಗಣಿಧೂಳು ಎಲ್ಲಾ ಕಡೆ ಆವರಿಸಿ ಜನ ಸರ್ವನಾಶ ಆಗ್ತಿದ್ದಾರೆ' ಎಂದೂ ಸೇರಿಸಿದ. ಗಾಬರಿಗೊಂಡ ಮೇಷ್ಟ್ರು, 'ನೀನು ಅಂಥಾ ಕಡುಕೇಡಿನ ಊರಲ್ಲಿ ಯಾಕಿದ್ದೀಯಪ್ಪ ಇತ್ತಕಡೆ ಬಂದು ಬಿಡು' ಎಂದರು. 'ಸರ್ಕಾರ ಜಮ್ಮುಕಾಶ್ಮೀರಕ್ಕೆ ಹೋಗು ಎಂದರೂ ನಾನು ಹೋಗ್ತೀನಿ. ಸದಾ ಸೇವೆ ಮಾಡಲು ಯಾವ ಜಾಗವಾದರೇನು?' ಎಂದಂದ ವೆಂಕಟೇಶನ ಮಾತಿಗೆ ಮೇಷ್ಟ್ರು ಭಾವುಕರಾಗಿ ಗೊತ್ತಿಲ್ಲದಂತೆ ಎರಡೂ ಕೈಗಳನ್ನು ಎದೆಯ ಬಳಿಗೆ ತಂದುಕೊಂಡರು. ಲಕ್ಷಾಂತರ ಖರ್ಚುಮಾಡಿ ಬಳ್ಳಾರಿಗೆ ಹೋದ ಈ ಸೇವಕನ ಸೇವೆಯನ್ನು ಕಣ್ಣು ಕಾಲುಗಳನ್ನು ಕಳೆದುಕೊಂಡ ಮೇಷ್ಟ್ರಾದರೂ ಹೇಗೆ ಬಲ್ಲರು? ಭಾವುಕರಾಗುವುದನ್ನೇ ಕಾಯುತ್ತಲಿದ್ದ ವೆಂಕಟೇಶ, ನಮ್ಮ ಶ್ರೀನಿವಾಸನಿಂದ ಮಾದೇವನ ತೋಟಕ್ಕೂ ಅಂಥದೇ ದುರ್ಗತಿ ಬಂದಿದೆಯೆಂದು, ಅವನೊಬ್ಬ ನೀಚನೆಂದು, ಅವನು ಏನು ಮಾಡಲೂ ಹೇಸೋಲ್ಲ ಎನ್ನುವುದನ್ನು ಹೇಳುತ್ತಾ, ಅವನು ತನ್ನನ್ನೇ ಮೈಸೂರಿನಿಂದ ಬರುವಾಗ ಬಿಸ್ಕತ್ತಲ್ಲಿ ವಿಷ ಬೆರಸಿ ತಿನ್ನಿಸಿದವನೆಂಬುದನ್ನೂ ಹೇಳಿ, 'ನೀವು ಅವನಿರುವ ಕಡೆಯಿಂದ ದೂರ ಹೊಗಿ.. ಮಾದೇವನಿಗೇನಾರ ಆದೀತು ಎನ್ನುವ ಹೆದ್ರಿಕೆ ನಂಗೆ. ಆ ತ್ವಾಟವ ಅವ್ನಿಗೆ ಮಾರಿಬಿಡ್ರಿ. ಅದೆಷ್ಟು ದುಡ್ಡೋ ನಾನು ಕೊಡುಸ್ತೀನಿ..' ಎಂದು ಅಂದುಬಿಟ್ಟ. ವೆಂಕಟೇಶನ ತತ್ವಜ್ಞಾನದ ಈ ಪಾರಿವಾಳದ ಹಕ್ಕಿ ತಮ್ಮ ತೋಟಕ್ಕೆ ಸೀದ ಹಾರಿಬಂದದ್ದನ್ನು ನೋಡಿ ಚಣೊತ್ತು ಮೇಷ್ಟ್ರು ಕಂಗಾಲಾದರು. ಉಬ್ಬಸ ಜೋರಾದಂತಾಗಿ ಕೆಮ್ಮತೊಡಗಿದರು. ಹೊರಗೂ ಬರದ ಕೆಳಗೂ ಇಳಿಯದ ಕಫದ ತ್ರಿಶಂಕುಸ್ಥಿತಿಗೆ ಮೇಷ್ಟರು ಅತಂತ್ರರಾಗಿ ಕೂತರು. ಮಾತೇ ಬಾರದ ಮೇಷ್ಟ್ರನ್ನು ಬಿಟ್ಟು ವೆಂಕಟೇಶ ಹಿಂದೆ ಸರಿದಿದ್ದ.

ವೆಂಕಟೇಶನಿಗೆ ಇದರಲ್ಲಿ ಪ್ರವೇಶಿಸುವುದು ಸುತಾರಾಂ ಇಚ್ಛೆ ಇಲ್ಲದೆ ಇದ್ದರೂ ಶ್ರೀನಿವಾಸನ ಒತ್ತಡಕ್ಕೆ ಇಲ್ಲ ಎನ್ನದಾದ. 'ನಾನು ನನ್ಗೇಂತ ತ್ವಾಟವ ಕೊಡ್ಸು ಅಂತ ಕೇಳ್ತಿಲ್ಲ.. ತಿರುಮಲನ ಬಗ್ಗೆ ನೋಡು.. ಬರೀ ಊರೂರು ಅಲಿತಾ ಅವ್ನೆ, ಅವ್ನಿಗೆ ಈ ತ್ವಾಟವ ಕೊಟ್ಟಾಂದ್ರೆ ಗೆಯ್ಮೆ ಮಾಡ್ಕೆಂಡು ಬದಿರ್ತಾನೆ' ಅಂತ ತಿರುಮಲನ ಮೇಲೆ ತನಗಂತೂ ಅಗದಿ ಕಕ್ಕುಲಾತಿ ಇದೆ ಅನ್ನುವ ಹಂಗೆ ತೋರಿಸಿಕೊಂಡಿದ್ದ. ನಿಜವೆಂದರೆ, ಮಾದೇವನೇನಾದರೂ ಡೀಸಿಯ ಹತ್ರ ಕಂಪ್ಲೇಂಟು ಕೊಟ್ಟು: ಕ್ವಾರಿಯನ್ನು ನಿಲ್ಲಿಸಿ–ಎಂದರೆ ತಾನು ಮುಳುಗೇ ಹೋಗುವೆನಲ್ಲಾ.. ಹೇಗಾದರೂ ಮಾಡಿ

ತಿರುಮಲನಿಗೆ ಈ ತ್ವಾಟವ ಕಟ್ಟಿದರೆ ಅವನಂತೂ ಡೀಸಿಯ ಬಳಿಗೆ ಹೋಗಲ್ಲಾ, ನನ್ನ ದಂದೆ ಸೇಫಾಗುವುದಲ್ಲಾ ಎಂಬ ದೂರಾಲೋಚನೆಯ ಬೀಜ ಅವನ ಮನಸ್ಸಿನಲ್ಲಿ ಕತಗುಡುತ್ತಿತ್ತು. ತಿರುಮಲನಿಗೆ ತ್ವಾಟದ ತೀಟೆಯ ಹಚ್ಚಿ ಅವನನ್ನು ತಿಮ್ಮಾಬೋವಿಯ ಮ್ಯಾಗೆ ಬಿಟ್ಟ. ಇದಕೇಳಿ ಪಾತಾಳಕ್ಕೆ ಕುಸಿದ ಬೋವಿ 'ದೇವ್ರಂಥಾ ಮನುಸ್ರಿಗೆ ಹಿಂಗ್ ಮಾಡಿದ್ರೆ ನೀವು ಊರ್ಜಿತ ಆಕ್ತೀರೇನ್ರಾ..' ಎಂದಂದೂ ನೋಡಿದ. 'ಊರಾಗಿರರೆಲ್ಲಾ ಊರ್ಜಿತ ಅದ್ರೂ ಸರಿ.. ಮಗಂಗೆ ಬ್ಯಾಡೇನೋ' ಎಂದು ತಿಕ್ಕಲಿಡಿದವನಂತೆ ಮಾತಾಡಿದ ತಿರುಮಲ. 'ನನ್ನ ಕೈಯಲ್ಲಿ ಇದಾಗೊಲ್ಲ. ಮನೆ ದೀಪ ಹಚ್ಚಿರೋರ ಮನೆಯ ದೀಪವ ಕಳವು–ಅಂತಂದ್ರೆ ನಂಗ ಆಗಲ್ಲ..' ಎಂದು ಬೋವಿ ಕೈ ಚೆಲ್ಲಿದ ಮ್ಯಾಲೆ ಅದು ವೆಂಕಟೇಶನ ಹೆಗಲೇರಿತು. ಇದನ್ನ ಮಾದೇವನ ಮುಂದಾಡುವ ಧೈರ್ಯ ಅವನಿಗಿಲ್ಲದೆ ಶಸ್ತ್ರಾಸನದ ಮೇಲೆ ಮಲಗಿದ್ದ ಮೇಷ್ಟ್ರು ಮುಂದೆ ಆಡಿದ್ದ.

ವೆಂಕಟೇಶನ ಮಾತಿನ ಹಿಂದೆ ಶ್ರೀನಿವಾಸನಿರುವುದನ್ನು ಅರಿಯದಷ್ಟು ದಡ್ಡನೇನೂ ಆಗಿರದ ಮಾದೇವ, ಅಪ್ಪನ ಮಾತಿಗೆ ಒಂದೇ ಉತ್ತರ ಕೊಟ್ಟ. 'ಸೂಳೆಮಗ ತ್ವಾಟದಾಗ ಕಾಲಿಕ್ಲಿ, ಕಾಲ್ನೆ ಕತ್ರಿಸಿಬಿಡ್ತೀನಿ..' ಅಂತ ಅಂದು ಕುಡುಗೋಲು, ಮಚ್ಚುಗಳನ್ನು ಹಣಿಸಿಕೊಂಡು ಕೈಲಿ ದಿನವೂ ಹಿಡಿದುಕೊಂಡೇ ಓಡಾಡತೊಡಗಿದ. ಆದರೂ ಒಳಗೆ ಅಳುಕಿನ ಜೋಲೆ ಆಡುತ್ತಿತ್ತು. ಜಲ್ಲಿಯ ಸುಳ್ಳು ಲೆಖ್ಖ ತೋರಿಸಿ ಮನಾಮನಿ ಹಣ ಬಾಚಿಕೊಂಡಿರುವ ಶ್ರೀನಿವಾಸ, ಹಣವನ್ನೇ ಮೂಟೆ ಕಟ್ಟಿ ಒಟ್ಟಿರುವ ವೆಂಕಟೇಶ, ಖಾದಿ, ಕಾಕಿಗಳ ಹೆಗಲ ಮೇಲೆ ಕೈ ಹಾಕಿಕೊಂಡೇ ತಿರುಗಾಡುವ ತಿರುಮಲನ ವಿರುದ್ಧ ಬಡಮೇಷ್ಟ್ರ ಮಗ ಹೋರಾಡುವುದು ಕಷ್ಟದ ಮಾತೆಂಬುದು ಅವನ ಲೆಕ್ಕಾಚಾರಕ್ಕೆ ಸಿಕ್ಕಿ ಹೋಗಿತ್ತು.

ತ್ವಾಟದ ಹುಚ್ಚನ್ನು ನೆತ್ತಿಗೇರಿಸಿಕೊಂಡು ಎಲ್ಲೆಂದರಲ್ಲೇ ಅದರಲ್ಲೇ ಗರ್ಕಾಗುತ್ತಿದ್ದ ತಿರುಮಲ ಪಾರ್ಟಿ ಆಫೀಸಿನಲ್ಲಿ ಸಿಕ್ಕ ಪೂಟ್ ಲಾಯರಿಯ ಮುಂದೆಯೂ ಇದನ್ನೇ ಆಡಿದ. ಕರಿಕೋಟಿನಿಂದ ಒಂದೊಂದೇ ಚೇಳು ಹಾವು ಹೊರಬಂದು ಎಲ್ಲಿ ಹೇಗೆ ಕುಕ್ಕಬೇಕೆಂದೂ, ಯಾವು ದುಡ್ಡನ್ನೂ ಪೀಕದೇ ತ್ವಾಟವನ್ನೇ ಹೇಗೆ ಸ್ವಾಹಾ ಮಾಡಬಹುದೆಂಬ ಕಾನೂನಿನ ತುಂಡೊಂದನ್ನು ಹೊರಕ್ಕೆ ಬಿಸಾಕಿದ. 'ನಿಮ್ಮ ಹೊಲ ಅವ್ನು ತಕ್ಕಂಡಿರಬಹುದು, ಆದ್ರೆ ಅದು ಕಾನೂನಿನ ಪ್ರಕಾರ ಊರ್ಜಿತ ಆಗೊಲ್ಲ' ಎಂದು ಅಂದ. ಇಂಥ ಮಾತುಗಳನ್ನೇ ಲಬಕ್ಕೆಂದು ಹಿಡಿದಿಟ್ಟುಕೊಳ್ಳುವ ತಿರುಮಲ ಆ ಲಾಯ್ರಿಯನ್ನು ಹಂಗೆ ಅನಾಮತ್ತಾಗಿ ಎತ್ತಾಕಿಕೊಂಡು ಬಂದು 'ಏ ವೆಂಕಟೇಶ.. ಸೀನ.. ನೀವು ಯಾರು ದುಡ್ಡು ಕೊಡಬ್ಯಾಡ್ರೋ.. ನಾನೇ ತಕ್ಕಂತಿನಿ ತ್ವಾಟವ' ಎಂದಂದು.. ಅದು ಹೇಗೆಂದು ಸವಿಸ್ತಾರವಾಗಿ ವಿವರಿಸಿದಾಗ ತಿಮ್ಮಬೋವಿ 'ಲೇ ಲೇ.. ದೇವ್ರಂಥ ಮನುಷ್ರೂಗೆ ಹಿಂಗ ಮಾಡಿದ್ರೆ ನೀವು ಊರ್ಜಿತ ಆಕ್ತೀರೇನೊ'

ಎಂದು ಶಾಪವನ್ನೇ ಹಾಕಿದ. ವೆಂಕಟೇಶ ನಡುಗಿದ. ಮೇಷ್ಟ್ರು.. ಮಾದೇವ.. ಪಡಸಾಲೆ.. ಎಲ್ಲ ಕಣ್ಣ ಮುಂದೆ ಬಂದು ಕಣ್ಣಲ್ಲಿ ನೀರಾಡತೊಡಗಿತು. ಕಾನೂನಿನ ಅಸ್ತ್ರವನ್ನು ಹಿಡಿದು ಬಂದ ಪೂಟ್ ಲಾಯರಿಯನ್ನು ವೆಂಕಟೇಶ ಗದರಿಸಿದಂತೆ ಮಾಡಿದ. ಅವರು ಕೊಟ್ಟ ಹಣವನ್ನಾದರೂ ಅವರಿಗೆ ವಾಪಸ್ಸು ಕೊಡದಿದ್ದರೆ ಅದು ಧರ್ಮವೇ ಅಲ್ಲವೆಂದು ಅವನು ಗದರಾಡಿದ. ತಿಮ್ಮಾಬೋಯಿ ವೆಂಕಟೇಶನ ಕೈಯನ್ನು ಬಿಗಿಯಾಗಿ ಹಿಡಿದುಕೊಂಡು ಕಣ್ಣೀರು ಹಾಕಿದ.

ತಾನಿಲ್ಲದ ಹೊತ್ತು ಲಾಯಿರಿ ಜೊತೆಗೆ ಬಂದು ತಿರುಮಲ ಹಾಕಿ ಹೋದ ಹೊಸ ಸುದ್ದಿಯಿಂದ ಮಾದೇವ ತೀರಾ ಕಂಗಾಲಾಗಿ ಹೋದ. ತುಮಕೂರಿನ ಲಾಯರಿಗಳ ತಾವ ಹೋಗಿಬಂದ ಮೇಲೆ ಅವನೂ ಉಸಿರೆಳೆದು ಕುಂತ. ಹೆಂಗಾದ್ರಾಗ್ಲಿ ಅಂತ ಸಿದ್ದೂರ ಬೆಟ್ಟದ ಸಿದ್ಧರ ಬಳೀನೂ ಹೋದ. 'ಅಯ್ ತಮ್ಮಾ.. ಕಾನೂನಿನ ಕೈ ಬಲು ಉದ್ದಾ ಅದಾವೋ.. ಈ ಜೋಗಿ ಜಂಗಮರ ಮಾತ್ನ ಯಾರ್ ಕೇಳತಾರೆ..?' ಎಂದು 'ಏನಾದ್ರಾಗಲಿ ನಿನ್ನಾತ್ಮವೊಂದು ಸುದ್ದಿರ್ಲಿ..' ಅಂತಂದು ಕಳಿಸಿದರು. 'ಉದ್ದ ಇರೋ ಆ ಕಾನೂನು ಅಂಬೋದು ಯಂಗಯ್ತಿ ನೋಡಾನ. ಅವರ ಕೈ ಕಾಲ ಕತ್ತರ್ಸೇ ತೀರ್ತೀನಿ. ಇಲ್ಲ ಅವ್ರ ಹೊಲ ಅವ್ರಿಗೆ ಕೊಡ್ಬೇಕಂದ್ರೆ ನಾನ್ ಬೆಳಸಿದ ಮರಗಳ್ನೆಲ್ಲಾ ಕಡ್ದು ಕೊಡ್ತಿನಿ..' ಅಂತ ನಿಶ್ಚಯಿಸಿದವನೇ ಮಾದೇವ ಕುಲುಮೆಯ ತಿದಿಯ ಮುಂದೆ ಕುಂತು ಕೊಡಲಿಯನ್ನು ಹರಿತ ಮಾಡಿಸಿದ.

೩

ಪಡಸಾಲೆಯಲ್ಲಿ ಮೊಬೈಲುಗಳು ಗುಣುಗುಣಿಸುತ್ತಲೇ ಇವೆ. 'ಪಾರ್ಟಿ ಮೀಟಿಂಗೆ ನಾನು ಬರೋಕಾಗಲ್ಲ.. ನಾಳೆಗೆ ಎಷ್ಟು ಲಾರಿ ಜನ ಕಳ್ಸಬೇಕು ಕೇಳ.. ಪೇಮೆಂಟು ಪಂಕ್ಷನ್ ಆದ ಮ್ಯಾಲಾ..? ಸರಿ, ಸರಿ, ಬಾವುಟ.. ಬ್ಯಾನರ್ ಕಳ್ಸಿ..' ಅದು ತಿರುಮಲನದೇ ದನಿಯೆಂಬುದನ್ನು ಮೇಷ್ಟ್ರು ಮಲಗಿಕೊಂಡಲ್ಲಿಂದಲೇ ಅರ್ಥ ಮಾಡಿಕೊಂಡರು. ಮತ್ತೊಮ್ಮೆ ರಿಂಗಣ.. ಅದೇ ತಿರುಮಲನಲ್ಲವೆ..? 'ಓ.. ಲಾಯರ್ರಾ.. ಅಂ ಕ್ಯಾಷು.. ಪೇಪರ್ ತಗಂಡೆ ಬಂದಿವಿ.. ಊಂ, ಅವರು ಕೊಟ್ಟಿದ್ದ ದುಡ್ಡು.. ಅದರ ಹದಿನೈದು ವರ್ಷದ ಬ್ಯಾಂಕ್ ಬಡ್ಡಿ.. ತಂದಿದ್ದೀವಿ.. ಆದ್ರೆ.. ಅವ್ರ ಮಗ ಇಲ್ಲಲ್ಲಾ ಲಾಯರ್ರೆ..? ಅವನ್ದೇನು ಸೈನು ಬ್ಯಾಡವಾ.. ಹೌದೌದು ಅದೇನು ಪಿತ್ರಾರ್ಜಿತ ಅಲ್ಲ.. ಸ್ವಾಯಾರ್ಜಿತನೆ.. ಉಂ.. ನಾಳೆ ಸಿಕ್ತೀವಿ..' ತಿರುಮಲ ಮಾತುಮುಗಿಸಿದ. ಮೇಷ್ಟ್ರ ಕಣ್ಣ ಮುಂದೆ ಕಣಿವೆಯಾಳದ ಬೋಳು ಹೊಲ.. ತಾವು.. ತನ್ನ ಹೆಂಡ್ತಿ, ಮಾದೇವ.. ಕಲ್ಲುಗಳ್ನೆಲ್ಲ ಆರಿಸಿ ಒಗೆತನ ಮಾಡಿದ್ದು. ಸರ.. ವಂಕಿ.. ಬುಗುಡಿ.. ನವಿಲು.. ಅವರ ಕಣ್ಣು.. ಎಲ್ಲ ನೆನಪಾಗಿ.. ಉಬ್ಬಸ ಮತ್ತೆ ಏರತೊಡಗಿತು. ಕೆಮ್ಮಿ ಕೆಮ್ಮಿ ಉಸಿರು ಸಿಕ್ಕಂತಾದಾಗ ವೆಂಕಟೇಶ ಓಡೋಡಿ ಬಂದು ನೀರು ಕುಡಿದ. ತನ್ನ ತಮ್ಮಂದಿರ ದುಷ್ಟತನವ ಮೆಲ್ಲಗೆ ಉಸುರಿದ. 'ಮಾದೇವನಿಗೇನಾರೂ ಹೆಚ್ಚು ಕಮ್ಮಿ

ಆದೀತೂಂತ ನನ್ಗೆ ಹೆದ್ರಿಕೆ ಅಂದ..' 'ನಾನಿದ್ದೀನಿ ಸುಮ್ಕಿರಿ' ಎಂದು ಅವರ ಕಣ್ಣೀರು ಒರೆಸಿದ. 'ನನ್ನತ್ರನು ಇರೋ ದುಡ್ಡು ನನ್ನನ್ನು ನುಂಗುವಂತೆ ಕಾಣುತ್ತೆ.. ಬರೀ ದುಡ್ಡು.. ಆಸ್ತಿ ಇದ್ರೆ ಸಾಲ್ದು.. ಅದ್ನ ನಿಭಾಯ್ಸೋ ಛಾತಿ ಬೇಕು.. ಇದ್ರ ಸಾವಾಸ ಬೇಡ ಸಾ. ಆ ಪತ್ರಕ್ಕೆ ಸೈನು ಮಾಡಿ.. ನಾನಿದ್ದೀನಿ..' ಅಂತ ಅವರ ಕೈ ಅದುಮಿ.. ತಿರುಮಲನನ್ನು ಕರೆದು ಕಪ್ಪು ಬ್ಯಾಗನ್ನು ಅವರ ಕಾಲ ಬುಡದಲ್ಲಿರಿಸಿ.. ಕೈಗೆ ಪೆನ್ನು ಕೊಟ್ಟು ಸಹಿ ಮಾಡಿಸಿಕೊಂಡ. ಶಕ್ತಿಯೇ ಇಲ್ಲದ ಪೆನ್ನನ್ನೇ ಹಿಡಿಯಲಾಗದ ಕೈ ಯಾವ ಸನ್ನೆ ಮಾಡೀತು?

ಹೊರಗೆ ವಾಹನ ಸ್ಟಾರ್ಟಾದ ಸದ್ದು.. ನಿಧಾನಕ್ಕೆ ಇಲ್ಲವಾಗುತ್ತಾ ಹೋದಂತೆ.. ಮಾದೇವ.. ಪಾರೂತಿ.. ಹರಿತ ಮಾಡಿಟ್ಟುಕೊಂಡ ಕೊಡಲಿ ಕಣ್ಣ ಮುಂದೆ ತೇಲಿಬಂದವು. ಆದರೆ ನವಿಲು, ಪಾರಿವಾಳ, ಮುಂಗಸಿ.. ಇದ್ದಲ್ಲಿ ಹರಿದಾಡುವ ಸರ್ಪವಿದ್ದರೂ ಭಯವಿಲ್ಲ. ಈಗ ಇಲ್ಲಿ ಬರೀ ಸರ್ಪಗಳೇ ಹರಿದಾಡುತ್ತಿವೆ. ಅವು ಮಾದೇವ ಪಾರೂತಿಯನ್ನು ಕಚ್ಚಲು ಬರುತ್ತಿರುವಂತಾಗಿ ಮೇಷ್ಟ್ರ ಉಬ್ಬಸ ಹೆಚ್ಚಿ ಹೆಚ್ಚಿ.. ಕಣ್ಣಾಲಿಗಳಲ್ಲಿ ನೀರು ಸುರಿಯುತ್ತಲೇ ಇರುವಂತೆ ಅವರ ತಲೆ ಎಡಕ್ಕೆ ವಾಲಿತು. ಆ ದಿಕ್ಕಿನಲ್ಲೇ ಸಿದ್ದೂರ ಬೆಟ್ಟ.. ಅದರಾಚೆಯೆ.. ಯಡೂರು..

❖

(ವಿಜಯ ಕರ್ನಾಟಕ – ದೀಪಾವಳಿ ವಿಶೇಷಾಂಕ, 2013)

ಬುದ್ಧ ಗಂಟೆಯ ಸದ್ದು

ಮಹಂತೇಶ ನವಲಕಲ್

1

ಬ್ಯಾಂಕಾಕ್‌ನ ಬುದ್ಧ ದೇವಾಲಯಗಳು ನಿರಂತರ ಕರೆ ಘಂಟೆಯನ್ನೇ ವಿಧಿಸಿದ್ದವು ನೀನು ತೊಲಗು ನೀನು ತೊಲಗು ಎಂದು. ಬ್ಯಾಂಕಾಕ್ ಎಂಬ ಬುದ್ಧನ ನಾಡಿನಲ್ಲಿ ಅವನಿಗೆ ಬಹಳ ಹೊತ್ತು ನಿಲ್ಲಲು ಆಗಲಿಲ್ಲ, ಏಳುತ್ತ ಬೀಳುತ್ತ ಪಟ್ಟಾಂಗ್ ಎಂಬ ಬೀಚುಗಳ ನಗರಕ್ಕೆ ಬಂದಿದ್ದ.

ಪಟ್ಟಾಂಗ್‌ನ ನೀಲ ಸಮುದ್ರ ವಿಷದಂತೆ ಭಾಸವಾಯಿತು ಅವನಿಗೆ. ಪಾಪಗಳು ಅದರ ಪ್ರಜ್ಞೆಗಳು ಅವನಿಗೆ ಪ್ರತಿ ಕ್ಷಣವೂ ಕಾಡಿದವಲ್ಲ? ಆನ್‌ಗಾಂಗ್ ಎನ್ನುವ ಆ ಹುಡುಗಿ ಸೂಳೆಯೋ, ತತ್ವಜ್ಞಾನಿಯೋ, ಚಿಂತಕಳೋ? ನಳನಳಿಸುವ ಬಂಗಾರದ ಬಣ್ಣದ ಬತ್ತದ ಗದ್ದೆಯ ಊರುಗಳಿಂದ ಬಂದ ಅವಳು ಸಹ ಬಂಗಾರದಂತಹ ಬಣ್ಣವನ್ನು ಹೊಂದಿದ ಕೂದಲಿನವಳು. ಪಟ್ಟಾಂಗ್, ಸಮುದ್ರ ತೀರವೆಲ್ಲ ನೀಲಿಬಣ್ಣ ಹೊಂದಿದ್ದರಿಂದ ಇಲ್ಲಿಯ ಪ್ರತಿಫಲನಕ್ಕೆ ಅದು ಅಡ್ಡಿ ಆದ್ದರಿಂದ ಪಟ್ಟಾಂಗ್‌ನ್ನು ಪ್ರತಿಫಲನವಿಲ್ಲದ ನಾಡು ಎನ್ನುತ್ತಾರೆ ಎಂದು ಹೇಳಿದ್ದಳು ಆನ್‌ಗಾಂಗ್. ಆದರೆ ಮನಸ್ಸಿನ ಕನ್ನಡಿಯ ಆಮೂರ್ತ? ಅದು ವಿಷ ವಿಷಯಗಳ ಪ್ರತಿಫಲನದ ಭೋರ್ಗರೆಯುವ ಜಲಪಾತ. ಅಲ್ಲಿ ಬ್ಯಾಂಕಾಕ್‌ನಲ್ಲಿ ಶಾಂತಿದೇವನ ಮುಂದೆ ಮಂಡಿಯೂರಿ ಪ್ರಾರ್ಥಿಸುವಾಗ ಏನೇನು ಬೇಡಿಕೊಂಡ. ನನಗೆ ಒಳ್ಳೆಯ ವ್ಯಾಪಾರವಾಗಲಿ ಎಂದೇ? ವ್ಯಾಪಾರವೆಂದರೆ ಯಾವದು? ಇನ್ನೂ ಈ ರೈತರನ್ನು ಸಾಯಿಸುವ ಕ್ರಿಮಿನಾಶಕಗಳು ಹೆಚ್ಚು ಮಾರಾಟವಾಗಬೇಕೆಂದೆ ಅಲ್ಲದೆ ಮತ್ತೇನು? ಬುದ್ಧನ ಮುಂದೆ ಬೇಡಿಕೊಳ್ಳಲು ಅಲ್ಲ ಕುಳಿತುಕೊಳ್ಳಲೂ ಹಕ್ಕಿಲ್ಲ ತನಗೆ ಎಂದುಕೊಂಡ. ಆಗಲೇ ಬುದ್ಧ ಗಂಟೆಯ ಸದ್ದು.

ಅಂತೆಯೇ ಬ್ಯಾಂಕಾಕ್ ಅವನಿಗೆ ಪ್ರಿಯವಾಗಲೇ ಇಲ್ಲ. ಅಲ್ಲಿಯ ಶಾಂತಿದೂತ ವಿಗ್ರಹಗಳ ಕಣ್ಣಲ್ಲಿ ಕಣ್ಣೂರಿ ಪ್ರಾರ್ಥಿಸಲು ಸಾಧ್ಯವಾಗಲೇ ಇಲ್ಲ. ಪ್ರಾರ್ಥನೆಗೆ ಕುಳಿತರೆ ವ್ಯವಹಾರ ಟಾರ್ಗೆಟ್ ಹೆಸರಿನ ಗುರಿಗಳು, ರೈತನ ಜೀವದ ಮೇಲೆ ಗೋರಿ ಕಟ್ಟುವ ಚಿತ್ರಗಳು, ಪಕ್ಕದವನನ್ನು ಮೀರಿ ಗೆಲ್ಲುವ ಆಕಾಂಕ್ಷೆಗಳು. ಇಂಥಹ ಕಾಲನ ಓಟದ ರಥಕ್ಕೆ ಹಿಂಸೆಯ ಗಾಲಿಗಳು, ಆ ಗಾಲಿಗಳ ಮುಂದಲೆಗಳು ಉರುಳಿದಂತೆಲ್ಲ ಬಿಲ್ಡಿಂಗಗಳು, ಕಾರುಗಳು, ಭೂಮಿಯ ವಿಸ್ತಾರ ಬೆಳೆದವಲ್ಲ? ಆ ಬುದ್ಧನು ಸಹ ರಾಜನೇ, ಸಿರಿವಂತನೇ. ಅದನ್ನೆಲ್ಲ ಬಿಟ್ಟು ಐದು ಮನೆಯ ಭಿಕ್ಷೆ ತಿಂದು ಬದುಕಿದನಲ್ಲ? ಅಂಥಹ ಬದುಕಿನ ಕಿಂಚಿತ್ತು ಆಶಯಗಳು, ನಿಲುಕಲಾರದೆ ಹೋದವೇ ತನಗೆ?

ಆಸೆಯ ದುಃಖವಾಗುವ ಕಾಲ ಮತ್ತು ಸಂಪತ್ತನ್ನು ಕ್ರೋಢೀಕರಿಸುವ ಸಂದರ್ಭಗಳ ವೈರುಧ್ಯಗಳು, ಎರಡು ಇಂದು ಮುಖಾಮುಖಿಯಾಗಿದ್ದು ಯಾಕೆ? ಆಸೆಯೇ ದುಃಖಕ್ಕೆ ಮೂಲ ಎನ್ನುವ ಮಂತ್ರವನ್ನು ಯಾರು ಹೇಳುವವರು ಇದ್ದಾರೆ ಈ ಜಗದೊಳಗೆ ಇಂದು. ಬುದ್ಧನ ಮಂದಹಾಸದ ಬಗ್ಗೆ ಮಾತಾಡುವವರು ಯಾರು? ಅವನು ಹೇಳುತ್ತಾನೆ, ನೀನು ಇಂತಿಷ್ಟು ಕ್ರಿಮಿನಾಶಕ ದ್ರಾವಣ ಮಾರಿದರೆ, ನಿನಗೆ ಒಂದು ವಿದೇಶಿ ಕಾರು. ಇವನು ಬರುತ್ತಾನೆ, ನೀವು ಇಷ್ಟು ಮಾರಿದರೆ ನಿಮಗಾಗಿ ವಿದೇಶಿ ಪ್ರವಾಸ. ಮಗದೊಬ್ಬ, ಅದೇ ದ್ರಾವಣ ಅರ್ಧ ಬೆಲೆಯಲ್ಲಿ ಎನ್ನುತ್ತಾನೆ. ಇವನು ಮಾರದಿದ್ದರೆ ಇನ್ನೊಬ್ಬ ಮಾರುತ್ತಾನೆ, ಇನ್ನೊಬ್ಬನೂ ಮಾರದಿದ್ದರೆ ಮಗದೊಬ್ಬ, ಎಲ್ಲರೂ ಮಾರುಕಟ್ಟೆಯ ಬಗ್ಗೆಯೇ ಮಾತಾಡುವವರು. ಯಾರೂ ಆಸೆಯ ದುಃಖದ ಬಗ್ಗೆ ಮಾತಾಡುವವರು ಇಲ್ಲ ತನ್ನನ್ನು ಒಳಗೊಂಡು. ಅಂತೆಯೇ ಬಂಡವಾಳ ಪ್ರವಾಹದಂತೆ ಆಸೆಯೇ ದುಃಖಕ್ಕೆ ಮೂಲ ಎನ್ನುವದು ಬದುಕಿನ ಭಾಗವಾಗಲೇ ಇಲ್ಲವಲ್ಲ ಎಂದುಕೊಂಡ. ಕಾನಿಷ್ಕ ಕಟ್ಟಿಸಿದನೆಂದು ಹೇಳಲಾಗುವ ಆ ಗುಡಿಯಲ್ಲಿ ಅರಳಿನಿಂತ ಬುದ್ಧ ವಿಗ್ರಹದ ನಗು. ಇವನನ್ನು ನೋಡಿ ನಕ್ಕಿತೋ ಅಥವಾ ಇವನ ಊಸರವುಳ್ಳಿ ಬಣ್ಣ ನೋಡಿ ನಕ್ಕಿತೋ? ತಿಳಿಯಲಿಲ್ಲ.

ಬುದ್ಧನ ನಿರ್ಮಲ ತತ್ವಗಳು ಇವನಿಗೆ ಹಿಂದೆ ಪರಿಚಯವಾಗದಿದ್ದರೆ ಇಷ್ಟು ಚಿಂತನೆಯೂ ಸಿಗುತ್ತಿದ್ದಿಲ್ಲ. ಬಂಡವಾಳ ಸಂಗ್ರಹ ಪ್ರತ್ಯೇಕ ಆಸ್ತಿಗಳ ಒಡೆತನ ವಿರುದ್ಧದ ಚಳುವಳಿಯ ಕೊಂಚ ಕಾಲದ ಹೋರಾಟದಲ್ಲಿದ್ದುದೆ ತನಗೆ ಒಂದು ಧನಾತ್ಮಕವೋ? ಅಥವಾ ಋಣಾತ್ಮಕವಾದ ಅಂಶವೊ ತಿಳಿಯದಾಯಿತು. ಬಂಡವಾಳದ ಹರವು ಯಾವುದನ್ನು ಲೆಕ್ಕಿಸುವುದೇ ಇಲ್ಲ. ಅದು ಮನುಷ್ಯರ ರಕ್ತ ಕಾಲುವೆಯ ಮುಖಾಂತರ ಪ್ರವಹಿಸುತ್ತದೆ ಎಂದು ಹಿರಿಯರು ಹೇಳಿದರಲ್ಲ. ಅದರ ಅರ್ಥದ ಮೂಸೆಯಲ್ಲೆ ಪಳಗಿ ಅದನ್ನು ಕೈಯಲ್ಲಿ ಹಿಡಿದುಕೊಂಡೇ ಬಂದಿದ್ದಾನೆ ಅವನು. ಅಂದರೆ ಎಲ್ಲವೂ ಅರ್ಥವಾದರೂ ಕೊನೆಗೆ ಜಯಿಸಿದ್ದು ಬಂಡವಾಳವಾದವೆ. ಆ ಸ್ವಲ್ಪ ಕಾಲದ ಅಧ್ಯಯನದಿಂದಲೇ ಬೆಂಬತ್ತಿ ಕಾಡುತ್ತಿರುವುದು ಈ ಪಾಪ ಪ್ರಜ್ಞೆಗಳೇ ಎಂದು ಮನದಟ್ಟಾಯಿತು ಅವನಿಗೆ.

ಬ್ಯಾಂಕಾಕ್ ಬುದ್ಧ ದೇವಾಲಯಗಳು ಈತನಿಗೆ ಎಚ್ಚರಿಕೆಯ ನಿರಂತರ ಕರೆಗಂಟೆಗಳನ್ನೇ ವಿಧಿಸಿದ್ದವು. ನೀನು ತೊಲಗು ನಿನಗೆ ಇಲ್ಲಿ ಸ್ಥಾನವಿಲ್ಲವೆಂದು. ರಾತ್ರಿ ಮಲಗಿದರೆ ಆ ಎಡಪಂಥೀಯ ಇಬ್ಬರು ವಾರಸುದಾರರು ಮ್ಯಾನಿಫೆಸ್ಟೊದ ಒಂದೊಂದು ಸಾಲಿನ ಅರ್ಥವನ್ನು ಕಿವಿಯಲ್ಲಿ ಉಸುರಿ ಉಸುರಿ ನಿದ್ರೆಯನ್ನು ಅನಾಮತ್ತಿನಲ್ಲಿಟ್ಟಿದ್ದರು.

ಹಾಗೆಂದು ಹೇಳಿದವರಾರು?

ವ್ಯಾಪಾರ ಮಾಡುವ ಕ್ಷೇತ್ರದ ಪ್ರತಿ ಹಳ್ಳಿಗೆ ಹೋಗಿ ಕೇಳಿ, ತನ್ನ ಬಗ್ಗೆ ಅವರು ಹೇಳುತ್ತಾರೆ. ಈತ, ನಮಗೆ ಸಾಲಕೊಡುವ ದೇವರೆನ್ನುತ್ತಾರೆ, ಬೀಜ ವಿತರಿಸುವ ಭಗೀರಥನೆನ್ನುತ್ತಾರೆ, ಕ್ರಿಮಿನಾಶಕ ಕೊಡುವ ಧರ್ಮರಾಜನೆನ್ನುತ್ತಾರೆ. ಆದರೆ, ಬುದ್ಧ ದೇಗುಲದ ಅಲಾರಾಮಗಳು, ಎಡಪಂಥೀಯ ಆ ಹಿರಿಯರು ಬ್ಯಾಂಕಾಕ್‌ನಲ್ಲಿ ನಿನಗೆ ಜಾಗವಿಲ್ಲ ಹೊರಡು ಹೊರಡು ಎನ್ನುತ್ತಾರೆ.

ಸತ್ಯ ತನಗೂ ಗೊತ್ತಿದೆ. ಎಂಥಹ ಮರೆ ಮಾಚುವ ಯೋಚನೆ. ವೈರಿ ಎದುರಿಗಿದ್ದಾನೋ ಅಥವಾ ಹಿಂದೆ ಇದ್ದಾನೋ ಎಂದು ಇಂದು ಯಾರಿಗೂ ತಿಳಿಯದಾಗಿತ್ತು. ತನ್ನನ್ನು ವೈರಿ ಎಂದರೆ ಅವರೆ ನಗುತ್ತಾರೆ. ವೈರಿಯೂ ಹೀಗೆ ಅಮೂರ್ತವಾಗಿ ಕಣ್ಕಟ್ಟಿನಂತೆ ಇರುತ್ತಾನೆ ಎಂದು ಇಂದೇ ತಿಳಿದ ಸತ್ಯವಲ್ಲ, ವ್ಯಾಪಾರ ವಹಿಸಿಕೊಂಡ ಮೇಲೆ ತಿಳಿದ ಸತ್ಯ. ಆ ರೈತರಿಗೆ ಅಮಾಯಕರಿಗೆ ಆ ಮನುಷ್ಯರಿಗೆ ಬರಿ ಎದುರಿಗೆ ನಿಂತು ಬಡಿದಾಡುವವನು ಮಾತ್ರ ವೈರಿ. ಒಳ್ಳೆಯ ಫಲವತ್ತಾದ ಬೀಜಗಳು ಇವು ಎಂದು ಬಿತ್ತಲಿಕ್ಕೆ ಕೊಟ್ಟ ಬೀಜಗಳೆಲ್ಲ ಮೊಳಕೆ ಒಡೆಯದೆ ಮುರಟಿಹೋಗಿವೆ. ಬೀಜಗಳ ಜೊತೆ ಮುರುಟಿ ಹೋಗಿವೆ ಆ ಜೀವಗಳು. ಅದು ತನ್ನ ಮೇಲೆ ಬರದ ಆಪಾದನೆಯಾಗಿ ಅದು ಅವರವರ ಹಣೆ ಬರಹ ಎನ್ನುವ ಉಪವಾಕ್ಯಗಳು ಅನುರ್ಭವಿಸಿ ಈ ಹಣೆ ಬರಹಗಳೆ ತನ್ನಂತವನನ್ನು ಉಳಸಿವೆ.

ಹೌದು, ಗುಡಿಯ ಗಂಟೆಯ ಅಲಾರಾಮಗಳು ಪದೇ ಪದೇ ಹೇಳಿದ್ದವು ನೀನು ತೊಲಗು.. ನೀನು ತೊಲಗು.. ಎಂದು.

ಬ್ಯಾಂಕಾಕ್ ಯಾಕೋ ಬಗೆಹರಿಯದ ನಾಡು ಎಂದು ಆತನ ತಿಳುವಳಿಕೆಗೆ ಬರಹತ್ತಿತ್ತು. ಪ್ರಪಂಚದಲ್ಲಿ ಸಾಕಷ್ಟು ದುಷ್ಟರಿದ್ದಾರೆ, ಮೋಸಗಾರರಿದ್ದಾರೆ. ಆದರೂ ಆರಾಮವಾಗಿರುತ್ತಾರೆ. ಆದರೆ ಬುದ್ಧನ ಗಂಟೆಯ ಸದ್ದು ಅವರಿಗೆ ಒಮ್ಮೆಯಾದರೂ ಕೇಳಿಸಿದೆಯಾ? ಎಂದುಕೊಂಡ.

ಬ್ಯಾಂಕಾಕ್ ಎಂದರೆ ಸ್ವರ್ಗವೇ ಸರಿ ಎನ್ನುವ ಬಹುತೇಕರ ಅಭಿಪ್ರಾಯಗಳು ಅವನ ದೃಷ್ಟಿಯಲ್ಲಿ ಇಂದು ವಿಲೋಮ ಸ್ಥಿತಿಯಲ್ಲೇ ಬದಲಾದವು.

ಹೌದು, ಥೈಲ್ಯಾಂಡಿನಲ್ಲಿ ಈ ಬ್ಯಾಂಕಾಕ್‌ನ್ನು ಬಿಡಲೇಬೇಕು, ಬಿಡದಿದ್ದರೆ ಆ ಗಂಟೆಯ ಅಲಾರಾಮಗಳು ಅವನ ಕರ್ಣಪಟಲ ಹರಿಯುವದರ ಮುಖಾಂತರ ತನ್ನನ್ನು ಕೊಲ್ಲುತ್ತವೆ ಎಂದುಕೊಂಡ.

ಹತ್ತು ದಿನಗಳ ಈ ಪ್ಯಾಕೇಜ ಪ್ರವಾಸದಲ್ಲಿ ಪ್ರಮುಖವಾಗಿ ಬ್ಯಾಂಕಾಕ್, ಪಟ್ಪಾಂಗ್, ಮೈ ಕರ್ಟ, ಹುಯಾ ಹಿನ್, ಪುಕೇಟ್‌ಟಾನ್, ಕಹೋಲ್ಲಾಕ್, ಕರೋನ್ ಎಂಬ ಸುಂದರ ಈ ಸ್ಥಳಗಳನ್ನು ನೋಡಲು ಜಾರ್ಕಿಪಾಷಿನ್ ಎನ್ನುವ ಕಂಪನಿಯವರು ಇಲ್ಲಿಗೆ ಕರೆದುಕೊಂಡು ಬಂದಿದ್ದರು. ಜಾರ್ಕಿವಾಷಿನ್ ಕ್ರಿಮಿನಾಶಕ ಮತ್ತು ಗೊಬ್ಬರ

ತಯಾರಿಸುವ ಜಗತ್ತಿನ ಪ್ರಮುಖ ೨೫ ಕಂಪನಿಗಳಲ್ಲಿ ಒಂದು ಎಂದು ಹೆಸರು ಪಡೆದಿತ್ತು. ಜಗತ್ತಿನಾದ್ಯಂತ ಇದರ ಬ್ರಾಂಚುಗಳು ಹರಡಿಕೊಂಡಿದ್ದವು. ಅದರ ಪ್ರಮುಖ ಉತ್ಪಾದನಾ ಕಮೋಡಿಟಿಯಾದ "ಸಾಕೇನ್" ಎಂಬ ಕ್ರಿಮಿನಾಶಕವನ್ನು ಮಾರುವದು ಮುಖ್ಯವಾದ ಕಂಪನಿಯ ವ್ಯವಹಾರವಾಗಿತ್ತು. ಸತತವಾಗಿ ೧೦ ವರ್ಷಗಳಿಂದ ಮಾರುಕಟ್ಟೆಯನ್ನು ಅಲಂಕರಿಸಿರುವ ಈ ಸಾಕೇನ್ ಜಗತ್ತಿನ ನಂಬರ್ ಒಂದು ಮಾರಾಟವಾಗುವ ದ್ರಾವಣ ಎನ್ನುವ ಅಭಿದಾನವನ್ನು ಹಾಗೆ ಉಳಿಸಿಕೊಳ್ಳುವುದಕ್ಕಾಗಿ ಹೋರಾಟ ಆರಂಭವಾಗಿತ್ತು. ಮೊದಲು ೮ ವರ್ಷಗಳ ಕಾಲ, ಕ್ರಿಮಿನಾಶಕ ವ್ಯಾಪಾರದಾರರು ಮತ್ತು ಡಿಸ್ಟ್ರಿಬ್ಯೂಟರ್ಸ್‌ಗಳಿಗೆ ಯಾವುದೇ ಪ್ಯಾಕೇಜ ಇದ್ದಿರಲಿಲ್ಲ. ಇದು ಒತ್ತಟ್ಟೆಗಿರಲಿ, ಇದರ ಲಾಭದ ಮಾರ್ಜಿನ್ ಸಹ ಹೇಳಿಕೊಳ್ಳವಷ್ಟು ಇರಲಿಲ್ಲ. ಬರೀ ಎಂಟು ಪ್ರತಿಶತ ಮಾರ್ಜಿನ್ನಿನಲ್ಲಿ ವ್ಯಾಪಾರ ಮಾಡಬೇಕಾಗಿತ್ತು. ಆದರೆ ಬಹು ವರ್ಷದಿಂದ ಮಾರುಕಟ್ಟೆಯನ್ನು ಆಕ್ರಮಿಸಿಕೊಂಡಿದ್ದ ಏಕಚಕ್ರಾಧಿಪತಿಯಾಗಿದ್ದ ಜಾರ್ಕಿಪಾಷಿನ್ ಕಂಪನಿಗೆ ಈ ಎರಡು ವರ್ಷಗಳಲ್ಲಿ ಪ್ರಮುಖವಾಗಿ ಲೋಗೋಆನ್ ಎಂಬ ಕಂಪನಿ ಅತಿ ನಿಕಟತಮ ಪ್ರತಿದ್ವಂದಿಯಾಗಿ ಬೆಳೆಯಿತು. ಅದಕ್ಕೆ ಕಾರಣ, ಗುಣಾತ್ಮಕ ಅಂಶಗಳಿಗಿಂತಲೂ ಹೆಚ್ಚಾಗಿ ಮಾರುಕಟ್ಟೆಯ ಅಂಶಗಳಿಗೆ ಹೆಚ್ಚು ಒತ್ತು ಕೊಟ್ಟಿದ್ದರಿಂದ. ಜಾರ್ಕಿವಾಷಿನ್ ಮತ್ತು ಲೋಗೋಆನ್ ಕಂಪನಿಗಳು ಇಂದು ಸಮಸಮವಾಗಿದ್ದವು. ಜಾರ್ಕಿಪಾಷಿನ್ ಕಂಪನಿ ಹಳೆಯದಾದರೂ ಇನ್ನೂ ಕೆಲವೇ ದಿನಗಳಲ್ಲಿ ಲೋಗೋಆನ್‌ಗೆ ಮೊದಲ ಪಟ್ಟ ಬಿಟ್ಟು ಕೊಡಲು ಅನಿವಾರ್ಯವಾಗಿ ಮಾನಸಿಕವಾಗಿ ಸಿದ್ಧವಾಗಿತ್ತು. ಆದರೂ ಹಿಂದಿನ ಕಾರ್ಯತಂತ್ರಗಳಲ್ಲಿ ಸ್ವಲ್ಪ ಬದಲಾವಣೆ ಮಾಡಿ ಉತ್ಪಾದನಾ ಗುಣಾತ್ಮಕ ಅಂಶಗಳಿಗಿಂತಲೂ ಮಾರುಕಟ್ಟೆ ಅಭಿವೃದ್ಧಿಯ ಕಡೆ ಗಮನ ಹರಿಸುವ ತಂತ್ರದ ಭಾಗವಾಗಿ ಸಾಕೇನ್‌ನ್ನು ಮಾರುಕಟ್ಟೆಯ ಅಂಶಗಳ ಹಿನ್ನೆಲೆಯಲ್ಲಿ ಮರು ಪ್ರತಿಷ್ಠಾಪಿಸುವದು ಮುಖ್ಯವಾಗಿತ್ತು. ಅಂದರೆ ಕಾರುಗಳು, ವಿದೇಶಿ ಪ್ರವಾಸಗಳ ಬಹುಮಾನ, ಹೈಟೆಕ್ ಸೂಳೆಯರ ಸಂಗಕ್ಕೆ ವ್ಯಾಪಾರಸ್ಥರನ್ನು ಒಯ್ಯುವದರ ಮುಖಾಂತರ ಮರಳಿ ಮಾರುಕಟ್ಟೆಯ ಅಧಿಪತ್ಯವನ್ನು ಸ್ಥಾಪಿಸುವದು ಮುಖ್ಯವಾಗಿತ್ತು. ಅದರ ಅಗತ್ಯಕ್ಕನುಗುಣವಾಗಿ ಅನಿವಾರ್ಯ ಮಾರಾಟದ ಸಿದ್ಧಾಂತ ಜಾರಿ ಆಗಿತ್ತು ಕಂಪನಿಯಲ್ಲಿ.

ಅದಕ್ಕನುಗಣವಾಗಿ ಕರ್ನಾಟಕದಾದ್ಯಂತ ಇರುವ ೧೫ ಜನ ಅಧಿಕ ವ್ಯಾಪಾರ ಮಾಡಿದ ವ್ಯಾಪಾರಿಗಳನ್ನು ಥೈಲ್ಯಾಂಡಿಗೆ ಕರೆದುಕೊಂಡು ಬರಲಾಗಿತ್ತು. ಆ ಹಿನ್ನೆಲೆಯಲ್ಲಿ ಆತ ಇಲ್ಲಿಗೆ ಬಂದಿದ್ದ.

ಮಾರುಕಟ್ಟೆ ಎಂಬ ಮಾಯಾವಿ ತನ್ನ ಪ್ರಬಲ ಕಬಂಧ ಬಾಹುಗಳ ಮುಖಾಂತರ ಅನೇಕರ ರಕ್ತ ಮಾಂಸ ಮಜ್ಜೆಗಳನ್ನು ಕೊಳ್ಳುತ್ತದೆ, ಹೆಣ್ಣುಗಳನ್ನು ಎಲ್ಲೆಲ್ಲಿಗೋ

ತಳ್ಳುತ್ತದೆ ಎನ್ನುವ ಹಿರಿಯರ ಆಲೋಚನೆಗಳು ಇಂದು ನಿಜವಾಗಿವೆಯಲ್ಲ? ಮಾರುಕಟ್ಟೆಯ ಭಾಗವಾಗಿ ಇರುವ ಇಲ್ಲಿಯ ಹೆಣ್ಣುಗಳಿಗೆ ಜೀವವಿದೆಯೇ ಇಲ್ಲವೋ ಅಥವಾ ಅದೊಂದು ಕಲ್ಲು ಬಂಡೆಯೋ ಎನ್ನುವಾಗಲೆ ತಪ್ಪಿಸಿಕೊಳ್ಳುವದರಲ್ಲೇ ಜೀವನ ಕಳೆದವಲ್ಲ, ಎಷ್ಟು ತಪ್ಪಿಸಿಕೊಳ್ಳುವುದು? ತಪ್ಪಿಸಿಕೊಂಡು ತಪ್ಪಿಸಿಕೊಂಡು ಪಟ್ಟಾಂಗ್‌ಗಂತೂ ಬಂದಾಗಿತ್ತು. ಇಲ್ಲಿ ಎಲ್ಲಾ ಇದೆ ಸಮುದ್ರ, ಮದ್ಯ, ಮಾಂಸ, ಅವಳೂ..

ಆದರೂ ಪಟ್ಟಾಯಂ ಸುಂದರವಾಗಿಯೇನೋ ಕಾಣಲಿಲ್ಲ. ಆದರೆ ಬ್ಯಾಂಕಾಕ್‌ನ ಆ ಗಂಟೆಗಳ ಶಬ್ಧದಿಂದ ತಾತ್ಕಾಲಿಕ ಉಪಶಮನವಂತೂ ದೊರೆತಿತ್ತು. ಎರಡು ದಿನ ಮುಗಿದಿತ್ತು. ಮನಸ್ಸಿನ ಸಂಕಟಗಳ ಪರಿಹಾರ ಮಾರ್ಗವಾಗಿ ಅವಳೂ ದೊರಕಿದಳಲ್ಲ ಆನ್‌ಗಾಂಗ್? ಎರಡು ದಿನದಿಂದಲೂ ಅವಳ ಜೊತೆ ಮಾತಾಡಿ ಮಾತಾಡಿ, ಬ್ಯಾಂಕಾಕನ ಗಂಟೆಯ ಮೊರೆತ ಮರೆತುಹೋಗಿತ್ತು. ಆನ್‌ಗಾಂಗ್ ಎನ್ನುವ ಈ ಹೆಣ್ಣನ್ನು ಹೇಗೆ ವ್ಯಾಖ್ಯಾನಿಸಬೇಕು ಎನ್ನುವುದೇ ಸಮಸ್ಯೆಯಾಗಿತ್ತು. ಈಕೆ, ಬರೀ ಸೂಳೆಯೇ, ಈಕೆ ಬ್ಯಾಂಕಾಕನ ವಿಶ್ವವಿದ್ಯಾಲಯದಲ್ಲಿ ತತ್ವಜ್ಞಾನ ಓದಿದ ಹುಡುಗಿಯೋ ಅಥವಾ ಕೃಷಿಗೆ ಸಂಬಂಧಪಟ್ಟು ಮಾತಾಡುವ ಕೃಷಿಜ್ಞಾನಿಯೋ? ಎರಡು ದಿನದ ಆ ಅನುಭವದಲ್ಲಿ ತಾನು ಎಲ್ಲಾ ಮರೆತೆನೇ? ಹೌದು, ಮನುಷ್ಯನ ಮೂಲಭೂತ ಗುಣಗಳಲ್ಲಿ ಪರ್ಯಾಯ ಆರಿಸುವುದು ಒಂದು ಪ್ರಮುಖ ಗುಣವೇ. ಆನ್‌ಗಾಂಗ್ ದುಃಖದ ವಿರೋಧದ ಪರ್ಯಾಯ ಸಂತಸವಾಗಿಯೇ ಸಿಕ್ಕಿದ್ದಾಳೆ ಎಂದುಕೊಂಡರೆ ಆಕೆ ಪರ್ಯಾಯವಾಗಿ ಸಿಕ್ಕಿದ್ದು ಕಮೋಡಿಟಿಯಾಗಿಯೇ ಹೌದಲ್ಲವೇ? ತಾನು ಇಷ್ಟು ಮಾರಾಟ ಮಾಡಿದ್ದಕ್ಕೆ ನೀನು ಈ ಭೋಗಗಳನ್ನು ಕೊಟ್ಟೆ ಎನ್ನುವ ಕೊಡು ಕೊಳ್ಳುವಿಕೆಯ ವಿನಿಮಯದಿಂದಲೆ ಅಲ್ಲವೆ? ಅಂದರೆ ಆಕೆ ಹೇಳುವ ಥಾಯ್ ಎಂದರೆ ಸ್ವತಂತ್ರ ಎನ್ನುವ ಅರ್ಥ. ಅವಳು ನಿಜವಾಗಿಯೂ ಸ್ವತಂತ್ರ್ಯವಾಗಿ ಇದ್ದಾಳೆಯೇ? ಥಾಯ್ ಎಂದರೆ ಫ್ರೀಡಂ, ಫ್ರೀಡಂ.. ಎಂದು ಹೇಳುವ ಆ ಆನ್‌ಗಾಂಗ್ ಎಂಬ ಮುದ್ದು ಮುಖದ ಚೆಲುವೆಗೆ ತಾನು ಯಾವುದರ ಸಲುವಾಗಿ ಬಂಧಿಯಾಗಿದ್ದು, ಅವಳ ಹಾಡುಗಳು ಮಾತುಗಳು ತನಗೊಬ್ಬನಿಗಾಗಿಯೇ ಅಥವಾ ತನ್ನಂಥ ದಿನದ ಗಿರಾಕಿಗಳಿಗೂ ಇರಬಹುದೇ ಯೋಚಿಸಿದ. ಆಕೆಯ ಕಾಯಕವೇ ಅಂಥದ್ದು. ದಿನದ ಗಿರಾಕಿಗಳ ಮುಂದೆ ಅಕೆಯ ವರ್ತನೆ ಹೀಗೆ ಇರಲೇಬೇಕಾದ್ದುದೆ.

ಘನಶ್ಯಾಮ ಶರ್ಮ ಎನ್ನುವ ಮಾನವ ಸಂಪನ್ಮೂಲಾಧಿಕಾರಿ ಈ ಪ್ರವಾಸದ ನೇತೃತ್ವ ವಹಿಸಿದ್ದರು. ಅವರು ಕೇಳುತ್ತಲೇ ಇದ್ದರು. ಯಾಕೆ ನೀವು ಪ್ರವಾಸದ ಮಜಾವನ್ನು ತೆಗೆದುಕೊಳ್ಳುತ್ತಿಲ್ಲ, ಏಕೆ ಖಿನ್ನರಾಗಿದ್ದಿರಿ? ಭಾರತ ದೇಶದ ೧೫ ಜನ ಟಾಪ್ ಮಾರಾಟಗಾರರಲ್ಲೊಬ್ಬರು ಎಂಬ ಹೆಮ್ಮೆ ನಿಮ್ಮದಾಗಿದೆ. ನಿಮಗಾಗಿ ಒಂದು

ವಿದೇಶಿ ಕಾರು ಮತ್ತು ಇಂತಹ ಅದ್ಭುತ ಪ್ರವಾಸದ ಕೊಡುಗೆಯನ್ನು ನೀವು ಪಡೆದಿದ್ದೀರಿ. ಮುಂದಿನ ವರ್ಷದಿಂದ ಪಾಶ್ಚಿಮಾತ್ಯ ರಾಷ್ಟ್ರಗಳ ಪ್ರವಾಸವಿದೆ. ಆದರೆ ಒಂದು ಶರತ್ತು. ನೀವು ಮುಂದಿನ ವರ್ಷದಲ್ಲಿ ಇದಕ್ಕಿಂತಲೂ ಎರಡು ಪಟ್ಟು ಮಾರಾಟ ಮಾಡಬೇಕು. ನಿಮ್ಮ ತಾತ್ಕಾಲಿಕ ಕಂಪಾನಿಯನ್ ಆನ್‌ಗಾಂಗ್ ಎಂದರು. ಥೈಲ್ಯಾಂಡಿನ ಒಂದು ಹಿರಿಮೆ ಎಂದರೆ ಸೂಳೆಗಾರಿಕೆಯನ್ನು ಕಾನೂನೀಕರಣಗೊಳಿಸಿದ್ದಾರೆ. ನಾವು ಫ್ರೆಶ್ ವೆಜಿಟೇಬಲ್ ಎನ್ನುತ್ತೇವಲ್ಲ, ಅದೇ ರೀತಿ ಇಲ್ಲಿಯ ಹುಡುಗಿಯರು. ಮುಂದಿನ ವರ್ಷ ಯುರೋಪ ಪ್ರವಾಸದಲ್ಲಿ ತಾತ್ಕಾಲಿಕ ಕಂಪಾನಿಯನ್ ಆಗಿ ನಿಮಗೆ ರಶಿಯಾದ ಹುಡುಗಿಯರು ಸಿಗುತ್ತಾರೆ. ಅದರ ಮಜಾನೇ ಬೇರೆ. ಒಂದು ಗಾದೆ ಇದೆ, ನೀವು ಕೇಳಿದ್ದೀರಾ? ಎಂದು ನಕ್ಕರು. ದೇವರು ವೋಡ್ಕಾ ಜೊತೆ ರಶಿಯಾದ ಸುಂದರಿಯರನ್ನು ಕೊಟ್ಟರೆ ನಾನು ಸ್ವರ್ಗವನ್ನು ತಿರಸ್ಕರಿಸಲು ಸಿದ್ಧ ಎಂದು. ರಶಿಯಾದ ಸುಂದರಿ ವೋಡ್ಕಾ, ಮತ್ತು ಕಿತ್ತಳೆ ಇವು ಒಳ್ಳೆಯ ಮೈತ್ರಿ. ಇವುಗಳನ್ನು ಸವಿಯಲು ಪುಣ್ಯ ಮಾಡಿರಬೇಕು. ಮುಂದಿನ ವರ್ಷ ನಿಮಗೆ ಆ ಭಾಗ್ಯ ಬರುತ್ತದೆ. ಅದಕ್ಕಾಗಿ ನೀವು ನಿಮ್ಮ ಟಾರ್ಗೆಟ್ ಗುರಿಯನ್ನು ತಲುಪಲೇಬೇಕು. ಈ ಹುಡುಗಿ ಇದ್ದಾಳಲ್ಲ, ಆನ್‌ಗಾಂಗ್, ಅವಳನ್ನು ರಶಿಯಾದ ಹುಡುಗಿಯ ಮುಂದೆ ನಿವಾಳಿಸಿ ಒಗೆಯಬೇಕು. ಎಂಥಹ ಸುಂದರಿಯರು ಅವರು ಎಂದರು ಘನಶ್ಯಾಮ. ಇರಲಿ, ನಿಮ್ಮ ಮೂಡ್ ಸರಿಯಾಗಿಲ್ಲದೆ ಇರುವುದಕ್ಕೆ ಬ್ಯಾಂಕಾಕ್ ಇರಬಹುದು. ನಿಮ್ಮ ಸಲುವಾಗಿಯೇ ನಾವು ಪಟ್ಟಾಂಗ್‌ಗೆ ಬಂದಿರುವುದು. ಪಟ್ಟಾಂಗ್ ಬಂದರುಗಳ ನಾಡು, ಮಜಾ ಮಾಡಲು ಪ್ರಶಸ್ತವಾದ ನಗರಿ ಎಂದರು. ಕೇರ್‌ಫುಲ್ ಅಬೌಟ್ ಯುವರ್ ಸೇಫ್ಟಿ ಎಂದು ಹೇಳಿ ತಮ್ಮ ರೂಮಿಗೆ ಹೋದರು. ನಿಜವಾಗಿಯೂ ಅವರು ಹೇಳಿದಂತೆ ಪಟ್ಟಾಂಗ್ ಅಂತಹ ದುಗುಡಕ್ಕೆ ಕಾರಣವಾಗಿರುವ ನಗರವಾಗಿರಲಿಲ್ಲ. ಎಡಪಂಥೀಯ ಹಿರಿಯರು ಹೇಳಿದ ಮಾತು ಮಾರುಕಟ್ಟೆಯ ಸ್ವಾಯತ್ತೆತೆಗಾಗಿಯ ಹೋರಾಟ ಬರೀ ಹೋರಾಟವಾಗದೆ, ಸಂಪೂರ್ಣ ಅಲ್ಲಿಯ ಬಡಬಗ್ಗರನ್ನು ಹೆಣ್ಣುಗಳನ್ನು ಕಮೋಡಿಟಿಯಾಗಿ ಬಳಕೆ ಮಾಡುತ್ತವೆ ಎನ್ನುವದು ತಟ್ಟನೇ ನೆನಪಾಯಿತು.

ತಾನು ಇದರ ಬಳಕೆದಾರನೋ ಅಥವಾ ಸೃಷ್ಟಿಕರ್ತನೋ? ಎನ್ನುವ ಪ್ರಶ್ನೆಗಳ ಜೊತೆಗೆ ಅದರ ಸೃಷ್ಟಿಕರ್ತನೆ ಇರಬಹುದು. ಏಕೆಂದರೆ ಇದು ತಪ್ಪು ಎಂದು ತಿಳಿದಿದೆ. ಆದರೂ ಅದರ ಖಡ್ಗಿವಿಡಿದು ನಿಂತಿದ್ದೇನೆ, ಎಲ್ಲರಿಗಿಂತಲೂ ತಾನು ಬಹು ಅಪಾಯಕಾರಿ ಮನುಷ್ಯ ಎನ್ನುವ ಯೋಚನೆ ಬರುವಾಗಲೇ ಕಿಟಕಿಯಾಚೆಗೆ ನಿಂತ.

ಸಮುದ್ರ ಭೋರ್ಗರೆಯುತ್ತದೆ.

ಕ್ಷಣ ಯೋಚನೆಗಳ ತಟಾಕವೇ ನಿಂತಂತಾಗುತ್ತದೆ.

ಮತ್ತೆ ಮತ್ತೆ ಸಮುದ್ರದ ಭೋರ್ಗರೆತ.

ಬುದ್ಧನ ನಶ್ವರ ತತ್ವ, ಹಾಗು ಹಿರಿಯರ ಕಮೋಡಿಟಿ ಮೇಲಿನ ವ್ಯಾಖ್ಯಾನಗಳು ನಿಜವಾಗಿಯೂ ಅವನನ್ನು ಹಿಂಡಿ ಹಿಪ್ಪಿ ಮಾಡಿದ್ದವು. ಬಂಡವಾಳವು ಲಜ್ಜೆ ರಹಿತ ಪಾಪ ಪ್ರಜ್ಞೆಗಳಿಲ್ಲದ ಸಮಾಜವನ್ನು ಹುಟ್ಟು ಹಾಕುತ್ತದೆ ಎಂದು ಗುನುಗಿದ. ಅವಳು ಮುಗಳ್ನಕ್ಕು ಸುಮ್ಮನಾದಳು. ಮತ್ತೆ ಇವನತ್ತ ನೋಡುತ್ತ,

ನಮ್ಮಪ್ಪ ದರೋಡೆಕೋರನಿದ್ದ ಅಂದಳು.

ಇವನಿಗೆ ಭಯವಾಯಿತು.

ಭಯಪಡಬೇಡ. ಇದ್ದ, ಈಗ ಇಲ್ಲ. ಅದು ಅಲ್ಲದೆ ಅವನು ಈ ಭೂಮಿಯ ಮೇಲೆಯೂ ಇಲ್ಲ ಎಂದಳು. ಧರ್ಮಗುರು ಒಬ್ಬರು ಆತನನ್ನು ಬದಲಾಯಿಸುತ್ತೇನೆ ಎಂದು ಕರೆದುಕೊಂಡು ಹೋಗಿ ದಿನಾಲು ಬುದ್ಧನ ಜಾತಕ ಕಥೆಗಳು, ತ್ರಿಪಿಟಕದ ಸಾಲುಗಳು, ಹೇಳಿದರು. ಬದುಕೆಂದರೆ ಕಳ್ಳತನವೆಂದೇ ತಿಳಿದುಕೊಂಡಿದ್ದ ಆತ, ಕಳ್ಳತನ ನಿಲ್ಲಿಸಿದಾಕ್ಷಣ ಒಂಟಿಯಾದ, ಬದುಕಿನಲ್ಲಿ ಏನು ಇಲ್ಲದಂತೆ ಊಟ ಬಿಟ್ಟ, ಮಾತು ಬಿಟ್ಟ. ಒಂದು ದಿನ ಸಮುದ್ರ ಹಾರಿ ಸತ್ತು ಹೋದ ಎಂದು ಕಣ್ಣೀರಾದಳು. ಅಂದರೆ ದೋಚುವದರ ಆಚೆ, ಬದುಕು?

ಇದು ತನ್ನ ಕತೆಯೂ ಅನ್ನಿಸಿತು ಅವನಿಗೆ. ದರೋಡೆಕೋರನ ಬದಲಾವಣೆಗೆ ಪರ್ಯಾಯವೆಂಬುದು ಇರಲಿಲ್ಲವೇ? ಎಂದುಕೊಂಡು ಈ ಹಿನ್ನೆಲೆಯಲ್ಲಿ ತನ್ನನ್ನು ತಾನು ನೆನೆದು ಭಯವಾಯಿತು ಇವನಿಗೆ.ಅವಳು ಅವಳು ಸುಮ್ಮನೆ ಕೂಡುವವಳೇ ಅಲ್ಲ. ಇವನಿಗಾಗಿ ಚೈನೀಸ್ ಡಿಶ್ ತಯಾರಿಸಿದಳು. ಮೀನನ್ನು ಹುರಿದು ಅದಕ್ಕೆ ಮಸಾಲೆ ತುಂಬಿ ಡೈನಿಂಗ್ ಟೇಬಲ್ಲಿಗೆ ವರ್ಗಾಯಿಸಿದಳು.

ನಗುತ್ತ ಒಮ್ಮೆಲೆ ಕೇಳಿದಳು.

ಭಾರತೀಯರು ಇಲ್ಲಿ ಮಜಾ ಮಾಡಲು ಬರುತ್ತೀರಲ್ಲ, ನಿಮ್ಮ ಹೆಂಡರು ಸರಿಯಾಗಿಲ್ಲವೋ ಅಥವಾ ಅವರಿಗೆ ಇದು ತಿಳಿದಿಲ್ಲವೋ?

ಹಾಗೆಯೇ ನಾಲಿಗೆ ಕಚ್ಚಿ ಇಲ್ಲ ಸುಮ್ಮನೆ ಕೇಳಿದೆ, ನೀನು ತಪ್ಪು ತಿಳಿಯಬೇಡ ಎಂದಳು. ಒಂದು ವೇಳೆ ಅವರು ನಿಮ್ಮನ್ನು ಚೆನ್ನಾಗಿ ನೋಡಿಕೊಂಡರೆ ನಮ್ಮನ್ನು ಬದುಕಿಸುವವರು ಯಾರು? ಎಂದು ಮತ್ತೆ ನಕ್ಕಳು. ಕತ್ತಲು ಆವರಿಸಹತ್ತಿತ್ತು. ಬ್ಯಾಂಕಾಕ್‌ನಲ್ಲಿ ಬುದ್ಧ ಗುಡಿಗಳು ಮಾಡಿದ ಗಾಯಕ್ಕೆ ಅವಳ ಮಾತು ಔಷಧಿಯಂತೆ ಎಂದು ಯೋಚಿಸಿದ. ಹೌದೋ ಇಲ್ಲವೋ ತಿಳಿಯಲಿಲ್ಲ. ಆದರೆ ಹಿಂದಿನ ನೆನಪಂತೂ ಮಾಯವಾಗಹತ್ತಿತು.

ನಾಳೆ ನೀವು ಹೋಗುತ್ತೀರಾ? ಎಂದು ಕೈಮುಗಿದಳು.

ನಾನು ಕೆಲ ವಿಷಯಗಳನ್ನು ನಿಮಗೆ ಹೇಳಲೇ ಎಂದು ಮೆಲ್ಲನೆ ಧ್ವನಿಸಿದಳು. ವರ್ಷಕ್ಕೆ ನಾಲ್ಕು ಲಕ್ಷ ಥೈ ಭಾತ್ ಗಳಿಸುತ್ತೇನೆ, ಅದರಲ್ಲಿ ಇಪ್ಪತ್ತು ಪರ್ಸೆಂಟ್ ತೆರಿಗೆ ಕೊಡುತ್ತೇನೆ ಸರ್ಕಾರಕ್ಕೆ. ಇಪ್ಪತ್ತು ಪ್ರತಿಶತ ಬಡ ರೈತರಿಗಾಗಿ ಮೀಸಲಿಟ್ಟಿದ್ದೇನೆ, ಹತ್ತು ಪ್ರತಿಶತ ಭಾಗ ಬಡಮಕ್ಕಳ ಶಿಕ್ಷಣಕ್ಕಾಗಿ ಖರ್ಚು ಮಾಡುತ್ತೇನೆ ಎಂದಳು. ಇದು ನನ್ನ ಒಬ್ಬಳದೇ ಅಲ್ಲ, ಬಹುತೇಕ ಥೈಲ್ಯಾಂಡಿನ ವೇಶ್ಯೆಯರ ಸಾಮಾನ್ಯ ಆರ್ಥಿಕ ಅಜೆಂಡಾಗಳು ಇವು. ಇನ್ನೊಂದು ವಿಷಯ ನಮಗೆ ಅನ್ನ ಕೊಡುವವರೇ ಭಾರತೀಯರು. ಅದಕ್ಕೆ ಭಾರತೀಯರೆಂದರೆ ನನಗೆ ಗೌರವ. ಅದು ಬುದ್ಧನ ಕರ್ಮ ಭೂಮಿಯೂ ಕೂಡ ಎಂದಳು. ವು ಲೀಡ್ ಕಂಫರ್ಟಬಲ್ ಲೈಫ್ ಫ್ರಾಮ್ ಯು ಎಂದಳು. ಇಲ್ಲದಿದ್ದರೆ ನನ್ನ ತಾಯಿ ಇಬ್ಬರು ತಂಗಿಯರು ಇದೇ ಸಮುದ್ರದಲ್ಲಿ ಬಿದ್ದು ಸತ್ತು ಹೋಗಬೇಕಾಗಿತ್ತು. ಭಾರತೀಯರು ತಮ್ಮ ವರ್ಷದ ಲೆಕ್ಕಪರಿಶೋಧನಾ ಕಾರ್ಯ ಮುಗಿದ ತಕ್ಷಣವೇ ಈ ಕಡೆ ಹೆಜ್ಜೆ ಹಾಕುತ್ತಾರೆ. ಅವರು ಗಳಿಸಿದ ಲಾಭದ ಹಣವನ್ನು ಥೈಲ್ಯಾಂಡಿನ ಬೀಚುಗಳಿಗಾಗಿ, ಖರ್ಚು ಮಾಡುತ್ತಾರೆ. ನಾನು ಇದನ್ನು ತಪ್ಪು ಎಂದು ಎನ್ನುವುದಿಲ್ಲ. ಇದು ನಮ್ಮಂತವರ ಅನ್ನಕ್ಕಾಗಿ ದಾರಿಯಾಗುತ್ತದೆ ಎಂದು ಬಿಸಿ ಬಿಸಿ ಚಹಾ ತಂದು ಕೊಟ್ಟಳು. ಚಹಾ ಕುಡಿಯುತ್ತ ಆಕಾಶ ದಿಟ್ಟಿಸಿದ. ನೀಲಿಯಾದ ಆಕಾಶ ಮತ್ತು ಸಮುದ್ರಗಳು ಒಂದಾದಂತೆ ಕಂಡವು. ಅವಳು ಮತ್ತೆ ಹೇಳಹತ್ತಿದಳು. ಅದರಲ್ಲಿ ನಿಮ್ಮ ಪೆಸ್ಟಿಸೈಡ್ ಕ್ರಿಮಿನಾಶಕ ಗೊಬ್ಬರ ಕಂಪನಿಗಳಿಂದ ಥೈ ಟೂರಿಸಂಗೆ ಬಲ ಬಂದಿದೆ ಎಂದಳು. ಅವಳಿಗೆ ಎಡಪಂಥಿಯ ಹಿರಿಯರ ಬಗ್ಗೆ ಪ್ರಶ್ನಿಸಿದೆ, ಅವರೇನು ಗೊತ್ತಿರುವರಂತೆ ಕಾಣಲಿಲ್ಲ. ಬುದ್ಧ ಮಾತ್ರ ಅವಳಿಗೆ ಚೆನ್ನಾಗಿ ತಿಳಿದಿದ್ದ. ಧಮ್ಮವಲ್ಲದ, ಸಂಘವಲ್ಲದ ಮಾರ್ಗಗಳು ಅವನಿಗೆ ಹಿಡಿಸುವುದೇ ಇಲ್ಲ. ತಪ್ಪು ಮಾಡಿದರೆ, ಬುದ್ಧ ಗಂಟೆಯ ಸದ್ದು ಎಚ್ಚರಿಸುತ್ತದೆ ಎಂದಳವಳು. ಅದಕ್ಕಾಗಿ ನಾನು ಯಾವಾಗಲೂ ಆನ್‌ಟ್ರಾಕ್‌ದಲ್ಲೇ ಇರುತ್ತೇನೆ ಎಂದು ಕೈಗೆ ಗ್ಲೌಜುಗಳನ್ನು ಹಾಕಿಕೊಂಡು ಕಾಂಡೋಮುಗಳ ಪಾಕೀಟು ಸೀಳುತ್ತ ಓಕೆ ನಿಮಗೆ ಮಸಾಜ್ ಮಾಡೋಣ ಬನ್ನಿ ಎಂದು ಕರೆದಳು.

ಬಂಡವಾಳವು ಚಲನಶೀಲವಾಗದ ಗತಿಗೆ ಹೋಗದೆ, ಸಂಗ್ರಹ ಹಂತಕ್ಕೆ ಬಂದರೆ ಕಮೋಡಿಟಿಯಾಗಿ ಮನುಷ್ಯತ್ವವೇ ನಾಶವಾಗುತ್ತದೆ ಎಂದ. ಅವಳಿಗೆ ಅರ್ಥವಾಗದೆ ಮಲಗಿಕೋ ನೀರು ಬಿಸಿಯಾಗಿದೆ, ಅದರಲ್ಲಿ ಒಂದು ಪೌಡರ್ ಹಾಕಿದ್ದೇನೆ, ಅದು ನಿನ್ನ ಅಸೆಗಳನ್ನು ಇಮ್ಮಡಿಗೊಳಿಸುತ್ತದೆ ಎಂದು ಹೇಳಿದರೂ ಅವನೇನು ಜಗ್ಗಲಿಲ್ಲ, ಬಗ್ಗಲಿಲ್ಲ. ಇರಲಿ, ನೀನು ಆ ಚೇರಿನ ಮೇಲೆ ಕೂಡು, ನಾನು ಇಲ್ಲಿ ಕೂಡುತ್ತೇನೆ. ಬ್ಯಾಂಕಾಕ್‌ನ ಆ ಗಂಟೆಗಳು ಮಾಡಿದ ಗಾಯದ ಗುರುತುಗಳನ್ನು ತೆಗೆಯುವ ತಾಕತ್ತು ನಿನಗೆ ಮಾತ್ರ ಇರಬಹುದಾಗಿದೆ. ಬಾ ಸುಮ್ಮನೆ ಮಾತಾಡೋಣ ಎಂದ.

ಇಲ್ಲಿಗೆ ಬಂದಿರುವವನಲ್ಲ ಘನಶ್ಯಾಮ ಎನ್ನುವ ಲೋಫರ್, ಇವನು ದೊಡ್ಡ ದಲ್ಲಾಳಿ ಎಂದ. ಅವಳು ಘನಶ್ಯಾಮನೆಂದರೆ ಅನ್ನದಾತನೆಂದೇ ತಿಳಿದಿದ್ದಳು. ಏಕೆ ಏನಾಯ್ತು ಎಂದಳು. ಮಧ್ಯವರ್ತಿಗಳು ಇಲ್ಲದವರ ಇರುವವರ ಮಧ್ಯದ ಕೊಂಡಿಯಾಗಿ ಕೆಲಸ ಮಾಡಿದರೂ ಸಹ ಅವರ ನಡೆ ಇರುವವನ ಶ್ರೇಯಸ್ಸನ್ನು ಕಾಯುತ್ತದೆ ಅಂದ. ಅವಳಿಗೆ ಅರ್ಥವಾಗದೆ, ಆಯ್ ಡೊಂಟ್ ನೋ ಎಂದಳು.

ಬೇರೆಯವರ ಬಗ್ಗೆ ಮಾತಾಡುವದಕ್ಕಿಂತ ನಾನು, ಎಂದ. ನಾನು ಸಹ ಅವನಲ್ಲವೇ? ಹೌದು ನಾನು ಅವನೇ ಎಂದುಕೊಂಡ. ಮತ್ತೆ ಅವಳು ವೇಶ್ಯಾವೃತ್ತಿ ಎಂದರೆ ಪಾಪದ ಕೆಲಸವೆ ಎಂದು ನಕ್ಕಳು. ನಿಮ್ಮ ರೈತರ ಸೇವೆಯಲ್ಲಿನ ಪುಣ್ಯದ ಹಣವೂ ಪಾಪವನ್ನು ತೊಳೆಯಲು ಸಹಾಯ ಮಾಡಬಹುದು ಎಂದಳು.

ನೀವು ರೈತರನ್ನು ರಕ್ಷಿಸುವವರು, ಅವರ ಬೆಳೆಗಳನ್ನು ರಕ್ಷಿಸುವವರು, ಆ ಪುಣ್ಯವು ನಮ್ಮ ಸಂಗಡ ಇದೆ ಎಂದಳು ಆನ್‌ಗಾಂಗ್.

ಅವನ ಕಣ್ಣೀರ ಕಟ್ಟೆ ಒಡೆಯಿತು.

ಪ್ರತಿ ಹನ್ನೆರಡು ತಾಸಿಗೊಮ್ಮೆ ಒಬ್ಬ ರೈತ ಸಾಯುತ್ತಾನೆ ಅಲ್ಲಿ, ಅವನನ್ನು ಕೊಲ್ಲುವವರೇ ನಾವು. ಅವನಿಗೆ ಸುಳ್ಳು ಕ್ರಿಮಿನಾಶಕ ಕೊಟ್ಟಿದ್ದೇವೆ, ಅವನಿಂದ ಮೂರು ಪಟ್ಟು ಹಣ ತೆಗೆದುಕೊಂಡಿದ್ದೇವೆ, ಅವನ ಬದುಕನ್ನು ಧ್ವಂಸ ಮಾಡಿದ್ದೇವೆ. ನಾವು ಇಲ್ಲಿಗೆ ಬಂದಿದ್ದು ಅವನ ಹಣದಿಂದಲೇ, ಮೋಜು ಮಾಡಿದ್ದು ಅವನ ಹಣದಿಂದಲೇ ಎಂದು ಕನ್ನಡದಲ್ಲಿ ಉಚ್ಚರಿಸಿದ.

ಇವನ ಕನ್ನಡ ಕೇಳಿ ಅವಳಿಗೆ ಗಾಬರಿಯಾಯಿತು. ವಾಟ್.. ಎಂದಳು. ನಥಿಂಗ್, ಎಂದ. ಸಂಜೆ ಒತ್ತರಿಸಹತ್ತಿತು. ನೀಲಿ ಸಮುದ್ರ ವಿಷದಂತೆ ಕಂಡಿತ್ತು. ನಾನು ಧ್ಯಾನಕ್ಕಾಗಿ ಇಲ್ಲೆ ಘೂಯಿ ಎನ್ನುವ ಊರಿಗೆ ಹೋಗಿ ಬರುತ್ತೇನೆ. ನೀವು ಈ ಎರಡು ತಾಸು ಸ್ವಲ್ಪ ವಿಶ್ರಮಿಸಿ ಎಂದಳಾದರೂ ಅವಳನ್ನು ಆ ಎರಡು ತಾಸು ಬಿಟ್ಟಿರಲು ಸಾಧ್ಯವಿರಲಿಲ್ಲ. ಇಲ್ಲೆ ಮಾಡಬಹುದಲ್ಲವೇ ಧ್ಯಾನ? ಪ್ಲೀಸ್ ನೀನು ಹೋಗಬೇಡ ನಾನೊಬ್ಬನೆ ಇರಲಾರೆ ಎಂದ. ಆಯ್ತು ಇಲ್ಲಿಯೇ ಮಾಡುತ್ತೇನೆ ಎಂದು ನಕ್ಕಳು. ಸೂಟ್‌ಕೇಸ್ ತೆಗೆದು ಅದರಲ್ಲಿರುವ ಬುದ್ಧನ ಮೂರ್ತಿ ತೆಗೆದು ಟೇಬಲ್ ಮೇಲೆ ಇಟ್ಟು ಧ್ಯಾನಸ್ಥ ಸ್ಥಿತಿಯಲ್ಲಿ ಕುಳಿತಳು. ಅವನು ಆ ಮೂರ್ತಿಯನ್ನು ನೋಡುತ್ತ ಕುಳಿತ. ಮತ್ತೆ ಸೂಟ್‌ಕೇಸ್‌ನಿಂದ ಎರಡು ಸಣ್ಣ ಗಂಟೆಗಳನ್ನು ಕೈಯಲ್ಲಿ ಹಿಡಿದು ಅಲ್ಲಾಡಿಸಹತ್ತಿದಳು. ಬ್ಯಾಂಕಾಕ್‌ನ ಆ ದೇಗುಲಗಳಿಗಿಂತಲೂ ಭಯಂಕರ ಆರ್ತನಾದ ಮಾಡಹತ್ತಿತು ಆ ಸಣ್ಣ ಗಂಟೆಗಳ ಸದ್ದು. ಆತನಿಗೆ ಮರಣ ಮೃದಂಗದಂತೆಯೇ ಕೇಳಿಸಿತು. ತಕ್ಷಣವೇ ಕಿಟಕಿಯ ಹತ್ತಿರ ಓಡಿಹೋದ, ದಡಗ್ಗನೆ ಕಿಟಕಿಯನ್ನು ತೆಗೆದ. ನೀಲಿ ಸಮುದ್ರ ಎದುರಿಗೆ ಮೈಚಾಚಿ ಮಲಗಿಕೊಂಡಂತಿತ್ತು.

ದರೋಡೆಕೋರರಿಗೆ ಬದುಕಲು ಪರ್ಯಾಯ ಅರ್ಹತಾ ಮಾರ್ಗಗಳಿಲ್ಲ, ಅವರ ಆಯ್ಕೆ ಸಮುದ್ರ ಒಂದೇ ಎಂಬ ಆನ್‌ಗಾಂಗ್ ಹೇಳಿದ ಮಾತು ಆ ಕತ್ತಲ ಒಡಲಿನಿಂದ ಸ್ಫೋಟಿಸಿದಂತಾಯಿತು.

❖

(ಪ್ರಜಾವಾಣಿ – ದೀಪಾವಳಿ ವಿಶೇಷಾಂಕ, 2013)

ಬಣ್ಣದ ಜಿಂಕೆ

ಕಂನಾಡಿಗಾ ನಾರಾಯಣ

'ಕಾರು ಇಷ್ಟೊಂದು ಫ್ರೀಯಾಗಿ ಹೋಗ್ತಾಯಿದೆಯಲ್ಲ, ಯಾವ ಗೇರಲ್ಲಿ ಓಡುಸ್ತಾಯಿದ್ದೀಯಾ ಮೋಹನ?' ಎಂಬ ಚಿದಂಬರನ ಪ್ರಶ್ನೆಗೆ 'ನ್ಯೂಟ್ರಲ್‌ನಲ್ಲಿ' ಎಂದಾಕ್ಷಣ ತನಗರಿವಿಲ್ಲದೇ 'ಏ..' ಎಂದಬ್ಬರಿಸಿದ್ದ. ಆ ಅಬ್ಬರದ ಧ್ವನಿಗೆ ಕಾರಲ್ಲಿದ್ದವರೆಲ್ಲರೂ ಆತನ ಮುಖ ನೋಡಿದರು. ಮೋಹನ ಕೂಡ ರಸ್ತೆ ನೋಡುವುದ ಬಿಟ್ಟು ಏನಾಯ್ತು ಎನ್ನುವಂತೆ ನೋಡಿದ. 'ಒಂದು ನಿಮಿಷ ಕಾರು ನಿಲ್ಲಿಸು' ಎಂದು ಹೇಳಿ ಕೆಳಗಿಳಿದ. ಮೂರು ದಿನ ರಜಾ ಕೇಳಿದ್ದಕ್ಕೆ, ಊರುತುಂಬಾ ರಾಸುಗಳಿಗೆ ಕಾಲುಬಾಯಿ ಜ್ವರ ವ್ಯಾಪಿಸಿರುವುದರಿಂದ ಸಾಧ್ಯವಿಲ್ಲವೆಂದಿದ್ದರೂ ಬಾಸ್‌ನ ಮೂತಿಗೆ ರಜಾಚೀಟಿ ಬಿಸಾಕಿ, ಗರ್ಭಿಣಿ ಹೆಂಡತಿಯ ಆಸೆಯನ್ನು ಈಡೇರಿಸಲೆಂದು ಕರಾವಳಿಯ ದೇವಸ್ಥಾನಗಳಿಗೆಲ್ಲ ಕರೆದೊಯ್ದಿದ್ದ ಚಿದಂಬರ, ಈ ಬೆಟ್ಟದ ಇಳಿಜಾರಲ್ಲಿ ಗಾಡಿಯನ್ನು ಗೇರ್‌ನಲ್ಲೇ ಓಡಿಸಬೇಕೆಂಬ ಕಾಮನ್‌ಸೆನ್ಸ್ ಇಲ್ಲದ ಮೋಹನನಿಂದಾಗಿ ತನ್ನೊಂದಿಗೆ ಇಡೀ ಕುಟುಂಬವನ್ನು ಪರ್ವತದ ಆ ತುದಿಯಿಂದ ನೂರಾರು ಅಡಿ ಆಳದಲ್ಲಿ ಕಾಣುವ ಪ್ರಪಾತದೊಂದಿಗೆ ಸಮೀಕರಿಸುತ್ತ ಮಳೆಯಿಂದ ತಂಪಾಗಿದ್ದ ವಾತಾವರಣದಲ್ಲೂ ಸಣ್ಣಗೆ ಬೆವರಿದ. ಮುಖ ಮರೆಸುವ ಪ್ರಯತ್ನವಾಗಿ, ಹೆಚ್ಚೇನಾದರೂ ಹೇಳಿದರೆ ತಪ್ಪು ತಿಳಿದುಕೊಳ್ಳಬಹುದೆಂದು ಕಿರುಬೆರಳು ತೋರಿಸಿದ.

ಇಬ್ಬರೂ ಕೆಳಗೆ ಇಳಿದರು. ಆದರೆ ನೆಪಮಾತ್ರಕ್ಕೆ ಜಿಪ್ ತೆರೆದು ಗುಪ್ತಾಂಗವನ್ನು ಕಾಡಿಗೆ ದರ್ಶನ ಮಾಡಿಸಿ, ರಸ್ತೆ ಪಕ್ಕಕ್ಕಿದ್ದ ಎಲೆಗಳೆಲ್ಲ ಬಿದ್ದು ಮಣ್ಣಿನೊಂದಿಗೆ ಕಳಿತು ಮಳೆನೀರ ಹನಿತಕ್ಕೆ ಕೊಳೆತು, ಉಬ್ಬಿ ಉಂಟಾಗಿದ್ದ ಕಪ್ಪುಗೊಬ್ಬರದಂಥ ಮಣ್ಣು ಶೂಗೆ ಅಂಟಿದ್ದನ್ನು, ಟಾರ್ ರಸ್ತೆಗೆ ಒದ್ದು ಒದ್ದು ಬಿಡಿಸಿ ಬೀಳಿಸಿ, ಪಶ್ಚಿಮ ಘಟ್ಟದ ಅಮೋಘತೆಯನ್ನು ಇನ್ನೂ ಕಣ್ತುಂಬಿಕೊಳ್ಳುತ್ತಿರುವವನಂತೆ ಆ ಹಸಿರು ಗುಡ್ಡ, ಅದರ ಹಿಂದಿನ ಅದಕ್ಕೂ ಮಿಗಿಲಾದ ಎತ್ತರದ ಹಸಿರು ನೀಲಿ ಮಿಶ್ರಿತ ಬೆಟ್ಟ, ಚಿತ್ರ ಬರೆದಂತೆ ಅದರ ಹಿಂದಿರುವ ತಿಳಿನೀಲಿ ಪರ್ವತ.. ಇನ್ನೊಂದೆಡೆ ವೈರುಧ್ಯವೆನ್ನುವಂತಿರುವ ಆ ಕಣಿವೆ, ಅದರ ಕೆಳಕ್ಕೂ ಚಾಚಿರುವ ಕಂದಕ.. ರಸ್ತೆ ಮೇಲೆಯೇ ಜಲಪಾತ ಸೃಷ್ಟಿಸುತ್ತಿರುವಂತೆ ಭಾಸವಾಗುವ ಸಣ್ಣ ಸಣ್ಣ ತೊರೆಗಳು, ಅದರೊಳಗಿಂದ ಧುಮುಕಿ ತಪ್ಪಿಸಿಕೊಂಡು ಓಡುವಂತೆ ಜುಳುಜುಳನೆ ಓಡುವ ಜಲಧಾರೆ.. ಅವನ್ನೆಲ್ಲ ಪ್ರೇಮಿಯೊಬ್ಬ ಎಷ್ಟು ನೋಡಿದರೂ ಸಾಲದೆಂಬಂತೆ ತನ್ನ ಮನದನ್ನೆಯನ್ನ ನೋಡುವಂತೆ, ನೂರಾರು ಮೈಲು ದೂರ ಪಸರಿಸಿರುವ ಆ

ಹಸಿರು ನಿಸರ್ಗವನ್ನು ಸವಿಯುವವನಂತೆ ನಟಿಸುತ್ತ, ಕಾರು ಹತ್ತಿದ – ತಾನು 'ಯಾಕೆ ಹಾಗೆ ರೇಗಿದೆ?' ಎಂದು ಮತ್ತೆ ತನಗೆ ತಾನೇ ಪ್ರಶ್ನೆ ಹಾಕಿಕೊಳ್ಳುತ್ತ. ಕಾರಲ್ಲಿದ್ದವರ್‍ಯಾರೂ ತನ್ನನ್ನು ಪ್ರಶ್ನಿಸಬಾರದೆಂದು ಯಾವುದೋ ಲಹರಿ ಹಿಡಿದಂತೆ ಸಣ್ಣಗೆ ಸೀಟಿಹಾಕಿಕೊಳ್ಳುತ್ತ, ಏನೂ ಆಗಿಲ್ಲವೆನ್ನುವಂತೆ ನಿರ್ಲಿಪ್ತನಾಗಿ ಕಾರಲ್ಲಿ ಕುಳಿತ.

ಭೂಮಿ ಹುಟ್ಟಿದ ಈ ಐನೂರು ಕೋಟಿ ವರ್ಷಗಳಲ್ಲಿ ಕುದಿವ ಲಾವಾರಸ ಅದೆಷ್ಟೋ ಲಕ್ಷ ಪರಿಕ್ರಮಣ ಪರಿಭ್ರಮಣಗಳಿಗೆ ಒಳಗಾಗಿ ಈ ಬೆಟ್ಟ, ಈ ಗುಡ್ಡ, ಈ ಕಾಡು, ಈ ಮಣ್ಣು, ಈ ಪ್ರಾಣಿ, ಈ ಪಕ್ಷಿ, ಈ ಮನುಷ್ಯ ಸೃಷ್ಟಿಯಾಗಿ ಅದೆಷ್ಟು ಮನ್ವಂತರಗಳಿಗೆ ಸಾಕ್ಷಿಯಾಗಿದೆಯಲ್ಲ. ಈ ಇದರ ಮಧ್ಯೆ ತಾವು ಪಯಣಿಸುವ ಈ ಕಾರು ನ್ಯೂಟ್ರಲ್‌ನಲ್ಲಿ ಓಡುತ್ತ, ಯಾವುದೋ ತಿರುವಿನಲ್ಲಿ ಕಂಟ್ರೋಲಿಗೆ ಸಿಗದೇ ಪ್ರಪಾತಕ್ಕೆ ಬಿದ್ದು ಚೂರುಚೂರಾದರೂ ನಿಸರ್ಗದ ಚಲನೆಯಲ್ಲಿ ಒಂದಿಂಚೂ ಬದಲಾಗದಲ್ಲ! ಹಾಗಿದ್ದಾಗ ತಾನಾದರೂ ಯಾಕೆ ಹಾಗೆ ಕಿರುಚಿದೆ ಎಂದು ಮತ್ತೆ ಶೂನ್ಯದಲ್ಲಿ ದೃಷ್ಟಿನೆಟ್ಟು, ಅಂತರ್ದೃಷ್ಟಿ ಪಟಲದ ಮುಂದೆ ಓಡುವ ಕಾರಿನ ವೇಗಕ್ಕೆ ಪೂರಕವಾಗಿ ಹಾದು ಹೋಗುವ ಗಿಡ ಮರಗಳಾದಿಗಳೆಲ್ಲದರ ಅಸ್ಪಷ್ಟ ಆಕಾರವನ್ನು ತೇಲಿಹೋಗಲು ಬಿಟ್ಟು ಆಲೋಚಿಸುತ್ತಿದ್ದ. ವೃತ್ತಾಕಾರದ ಈ ಚಕ್ರದ ಪರಿಕಲ್ಪನೆಯಿಂದ ಜಗತ್ತು ಹೇಗೆ ವೇಗವಾಗಿ ಓಡುತ್ತಿದೆಯಲ್ಲ! ಈ ಶೂನ್ಯಾಕಾರದ ಚಕ್ರವನ್ನು ಕಂಡುಹಿಡಿದ ಮೂಲಪುರುಷ ಯಾರು? ಯಾರೇ ಆಗಿದ್ದರೂ ಸೊನ್ನೆಯನ್ನು ಕಂಡುಹಿಡಿದಂತೆ ಪ್ರಾಯಶಃ ಭಾರತೀಯನೇ ಆಗಿರಬಹುದೆಂಬ ಮುಗುಳ್ನಗೆಯೊಂದನ್ನು ಬೀರುವ ವೇಳೆಗೆ ಕಾರ ಮುಂದೆಯೇ ಏನೋ ಅಡ್ಡ ಚಲಿಸಿದಂತಾಗಿ, ಅದೇ ಕ್ಷಣದಲ್ಲಿ ಇಳಿಜಾರಲ್ಲಿ ಕಾರಿನ ವೇಗ ಒಂದರೆಕ್ಷಣದಲ್ಲಿ ಏಕದಂ ಜಾಸ್ತಿಯಾದಾಗ ಪ್ರಪಾತಕ್ಕೆ ಕಾರು ಬಿದ್ದೇಬಿಟ್ಟಿತೇನೋ ಎನ್ನುವಷ್ಟರಲ್ಲಿ ಛಂಗನೆ ಜಿಗಿದ ಚಿಗರೆಯೊಂದು ಬಾನೆಟ್‌ಗೆ ತಗುಲಿದಂತೆ ಜಾರಿ ಕಾಡಸಿರಿಯ ಮರಗಿಡಗಳ ನಡುವೆ ಮರೆಯಾಗಿ ಹೋಯಿತು.

'ಬಡ್ಡೀಮಗುಂದು, ತಪ್ಪಿಸ್ಕಂಡ್‌ಬಿಡ್ತು..' ಎಂದ ಮೋಹನನ ಮಾತಿನಿಂದಾಗಿ ಅವನ ಮುಖ ನೋಡಿದ. 'ಜಿಂಕೆ ಮಾಮ, ಒಳ್ಳೆ ಬೇಟೆ ಸಿಕ್ಕಿತ್ತು.. ಜಿಂಕೆ ಮಾಂಸ ತಿಂದೇ ಇರಲಿಲ್ಲ, ಅದರ ಟೇಸ್ಟ್ ಹೇಗಿರುತ್ತೆ ಅಂತ ನೋಡ್ಬಹುದಾಗಿತ್ತು.. ಬಟ್ ಅನ್‌ಫಾರ್ಚುನೇಟ್.. ತಪ್ಪಿಸ್ಕಂಡ್‌ಬಿಡ್ತು..' ಎಂದು ಪ್ರಲಾಪಿಸುತ್ತಿದ್ದ. ಕಾಣದ ಆ ಅ'ದೃಷ್ಟ' ಆ ಜಿಂಕೆಯದೋ, ತಮ್ಮದೋ ಎಂದು ಚಿದಂಬರ ಒಳಗೊಳಗೇ ಗುಣಿಸುತ್ತ, 'ಜಿಂಕೆ ಕಾರಿಗೆ ಸಿಕ್ಕಿಹಾಕಿಕೊಂಡಿದ್ದರೆ ಏನಾಗುತ್ತಿತ್ತು ಗೊತ್ತಾ?' ಎಂದ. 'ಡಿಯರ್ ಬಿರಿಯಾನಿ, ಡಿಯರ್ ಕಬಾಬ್, ಡಿಯರ್ ಫ್ರೈ ಎಟ್‌ಸೆಟ್ರಾ..' ಎನ್ನುತ್ತ ಪವರ್ ಸ್ಟೇರಿಂಗ್‌ನ್ನು ಮಾಂತ್ರಿಕನಂತೆ ಅಂಗೈಯ್ಯಲ್ಲಿ ಆಡಿಸುತ್ತ ಕ್ಯಾಶುಯಲ್ಲಾಗಿ ಹೇಳಿದ ಮೋಹನ. 'ಅದಕ್ಕಿಂತ ಮೊದಲು ಜೈಲಲ್ಲಿ ರಾಗಿಮುದ್ದೆ ಸಿಗ್ತಿತ್ತು.. ನಿಂಗೆ ಸಲ್ಮಾನ್‌ಖಾನ್ ಗೊತ್ತಾ..?' ಎಂದ ಚಿದಂಬರ ವ್ಯಂಗ್ಯವಾಗಿ. 'ಪರ್ಸನಲ್ಲಾಗಿ ಗೊತ್ತಿಲ್ಲ.. ಬಟ್

ಅವನ ಸಿನೆಮಾ ನೋಡಿದಿನಿ.. ನಿಮಗೇ?' ಹಂಗನ್ನು ಅರಿಯದೇ ಕೇಳಿದ ಮೋಹನ. 'ನನಗೆ ತುಂಬಾ ಚೆನ್ನಾಗಿ ಗೊತ್ತು.. ಅವನೇ ಏನು, ಅಮಿತಾಬು, ಅಮೀರ್‌ಖಾನೂ, ಶಾರೂಕ್‌ಖಾನೂ.. ಈವನ್ ಪ್ರೆಸಿಡೆಂಟು, ಪ್ರೈಮ್ ಮಿನಿಸ್ಟರ್ರು ಎಲ್ರೂ ಗೊತ್ತು..' ಎಂದು ಮಾತಿಗೆ ಒಂದು ಕ್ಷಣ ಪಾಜ್ ನೀಡಿ, ಎತ್ತಲೋ ನೋಡುತ್ತ 'ಬಟ್ ನಾನು ಯಾರೂಂತ ಅವರಿಗೆ ಗೊತ್ತಿಲ್ಲ ಅಷ್ಟೇ..!' ಎಂದ ಕೂಲಾಗಿ. 'ಓ.. ಜೋಕ್ ಆಫ್ ದ ಡೇ..' ಎಂದು ಕುಂಡಿ ಬಡಕೊಂಡು ಕೇಕೆ ಹಾಕಿ ನಕ್ಕ ಮೋಹನ. ಆಗ ಲಯ ಸಿಕ್ಕವನಂತೆ 'ಘಾಟ್‌ಗಳ ಇಳಿಜಾರಲ್ಲಿ ಕಾರನ್ನ ನ್ಯೂಟ್ರಲ್ಲಲ್ಲಿ ಓಡಿಸಿದರೆ ಕಂಟ್ರೋಲ್ ಸಿಗಲ್ಲ, ಕನಿಷ್ಠ ಸೆಕೆಂಡ್ ಅಥವಾ ಥರ್ಡ್ ಗೇರ್‌ನಲ್ಲೇ ಕಂಟ್ರೋಲ್ ಮಾಡಬೇಕು ಮೋಹನ.. ಒಂದೇ ಒಂದು ಸೆಕೆಂಡ್ ಆಯ ತಪ್ಪಿದರೆ ನಾವು ಎಲ್ಲಿರ್ತೀವಿ ಅಂತ ಗೊತ್ತಾ?.. ಆದಷ್ಟು ಬ್ರೇಕ್‌ನ ಕಡಿಮೆ ಅಪ್ಲೈ ಮಾಡಬೇಕು. ಇಲ್ಲಾಂದ್ರೆ ಒಂದು, ಕಾರು ಕಂಟ್ರೋಲ್‌ಗೆ ಸಿಗದೇ ಪಾತಾಳದ ಪಾಲಾಗುತ್ತೆ.. ಇಲ್ಲವೇ ಎರಡು, ಬ್ರೇಕ್‌ಲೈನರ್ರು ಬೇಗ ಸವೆದು ಹೋಗುತ್ತೆ..' ಎಂದಾಗ, ಆಗ ಅಬ್ಬರಿಸಿದ್ದಕ್ಕೂ ಈಗ ನೀಡಿದ ಸಮಜಾಯಿಷಿಗೂ ಸಂಬಂಧವಿರಬಹುದೇ ಎಂದು ಮೋಹನ ಒಳಗೊಳಗೇ ಲೆಕ್ಕಹಾಕಲಾರಂಭಿಸಿದ.

ಸಣ್ಣ ಅವಮಾನದಲ್ಲಿ ಸ್ಟೇರಿಂಗ್ ತಿರುಗಿಸುತ್ತಿದ್ದ ಮೋಹನನಿಗೆ, ಸರ್ಕಾರಿ ನೌಕರನಾದ ತಾನು ಒಂದು ಕಾರನ್ನು ಕೊಳ್ಳುವುದಕ್ಕೆ ಎಷ್ಟು ಕಷ್ಟ ಪಟ್ಟೆ ಎಂದೆಲ್ಲ ನಯವಾದ ಮಾತುಗಳಲ್ಲಿ ವಿವರಿಸಿದ. ಅಂದರೆ ತನ್ನದಲ್ಲದ ಕಾರನ್ನು ಹಾಗೆ ಓಡಿಸುವುದು ತಪ್ಪು ಎಂದು ಮನವರಿಕೆ ಮಾಡಬೇಕೆಂಬುದು ಆತನ ಉದ್ದೇಶವಾಗಿತ್ತು. ಆ ಕಾರಿನಿಂದ ಗುದ್ದಿ ಒಂದು ವೇಳೆ ಆ ಜಿಂಕೆ ಸತ್ತಿದ್ದರೆ ಅದರಿಂದ ಉಂಟಾಗಬಹುದಾಗಿದ್ದ ಸಂದರ್ಭಗಳ ನಿರ್ವಹಣೆಯನ್ನು ಹೇಗೆಲ್ಲಾ ಮಾಡಬೇಕಾಗುತ್ತಿತ್ತು ಎಂಬುದನ್ನು ಸೋದಾಹರಣವಾಗಿ ವಿವರಿಸಿದ. ಜಿಂಕೆಯನ್ನು ಬೇಟೆಯಾಡಿ ಜೈಲಿಗೆ ಹೋದ ಸೆಲೆಬ್ರಿಟಿಗಳ ಉದಾಹರಣೆಯನ್ನೂ ನೀಡಿದ. ಕಾಡಿನ ಕಾನೂನುಗಳು ಊರವನಾದ ನಿನಗೆ ಗೊತ್ತಿಲ್ಲವೆಂಬಂತಿತ್ತು ಆತನ ಮಾತಿನ ವೈಖರಿ. ಮೋಹನ ಬೇಜಾರು ಮಾಡಿಕೊಳ್ಳಬಹುದೆಂದು ಮಾತು ಬದಲಿಸಿದ ಚಿದಂಬರ, ಬೃಹತ್ತಾದ ಬೆಂಗಳೂರಿನಲ್ಲಿ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದ ಮೋಹನನ ಒಲವು ಕಾಡಲ್ಲಿಯೂ ನಡೆಯುವ ಅಭಿವೃದ್ಧಿ ಕಾಮಗಾರಿಗಳ ಕಡೆಗೆ ಸೆಳೆಯುವಂತೆ ಮಾಡಿ ಆಸಕ್ತಿ ಹುಟ್ಟಿಸಲು ಪ್ರಯತ್ನಿಸಿದ. ಈ ದಟ್ಟಕಾಡಿನಲ್ಲೂ ತೋಡಿರುವ ಮಾನವನಿರ್ಮಿತ ಕಂದಕಗಳು, ಅಲ್ಲಲ್ಲಿ ಹಾಕಿರುವ ಮುಳ್ಳುತಂತಿ ಬೇಲಿ.. ಇತ್ಯಾದಿಗಳನ್ನು ಸುಮ್ಮನೆ ಅವಲೋಕಿಸಿದ. 'ಇವನ್ನೆಲ್ಲ ಕಾಡು ಪ್ರಾಣಿಗಳು ತಮ್ಮ ಪ್ರದೇಶವನ್ನು ದಾಟಿ ಸಲೀಸಾಗಿ ರಸ್ತೆ ಪಕ್ಕಕ್ಕೋ, ಊರ ಕಡೆಗೋ ಬರಬಾರದೆಂಬುದು, ಅದೇ ವೇಳೆ ಅವುಗಳ ಪ್ರದೇಶವನ್ನು ಜನಗಳೂ ಅತಿಕ್ರಮ ಮಾಡಿಬಾರದೆಂಬುದರ ಸಾಂಕೇತಿಕತೆಗೆ ಅರಣ್ಯ ಇಲಾಖೆ ಮಾಡಿರುವಂತಹವು. ಇಂತಹ ಕೆಲಸಗಳನ್ನೆಲ್ಲ ಯಾರೂ ಬಂದು ತಪಾಸಣೆ

ಮಾಡದೇ ಇದ್ದರೂ, ಸಾರ್ವಜನಿಕರೂ ಪ್ರಶ್ನೆ ಮಾಡದೇ ಇದ್ದರೂ ಪ್ರಾಯಶಃ ಸಮರ್ಪಕವಾಗಿ ಕೆಲಸ ನಡೆದು, ಅದು ಹೇಗೋ ಮೆಸರ್‌ಮೆಂಟ್ ತೆಗೆದುಕೊಂಡು ಬಿಲ್ ಬರೆಯುತ್ತಾರೆ.. ಬೆಂಗಳೂರಂಥ ದೊಡ್ಡ ನಗರದಲ್ಲಿಯೂ ಕೂಡ, ಸಾವಿರಾರು ಜನ ಮಾತ್ರವಲ್ಲದೆ ಸಂಬಂಧಪಟ್ಟ/ಪಡದ ಅಧಿಕಾರಿಗಳು, ಮಂತ್ರಿಗಳು, ಮಾಧ್ಯಮದವರೆಲ್ಲ ಸೇರಿ ಲಕ್ಷಾಂತರ ಮಂದಿ ಅಡ್ಡಾಡುವ ಊರಲ್ಲಿಯೇ ಅರೆಸತ್ಯದ ಬಿಲ್‌ಗಳು ಸೃಷ್ಟಿಯಾಗುವಾಗ ಈ ಕಾಡಿನ ಕೆಲಸಗಳ ಲೆಕ್ಕವನ್ನು ಕೇಳುವವರಾರು? ಬಹುಶಃ ಅದಕ್ಕೇ ಫಾರೆಸ್ಟ್ ಡಿಪಾರ್ಟ್‌ಮೆಂಟಿಂದ ಲೆಕ್ಕಪರಿಶೋಧನೆ ವಿಭಾಗದವರನ್ನು ಕಿತ್ತುಹಾಕಿದ್ದಿರಬೇಕು!.. ಎಂತಹ ವಿಪರ್ಯಾಸ ಅಲ್ಲವಾ?..' ಅಂದ.

ಆ ಮಾತು ಮುಗಿಯುವ ಮೊದಲೇ ಗಕ್ಕನೇ ಬ್ರೇಕು ಹಾಕಿ ಕಾರು ನಿಲ್ಲಿಸಿದ್ದ. ತನ್ನನ್ನು ಕಂಡಮ್ ಮಾಡುತ್ತಿರುವನೆಂದೇನಾದರೂ ಬೇಸತ್ತು ಅರ್ಧದಾರಿಯಲ್ಲಿ ಸಾರಥ್ಯವನ್ನು ಕೊನೆಗಾಣಿಸಲು ನಿರ್ಧರಿಸಿದನೇನೋ ಎಂಬ ಕಳವಳದಿಂದ ಅವನ ಮುಖವನ್ನು ನೋಡಿದ ಚಿದಂಬರ, ಅವನ ದೃಷ್ಟಿಯತ್ತಲೇ ತನ್ನ ದೃಷ್ಟಿ ಬೀರಿದ. ನಾಯಿಯಾಕಾರದಲ್ಲಿ ಬಿದ್ದಿದ್ದ ಪ್ರಾಣಿಯೊಂದು ವಿಲವಿಲ ಒದ್ದಾಡುತ್ತಿತ್ತು. ಇದೀಗ ತಾನೇ ಯಾವುದೋ ವಾಹನಕ್ಕೆ ಸಿಕ್ಕು ಪೆಟ್ಟುಬಿದ್ದಿರುವ ಪ್ರಾಣಿ ಅದೆಂದು ಸ್ಪಷ್ಟವಾಗಿ ತಿಳಿಯುತ್ತಿತ್ತು. ಆದರೆ ಮೋಹನ ತಾನು ಢಿಕ್ಕಿ ಹೊಡೆದಿಲ್ಲ ನೋಡಿ ಆಮೇಲೆ ಎನ್ನುವಂತೆ ನಾಲ್ಕು ಮಾರು ಹಿಂದೆಯೇ ಕಾರು ನಿಲ್ಲಿಸಿದ್ದ. ಅದರ ಒದ್ದಾಟ ಕಂಡು ಅದನ್ನು ರಕ್ಷಿಸಬೇಕೆಂಬ ಅಂತರಂಗದ ಅಹವಾಲಿಗೆ ಮನಸೋತು ಇಳಿದು ಹೋಗಿ ನೋಡಿದರೆ, ಅದು ಮೋಹನ ಹಿಂದೆ ಢಿಕ್ಕಿ ಹೊಡೆಯಲು ಹವಣಿಸಿದಷ್ಟೇ ವಯಸ್ಸಿನ ಜಿಂಕೆಮರಿ! ಅಷ್ಟರಲ್ಲಿ ಕಾರಲ್ಲಿದ್ದ ಹೆಂಡತಿ ಮಕ್ಕಳೆಲ್ಲ ನಿದ್ದೆಯಿಂದೆದ್ದು ಏನಾಯ್ತು ಏನಾಯ್ತೆಂದು ಇಳಿದುಬಂದಿದ್ದರು. ಇವರು ಅದರ ಸಂರಕ್ಷಣೆಗೆ ಮುಂದೆ ಬಂದರೂ ಅದು ಅದಕ್ಕೆ ತಿಳಿಯದೇ ಪ್ರಾಣ ಭಯದಿಂದ ಇನ್ನಷ್ಟು ಒದರಾಡಿ, ಎದ್ದು ಬಿದ್ದು ಕೊಸರಾಡಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಸ್ವಲ್ಪ ಆಯ ತಪ್ಪಿದರೂ ಅದರೊಂದಿಗೆ ತಾನೂ ಪಾತಾಳಕ್ಕೆ ಬೀಳುವುದು ಖಾತ್ರಿ ಎಂದುಕೊಂಡ ವೆಟರ್ನರಿ ಡಾಕ್ಟರನೂ ಆಗಿದ್ದ ಚಿದಂಬರ ತನ್ನ ಪಟ್ಟುಗಳನ್ನು ಹಾಕಿ ಸೆರೆಹಿಡಿದ. ಪ್ರಥಮ ಚಿಕಿತ್ಸೆ ನೀಡಲು ತನ್ನಲ್ಲಿ ಯಾವುದೇ ಪರಿಕರಗಳಿಲ್ಲದೇ ಬಾಟಲಲ್ಲಿದ್ದ ನೀರಿನಿಂದ ನಾಲ್ಕು ಹನಿ ಸಿಂಪಡಿಸಿ ನೋವನ್ನು ಶಮನಗೊಳಿಸುವವನಂತೆ ಮೈನೇವರಿಸುತ್ತ ಮೊದಲು ಅದರ ವಿಶ್ವಾಸ ಗಳಿಸಿದ. ತಮ್ಮ ಕಾರಿನ ತುಂಬಾ ಜನರಿದ್ದಾರೆ, ರಕ್ತಸಿಕ್ತಗೊಂಡ ಅದನ್ನು ನಗರದವರೆಗೆ ಸಾಗಿಸುವುದು ಹೇಗೆಂಬ ವಿಚಾರದಲ್ಲಿದ್ದಾಗ ಬಂದ ಒಂದೆರಡು ಕಾರುಗಳನ್ನು ನಿಲ್ಲಿಸಲು ಯತ್ನಿಸಿದರೂ ಯಾರೂ ಕೇರುಮಾಡದೇ ಮುಂದೆ ಹೋಗುತ್ತಲೇ ಇದ್ದರು.

'ಡಿಕ್ಕಿಯಲ್ಲಿ ಹಾಕಿಕೊಂಡು ಹೋಗೋಣ, ನಮ್ಮಪ್ಪ ಫಸ್ಟ್‌ಕ್ಲಾಸಾಗಿ ಪಾರ್ಟ್ಸ್‌ಗಳನ್ನೆಲ್ಲ ಬಿಡಿಸಿ ಲಿವರ್, ಬೋಟಿನೆಲ್ಲ ಸೆಪರೇಟ್ ಮಾಡಿಕೊಡ್ತಾರೆ..' ಎಂದು ಮೋಹನನೆಂದರೆ ಚಿದಂಬರನಿಗೆ ಯಾವ ಇಂಜೆಕ್ಷನ್‌ನಿಂದ ಇದನ್ನು ಗುಣಪಡಿಸಬಹುದೆಂಬ ಚಿಂತೆ. ತನ್ನೊಂದಿಗೆ ಮೆಡಿಕಲ್‌ಕಿಟ್ ತರದೇ ಇದ್ದುದರಿಂದ, 'ಮೊದಲು ಯಾರಾದರೂ ವೆಟರ್ನರಿ ಡಾಕ್ಟರರಿರುವ ಹತ್ತಿರದ ನಗರಕ್ಕೆ ಕೊಂಡೊಯ್ಯೋಣ..' ಎಂದು ಅವಸರಿಸಿದ. ಡಿಕ್ಕಿಯಲ್ಲಿ ಹಾಕಿದರೆ ಉಸಿರುಗಟ್ಟಿ ಸಾಯುವ ಪ್ರಮೇಯವಿದ್ದುದರಿಂದ ಒಪ್ಪದೇ ಮುಂದಿನ ಸೀಟಲ್ಲಿ ಕುಳಿತಿದ್ದ ತನ್ನ ಕಾಲ ಬಳಿಯೇ ಮೈಸವರುತ್ತ ಮಲಗಿಸಿಕೊಂಡ.

'ಇನ್ನೇನು ಆಗುಂಬೆ ಬಂತು, ಇಲ್ಲಿರಬಹುದಾದ ಸರ್ಕಾರೀ ಕೇಂದ್ರದ ಡಾಕ್ಟರ್ರು ಬಹುಶಃ ತೀರ್ಥಹಳ್ಳಿಯಲ್ಲಿ ವಾಸ ಇರ್ತಾರೆ ಅನ್ಸುತ್ತೆ. ಹಾಗಾಗಿ ಲೇಟ್ ಹವರ್ಸ್ ಇದ್ದರೆ ನಮ್ಮ ಪುಣ್ಯ.. ಟೈಂ ವೇಸ್ಟ್ ಮಾಡೋದು ಬೇಡ, ಪಾಪ ತುಂಬಾ ನೋವು ತಿಂತಾ ಇದೆ' ಎಂಬ ಚಿದಂಬರನ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿ, 'ಅಪರೂಪಕ್ಕೆ ಹೇಗೂ ಸಂಜೆ ವೇಳೆಗೆ ಸರಿಯಾಗಿ ಆಗುಂಬೆಗೆ ಬಂದಿದ್ದೀವಿ. ನಾನಂತೂ ಹುಟ್ಟಿದಾಗಿನಿಂದ ಇಲ್ಲಿನ ಸನ್‌ಸೆಟ್ ನೋಡಿಯೇ ಇಲ್ಲ.. ನೋಡಿಕೊಂಡೇ ಹೋಗೋಣ..' ಎಂಬ ಹೆಂಡತಿಯ ಮಾತಿಗೆ ಮನೆಮಂದಿಯೆಲ್ಲ ದನಿಗೂಡಿಸಿದ್ದರಿಂದ, ಬಸುರಿಯ ಆಸೆ ಎಂದು ವಿಧಿಯಿಲ್ಲದೇ ಒಪ್ಪಿಕೊಳ್ಳಲೇಬೇಕಾಯಿತು. ಅಲ್ಲದೇ ತಾನೂ ಹೈಸ್ಕೂಲಲ್ಲಿದ್ದಾಗ ಸ್ಕೂಲ್‌ಟೂರ್‌ಗೆಂದು ಬಂದಿದ್ದಾಗ ನೋಡಿದ್ದು.. ಆಮೇಲೆ ಎಷ್ಟೋ ಸಲ ಬಂದರೂ, ಬಂದಾಗೆಲ್ಲ ಮೋಡ ಮುಸುಕಿಕೊಂಡೋ, ಮಳೆ ಸುರಿಯುತ್ತಲೋ ಇರುತ್ತಿದ್ದುದರಿಂದ ನೋಡೋಕ್ಕೇ ಆಗಿರಲಿಲ್ಲ.. ಒಂದ್ಹತ್ತು ನಿಮಿಷ ನೋಡಿಯೇಬಿಡೋಣ ಎಂಬ ಒಳ ಆಸೆಯೂ ಸೆಳೆಯುತ್ತಿತ್ತು. ಅದರ ಬಗ್ಗೆ ಏನೂ ಗೊತ್ತಿರದ ಮೋಹನ ಓಕೆ ಎಂದಷ್ಟೇ ಹೇಳಿ ಸುಮ್ಮನಾದ. 'ಈ ಪ್ರಪಂಚದಲ್ಲಿ ಸಣ್ಣವರಾಗಿ ಹುಟ್ಟೋದೇ ತಪ್ಪು ಅಲ್ವಾ ಮೋಹನ..' ಎಂದದ್ದಕ್ಕೆ ಯಾಕೆಂದು ತಿಳಿಯದೇ ಕಂಗಾಲಾಗಿ ನೋಡುವಾಗ್ಗೆ, 'ಎಲ್ಲವನ್ನೂ ದೊಡ್ಡವರು ಹೇಳಿದಂತೆ ಕೇಳಬೇಕಾಗುತ್ತಲ್ಲ.. ಯಾಕೆಂದರೆ, ಅವರು ಚಿಕ್ಕವರಿಗಿಂತಲೂ ಮೊದಲೇ ಈ ಭೂಮಿ ಮೇಲೆ ಹುಟ್ಟಿ ಇಲ್ಲಿನ ಹಕ್ಕನ್ನ ಪಡ್ಕೊಂಡ್ಬಿಟ್ಟಿರ್ತಾರಲ್ಲ..' ಎಂಬ ಲಾಜಿಕಲ್ ಉತ್ತರ ಕೊಟ್ಟು ಮತ್ತೆ ಯೋಚಿಸುವಂತೆ ಮಾಡಿಬಿಟ್ಟ.

❖

ಆದಾಗ್ಯೂ ಜಿಂಕೆಮರಿಯ ನೋವು ತನ್ನದೇ ನೋವೇನೋ ಎನ್ನುವಂತೆ ತಡಬಡಾಯಿಸುತ್ತಿದ್ದ ಚಿದಂಬರ. ಎಷ್ಟೊತ್ತಾದರೂ ಈ ಹಾಳು ಸೂರ್ಯ ಮುಳುಗುತ್ತಲೇ ಇಲ್ಲವಲ್ಲ ಎಂದು ಹಪಹಪಿಸುತ್ತಿದ್ದ. ಬೆಟ್ಟದ ಮೇಲೆ ನಿಂತು ನೋಡುತ್ತಿದ್ದರೆ ಎಂತಹ ವೈರಾಗ್ಯ.. ಕಣ್ಣು ಹಾಯಿಸುವಷ್ಟು ದೂರ ವಿಶಾಲವಾದ

ಈ ಭೂಪ್ರದೇಶ.. ಅದರಾಚೆಗೆ ಭೂಮಿ ಗುಂಡಗಿದೆಯೆಂಬ ಸತ್ಯವನ್ನು ಸಾಬೀತುಪಡಿಸುವಂತೆ, ಬೋಗುಣಿಯಂತೆ ಬೆಂಡಾಗಿ ಕಾಣುವ ಕಡಲು.. ಇದೆಲ್ಲದರ ಒಡೆಯ ಅವತ್ತಿನ ಸಾಮ್ರಾಟ್ ಅಶೋಕನೋ, ಅಕ್ಬರನೋ, ಮಯೂರವರ್ಮನೋ, ಕೃಷ್ಣದೇವರಾಯನೋ.. ಇಲ್ಲ ಇವತ್ತಿನ ಮುಖ್ಯಮಂತ್ರಿ, ಪ್ರಧಾನಮಂತ್ರಿಗಳೋ.. ಅಥವಾ ನಮ್ಮಂತಹ ನೂರಾರು ದೇಶಗಳನ್ನು –ಹಿಂದಿನ ಇಂಗ್ಲೆಂಡ್‌ನಂತೆ– ಅನೇರವಾಗಿ ತನ್ನ ಕಪಿಮುಷ್ಟಿಯಲ್ಲಿಟ್ಟುಕೊಂಡಿರುವ ಅದರ ಪಳೆಯುಳಿಕೆಯೇ ಆದ ಅಮೆರಿಕಾವೋ.. ಆ ರಾಜಪ್ರಭುತ್ವ, ಈ ಪ್ರಜಾಪ್ರಭುತ್ವ.. ಶೇಕಡ ಎಪ್ಪತ್ತೈದರಷ್ಟಿರುವ ಕಡಲನ್ನು ಬಿಟ್ಟು ಕೇವಲ ಇಪ್ಪತ್ತೈದರಷ್ಟಿರುವ ಈ ಭುವಿಯನ್ನು ಪೀಸುಪೀಸು ಮಾಡಿಕೊಂಡು ಆಳಲೂ ಏನೆಲ್ಲ ತಪರಾಕಿಗಳು..

ಕಣ್ಣಿಗೆ ಕಾಣುವುದಕ್ಕಿಂತಲೂ ಸಾವಿರಾರು ಪಾಲು ವಿಸ್ತಾರವಾದ ಕಣ್ಣಿಗೆ ಕಾಣದ ಭೂಮಂಡಲ, ಇಂಥ ಒಂಭತ್ತು ಗ್ರಹಗಳನ್ನು ತನ್ನ ನಿಯಂತ್ರಣದಲ್ಲಿಟ್ಟು ಕೊಂಡಿರುವ ಸರದಾರ ಧಗಧಗಿಸಿ ಉರಿಯುವ ಬಣವೆಯಂತೆ, ಕೆಂಬಣ್ಣದ ಬುಗುರಿಯಂತೆ ಏನೆಲ್ಲ ತರಾವರಿ ಅವತಾರಗಳನ್ನು ತೋರುತ್ತಿದ್ದರೆ, ಇಂತಹ ಯಃಕಶ್ಚಿತ್ ನಾಲ್ಕು ಇಂಚಿನ ಭೂಮಿಯ ಮೇಲಿನ ನಾಲ್ಕು ದಿನದ ವಾರಸುದಾರಿಕೆಗಾಗಿ ಕಿತ್ತಾಡುತ್ತಿರುವ ನಾವು ಮನುಷ್ಯರು ಎಷ್ಟು ಕ್ಷುಲ್ಲಕವಲ್ಲವಾ ಅನ್ನಿಸಲಾರಂಭಿಸಿತು..

ಬೆಂಗಳೂರಂಥ ಊರಲ್ಲಿ ಕೇವಲ ಚದರ ಅಡಿಯಷ್ಟಗಲ –ಇನ್ನು ಮುಂದೆ ಚದರ ಇಂಚು ಎಂದು ಲೆಕ್ಕ ಹಾಕಬೇಕಾಗಬಹುದೇನೋ– ಭೂಮಿಗೆ ಹತ್ತುಹದಿನೈದು ಸಾವಿರ ರೂಪಾಯಿಯಂತೆ.. ಕೋಟ್ಯಂತರ ಅಡಿಯಗಲದ ಇಡೀ ಬೆಂಗಳೂರಿನ ಬೆಲೆಯೆಷ್ಟಿರಬಹುದು?.. ಸರಾಸರಿ ಬೆಲೆಯನ್ನು ಎಲ್ಲ ಕಡೆಗೂ ಅಳವಡಿಸಿದರೆ ಇಡೀ ಭೂಮಿಯ ಬೆಲೆಯೆಷ್ಟಾಗಬಹುದು.. ಅದರಲ್ಲೂ ಡೆಲ್ಲಿ, ಕಲ್ಕತ್ತ, ಬಾಂಬೆ.., ಲಂಡನ್, ನ್ಯೂಯಾರ್ಕ್, ವಾಷಿಂಗ್ಟನ್ ಇಲ್ಲೆಲ್ಲ ಬೆಂಗಳೂರಿಗಿಂತಲೂ ಜಾಸ್ತಿ ಬೆಲೆಯಲ್ಲವಾ.. ಹೀಗೆ ಅವನ ಲಹರಿ ಎಲ್ಲೆಲ್ಲೋ ಹರಿಯುತ್ತಿತ್ತು.

ಸೂರ್ಯ ಮುಳುಗುತ್ತಿದ್ದಂತೆ ಸಿನೆಮಾ ಬಿಟ್ಟಂತೆ ಪ್ರವಾಸಿಗರೆಲ್ಲ ದಡಬಡನೆ ತಮ್ಮ ತಮ್ಮ ಕಾರುಗಳ ಕಡೆ ದೌಡಾಯಿಸುವವರೆಗೂ ಕಾರಲ್ಲಿ ಕೂಡಿಹಾಕಿದ್ದ ಜಿಂಕೆಮರಿಯನ್ನು ಮರೆತೇಬಿಟ್ಟಿದ್ದ ಚಿದಂಬರ.

❖

ಕಾರಿನ ಬಳಿ ಬರುತ್ತಿದ್ದಂತೆಯೇ ಜಿಂಕೆ ಮರಿ ಒಳಗೆಲ್ಲೂ ಕಾಣದಿದ್ದುದರಿಂದ ಆತಂಕಗೊಂಡ. ಇತ್ತೀಚೆಗಷ್ಟೇ ಕಾರ್‌ಗ್ಲಾಸ್‌ನ ಟಿಂಟ್ ತೆಗೆದಿದ್ದರಿಂದ ಸ್ಕೆಲೆಟನ್‌ನಂತೆ ಒಳಗಿನದೆಲ್ಲ ಸುಸ್ಪಷ್ಟ ಕಾಣುತ್ತಿದ್ದರೂ ಎಲ್ಲೂ ಅದರ ಸುಳಿವು ಕಾಣದೇ ಪರಿತಪಿಸಿದ. ಹಾಕಿದ್ದ ಎಲ್ಲಾ ಡೋರ್‌ಗಳು ಹಾಕಿದಂತೆಯೇ ಇದ್ದವು. ರಿಮೋಟಿಂದ ಅನ್‌ಲಾಕ್

ಮಾಡಿ ಡೋರ್ ತೆಗೆಯುತ್ತಿದ್ದಂತೆ ಗಬ್ಬುವಾಸನೆ ರಪ್ಪನೆ ಮೂಗಿಗೆ ಬಡಿಯಿತು. ಕುಳಿತುಕೊಳ್ಳುವ ಸೀಟುಗಳ ಮೇಲೆಲ್ಲ ತುಳಿದು, ಅಲ್ಲೆಲ್ಲ ತೆಳ್ಳಗೆ ಉಚ್ಚೆಕೊಂಡು ಗಲೀಜು ಎಬ್ಬಿಸಿಬಿಟ್ಟಿತ್ತು. ಹಾಗೇ ಕಣ್ಣು ಹಾಯಿಸಿದರೆ ಇಡೀ ಕಾರಿನ ತುಂಬಾ ಎಗರಾಡಿ ಒದರಾಡಿರುವುದು ಕಾಣುತ್ತಿತ್ತು. ಮೇಲಾಗಿ ಕಾರಿನೊಳಗೆಲ್ಲ ಸೆಂಟಿನ ಸುಗಂಧವನ್ನು ಮೀರಿ ಇದರ ಸಗಣಿ ಗಂಜಲದ ವಾಸನೆಯೇ ಮೂಗಿಗೆ ರಾಚುತ್ತಿತ್ತು. ಕೊನೆಗೆ ಇಂಚಿಂಚೂ ಬಿಡದೇ ತಡಕಾಡಿದಾಗ ಸೀಟಿನ ಕೆಳಗೆ ತೆಪ್ಪಗೆ ಅವಿತುಕೊಂಡಿದ್ದ ಜಿಂಕೆಮರಿಯನ್ನು ಕಂಡು 'ಅಯ್ಯೋ ಪಾಪ..' ಎನಿಸಿ, ಅದರ ತಲೆಸವರಿ, ಹೊರಗೆ ಎತ್ತಿಕೊಂಡು ಮೈದಡವಿದ. ಇನ್ನು ಕುಟುಂಬದವರೆಲ್ಲ ಬಂದು ಹೊಸ ಕಾರಿನ ಈ ಅವಸ್ಥೆಯನ್ನು ಕಂಡರೆ ಅದನ್ನು ಇಲ್ಲಿಯೇ ಬಿಸಾಕಿಯೇ ಹೋಗುವಂತೆ ಹಠ ಹಿಡಿಯದಿರುವುದರಲ್ಲಿ ಯಾವುದೇ ಸಂಶಯವೂ ಕಾಣದೇ ಕೂಡಲೇ ಕಾರಿನಲ್ಲಿದ್ದ ಹಳೇ ಬಟ್ಟೆಯಿಂದ ಎಲ್ಲವನ್ನೂ ಒರೆಸಿ ನಾಲ್ಕು ಡೋರುಗಳನ್ನೂ ಗಾಳಿಗೆ ತೆರೆದುಬಿಟ್ಟ. ತನ್ನ ನಿರೀಕ್ಷೆಯಂತೆ, ಮೂಗು ಒಳಗಿಟ್ಟ ಕೂಡಲೇ –ವಾಸನೆಯ ವಿಷಯದಲ್ಲಿ ಪೋಲೀಸ್ ನಾಯಿಗಿಂತಲೂ ಚುರುಕಾಗಿದ್ದ– ಹೆಂಡತಿ ಸುಮಂಗಲಿ 'ಇದೇನು ಗಬ್ಬು ವಾಸನೆ?' ಎಂದು ಮೂಗು ಮುರಿದಳು. ಚಿದಂಬರ, 'ಕಾರಿನ ಗ್ಲಾಸ್‌ಗಳನ್ನೆಲ್ಲ ಹಾಕಿಬಿಟ್ಟಿದ್ದರಿಂದ.. ಗಾಳಿಯಾಡದೇ..' ಎಂದೇನೋ ಸಮಜಾಯಿಷಿ ನೀಡಲು ನೋಡಿದರೂ ಆಕೆಗೆ ಅದು ಸಮರ್ಥನೆಯ ಪ್ರಲಾಪವೆಂಬುದು ಅರಿವಾದರೂ, ಆತನ ಪ್ರಾಣಿಪ್ರೀತಿಯನ್ನು ಪ್ರಶ್ನಿಸಲಾರದೇ, ದಟ್ಟಕಾಡಿನಲ್ಲಿ ಬಿಸಿಲನರಸುತ್ತ ಮುಗಿಲೆತ್ತರಕ್ಕೆ ನೇರವಾಗಿ ಬೆಳೆದು ನಿಂತಿರುವ ಮರಗಳ ತುದಿಯನ್ನು ಕಿಟಕಿಯಲ್ಲಿ ನೋಡುತ್ತ ಕುಂತುಬಿಟ್ಟಳು.

❖

ಚೆಕ್‌ಪೋಸ್ಟ್‌ನಲ್ಲಿ ಫಾರೆಸ್ಟ್‌ಗಾರ್ಡ್ ಬಿಳೀಬಣ್ಣದ ಕಾರನ್ನು ಅಷ್ಟು ದೂರದಿಂದಲೇ ಕಂಡವನು ರಸ್ತೆಗಡ್ಡವಾಗಿ ಸ್ಥಾಪಿಸಿದ್ದ ಉದ್ದನೆಯ ಮರದ ತಡೆಯನ್ನು, ಇನ್ನೊಂದು ಬದಿಗೆ ಹಿಂಜಗ್ಗಲು ಬೇಕಾದಷ್ಟೇ ಸಮತೂಕದ ಕಲ್ಲುಗಳನ್ನು ಕಟ್ಟಿ ಏತದಂತೆ ಮಾಡಿಕೊಂಡಿದ್ದನ್ನು, ಹಗ್ಗ ಬಿಚ್ಚಿ ಎತ್ತಿ ದಾರಿಮಾಡಿಕೊಟ್ಟ. ಕಾರಿನ ವೇಗ ಕಡಿಮೆಯಾದುದರಿಂದ ಕಿಟಕಿಯಿಂದ ಛಂಗನೆ ಎಗರಲು ಪ್ರಯತ್ನಿಸಿದ ಜಿಂಕೆಮರಿಯನ್ನು ಕಂಡು, ಛಕ್ಕನೆ ಗೇಟಿನ ಹಗ್ಗವನ್ನು ಎಳೆದು ಕಾರನ್ನ ತಡೆಹಾಕಿದವನು ಟ್ರಾನ್ಸ್‌ಪರೆಂಟ್ ಗ್ಲಾಸಿನೊಳಗಿಂದ ಕಾರೊಳಗೆಲ್ಲ ಒಮ್ಮೆ ಕಣ್ಣು ಹಾಯಿಸಿದ. ಅಸ್ತವ್ಯಸ್ತ ಬಟ್ಟೆಗಳೊಂದಿಗೆ ಮೈಮರೆತು ಮಲಗಿದ್ದ ಹೆಂಗಸರನ್ನಷ್ಟೇ ಕಂಡು ತುಸು ನಾಚಿಕೊಂಡು ದೃಷ್ಟಿಯನ್ನು ಹಿಂತೆಗೆದ. ಕೊನೆಗೆ ಕಾರಿನಿಂದ ಢಿಕ್ಕಿಹೊಡೆದು ಜಿಂಕೆಯನ್ನು ಕದ್ದೊಯ್ಯುತ್ತಿರುವುದಾಗಿ ಭಾವಿಸಿ ಇಡೀ ಕಾರಿನ ಸುತ್ತ ಒಂದು ಸುತ್ತು ಬಂದ. ಎಲ್ಲೂ ಅಪಘಾತದ, ರಕ್ತ ಅಂಟಿದ ಸೂಚನೆ ಕಾಣದೇ, ಛಾರ್ಜಸ್ ಹೊರಿಸಲು

ಕಾರಣವೇ ತೋಚದೆ ಇರುವಾಗ್ಗೆ ಹಿಂದಿನಿಂದ ಕಾರೊಂದು ಬಂದುದರಿಂದ ದಾರಿಬಿಡಲು ಪಕ್ಕಕ್ಕೆ ಹಾಕಿಕೊಳ್ಳುವಂತೆ ಸೂಚಿಸಿದ.

ಯಾಕೋ ಆತ ವಿಷಯವನ್ನು ಸೀರಿಯಸ್ಸಾಗಿ ತೆಗೆದುಕೊಳ್ಳುವಂತೆ ಕಂಡುದರಿಂದ ಮಾತಾಡಲು ಗ್ಲಾಸನ್ನು ಸ್ವಲ್ಪ ಕೆಳಗಿಳಿಸುತ್ತಿದ್ದಂತೆಯೇ ಮತ್ತೊಮ್ಮೆ ಹೊರಜಿಗಿಯಲು ಪ್ರಯತ್ನಿಸಿತು ಜಿಂಕೆಮರಿ. ಇಡೀ ಕಾಡಿನ ಕಾವಲುದಾರಿಕೆಯ ವಾರಸುದಾರ ತಾನೇ ಎನ್ನುವ ಗತ್ತಿನಲ್ಲಿ ಕೆಳಗಿಳಿಯುವಂತೆ ತಾಕೀತು ಮಾಡಿದ. ಜಿಂಕೆಮರಿಯೊಂದಿಗೆ ಕೆಳಗಿಳಿದ ಚಿದಂಬರ, ಯಾರೋ ಢಿಕ್ಕಿಹೊಡೆದು ರಸ್ತೆಯಲ್ಲಿ ಬಿದ್ದಿದ್ದ ಅನಾಥ ಪ್ರಾಣಿಯನ್ನು ವೆಟರ್ನರಿ ಡಾಕ್ಟರಾದ ತಾನು ಶುಶ್ರೂಷೆ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ಪರಿಪರಿಯಾಗಿ ಹೇಳಿದರೂ ಆತ ಕೇಳಲಿಲ್ಲ. ತಮ್ಮ ಇಲಾಖೆಯ ಕಂಟ್ರೋಲ್ ರೂಮಿಗೆ ಫೋನ್ ಮಾಡಿ ಕಂಪ್ಲೆಂಟ್ ನೀಡುವವನಂತೆ ಬೆದರಿಕೆ ಹಾಕಿ, ತನ್ನ ಪಾಚಿಗಟ್ಟಿದ್ದ ಷೆಡ್‌ನೊಳಗಿದ್ದ ದಶಮಾನಗಳ ಹಿಂದಿನ, ಬೆರಳ ಸ್ಪರ್ಶಕ್ಕೇ ಬಣ್ಣವೆಲ್ಲ ಸವೆದುಹೋಗಿ ಸುರುಳಿ ಸುತ್ತಿಕೊಂಡಿದ್ದ ವೈರನ್ನು ರಿಸೀವರನ್ನು ಕೆಳಕ್ಕೆ ಇಳೇಬಿಟ್ಟು ಬುಗುರಿಯಂತೆ ತಿರುಗಿಸುತ್ತ ಸರಿಪಡಿಸಿಕೊಂಡು, ನಂಬರಿನ ಮೇಲೆ ಖಾಲಿಯಿದ್ದ ತೂತಿನಲ್ಲಿ ತೋರು ಬೆರಳಿಟ್ಟು, ನಾಲ್ಕು ನಂಬರಿನ ಸಂಖ್ಯೆಗೆ ಡಯಲ್ ಮಾಡಿಯೇ ಮಾಡಿದ. ಯಾವ ಲೈನೂ ಸಿಗಲಿಲ್ಲ. ಚಿದಂಬರ ತನ್ನ ಆ್ಯಪಲ್ ಮೊಬೈಲ್ ತೋರಿಸಿ, 'ಯಾರಿಗೆ ಮಾಡ್ಬೇಕು ಹೇಳಿ..' ಎಂದರೂ ಆ ನಂಬರಿನ ಸೀಕ್ರೆಟ್ ಈತನಿಗೆ ಅರ್ಥವಾಗಿಬಿಡುತ್ತದೆನ್ನುವಂತೆ ಹೇಳದೇ, ಮತ್ತೆ ಬಂದ ವಾಹನಕ್ಕೆ ದಾರಿ ಬಿಡಲು ಓಡಿದ.

'ನೋಡಪ್ಪ.. ಇದಕ್ಕೆ ಆದಷ್ಟು ಬೇಗ ಚಿಕಿತ್ಸೆ ನೀಡಬೇಕು.. ಇಲ್ಲಾಂದ್ರೆ ಅದು ಸತ್ತು ಹೋಗುತ್ತೆ.. ಏನೋ ಮಾನವೀಯತೆ ಅಂತ ರಸ್ತೆಯಲ್ಲಿ ಆ್ಯಕ್ಸಿಡೆಂಟಾಗಿ ಬಿದ್ದಿದ್ದನ್ನ ಎತ್ಕಂಬಂದಿದೀವಿ.. ಬ್ಯಾಡ ಅಂದ್ರೆ ನೀನೇ ಇಟ್ಕೊಂಡು ಟ್ರೀಟ್‌ಮೆಂಟ್ ಕೊಡಿಸು..' ಎಂದರೂ ಆತ ಜಗ್ಗಲಿಲ್ಲ. 'ಇಲ್ಲಿ ಹತ್ತಿರದಲ್ಲಿ ಯಾರಾದ್ರೂ ವೆಟರ್ನರಿ ಡಾಕ್ಟರ್ ಇದ್ರೆ ಹೇಳು, ಟ್ರೀಟ್‌ಮೆಂಟ್ ಕೊಡಿಸಿ ಮತ್ತೆ ಇಲ್ಲೇ ತಂದುಬಿಟ್ಹೋಗ್ತೀನಿ..' ಎಂದರೂ ಬಗ್ಗದಿರುವುದನ್ನು ಕಂಡು 'ಒಂದುವೇಳೆ ಇದೇನಾದ್ರೂ ಸತ್ಹೋದ್ರೆ ಆ ಪಾಪ ಎಲ್ಲ ನಿಂಗೇ ತಟ್ಟುತ್ತೆ..' ಎಂದು ಪಾಪಪ್ರಜ್ಞೆಯನ್ನು ಬಿತ್ತಲು ಪ್ರಯತ್ನಿಸಿದರೂ ಜಪ್ಪೆನ್ನಲಿಲ್ಲ. 'ನಮ್ಮ ಆಫೀಸರ್‌ಗೆ ಫೋನ್ ಮಾಡಿದೀನಿ, ಇನ್ನೇನು ಬಂದುಬಿಡ್ತಾರೆ ಇರ್ರೀ, ಅವರಿಗೇ ಹೇಳೀವ್ರಂತೆ..' ಎಂದು ಕಡೆಯ ಅಸ್ತ್ರಬಿಟ್ಟ. ಆತನ ಮ್ಯಾನರಿಸಂ, ಸುಳ್ಳು ಇವುಗಳನ್ನೆಲ್ಲ ಅರ್ಥಮಾಡಿಕೊಳ್ಳಲು ಚಿದಂಬರನಿಗೆ ಸಾಧ್ಯವಾಗಲಿಲ್ಲ.

ಹೀಗೇ ಅರ್ಧಗಂಟೆ ಗಂಟೆಯಾದ ಮೇಲೆ ಇನ್ನೂ ತಾಳೆನೆನ್ನುವಂತೆ ಕಾಳಿಯಂತೆ ಎದ್ದ ಸುಮಂಗಲಿ, 'ರ‍್ರೀ.. ಅದು ಬದುಕಿದ್ರೆಷ್ಟು, ಸತ್ರೆಷ್ಟು? ಅದರಿಂದ ನಿಮಗೇನ್ರೀ ಆಗ್ಬೇಕಾಗಿದೆ. ಬದುಕಿರೋ ಹೆಂಗಸ್ರು ಮಕ್ಳಿಗಿಂತ ಸಾಯ್ತಾಯಿರೋ ಅದ್ಯಾವ್ದೋ

ಕಿತ್ತೋಗಿರೋ ಕಾಡುಪ್ರಾಣಿ ಮುಖ್ಯ ಏನ್ರೀ ನಿಮಗೆ.. ಕತ್ಲಾಗೋಗಿದೆ.. ಕಾಡೊಳಗೆ ಕಳ್ರು ಕಾಕರು ಕಾಟ ಬೇರೆ.. ಅಂತದ್ರಾಗೇ ಅದೇನ್ರಿ ಒಸಕಾಟ ನಿಮ್ದು..?' ಎಂದು ಗಂಡನಿಗೆ ಝಾಡಿಸಿದಳು. ಹಾಗೆ ಝಾಡಿಸಿದ್ದು ತನಗೇ ಎಂದರಿತ ಗಾರ್ಡ್, 'ನಮ್ಮ ಕರ್ತವ್ಯ ನಾವು ಮಾಡ್ತೀವಮ್ಮ.. ನಾವೇನ್ಮಾಡಕ್ಕಾಗುತ್ತೆ. ಮೇಲಾಧಿಕಾರಿಗಳ ಇನ್‌ಸ್ಟ್ರಕ್ಷನ್ಸ್ ನಾವು ಪಾಲನೆ ಮಾಡೋದಷ್ಟೇ ನಮ್ಮ ಕೆಲಸ..' ಎಂದು ಸಮಜಾಯಿಸಿ ನೀಡಲು ಬಂದ. 'ಅಯ್ಯೋ ನಿಮ್ದುನ್ ನೀವೇ ಇಟ್ಕಂಡು ಉಪ್ಪಿನಕಾಯಿ ಹಾಕ್ಕಳ್ರೀ..' ಎಂದವಳು, ಗಂಡನಿಗೆ 'ಬಿಸಾಕಿ ಬರ್ರೀ, ಕೂತ್ಕಳ್ರೀ..' ಎಂದು ಧಮಕಿ ಹಾಕಿದಳು.

'ಏನೋ ಐವತ್ತೋ ನೂರೋ ಸಿಗುತ್ತೆ ಅಂದ್ರೆ, ಈಯಮ್ಮುಂದೊಂದು ಕಾಟ..' ಎಂದು ಗೊಣಗರಿದದ್ದನ್ನು ಕೇಳಿಸಿಕೊಂಡ ಮೋಹನ, ನೂರರ ಗರಿಗರಿ ನೋಟನ್ನು ಇರಿದು ತೋರಿಸಿದಾಕ್ಷಣ, ಖುಷಿಯನ್ನು ತೋರ್ಪಡಿಸದೇ ಓಡಿಬಂದು ಏತದಂತೆ ಗೇಟನ್ನು ಎತ್ತಿ, 'ಟ್ರೀಟ್‌ಮೆಂಟ್ ಕೊಡಿಸಿ ವಾಪಸ್ ತಂದುಬಿಟ್ಹೋಗ್ಬೇಕು ಮತ್ತೆ..' ಎಂದು ಮುಖ ಮುಚ್ಚಿಕೊಳ್ಳುವ ಪ್ರಯತ್ನವಾಗಿ ಕಂಡೀಷನ್ ಹಾಕುತ್ತ ದಾರಿಬಿಟ್ಟ.

'ಇದನ್ನ ಮೊದ್ಲೇ ಹೇಳಿದ್ರೆ ನಮ್ಮ ಟೈಮಾದ್ರೂ ಉಳೀತಿತ್ತಲ್ಲಯ್ಯ..' ಎಂದು ಕಾರನ್ನು ಅರ್ಧಗೇಟಿಗೆ ತಂದು ನಿಲ್ಲಿಸಿಕೊಂಡು, 'ಈಗ ನಾನು ಹೋಗೋದಿಲ್ಲ ಏನ್ಮಾಡ್ತೀಯಾ..' ಅನ್ನೋಹಾಗೆ ವಾದ ಶುರುಮಾಡಿದ ಮೋಹನ. 'ನಿಮಗಿಂತ ಮುಂಚೆ ಒಂದು ಬಿಳಿ ಕಾರು ಹೋಯ್ತಲ್ಲ.. ಅದರಲ್ಲಿ ಸಿನಿಮಾದೋರ ಥರ ಹುಡುಗ ಹುಡುಗೇರು ಇದ್ರು.. ಅದ್ರ ಬಾನೆಟ್ ಬೆಂಡಾಗಿತ್ತು.. ಆಗ್ಲೇ ನನಗೆ ಅನುಮಾನ ಬಂದಿತ್ತು..' ಎಂದು ಮಾತು ಸೇರಿಸಿದ ಗಾರ್ಡ್. 'ಮತ್ತೆ ಅವ್ರುನ್ನ ಹಿಡ್ಕಬೇಕಾಗಿತ್ತು, ನಮಗ್ಯಾಕೆ ತೊಂದರೆ ಕೊಟ್ಟೆ..?' ಎಂದು ಟೇಬಲ್ಲು ಗುದ್ದಿ ಕೇಳುವವನಂತೆ ಕ್ರಾಸ್‌ಕ್ವಶ್ಚನ್ ಕೇಳಿದ ಮೋಹನ. 'ಅವ್ರೆಲ್ಲ ಕುಡುದ್ಬಿಟ್ಟಿದ್ರು ಸಾರ್..' ಎಂದ, ಯಾವುದೋ ಗುಟ್ಟನ್ನು ಹೇಳುವವನಂತೆ. 'ಅಂದರೆ ನಾವು ಕುಡಿದಿಲ್ಲ ಅಂತ ನಮ್ಮನ್ನ ಹಿಡ್ಕಂಡಿದ್ದೀಯಾ..' ಮೋಹನನ ಮರುಪ್ರಶ್ನೆ. 'ಅವ್ರೂ ನಿಮ್ಮೋರೆ ಅಲುವ್ರ.. ನಿಮ್ಮನ್ನ ಹಿಡ್ಕಂಡ್ರೆ ಅವ್ರ ವಾಪಸ್ಸು ಬತ್ತಾರೆ ಅಂದ್ಕಂಡಿದ್ದೆ..' ಎಂದೇನೋ ಸಮಜಾಯಿಷಿ ಹೇಳುತ್ತಿದ್ದಂತೆಯೇ ಈ ಅನಗತ್ಯ ವಾದದಿಂದ ರೋಸಿ ಹೋದ ಚಿದಂಬರ, ಬಾಯಿ ಮುಚ್ಚಿಕೊಂಡು ಮುಂದೆ ಹೋಗುವಂತೆ ಮೋಹನನಿಗೆ ತಾಕೀತು ಮಾಡಿದ.

'ಸರ್ಕಾರದ ಒಬ್ಬ ಸಾಮಾನ್ಯ ಡಿ ಗ್ರೂಪ್ ನೌಕರ ಕೂಡ ತನ್ನ ಅಧಿಕಾರವನ್ನ ಹೇಗೆ ಚಲಾಯಿಸಬಲ್ಲ ನೋಡು.. ಒಂದು ತಿಳ್ಕೋ, ಸರ್ಕಾರದ ಯಾವುದೇ ದರ್ಜೆಯ ನೌಕರ ಮಾತಾಡಿದ್ರೂ ಅದು ಸರ್ಕಾರದ ಮಾತಾಗಿರುತ್ತೆ.. ಆದ್ದರಿಂದ ಅನಗತ್ಯವಾಗಿ ಮಾತಾಡ್ಬಾರ್ದು..' ಎಂದ. 'ಅವನು ಚಮಕಾಯ್ಸಿದ್ನಲ್ಲ, ಅದಕ್ಕೆ ನಾನೂ ಒಂಚೂರು ಚಮ್ಕಾಯ್ಸನಾ ಅಂತಿದ್ದೆ..' ಎಂದೇನೇನೋ ಹೇಳುವವನಿದ್ದ. 'ಅಷ್ಟರೊಳಗೆ ಯಾರಾದ್ರೂ ಫಾರೆಸ್ಟ್ ಆಫೀಸರ್ ಬಂದಿದ್ರೆ.. ಜಿಂಕೆ ಹೊಡೆದು ರೆಡ್‌ಹ್ಯಾಂಡಾಗಿ ಸಿಕ್ಹಾಕ್ಕಂಡಿದ್ದೀಯಾ

ಅಂತ ಒಳೀಕ್ಹಾಕಿದ್ರೆ ಏನ್ಮಾಡ್ತಿದ್ದೆ..' ಎಂದು ಬಾಯಿ ಮುಚ್ಚಿಸಿದರೂ, ಕೊನೆಯದಾಗಿ ತಾನೇ ಮಾತಾಡಬೇಕೆಂಬ ಹಠದಲ್ಲಿ 'ಹೋಗ್ಲಿ, ನೂರು ರೂಪಾಯಿಗೆ ಕಳ್ಳುಪಚ್ಚಿಯಲ್ಲ ಹೋದ್ರು ನಾಲ್ಕು ಕೆ.ಜಿ. ಜಿಂಕೆ ಮಾಂಸ ಸಿಕ್ಕುತ್ತಲ್ಲ, ಅಷ್ಟೇ ಸಾಕು..' ಎಂದು ಖುಷಿ ವ್ಯಕ್ತಪಡಿಸಿದ.

❖

ತೀರ್ಥಹಳ್ಳಿಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿಕೊಂಡು ಮನೆಗೆ ಬಂದ ಚಿದಂಬರ ಕಾರು ಇಳಿಯುತ್ತಿದ್ದಂತೆಯೇ ಬಾಲ ಅಲ್ಲಾಡಿಸುತ್ತ ಬಂದ ಟೋನಿ, ತನ್ನ ಪ್ರೀತಿಯನ್ನು ಕಿತ್ತುಕೊಳ್ಳಲು ಬಂದಿರುವ ಸವತಿಯಂತೆ ಅದನ್ನು ಗುರಾಯಿಸಿ ನೋಡುತ್ತ, ಗುರುಗುಡುತ್ತ ಏಕಾಏಕಿ ಆಕ್ರಮಣ ಮಾಡಲು ನೋಡಿತು. ಚಿದಂಬರನ ಗದರಿಕೆಗೆ ಬೆದರಿ ಅದು ತನ್ನ ಗೂಡು ಸೇರಿಕೊಂಡರೂ ಜಿಂಕೆಮರಿ ಮಾತ್ರ ತನ್ನ ಪ್ರಾಣ ಅಪಹರಿಸಲು ಬಂದ ಯಮದೂತನನ್ನು ಕಂಡಂತೆ, ಆ್ಯಕ್ಸಿಡೆಂಟಾದದ್ದಕ್ಕಿಂತಲೂ ಹೆಚ್ಚು ಭಯಪಟ್ಟು ನಡುಗಲಾರಂಭಿಸಿತು. ಎದೆಗೆ ಅವುಚಿಕೊಂಡು ಅದಕ್ಕೆ ಸುರಕ್ಷತೆಯ ಭಾವ ಮೂಡಿಸಿ, ಮನೆಯೊಳಗೆ ತಂದು ಒಂದು ಹಳೆಯ ಬೆಡ್‌ಶೀಟನ್ನು ಹಾಸಿಗೆಯಂತೆ ಮಾಡಿ ಮೂಲೆಯಲ್ಲಿ ಮಲಗಿಸಿದ. ಛಳಿಯಾಗಬಹುದೆಂದು ಅದರ ಮೈಮೇಲೆ ಬಟ್ಟೆ ಹಾಕಿದರೆ ತನ್ನ ಮೇಲೆ ಮತ್ಯಾರೋ ಆಕ್ರಮಣ ಮಾಡುತ್ತಿರುವಂತೆ ಭ್ರಮಿಸಿ ಫಕ್ಕನೆ ಎದ್ದುಬಿಡುತ್ತಿತ್ತು. ಕಾಡಿನ ವಾತಾವರಣಕ್ಕಿಂತ ಮನೆಯೊಳಗಿನ ಹವೆಯೇ ಬೆಚ್ಚಗಿರುವುದರಿಂದ ಅದಕ್ಕೆ ಛಳಿಯಾಗುವ ಬದಲು ಸೆಕೆಯಾಗುತ್ತದೆಯೆಂದು ಭಾವಿಸಿ ಸುಮ್ಮನಾದ. ಅದರ ಹಸಿವಿಗೆಂದು ಹಸುವಿನ ಹಾಲನ್ನು, ಮಗುವಿಗೆ ಕುಡಿಸಲು ಇಟ್ಟಿದ್ದ ನಿಪ್ಪಲ್ ಬಾಟಲಿಗೆ ಹಾಕಿ, ಅದು ಮೂತಿ ಅತ್ತ ಇತ್ತ ಮಾಡಿ ಉಗಿಯುತ್ತಿದ್ದರೂ ಬಲವಂತವಾಗಿ ಕಟಬಾಯಿಗೆ ಗೊಟ್ಟದಂತೆ ತುರುಕಿ ಕುಡಿಸಿದ.

ವೆಟರ್ನರಿ ಡಾಕ್ಟರಾದರೂ ಈವರೆಗೆ ಯಾವುದೇ ಕಾಡು ಪ್ರಾಣಿಗೆ ಚಿಕಿತ್ಸೆ ನೀಡಿದ ಅನುಭವವಿರದಿದ್ದರೂ, ನಂಜಾಗದೇ ಇರೋದಕ್ಕೆ ತಾನು ನೀಡಿದ ಆ್ಯಂಟಿಬಯೋಟಿಕ್‌ಗಳು, ಗಾಯ ವಾಸಿಯಾಗಲು ನೀಡಿದ ಪೆನ್ಸಿಲಿನ್‌ಗಳು, ನೋವು ನಿವಾರಣೆಗೆ ನೀಡಿದ ಮೆಲೋನೆಕ್ಸ್ ಇಂಜೆಕ್ಷನ್ ಮುಂತಾದವುಗಳ ಪ್ರಭಾವದ ಫಲವಾಗಿ ಚಿಕಿತ್ಸೆಯು ಫಲಪ್ರದವಾಗಿ, ಒಂದು ವಾರದೊಳಗಾಗಿ ಸಹಜ ಸ್ಥಿತಿಗೆ ಬಂದ ಜಿಂಕೆಮರಿಯು ಟೋನಿಯೊಂದಿಗೆ ಸ್ನೇಹ ಬೆಳೆಸಿ ಚಿನ್ನಾಟ ಆಡಲು ಶುರುಮಾಡಿತ್ತು. ಪದೇಪದೇ ಅದನ್ನು ಜಿಂಕೆಮರಿ ಜಿಂಕೆಮರಿಯೆಂದು ಕರೆವಾಗಲೆಲ್ಲ ಅದರ ಜಾತಿ ಹೆಸರನ್ನು ಹಿಡಿದು ಕರೆದು, ಅವಮಾನ ಮಾಡಿದಂತೆನಿಸಿ ಟೋನಿಯಂತೆ ಅದಕ್ಕೂ ಒಂದು ಹೆಸರು ಇಡಬೇಕೆಂದು, ಹೆಂಡತಿ ಮಗಳೊಂದಿಗೆ ಚರ್ಚಿಸಿ, ಆಗ ಅದು ಗಂಡೋ ಹೆಣ್ಣೋ ಎಂಬ ಕುತೂಹಲದಿಂದ ಬಾಲ ಎತ್ತಿ ನೋಡಿ, ಮಗಳ

ಆಶಯದಂತೆ 'ವಿಸ್ಮಯ' ಎಂದು ಹೆಸರಿಟ್ಟ – ಎಲ್ಲವನ್ನು ಎಲ್ಲರನ್ನು ಬಿಟ್ಟು ಆಕಸ್ಮಿಕವಾಗಿ ವೆಟರ್ನರಿ ಡಾಕ್ಟರಾದ ತನಗೇ ಸಿಕ್ಕಿದ್ದು, ಅದು ಬದುಕಿ ಉಳಿದದ್ದು ಎಲ್ಲವೂ ಒಂಥರಾ ವಿಸ್ಮಯ ಎನ್ನುವಂತೆ!

❖

ಹೆಂಡತಿ ಸುಮಂಗಲಿ ಹೆರಿಗೆಗೆಂದು ಊರಿಗೆ ಹೊರಟು ನಿಲ್ಲುವವರೆಗೆ ಕಾಡದಿದ್ದ 'ವಿಸ್ಮಯ'ಳ ಸುರಕ್ಷತೆಯ ಕೊರತೆ ಈಗ ಕಾಡಲಾರಂಭಿಸಿತು. ನಾಳೆಯಿಂದ ತನ್ನ ಊಟಕ್ಕೇ ಇನ್ನೊಬ್ಬರ ಮನೆಯೋ, ಹೋಟೆಲ್ಲೋ ಅವಲಂಭಿಸ ಬೇಕಾಗಿರುವಾಗ, ಮನೆಕಾಯಲು ಇರುವ ಟೋನಿಯ ಜೊತೆ ವಯಸ್ಸಿಗೆ ಬಂದಂತಹ ಹೆಣ್ಣಂತೆ – ರುಚಿಕಟ್ಟಾದ ಹಸಿಮಾಂಸದ ಫಾಸ್ಟ್‌ಫುಡ್ಡನ್ನು – ಬಿಟ್ಟುಹೋಗಲು ನಂಬಿಕೆ ಬಾರದೇ ಚಿಂತಾಕ್ರಾಂತನಾಗಿದ್ದಾಗ, ಇದ್ದಕ್ಕಿದ್ದಂತೆ ಪುಣ್ಯಕೋಟಿಯಂತೆ ಫಾರೆಸ್ಟ್ ಗಾರ್ಡ್‌ಗೆ ಮಾತುಕೊಟ್ಟು ಬಂದದ್ದು ನೆನಪಾಗಿ, 'ವಿಸ್ಮಯ'ಳೂ ತಾಯಿಯ ನೆನಪಲ್ಲಿ ಮಂಕಾಗಿರುವಂತೆ ಕಂಡಂತಾಗಿ, ಈವರೆಗೆ ಅದರೊಂದಿಗೆ ನಲಿನಲಿಯುತ್ತ ಕಳೆದುದರ ಪಾಪಪ್ರಜ್ಞೆ ಕಾಡಲಾರಂಭಿಸಿತು. ಮೋಹನನನ್ನು ಕರೆದು, ಹೆಂಡತಿಯನ್ನು ಅವಳ ತವರಿಗೂ, 'ವಿಸ್ಮಯ'ನನ್ನು ಅದರ ತವರಿಗೂ ಬಿಟ್ಟುಬರಲು ಪ್ಲಾನ್ ಮಾಡಿದ.

ಹೊನ್ನೂರ ಹೊಳೆಬದಿಯ ಗದ್ದೆ ಬಯಲು ಕಾಣುತ್ತಿದ್ದಂತೆ ಇದುವರೆಗೆ ನಗರದ ಮನೆಯಲ್ಲಿ ಕೂಡಿಹಾಕಿದಂತಿದ್ದ ಅದಕ್ಕೆ ಬಿಡುಗಡೆಯ ಭಾಗ್ಯ ದೊರೆತಂತಾಯಿತು. ಛಂಗನೆ ಜಿಗಿದು ಒಂದು ಸುತ್ತು ಹಾಕಿಕೊಂಡು – ಕೃಷ್ಣನ ಪದತಲ ಸೇರುವ ಬೂಮರಾಂಗ್ ಚಕ್ರದಂತೆ – ತನ್ನ ಬಳಿ ಬಂದು ಮೂತಿಯನ್ನು ಮೂಸುವಂತೆ ಆಡಿಸುತ್ತ, 'ಹೇಗಿದೆ ನನ್ನ ಭುಜಬಲದ ಪರಾಕ್ರಮ..' ಎನ್ನುವಂತೆ ನಿಂತಿತು. ಒಂದು ಜೀವ ಉಳಿಸಿದ ಉಪಕೃತತೆಯಲ್ಲಿ ಚಿದಂಬರನ ಎದೆ ತುಂಬಿಬಂದಂತಾಯಿತು.

ಹೆಂಡತಿ, ಮಗಳನ್ನು ತವರಿನಲ್ಲಿಳಿಸಿ ಹೊರಡುತ್ತಿದ್ದಂತೆಯೇ ಮಗಳು ಚಂಚಲಾ 'ಅಪ್ಪ, ವಿಸ್ಮಯ ನನ್ನ ಜೊತೆ ಆಟ ಆಡಿಕೊಂಡು ಇರುತ್ತೆ ಬಿಡು' ಎಂದಳು. 'ಹಾಗಲ್ಲ ಮಗಳೇ.. ನಿನ್ನನ್ನ ಅಮ್ಮನಿಂದ ಬೇರ್ಪಡಿಸಿದರೆ ಬೇಜಾರಾಗುತ್ತಲ್ಲವಾ.. ಹಾಗೇನೇ ಅದಕ್ಕೂ ತಾಯಿಯಿಂದ ದೂರ ಇರೋಕ್ಕೆ ಬೇಜಾರಾಗುತ್ತೆ. ನಾವು ಎಷ್ಟೇ ಚೆನ್ನಾಗಿ ನೋಡಿಕೊಂಡರೂ ಅದಕ್ಕೆ ಇತರೆ ಜಿಂಕೆಗಳ ಜೊತೆಗಿದ್ದಂತೆ ಆಗೋದಿಲ್ಲ – ನಮಗೆ ಪ್ರಾಣಿಗಳು ಎಷ್ಟೇ ಪ್ರೀತಿ ತೋರಿಸಿದರೂ ಒಬ್ಬರೇ ಕಾಡಿನಲ್ಲಿ ಇರೋಕ್ಕೆ ಆಗುತ್ತಾ.. ಹಾಗೆ..' ಎಂದು ಸಮಜಾಯಿಷಿ ನೀಡಿ ಮಗಳ ತಲೆ ನೇವರಿಸಿ 'ಬ್ಯಾ..' ಎಂದು ಕೈಬೀರುತ್ತ, ಸೀತೆಯನ್ನು ಕಾಡಿಗೆ ಕಳುಹಿಸಲು ದೃಢನಿರ್ಧಾರ ಮಾಡಿದ್ದ ರಾಮನಂತೆ, ಜಿಂಕೆಮರಿ ಜೊತೆ ಹೊರಟೇಬಿಟ್ಟ. ಹಾಗೆ ಹೊರಟಾಗ ಅದನ್ನು ದಿಟ್ಟಿಸಿ ನೋಡಿದ. ಇನ್ನು ಇದು ತನ್ನಿಂದ ಶಾಶ್ವತವಾಗಿ ದೂರ ಹೋಗುತ್ತದೆ

ಎಂದಾಗ ಕಳಕೊಳ್ಳುವ ಪ್ರಮೇಯದಲ್ಲಿ ಉಕ್ಕಿಬರುವ ಪ್ರೀತಿಯಂತೆ ದುಃಖ ಉಮ್ಮಳಿಸಿ ಬಂದು ಅದರ ತಲೆ ನೇವರಿಸಿದ. ತಲೆ ಎತ್ತಿ ಅದೂ ಸ್ಪಂದಿಸಿತು. ಮಗಳ ತಲೆ ನೇವರಿಸಿದಾಗ ಆದ ಅನುಭವವೇ ಈಗಲೂ ಆಯಿತು. ಅದರ ನಯವಾದ ಕೂದಲು, ಆ ಕೂದಲಿಗೆ ಯಾವ ಕಲಾವಿದನೋ ಬಳಿದ ಬಂಗಾರದ ಬಣ್ಣ, ಅದರ ಮಧ್ಯೆ ಆಭರಣದ ಅಂದ ಹೆಚ್ಚಿಸಲು ಜೋಡಿಸಿದ ಮುತ್ತಿನಂತಹ ಬಿಳಿಬಿಳಿಯ ಮಚ್ಚೆಗಳು.. ಆ ಜೀವಸೃಷ್ಟಿಕರ್ತ ಲಕ್ಷಾಂತರ ಪ್ರಾಣಿ, ಪಕ್ಷಿ, ಚಿಟ್ಟೆ, ಜಲಚರಗಳಿಗೆಲ್ಲ ಅದರದರದೇ ಆದ – ಚರ್ಮ, ರೆಕ್ಕೆ, ಕೂದಲುಗಳ ಮೇಲೂ ತಪ್ಪದೇ – ಬಣ್ಣದ ಚಿತ್ತಾರಗಳನ್ನು ಪ್ರಮಾಣಬದ್ಧವಾಗಿಯೂ, ವಂಶಪಾರಂಪರ್ಯವಾಗಿಯೂ ಅದ್ಹೇಗೆ ಮರೆಯದೇ ಬರೆಯುತ್ತಾನೋ ಎಂದು ಆಶ್ಚರ್ಯಪಟ್ಟ.

❖

ಕಾಡಿನ ಒಳಗೆ ಪ್ರವೇಶಿಸುವ ವಾಹನಗಳಿಗೆ ಯಾವುದೇ ತಪಾಸಣೆ ಇಲ್ಲದಿದ್ದರೂ, ಪರಿಶೀಲನೆಗೆಂದು ಬಂದಿದ್ದ ಎಸಿಎಫ್ ಕಣ್ಣಿಗೆ, ಒಳ್ಳೆ ಸಾಕಿದ ನಾಯಿಯಂತೆ ಕಿಟಕಿಯಿಂದ ಇಣುಕಿ ನೋಡುತ್ತಿದ್ದ ವಿಸ್ಮಯ ಕಂಡು, ತೆರೆಯುತ್ತಿದ್ದ ಅಡ್ಡಮರವನ್ನು ನಿಲ್ಲಿಸುವಂತೆ ಗಾರ್ಡ್‌ಗೆ ಹೇಳಿದ. ನೂರು ರೂಪಾಯಿ ಪಡೆದಿದ್ದ ಗಾರ್ಡ್ ಇರಲಿಲ್ಲವಾಗಿ ಕಾರಿನಿಂದಿಳಿದ ಚಿದಂಬರ ಎಲ್ಲ ಕಥೆ ಮೊದಲಿನಿಂದ ಹೇಳಬೇಕಾಯಿತು. ಇದೆಲ್ಲ ಸುಳ್ಳಿರಬಹುದೆನ್ನುವಂತೆ ಆತ ಅನುಮಾನದಿಂದ ಕಣ್ಣುಕಿಸಿದು ನೋಡುತ್ತಿರುವಂತೆಯೇ, ತಮ್ಮವರ್‍ಯಾರೋ ಕಾಡಿನಲ್ಲಿ ಪಾರ್ಟಿ ಮಾಡುತ್ತಿದ್ದು, ಅಕ್ಕಪಕ್ಕದಲ್ಲೆಲ್ಲೋ ಬೇಟೆಗಾರರಿಂದ ಅದನ್ನು ಕೊಂಡುತಂದಿರುವುದಾಗಿ ಭಾವಿಸಿದ ಆತನ ವಿಶ್ವಾಸ ಗಳಿಸಲು ಹರ ಸಾಹಸ ಪಡಬೇಕಾಯಿತು. ತಾನೂ ಗೆಜೆಟೆಡ್ ಸರ್ಕಾರಿ ಅಧಿಕಾರಿ ಎಂಬುದನ್ನು ದೃಢಪಡಿಸಲು ವಿಧಾನಸೌಧದಲ್ಲಿ ತೋರಿಸುವಂತೆ ಐಡೆಂಟಿಟಿ ಕಾರ್ಡ್‌ನ್ನು ತೋರಿಸಿದ ಮೇಲೂ ಆತನ ಜೇಬಿನಲ್ಲಿದ್ದ ಹಸಿರುಬಣ್ಣದ ಪೆನ್ನನ್ನು ಕಂಡು ಅರೆನಂಬಿದವನಂತೆ ಬಾಗಿಲು ತೆರೆಸಿದ.

ಹಿಂದೆ ಆ್ಯಕ್ಸಿಡೆಂಟ್ ಆಗಿ ವಿಸ್ಮಯ ಸಿಕ್ಕಿದ್ದ ಜಾಗದಲ್ಲಿಯೇ ಕಾರನ್ನು ನಿಲ್ಲಿಸಿ ಹೊರಬಿಟ್ಟ. ಸುತ್ತಲ ಪರಿಸರವನ್ನು ಕಂಡು ಪರವಶಳಾದವಳಂತೆ ಪ್ರಚೋದನಾತ್ಮಕವಾಗಿ ಪುಟಿದು ಕಣಿವೆ, ಪಾತಾಳ ಎಂಬ ಯಾವ ಅಂಜಿಕೆಯೂ ಇಲ್ಲದೇ ಕ್ಷಣಮಾತ್ರದಲ್ಲಿ ಜಿಗಿಜಿಗಿದು ಕಾಡಿನಲ್ಲಿ ಮಾಯವಾಯಿತು. ಕರುಳಬಳ್ಳಿ ಹರಿದುಕೊಂಡ ದುಃಖದಲ್ಲಿ ಕಣ್ಣಂಚಲಿ ಒಂದು ಹನಿ ನೀರು ಹೌದೋ ಅಲ್ಲವೋ ಎನ್ನುವಂತೆ ಇಣುಕಿದರೂ ಮೋಹನನಿಗೆ ತೋರ್ಪಡಿಸದೇ, ನಗುವಿನ ಮುಖವಾಡದಲ್ಲಿ 'ಪ್ರಾಣಿಗಳಿಗೆ ಕಾಡೆಂದರೆ ಅದೇಕೆ ಅಷ್ಟೊಂದು ವ್ಯಾಮೋಹವೋ.. ಅಲ್ಲವಾ..?' ಎಂದು ಅಂತರ್ಮುಖಿಯಾದ. ಮೋಹನ ಪರಿಣಿತ ಡ್ರೈವರನಂತೆ ಚಾಕಚಕ್ಯತೆಯಿಂದ ಕಾರನ್ನು ಇದ್ದ ಇಷ್ಟೇ ಜಾಗದಲ್ಲಿ ಹಿಂದೆಮುಂದೆ ಮಾಡುತ್ತಾ, ಹಿಂದಕ್ಕೆ ತಿರುಗಿಸಿದ.

ಭಾರವಾದ ಹೃದಯದಿಂದ ಕಾರು ಮುನ್ನಡೆಯುತ್ತಿದ್ದಂತೆಯೇ ರಸ್ತೆಗೆ ಅಡ್ಡವಾಗಿ ನಿಂತಿದ್ದ ಜಿಂಕೆಮರಿಯನ್ನು ಕಂಡು, ಇದು ಅದರ ಅವಳಿಯೇ ಇರಬಹುದೇನೋ, ಬಹುಶಃ ಅದರ ವಾಸನೆ ಹಿಡಿದು ಬಂದಿರಬಹುದೇನೋ ಎಂದು ಭಾವಿಸಿ ಒಂದು ಕ್ಷಣ ಪುಳಕಿತನಾದ. ಕಾರು ಇನ್ನೂ ಹತ್ತಿರ ಬರುತ್ತಿದ್ದಂತೆಯೇ ಇದು ಅದೇ 'ವಿಸ್ಮಯ'ಳೇ ಎಂಬುದು ಖಾತ್ರಿಯಾಗಿ, ಇಳಿದು ಹತ್ತಿರ ಹೋದ – ಬೇರೆ ಜಿಂಕೆಮರಿಯಾಗಿದ್ದರೆ ಓಡಿಹೋಗುತ್ತದೆಯೆಂಬ ಭರವಸೆಯಿಂದ. ಆದರೆ ಅದು ಮೂತಿಯ ತುದಿಯನ್ನು ಮಾತಾಡಿದಂತೆ ಆಡಿಸುತ್ತ, ತನ್ನನ್ನು ಹೀಗೆ ಕಾಡಿನಲ್ಲಿ ಒಂಟಿಯಾಗಿ ಬಿಟ್ಟುಹೋಗಲು ತಾನೇನು ಅನ್ಯಾಯ ಮಾಡಿದ್ದೆ ಎಂದು ಪ್ರಶ್ನಿಸುತ್ತಿರುವಂತೆ ಕಂಡಿತು. ನಿಮಿಷದೊಳಗೆ ತನ್ನದು ಭಾವನಾತ್ಮಕ ಭ್ರಮೆ ಅನ್ನಿಸಿ, ನಿಷ್ಠುರವಾಗಿ ಅದರಿಂದ ದೂರವಾಗಲೇಬೇಕು ಎಂದು ನಿರ್ಧರಿಸಿ ಎದ್ದು ನಿಂತವನು ಸಿಟ್ಟಿನಿಂದ ಅದರ ಕೆನ್ನೆಗೆ ಒಂದು ಬಾರಿಸಿ, ನಿನ್ನ ಅಮ್ಮನ ಹತ್ತಿರ ಹೋಗು ಎಂದು ಗದರಿಸಿದ. ಭಯಗೊಂಡ ಅದು ಅಷ್ಟು ದೂರ ಹೋಗಿ ತಿರುಗಿ ತಲೆಯೆತ್ತಿ ಮೂತಿಯ ನೇರದಿಂದ ನೋಡುವಂತೆ ನೋಡುತ್ತಾ ನಿಂತುಬಿಟ್ಟಿತು.

ಕಾರಿನ ಗ್ಲಾಸುಗಳನ್ನು ಏರಿಸಿ, ಡಾಕ್ಟರನಾಗಿ ತನ್ನ ಜವಾಬ್ದಾರಿ ಇನ್ನು ಮುಗಿಯಿತು, ಚಿಕಿತ್ಸಕನಿಗೆ ರೋಗಿಯ ಬಗ್ಗೆ ಪ್ರೀತಿಯಿರಬೇಕೇ ವಿನಃ ಭಾವನಾತ್ಮಕತೆಗೆ ಅವಕಾಶವಿರಬಾರದು ಎಂಬ ದೃಢಮನಸ್ಸಿನಿಂದ, ಮುನ್ನಡೆಯುವಂತೆ ಮೋಹನನಿಗೆ ಹೇಳಿದ. ಅದನ್ನು ಪಕ್ಕಕ್ಕೆ ತಳ್ಳಿಕೊಂಡು ಕಾರು ಮುನ್ನಡೆಯುತ್ತಿದ್ದಂತೆಯೇ, ಅದರ ಪ್ರತಿಕ್ರಿಯೆಯೇನಿರಬಹುದೆಂಬ ಕುತೂಹಲದಿಂದ ಹಿಂದಿರುಗಿ ನೋಡಿದರೆ ಹಿಂದೆಯೇ ಓಡಿಬರುತ್ತಿದೆ! ಕಾರಿನ ವೇಗ ಹೆಚ್ಚು ಮಾಡಲು ಹೇಳಿದ. ಅದೂ ಅಷ್ಟೇ ವೇಗವಾಗಿ ಓಡಿಬರಲಾರಂಭಿಸಿತು! ಇನ್ನಷ್ಟು ವೇಗವಾಗಿ ಓಡಿಸುವಂತೆಯೂ, ಕಾರು ಕ್ಷಣ ಕಾಲ ಕಾಣದಾದಾದರೆ ತನ್ನಷ್ಟಕ್ಕೆ ತಾನೆ ಸುಮ್ಮನಾಗುತ್ತದೆಯೆಂದೂ ಹೇಳಿದ. ಹಾಗೆಯೇ ಮಾಡಿದ ಮೋಹನ. ಯಾಕೋ ಮನಸ್ಸು ತಡೆಯಲಿಲ್ಲ. ಮರೆಯಾಗಿ ಎಷ್ಟೋ ಹೊತ್ತಾದ ಮೇಲೆ ಕಾರು ನಿಲ್ಲಿಸಲು ಹೇಳಿದ. ಕ್ಷಣಮಾತ್ರದಲ್ಲಿ ಪ್ರತ್ಯಕ್ಷವಾಯಿತು! ಆದರೆ ಅದರ ಹಿಂದೆ ಇನ್ನೊಂದು ಪ್ರಾಣಿ ಓಡಿಬರುತ್ತಿರುವುದನ್ನು ಕಂಡು ಅದನ್ನು ಅದರ ತಾಯಿ ಕಾಡೊಳಕ್ಕೆ ಕರೆದೊಯ್ಯಲು ಬರುತ್ತಿರಬಹುದೆಂದು ಭ್ರಮಿಸಿದ. ಆದರೆ ಹತ್ತಿರ ಹತ್ತಿರ ಬರುತ್ತಿದ್ದಂತೆಯೇ ಅದು ಜಿಂಕೆಯಾಗಿರದೇ ತೋಳವೋ, ಚಿರತೆಯೋ ಆಗಿರುವುದು ಗಮನಕ್ಕೆ ಬಂದು, ಅದು ಎಲ್ಲಿ ತಮ್ಮ ಮೇಲೂ ಆಕ್ರಮಣ ಮಾಡಿಬಿಡುತ್ತದೋ ಎಂಬ ಭಯದಿಂದ ತಾವು ತಪ್ಪಿಸಿಕೊಳ್ಳುವ ಭರದಲ್ಲಿ ಮೋಹನ ಕಾರನ್ನು ಮುನ್ನುಗ್ಗಿಸಿದ. ಇನ್ನೇನು ಕಾರಿನ ಹತ್ತಿರ ಹತ್ತಿರ ಬಂದಂತೆ ಜಿಂಕೆಮರಿಯ ವೇಗ ಕಡಿಮೆಯಾಗುವುದಕ್ಕೂ, ಅದರ ಮೇಲೆ ಆಕ್ರಮಣ ಮಾಡುವ ಪ್ರಾಣಿಯ ವೇಗ ಜಾಸ್ತಿಯಾಗಿ ಇನ್ನೇನು ಹಿಡಿದೇಬಿಟ್ಟಿತು ಎನ್ನುವ ವೇಳೆಗೆ, ಅದನ್ನು ಹೇಗಾದರೂ ರಕ್ಷಿಸಬೇಕು ಎಂಬ ಭರದಲ್ಲಿ ಕಾರನ್ನು ನಿಲ್ಲಿಸು ಎಂದೂ ಹೇಳಲು ಬಾಯಿಯಿಂದ

ಮಾತು ಬಾರದೇ ಚಿದಂಬರ ಕಾರಿನ ಸ್ಟೇರಿಂಗ್‌ನ್ನು ಒತ್ತಿಹಿಡಿಯಲು ಹೋಗುವುದಕ್ಕೂ, ಅದಕ್ಕೆ ಅಳವಡಿಸಿದ್ದ ಹಾರನ್ನಿನ ಮೇಲೆ ಕೈಯ ಒತ್ತಡ ಬಿದ್ದುದರಿಂದ ಅಪಾರವಾದ ಶಬ್ದ ಹೊರಹೊಮ್ಮುವುದಕ್ಕೂ ಸರಿಹೋಯಿತು. ಸ್ಟೇರಿಂಗ್ ಎಳೆದುದರಿಂದ ಕಾರು ಗುಡ್ಡಕ್ಕೆ ಗುದ್ದುವುದೋ ಇಲ್ಲ ಪ್ರಪಾತಕ್ಕೆ ಬೀಳುವುದೋ ಖಾತ್ರಿಯೆನ್ನಿಸಿ ಗಾಬರಿಯಿಂದ ಬ್ರೇಕ್ ಒತ್ತಿದ್ದ ಮೋಹನ. ಗಕ್ಕನೆ ಕಾರು ನಿಲ್ಲುತ್ತಿದ್ದಂತೆಯೇ ಬದುಕಿದೆವಾ ಎಂಬ ಸಂಶಯದಿಂದ ಸುತ್ತಲೂ ನೋಡಿದರೆ, ಬೇಟೆಗೆ ಎಲ್ಲಿ ತಾನೇ ಬೇಟೆಯಾಗುವೆನೋ ಎಂದು ಆಘಾತಗೊಂಡ ಚಿರತೆ ಕಚಕ್ಕನೆ ತನ್ನ ಓಟ ನಿಲ್ಲಿಸಿ, ದಿಕ್ಕು ಬದಲಿಸಿಕೊಂಡು ಕಾಡೊಳಗೆ ಇಳಿದುಹೋದದ್ದು ಕಂಡಿತು. ಕಾರನ್ನು ಹಿಂಬಾಲಿಸಿ ಓಡಿಬರುವ ಭರದಲ್ಲಿ ಚಿರತೆ ಬೆನ್ನತ್ತಿದ್ದು ಗೊತ್ತೇ ಇರದ ಜಿಂಕೆಮರಿ ಮಾತ್ರ ತನ್ನ ಪ್ರಾಣಕ್ಕೆ ಸಂಚಕಾರ ಬಂದುದರ ಕಿಂಚಿತ್ತೂ ಅರಿವಿರದಂತೆ ಕಾರ ಮುಂದೆ ಬಂದು ನಿಂತಿತು. ಆ ಚಿರತೆ ಇಲ್ಲೆಲ್ಲಾದರೂ ಹೊಂಚು ಹಾಕುತ್ತಿರಬಹುದೇ ಎಂದು ಕಾರಿಂದ ಕೆಳಗಿಳಿಯಲು ಒಂದು ಕ್ಷಣ ಭಯಗೊಂಡರೂ, 'ಎಲ್ಲೂ ಹೋಗಲ್ಲ, ಮಾಮ ಎಲ್ಲೂ ಹೋಗಲ್ಲ..' ಎಂದು ಪುಟ್ಟಕಂದ ಅಪ್ಪಿಕೊಂಡಂತಹ ನೆನಪು ಮರುಕಳಿಸಿ ಕೆಳಗಿಳಿದು ಬಾಚಿ ತಬ್ಬಿಕೊಂಡವನೇ ಒಂದೇ ಸೆಕೆಂಡಿನೊಳಗೆ ಮತ್ತೆ ಕಾರೊಳಕ್ಕೆ ಜಿಗಿದು ಕುಳಿತ. ಭಯದಿಂದ ರೋಮಾಂಚಿತನಾಗಿದ್ದವನ ನಿಮಿರಿದ್ದ ಕೂದಲುಗಳು ಇನ್ನೂ ಹಾಗೇ ಇದ್ದವು. ಒಂದು ಕ್ಷಣ ಮಾತಾಡಲು ಮಾತುಗಳೇ ಬಾರದೇ ಕಾರನ್ನು ಜೋರಾಗಿ ಓಡಿಸು ಎಂದಷ್ಟೇ ಸನ್ನೆ ಮಾಡಿದ. ಕಾರಿನ ವೇಗಕ್ಕೆ ತಕ್ಕಂತೆ ಏನೇನೋ ಆಲೋಚನೆಗಳೂ ಬೆನ್ನತ್ತಿದ್ದವು – ಹೆಣ್ಣು, ಹೊನ್ನು, ಮಣ್ಣನ್ನು ಕಾಪಿಟ್ಟುಕೊಳ್ಳುವುದು ಎಷ್ಟೆಲ್ಲಾ ಕಷ್ಟವಲ್ಲ.. ಅದರಲ್ಲೂ ಪ್ರಾಯಕ್ಕೆ ಬಂದ ಹೆಣ್ಣನ್ನು ಕಾಮುಕರು ಬೆನ್ನತ್ತುವಂತೆ ಮರಿಜಿಂಕೆಯ ಎಳೆಮಾಂಸಕ್ಕೆ ಎಷ್ಟೆಲ್ಲ ಮಾಂಸಾಹಾರಿ ಪ್ರಾಣಿಗಳು ಬೆನ್ನತ್ತುತ್ತಾವಲ್ಲ.. ಮನುಷ್ಯನೂ ಹೀಗೆ ಯಾವುದಾದರೂ ಪ್ರಾಣಿಯ ಬೇಟೆಯ ವಸ್ತುವಾಗಿದ್ದರೆ ಬಹುಶಃ ಭೂಮಿ ಮೇಲಿನ ಜನಸಂಖ್ಯೆಯ ಪ್ರಮಾಣ ತಹಬಂದಿಗೆ ಬಂದಿರುತ್ತಿತ್ತೇನೋ ಅನಿಸಿತು.

❖

ಫಾರೆಸ್ಟ್ ಚೆಕ್‌ಪೋಸ್ಟ್‌ನಲ್ಲಿ ಕಾರು ಬರುತ್ತಿದ್ದುದನ್ನು ನೋಡಿದ ಗಾರ್ಡ್ ಹಗ್ಗವನ್ನು ಬಿಚ್ಚಿ ಮೇಲೆತ್ತುವ ಮೊದಲೇ ಪಕ್ಕಕ್ಕೆ ನಿಲ್ಲಿಸುವಂತೆ ಮೋಹನನಿಗೆ ಹೇಳಿದ. ಬದುಕಿದೆಯಾ ಬಡಜೀವವೇ ಎನ್ನುವಂತೆ, ಚಿರತೆಯೇನಾದರೂ ಕಾರನ್ನು ಬೆನ್ನಟ್ಟಿ ಬರುತ್ತಿದೆಯಾ ಎಂಬುದನ್ನು ಖಾತ್ರಿಪಡಿಸಿಕೊಳ್ಳಲು ಮತ್ತೊಮ್ಮೆ ಹಿಂದಿರುಗಿ ನೋಡಿ ಕೆಳಗಿಳಿದ. ಗಾರ್ಡ್ ಬಳಿ ಹೀಗ್ಹೀಗಾಯಿತೆಂದು ವರದಿ ಒಪ್ಪಿಸತೊಡಗಿದ. ಆತನೂ ಬಿಟ್ಟ ಕಿವಿ ಬಿಟ್ಟುಕೊಂಡು ಕೇಳಲಾರಂಭಿಸಿದ್ದ. ಅಷ್ಟರಲ್ಲಿ ಎ.ಸಿ.ಎಫ್. ಜೀಪು ಅಲ್ಲಿಗೇ ಬಂದಿತು. ಆತ ಕಾರೊಳಗಿನ ಜಿಂಕೆಮರಿಯನ್ನೊಮ್ಮೆ ಚಿದಂಬರನನ್ನೊಮ್ಮೆ

ಪ್ರಶ್ನಾರ್ಥಕವಾಗಿ ನೋಡಿದ. ಗಾರ್ಡ್‌ಗೆ ಒಪ್ಪಿಸಿದ ವರದಿಯನ್ನೇ ಪುನರಾವರ್ತಿಸಿದ ಚಿದಂಬರ. ಎರಡನೇ ಬಾರಿಗೆ ಹೇಳುವಾಗ್ಗೆ ಆಗಲೇ ಆಶ್ಚರ್ಯದ ತೀವ್ರತೆ ಕಡಿಮೆಯಾಗಿತ್ತು. ಮತ್ತೆ ಆತ 'ಇದನ್ನೆಲ್ಲ ನಾನು ನಂಬಬೇಕಾ..' ಎನ್ನುವಂತೆ ನೋಡುತ್ತ ಒಂದು ತಿರಸ್ಕಾರದ ನಗೆ ನಕ್ಕ. 'ಇದರ ಜವಾಬ್ದಾರಿ ನಿಮ್ಮ ಇಲಾಖೆಗೆ ಸೇರಿದ್ದು. ದಯವಿಟ್ಟು ಇದನ್ನು ನಿಮ್ಮ ಸುಪರ್ದಿಗೆ ತೆಗೆದುಕೊಂಡು ನನ್ನನ್ನು ನಿರಾಳಳನ್ನಾಗಿ ಮಾಡಿಬಿಡಿ ಸಾರ್..' ಎಂದು ಕೋರಿಕೊಂಡ. ಎ.ಸಿ.ಎಫ್. ನಾಗರಾಜ್ ಸುಲಭವಾಗಿ ಸಿಕ್ಕ ಜಿಂಕೆಮರಿಯ ಮೈದಡವಿ, ಖುಷಿಯಿಂದ ತಲೆ ಸವರಿ ಪ್ರೀತಿ ವ್ಯಕ್ತಪಡಿಸಿದ. ಅದೂ ತಲೆಯೆತ್ತಿ, ಕಣ್ಣುಮುಚ್ಚಿ ಸ್ಪರ್ಶಸುಖ ಅನುಭವಿಸಿತು. ಸಾಕುವುದಾದರೆ ತನ್ನ ಮನೆಯಲ್ಲಿಯೇ ಯಾಕೆ ಸಾಕಬಾರದು ಎಂದೂ ಒಂದು ಕ್ಷಣ ಅಂದುಕೊಂಡ. 'ಸರಿ, ಬರ್ತೀವಿ ಸಾರ್..' ಎಂದು ಚಿದಂಬರ ಹೊರಟಾಗ ಅದಿನ್ನೂ ನಾಗರಾಜನ ಅಪ್ಪುಗೆಯಲ್ಲೇ ಇತ್ತು. ನಂತರ ಅದರ ಆರೈಕೆ ಮಾಡುವಂತೆ ಗಾರ್ಡ್ ಕೈಗೆ ಹಸ್ತಾಂತರಿಸಿದ.

ಚಿದಂಬರನ ಕಾರು ಮುನ್ನುಗ್ಗುತ್ತಿದ್ದುದನ್ನು ಕಂಡ ಜಿಂಕೆಮರಿ ಜೋರಾಗಿ ಅರಚುತ್ತ, ಒದರಾಡುತ್ತ ಗಾರ್ಡ್‌ನ ಕೈಯ್ಯಿಂದ ಕೊಸರಿಕೊಂಡು ಹಿಡಿತ ತಪ್ಪಿಸಿಕೊಂಡು ಕಾರನ್ನು ಬೆನ್ನಟ್ಟಿ ಓಡಲಾರಂಭಿಸಿತು. ಬಾಸ್‌ನಿಂದ ಬೈಗುಳ ತಪ್ಪಿಸಿಕೊಳ್ಳಲು ಮತ್ತು ಶಹಬ್ಬಾಸ್ ಅನ್ನಿಸಿಕೊಳ್ಳಲು ತನ್ನ ದಢೂತಿ ದೇಹದಲ್ಲೇ ಎದ್ದುಬಿದ್ದು ಅದನ್ನು ಹಿಡಿದು ತರಲು ಬೆನ್ನತ್ತಿ ಓಡಿದ. 'ಇನ್ನು ಅದನ್ನು ನಿಲ್ಲಿಸಲು ಸಾಧ್ಯವಿಲ್ಲ, ಬಿಟ್ಟುಬಿಡು..' ಎಂದು ಗಾರ್ಡ್‌ಗೆ ಕೂಗಿ ಹೇಳಿ ಹಿಂದಕ್ಕೆ ಕರೆಸಿಕೊಂಡ.

ಜಿಂಕೆಮರಿಯ ವೇಗ ಹೆಚ್ಚಿದಂತೆ ಕ್ರಮೇಣ ಕಾರಿನ ವೇಗ ಕಡಿಮೆಗೊಳಿಸಿದ ಮೋಹನ ನಿಲ್ಲಿಸಿದ. ಅದು ಏನು ಮಾಡುತ್ತದೋ ನೋಡೋಣವೆಂತಲೇ ಕಾರಿನ ಗ್ಲಾಸನ್ನೂ ಇಳಿಸದೇ ಚಿದಂಬರ ಅದರ ಕಡೆಗೆ ನೋಡಿದರೂ ನೋಡದಂತೆ ನಿರ್ಲಿಪ್ತನಾಗಿ ಕುಳಿತೇ ಇದ್ದ. ಫಾರೆಸ್ಟ್‌ಗೇಟ್‌ಗೆ ಅನತಿದೂರದಲ್ಲೇ ಇದ್ದುದರಿಂದ ಅದೆಲ್ಲಾ ಎಸಿಎಫ್ ನಾಗರಾಜ್‌ಗೆ ಸ್ಪಷ್ಟವಾಗಿ ಕಾಣುತ್ತಲಿತ್ತು. ಆಡುಮರಿಗಳು ಅಡರುಹಾಕುವಂತೆ ಕಿಟಕಿವರೆಗೂ ಮುಂಗಾಲನ್ನು ಎತ್ತಿ ಮೂತಿಯಿಂದ ಗ್ಲಾಸನ್ನು ತಿವಿಯಲಾರಂಭಿಸಿತು. ಗ್ಲಾಸು ಎಂಜಲಾಗುತ್ತದೆ ಎನ್ನುವುದಕ್ಕಿಂತಲೂ ಗೊರಸಿನ ಕೆರೆತದಿಂದ ಬಣ್ಣ ಎಲ್ಲಿ ಸ್ಕ್ರಾಚಾಗುತ್ತದೋ ಎಂದು ಬಾಗಿಲು ತೆಗೆಯುವಂತೆ ಹೇಳಿದ ಮೋಹನ. ಬಾಗಿಲು ತೆರೆಯುತ್ತಿದ್ದಂತೆಯೇ ಒಳ್ಳೆ ಸಾಕಿದ ನಾಯಿಮರಿಯಂತೆ ಎಗರಿ ಬಂದು ಚಿದಂಬರನ ತೊಡೆಮೇಲೆ ಕುಂತಿತು. ಪ್ರೀತಿಯ ಬೈಗುಳದಿಂದ ಅದರ ಬೆನ್ನು ಚಪ್ಪರಿಸಿದ ಚಿದಂಬರ 'ಏನು ಮಾಡೋಣ' ಎನ್ನುವಂತೆ ತಲೆಮೇಲೆತ್ತಿ ಮೋಹನನನ್ನು ಪ್ರಶ್ನಿಸಿದ. ಫಾರೆಸ್ಟ್‌ನವರಿಗೇ ಕೇಳೋಣವೆಂದು ಕಾರನ್ನು ತಿರುಗಿಸಿದ ಮೋಹನ.

'ಅಯ್ಯೋ ಅಷ್ಟೊಂದು ಅಟ್ಯಾಚ್‌ಮೆಂಟ್ ಬೆಳುಸ್ಕೊಂಡಿದೆ ಅಂದ್ರೆ ಕರ್ಕಂಡೋಗಿ ಸಾಕ್ಕಳಿ ಸಾರ್..' ಎಂದು ನಾಗರಾಜ್ ತಲೆಕೊಡವಿಕೊಂಡು ಅನುಮತಿ ನೀಡಿಯೇಬಿಟ್ಟ. 'ಆದರೆ ನಾಳೆ ಕಾನೂನು ತೊಡಕು ಆಗಬಾರದಲ್ವ.. ವನ್ಯಜೀವಿ ಸಂರಕ್ಷಣಾ ಕಾಯ್ದೆಯನ್ವಯ ಕಾಡುಪ್ರಾಣಿಗಳನ್ನ ಮನೆಯಲ್ಲಿ ಸಾಕೋಹಾಗಿಲ್ಲವಂತೆ, ಅದುಕ್ಕೆ..' ಎಂದವನಿಗೆ ಏನೋ ಹೊಳೆದಂತಾಗಿ, 'ಯಾವುದಾದರೂ ಜೂಗೆ ಕೊಟ್ಟುಬಿಡಬಹುದಲ್ವ ಸಾರ್..' ಎಂದು ಕೈಯ್ಯಲ್ಲಿ ಎತ್ತಿಕೊಂಡಿದ್ದ ಜಿಂಕೆಮರಿಯನ್ನು ಹ್ಯಾಂಡೋವರ್ ಮಾಡಲು ಕೈ ಮುಂದೆ ಚಾಚಿದ. ಎಲ್ಲಿ ಬಟ್ಟೆ ಗಲೀಜಾಗುತ್ತದೋ ಎನ್ನುವಂತೆ 'ಬೇಡ, ಬೇಡ.. ನೀವೇ ಹೋಗಿ ಕೊಟ್ಬಿಡಿ' ಎಂದು ಅದರ ಉಸಾಬರಿಯಿಂದ ತಪ್ಪಿಸಿಕೊಂಡ. 'ಸಾರ್.. ಸಾಹೇಬ್ರು ಯೂನಿಫಾರಂನಲ್ಲಿದ್ರೆ ಭಾಳ ಕಡಕ್ಕಾಗಿರ್ತಿದ್ರು.. ಏನೋ ನಿಮ್ಮ ಅದೃಷ್ಟ, ಸಿವಿಲ್ ಡ್ರೆಸ್ಸಲ್ಲಿ ಬಂದೌರೆ.. ಬೇಗ ಕಳುಚ್ಕಳಿ..' ಎಂದವನು, 'ಸರಿ, ಬರ್ತೀರಾ.. ಬರ್ತೀರಾ..' ಎಂಬ ಅವನ ಪುನರುಕ್ತಿಯಿಂದಲೇ ಆತನಿಗೂ ನೋಡಿಕೊಳ್ಳಬೇಕೆಂಬ ಅರಿವಾಗಿ, ಎಸಿಎಫ್ ಕಣ್ಣು ತಪ್ಪಿಸಿ ನೂರರ ನೀಲಿ ನೋಟನ್ನು ಮಡಿಚಿ ಜಾರಿಸಿದ.

ಮನೆಗೆ ಬರುತ್ತಿದ್ದಂತೆಯೇ ಸುಮಂಗಲಿ, 'ಹೆಂಡತಿ ಮಕ್ಕಳನ್ನು ಬೇಕಾದರೆ ಕಾಡಲ್ಲಿ ಬಿಟ್ಬರ್ತೀರಾ, ಆದ್ರೆ ಕಾಡುಪ್ರಾಣೀನ ಕಾಡಲ್ಲಿ ಬಿಟ್ಬರಕ್ಕೆ ನಿಮ್ಮ ಕೈಲಿ ಆಗಲ್ಲ ಅಲ್ವಾ..' ಅಂತ ಕಿಚಾಯಿಸಿದಳು. 'ಸಾಯ್ತಿದ್ದ ಅದಕ್ಕೆ ಟ್ರೀಟ್‌ಮೆಂಟ್ ಕೊಟ್ಟು ಬದುಕ್ಸಿದ್ನಲ್ಲ, ಅದಕ್ಕೆ ಅದುಕ್ಕೇನೋ ಒಂಥರಾ ಕೃತಜ್ಞತೆ ಬಂದುಬಿಟ್ಟಂಗಿದೆ..' ಎಂದೇನೋ ಕಾರಣ ಹುಡುಕಲು ಪ್ರಯತ್ನಿಸಿದ. 'ದಿನಾಲು ನೂರಾರು ದನ ಎಮ್ಮೆ ನಾಯಿ ನರಿಗಳಿಗೆಲ್ಲ ಟ್ರೀಟ್‌ಮೆಂಟ್ ಕೊಡ್ತಿರ್ತೀರಲ್ಲ, ಅವುನ್ನೂ ಹಿಂಗೇ ತಂದು ಸಾಕ್ಕಳಿ..' ಎಂದು ಹಂಗಿಸುತ್ತ ತನ್ನ ದಿನತುಂಬಿದ ಹೊಟ್ಟೆಯನ್ನು ಎತ್ತಿಕೊಂಡು ನಿಧಾನಕ್ಕೆ ಎದ್ದಳು.

'ಅದಿರ್ಲಿ ಚೆಕಪ್‌ಗೆ ಹೋಗಿದ್ದಲ್ಲ, ಡೆಲಿವರಿ ಬಗ್ಗೆ ಡಾಕ್ಟರು ಏನು ಹೇಳಿದ್ರು..' ಎಂದು ಮಾತು ಬದಲಿಸಿದ. ಅವನ ಕೈಯ್ಯಿಂದ ಜಿಂಕೆಮರಿಯನ್ನು ಈಸಿಕೊಂಡು, ಬಂಗಾರದಲ್ಲಿ ಮಾಡಿದ ಗೊಂಬೆಗೆ ದೇವರೇ ಜೀವನೀಡಿ ತಮ್ಮ ಮನೆಗೆ ಕಳುಹಿಸಿರುವನೇನೋ ಎನ್ನುವಂತೆ ಅದರ ಬಣ್ಣಕ್ಕೆ ಸೀತಾಮಾತೆಯಂತೆ ಮನಸೋತು, ಅದರ ತಲೆಸವರಿ ಮಮತೆ ವ್ಯಕ್ತಪಡಿಸುತ್ತ, 'ಮಗನ ಜೊತೆ ಆಟ ಆಡೋಕ್ಕೆ ಚೆನ್ನಾಗಿದೆಯಲ್ಲ.. ಮೊದಲ ಬಸುರಿನ ಥರ ಈ ಸಲ ಬಿಳುಚ್ಕಣದೇ ಇರೋದರಿಂದ ಗಂಡು ಆಗೋದು ಗ್ಯಾರಂಟಿಯಂತೆ..' ಎಂದು ಗುಟ್ಟನ್ನು ಹೇಳುವಂತೆ ತಿರುಮುರುವಾಗಿ ಹೇಳಿ ನಸುನಾಚಿದಳು.

ಬೆಳಗ್ಗೆಯೇ ಡ್ಯೂಟಿಗೆ ಹಾಜರಾಗಬೇಕಾಗುವುದರಿಂದ, ಅಲ್ಲದೇ ತನ್ನ ಮನೆಕಾಯುತ್ತಿರುವ ಟೋನಿಯ ಜೊತೆಗೆ ಇದರ ಆಹಾರದ ನಿಗಾ ವಹಿಸುವುದು

ಅಸಾಧ್ಯವಾದುದರಿಂದ, ಅದರ ಜವಾಬ್ದಾರಿಯನ್ನು ಹೆಂಡತಿ ಮನೆಯವರಿಗೆ ವರ್ಗಾಯಿಸಿ ರಾತ್ರಿಯ ಊಟ ಮಾಡಿ ಹೊರಟುನಿಂತ ಚಿದಂಬರ. ಮನೆಯಲ್ಲಿದ್ದ ಹತ್ತಾರು ಹಸು ಮೇಕೆಗಳ ಜೊತೆ ಇದೇನೂ ತಮಗೆ ಭಾರವಲ್ಲ ಎಂದು ಅವರಾದರೂ ಸಲೀಸಾಗಿ ಒಪ್ಪಿಕೊಂಡಿದ್ದರು.

❖

ದೀಪಾವಳಿಗೆಂದು ಚಿದಂಬರ ತಿಂಗಳು ಬಿಟ್ಟು ಹೆಂಡತಿಯ ಊರಿಗೆಂದು ಹೊರಟಾಗ ಜತೆಗೆ ಬರಲಾಗದ ಮೋಹನನಿಂದಾಗಿ ತಾನೇ ಡ್ರೈವ್ ಮಾಡುತ್ತ ಬಂದ. ಊರೊಳಕ್ಕೆ ಬರುವ ವೇಳೆಗೆ 'ವಿಸ್ಮಯ' ಒಂದು ತೊಲ ದಪ್ಪಗಾಗಿದ್ದುದ್ದು ಕಣ್ಣಿಗೆ ಬಿದ್ದು, ಅದು ಸುಖವಾಗಿರುವುದನ್ನು ಧ್ವನಿಸುತ್ತಿತ್ತು. ಹಬ್ಬದ ಪ್ರಯುಕ್ತ ದನಗಳನ್ನು ಸಿಂಗರಿಸುವಂತೆ ಇದಕ್ಕೂ ಮೈತೊಳೆದು, ಹಸಿರು ಕೆಂಪು ಗುಲ್ಲುಗಳನ್ನು ಹಾಕಿದ್ದ ಭಾವಮೈದುನ ಚಂದ್ರು. ಬಂಗಾರದ ಒಡವೆಯ ಮಧ್ಯೆಮಧ್ಯೆ ಪಚ್ಚೆ ಹವಳವನ್ನು ಸೇರಿಸಿಟ್ಟಂತೆ ಭಾಸವಾಗುತ್ತಿದ್ದ ಅದು ಚಿದಂಬರನನ್ನು ಕಂಡೊಡನೆ, ಚಿನ್ನಾಟ ಹಾಕಿಕೊಂಡು ಓಡಿಬಂದು ಕಾಲಸಂದಿ ಮೈತೂರಿಸಿ ತನ್ನ ಅತೀವ ಪ್ರೀತಿಯನ್ನ ವ್ಯಕ್ತಪಡಿಸಿತು. ತನ್ನ ಮನೆಯ ಸಣ್ಣ ಹಿತ್ತಲಿಗಿಂತ ವಿಶಾಲವಾದ ಗದ್ದೆ ಬಯಲು, ವಿಪುಲವಾಗಿ ಬೆಳೆದಿರುವ ಹುಲ್ಲು, ಸೊಪ್ಪು, ಸೆದೆ ತಿಂದುಕೊಂಡು, ಹೆಚ್ಚುಕಮ್ಮಿ ತನ್ನಂತೆಯೇ ಇರುವ ಮೇಕೆಮರಿಗಳ ಜತೆ ಚಿನ್ನಾಟ ಆಡಿಕೊಂಡು ಸುಖವಾಗಿತ್ತು. ಆ ಮಲೆನಾಡ ಸಣ್ಣಹಳ್ಳಿಯಲ್ಲಿದ್ದ ಎಂಟು ಹತ್ತು ಮನೆಗಳವರೆಲ್ಲರ ಜತೆಗೆ ಕೃಪಾತವಾಗಿ ಸಲಿಗೆ ಬೆಳೆಸಿಕೊಂಡುದು ಮಾತ್ರವಲ್ಲದೇ ಅವರೆಲ್ಲರ ಕಷ್ಟ ಸುಖದ ಪಾಲುದಾರಳಂತೆ ಎಲ್ಲರ ಮನೆಗಳಿಗೆ, ಮನಗಳಿಗೆ ಲಗ್ಗೆ ಹಾಕಿಬಿಟ್ಟಿತ್ತು. ಮುಖ್ಯರಸ್ತೆಯಿಂದ ಕೂಗಳತೆ ದೂರದಲ್ಲಿದ್ದ ಮನೆಯಿಂದ ಯಾರೇ ಬಸ್ಸಿಗೆ ಹೋಗುವುದಿದ್ದರೆ ಅವರ ಜತೆ ರಸ್ತೆವರೆಗೆ ಹೋಗುವುದು, ಬಂದವರ ಜತೆ ಮನೆವರೆಗೆ ಬರುವುದೂ ಮಾಡುತ್ತಿತ್ತು. ತನ್ನ ಸಸ್ಯಾಹಾರಿ ಆಹಾರದ ಜತೆಗೆ ಪ್ರೀತಿಯಿಂದ ಅವರು ಕೊಡುತ್ತಿದ್ದ ಸಿಹಿಪದಾರ್ಥಗಳನ್ನು ತಿಂದು ತಿಂದು ಚೆಂಗಲೆದ್ದು ಹೋಗಿದೆಯೆಂದು ಸುಮಂಗಲಿ ದೂರಿದಳು. ಕುಕ್ಕರುಗಾಲಲ್ಲಿ ಕುಂತು ಅದರ ಕೊರಳಿಗೆ ಕಟ್ಟಿದ್ದ ಹಗ್ಗದ ಬದಲು ಸ್ವಲ್ಪ ಉದ್ದನೆಯ ಕಿವಿಯನ್ನು ಹಿಡಿಯಲ್ಲಿ ಹಿಡಿದು, ಬೈಕಿನ ಆಕ್ಸಿಲೇಟರಂತೆ ಹಿಂಡಿ, 'ಅದುಕ್ಕೇ ಡುಮ್ಮಿ ಆಗಿಬಿಟ್ಟಿದೀಯಲ್ಲ..' ಎಂದು ಕಿಚಾಯಿಸಿದ.

❖

ಮಧ್ಯರಾತ್ರಿ ಸುಮಂಗಲಿಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಆತಂಕದಲ್ಲಿ ಆಕೆಯನ್ನು ಕಾರಲ್ಲಿ ಕೂರಿಸಿಕೊಂಡು, ಭಾವಮೈದುನ ಚಂದ್ರುವಿಗೆ ಬಾಗಿಲು ಹಾಕಿಕೊಳ್ಳುವಂತೆ ಹೇಳಿ ಅತ್ತೆ ಮಾವಂದಿರ ಜತೆ ನಗರದ ಆಸ್ಪತ್ರೆಗೆ ಕರೆದುಕೊಂಡು

ಹೊರಟ. ಕಾರಿನ ಸದ್ದು ಕೇಳಿ ಚಿದಂಬರ ಊರಿಗೆ ಹೊರಟುಬಿಟ್ಟನೆಂದುಕೊಂಡ ವಿಸ್ಮಯ ಗಾಬರಿಗೊಂಡಂತೆ ಕೊಟ್ಟಿಗೆಯಿಂದ ಎದ್ದು ಓಡುತ್ತ ಕಾರನ್ನು ಹಿಂಬಾಲಿಸಿತು. ಮುಂದಿನ ದಾರಿಯ ಬಗ್ಗೆ ಮಾತ್ರ ಗಮನವಿದ್ದ ಚಿದಂಬರ, ಮುಖ್ಯರಸ್ತೆಯಲ್ಲಿ ತಿರುವು ಪಡೆದು ತನ್ನ ಪಾಡಿಗೆ ತಾನು ಹೋಗುತ್ತಿದ್ದ. ಮುಖ್ಯರಸ್ತೆ ತಲುಪಿದ ವಿಸ್ಮಯಳ ಕಣ್ಣಿಗೆ ಎದುರಿನಿಂದ ಬಂದ ಯಾವುದೋ ವಾಹನದ ಫೋಕಸ್‌ಲೈಟ್ ಬಿದ್ದು ಕಣ್ಣು ಮಂಜಾಗಿ ದಾರಿ ಕಾಣದೇ ಹಾಗೆಯೇ ರಸ್ತೆ ಮಧ್ಯೆ ನಿಂತುಬಿಟ್ಟಿತ್ತು!

❖

ಬೆಳಗ್ಗೆ ಎಂಟುಗಂಟೆಗೇ ಮನೆಗೆ ಫೋನು ಮಾಡಿದ ಚಿದಂಬರ ತನ್ನ ಭಾವಮೈದುನನಿಗೆ ಗಂಡುಮಗು ಜನಿಸಿದ ಖುಷಿಸುದ್ದಿ ಹೇಳಿದ. ಆದರೆ ಅದರಿಂದ ಆತ ನಿರೀಕ್ಷಿಸಿದಷ್ಟು ಖುಷಿಗೊಳ್ಳದ್ದನ್ನು ಫೋನಿನಲ್ಲೇ ಗುರುತಿಸಿ, 'ಯಾಕೆ, ಏನಾಯಿತು? ಎನಿ ಪ್ರಾಬ್ಲಂ?' ಎಂದು ಪ್ರಶ್ನಿಸಿದ.

ರಾತ್ರಿ ವಿಸ್ಮಯ ಆ್ಯಕ್ಸಿಡೆಂಟಲ್ಲಿ ಸತ್ತುಹೋಗಿರುವ ಸುದ್ದಿ ಹೇಳುವಾಗ ಅವನ ದನಿಯಲ್ಲಿ ದುಃಖ, ವಿಷಾದ ಮಡುಗಟ್ಟಿತ್ತು.

ಚಿದಂಬರನಿಗೆ ಅದನ್ನು ಹೇಗೆ ಅರಗಿಸಿಕೊಳ್ಳಬೇಕೋ ಅರ್ಥವಾಗಲಿಲ್ಲ.

ಅತ್ತ ನೋಡಿದರೆ ಸುಮಂಗಲಿಯ ಮಡಿಲಿನಲ್ಲಿ ಮಗು ಏನೋ ಸುಖದ ಕನಸು ಕಾಣುತ್ತಿರುವಂತೆ ಮಂದಹಾಸ ಬೀರುತ್ತ ಮಲಗಿತ್ತು..

❖

(ಸುಧಾ – ಯುಗಾದಿ ವಿಶೇಷಾಂಕ, 2013)

ಅಮೃತವ ಕಡೆವಲ್ಲಿ

ಬಸು ಬೇವಿನಗಿಡದ

ಕೊಡಲಿಯ ಜೊತೆಗೆ ಕಾವನ್ನೂ ಒಗೆದಂತೆ ಹೊಲ ಮಾರಿದ ಮೇಲೆ ಊರಲ್ಲಿಯ ಮನೆಯನ್ನೂ ಮಾರಿ ದಿಕ್ಕು-ದೆಸೆ, ಕಳ್ಳು-ಕಕುಲಾತಿಯಿಲ್ಲದೆ ಮರಗಟ್ಟಿರುವ, ಆಕ್ಟೋಪಸ್‌ನಂತೆ ಯಾವಾಗಲೂ ಬಾಯಿ ತೆಗೆದೆ ಕೂತಿರುವ ಪ್ರಚಂಡ ಶಕ್ತಿಯ ಈ ಊರಿಗೆ ತಮ್ಮನ್ನೆಲ್ಲ ಕರೆತಂದು ಗತಿಗೇಡಿಗಳನ್ನಾಗಿ ಮಾಡಿರುವ ಅಪ್ಪನ ಬಗ್ಗೆ ಗಂಗಾಧರನಲ್ಲಿ ಸಿಟ್ಟು ಕೊತಕೊತ ಕುದಿಯುತ್ತಿತ್ತು. ಒಂದೆರಡು ಸಲ ಅವನೊಡಲ ಜ್ವಾಲಾಮುಖಿ ಸಿಡಿದು ಅಪ್ಪನ ಜೊತೆ ದೊಡ್ಡ ಜಗಳವೆ ಆಗಿತ್ತು. ಮುನಿಸಿಕೊಂಡು ಮನೆ ಬಿಟ್ಟು ಹೋಗಿದ್ದ. ಅಜ್ಜನ ಮನೆಗೆ ಹೋಗಿ ಸುಮ್ಮನೆ ಮಲಗಿದ್ದ. ಆದರೆ ಅಜ್ಜ, ಮಾಮಾ, ದೊಡ್ಡಪ್ಪ, ಕಾಕಾ ಮತ್ತಿತರರು ಗಂಗಣ್ಣನನ್ನು ರಮಿಸಿ 'ದೊಡ್ಡಾಂವ ಆಗಿ ನೀನ ಹೀಂಗ ಮಾಡಿದರ ಹೆಂಗೊ? ಮನ್ಯಾಗ ನಿಮ್ಮವ್ವ, ನಿಮ್ಮ ತಂಗಿ ಊಟ ಬಿಟ್ಟು ನೀನು ಯಾವಾಗ ಮನಿಗೆ ಬರ್ತೀ ಅಂತ ಕಾಯಾಕ ಹತ್ಯಾರ' ಅಂತ ಹುಬ್ಬಳ್ಳಿ ಸಮೀಪದ ತಾಯಿಯ ತವರುಮನೆ ಇಂಗಳಹಳ್ಳಿಯಿಂದ ಅವನ ಊರು ಅಬ್ಬಿಗೇರಿಗೆ ತಂದು ಬಿಟ್ಟಿದ್ದರು. ಅಬ್ಬಿಗೇರಿಯಿಂದ ಇಂಗಳಳ್ಳಿಗೆ ಹೋಗಿ ಬರುವುದು ಅವನಿಗೆ ಯಾವಾಗಲೂ ಖುಶಿಯ ಸಂಗತಿಯೆ ಆಗಿತ್ತು. ಅಜ್ಜ-ಅಜ್ಜಿಯ ಊರು ಥೇಟ್ ತನ್ನ ಊರಂತಿದ್ದರೂ ಅದ್ಯಾಕೆ ಅದರ ಬಗ್ಗೆ ಅಷ್ಟು ಮೋಹ ಎಂದು ಅವನಿಗೇ ಅಚ್ಚರಿಯಾಗಿತ್ತು. ಅಲ್ಲಿಯ ದೊಡ್ಡ ಕೆರೆಯೆ, ಆಕಾಶ ಮುಟ್ಟುವಂತಿರುವ ತೆಂಗಿನ ಮರಗಳೆ, ಅಜ್ಜನ ದನದ ಮನೆಯಲ್ಲಿ ಗೋಧಿಯ ಹುಲ್ಲು ತಿನ್ನುತ್ತ ಬಕೆಟ್‌ಗಟ್ಟಲೆ ಹಾಲು ಕೊಡುವ ದೊಡ್ಡ ಕೆಚ್ಚಲಿನ ಎಮ್ಮೆಗಳೆ, ಸಣ್ಣವನಾಗಿದ್ದಾಗಿನಿಂದ ಹಚ್ಚಿಕೊಂಡಿರುವ ಗೆಳೆಯರೆ, ಕಾಲೇಜಿಗೆಂದು ಹುಬ್ಬಳ್ಳಿಗೆ ಹೋಗಿಬರುತ್ತಿರುವ ನಿಂಗಪ್ಪಮಾಮಾನ ಮಗಳು ಶಿಲ್ಪಾಳೆ ಅಥವಾ ಓದಿದರೆ ಇಂಥ ಊರಲ್ಲಿಯೆ ಓದಬೇಕೆಂದು ಕನಸಾಗಿ ಕಾಡುತ್ತಿದ್ದ ಹುಬ್ಬಳ್ಳಿಯೆಂಬ ಶಹರವೇ-ಗಂಗಾಧರನ ತಲೆ ಗಿರಗಿರ ತಿರುಗುತ್ತಿತ್ತು. ಮ್ಯಾಟ್ರಿಕ್ ಮುಗಿದ ಮೇಲೆ ಕಾಲೇಜಿಗೆಂದು ತಾನು ಹುಬ್ಬಳ್ಳಿಗೆ ಹೋಗುತ್ತೇನೆ, ಅಲ್ಲಿ ಹಾಸ್ಟೆಲ್ ಅಥವಾ ರೂಮು ಮಾಡಿಕೊಂಡು ಇರುತ್ತೇನೆಂದು ಅಪ್ಪನಿಗೆ ಎಷ್ಟು ದೈನಾಸು ಬಿಟ್ಟಿದ್ದರೂ ಕಳಿಸಿರಲಿಲ್ಲ. 'ಯಾಕ ಈ ಊರಾಗ ಕಾಲೇಜ್ ಇಲ್ಲೇನು? ಅಥವಾ ಕಲಸಾವ್ರು ನಿನಗ ಮನಶ್ಯಾರಂಗ ಕಾಣವಲ್ಲರೋ? ಹುಬ್ಬಳ್ಳಿ ಅಂತ ಹುಬ್ಬಳ್ಳಿ, ಯಬರೇಶಿ ನನ್ನ ಮಗನ ಅಲ್ಲಿ ನಿಮ್ಮ ಅಜ್ಜನ ಆಸ್ತಿ ಐತಿ ನೋಡು, ಹೋಗಿ ಕುಕ್ಕರಬಡ್ಯಾಕ' ಎಂದು ಅವನ ಹರಯದ ಆಸೆಗೆ ಕೊಡ ತಣ್ಣೀರು ಸುರುವಿದ್ದ.

ಅವನು ಕಾಲೇಜಿಗೆಂದು ಊರಲ್ಲಿಯೆ ಸೈಕಲ್ ಹೊಡೆದುಕೊಂಡು ಹೋಗಲು ಸುರು ಮಾಡಿದ ಸಮಯದಲ್ಲಿಯೆ ಅಪ್ಪ ಯಾರಿಗೂ ಹೇಳದೆ ಕೇಳದೆ ಹುಬ್ಬಳ್ಳಿಯಿಂದ ಹೀರೋ ಹೊಂಡಾ ಬೈಕ್ ತಂದು ಇಡಿ ಊರಿಗೆ ಆಶ್ಚರ್ಯ ಮೂಡಿಸಿದ್ದ. ಮಗನಿಗೆ ತಂದಿರಬೇಕು ಎಂದು ಮಂದಿ ಅಂದುಕೊಂಡರೆ ಶಿವಪುತ್ರಪ್ಪನೆ ಅದನ್ನು ಹತ್ತಿಕೊಂಡು ಹೊಲ, ತೋಟ, ಮನೆ, ಆ ಊರು, ಈ ಊರು ಎಂದು ತಿರುಗತೊಡಗಿದ್ದ. ಬೈಕ್ ತರುವುದಕ್ಕಿಂತ ಮೊದಲೇ ಮನೆ–ಹೆಂಡತಿ ಮಕ್ಕಳು ಎಂದರೆ ಅಷ್ಟಕ್ಕಷ್ಟೆ ಆಗಿದ್ದ ಅವನಿಗೆ ಬೈಕಿನ ರುಚಿ ಹತ್ತಿದ ಮೇಲೆ ಅಮವಾಸ್ಯೆಗೊಮ್ಮೆ, ಹುಣ್ಣಿಮೆಗೊಮ್ಮೆ ಮನೆಗೆ ಬರತೊಡಗಿದ. ಗಂಗಾಧರ ಆಗೊಮ್ಮೆ ಈಗೊಮ್ಮೆ ಬೈಕ್ ತೆಗೆದುಕೊಂಡು ಕಾಲೇಜಿಗೆ ಹೋದರೆ ಅಪ್ಪ ಅಲ್ಲಿಗೆ ಹೋಗಿ ಮಗನನ್ನು ಒದರಿ 'ತಾ ಇಲ್ಲಿ, ಗಾಡಿ ಚಾವಿ ತಾ,' ಎಂದು ಗಂಗಾಧರನಿಗೆ ಗೆಳೆಯರೆದುರು ಅವಮಾನ ಮಾಡುತ್ತಿದ್ದ. "ಹೋಗ್ಲೆ, ನಿಂದ ಅಂಬಾಸಿಡರ್ ಹೊಡ್ಕೊಂಡು ಬರ್ಹೋಗು" ಎಂದು ಸ್ನೇಹಿತರು ಅವನ ಸೈಕಲಿಗೆ ಅಪಹಾಸ್ಯದ ಮುಳ್ಳು ಚುಚ್ಚುತ್ತಿದ್ದರು. ಗಾಡಿ ಬಂದ ಮೇಲೆ ಅಪ್ಪನಿಗೆ ಈಗ ಗೆಳೆಯರೂ ಸಾಕಷ್ಟಾಗಿದ್ದರು. 'ಸಾವ್ಕಾರ, ನೀನು ಗಾಡಿ ಮೊದಲ ತಗೋಬೇಕಿತ್ತು. ನೋಡತಿದ್ದಿ ಆವಾಗ ನಿನ್ನ ದರ್ಬಾರ್, ಹೋಗ್ಲಿ ಬಿಡು, ಈಗರ ಏನಾಗೇತಿ. ಇನ್ನೊಂದೆರಡ ವರ್ಷಕ್ಕ ಪಟಪಟ್ಟಿ ಗಂಗಣ್ಣಗ ಕೊಟ್ಟು ನೀನು ಕಾರ್ ತಗೋವಂತಿ. ಅದೇನು ಮಹಾ! ನಿನ್ನ ಹೊಲದ ಬದುವಿನ ತೆಂಗಿನಕಾಯಿ ರೊಕ್ಕದಾಗ ಬರತೈತಿ. ಉಳಿದಿದ್ದ ರೊಕ್ಕ ಸಂದಕದಾಗ ತುಂಬುವಂತೆ, ವೈನಿ ಕೈಯಾಗ ಪಾಟ್ಲಿ ಮಾಡಸೋವಂತೆ, ಮಗಳಿಗೆ ನೆಕ್ಲೇಸ್ ಹಾಕಿಸೋವಂತಿ..' ಅವರು ಮನೆಯಲ್ಲಿ ಹೇಳುತ್ತಿದ್ದ ವಿಷಯಗಳು ಒಂದೇ, ಎರಡೇ. ಅವ್ವ ಹುರಿದು ಕೊಡುತ್ತಿದ್ದ ಶೇಂಗಾದ ಜೊತೆಗೆ ಕಣಿ ಕಣಿ ಬೆಲ್ಲ. ಮುಗಿಯದ ಮಾತು. ಆವಾಗ ಆ ಮಾತುಗಳು ಗಂಗಾಧರನಿಗೂ ಖರೇ ಅನ್ನಿಸಿಬಿಡುತ್ತಿದ್ದವು. ಒಲೆಯ ಉರಿಯನ್ನು ಹೆಚ್ಚಿಸುತ್ತ ರೊಟ್ಟಿ ಬಡಿಯುತ್ತಿದ್ದ ಅವ್ವ ಅಪ್ಪನ ಮಾತು ಕೇಳಿಯೂ ಕೇಳಿಸದವಳಂತೆ ಇರುತ್ತಿದ್ದಳು. ಸಿಡಿಯುವ ಬೆಂಕಿಯ ಕಣಗಳು ಕ್ರಮೇಣ ಆರಿ ಮೇಲಿನ ಕರ್ರಗಿನ ದುರಾಳದಲ್ಲಿ ಒಂದಾಗುತ್ತಿದ್ದವು.

ಆದರೆ ಕಾರು, ಜೀಪು ಹೋಗಲಿ. ಮೋಟಾರ ಸೈಕಲಿಗೆ ಪೆಟ್ರೋಲ್ ಹಾಕಿಸಲಿಕ್ಕೂ ಅಪ್ಪನ ಕಡೆ ದುಡ್ಡು ಇರದಂತಹ ಪರಿಸ್ಥಿತಿ ಉಂಟಾಯಿತು. ಒಂದು ವರ್ಷ ಮಳೆ ಹೋಯಿತು. ಮತ್ತೊಂದು ವರ್ಷ ತೆಂಗಿನಗಿಡಗಳಿಗೆ ರೋಗ ಬಡಿಯಿತು. ಎಲ್ಲಕ್ಕಿಂತ ಹೆಚ್ಚಾಗಿ ಅಪ್ಪನ ಸಾಲ ದಿನದ ತಾಸು, ನಿಮಿಷ, ಸೆಕೆಂಡುಗಳನ್ನು ತಪ್ಪದಂತೆ ಬಡ್ಡಿಯನ್ನು ಲೆಕ್ಕ ಹಾಕುತ್ತಿತ್ತು. ಅಂತಹದ್ದರಲ್ಲಿಯೆ ಅಪ್ಪನಿಗೆ ಹೊಲ ಮನೆ ಮಾರಿ ಹುಬ್ಬಳ್ಳಿಗೆ ಹೋಗಬೇಕೆಂಬ, ಮನಸ್ಸು ಮಾಡಿದರೆ ಮುಂದೆ ತಮ್ಮ ಊರಲ್ಲಿಯೆ ನೂರಾರು ಎಕರೆ ಹೊಲವನ್ನು ಕೊಂಡುಕೊಳ್ಳಬಹುದೆಂಬ ಆಲೋಚನೆ ಹೊಕ್ಕು ಅದನ್ನು ತರಾತುರಿಯಲ್ಲಿ ಕಾರ್ಯಗತಗೊಳಿಸಿದ. ಹುಬ್ಬಳ್ಳಿಯ ಕುಸುಗಲ್ ರಸ್ತೆಯಲ್ಲಿ ಅಭಿವೃದ್ಧಿ ಪಡಿಸುತ್ತಿದ್ದ ಬಡಾವಣೆಯಲ್ಲಿ ನಾಲ್ಕು ಪ್ಲಾಟುಗಳನ್ನು ಖರೀದಿಸಲೆಂದು ಗೆಳೆಯರ ಜೊತೆ ಅಪ್ಪನೂ

ಒಂದು ಲಕ್ಷ ರೂಪಾಯಿ ಅಡ್ವಾನ್ಸ್ ಕೊಟ್ಟಿದ್ದ. ಅಲ್ಲಿ ಮನೆ ಕಟ್ಟಿ ಮಹಡಿಯನ್ನು ಬಾಡಿಗೆ ಕೊಡುವ ಕನಸೂ ಇತ್ತು. ರೂಮುಗಳನ್ನು ಮಾಡಿ ಹುಡುಗರಿಗೆ ಪೇಯಿಂಗ್ ಗೆಸ್ಟ್ ಆಗಿ ಕೊಡುವುದೆಂದು ಅಪ್ಪ ಏನೇನೊ ಹೇಳುತ್ತಿದ್ದ. ಮಗನಿಗೂ ಒಂದು ಪ್ರತ್ಯೇಕ ರೂಮು ಇದೆಯೆಂದು ಓಣಿಯಲ್ಲಿ ನಿಂತು ಹೇಳಿದ್ದ. ಮಗನನ್ನು ಓದಿಸಿ ಪೊಲೀಸ್ ಇನಸ್ಪೆಕ್ಟರ್ ಮಾಡುತ್ತೇನೆಂದೂ ಅವನ ಜೀಪಿನಲ್ಲಿ ತಾನು ಊರಿಗೆ ಮರಳಿ ಬರುವದಾಗಿಯೂ ಮನೆ ಮನೆಗೆ ಹೋಗಿ ಡಂಗುರ ಹೊಡೆದು ಬಂದ. 'ನೀ ಓದಿದಷ್ಟು ನಿನ್ನ ಮಗನ್ನ ಓದಿಸ್ತಿ ತಗೋ' ಎಂದು ಮಂದಿ ಒಳಗೊಳಗೆ ನಕ್ಕು ಹೊರಗೆ ಮಾತ್ರ ಅವನಂತಹ ಬಾಳೆವಂತ ಜಗತ್ತಿನಲ್ಲಿಯೆ ಇಲ್ಲವೆಂದು ಅವನನ್ನು ಪೂರಿ ಉಬ್ಬಿಸುವಂತೆ ಉಬ್ಬಿಸಿದ್ದರು. 'ನಡೀ, ನೀನು ಹುಬ್ಬಳ್ಳಿ ಅಂತಿದೀಯಲ್ಲ. ಈಗ ಅಲ್ಲೆ ಹಚ್ಚ ನಡಿ ಕಾಲೇಜಿಗೆ. ನೋಡೋಣ, ಎಷ್ಟ ಓದತೀ ಅಂತ.' ಯಾರೂ ಹೇಳಿದರೂ ಕೇಳಲಿಲ್ಲ. 'ಕಠಿಣ ಐತೆಪಾ. ಕೈಯಾಗಿನ ಹೊಲ ಕಳಕೊಂಡ ಮ್ಯಾಲ ಕುಡಿಯೋ ನೀರಿನ ಮಗಿ ಕೊಂಡಕೊಳ್ಳೋದೂ ಕಷ್ಟ ಐತಿ. ನವಿಲು ಕುಣೀತೈತಿ ಅಂತ ಕೆಂಬೂತ ಕುಣಿಯಾಕ ಆಗಂಗಿಲ್ಲ. ನಿಮ್ಮ ಗೆಳ್ಯಾರ ಮಾತ ಕೇಳಿ ಹಾಳ ಆಗಾಕ ಹೋಗಬ್ಯಾಡ.' ಇಂಗಳಳ್ಳಿ ಅಜ್ಜ, ಅಜ್ಜಿ, ಊರವರು ಶಿವಪುತ್ರಪ್ಪನಿಗೆ ಕೈಯಲ್ಲಿ ಕಡ್ಡಿ ಕೊಟ್ಟು ಹೇಳಿದರು. ಆದರೆ ಶಿವಪುತ್ರಪ್ಪನಿಗೆ ತನ್ನದೆ ಹಟ ಸಾಧಿಸುವ ಧಿಮಾಕು. ಗಂಗಾಧರನಗೂ ಹುಬ್ಬಳ್ಳಿಗೆ ಬರುವ ಆಸೆ ಒಳಗೊಳಗೆ ಇತ್ತು. ಅಷ್ಟೊಂದು ಆಸೆ ಪಟ್ಟಿದ್ದ ಊರು ಈಗ ಅವನ ಎದೆಯಲ್ಲಿ ಹೆದರಿಕೆಯ ಬೀಜ ಬಿತ್ತಿದೆ. ಪ್ಲಾಟುಗಳು ಹೋಗಲಿ. ಅಪ್ಪ ಕೊಟ್ಟ ಲಕ್ಷ ರೂಪಾಯಿಯೂ ತಿರುಗಿ ಬರಲಿಲ್ಲ. ದುಡ್ಡು ಕೇಳಲು ಅಪ್ಪ ತನ್ನನ್ನೂ ಕರೆದುಕೊಂಡು ಹೋಗಿದ್ದ. ನಾಲ್ಕಾರು ಮಂದಿ ಧಾಂಡಿಗರು ಅಪ್ಪನನ್ನು ದೂಡಿ, ಅಂಗಿ ಹರಿದು ಇನ್ನೊಮ್ಮೆ ಬಂದರೆ ಅದೇ ಪ್ಲಾಟಿನಲ್ಲಿ ಮಣ್ಣು ಮಾಡುವುದಾಗಿ ಹೇಳಿದರು. ಕುಸ್ತಿಯಲ್ಲಿ ಹೊಸ ಊರನ್ನು ಕೆಡವಬೇಕೆಂದು ಎಷ್ಟು ಪ್ರಯತ್ನಪಟ್ಟರೂ ಅದು ದಿನೆ ದಿನೆ ಹೊಸ ಡಾವು ಹಾಕಿ ಗಂಗಣ್ಣನನ್ನು ನೆಲಕ್ಕೆ ಕೆಡವುತ್ತಿದೆ. ಹುಬ್ಬಳ್ಳಿಯ ಮಾಲಕರು ಮೈಮುರಿ ದುಡಿಸುತ್ತಾರೆ. ಟೂಜಿ, ತ್ರೀಜಿ, ಫೋರ್‌ಜಿಗಾಗಿ ರಸ್ತೆಯ ಗುಂಟ ನೆಲ ಅಗಿಸುತ್ತಾರೆ. ಅವ್ವ ಕಚ್ಚೆ ಹಾಕಿ ಆ ಮಣ್ಣನ್ನು ಹೊರಗೆ ಚೆಲ್ಲುತ್ತಾಳೆ. ಗಂಗಣ್ಣನಿಗೂ ಈ ಕೂಲಿಯ ಹಣದಲ್ಲಿ ದುಡ್ಡು ಉಳಿಸಿ ಒಂದು ಮೊಬೈಲ್ ತೆಗೆದುಕೊಳ್ಳಬೇಕೆಂಬ ಆಸೆಯಿದೆ. ಗೆಳೆಯರಿಗೆ ಫೋನ್ ಮಾಡಬಹುದು. ಕಾಲೇಜು ಬಿಟ್ಟು ತಾನೀಗ ದುಡಿಯಲು ಹೋಗುತ್ತಿರುವುದರಿಂದ ಶಿಲ್ಪಾ ಬಹುಶಃ ತನ್ನೊಡನೆ ಮಾತನಾಡಲಾರಳು. ಈ ಊರು ತನ್ನನ್ನು ಎಷ್ಟೊಂದು ಅಸಹಾಯಕನನ್ನಾಗಿ ಮಾಡಿದೆ! ಆದರೆ ಎಳನೀರ ಕಾಯಿ ಕಡಿದುಕೊಡಲು ಮಚ್ಚು ಹಿಡಿದು ನಿಂತಾಗ ಮಾತ್ರ ಅವನ ಮೈಯಲ್ಲಿ ತುಸು ಧೈರ್ಯ ಬರುತ್ತದೆ.

❖

ಅಪ್ಪ ಮಾತ್ರ ಇದ್ಯಾವುದರ ಖಬರು ಇಲ್ಲದಂತೆ ದವಾಖಾನೆಯಲ್ಲಿ ಮಲಗಿಬಿಟ್ಟಿದ್ದಾನೆ. ಈ ಮೊದಲು ಕೆ.ಎಂ.ಸಿ ಯಲ್ಲಿ ಒಂದೆರಡು ಸಲ ಅಡ್ಮಿಟ್ ಆಗಿದ್ದ. 'ದೊಡ್ಡ ದವಾಖಾನ್ಯಾಗ ನನ್ನ ಸರಿ ತೋರಿಸೋದು ಬಿಟ್ಟು ಇಲ್ಲಿ ಸಾಯ್ಲಿ ಅಂತ ಹಾಕ್ಯಾರು' ಅಂತ ಮಂದಿಯೆದುರು ಮನೆಯವರ ಅಬರು ತೆಗೆಯುತ್ತಿದ್ದ. ಹೀಗಾಗಿ ಈ ಸಲ ಇಪತ್ನಾಲ್ಕು ಗುಂಡ್ಲೆ ಏಳು ಎನ್ನುವ ಹೆಸರಿನ, ಇದ್ದುದರಲ್ಲಿಯೆ ಬಡವರು ತೋರಿಸಿಕೊಳ್ಳಬಹುದಾದ, ಸಾಯಿ ಸದ್ಭಕ್ತರೊಬ್ಬರು ದೊಡ್ಡ ಮನಸ್ಸು ಮಾಡಿ ಕಟ್ಟಿಸಿದ ದವಾಖಾನೆಯೊಂದಕ್ಕೆ ಅಡ್ಮಿಟ್ ಮಾಡಲಾಗಿತ್ತು. ಸ್ವಲ್ಪ ಸೋವಿ ಎಂದ ಕೂಡಲೆ ಇಲ್ಲಿಯೂ ಕೂಡ ಮಂದಿ ಮುಕುರಿಬಿದ್ದು ಗಂಗಾಧರನಿಗೆ ಕೆ.ಎಂ.ಸಿ.ಯೆ ವಾಸಿ ಎನ್ನುವಂತಾಗಿತ್ತು. ಎಲ್ಲಿಯಾದರೂ ಆಗಲಿ, ಒಟ್ಟಿನಲ್ಲಿ ಅಪ್ಪನಿಗೆ ಆರಾಮಾದರೆ ಸಾಕು ಎಂಬ ಭಾವನೆ ತುಂಬಿಕೊಂಡು ದವಾಖಾನೆಗೊಮ್ಮೆ, ದವಾಖಾನೆಗೆ ಅಣತಿ ದೂರದಲ್ಲಿಯೆ ಇರುವ ಸರ್ಕಲಿನಲ್ಲಿ ಗುಡ್ಡೆ ಹಾಕಿದ್ದ ಎಳನೀರು ಕಾಯಿಯ ಸ್ಥಳಕ್ಕೊಮ್ಮೆ ಲೆಫ್ಟ್ ರೈಟ್ ನಡೆಸಿದ್ದ.

ಅವನು ಕಾಯಿ ಕಡಿದುಕೊಡುವ ಉದ್ಯೋಗಕ್ಕೆ ಹತ್ತಿ ಒಂದು ವರ್ಷವಾಗಿತ್ತು. ಊರಲ್ಲಿ ಇದ್ದಾಗ ಕುಡುಗೋಲಿನಿಂದ ಕಡಿದು ರೂಢಿ ಮಾಡಿಕೊಂಡಿದ್ದು ಎಷ್ಟೊಂದು ನೆರವಿಗೆ ಬಂದೀತಲ್ಲ ಎಂದು ಊರಿನ ಹಳೆಯ ದಿನಗಳನ್ನು ನೆನೆಯುವನು. ಗೆಳೆಯರಿಗೆ ಆಗ ತೋಟದ ತೆಂಗಿನಕಾಯಿಗಳನ್ನು ಸರಸರನೆ ಮರವೇರಿ ಅವರನ್ನು ಗಿಡದಿಂದ ದೂರ ಸರಿಸಿ, ಕಾಯಿ ಕೆಳಗೆ ಕೆಡವಿ ಚಕಚಕನೆ ಕಡಿದು ಕೊಡುತ್ತಿದ್ದ. 'ಅಮೃತ ಕುಡಿದಂಗ ನೋಡ್ಲೆ ನಿಮ್ಮ ತ್ವಾಟದಾಗಿನ ನೀರು' ಎಂದು ಅವರು ಹೇಳುತ್ತಿದ್ದರು. ಅಮೃತ ನೀಡುವ ಗಿಡಗಳು ಈಗ ಯಾರದೊ ಹೆಸರಿನಲ್ಲಿವೆ. ಗಿಡಗಳಿಗೆ ಈಗ ತನ್ನ ಹೆಸರಾದರೂ ನೆನಪಿದೆಯೊ ಇಲ್ಲವೊ ಗೊತ್ತಿಲ್ಲ. ತನ್ನ 'ಅಂಬಾಸಿಡರ್' ಮೇಲೆ ಹತ್ತಿಪ್ಪತ್ತು ಕಾಯಿಗಳನ್ನು ಹಾಕಿಕೊಂಡು ಬರುತ್ತಿದ್ದೆ. ಅವ್ವನಿಗೂ ಕಡಿದು ಕೊಡುತ್ತಿದ್ದೆ. 'ಬಸಸ್ಟ್ಯಾಂಡ್ ಕಡೆ ಹೋಗಿ ಮಾರ್ಕೊಂಡ ಬರಲೇನಬೇ' ಎಂದು ಅವ್ವನನ್ನು ಕೇಳಿದರೆ 'ಯಾಕ ನೀನು ಕಾಯಿ ವ್ಯಾಪಾರ ಮಾಡೊ ಏಜಂಟ್ ಆಗಾಂವ ಅದಿ ಏನ? ಮನಿಗೆಂದು ತಂದಂತ ಕಾಯಿ ಮಾರಬಾರದು. ಆಜು-ಬಾಜುನವರಿಗೆ ಕೊಡು, ಇಲ್ಲಾ ನಿಮ್ಮ ಮಾಸ್ತರರಿಗೆ ಕೊಡು' ಎಂದಿದ್ದಳು. ಅಂಬಾಸಿಡರ್ ಏರಿಕೊಂಡು ಹೋಗಿ ಕೊಟ್ಟು ಬಂದಿದ್ದೆ. ದೊಡ್ಡ ಕ್ಯಾರೇಜಿನ ಆ ಸೈಕಲ್ ಕೂಡ ಮನೆಯ ಸಾಲದಲ್ಲಿ ಮುಳುಗಿ ಹೋಯಿತು. ಸೈಕಲ್ ಹೋದದ್ದಕ್ಕೆ ತಾನು ಊರು ಬಿಡುವ ಮುನ್ನ ಅಳುತ್ತ ನಿಂತಿದ್ದೆ. ಆದರೆ ಅವ್ವ ಬೈದು ಕರೆ ತಂದಿದ್ದಳು. "ಹೊಲ-ಮನೀನ ಹೋಗ್ಯೆತಿ. ಸೊಟ್ಟ ಸೈಕಲ್‌ಗೆ ಅಳ್ತಿಯಲ್ಲೊ. ನೀನು ಸ್ವಂತ ದುಡಿದು ತಗೋವಂತೆ, ನಡಿ." ಆ ಸೈಕಲ್‌ನ್ನೂ ಈಗ ಯಾರಾದರೂ ಹತ್ತುತ್ತಿದ್ದಾರೆಯೇ? ಅಥವಾ ಜಂಗ್

ಹಿಡಿದು ಓಡದಂತಾಗಿದೆಯೆ? ಹಳೆ ಕಬ್ಬಿಣದವನು ಬಂದಾಗ ಹಾಕಿದರೆ? ಅವ್ವ ತನ್ನನ್ನು ಕಾಯಿ ಮಾರುವ ದಲ್ಲಾಳಿಯೇನೊ ಎಂದು ಹಂಗಿಸಿದ್ದಳು. ಆದರೆ ಈಗ ದಲ್ಲಾಳಿ ಆಗುವ ಯೋಗ್ಯತೆಯೂ ತನಗಿಲ್ಲ. ಟ್ರಕ್ಕಗಟ್ಟಲೆ ಕಾಯಿ ಹಾಕಿಸಿಕೊಳ್ಳುವಷ್ಟು, ದೊಡ್ಡ ಊರಿನಲ್ಲಿ ನಾಲ್ಕು ಕಡೆ ನಾಲ್ಕು ಆಳುಗಳನ್ನಿಟ್ಟು ಕಾಯಿ ಸುರುವಿ ವ್ಯಾಪಾರ ಮಾಡುವ ಕೂವತ್ತು ತನಗಿದೆಯೇನು? ಅಪ್ಪ ಕನಿಷ್ಠಪಕ್ಷ ದಲ್ಲಾಳಿಯಾಗಿದ್ದರೂ ಆಗಿದ್ದರೆ ತಮ್ಮ ಬಾಳೆ ಮೂರಾಬಟ್ಟೆಯಾಗುವ ಪರಿಸ್ಥಿತಿ ಬರುತ್ತಿರಲಿಲ್ಲ ಎನಿಸಿ ಗಿರಾಕಿಗಳಿಲ್ಲದೆ ಒಮ್ಮೊಮ್ಮೆ ವಿಷಮಯವಾಗುವ ಈ ಸಮಯವನ್ನು ಸುಮ್ಮನೆ ಸವರುವನು. ಯಾವುದೊ ದಲ್ಲಾಳಿಯ ನೆರವಿನಿಂದ ಕಾಯಿ ಹಾಕಿಸಿಕೊಂಡು ಮಾರುತ್ತಿದ್ದೇನೆ. ಕಾಯಿಯೆ ಕೈ ಹಿಡಿದಿದೆ. ಯಾವ ಕಾಲೇಜಿನಲ್ಲಿ ಅವನು ಓದಬೇಕೆಂದು ಆಸೆಪಟ್ಟಿದ್ದನೊ ಅದೆ ಕಾಲೇಜಿನ ಎದುರು ಈಗ ಕಾಯಿ ಕತ್ತರಿಸುವಾಗ ಅವನ ಮುಖದಲ್ಲಿ ವಿಷಾದದ ಛಾಯೆಯೊಂದು ಸುಳಿದು ಹೋಗುವುದು. ಹುಬ್ಬಳ್ಳಿಗೆ ಹೊಸತಾಗಿ ಬಂದಾಗ, ಅಪ್ಪನ ಕೈಯಲ್ಲಿ ರೊಕ್ಕ ಆಡುವಾಗ ಒಂದಷ್ಟು ದಿನ ಕಾಲೇಜಿಗೂ ಗಂಗಾಧರ ಹೋಗಿದ್ದ. ಊರಿನ ಕಾಲೇಜಿಗೂ ಇಲ್ಲಿನ ಕಾಲೇಜಿಗೂ ಯಾಕೊ ಹೊಂದಾಣಿಕೆಯೆ ಆಗಲಿಲ್ಲ. ಇಲ್ಲಿಯ ಗೆಳೆಯರು ಸ್ವತಃ ತನ್ನನ್ನು 'ಹಳ್ಳಿಯಿಂದ ಬಂದಾಂವ' ಅಂತ ಒಂದೆರಡು ಸಲ ಅಂದದ್ದು ಅವನ ಕಿವಿಗೂ ಬಿದ್ದಿದೆ. ಇಲ್ಲಿ ಯಾರೂ ಹಚ್ಚಿಕೊಳ್ಳುವುದಿಲ್ಲ. ಅಪ್ಪನಿಗೆ ಆರಾಮವಿಲ್ಲದ್ದನ್ನು ಅವರು ತಮಗೆ ಸಂಬಂಧವೆ ಇಲ್ಲವೆನ್ನುವಂತೆ ಪರಿಗಣಿಸಿದರು. ಕಾಲೇಜಿನ ಗೆಳೆಯರು ಬಿಟ್ಟು ಹೋದರೆ ಹೋಗಲಿ. ಬೀದಿ ವ್ಯಾಪಾರದ ಹೊಸ ಗೆಳೆಯರು ಸಿಕ್ಕಿದ್ದಾರಲ್ಲ ಎಂಬ ಸಂತಸ ಎದೆಯಲ್ಲಿ ತುಂಬಿಕೊಂಡಿತ್ತು. ತನ್ನ ಬಾಜೂ ದೊಡ್ಡ ಎಳನೀರ ಗುಡ್ಡೆಯನ್ನು ಬೇಸರವಿಲ್ಲದೆ ಕಡಿದುಕೊಡುವ ತನಗಿಂತ ಸಣ್ಣವನಾದ ಮಹಮ್ಮದ್‌ಲಿ, ಉರುಳುವ ಗಾಡಿಯ ಮೇಲೆ ಮೊಸಂಬಿ– ಪೈನಾಪಲ್ ಜ್ಯೂಸ್ ಮಾಡಿಕೊಡುವ ರಾಜಸ್ತಾನದಿಂದ ಬಂದಿರುವ ಕೇಶವಕುಮಾರ, ಕಬ್ಬಿನ ರಸದ ಅಂಗಡಿ ಇಟ್ಟುಕೊಂಡಿರುವ ಬಾಳಾಸಾಹೇಬ ತನ್ನ ಒಂಟಿತನವನ್ನು ದೂರ ಮಾಡುತ್ತಿದ್ದಾರೆ. ಕಬ್ಬಿನ ಹಾಲನ್ನು ಒತ್ತಾಯದಿಂದ ಅವ್ವನಿಗೆ ಕುಡಿಸುವ ಬಾಳಣ್ಣ ಅವಳಿಗೆ ಮತ್ತೊಬ್ಬ ಮಗನೆ ಆದಂತಾಗಿದ್ದಾನೆ. 'ಏ, ಬಾಳ್ಯಾ, ಗಂಗಣ್ಣ ಅವರಪ್ಪನ ಹತ್ತಿರ ಹ್ವಾದಾಗ ಸ್ವಲ್ಪ ನಮ್ಮ ಕಾಯಿ ಕಡದ ಕೊಡ್ರೆಪಾ' ಎಂದು ತಾನಿಲ್ಲದ ಸಮಯದಲ್ಲಿ ವ್ಯಾಪಾರವನ್ನೂ ಮಾಡುತ್ತಾಳೆ. ಕಬ್ಬಿನ ಹಾಲಿನ ನೊರೆ ಅವಳ ತುಟಿಯ ಮೇಲೆ ಉಳಿದದ್ದನ್ನು ಕಂಡು ಬಾಳು 'ಆಂಟಿ, ನಿಮಗ ಮೀಸಿ ಮೂಡೈತಿ' ಅಂತ ನಗುವನು. 'ಬರ್ಲಿ ಬಿಡೊ' ಅಂತ ಅವ್ವನೂ ನಗುತ್ತಿದ್ದಳು. ಊರಿನಿಂದ ಮಂದಿ ಮಾತ್ರ ಮಲಗಿಕೊಂಡ ಅಪ್ಪನನ್ನು ನೋಡಲು ಎಷ್ಟೊ ಮಂದಿ ಬಂದು ಹೋದರು. ಇನ್ನೂ ಬರುತ್ತಿದ್ದಾರೆ. ಅವರಲ್ಲಿ 'ಒಂದಷ್ಟು ಮಂದಿ ಅಂವನ್ನ ಹಾಳ ಮಾಡಿದ್ಯೋರೂ ಅದಾರು' ಎಂದು ಅವ್ವ ಶಪಿಸುತ್ತಿದ್ದಳು. ಯಾರು ಯಾರನ್ನು ಹಾಳು ಮಾಡಿದರು? ಯಾರಿಗೆ ಗೊತ್ತು?

ಹಾಳಾಗುವವರಿಗೆ ತಿಳಿಯುವದಿಲ್ಲವೆ? ನೂರು ದಾಟಿರುವ ಅಜ್ಜಿಯ ಮಾತು ಮುದ್ದೆಯಾಗಿ ಮಲಗಿರುವ ಅಪ್ಪನ ಪಲ್ಲಂಗದ ಸುತ್ತ ಪ್ರದಕ್ಷಿಣೆ ಹಾಕುತ್ತದೆ. ಆದರೂ ಅದು ಅಪ್ಪನಿಗೆ ಮುಟ್ಟಿದಂತೆ ಅನಿಸುವುದಿಲ್ಲ.

ಅಪ್ಪ ದವಾಖಾನೆಯಲ್ಲಿ ಬಿದ್ದುಕೊಂಡು ಜಲ್ದಿ ಆರಾಮವಾಗಲಾರದ ಕಾರಣಕ್ಕೆ ಹೆಂಡತಿ ಮಕ್ಕಳನ್ನು ನರ್ಸ್–ಡಾಕ್ಟರ್‌ಗಳನ್ನು ಇಪ್ಪತ್ನಾಲ್ಕು ತಾಸು ಬಿಟ್ಟೂ ಬಿಡದೆ ಬೈಯುತ್ತಿರುತ್ತಾನೆ. ಅಕಸ್ಮಾತ್ ದುಡ್ಡಿರುವ ಯಾವ ಪುಣ್ಯಾತ್ಮನಾದರೂ ಬೈಗುಳದ ಟಿ.ವಿ.ಚಾನಲ್ ಮಾಡಿದರೆ ಅಪ್ಪನಿಗೆ ಅದರಲ್ಲಿ ಕೆಲಸ ಸಿಗುವುದು ಗ್ಯಾರಂಟಿಯೆನಿಸಿತು. ಶತಶತಮಾನಗಳಿಂದ ಹರಳುಗಟ್ಟುತ್ತ ಬಂದಿರುವ ಬೈಗುಳಗಳ ದೊಡ್ಡ ಖಜಾನೆ ಅಪ್ಪನ ಎದೆಯಲ್ಲಿ ಭದ್ರವಾಗಿತ್ತು. ಬೈಗುಳಗಳು ಅವನ ಬಾಯಿಯಿಂದ ಹೊರಬಂದಷ್ಟೂ ಒಳಗೆ ಹೆಚ್ಚಾಗುತ್ತಿದ್ದವು. ದೇಶದ ಹಣದುಬ್ಬರ ಹಾಗೂ ಬಡ್ಡಿದರಗಳನ್ನು ಮೀರಿ ಅವು ದ್ವಿಗುಣವಾಗುವ ರೀತಿಗೆ ಯಾರಾದರೂ ಆಶ್ಚರ್ಯಪಡಬಹುದಾಗಿತ್ತು. "ಹೊಲದಾಗ ಎಷ್ಟ ಉತ್ಪನ್ನ ಬಂದೀತು? ಅದನ್ನ ಮಾರಿ ಕೈಯಾಗ ರೊಕ್ಕ ಇಟಗೊಂಡು ಬಡ್ಡಿಗೆ ಕೊಟ್ರ ಅದರ ಹತ್ತ ಪಟ್ಟು ಗಳಿಸಬಹುದು. ಪಡಪೋಸಿ ಸೂಳೆಮಕ್ಕಳು ಬುದ್ಧಿ ಎಲ್ಲಿ ಇಟ್ಟಾರೊ ಏನೊ, ಒಂದು ತಿಳಿಯಂಗಿಲ್ಲ" ಎಂದು ಜೀವನದ ಲೆಕ್ಕಾಚಾರವನ್ನು ಮಂದಿಗೆ ಹೇಳುತ್ತಿದ್ದ ಶಿವಪುತ್ರಪ್ಪನ ಮಾತು ಅವನಿಗೆ ಉಲ್ಟಾ ಹೊಡೆದದ್ದನ್ನು ಅವನೆಂದೂ ಒಪ್ಪುವುದಿಲ್ಲ. "ನನ್ನ ಕಿಸೆದಾಗಿನ ಕಟ್ಟಕಡಿ ಒಂದು ರೂಪಾಯಿ ಕೈ ಬಿಟ್ಟು ಹೋಗುತನಕ ನಾ ಸೋತೇನಿ ಅಂತ ಅನ್ನಂಗಿಲ್ಲ. ಈಗ ನನ್ನ ನೋಡಿ ನಗ್ತೀರಲ್ಲ. ನಗ್ರಿ, ನಾ ಹಾಸಿಗೆ ಹಿಡಿದೇನಿ ಅಂತ ಏನ ಅಂದುಕಟ್ಟಿಕೊಳ್ತೀರೊ ಕಟ್ಟಿಕೊಳ್ರಿ, ಆದರ ಮುಂದ ನೋಡೀವ್ರಂತೆ. ಈ ಒಂದು ರೂಪಾಯಿಯಿಂದ ಇಡಿ ಈ ಪಟ್ಟಣ ಕೊಂಡಕೋತೇನಿ. ಆವಾಗ ಒಲಿಯೊಳಗ ಕಟ್ಟಿಗೆ ಬದಲಿ ಬರೇ ನೋಟ ಸುಟ್ಟು ಅಡಿಗೆ ಮಾಡಿಸ್ತೀನಿ. ಬಿಟ್ಟ ಬಂದ ಊರಿಗೂ ಇದ್ದ ಊರಿಗೂ ಬೂಂದೆ ಊಟ ಹಾಕಸ್ತೇನಿ. ಅಂತ ಇಂಥಾ ಉಂಡಿ ಅಲ್ಲ. ಬೂಂದೆ ಬೂಂದಿ ಬೂಂ.." ಜೋರಾಗಿ ಅನ್ನಲಾರದೆ ಎದೆಯ ಉಸಿರು ಕಟ್ಟಿಕೊಂಡು ತನ್ನ ಎದೆಯನ್ನು ತಾನೆ ಜೋರಾಗಿ ತಿಕ್ಕಿಕೊಳ್ಳುತ್ತ ಹಾಸಿಗೆ ಮೇಲೆ ಉರುಳಾಡುವನು. ಅವನ ಕಿಸೆಯಲ್ಲಿನ ದುಡ್ಡು ಖಾಲಿಯಾದಷ್ಟೂ ಅವನ ಬೈಗುಳಗಳ ಸಂಖ್ಯೆ ಹೆಚ್ಚಿಗೆಯಾಗುತ್ತಿತ್ತು. ಅವನ ಮಾತಿಗೆ ನಗಬೇಕೋ ಅಳಬೇಕೊ ಎಂದು ಸುತ್ತಮುತ್ತಲಿನ ರೋಗಿಗಳು ಮೂಕವಿಸ್ಮಿತರಾಗುತ್ತಿದ್ದರು. ಗಂಗಾಧರ ಹಾಸಿಗೆ ಬಳಿ ಇದ್ದರಂತೂ ಅಪ್ಪನನ್ನು ಜೋರಾಗಿ ದೂಡಿ 'ಸುಮ್ಮನ ಮಲಕ್ಕೊ. ಎಷ್ಟ ಸಲ ಹೇಳಬೇಕು ನಿನಗ' ಎಂದು ಮನೆತನದ ಮರ್ಯಾದೆ ಹೋದಿತೆಂದು ಸಾವಕಾಶ ಹೇಳುವನು. ಬಡತನಕ್ಕಿಂತ ಅಪ್ಪ ಮಾಡುತ್ತಿರುವ ಅಪಮಾನವೆ ಹೆಚ್ಚಾಗುತ್ತಿದೆಯೆನಿಸಿತು.

"ಸಣ್ಣವರಿದ್ದಾಗನ ಈ ಮಕ್ಕಳ ಕುತ್ತಿಗಿ ಹಿಚಕಬೇಕಿತ್ತು. ಹೇಂತಿ ತಲಿ ಒಲ್ಯಾಗ ಹಾಕಿ ಸುಡಬೇಕಿತ್ತು. ಅಂದ್ರ ಇವ್ರಿಗೆ ಬುದ್ಧಿ ಬರ್ತಿತ್ತು. ನಾ ಇನ್ನೊಂದು ಮದ್ವಿಯಾಗಿ ಆರಾಮಾಗಿ ಇರಬಹುದಿತ್ತು" ಎಂದು ಅಪ್ಪ ಅವನ ಹಾಗೆ ಅಡ್ಮಿಟ್ ಆದವರ ಎದುರು ಹೊಟ್ಟೆಯೊಳಗಿನ ಸಿಟ್ಟು ಕಾರಿಕೊಳ್ಳುತ್ತಿದ್ದ. ಕೆಲವರು ಅಪ್ಪನದು ನಯಾಪೈಸೆ ತಪ್ಪಿಲ್ಲವೆಂದೂ ಈಗಿನ ಕಾಲದ ಅನಿಷ್ಟ ಹುಡುಗರ ಸ್ವಾರ್ಥದಿಂದ ಅಪ್ಪನಾದವನು ನರಕ ಅನುಭವಿಸುವಂತಾಗಿದೆಯೆಂದೂ ತಾವಿಲ್ಲದಾಗ ಅವನಿಗೆ ಬೆಂಬಲ ಸೂಚಿಸುತ್ತಿದ್ದರು. 'ನಿಮ್ಮ ಹುಡುಗ ದ್ಯಾಮವ್ವನ ಕ್ವಾಣ ಆಗ್ಯಾನ. ನೌಕರಿ ಹಿಡುದು ಅಪ್ಪ-ಅಮ್ಮನ್ನ ಸಾಕಾಕ ಏನ ಬ್ಯಾನಿ ಆಗೇತಿ? ನಮ್ಮ ಮನ್ಯಾಗ ಆಗಿದ್ರ ರಾತ್ರಿ ಅಲ್ಲ ಹಾಡ ಹಗಲ ಅಂವನ್ನ ಕಡದು ಹೊಳ್ಯಾಗ ಚೆಲ್ಲತಿದ್ವಿ' ಎಂದು ತಮ್ಮ ಮಕ್ಕಳನ್ನು ಹೊಡೆದ ಪ್ರತಾಪಗಳನ್ನು ಹೇಳಿಕೊಳ್ಳುತ್ತಿದ್ದರು. ಆಗ ಅಪ್ಪನಿಗೆ ಮತ್ತಷ್ಟು ಉಮೇದು ಉಕ್ಕಿ ಬಂದು ಮಗನ ಮೇಲೆ ಏರಿ ಹೋಗುತ್ತಿದ್ದ.

"ಏ, ಮಗನ, ನನ್ನ ಹೊಟ್ಯಾಗ ಹುಟ್ಟಿ ನನ್ನ ದೂಡ್ತಿಯೇನ್ಲೆ? ಗಂಗ್ಯಾ, ನಿನ್ನ ಬಂಗಾರದಂಗ ಬೆಳೆಸಿದ್ದರ ಉಪಕಾರ ತೀರಿಸಿದಲ್ಲೆಲೆ. ಕಾಲೇಜ ಕಲೀಲಿ ಅಂತ ದೊಡ್ಡ ಸಿಟಿಗೆ ಕರಕೊಂಡ ಬಂದ್ರ ಶಾರ್ ಮಂದಿ ನೋಡಿ ನೀವೂ ಕಲಿತ್ರಿ ಕಾಣತೈತಿ. ಆಕೀನೂ ಕಲ್ತಾಳ, ನೀನೂ ಕಲಿತಿ. ಮನಿ ಯಜಮಾನಗ ಮುಳುಗಸಬೇಕಂತ ಮಾಡೀರಿ. ಹೋಗೋಗು. ಶಾಣ್ಯಾ ಅದಿ ಹೋಗು. ಏನ ನನಗ ಹುಟ್ಟೀಯೊ ಇಲ್ಲಾ ಬ್ಯಾರೆ ಯಾರ್ಗೆರ ಹುಟ್ಟೀಯೊ, ಯಾರಿಗ್ಗೊತ್ತು?" ಕಟಕಟ ಹಲ್ಲು ಕಡಿದ. ಶಿವಪುತ್ರಪ್ಪನ ಬಾಯಲ್ಲಿಯ ಅಳಿದುಳಿದ ಹಲ್ಲುಗಳು ಉದುರಿ ಬಿದ್ದುವೇನೋ ಎನ್ನುವಂತೆ ಮಂದಿ ಕುತೂಹಲದಿಂದ ಕರ್ರಗಾಗಿದ್ದ ಅವನ ಹಲ್ಲುಗಳನ್ನೆ ನೋಡಿದರು. ಅದು ಅಪ್ಪನ ನಿತ್ಯದ ಆಶೀರ್ವಾದವೆಂಬಂತೆ ಮಗ ಒಂದಿನಿತೂ ಆಕ್ರೋಶಗೊಳ್ಳದೆ ಅವನ ಎದೆಯನ್ನು ನೀವಿ ಎಷ್ಟೋ ವರ್ಷಗಳ ಹಿಂದಿನ ಬಣ್ಣಗೆಟ್ಟಿದ್ದ ಬಿಸ್ಲೇರಿ ಬಾಟಲಿಯಿಂದ ನೀರು ಕುಡಿಸಿದನು. ತೆಂಗಿನ ತೋಟವಿದ್ದರೂ ಸಾವಿರಾರು ಕಾಯಿಗಳನ್ನು ಹಿಂದೆ ಮಾರಿದ್ದರೂ ಅಪ್ಪ ಒಂದು ದಿನವೂ ಎಳನೀರು ಕುಡಿಯಲಿಲ್ಲ. 'ಎಳನೀರನ್ನ ಆರಾಮ ಇಲ್ಲದೋರು ಕುಡೀತಾರು. ನನಗೇನಾಗೇತಿ. ನಾ ಕುಡಿಯೋದು ಬ್ಯಾರೆ' ಎಂದು ಬಾಜೂ ಮನಿ ಪಂಚಪ್ಪನ ಜೊತೆ ಗಹಗಹಿಸಿ ನಗುತ್ತಿದ್ದ. ಈಗ ದಿನಾಲೂ ಎಳನೀರು ಅಪ್ಪನಿಗೆ ಕುಡಿಸಬೇಕೆಂದರೂ ಡಾಕ್ಟರರೆ ಬೇಡ ಅನ್ನುತ್ತಾರೆ. 'ಕಫ ಜಾಸ್ತಿ ಅಕ್ಕೈತಿ. ಅಲ್ಲಿ ಒಳಗ ಗಟ್ಟಿ ಆಗಿ ಸಾಯ್ತಾನ ನೋಡು. ನಿಮ್ಮ ಮನಸು. ಬೇಕಾದ್ರ ಕೊಡ್ರಿ' ಎನ್ನುತ್ತಿದ್ದರು. ಅವನ ತೋಟದ ಅಮೃತ ಮರಳಿ ಅವನಿಗೇ ವಿಷವಾಯಿತೆ?

ಅವರ ಬಾಜೂ ಹಾಸಿಗೆಯಲ್ಲಿ, ಕಡ್ಡಿಯಂತಾಗಿದ್ದ ಮಗಳನ್ನು ಆರೈಕೆ ಮಾಡುತ್ತಿದ್ದ ಗಂಗಾಧರನ ತಾಯಿಯ ವಯಸ್ಸಿನ ಹೆಂಗಸೊಬ್ಬಳು ತಮ್ಮ ಹುಡುಗಿಗೆ ತಿನ್ನಿಸುತ್ತಿದ್ದ ಮೋಸಂಬಿ ಹಣ್ಣಿನ ಎರಡು ಹೋಳುಗಳನ್ನು ಅವನ ಕೈಗೆ ಕೊಡುತ್ತ 'ಏ ಹುಡುಗಾ,

ತಗೊ, ನಿಮ್ಮ ಅಪ್ಪಗ ಈ ಹಣ್ಣ ತಿನ್ನಿಸು, ಪಾಪ! ಬಾಳ ತಾಪ ಮಾಡ್ಕೊಂತಾನು' ಎಂದು ಹೃದಯವನ್ನೆ ಕೊಟ್ಟಂತೆ ಮಾಡಿದಳು. ಆಮೇಲೆ ಸಪ್ಪಗಾಗಿದ್ದ ಗಂಗಾಧರನ ಮುಖ ಎತ್ತಿ ಹೇಳಿದಳು 'ತಮ್ಮಾ, ನೀ ಅಂವನ ಮಾತ ತಲಿಗೆ ಹಚ್ಚಕೋಬ್ಯಾಡ. ಎಷ್ಟ ಆದ್ರೂ ಹುಟ್ಟಿಸಿದ ತಂದಿ ಅದಾನು. ನಿಮ್ಮ ಅವ್ವಗೂ ನಿನ್ನೆ ಬುದ್ಧಿ ಹೇಳಿ ಕಳಿಸೇನಿ. ಗಂಡಸರು ಏನೇನರ ಅಂತಾರಂತ ನಾವೂ ಹಂಗ ಮಾಡಿದ್ರ, ನಮಗ ಮತ್ತ ಅವರಿಗೆ ಫರಕ ಏನ ಉಳೀತು? ಮುತ್ತಿನಂಥ ಮಕ್ಕಳ ಸಲುವಾಗಿಯಾದ್ರೂ ಹಿಡಿದ ಬಾಳೆ ಕೈ ಬಿಡಬ್ಯಾಡ ಅಂತ ಹೇಳಿ ಕಳಿಸೇನಿ. ಗಂಗಣ್ಣ, ಇನ್ನೊಂದು ಮೊಸಂಬಿ ಹೋಳು ಕೊಡ್ಲೇನೊ?'

'ಬ್ಯಾಡ ಚಿಗವ್ವಾ, ಸಾಕು. ಇನ್ನೊಂದು ಸ್ವಲ್ಪ ಹೊತ್ತು ಬಿಟ್ಟು ಅನ್ನ ಸಾರು ತಗೊಂಡು ಬರ್ತೀನಿ.' ಅಪ್ಪನ ಎದೆ, ಕೈ–ಕಾಲು ತಿಕ್ಕಿ ಅವನ ಹೊಟ್ಟೆಯೊಳಗಿನ ಉರಿಯನ್ನು ಗಂಗಾಧರ ಶಾಂತಗೊಳಿಸಿದ. ಅಕಾಲದಲ್ಲಿಯೆ ಮುದುಕನಾಗಿದ್ದ ಶಿವಪುತ್ರಪ್ಪ ನೋಡನೋಡುತ್ತಿರುವಂತೆಯೆ ಗೊರಕೆ ಹೊಡೆಯತೊಡಗಿದ. ಮಗ ತುಂಬಿದ ಕಣ್ಣುಗಳಿಂದ ಅಪ್ಪನನ್ನೆ ನೋಡಿದ. ದೊಡ್ಡ ದೇಹದ ಅಪ್ಪ ಐದಾರು ತಿಂಗಳಲ್ಲಿ ಗುಬ್ಬಿಯಂತಾಗಿದ್ದಾನೆ. ಅವನು ಮುದುಡಿ ಮಲಗಿದ ಸ್ಥಿತಿ ನೋಡಿದರೆ ಗಾದಿಯ ಮೇಲೆ ರೂಪ ಮತ್ತು ಆಕಾರ ಕಳೆದುಕೊಂಡ ತಲೆದಿಂಬು ಮಲಗಿದಂತಾಗಿದೆ.

ಗಂಗಣ್ಣನಿಗೆ ಅಪ್ಪನ ಮೇಲೆ ಕೋಪ ಬರುತ್ತಿದ್ದರೂ ಅವನ ಸ್ಥಿತಿಯನ್ನು ನೋಡಿದಾಗ ಕರಗಿ ಬಿಡುತ್ತಿದ್ದ. ಅಪ್ಪನ ಎದೆಗೂಡಿನ ರಕ್ತ–ಮಾಂಸ ಕರಗಿ ಹೋಗಿ ಎಲುಬು, ನರ–ನಾಡಿ ಎದ್ದು ಕಾಣುತ್ತಿದ್ದವು. ಹೊಟ್ಟೆ ಸಂಪೂರ್ಣ ಇಳಿದು ಹೋಗಿ ಅವನ ಕೆಮ್ಮು ಪ್ರಾರಂಭವಾಯಿತೆಂದರೆ ಹೊಟ್ಟೆ ಮತ್ತು ಎದೆಯ ಭಾಗವೆಲ್ಲ ಮುದುರುವ, ಸುಕ್ಕು ಬೀಳುವ, ಅಪ್ಪನ ಗಟ್ಟಿ ಜೀವವನ್ನು ಸೋಲಿಸಿ ಬಿಡುವ ಹೊಳೆಯ ದೊಡ್ಡ ಮಡುವಿನಂತೆ ಅನಿಸುತ್ತಿತ್ತು. ಆಳ ಗೊತ್ತಿಲ್ಲದ ಈ ಅಪರಿಚಿತ ಮಡುವು ದಿನೆ ದಿನೆ ಅವನನ್ನು ಒಳಗೆ ಎಳೆದುಕೊಳ್ಳುತ್ತಿತ್ತು. ಅವನ ಆಕ್ರಂದನಕ್ಕೆ ಮಗನ ಕಣ್ಣಲ್ಲಿ ನೀರು ಒಸರುತ್ತಿತ್ತು. 'ಹೊಟ್ಯಾಗ ಹಸಿ ಖಾರಾ ಕಲಿಸಿದಂಗ ಆಗಾತೈತೊ ಯಪ್ಪಾ, ನನಗ ಒಂದ ಗುಟುಕು ವಿಷ ಕೊಟ್ಟು ಸಾಯಿಸ್ರಿ' ಎಂದು ಅಪ್ಪ ಕರುಳೊಳಗಿನ ನಜ್ಜುಗುಜ್ಜುಗಳನ್ನು ಮುಖದಲ್ಲಿ ಕಿವುಚುತ್ತ ಬೇನೆಯ ನೂರಾರು ಪ್ರಕಾರಗಳನ್ನು ಸುತ್ತಮುತ್ತಲಿನವರೆಗೆ ಉಣಬಡಿಸುತ್ತಿದ್ದ. ಹೊರಗಡೆ ದುಡಿಮೆಗೆ ಇರುವ ಕಷ್ಟಕ್ಕಿಂತ ಈ ಸಾವನೋವಿನ ಕಷ್ಟಗಳನ್ನು ಅಬ್ಬಬ್ಬಾ ನೋಡಬಾರದಪ್ಪ ಎಂದು ಗಂಗಣ್ಣ ಬದುಕಿನ ವಿರಾಟರೂಪ ದರ್ಶನವಾದದ್ದಕ್ಕೆ ಮತ್ತಷ್ಟು ಮುದುಡಿ ಕುಳಿತುಕೊಳ್ಳುತ್ತಿದ್ದ. ಕಷ್ಟ ಕಾಲದಲ್ಲಿ ತನ್ನ ಅಪ್ಪ ಅವನ ಅಪ್ಪನನ್ನು ನೆನೆಯುವುದು ಕೂಡ ಗಂಗಾಧರನಿಗೆ ತುಂಬ ವಿಚಿತ್ರ ಎನಿಸುತ್ತಿತ್ತು. 'ಯಪ್ಪಾ' ಎಂಬ ಅವನ ಆರ್ತನಾದ ದವಾಖಾನೆಯ ಇಡಿ ತಾರಸಿಗೆ ಬಡಿದು ಪ್ರತಿಧ್ವನಿಯಾಗಿ ಎಲ್ಲ ರೋಗಿಗಳ ನೋವನ್ನು ಅಪ್ಪ ಒದರಿದನೇನೊ

ಎನ್ನುವಂತಿರುತ್ತಿತ್ತು. ನೋವಿನ ಧ್ವನಿಯ ತರಂಗಗಳು ಕಲ್ಲು, ಸಿಮೆಂಟು, ಉಸುಕುಗಳಲ್ಲಿ ಕಾಣದಂತಿರುವ ನಿರ್ವಾತವನ್ನು ಆಕ್ರಮಿಸಿಕೊಳ್ಳುತ್ತ ಅವನ ಸಂಕಟ ಯಾತನೆಗಳನ್ನು ಮುಗಿಲಿಗೆ ಮುಟ್ಟಿಸಿಯಾವೆ ಎಂಬ ದೀರ್ಘ ಯೋಚನೆಯಲ್ಲಿ ಮಗ ಮುಳುಗುತ್ತಿದ್ದ.

ಈ ಗೂರಲು ರೋಗಿಯುನ್ನು ಆಸ್ಪತ್ರೆಯಿಂದ ಹೊರ ಹಾಕುವ ಉಪಾಯವೇನಾದರೂ ಇದೆಯೇ ಎಂದು ಕಳೆದ ಒಂದು ವಾರದಿಂದ ವ್ಯರ್ಥ ಪ್ರಯತ್ನ ಮಾಡುತ್ತಿದ್ದ ಡಾಕ್ಟರರು ಮತ್ತು ನರ್ಸ್‌ಗಳು 'ಕುಂತ ಕುಂತವರು ಮತ್ತು ಹರೇದವರು ಕಣ್ಣ ಮುಚ್ಚಿ ಕಣ್ಣ ತೆರೆಯೋದ್ರೊಳಗಾಗಿ ಸಾಯ್ತಾಯಿರತಾರು. ಅಂಥಾದ್ರಾಗ ಈ ಮುದುಕಗ ಏನ ಆಗಿದ್ದಿತು' ಎಂದು ಚಿಂತಿತರಾಗಿದ್ದರು.

'ನೋಡೋ ಕೊಣ್ಣೂರ ಡಾಕ್ಟರ್, ಏನ ಮಾಡಿದಿ ಈ ಮುದುಕಗ? ಸೆರೆ ಕುಡಿದು, ಬೀಡಿ–ಸಿಗರೇಟು ಸೇದಿ ಮಾಡಬಾರದನ್ನ ಮಾಡಿದ್ರೂ, ಇನ್ನೂ ಗಟ್ಟಿ ಅದಾನ. ಇದಕ್ಕೇನ ಹೇಳ್ತಿಪಾ?' ಎಂದು ನವಲಗುಂದ ಡಾಕ್ಟರ್ ಸಣ್ಣಗೆ ನಗುವರು. 'ತಡಿ, ತಡಿಯೊ ನೋಡುವಂತೆ ಅವನ ಅವಸ್ಥಿ. ನಮ್ಮ ಬಾಯಿಲೆ ಕೆಟ್ಟ ಶಬ್ದ ಅಂದು ನಾವ್ಯಾಕ ಕೆಟ್ಟ ಆಗೋದು' ಎಂದು ಕೊಣ್ಣೂರು ಡಾಕ್ಟರ್ ಮುದುಕನಿಗೆ ಕೇಳಿಸದಂತೆ ಸಾವಕಾಶ ನುಡಿದು ಸ್ಟೆತೊಸ್ಕೋಪನ್ನು ಅದರುತ್ತಿದ್ದ ಎದೆಯ ಭಾಗದಲ್ಲಿ ತೇಲಾಡಿಸಿದರು.

"ಡಾಕ್ಟರ್ ಸಾಯೇಬ್ರ, ಸ್ವಲ್ಪ ಅಲ್ಲ, ಪೂರಾ ವಿಷದ ಬಾಟಲಿ ಕುಡಿಸಿದ್ರೂ ನಾ ಸಾಯಂಗಿಲ್ಲ ತಗೋರಿ. ನಿಮ್ಮ ಇಂಜೆಕ್ಸನ್‌ದಾಗ ಏನೂ ಟಾನಿಕ್ ಇರೂದಿಲ್ಲ. ನನ್ನ ಮೈಯಾಗ ಬರೇ ನೀರು ಚುಚ್ಚಿ ಹೊಕ್ಕೀರಿ, ನನ್ನ ಹೆಂಡತಿ–ಮಕ್ಕಳ ಕೂಡ ನೀವು ಶಾಮಿಲಾಗೀರಿ. ನನ್ನ ಕೊಲ್ಲಬೇಕಂತ ಲೆಕ್ಕಾ ಹಾಕೀರಿ, ನನಗ ಗೊತ್ತೈತಿ"

ಒಳಗೆ ಹೋಗಿದ್ದ ಮುದುಕನ ಕಣ್ಣಗುಡ್ಡೆಗಳು ತೆರೆದುಕೊಂಡು ಸ್ವಲ್ಪ ಹೊತ್ತು ಮಿಂಚು ಹರಿಸುತ್ತಿದ್ದಂತೆಯೆ ದಿನಾಲೂ ಆಡಿದ್ದನ್ನೆ ಆಡುವ, ಹೇಳಿದ್ದನ್ನೆ ಹೇಳುವ ಅವನ ಮಾತಿನಲ್ಲಿ ಹಾಸ್ಯವಿದೆಯೊ, ವಿಷಾದವಿದೆಯೊ ತಿಳಿಯದೆ ಡಾಕ್ಟರ್ ಮುಂದಿನ ಹಾಸಿಗೆಗೆ ನಡೆದರು.

❖

ಈಗಾಗಲೇ ಮುದುಕನ ದವಾಖಾನೆ ಖರ್ಚು ಐವತ್ತು ಸಾವಿರ ರೂಪಾಯಿಗಳನ್ನು ದಾಟಿದ್ದರೂ ಶಿವಪುತ್ರಪ್ಪ ಅದನ್ನು ನಂಬಿರಲಿಲ್ಲ. ನಂಬುವ ಸ್ಥಿತಿಯಲ್ಲಿಯೂ ಇರಲಿಲ್ಲ. ಇತ್ತೀಚೆಗಂತೂ ಗಂಡ–ಹೆಂಡತಿಯದು ಎಣ್ಣೆ–ಸೀಗೆಕಾಯಿಯ ಸಂಬಂಧದಂತೆ ಆಗಿತ್ತು. ಅವರ ತನು–ಮನಗಳು ಹಳಸಿದ್ದವು. ಒಬ್ಬರಿಗೊಬ್ಬರು ಕುದಿಯುತ್ತಿದ್ದರು. 'ಮಾಡ್ತಾಳ ಭೋಸಡಿ ಐವತ್ತು ಸಾವಿರ ಖರ್ಚ. ಚೆಂದಾಗಿ ಐದು ಸಾವಿರ ರೂಪಾಯಿ ಖರ್ಚ

ಸೈತ ಆಗಿಲ್ಲ. ಹೊಲ ಮಾಡಿದ ರೊಕ್ಕ ಈಕಿ ಹೆಸರ್ಲೆ ಬ್ಯಾಂಕಿನೊಳ ಇಟ್ಟು ತಪ್ಪ ಮಾಡಿದ್ನಿ. ಈಗ ನನಗ ತಿರುಗಿ ಬಿದ್ದಾಳ. ನಾ ಯಾವಾಗ ಸಾಯ್ತೀನಿ ಅಂತ ಕಾಯಾಕ ಹತ್ಯಾಳ' ಎಂದು ಅವನನ್ನು ನೋಡಲು ಬಂದವರ ಮುಂದೆ, ಹಿಂದೆ ಒದರುತ್ತಿದ್ದ. ಊರಿನ ಮಂದಿಗೆ ಅವನ ಒಡಕು ಬಾಯಿಯ ಚಾಳಿ ಗೊತ್ತಿದ್ದರೂ ಅರಿಯದವರು ಮಾತ್ರ ಕಾಶವ್ವನನ್ನು ಇಂದು ಅನುಮಾನದಿಂದ ನೋಡುವಾಗ ಅವಳಲ್ಲಿ ತಿರಸ್ಕಾರದ ಸಮುದ್ರ ಉಕ್ಕೇರಿತು. 'ಗಂಡ ಅನ್ನಾಂವ ಇದ್ದರ ಇರ್ಲಿ. ಇಲ್ಲಾ ಸತ್ತರ ಸಾಯ್ಲಿ' ಎಂದು ಹೊರ ಬಂದಳು. ದವಾಖಾನೆಯ ಒಳಗಿದ್ದರೆ ಒಂದು ಸಂಕಟ. ಹೊರಗಿದ್ದರೆ ಇನ್ನೊಂದು ಸಂಕಟ. ಹೆಂಡತಿ–ಮಕ್ಕಳನ್ನು ಬೈಯ್ದು, ಹೀಗಳೆದು ಅವರು ಸತ್ತ ಮೇಲೆಯೆ ತಾನು ಸಾಯಬೇಕೆಂದು ಗಂಡ ನಿರ್ಧಾರ ಮಾಡಿರುವನೋ ಏನೋ? ಅದೇ ಉದ್ದೇಶದಿಂದ ಕುಂತರೂ ನಿಂತರೂ ಮುಳ್ಳಿನ ಮೇಲೆ ನಿಲ್ಲಿಸುತ್ತಾನೆ. ರಸ್ತೆಯಲ್ಲಿ ಹೊರಟರೆ ರಿಕಾಮಿ ಮಂದಿ ಸೆರಗು ಹಾಸುವಳೇನೊ ಎಂದು ಹಸಿದ ಕಣ್ಣುಗಳಿಂದ ತನ್ನ ಎದೆಯನ್ನೆ ನೋಡುತ್ತಾರೆ. ದುಡಿಮೆ ಇನ್ನೂ ಒಂದು ನೆಲೆಗೆ ಹತ್ತುತ್ತಿಲ್ಲ. ದಿನ ತಳ್ಳುವುದೆ ಕಠಿಣವಾಗಿದೆ. ಊರಿಗೆ ಹೋದರೆ ಕೂಲಿಯಾದರೂ ನೆಮ್ಮದಿಯಿಂದ ಮಾಡಬಹುದೇನೊ ಎಂದು ಚಿಂತಿಸುತ್ತ ಮಗನ ಹತ್ತಿರ ಬಂದಳು.

"ಯಪ್ಪಾ, ನಡೀ, ನಮ್ಮ ತವರಮನಿಗೆ ಹೋಗೋಣು ನಡಿ, ನಿಮ್ಮ ಅಪ್ಪ ಮಾಡಿದ್ದ ರಗಡೈತಿ. ಅಂವನ್ನ ದವಾಖಾನ್ಯಾಗ ಬಿಟ್ಟ ಹ್ವಾದ ಪಾಪ ನಮಗ ಹತ್ತಿದ್ರ ಹತ್ತವಲ್ಯಾಕ ನಡಿ. ಅಲ್ಲೆ ಏನರ ಬಾಳೆ ಮಾಡೋಣು, ನಿಮ್ಮ ಮಾಂವ ಏನರ ಸಹಾಯ ಮಾಡ್ತಾನ ನಡಿ" ಎಂದು ಹೇಳಲು ಬಂದಿದ್ದ ಅವ್ವ ಕಾಲೇಜ್ ಗ್ಯಾದರಿಂಗಿಗೆಂದು ಸೇರಿದ್ದ ನೂರಾರು ಕಾಲೇಜು ಹುಡುಗರಿಗೆ ಕಚಕಚವೆಂದು ಕಾಯಿ ಕಡಿದುಕೊಡುತ್ತಿದ್ದ ಮಗನ ಬಲಿಷ್ಠ ತೋಳುಗಳನ್ನೆ ನೋಡುತ್ತ ನಿಂತಳು. 'ಯವ್ವಾ, ಅಲ್ಲಿ ರೊಕ್ಕ ಇಸಗೊ' ಎಂದು ದುಡ್ಡಿನ ಚೀಲವನ್ನು ಅವ್ವನಿಗೆ ವರ್ಗಾಯಿಸುತ್ತ ಹಿಮಾಲಯದಂತೆ ಅವನೆದುರಿರುವ ಹಸಿರು ಪರ್ವತದಿಂದ ಒಂದಾದ ಮೇಲೊಂದರಂತೆ ಟೆಂಗಿನಕಾಯಿಗಳನ್ನು ಕಡಿದು ಕೊಡತೊಡಗಿದ. ಗಂಗಾಧರ ಮಿಂಚಿನ ವೇಗದಲ್ಲಿ ಕಾಯಿ ಕತ್ತರಿಸುವ ರಭಸಕ್ಕೆ ಅಮೃತದ ಹನಿಗಳು ಸುತ್ತಲೂ ಸಿಡಿಯುತ್ತಿದ್ದವು.

❖

(ಸುಧಾ – ಫೆಬ್ರವರಿ 14, 2013)

ನಾಳೆಗೆ ಬರುವವನು

ಸಂದೀಪ ನಾಯಕ

ಹಿತ್ತಲ ಬಾವಿಗೆ ನೇರಳೆ ಮರದಿಂದ ಕಡಿದು ಅಡ್ಡ ಹಾಕಿದ ದಂಡೆಗೆ ಎಡಗಾಲು ಹಾಕಿ, ಉರಿ ಬೇಸಿಗೆಯಲ್ಲೂ ಎರಡು ಆಳುದ್ದ ಇರುವ ನೀರಿಗೆ ತಾಮ್ರದ ಪಾಚಿಗಟ್ಟಿದ ಕೊಡಪಾನ ಅದ್ದಿ ಮೇಲಕ್ಕೆಳೆದ ಆತ್ಮಾರಾಮ. ಅವನು ಮೇಲಕ್ಕೆ ಎಳೆದು ಹಾಕಿದ ಹಗ್ಗ ಗೋಲವಾಗಿ ಬಾವಿ ದಂಡೆಯ ಮೇಲೆ ಬಿದ್ದಿತ್ತು. ಬಗ್ಗಿದ ಬೆನ್ನನ್ನು ನೆಟ್ಟಗಾಗಿಸಿಕೊಂಡು ನಿಂತು, ಉಸಿರೆಳೆದುಕೊಂಡ. ಸೊಂಟಕ್ಕೆ ಸುತ್ತಿದ್ದ ಅಡ್ಡ ಪಂಜಿ ಆಗಲೇ ಹಸಿಯಾಗಿತ್ತು. ಅವನು ನಸುಕಲ್ಲೇ ಬೆಟ್ಟಕ್ಕೆ ಹೋಗಿ ತರಕುಗಳನ್ನು ಬರಗಿ ನಾಲ್ಕಾರು ಕಲಿಗಳನ್ನು ತಂಬಿ ದೋಣಿಗಳಿಗೆ ಹಾಕಿ ದಣಿದು ಬಂದಿದ್ದ.

ಕೊಡಪಾನದ ಕುತ್ತಿಗೆಗೆ ಬಿಗಿದ ಹಗ್ಗವನ್ನು ಸಡಿಲು ಮಾಡಿ, ಬಾಳೆಗಿಡಗಳ ಬುಡಕ್ಕೆ ಸರಿದು, ಒಂದೇ ಉಸಿರಿನಲ್ಲಿ ಮೇಲಕ್ಕೆತ್ತಿ ಅದರಲ್ಲಿದ್ದ ನೀರನ್ನು ತಲೆಯ ಮೇಲೆ ಸುರಿದುಕೊಂಡ. ಅವನು ಸುರಿದುಕೊಳ್ಳುವಷ್ಟರಲ್ಲಿ ಅದಕ್ಕಿರುವ ತೂತುಗಳಿಂದಾಗಿ ನೀರು ಅರ್ಧದಷ್ಟು ಕಮ್ಮಿಯಾಗಿತ್ತು. ಸವುಡು ಸಿಕ್ಕಾಗ ಕೊಡಪಾನದ ತಳದಲ್ಲಿನ ತೂತುಗಳಿಗೆ ದಾಂಬರು ತಂದು ಮೆತ್ತಬೇಕು ಎಂದು ಆತ್ಮಾರಾಮ ಅಂದುಕೊಂಡ. ಪಾತ್ರೆಗಳಿಗೆ ಕಲಾಯಿ ಹಾಕುವ ಸಾಹೇಬ ಇತ್ತ ಸುಳಿಯಲೇ ಇಲ್ಲ. ತಿಂಗಳ ಹಿಂದೆ ಅಂಗಡಿಬೈಲಿನಲ್ಲಿ ಸಿಕ್ಕಿದ್ದ ಅವನು 'ನಾಳೆ ನಸುಕಲ್ಲೇ ನಿಮ್ಮ ಮನೆ ಮುಂದೆ ಬೆಂಕಿ ಹಾಕಿ ಕೂತುಕೊಳ್ಳುತ್ತೇನೆ' ಅಂದಿದ್ದ. ಬೇರೆಬೇರೆ ದಿಕ್ಕಿಗಿರುವ ಎರಡೆರಡು ಸಂಸಾರಗಳ ತಾಪತ್ರಯಗಳಲ್ಲಿ ಮುಳುಗಿರುವ ಅವನು ಈಗಿತ್ತಲಾಗಿ ಬರುವುದು ಕಮ್ಮಿಯಾಗಿತ್ತು. ಕಲಾಯಿ ಹಾಕಿಸಿಕೊಳ್ಳಲು, ತೂತುಗಳನ್ನು ಮುಚ್ಚಿಸಿಕೊಳ್ಳಲು ಒಂದಷ್ಟು ಪಾತ್ರೆಗಳು ಮನೆಯ ಅಟ್ಟದಲ್ಲಿ ಬಹಳ ಕಾಲದಿಂದ ಅವನಿಗಾಗಿ ಕಾಯುತ್ತಿದ್ದವು.

ಆತ್ಮಾರಾಮನಿಗೆ ಬಾವಿಯ ಬಳಿ ಮೀಯುವಾಗ, ಇಲ್ಲವೆ ಈ ಕೊಡಪಾನದಿಂದ ಪಂಪ್‌ಸೆಟ್ಟಿನ ಬಾಯಿಗೆ ನೀರು ಹಾಕುವಾಗ ಅದಕ್ಕಿದ್ದ ತೂತುಗಳನ್ನು ಮುಚ್ಚಬೇಕು ಎಂಬುದು ನೆನಪಾಗುತ್ತದೆ. ಅವನು ಯಾವಾಗಲಾದರೂ ಸೆಕೆ ಅನಿಸಿದರೆ, ಹೊರಗೆ ಹೋಗುವಾಗ ಮಾತ್ರ ಬಾವಿಯ ಹತ್ತಿರ ಮೀಯುತ್ತಾನೆ. ಅವನ ತಾಯಿ ದಾಯಿಯೇ ಮನೆಯೊಳಗೆ ನೀರು ತುಂಬುವುದರಿಂದ ಕೊಡಪಾನದ ತೂತುಗಳನ್ನು ಮುಚ್ಚುವುದು ಹಾಗೆಯೇ ಉಳಿದಿತ್ತು. ದಾಯಿ ಮಾತ್ರ ಅವುಗಳನ್ನು ಮುಚ್ಚಬೇಕೆಂದು ಯಾವತ್ತಿಗೂ ಅಂದುಕೊಂಡಿರಲಿಲ್ಲ. ಕೆಲಸಗಳನ್ನು ಬೇಗ ಮುಗಿಸಿ ಅವಳು ಮಾಡುವುದೇನೂ ಇರಲಿಲ್ಲ. ಮಾಡುವ ಕೆಲಸ ಉದ್ದವಾದರೆ ಅವಳ ಹಗಲುಗಳು ಸಣ್ಣವಾಗುತ್ತವೆ.

ಅದಕ್ಕಾಗಿಯೆ ಏನೊ ದಾಯಿ ಅಂದಿಗೆ ಮುಗಿಯದ ಉದ್ದ ಎನಿಸುವ ಕೆಲಸಗಳನ್ನೇ ಮೈಮೇಲೆ ಎಳೆದುಕೊಳ್ಳುವುದು, ಮಾಡಿದ ಕೆಲಸವನ್ನೇ ಮಾಡಿ ಅವನ್ನು ಮತ್ತಷ್ಟು ಎಳೆಯುತ್ತಿದ್ದಳು.

ಕೊಡಕ್ಕೆ ಮತ್ತೆ ಹಗ್ಗ ಸಿರಿದು ನೀರಿಗೆ ಬಿಟ್ಟ. ದಾಯಿ ಆಗಲೇ ಅಡಿಗೆ ಮನೆಯಿಂದ ಮಗನಿಗೆ 'ಸಿಮೆಂಟು ಹೌದಿಗೆ ನೀರು ತುಂಬಿಯಾದರೂ ಮೀಯೋ. ಗಂಜಿ, ಪಟ್ಟಲಕಾಯಿ ಹುಳಗ ಬಡಿಸಿದ್ದೇನೆ. ಥೋ, ಈ ಹಾಳುಬೆಕ್ಕು, ಒಂದು. ನನಗೆ ಆಚಾರಿ ಶಾಲೆಗೆ ಹೋಗಬೇಕು. ಪಿಕಾಸಿ, ಕುಟಾರಿಗಳಿಗೆ ಕಾವು ಹಾಕಿ ಹಣಿದು ಇಟ್ಟಿರುತ್ತೇನೆ ಎಂದು ಶಿವರಾಮ ಆಚಾರಿ ಮೊನ್ನೆಗೇ ಹೇಳಿದ್ದ. ನಿನ್ನೆಗೇ ಹೋಗಬೇಕಿತ್ತು' ಎಂದು ಬಾಗಿಲು ಮುಂದೆ ಮಾಡಿದ ಸದ್ದು ಅಲ್ಲಿಂದಲೇ ಕೇಳಿಸಿತು.

ದಾಯಿಗೆ ಗೊತ್ತು–ಮಗ ಹೊರಗೆ ಮಿಂದ ಎಂದರೆ ಬೇಗ ಊಟಕ್ಕೆ ಬರುವುದಿಲ್ಲ. ದೇವರ ಪೂಜೆ ಮುಗಿಸಿ ಎಲ್ಲಿಗೋ ಹೋಗುತ್ತಾನೆ ಎಂದು. ಆದರೆ, ಅವಳು ಯಾವತ್ತಿಗೂ ಮಗನನ್ನು ನೀನು ಎಲ್ಲಿಗೆ ಹೋಗುತ್ತಿ ಎಂದು ಕೇಳಿದವಳಲ್ಲ. ಆತ್ಮಾರಾಮನೂ ಇಲ್ಲಿಯವರೆಗೆ ದಾಯಿಗೆ ಇಂಥ ಕಡೆ ಹೋಗುತ್ತೇನೆ, ಇಂಥ ದಿನ ಬರುತ್ತೇನೆ ಎಂದು ಹೇಳಿದವನಲ್ಲ. ಅವನು ಬಾವಿಯ ಹತ್ತಿರ ಮೀಯುವುದರಿಂದ, ದೇವರ ಪೂಜೆಯಿಂದಲೇ ಅದನ್ನು ಅವಳು ತಿಳಿದುಕೊಳ್ಳುತ್ತಿದ್ದಳು. ಮೊದಲೆಲ್ಲ ಹೊರಗೆ ಹೋಗುವಾಗ ಮಗ ಹೇಳಿಯೂ ಹೋಗಲಿಲ್ಲವಲ್ಲ ಎಂಬುದು ದಾಯಿಯ ಮನಸ್ಸಿಗೆ ಆಗಾಗ ಬಂದು ಹೋಗುತ್ತಿತ್ತು.

ದೇವರ ಹಿತ್ತಾಳೆಯ ಗಿಂಡಿಗೆ ನೀರು ತುಂಬಿ, ನಾಲ್ಕಾರು ದಾಸಾಳ, ಕರವೀರದ ಹೂಗಳನ್ನು ಕೊಯ್ದು, ಬಾವಿ ನೀರಿಗೆಂದು ಬಂದ ಮರಹತ್ತುವ ಮಾಬಲನ ಹತ್ತಿರ ಎರಡು ಮಾತಾಡಿ ಬರುವಷ್ಟರಲ್ಲಿ ಅನ್ನ ತಿಂದು ಹಸಿನ ಮರದ ಕೆಳಗೆ ಮಲಗಿದ ನಾಯಿಯ ಉಬ್ಬಿದ ಹೊಟ್ಟೆ ಏರಿಳಿಯುತ್ತಿತ್ತು. ಇನ್ನು ಅದು ಹುಲಿ ಬಂದು ಹಿಡಿದುಕೊಂಡು ಹೋದರೂ ಏಳುವುದಿಲ್ಲ ಎಂದುಕೊಂಡ ಆತ್ಮಾರಾಮ ಅಂಗಳದಲ್ಲಿರುವ ತುಳಸಿಕಟ್ಟೆಗೆ, ದೇವರಶಿಲೆಗೆ ಬಸಬಸ ನೀರು ಹೊಡೆದು ಶ್ರೀಗಂಧದ ಚಕ್ಕೆಯನ್ನು ಕಲ್ಲಿನಲ್ಲಿ ತೇಯಲು ಶುರುಮಾಡಿದ. ಅವನು ಹಚ್ಚಿದ ಊದುಬತ್ತಿಯ ಹೊಗೆ ಗಾಳಿಯ ಹಾಳೆಯಲ್ಲಿ ಪರಿಮಳದ ತೆಳ್ಳನೆ ಗೆರೆಗಳನ್ನು ಬರೆಯುತ್ತಿತ್ತು.

ಆತ್ಮಾರಾಮ ಮನೆಯಲ್ಲಿ ಇಲ್ಲದಿದ್ದಾಗ ದಾಯಿಯೇ ದೇವರಿಗೆ, ಬಿಂಬಲಿ ಮರದ ಹತ್ತಿರ ಇರುವ, ಅಮದಳ್ಳಿಯಲ್ಲಿ ನೌಕಾನೆಲೆ ಯೋಜನೆಗೆ ಬಿಟ್ಟು ಬಂದ ಮನೆಯಿಂದ ತಂದ ನಾಗರಕಲ್ಲಿಗೆ ಊದುಬತ್ತಿ ಹಚ್ಚಿ ಎರಡು ಹೂವುಗಳನ್ನು ಹಾಕುವುದಿತ್ತು. ಗಂಟೆ ತೂಗಿ ಹಣೆಗೆ ಗಂಧ ಹಚ್ಚಿಕೊಂಡು ಬಂದ ಆತ್ಮಾರಾಮನಿಗೆ ದಾಯಿ ಒಳಗೆಲ್ಲೂ ಕಾಣಲಿಲ್ಲ. "ದಾಯಿ.." ಎಂದು ಕರೆದರೂ ಅವಳ ಉತ್ತರ

ಬರಲಿಲ್ಲ. ಆ ಹೊತ್ತಿಗೆ ಕಣ್ಣು ಮಂಜಾಗಿ ಒಳಗೆ ಮಲಗಿಕೊಂಡಿರುವ ಅಪ್ಪ, "ಅವಳೆಲ್ಲೊ ಹೋಗುತ್ತೇನೆ ಅಂದಿದ್ದಳು. ನಿನಗೆ ಗಂಜಿ ಬಡಿಸಿರಬೇಕು. ನೀನು ಬಿಸಿ ಆರುವ ಮೊದಲು ಉಂಡು ಬಿಡು. ಸಣ್ಣ ಮೀನಿನ ಜಬ್ಬೂ ಈ ಕಾನಿನ ಮೂಲೆಗೆ ಬರುವುದಿಲ್ಲ. ಆತು, ನೀನಾದರೂ ಬರಬೇಕಾದರೆ ಮೀನು ಹಿಡಿದುಕೊಂಡು ಬಾರೋ. ಸಮುದ್ರದ ಮೀನು ಜಬ್ಬು ತಿನ್ನದೆ ಯಾವ ಕಾಲವಾಯ್ತೊ. ಈ ಹಳ್ಳದ ಚಪ್ಪೆ ಮೀನು ನಾಲಿಗೆಗೆ ಹತ್ತುವುದೇ ಇಲ್ಲ" ಎಂದವನು 'ಶಿವ ಶಿವಾ' ಎನ್ನುತ್ತ ಕೂತಲ್ಲೇ ಅಡ್ಡವಾದ. ನಾಲ್ಕು ವರ್ಷದ ಹಿಂದೆ ಕಣ್ಣು ಇದ್ದಕ್ಕಿದ್ದಂತೆ ಕಾಣದಾಗಿ ಮನೆಯೊಳಗೇ ಓಡಾಡಿಕೊಂಡಿರುತ್ತಿದ್ದ.

ಕಾಲು ಸುತ್ತುತ್ತಿದ್ದ ಬೆಕ್ಕಿಗೂ, ಅದರ ಮರಿಗಳಿಗೂ ಅನ್ನದ ಎರಡು ಮುದ್ದೆ ಹಾಕಿ ಆತ್ಮಾರಾಮ ಉಂಡು ಎದ್ದ. ಅವನು ಮೀಯುವಾಗಲೇ ಮಧ್ಯಾಹ್ನದ ಕಾಲೇಜು ಮಕ್ಕಳು ಹೋಗುವ ತಿಂಗಳಬೈಲಿನ ಬಸ್ಸು ಹೋಗಿತ್ತು. ಅದೀಗ ತಿರುಗಿ ಬರುವ ಹೊತ್ತು. ಗಿಳಿ ಗುಟ್ಟಕ್ಕೆ ತೂಗಿದ್ದ ಅಂಗಿ, ಪ್ಯಾಂಟು ಸಿಕ್ಕಿಸಿಕೊಂಡು, ಪಟ್ಟೆ ಪಟ್ಟೆ ಚೀಲದೊಳಗೆ ಒಂದೆರಡು ಅಂಗಿ, ವಸ್ತ್ರ, ಮುಂಡವನ್ನು ಗಡ್ಡಕ್ಕೆ ಒತ್ತಿ ಹಿಡಿದು ಮಡಚಿ ಹಾಕಿದ. ಮಗ ಮಾಡುವ ಸದ್ದಿನಿಂದಲೇ ಅವನು ಎಲ್ಲಿಗೋ ಹೋಗುತ್ತಾನೆ ಎಂದು ಊಹಿಸಿದ ಅಪ್ಪ, "ಆತು ಮುಂದಿನ ಕದ ಎಳೆದುಕೊಂಡು ಬೀಗ ಹಾಕಿ ಬೀಗದ ಕೈ ಮಾಡಿಗೆ ಸಿಕ್ಕಿಸೊ. ಕಾಲ ಸಮ ಇಲ್ಲ. ನಂಗೂ ಕಣ್ಣು ಕಾಣೂದಿಲ್ಲ. ನಿಮ್ಮ ಅವ್ವಿ ಬಂದ ಮೇಲೆ ನೀನು ಹೋಗಿದ್ದು ಹೇಳ್ತಿ" ಎಂದ ಅಪ್ಪನ ಮಾತಿಗೆ ಮಗ ಏನೂ ಹೇಳಲಿಲ್ಲ. ರಸ್ತೆಯಿಂದ ಕೆಳಕ್ಕೆ ತಗ್ಗಿನಲ್ಲಿರುವ ಮನೆಗೆ ಗಾಡಿಯೊಂದು ಬರುವ ಆವಾಜು ಕೇಳುತ್ತಿತ್ತು. ಆತ್ಮಾರಾಮ ಅದನ್ನು ಹಿಡಿಯಲು ಸರಸರನೆ ದೊಡ್ಡ ಹೆಜ್ಜೆ ಹಾಕಿದ.

❖

ಮನೆಯಿಂದ ಆತ್ಮಾರಾಮ ಹೊರಗೆ ಕಾಲು ಹಾಕಿದಾಗ ಗಂಗಾವಳಿ ಹೊಳೆಯಲ್ಲಿ ಇಳಿತ ಶುರುವಾಗಿತ್ತು. ಇಳಿತದಿಂದಾಗಿ ದಡದ ನೀರಿನಲ್ಲಿ ನಿಂತ ಮರದ ಬೇರುಗಳು ಅಸ್ಥಿಪಂಜರಗಳಂತೆ ಕಾಲುಚಾಚಿ ನಿಂತಿದ್ದವು. ನೀರು ಕಡಿಮೆ ಇದ್ದುದರಿಂದ ದೋಣಿಗಳಲ್ಲಿ, ಹೊಂಯ್ಗೆ ತುಂಬುವ ಕೆಲಸದಲ್ಲಿ ಜನರು ಮುಳುಗಿದ್ದರು. ತೀರದ ಗಾಳಿ ರುಮ್ಮನೆ ಹೊಡೆಯುತ್ತಿತ್ತು. ದೂರದಿಂದ ನೋಡಿದರೆ ಹಗಲಲ್ಲಿ ಮತ್ತಷ್ಟು ಬೆಳ್ಳಗೆ ಹೊಳೆಯುವ ಗಂಗಾವಳಿ. ಎಂದಿನಂತೆ ಆವತ್ತು ಕೂಡ ಆತ್ಮಾರಾಮ ಬೆಟ್ಟಕ್ಕೆ ಹೋಗಿ ತರಕು ಗುಡಿಸಿ ಐದಾರು ಕಲಿಗಳನ್ನು ಮಾಡಿ ಹೊಸಕಂಬಿ ತಾರಿಯಲ್ಲಿ ದೋಣಿಗಳಿಗೆ ತುಂಬಿಸಿದ್ದ. ಇದೇ ರೀತಿ ಆಗಾಗ ಅವನು ಕರಡಗಳನ್ನೂ ದೋಣಿಗೆ ಹೇರಿ ಕಳಿಸುವದಿತ್ತು. ಅವಕ್ಕೆಲ್ಲ ಒಂದು ಸಾಕಾಗದೆ ಎರಡು ದೋಣಿಗಳನ್ನು ಕೂಡಿಸಿ

ಅಟ್ಟೆ ಕಟ್ಟೆ ಅವುಗಳ ಮೇಲೆ ತರಕಿನ ಕಲಿಯನ್ನಾಗಲಿ, ಕರಡದ ಹೊರೆಗಳನ್ನಾಗಲಿ ಹೇರುತ್ತಿದ್ದರು. ಅವು ಸಂಜೆಯ ಹೊತ್ತಿಗೆ ನಾಡುಮಾಸ್ಕೇರಿಯನ್ನು ಮುಟ್ಟುತ್ತವೆ ಎಂದು ಲೆಕ್ಕ ಹಾಕಿದ. ಅವನ್ನು ಇಳಿಸಿಕೊಳ್ಳುವ ಶಾಂತಣ್ಣ ಹಳೆಯ ಬಾಕಿಯನ್ನು ಮೊನ್ನೆ ಸಿಕ್ಕಾಗ ಮಂಜಗುಣಿಯ ಪೈಗಳ ಜವಳಿ ಅಂಗಡಿಯಲ್ಲಿ ಕೊಟ್ಟು ಹೋಗುತ್ತೇನೆ ಎಂದು ಅಂಕೋಲೆಯ ಮೀನುಪೇಟೆಯಲ್ಲಿ ಸಿಕ್ಕಾಗ ಹೇಳಿದ್ದನ್ನು ಆತ್ಮಾರಾಮ ನೆನಪು ಮಾಡಿಕೊಂಡ.

ಹೊಸಕಂಬಿ ಸಂಕದ ಹತ್ತಿರ ಆತ್ಮಾರಾಮ ಬಂದಾಗ ಫಾರೆಸ್ಟ್ ಬಂಗ್ಲೆಯ ಮುರ್ಕಿಯಲ್ಲಿ ಬಸ್ಸು ಮರೆಯಾದುದನ್ನು ನೋಡಿದ. ಇನ್ನು ಹೋಗಲಿಕ್ಕೆ ವೆಂಕಟ್ರಮಣನ ಮಹಾಸತಿ ಟೆಂಪೊನೆ ಗತಿ ಎಂದುಕೊಳ್ಳುತ್ತ, ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಹಾಕಿದ್ದ ಬೆಂಚಿನ ಮೇಲೆ ಕೂತ. ಇರುವ ಜನರೆಲ್ಲ ಬಸ್ಸಿಗೆ ಹತ್ತಿ ಹೋಗಿದ್ದರು. ಒಂದು ರೀತಿಯಲ್ಲಿ ಅಲ್ಲಿ 'ಏನು, ಎತ್ತ?' ಎಂದು ಕೇಳುವ ಜನರಿಲ್ಲದಿದ್ದುದು ಚಲೋದಾಯ್ತು ಎಂದುಕೊಳ್ಳುತ್ತ, ಚೀಲದಿಂದ ಎಲೆ, ಅಡಿಕೆ, ಸುಣ್ಣ ತೆಗೆದು ಸಣ್ಣ ಕವಳ ಹಾಕಿದ. ಕಾಶಿಗದ್ದೆ, ಕಾಚನಬಟ್ಟೆ ಊರಿನವರು ಬಸ್ಸಿಗೆ ನಿಲ್ಲುವ ಜಾಗ ಅದಾಗಿತ್ತು. ಅಲ್ಲಿಂದ ಮೇಲಕ್ಕೆ ಹೋಗದರೆ ಮಾಬಗೆ, ಅಚವೆ, ಅಂಗಡಿಬೈಲಿಗೆ, ಇತ್ತ ಅಂಕೋಲೆ, ಗೋಕರ್ಣ, ಯಲ್ಲಾಪುರ, ಕುಮಟೆಗೆ ಹೋಗಲು ಗಾಡಿಗಳು ಸಿಕ್ಕುತ್ತಿದ್ದವು.

ಮೊದಲಿನಂತೆ ಈಗ ಗಾಡಿಗಳು ಸಿಕ್ಕದೇ ಮನೆಗೆ ತಿರುಗಿ ಬರುವ ಪ್ರಮಯವಿರಲಿಲ್ಲ. ಇಲ್ಲಿ ಮಾತ್ರವಲ್ಲ, ಹೊನ್ನಾವರ, ಜೋಗ, ಯಲ್ಲಾಪುರ, ಕಿರವತ್ತಿ, ದೇವಿಮನೆಘಟ್ಟ, ಅರೆಬೈಲುಘಟ್ಟ, ಸಿದ್ಧಾಪುರ, ಕುಂದಾಪುರದ ರಸ್ತೆಗಳಲ್ಲಿ ಜನರ, ವಾಹನಗಳ ಹಾದಿಯನ್ನು ಆತ್ಮಾರಾಮ ಕಾದಿದ್ದಾನೆ. ಮೊದಲಿನಂತೆ ಈಗ ಎಲ್ಲಿಗಾದರೂ ನಡೆದುಕೊಂಡು ಹೋಗುವ ಕಾಲ ಮುಗಿದಿತ್ತು. ಬೆಟ್ಟದ ಒಳಗೆ ಹೋಗಬೇಕಿದ್ದರೂ ಗಾಡಿ ಹಿಡಿಯುವ ಕಾಲ ಇದು ಎಂದು ಆತ್ಮಾರಾಮ ಆಗಾಗ ಅಂದುಕೊಳ್ಳುತ್ತಿದ್ದನು. ಅದಲ್ಲದೆ ಎಂಥ ಬೆಟ್ಟದ ಮೂಲೆಯಾದರೂ ಅಲ್ಲಿಗೆ ದಾಂಬರು ರಸ್ತೆ ಇದೆ. ಹಾಗಾಗಿ ನಡೆದುಕೊಂಡು ಹೋಗುವ ಮಾತು ಹಿಂದಿನ ಕಾಲದಲ್ಲೇ ಉಳಿದುಕೊಂಡಿತ್ತು.

ಹೊತ್ತು ಅಡ್ಡವಾಗಲು ಬಂದಿತ್ತು. ಹಳದಿ ಬೆಳಕಿನ ಹಾದಿಯಲ್ಲಿ ಆಗೀಗ ಗಾಡಿಗಳು ಹಾಯುತ್ತಿದ್ದವು. ಸ್ಕೂಟರಿನಲ್ಲಿ ಹೋಗುತ್ತಿದ್ದ ಸಾಕ್ಷರತೆ ಯೋಜನೆಯ ರಫೀಕ ಕೈಬೀಸಿ ಇಲ್ಲೇ ಹೋಗಿ ಬರುತ್ತೇನೆ ಎಂಬಂತೆ ಸನ್ನೆ ಮಾಡಿ ಹೋದವನು ಹೋಗಿಯೇ ಬಿಟ್ಟಿದ್ದ. ಅವನು ಮತ್ತೆ ಇತ್ತ ಹಾದಂತಿರಲಿಲ್ಲ. ಬಹುಹಿಂದೆ ಆತ್ಮಾರಾಮ ಈ ಯೋಜನೆಯಲ್ಲಿ ಅವನೊಂದಿಗೆ ಕೆಲಸ ಮಾಡಿದ್ದಿತ್ತು. ಅವನಾದರೂ ಬಂದರೆ ಅಂಕೋಲೆಯವರೆಗಾದರೂ ಬಿಡುತ್ತಿದ್ದ ಎಂದು ಅವನು ಅಂದುಕೊಂಡ. ನೋಡೇ

ಬಿಡುವಾ ಎಂದು ಕೈ ಅಡ್ಡ ಹಾಕಿದ್ದೇ ಮರದ ನಾಟಗಳು ತುಂಬಿದ ಟ್ರಕ್ಕುಗಳು ಹತ್ತಿರದ ದಾರಿ ಎಂದು ಈ ರಸ್ತೆಯಲ್ಲಿ ಆಗಾಗ ಓಡಾಡುತ್ತವೆ. ಜೋರಾಗಿ ಎಳೆದ ಉಸಿರನ್ನು ಖಾಲಿ ಮಾಡುವಂತೆ ಸದ್ದು ಮಾಡುತ್ತ ನಿಂತ ಟ್ರಕ್ಕಿನಿಂದ ತಲೆ ಹೊರಕ್ಕೆ ಹಾಕಿದವನು ಮಾಬಗೆಯ ಗೋಪಾಲ. 'ಎಲ್ಲಿಗೋ ಆತಣ್ಣಾ. ಬಾ ಬಾ. ಮಾದನಗೇರಿ ಕ್ರಾಸಿನವರೆಗೆ ಬಿಡ್ತೇನೆ. ಇಂದೇ ಕಿರವತ್ತಿಯಲ್ಲಿ ಲೋಡು ಆಯ್ತು ನೋಡು. ನಾಳೆಗೆ ಮಂಗಳೂರಿಗೆ ಈ ಟ್ರಿಪ್ಪು ಹೊಡೆಯುತ್ತೇನೆ' ಎಂದು ಗೋಪು ಅನ್ನುತ್ತಿದ್ದಂತೆ, ಆತ್ಮಾರಾಮ ಬಾಯಲ್ಲಿನ ಕವಳ ಉಗಿದು, ಚೀಲವನ್ನು ಮೊದಲು ಟ್ರಕ್ಕಿನ ಸೀಟಿನ ಮೇಲೆ ಹಾಕಿ ಮೇಲಕ್ಕೆ ಹತ್ತಿದ. ಟ್ರಕ್ಕಿನಲ್ಲಿ 'ಕರುಣಿಸು ಜಗದಂಬೆ..' ಹಾಡು ಬರುತ್ತಿತ್ತು. ಮೇಲಿನ ಸೀಟಿನಲ್ಲಿ ಮುಖದ ಮೇಲೆ ಬಟ್ಟೆ ಹಾಕಿಕೊಂಡು ಒಬ್ಬ ಮಲಗಿದ್ದ. ಅವನು ಯಾರೆಂದು ಆತ್ಮಾರಾಮನೂ ಕೇಳಲಿಲ್ಲ, ಗೋಪುವೂ ಹೇಳಿರಲಿಲ್ಲ. ಟ್ರಕ್ಕು ಹಿಲ್ಲೂರು, ಮರ್ಕಾಲ್, ಮೊರಳ್ಳಿ ದಾಟಿತು. ಗೋಪು ಚಕ್ರ ತಿರುಗಿಸುವುದರೊಂದಿಗೆ ಮಾತನಾಡುತ್ತಲೇ ಇದ್ದ. ಸೈಡು ಕೊಡದ ಗಾಡಿಯವರನ್ನು ಬಯ್ಯುತ್ತ, ಗವಲು ಮಾತನಾಡುತ್ತ, ಬಾವಿಕೊಡ್ಲದ ತಮ್ಮನ ಮನೆಯಲ್ಲಿ ಏನೋ ಕೆಲಸ ಇರುವುದಾಗಿಯೂ, ನಾಳೆ ನಸುಕಿನಲ್ಲಿಯೇ ಮಂಗಳೂರಿಗೆ ಹೋಗಿ, ಅಲ್ಲಿಂದ ಕೊಚ್ಚಿಗೆ ಹೋಗಬೇಕು. ಅಲ್ಲಿ ಏನಾದರೂ ಲೋಡು ಸಿಕ್ಕರೆ, ಪೂನಾ, ಮುಂಬೈಗೆ ಹೋಗಬೇಕಾಗುತ್ತದೆ ಎಂದ. ಅಘನಾಶಿನಿಯಲ್ಲಿ ಮೊದಲಿನಂತೆ ಸಿಗದ ಮೀನಿನ ಬಗ್ಗೆ, ದೊಡ್ಡ ಊರುಗಳಿಗೆ ಅವು 'ಎಕ್ಸ್‌ಪೋರ್ಟ್' ಆಗುವುದರ ಬಗ್ಗೆ, ಅದೇ ಸದ್ಯಕ್ಕಿರುವ ಒಳ್ಳೆಯ ಬಿಜಿನೆಸ್ ಎನ್ನುವುದರ ಬಗ್ಗೆ, ಮಾರಿಕಾಂಬಾ ಜಾತ್ರೆಗೆ ಮೊದಲಿನಂತೆ ನಾಟಕ ಕಂಪನಿಗಳು ಬರದಿರುವ ಬಗ್ಗೆ ಮಾತನಾಡಿದ. 'ಅಂಥಾ ಚೆಂದದ ಹುಡುಗಿ ಆ ಡ್ರೈವರ್, ಅದೇ ಅವರ್ಸಾದ ಯಶವಂತಣ್ಣದ ಟ್ರಕ್ ಡ್ರೈವರ್ ಸಂಗ್ತಿಗೆ ಓಡಿ ಹೋದಳಲ್ಲೋ ಆತಣ್ಣ. ಅದಕ್ಕೆ ನಾವೆಲ್ಲ ಇರಲಿಲ್ಲವೇನೊ' ಎಂದು ಬಿಳಿನಗೆಯಾಡಿ ಯಾವುದೋ ಹುಡುಗಿಯ ಬಗ್ಗೆ ಮಾತನಾಡಿದ ಗೋಪು. "ತ್ರಿಲೋಕ ಸಂಚಾರಿಗಳು ಯಾವ ಕಡೆಗೆ ನನ್ನೊಂದಿಗೆ ಬರುತ್ತೀರೊ. ಚಹ, ಊಟ ಕೊಟ್ಟು ಒಂದಷ್ಟು ದುಡ್ಡು ಕೈಗೆ ಕೊಡುತ್ತೇನೆ" ಎಂದು ಅವನ ಕಡೆ ನೋಡಿ ದಾರಿ ಬಿಡದ ದನಗಳಿಗೆ ಜೋರಾಗಿ ಹಾರ್ನ್ ಮಾಡಿದ. ಇವನೊಂದಿಗೆ ಮೋಡ ಕವಿದ ಘಟ್ಟಗಳ ಹತ್ತುತ್ತ, ಇಳಿಯುತ್ತ, ಟ್ರಕ್ಕು ನಿಲ್ಲಿಸಿದ ಊರುಗಳಲ್ಲಿ ಸಖಿಯರ ಹುಡುಕುತ್ತ ಹೋಗಿಬಿಡಲೇ ಎಂದು ಆತ್ಮಾರಾಮ ಅರೆಚಣ ಯೋಚಿಸಿದ. ಅವನು ಹಲವು ಬಾರಿ ಹಾಗೆ ಹೋದುದಿತ್ತು. ಈಗ ಅದೆಲ್ಲ ಆಗುವುದಿಲ್ಲ. ಟ್ರಕ್ಕಿನಲ್ಲಿ ಒಂದೇ ಕಡೆ ಕೂತು ಮುಕಳಿಗೆ ಕಾವು ಬರುತ್ತದೆ. ಆ ಕಾವು ಮತ್ತೆಂಥದ್ದೋ ಕಾವಾಗಿ ಏನೇನೋ ಆಗುತ್ತದೆ. "ಇಲ್ಲವೋ, ನನಗೆ ಹೊನ್ನಾವರಕ್ಕೆ ಹೋಗಬೇಕು. ಅಲ್ಲಿ ಒಂದೆರಡು ಆಟದಲ್ಲಿ ಪಾರ್ಟು ಕಟ್ಟುವುದುಂಟು. ಕಳೆದ ಸರ್ತಿಯ ಹಂಗಾಮಿಗೇ ನಾನು ಹೋಗಬೇಕಿತ್ತು. ನಮ್ಮ ಭಾಗವತ ಮಾಧವ ಹೇಳಿ ಕಳಿಸಿದ್ದಾನೆ. ಅಲ್ಲಿ

ದೇವರ ಹರಕೆಯ ಆಟಗಳು ಸುರುವಾಗಿವೆ ನೋಡು" ಎಂದವನು ತನ್ನಿಂದ ಬಂದ ತನ್ನ ಮಾತನ್ನು ತಾನೆ ನಂಬದಾದ.

ಮಾದನಗೇರಿಯಲ್ಲಿ ಅವನನ್ನು ಇಳಿಸಿದ ಗೋಪು 'ಅಲಲ..' ಎನ್ನುತ್ತ ಗಾಡಿಯನ್ನು ಮುಂದಕ್ಕೆ ಓಡಿಸಿದ. ಟ್ರಕ್ಕಿನ ಹಿಂಬದಿಯ ಬೆಳಕು ಆತ್ಮಾರಾಮನ ಮುಖ ಬೆಳಗಿತು. ಅವನು ಟ್ರಕ್ಕಿನ ಕೆಂಪು ಬೆಳಕಿನಿಂದ ಗೂಡಂಗಡಿಗಳಿಂದ ಸೂಸುವ ಹಳದಿ ಬೆಳಕಿನತ್ತ ಬಂದ.

ಸತೀಶನ ಅಂಗಡಿಯಲ್ಲಿ ಚಹ ಕುಡಿದು, ತನ್ನ ಗಾಜು ಸಿಗಿದ ಹೆಸರು ಗೊತ್ತಿಲ್ಲದ ದೇಶದ ನಕಾಶೆಯಂತಿರುವ ಗಡಿಯಾರದಲ್ಲಿ ಸಮಯ ನೋಡಿಕೊಂಡ. ಇಷ್ಟು ಹೊತ್ತಿಗೆ ಅಪ್ಪ ಒಣಗಿದ ಶೆಟ್ಲಿ ನಂಜಿಕೊಂಡು ಒಂದೆರಡು ಗ್ಲಾಸು ಕುಡಿದಿರುತ್ತಾನೆ. ಅಜಬಾತ್ ಕಣ್ಣು ಕಾಣದ ಅವನಿಗೆ ಹೊತ್ತು ಸರಿಯುವುದಿಲ್ಲ ಎಂದು ಅಣ್ಣಂದಿರು ತಂದು ಕೊಟ್ಟ ಗೋವಾದ ಕಾಜುಫೆನ್ನಿ ಬಾಟಲಿಗಳನ್ನು ಖಾಲಿ ಮಾಡುತ್ತಿರುತ್ತಾನೆ ಎಂದುಕೊಂಡ. ತುಸು ನೀರು ಸೇರಿಸಿ ದಾಯಿ ಶರಬತ್ತು ಬಗ್ಗಿಸಿದಂತೆ ಲೋಟಕ್ಕೆ ಹುಯ್ದು ಕೊಡುತ್ತಿದ್ದಳು. ಅವನೂ ಒಂದು ಕೈಯಲ್ಲಿ ಮೂಗು ಮುಚ್ಚಿಕೊಂಡು ಕುಡಿಯುತ್ತಿದ್ದ. ಬರುವಾಗ ಮೀನು ಹಿಡಿದುಕೊಂಡು ಬರದ, ಊರ ಮೇಲೆ ತಿರುಗಿಕೊಂಡಿರುವ ಮಗನನ್ನು ಆಗಾಗ ಬಯ್ಯುತ್ತಿದ್ದ.

ನಾಲ್ಕು ಹಾದಿ ಕೂಡಿದಲ್ಲಿ ನಿಂತಿದ್ದ ಆತ್ಮಾರಾಮನಿಗೆ ಗೋಪುವಿಗೆ ಹೇಳಿದಂತೆ ಹೊನ್ನಾವರದ ಗುಮಡಬಾಳದಲ್ಲಿ ನಡೆಯುವ ಹರಕೆ ಆಟಕ್ಕೆ ಹೋಗುವುದೊ, ತಾರಿಬಾಗಿಲ ಸುರೇಖಾಳಿದ್ದಲ್ಲಿಗೆ ಹೋಗುವುದೋ ಬಗೆಹರಿದಿರಲಿಲ್ಲ. ತಾರಿಬಾಗಿಲಿಗೆ ಹೋಗಬೇಕು ಎಂದುಕೊಂಡೇ ಅವನು ಮನೆಬಿಟ್ಟವನು. ಆದರೆ, ಯಕ್ಷಗಾನದ ಆವಾಜು ಯಕ್ಷರ ತೀರಕ್ಕೆ ಅವನನ್ನು ಕರೆಯುತ್ತಿತ್ತು. ಮಾಡಬೇಕು ಎಂಬುದು ಊರು ಬಿಟ್ಟಾಗಿನಿಂದ ಅವನಿಗೆ ಪಕ್ಕಾ ಆಗಿರಲಿಲ್ಲ. ಆತ್ಮಾರಾಮನಿಗೆ ಜೀವನದಲ್ಲಿ ಯಾವುದೊ ಬಹುಬೇಗ ಬಗೆಹರಿದ ಉದಾಹರಣೆಯಿಲ್ಲ. ಅವನು ಯಾವಾಗಲೂ ಗಾಳಿ ಬೀಸಿದತ್ತ ಹೋದವನು. ಅವನ ಅಕಾರಣ ಅಲೆದಾಟಗಳಿಗೆ ದಿಕ್ಕು, ದೆಸೆಯೇ ಇರಲಿಲ್ಲ. "ಮನೆಯ ವೈವಾಟು ನೋಡಿಕೊಂಡು ಇದ್ದುಬಿಡೊ" ಎಂದು ಅಪ್ಪ ಆಗಾಗ ಹೇಳಿದರೂ, ಇವೆಲ್ಲ ಆಗಾಗ ಸಾಕು ಎನಿಸಿ ಮಾಡುವ ಕೆಲಸಗಳನ್ನು ಅಲ್ಲೇ ಬಿಟ್ಟು ಗಾಡಿ ಹಿಡಿಯಲು ರಸ್ತೆಗೆ ಬಂದುಬಿಡುತ್ತಿದ್ದ. ಇಲ್ಲವೆ ಗಂಗಾವಳಿಯನ್ನು ದಾಟಿ ಮತ್ತೆಲ್ಲಿಗೋ ಹೋಗುತ್ತಿದ್ದ. ಜನರನ್ನು ಸಾಗಿಸುವ ಟೆಂಪೋ ಮಾಡು ಎಂದು ಅಣ್ಣಂದಿರು ಹೇಳಿದಾಗ ಡ್ರೈವಿಂಗ್ ಕಲಿತು ಸುಮ್ಮನೇ ಇದ್ದುಬಿಟ್ಟ. "ನೀನು ಕಲಿತದ್ದೆಲ್ಲ ಹಂಗೇ ಹಾಳಾಗುತ್ತದಲ್ಲ. ನಾಲ್ಕು ಜನರಿಗೆ ಅದು ಉಪಯೋಗವಾಗಬೇಕು" ಎಂದು ಅಪ್ಪ ಹೇಳಿದ್ದು ಅವನಿಗೆ ಖರೇ ಅನಿಸಿತ್ತು. ಅದನ್ನು ಸರಿಮಾಡಲು ಅವನು ಮದುವೆ ಸೀಜನ್ನಿನಲ್ಲಿ ವೆಂಕಟ್ರಮಣನ ಟೆಂಪೋದ ಟ್ರಿಪ್ಪುಗಳನ್ನು ಹೊಡೆಯುವುದಿತ್ತು.

ಮಾದನಗೇರಿಯಲ್ಲಿ ವಾಹನಗಳು ವಿರಳವಾಗುತ್ತ, ಅಂಗಡಿಗಳ ಒಳಗಿನ ಬೆಳಕುಗಳು ಮಂದವಾಗುತ್ತ, ಜನರು ಬೇಗ ಮನೆ ಸೇರಿಕೊಳ್ಳುತ್ತ ಹಾದಿಗಳು ತಮ್ಮ ಕಳೆ ಕಳೆದುಕೊಂಡವು. ಅವಕ್ಕೊಂದು ಬಾಡಿದ ಮುಖದ ಮಂಕು ಕವಿದುಕೊಂಡಿತ್ತು. ಚಡೆಯ ಸದ್ದು ಕಿವಿ ತಮಟೆಗೇ ಬಡಿಯಲು ಸುರುವಾಗಿ, ಬಸ್ಸು ಹಿಡಿಯಲು ಎದ್ದ ಆತ್ಮಾರಾಮ. ಅವನು ಗುಂಡಬಾಳ ಮುಟ್ಟಿದಾಗ ಒಂದು ಪ್ರಸಂಗ ಮುಗಿಯಲು ಬಂದು, ಮತ್ತೊಂದು ಶುರುವಾಗುವುದರಲ್ಲಿತ್ತು.

❖

ಗುಂಡಬಾಳದಲ್ಲಿ ವೇಷ ಹಾಕಿಕೊಂಡು ಕುಣಿದು, ಆಟಗಳನ್ನು ನೋಡಿ, ಮಂಕಿಯ ಜಾತ್ರೆ ಮುಗಿಸಿ ಹೊಸಕಂಬಿ ಮುಟ್ಟುವಷ್ಟರಲ್ಲಿ ಸಾಕಷ್ಟು ದಿನಗಳು ಗಳಿದು ಹೋಗಿದ್ದವು. ಊರಿಗೆ ಬಂದು ಮಾಡುವುದೇನೂ ಇಲ್ಲ ಎಂಬ ಮಾತನ್ನು ಎಂದಿನಿಂದಲೂ ಗಟ್ಟಿಯಾಗಿ ಹಿಡಿದವನಂತೆ ಚಂದಾವರ ಪೇಸ್ತು, ಕುಮಟೆಯ ತೇರು, ಶಿರಸಿಯ ಮಾರಿಕಾಂಬಾ ಜಾತ್ರೆ ಎಂದು ಅವನು ತಿರುಗಿಕೊಂಡಿರುವುದಿತ್ತು. ಇದೇ ಕಾರಣದಿಂದ ತನ್ನೊಂದಿಗೆ ವೇಷ ಹಾಕಿದ ವಾಮನ ಮಾಸ್ತರರೊಂದಿಗೆ ಮಾವಿನಗುಂಡಿಗೆ ಹೋಗಿ ಅವಲ್ಲಿ ಅವರಿಗೆ ಗುರುತಿನವರ ಮನೆಯಲ್ಲಿ ಹಂದಿ ಶಿಕಾರಿ ಮಾಡಲು ಒಂದೆರಡು ದಿನ ಉಳಿದು ಬಂದಿದ್ದ.

ಸಂಜೆ ಮನೆ ಮುಟ್ಟುವ ಮೊದಲೇ ಆತ್ಮಾರಾಮನಿಗೆ ಸುದ್ದಿ ತಿಳಿದಿತ್ತು. ಹೊಸಕಂಬಿಯ ಸುತ್ತಲಿನ ಭಾಗದಲ್ಲಿ ಮುರುಗಲುಸೊಪ್ಪು, ವಾಟೆಹುಳಿ, ಅಟ್ಲಕಾಯಿ, ಗೇರುಬೀಜಗಳನ್ನು, ಸೀಜನ್ನಿನಲ್ಲಿ ಮೆಣಸಿನಕಾಳುಗಳನ್ನು ತನ್ನ ಲಟಾರಿ ಟೆಂಪೋದಲ್ಲಿ ತಕ್ಕೊಂಡು ಹೋಗುವ ವ್ಯಾಪಾರ ಮಾಡುವ ಗುಣವಂತ ಕುಮಟೆಯಲ್ಲಿ ಆತ್ಮಾರಾಮ ಕತ್ತದ ಬಳ್ಳಿಯನ್ನು ತಕ್ಕೊಳ್ಳುವಾಗ ಸಿಕ್ಕು, “ನೀನು ಇಲ್ಲೇನು ಮಾಡ್ತಿ” ಎಂದು ಕೇಳಿದವನು ಅವನಿಗೆ ಏನೂ ಗೊತ್ತಿಲ್ಲ ಎಂಬುದನ್ನು ತಿಳಿದು, “ಎಲ್ಲ ಘಾತ ಆಯ್ತಲ್ಲೋ..” ಎಂದಿದ್ದ. ಅಪ್ಪ ಮಲಗಿದ್ದಲೇ ಸತ್ತು ಹೋಗಿದ್ದ. ಚಂಡಿಯಾದಲ್ಲಿರುವ ಮಾವಂದಿರು, ಹಿಲ್ಲೂರಿನ ವಿಠೋಬ ಬಂದು ಅಪ್ಪನ ಕೊನೆಯ ಕೆಲಸಗಳನ್ನು ಮುಗಿಸಿದ್ದರು. ಇದು ಆಗಿದ್ದು ಆತ್ಮಾರಾಮ ಊರು ಬಿಟ್ಟ ಮಾರನೆ ದಿನವೊ ಅದಕ್ಕೂ ಮಾರನೆ ದಿನವೊ. ಸುದ್ದಿ ಹಳತಾಗಿತ್ತು. ಒಂದು ಕಡೆ ನಿಲ್ಲದ, ಎಲ್ಲಿ ಏನು ಎಂಬುದು ಗೊತ್ತಿಲ್ಲದ ಅವನಿಗೆ ವಿಷಯ ಮುಟ್ಟಿರಲೇ ಇಲ್ಲ. ದೂರದ ಊರುಗಳಲ್ಲಿ ದುಡಿತಕ್ಕೆಂದು ಇರುವ ಅಣ್ಣಂದಿರು, ಕುಮಟೆಯಲ್ಲಿರುವ ಅಕ್ಕ ಎಲ್ಲರೂ ಬಂದು ಕಿರಿಯಾ ಕರ್ಮಗಳು ಮುಗಿಯಲು ಬಂದಿದ್ದವು.

ಅಪ್ಪ ಸಾಯುವಾಗ ನಾನು ಮನೆಯಲ್ಲಿ ಇಲ್ಲದಿದ್ದರೂ ಆಗುತ್ತಿತ್ತು. ಆದರೆ, ಆ ಹೊತ್ತಿನಲ್ಲಿ ದಾಯಿ ಮಾತ್ರ ಒಬ್ಬಳೇ ಆದಳಲ್ಲ ಅಂದುಕೊಂಡ ಆತ್ಮಾರಾಮ.

ಸಮುದ್ರದ ಮೀನು ಎಂದರೆ ಆಸೆಪಡುತ್ತಿದ್ದ ಅಪ್ಪ. ಕಣ್ಣು ಹೋಗಿ ನಾಲ್ಕೈದು ವರ್ಷವಾದರೂ ತನ್ನ ದುರಾದೃಷ್ಟವನ್ನು, ಇಂಗಿನ ಕಣ್ಣನ್ನು ಹಳಿದವನಲ್ಲ. ಆ ಕಣ್ಣಲ್ಲೇ ಗಂಗಾವಳಿಯ ಉಕ್ಕನ್ನು, ನೆರೆಯನ್ನು ತೋರಿಸುವಂತೆ ಬದುಕಿದ್ದ ಅಪ್ಪ. ನೌಕಾನೆಲೆಯ ಯೋಜನೆ ಬಂದು ಅಮದಳ್ಳಿ ಬಳಿಯ ಮನೆಯನ್ನು ಕಳೆದುಕೊಂಡರೂ ಅದಕ್ಕಾಗಿ ಕೊರಗದ ಅಪ್ಪ. ಅಮದಳ್ಳಿಯ ಮನೆ ಮತ್ತು ಗದ್ದೆಗೆ ಬಂದ ಪರಿಹಾರದ ದುಡ್ಡಿನಿಂದ ಇಲ್ಲಿನ ಈ ಜಾಗವನ್ನು ತಕ್ಕೊಂಡು ಮನೆಯನ್ನು ಇಲ್ಲಿಗೆ ಬಂದ ಹತ್ತು ಹದಿನೈದು ವರ್ಷಗಳಲ್ಲಿ ಈ ಮಟ್ಟಕ್ಕೆ ತಂದು ನಿಲ್ಲಿಸಿದವನು ಅವನೇ. ಅಚವೆಯ ವರ್ಷಕ್ಕೊಮ್ಮೆ ನಡೆದ ಆಟಕ್ಕೆ ಭಾಗವತಿಕೆ ಮಾಡಲು ಬಂದ ರಾಮಕೃಷ್ಣ, ದಣಪೆ ತೆಗೆದ ಸದ್ದಿಗೆ ಯಾರು ಬಂದಿದ್ದಾರೆ ಎಂದು ಗುರುತಿಸಿದ ಅಪ್ಪನ ಚುರುಕುತನಕ್ಕೆ, ಮಾತಿಗೆ "ನಿಮ್ಮ ತಂದೆಯವರದು ಹೀಗೇ ಎಂದು ತಿಳಿಯಬೇಡಿ. ಅವರಿಗಿರುವುದು ಒಳಗಣ್ಣು. ನಮಗೆ ಕೇಳಿಸದ್ದು ಅವರಿಗೆ ಕೇಳಿಸುತ್ತದೆ. ನಮಗೆ ಕಾಣಿಸದ ಲೋಕ ಅವರಿಗೆ ಕಾಣಿಸುತ್ತದೆ. ಲೋಕವನ್ನು ನೋಡುವುದಷ್ಟೆ ಅವರಿಗೆ ಮುಖ್ಯವಲ್ಲ. ಅದನ್ನು ಅರಿತು ನಮಗೆ, ನಮ್ಮ ಅಂತರಂಗವನ್ನು ಸಲಹುವ ಮಾತಾಗಿ ಹೇಳುತ್ತಾರಲ್ಲ ಅದು ದೊಡ್ಡದು" ಎಂದು ಅಪ್ಪನ ಕೈ ಹಿಡಿದೇ ಅಂದಿದ್ದರು. ರಾಮಕೃಷ್ಣ ಭಾಗವತರ ಮಾತು ಕೇಳಿ ಒಳಗಣ್ಣು ತೆರೆದಂತವನಾದ ಆತ್ಮಾರಾಮ ಕತ್ತಲಲ್ಲಿ ಅಪ್ಪನ ಕೈ ಹಿಡಿದುಕೊಂಡು ಅವರದೇ ಭಾಗವತಿಕೆ ಇರುವ ಅಚವೆಯ ಆಟಕ್ಕೆ ಕರೆದುಕೊಂಡು ಹೋಗಿದ್ದ. ಅಪ್ಪ ಚಳಿಯಲ್ಲಿ ತಲೆಗೆ ಪಂಜಿ ಸುತ್ತಿಕೊಂಡು, ಸಣ್ತಮ್ಮನ ಅಂಗಡಿಯ ಚಾ ಕುಡಿಯುತ್ತ ಇಡೀ ಪ್ರಸಂಗವನ್ನು ಆಲಿಸಿದ್ದು ಆತ್ಮಾರಾಮನಿಗೆ ಸಮಾಧಾನ ತಂದಿತ್ತು. ಹೊರ ತೆಣೆಯ ಮೇಲೆ ಕೂತು ಅವನು ಗಾಳಿ ಬೀಸುವ ದಿಕ್ಕಿನಿಂದಲೇ ಗಂಗಾವಳಿಯಲ್ಲಿ ದೋಣಿಗಳು ಯಾವ ದಿಕ್ಕಿನಲ್ಲಿವೆ, ಎಲ್ಲಿ ಈಗ ಮೀನು ಸಿಕ್ಕುತ್ತದೆ ಎಂಬುದನ್ನು ಕೇಳಿದವರಿಗೆ ಹೇಳುತ್ತಿದ್ದ. ದನಗಳು ಕರೆದ ಸದ್ದಿನಿಂದಲೇ ಅವುಗಳಿಗೆ ಆಸರ, ಹಸಿವು ಆಗಿರುವುದನ್ನು ಕೂತಲ್ಲೇ ಹೇಳುವುದಿತ್ತು. ಗಾಳಿ ಮತ್ತು ಸದ್ದಿನಿಂದಲೇ ಹೊರ ಜಗತ್ತಿನ ಸ್ವರಗಳನ್ನು, ಅವುಗಳ ಬಣ್ಣಗಳನ್ನು ಆತ್ಮಾರಾಮನ ಅಪ್ಪ ಮಹಾಬಲೇಶ್ವರ ಹಿಡಿಯಬಲ್ಲವನಾಗಿದ್ದ.

ಅವನಿಗೆ ಕಣ್ಣು ಮಂಜಾದ ಹೊಸತರಲ್ಲಿ ಕಾರವಾರದ ಪಿಕಳೆ ಡಾಕ್ಟರರಿಗೆ ಕಣ್ಣು ತೋರಿಸಿ ಬಸ್ಸಿನಲ್ಲಿ ಷರತ್ ಕರೆದುಕೊಂಡು ಬರುವಾಗ ಆತ್ಮಾರಾಮನೇ, "ಅಪ್ಪಾ, ಅದೇ ನೋಡು ನಮ್ಮ ಅಮದಳ್ಳಿಯ ಮನೆ ಇರುವ ಜಾಗ" ಎಂದು ತೋರಿಸಿದಾಗ, ನೌಕಾನೆಲೆಯವರು ಹಾಕಿದ ಮುಳ್ಳಿನ ತಂತಿಯ ಬೇಲಿಯ ಒಳಗಿನ ಬಯಲಿನಲ್ಲಿ ಚಂಡಿಕೆ ಹಾರದೆ ಜೀವ ಹಿಡಿದುಕೊಂಡಿರುವ ತೆಂಗಿನ ಮರಗಳು ಕಾಣುತ್ತಿದ್ದ ಜಾಗವನ್ನು ನಂದಿಹೋದ ದೀಪದ ಬತ್ತಿಯಂಥ ತನ್ನ ಕಣ್ಣುಗಳಿಂದ ನಿರುಕಿಸಿದ್ದ. ಅದು ಎಂದೂ ಕಣ್ಮರೆಯಾಗದ, ನಿನ್ನೆ ಬಿದ್ದ ಹಸಿ ಸ್ವಪ್ನದಂತೆ ಅವನಲ್ಲಿತ್ತು. ಎಂದೂ ನೆಲಕ್ಕೇ ಇಳಿಸದ ಜೀವದಂತೆ ಅದನ್ನು ಅವನು ಸಲುಹಿಕೊಂಡು ಬಂದಿದ್ದ.

ಸಮುದ್ರದ ಬೇಲೆಯಲ್ಲಿ ದೋಣಿಯಿಂದ ಇಳಿಸುತ್ತಿದ್ದಂತೆ ಮಿಸುಕಾಡುತ್ತಲೇ ಇರುವ ಮೀನುಗಳನ್ನು ತಕ್ಕೊಂಡು ಬರುವುದನ್ನು ಅವನು ಆಗಾಗ ಹೇಳುವುದಿತ್ತು. ಆತ್ಮಾರಾಮ, ಮತ್ತವನ ಅಣ್ಣಂದಿರು, ದಾಯಿ ಅದನ್ನು ಮಾಡಿದವರೇ. ಆದರೆ, ಅವನು ಅದನ್ನು ಆಗಾಗ ಹೇಳುವುದಕ್ಕೆ ಕಾರಣ ಅದನ್ನು ಯಾವತ್ತಿಗೋ ಅವನು ಕಳೆದುಕೊಂಡಿದ್ದರಿಂದಾಗಿ ಅವೆಲ್ಲ ನೆನಪಾಗಿಯೊ, ಕಾರವಾರದ ಪಿಕಳೆ ಡಾಕ್ಟರು ಮತ್ತೆ ಕಣ್ಣಲ್ಲಿ ಬೆಳಕು ಮೂಡುವುದು ಕಷ್ಟ ಎಂದದ್ದು ಮನಸ್ಸಿಗೆ ಬಂದು ರಾತ್ರಿ ಉಣ್ಣಲೇ ಇಲ್ಲ. ಮಲಗುವ ಮೊದಲು ಚಿಟ್ಟೆಯ ಮೇಲೆ ನಿಂತು ಗಂಗಾವಳಿಯತ್ತ ಮುಖ ಮಾಡಿ ಕೈಮುಗಿದು, 'ನೀನಾದರೂ ಮುಂದೆ ನಮ್ಮನ್ನು ಕಾಯಿ, ತಾಯೆ' ಎಂದಿದ್ದ. ನಾಯಿಗೆ ಅನ್ನ ಹಾಕಲು ಬಂದಿದ್ದ ಆತ್ಮಾರಾಮ, ದಾಯಿ ಗಂಗಾವಳಿಯಿಂದ ಬರುವ ತಂಪು ಗಾಳಿಯನ್ನು ಉಸಿರಾಡುತ್ತ, ನಿಲುಕಲಾಗದ ಸಂಕಟದಲ್ಲಿ ಅವನನ್ನು ಸುಮ್ಮನೆ ನೋಡಿದ್ದರು.

❖

ಬಂದ ಆತ್ಮಾರಾಮನನ್ನು ಮೊದಲೇ ಮಾತನಾಡಿಕೊಂಡವರಂತೆ ಮನೆಯಲ್ಲಿ ಯಾರೂ ಏನೂ ಕೇಳಲಿಲ್ಲ. ದಾಯಿ ಒಳಗೆಲ್ಲೋ ಇದ್ದಳು. ಅಪ್ಪನ ಆಗಾಗ ಮೆತ್ತಿನ ಮೇಲಿಂದ ಕೆಳಗೆ ಕೇಳಿಸುತ್ತಿದ್ದ ಅಶರೀರವಾಣಿ ಈಗ ಇಲ್ಲ ಎಂಬುದರ ಹೊರತಾಗಿ ಮನೆಯಲ್ಲಿ ಎಲ್ಲವೂ ತೊಳೆದಿಟ್ಟ ದೇವರ ಪೂಜೆಗೆ ಉಪಯೋಗಿಸುವ ಹಿತ್ತಾಳೆ ಪಾತ್ರೆಗಳಂತೆ ಸಾಫ್ ಆಗಿತ್ತು. ಅಣ್ಣಂದಿರ ಹಾಗೂ ಅಕ್ಕನ ಮಕ್ಕಳ ಕಿಚಿಕಿಚಿ ದನಿಗಳನ್ನು ಹೊರತುಪಡಿಸಿದರೆ ಬೇರೆ ದನಿ ಕೇಳಿಸುತ್ತಿರಲಿಲ್ಲ. ಬಂದವನೇ ಬಾವಿಯ ಬಳಿಗೆ ಹೋಗಿ ನೆತ್ತಿಯ ಮೇಲೆ ಐದಾರು ಕೊಡ ನೀರನ್ನು ಹೊಯ್ದುಕೊಂಡು ಬಹಳ ಹೊತ್ತು ಅಲ್ಲೇ ನಿಂತಿದ್ದ.

ಮಾರನೆ ದಿನ ಎಲ್ಲರೂ ಬೆಳಗಿನ ಆಸರ ಕುಡಿದು ಅಪ್ಪನ ಗುಣಗಾನ ಮಾಡುತ್ತ ಕೂತಿದ್ದಾಗ ಅಕ್ಕ ಮಾದೇವಿಯೇ ಮಾತು ತೆಗೆದಳು. ಮಾತು ತೆಗೆಯುವವಳೂ ಅವಳೇ, ಒಳಗಿಡುವವಳೂ ಅವಳೇ. ಕಡುಬಿಗೆಂದು ಹಲಸಿನ ಎಲೆಯಲ್ಲಿ ಕೊಟ್ಟೆಯನ್ನು ಸಿಟ್ಟುತ್ತ ಕೂತ ಅವಳು ಹಿರಿಯಣ್ಣ ದತ್ತಾತ್ರಯನ ಮುಂದೆ, "ಬೆಟ್ಟದಲ್ಲಿರುವ ಮನೆ ಇದು. ಹುಲಿ ಬಂದರೂ, ಹಳ್ಳದ ನೀರೇ ಮನೆ ಬಾಗಿಲಿಗೆ ಬಂದರೂ ಯಾರೂ ಕೇಳುವವರಿಲ್ಲ. ಅಪ್ಪ ಇದ್ದಾಗ ಒಂದು ನಮೂನೆ. ಅವನು ಹೋದ ಮೇಲೆ ಮನೆಯ ದೆಸೆಯೇ ಹೋಯಿತು. ಹೊರಗಿನ ಜನ ಬಂದರೂ ಇಲ್ಲಿ ಕೇಳುವವರಿಲ್ಲ. ಮೆಣಸು, ಚಾ ಪುಡಿ, ಬೆಂಕಿಪೆಟ್ಟಿಗೆ ತಕ್ಕೊಂಡು ಬರಲೂ ಗಾಡಿ ಹತ್ತಿ ದೂರಕ್ಕೆ ಹೋಗಿ ಬರಬೇಕು. ಈಗೇನೊ ಆತ್ಮಾರಾಮ ತಂದು ಕೊಡುತ್ತಾನೆ. ಹುಶಾರಿಲ್ಲದೆ ಹಾಸಿಗೆಯ ಬಿದ್ದರೆ ಯಾರು ಕೇಳುತ್ತಾರೆ. ಬಾಯಿ ಬಡಿದುಕೊಂಡರೂ ಕೇಳುವವರಿಲ್ಲ"

ಎಂದು ದಾಯಿಯನ್ನು ಉದ್ದೇಶಿಸಿ ತನ್ನ ರಾಗ ಎಳೆದಿದ್ದಳು. ತಂಗಿಯ ಮಾತಿಗೆ ತನ್ನದನ್ನೂ ಸೇರಿಸಿದ ಅವನು, "ಒಳ್ಳೆಯ ಕಾರ್ಯಕ್ಕೆ ಕರೆಯಬೇಕೆಂದರೂ ತಗ್ಗಿನಲ್ಲಿರುವ ಮನೆಗೆ, ಹಳ್ಳದ ನೀರಿನವರೆಗೆ ಇಳಿದು ಬರಬೇಕು. ಯಾರಾದರೂ ಗೊತ್ತಿದ್ದವರು ಹಿಲ್ಲೂರು ಉಮೇಶಣ್ಣನ ಅಂಗಡಿಯಲ್ಲಿ ಅಪ್ಪನ ಹೆಸರು ಬರೆದು ಇನ್ವಿಟೇಶನ್ ಕೊಟ್ಟು ಹೋಗುತ್ತಾರೆ. ಕೆಲವರಿಗೆ, ಅದರಲ್ಲೂ ನಮ್ಮ ಸಂಬಂಧಿಕರಿಗೆ ನಾವು ಇಲ್ಲಿ ಇರುವುದೂ ಮರೆತು ಹೋಗಿದೆ. ಕೆಲವರಿಗೆ ಅಪ್ಪ ಹೋಗಿದ್ದು ಇನ್ನೂ ಗೊತ್ತೇ ಇಲ್ಲ. ಮೊನ್ನೆಗೆ.." ಎಂದು ಮತ್ತೇನೊ ಶುರು ಮಾಡಿದ್ದ. ದಾಯಿ ಅಲ್ಲಿಂದ ಹಾದು ಹೊರಗೆಲ್ಲೋ ಹೋದಳೆಂಬುದು ಅವನಿಗೆ ಭಾಸವಾಗಿ ಮಾತು ನಿಂತಿತು.

ಆತ್ಮಾರಾಮನಿಗೆ ಈ ಎಲ್ಲ ಹಿಂದಿನ ಮಾತಿನ ಹಕೀಕತ್ತು ಗೊತ್ತು. ಇದೇ ಅಕ್ಕನೇ ಒಂದು ಸಲ ಗಂಡನಿಗೆ ಬೇಕೆಂತಲೇ ಹಚ್ಚಿಕೊಟ್ಟಿದ್ದಳು. ಹೆಂಡತಿಯ ಮಾತು ಕೇಳಿ "ನಿಮ್ಮ ಮಗಳನ್ನು ನೀವೇ ನಿಮ್ಮ ಹತ್ತಿರ ಇಟ್ಟುಕೊಳ್ಳಿ" ಎಂದು ಯಾವುದೂ ಹಳೆಯ ವಿಷಯವನ್ನು ಎತ್ತಿಕೊಂಡು ಭಾವ ಧಿಮಿಧಿಮಿ ಕುಣಿದಿದ್ದ. ಅವನು ಮಾಡಿದ ಗೌಜಿಗೆ "ನಿನ್ನ ಕಾಲಿಗೆ ಬೀಳುತ್ತೇನೆ. ಸುಮ್ಮನಿರೊ ದಾಸಾ" ಎಂದು ಅಪ್ಪ ಅಳಿಯನ ಕಾಲು ಹಿಡಿಯಲು ಹೋಗಿ ಕಾಲು ಸಿಗದೆ ತಡವರಿಸಿ ಎರಡೂ ಕೈಗಳಿಂದ ನೆಲ ಬಡಿದಿದ್ದ. ಈ ಕಾಂಜುಗಣ್ಣಿನ, ಮಕ್ಕಳಿಲ್ಲದ ಮಾದೇವಿ ಸಾಮಾನ್ಯದವಳಲ್ಲ ಎಂಬುದನ್ನು ಆತ್ಮಾರಾಮ ಈ ಮೊದಲೇ ಅಕ್ಕನ ನೆಲೆಯನ್ನು ಅಂದಾಜಿಸಿದವನು. ಅತ್ತಿಗೆಯವರು ಸುಮ್ಮನೆ ಗಂಡಂದಿರ ಆಡೂಕಟ್ಟೆಯ ಮುಖಗಳನ್ನು ನೋಡುವುದರ ಹಿಂದೆಯೂ ಮತಲಬಿತನದ ಮಸಲತ್ತು ನಡೆಯುತ್ತಿರುತ್ತದೆ ಎಂಬುದನ್ನು ಅವನು ಬಲ್ಲವನಾಗಿದ್ದ. ಆದಷ್ಟು ಬೇಗ ದಾಯಿ ಮತ್ತು ಅಪ್ಪ ಬೆಳೆಸಿದ ಈ ಜಾಗೆಯನ್ನು ಮಾರಿ ತಮಗೆ ಬಂದದ್ದನ್ನು ತಕ್ಕೊಳ್ಳಬೇಕು ಎಂಬುದು ಅವರೆಲ್ಲರ ಮಾತಿನ ಮರ್ಮವಾಗಿತ್ತು. ಆದರೆ ದಾಯಿಯನ್ನು ಅವಳ ಎದುರೇ ನಿಂತು ಕೇಳುವಷ್ಟು ಕಾಲಲ್ಲಿ ತಾಕತ್ತಾಗಲಿ, ಎದೆಯಲ್ಲಿ ನೀರಾಗಲಿ ಯಾರಲ್ಲೂ ಇರಲಿಲ್ಲ. ತುಕಾರಾಮನೂ ಸುಮ್ಮನಿದ್ದ. ಅವರೆಲ್ಲರೂ ಹುದ್ದೆ, ನೌಕರಿ ಎಂದು ಊರು ಬಿಟ್ಟೇ ಸುಮಾರು ಕಾಲವಾಗಿತ್ತು. ಈ ನೆಲದ ಸಂಪರ್ಕ ಕಡಿಮೆಯಾಗಿ ಅದೊಂದು ಮಾರಲು ಇರುವ ವಸ್ತುವಿನ ರೂಪಕ್ಕೆ ಬದಲಾಗಿತ್ತು. ಈ ಬಗ್ಗೆ ಸ್ವತಃ ತುಕಾರಾಮನೇ ತಮ್ಮನ ಹತ್ತಿರ ಒಂದು ಸಾರಿ ಹೇಳಿದ್ದ. ಆಗಲೇ ಹೇಳಬೇಕೆನಿಸಿತ್ತು ಆತ್ಮಾರಾಮನಿಗೆ– "ಈ ಜಾಗಕ್ಕೆ ನಾನೂ ಜೀವ ತೇದಿದ್ದೆನೊ. ಅಪ್ಪನಿಗೆ ಹುಟ್ಟಿದ್ದೀರಿ ಎಂಬ ಕಾರಣದಿಂದ ಮಾತ್ರ ಇದರಲ್ಲಿ ನಿಮಗೆ ಹಕ್ಕು ಬರೂದಿಲ್ಲ. ನನ್ನನ್ನು ಲೆಕ್ಕಕ್ಕೇ ಇಡದೆ ನೀವೆಲ್ಲ ಮಾತಾಡುತ್ತಿದ್ದೀರಿ. ಮುಂದೆ ಹೋಗುತ್ತ ಹೋಗುತ್ತ ಎಲ್ಲ ಗೊತ್ತಾಗುತ್ತದೆ." ಅವರಿಂದ ಬರಬಹುದಾದ ಮಾತನ್ನು ಅಂದಾಜು ಮಾಡಿದ ಅವನು ಅವರನ್ನು ಕೋಳಿಯಂತೆ ಕೆದಕುವುದರಲ್ಲಿ ಅರ್ಥವಿಲ್ಲ ಎನಿಸಿ ಸುಮ್ಮನೇ ಇದ್ದ.

ಮೂರು ಜನರ ನಡುವೆಯೇ ಸುತ್ತಾಡುತ್ತಿದ್ದ ಸಂಗತಿ ತಿರುಗಿದ್ದು ಊರೆಲ್ಲ ತಿರುಗಿಕೊಂಡಿರುವ ಆತ್ಮಾರಾಮನ ಕಡೆಗೆ. ಕೊನೆಗದು ದಾಯಿಯನ್ನು ಕರೆದುಕೊಂಡು ಹೋಗುವುದರ ಬಗ್ಗೆ ಬಂದು ನಿಂತಿತು. ಅವನನ್ನು ಆಧರಿಸಿ, ಅವನ ಮೇಲಿನ ನಂಬಿಕೆಯಿಂದ ವಯಸ್ಸಾದ ಅವಳನ್ನು ಬಿಟ್ಟು ಹೋಗಲು ಅವರಿಗೆಲ್ಲ ಹೆದರಿಕೆ. "ದಾಯಿ ಬರುವ ಹಾಗಿದ್ದರೆ ನಾನೇ ಅವಳನ್ನು ಕರೆದುಕೊಂಡು ಹೋಗಿ ಇಟ್ಟುಕೊಳ್ಳುತ್ತೇನೆ. ನನಗೇನೂ ಅವಳು ಒಜ್ಜಿ ಆಗುವುದಿಲ್ಲ" ಎಂದು ಮಾದೇವಿ ಹೇಳಿದಳಾದರೂ, ಅದು ಅಲ್ಲೇ ಕೆಲಸ ಮಾಡಿಕೊಂಡಿದ್ದ ಅಣ್ಣಂದಿರ ಹೆಂಡತಿಯರನ್ನು ಕೆಣಕುವುದಕ್ಕಾಗಿತ್ತು.

ತಾವು ತಿನ್ನುವ ಎರಡು ತುತ್ತನ್ನೇ ದಾಯಿಗೆ ಹಾಕಿದರೆ ಆಯಿತು. ಕೆಲಸಕ್ಕೆ ಹೋಗುವ ಸೊಸೆಯರಿಗೆ, ಶಾಲೆಗೆ ಹೋಗುವ ಮಕ್ಕಳಿಗೆ ಟಿಫನ್ ಬಾಕ್ಸ್, ಲಂಚ್ ಬಾಕ್ಸ್ ತಯಾರು ಮಾಡಿಕೊಟ್ಟು, ಮನೆ ಕಾದುಕೊಂಡು ಇದ್ದರೆ ಸಾಕು ಎಂದು ಎರಡನೆ ಅಣ್ಣ ತುಕಾರಾಮ ವ್ಯಾವಹಾರಿಕವಾಗಿ ಯೋಚಿಸಿದ್ದ. ಬೇಕಿದ್ದರೆ ಅವಳು ಒಂದೊಂದು ತಿಂಗಳು ಒಬ್ಬೊಬ್ಬರ ಮನೆಯಲ್ಲಿರಲಿ ಎಂಬುದು ಅವನ ಮತ್ತೊಂದು ವಿಚಾರವಾಗಿತ್ತು.

ಕೋಳಿಗೂಡಿನಂಥ ತಮ್ಮ ಮನೆಗಳಿಗೆ ಈ ಅತ್ತೆಯನ್ನು ತಕ್ಕೊಂಡು ಹೋಗುವುದಕ್ಕೆ ಸೊಸೆಯರ ಕಬೂಲು ಇತ್ತೊ, ಇಲ್ಲವೋ ಎಂಬುದು ಅವರ ಗಂಡಂದಿರಿಗೂ ಗೊತ್ತಿರಲಿಲ್ಲ. ಆದರೆ, ಒಂದು ವೇಳೆ ಮನೆ, ಜಾಗವನ್ನು ಮಾರಿದರೆ ದಾಯಿಯನ್ನು ತಮ್ಮೊಂದಿಗೆ ಕರೆದುಕೊಂಡು ಹೋಗಲೇಬೇಕಿತ್ತು. ಇದನ್ನು ಅವಳ ಮುಂದೆ ಇಡುವುದಕ್ಕೂ ಹಿಂದೆ ಮುಂದೆ ನೋಡುತ್ತಿದ್ದರು. ಅದಕ್ಕಿಂತ ಹೆಚ್ಚಾಗಿ ಗಂಡನನ್ನು ಕಳೆದುಕೊಂಡು ನಿರುಪಾಯ ಮೌನದಲ್ಲಿರುವ ಅವಳನ್ನೇ ತಕ್ಷಣಕ್ಕೆ ಕೇಳುವಂತಿರಲಿಲ್ಲ. ಆತ್ಮಾರಾಮನನ್ನು ತಮ್ಮೊಂದಿಗೆ ಸೇರಿಸಿಕೊಳ್ಳದೆ ಅವರು ಆಡುತ್ತಿದ್ದ ಮಾತುಗಳು ದಾಯಿಯನ್ನೇ ಗುರಿಯಾಗಿಸಿಕೊಂಡಿದ್ದವು. ಆದರೆ, ತಡೆಯಲಾಗದೆ ಮಾರನೇ ದಿನ ಬಟ್ಟೆಗಳನ್ನು ಒಗೆಯುತ್ತಿದ್ದ ದಾಯಿಯ ಸನಿಹಕ್ಕೆ ಹೋಗಿ ದತ್ತನೇ ಕೇಳಿದ್ದ. "ನೀನು ನಮ್ಮ ಮನೆಗೆ ಬಂದರೆ ಮೊಮ್ಮಕ್ಕಳನ್ನು ನೋಡಿಕೊಂಡು ಇರಬಹುದು. ಇಲ್ಲಿ ಒಬ್ಬಳೇ ಆಗುತ್ತೀ. ಅವನಿಗೆ ಹಿಂದಿಲ್ಲ, ಮುಂದಿನದು ಗೊತ್ತಿಲ್ಲ" ಎಂದು ಹೀರೇಕಾಯಿ ಬೀಜ ನೆಡಲು ಓಳಿ ಮಾಡುತ್ತಿದ್ದ ಆತ್ಮಾರಾಮನ ಮುಂದೆಯೇ ಅಂದಿದ್ದ. ದಾಯಿ ಏನೂ ಹೇಳದೆ, "ಈಗ್ಯಾಕೆ ಅವೆಲ್ಲಾ.." ಎಂದು ಅಷ್ಟಕ್ಕೇ ಅದನ್ನು ಮುಗಿಸಿದ್ದಳು.

ಅಪ್ಪನ ತಿಥಿ, ಗೋಕರ್ಣದಲ್ಲಿ ಪಿಂಡ ಬಿಡುವ ಕಾರ್ಯಕ್ರಮದ ತಯಾರಿಯಲ್ಲಿ ಎಲ್ಲರೂ ಮುಳುಗಿರುವಾಗ, ಅದು ಮುಗಿಯುತ್ತಿದ್ದಂತೆ ತಮ್ಮ ಅಪ್ಪನ ಮನೆಗೆ ಹೋಗಿ ಒಂದೆರಡು ದಿನ ಉಳಿದು ಬರಬೇಕು ಎಂಬ ಅಕ್ಕರೆಯ ಲೆಕ್ಕಾಚಾರದಲ್ಲಿ

ಅತ್ತಿಗೆಯರು ಇರುವಾಗ, ಮುಂದೆ ಬಹಳಷ್ಟು ಕೆಲಸವನ್ನು ಇಟ್ಟುಕೊಂಡ ಹೊತ್ತಿನಲ್ಲಿ ಆತ್ಮಾರಾಮ ಮತ್ತೆಲ್ಲಿಗೋ ಹೋಗಿದ್ದ, ಅದೇನೊ ವ್ಯವಹಾರ ಕುದುರಿಸಿಕೊಂಡು ಬರುವವನಂತೆ. ಅಣ್ಣಂದಿರ ಪ್ರಕಾರ ಆತ್ಮಾರಾಮನ ಕೆಲಸಗಳೆಲ್ಲ ಶಿಫಾರತಿಗೆ ಶೆಪ್ಪ ಬೆಳಸಿದಂತೆ. ಅವರೆಲ್ಲ ಹೊರ ತೆಣೆಯ ಮೇಲೆ ಕೂತು ಅವನ ಹೊಣೆಗೇಡಿತನದ ಬಗ್ಗೆ ಬಯ್ಯುತ್ತಿರಬೇಕಾದರೆ ದಾಯಿಯೇ ಅವರಿಗೆ "ಬರುವಾಗ ಬರುತ್ತಾನೆ ಬಿಡಿ. ಕಡೆಗೂ ಅವನದು ಒಂದೇ ಜೀವವಾಯ್ತು" ಏಂದು ತನಗೆ ತಾನೇ ಸಮಾಧಾನ ಮಾಡಿಕೊಳ್ಳುವಂತೆ ಅಂದಿದ್ದಳು.

ಆತ್ಮಾರಾಮ ಮಾರನೆ ದಿನವೇ ಬಂದ. ಮನೆ ಹೊರಗೆ ಸಿಗಿದ ಅಡಕೆ ದಬ್ಬೆ, ತೆಂಗಿನಗರಿಗಳ ರಾಶಿಯನ್ನು ತಂದು ಹಾಕಲಾಗಿತ್ತು. ದೊಡ್ಡ ಅಣ್ಣ ದತ್ತಾತ್ರಯನೇ, "ಹೊತ್ತು ಗೊತ್ತು ಇಲ್ಲ ನಿನಗೆ, ಅಪ್ಪನ ಶ್ರಾದ್ಧದ ಕಾರ್ಯ ಮುಂದಿಟ್ಟುಕೊಂಡು ನೀನು ಎಲ್ಲಿಗಾದರೂ ಹೋದರೆ ಹೇಗೆ? ತೋಡೆ ಮನೆಯ ಕಡೆಯ ಜವಾಬ್ದಾರಿ ಬೇಕು, ಜವಾಬ್ದಾರಿ. ಕಡೆಗೂ ಅದು ನಿನಗೆ ಬರಲಿಲ್ಲ. ಇನ್ನು ಮುಂದೆ ನೀನು ಹೀಗೆ ಮಾಡಿದರೆ ಆಗದು" ಎಂದ. ಅವನು ಹಾಗೆ ಅಂದುದ್ದರ ಹಿಂದೆ ಸಮಯಕ್ಕೆ ಅವನು ಕೆಲಸಕ್ಕೆ ಒದಗಲಿಲ್ಲವಲ್ಲ ಎಂಬ ಸಿಟ್ಟಿತ್ತು. "ನಿನ್ನನ್ನು ನಾನು ಬಲ್ಲೆ" ಎಂಬಂತೆ ಅಣ್ಣನನ್ನು ನೋಡಿದ ಅವನು ಬಾಕಿ ಉಳಿದ ಕೆಲಸಗಳನ್ನು ಮುಗಿಸಲು ಹೋದ. ನಾನು ಹೋಗಿದ್ದು ಬೇರೆಯ ಕೆಲಸಕ್ಕಲ್ಲ, ಇದಕ್ಕೇ ಎಂಬಂತೆ ತಂದ ಮೊಗೆಕಾಯಿ, ಹಲಸಿನಕಾಯಿ, ನೀರಹಲಸುಗಳನ್ನು ಸಶಬ್ದವಾಗಿ ಒಳಗಿಟ್ಟ.

❖

ಮಕ್ಕಳ ಶಿಕ್ಷಣ, ಪಿಎಲ್, ಸಿಎಲ್ ಹಾಕಬೇಕು, ಎಸ್‌ಎಲ್ ಕಡಿಮೆ ಇದೆ, ವಿದೌಟ್ ಪೇ, ಪೀಕ್ ಅವರ್, ಲೇಟ್ ಆದ್ರೆ ಆಟೋನೂ ಸಿಗುವುದಿಲ್ಲ. ಟ್ರಾಫಿಕ್ ಹಾರಿಬಲ್ ಆಗಿದೆ ಎನ್ನುತ್ತ ಬಂದವರೆಲ್ಲ ಓಡಲು ಎದ್ದರು. ದಾಯಿಗೆ "ಬಾಯ್ ಅಜ್ಜಿ, ಸೀ ಯೂ ಅಜ್ಜಿ, ನೀನು ನಮ್ಮ ಮನೆಗೆ ಬರಬೇಕು" ಎಂದು ಆತ್ಮಾರಾಮನ ಅಣ್ಣಂದಿರ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳು ತಮ್ಮ ಮೋಟು ಜಡೆಗೆ ಅಂಗಳದ ನಿತ್ಯಪುಷ್ಪದ ಹೂಗಳನ್ನು ಸಿಕ್ಕಿಸಿಕೊಂಡು ಕೈ ಬೀಸಿದರು. ಏನಾದರೂ ತ್ರಾಸು ಆದರೆ ಆತ್ಮಾರಾಮನ ಹತ್ತಿರ ಫೋನ್ ಮಾಡಿಸಲು ಹೇಳಿದ ದತ್ತ. ಒಂದೆರಡು ತಿಂಗಳು ಬಿಟ್ಟು ಬರುತ್ತೇವೆ, ಆಗಾದರೂ ವಿಚಾರ ಮಾಡಿರು ಎಂದು ಮಕ್ಕಳಿಬ್ಬರೂ ಅವಳಿಗೆ ಸೂಕ್ಷ್ಮವಾಗಿ ಸೂಚನೆ ಕೊಟ್ಟರು. ನಾಲ್ಕು ದಿನದ ಹಿಂದೆಯೇ ಮಾದೇವಿ ಗಂಡನಿಗೆ ಅಂಗಡಿ ಬಿಟ್ಟು ಹಂದಾಡಲು ಆಗುವುದಿಲ್ಲ ತೊಂದರೆಯಾಗುತ್ತದೆ ಎಂದು ಕುಮಟೆಗೆ ಹೋಗಿದ್ದಳು. ಅಣ್ಣಂದಿರ ಸಂಸಾರವನ್ನು ಟೆಂಪೊಕ್ಕೆ ಹಾಕಿಕೊಂಡು ಮಾದನಗೇರಿಗೆ ಹೋಗಿ ಬಸ್ಸು ಹತ್ತಿಸಿ ಬಂದವನು ಆತ್ಮಾರಾಮನೇ. "ನಮ್ಮ

ತರಪ್‌ನಿಂದ ಇದು ನಿನಗೆ ಯಾವುದಕ್ಕಾದರೂ ಬೇಕಾಗುತ್ತದೆ" ಎಂದು ಅಣ್ಣಂದಿರು ಮಡಿಕೆ ಮಾಡಿ ಮುಷ್ಟಿಯಲ್ಲಿಟ್ಟುಕೊಂಡು ಹಿಡಿಸಲು ಬಂದ ದುಡ್ಡನ್ನು ಅವನು ತಕ್ಕೊಂಡಿರಲಿಲ್ಲ.

ಆ ದಿನ ಘಟ್ಟದ ಮೇಲೆ ಬಿದ್ದ ಅಕಾಲಿಕ ಮಳೆಗೆ ಗಂಗಾವಳಿಯ ನೆಗಸು ಹೇಗಿತ್ತೆಂದರೆ ಕೆಂಪು ನೀರು ತಾರಿಯನ್ನು ಏರಿ ನಿಂತಿತ್ತು. ಅಲ್ಲಿ ಎರಡು ಹೆಣ ತೇಲಿ ಹೋಯಿತು. ಇಲ್ಲಿ ನಾಲ್ಕಾರು ಎಮ್ಮೆಗಳು ತೇಲಿ ಹೋದದ್ದನ್ನು ನಾನೇ ನೋಡಿದೆ ಎಂದು ಅಲ್ಲಲ್ಲಿ ಜನರಾಡಿಕೊಂಡದ್ದನ್ನು ಕೇಳಬಹುದಿತ್ತು. ಹೊಸಕಂಬಿಯಲ್ಲಿ ಮಳೆ ಬಿದ್ದಿತಾದರೂ ಮನೆ ಮಾಡಿನಿಂದ ನೀರು ಕೆಳಗೆ ಇಳಿಯುವಷ್ಟು ಬಿದ್ದಿರಲಿಲ್ಲ. ಅಂಗಳಕ್ಕೆ ಅಲ್ಲಲ್ಲಿ ನೀರು ಚಿಮುಕಿಸಿದಂತೆ ಬಿದ್ದಿತ್ತು.

ಆತ್ಮಾರಾಮನಿಗೆ ಅಣ್ಣಂದಿರು ಹೋದ ಎರಡೇ ದಿನಕ್ಕೆ ಮತ್ತೆಲ್ಲೊ, ಯಾವುದೋ ಊರಿನ ಕರೆ ಬಂದಂತೆ ಅನಿಸಿದಾಗ ಹೋಗುವಾಗ ದಾಯಿಗೆ ಕೇಳಿದ, "ನೀನು ಅಣ್ಣಂದಿರು ಬಾ ಅಂದಾಗ ಹೋಗಬೇಕಿತ್ತು. ಇಲ್ಲೇ ಉಳಿದರೆ ಒಬ್ಬಳೇ ಆಗುತ್ತೀ. ನನ್ನದು ನಿನಗೇ ಗೊತ್ತುಂಟು. ನನ್ನಿಂದ ನಿನಗೆ ತ್ರಾಸು. ಮುಂದಿನ ಸಲ ದೊಡ್ಡಣ್ಣ ಬಂದಾಗ ಹೋಗಿ ಬಿಡು. ಎಂಥಾ ಮಾಡ್ತಿ ನೋಡು. ಅಲ್ಲಾದರೂ ನಿನಗೆ ಮಾತಾಡಲು, ಕಂಡುಕೇಳಲು ಮೊಮ್ಮಕ್ಕಳು ಇರುತ್ತಾರೆ. ಇದೆಲ್ಲನೂ ನಿಂಗೇ ಬಿಟ್ಟಿದ್ದು. ಯಾವುದಕ್ಕೂ ನನ್ನ ವಿಚಾರ ಮಾಡಬೇಡ" ಎಂದವನು ಎರಡನೇ ಅಣ್ಣ ಇವನಿಗೆಂದು ಬಿಟ್ಟು ಹೋದ ಅರ್ಧ ಸವೆದ ಚಪ್ಪಲಿಗೆ ಕಾಲು ಹೊಕ್ಕಿಸಿದ. ಅವನು ಹಾಕಿದ ಚೌಕುಳಿ ಅಂಗಿ ದೊಡ್ಡಣ್ಣನದು.

"ಇಲ್ಲವೊ ಮಗನೆ, ನಾನು ಇಲ್ಲೇ ಇರ್ತೆ. ಹೊರಗೆ ಹೋದ ನೀನಾದರೂ ಇಂದಲ್ಲ ನಾಳೆ ಬರುತ್ತಿ ಅಂದುಕೊಂಡು ಕಾಲಕಳೆಯುತ್ತ ಬಂದೆ. ಹಂಗೇ ಮುಂದೆಯೂ ಕಳೆಯುತ್ತೇನೆ. ನಿನ್ನ ಅಣ್ಣಂದಿರು ಇದ್ದಲ್ಲಿಗೆ ಹೋದರೆ ನಾಳೆಗೆ ಯಾರು ಬರುತ್ತಾರೆ ಎಂದು ಆ ಊರಲ್ಲಿ ನಾನು ದಿನ ದೂಡಲಿ? ಈ ವಯಸ್ಸಿನಲ್ಲಿ ದಿನ ದೂಡುವುದು ತ್ರಾಸೊ ಮಾರಾಯ. ಅಲ್ಲೆಲ್ಲ ನಾಲ್ಕು ದಿನ ಚೆಂದ. ನೀನು ಎಲ್ಲಿಗೋ ಹೋಗುವಂಗೆ ಕಾಣ್ತೀದ. ನಾನು ಎಲ್ಲಿಗೆ ಎಂದು ಕೇಳೂದಿಲ್ಲ. ಹೋಗಿ ಬಾ" ಅಂದಳು.

ಹೊರಗೆ ಒಣಹಾಕಿದ ಬಟ್ಟೆಗಳನ್ನು ತೆಗೆದು, ಗಳಿಗೆ ಮಾಡಿ ಅಡ್ಡವಾಗಿಟ್ಟುಕೊಂಡ ಕೈಮೇಲೆ ಹಾಕಿಕೊಂಡು ಬಾಗಿಲಿಗೆ ಬಂದು ನಿಂತಿದ್ದ ದಾಯಿ, "ನೋಡೋ ನಿಮ್ಮ ಅಣ್ಣನ ಮಗಳ ಅಂಗಿಯೊಂದು ಇಲ್ಲೇ ಉಳಿದುಹೋಗಿದೆ" ಎಂದು ಹಿತವಾದ ನೆನಪನ್ನು ಬಿಟ್ಟುಕೊಡಲಾಗದೆ ತನ್ನಲ್ಲೇ ಆತುಕೊಳ್ಳುವಂತೆ ಅವನ್ನು ಅಲ್ಲೇ ಮತ್ತಷ್ಟು ಒತ್ತಿಕೊಂಡಳು.

ತಲೆ ಕುಡುಗಿದ ಆತ್ಮಾರಾಮ ಆ ಅಮಾಯಕ ಕ್ಷಣದ ಭಾರವನ್ನು ಹೊತ್ತು ಹೊರಟವನಂತೆ ಮಣ್ಣು ಹಾಕಿ ಹೂರಿಸಿದ ಬಸಿದ ಚಪ್ಪರ ಹಾದು ದಣಪೆ ದಾಟಿದ. ಮಗನ ಬೆನ್ನು, ಅದಕ್ಕೆ ಹಾಕಿದ ಚೀಲ ನೋಡಿದ ದಾಯಿ, ದನಗಳಿಗೆ ಹುಲ್ಲು ಹಾಕಿ, ತೊಳಕಲ ನೆನಪಾಗಿ ಒಳಗೆ ಸರಿದಳು.

❖

(ಮಯೂರ – ಮೇ, 2013)

ಗೋರುಕನ

ಕನಕರಾಜು ಆರನಕಟ್ಟೆ

ಇದು ಹೀಗೆಲ್ಲ ಆಗುತ್ತದೆ ಎಂದು ವೀರೇಶನಿಗೆ ತೋಚಿಯೇ ಇರಲಿಲ್ಲ. ಹುಡುಗಾಟಕ್ಕೆಂದು ಆರಂಭಿಸಿದ್ದು ಇವತ್ತು ಪ್ರಾಣಹಿಂಡುತ್ತಿದೆ.. ಯಾಕೊ ಅದ ನೆನೆಸಿಕೊಂಡಂತೆ ಮನದೊಳಗೆ ನಡುಕ ಹುಟ್ಟುತ್ತಿತ್ತು. ಎದೆಯೆಲ್ಲ ಮಂಜುಗಟ್ಟಿದಂತೆ ಬಾಸವಾಗಿ ಎ.ಸಿ ಯ ಗಾಳಿಗೆ ದೇಹ ತಣ್ಣಗಾಗಿ ಹೃದಯ ಪಟ್ಟನೆ ನಿಂತು ಹೋಗುವುದೇನೊ ಎಂದು ಭಯಬಿದ್ದು ಎದ್ದು ನಿಂತ. ತನ್ನ ಬದುಕಲ್ಲಿ ಏನೇನಲ್ಲ ಕಂಡಿದ್ದೇನೆ, ಇದಕ್ಕೆಲ್ಲ ಹೆದರುವುದೆ ಎಂದು ಸಮಾಧಾನಪಡಿಸಿಕೊಂಡು ಧಗೆಯಲ್ಲಿ ಬೇಯುತ್ತಿದ್ದ ರಸ್ತೆಯ ನೋಡಿದ. ರಮದಾನ್ ತಿಂಗಳಾದ್ದರಿಂದ ಜನರ ಓಡಾಟ ವಿರಳವಾಗಿತ್ತು. ಕಾರಿನಿಂದ ಇಳಿದ ಅರಬ್ಬಿಯೊಬ್ಬ ಇತ್ತ ಬರುತ್ತಿರುವುದ ನೋಡಿದ. ಮನಸ್ಸು ಸಡಿಲವಾದಂತೆನಿಸಿ ಹಾಯೆನ್ನಿಸಿತು. "ಸಲಾಮ ಲೇಖುಂ.. ಇಂತ ಫಾದಿ?" ಗಡಸು ಮುಖದ, ಗಟ್ಟಿ ಮೈಕಟ್ಟಿನ ಇಪ್ಪತ್ತರ ಆಸುಪಾಸಿನ ಅರಬ್ಬಿ ಎತ್ತರದ ದನಿಯಲ್ಲಿ ಕೇಳಿದ. " ಫದ್ದಲ್" ಎನ್ನುತ್ತ ಕುರ್ಚಿಯ ಸರಿಪಡಿಸಿ ಕತ್ತರಿ, ಬಾಚಣಿಗೆಗಳ ಬಿಸಿನೀರಲ್ಲಿ ತೊಳೆದ ವೀರೇಶ. ಗಿರಾಕಿಯ ದನಿ, ನೋಟ, ಮಾಸಿದ ಬಟ್ಟೆಗಳಿಂದ ಬಂದ ಅರಬ್ಬಿ ಯಾರೆಂಬುದು ಅವನಿಗೆ ಗೊತ್ತಾಯಿತು. ಬದೂವನ್ ಸೌದಿಗಳ ಜೊತೆ ಹೇಗೆ ನಡೆದುಕೊಳ್ಳಬೇಕೆನ್ನುವುದು ಆತನಿಗೆ ತಿಳಿದಿದೆ. ಪವಿತ್ರ ರಮದಾನ್ ತಿಂಗಳ ಬಿಸಿಲಲ್ಲಿ ಕಟಿಂಗ್ ಮಾಡಿಸಿಕೊಳ್ಳಲು ಬಂದಿರುವ ಈ ಬದೂವನ್ ಅರಬ್ಬಿ "ಸೋಮ್" ಆಚರಿಸುತ್ತಿಲ್ಲವೆ!? ಖಂಡಿತ ಆಚರಿಸುತ್ತಿರುತ್ತಾನೆ.. ಮತ್ಯಾಕೆ ಇವನು ಹೀಗೆ ಚಡಪಡಿಸುವವನಂತೆ ಕಾಣುತ್ತಿದ್ದಾನೆ. ತನ್ನೊಳಗಿನ ಉರಿಗಿಂತ ಕಸ್ಟಮರ್ ಅರಬ್ಬಿಯ ಕಣ್ಣೊಳಗಿನ ಬೆಂಕಿ ವೀರೇಶನನ್ನೀಗ ಆಕರ್ಷಿಸುತ್ತಿತ್ತು. ಸುಲೈಯಲ್ ನ ರಿಯಾದ್– ಅಭಾಹ್ ಮೈನ್ ರೋಡಿನಲ್ಲಿರುವ ಈತನ 'ನೂರ್ ಸಲೂನ್' ಗೆ ಬರುವವರಲ್ಲಿ ಹೆಚ್ಚಿನವರು ಅರಬ್ಬಿಗಳೆ. ಸುಲಲಿತವಾಗಿ ಅರಬ್ಬಿಯನ್ನು ಮಾತನಾಡಿದಷ್ಟೆ ಕರಾರುವಕ್ಕಾಗಿ ಈತ ಬದುವನ್ನೇ ಅಥವ ಹದರಿಯೇ ಎಂದು ಗುರುತಿಸಿ ಅವರ ಜೊತೆ ಹೇಗ್ಹೇಗೆ ವರ್ತಿಸಬೇಕು ಎಂಬುದ ತಿಳಿದುಕೊಂಡಿದ್ದ. ಈ ಹನ್ನೆರೆಡು ವರ್ಷಗಳ ಸೌದಿ ಜೀವನ ನೀಡಿರುವುದು ಬಹುಶಃ ಇದನ್ನೇ.. ಪಟ್ಟನಾಯಕನಹಳ್ಳಿಯಲ್ಲಿ ಕಟ್ಟಿಸಿರುವ ಮನೆಯ ಹೊರತುಪಡಿಸಿದರೆ ಅವನು ಗಳಿಸಿಕೊಂಡಿರುವುದು ಅರಬ್ಬಿಗಳೊಂದಿಗಿನ ಜೀವನನುಭವವನ್ನು. ತಾಯ್ನಾಡಿಗೆ ವಾಪಸ್ ಹೋಗುವ ಕುರಿತು ಇದುವರೆವಿಗೂ ಅವನು ಯೋಚಿಸಿದ್ದೇ ಇಲ್ಲ. ಸೌದಿಯ ಹೊಸ ನಿಯಾಖತ್ ಕಾನೂನು ಅವನನ್ನು ಅಷ್ಟು ಭಾಧಿಸಿಲ್ಲ. ವೀಸಾದ ನಿಯಮದಂತೆಯೇ ಅವನು ಕೆಲಸ ಮಾಡುತ್ತಿದ್ದುದರಿಂದ ನಿಯಾಖತ್ ಅವನ ಬಖಾತನ್ನು ನಿರ್ಧರಿಸುವ ಪ್ರಮೇಯವೇ ಇರಲಿಲ್ಲ. ಮನೆಯ

ಹತ್ತಾರು ಸಮಸ್ಯೆಗಳು, ಜವಾಬ್ದಾರಿಗಳು ಅವನನ್ನು ಸೌದಿ ಅರೇಬಿಯಾದ ಈ ನಜ್ದ್ ಭಾಗದ ಸುಲ್ಹೈಯಲ್‌ನಲ್ಲೇ ಉಳಿಸಿಬಿಟ್ಟಿದ್ದವು. ಇವೆಲ್ಲವುಕ್ಕಿಂತ ಮಿಗಿಲಾಗಿ ಶೂಲದಂತೆ ತಿವಿಯುವ ಹೆಂಡತಿಯ ವಿಕಾರ ನಡೆ–ನುಡಿಗಳೆ ತನ್ನನ್ನು ಈ ಮರುಭೂಮಿಯ ಪರ್ವತ ಶ್ರೇಣಿಗಳ ನಡುವೆ ಹೂತುಹಾಕಿವೆ ಎಂದುಕೊಂಡಿದ್ದಾನೆ. ಮಡದಿಯ ದನಿಯ ಸದಾ ಕೇಳಿಸಿಕೊಳ್ಳದಿದ್ದರೂ ಅವಳ ಹಗೆ, ಮತ್ಸರ ಇತ್ಯಾದಿಗಳು ಅವನನ್ನು ಇನ್ನಿಲ್ಲದಂತೆ ಬೆಂಬಿಡುತ್ತಿದ್ದವು. ಅಂತಹವಳ ಜೊತೆ ಸಂಸಾರ ನಡೆಸಿ ತನಗೂ ಅಂತಹ ಬುದ್ಧಿ ಬಂದಿದೆ ಎಂದು ಎಷ್ಟೋ ಬಾರಿ ಯೋಚಿಸಿದ್ದೂ ಇದೆ. ಕೊಡಗು, ಮೈಸೂರು ಎಂದು ಕೊನೆಗೆ ಸಾಗರ ದಾಟಿ ಕಾಣದೂರಿಗೆ ಬಂದರೆ ಅವಕ್ಕೆಲ್ಲ ಮುಗುತಾಯ ಸಿಗಬಹುದು ಎನ್ನುವುದು ತನ್ನ ರಮ್ಯ ಕಲ್ಪನೆಯೆಂದು ಅರಿಯಲು ಹೆಚ್ಚು ಸಮಯವೇನೂ ಬೇಕಾಗಲಿಲ್ಲ. ಈ ಹನ್ನೆರಡು ವರ್ಷಗಳ ಗಲ್ಫ್ ಜೀವನ ತನಗೆ ಕೊಟ್ಟಿರುವುದಾದರೂ ಏನನ್ನು? ಅದೇ ತಳಮಳ, ನಿರೀಕ್ಷೆ ಮತ್ತು ಅಸ್ಥಿರ ಜೀವನ.

ಬದುವನ್ ಅರಬ್ಬಿಗಳು ಸುಗಂಧ ದ್ರವ್ಯಕ್ಕೆ ಅಷ್ಟು ಪ್ರಾಮುಖ್ಯತೆ ಕೊಡುವುದಿಲ್ಲ, ಆದರೆ ಈ ಹುಡುಗ ಭಿನ್ನವಾಗಿದ್ದಾನಲ್ಲ! ಈತನ ಮೈಕಟ್ಟು, ದನಿ, ಬಟ್ಟೆ ಎಲ್ಲವ ನೋಡಿದರೆ ಸುಲಭವಾಗಿ ಹೇಳಬಹುದು: ಈತ ಬದೂವನ್ನೇ ಎಂದು. ಆದರೀ ಘಂ ಎನ್ನುವ ವಾಸನೆ? ಈತ ಹದರಿ ಅರಬ್ಬಿಯೇ? ಇಲ್ಲ, ಆಗಿರಲಿಕ್ಕಿಲ್ಲ ಎನ್ನುತ್ತ ಅರಬ್ಬಿ ಹುಡುಗನ ಕೂದಲ ಕತ್ತರಿಸುತ್ತಿದ್ದ ವೀರೇಶ ತನ್ನ ಊಹೆಯ ಖಾತ್ರಿ ಪಡಿಸಿಕೊಳ್ಳಲು ಮೊಳೆಯಲ್ಲಿ ನೇತಾಡುತ್ತಿದ್ದ ಹುಡುಗನ ಗೋತ್ರ ಮತ್ತು ಅಘಲ್‌ಗಳ ನೋಡಿದ. ಅರಬ್ಬಿಗಳ ತಲೆಯ ಅಲಂಕರಿಸುವ ಅವೆರೆಡು ಬದೂವನ್ ಮತ್ತು ಹದರೀಗಳ ಕೈಯಲ್ಲಿ ಭಿನ್ನವಾಗುತ್ತವೆ. ಸಣ್ಣ ಎಳೆಯೊಂದರಲ್ಲಿ ಭಿನ್ನವಾಗುವ ತಲೆಯ ಮೇಲಿನ ಬಟ್ಟೆ ಸೂಕ್ಷ್ಮವಾಗಿ ನೋಡುವವರಿಗೆ ಮಾತ್ರ ತಾನು ಯಾರ ತಲೆಯಲ್ಲಿದ್ದೇನೆಂಬ ಗುಟ್ಟ ಬಿಟ್ಟುಕೊಡುತ್ತದೆ. ಅರಬ್ಬಿಗಳ ನಡುವಿನ ವ್ಯತ್ಯಾಸಗಳು, ಸಂಬಂಧ, ಸ್ನೇಹ, ರೂಢಿ ರಿವಾಜುಗಳೆಲ್ಲವೂ ಬೇರೆಲ್ಲ ಇಂಡಿಯನ್ನರಿಗಿಂತ ವೀರೇಶನಿಗೆ ಚೆನ್ನಾಗಿ ಗೊತ್ತು. ಆದರೆ ಈ ಹುಡುಗ ಮಾತ್ರ ಗುಟ್ಟಾಗಿಯೇ ಉಳಿಯುತ್ತಿದ್ದಾನೆ. ಗೋತ್ರ ಎಂಬ ತಲೆಹೊದಿಕೆ ಬಟ್ಟೆಯ ಭಿನ್ನತೆಗಳೂ ಕಾಣಿಸಲಿಲ್ಲ. ಕೊನೆಯ ಪಟ್ಟೆಂಬಂತೆ "ಇಷ್ ಇಸಮ್ ಮುಧೀರ್?" ಕೇಳಿದ. ಕನ್ನಡಿಯನ್ನೇ ತದೇಕವಾಗಿ ನೋಡುತ್ತಿದ್ದ ಅರಬ್ಬಿ ಯುವಕ ಬೆಚ್ಚಿ ಬಿದ್ದವನಂತೆ "ಹುಂ!.. ಮೊಹಮ್ಮದ್" ಎಂದು ಕೂದಲ ಗಮನಿಸಿದ. ವೀರೇಶ "ಮೊಹಮ್ಮದ್ ಇಷ್?" ಎಂದ, ಈತನ ತಂದೆಯ ಹೆಸರ ಮೂಲಕವಾದರೂ ಮೂಲವ ಕಂಡುಹಿಡಿಯುವ ಎಂದು ಪ್ರಯತ್ನಿಸಿದ. ಹುಡುಗ ಕೋಪದ ದನಿಯಲ್ಲಿ "ಮೊಹಮ್ಮದ್ ರಾಶಿದ್.. ಇಷ್ ಇಬ್ಗಾ?" ಕೇಳಿದ. ಹುಡುಗನೀ ಪ್ರಶ್ನೆಗೆ ತಬ್ಬಿಬ್ಬಾಗಿ ಸುಮ್ಮನೆ ಕೇಳಿದೆ ಎಂದು ಹಲ್ಲ ಕಿರಿದು ಮಾಡುವ ಕೆಲಸದತ್ತ ಗಮನವಿಟ್ಟ. ಅರಬ್ಬಿ "ಶೂಫ್ ಹಿನ.." ಬಲಗಿವಿಯ ಮೇಲಿನ ಸರಿಸಮವಿಲ್ಲದ

ಕೂದಲ ತೋರಿಸಿ ಸರಿಮಾಡು ಎಂದ. ಹುಡುಗನ ಮೆಚ್ಚಿಸುವ ಭರದಲ್ಲಿ ವೀರೇಶ "ಅಲ ಕಷಮ್" ಎಂದು ಮೂಗ ತುದಿಯನ್ನು ತೋರುಬೆರಳಲ್ಲಿ ಮುಟ್ಟಿಕೊಂಡ, ಇದರ ಮೂಲಕವಾದರೂ ಈತ ಬದುವನ್ನೇ ಎಂದು ಖಚಿತಪಡಿಸಿಕೊಳ್ಳಲು. ಬದುವನ್ ಅರಬ್ಬಿಗಳ ರೂಢಿಗಳಲ್ಲಿ ಒಂದಾದ ಇದಕ್ಕೆ ಪ್ರತಿಯಾಗಿ "ಅಲ ಷೆಹಮ್" ಎನ್ನದೆ ಆ ಹುಡುಗ ವೀರೇಶನ ಮುಖವನ್ನೊಮ್ಮೆ ನೋಡಿ ಮತ್ತೆ ಕನ್ನಡಿಯ ದಿಟ್ಟಿಸುತ್ತಿದ್ದ. ಅಗಲವಾದ ಎದೆ ಆತನ ಉಸಿರಾಟಕ್ಕೆ ಹಿರಿದಾಗುತ್ತ ಕಿರಿದಾಗುತ್ತಿತ್ತು. ಆತನ ಉಸಿರ ಸದ್ದು ಮೆಲ್ಲಗೆ ಜೋರಾಗುತ್ತಿತ್ತು. ಈತನ್ಯಾಕೆ ಹೀಗೆ ಉದ್ವೇಗಗೊಳ್ಳುತ್ತಿದ್ದಾನೆ?! ಕುದಿವ ಸೂರ್ಯನಂತೆ ಈತನ ಕಣ್ಣುಗಳ್ಯಾಕೆ ಚುಚ್ಚುತ್ತಿವೆ?! ಯಾರಿಗಾದರೂ ಆಕ್ಸಿಡೆಂಟ್ ಮಾಡಿ ತಪ್ಪಿಸಿಕೊಂಡು ಬಂದನೆ?! ಅಥವ ಮನೆಯಲ್ಲಿ ಜಗಳವಾಡಿಕೊಂಡು ಹೊರಬಿದ್ದನೆ?! ತಂದೆ ಸತ್ತು ಹೋಗಿ ಇಡೀ ಕುಟುಂಬದ ಜವಬ್ದಾರಿ ಈತನ ಹೆಗಲೇರಿರಬಹುದೆ?! ಅಥವ ಮೂರ್ನಾಲ್ಕು ಮದುವೆಯಾಗಿರುವ ತಂದೆ ಇವನ ಕುಟುಂಬವನ್ನು ಕ್ಷುಲ್ಲಕವಾಗಿ ಕಾಣುತ್ತಿರಬಹುದೆ?! ಅವನ ಕಣ್ಣುಗಳ ಕನ್ನಡಿಯಲ್ಲಿ ನೋಡಿದ. ಅವು "ಓಬರ್" ಎಂಬ ಮಹಾ ಗಾಳಿಗೆ ಸಿಕ್ಕಿದ ಮರಳುಗುಡ್ಡೆಗಳಂತೆ ಅದುರುತ್ತಿದ್ದವು. ಆ ಕಂಗಳ ಕೆಳಗೆ ಎರಡು ಗೆರೆಗಳು ಕಂಡೂಕಾಣದಂತೆ ಮೂಡಿಮರೆಯಾಗುತ್ತಿದ್ದವು. ಸಿಟ್ಟು ಮತ್ತು ನೋವುಗಳಲ್ಲಿ ಮೀಯುತ್ತಿದ್ದವನಂತೆ ಆತ ಕಾಣಿಸಿದ. ಮಾತಾಡಿಸಲೆ? ಈ ವಯಸ್ಸಿಗೆ ಅದೇಕೆ ಈ ಪರಿ ಗಾಢ ನೋವು? ಏನು ಹೇಳಪ್ಪ, ನಿನ್ನಂತಹ ನೂರಾರು ಜನರನ್ನು ನನ್ನ ಬಾಲ್ಯದಿಂದ ಕಂಡಿದ್ದೇನೆ, ಅವರ ಒಳಗಿನ ಬೇಗುದಿ, ತುಮುಲಗಳನ್ನೂ ಚೆನ್ನಾಗಿ ಬಲ್ಲೆ.. ಮನಸ್ಸಿನ ಅಡಿತಳಕ್ಕೆ ಪಾತಾಳಗರಡಿಯನ್ನು ಬಿಟ್ಟು ಶೋಧಿಸಿರುವೆ, ಅವುಗಳಿಗೆ ಪರಿಹಾರವ ಕಂಡುಕೊಂಡಿರುವೆ, ಹೇಳು ನನ್ನ ಅರಬ್ಬಿ ಮಿತ್ರನೆ.. ಯಾಲ್ಲ, ಶಬ್ಬಾಬ್ ಕಲ್ಲಂ, ನಿನ್ನ ಒಳಗುದಿಯೇನು?.. ಕೇಳಲೆ? ಈ ಬದುವನ್ ಅರಬ್ಬಿಗಳ ಮನಸ್ಸ ಅನುಸರಿಸುವುದು ಕಠಿಣವಾದುದು.. ಹೀಗೇ ಎಂದು ಹೇಳಲಿಕ್ಕೆ ಬರುವುದಿಲ್ಲ, ಮೇಕೆಯಂತೆ ಮೃದುವಾಗುವ ಮನಸ್ಸು ದಿಢೀರನೆ ತೋಳದಂತೆ ಎರಗುತ್ತದೆ. ಹೆಸರ ಕೇಳಿದ್ದಕ್ಕೇ ಆತ ನುಂಗುವವನಂತೆ ನೋಡಿದ ಇನ್ನು ಇದ ಕೇಳಿದರಂತೂ ಜಾಡಿಸಿಬಿಡುವನೇನೊ.. ಇವನ ತಲೆಬಿಸಿ ತನಗ್ಯಾಕೆ.. ತನ್ನದೇ ಹೊದ್ದು ಮಲಗುವಷ್ಟಿದೆ.. ಚಳುಕ್ ಎಂಬ ನಡುಕ ಎದೆಯೊಳಗೆ ಹುಟ್ಟಿ ಕಿಬ್ಬೊಟ್ಟೆಯ ಕಿವುಚಿ ಗಂಟಲ ಹಿಂಡಿತು.

ಹೇಗೊ ಕಷ್ಟಪಟ್ಟು ಮುಗಿಸಿ "ಮುಧೀರ್, ಖಲಾಸ್" ಎಂದು, ನಗುವ ತಂದುಕೊಳ್ಳಲು ಶ್ರಮಿಸಿದ. ಏನಿಂದಲೊ ಬಿಡುಗಡೆಗೊಂಡವನಂತೆ ಆ ಅರಬ್ಬಿ ದೀರ್ಘ ನಿಟ್ಟುಸಿರೊಂದನ್ನಿಟ್ಟು ಕಣ್ಣ ಚಣ ಮುಚ್ಚಿ ತೆರೆದು "ಹಮ್ದುಲುಲ್ಲಾಹ್" ಎಂದು ವೀರೇಶನ ನೋಡಿದ. ದೇಸಾವರಿ ನಗುವ ಬರಿಸಿಕೊಂಡು ವೀರೇಶ ಅವನ ಕಣ್ಣುಗಳ ದಿಟ್ಟಿಸಿದ. ಅವು ಮುಂಚಿನಂತೆ ಚೀರಲಿಲ್ಲ, ವಿಸ್ತಾರ ಮರಳ ಮೇಲಿನ ಚಂದಿರನ ಹೊದಿಕೆಯಂತೆ ಪ್ರಶಾಂತಗೊಳ್ಳುತ್ತಿದ್ದವು. ಅವನ ಗಡಸು

ಮೈಯಿಂದ ಹೊಮ್ಮುತ್ತಿದ್ದ ಸುಗಂಧ ದ್ರವ್ಯ ವೀರೇಶನ ಮೂಗಿನ ಹೊರಳೆಗಳ ಹಿಗ್ಗಿಸಿ ಸೀಳಿಕೊಂಡು ಎದೆಯೊಳಗಿಳಿದು ಅವನ ರೋಮಾಂಚನಗೊಳಿಸಿತು. ಐವತ್ತು ರಿಯಾಲ್ ನೋಟೊಂದನ್ನು ವೀರೇಶನ ಕೈಗಿತ್ತು ಖುಷಿಯಿಂದ ನಕ್ಕ. ಅವನ ಕಣ್ಣಾಲಿಗಳಲ್ಲಿ ನೀರು ತುಂಬಿಕೊಂಡಂತೆ ಕಾಣಿಸಿತು. ಮುಖ ಅರಳಿತ್ತು. "ಜೀತಿಕ್ ಹಾಲ ಶೂದ್ ಅಲ್ ಮೆಜಾಹಿನ್ ಹಾಫಿ ಎಹತ್ತ ಎನಿಷಿದಕ್ ಒಗುಬ್ ಅಲ್ಬಥ ಕೇಫ್ ಹಲೆಹ್ವಾನ್?" ಎನ್ನುವ ಬದುವನ್ ಗೆಸೀದವೊಂದನ್ನು ಹೇಳಿದಾಗ ಅವನ ಕಂಠ ಮಗುವಿನ ಮೃದು ಪಾದದಂತೆ ನುಣುಪಾಗಿತ್ತು. ತುಟಿ ಬಿಚ್ಚಿ ನಕ್ಕಾಗ ಆತನ ತುಟಿಗಳು ಕಪ್ಪಗಿದ್ದುದ ವೀರೇಶ ಗಮನಿಸಿದ. ಬಯಲ ಚಳಿ, ಬಿಸಿಲುಗಳಿಗೆ ಬೆದರದ ಮುಖ ಇವನದು ಎಂದುಕೊಂಡು "ಇಂತ ಮಾಲೂಂ ಷಾಯರಿ?" ಎಂದ. ಏನೊಂದೂ ಮಾತನಾಡದೆ ಬಿರ್ರನೆ ಹೊರನಡೆದು ಕ್ಷಣ ಕಳೆದು ಮತ್ತೆ ಬಾಗಿಲ ತಳ್ಳಿ ಒಳ ಬಂದು ಸೋಫಾದಲ್ಲಿ ಕೂತು ಒಂದೆರೆಡು ನಿಮಿಷ ಇಲ್ಲೇ ಇರುವುದಾಗಿ ಹೇಳಿದ. ವೀರೇಶ ಆಯ್ತೆನ್ನುವಂತೆ ತಲೆಯಲ್ಲಾಡಿಸಿದ. ಅವನೊಂದಿಗೆ ಮಾತ ಜೋಡಿಸಬೇಕೆನಿಸಿತು. ಭಯ, ಹಿಂಜರಿಕೆ ಎಲ್ಲವೂ ಒಟ್ಟೊಟ್ಟಿಗೆ ಮೂಡಿ ಅವನ ನೋಡಿದ. ಕಣ್ಣ ಮುಚ್ಚಿ ತಲೆಯ ಗೋಡೆಗಾನಿಸಿ ಕೂತಿದ್ದ. ಈ ಬದುವನ್ ಅರಬ್ಬಿಗಳ ಜೊತೆ ಮಾತ ಬೆಳೆಸುವುದೇ ಕಷ್ಟ! ಕೋಪ ಬಂದರೆ ಏನು ಮಾಡುತ್ತಾರೆ ಎನ್ನುವುದ ಎಣಿಸಲಸಾಧ್ಯ. ಹದರಿ ಅರಬ್ಬಿಗಳ ಹಾಗೆ ಸೌಮ್ಯರೂ, ನಾಗರೀಕರೂ ಅಲ್ಲ ಇವರುಗಳು! ಧೈರ್ಯವಂತರೂ, ಬಲಿಷ್ಠರೂ ಆಗಿರುವ ಇವರುಗಳು ಸ್ನೇಹ, ಸಂಬಂಧ, ಸೇಡು, ಯಜಮಾನ್ಯಗಳಿಗೆ ಹೆಸರಾದವರು. ಅರಬ್ಬಿ ಸಮಾಜದ ಮೇಲ್‌ಸ್ಥರದ ಮುಖ್ಯವಾಹಿನಿಗಳು. ಅರಬ್ಬಿಗಳ ಜಗತ್ತಿನಲ್ಲಿ ಇಸ್ಲಾಂನೊಂದಿಗೆ ಬದೂವನ್ ಬದುಕೂ ಹೆಣೆದುಕೊಂಡಿದೆ. ಬದೂವನ್‌ಗಳ ಹಿಂಸ್ರಕ ಪಥವನ್ನು ಇಸ್ಲಾಂ ತಡೆಹಿಡಿದಿರುವುದು ನಿಜವಲ್ಲವೆ!? ಧರ್ಮದ ಕಟ್ಟುಪಾಡುಗಳು ಇಲ್ಲದಿದ್ದಿದ್ದರೆ ಇವರುಗಳ ಹಿಡಿಯಲಾಗುತ್ತಿತ್ತೆ? ಎಂದು ಗಂಭೀರವಾಗಿ ವೀರೇಶ ಗೆಳೆಯರೊಂದಿಗೆ ಮಾತನಾಡಿದ್ದಾನೆ. ಬಗಲಲ್ಲೇ ಚಾಕುವನ್ನೊ, ಪಿಸ್ತೂಲನ್ನೊ ಇಟ್ಟುಕೊಂಡಿರುವ ಇವರ ಕಂಡರೆ ಮನದ ಮೂಲೆಯಲ್ಲಿ ಭಯ ಬೆದರಿದ ಬೆಕ್ಕಿನಂತೆ ಇಣುಕುತ್ತಲೇ ಇರುತ್ತದೆ. ಮಾತಿಗೆ ಮಾತು ಬೆಳೆದು ಜಗಳಕ್ಕಿಳಿದರಂತೂ ಮುಗಿಯಿತು.. ಕೋಪ ನೆತ್ತಿಗೇರಿದ ಸಮಯ ಕೆಟ್ಟುಕೆರ ಹಿಡಿದಿದ್ದರೆ ಬದುಕು ಸಮಾಪ್ತಿ ಎಂದೇ ಅರ್ಥ.. ನಮ್ಮಲ್ಲೂ ಹೀಗೆ ಅಲ್ಲವೆ.. ಆ ತೇವರ್ ಬಡ್ಡಿಮಕ್ಕಳು! ಅವರಂತೆ ಈ ಬದುವನ್‌ಗಳೂ ಜನರ ತುಳಿಯುತ್ತಾರೆ. ಹದರಿಗಳ, ಕಪ್ಪು ಸೌದಿಗಳ ಬದುಕು ಇವರಿಗೆ ತೃಣ ಸಮಾನ. ನಾಗರೀಕತೆ ಗೊತ್ತಿಲ್ಲದ ಒಣಜಂಭದ ಪಾಪಸ್ಕಳ್ಳಿಗಳು ಇವರು ಎನ್ನುತ್ತಾರೆ ಇಲ್ಲಿಯ ಉಳಿದ ಅರಬ್ಬಿಗಳು. ತಮಿಳಿನ ತೇವರ್‌ಗಳೂ ಹೀಗೇ ಅಲ್ಲವೇ!!? ಒಣಪ್ರತಿಷ್ಠೆಯ ಬೆದರುಗೊಂಬೆಗಳು.. ಹಜಾಮ, ಅಗಸ, ಪರೆಯರಿರುವುದೆ ತಮ್ಮ ಸೇವೆಗೆ ಎಂದು ತಮ್ಮೆಲ್ಲರ ಬದುಕುಗಳ ಮೇಲೆ ಸವಾರಿ ಮಾಡುವವರು! ತಮ್ಮನ್ನಾದರೂ ಜಗುಲಿಗೆ

ಬಿಟ್ಟುಕೊಳ್ಳುತ್ತಾರೆ, ಪರೆಯರನ್ನು!? ಲಾ ಇಲಾಹ ಇಲ್ಲಲ್ಲ..! ಅವರ ಬದುಕು ನಾಯಿಬದುಕು. ತಮಿಳುನಾಡಿನಲ್ಲಿ ಆಗುತ್ತಿರುವಂತೆ ಕರ್ನಾಟಕದಲ್ಲೂ ತೇವರ್‌ಗಳ ಅಟ್ಟಹಾಸವ ಈ ಪರೆಯರ್ಯಾಕೆ ಮುರಿಯುತ್ತಿಲ್ಲ?! ಆದರೆ ತಮಿಳುನಾಡಿನ ತೇವರ್‌ಗಳಷ್ಟು ಕರ್ನಾಟಕದ ತೇವರ್‌ಗಳು ಕೆಟ್ಟವರಲ್ಲ.. ಆದರೂ ತಮ್ಮೆಲ್ಲರ ಅವರುಗಳು ಕೀಳಾಗಿಯೇ ಕಾಣುತ್ತಾರಲ್ಲ.. ಈ ಬದೂವನ್ ಅರಬ್ಬಿಗಳು ಹದರಿ ಮತ್ತು ಕಪ್ಪು ಅರಬ್ಬಿಗಳ ಕಾಣುವ ಹಾಗೆ.. ಒಂದು ಚೀಲ ಭತ್ತಕ್ಕಾಗಿ ವರ್ಷ ಪೂರ್ತಿ ತೇವರ್‌ಗಳ ಮನೆಯಲ್ಲಿ ತನ್ನ ತಂದೆ ಚೌರ ಮಾಡುತ್ತಿದ್ದುದು ಕೆಲವೊಮ್ಮೆ ನೆನಪಾಗಿ ಉರಿಕೋಪ ಸುರ್ರೆನ್ನುವುದು ವೀರೇಶನ ತಲೆಯೊಳಗೆ ಹಾದು ಹೋಯ್ತು. ಈಗ ಪರಿಸ್ಥಿತಿ ಹಾಗಿಲ್ಲ ಎನ್ನುವುದು ಸಮಾಧಾನ.. ಅವರ ಬದುಕುಗಳು ಮೂರಾಬಟ್ಟೆಯಾಗಿವೆ, ಹೊಲಗಳ ಮಾರಿಕೊಂಡು ಬದುಕುವ ಸ್ಥಿತಿಗೆ ತಲುಪಿರುವಾಗ ಹಳೆಯ ರೂಢಿಗಳನ್ನು ಪಾಲಿಸಲು ಅವರಿಂದ ಸಾಧ್ಯವಿಲ್ಲ.. ಮುಖ್ಯವಾಗಿ ಈ ಕಾಲದ ತಮ್ಮವರ ಬಳಿ ಅವರ ಜಾತಿ ಜಂಭಗಳ ಬೇಳೆ ಬೇಯುವುದಿಲ್ಲ.. ಹಹಹಹ. ಆದರೂ.. ಆ ಬಡ್ಡಿಮಕ್ಕಳ ಪೊಗರು ಇಳಿದಿಲ್ಲವಲ್ಲ! ಈ ಬದೂವನ್‌ಗಳ ಹಾಗೆಯೇ ಬಹು ಚೂಲಿನ ಮನುಷ್ಯರು ಆ ನನ್ಮಕ್ಳು. ಕಟ್ಟಿಕೊಂಡ ಹೆಂಡತಿಯಿದ್ದರೂ ಇಟ್ಟುಕೊಳ್ಳಲು ಒಬ್ಬಳು ಬೇಕು.. ಈಗಿನ ಕಾಲದ ಯಾವ ತೇವನೂ ಇಟ್ಟುಕೊಳ್ಳುತ್ತಿಲ್ಲ, ಬದಲಿಗೆ ಬೇರೆ ಹೆಣ್ಣುಗಳ ಮೇಲೆ ಹಾರುತ್ತಾರೆ. ಕೂಲಿಗೆ ಹೋಗುವ ಪಾಪದ ಪರೆಯರ ಹೆಣ್ಣುಗಳು ಅವರ ತೋಟಗಳಲ್ಲಿ ತಮ್ಮ ಮೈಯನ್ನೂ ಮಾರಿಬರುತ್ತಾರೆ.. ಈ ಅರಬ್ಬಿಗಳಾದರೂ ನ್ಯಾಯಸಮ್ಮತವಾಗಿ ಮೂರ್ನಾಲ್ಕು ಮದುವೆಯಾಗಿ ಎಲ್ಲರನ್ನೂ ಚೆನ್ನಾಗಿ ನೋಡಿಕೊಳ್ಳುತ್ತಾರೆ.. ಆ ಕಳ್ ನನ್ಮಕ್ಳು..? ತನ್ನ ಹೆಂಡತಿಯನ್ನೇನಾದರೂ ಆ ತೇವರ್‌ಗಳು..? ಅದುರಿಹೋದ. ಅವಳೇನು ಕಡಿಮೆಯಿಲ್ಲ, ಹಠ, ಜಿದ್ದುಗಳಲ್ಲಿ ಬೇಯುವ ಅವಳು ತನ್ನ ಮೇಲೆ ಹಗೆ ಸಾಧಿಸಲು ಏನು ಬೇಕಾದರೂ ಮಾಡಬಲ್ಲವಳು. ಥಿ.. ಆಗಾಗ ಕಾಡುವ ಈ ಯೋಚನೆ ಇಂದ್ಯಾಕೆ ಮರುಕಳಿಸಿತು? ಅದೂ ಈ ತಂಪಾದ ಹೊತ್ತಲ್ಲಿ?

ಬಾಗಿಲು ಜೋರಾಗಿ ಸದ್ದು ಮಾಡುತ್ತ ತೆರೆದುಕೊಂಡಿತು. "ವೀರೇಸ್, ಸೌಖ್ಯಮಾ?" ಒಳಬಂದ ತಮಿಳುನಾಡಿನ ಮಧುರೈಯ ಬಶೀರ್ ಕೇಳಿದ. ಧಗ್ಗನೆದ್ದ ವೀರೇಶ "ಊಂ" ಉತ್ತರಿಸಿ ಪಿಳಿಪಿಳಿ ಕಣ್ಣಬಿಟ್ಟ. ಬಶೀರ್ ಅರಬ್ಬಿ ಯುವಕನ ಎಬ್ಬಿಸಿ,

"ಮೊಹಮ್ಮದ್, ರೋಹ್.. ಇಂತ ಬಾಬಾ ಇಂತಜಾರ್ ಬರ್ರ" ಎಂದ. ಆ ಹುಡುಗ ಎದ್ದು ಕನ್ನಡಿ ನೋಡುತ್ತ ತಲೆಯ ಮೇಲಿನ ಗೋತ್ರ ಮತ್ತು ಅಘಲ್ ಗಳ ಸರಿಪಡಿಸಿಕೊಂಡು ಬೆನ್ನು ಮಾಡಿ ಹೊರನಡೆದ. ಉದ್ದದ ತೋಬ್‌ನಲ್ಲಿ ಪ್ರತ್ಯೇಕವಾಗಿ ಕಂಡ ಅವನ ಅಂಡು ವೀರೇಶನಿಗೆ ತನ್ನ ಹೆಂಡತಿಯನ್ನು ನೆನಪಿಸಿ ಮೈ ಜುಮ್ಮೆಂದಿತು. ಹೆಂಡತಿಗಿಂತ ವಾದಿ ಅಲ್ ದವಾಸಿರ್‌ನ ಆಸ್ಪತ್ರೆಯಲ್ಲಿರುವ ಕೇರಳದ ನರ್ಸ್

ಮರಿಯಂಳ ದೇಹಸಿರಿಯು ಅವನೊಳಗೆ ಅನಾವರಣಗೊಳಿಸಿತು ಎನ್ನಬಹುದು. "ವೀರೇಸ್, ಇವನ್ ಯಾರ್ ತೆರಿಯುಮಾ?" ಎನ್ನುವ ಬಶೀರ್‌ನ ದನಿ ವೀರೇಶನಲ್ಲಿ ಕೋಪವ ತಂದರೂ ಸುಧಾರಿಸಿಕೊಂಡು "ಇಲ್ಲ, ಗೊತ್ತಿಲ್ಲ, ಯಾರಿವನು?" ಎಂದ. ಬಶೀರ್ ಹೇಳುತ್ತಿದ್ದ: "ಅಲ್ ದೊಸರಿ ಬದೂವನ್‌ಗಳ ಅಲ್ ಮೊಹರಿನ್ ಪಂಗಡಕ್ಕೆ ಸೇರಿದವನು ಈ ಮೊಹಮದ್ ರಾಶೀದ್. ಈ ಪಂಗಡ ಅಂತಿಂಥ ಪಂಗಡವಲ್ಲ, ಸಮಾಜದ ನಿಯಮಗಳಿಗೆ ಸೆಡ್ಡು ಹೊಡೆವ, ತಮ್ಮದೇ ನೀತಿಗಳನ್ನಿಟ್ಟುಕೊಂಡಿರುವ ಪಂಗಡ. ಏಟಿಗೆ ಏಟು, ಸಾವಿಗೆ ಸಾವು.. ಯಾವುದಕ್ಕೂ ಬಗ್ಗದ ಎಂಟೆದೆಯ ಗುಂಪು. ಇವರಲ್ಲೊಂದು ಅಲಿಖಿತ ನಿಯಮವಿದೆಯಂತೆ; ಇವರಲ್ಲಿ ಒಬ್ಬ ಕೊಲ್ಲಲ್ಪಟ್ಟರೆ ಪ್ರತಿಯಾಗಿ ಕೊಂದವರ ಮನೆಗಳಲ್ಲಿ ಎರಡು ಹೆಣ ಉರುಳಲೇಬೇಕಂತೆ. ಇಂಥ ಪಂಗಡದ ಈ ಮೊಹಮದ್ ರಾಶೀದ್‌ನ ತಾತನನ್ನು ಐದು ವರ್ಷಗಳ ಹಿಂದೆ ದೊಸರಿಗಳ ಇನ್ನೊಂದು ಪಂಗಡವಾದ ಅಲ್ ರಿಜ್ಬಾನ್‌ಗೆ ಸೇರಿದವನು ಕೊಂದುಹಾಕಿದನಂತೆ. ಅದರ ಮುಯ್ಯಿ ಇನ್ನೂ ತೀರಿಲ್ಲ. ತಂದೆಯಿಲ್ಲದ ಸೇಡು ಇವನಲ್ಲಿ ಕೀವು ಕಟ್ಟಿದೆ, ಹುಚ್ಚೆದ್ದು ಅಲೆಯುತ್ತಿದ್ದಾನೆ, ಮನೆಯವರೂ ಎಷ್ಟು ಹೇಳಿದರೂ ಕೇಳುತ್ತಿಲ್ಲ. ಈ ಕಾರಣಕ್ಕೇ ಮನೆಯವರ ಜೊತೆ ಜಗಳ ಮಾಡಿಕೊಂಡು ಹಲವು ಬಾರಿ ಮನೆ ಬಿಟ್ಟು ಮರುಭೂಮಿಗೆ ಹೋಗಿಬಿಡುತ್ತಾನೆ.."

ಅರಬ್ಬಿ ಹುಡುಗ ಹೇಳಿದ ಆ ಪದ್ಯದ ಇನ್ನೊಂದು ಅರ್ಥದ ಮಜಲು ಗೋಚರಿಸಿ ವೀರೇಶ ಬೆಚ್ಚಿ ಬಿದ್ದ:

"ಬರಿಗಾಲಲ್ಲಿ ಓಡಿ ಕಪ್ಪು ಒಂಟೆಯ ಹತ್ತಿ ಬಂದೆ ಗೆಳೆಯ, ನಿನ್ನ ಕಂಡು ಹೇಗಿರುವೆ? ಎಂದು ಕೇಳಲು" ಪದ್ಯವ ತನಗೆಟುಕಿದ ಅರಬ್ಬಿಯಲ್ಲಿ ಅರ್ಥೈಸಿಕೊಂಡ ವೀರೇಶನಲ್ಲಿ ಅವ್ಯಕ್ತ ಭಯವೊಂದು ಬಿಚ್ಚಿಕೊಂಡಿತು. ಹೊಟ್ಟೆಯೊಳಗೆ ವಿಚಿತ್ರ ಸಂಕಟ. ಜುಹರ್ ಪ್ರಾರ್ಥನೆಗೆ ಅದಾನ್ ಕೂಗಿದರು. ಸಲೂನ್‌ಗೆ ಬೀಗ ಹಾಕುವಾಗ ತಲೆ ಗಿರಕಿಹೊಡೆದಂತೆ ಭಾಸವಾಯ್ತು. ಕಾಲುಗಳು ಮತ್ತೆ ನಡುಗತೊಡಗಿದವು. ಬೀಸುತ್ತಿರುವ ಸುಡುಗಾಳಿ ಅವನ ಮೈಯ ತಿವಿಯುತ್ತಿತ್ತು. ಇಷ್ಟೆಲ್ಲ ಆಗುತ್ತಿರುವುದು ಆ ಅರಬ್ಬಿ ಹುಡುಗನ ಕಥೆ ಕೇಳಿದ ಮೇಲೆಯೇ?! ಏನೊಂದೂ ತೋಚದೆ ಎಲ್ಲವೂ ಶೂನ್ಯವಾದಂತೆನಿಸಿದವು. ಹೆಜ್ಜೆ ಇಡಲಾಗಲಿಲ್ಲ. ಚಣ ಸುಧಾರಿಸಿ ರೂಮ ಕಡೆ ಹೋಗುವ ಎಂದು ತಿರುಗಿದ, ಬಶೀರ ಹೊರಟುಹೋಗಿದ್ದ. ತಾನು ಎಲ್ಲವನ್ನು ಮರೆತುಬಿಟ್ಟನೆ? ಅಥವ ಮರೆಯಲೆಂದೇ ವಿದೇಶಕ್ಕೆ ಬಂದನೆ? ನಾಲ್ಕು ಕಾಸು ದುಡಿದು ಹೊಲಮನೆ ತೆಗೆದುಕೊಳ್ಳಬೇಕಂದಲ್ಲವೆ ತಾನು ಬಂದದ್ದು? ಅಥವ ಆ ರಂಡೆ ಹೆಂಡತಿಯ ಕಾಟ ತಪ್ಪಿಸಿಕೊಳ್ಳಲೆಂದೆ? ತೇವರ್, ಗೌಂಡರ್, ನಾಯಕ, ಕುಂಚಿಟಿಗ ಎಲ್ಲರನ್ನು ಮೀರಿಸಬೇಕಂದಲ್ಲವೆ ತಾನು ಬಂದದ್ದು? ಅದೇನೆ ಇರಲಿ, ತನ್ನ ತಾತನ ಕೊಂದ ಆ ಪಟ್ರೆಹಳ್ಳಿ ತೇವರ್‌ಗಳಿಗೆ ಒಂದು ಗತಿ ಕಾಣಿಸಲೇಬೇಕು.

ಚಹರೆ ಕಳೆದುಕೊಂಡು ರದ್ದಿಯಾಗುತ್ತಿದ್ದ ನೋವಿನ ನೆನಪೊಂದು ಮನದೊಳಗಿನ ಬಿಲದಿಂದ ನುಸುಳಿ ಬಂದಿತು. ಸುಮಾರು ವರ್ಷಗಳ ನಂತರ ಬಂದ ತಾತನ ನೆನಪು ಅವನನ್ನು ಅಧೀರಗೊಳಿಸಿದಂತೆ, ಮತ್ತಷ್ಟು ಅಸ್ಥಿರಗೊಳಿಸಿದಂತಿತ್ತು. ತುಂಬಾ ಹಳೆಯದಾದ ಮಾಸಿದ ಆ ನೆನಪಿನ ಚಿತ್ರ ಎದೆಯ ಪಾತಾಳದಲ್ಲಿ ಇನ್ನೂ ಅಡಗಿಕೂತಿದ್ದುದು ಅವನಿಗೆ ದಿಗಿಲ ತಂದರೂ ಅದು ಹೊರಡಿಸಿದ ಕೋಪದ ತಂತಿಯ ಸದ್ದನ್ನು ಇಷ್ಟಪಟ್ಟ.

ತಮಿಳುನಾಡಿನ ಪೊಲ್ಲಾಚಿಯಿಂದ ಕರ್ನಾಟಕದ ಹಿರಿಯೂರಿಗೆ ವಲಸೆಬಂದ ತೇವರ್ ಕುಟುಂಬಗಳಿಗೆ ನಿಷ್ಠ ಹಜಾಮನಾಗಿದ್ದ ವೀರೇಶನ ತಾತ ಪಳನಿಚ್ಚಾಮಿ ತನ್ನ ಹಿರೀಕರಂತೆ ತೇವರ್ ಮತ್ತು ಗೌಂಡರ್‌ಗಳ ಸೇವೆಯೇ ತನ್ನ ಬದುಕು ಎಂದುಕೊಂಡಿದ್ದವನು. ತೇವರ್‌ಗಳು ಹೆಚ್ಚಿದ್ದ ಪಟ್ರೆಹಳ್ಳಿ ಅವನ ಕಾರ್ಯಕ್ಷೇತ್ರವಾಗಿತ್ತು. ವರ್ಷದ ಕೂಲಿ ಮತ್ತು ಮದುವೆ, ಸಾವುಗಳಲ್ಲಿ ಸಿಗುವ ಪುಡಿಗಾಸು ಇದೇ ಅವನ ಆರ್ಥಿಕತೆಯ ಮೂಲವಾಗಿತ್ತು. ತೇವರ್ ಮನೆಗಳ ಹುಟ್ಟು-ಸಾವು, ಮದುವೆ-ಉತ್ಸವ, ಕುಲದೈವ ಪೂಜೆ ಹೀಗೆ ಎಲ್ಲದರಲ್ಲೂ ಪಳನಿಚ್ಚಾಮಿ ಹಜಾಮನ ಪಾತ್ರ ಇರಲೇಬೇಕು. ಎಷ್ಟೋ ಶಾಸ್ತ್ರಗಳನ್ನು ಕೆಲವೊಮ್ಮೆ ಪಳನಿಚ್ಚಾಮಿಯನ್ನು ಕೇಳಿಯೇ ತೇವರ್ ದೊಡ್ಡಾಳುಗಳು ಮಾಡುತ್ತಿದ್ದರು. ತೇವರ್‌ಗಳ ನಡುವೆಯೇ ಹುಟ್ಟಿಬೆಳೆದ ಅವನಿಗೆ ಅವರ ಪ್ರತಿ ಆಚರಣೆಯೂ ಗೊತ್ತಿತ್ತು. ಹೊಸ ತಲೆಮಾರಿನ ತೇವರ್‌ಗಳು ಕೆಲವೊಮ್ಮೆ ಇವನನ್ನು ಕೇಳಿಯೇ ಶಾಸ್ತ್ರಗಳ ನೆರವೇರಿಸುತ್ತಿದ್ದರು. ಇಷ್ಟು ಮಾತ್ರವಲ್ಲದೆ, ತೇವರ್‌ಗಳೊಳಗಿನ ಒಂದೊಂದು ಪಂಗಡದ ಚರಿತ್ರೆ, ಅವರ ದೇವರುಗಳ ಪುರಾಣೇತಿಹಾಸಗಳು ಎಲ್ಲವೂ ಆತನ ಬಾಯಿಯಲ್ಲಿದ್ದವು. ತನ್ನ ಕೊಂಗುಹಜಾಮ ಕುಲದ ಶಾಸ್ತ್ರಗಳಿಗಿಂತ ಹೆಚ್ಚಾಗಿ ಅವನಿಗೆ ತೇವರ್ ಮಾರ್‌ಗಳ ಆಚರಣೆಗಳೇ ಕರತಲಮಲಕವಾಗಿತ್ತು. ಹೊನ್ನ ಕದ್ದವರು, ಪಾಳೆಪಟ್ಟುಗಳ ಕಾಯ್ದವರು, ನಾಡ ಆಳಿದವರು, ಅಣೆಕಟ್ಟುಗಳ ಕಟ್ಟಿದವರು, ಮಣ್ಣ ಗೇಯ್ದವರು, ತಮ್ಮತಮ್ಮೊಳಗಿನ ದಾಯಾದಿ ಕಲಹಗಳಲ್ಲಿ ಬೆಂದು ಬೀದಿಗೆ ಬಿದ್ದವರು ಎಂದು ನೂರಾರು ವರ್ಷಗಳ ಚೋಳ ಪಾಂಡ್ಯರ ಮೊದಲ್ಗೊಂಡು ವಿಜಯನಗರದರಸರ, ನವಾಬರಾದಿಯಾಗಿ ಬ್ರಿಟೀಷರ ಕಾಲದವರೆವಿಗೂ ತೇವರ್ ಇತಿಹಾಸವನ್ನು ಹಾಡಲ್ಲೇ ಹೇಳಬಲ್ಲವನಾಗಿದ್ದ.

ಅಂದು ಪಿಲ್ಲುಕಟ್ಟಿ ತೇವರ್ ಕುಲದ ಹಿರಿಜೀವ ಅಂಗೈಯಮ್ಮ ತೀರಿಹೋಗಿದ್ದಳು. ರಾಮಸ್ವಾಮಿ ತೇವರ್ ಸೊಸೆಯೂ, ರತ್ತಿನ ತೇವರ್ ಮಗಳೂ ಆಗಿದ್ದ ಅಂಗೈಯರ್ ಕರಸಿ ಚಿಕ್ಕಂದಿನಿಂದಲೂ ಸುಖದಲ್ಲೇ ಬೆಳೆದವಳು. ತನ್ನ ಜಾತಿಯ ಎಲ್ಲಾ ನಡಾವಳಿಗಳನ್ನು ಅರಿತಿದ್ದ ಅವಳು ಕುಟುಂಬ ವ್ಯಾಜ್ಯಗಳ ತೀರಿಸುವ ಜವಬ್ದಾರಿಯನ್ನು ತಂದುಕೊಂಡು ಸುತ್ತಣ ಊರುಗಳ ತೇವರ್ ಮಾರ್‌ಗಳಲ್ಲಿ ಮರ್ಯಾದೆ ಸಂಪಾದಿಸಿದ್ದಳು. ಪಳನಿಚ್ಚಾಮಿಗೆ ಈ ಅಜ್ಜಿ ಎಂದರೆ ಪ್ರಾಣ. ಎಷ್ಟೋ ವಿಷಯಗಳನ್ನು

ಅವನು ಈಕೆಯಿಂದ ಮತ್ತು ಈಕೆ ಅವನಿಂದ ಎಂದು ಪರಸ್ಪರ ಕಲಿತುಕೊಂಡಿದ್ದರು. ಹೀಗೆ ಕುಲದ ಹಿರಿಜೀವವಾಗಿದ್ದ ಅಂಗಜ್ಜಿ, ಅಂಗಮ್ಮ, ಅಂಗೈಯರ್ ಕರಸಿ, ಈ ಇಹಲೋಕವ ತ್ಯಜಿಸಿ ಪರಲೋಕಕ್ಕೆ ಹಾರಿದ ಸಮಯ. ಸುತ್ತಲ ತೇವರ್ ಜನಾಂಗವೆಲ್ಲವೂ ವೇಲುಚ್ಚಾಮಿ ತೇವರ್ ಮನೆಯಲ್ಲಿ ಕೂಡಿತ್ತು. ಸಾವಿನ ಶಾಸ್ತ್ರಗಳಲ್ಲಿ ಮುಳುಗಿದ್ದ ಪಳನಿಚ್ಚಾಮಿ ಹಜಾಮ ಕೆಲವೊಮ್ಮೆ ದುಃಖಪಡುತ್ತ ಲಗುಬಗೆಯಿಂದ ಓಡಾಡುತ್ತಿದ್ದ. ಸಾವಿನ ಸಂಧರ್ಭಗಳಲ್ಲಿ ಮಾತ್ರ ತೇವರ್ ಮನೆಗಳೊಳಗೆ ಪ್ರವೇಶ ಸಿಕ್ಕುವುದಾದ್ದರಿಂದ ಆರಂಭದಲ್ಲಿ ಕಣ್ಣಕಟ್ಟಿದಂತಾಗಿ ತಬ್ಬಿಬ್ಬಾಗುತ್ತಿದ್ದ. ಮೆಲ್ಲಗೆ ಹೊಂದಿಕೊಂಡು ಶಾಸ್ತ್ರಗಳ ಒಂದೂ ತಪ್ಪದೆ ಮಾಡಬೇಕು ಎನ್ನುವ ಉಮೇದಿನಲ್ಲಿ ಸಾವಿನ ಸೂತಕವ ಸೀಳಿ ಕೂಗುತ್ತಿದ್ದ. ಆ ದಿನ ದೊಡ್ಡ ಸಾವಾದ್ದರಿಂದ ಪಳನಿಚ್ಚಾಮಿ ಬಹು ಆಸ್ಥೆ ವಹಿಸಿ ಕೆಲಸಮಾಡುತ್ತಿದ್ದ, ಕುಲದ ಮಹಾತಾಯಿ ಅಂಗೈಯಮ್ಮನಿಗೆ ಸಾವಿನ ಶಾಸ್ತ್ರಗಳ ಬಹಳ ಅಚ್ಚುಕಟ್ಟಾಗಿ ಮಾಡಬೇಕೆಂದು ತನಗೆ ತಾನೇ ನಿರ್ಧರಿಸಿಕೊಂಡಿದ್ದ. ಹೆಣದ ರಂಧ್ರಗಳಿಗೆ ಬಟ್ಟೆ ತುರುಕಿ, ಕಟ್ಟಿ ಮೊದಲ ಶಾಸ್ತ್ರದ ಪೂಜೆಗೆ ಅಣಿಗೊಳಿಸಿದ. ಮನೆಯ ಮಂದಿ ಪೂಜೆ ಮುಗಿಸಿದರು. ಹೆಂಗಸರು ವೊಪ್ಪಾರಿಯಿಟ್ಟು ಅಳತೊಡಗಿದರು. ಹೊರಗೆ ಅಗಸರು "ತೇರು" ಕಟ್ಟುತ್ತಿದ್ದರು. ಪರೆಯರು ತಮಟೆಗೆ ಬೆಂಕಿ ಕಾಯಿಸಿಕೊಳ್ಳುತ್ತಿದ್ದರು. ಎಲ್ಲವೂ ಸಿದ್ಧವಾದಂತೆ ಹೆಣವ ಅಂಗಳಕ್ಕೆ ತಂದು ಪಿಲ್ಲುಕಟ್ಟಿ ತೇವರ್ ಕುಲದವರು ಎಣ್ಣೆ–ಸೀಗೇಕಾಯಿಪುಡಿಗಳ ಹೆಣಕ್ಕಿಡಲು ಪಳನಿಚ್ಚಾಮಿ ಹಜಾಮ ಸಹಕರಿಸುತ್ತ ಹೆಂಗಸರು ತಂದಿಟ್ಟಿದ್ದ ಕೊಡದ ನೀರನ್ನು ಅಂಗೈಯಜ್ಜಿಯ ದೇಹಕ್ಕೆ ಸುರಿದ. ನಂತರದ ಶಾಸ್ತ್ರವಾದ 'ಕೋಡಿ' – ಶವದ ಬಟ್ಟೆ– ತೊಡಿಸುವುದಕ್ಕೆ ಚಾಲನೆ ನೀಡಿದ: "ಹುಟ್ಟಿದ ಕುಲದ ಕೋಡಿ (ಪಿರಂದ ವೀಟ್ಟು ಕೋಡಿ) ಬರಲಿ ಸಾಮಿಯೋಯ್" ಪಳನಿಚ್ಚಾಮಿ ಕೂಗಿದ. ಅಂಗಜ್ಜಿಯ ತವರುಮನೆ ಕುಲವಾದ ಕಾಡೈತೇವರ್‌ಗಳು ಪಿರಂದ ವೀಟ್ಟು ಕೋಡಿಯ ತರಲು ಆ ಊರಿನ ಕಾಡೈ ತೇವನ್ ಕುಪ್ಪುಚ್ಚಾಮಿ ಮನೆಯಲ್ಲಾಗಲೇ ಸೇರಿದ್ದರು. ಕೋಡಿಯ ಬಟ್ಟೆ, ಹಣ್ಣು ಕಾಯಿ, ಧೂಪದ ಕಡ್ಡಿ, ಕರ್ಪೂರ ಎಲ್ಲವೂ ಸಿದ್ಧವಾಗುತ್ತಿದ್ದವು. ಅಂಗೈಯಜ್ಜಿಯ ಮೂರು ತಮ್ಮಗಳಲ್ಲಿ ಕೊನೆಯವನಾದ ಕುಳಂದೈವೇಲ್ ಕೂಗಾಡುತ್ತಿದ್ದ.. ಜೀವನಂಪೂರ್ತಿ ತಮ್ಮ ಅಕ್ಕನನ್ನು ಹಿಂಸಿಸಿದ ಆ ವೇಲುಚ್ಚಾಮಿ ತೇವನಿಗೆ ಈ ದಿನ ಒಂದು ಗತಿ ಕಾಣಿಸಬೇಕು ಎಂದು ಅರಚುತ್ತಿದ್ದ. ಅವನ ಸಮಾಧಾನಿಸಲು ಎಲ್ಲರೂ ವ್ಯರ್ಥ ಪ್ರಯತ್ನ ನಡೆಸುತ್ತಿದ್ದರು. ಅಂಗಜ್ಜಿಯ ಗಂಡನಿಗೂ ಮತ್ತು ಆಕೆಯ ಒಡಹುಟ್ಟಿದವರಿಗೂ ಯಾವುದೊ ವಿಚಾರವೊಂದರಲ್ಲಿ ಜಗಳವಾಗಿ ಹೊಡೆದಾಟದ ಹಂತಕ್ಕೆ ತಲುಪಿತ್ತು. ವರ್ಷಗಳ ಕಾಲ ತವರುಮನೆಗೆ ಹೋಗಲಾಗದೆ ಕಟ್ಟಪ್ಪಣೆಗೊಳಗಾಗಿದ್ದ ಅಂಗೈಯಜ್ಜಿಗೆ ಸಾಯುತ್ತಿರುವ ಗಳಿಗೆಯಲ್ಲಿ ತನ್ನವರ ನೋಡುವ ಸೌಭಾಗ್ಯ ಒದಗಿಬಂದಿತ್ತು. ಪ್ರಾಣ ಬಿಡುವ ಗಳಿಗೆಯನ್ನು ಎರಡು ವಾರಗಳ ಕಾಲ ಮುಂದೂಡಿಕೊಂಡ ಅಜ್ಜಿ ಮಾರ್ಗಳಿ ತಿಂಗಳ ಅಮಾವಾಸ್ಯೆ ಕಳೆದು ಮೂರು

ದಿನಕ್ಕೆ ನೆಮ್ಮದಿಯಿಂದ ಕಣ್ಣ ಮುಚ್ಚಿದ್ದಳು. ಕುಳಂದೈವೇಲ್‌ನ ಕಿರುಚಾಟ ಹೆಚ್ಚುತ್ತಲೇ ಹೋಗಿ ಅವನ ಅಣ್ಣನೂ ಮನೆಯ ಹಿರಿಯವನೂ ಆದ ಮುತ್ತುರಾಜ ಕೊನಗೆ ಅವನ ಕಾಲಿಗೆ ಬಿದ್ದು "ಪಿಲ್ಲುಕಟ್ಟಿಗಳೆದುರು ನಮ್ಮಪ್ಪನ ಮಾನ ತೆಗೆಯಬೇಡವೊ" ಎನ್ನುತ್ತ ಗೋಳೊ ಎಂದು ಅತ್ತ. ಸಾವ ಮರೆತು ಅವನನ್ನು ಸಮಾಧಾನಿಸುವಲ್ಲೇ ಸುಸ್ತಾಗಿದ್ದ ಕಾಡೈತೇವರ್‌ಗಳೆಲ್ಲವೂ ಹಿರಿಯವನ ಗೋಳಿಗೆ ಪಶ್ಚಾತ್ತಾಪಪಡುತ್ತ,

'ಅವನನ್ನು ರೂಮಿನೊಳಗೆ ಕೂಡಿಹಾಕಿರೊ', 'ಬೇಡ, ಮತ್ತೆ ರಂಪಾಟವ ಜಾಸ್ತಿ ಮಾಡಿ ಅಸಹ್ಯ ಮಾಡಿಬಿಡುತ್ತಾನೆ.." ತರಾವರಿ ಉಪದೇಶಗಳ ತೂರುತ್ತಿದ್ದರು. ಸ್ವಲ್ಪ ತಣ್ಣಗಾದ ಕುಳಂದೈವೇಲ ಏನು ಮಾಡುವುದಿಲ್ಲ ಎಂದು ಪೇಚ್ಚಿಯಾತ್ತಳ ಮೇಲೆ ಪ್ರಮಾಣ ಮಾಡಿದ. ಕೋಡಿಯ ಸಿದ್ಧತೆಗಳು ಮುಗಿದು ಹೊರಟರು. ಈ ಮಧ್ಯೆ 'ಹುಟ್ಟಿದ ಕುಲದ ಕೋಡಿ'ಗೆ ಕಾದುಕಾದು ಸಿಟ್ಟಾಗಿ ಅಂಗಜ್ಜಿಯ ಗಂಡ ವೇಲುಚ್ಚಾಮಿ ತೇವರ್ "ಈ ಕಾಡೈ ನನ್ಮಕ್ಕಳ ಪೊಗರು ಜಾಸ್ತಿಯಾಯ್ತು. ಕಾಯಲಿ ಅಂತಾ ಬೇಕೂಂತ ಮಾಡ್ತಿದ್ದಾರೆ, ಸಾವಲ್ಲೂ ಅವರ ಕೋತಿ ಬುದ್ಧಿಯ ಬಿಡುವುದಿಲ್ಲ.. ಅನಾಗರೀಕ ನನ್ಮಕ್ಕಳು, ನಮ್ಮನ್ನೇನು ಅಗಸನ ಕತ್ತೆಗಳು ಅಂದ್ಕೊಂಡ್ರ.. ಲೇಯ್, ಹಜಾಮ ಪಳನಿ 'ಪುಗುಂದ ವೀಟ್ಟು ಕೋಡಿ'ಯ ಹಾಕಿಸೊ ಮೊದ್ಲು.. ಆ ನನ್ಮಕ್ಕಳು ಕುಡ್ಕೊಂಡು ತಿನ್ಕಂಡು ಬರೋವರ್ಗೂ ನಾವಿಲ್ಲಿ ಕಾಯೋಕಾಗೋದಿಲ್ಲ' ಕೂಗಿಕೊಂಡ. ಬೆಚ್ಚಿಬಿದ್ದುದು ಪಳನಿಚ್ಚಾಮಿ ಮಾತ್ರವಲ್ಲ, ಅಲ್ಲಿದ್ದ ಎಲ್ಲರೂ. ಹೆಣ ಎತ್ತುವ ಮುಂಚಿನ ಕಡೇ ಶಾಸ್ತ್ರವಾದ ಕೋಡಿ ಬಟ್ಟೆ ಹಾಕುವಲ್ಲಿ ಮೊದಲ ಪ್ರಾಶಸ್ತ್ಯ 'ಹುಟ್ಟಿದ ಕುಲದ ಶವದ ಬಟ್ಟೆ'ಗೆ, ನಂತರವೇ 'ಗಂಡನ ಕುಲದ ಶವದ ಬಟ್ಟೆ' ಹಾಕಲಾಗುವುದು. ಕೊನೆಯದಾಗಿ ಎಣ್ಣೆ-ಸೀಗೆಕಾಯಿ ಪುಡಿ ಶಾಸ್ತ್ರವ ಮುಗಿಸಿ ಸ್ನಾನ ಮಾಡಿಸಿ ಎರಡು ಕುಲದವರು ತರುವ ಕೋಡಿ ಬಟ್ಟೆಯನ್ನು ಶವಕ್ಕೆ ಹೊದಿಸಲಾಗುವುದು, ನಂತರವೇ ಶವವನ್ನು ಚಟ್ಟಕ್ಕೆತ್ತುವುದು. ಸತ್ತವರು ಮೊಮ್ಮಕ್ಕಳ ಕಂಡಿದ್ದರೆ ಅವರುಗಳಿಗೆ ಬರೀ ಚಟ್ಟ ಕಟ್ಟಬಾರದು, ಬದಲಿಗೆ ಶೃಂಗಾರಗೊಂಡ ರಥವ ಕಟ್ಟಿ ಪಟಾಕಿ, ಮೇಳತಾಳಗಳೊಡನೆ ಸಂಸ್ಕಾರ ನಡೆಸಬೇಕು. ಅಂಗಜ್ಜಿಗೆ ಎಲ್ಲವೂ ಸಿದ್ಧವಾಗಿದ್ದವು. ದೊಡ್ಡಸಾವನ್ನು ಬಹಳ ವಿಜೃಂಭಣೆಯಿಂದ ಕಳುಹಿಸಿಕೊಡುವ ತಯಾರಿ ಮುಗಿದು ತೇರು ಅಂಗಜ್ಜಿಯ ಸ್ಪರ್ಶಕ್ಕಾಗಿ ಕಾಯುತ್ತಿತ್ತು. ವೇಲುಚ್ಚಾಮಿ ತೇವರ‍್ರ ಈ ಮಾತು ಅಂಗಜ್ಜಿಯ ಶವಕ್ಕೊದಗಬಹುದಾದ ಗೌರವಗಳ ಚಿತ್ರ ಕೆಲವರ ಮನಗಳಲ್ಲಿ ಮೂಡಿ ಕಚಗುಳಿ ಕೊಟ್ಟರೆ ಹಲವರಲ್ಲಿ ಭಯವ ತಂದಿತ್ತು. ಪಳನಿಚ್ಚಾಮಿ ಹಜಾಮ ಪರಿಪರಿಯಾಗಿ ಬೇಡಿಕೊಂಡ: "ಇದು ಸರಿಯಲ್ಲ, ಮೊದಲಿಗೆ 'ಹುಟ್ಟಿದ ಕುಲದ ಕೋಡಿಯ ಶಾಸ್ತ್ರ'ವೇ ಆಗಬೇಕು, ಅದೇ ನ್ಯಾಯ" ಎಂದಾಗ ಅವನ ಎದೆ ಜೋರಾಗಿ ಬಡಿದುಕೊಳ್ಳುತ್ತಿತ್ತು. ಬೆಂದ ಬೆದ್ಲಾಗಿದ್ದ ವೇಲುಚ್ಚಾಮಿ ಪಟಾರನೆ ಪಳನಿಚ್ಚಾಮಿಯ ಕೆನ್ನೆಗೆ ಬಾರಿಸಿ "ನನಗೇ ನ್ಯಾಯ-ಅನ್ಯಾಯಗಳ ಪಾಠಗಳ ಹೇಳ್ತೀಯೇನೊ ಹಜಾಮ,

ತಿಕ ಮುಚ್ಕೊಂಡು ನಿನ್ನ ಕೆಲಸವ ಮಾಡು” ಎಂದ. ಸಾವಿನ ಮನೆ ಸ್ಮಶಾನ ಮೌನವ ಬರಿಸಿಕೊಂಡು ತೆಪ್ಪಗಾಯ್ತು. ದಿಗ್ಭ್ರಾಂತಗೊಂಡ ಪಳನಿಚ್ಚಾಮಿ ಕುಸಿದು ಬೀಳುವಷ್ಟು ನಿಶಕ್ತಗೊಂಡು ಸುಧಾರಿಸಿಕೊಂಡ. ಎಲ್ಲರೂ ಅವನನ್ನು ನೋಡುವವರೆ.. “ಪುಟುಗೋಸಿ ಆಸ್ತಿಯಿಟ್ಕೊಂಡು ಕೋಪಿಸಿಕೊಳ್ಳೊ ಆ ಕಾಡೈತೇವನ್‌ಗಳಿಗೇ ಇಷ್ಟಿರಬೇಕಾದರೆ, ಐವತ್ತು ಅರವತ್ತು ಎಕೆರೆಯಿರೊ ನಮ್ಮಗಳಿಗೆಷ್ಟಿರಬೇಡ.. ಆ ನನ್ಮಕ್ಳು ಕೋಡಿ ಹಾಕದಿದ್ರೂ ಪರವಾಗಿಲ್ಲ, ನಮ್ದು ಶಾಸ್ತ್ರ ಮುಗಿದ ತಕ್ಷಣ ಹೆಣ ಎತ್ರೋ ಅವನಕ್ಕನ್” ವೇಲುಚ್ಚಾಮಿ ತೇವರ್ ಕುದಿಯುವ ಎಣ್ಣೆ ಕಾಲ ಮೇಲೆ ಬಿದ್ದವನಂತೆ ಅರಚುತ್ತಿದ್ದ. ಪಳನಿಚ್ಚಾಮಿಯ ಕಣ್ಣುಗಳಲ್ಲಿ ನೀರು ಹರಿದುಹೋಗುತ್ತಿದ್ದವು. ಯಾರಿಗೂ ಕಾಣಿಸದಂತೆ ಕಣ್ಣ ಉಜ್ಜಿಕೊಳ್ಳುತ್ತ ಅಂಗಜ್ಜಿಯ ಗಂಡನ ಕುಲದ ಶವದ ಬಟ್ಟೆಗೆ ಸಿಗಬೇಕಾದ ಮರ್ಯಾದೆಯ ಅಚ್ಚುಕಟ್ಟಾಗಿ ನಿರ್ವಹಿಸಿದ. ಅವನ ಒಳ ಮನಸ್ಸು ಇದ ಮಾಡಲು ನಿರಾಕರಿಸುತ್ತಿತ್ತು. ಕಾಡೈ ತೇವರ್‌ಗಳು ಮೊದಲೇ ಕೋಪಿಷ್ಟರು, ಒಂಚೂರು ಅವಮಾನವನ್ನು ತಡೆದುಕೊಳ್ಳಲಾರರು, ಎಲ್ಲಕ್ಕಿಂತ ಅವರಿಗೆ ಮಾನವೇ ಹೆಚ್ಚು.. ಸ್ವಾಭಿಮಾನಕ್ಕೆ ಏಟು ಬಿದ್ದರೆ ಪ್ರಾಣವನ್ನು ತೆಗೆಯಲೊ ಅಥವ ಕೊಡಲೊ ಸಿದ್ಧವಿರುತ್ತಾರೆ..!!! ಕರುಪ್ಪಾ, ನಿನ್ನವರಿಗೆ ನೀನೇ ಬುದ್ಧಿ ಕೊಟ್ಟು ಅಂಗಜ್ಜಿಯ ಶವಕ್ಕೆ ಯಾವುದೂ ವಿಘ್ನವಾಗದೆ ಕೊಂಡೊಯ್ಯಬೇಕು.. ತಿರುಪತಿ ವೆಂಕಟಾಚಲಪತಿ ನೀನೇ ನಿನ್ನ ಪಿಲ್ಲುಕಟ್ಟಿ ತೇವರ್‌ಗಳ ನರಿ ಬುದ್ಧಿಯ ಮನ್ನಿಸಿ ಸುಬುದ್ಧಿ ಕೊಡಬೇಕು.. ಪಳನಿಚ್ಚಾಮಿ ಮನದೊಳಗೆ ಬೇಡಿಕೊಳ್ಳುತ್ತಿದ್ದ. ಅಲ್ಲಿದ್ದವರೆಲ್ಲ ಎದುರು ನೋಡುತ್ತಿದ್ದ ಆ ಗಳಿಗೆ ಬಂದೇ ಬಿಟ್ಟಿತು. “ಹುಟ್ಟಿದ ಕುಲದ ಕೋಡಿ”ಯ ಹೊತ್ತು ಕಾಡೈ ತೇವರ್‌ಗಳು ಬರುತ್ತಿದ್ದರು. ನಾಲ್ಕು ನೀರಿನ ರಬ್ಬರ್ ಬಿಂದಿಗೆಗಳ ಹಿಡಿದವರು, ಅವರ ಮುಂದೆ ಮಣ್ಣಿನ ಅರವಿಯಲ್ಲಿ ನೀರ ಹೊತ್ತ ಅಂಗಜ್ಜಿಯ ಹಿರೀಮಗಳು, ಈ ಐವರನ್ನು ಕರೆತರುತ್ತಿರುವ ಅಂಗಜ್ಜಿಯ ಇಬ್ಬರು ಸೋದರರು.. ಚಪ್ಪರದಂತೆ ಹಾಸಿದ ಬಿಳಿಯ ಟವಲನ್ನು ತಲೆಯ ಮೇಲೆ ಹಿಡಿದುಕೊಂಡು ಭಾರವಾದ ಹೆಜ್ಜೆ ಹಾಕುತ್ತಿದ್ದರು. ಹಿಂದೆ ಕೋಡಿ ಬಟ್ಟೆ ಮತ್ತು ಪೂಜೆಯ ಸಾಮಾನುಗಳು. ಕೊನೆಯಲ್ಲಿ ಕುಳಂದೈವೇಲ್ ತೂರಾಡುವುದ ನಿಯಂತ್ರಿಸುತ್ತ ಬರುತ್ತಿದ್ದ. ಕಾಡೈ ತೇವರ್‌ಗಳೆಲ್ಲರೂ ತಕ್ಷಣ ಗಮನಿಸಿದರು. ಹಿರಿಯವನಾದ ಮುತ್ತುರಾಜನಿಗೆ ಕೋಪ ಸುಂಯ್ಯನೆ ನೆತ್ತಿಗೇರಿ “ವಕ್ಕಳಿ, ಪಿಲ್ಲುಕಟ್ಟಿಗಳ ಪಾರುಂಗಡ.. ನಾಮನ್ನ ಅವನ್ಗಳಕ್ಕು ಎಳಕ್ಕಾರಮ ಪೋಯಿಡುಚ್ಚು.. ಎಂಗಕ್ಕ ಸಾವುಕ್ಕೂಂ ಅವಮರ್ಯಾದೆ ಪನ್ನಿಟ್ಟಾಂಗ” ಒದರಿಕೊಂಡ. ಒಬ್ಬರಿಗೆ ಮತ್ತೊಬ್ಬರು ಎನ್ನುವಂತೆ ಕೂಗಾಟ, ಕಿರುಚಾಟಗಳು ಊರ ದಾಟಿ ಸ್ಮಶಾನಕ್ಕೂ ಕೇಳಿಸಿತ್ತು. ಕುಳಂದೈವೇಲ್ ತನ್ನ ಭಾವನ ಮನಸ್ಸಾರೆ ನಾಲ್ಕೇಟು ಹೊಡೆಯುವಷ್ಟರಲ್ಲಿ ಅವನನ್ನು ಪಿಲ್ಲುಕಟ್ಟಿ ತೇವರ್ ಮೈನರ್‌ಗಳು ಬಡಿದುಹಾಕಿದ್ದರು. ಅಂಗಜ್ಜಿಯ ಶವ ಇವೆಲ್ಲವಕ್ಕೂ ಮೌನವೇ ಉತ್ತರವೆಂಬಂತೆ ಶಾಂತಚಿತ್ತ ಭಾವದಲ್ಲಿ ಮರದ ಖುರ್ಚಿಯ ಮೇಲೆ ಆಸನಗೊಂಡಿತ್ತು. ಆಕೆಯ ದೇಹದಿಂದ ಜಾರುತ್ತಿದ್ದ ನೀರು ಎಲ್ಲೂ ನಿಲ್ಲಲಾಗದೆ

ಅವಳ ಹಣೆಯಿಂದಿಳಿದು ಕಣ್ಣುಗುಡ್ಡೆಯೊಳಗೆ ಧುಮುಕಿ ಕೆನ್ನೆಯ ದಾಟಿ ಗಂಟಲಲ್ಲಿ ಮಾಯವಾಯ್ತು. ಗಲಾಟೆಯ ಬಿಡಿಸುವಲ್ಲಿ ಊರ ಹಿರಿಯರು ಯಶಸ್ವಿಯಾಗಿದ್ದರು. ಕೊನೆಗೆ ಹೇಗೊ ಅಂಗಜ್ಜಿಯ ಶವ ಶೃಂಗಾರಗೊಂಡ ತೇರನ್ನು ಹತ್ತಿ ಊರ ಕಡೆ ಮುಖ ಮಾಡಿ ಮಸಣಕ್ಕೆ ಬೆನ್ನ ಕೊಟ್ಟು ಚಲಿಸುತ್ತಿತ್ತು. ಹೆಣದಗುಂಡಿಯ ಶಾಸ್ತ್ರಗಳು ಬೇಗನೇ ಮುಗಿಸಲ್ಪಟ್ಟವು. ಎರಡು ದಿನ ಒಂದೇ ಸಮನೆ ಕೆಲಸ ಮಾಡಿದ ಪರೆಯರು, ಅಗಸರು, ಹಜಾಮರು ತಮಗೆ ದಕ್ಕಬೇಕಿದ್ದ ಕಾಸು ದಕ್ಕದೆ ನೋವ ನುಂಗಿಕೊಂಡರು. ಗುಂಡಿ ತೋಡಿದ ಪರೆಯ ಮಾಯವನ್ ಮತ್ತು ದೊಂದಿ ಹಿಡಿದ, ಬಟ್ಟೆ ಹಾಸಿದ ಅಗಸ ಮಣಿ ಹಠ ಮಾಡಿ ಇತರರಿಗಿಂತ ತುಸು ಹೆಚ್ಚ ಪಡೆದುಕೊಂಡರು. ಎಲ್ಲರಿಗಿಂತ ಹೆಚ್ಚು ಕೆಲಸ ಮಾಡಿದ್ದ ಪಳನಿಚ್ಚಾಮಿ ಹಜಾಮ ಮಾತ್ರ ಕೊಟ್ಟಿದ್ದ ಇಸಿದುಕೊಂಡು ಮಾತಿಲ್ಲದೆ ನಡೆದ. ಸ್ಮಶಾನಕ್ಕೆ ಹೋಗಿದ್ದ ಗಂಡಸರು ವಾಪಸ್ ಬರುವುದರೊಳಗೆ ಹೆಂಗಸರು ಮನೆಯ ಸಾರಿಸಿ ನಡುಮನೆಯಲ್ಲಿ ಮಣ್ಣಹಣತೆಯ ಹಚ್ಚಿಟ್ಟಿದ್ದರು. ಚಪ್ಪಲಿಯ ಕಳಚಿ ಗಂಡಸರು ಅಂಗಳದಲ್ಲಿ ನಿಂತಂತಯೇ ದೀಪವ ನೋಡಿ ಕೈ ಮುಗಿದು ತಮ್ಮತಮ್ಮ ಮನೆಗಳ ಹಾದಿ ಹಿಡಿಯುತ್ತಲಿದ್ದರು. ಪಳನಿಚ್ಚಾಮಿ ಹಜಾಮ "ನಾಡಿದ್ದು ಬೆಳಿಗ್ಗೆ ೧೧ ಗಂಟೆಗೆ ಗುಡ್ಡೆಗೆ ಹಾಲ್ತುಪ್ಪ ಹಾಕೋದ್ ಸಾಮಿಯೊ, ಎಲ್ರೂ ಬಂದ್ಬಿಡಿ" ಎಂದು ಎತ್ತರದ ದನಿಯಲ್ಲಿ ಯಾಂತ್ರಿಕವಾಗಿ ಕೂಗುತ್ತಿದ್ದ. ಅವನ ಮಾತನ್ನು ಕೇಳಿಯೂ ಕೇಳಿಸಿದಂತೆ ಜನ ಸಾಗುತ್ತಿದ್ದರು. ಜನರ ನಡುವಿಂದ ಇದ್ದಕ್ಕಿದ್ದಂತೆ ನುಗ್ಗಿದ ಕುಳಂದೈವೇಲ್ "ಎಲ್ಲವೂ ಈ ಹಜಾಮನಿಂದಲೇ ಆಗಿದ್ದು" ಎನ್ನುತ್ತ ಕೈಯಲ್ಲಿದ್ದ ವೀಚ್ಚರುವ ಎಂಬ ಉದ್ದದ ಮಚ್ಚಿನಿಂದ ಪಳನಿಚ್ಚಾಮಿಯ ಕುತ್ತಿಗೆಗೆ ತನ್ನ ಶಕ್ತಿಯನ್ನೆಲ್ಲ ಬಳಸಿ ಬೀಸಿದ. ಕುಡಿದ ದೇಹದ ನಡುಗುವ ಕೈ ಅವನದ್ದಾದ್ದರಿಂದ ವೀಚ್ಚರುವ ಪಳನಿಚ್ಚಾಮಿಯ ಕುತ್ತಿಗೆಯ ಗುರಿ ಆಯ ತಪ್ಪಿ ಅವನ ತೋಳಿಗೆ ಬಿದ್ದು ರಕ್ತ ಚಿಮ್ಮೆಂದು ಉಕ್ಕಿತು. ಜನ ಬಿಡಿಸುವುದರೊಳಗೆ ಪಳನಿಚ್ಚಾಮಿಯ ಹೊಟ್ಟೆ ಸೀಳಿ ತನ್ನನ್ನು ಕೆಂಪು ಬಣ್ಣಕ್ಕೆ ತಿರುಗಿಸಿಕೊಂಡಿತ್ತು, ಕುಳಂದೈವೇಲನ ವೀಚ್ಚರುವ. ಅವನ ಕೈಯಿಂದ ಕೀಳಲ್ಪಟ್ಟು ಮಾರು ದೂರದಲ್ಲಿ ನಿರ್ಜೀವಗೊಂಡು ಪಿಲ್ಲುಕಟ್ಟಿ ತೇವರ್‌ಗಳು ತನ್ನ ಒಡೆಯನನ್ನು ಮನಸ್ಸೋ ಇಚ್ಛೆ ಬಡಿಯುತ್ತಿದ್ದಾಗ ತನ್ನ ಅಸಹಾಯಕತೆಗೆ ಮರುಗುತ್ತ ಮಲಗಿತ್ತು. ನಿಷ್ಪಾಪಿ ಹಜಾಮನ ತೋಳ ಕತ್ತರಿಸಿದ್ದಕ್ಕೆ ತೃಣವೂ ಸಂಕಟಪಡದೆ ಬಲು ಗಾಂಭೀರ್ಯದಿಂದ ಬಿದ್ದಿತ್ತು.

ಪಳನಿಚ್ಚಾಮಿ ಹಜಾಮ ಒಂದು ವಾರ ಆಸ್ಪತ್ರೆಯಲ್ಲಿದ್ದು ತೋಳಿಗೆ ಪಟ್ಟಿಯ ಕಟ್ಟಿಸಿಕೊಂಡು ಮನೆಗೆ ವಾಪಸ್ ಬಂದ. ಕಣ್ಣುಗಳಲ್ಲಿ ನೀರ ತುಂಬಿಕೊಂಡು ಮನೆಯ ಛಾವಣಿಯ ದಿಟ್ಟಿಸುತ್ತ ತನಗೆ ತಾನೇ ಹಲಬುತ್ತಿದ್ದ. ಮೊಮ್ಮಗ ವೀರೇಶ ಮಾತ್ರ ಕದಲದೆ ಜೊತೆಯಲ್ಲೇ ಇದ್ದುದು ಮನಸ್ಸಿಗೆ ಹಿತವೆನಿಸಿತ್ತು. ಘಟನೆಯಾದ ಮೂರು ವಾರಕ್ಕೆ ಸ್ವಲ್ಪ ಸುಧಾರಿಸಿದವನಂತೆ ಕಾಣುತ್ತಿದ್ದ. ಆ ಶುಕ್ರವಾರದ ಬೆಳಗ್ಗಿನ ಜಾವ

ಉಚ್ಚೆ ಹೊಯ್ಯಲೆಂದು ಹೋದವನಿಗೆ ಮಗದೊಂದು ಅಘಾತ ಕಾದುಕುಂತಿತ್ತು. ತನ್ನ ಮಡದಿಯ ಜೊತೆ ದೊಡ್ಮನೆ ರಂಗ್ಸಾಮಿ ತೇವರ್‍ರ ಹಿರೀಮಗ ನಾಗರಾಜ ಸಲ್ಲಾಪವ ನಡೆಸುತ್ತಿರುವುದ ಕಣ್ಣಾರೆ ಕಂಡು ವಿಲವಿಲ ಒದ್ದಾಡಿದ. ಒಳಗೆ ಬಂದವನೆ ಚಿಲಕ ಬಡಿದು ವಾರಗಳಿಂದ ಸುಮ್ಮನೆ ಬಿದ್ದಿದ್ದ ತನ್ನ ಚೌರದ ರೇಜರ್ ಅನ್ನು ಎಳೆದುಕೊಂಡ. ಗಂಟಲನ್ನು ರಪರಪ ಎಂದು ಕೊಯ್ದುಕೊಳ್ಳುತ್ತಿದ್ದ.. ನೋವ ತಡೆಯಲಾಗದೆ ಕೂಗಿಕೊಂಡ. ತನ್ನ ನಿದ್ದೆಯ ಕೆಡಿಸಿದ ಆ ಸದ್ದು ಯಾವುದೆಂದು ಹನ್ನೆರೆಡು ವಯಸ್ಸಿನ ವೀರೇಶ ಕಣ್ಣ ಬಿಟ್ಟಾಗ ಅವನ ತಾತ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದ. ಭಯಗೊಂಡು ವೀರೇಶ ಕೂಗಿಕೊಂಡಿದ್ದ..

ಹಾದಿ ಸವೆಯುವಂತೆಯೇ ಕಾಣಲಿಲ್ಲ. ಜನ ನವಾಜ್ ಮುಗಿಸಿ ಹೊರಬರುತ್ತಿದ್ದರು. ರಮದಾನ್ ತಿಂಗಳ ಉರಿವ ಸೂರ್ಯ ಅವತ್ತು ಬಹಳಷ್ಟು ಉರಿಯುತ್ತಿದ್ದ. ಮಸೀದಿಯಿಂದ ಬರುತ್ತಿದ್ದ ಬಶೀರ್ ಇನ್ನೂ ರೂಮು ಸೇರದ ವೀರೇಶನ ಕಂಡು,

"ಯಾಕೊ, ಹುಶಾರಿಲ್ವಾ?!" ಕೇಳಿದ. ಅದಕ್ಕೆ ವೀರೇಶ ನಕ್ಕು ಏನೂ ಇಲ್ಲವೆಂಬಂತೆ ತಲೆಯಲ್ಲಾಡಿಸಿದ. ಜೋರಾಗಿ ನಗುತ್ತ ಬಶೀರ್,

"ಮರಿಯಂಳ ಗಂಡ ಬಂದಿರುವುದು ಬೇಜಾರು ತರಿಸಿದೆಯಾ?" ಎಂದ. ಕುಳಂದೈವೇಲ ತೇವನನ್ನು ಮತ್ತು ದೊಡ್ಮನೆಯ ನಾಗರಾಜನನ್ನು ಕೊಲ್ಲಬೇಕು ಎನ್ನುವ ಅವನ ರೋಷ ಟುಸ್ಸೆಂದು ಅವನ ಮನಸ್ಸಿನೊಳಗೆ ಮತ್ತೊಂದು ಬಲೂನು ಹಿಗ್ಗುತ್ತ ಹೋಯಿತು. ಸುಮ್ಮನೆ ಟೈಂಪಾಸಿಗೆಂದು ಬೆಳೆಸಿಕೊಂಡ ಮರಿಯಂ ಎಂಬ ಮಲೆಯಾಳಿಯ ಸಹವಾಸ ಇಷ್ಟು ಇಕ್ಕಟ್ಟಿಗೆ ಸಿಲುಕಿಸುತ್ತದೆ ಎಂದು ಅವನು ಅಂದುಕೊಂಡೇ ಇರಲಿಲ್ಲ. ಅರಬ್ಬಿ ಯುವಕನ ಸಂಧಿಸುವುದಕ್ಕಿಂತ ಮುಂಚೆ ಅವನ ಕಾಡುತ್ತಿದ್ದ ಮರಿಯಂಳ ವಿಚಾರ ಮತ್ತೆ ಅವನನ್ನು ಬಿಗಿದಪ್ಪಿಕೊಂಡಿತು. ರೂಮಿಗೆ ಬಂದು ಬಿದ್ದುಕೊಂಡ. ಮರಿಯಂಳ ವಾಸನೆ ರೂಮಿನಲ್ಲಿ ಸುತ್ತುತ್ತಿರುವಂತೆ ಭಾಸವಾಯ್ತು. "ಎಲ್ಲವ-ಎಲ್ಲರ ಬಿಟ್ಟು ನಾವಿಬ್ಬರೂ ಮಲೇಷ್ಯಕ್ಕೋ ಸಿಂಗಾಪೂರಿಗೊ ಹೋಗಿ ನೆಮ್ದಿಯಾಗಿರೋಣ" ಎನ್ನುವ ಮರಿಯಂಳ ಮಾತಿಗೆ ಅವನು ಒಪ್ಪಿರಲಿಲ್ಲ.. ಕೋಪ ಮಾಡಿಕೊಂಡು ಜಗಳವಾಡಿದ್ದಳು.. ತನ್ನ ಗಂಡ ಬಂದರೆ ಪರಿಸ್ಥಿತಿ ಇನ್ನಷ್ಟು ಕೆಡಬಹುದು ಎಂದಿದ್ದು ಅವನನ್ನು ಚಿಂತೆಗೆ ತಳ್ಳಿತ್ತು. ಇದರ ನಡುವೆ ತಾತನ ಸಾವಿನ ನೆನಪು ಅವನ ಮನಸ್ಸನ್ನು ಮತ್ತಷ್ಟು ವ್ಯಗ್ರಗೊಳಿಸಿತ್ತು. ಇದೆಲ್ಲವುಕ್ಕಿಂತ ಮುಖ್ಯವಾಗಿ ಈ ಮರಿಯಂ ಸೌದಿಯ ಪೋಲಿಸರಿಗೆ ತನ್ನ ವಿರುದ್ಧ ಕಂಪ್ಲೇಂಟ್ ಏನಾದರೂ ಕೊಟ್ಟರೆ? ಎನ್ನುವ ಸಣ್ಣ ಕಲ್ಪನೆ ಅವನನ್ನು ಪ್ರಪಾತಕ್ಕೆ ನೂಕುತ್ತಿತ್ತು. ಕಠಿಣ ಕಾನೂನಿನ ಈ ದೇಶದಲ್ಲಿ ತನ್ನ ಸ್ಥಿತಿಯ ನೆನಪಿಸಿಕೊಂಡು ನಡುಗುತ್ತಿದ್ದ. ಅವನ ಮಿದುಳು ಸುಡುವ ಎಣ್ಣೆಗೆ ಬಿದ್ದ ಜೀವಂತ ಆಮೆಯಂತೆ ಪಟಪಟ ಸಿಡಿಯುತ್ತಿತ್ತು.

ಎಲ್ಲವೂ ಆ ರಣಮುಂಡೆಯಿಂದಲೆ.. ಅವಳು ನೆಮ್ಮದಿಯ ನೀಡಿದ್ದರೆ ತಾನು ಹೀಗೆ ದೇಶ ಬಿಟ್ಟು ಪರದೇಶದಲ್ಲಿ ನರಳುವಂತಾಗುತ್ತಿರಲಿಲ್ಲ.. ತನ್ನ ಮಾತುಗಳಿಂದ ಇರಿದು ಇರಿದು ತನ್ನನ್ನು ಜೀವಂತ ಶವವಾಗಿಸಿಬಿಟ್ಟಳು.. ಕಟ್ಟಿಕೊಂಡ ಪಾಪಕ್ಕೆ ಅವಳ ಕೊರಳ ತುಂಬಾ ಬಂಗಾರದ ಸರಗಳ ಮಾಡಿಸಿದ್ದ ನೆನಸಿದರೆ ಮೈಯುರಿಯುತ್ತದೆ.. ತನ್ನ ತಾಯ ಜೊತೆ ಜಗಳವಾಡಿ ಅವಳನ್ನು ಮಾತಿನಿಂದಲೇ ಸಾಯಿಸಿಬಿಟ್ಟಳು, ಬೋಸುಡಿ.. ಅತ್ತೆ ಮತ್ತು ಗಂಡ ಇಬ್ಬರೂ ಇಲ್ಲದೆ ಅವಳೀಗ ಆರಾಮಾಗಿ ಜೀವಿಸುತ್ತಿರುತ್ತಾಳೆ.. ಯಾವನನ್ನಾದರೂ..???? ಕಳ್ಳ ಬೋಸುಡಿ, ಮೊದಲು ಅವಳನ್ನು ಕೊಲ್ಲಬೇಕು, ನಂತರವೆ ಉಳಿದವರನ್ನು.. ಹತ್ತೂ ಬೆರಳುಗಳ ಕೂದಲೊಳಗೆ ತೂರಿಸಿ ತಲೆಯ ಪರಪರ ಕೆರೆದುಕೊಂಡ.. ಉಉ.. ಯೇಯ್.. ಯಾಯಾ.. ಕೂಗಿಕೊಂಡ.. ಸುಧಾರಿಸಿಕೊಂಡು ತಲೆಯೆತ್ತಿ ನೋಡಿದ. ಮೂಲೆಯಲ್ಲಿ ಜೇಡರ ಬಲೆ ತೂಗುತ್ತಿತ್ತು. ಅದನ್ನೇ ನೋಡುತ್ತಿದ್ದವನ ಕಣ್ಣುಗಳಲ್ಲಿ ಮೆಲ್ಲಗೆ ಕೊಡಗು, ಬಿಳಿಗಿರಿರಂಗನ ಬೆಟ್ಟಗಳು ಮೂಡಿದವು. ಸೋಲಿಗರ ಆ ಪದ ಮನಸ್ಸಲ್ಲಿ ಅರಳುತ್ತಿತ್ತು.. ಗೋರುಕನ ಅಂದರೆ ಜೇಡ ಎಂದಿದ್ದಳು ಸೋಲಿಗರ ಆ ಮಸಣವ್ವ.. ಬಳುಕುವ ಮೈಮಾಟದ, ತುಂಬು ಮೊಲೆನಿತಂಬಗಳ ಮಸಣವ್ವ.. ಕೊಡಗಿನ ಕಾಫಿ ತೋಟದಲ್ಲಿ ಸಿಕ್ಕಿದ್ದ ಬಿಳಿಗಿರಿ ರಂಗನ ಬೆಟ್ಟದ ಮಸಣವ್ವ.. ಕಾಡಿನ ರಾಣಿ, ಗೋರುಕನ ಪದಗಳ ಅರಸಿ ಮಸಣವ್ವ..

"ಗೋರುಗೋರು ಗೋರುಕೊ ಗೋರುಕನ
ಗೋರುಗೋರು ಗೋರುಕೊ ಗೋರುಕನ
ಸಂಪ್ಗೆ ಹೂವಿನ ಸರಮಾಲೆ
ಸೇವತಿ ಹೂವಿನ ದುಂಡುಮಲೆ
ಗೋರುಗೋರು ಗೋರುಕೊ ಗೋರುಕನ
ಗೋರುಗೋರು ಗೋರುಕೊ ಗೋರುಕನ
ಆರ ಮಂಡೇಲಿ ಮೆರದಾದಲ?
ಸಾಮಿ ಮಂಡೇಲಿ ಮೆರದಾದಲೊ
ಗೋರುಗೋರು ಗೋರುಕೊ ಗೋರುಕನ.."

ಮನಸ್ಸು ಖುಷಿಯಿಂದ ಕುಣಿಯತೊಡಗಿತು.. ಸುರಿಯುತ್ತಿದ್ದ ಆ ಮಳೆಯಲ್ಲಿ ಅವಳು ಪದವಾಡುತ್ತ ಕುಣಿಯುತ್ತಿದ್ದರೆ ಅದ ನೋಡುವುದೇ ಚೆನ್ನ ಎನಿಸಿತು.. ಮಸಣವ್ವನನ್ನು ನೋಡಲೇಬೇಕೆನ್ನಿಸಿತು.. ಜೀವ ಅದುರುತ್ತಿತ್ತು. ಅವಳನ್ನು ಒಮ್ಮೆಯಾದರೂ ಮುಟ್ಟಬೇಕು ಎಂದುಕೊಂಡಾಗ ಅವಳ ರೌದ್ರ ಮುಖದ ಸೋದರಮಾವ ಕಣ್ಣೆದುರಿಗೆ ಬಂದು ನಿಂತ. ಬೆಚ್ಚಿ ಹಿಂದೆ ಸರಿದರೂ ಬಿಳಿಗಿರಿ ಬೆಟ್ಟದ ಕಾಡು, ಮಳೆ, ಪ್ರಾಣಿಗಳ ಕೂಗು, ಕ್ಯಾತಪ್ಪ ದೇವರ ಬೆಟ್ಟ ಎಲ್ಲವೂ ನೆನಪಾಗಿ ಹಿತವೆನಿಸಿತು. ದೀರ್ಘ ನಿಟ್ಟುಸಿರೊಂದು ಅವನ ಯಾವೊಂದೂ ಪ್ರಯತ್ನಗಳ

ಹಂಗಿಲ್ಲದೆ ತನಗೆ ತಾನೇ ಬಂದಾಗ ಅವನ ಮನಸ್ಸೊಳಗೆ ಮತ್ತಿ ಮರ ಮತ್ತು ಅದರ ಕೊಂಬೆಯಿಂದ ಚಿಮ್ಮುವ ನೀರಿನ ಕಾರಂಜಿಗಳು ಮನದ ಹಾಳೆಯಲ್ಲಿ ಚಿತ್ತಾರ ಬಿಡಿಸುತ್ತಿದ್ದವು. ಗಾಯಗಳ ಗುಣ ಮಾಡೊ ಕರುವಾದಿಮರದ ತೊಗಟೆಗಳು ಕಣ್ಣ ಮುಂದೆ ಜೀಕುತ್ತಿದ್ದವು. ವಿಸ್ತಾರ ಮರಳು–ಮರಳಗುಡ್ಡೆಗಳು, ಕಾಡು–ಆಕಾಶದೆತ್ತರದ ಬೆಟ್ಟಗಳು ಎಲ್ಲವೂ ಅವನ ನೆನಪಿನ ಬುತ್ತಿಯಲ್ಲಿ ತೆರೆದುಕೊಳ್ಳುತ್ತಿದ್ದವು. ದಿಗಂತವ ಮುಟ್ಟುವ ಬರ್–ಮರುಭೂಮಿಯೂ ಅಗೆದಷ್ಟು ಮುಗಿಯದ ಅಡವಿಯೂ ಒಂದರೊಳಗೆ ಒಂದಾಗಿ ವೀರೇಶನ ಮನಸ್ಸನ್ನು ಪ್ರಫುಲ್ಲಗೊಳಿಸುತ್ತಿದ್ದವು.

❖

(ಪ್ರಜಾವಾಣಿ – ದೀಪಾವಳಿ ವಿಶೇಷಾಂಕ, 2013)

ಬಟ್ಟೆ ಇಲ್ಲದ ಊರಿನಲ್ಲಿ

ಮಿರ್ಜಾ ಬಷೀರ್

ಆ ನಗರದಲ್ಲಿ ಒಂದು ದಿನ ಇದ್ದಕ್ಕಿದ್ದಂತೆ ಬಟ್ಟೆಗಳು ಮಾಯವಾದವು. ಬಟ್ಟೆ ಮಿಲ್ಲಿನಲ್ಲಿ ಗೋದಾಮುಗಳಲ್ಲಿ ಅಂಗಡಿಗಳಲ್ಲಿ ಬಟ್ಟೆಗಳು, ಸಿದ್ಧ ಉಡುಪುಗಳು ನಾಪತ್ತೆಯಾದವು. ದರ್ಜಿ ಅಂಗಡಿಗಳಲ್ಲಿ ಕತ್ತರಿಸಿಬಿಟ್ಟಿದ್ದ ಬಟ್ಟೆ, ಹೊಲೆದಿಟ್ಟಿದ್ದ ಉಡುಪು, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಬಟ್ಟೆ ತುಮಡುಗಳು ಇಲ್ಲವಾದವು. ಜೋಪಡಿಪಟ್ಟಿಗಳ ಚಿಂದಿ ಬಟ್ಟೆಗಳಿಂದ ಹಿಡಿದು ಭವ್ಯಬಂಗಲೆಗಳ ಲಕ್ಷಾಂತರ ರೂಪಾಯಿಯ ಬಟ್ಟೆಗಳು ಕಣ್ಮರೆಯಾದವು. ಅಷ್ಟೆ ಅಲ್ಲ. ಹೆಂಗಸರು ಗಂಡಸರು ಮಕ್ಕಳು ಮರಿ ವಯಸ್ಸಾದ ಮುದುಕ ಮುದುಕಿಯರ ಮೈಮೇಲಿನ ಬಟ್ಟೆಗಳು ಒಂದೂ ಬಿಡದಂತೆ ಅದೃಶ್ಯವಾದವು. ನಗರದಲ್ಲಿ ಒಂದೇ ಒಂದು ನರಪಿಳ್ಳೆಯನ್ನು ಬಿಡದಂತೆ ಪ್ರತಿಯೊಬ್ಬರೂ ಇದ್ದಕ್ಕಿದ್ದಂತೆ ಬೆತ್ತಲಾದರು.

ಅಲ್ಲೊಬ್ಬ ಪ್ರಭಾವಿ ಮಂತ್ರಿ ದೊಡ್ಡ ಮೈದಾನದಲ್ಲಿ ಸುಳ್ಳು ಭರವಸೆಗಳ ಭಾಷಣ ಬಿಗಿಯುತ್ತಿದ್ದವನು ಬೆತ್ತಲಾದದ್ದೇ 'ಅಯ್ಯಯ್ಯಪ್ಪೋ' ಎಂದು ಕಿರುಚಿ ವೇದಿಕೆಯಿಂದ ಧುಮುಕಿ ತನ್ನ ಕಾರಿನ ಬಳಿಗೆ ಓಡಿದ. ಅದುವರೆಗೆ ಅವನ ಭಾಷಣ ಕೇಳುತ್ತಿದ್ದ ಸಾವಿರಾರು ಜನರು ಬೆತ್ತಲಾದದ್ದೇ ನಾಚಿಕೆಯಲ್ಲಿ ಗಾಬರಿಯಲ್ಲಿ ದಿಕ್ಕಾಪಾಲಾಗಿ ಓಡತೊಡಗಿದರು. ಜನರು ತೊಟ್ಟಿದ್ದ ಬಟ್ಟೆಯ ಕ್ಯಾನ್ವಾಸ್ ಬೂಟುಗಳು ಮಾಯವಾಗಿದ್ದವು. ಲೇಸುಗಳು ನಾಪತ್ತೆಯಾಗಿ ಚರ್ಮದ ಬೂಟುಗಳು ಸಡಿಲವಾಗಿದ್ದರಿಂದ ಜನರು ಅವುಗಳನ್ನು ಅಲ್ಲಲ್ಲೇ ಎಸೆದು ಓಡಿದರು. ಇಡೀ ಮೈದಾನವೇ ಬೂಟುಚಪ್ಪಲಿಗಳಿಂದ ತುಂಬಿ ಹೋಯಿತು. ಕಾಲ್ತುಳಿತಕ್ಕೆ ಸಿಕ್ಕು ಹಲವರು ಕೈಕಾಲು ಮುರಿದುಕೊಂಡರು. ಕೆಲವರು ಸತ್ತೇ ಹೋದರು. ಭಾಷಣ ಕೇಳುತ್ತ ಸೀಟಿ ಚಪ್ಪಾಳೆ ಹೊಡೆಯುತ್ತಿದ್ದವರೆಲ್ಲ ನೆಪಮಾತ್ರಕ್ಕೆ ಹಾಗೆ ಮಾಡುತ್ತಿದ್ದರು. ನಿಜವಾಗಿಯೂ ಅವರಿಗೆಲ್ಲ ಮಂತ್ರಿಯ ಸುಳ್ಳು, ಭ್ರಷ್ಟಾಚಾರದ ಬಗ್ಗೆ ಸಿಟ್ಟಿತ್ತು. ಅಸಹಾಯಕ ಸ್ಥಿತಿಯಲ್ಲಿದ್ದ ಮಂತ್ರಿಯನ್ನು ಕಂಡ ಕೂಡಲೆ ತಮ್ಮ ಬೆತ್ತಲೆಯನ್ನು ಕ್ಷಣ ಮರೆತು ತಲಾ ಒಂದೊಂದು ಲಾತ ಬಿಟ್ಟರು. ಅವನ ಭರ್ಜರಿ ಕಾರನ್ನು ಪುಡಿಪುಡಿ ಮಾಡಿದರು. ಗಂಟೆಗಟ್ಟಲೆ ಕಾದಿದ್ದ ಅವರಿಗೆ ತಿಂಡಿ ಪೊಟ್ಟಣವಾಗಲಿ ಕುಡಿಯುವ ನೀರಾಗಲಿ ಸಿಕ್ಕಿರಲಿಲ್ಲ. ತಲೆಗೆ ಇನ್ನೂರು ರೂಪಾಯಿ ಕೊಡುವ ವಾಗ್ದಾನವು ಹುಸಿಹೋಗಿತ್ತು. ಹಣ್ಣುಗಾಯಿ ನೀರುಗಾಯಿಯಾಗಿದ್ದ ಮಂತ್ರಿ ಮನೆಯತ್ತ ತೆವಳತೊಡಗಿದ. ಸ್ವಲ್ಪ ಹೊತ್ತಿನಲ್ಲಿ ಅವನನ್ನು ಮಂತ್ರಿ ಎಂದು ಗುರುತಿಸಲು ಯಾರಿಂದಲೂ ಸಾಧ್ಯವೆ ಇರಲಿಲ್ಲ. ಬೆತ್ತಲೆಯಾಗಿ ನೀರಾನೆಯಂತೆ ಕಾಣುತ್ತಿದ್ದ

ಅವನ ಮೈಕೈಗೆಲ್ಲಾ ಕೆಸರು ಮಣ್ಣು ಮೆತ್ತಿಕೊಂಡಿತ್ತು. ಅಷ್ಟೇ ಅಲ್ಲ. ತೆವಳುತ್ತಲೇ ಅವನು ಮಂತ್ರಿಗೆ ಧಿಕ್ಕಾರ ಎಂದು ತನ್ನ ವಿರುದ್ಧ ತಾನೇ ಧಿಕ್ಕಾರ ಕೂಗಿಕೊಳ್ಳುತ್ತಿದ್ದುದರಿಂದ ಸಜೀವವಾಗಿ ಮನೆ ಸೇರಿದ. ಅವನ ಅರಮನೆಯಂಥ ಮನೆಯ ಕಿಟಕಿ ಬಾಗಿಲುಗಳೆಲ್ಲಾ ಹಾರೊಡೆದುಕೊಂಡಿದ್ದವು. ಅವನ ಹೆಂಡತಿ ಮತ್ತು ಅಸಂಖ್ಯಾತ ಮಕ್ಕಳು ಮನೆಯ ಮೂಲೆಮೂಲೆಗಳಲ್ಲಿ, ಬಾಗಿಲುಗಳ ಸಂದಿಗಳಲ್ಲಿ, ಮಂಚ ಮೇಜು ಸೋಫಾಸೆಟ್ಟುಗಳ ಅಡಿಯಲ್ಲಿ ಅವಿತುಕೊಂಡಿದ್ದರು. ಕೆಲವರು ರೂಮುಗಳಲ್ಲಿ ಸೇರಿಕೊಂಡು ಬಾಗಿಲು ಮುಚ್ಚಿ ಯಾರು ಬೆತ್ತಲೆ ಎದ್ದು ಬಂದು ಕಿಟಕಿ ಬಾಗಿಲು ಮುಚ್ಚಲು ತಯಾರಿರಲಿಲ್ಲ. ಮನೆಯಲ್ಲಿ ಕೆಲಸಕ್ಕಿದ್ದ ಆಳುಗಳು ಓಡಿ ಹೋಗುವಾಗ ಕೈಗೆ ಸಿಕ್ಕ ಬೆಲೆಬಾಳುವ ವಸ್ತುಗಳನ್ನು ಹೊತ್ತೊಯ್ದಿದ್ದರು.

ರಸ್ತೆಗಳಲ್ಲಿ ಓಡುತ್ತಿದ್ದ ವಾಹನಗಳ ಚಾಲಕರು ಬೆತ್ತಲಾದದ್ದೇ ಯಾರ‍್ರಾಬಿರ‍್ರಿ ವರ್ತಿಸತೊಡಗಿದರು. ಬೈಕುಗಳು ಪಲ್ಟಿ ಹೊಡೆದವು. ಬಸ್ಸು ಕಾರು ಲಾರಿಗಳು ಅಡ್ಡಾದಿಡ್ಡಿ ಓಡಿ ಅಪಘಾತಗಳಾದವು. ನಗರ ಸಾರಿಗೆ ಬಸ್ಸಿನಲ್ಲಿ ಒತ್ತೊತ್ತಿ ನಿಂತುಕೊಂಡು ಸೆಂಟು ಪೂಸಿಕೊಂಡು ಘಮಘಮಿಸುತ್ತ ಪ್ರಯಾಣಿಸುತ್ತಿದ್ದ ಗಂಡಸು ಹೆಂಗಸರ ಸ್ಥಿತಿ ವರ್ಣಿಸಲಸದಳವಾಗಿತ್ತು. ಸಂಪ್ರದಾಯಸ್ಥ ಮಹಿಳೆಯೊಬ್ಬಳು ಬೆತ್ತಲೆಯ ಆಘಾತ ತಡೆಯಲಾರದೆ ದೇವರ ಹೆಸರು ಹೇಳಿ ಮರುಕ್ಷಣವೆ ಪ್ರಾಣಬಿಟ್ಟಳು.

ಬಟ್ಟೆ ಮರೆಯಾದ ಕ್ಷಣದಲ್ಲಿ ಮನೆಯಲ್ಲಿದ್ದವರು ಮೂಲೆಮುಡಿಕೆಗಳಲ್ಲಿ ಅವಿತು ಸುಧಾರಿಸಿಕೊಂಡರು. ಆದರೆ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಜನರು ಬೆತ್ತಲಾದದ್ದೇ ಹುಚ್ಚು ಹಿಡಿದವರಂತೆ ತಮ್ಮ ಮರ್ಮಾಂಗ ಮತ್ತು ಮುಖಗಳನ್ನು ಆದಷ್ಟು ಮುಚ್ಚಿಕೊಳ್ಳುತ್ತ ಓಡತೊಡಗಿದರು. ಹಲವರು ಬಿದ್ದರು. ಕೆಲವರು ಎದ್ದರು. ಎದ್ದವರು ತಟ್ಟರಿಸುತ್ತ ಎಲ್ಲಾದರೂ ಬಚ್ಚಿಟ್ಟುಕೊಳ್ಳಲು ದೌಡಾಯಿಸತೊಡಗಿದರು. ಕೈಗಳಲ್ಲಿ ಮರ್ಮಾಂಗವನ್ನು ಮುಚ್ಚಿಕೊಂಡು ಓಡುತ್ತಿದ್ದುದರಿಂದ ಅವರ ಓಟಕ್ಕೆ ಬೇರೆಯದೇ ಶೈಲಿ ಬಂದಿತ್ತು. ಎಲ್ಲಿ ಮರೆಯಿತ್ತೋ ಅಲ್ಲಿ ಅವಿತರು. ಕಂಡ ಕಟ್ಟಡಗಳತ್ತ ನುಗ್ಗಿದರು. ಬೆತ್ತಲೆ ಮರೆಸಿಕೊಳ್ಳಲು ಅವರಿಗೆ ಜಾಗ ಬೇಕಿತ್ತು. ಹೆಣ್ಣು ಮಕ್ಕಳ ಗೋಳು ಮುಗಿಲು ಮುಟ್ಟಿತ್ತು. ಅವರೆಲ್ಲ ಯಾವುದೇ ಕಾರಣಕ್ಕೆ ಒಂಟಿಯಾಗಿ ಗಂಡಸರ ಕೈಗೆ ಸಿಗಬಾರದೆಂದು ಗುಂಪುಗುಂಪಾಗಿ ಚಲಿಸತೊಡಗಿದರು. ಬೆತ್ತಲೆಯಾಗಿ ಬರಿಗಾಲಲ್ಲಿ ಚಲಿಸುತ್ತಿದ್ದ ಅವರು ಹತ್ತಿರದಲ್ಲಿದ್ದ ಸ್ಪೋರ್ಟ್ ಅಂಗಡಿಗೆ ನುಗ್ಗಿ ಕೈಗೆ ಸಿಕ್ಕ ಕ್ರಿಕೆಟ್ ಬ್ಯಾಟ್, ಸ್ಟಂಪ್, ಹಾಕಿ ಸ್ಟಿಕ್‌ಗಳನ್ನು ಹಿಡಿದು ನಡೆದರು. ಭೀತಿಯಿಂದ ದುಃಖದಿಂದ ಒಮ್ಮೆಲೇ ಎರಗಿದ ಆಘಾತದಿಂದ ಅವರೆಲ್ಲ ಅರ್ಧಪ್ರಾಣವಾಗಿದ್ದರು. ದೂರದಿಂದಲೇ ಕ್ಯಾಮೆರಾಗಳಲ್ಲಿ ಮೊಬೈಲುಗಳಲ್ಲಿ ತಮ್ಮ ನಗ್ನತೆಯನ್ನು ಅನೇಕ ಗಂಡಸರು ಸೆರೆಹಿಡಿಯುತ್ತಿದ್ದುದು ಅವರಿಗೆ ಗೊತ್ತಿತ್ತು. ಮುಖಮುಚ್ಚಿ ನಡೆಯುವುದೊಂದೇ ಅವರಲ್ಲಿದ್ದ ಉಪಾಯ. ಆದರೂ ಕ್ಯಾಮೆರಾ ಹಿಡಿದು ಹತ್ತಿರ ಬಂದ ಪೋಕರಿಗಳಿಗೆ ಕೈಯಲ್ಲಿದ್ದ ಅಸ್ತ್ರಗಳಿಂದ ಸರಿಯಾಗಿ ಥಳಿಸಿದರು.

ಕಚೇರಿ, ಆಸ್ಪತ್ರೆಗಳ ಸ್ಥಿತಿಯೂ ಬೇರೆಯಾಗಿರಲಿಲ್ಲ. ನೌಕರರು ಬೀರುಗಳಲ್ಲಿದ್ದ ಫೈಲುಗಳನ್ನು ತೆಗೆದು ಕೆಳಗೆಸೆದು ಒಳಸೇರಿದರು. ಲಕ್ಷಾಂತರ ಸಂಬಳದ ದೊಡ್ಡ ಅಧಿಕಾರಿ ಮೆಟ್ಟಿನ ಗೂಡಿನಲ್ಲಿ ಬೆತ್ತಲೆ ಮರೆಸಿಕೊಂಡು ಏದುಸಿರು ಬಿಡುತ್ತಿದ್ದ. ದೊಡ್ಡ ಅಧಿಕಾರಿ, ಸರ್ಜನ್, ಸೂಪರ್ ಸ್ಪೆಶಲಿಸ್ಟ್ ಇತ್ಯಾದಿಗಳೆಲ್ಲವನ್ನು ಬೆತ್ತಲೆ ಕ್ಷಣಾರ್ಧದಲ್ಲಿ ಇಲ್ಲವಾಗಿಸಿತ್ತು. ಹೇಲು, ಉಚ್ಚೆಗಳನ್ನು ಬಾಚುವ ಸೇವಕರ ಜೊತೆ ಆಸ್ಪತ್ರೆ ನಿರ್ದೇಶಕರು ಮಂಚದಡಿ ನೆಲದ ಮೇಲೆ ಬೆತ್ತಲೆ ಕುಳಿತಿದ್ದರು. ಸೇವಕರು ನಿರ್ದೇಶಕರಿಗೆ ಅಡಗಿಕೊಳ್ಳಲು ಅಕ್ಕಪಕ್ಕದಲ್ಲಿ ಜಾಗ ತೋರಿಸಿದರೇ ವಿನಹ ತಲೆಬಾಗಿ ನಮಸ್ಕರಿಸಿ ಎದ್ದು ಹೋಗಲಿಲ್ಲ.

ಹುಚ್ಚಾಸ್ಪತ್ರೆಯಲ್ಲಿ ಬೆತ್ತಲಾದ ಕೂಡಲೆ ವೈದ್ಯರೆಲ್ಲ ಹುಚ್ಚರಂತೆ ವರ್ತಿಸಿದರೆ ಹುಚ್ಚರೆಲ್ಲ ಯಾವುದೇ ಗಲಿಬಿಲಿ ತೋರದೆ ಎಂದಿನಂತಿದ್ದರು. ಬೆತ್ತಲೆಯಲ್ಲಿ ವೈದ್ಯರಾರೋ ಹುಚ್ಚರಾರೋ ತಿಳಿಯದಂತಾಗಿತ್ತು. ಬಡಬಗ್ಗರ ಮನೆಗಳಲ್ಲಿ ಬಟ್ಟೆಯ ತೊಟ್ಟಿಲಲ್ಲಿ ಸುಖ ನಿದ್ದೆಯಲ್ಲಿದ್ದ ಪುಟ್ಟ ಕಂದಮ್ಮಗಳು ತೊಟ್ಟಿಲು ಮಾಯವಾದ ಕೂಡಲೆ ನೆಲಕ್ಕೆ ಬಿದ್ದು ಚೀರತೊಡಗಿದವು.

ಜೈಲಿನ ಉಸ್ತುವಾರಿಯಲ್ಲಿದ್ದ ಪೊಲೀಸರು ಬೆತ್ತಲಾದದ್ದೇ ಗಲಿಬಿಲಿಯಲ್ಲಿ ಏನಾಗುತ್ತಿದೆಯೆಂಬುದನ್ನು ಅರಿತುಕೊಳ್ಳುವಷ್ಟರಲ್ಲಿ ಪರಿಸ್ಥಿತಿಯ ಪ್ರಯೋಜನವನ್ನು ಪಡೆದುಕೊಂಡ ಕೆಲವು ಕಳ್ಳರು ಜೈಲಿಂದ ಪಾರಾಗಿ ಓಡತೊಡಗಿದರು. ಕಳ್ಳರ ಮತ್ತು ಪೊಲೀಸರ ಸಮವಸ್ತ್ರ ಮಾಯವಾಗಿದ್ದರಿಂದ ಅವರ ನಡುವಿನ ವ್ಯತ್ಯಾಸ ಅಳಿಸಿಹೋಗಿತ್ತು.

ನಗರದ ಎಲ್ಲೆಲ್ಲೂ ಬಹಳಹೊತ್ತು ಬರೀ ಚೀರಾಟ, ಕೂಗಾಟವೇ ತುಂಬಿಹೋಗಿತ್ತು. ಜನರಿಗೆ ಅವಿತುಕೊಳ್ಳಲು ಜಾಗ ಸಿಕ್ಕಂತೆ ಸದ್ದುಗದ್ದಲ ಕಡಿಮೆಯಾಗತೊಡಗಿತು. ಹರೆಯದವರೆಲ್ಲಾ ಅವಿತ ನಂತರ ವಯಸ್ಸಾದವರು ಪಿಸುಮಾತುಗಳಲ್ಲಿ ಜಾಗಗಳನ್ನು ಹುಡುಕಿ ಹೊರಟಿದ್ದರು.

ಈಜುಕೊಳವೊಂದರ ಬಳಿ ಐಟಂ ಸಾಂಗಿನ ಚಿತ್ರೀಕರಣ ನಡೆಯುತ್ತಿತ್ತು. ಚಡ್ಡಿ ಧರಿಸಿ ಡ್ಯಾನ್ಸ್ ಮಾಡುತ್ತಿದ್ದ ನಟಿ, ತನ್ನ ಚಡ್ಡಿಯೂ ನಾಪತ್ತೆಯಾದೊಡನೆ ಹುಚ್ಚು ಹಿಡಿದವಳಂತೆ ಆಡತೊಡಗಿದಳು. ಆಹಾ! ಎಲ್ಲಾ ಐಟಂ ಡ್ಯಾನ್ಸ್‌ಗಿನ್ನಾ ಇದು ಬೊಂಬಾಟ್ ಎಂದು ಜೊಲ್ಲು ಸುರಿಸುತ್ತಾ ಚಿತ್ರೀಕರಿಸತೊಡಗಿದ ಕ್ಯಾಮರಾಮನ್ ಮತ್ತು ನಿರ್ದೇಶಕರು ತಮ್ಮ ಬಂಡವಾಳವೂ ಬಯಲಾಗಿರುವುದನ್ನೂ ಕಂಡು ಕ್ಯಾಮರಾವನ್ನು ಇದ್ದಲ್ಲೇ ಬಿಟ್ಟು ದಿಕ್ಕಾಪಾಲಾದರು. ನಟಿಯನ್ನು ಸಿಸ್ಟರ್ ಸಿಸ್ಟರ್ ಎಂದು ಕರೆಯುತ್ತ ಅವಳ ಹಿಂದೆ ಮುಂದೆ ಓಡಾಡುತ್ತಿದ್ದ ಚಿತ್ರತಂಡದ ಕೆಲವರು ಇದೇ ಸುಸಮಯವೆಂದು ಬಗೆದು ಅಂಥ ದಿಕ್ಕೆಟ್ಟ ಪರಿಸ್ಥಿತಿಯಲ್ಲಿಯೂ ರಾಕ್ಷಸರಂತೆ ನಟಿಯ ಮೇಲೆರಗಿ ಅವಳು ಹೆಣವಾಗುವ ತನಕ ಸರತಿಯ ಮೇಲೆ ಅತ್ಯಾಚಾರವೆಸಗಿದರು.

ಕೆಲವರು ಈ ದೃಶ್ಯವನ್ನು ಸೆರೆಹಿಡಿದು ಸಂಭ್ರಮಿಸತೊಡಗಿದರು. ಈ ಪಾಪಿಗಳು ನಗರದ ಯಾವ್ಯಾವುದೋ ಮೂಲೆಯಲ್ಲಿ ಸುಳಿವು ಸಿಗದಂತೆ ಅವಿತರು. ನಡೆದ ನೂರಾರು ಅತ್ಯಾಚಾರ ಪ್ರಕರಣಗಳಲ್ಲಿ ಒಂದಾದರೂ ದಾಖಲಾಗಲಿಲ್ಲ.

ದೂರದರ್ಶನದ ಎಲ್ಲ ವಾಹಿನಿಯವರು ತಮ್ಮ ಕಾರ್ಯಕ್ರಮವನ್ನು ಬರಖಾಸ್ತು ಮಾಡಿ ಸಿಕ್ಕ ಗೂಡು ಸೇರಿದರು. ಬ್ರೇಕಿಂಗ್ ನ್ಯೂಸ್ ಕೊಡಲು ಅವರ ಜೀವವೇನೋ ತಹತಹಿಸುತ್ತಿತ್ತು. ಆದರೆ ತಮ್ಮ ಮರ್ಯಾದೆ ನಾಡಿನ ಮನೆಮನೆಗೆ ಬಿತ್ತರವಾಗುವುದನ್ನು ನೆನೆದು ತೆಪ್ಪಗಾದರು. ಆದರೂ ಕೆಲವರು ಇಂಥ ಅವಕಾಶವನ್ನು ಕಳೆದುಕೊಳ್ಳದೆ ಆಯ್ದ ಸುಂದರಿಯರ ದೇಹ ಸೌಂದರ್ಯವನ್ನು ಗುಪ್ತವಾಗಿ ರೆಕಾರ್ಡ್ ಮಾಡಿಕೊಂಡು ಸೂಕ್ತ ಸಮಯದಲ್ಲಿ ಲಾಭಗಿಟ್ಟಿಸುವ ಕನಸು ಕಾಣತೊಡಗಿದರು.

ಕೂಡಲೇ ಮೊಬೈಲ್‌ನಲ್ಲಿ ಮಾತನಾಡಿದವರಿಗೆ ಆಚೆಬದಿಯಿಂದ ಸರಿಯಾದ ಉತ್ತರಗಳು ಸಿಗಲಿಲ್ಲ. ಅನೇಕ ಜನ ಗಡಿಬಿಡಿಯಲ್ಲಿ ಮೊಬೈಲ್ ಕಳೆದುಕೊಂಡಿದ್ದರು. ಇದ್ದವರು ಸಿಕ್ಕಸಿಕ್ಕವರೊಡನೆ ಅಸಂಬದ್ಧವಾಗಿ ಬಡಬಡಿಸಿದರು. ಇಡೀ ನಗರವೇ ಹುಚ್ಚು ಹಿಡಿದಂತೆ ವರ್ತಿಸತೊಡಗಿತು.

ಚಲನಚಿತ್ರ ಮಂದಿರಗಳು ಖಾಲಿ. ರಂಗ ಮಂದಿರಗಳು ಖಾಲಿ. ಮಟನ್ ಚಿಕನ್ ಮೀನು ತರಕಾರಿ ಮಾರ್ಕೆಟುಗಳು ಚಿಕ್ಕ ದೊಡ್ಡ ಮಾಲುಗಳು ಖಾಲಿ. ಶಾಲಾ ಕಾಲೇಜು ಕಚೇರಿಗಳು ಖಾಲಿ. ರಸ್ತೆ ಮೇಲೆ ಎಲ್ಲೆಂದರಲ್ಲಿ ನಿಂತಿರುವ ಕಾರು ಜೀಪು ಬಸ್ಸು ಇತ್ಯಾದಿ ಅವುಗಳ ಸೀಟಿನ ಕೆಳಗೆ ಬಚ್ಚಿಟ್ಟುಕೊಂಡಿರುವ ಬೆತ್ತಲೆ ದೇಹಗಳು. ಸುಲಭ್ ಶೌಚಾಲಯದ ಸ್ನಾನಗೃಹ, ಕಕ್ಕಸುಗಳ ಒಳಗಿದ್ದವರು ಒಳಗೇ ಬಂಧಿಗಳಾದರು.

ಸುದ್ದಿ ಕೇಳಿ ಅಕ್ಕಪಕ್ಕದ ಊರುಗಳಿಂದ ನಗರಕ್ಕೆ ಆಗಮಿಸಿದವರು, ನಗರ ಹತ್ತಿರವಾಗುತ್ತಿದ್ದಂತೆ ಉಟ್ಟ ಬಟ್ಟೆಗಳು ಮಾಯವಾಗಿ ಬೆತ್ತಲಾದರು. ಬೆತ್ತಲಾದದ್ದೇ ತಮ್ಮನ್ನು ತಾವು ಶಪಿಸಿಕೊಳ್ಳುತ್ತ ಅವಿತುಕೊಳ್ಳಲು ಜಾಗ ಹುಡುಕಿ ಓಡಿದರು. ಈ ಸುದ್ದಿ ಪ್ರಚಾರವಾದಂತೆಲ್ಲ ವಾಹನಗಳ ಚಾಲಕರು ಆ ನಗರವನ್ನು ತಪ್ಪಿಸಿ ಬೇರೆ ಮಾರ್ಗಗಳ ಮೂಲಕ ಗುರಿ ತಲುಪಲು ತಮ್ಮ ಬಟ್ಟೆಗಳ ಮೇಲೆ ಒಂದು ಕಣ್ಣಿರಿಸಿ ವೇಗವಾಗಿ ಸಾಗಿದರು.

ನಗರದ ಅಂಚಿನಲ್ಲಿದ್ದ ಕೆಲವು ರೈತರು ಕೂಲಿ ಹುಡುಕಿಕೊಂಡು ನಗರದತ್ತ ಹೊರಟಿದ್ದರು. ನಿಜಕ್ಕೂ ಅವರು ರೈತರಾಗಲಿಲ್ಲ. ಯಾಕೆಂದರೆ ರಾಕ್ಷಸನಂತೆ ಬೆಳೆಯುತ್ತಿದ್ದ ಆ ನಗರ ಅವರ ಹೊಲ ಗದ್ದೆ ತೋಟಗಳನ್ನು ನುಂಗಿ ನೀರು ಕುಡಿದಿತ್ತು. ಹೊಲದ ಮಾರಾಟದಿಂದ ಬಂದ ಹಣ ಕೆಲದಿನಗಳಲ್ಲಿ ಖಾಲಿಯಾಗಿ ರೈತರು ಭಿಕಾರಿಯಾಗಿದ್ದರು. ಅವರ ಮಕ್ಕಳೆಲ್ಲ ನಗರದ ಸೆಳೆತಕ್ಕೆ ಸಿಕ್ಕು

ಬೀದಿಪಾಲಾಗಿದ್ದರು. ತಮ್ಮ ನಾಡಿನಲ್ಲೇ ತಬ್ಬಲಿಗಳಾಗಿದ್ದ ರೈತರು ಉಟ್ಟಿದ್ದ ಹರಕು ನಿಕ್ಕರ್ ಬನಿಯನ್ನುಗಳು ಮಾಯವಾದದ್ದೇ ಇದೇನು ಹೊಸ ರೋಗವೋ ಈ ನಗರಕ್ಕೆ ಎಂದು ಶಪಿಸುತ್ತ ಕಂಡ ರಸ್ತೆ ಹಿಡಿದು ಓಡತೊಡಗಿದರು.

ಪ್ಲಾಸ್ಟಿಕ್ ಹಾಳೆ, ಪೇಪರ್, ತಗಡು ಮುಂತಾದ ವಸ್ತುಗಳಿಂದ ಬೆತ್ತಲೆಯನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದರೆ ಆ ವಸ್ತುಗಳೂ ಮಾಯವಾಗುತ್ತಿದ್ದವು. ಬೆತ್ತಲೆ ಎಂಬುದು ಅನುಭವಿಸಲೇಬೇಕಾದ ಅನಿವಾರ್ಯ ಅನಿಷ್ಟದಂತೆ ಕಾಣತೊಡಗಿತು. ವಜ್ರ ಖಚಿತವಾದ ಬಂಗಾರದ ಚಡ್ಡಿಯನ್ನು ಹೊಲಿಸಿದ್ದ ಶ್ರೀಮಂತನೊಬ್ಬನ ಚಡ್ಡಿ ಉಟ್ಟೊಡನೆ ಮಾಯವಾಯಿತು. ಶ್ರೀಮಂತ ಕೂಡಲೆ ತನ್ನ ಪರಮಾಪ್ತ ಧರ್ಮಗುರುವಿಗೆ ಫೋನಾಯಿಸಿದ. ಆ ಧರ್ಮಗುರುವಿನ ಪರಿಸ್ಥಿತಿಯೂ ಉತ್ತಮವಾಗಿರಲಿಲ್ಲ. ಅವರೂ ಸಂಪೂರ್ಣ ಬೆತ್ತಲಾಗಿದ್ದರು. ಕಾರಣ ಅರಿಯದೆ ಕಂಗಾಲಾಗಿದ್ದರು. ಅವರಿಗೀಗಾಗಲೇ ನೂರಾರು ದೂರವಾಣಿ ಕರೆಗಳು ಬಂದಿದ್ದವು. ಮಂತ್ರಿ ಮಹೋದಯರು, ಶ್ರೀಮಂತ ಶಿಷ್ಯರು, ಜನಸಾಮಾನ್ಯರು, ಸ್ನೇಹಿತರು, ವೈರಿಗಳು, ತವಕದಲ್ಲಿ ಭರವಸೆಯಲ್ಲಿ ಕರೆ ಮಾಡಿದ್ದರು. ಉತ್ತರ ಗೊತ್ತಿಲ್ಲದ ಗುರುಗಳು ಫೋನನ್ನು ಎತ್ತಿಕೊಳ್ಳಲಿಲ್ಲ. ಸದ್ಯದ ಘಟನೆ ಬಿಡಿಸಲಾರದ ಕಗ್ಗಂಟಾಗಿದ್ದು. ಏನು ಹೇಳಿದರೂ ಸುಳ್ಳಾಗಬಹುದಾದ ಸಾಧ್ಯತೆಯನ್ನು ಮನಗಂಡು ಮೌನವ್ರತ ವಹಿಸಿರುವ ಬಗ್ಗೆ ಶಿಷ್ಯರಿಂದ ಪ್ರಚಾರ ಪಡಿಸಿದರು.

ವೈರಾಗ್ಯ, ಬ್ರಹ್ಮಚರ್ಯ ಬೋಧಿಸುತ್ತಿದ್ದ ಹಲವಾರು ಗುರುವರ್ಯರು ತಮ್ಮ ಮನೋನಿಗ್ರಹದ ಬಗ್ಗೆ ನಂಬಿಕೆ ಸಾಲದೆ ಬೆತ್ತಲೆ ಹೆಣ್ಣುಮಕ್ಕಳ ಎದುರು ಅಕಸ್ಮಾತ್ತಾಗಿಯೂ ಬರಬಾರದೆಂದು ತೀರ್ಮಾನಿಸಿ ಏಕಾಂತದಲ್ಲಿಯೇ ಇರಲು ನಿರ್ಧರಿಸಿದರು.

ಅನೇಕ ನಾಗರಿಕರು ನಗರದಲ್ಲೆಲ್ಲಾ ಜನಪ್ರಿಯರಾಗಿದ್ದ ಜ್ಯೋತಿಷಿಗೆ ಫೋನು ಮಾಡಿದರು. ಏಕೆ ಈ ಸ್ಥಿತಿ ಬಂದಿದೆ? ಇನ್ನೆಷ್ಟು ದಿನ ಈ ಪರಿಸ್ಥಿತಿ ಮುಂದುವರಿಯಬಹುದು? ಈ ಸಂಕಷ್ಟದ ಪರಿಹಾರಕ್ಕೆ ಏನು ಮಾಡಬೇಕು? ಮುಂತಾದ ಪ್ರಶ್ನೆಗಳಿಗೆ ಅವರ ಬಳಿ ಯಾವುದೇ ಉತ್ತರವಿರಲಿಲ್ಲ. ಬಟ್ಟೆ ನಾಪತ್ತೆ ಪ್ರಸಂಗದಿಂದ ಜ್ಯೋತಿಷ್ಯದಲ್ಲಿ ತಮ್ಮ ಸ್ಥಾನಮಾನ ನಶಿಸಿಹೋಗುತ್ತಿರುವುದರ ಬಗ್ಗೆ ಅವರಿಗೆ ಸಿಟ್ಟೇರಿ ಉತ್ತರಿಸಲಾಗದೆ ಕಟಕಟ ಹಲ್ಲು ಕಡಿಯತೊಡಗಿದರು.

ಇಕ್ಕಟ್ಟಿಗೆ ಸಿಲುಕಿದ ಮಂತ್ರಿ ಮಹೋದಯರು ನಗರದಲ್ಲಿದ್ದ ಹಿರಿಯರನ್ನು, ಶತಾಯುಷಿಗಳನ್ನು ಸಂಪರ್ಕಿಸಿದರು. ಅವರಲ್ಲನೇಕರು ಮನೆಮಾರು ಸೇರಲಾಗದೆ ಎಲ್ಲೆಲ್ಲೋ ಕಣ್ಮರೆಯಾಗಿದ್ದರು. ಮನೆಯಲ್ಲಿದ್ದವರು ನಿರುತ್ತರರಾಗಿದ್ದರು. ಅವರೆಲ್ಲ ಪರಿಸ್ಥಿತಿಯ ಹೊಡೆತಕ್ಕೆ ಇದ್ದಕ್ಕಿದ್ದಂತೆ ಇನ್ನಷ್ಟು ವಯಸ್ಸಾದವರಂತಾಗಿದ್ದರು. ಅವರ ನೂರಾರು ವರ್ಷಗಳ ಬದುಕಿನಲ್ಲಿ ಒಂದಾದರೂ ಈ ತರಹದ ಘಟನೆಗಳಾಗಿರಲಿಲ್ಲ.

ಕಾರ್ಯಕಾರಣ ಸಂಬಂಧವಿಲ್ಲದ ಬಟ್ಟೆ ನಾಪತ್ತೆಯಂಥ ಘಟನೆ ಎದುರು ಬುದ್ಧಿಜೀವಿಗಳು ಗರಬಡಿದವರಂತಾಗಿದ್ದರು. ನಗರದ ಕಂಪ್ಯೂಟರ್ ತಜ್ಞರೆಲ್ಲ ಅಂತರ್ಜಾಲವನ್ನು ಜಾಲಾಡಿ ಸುಸ್ತು ಹೊಡೆದರು. ಕಂಪ್ಯೂಟರ್ ಎಂಬ ಗಿಣಿ ಮನುಕುಲದ ಈ ಸಮಸ್ಯೆಗೆ ನಿರುತ್ತರವಾಗಿತ್ತು.

ಕೊನೆಗೆ ಮಂತ್ರಿಮಹೋದಯರು ನೆನಪು ಮಾಡಿಕೊಂಡು ವಿಜ್ಞಾನಿಗಳಿಗೆ ಫೋನಾಯಿಸಿದರು. ನಗರದಲ್ಲಿ ನೂರಾರು ವಿಜ್ಞಾನಿಗಳು ತಮ್ಮ ಮನೆಯ ರೂಮುಗಳಲ್ಲೋ ಪ್ರಯೋಗಶಾಲೆಗಳಲ್ಲೋ ಬಂಧಿಗಳಾಗಿ ಬೆತ್ತಲೆ ಅವಿತುಕೊಂಡಿದ್ದರು. ಬಟ್ಟೆ ನಾಪತ್ತೆಯಂಥ ಪ್ರಕರಣವು ಅವರು ಇದುವರೆಗೆ ತಿಳಿದಿದ್ದ ವಿಜ್ಞಾನದ ಯಾವುದೇ ಸಿದ್ಧಾಂತಕ್ಕೂ ಸಿಕ್ಕದೆ ಅರ್ಥೈಸಲಸಾಧ್ಯವಾಗಿತ್ತು. ಅವರಲ್ಲನೇಕರು ನಾಡಿನ ಭಾರಿ ಶ್ರೀಮಂತರ ಹಾಗೂ ರಾಜಕಾರಣಿಗಳ ತಾಳಕ್ಕೆ ಕುಣಿಯುತ್ತ ಅವರ ಆದೇಶಕ್ಕನುಗುಣವಾಗಿ ವಿಜ್ಞಾನವನ್ನು ಹಣಮಾಡಿಕೊಳ್ಳುವ ದಂಧೆಯನ್ನಾಗಿ ಮಾರ್ಪಡಿಸಿದ್ದರು. ಯಾವುದೇ ಉಪಾಯ ಕಾಣದೆ ವಿಜ್ಞಾನಿಗಳೆಲ್ಲ ತಲೆ ಕೊಡವಿದರು.

ಯಾರ ಎದುರೂ ಬರಲಾರದ ಮುಖ್ಯಮಂತಿಗಳು ಇದೆಲ್ಲಾ ವಿರೋಧ ಪಕ್ಷದವರ ಕಿತಾಪತಿ, ಸಕಾಲದಲ್ಲಿ ಎಲ್ಲವನ್ನೂ ಬಹಿರಂಗಪಡಿಸುವುದಾಗಿ ಫೋನಿನಲ್ಲಿ ಬುಸುಗುಟ್ಟಿದರು.

ವಿರೋಧ ಪಕ್ಷದವರನ್ನು ಅವಮಾನಿಸಲು ಮುಖ್ಯಮಂತ್ರಿ ಮಾಡಿಸಿದ ಮಾಟ ಇಡೀ ನಗರದ ಜನರಿಗೆ ಮುಳುವಾಗಿದೆ. ಇದಕ್ಕೆಲ್ಲ ಮುಖ್ಯಮಂತ್ರಿಯೇ ಕಾರಣ. ಮುಂದಿನ ಚುನಾವಣೆಯಲ್ಲಿ ಆಡಳಿತ ಪಕ್ಷದವರಿಗೆ ಸರಿಯಾದ ಪಾಠ ಕಲಿಸಿರಿ ಎಂದು ವಿರೋಧ ಪಕ್ಷದ ನಾಯಕ ಪ್ರಜೆಗಳೆಲ್ಲರಿಗೆ ಸಂದೇಶ ರವಾನಿಸಿದರು.

ಲಕ್ಷಾಂತರ ಜನ ಎಲ್ಲೆಂದರಲ್ಲಿ ಅವಿತುಕೊಂಡು ಸ್ವಂತ ಮನೆಗಳಿಂದ ಕಣ್ಮರೆಯಾಗಿದ್ದರು. ಯಾರು ಯಾರನ್ನು ಎಲ್ಲಿ ಹುಡುಕುವುದು? ಸಂಪೂರ್ಣ ಬೆತ್ತಲೆಯಾಗಿ ಎಲ್ಲೋ ಅವಿತಿರುವ ಹೆಣ್ಣನ್ನು ಬೀದಿ ಬೀದಿ ಅಲೆಯತ್ತ ಬೆತ್ತಲೆ ಗಂಡೊಬ್ಬ ಹುಡುಕುವುದು ಹೇಗೆ? ಅಥವ ಬೆತ್ತಲೆ ಹೆಣ್ಣು ಕಾಣದ ಕಡೆ ಅವಿತಿರುವ ಗಂಡನ್ನು ಹುಡುಕುತ್ತ ಬೀದಿ ಬೀದಿ ಅಲೆಯುವುದು ಹೇಗೆ? ಎಂಥ ಅಸಂಬದ್ಧ? ನಗರದ ಅನೇಕ ಕಡೆ ಗಂಡಸರ ಮರ್ಮಾಂಗಗಳನ್ನು ಪರೀಕ್ಷಿಸಿ ಅವರು ಯಾವ ಧರ್ಮಕ್ಕೆ ಸೇರಿದವರೆಂದು ಕ್ಷಣಮಾತ್ರದಲ್ಲಿ ಪತ್ತೆ ಹಚ್ಚಿ ಹುಳು ಹುಪ್ಪಟೆಗಳಂತೆ ಬಡಿದು ಸಾಯಿಸಿದರು. ಬೆತ್ತಲೆಯಲ್ಲೂ ಕೋಮುವೈಷಮ್ಯ ಭುಗಿಲೆದ್ದಿತು. ಸದರಿ ವಿಷಯವು ಮೊಬೈಲುಗಳ ಮೂಲಕ ನಗರದಲ್ಲೆಲ್ಲ ವಿಕಾರವಾಗಿ ಹಬ್ಬಿ ಗಂಡಸರು ಚಲನೆಯನ್ನೇ ಕಳೆದುಕೊಂಡು ಇದ್ದಲ್ಲೇ ಸ್ಥಗಿತರಾದರು. ಎಲ್ಲ ಹೆಣ್ಣು ಮಕ್ಕಳೂ ಧರ್ಮಾತೀತವಾಗಿ ತಮ್ಮ ಮನೆಯ ಗಂಡಸರ ಸಾವನ್ನು ನಿರೀಕ್ಷಿಸುತ್ತ ಅಸಹಾಯಕರಾಗಿ ಸಂತೈಸುವವರು ಸಹ ಇಲ್ಲದೆ ರೋಧಿಸತೊಡಗಿದರು.

ಪ್ಯಾರಿಸ್ ನಗರದಲ್ಲಿ ನಡೆಯುವ ವಿಶ್ವಮಟ್ಟದ 'ಫ್ಯಾಷನ್ ಶೋ'ಗಾಗಿ ತನ್ನೆಲ್ಲ ಕ್ರಿಯಾಶೀಲತೆಯನ್ನು ಬಳಸಿ ವಿನ್ಯಾಸ ಮಾಡಿದ್ದ ಡ್ರೆಸ್‌ಗಳು ಮಾಯವಾಗಿದ್ದು ಕಂಡು ಬುಗುಲು ಸ್ವಭಾವದ ವಸ್ತ್ರ ವಿನ್ಯಾಸಕಾರನೊಬ್ಬ ನಗರದ ಹೃದಯ ಭಾಗದಲ್ಲಿದ್ದ ಕಟ್ಟಡದ ಹದಿನೆಂಟನೆಯ ಮಹಡಿಯಿಂದ ಜಿಗಿದು ನಾಗರಿಕರ ರಕ್ತ ಹೆಪ್ಪುಗಟ್ಟುವಂತೆ ಆತ್ಮಹತ್ಯೆ ಮಾಡಿಕೊಂಡ. ಛಿದ್ರವಾಗಿದ್ದ ಅವನ ದೇಹ ಮುಖ್ಯರಸ್ತೆಯೊಂದರ ಮಧ್ಯಭಾಗದಲ್ಲಿ ಹೇಳುವವರು ಕೇಳುವವರು ಇಲ್ಲದೆ ಹಾಗೆಯೇ ಬಿದ್ದಿತು.

ಇಡೀ ನಗರ ಅನಾಥ ಪ್ರಜ್ಞೆಯಿಂದ ನರಳತೊಡಗಿತು.

ನಗರದ ಭವ್ಯವಾದ ವಸತಿ ಸಮುಚ್ಚಯದಲ್ಲೊಂದು ಮನೆ. ಆ ಮನೆಯ ತಾಯಿಯ ಮಗುವನ್ನು ಮಲಗಿಸಿ ಸ್ನಾನಕ್ಕಿಳಿದಿದ್ದಾಳೆ. ಹೂ ಹೆಜ್ಜೆಗಳನ್ನಿಡುತ್ತ ಆಗಷ್ಟೆ ಓಡಾಡಲು ಕಲಿತಿರುವ ಮಗು. ಈ ದಿನ ಮಗು ಯಾಕೋ ಕಿರಿಕಿರಿ ಮಾಡುತ್ತ ಉಪವಾಸವೇ ಮಲಗಿದೆ. ಮಗು ಉಪವಾಸವಿದ್ದುದರಿಂದ ತಾಯಿಯೂ ಹೊಟ್ಟೆಗೇನೂ ತಿಂದಿಲ್ಲ. ಮಗು ಏಳುವ ಮುನ್ನವೆ ಸ್ನಾನ ಮುಗಿಸೋಣವೆಂದು ಸಮಯ ಮಾಡಿಕೊಂಡು ಬಚ್ಚಲನ್ನು ಪ್ರವೇಶಿಸಿದ್ದಾಳೆ. ಸ್ನಾನ ಮಾಡುತ್ತಾ ನೋಡುತ್ತಾಳೆ! ತಾನು ಬಚ್ಚಲಲ್ಲಿ ತಂದಿಟ್ಟಿದ್ದ ಉಡುಪುಗಳು ಮತ್ತು ಟವಲ್ ನಾಪತ್ತೆಯಾಗಿವೆ! ಬಟ್ಟೆಗಳೆಲ್ಲ ಹೋದವು? ಆ ತಾಯಿಗೆ ಆಶ್ಚರ್ಯವಾಯಿತು. ಸ್ವಲ್ಪವೇ ಸ್ವಲ್ಪ ಬಾಗಿಲು ಓರೆ ಮಾಡಿ ಹೊರಗೆ ಇಣುಕಿದಳು. ಕಿಟಕಿ ಬಾಗಿಲುಗಳಿಗೆ ಹಾಕಿದ ಪರದೆ ಇಲ್ಲ. ನೆಲಕ್ಕೆ ಹಾಸಿದ್ದ ರತ್ನಗಂಬಳಿಗಳಲ್ಲ. ಮನೆಯಲ್ಲಿ ಒಂದೇ ಒಂದು ಬಟ್ಟೆ ಇಲ್ಲ! ಅವಳಿಗೆ ಗಾಬರಿ ಆಗತೊಡಗಿತು. ತನ್ನ ಮನೆ ದರೋಡೆ ಆಗಿರಬಹುದೇ? ಬೆತ್ತಲೆಯಾಗಿ ಹೊರಬರಲು ಸಂಕೋಚವಾಗಿ ಅಲ್ಲೇ ನಿಂತಳು. ಆದರೆ ಮಗುವಿನ ಶಬ್ದ ಇಲ್ಲದ್ದು ಗಮನಕ್ಕೆ ಬಂದಿದ್ದೇ ಸ್ನಾನಕ್ಕಿಳಿಯುವ ಮುಂಚೆ ತಾನು ಮನೆಯ ಹೊರಬಾಗಿಲನ್ನು ಮುಚ್ಚಿದ್ದೇನೋ ಇಲ್ಲವೋ ಎಂಬ ಅನುಮಾನ ಬಂದಿತು. ಬಚ್ಚಲ ಕೋಣೆಯಿಂದ ಒಮ್ಮೆಲೆ ಹೊರಕ್ಕೆ ಧಾವಿಸಿ ಬಂದಳು. ಅವಳಿಗೆ ಎದೆ ಹೊಡೆಯುವಂತೆ ಮಂಚದ ಮೇಲೆ ಹಾಸಿಗೆ ಇಲ್ಲ. ಹೊದಿಕೆ ಇಲ್ಲ ಮತ್ತು ಮಗು ಇಲ್ಲ ಎಂಬುದು ಗಮನಕ್ಕೆ ಬಂದಿತು. ಮನೆಯ ಮುಂದಿನ ಬಾಗಿಲು ತೆರೆದೇ ಇತ್ತು. ಬಟ್ಟೆ ಹೊರತಾಗಿ ಎಲ್ಲಾ ವಸ್ತುಗಳೂ ಯಥಾ ಪ್ರಕಾರ ಇದ್ದುವು.

ಕಿಟಕಿ ಗಾಜಿನ ಹೊರಗೆ ಯಾರೋ ಹತ್ತಾರು ಜನ ಗಂಡಸರು ಹೆಂಗಸರು ಬೆತ್ತಲೆಯಾಗಿ ಆತುರಾತುರವಾಗಿ ಓಡಾಡುತ್ತಿರುವುದು ಕಾಣಿಸಿತು. ಮೈಯೆಲ್ಲಾ ಹಿಡಿಯಾಗಿ ಮನೆಯಲ್ಲೆಲ್ಲಾ ಮಗುವಿಗಾಗಿ ಹುಡುಕಾಡಿದಳು. ಮಗು ಮನೆಯೊಳಗೆ ಎಲ್ಲೂ ಇರಲಿಲ್ಲ. ಉಸಿರು ಕಟ್ಟಿದಂತಾಗಿ ಹೊರಗೆ ಬಂದು ಇಣುಕಿದಳು. ರಸ್ತೆಯಲ್ಲಿ ಒಂದೇ ಒಂದು ವಾಹನ ಇರಲಿಲ್ಲ. ಆ ಹುಚ್ಚರು, ಭಿಕ್ಷುಕರು, ರದ್ದಿ ಆಯುವವರ ಗುಂಪು ಬಿಟ್ಟರೆ ರಸ್ತೆ ನಿರ್ಜನವಾಗತೊಡಗಿತ್ತು. ವಿಚಿತ್ರವಾದುದ್ದೇನೋ ಘಟಿಸಿರುವುದು ಅವಳಿಗೆ ಖಚಿತವಾಯಿತು.

ಬೀದಿಯಲ್ಲಿ ಬೆತ್ತಲೆ ತಿರುಗುತ್ತಿದ್ದ ಹುಚ್ಚರಲ್ಲಿ ಒಬ್ಬಳು ಒಮ್ಮೆಲೆ ಜೋರಾಗಿ ಗಹಗಹಿಸಿ ನಗುತ್ತಾ –"ಏನ್ರೋ ಹಲ್ಕಟ್‌ಗಳ, ಲೋಫರ್‌ಗಳ, ಇಷ್ಟು ದಿನ ನನ್ನೊಬ್ಬಳನ್ನೇ ಬೆತ್ತಲೆ ಮಾಡಿ ಮಜಾ ಮಾಡ್ತಿದ್ದೀರೇನ್ರೋ? ಈಗ ನೋಡ್ರೋ ಏನಾಗಿದೆ! ನಿಮ್ಮ ಮನೆಯ ಹೆಂಗಸರೆಲ್ಲಾ ಬೆತ್ತಲಾಗಿದ್ದಾರೆ! ನನ್ನನ್ನು ಸೂಳೆ ಮಾಡ್ದೋರು ನೀವೇ, ಮಜಾ ಮಾಡ್ದೋರು ನೀವೆ, ನಗೋರು ನೀವೇ ಏನ್ರೋ? ಎಂದು ಕೇಕೆ ಹೊಡೆಯತೊಡಗಿದಳು.

ತಾಯಿಗೆ ಭಯ ಹೆಚ್ಚಿತು. ತನ್ನ ಮಗು ಹೊರಗೆ ಹೋಗಿರುವುದು ಖಚಿತ. ಮಗು ಎಲ್ಲಾದರೂ ನಾಯಿಗಳ ಪಾಲಾದರೆ? ದನಗಳ ತುಳಿತಕ್ಕೆ ಸಿಕ್ಕರೆ? ಹುಚ್ಚರು ಭಿಕ್ಷುಕರು ಹೊತ್ತೊಯ್ದರೇ? ಯೋಚಿಸಿದಂತೆಲ್ಲಾ ತಾಯಿ ಹೃದಯ ನಗಾರಿಯಾಯಿತು. ಆದರೆ ಮಗುವನ್ನು ಹುಡುಕಲು ಬೆತ್ತಲೆಯಾಗಿ ಹೊರಗೆ ಹೆಜ್ಜೆ ಇಡುವುದಾದರೂ ಹೇಗೆ? ನಗರದ ಮುಖ್ಯ ರಸ್ತೆಯೊಂದರಲ್ಲಿ ಹರೆಯದ ಹೆಣ್ಣಾಗಿ ತಾನು ಬೆತ್ತಲೆ ಹೊರಟರೆ ಅಪಾಯ ಕಟ್ಟಿಟ್ಟದ್ದು. ಇದೆಂತಹ ಪರೀಕ್ಷೆ ಎಂದು ದೇವರಲ್ಲಿ ಮೊರೆಯಿಟ್ಟಳು. ಕೊನೆಗೆ, ಜನರೆಲ್ಲಾ ಬೆತ್ತಲೆಗೆ ಹಿಂಜರಿದು ನಾನಾ ರೀತಿಯಲ್ಲಿ ಹೆದರಿ ಎಲ್ಲೆಂದರಲ್ಲಿ ಅವಿತಿದ್ದರೆ ಈ ತಾಯಿ ಮಗುವಿಗಾಗಿ ಪರಿತಪಿಸುತ್ತಾ ರಸ್ತೆಗಿಳಿದೇ ಬಿಟ್ಟಳು. ರಸ್ತೆಯ ಈ ತುದಿಯಿಂದ ಆ ತುದಿಯವರೆಗೆ ದೃಷ್ಟಿ ಹಾಯಿಸಿದಳು. ಹತ್ತಾರು ಜನ ಕೇಕೇ ಹಾಕುತ್ತಾ ಅವಳ ಸುತ್ತಾ ಸುತ್ತತೊಡಗಿದರು. ಇದೇನು ನಗರವೋ ನರಕವೋ ಎನಿಸಿತು ತಾಯಿಗೆ.

ಆ ತಾಯಿಗೆ ಹೆಜ್ಜೆ ಹೆಜ್ಜೆಗೆ ಉಸಿರು ಸಿಕ್ಕಿಕೊಳ್ಳತೊಡಗಿತು. ಮಗು ಏನಾದರೂ ಈ ತಿರುವಿನಲ್ಲಿ ಹೋಗಿದೆಯೇ? ಎಂದು ಒಂದು ತಿರುವಿನಲ್ಲಿ ಓಡಿದಳು. ಚರಂಡಿಗೇನಾದರೂ ಬಿದ್ದಿತೇ ಎಂದು ಚರಂಡಿ ಇಳಿದು ನೋಡಿದಳು. ಬೆತ್ತಲೆಯ ನಾಚಿಕೆ ಮುಜುಗರ ಮೆಲ್ಲನೆ ಹಿಂದೆ ಸರಿದು ಅವಳಲ್ಲಿ ಆತಂಕ ದಟ್ಟೈಸಿತು. ತೆರೆದೇ ಇದ್ದ ಅನೇಕ ಮನೆ ಅಂಗಡಿಗಳ ಒಳಹೊಕ್ಕು ಹುಡುಕುತ್ತ ಮುನ್ನಡೆದಳು, ಬಿಕ್ಕಿದಳು. ಕೊನೆ ಕೊನೆಗೆ ಜೋರಾಗಿ ರೋಧಿಸುತ್ತಾ ಮಗುವಿನ ಹೆಸರಿಡಿದು ಕೂಗುತ್ತ ತನ್ನ ಸರ್ವಸ್ವವನ್ನೂ ಮರೆತಳು. ಜಗತ್ತನ್ನೇ ಮರೆತಳು. ಕಳೆದು ಹೋದ ಮಗು ಅವಳ ಜಗತ್ತಾಯಿತು.

ತಾಯಿ ಅಳುವುದನ್ನು ಕಂಡು ಕೇಕೆ ಹೊಡೆಯುತ್ತಿದ್ದ ಜನ ತೆಪ್ಪಗಾದರು. ಪರಿಸ್ಥಿತಿಯ ಗಂಭೀರತೆ ಅವರನ್ನು ತಟ್ಟತೊಡಗಿತು. ಅವರೆಲ್ಲಾ ತಾಯಿಯ ಸುತ್ತ ನೆರೆತು ಮಗುವಿನ ವಿವರಗಳನ್ನು ತಿಳಿದುಕೊಂಡು ಹುಡುಕಾಟದಲ್ಲಿ ತೊಡಗಿದರು. ರದ್ದಿ ಆಯುವವರು ಗಲ್ಲಿಗಲ್ಲಿಗಳ ಮೂಲೆ ಮುಡಿಕೆಗಳನ್ನು ಅರಸಿದರು. ಹಮಾಲರು ತೆರೆದಿದ್ದ ಅಂಗಡಿಗಳನ್ನು ಮನೆಗಳನ್ನು ಜಾಲಾಡಿದರು. ಇತರರು ತಮ್ಮ ದೃಷ್ಟಿಯ ಬಲೆ ಹಾಕಿ ಇಡೀ ಪ್ರದೇಶವನ್ನೇ ಸೋಸಿದರು. ತಾಯಿ ಮಗುವನ್ನು ಕೂಗಿದಾಗ

ತಾವೂ ಕೂಗಿದರು. ತಾಯಿ ಚರಂಡಿಗಿಳಿದರೆ ತಾವೂ ಧುಮುಕಿದರು. ತಾಯಿ ಅತ್ತಾಗ ತಾವೂ ಅತ್ತರು.

ಅದೇ ಮಾರ್ಗದಲ್ಲಿ ಜೈಲಿನಿಂದ ತಪ್ಪಿಸಿಕೊಂಡು ಓಡಿ ಬರುತ್ತಿದ್ದ ಕಳ್ಳರ ಗುಂಪೊಂದು ಅಳುತ್ತಾ ಸಾಗಿದ್ದ ತಾಯಿ ಮತ್ತು ಅವಳ ಸುತ್ತಾ ಇದ್ದ ವಿಚಿತ್ರ ಪಡೆಯನ್ನು ಕಂಡು, ವಿಷಯ ತಿಳಿದು ತಾವೂ ಮಗುವಿನ ಹುಡುಕಾಟದಲ್ಲಿ ತೊಡಗಿದರು. ಗೊತ್ತು ಗುರಿಯಿಲ್ಲದೆ ಓಡುತ್ತಿದ್ದ ಅವರಿಗೆ ಇದ್ದಕ್ಕಿದ್ದಂತೆ ಗುರುತರವಾದ ಕೆಲಸ ಸಿಕ್ಕಂತಾಗಿತ್ತು.

ತಾಯಿಗೆ ನಿಧಾನವಾಗಿ ನಿರಾಸೆ ಆವರಿಸತೊಡಗಿತು. ಮಗು ಸಿಗಲಿಕ್ಕಿಲ್ಲ ಎನಿಸಿತು. ಮೈಯಲ್ಲಿ ಬಲವೇ ಇಲ್ಲವಾಗಿ ಕುಸಿದು ಕೂತಳು. ಕೊಳಕರು, ನಿಕೃಷ್ಟರು, ಪಾಪಿಷ್ಠರು, ನಿರ್ಗತಿಕರು ಎನಿಸಿಕೊಂಡ ಭಿಕ್ಷುಕರು, ಹುಚ್ಚರು, ಸೂಳೆಯರು, ಹಮಾಲರು, ಕಳ್ಳರು, ತಾಯಿಯನ್ನು ಸಂತೈಸತೊಡಗಿದರು. ತಾಯಿಯನ್ನು ಎಬ್ಬಿಸಿಕೊಂಡು– "ನಾವು ಹುಡುಕಿ ಕೊಡುತ್ತೇವೆ ಬಾ" ಎಂದು ಯುದ್ಧಕ್ಕೆ ಹೊರಟವರಂತೆ ತಾಯಿಯನ್ನು ಮುಂದಿಕ್ಕಿಕೊಂಡು ನಡೆದರು. ತಾಯಿ ಹೊಸ ಹುಮ್ಮಸ್ಸಿನಿಂದ ಹೆಜ್ಜೆ ಹಾಕಿದಳು.

ನಗರಕ್ಕೆ ನಗರವೇ ಬೆತ್ತಲೆಯ ಆಘಾತದಿಂದ ಮತ್ತು ಸುಡು ಬಿಸಿಲಿನಿಂದ ತತ್ತರಿಸಿದ್ದರೆ, ಗಾಂಧಿಪಾರ್ಕ್ ಮಾತ್ರ ತಣ್ಣಗಿತ್ತು. ನಿರ್ಜನವಾಗಿದ್ದ ವಿಶಾಲ ಪ್ರದೇಶದಲ್ಲಿ ಹಬ್ಬಿ ನಿಂತಿದ್ದ ಪಾರ್ಕಿನೊಳಗೆ ಎತ್ತ ನೋಡಿದರತ್ತ ನೆರಳಿತ್ತು. ಅಂದು ಕೂಲಿ ಕೆಲಸ ಸಿಗದೇ ಬೆತ್ತಲಾಗಿ ಬಂದ ರೈತರ ಗುಂಪು ನೆರಳಿನಲ್ಲಿ ವಿಶ್ರಮಿಸಿಕೊಳ್ಳತೊಡಗಿತ್ತು. ಉಪವಾಸವಿದ್ದ ರೈತರು ಬಿಸಿಲಿನ ಹೊಡೆತಕ್ಕೆ ಹೈರಾಣಾಗಿ ಬೆತ್ತಲೆ ಮರೆಮಾಚಿಕೊಳ್ಳಲು ಒಬ್ಬೊಬ್ಬರೂ ಒಂದೊಂದು ಮರದಡಿ ಮಲಗಿ ನಿದ್ರಾವಶರಾಗುತ್ತಿರುವಾಗ ಒಂದು ಪುಟ್ಟ ಮಗುವಿನ ಕಿಲಕಿಲ ನಗುವಿಗೆ ಎಚ್ಚೆತ್ತರು. ನೋಡುತ್ತಾರೆ; ಒಂದು ಪುಟ್ಟ ಮಗು ಸಾವಿರಾರು ಬಣ್ಣ ಬಣ್ಣದ ಹೂಗಳ ಮತ್ತು ಹೂವಿಂದ ಹೂವಿಗೆ ಹಾರಾಡುತ್ತಿರುವ ಚಿಟ್ಟೆಗಳ ಸೌಂದರ್ಯಕ್ಕೆ ಮರುಳಾಗಿ ಚಿಟ್ಟೆಯನ್ನು ಹಿಡಿಯಲು ಓಡುತ್ತಿದೆ. ಅಂದು ಬೆಳಿಗ್ಗೆಯಿಂದ ಘಟಿಸಿರುವ ವಿವರಣೆಗೆ ನಿಲುಕದ ಸಂಗತಿಗಳಿಂದ ಗಲಿಬಿಲಿಯಲ್ಲಿದ್ದ ಮುಗ್ಧ ರೈತರಿಗೆ ಏಳುತ್ತಾ ಬೀಳುತ್ತಾ ಓಡುತ್ತಿರುವ ಮಗು ಈ ಲೋಕದ ಮಗುವಿನಂತೆ ಕಾಣಲಿಲ್ಲ. ಮಂತ್ರ ಮುಗ್ಧರಂತಾದ ರೈತರೆಲ್ಲ ಮಗು ಬಿದ್ದಾಗ ಎಬ್ಬಿಸಿ, ಓಡಿದಾಗ ತಾವೂ ಓಡಿ, ಕೇಕೆ ಹೊಡೆದಾಗ ತಾವೂ ಕೇಕೆ ಹೊಡೆದು, ತಮ್ಮ ಬೆತ್ತಲೆ ಮತ್ತು ಹಸಿವನ್ನು ಮರೆತು ನಲಿಯತೊಡಗಿದರು. ಆಡುತ್ತಾಡುತ್ತಾ ಮೈಮರೆತಿರುವ ರೈತರು ಮತ್ತು ಮಗು! ಅಲ್ಲಿಗೆ ಆಗ ಆಗಮಿಸಿತು ತಾಯಿ ಮತ್ತು ಅವಳ ಪಡೆ.

ತಾಯಿ ಹೆಜ್ಜೆಯ ಮೇಲೆ ಹೆಜ್ಜೆಯನ್ನಿಟ್ಟು ಮಗುವಿನ ಮುಂದೆ ಬಂದು ನಿಂತ ಕೂಡಲೇ ಮಗು ಚಪ್ಪಾಳೆ ತಟ್ಟುತ್ತಾ ಚಿಟ್ಟೆಗಳ ತೋರಿಸುತ್ತಾ ತಾಯಿಯ

ಕಂಕುಳವನ್ನೇರಿತು. ತಾಯಿಯ ಕಣ್ಣಲ್ಲಿ ಆನಂದ ಭಾಷ್ಪ. ಆಕೆ ಈ ಲೋಕದವಳಲ್ಲವೋ ಎಂಬಂತೆ ಶುಭ್ರವಾಗಿ ನಿಷ್ಕಳಂಕವಾಗಿ ಎಲ್ಲವನ್ನೂ ತೊರೆದ ಮುಕ್ತಳಂತೆ ಕಂಗೊಳಿಸಿದಳು. ಇನ್ನೇನು ಯಾವುದೋ ಅದೃಶ್ಯ ಲೋಕಕ್ಕೆ ಜಿಗಿಯುವಳೋ ಎಂಬಂತೆ ಆನಂದದಿಂದ ಪುಟಿಯತೊಡಗಿದಳು.

ತಾಯಿ ಮತ್ತು ಮಗುವಿನ ಮಿಲನವನ್ನು ನೋಡುತ್ತ ನಿಂತ ಗುಂಪು ತಾವು ನೋಡುತ್ತಿರುವುದು ಪ್ರೀತಿ ವಾತ್ಸಲ್ಯ ತುಂಬಿದ ವ್ಯಕ್ತಿಗಳೋ ಅಥವಾ ಪ್ರೀತಿ ವಾತ್ಸಲ್ಯ ಭಾವಗಳ ಮೊತ್ತವೋ ಎಂದು ಪ್ರತಿಮೆಗಳಂತೆ ನಿಂತೇ ಇದ್ದರು.

ಸ್ವಲ್ಪ ಹೊತ್ತಿನಲ್ಲಿ ಮಗುವಿಗೆ ತನ್ನ ಹಸಿವೆ ನೆನಪಾಗಿ ಕೈಗೆ ಎಟುಕುತ್ತಿದ್ದ ತಾಯಿಯ ಎದೆಗೆ ಬಾಯಿ ಹಾಕಿತು. ತಾಯಿ ಅಲ್ಲೇ ಒಂದು ಮರದ ಕೆಳಗಿನ ತಂಪು ನೆರಳಲ್ಲಿ ಮಟ್ಟಸವಾಗಿ ಚಕ್ಕಳಮಕ್ಕಳ ಕುಳಿತು ಹಾಲು ಕುಡಿಸತೊಡಗಿದಳು. ಗಂಟೆಗಟ್ಟಲೆ ಕಟ್ಟಿಕೊಂಡಿದ್ದ ಹಾಲು ಮಗುವಿನ ಬಾಯಿಯ ಬಟ್ಟಲಿಗೆ ನುಗ್ಗಿ ಹರಿಯತೊಡಗಿದ್ದೇ ತಾಯಿಯ ಜೀವಕ್ಕೇ ಹಾಯೆನಿಸಿತು.

ತಾಯಿ ಮಗು ಇಬ್ಬರನ್ನು ಅಲ್ಲೇ ಬಿಟ್ಟು ಗುಂಪು ಪಾರ್ಕಿನಿಂದ ಹೊರಬಂದಿತು. ಅಲ್ಲಿ ಮುಖ್ಯರಸ್ತೆಯಲ್ಲಿ ಸಾಲು ಸಾಲು ಹೋಟೆಲುಗಳು, ಹಣ್ಣು ತರಕಾರಿ ತಿಂಡಿ ಅಂಗಡಿಗಳಿದ್ದವು. ಇದ್ದಕ್ಕಿದ್ದಂತೆ ಬೆತ್ತಲಾಗಿದ್ದರಿಂದ ಏನೇನೋ ಕಲ್ಪಿಸಿಕೊಂಡು ಹೆದರಿ ಓಡಿದ್ದ ಅಂಗಡಿ ಹೋಟೆಲ್‌ಗಳ ಮಾಲೀಕರು ಗಡಿಬಿಡಿಯಲ್ಲಿ ಸರಿಯಾಗಿ ಬಾಗಿಲು ಹಾಕದೇ ಓಡಿದ್ದರು. ಹೇಳುವವರು ಕೇಳುವವರು ಇಲ್ಲದ ಅಂಗಡಿ ಹೋಟೆಲ್ಲುಗಳನ್ನು ಬಹಳ ಹೊತ್ತಿನಿಂದ ಗಮನಿಸುತ್ತಲೇ ಇದ್ದ ಆ ಗುಂಪಿನ ಮಂದಿಗೆ ತಮ್ಮ ಹಸಿವು ಗಮನಕ್ಕೆ ಬಂತು. ಅವರು ಎಲ್ಲಾ ತರಹದ ತಿಂಡಿ ತಿನಿಸುಗಳನ್ನು ತಟ್ಟೆ ಪಾತ್ರೆ ಸಮೇತ ಪಾರ್ಕಿಗೆ ತಂದರು. ಹಣ್ಣಿನಂಗಡಿಗೆ ನುಗ್ಗಿ ಬುಟ್ಟಿಗಟ್ಟಲೆ ಹಣ್ಣು ತಂದರು. ತಾಯಿ ಎದುರು ಹಣ್ಣು ತಿಂಡಿಯನ್ನಿಟ್ಟು ತಾವೂ ಕುಳಿತು ಹೊಟ್ಟೆ ಬಿರಿಯುವಂತೆ ಉಣ್ಣತೊಡಗಿದರು. ಕೈಕಾಲುಗಳಲ್ಲಿ ಆಡುತ್ತಿದ್ದ ನಾಯಿಗಳಿಗೆ ತಿಂಡಿಯ ರಾಶಿಯನ್ನೇ ಸುರಿದರು. ದನಕರುಗಳಿಗೆ ತರಕಾರಿ ಹಣ್ಣು ಕಾಳುಗಳನ್ನು ಮನಸೋಯಿಚ್ಛೇ ಸುರಿದರು. ದನಕರುಗಳು ನಾಯಿಗಳು ಇದೇನು ಕನಸೋ ನನಸೋ ಎಂಬುದನ್ನು ಖಚಿತಪಡಿಸಿಕೊಳ್ಳಲೋ ಅಥವಾ ತಮಗಾದ ಸಂತೋಷವನ್ನು ವ್ಯಕ್ತಪಡಿಸಲೋ ಎಗರೆಗರಿ ಬಿದ್ದವು.

ಇಡೀ ವಾತಾವರಣ ಹಬ್ಬದ ಸಂಭ್ರಮವಾಗಿ ಮಾರ್ಪಟ್ಟಿತು. ಅಲ್ಲಿದ್ದವರೆಲ್ಲಾ ಹಸಿವು ಹಿಂಗಿಸಿಕೊಳ್ಳಲು ಉಣ್ಣುವುದರಲ್ಲಿ ಮಗ್ನರಾದರು. ಹಾಲು ಹೀರಿದಂತೆ ಮಗುವಿನ ಹೊಟ್ಟೆ ತುಂಬುತ್ತಿರಲು, ಅದು ತಾಯಿಯ ತೊಡೆಯ ಮೇಲೆ ಸಂತೃಪ್ತ ಭಾವದೊಂದಿಗೆ ಯಾವುದೋ ಲೋಕದ ತಮಾಷೆಗೆ ನಗುತ್ತಾ ನಿದ್ದೆಗೆ ಜಾರತೊಡಗಿತು.

ತನ್ನ ಮಗುವನ್ನು ಹುಡುಕಿಕೊಡಲು ಯಾರೂ ಊಹಿಸಲು ಸಾಧ್ಯವಿಲ್ಲದಂತೆ ಒತ್ತಾಸೆಯಾಗಿ ನಿಂತ ಈ ನಿರ್ಗತಿಕರ, ಕಡೆಗಣನೆಗೆ ಒಳಗಾದವರ ಗುಂಪು ಶತಮಾನದ ಹಸಿವನ್ನು ನೀಗಿಸಿಕೊಳ್ಳುತ್ತಿದೆಯೇನೋ ಎಂಬಂತೆ ಹಂಚಿ ಊಟ ಮಾಡುವುದನ್ನು ಕಂಡು ತಾಯಿಗೆ ಧನ್ಯತೆಯ ಭಾವ ಮೂಡಿತು. ಈ ಗುಂಪು ಬೇರೆಯಲ್ಲ. ತನ್ನ ಮಗು ಬೇರೆಯಲ್ಲ ಎನಿಸಿತು. ತಾಯಿಯ ಕಣ್ಣಲ್ಲಿ ನೀರು ಜಿನುಗತೊಡಗಿತು. ಪಕ್ಕಕ್ಕೆ ಒತ್ತರಿಸಿದವರನ್ನು ಸಮಾಜ ತನ್ನ ತೆಕ್ಕೆಗೆ ತೆಗೆದುಕೊಳ್ಳದೇ ಮುಕ್ತಿಯಿಲ್ಲ ಎಂದೆನಿಸಿತು. ಇದೇ ಸುದಿನ ಎಂಬ ಮಾತು ಅವಳೆದೆಯಲ್ಲಿ ಮಾರ್ದನಿಸತೊಡಗಿದ್ದೇ ಬೆತ್ತಲೆಯಾಗಿದ್ದ ಎಲ್ಲರ ಮೈಮೇಲೆ ಸರಳ ಸುಂದರವಾದ ಬಟ್ಟೆಗಳು ಪ್ರತ್ಯಕ್ಷವಾಗತೊಡಗಿದವು. ಮಗುವಿನ ಬಟ್ಟೆಯ ಮೇಲೆ ಹೂಗಳು ಮತ್ತು ಹಾರಾಡುವ ಚಿಟ್ಟೆಗಳಿದ್ದವು.

ಪಾರ್ಕಿನಲ್ಲಿದ್ದ ಎಲ್ಲರಿಗೂ ಬಟ್ಟೆಗಳು ಪ್ರತ್ಯಕ್ಷವಾಗತೊಡಗಿದಾಗಷ್ಟೇ ವಿಸ್ಮೃತಿಗೆ ಸಂದಿದ್ದ ಅವರ ಅದುವರೆಗಿನ ಬೆತ್ತಲೆ ನೆನಪಾದದ್ದು!

❖

(ಪ್ರಜಾವಾಣಿ – ಜೂನ್ 9, 2013)

ಗರ್ದಿಗಮ್ಮತ್ತ

ಬಸವಣ್ಣೆಪ್ಪ ಕಂಬಾರ

ಮೂರಿಪ್ಪತ್ತರ ಹದಿನೈದು ಯುಗಾದಿಗಳನ್ನು ನೋಡಿದ್ದ ಮುತ್ತವ್ವಳಿಗೆ ಹೊತ್ತ ಹೊಂಡಗುಡದ, ನಸಿಕಿನ್ಯಾಗ ಮೊಮ್ಮಗನ ಕಿರಿಕಿರಿ ಬೆಳಗಿನಿಂದ ತಲಿಬ್ಯಾನಿ ತರಿಸಿ ಬಿಟ್ಟಿತ್ತು. ಈಗ ಸುಮ್ನಾದಾನ, ಇನ್ನಟಕ ಸುಮ್ನಾದಾನ ಅಂತ ನೋಡಿ ನೋಡಿ ಸಿಟ್ಟಿಗೆದ್ದಳು.

"ಹುಚ್ಚನನ್ನ ಹಾಂಟ್ಯಾ.. ಹರ್ಯಾಗ ಎದ್ದ ಕ್ಯಾಂವ ಮಾರಿ ಮಾಡಿಕೊಂಡು ವೊಂಯ್ ಅಂತ ಸುತಿ ಹಿಡದದಿ, ಎದಕ ಬರೋದ ಹೋಗ ನಿನ್ನ ಅಕಲಗೇಡಿ ಬಾಡ್ಯಾ, ನಿನ್ನ ಬಾಯಿ ಎಂತಾದಿದ್ದಿತ ವದ್ರಿ ವದ್ರಿ ಗಂಟಲಾ ನರಾ ಹರಕೊಂಡ ಹ್ವಾದು ನೋಡು ಯಾಕ ಹಿಂಗ ಗುಂಗಿ ಹುಳದಂಗ ಗುಂಯ್ ಅಂತದಿ..? ಒಂದ ಸಾಲಿ ಅನ್ನಾವಲ್ಲ ಸಮುದರ ಅನ್ನಾವಲ್ಲ ಬರೀ ಪಂಗಾ ಪಂಗಾ ತಿರ್‍ಕ್ಕೊತ ತಿರ್‍ಗಕೋತ ಹ್ವಾದೆನಂತಿ, ಸಿಂವಿಯುಂಡಿದಿ, ಸಾಲಿ ಹೆಂಗ ನ್ಯುವಳ ಅನಿಸಿತ ನಿನಗಾ..?

"ಅಂತ ಮೊಮ್ಮಗನಿಗೆ ಹಿಡಿಶಾಪ ಹಾಕುತ ಮೂಲೇಲಿರುವ ಕಸಬರಿಗೆಯಿಂದ ಅಂಗಳ ಉಡುಗಲು ಸಜ್ಜಾದಳು ಕಿಟ್ಟಿಯ ಅಜ್ಜಿ ಮುತ್ತವ್ವ, ಸಾಲಿಯೊಳಗ ಗರ್ದಿಗಮ್ಮತ್ತ ಬಂದೈತಿ ದುಡ್ಡಕೊಡು ನಾನು ನೋಡಬೇಕು ಅಂತ ಹಠ ಹಿಡಿದಿದ್ದ.

"ಈ ಶೆಡಗರಕ ಮದಿವಿ ಸಂಸಾರ ನನಗ ಬೇಕಾಗಿತ್ತಾ..? ಅಂತ ಚಿಂತಿಸಿದ ಮುತ್ತವ್ವ,

"ಆ ಜೊಗ್ತಿ ಜೊಗ್ಯಾ ಊರಬಿಟ್ಟು ಹೋಗುವಾಗ ನಿನ್ನ ನನ್ನ ಹಂತ್ಯಾಕ ಬಿಟ್ಟ ಹ್ವಾದು ಹಿಂಬಾಲಕ ತಮ್ಮ ಮಕ್ಕಳಾ ಬ್ಯಾಸರಾಗುವಕ್ಕೆಲ್ಲಾ ದೇವರ ಮಕ್ಕಳಾದ್ರು ಯಾಕ ಕೊಡತಾನೋ ಎನೋ" ಅಂತ ಊರಿಂದ ಊರಿಗೆ ದುಡಿಯಲು ಹೋದ ಮಗ ಸೊಸೆಯನ್ನು ಬಿಡದೆ ದೂಳಿಪಟ ಮಾಡಿದಳು. ಕಿಟ್ಟಿ ಇವತ್ತ ಯಾವದ ಪರಿಸ್ಥಿತಿಯೊಳಗ ಸಾಲಿಗಿ ಹೋಗಬೇಕಾಗಿತ್ತು, ಖರೇಂದ್ರ ಇಂದ ಗರ್ದಿಗಮ್ಮತ್ತ ತೋರಿಸಾಂವ ಬಂದಿದ್ದ, ಹಿಂಗಾಗಿ ಸರ್‍ಗ್ನೋಳ ನಿನ್ನಿ ಸಾಲಿ ಬಿಟ್ಟ ಬರುವಾಗ ಹುಡುಗೋರಿಗೆಲ್ಲ ಜನಗಣಮಣ ಹಾಡೊದಕ್ಕೆ ಗ್ರೌಂಡಿನಾಗ ಸೇರಿದಾಗ ಹುಲಿಗೆಪ್ಪ ಮಾಸ್ತರ ಹೇಳಿದ್ದರು "ನೊಡ್ರಲೆ ನಾಳಿ ನಮ್ಮ ಸಾಲಿಗಿ ಗರ್ದಿಗಮ್ಮತ್ತ ತೋರಿಸಲಾಕ ಅಂತ ಒಬ್ಬರು ಇಜ್ಯಾಪೂರ ಜಿಲ್ಲಾದವರು ಬರಾತಾರ, ಅದಕ್ಕ ಬೆಳಿಗ್ಗಿ ಬರುವಾಗ ಎಲ್ಲಾರು ಐದೈದ ರುಪಾಯಿ ತಗೊಂದ ಬರ್ರಿ, ಹಾಂಗ ಕೈ ಬೀಸಿಗೊಂತ ಬಂದ್ರ

ಯಾರು ತೊರಿಸಾಂಗಿಲ್ಲ, ಇದೇನು ಕೌಜಲಗಿ ನಿಂಗವ್ವನ ಪಾರಿಜಾತ ನಾಟಕಾನು ಅಲ್ಲ ತಿಳಿತಿಲ್ಲೊ" ಅಂತ ಗದರಿಸುವ ದನಿಯೊಳಗ ಹೇಳಿದ್ದರು. ಇವತ್ತ ನೋಡದಿದ್ದರ ಮುಂದ ಯಾವಾಗು ಸಿಗಾಂಗಿಲ್ಲ ಅಂತ ಆಸೆ ಬ್ಯಾರೆ ತೋರಿಸಿಬಿಟ್ಟ ಕೂಡ್ಲೆ ಹುಡುಗರಿಗೆ ಮಂಗ್ಯಾಗ ಸೆರೆ ಕುಡಿಸಿದಂಗಾಯತು. ಕಿಟ್ಟಿಗಂತು ಅದರೊಳಗ ಎನ ಐತಿ..? ಎನು ತೊರಿಸ್ತಾರು ಅನ್ನುವ ಕುತುಹಲ ಹೆಚ್ಚಾಗಿ ಅದ ವಿಚಾರದೊಳಗ ಮನಿಗಿ ಬಂದಿದ್ದ. ಅಲ್ದ ಸಾಲಿಯೊಳಗ ಎಲ್ಲಾರು ನೋಡುವಾಗ ತಾನೊಬ್ಬ ನೋಡದಿದ್ದರ ಹುಡುಗರೆಲ್ಲ ಹಂಗಿಸಾಕ ಶುರುಮಾಡತಾರ, ಬೆಳಮಗಿ ನಾರಾಣ ಸಿಂಧೆ ಮಾಸ್ತರ "ಹುಚ್ಚ ಹಡ್ಸಿ ಮಗನ, ಚುನುಮರಿ ಬಟಕಾಡ್ಲಿ ತಿನ್ನಾಕ ರೊಕ್ಕ ಇರತಾವ.. ಇಂತಾದಕ್ಕೆಲ್ಲಾ ರೊಕ್ಕಿಲ್ಲಾ ಅಂತ ನ್ಯಾಯ ಮಾಡಕೊಂತ ನಿಂತಿ, ನಿಮ್ಮ ಆಯಿ ಕಡಿಗಿ ಐದ್ಯೆದ ರುಪಾಯಿ ಇಸಗೊಂಡ ಬಾ ಮತ್ತ.." ಬೆದರಿಸಿದ್ದರು. ಮನೀಯ ಆಜೂಬಾಜೂ ಹುಡುಗರೆಲ್ಲ ಅದಾ ರಸ್ತಾ ಹಿಡಕೊಂಡ ಹೊಂಟಿದ್ದರು. ಓಣ್ಯಾಗಿನ ಕೆಲವ ಹುಡುಗರು ಕಿಟ್ಟಿಯನ್ನೊಮ್ಮಿ ನೋಡಿ ಸುಮ್ಮನೆ ಹೋದರೆ, ಇನ್ನು ಕೆಲವು ಹುಡುಗರು "ಕಿಟ್ಯಾ, ಗರ್ದಿಗಮ್ಮತ ನೋಡಾಕ ನೀ ಬರಾಂಗಿಲ್ಲೇನು..?" ಅಂತ ಕೇಳಿ ಹೋದರು. ತ್ವಾಡೆ ಹುಡುಗರು ಅದರಾಗ ಹುಂಬ ಇದ್ದುದು ನಗಚಾರಿಕಿ ಮಾಡಕೊಂತ ಅನುಕಿಸಿದರು. ಕಿಟ್ಟಿ ಅವರೆಲ್ಲರ ಮಾತಿಗಿ ಎನೊಂದು ಉತ್ತರ ಕೊಡಲು ತಿಳಿಯದೆ ಅವರನ್ನು ಅವರು ಹಾಕಿಕೊಂಡ ಬಟ್ಟೆಗಳನ್ನು ಅವರು ದಾಟಿಹೊದ ರಸ್ತೇಯನ್ನೆ ಗಮನಿಸುತ್ತ ನಿಂತಿದ್ದ. ಇನ್ನು ಕೆಲವು ಹುಡುಗರು ಪ್ರಾರ್ಥನಾ ಮುಗಿದ ಕೂಡ್ನ ಗರ್ದಿಗಮ್ಮತ ಶುರುಮಾಡತಾರ, ಲಗ್ಗ ಹೋಗಬೇಕು, ನಂಬರ ಹಚ್ಚಬೇಕು.. ಅಂತಂದು ಯಾವ ಕಡೇಗೂ ಗಮನಿಸದೆ ಬಿರಬಿರನೇ ಶಾಲೆಯತ್ತ ಹೆಜ್ಜೆ ಹಾಕಿದರು. ಶಾಲೇಗೆ ಹೋಗುವ ಹುಡುಗರನ್ನು ನೋಡುತ ಅಳುವದನ್ನು ಮರೆತಿದ್ದ ಕಿಟ್ಟಿಗೆ ಶಾಲೆಗೆ ಹೋಗುವವರು ಯಾರು ಕಾಣದಾದ ಮೇಲೆ ಸಿಟ್ಟು ತಿರುಗಿ ಬಂತು. ಮತ್ತೊಮ್ಮೆ ದುಕ್ಕ ಉಕ್ಕಳಿಸುತ ಮಗದೊಮ್ಮಿ ಸೊಸರನೆ ಮೂಗೇರಿಸಿಕೊಂಡು ಕೈಯೊಳಗೆ ಹಿಡಿ ಮಣ್ಣು ಹಿಡಿದುಕೊಂಡು ಮಣೆಯ ಬಾಗಿಲಿಗೆ ಒಗೆಯಲು ಸಜ್ಜಾಗಿನಿಂತು,

"ಆಯೀ ರೊಕ್ಕಾ ಕೊಡ್ತಿಯೋ ಇಲ್ಲೋ.. ಎಂದು ಏರುದನಿಯಲ್ಲಿ ಗದರಿದ. ಮನೇ ಅಂಗಳ ಉಡುಗಿ ಪಾತ್ರೇ ತೊಳೆಯಲು ಸಜ್ಜಾಗುತಿದ್ದ ಮುತ್ತವಜ್ಜಿ ಮುಸುರೆ ನೀರನ್ನು ಹೊರಕ್ಕೆ ಚಲ್ಲಿ "ನೀ ಎಷ್ಟೋತ ಅಳತಿ ಅಳ.. ನನ್ನ ಹಂತ್ಯಾಕ ಒಂದ ದುಡ್ಡ ಇಲ್ಲ.. ತಿಳ್ಕೋ.. ಇಲ್ಲೇನ ರೊಕ್ಕದ ಗಿಡಾ ಐತಿ..? ಬೆನ್ನ ಹತ್ತದಿ ನನ್ನ ಮನ್ಯಾಗಿನ ಗರ್ದಿಗಮ್ಮತ್ತ ತುಂಬಿ ಉಳ್ಳ್ಯಾಡಾತೈತಿ, ಯಾಂವ ನೊಡತಾನ ಎನ ನೋಡು.. ಎನರ ತಿಂದರ ತಿನ್ನು, ಇಲ್ಲದಿರ ನೀ ಸಾಲಿಗಿ ಹೊಗದಿರ ಬಿಡವಲ್ಯಾಕ ಹೋಗು, ಎಲ್ಲಿ ಹಾಳಾಗಿಹೋಗತಿ ನೋಡ.." ಅಂತ ಶಪಿಸಿದಳು. ಕಿಟ್ಟಿಗೆ ಬೇರೆ

ದಾರಿಯಿರಲಿಲ್ಲ. ಪಕ್ಕದ ಮನಿ ರಾಮು ಕಾಕಾನೂ ಬೆಳಿಗ್ಗೆ ಬೆಳಿಗ್ಗೆನೆ ಪಕ್ಕದ ಊರಿಗೆ ಹೋದಾಂವ ಹೊಡಮಳ್ಳಿ ಬಂದಿರಲಿಲ್ಲ. ಹಿಂದಿನ ಮನಿ ನೀಲವ್ವ ಕಾಕಿನೂ ಸಂತಿಗಿ ಅಂತ ಹೋಗಿದಾಳ, ಅಕೀನು ಇಲ್ಲ. ಹೀಂಗಾಗಿ ಕರುಣೆ ತೋರಿಸಿ ದುಡ್ಡು ಕೊಡಲು ಮುಂದಾಗುವ ಯಾವ ಕೈಗಳು ಅಲ್ಲಿ ಇರದ ಕಾರಣ ತನ್ನಜ್ಜಿಯನ್ನು ಹೊರತುಪಡಿಸಿ ಬೇರೆ ಗತಿಯಿಲ್ಲವೆಂದು ಅರಿತ ಕಿಟ್ಟಿ ತನ್ನ ಬೇಡಿಕೆಯನ್ನು ಮತ್ತಷ್ಟು ಜೋರುಮಾಡಿ ಅಳಲಾರಂಭಿಸಿದ. ಮುತ್ತವ್ವ ಮುಸುರೆ ಪಾತ್ರೆಗಳನ್ನು ಅಂಗಳಕ್ಕೆ ತಂದಿಟ್ಟುಕೊಂಡು ಅವನ್ನು ತಿಕ್ಕಿ ಬೆಳಗಲು ಕುಳಿತಳು. ತನ್ನ ಕೊಪವನ್ನು ಪಾತ್ರೆಯೊಂದರ ಮೇಲೆ ತೋರಿಸುತ "ಅಳಾಕಂತ್ಲೇ ಹುಟ್ಟಿ ಬಂದದಿ ಬಾ ನೀ.. ನಿನ್ನ ಹಲ್ಲಿಗಿ ನನ್ನ ಹಾಂಟ ಹನಿಸ್ಲೀ, ಸನ್ನಾಂವ ಸನ್ನಾಂವ ಅಂತ ಮಯಾ ಮಾಡಿದರ ನನ್ನ ಮಚ್ಚಿಲೆ ಬಡ್ಯಾಕ ನಿಂತದಿ.." ಅಂತ ಬಯ್ದಳು. ಆದರು ಕಿಟ್ಟಿ ಮಾತ್ರ ಅವಳ ಯಾವ ಮಾತನ್ನು ಕೇಳಿಸಿಕೊಳ್ಳದೆ ದುಡ್ಡು ಕೊಡುವವರೆಗೂ ನಾ ಬಿಡಲ್ಲ ಅಂತಾ ಹಟಾ ಹಿಡಿದವನ ಹಾಗೆ ಅಳುತ ರಂಪ ಮಾಡಲು ಶುರು ಮಾಡಿದ. ದಾರಿ ಹಿಡಿದು ಹೋಗುವ ಜನರು ಕಿಟ್ಟಿಯನ್ನು ನೋಡಿ "ಯಾಕೋ ಕಿಟ್ಟಿ ಅಳಾಕತ್ತದಿ, ಸಾಲಿಗಿ ಹೋಗಾಂಗಿಲ್ಲೇನೋ.. ಮಕಟ್ಯಾ.. ಬರಿ ಜಗಳಾ ಮಾಡಕೊಂತ ಮುದಕಿ ಜೀಂವಾ ತಿನಕೊಂತ ಇರತಾನ ಹುಚ್ಚ ಹಡಿಸಿಮಗಾ.. ಎದ್ದ ಸಾಲಿಗಿ ಹೋಗ ರಗಡ ಶ್ಯಾನ್ಯಾ ಅದಿ.. ಮಣ್ಣಾಗ ಕುಂತದಿ, ನಿನ್ನ ಕೈ ಕಾಲ ನೊಡಕೊ, ನೀ ಯೇನು ಸಣ್ಣಾಂವಾ.." ಅಂತ ಒಬ್ಬರು ಅಂದರ, ಮಗದೊಬ್ಬರು ಬಂದು,

"ಯಾಕ ಚಿಗವ್ವ ಹುಡುಗ ಹಿಂಗ ನ್ಯಾಯ ಮಾಡಾತಾನ, ಏನರ ಕೊಟ್ಟ ಸಾಲಿಗಿ ತಿರುವ ಬಾರದೇನ.. ಅತ್ತ ಸುಳ್ಳ ಓನ್ಯಾಗ ದುಂಬಡಿ ಮಾಡಕೊಂತ ತಿರಗತಾವ" ಅಂತ ಮತ್ತೊಬ್ಬರು, ಹಿಂಗ ಮುತ್ತವಳನ್ನು ಪ್ರಶ್ನಿಸಿದರು. ಮುತ್ತವ್ವಜ್ಜಿಗೆ ಎಲ್ಲಾರಿಗೂ ಇವನ ಕತಿ ಹೇಳಿ ಹೇಳಿ ಸಾಕಾಗಿತ್ತು. ಹಿಂದಿನ ಮನಿ ರಮಜಾನ ಸಾಹೇಬ್ರು ಬಂದು "ಯಾಕ ಅಳತಿದಿಯೋ ಕಿಟ್ಟಿ, ಸಾಲಿಗಿ ಹೋಗಂಗಿಲ್ಲೇನು..? ಬಾಡಕಾವ.. ವಪ್ಪತ್ತ ಸಾಲಿ ಐತಿ ಇಂದ ಇವತ್ತು ಇದ ಹಾಡಾ ನಿಂದ..? ಯಾವಾಗ ಇದ ರಾಡಿ ಮುತ್ತವ್ವ.. ಚಿಗವ್ವ ಹುಡುಗ ವಾಂಡ ಬಾಳ ಆಗೇತಿ, ನಾಕ ಲತ್ತಿ ಕೊಡು ಅಂವಗ" ಅಂದ.

ಮುತ್ತವ್ವ ಕೈಯಾಗಿನ ಬಾಂಡೆ ತೊಳೆಯೊದ ಬಿಟ್ಟು "ಬೈಯಾ ಅವನ ಮುಕಳಿ ಕಡಿಯಾಕತ್ಯೆತಿ, ಅದಕ ಮಾಡಾತಾನ ರೊಕ್ಕಾ ಕೊಡ ಅನತೈತಿ, ಬರೀ ಇಲ್ಲಂದ್ರ ಕೇಳವಲ್ಲ. ಇಟಗೊಂಡ ನಾಯೇನ ಇಲ್ಲ ಅಂತಿನೇನ ಹೇಳಾ.. ಮೊನ್ನಿ ಬಸನಾರ ಹೊಲಕ ಕೆಲಸಕ ಹೊಗಿದನಿ, ಅವರು ಇನ್ನು ಪಗಾರ ಕೊಟ್ಟಿಲ್ಲ, ಇನ್ನ ಇವರವ್ವ

ಅಪ್ಪ ರೊಕ್ಕಾ ಕಳಿಸೊದಂತು ಬಿಟ್ಟ ಬಿಟ್ಟಿದಾರ. ಹೊಟ್ಟಿ ತುಂಬೋದ ಕಷ್ಟ ಆಗೇತಿ. ನನ್ನ ಹೊಟ್ಟಿಗಿ ಬೇಕಾದ್ರ ನಾನ ದುಡಿಬೇಕು ತಿನ್ನಬೇಕು.. ನನಗರ ಯಾರ ಅದಾರ ಹೇಳು..? ಗಂಡ ಮಗಾ ಅಂತ ಇದ್ದಾಂವ ಹ್ಯಾಣ್ತಿನ ಬೆನ್ನಹಚಗೊಂಡ ಊರಬಿಟ್ಟ ಹ್ವಾದ. ಊರಾಗ ಅವ್ವ ಅದಾಳ ಇಲ್ಲಾ ಸತ್ತಾಳ ಅಂತ ಇಚಾರ ಮಾಡಾಕು ಒಂದ ಕಾಗದಾ ಬರ‍್ಯಾಕು ಸುಟಗಾ ಇಲ್ಲ. ಅವಗ ಮಕ್ಕಳಿಗಿ ಇಟ್ಟ ಬ್ಯಾಸರಾಗಿ ಯಾಕ ಬದಿಕಿರಬೇಖು ಹೇಳಪಾ..? ನಾನ ಯಾಡ ಮನಿ ಬಿಕ್ಷಾ ಬೇಡೆರ ತಿಂದೇನ, ಈ ಹುಡುಗ ಬೆಳಿವ ವಯಸ್ಸಿನದು, ಮೂರೇಳೆ ಹೊಟ್ಟಿಗಿ ಬೇಕೊ ಬ್ಯಾಡೊ ನೀನ ಹೇಳ. ಇದರ ಕರ್ಮಾ ನೊಡಾಕ ಆಗಲಾಕ ಇನ್ನೊಬ್ಬರಲ್ಲಿ ದುಡಿಲಾಕ ಹೊಂಟೇನಿ. ನಾ ಉಪವಾಸಾ ವನವಾಸ ಇದ್ದೇನ ಬಿಡ. ಈ ಹುಡುಗ ತಿನ್ನು ಹುಡುಗರ ಬಾಯಿ ನೋಡಕೊಂತ ನಿಂತ್ರ ಚೆಂದೇನ ಹೇಳಪಾ. ಇದಕರ ಬೇಕು ಬ್ಯಾಡಾ ಅಂತ ತಿಳದರ. ನಾಕ ದುಡ್ಡ ಕಳಿಸಬೇಕನ್ನುವ ಇಚಾರಿಲ್ಲ ಮಗಾ ಸೊಸಿಗಿ, ಮಗಲಾಗ ಹೆಂಡರ ಬರಾನ ಹಿಂದಿನವ್ರ ಹೆಂಗ ಕಾಣತಾರ ಹೇಳ ಯಣ್ಣಾ.." ಅಂತ ಕಣ್ಣೀರ ಸೀಟಿಕೊಂಡು ಮಗ ಸೊಸೆ ಮೇಲಿನ ಸಿಟ್ಟನ್ನು ಹೊರಹಾಕಿದಳು.

"ಅಲ್ಲಾ ರೊಕ್ಕ ಯಾಕ ಬೇಕಂತ ಇವಗ..? ಉಂಡಾನಿಲ್ಲೋ..?" "ಯಣ್ಣಾ ತಿನ್ನುವಂಗ ತಿಂದು ಉಂಡ.. ಮತ್ತ ರೊಕ್ಕ ಅಂತ ಅಂತೈತಿ.. ಹೊಲಸ ಹುಡುಗ ಅದೇನೊ ಸಾಲ್ಯಾಗ ಏನೋ ಬಂದೈತಿ ಅಂದ್ನವಾ.. ಈ ಮಾಸ್ತರಗೋಳ ಎಲ್ಲಿ ಸುಮ್ನಿರತಾವ.. ಹೂಂ.. ಅದ ಹೆಂತಾದೋ ಗರ್ದಿಗಮ್ಮತ್ತ ತರಿಸಿದಾರಂತ, ಅಲ್ಲಿ ಕುತಗೊಂಡ ರೊಕ್ಕಾ ತಗೋಂಬರ‍್ರ್ಯೋ ಅಂತ ಹೇಳಿ ಕಳಿಸ್ತಾವ, ಹಂಗ ನಿನ್ನಿ ಚೆಂಜಿಮಾಡಿ ಹೆಳಿತ್ತ, ಈಗ ಬೆಳಿಗ್ಗಿನಿಂದ ಸುತಿ ಹಿಡದಾನ ನೋಡು, ಎಲ್ಲಾರ ರೊಕ್ಕಾ ತಗೊಂಬರ‍್ರಿ ನೋಡ್ರಿ ಅಂತ ಹೇಳಿದಾರಂತ ಅದಕ ಬೇಳಿಗ್ಗಿ ಎದ್ದಾಗಿನಿಂದ ಒದರಾಕ ಚಾಲು ಮಾಡಿದಾನ.." ಅಂದಳು.

"ಎಯ್ ಅದನ್ನೇಲ್ಲಾ ಎನ ನೋಡತಿ, ಅದರಿಂದೇನು ಹೊಟ್ಟಿ ತುಂಬತೈತಿ..? ಹೋಗ.. ಹೋಗ.. ಮುತ್ತವ್ವ ಕೊಡಬ್ಯಾಡ. ಇವಗ ಹುಡುಗೊರಿಗು ಬುದ್ದಿಯಿಲ್ಲಾ ಮಾಸ್ತರಿಗೋಳಿಗು ಬ್ಯಾಡಾ..?" ಎನುತ ಲುಂಗಿ ಮೇಲೆರಿಸಿಕೊಳ್ಳುತ ಗಡ್ಡ ನೀವಿಕೊಳ್ಳುತ ಬಗಲಕಿಸೆಯೊಳಗೆ ಕೈಯಾಡಿಸಿಕೊಂಡು ನೋಡಿದ. ಎಂಟಾನೆ ಸಿಕ್ತು.

"ತಗೋ.. ಎಂಟಾನೆ ಐತಿ.. ಹಿಡಿ. ತಗೊಂದ ಸಾಲಿಗಿ ಹೋಗು" ಎನುತ ಅವನ ಕೈಗಿತ್ತ. ಕಿಟ್ಟಿ ಅದನ್ನು ತಿರಿಗಿಸಿ ನೋಡಿದ. ಮುತ್ತವಜ್ಜಿಯು ನಡುವ ಬಾಯಿ ಹಾಕಿ,

"ಇಲ್ಲಿ ತಗೋ.. ಮತ್ತ ಹೋಗ ಬಾ ಸಾಲಿಗಿ, ಹೋಗ ಬಾ.. ಇನ್ನರ.. ಏಳು.." ಅಂತ ಕರೆದಳು. ಆದರು ಕಿಟ್ಟಿಗೆ ಸಮಾಧಾನವಾಗಲಿಲ್ಲ.

"ಇದ ಬರೀ ಎಂಟಾನೆ ಐತಿ.. ನಂಗೇನ ಬ್ಯಾಡಾ ಹೋಗ.." ಅಂದ.

"ಅಯ್..! ಇನ್ನೇಷ್ಟ ಬೇಕು ಮತ್ತ..?" ಗದರಿಕೆಯಿಂದ ಎರುದನಿಯಲ್ಲಿ ಕೇಳಿದಳು ಮುತ್ತವ್ವ..

"ಐದ್ರೂಪಾಯಿ ಬೇಕು.."

"ನನ್ನ ಹಂತ್ಯಾಕ ಇಷ್ಟ ಅದಾವ.. ಬೇಕಾದ್ರ ತಗೋ ಬ್ಯಾಡಾದ್ರ ಬಿಡು.." ಅಂತಂದು ರಮಜಾನ ಸಾಹೆಬ ಗಡ್ಡ ನೀವಿಕೊಳ್ಳತೊಡಗಿದ.

"ಈಗ ಇದನ ತಗೋಂದ ಹೋಗ ಬಾ. ನಾಳಿ ಉಳಕಿದ್ದು ನಮ್ಮ ಆಯಿ ತಂದ ಕೊಡತಾಳ ಅಂತ ಹೇಳು ಹೋಗ.. ನಮ್ಮ ಅಪ್ಪ ಶಾಣ್ಯಾ ತಗೊಪಾ.." ಅಂತ ರಮಿಸುತ ತಾನು ಎದ್ದು ಬಂದು ಸಮಾಧಾನ ಪಡಿಸಲು ಯತ್ನಿಸಿದಳು. ಕಿಟ್ಟಿಗೆ ಅಪಮಾನವಾದಂತಾಯಿತು. ತನ್ನ ಬೇಡಿಕೆ ಹಣ ಬಾರದಿದ್ದಾಗ ಅವನಿಗೆ ರೋಷದ ಜೊತೆಗೆ ಹತಾಷೆ, ಸಂಕಟ, ಉಲ್ಬಣಗೊಂಡು ತಲೆ ಗಿರ್ರ್ ಅಂತು. ಅಂಗಳದಲ್ಲಿ ಕಾಲು ತಿಕ್ಕುತ ಧೂಳು ಎಬ್ಬಿಸುತ, ಇದಕ್ಕಿನ್ನಾ ಜೋರಾಗಿ ರಂಪ ಮಾಡಿ ಜೋರುದನಿಯಲ್ಲಿ ಅಳಲು ಶುರುಮಾಡಿದ. ರಾಕ್ಷಸದಂತಾ ದೊಡ್ಡ ಬಾಯಿತೆರೆದು ಹಾಂ.. ಅಂತ ಅಳತೊಡಗಿದ. ರಮಿಸಿ ಸಮಾಧಾನ ಮಾಡಲು ಬಂದ ಮುತ್ತವಳನ್ನು ಜೋರಾಗಿ ತಳ್ಳಿದ. ಕೈ ಕೊಸರಿದ ಕಿಟ್ಟಿಯ ಕೋಪದ ಮುಂದೆ ಮುತ್ತವ್ವ ಮೆತ್ತಗಾದಳು. ಅವಳಿಗೆ ಕೋಪ ದುಕ್ಕ ಎರಡು ಉಕ್ಕಿ ಬಂದವು..

"ನೀ ಹಿಂಗ ಮಾಡೊದಾದ್ರ ನಿಮ್ಮವ್ವ ನಿಮ್ಮಪ್ಪ ಇದ್ದಲ್ಲಿಗಿ ಹೋಗಬಿಡು, ನನ್ನ ಹಂತ್ಯಾಕ ಇರಬೇಡ ನೀ.." ಅಂತ ರೋಪ ಹಾಕಿ ಬೆದರಿಸಿದಳು. ಕಿಟ್ಟಿ ಇದಕ್ಕೆಲ್ಲ ಕ್ಯಾರೇ ಅನಲಿಲ್ಲ. ಅನಿವಾರ್ಯಕೆ ಮುತ್ತವ್ವ ಮತ್ತೆ ಮನಸ್ಸು ಕರಗಿಸಿಕೊಂಡು ಮೆತ್ತಗಾಗುತ..

"ಇಲ್ಲ ಅಂದ್ರ ಎಲ್ಲಿಂದ ತರ್ಲಿ.. ಹೇಳು.. ಯಾರದಾರ ಮನ್ಯಾಗ ನನ್ನ ಚಾಕ್ರಿ ಇಟಗೊತಾರೇ ಕೇಳಿ ಇಡ.. ನಡಿ ನಿನಗ ಎಸ್ಟ ರೊಕ್ಕಬೇಕೊ ಅಸ್ಟ ಇಸಗೊಂಡ ಗರ್ದಿಗಮ್ಮತ್ತ, ಮಂಗ್ಯಾನಾಟ ನೊಡಕೊಂತ ಹೋದಿಯಂತ. ನಾ ಅಲ್ಲೇ ದುಡುದ ದುಡುದ.. ಸಾಯತಿನಿ.. ನೀ ಚೈನಿ ಮಾಡಕೊಂತ ಹೋಗು" ಅಂತಂದು ಕಣ್ಣೀರ ತಂದಳು. ಮಾತು ತಡವರಿಸಿ ತುಂಡಾದವು, ದನಿ ಗದ್ಗದಿತವಾಗಿ ಮಾರಿಗಿ ಶೆರಗ ಹಿಡಿದು ಬಿಕ್ಕಿಸಿದಳು.. ಕಿಟ್ಟಿಗೆ ಅವಳ ಕಣ್ಣೀರ ನೋಡಿ ಚುರುಕ್ ಅನಿಸಿತು. ಅಳು

ಸ್ವಲ್ಪ ತಡೆದು ಕಣ್ಣೀರು ಒರೆಸಿಕೊಂಡ. ಆದರೆ, ಹಾಂ.. ಅನ್ನುವ ರಾಗ ಮಾತ್ರ ಬಂದಾಗಿರಲಿಲ್ಲ. ರಮಜಾನ ಸಾಹೇಬ್ರು ಇದೆನ್ನೆಲ್ಲವ ನೋಡಿ ಅಲ್ಲಿಂದ ನಡೆದು ಬಿಟ್ಟರು. ಕೊನಿಗಿ ಮುತ್ತವ್ವ ಕಣ್ಣಿರ ಒರೆಸಿಕೊಂಡ ಕಿಟ್ಟಿಯ ಧೂಳವಾದ ಕೈ ಕಾಳುಗಳನ್ನು ತನ್ನ ಸೀರೆ ಶರಗಿನಿಂದ ಒರೆಸುತ, "ಶಾಣ್ಯಾ ಎಳಪಾ.. ಸಾಲಿಗಿ ಹೋಗೇಳ.. ಬಾ.. ಬಾ.. ಹೆಡಮಾಸ್ತರಿಗಿ ಹೇಳು, ನಮ್ಮ ಆಯಿದ ಪಗಾರ ಬಂದಿಲ್ಲಂತ, ಸ್ವಾಮಾರ ದಿನ ಅಕೀನ ಬಂದ ಕೊಡತಾಳ ಅಂತ. ಅನಕಾತನಕಾ ಈ ಎಂಟಾನೆ ತಗೋರಿ, ಉಳಕಿದ ಸ್ವಾಮಾರ ಬಂದ ಕೊಡತಿನಂದಾಳ ಅಂತ ಹೇಳ ಹೊಗ" ಎಂದು ರಮಿಸಿ ಸಮಾಧಾನ ಪಡಿಸುತ ಮೇಲೆಬ್ಬಿಸಲು ಪ್ರಯತ್ನಿಸಿದಳು. ಕಿಟ್ಟಿಗೆ ತನ್ನ ಸಿಟ್ಟು ಮತ್ತೆ ಜಾಗ್ರತವಾಯ್ತು "ಇಲ್ಲ ಹೊಗ, ನನಗ ಐದ್ರುಪಾಯಿ ಬೇಕ ಬೇಕು.." ಅಂದ.

"ಅವ್ವಾ.. ಇಲ್ಲಂದ್ರ ಯಾಕ ಕೇಳವಲ್ಲಿ ನೀ.." ಅಂತ ರೇಗಾಡಿದಳು ಮುತ್ತವ್ವ. ಕೊನಿಗಿ ಇವ ಐದ್ರೂಪಾಯಿ ಕೊಡುವರಿಗಿ ಹೊಗೊದಿಲ್ಲಂತ ಗೊತ್ತಾದ ಮ್ಯಾಲ ತನ್ನ ಮಲಪಕ್ಕದಾಗ ಚಾಪುಡಿ ತರಬೇಕೆಂದು ಇಟ್ಟಗೊಂಡಿದ್ದ ನಾಕಾಣೆ ಹೊರತೆಗೆದಳು. ಅನ್ಯಾಯವಾಗಿ ನಾಳಿಯಿಂದ ಚಹಾ ಕುಡಿಯೊದು ತಪ್ಪಿತಲಾ ಅಂತ ಬೇಗುದಿ ತಾಪ ಕೋಪವನ್ನು ಶಮನ ಮಾಡಿಕೊಳ್ಳುತ ರಮಜಾನ ಸಾಹೇಬ್ರು ಕೊಟ್ಟ ಎಂಟಾನೆ, ತನ್ನ ಬಳಿ ಇದ್ದ ನಾಕಾಣೆ ಎರಡೂ ಸೇರಿಸಿ,

"ತಗೋ.. ಎಲ್ಲಾ ನಿನ್ನ ಹೆಣಕ ಬಡದ್ನಿ.. ಇನ್ನೇನ ಐತಿ ಹಾಳಾಗಿ ಹೊಗ ಬಾ.. ಅತ್ತ.." ಅಂತ ಗದರಿದಳು. ಕಿಟ್ಟಿ ಮೊದಲಿನ ಎಂಟಾನೆ ಈಗಿನ ನಾಕಾಣೆ ಎರಡನ್ನು ಒಟ್ಟಿಗೆ ಹಿಡಿದು ನೋಡಿದ. ಇನ್ನು ಕಡಿಮಿ ಬಿತ್ತು. ಮುಖಾ ಉದಿಸಕೊಂಡು,

"ಇನ್ನು ಬೇಕಲಾ..?" ಅಂದ.

"ಇನ್ನೇಲ್ಲಿದ ನಿಮ್ಮವ್ವನ ಗೆಣ್ಯಾ ಅದಾನು ಇಲ್ಲಿ ಕೊಡಾಕ..? ನಾಳಿ ಚಾ ಪುಡಿಗಿ ಅಂತ ಇಟಗೊಂಡಿದ್ದು ನಿನ್ನ ಹೆಣಕ ಬಡಿಲಿಲ್ಲಾ.. ಈಗ..? ಇನ್ನೇಲಿಂದ ತರ್ಲಿ.. ತಗೋ ಇಷ್ಟ ಅದಾವ, ತಗೊಂದ ಹೊಗ ಬಾ.." ಅಂತ ಗುಡುಗಿದಳು. ಕಿಟ್ಟಿಗೆ ಮತ್ತೆ ಅಪಮಾನವಾದಂತಾಯಿತು. ತಾ ಬೇಡಿದನ್ನು ಆಯಿ ಯಾಕ ಕೊಡವಲ್ಲಳು ಅಂತ ಸಿಟ್ಟು ನೆತ್ತಿಗೆ ಬಡಿದು "ರೊಕ್ಕ ಕಡಿಮಿ ಇದ್ರ ಅವರು ಕರ್‍ಕೊಳ್ಳಾಂಗಿಲ್ಲ.. ನಾಯೇನು ಹೊಗಾಂಗಿಲ್ಲ ಹೋಗು.." ಅಂತ ಕಾಲು ಕೊಸರಾಡುತ ರಂಪ ಶುರುಮಾಡಿದ.. ಮುತ್ತವ್ವಳಿಗೆ ಮೊಮ್ಮಗನ ನಡವಳಿಕಿ ಮತ್ತಷ್ಟು ಕೋಪ ತರಿಸಿತು. ಕುಳಿತಲ್ಲಿಂದ್ಲೇ ನೆಲಕ್ಕ ಕೈಯೂರಿ ಮೇಲೆದ್ದು,

"ನೀ ಹೋಗಬ್ಯಾಡ ಇಲ್ಲೇ ಕುಂದರ.. ಎಟೋತ ಕುಂದ್ರತಿ ಕುಂದ್ರ" ಅಂತಂದು ಪಾತ್ರೀ ತೊಳೆಯಲು ನಡೆದಳು. ಕಿಟ್ಟಿಗೆ ಮತ್ತೆ ದುಕ್ಕ ಉಕ್ಕಿಬಂತು. ಆಯಿ ತನ್ನನ್ನು

ದಾದ ಮಾಡದೇ ಹೊರಟಿದಾಳಲ್ಲ ಅಂತ ರೋಷದಿಂದ ಕೈಗೆ ಸಿಕ್ಕ ಕಲ್ಲು ಮಣ್ಣು ಒಟ್ಟುಗೂಡಿಸಿ ಅವಳಿಗೆ ಎಸೆದ. ಅವಳು ತಿರಿಗಿ ನಿಂತು,

"ನಿನಗ ತಿಂದ ಮೈ ಸೊಕ್ಕ ಹೆಚ್ಚಾಗೇತಿ, ಆ ರೊಕ್ಕಾ ತತಾ.. ಇಲ್ಲಿ ಆಮ್ಯಾಲ ನೀ ಎಲ್ಲಿ ಕುಂತ ಅಳತಿ ಅಳೊಗ, ನಿನ್ನ ಯಾವ ನಾಯಿ ಮೂಸಾಂಗಿಲ್ಲ" ಅಂತಂದು ಅವಳ ಕೊಟ್ಟಾ ರೊಕ್ಕಾ ಇಸಿದುಕೊಳ್ಳಲು ಬಂದಾಗ ಕಿಟ್ಟಿಗೆ ಇನ್ನು ಸಿಟ್ಟು ಹಿಂದೆಲಿಗಿ ಬಡಿದು ವ್ಯಗ್ರನಾದ. ಎದ್ದು ನಿಂತು,

"ನಡ್ಯಾ ನಡಿ.. ಎಲ್ಲಿ ರೊಕ್ಕಾ.. ಹೋಗ" ಅಂತಂದು ಹಿಂದಿನ ಮನಿ ಮಾಳಿಗಿಮ್ಯಾಲ ಅವು ಎರಡು ರೊಕ್ಕಾ ಬೀಸಿ ಒಗೆದ ಬಿಟ್ಟ. ಆ ಎರಡು ನಾಣ್ಯಗಳು ಮಾಳಿಗಿಮ್ಯಾಲ ಫಳ್ ಅಂತ ಸಪ್ಪಾಳ ಮಾಡಿ ಸುಮ್ಮಣಾದವು.. ಮುತ್ತವಳಿಗಿ ಮೈಯ್ಯಾಗ ದೆವ್ವ ಬಡಕೊಂತ. ಬೆಳಗಿನಿಂದ ಇವನ ಆಟಾ ನೋಡಿ ಬ್ಯಾಸತ್ತು ಹೋಗಿದ್ದು ಹತಾಷೆ, ಸಂಕಟ, ಸಿಟ್ಟುಗಳಿಂದ ಕಂಗೆಟ್ಟಿದ್ದ ಆಕೆಗೆ ತನ್ನ ಬಳಿ ಇರುವ ನಾಕಾಣಿ ದಿಕ್ಕಿಲ್ಲದ ಹಾರಿಸಿದ ಮೊಮ್ಮಗನ ಮೊಂಡತನ ಹಟ ಸ್ವಭಾವಕ ಕುದಿದು ಓಡಿಬಂದು ಧಮ್ ಧಮ್ ಅಂತ ದನಕ್ಕ ಬಡಿದಂತೆ ಬೆನ್ನ ಮ್ಯಾಲ ಬಡಿದಳು.

"ಊರ ಬಾಡ್ಯಾ, ರೊಕ್ಕಾ ಹಾರಸತಿ. ನಿನ್ನ ಕೈಗಿ ಗಿರಣಿ ಹತ್ತಲಿ, ನಿನ್ನ ಹಲ್ಲಿಗಿ ನನ್ನ ಹಾಂಟ ಹಣಸಲಿ, ನಿನ್ನ ಕೊಂದ ಒಗಿತೇನ ತಡೀ" ಎಂದು ಹಲ್ಲು ಅವುಡಗಚ್ಚಿ ಬಳೆ ಎರಿಸಿಕೊಂಡು ಎಳಿ ಬೆನ್ನಿನಮ್ಯಾಲ ಶಕ್ತಿಮೀರಿ ಗುದ್ದಿದಳು. "ವದರತಿ.. ಬಾಡ್ಯಾ.. ಮುಚ್ಚ ಬಾಯಿ ಹಾಂಟ ಕುಡ್ಯಾಂವನ ಮಗನ.. ಉಸಲ ಬಿಟ್ರ ನೋಡ ನಿನ್ನ ಕುತಿಗಿ ಮ್ಯಾಲ ಕಾಲಿಟ್ಟತುಳಿತಿನಿ.." ಎಂದು ರೋಷದಿಂದ ಮೈಮ್ಯಾಲ ಪ್ರಜ್ಞಾ ಇಲ್ಲದ ಕುತಗಿ ಹಿಚುಕತೊಡಗಿದಳು.. ಕಿಟ್ಟಿ ಉಸುರುಗಟ್ಟಿ.. ಕ್ವಾ.. ಕ್ವಾ.. ಅಂತ ಕೆಮ್ಮಿ ಹಾಂ ಅಂತ ಒದರಿದ.. ಕಣ್ಣು ಕೆಂಪಡರಿದವು. ಮೂಗಿನಿಂದ ಸಿಂಬಳದ ಜೊತಿಗಿ ಕಣ್ಣೀರ ದುಪ್ಪಟ್ಟು ಹೊರಬಂದವು. ಆ ಕಡೇಯಿಂದ ಎತ್ತಿನ ಬಂಡಿ ಹೂಡಿಕೊಂಡು ಹೊಲಕ್ಕೆ ಹೊರಟಿದ್ದ ಗುಡಸಿಕರ ಮುತ್ತವಳ ರಂಪಾಟ ನೋಡಿ ಗಾಡಿ ನಿಲ್ಲಿಸಿ ಒಂದೇ ಹಾರಿಕೆಗೆ ಗಾಡಿಯಿಂದಿಳಿದು ಓಡ್ಹೋಡಿ ಬಂದು ಮುತ್ತವಳ ಅವತಾರ ಕಂಡು ..ಶಿವ ಶಿವ್ನೆ.. ಮಾದೇವಾ..

"ಮುತ್ತವ್ವ ಚಿಗವ್ವ ಎನ ಮಾಡಾತಿ, ಕೊಂದಿ ಬಿಡವಾ.. ಕೂಸ್ನಾ.. ಅಂಗೈಯಾಗಿನ ಲಿಂಗದಂಗ ಸಾಕಿಕೊಂಡ ಬಂದದಿ, ಈಗ ಕುತಗಿ ಹಿಚುಕಾತಿ.. ಎಯ್ ಬಿಡವ್ವಾ.. ಬಿಡ ನಿನ್ನ ಹುಚ್ಚಪ್ಯಾಲಿ.. ಸುದ್ಯಾಗ ಬಾ.. ಮೊದಲ.. ತಿಳಿಲಾರದ ಕೂಸ ಒಂದ ಆಡಿದ್ದೊತು.. ಅಂದಿದ್ದೊತು.. ಅದಕ್ಕ ಹಿಂಗ ಸಿಟ್ಟಿನ ಕೈಯಾಗ ಬುದ್ದಿ ಕೊಡತಾರು..

ಮುದಿಕಿ ಆಗಿ ಬುದ್ದಿ ಎಲ್ಲಿ ಇಟ್ಟಿದಿ..? ಹಾಂ.. ಥೂ.. ಎನು ನಿನ್ನ ಬಂಡ ಬಾಳೆ ಅಂತಿನಿ.." ಕಿಟ್ಟಿಯನ್ನು ಮುತ್ತವಳಿಂದ ಬಿಡಿಸಿಗೊಂಡು ಅವನ ತಲಿ ಸವರಿ, ಬೆನ್ನ ಸವರಿ, ಮಾರಿ ಕಣ್ಣೀರ ಒರೆಸುತ,

"ನೀನರೇ ಎನೋ ಹುಚ್ಚ ಹಡ್ಸಿ ಮಗನಾ.. ಇದ್ದದ ತಿಂದು ಸಾಲಿಗಿ ಹೋಗಾಕ ಎನು ದಾಡಿ ನಿನಗ ಅಂತಿನಿ..?" ಅಂತ ಕಿಟ್ಟಿಯನ್ನು ಗದರಿಸುತ ಇಬ್ಬರನ್ನು ಸಮಾಧಾನ ಪಡಿಸಲು ಯತ್ನಿಸಿದ. ಸಿಟ್ಟಿನಿಂದ ಕುದಿದು ಹೋಗಿದ್ದ ಮುತ್ತವ್ವ ಆವೇಶದಿಂದ ಅವಳ ಉಸಿರಾಟ ಕ್ರಿಯ ಎರುಪೇರು ಆಗಿತ್ತು. ಉಸರನ್ನು ತಹಬದಿಗೆ ತರುತ್ತ..

"ಮನೀಶಾ ಅಂದಮ್ಯಾಲ ಎಟ್ಟರ ಸಹನ ತಿನ್ನೋದ ಹೇಳಪಾ..? ಹರ್ಯಾಗ ಎದ್ದ ಬರಾ ಬರ ಚಾಲೂ ಮಾಡಿದಾನ. ಅಣ್ಣಾ..ಅಪ್ಪಾ..ಅಂದರ ಕೇಳತಿಲ್ಲ. ರಮಜಾನ ಸಾಹೇಬ ಎಂಟಾನಿ ಕೊಟ್ಟ ಹೋದ. ನಾನ ನಾಲಕಾಣಿ ಕೊಟ್ನಿ. ಒಂದ ರೂಪಾಯಿ ಕೊಡುತನಕಾ ಬಿಡಾಂಗಿಲ್ಲ ಅಂದ್ರ ಎಂತಾ ಮಾತಪಾ..? ಹಟ ಮಾಡಿ ಅಳತಾನ. ಇಲ್ಲದಿರ ಎಲ್ಲಿಂದ ತರೋದ ಹೇಳಪಾ..? ಬಡುರ ಮಕ್ಕಳಾಗಿ ಹೆಂಗಿರಬೇಕಿಂವಾ.. ತಿಳ್ಯಾಂಗಿಲ್ಲ ಇವಗ.. ಹಾಂಟ್ಯಾಗ.. ಊರ ಹಾಂಟ್ಯಾಗ.." ಅಂತ ಗುಡುಗಿದಳು.

"ಸನ್ನ ಹುಡುಗರಿಗೆಲ್ಲ ಅದೆಲ್ಲಿ ತಿಳಿತೈತಿ ಚಿಗವ್ವ.. ಕಂಡದ್ದ ಬೇಡುವ ಅವ.. ಹುಡುಗೊರ ಹುಡುಗರನ್ನ ನೋಡಿ ಕಾಡತಾವ ಬೇಡತಾವ.. ಅದಕ್ಕಾಗಿ ಹಿಂಗ ಬುದ್ದಿಗೆಡಬಾರದ ನಾವ.."

"ಇಲ್ಲದಿರ ಎಲ್ಲಿಂದ ತರ್ಲಿ ಹೇಳಪಾ..? ಎಲ್ಲಿ ಇವರಪ್ಪ ಗಳಿಸಿ ತಂದ ಕೊಟ್ಟಿದಾನ, ಇಟಗೊಂದ ಇಲ್ಲ ಅನ್ನಾತಿನಿ ಹೇಳ..?"

"ಅದೇಲ್ಲಾ ಬರೊಬರಿ, ನಮಗ ತಿಳಿತೈತಿ, ಹುಡಗೊರಿಗಿ ತಿಳಿಬೇಕಲ್ಲಾ.. ಅವಕೆನು ಬುದ್ದಿ ಇರತೈತಿ..? ದೌಳಕ್ಕಿನ ಹಚ್ಚರಂಗ ಮಾಡಿದರ ಎದಕ ಬಂತು.. ಹೆಚ್ಚು ಕಡಿಮಿ ಆದರ ಎನು ಮಾಡ್ತಿ..? ಆಗ ಬಿದ್ದಾಡಿ ಅತ್ತರ ಬರತೈತಿ..?" ಈ ಮಾತಿಗೆ ಮುತ್ತವ್ವ ಸುಮ್ಮನೆ ಬಿಕ್ಕಿದಳು. ಕಿಟ್ಟಿ ಮಾತ್ರ ಇನ್ನು ರಾಗವಾಗಿ ಅಳುತ್ತಲೆ ಇದ್ದ.

"ಅವನ ಪಾಟೀ ಚೀಲಾ ಕೊಡು, ನಾ ಹೊಲಕ ಹೊಂಟೇನಿ, ನನ್ನ ಮಗಳ ಜೊಡಿ ಅವನ್ನು ಸಾಲಿಗಿ ಬಿಡತಿನಿ. ಐದ್ರೂಪಾಯಿ ಹೌಂದಿಲ್ಲ, ನಾ ಕೊಡತಿನಿ. ಬಿಡು ಇಬ್ಬರನ್ನು ಸಾಲಿಗಿ ಬಿಟ್ಟ ನಾ ಹೊಲಕ ಹೋಗತಿನಂತ.. ಹೋಗ ಗಡಾನ ಪಾಟಿ ಚೀಲಾ ತರೋಗ.." ಅಂದಾಗ ಮುತ್ತವ್ವ ಮೆಲ್ಲಗೊಳಗ ಹೋಗಿ ಪಾಟಿ ಚೀಲಾ ತಂದು ಹೆಗಲಿಗೆ ಹಾಕಿದಳು. ಸೀರಿ ಸೇರಗಿನಿಂದ ಮುಖ ಒರಿಸಿ ಅಂಗಿ ಗುಂಡೆ ಹಾಕಿದಳು. ಗುಡಸಿಕರ ಕಿಟ್ಟಿಗೆ ಒಂದ್ರುಪಾಯಿ ಕೊಟ್ಟು ಅವನನ್ನು ಎತ್ತಿಕೊಂಡು

ಗಾಡಿಲಿ ಕೂಡರಿಸಿಕೊಂಡು ಬಂಡಿ ಹೊಡೆದುಕೊಂಡು ನಡೆದ. ಮುತ್ತವ್ವ ಮೊಮ್ಮಗನ ಹೋದ ದಾರಿಯನ್ನೆ ನೋಡುತ ನಿಂತಳು. ಅವಳಿಗೆ ತನ್ನ ತಪ್ಪಿನ ಅರಿವಾಗಿ ಕಣ್ಣಲ್ಲಿ ನೀರು ತನ್ನೀಂದ ತಾನೆ ಸುರಿಯುತ್ತಿದ್ದವು. ಅಂಗಳದಲ್ಲಿ ಇಟ್ಟಿದ್ದ ಮುಸುರೆ ಪಾತ್ರೇಗಳಿಗೆ ಕಾಗೇಗಳು ಕೂಡಿ ಕಲಬಡಿಸಿದಾಗಲೇ ಅವಳು ಅರಿವಿಗೆ ಬಂದದ್ದು.

❖

ಗುಡಸಿಕರನ ಮಗಳು ಶಾಂತವ್ವ ಕಿಟ್ಟಿ ಇಬ್ಬರು ಗಾಡಿಲಿ ಒಬ್ಬರ ಮುಖಾ ಒಬ್ಬರು ನೋಡುತ ಮೌನವಾಗಿ ಕುಳಿತಿದ್ದರು. ಕಿಟ್ಟಿ ಒಂದ್ರೂಪಾಯಿ ಕೈಯಲ್ಲಿ ಹಿಡಿದು ಸನ್ನದಾಗಿ ಇನ್ನು ಬಿಕ್ಕುತಿದ್ದ. ಅವನಿಗೆ ಬಹಳ ಕೋಪ ಬಂದಿತ್ತು. ಇಷ್ಟೊತ್ತಿಗಾಗಲೆ ಗೆಳೆಯರ ಜೊತೆಲಿ ಶಾಲೇಲಿ ಗರ್ದಿಗಮ್ಮತ್ತ ನೋಡಲು ಎಲ್ಲರ ಜೊತೆ ಓಡಾಡಬೇಕಿದ್ದವ ಇನ್ನೂ ದಾರಿಲಿ ಇದ್ದು ಅಸಂತುಷ್ಟನಾಗಿದ್ದ, ಸಮಾಧಾನದ ಸಂಗತಿಯೆಂದರೆ ಹ್ಯಾಂಗೊ ಒಂದ್ರೂಪಾಯ್ನಿ ದೊರಕಿಸಿಕೊಳ್ಳುವಲ್ಲಿ ಯಶಸ್ವಿಯಾದದ್ದು ಸಂತೋಷ ತರಿಸಿತ್ತು. ಅಂಗಳದಲ್ಲಿ ಬಹಳೊತ್ತಿನಿಂದ ಉರುಳಾಡಿದದ್ರಿಂದ ಕೈ ಕಾಲುಗಳೆಲ್ಲ ಮಣ್ಣಾಗಿದ್ದವು. ಅಂಗೈಗೆ ಧೂಳ ಮೆತ್ತಿಕೊಂಡಿತ್ತು. ಅಂಗೈ ಮೇಲೆ ಥೂ ಅಂತ ಉಗುಳಿಕೊಂಡು ಅದರಿಂದ ಕಾಲು ಕೈ ಒರೆಸಿಕೊಂಡ. ಅಂಗಿ ಜಾಡಿಸಿಕೊಂಡು ಸ್ವಚ್ಚಗೊಳಿಸಲು ಮುಂದಾದ. ಚಡ್ಡಿ ಜಾಡಿಸಿಕೊಂಡ. ಗುಡಸಿಕರನ ಹೊಲಾ ಇದ್ದದ್ದು ಊರಿನ ಪೂರ್ವ ಭಾಗಕ್ಕೆ. ಅಂದರೆ ಕನ್ನಡ ಪ್ರಾಥಮಿಕ ಶಾಲೆಯ ಹಿಂದಿನ ದಾರಿಲಿ ಎರಡು ಹರದಾರಿ ಹೋದರೆ ಗುಡಸಿಕರನ ಹೊಲ ಬರುತ್ತದೆ. ಹಾಗಾಗಿ ಕಿಟ್ಟಿನ ಗಾಡ್ಯಾಗ ಕೂಡ್ರಿಸಿಕೊಂಡು ನಡೆದಿದ್ದ ಗುಡಸಿಕರನ ಸಾಕು ನಾಯಿ ಎತ್ತಿನ ಬಂಡಿ ಕೆಳಗಡೆ ನಡೆದು ಬರುತಿತ್ತು. ಹೇಳಕೇಳಿ ಅದು ಅವನ ಸಾಕು ನಾಯಿ. ಸದಾ ಗುಡಸಿಕರನ ಹಿಂದಿಂದೆ.. ಅವ ಹೋದಲ್ಲಿ, ಬಂದಲ್ಲಿ, ಹೊಲಕ್ಕ ಹೋಗಲಿ, ಊರಿಗೆ ಹೋಗಲಿ ಅವನ ಬೆನ್ನ ಹಿಂದೆನೆ ಬರುತಿತ್ತು. ಹಾಗಾಗಿ ಗುಡಸಿಕರ ಅದಕ್ಕೆ ಯಾವದೆ ರೀತಿಯ ಕಟ್ಟಪ್ಪಣೆ ಒದಗಿಸಿರಲಿಲ್ಲ. ಗುಡಸಿಕರ ಬಂಡಿಯೊಳಗ ಇದ್ದರೆ ಅದು ಬಂಡಿ ಕೆಳಗಡೆ ನಡೆದುಕೊಂಡು ಬರುವುದು ವಾಡಿಕೆ. ಕಿಟ್ಟಿ ಅದನ್ನೆ ಬಗ್ಗಿ ನೋಡುತ ಕುಳಿತಿದ್ದ. ಗಾಡಿಯ ವೇಗಕೆ ಅನುಗುಣವಾಗಿ ಅದು ನಾಲಿಗೆ ಹೊರ ಚಾಚಿಕೊಂಡು ಬೆನ್ನು ಹತ್ತಿತ್ತು. ಗಾಡಿ ಪಕ್ಕದ ರಸ್ತೆಗೆ ತಿರುಗಿ ಕಾಲುವೆ ಮೇಲಿರುವ ರಸ್ತೆ ಹಿಡಿದು ಹೊರಟಿತು.. ನಾಯಿ ಒಂದ ವೇಗದಲ್ಲಿ ಗಾಡಿಯ ಬೆನ್ನು ಹತ್ತಿ ಓಡುತಿತ್ತು.. ಅದೆಲ್ಲಿದ್ದವೊ ಕುರುಬರ ನಾಯಿಗಳು ಗುಡಸಿಕರನ ನಾಯಿಯನ್ನು ನೋಡಿದ ಕೂಡಲೇ ರಭಸದಿಂದ ಓಡೋಡಿ ಗಾಡಿಯತ್ತ ಬಂದವು.. ಅವಕ್ಕು ಗುಡಸಿಕರನ ನಾಯಿಗೆ ನೋಟದಿಂದಲೆ ಶುರುವಾದ ಜಗಳ ಒಂದನ್ನು

ನೋಡಿ ಇನ್ನೊಂದು ಕೆಕ್ಕರಿಸಿ ಬೊಗಳತೊಡಗಿದವು. ಗುಡಸಿಕರ ತನ್ನ ಬಂಡಿ ಹಿಂದೆ ಬಂದ ಕುರುಬರ ನಾಯಿಗಳನ್ನು ನೋಡಿ ತನ್ನ ನಾಯಿ ಜೊತೆಗೆ ವಿನಾಕಾರಣ ಜಗಳವಾಡುತ್ತಿರುವ ಸಂಗತಿ ತಿಳಿದು ಕುಪಿತುಗೊಂಡ. ಕೈಯಲ್ಲಿರುವ ಬಾರುಕೋಲಿನಿಂದ ಹಿಂದಕ್ಕೆ ಜಾಡಿಸಿ "ಹಚ್ಚಾ.. ಹಚ್ಚ.. ಹೊಗಾಕ್ರೋ.. ನಿಮ್ಮವ್ವಗೋಳ.." ಅಂತ ಗದರಿದ.. ಕಿಟ್ಟಿ ಮತ್ತು ಶಾಂತವ್ವ ಇಬ್ಬರು ಕೂಡಾ ಅವುಗಳ ಹಾರಾಟ ನೋಡಿ ಹೆದರಿದ್ದರು. ಬಾರಿಕೋಲಿನ ಏಟಿನಿಂದ ತಪ್ಪಿಸಿಕೊಂಡವರಂತೆ ಮಾಡಿ ಸ್ವಲ್ಪ ಹಿಂದೆ ಉಳಿದಂತೆ ಮಾಡಿ ನಾಯಿಗಳು ಕೆಣಕಿ ನ್ಯಾಯ ತೆಗೆಯಲು ಮತ್ತೆ ಓಡೋಡಿ ಬಂದು ಗುಡಸಿಕರನ ನಾಯಿ ಮೇಲೆ ಎರಗಿದವು. ಗುಡಸಿಕರನ ನಾಯಿ ಒಂದೇ ಅಗಿದ್ದರಿಂದ ಅದಕ್ಕೆ ಯಾವ ಕಡೇ ಹೋಗಲು ತಿಳಿಯದೆ ಹೆದರಿ ಕುಂಯ್ ಕುಂಯ್ ಅಂತ ತನ್ನ ಮಾಲಕನ ಆಶ್ರಯ ತೊರೆದು ಹೋಗಲು ಹೆದರಿ ಅಲ್ಲೇ ಓಡಾಡಿತು.. ಗುಡಸಿಕರ ಎತ್ತುಗಳ ಹಗ್ಗವ ಜಗ್ಗಿ ಹಿಡಿದು ನಿಲ್ಲಿಸಿ ಗಾಡಿ ಕೆಳಗಿನ ಕುರುಬರ ನಾಯಿಗಳಿಗೆ ಬಾರಕೊಲಿನಿಂದ ಬೀಸಿ ಹೊಡೆದ.. ಅವು ಅದಕ್ಕೆ ಪ್ರತಿಯಾಗಿ ಅವನ ಮೇಲಿನ ಕೋಪವನ್ನು ಅವನ ನಾಯಿ ಮೇಲೆ ತೋರಿಸುತ್ತ ಅದನ್ನು ಹಿಗ್ಗಾ ಮುಗ್ಗಾ ಕಚ್ಚತೊಡಗಿದವು. ಆ ನಾಯಿ ಪ್ರಾಣ ಭೀತಿಯಿಂದ ಅತ್ತಿತ್ತ ಓಡಾಡುತ ಎತ್ತುಗಳ ಕಾಲಲಿ ಬಿದ್ದು ಉರಳಾಡಿತು. ಕುರುಬರ ನಾಯಿಗಳು ಆವೇಶದಲ್ಲಿ ಗುಡಸಿಕರನ ನಾಯಿ ಜೊತೆಗೆ ಏಟಿಗೆ ಸಿಕ್ಕ ಎತ್ತಿನ ಕಾಲನ್ನು ಕಚ್ಚಿಬಿಟ್ಟಿತು. ಹೆದರಿದ ಎತ್ತುಗಳು ಯಾವ ಕಡೆ ಹೋಗಬೇಕೆಂದು ತಿಳಿಯದೆ ನಾಯಿಗಳ ಕಾಟಕ್ಕೆ ಹೆದರಿ ಅತ್ತಿತ್ತ ಕುಣಿದಾಡಿದವು. ಕಣ್ಣು ಮುಚ್ಚಿ ತೆರೆಯುವಷ್ಟರಲ್ಲಿ ಎತ್ತಿನ ಗಾಡಿ ತುಂಬಿದ ಕಾಲುವೆಗೆ ಉರುಳಿ ಬಿತ್ತು.. ..

❖

ಚಕ್ಕಡಿ ಕಾಲವಿಯೊಳಗ ಬೀಳೊದನ್ನು ಅವರಿವರು ನೋಡಿದರು. ಹೌಹಾರಿ ಹೆದರಿ ಲಗುಬಗೆಯಿಂದ ಧಾವಿಸಿ ಅಲ್ಲಿಗೆ ಓಡಿ ಬಂದರು, ಯಾರೋ ಹೆಂಗಸರು ಅರಿವಿ ಒಗಿತಿದ್ದವರು ನೀರ ತರಲು ಬಂದವರು, ನೋಡಿ ಲಭೋ ಲಭೋ.. ಅಂತ ಹೊಯಕೊಂಡಾಗ ಆಜುಬಾಜೂಕಿನ ಮಂದೆಲ್ಲ ಕೂಡಿತು. ಆದರ ಕಾವಲಿಯೊಳಗ ನೀರಿನ ಸೆಳೆತ ಬಾಳ ಇದ್ದದರಿಂದ ಸೆಳವು ಎತ್ತುಗಳನ್ನು ಹಾಂಗ ಹಾಂಗ ಎಳಕೊಂಡ ನಡೆದಿತ್ತು. ಎತ್ತು ಗಾಡಿ ಸೆಳುವಿನ ಭರಾಟಿಗಿ ಜೋರಾಗಿಯೆ ಓಡುತಿದ್ದವು. ಯಾರೊ ಒಬ್ಬರು ಹಗ್ಗಾ ಹಿಡಕೊಂಡ ಎತ್ತಿನ ಬೆನ್ನಿನ ಮ್ಯಾಲ ಜಿಗಿದು ಬಂಡಿಗಿ ಹಗ್ಗಾ ಒಗೆದು ಕಟ್ಟಿ ದಂಡಿಮ್ಯಾಲ ನಿಂತವರ ಕೈಯಾಗ ಬೀಸಿ ಒಗೆದ. ಅದನ್ನು ನಾಲ್ಕ ಜನ ಹಿಡಕೊಂಡರು.

ಏಳೆಂಟ ಮಂದಿ ಗಟ್ಟಿಯಾಗಿ ಹಗ್ಗಾ ಜಗ್ಗಿ ಎಳೆದರು. ಇನ್ನೊಬ್ಬ ಜಿಗಿದು ಎತ್ತಿನ ಕೊಳ್ಳ ಪಟ್ಟಿ ಹಾಕಿದ ಹಗ್ಗಾ ಕುಡಗೋಲಿನಿಂದ ಕೊಯ್ದು ಎತ್ತುಗಳನ್ನು ಮೇಲಕ್ಕೆ ಜಗ್ಗಿದರು.. ಗಾಡಿ ಜಗ್ಗಿದರು.. ಖಾಲಿ ಗಾಡಿ ಮ್ಯಾಲಕ ಬಂತು.. ಆದರೆ.. ಅದರಲ್ಲಿದ್ದವರು ಬಹಳಷ್ಟು ದೂರ ಹೋಗಿದ್ದರು.. .. ..

❖

(ಪ್ರಜಾವಾಣಿ – ನವೆಂಬರ್ 24, 2013)

ರೆಕ್ಕೆ ಹಾವು

ಟಿ.ಕೆ.ದಯಾನಂದ

ಪೆರುವಾಯಿಯ ಆ ದೊಂಬರಟ್ಟಿಯ ಹುಡುಗರಿಗೆ ಯಾವತ್ತೂ ಅಲ್ಲದ್ದು ಆವತ್ತೇಕೆ ಹಾಗನ್ನಿಸಿತೋ ಗೊತ್ತಿಲ್ಲ, ಹಾಗೆ ಅನ್ನಿಸಿದ ದಿನದಿಂದ ಅದೊಂದು ಆಸೆಯು ಕಾಟಿಕೋಣದಂತೆ ಅವರನ್ನು ಕುಂತೊಳಗೆ ನಿಂತೊಳಗೆ ಬೆರೆಸಾಡಿಕೊಂಡು ತಿವಿಯತೊಡಗಿತ್ತು. ದುಡಿಯಬೇಕೆಂದರೆ ೮ ಮೈಲು ನಡೆದು ನಡಕತ್ತಿಯ ಶುಂಠಿಮಂಡಿಯವರೆಗೆ ಹೋಗಬೇಕಲ್ಲವೆಂದು ಕಳ್ಳಬಿದ್ದು ಇದ್ದೂರಾದ ಪೆರುವಾಯಿಯಲ್ಲಿಯೇ ಚಿಕ್ಕಪುಟ್ಟ ಕಳ್ಳತನ, ಕಬ್ಬಿಣ-ವಯರು, ಅದೂ-ಇದೂ ಮಣ್ಣು-ಮುಸುಕು ಕದಿಯುತ್ತ ಬದುಕುತ್ತಿದ್ದವರಿಗೆ ತಮ್ಮ ದೊಂಬರಕುಲದೇವರಾದ ತಲೆಮಾತ್ರವಿರುವ ದೊಂಬರಸ್ವಾಮಿಯ ನೆತ್ತಿಯ ಮೇಲೊಂದು ಗುಡಿಯೆಬ್ಬಿಸಿ ಬಿಡಬೇಕೆಂಬ ಸಾಹಸಮಯ ಆಸೆಯೊಂದು ವಿನಾಕಾರಣ ಮೊಟ್ಟೆಯೊಡೆದಿತ್ತು. ಒಂದಾನೊಂದು ಕಾಲದೊಳಗೆ ನಮ್ಮ ತಲೆಮಾರುಗಳನ್ನು ಹೊಕ್ಕಳಹೂವಿನಂತೆ ಕಾಯ್ದು ತಮ್ಮ ದೊಂಬರಹಟ್ಟಿಯ ಕುಲದೇವರಿಗೆ ಐದಡಿಯ ಒಂದು ಸಣ್ಣಗುಡಿಯಂಥದ್ದು ಯಾತ್ಯಾತಕ್ಕೂ ಸಾಲದೆನ್ನಿಸಿ, ಅದನ್ನು ತೆಗೆದು ಊರಜನಗಳಂತೆ ತಾವೂ ಒಂದು ದಿವೀನು ದೇವಸ್ಥಾನ ಕಟ್ಟಬೇಕೆಂಬ ಆಸೆಯಾಗಿ ಅದಕ್ಕೆಂದು ಮನೆಮನೆಯಲ್ಲೂ ಚಂದ ಎತ್ತಿದ್ದರು. ಚಂದಾಮೊತ್ತವು ದೊಂಬರದೇವರ ಗುಡಿ ಕಟ್ಟಲು ಗೋಡೆ-ಬಾಗಿಲು, ಕಟ್ಟಡ-ಸಿಮೆಂಟುಗಳಿಗೆ ಸರಿಯಾಗಿ ಅಷ್ಟು ದೊಡ್ಡ ಗುಡಿಯೊಳಗೆ ತಲೆಮಾತ್ರದ ದೇವರನ್ನಿಡುವುದು ಚೆನ್ನಾಗಿರುವುದಿಲ್ಲವೆಂದು ಮುಂಡವನ್ನೂ ಸೇರಿಸಿದಂತೆ ದೊಂಬರದೇವರು ಮಾಡಿಸಲು ನಡಕತ್ತಿಯ ಆಚಾರಿಯನ್ನು ವಿಚಾರಿಸಲಾಗಿ ಆಚಾರಿಯು 'ದೇವರಗೊಂಬೆಗೆ ಕಣ್ಣಿಗೆ ಕಂಡ ಲೋಹವಲ್ಲದೆ ೮೦ ಕೆಜಿಯ ಅಚ್ಚತಾಮ್ರದಲ್ಲಿಯೇ ಎರಕಹುಯ್ದು ದಿವೀನಾಗಿಯೇ ದೇವರನ್ನು ಪ್ರತಿಷ್ಠಾಪಿಸಬೇಕೆಂದು, ಕಳಪೆಲೋಹದಲ್ಲಿ ಗೊಂಬೆ ಕೂರಿಸಿದರೆ ಅಪಚಾರವುಂಟಾಗುವುದೆಂದು' ಮುಗಸಟ್ಟೆ ಸಲಹೆ ಕೊಟ್ಟಿದುದೂ ಆಗಿತ್ತು. ಅದಕ್ಕೆ ಬೇಕಾದ ೮೦ ಕೆಜಿಗೂ ಹೆಚ್ಚಿನ ಅಚ್ಚತಾಮ್ರದ ಮೊತ್ತವನ್ನು ವಿಚಾರಿಸಿದಾಗ ಅದು ಲಕ್ಷಗಟ್ಟಲೆ ಮೀರಿದ್ದ ಬಾಬತ್ತೆಂದು ತಿಳಿದ ನಂತರ ಅಷ್ಟೊಂದು ಹಣವು ತಮ್ಮಲ್ಲಿ ಇರಲಿಲ್ಲವಾಗಿ ಏನು ಮಾಡಬೇಕೆಂದು ಚಿಂತೆಗೆ ಬಿದ್ದಿರುವ ಟೇಮಿನಲ್ಲಿಯೇ ಪೆರುವಾಯಿಯ ಶನಿಮಾತ್ಮನ ಗುಡಿಗೆ ಊರ ಮಾರ್ವಾಡಿಯೊಬ್ಬ ಎರಡು ಕಣ್ಣಿಂದ ನೋಡಿದರೂ ಒಟ್ಟಳತೆ ಸಿಗದಂತಹ ದೊಡ್ಡ ಅಚ್ಚತಾಮ್ರದ ಗಂಟೆಯನ್ನು ದಾನವಾಗಿ ಕೊಟ್ಟಿದ್ದುದು ನಡೆದಿತ್ತು. ಅದನ್ನು ಗುಡಿಯ ತಲಬಾಗಿಲಿಗೆ ಕಟ್ಟಿದ್ದುದನ್ನು ನೋಡಿದ್ದ ದೊಂಬರ ಹುಡುಗರು ಈ ಅಚ್ಚತಾಮ್ರದ ಗಂಟೆಯನ್ನು ಕದ್ದು ಕರಗಿಸಿದರೆ ದೊಂಬರ

ದೇವರ ಗೊಂಬೆಗೆ ಬೇಕಾದ ತಾಮ್ರ ಸಲೀಸಾಗಿ ಸಿಗುತ್ತದೆಂಬ ಐನಾತಿ ನಿರ್ಧಾರಕ್ಕೆ ಬಂದಿದ್ದರು.

ಒಂದೊಳ್ಳೆಯ ರಾತ್ರಿ ಗಂಟೆ ಕದಿಯಲು ಗುಡಿಯೊಳಗೆ ನುಸುಳಿ ಇನ್ನೇನು ತಾಮ್ರದ ಗಂಟೆಯನ್ನು ಬಿಚ್ಚಿಕೊಳ್ಳುವಾಗ ಇದ್ದಕ್ಕಿದ್ದಂತೆ ತೊಡೆ ನಡುಗಿದಂತಾಗಿ ಬೆವರು ಕಿತ್ತುಕೊಂಡ ಅವರಿಗೆ ಗುಡಿಯ ಗಂಟೆ ಕದಿಯುತ್ತಿರುವ ತಮಗೆ ಶನಿಮಾತ್ಮನು ತನ್ನೆರಡೂ ಕಣ್ಣು ಮಡಗಿ ಒಂದು ಗತಿ ಕಾಣಿಸಲಾರನೆ ಎಂಬ ಭಯವಾಗಿ ವಾಪಸ್ಸು ಬಂದುಬಿಟ್ಟಿದ್ದರು. ಈ ಬಗ್ಗೆ ದೊಂಬರ ಕುಲದ ಹಿರೀಕ ಪೊಟ್ಟಸಿದ್ಧನನ್ನು ವಿಚಾರಿಸಿದಾಗ ಕುಲಾನುಕುಲಗಳ ದೇವರುಗಳೆಲ್ಲರೂ ಒಂದು ತಾಯಿ ಮಕ್ಕಳಾಗಿದ್ದು ಒಬ್ಬರಿಗೊಬ್ಬರಿಗೆ ಕಳ್ಳುಬಳ್ಳಿಯ ದೂರದ ನೆಂಟಸ್ತಿಕೆ ಇರುವುದರಿಂದ ಶನಿಮಾತುಮ ದೇವರಗಂಟೆಯನ್ನು ಕದ್ದರೆ ಪಾಪವುಂಟಾಗಿ ಎಣಿಸಲೂ ಅಸಾಧ್ಯವಾದ ಶಾಪಗಳಿಗೆ ದೊಂಬರ ಕುಲವು ತುತ್ತಾಗುವುದೆಂದು ಹೇಳಿದ್ದರಿಂದ ಗುಡಿಯ ಗಂಟೆ ಕದಿಯುವ ಹುನ್ನಾರದಲ್ಲಿದ್ದ ಹುಡುಗರು ಗಾಬರಿಗೆ ಬಿದ್ದಿದ್ದರು. ಇದಕ್ಕೆ ಯಾವ ಪರಿಹಾರವೂ ಭೂಮಿಯ ಮೇಲೆ ಜನ್ಮ ತಳೆದಿಲ್ಲವೇ ಎಂಬ ಅವರ ಪ್ರಶ್ನೆಗೆ ಉತ್ತರವಾಗಿ ಪೊಟ್ಟಸಿದ್ಧನು 'ಗಂಟೆ ಕದ್ದ ಪಾಪಕ್ಕೆ ಪರಿಹಾರ ಶಾಂತಿ ಕೆಲಸವನ್ನು ನಡೆಸಿದರೆ ಯಾವ ಕೇಡೂ ಆಗುವುದಿಲ್ಲವೆಂದು ಹೇಳಿ ಈ ಕೆಲಸಕ್ಕೆ ಎರಡು ಬೆಟ್ಟ ಹತ್ತಿಳಿದು ಆನೆದಿಬ್ಬವನ್ನು ದಾಟಿಕೊಂಡರೆ ಸಿಗುವ ಕೊಡೆಪಾವು ಅನ್ನೋ ಊರೊಳಗೆ ದೊಂಬರ ಪಾಪಾತ್ತಿಯೆಂಬುವಳು ಇಂತಹ ಪಾಪನಾಶಿನಿ ಯಂತರ-ಮಂತರ ಮಾಡುವವಳಿದ್ದಾಳೆಂದೂ, ಇದಕ್ಕೆ ಅವಳೇ ತಕ್ಕುನಾದವಳೆಂದು ಹೇಳಿದ್ದರಿಂದ ಅವಳನ್ನು ಹುಡುಕುತ್ತ ದೊಂಬರಹೈಕಳು ಕೊಡೆಪಾವಿಗೆ ಬಂದಿದ್ದರು. ಪಾಪಾತ್ತಿಯನ್ನು ಹುಡುಕಿಕೊಂಡು ಅಲೆಯಬಾರದ ಜಾಗವೆಲ್ಲ ಅಲೆದು ಬಸ್‌ಸ್ಟಾಪ್ ಪಕ್ಕದ ಸೇಂದಿಯಂಗಂಡಿಯಲ್ಲಿದ್ದ ಕೊಡೆಪಾವಿನ ವಾರಾಂಗನೆ ರೇವಮ್ಮನ ಬಳಿ ವಿಚಾರಿಸಿದ್ದರು. ಅವರನ್ನು ಅಲ್ಲಿಂದ ಎಬ್ಬಿಸಿಕೊಂಡು ಬಂದು ತನ್ನ ತಟಿಗೆಮನೆಯಲ್ಲಿದ್ದ ಪಾಪಾತ್ತಿಯ ಮುಂದೆ ಕೂರಿಸಿದ್ದ ರೇವಮ್ಮಳು ಇಬ್ಬರನ್ನೂ ಒಬ್ಬರಿಗೊಬ್ಬರು ಪರಿಚಯಿಸಿ ತನ್ನಪಾಡಿಗೆ ತಾನು ಸವುದೆಪುಳ್ಳೆ ತರಲು ನಡೆದಿದ್ದಳು. ಯಾವ ಸೂಚನೆಯೂ ಇಲ್ಲದೆ ಬಂದು ತನ್ನೆದುರು ವಿನಮ್ರರಾಗಿ ಕುಳಿತಿದ್ದ ದೊಂಬರಹುಡುಗರ ಕಥೆಯೇನು? ಕಷ್ಟವೇನು? ಎಂದು ಪಾಪಾತ್ತಿ ಕೇಳಿದ ಕೂಡಲೇ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡು ಅಳುಕಿನಿಂದಲೇ ಅವಳನ್ನು ಹುಡುಕಿ ಬಂದುದರ ಕಾರಣವನ್ನು ಆ ಹುಡುಗರು ವಿಶದವಾಗಿ ಹೇಳಿಕೊಂಡು ಶನಿಮಾತುಮನ ಗಂಟೆಕದ್ದ ಪಾಪವನ್ನು ಚಿಟಿಕೆಹೊಡೆದಂತೆ ಒಂದೇಟಿಗೇ ನಿವಾರಿಸಿಕೊಳ್ಳಲು ಪರಿಹಾರೋಪಾಯವನ್ನು ಕೊಡಲು ಪಾಪಾತ್ತಿಯಲ್ಲಿ ವಿನಂತಿಸಿದರು.

ಕೇಳುವುದೆಲ್ಲವನ್ನೂ ಕೇಳಿಸಿಕೊಂಡ ಪಾಪಾತ್ತಿಯು ತನ್ನ ಸದ್ಯದ ಕೋಟಲೆಯೇ ಕತ್ತರಿಸಿ ಗುಡ್ಡೆಯಿಟ್ಟು ಊರಿಡೀ ಹಂಚುವಷ್ಟಿದ್ದರೂ ಅದನ್ನು ಕುಂತವರೆದುರು ಎಲ್ಲಿಯೂ ತೋರಿಸಿಕೊಳ್ಳದೆ ತರೀಕೆರೆಯ ದೊಂಬರ ಹುಡುಗರು ತಂದ ಸಂಕಷ್ಟ ಮತ್ತು ಪಾಪ ಪರಿಹಾರದ ಕುರಿತಂತೆ ಒಂದೇ ಉಪಾಯವಿದೆಯೆಂದು ಆ ಬಗ್ಗೆ ಸವಿಸ್ತಾರವಾಗಿ ವಿವರಿಸಿದಳು. ಅವಳು ಹೇಳಿದಂತೆ 'ದೊಂಬರದೇವರೂ ಶನಿಮಾತ್ಮನೂ ಕಳ್ಳುಬಳ್ಳಿ ಮೂಲದಿಂದ ಒಂದುತಾಯಿ ಕುಲ, ಆ ದೇವರಗಂಟೆ ಕದಿಯುವುದೂ ಶನಿಮಾತ್ಮನ ಕಾಗೆವಾಹನದ ಮೇಲೆ ಕಪ್ಪೆ ಎಸೆಯುವುದೂ ಜೀವಾಂತಕವಷ್ಟೇ ಆಗುವುದರಿಂದ ಆ ದೇವರಿಗೆ ಬೇಜಾರಾಗದಂತೆ ಗಂಟೆಕದ್ದ ಪಾಪವನ್ನು ಕಳೆದುಕೊಳ್ಳಲು ದೊಂಬರ ಕುಲಶತ್ರುವಿನ ಪಳೆಯುಳಿಕೆಯೊಂದರ ನಾಶವಾಗಬೇಕೆಂದೂ, ಒಂದುಕಾಲದಲ್ಲಿ ದೊಂಬರದೇವರ ಕುಲವನ್ನು ಆಹುತಿ ತೆಗೆದುಕೊಳ್ಳಲು ರೆಕ್ಕೆಹಾವೊಂದು ಬಂದುದಾಗಿಯೂ ಅದನ್ನು ಕೊಲ್ಲಲು ದೊಂಬರದೇವರು ಮುಖವೆಲ್ಲ ನಾಲಿಗೆ ಚಾಚಿಕೊಂಡು ಹೂಂಕರಿಸುತ್ತ ಸೆಟೆದು ನಿಂತಾಗ ಆ ರೆಕ್ಕೆಹಾವು ತಲೆತಪ್ಪಿಸಿಕೊಂಡು ಹಾರಿಹೋದ' ಕಥೆಯನ್ನೂ ಹೇಳಿದಳು. 'ಆ ರೆಕ್ಕೆಹಾವಿನ ಸಂತತಿಯು ಇವತ್ತಿಗೂ ಬದುಕಿದ್ದು ಏಳು ಮೊಳದಷ್ಟು ಉದ್ದದ ಆ ಹಾವಿಗೆ ರೆಕ್ಕೆಯಿದ್ದು ಮರದಿಂದ ಮರಕ್ಕೆ ಹಾರುತ್ತದೆಯೆಂದೂ, ಎಲ್ಲ ಹಾವಿನಂತೆ ಅದಕ್ಕೆ ಎರಡೆಳೆಯ ನಾಲಿಗೆಯಿಲ್ಲದೆ ಒಂದೆಳೆಯ ನಾಲಿಗೆ ಮಾತ್ರ ಇರುವುದಾಗಿಯೂ, ಆ ಹಾವನ್ನು ಪೆರುವಾಯಿಯ ದೊಂಬರ ಹುಡುಗರು ಹುಡುಕಾಡಿ ತಂದು ಅದು ಜೀವಸಮೇತವಿರುವಾಗಲೇ ಅದರ ಒಂದೆಳೆ ನಾಲಿಗೆಯನ್ನು ಕಿತ್ತು ಅದನ್ನು ಎಕ್ಕದಗಿಡದ ಮೊಗ್ಗಿನೊಡನೆ ಸೇರಿಸಿ ಬೆಂಕಿಯಲ್ಲಿ ಸುಟ್ಟು ಆ ಬೂದಿಯನ್ನು ನಾಲಿಗೆಗೆ ಬಳಿದುಕೊಂಡು ಗಂಟೆಕದ್ದರೆ ಶತ್ರುನಾಶದಿಂದ ತೃಪ್ತನಾಗುವ ದೊಂಬರದೇವರು ತನ್ನ ದೂರದ ನೆಂಟದೇವರು ಶನಿಮಾತ್ಮನೊಡನೆ ಕುಂತು ಮಾತುಕತೆ ನಡೆಸಿ ಅವನು ಸಿಟ್ಟಿಗೇಳದಂತೆ ತಡೆಯುತ್ತಾನೆಂದಳು. ಇದಷ್ಟೇ ಪಾಪಪರಿಹಾರವೆಂದು ಘೋಷಿಸಿದ ಪಾಪಾತ್ತಿಯು ಆ ಹುಡುಗರಿಗೆ ಕರುವಾತ್ತಿಬಾರೆಯ ಪಕ್ಕದ ಕುರುಡಕ್ಕಿಬೆಟ್ಟದ ಧವನದ ಮರಗಳ ಪೊಟರೆಗಳೊಳಗೆ ರೆಕ್ಕೆಹಾವು ಇರುತ್ತದೆಂದು ಪೆರುವಾಯಿಯ ವೀರಮಕ್ಕಳಿಗೆ ವಿಳಾಸವನ್ನೂ ಕೊಟ್ಟು ಕಳುಹಿಸಿದಳು.

ಆರು ಮೂರಾಗಿ ಮೂರು ಮುನ್ನೂರಾದರೂ ಸರಿಯೇ ಶನಿಮಾತ್ಮನ ಗುಡಿಯ ಗಂಟೆ ಕದಿಯಲು, ಅದು ಹುಟ್ಟುಹಾಕುವ ಪಾಪವನ್ನು ನಿವಾರಿಸಿಕೊಳ್ಳಲು ಪಾಪಾತ್ತಿಯ ಪರಿಹಾರದಂತೆ ರೆಕ್ಕೆಹಾವನ್ನು ಹಿಡಿದು ನಾಲಿಗೆ ಕಿತ್ತೇಬಿಡೋಣವೆಂದು ಹೊರಟ ದೊಂಬರ ಹುಡುಗರು ವಾರಗಟ್ಟಲೆ ಕರುವಾತ್ತಿಬಾರೆ ಪಕ್ಕದ ಕುರುಡಕ್ಕಿಬೆಟ್ಟದ ಧವನದ ಮರಗಳ ಪೊಟರೆಗಳನ್ನು ಹುಡುಕಿಯೇ ಹುಡುಕಿದ್ದರು. ಯಾವ ಪೊಟರೆಗೆ ಕೈಯಿಟ್ಟರೂ ಕನ್ನಡಿಹಾವು, ಹಸಿರಾವು, ಗೊರವ-ಗೀಜಗಕ್ಕಿಗಳ ಹಿಕ್ಕೆಯಲ್ಲದೇ ರೆಕ್ಕೆಹಾವಿನ

ಕುಂಡಿಯನ್ನೂ ಕಂಡುಕೊಳ್ಳಲಾಗದೆ ಸುಸ್ತೆದ್ದು ಹೋದರು. ಇನ್ನು ಇದು ತಮ್ಮ ಕೈಮೀರಿದ್ದೆಂದು ಅನ್ನಿಸಿ ವಾರಕಳೆದು ಮತ್ತೆ ವಾಪಸ್ಸು ಬಂದು ಪಾಪಾತ್ತಿಯ ಮುಂದೆ ಕುಳಿತು ಖಾಲಿಪೀಲಿ ಎರಡೆಳೆ ನಾಲಿಗೆಯ ಹಾವುಗಳನ್ನು ಬಿಟ್ಟು ಮತ್ಯಾವ ರೆಕ್ಕೆಯಿರುವ ಹಾವನ್ನೂ ತಾವು ನೋಡಲಿಲ್ಲವಾಗಿ ಆ ರೆಕ್ಕೆಹಾವಿನ ತಾವನ್ನು ಪಾಪಾತ್ತಿಯೇ ಪತ್ತೆಹಚ್ಚಿ ತೋರಿಸಲು ದುಂಬಾಲು ಬಿದ್ದರು. ಇದ್ಯಾವುದೋ ಹೊಸ ತಲೆನೋವನ್ನು ನೆತ್ತಿ ಮೇಲಿಟ್ಟುಕೊಂಡಂತೆ ಬೇಜಾರುಪಟ್ಟುಕೊಂಡ ಪಾಪಾತ್ತಿಯು ಕೈಕಟ್ಟಿಕೊಂಡು ತನ್ನೆದುರು ಕುಳಿತ ದೊಂಬರ ಹುಡುಗರಿಗೆ 'ಕೊಡೆಪಾವಿನ ಮಾದರಟ್ಟಿಯಲ್ಲಿ ಕುಟ್ರಪ್ಪನೆಂಬ ಮಾಟಕಾರನ ಮನೆಯೆದುರಿಗೆ ಒಂದು ಪರಂಗಿಮರ ನೆಟ್ಟುಕೊಂಡಿದ್ದು, ಒಂದೊಮ್ಮೆ ರೆಕ್ಕೆಹಾವೊಂದು ಪರಂಗಿಹೂವನ್ನು ತಿನ್ನಲು ಆ ಮರದಲ್ಲಿ ಇದ್ದುದನ್ನು ತಾನು ಕಣ್ಣಾರೆ ನೋಡಿದ್ದಾಗಿಯೂ ಈಗ ಪರಂಗಿಮರವು ಹೂಬಿಡುವ ಕಾಲವಾದ್ದರಿಂದ ಬಹುಶಃ ಅಲ್ಲಿಗೆ ರೆಕ್ಕೆಹಾವು ಪರಂಗಿಹೂವು ತಿನ್ನಲು ಬಂದರೂ ಬರಬಹುದೆಂದು ಹೇಳಿ, ಹೇಗಾದರೂ ಮಾಡಿ ಕುಟ್ರಪ್ಪನ ಪರಂಗಿಮರದೊಳಗಿರುವ ರೆಕ್ಕೆಹಾವನ್ನು ಹಿಡಿದುತರಲು ಹೇಳಿದಳು. ಮತ್ತು ಇದೇ ತನಗೆ ತಿಳಿದಿರುವ ಕೊನೆಯ ತಾವೆಂದು ಹೇಳಿ ಕೈಚೆಲ್ಲಿಯೂ ಬಿಟ್ಟಳು. ಪರಂಗಿಮರವನ್ನು ಬುಡಸಮೇತ ಕಿತ್ತು ಕೊಡವಿದರೂ ಸರಿಯೇ ರೆಕ್ಕೆಹಾವಿನೊಡನೆಯೇ ವಾಪಸ್ಸು ಬರುವುದಾಗಿ ದೊಂಬರ ಹುಡುಗರು ಪಾಪಾತ್ತಿಯ ಕಾಲಿಗೆಬಿದ್ದು ಅಲ್ಲಿಂದ ಹೋದರಲ್ಲ.. ನಂತರ ಹುಯ್ಯೆನ್ನುವ ತಟಿಗೆಮನೆಯೊಳಗೆ ಒಬ್ಬಳೇ ಆದ ಪಾಪಾತ್ತಿಗೆ ಏನೇನೋ ನೆನಪಾಗಲುತೊಡಗಿ ಒಂದೆಡೆ ದುಕ್ಕವೂ, ಇನ್ನೊಂದೆಡೆ ನಗುವೂ ಕೈಕ್ಕೈ ಹಿಡಿದುಕೊಂಡೇ ಅವಳೆದುರು ಕೊಮ್ಮಕೊಮ್ಮನೆ ಕುಣಿಯಲುತೊಡಗಿದವು.

ಇದಕ್ಕೆ ಸರಿಯಾಗಿ ಎಂಟು ತಿಂಗಳ ಹಿಂದೆಯಷ್ಟೇ ಪಾಪಾತ್ತಿ ಆ ಕೊಡೆಪಾವು ಅನ್ನೋ ಊರಲ್ಲದ ಊರೊಳಗೆ ತಲೆಯೆತ್ತಿಕೊಂಡು ತನ್ನ ಗಂಡ ಪುತ್ರನೊಡನೆ ಬದುಕುತ್ತಿದ್ದಂಥವಳಾಗಿದ್ದಳು. ಅದ್ಯಾವುದೋ ಗ್ರಹಚಾರ ತಲೆಕೆಳಗಾಗಿ ಬಿದ್ದದಿನದಂದು ಕೊಡೆಪಾವಿನ ಚವುಡಮ್ಮನ ವೃತ್ತದೊಳಗೆ ಬೆಳ್ಳಬೆಳಿಗ್ಗೆಯೇ ಪಾಪಾತ್ತಿಯ ಗಂಡಸು ಪುತ್ರ ಅನ್ನುವ ನಡುವಯಸ್ಕ ಜೀವಿಯೊಂದರ ಕಾರಣಕ್ಕೆ ಜನಿಸಿದ ಹೊಚ್ಚಹೊಸ ವರಾತವೊಂದು ಊರಮಂದಿಯ ಮೇಲೆ ದೆವ್ವದಂತೆ ಎರಗಿಬಿದ್ದಿತ್ತು. ಇದಕ್ಕು ಮೊದಲೇ ಭಟ್ಟಿಕಳ್ಳು ಕಾಯಿಸುವವರಿಗೂ, ಕುಡಿಯುವವರಿಗೂ, ಮಾರುವವರಿಗೂ ಅಬಕಾರಿ ಪೊಲೀಸ ರೇಡು, ದರಖಾಸ್ತು, ಅಮೃತಮಹಲು ಕಾವಲುಭೂಮಿಯನ್ನು ಒತ್ತುವರಿ ಮಾಡಿಕೊಂಡವರಿಗೆ ಕಂದಾಯಾಧಿಕಾರಿಗಳ ರೇಡು, ಅಂತ ಪರಿಪರಿಯಾದ ಕಾನೂನಾತ್ಮಕ ಪೀಕಲಾಟಗಳಿಗೆ ಈಡಾಗುತ್ತಿದ್ದ ಕೊಡೆಪಾವು ಪ್ರಜೆಗಳಿಗೆ ಪಾಪಾತ್ತಿಯ ಗಂಡ ಪುತ್ರ ಹೊಚ್ಚಹೊಸ ರೇಡೊಂದನ್ನು ಪರಿಚಯಿಸಿಬಿಟ್ಟಿದ್ದ. ಒಂದೆರಡು ಧ್ವನಿವರ್ಧಕಗಳು, ಐದಾರು ಚಿತ್ರಗೀತೆಗಳ ಸಿಡಿತಟ್ಟೆ, ಒಂದು ಸಿಡಿಪ್ಲೇಯರು ಮತ್ತು

ಬ್ಯಾನರುಗಳನ್ನು ಚವುಡಮ್ಮನ ಸರ್ಕಲ್ಲಿನ ಮೂಲೆಯೊಂದರಲ್ಲಿ ಜೋಡಿಸಿಕೊಂಡ ಅವನು ವಯಸ್ಸಿಗೆ ಬಂದಿದ್ದ ತನ್ನೊಂದು ಗಂಡುಮಗ ಮತ್ತು ಹೆಂಡತಿ ಪಾಪಾತ್ತಿಯೊಡನೆ ತನ್ನ 'ಕನ್ನಡಕುವರ ರಸಮಂಜರಿ ಕಂಪನಿ' ಎಂಬ ಬಂಡವಾಳವನ್ನೇ ಕೇಳದ ರಸಮಂಜರಿ ಕಂಪನಿಯನ್ನು ಶುರು ಹಚ್ಚಿಕೊಂಡಿದ್ದ. ಕಂಪನಿ ಅಂದರಾದರೂ ಏನು? ಕನ್ನಡದ ವೀರತನವನ್ನು ತಾರಾಮಾರಾ ಹೊಗಳಿ ಬಿಸಾಕುವ ಪಿಚ್ಚರುಹಾಡುಗಳು, ತಾಯಿತಂಗಿ ತವರು ಸೆಂಟಿಮೆಂಟನ್ನು ಎಳೆದೆಳೆದು ಕೇಳುಗರ ಕರುಳೇ ಛಿದ್ರಗೊಳ್ಳುವಂತೆ ಮಾಡಬಲ್ಲಂತಹ ಜನಪದಗೀತೆಗಳು, ಮತ್ತು ವರ್ತಮಾನದ ಐಟಂಹಾಡುಗಳನ್ನು ಒಂದಾದ ಮೇಲೊಂದರಂತೆ ಹಾಕಿ ಸಂಸಾರದೊಟ್ಟಿಗೆ ಒಬ್ಬರಾದ ಮೇಲೊಬ್ಬರು ಜನಸೇರುವಲ್ಲಿ ಕುಣಿಯುವುದು ಎನ್ನುವುದು ಪುತ್ರನ ರಸಮಂಜರಿ ಕಂಪನಿಯ ಅರ್ಥವಾಗಿತ್ತು. ಅದರಂತೆ ಕನ್ನಡದ ಹಾಡುಗಳಿಗೆ ತಲೆಗೆ ಹಳದಿಟೇಪು ಕಟ್ಟಿಕೊಂಡ ಇವನೂ, ಸೆಂಟಿಮೆಂಟು ಹಾಡುಗಳಿಗೆ ಕಣ್ಣಲ್ಲಿ ನೀರು ಸುರಿಸುತ್ತ ಎದೆಎದೆ ಬಡಿದುಕೊಂಡು ಹಣೆಹಣೆ ಚಚ್ಚಿಕೊಳ್ಳುತ್ತ ಪಾಪಾತ್ತಿಯೂ, ಐಟಂಹಾಡುಗಳಿಗೆ ಇಷ್ಟಬಂದ ದಿಕ್ಕಿಗೆ ಕೈಕಾಲು ಎಸೆಯುತ್ತ ಇವನ ಮಗನೂ ತಾರಾಮಾರಾ ನಟಿಸುತ್ತ ಕುಣಿಯುತ್ತಿದ್ದರು. ಆವತ್ತೂ ಸಹ ಎಂದಿನಂತೆ ಪುತ್ರ 'ಕನ್ನಡದ ಸಿದ್ಧ.. ಹಾಡೋದಕ್ಕೆ ಸಿದ್ದ.. ಕನ್ನಡಕ್ಕೆ ಇವನೂ.. ಸಾಯೋದಕ್ಕು ಸಿದ್ಧ' ಅನ್ನುವ ಹಾಡಿಗೆ ಪೊಸುಕ್ಕು ಪೊಸುಕ್ಕನೆ ಕೈ ಕಾಲು ತಿರುಗಿಸಿಕೊಂಡು ಆಗಾಗ್ಗೆ ಬಲಗೈಲಿ ನೆಲವನ್ನು ಗುದ್ದುತ್ತ, ಮಣ್ಣು ಬಳಿದು ಎದೆಗೆ ರುಬ್ಬಿಕೊಳ್ಳುತ್ತ ಕುಣಿಯುತ್ತಿದ್ದ. ಥಟ್ಟನೆ ನೋಡಿದರೆ ತಲೆಮೀಸೆ ಗಡ್ಡಗಳ ಕೂದಲೆಲ್ಲ ಬೆಳ್ಳಗೆದ್ದುಹೋದ ಕೃಶದೇಹವೊಂದು ನಿಂತಲ್ಲಿ ನಿಲ್ಲಲಾಗದೆ ಈ ಪರಿ ಯಾಕಾದರೂ ತೂರಾಡುತ್ತಿದೆಯಲ್ಲ ಎಂದೆನೆಸಿ ಕಂಡಕಂಡವರೆಲ್ಲ ಪುತ್ರನ ರಸಮಂಜರಿ ಕುಣಿತದೆದುರು ರವಂಡು ಕಟ್ಟಿದ್ದರು. ಹೀಗೆ ತನ್ನ ಪಾಡಿಗೆ ತಾನು ತಲೆಗೆ ಹಳದಿಟೇಪು ಕಟ್ಟಿಕೊಂಡು ಹಣೆಗೆ ನಾಮ ಎಳೆದುಕೊಂಡು ಕುಣಿತದ ಹೆಸರಿನಲ್ಲಿ ತಟ್ಟಾಡುತ್ತಿದ್ದ ಪುತ್ರನೆದುರು ಕರೆಂಟು ಆಫೀಸಿನ ವಿಜಿಲೆನ್ಸ್ ತಂಡದ ಒಂದು ಜೀಪು ಬಂದು ನಿಂತಿತ್ತು. ಅವರನ್ನೂ ತನ್ನ ಕೆಕರುಮಕರು ಕುಣಿತದ ಪ್ರೇಕ್ಷಕರೆಂದೇ ಪರಿಭಾವಿಸಿದ ಪುತ್ರನು ಅವನ ಪಾಡಿಗವನು 'ಕನ್ನಡದ ಸಿದ್ಧ ಸಾಯೋದಕ್ಕು ಸಿದ್ಧ' ಹಾಡಿಗೆ ಕುಣಿಯುತ್ತಲೇ ಇರುವಾಗ ವಿಜಿಲೆನ್ಸಿನವರು ಸೀದಾ ನುಗ್ಗಿದವರೇ ಪುತ್ರನ ಕುತ್ತಿಗೆಪಟ್ಟಿಗೆ ಕೈಹಾಕಿ ಕಪ್ಪಕಪ್ಪಾಳಕ್ಕೆ ಎರಡು ಬಾರಿಸಿ 'ಭೋಸುಡಿ ಮಗನೇ, ವ್ಯಾಟ್‌ಗಟ್ಟಲೆ ಕರೆಂಟ್ ಲೀಕೇಜ್ ಆಗಿ ನಮ್ಮ ಕೆಲಸಕ್ಕೆ ಕುತ್ತು ಬಂದು ಕುಂತಿರೋ ಟೈಮಲ್ಲಿ ಲೈಟುಕಂಬಕ್ಕೆ ವೈರುಹಾಕಿದ್ದೂ ಅಲ್ದೇ ಪುಗಸಟ್ಟೆ ಕರೆಂಟಲ್ಲಿ ಡ್ಯಾನ್ಸ್ ಬೇರೆ ಮಾಡ್ತೀಯ' ಅಂತ ದರದರನೆ ಎಳೆದು ಜೀಪಿನೊಳಗೆ ತುಂಬಿಕೊಂಡು ಬಿಟ್ಟರು. ಇನ್ನೊಬ್ಬ ಅಧಿಕಾರಿಯು ಅಲ್ಲಿ ಹಾಡುತ್ತಿದ್ದ ಧ್ವನಿವರ್ಧಕಗಳು, ಬ್ಯಾಟರಿ, ಅದನ್ನು ಲೈಟುಕಂಬಕ್ಕೆ ಜೋಡಿಸಿದ್ದ ವಯರು ಎಲ್ಲವನ್ನೂ ಒಂದು ಗೋಣಿಚೀಲದೊಳಗೆ ತುಂಬಿಕೊಂಡು ಅವನ ಹಿಂದೆಯೇ ಅದನ್ನೂ ಜೀಪಿಗೆಸೆದರು.

ಪುರ್‍ರನ ಹೆಂಡತಿ ಪಾಪಾತ್ತಿಯು ಕರೆಂಟು ವಿಜಿಲೆನ್ಸಿನವರ ಎರಡೂ ಕಾಲುಗಳಿಗೆ ಬ್ರಹ್ಮಗಂಟಿನಂತೆ ಸುತ್ತಿ ಹಾಕಿಕೊಂಡು ಅಂಗಲಾಚುತ್ತ ತನ್ನ ಗಂಡನನ್ನು ಬಿಟ್ಟುಬಿಡಲು ಸಲ್ಲಿಸಿದ ಕರುಣಾಜನಕ ಮನವಿಯು ವಿಫಲವಾದ ಕಾರಣ ಪುರ್‍ರನ ಮೇಲೆ ಕರೆಂಟು ಕಳ್ಳತನದ ಆರೋಪದ ಮೇಲೆ ಅರೆಸ್ಟು ಮಾಡಿದ ವಿಜಿಲೆನ್ಸಿನವರು ತಮ್ಮಪಾಡಿಗೆ ತಾವು ರುಮ್ಮುರುಮ್ಮೆಂದು ಜೀಪು ಬಿಟ್ಟುಕೊಂಡು ಹೊರಟೇ ಹೋಗಿದ್ದರು.

ಪುರ್‍ರನ ರಸಮಂಜರಿ ಕಂಪನಿಯ ಮೇಲೆ ಲೈಟುಕಂಬದಿಂದ ಕರೆಂಟು ಕದಿಯುತ್ತಿದ್ದ ಆರೋಪದ ಮೇಲೆ ವಿಜಿಲೆನ್ಸಿನವರು ರೇಡು ಮಾಡಿ ದರದರನೆ ಎಳೆದೊಯ್ದಿದ್ದು ಕೊಡೆಪಾವು ಜನರಿಗೆ ಹೊಸಬಗೆಯ ಪೀಕಲಾಟ ತಂದಿಟ್ಟುಕೊಂಡಿತ್ತು. ಅಲ್ಲಿಯವರೆಗೂ ಆ ಸಣ್ಣ ಊರಿನ ಬಡವರು ತಮ್ಮ ಮನೆಗಳಿಗೆ ಲೋಕಲ್ ಎಲೆಕ್ಟ್ರಿಷಿಯನ್ ಆಗಿದ್ದ ಸಕ್ರೆಮಲ್ಲನಿಂದ ಲೈಟುಕಂಬಕ್ಕೆ ವೈರು ಸಿಗಿಸಿ ಮನೆಬೆಳಕು ಪಡೆಯುವುದು ತಮ್ಮ ಆಜನ್ಮಸಿದ್ಧ ಹಕ್ಕೆಂದೇ ಬಗೆದಿದ್ದರು. ಪ್ರತಿ ತಿಂಗಳೂ ಆ ಕಡೆಯಿಂದ ಲೈಟುಬಿಲ್ಲಿನವರು ಮನೆಮನೆಗಳಲ್ಲಿ ಬಿಲ್ಲು ಬರೆದುಕೊಂಡು ಬಿಲ್ಲು ಕಟ್ಟದವರ ಮೀಟರು ಕಿತ್ತುಕೊಂಡು ಹೋಗುತ್ತಿದ್ದರೆ, ಈ ಕಡೆಯಿಂದ ಸಕ್ರೆಮಲ್ಲ ಟಕಟಕನೆ ಮತ್ತೆ ಲೈಟುಕಂಬಗಳಿಂದ ಮನೆಮನೆಗಳಿಗೆ ಅನಧಿಕೃತವಾಗಿ ಕರೆಂಟು ಎಳೆದು ಕೊಡುತ್ತಿದ್ದ. ಬಾವಿಗೆ ನೀರೆತ್ತಲು ಮೋಟರು ಪಂಪುಗಳನ್ನು ಜೋಡಿಸಿಕೊಂಡಿದ್ದ ಕೆಲವು ಉಳ್ಳವರಿಗೂ ಸಕ್ರೆಮಲ್ಲ ಖರ್ಚಿಲ್ಲದೆಯೇ ಕರೆಂಟು ಕೊಡುವ ಭಗವಂತನಾಗಿ ಹೋಗಿದ್ದನು. ಈಗ ಇದ್ದಕ್ಕಿದ್ದಂತೆಯೇ ಇದನ್ನು ಪತ್ತೆ ಮಾಡಿ ಅರೆಸ್ಟು ಮಾಡಲು ಕರೆಂಟಾಫೀಸಿನಿಂದ ವಿಜಿಲೆನ್ಸಿನವರು ಹೆಡ್ಡಾಫೀಸಿನಿಂದ ನಮ್ಮೂರು ಕೊಡೆಪಾವಿಗೆ ಬಂದಿದ್ದಾರೆಂದು ಪುರ್‍ರನ ಪ್ರಕರಣದ ಮೂಲಕ ತಿಳಿದ ಮೇಲೆ ಇಷ್ಟುರವರೆಗೂ ತಂತಿಗಳಲ್ಲಿ ಹರಿಯುತ್ತಿರುವ ಕರೆಂಟಿನ ಮೇಲೆ ರಾಜಾರೋಷವಾಗಿ ಹಕ್ಕು ಸಾಧಿಸಿದ್ದವರೆಲ್ಲರ ತೊಡೆಯ ನರಗಳು ಲಠಲಠನೆ ಸೆಟಗೊಂಡಂತಾಗಿಹೋಗಿತ್ತು. ಇದೇ ಸಮಸ್ಯೆ ಬಸ್‌ಸ್ಟಾಪಿನ ಪಕ್ಕದಲ್ಲೇ ಸೇಂದಿ ಅಂಗಡಿ ನಡೆಸುತ್ತಿದ್ದ ಬುಲೆಟ್‌ಮಾಮ ಎಂಬ ದುಡಿಯದೆಯೂ ಬದುಕುತ್ತಿದ್ದ ಜೀವಿಗೂ ತಗುಲಿಕೊಂಡಿತ್ತು. 'ಇಲ್ಲಿ ತೆಂಗಿನಮರದ ತಾಜಾ ನೀರಾ ದೊರೆಯುತ್ತದೆ' ಎಂಬ ಬೋರ್ಡನ್ನು ಅವನು ಅಂಗಡಿಯೆದುರು ನೇತಾಡಿಸಿದ್ದನಾದರೂ ಆ ಅಂಗಡಿಯೊಳಗೆ ಕುಪ್ಪಿಗಳಲ್ಲಿ ತುಂಬಿ ಮಾರುತ್ತಿದ್ದುದು ಅಬಕಾರಿ ವಿಜಿಲೆನ್ಸಿನವರ ಕಣ್ಣಿಗೆ; ಕಂಡದ್ದೆಲ್ಲವನ್ನೂ ಎರಚಿ ಇಳಿಸಲಾಗುತ್ತಿದ್ದ ಬೈನೆಸೇಂದಿ ಮತ್ತು ಆನೆದಿಬ್ಬದ ಕಳ್ಳುಸರಾಯಿ ಇಳಿಸುವ ತಜ್ಞ ಮಚ್ಚನುಮನ ಮನೆಯಿಂದ ತರಿಸಿದ ಭಟ್ಟಿಕಳ್ಳು ಮಾತ್ರವೇ ಆಗಿತ್ತು.

ಪುರ್‍ರನ ಗೈರುಹಾಜರಿಯಲ್ಲಿ ಲೈಟುಕಂಬದಿಂದ ಕರೆಂಟು ಎಳೆದುಕೊಳ್ಳುವ ವಿದ್ಯೆಯೂ ಗೊತ್ತಿಲ್ಲದೆ ರಸಮಂಜರಿ ಕಂಪನಿಯನ್ನು ನಡೆಸುವಷ್ಟು ಯಾವ ತಾಕತ್ತೂ

ದಕ್ಕಿಲ್ಲದ ಪಾಪಾತ್ತಿಯು ಹೊಟ್ಟೆಪಾಡಿಗೆಂದು ಬುಲೆಟ್‌ಮಾಮನ ಸೇಂದಿಅಂಗಡಿಯಲ್ಲಿ ಸೇಂದಿ–ಕಳ್ಳು ಕುಡಿಯುವವರು ನಂಚಿಕೊಳ್ಳಲು ಒಗ್ಗರಣೆ ಬಿದ್ದ ಕಡ್ಲೆಉಸಲಿ, ಸುಟ್ಟಮೀನು, ಕಡ್ಲೆಪಾಕೆಟ್ಟು ಇತ್ಯಾದಿಗಳನ್ನು ಪೂರೈಸುವ ಕೆಲಸಕ್ಕೆ ನಿಂತಿದ್ದಳು. ಜೊತೆಗೆ ತನ್ನ ಕುಲಪರಂಪರೆಯ ಒಂದಿಷ್ಟು ಪೂಜೆ–ಮಂತ್ರ, ತಾಯತ ಮಂತ್ರಿಸುವ ವಿದ್ಯೆಯೂ ಗೊತ್ತಿದ್ದರಿಂದ ಅದನ್ನೂ ಒಂದು ಉಪಕಸುಬಾಗಿ ಮಾಡುತ್ತ ಕಷ್ಟವೆಂದು ಬಂದವರಿಗೆ ತನಗೆ ತಿಳಿದಷ್ಟು ದೈವಪೂಜೆ ಆಧರಿತ ಪರಿಹಾರಗಳನ್ನು ಕೊಡುತ್ತ ಪುಡಿಗಾಸುಗಳಲ್ಲಿ ಬದುಕುತ್ತಿರುವಾಗಲೇ ಮಾದಿಗರ ಕುಟ್ರಪ್ಪನು ಪಾಪಾತ್ತಿಯ ಬದುಕಿನೊಳಗೆ ತುಯ್ಯುತ್ತ ಬಂದಿದ್ದನು. ಲಡಕಾಸಿ ದೇಹದ ಕುಟ್ರಪ್ಪನ ಎರಡೂ ಕೆನ್ನೆಗಳೂ ಕುಟುರಿಕೊಂಡು ದುಮ್ಮುದುಮ್ಮನೆ ಬೆಳೆದಿದ್ದರಿಂದ ಕೊಡೆಪಾವಿನ ದೈವೋಪಾಸಕರು ಅವನನ್ನು ಕುಟ್ರಪ್ಪನೆಂದೇ ಅಡ್ಡಹೆಸರಿಟ್ಟು ಕರೆಯುತ್ತಿದ್ದರಲ್ಲ.. ಅಂತಹ ಕುಟ್ರಪ್ಪನನ್ನು ಕಂಡರೆ ಕೊಡೆಪಾವಿನ ಮೇಲುಕುಲಸ್ಥರೂ 'ಯಾಕೆ ಬೇಕಪ್ಪ ಮಡಕೆಮಾಟದೋನ ಸವಾಸ' ಎಂದು ಭಯಮಿಶ್ರಿತವಾಗಿಯೇ ಸಮಾನಂತರದಲ್ಲಿ ಅವನನ್ನು ನೋಡುತ್ತಿದ್ದರು. ಕುಟ್ರಪ್ಪನ ಎರಡು ಅಂಗೈಯಗದ ಮನೆಯ ಗೋಡೆಗಳ ತುಂಬೆಲ್ಲ ದೇಶದೆಲ್ಲೆಡೆ ಅಸ್ತಿತ್ವದಲ್ಲಿರುವ ದೇವದೇವತೆಗಳ ಪಟಗಳು ಕುಟ್ರಪ್ಪನ ಗುಲಾಮರಾಗಿ ಹೋದೆವಲ್ಲ ಎಂಬ ಬೇಜಾರಿನ್ನಲೇನೋ ಎಂಬಂತೆ ಮೊಳೆ ಹೊಡೆಸಿಕೊಂಡು ನೇತಾಡುತ್ತಿದ್ದವು. ಇದ್ದ ಹೆಂಡತಿಯ ಮರಣಾನಂತರ ಒಂಟಿಸಲಗದಂತೆ ಬದುಕುವುದನ್ನು ರೂಢಿ ಮಾಡಿಕೊಂಡಿದ್ದ ಅವನು ದಿನಬೆಳಗಾದರೆ ಆ ದೇವರಪಟಗಳ ಹಣೆ ಮುಖಕ್ಕೆಲ್ಲ ನೆನ್ನೆ ಮೆತ್ತಿರುತ್ತಿದ್ದ ಅರಿಶಿಣ–ಕುಂಕುಮ ಗಂಧದ ಲೇಪನವನ್ನು ಒದ್ದೆಬಟ್ಟೆಯಲ್ಲಿ ಒರೆಸಿ ಮತ್ತೆ ಮೊದಲಿನಿಂದ ಅದೇ ಹಣೆಮುಖಗಳಿಗೆ ಹೊಸದಾಗಿ ಅರಿಶಿಣ ಕುಂಕುಮವನ್ನು ಮೆತ್ತುತ್ತಿದ್ದ. ಹೊಸದಾಗಿ ಆ ಮನೆ ಹೊಕ್ಕವರಿಗೆ ಕುಟ್ರಪ್ಪನ ಮನೆಯಲ್ಲಿ ದೇವರುಗಳಿವೆಯೋ ಅಥವ ದೇವರುಗಳ ಮನೆಯೊಳಗೆ ಕುಟ್ರಪ್ಪನೇ ಬಾಡಿಗೆಗಿದ್ದಾನೋ ಎಂಬ ಕಳವಳವುಂಟಾಗುತ್ತಿತ್ತು. ಅವನ ಮೀಸೆ ಇಣುಕುತ್ತಿದ್ದ ಮಗ ಗಬ್ರಾಟಿರಾಮನು 'ಮಚ್ಚು ಹಿಡಿದುಕೊಂಡು ತಲೆಕೆದರಿಕೊಂಡು ನಡೆದುಬರುತ್ತಿದ್ದ ಜೋಗಿ ಪಿಚ್ಚರಿನ ಶಿವರಾಜಕುಮಾರ್' ಪೋಸ್ಟರನ್ನೂ ಎಲ್ಲೋ ಒಂದು ಮೂಲೆಯಲ್ಲಿ ಅಂಟಿಸಿದ್ದರೆ ಇದೂ ಯಾವುದೋ ಹೊಸ ದೇವರಿರಬಹುದೆಂದು ಭ್ರಮಿಸಿ ಶಿವರಾಜಕುಮಾರ್ ಹಣೆಗೂ ಅರಿಶಿಣ–ಕುಂಕುಮ ಮೆತ್ತಿ ಊದುಗಡ್ಡಿ ಬೆಳಗುಷ್ಟರ ಮಟ್ಟಿಗೆ ಈ ದೇವರಫೋಟೋಗಳು ಕುಟ್ರಪ್ಪನನ್ನು ಭ್ರಮೆಯ ಬಾವಿಯೊಳಗೆ ಕೆಡವಿಕೊಂಡು ಮನಸೋಇಚ್ಛೆ ತುಳಿಯುತ್ತಿದ್ದವು. ಎಲ್ಲೋ ಬಿದ್ದುಬಂದ ಮಕ್ಕಳು ದೆವ್ವ ಮೆಟ್ಟಿಕೊಂಡಂತೆ ಮಂಕಾಗಿದ್ದರೆ ಎಕ್ಕದೆಲೆಯ ಮೇಲೆ ಅರಿಶಿಣದ ಅನ್ನ ತುಂಬಿ ನಿಂಬೆಹಣ್ಣಿನ ಹೋಳಿಟ್ಟು ಯಾವ ದೇಶದವರಿಗೂ ಅರ್ಥವಾಗದ ಭಾಷೆಯಲ್ಲಿ ಮಂತ್ರಪ್ರೋಕ್ಷಣೆ ಮಾಡಿ ಬಿದ್ದಬೀಳು ಮಾಟವನ್ನೂ ಮಾಡುತ್ತಿದ್ದ. ಇದರೊಟ್ಟಿಗೆ ತಾಯತದ ವ್ಯಾಪಾರವನ್ನೂ ಮಾಡುತ್ತಿದ್ದ

ಅವನು ಚಂದ್ರಸೆಟ್ಟರ ಗ್ರಂಥಿಗೆ ಅಂಗಡಿಯಿಂದ ತಾಮ್ರದ ಹಾಳೆಗಳನ್ನು ಕೇಜಿಲೆಕ್ಕದಲ್ಲಿ ತಂದು ಅದರೊಳಗೆ ನಕ್ಷತ್ರಪಕ್ಷತ್ರ ಪಾಂಪೂಂಪೋಂ ಅಂತೇನೇನೋ ದಬ್ಬಳದಲ್ಲಿ ಗೀಚಿ ಅದಕ್ಕೆ ಕಟ್ಟುಗಾಜು ಹಾಕಿಸಿ ತನ್ನ ಬಳಿ ಕಷ್ಟನಿವಾರಣೆಗೆಂದು ಬಂದವರಿಗೆ ದೃಷ್ಟಿಯಂತ್ರವೆಂದು ನಂಬಿಸಿ ಅದನ್ನೂ ಮಾರಿಹಾಕುತ್ತಿದ್ದ.

ಮಾದರಟ್ಟಿಯ ಜನಗಳಿಗೆ ಕುಟ್ರಪ್ಪನ ಹಿಂದುಮುಂದಣ ಎಲ್ಲ ವಿವರಗಳೂ ತಿಳಿದಿದ್ದರೂ ಅವನು ನೆಟ್ಟುಬೆಳೆಸಿದ್ದ ಆವೊಂದು ಪರಂಗಿಮರದ ಬಗ್ಗೆ ಬೆಳೆಸಿಕೊಂಡಿದ್ದ ಆಪ್ತತೆ ಮತ್ತು ದೇವರಪೂಜೆಗೂ ಮೊದಲು ಆ ಪರಂಗಿಮರಕ್ಕೆ ಊದುಕಡ್ಡಿ ಬೆಳಗಿ ಕುಂಕುಮ ತೀಡಿ ಏನನ್ನೋ ಧ್ಯಾನಿಸುವವನಂತೆ, ತಪೋನಿರತನಂತೆ ಅದನ್ನು ಆರಾಧಿಸುತ್ತಿದ್ದುದು ಯಾಕಾಗಿ ಎಂಬ ವಿವರ ಮಾತ್ರ ದಕ್ಕಿರಲಿಲ್ಲ. ಆ ಪರಂಗಿಮರದೊಳಗೆ ಹಣ್ಣುಗಳು ಬಿಟ್ಟಾಗಲೂ ಅದನ್ನು ಕೀಳಲು–ಕೆಡವಲು ಕುಟ್ರಪ್ಪ ಯಾವತ್ತೂ ಯಾವ ಮೀಸೆಗಂಡಸಿಗೂ ಆಸ್ಪದ ಕೊಟ್ಟವನಲ್ಲ. ಬೆಳೆದ ಪರಂಗಿಹಣ್ಣು ಕಳಿತು ತಾನಿದ್ದ ಗೊಂಚಲಿಗೆ ಭಾರವಾಗಿ ಕೆಳಗುದುರಿದರಷ್ಟೇ ಅದನ್ನು ಪ್ರಸಾದದಂತೆ ಎತ್ತಿಕೊಂಡು ಅದಕ್ಕೆ ಕಾಯಿತುರಿ, ಸಕ್ಕರೆ–ತುಪ್ಪ ಬೆರೆಸಿ ಚರ್ಮು ಮಾಡಿ ಪೂಜೆಗಿಡುತ್ತಿದ್ದ. ಬೇವಿನಮರ, ಆಲದಮರ, ತುಂಬೇಗಿಡದಂತಹ ದೇವಪ್ರಿಯವೃಕ್ಷಗಳನ್ನೆಲ್ಲ ಬಿಟ್ಟು ಇವನು ಪರಂಗಿಮರವನ್ನು ಆರಾಧನೆಗೆ ಆಯ್ದುಕೊಂಡಿರುವುದು ಯಾಕೆಂದು ಮಾದರಟ್ಟಿಯೂ ಸೇರಿದಂತೆ ಕೊಡೆಪಾವಿನ ಯಾರಿಗೂ ಗೊತ್ತಿರಲಿಲ್ಲ. ಹೀಗಿದ್ದ ಕುಟ್ರಪ್ಪನಿಗೆ ಯಾರ ಮೇಲಾದರೂ ಮಾಟ ಪ್ರಯೋಗವಾಗಿದ್ದರೆ ಅದನ್ನು ತೆಗೆಸುವ 'ಕಟ್ಟು ಒಡೆಯುವ ವಿದ್ಯೆ'ಯೊಂದು ಸುತ್ರಾಂ ಬರುತ್ತಿರಲಿಲ್ಲ. ಯಾರ ಬಳಿಯೋ ಅದರ ಬಗ್ಗೆ ಕೇಳಿದ್ದನಾದರೂ ಆ ಪೂಜೆಗೆ ಬಳಸುವ ಆರು ಬಗೆಯ ಹೂವುಗಳ ಹೆಸರುಗಳು ನೆನಪಿಗೇ ಉಳಿಯದೆ ಯಾಕೋ ಮರೆತು ಮರೆತು ಹೋಗುತ್ತಿದ್ದವು. ಇದು ಸ್ಪಷ್ಟವಾಗಿ ಗೊತ್ತಿಲ್ಲದೆ ಮಾಟದ ಕಟ್ಟು ಹೊಡೆಯಲು ಹೋಗಿ ಈಗಾಗಲೇ ಯಾರ ಮೇಲೋ ಪ್ರಯೋಗವಾಗಿರುವ ಮಾಟವು ತನ್ನ ಮೇಲೆಯೇ ಎರಗಿಬಿದ್ದು ಇರುವ ಬೆರಳೆಲ್ಲ ಸುರುಟಿಕೊಂಡು ಕರಗಿ ಮೊಂಡೆದ್ದು ಕುಷ್ಠರೋಗ ಬಂದರೂ ಬರಬಹುದೆಂಬ ಭಯವೂ ಅವನನ್ನು 'ಪ್ರತಿಮಾಟ'ದ ಪ್ರಯೋಗಕ್ಕಿಳಿಯಲು ಹೆದರಿಸುತ್ತಿತ್ತು. ಈ ಕಟ್ಟು ಒಡೆಯುವ ವಿದ್ಯೆಯೇ ರಸಮಂಜರಿ ಕಂಪನಿಯ ಓನರ್ ಪುರ್ರನ ಹೆಂಡತಿ ಪಾಪಾತ್ತಿಯ ಬಳಿಗೆ ಕುಟ್ರಪ್ಪ ಹೋಗುವಂತೆ ಮಾಡಿತ್ತು. ಇದಾದ ಮೇಲೆಯೇ ಕೊಡೆಪಾವು ಅನ್ನೋ ಊರಿನೊಳಗೆ ಯಾರಿಗೂ ಯಾವತ್ತೂ ಅರ್ಥವೇ ಆಗಲಾರದ ಕಥೆಯೊಂದು ನಡೆದುಹೋಗಿದ್ದು.

ಇತ್ತಲಾಗಿ ಬುಲೆಟ್‌ಮಾಮನ ಸೇಂದಿಅಂಗಡಿಯೊಳಗೆ ನೆಂಚಿಕೆ ಸಾಮಗ್ರಿಗಳ ಮಂಕರಿವ್ಯಾಪಾರಕ್ಕೆ ಇಳಿದಿದ್ದ ಪಾಪಾತ್ತಿಗೆ ಸಾಕಷ್ಟು ವಾಮಾಚಾರ ಮತ್ತು ದೈವವಿದ್ಯೆಗಳ ಜೊತೆಗೆ ಕಟ್ಟೊಡೆಯುವ ವಿದ್ಯೆಗಳೂ ಗೊತ್ತಿವೆಯೆಂಬ ಸುದ್ದಿಯು ಅದು ಹೇಗೋ

ಆ ಕಿವಿ ಹತ್ತಿ ಈ ಕಿವಿ ಇಳಿದು ಕುಟ್ರಪ್ಪನ ತಲೆಯೊಳಗೂ ಬಂದು ಟೆಂಟು ಹಾಕಿತ್ತು. ಪ್ರಯೋಗವಾದ ಮಾಟದ ಕಟ್ಟೊಡೆಯಲು ಬೇಕಾಗುವ ಆರು ಥರದ ಹೂವುಗಳು ಮತ್ತು ಅವುಗಳನ್ನು ಬಳಸುವ ಪ್ರಕಾರವನ್ನು ಪಾಪಾತ್ತಿಗೆ ಗೊತ್ತಿದ್ದರೆ ಕಲಿಯಲೆಂದು ಸಂಜೆಯ ಹೊತ್ತು ಕಳ್ಳುಸೇವನೆಗೆ ಹೋಗುತ್ತಿದ್ದ ಅವನು ಅಂಗಡಿಯಲ್ಲಿ ಸೇಂದಿ ಅಳೆದುಕೊಡುತ್ತಿದ್ದ ಸೇಂದಿಬಾಬುವನ್ನು ಈ ಕುರಿತು ವಿಚಾರಿಸಲಾಗಿ ಸೇಂದಿಬಾಬುವು ಕುಟ್ರಪ್ಪನನ್ನೂ ಪಾಪಾತ್ತಿಯನ್ನೂ ಇವರಿಬ್ಬರ ಬದುಕಿನೊಳಗೆ ಸಂಭವಿಸಲಿದ್ದ ಅನಾಹುತಗಳ ಬಗ್ಗೆ ಯಾವ ಪರಿವೆಯೂ ಇಲ್ಲದೆ ಒಬ್ಬರಿಗೊಬ್ಬರನ್ನು ಪರಿಚಯಿಸಿ ಅಪರಿಮಿತ ಪಾಪವನ್ನು ಕಟ್ಟಿಕೊಂಡಿದ್ದನು. ಈ ತರನಾಗಿ ಜೊತೆಯಾದ ಕುಟ್ರಪ್ಪ ಮತ್ತು ಪಾಪಾತ್ತಿಯರು ತಮ್ಮ ತಮ್ಮ ಕುಲವಿದ್ಯೆಗಳ ಬಗ್ಗೆ ಕುಂತು ಮಾತನಾಡುವಷ್ಟು ಸಲುಗೆ ಬೆಳೆದ ಮೇಲೆ ಕುಟ್ರಪ್ಪನು ತಾನು ಈ ಮಟ್ಟದ ಹೆಸರು ಸಂಪಾದನೆ ಮಾಡಿದವನಾಗಿ ಮಂಕರಿವ್ಯಾಪಾರದ ಪಾಪಾತ್ತಿಯೆದುರು ಕಟ್ಟು ಒಡೆಯುವ ವಿದ್ಯೆ ಕಲಿಸಿಕೊಡೆಂದು ಯಾವ ಬಾಯಲ್ಲಿ ಅಂಗಲಾಚುವುದೆಂದು ಪಿತೂರಿ ನಡೆಸುತ್ತಿದ್ದ ದಿನವೊಂದರಲ್ಲಿ ಮಾಟದ ಕಟ್ಟೊಡೆಯುವ ಪ್ರಕಾರವನ್ನು ಕಲಿಸಲು ಮೆತ್ತಗೆ ಹಲ್ಲುಗಿಂಜುತ್ತ ಅಂದಿದ್ದನು. ತನಗೆ ತಿಳಿದಿದ್ದರೂ ಹೆಚ್ಚಾಗಿ ಅದರ ಪ್ರಯೋಗ ನಡೆಸುವ ಪ್ರಮೇಯ ತನಗೆ ಬಂದಿಲ್ಲವೆಂದು ಇರುವ ಸತ್ಯ ಒಪ್ಪಿಕೊಂಡ ಪಾಪಾತ್ತಿಯು ಅದನ್ನು ಎಲ್ಲೆಂದರಲ್ಲಿ ಹೇಳಿಕೊಡುವಂತಹದ್ದಲ್ಲವೆಂದು ತಿಳಿಸಿ ನಿರ್ಮಾನುಷ ಜಾಗವೊಂದರಲ್ಲಿ ಮಾಟದ ಕಟ್ಟೊಡೆಯುವ ಪ್ರಕಾರವನ್ನು ಸವಿವರವಾಗಿ ಕುಟ್ರಪ್ಪನಿಗೆ ತಿಳಿಸಿಯೂ ಕೊಟ್ಟಿದ್ದಳು. ಹೀಗೆ ಕುಟ್ರಪ್ಪ ತನ್ನ ಬಳಿ ಕಟ್ಟೊಡೆಸಲು ಬರುತ್ತಿದ್ದ ಗಿರಾಕಿಗಳಿಗೆ ಧೈರ್ಯವಾಗಿ ಈ ಅಪಾಯಕಾರಿ 'ಪ್ರತಿಮಾಟ'ದ ಗುತ್ತಿಗೆಯನ್ನು ಸ್ವೀಕರಿಸಿ ಅವರ ಮೇಲೆ ಪ್ರಯೋಗವಾದ ಮಾಟಕ್ಕೆ ಉಲ್ಟಾಮಾಟ ಮಾಡಿ ಕಟ್ಟು ಒಡೆಯುವ ಮೂಲಕ ಬಂದವರ ಮನಸ್ಸೊಳಗೆ ನೆಮ್ಮದಿಯ ಹೂವುಗಳನ್ನು ನೆಟ್ಟು ಕಳಿಸುವಂತೆಯೂ ಆಯಿತು.

ಈನಡುವೆ ಕರೆಂಟು ಕಳ್ಳತನದ ಪ್ರಕರಣದಲ್ಲಿ ಗುರುತರ ಆರೋಪಿಯಾಗಿ ಜೈಲುಪಾಲಾಗಿದ್ದ ಪುರ್ರನೂ ವಿಜಿಲೆನ್ಸಿನವರು ವಿಧಿಸಿದ್ದ ದಂಡವನ್ನು ಕಟ್ಟಲಾಗದೆ ಅದಕ್ಕೆ ಬದಲಾಗಿ ೫ ತಿಂಗಳ ಸಾದಾಸಜೆಯನ್ನು ಆಯ್ದುಕೊಂಡು ಸಜೆ ಮುಗಿಸಿಕೊಂಡು ಹೊರಗೆ ಬಂದುದಾಗಿತ್ತಲ್ಲ, ಮತ್ತೆ ತನ್ನ 'ಕನ್ನಡಕುವರ ರಸಮಂಜರಿ ಕಂಪನಿ'ಯನ್ನು ಪುನರುಜ್ಜೀವನಗೊಳಿಸಲು ಧೈರ್ಯ ಸಾಲದೆ ಕುಂತಲ್ಲಿ ನಿಂತಲ್ಲಿ ಕರೆಂಟು ಆಫೀಸಿನ ವಿಜಿಲೆನ್ಸಿನವರ ವಂಶವೃಕ್ಷವನ್ನೆಲ್ಲ ನಾಲಿಗೆಗೆ ಎಳೆದುಕೊಂಡು ಅವರಿಗೆ ತನಗೆ ತಿಳಿದ ಸೃಜನಶೀಲತೆಯನ್ನೆಲ್ಲ ಒಟ್ಟುಬೆರೆಸಿ ತಾರಾಮಾರಾ ಉಗಿದುಕೊಂಡು ಅವನು ತಿರುಗಾಡುತ್ತಿದ್ದನು. ಇತ್ತ ಪಾಪಾತ್ತಿ ಮತ್ತು ಕುಟ್ರಪ್ಪನ ಪರಿಚಯದ ಸಂಬಂಧವು ಇಳಿಜಾರು ದಿಣ್ಣೆಯಿಳಿಯುತ್ತಿರುವ ಕುರುಡನಂತೆ ಎತ್ತೆತ್ತಲೋ ಹೋಗುತ್ತಿದೆಯೆಂಬ ಕಡುವಾಸನೆ ಸೇಂದಿಬಾಬುವಿಗೆ ಬಡಿಯತೊಡಗಿತ್ತು. ಈ

ಬಗ್ಗೆ ವಿಚಾರಿಸಿದಾಗ ಕುಟ್ರಪ್ಪನು ಸೇಂದಿಬಾಬುವಿಗೆ ಕೆಟ್ಟಾಕೊಳಕಾಗಿ ಬಾಯಿಗೆ ಬಂದಂತೆ ಬೈದಿದ್ದನು. ಅಷ್ಟರವರೆಗೆ ಪಾಪಾತ್ತಿಯ ಬಗ್ಗೆ ಮತ್ತೇನನ್ನೂ ಯೋಚಿಸದೆ ಗುರುವಿನಂತೆ ಪರಿಭಾವಿಸಿಕೊಂಡಿದ್ದವನಿಗೆ ಪಾಪಾತ್ತಿಯೊಳಗೂ ತನ್ನ ಒಳಹೊರಗನ್ನು ಕಲಕಲನೆ ತಿರುಗಿಸುವಂತಹದ್ದು ಏನೇನೋ ಇರುವುದು ಬೇಡವೆಂದರೂ ನೆನಪಿಗೆ ಬರುತ್ತಲೂ, ಅವನ್ನು ನೋಡುವಂತೆಯೂ, ಮುಟ್ಟುವಂತೆಯೂ, ಸವರುವಂತೆಯೂ ಅನಿಸುವಂತೆ ಆಗುತ್ತಿತ್ತು. ಎಂದಿಗಿಂತಲೂ ಕೊಂಚ ಆಸ್ಥೆಯಿಂದ ಪಾಪಾತ್ತಿಯೊಡನೆ ವರ್ತಿಸುತ್ತ, ಮಾತಾಡುತ್ತ, ಅವಳಿಗೆ ತಿಳಿಯದ್ದನ್ನು ಹೇಳಿಕೊಡುತ್ತ ಕುಟ್ರಪ್ಪ ತನಗೇ ತಿಳಿಯದೆಯೇ ತನ್ನೊಳಗೆ ಹುಟ್ಟಿದ್ದ ಪಿಶಾಚಿಯಂತಹ ಆಸೆಗಳ ಆಜ್ಞೆಗಳನ್ನು ಪಾಲಿಸುವವನಂತೆ ನಡೆದುಕೊಳ್ಳಲಾರಂಭಿಸಿದ್ದನು. ಆವತ್ತೊಂದು ದಿನ ನಿಂಬೆಕೆರೆಯಲ್ಲಿ ಇಟ್ಟಿಗೆ ಸುಡುವವರು ಅಗೆದಿದ್ದ ಹಳ್ಳವೊಂದರೊಳಗೆ ಏನನ್ನೋ ತೋರಿಸುತ್ತೇನೆಂದು ಪಾಪಾತ್ತಿಯನ್ನು ಮಂಕರಿಸಮೇತ ಇಳಿಸಿ, 'ಕಾಯದ ಸೆಳವಿನೊಳಗೆ' ಅವಳನ್ನೂ ಕೆಡವಿ ಭೂಮ್ಯಾಕಾಶ ಪಾತಾಳಗಳಲ್ಲೆಲ್ಲ ನಡೆದಾಡಿಸಿಬಿಟ್ಟಿದ್ದರ ಪರಿಣಾಮವಾಗಿ ತಿಂಗಳೊಪ್ಪತ್ತಿಗೆ ಪಾಪಾತ್ತಿಯ ಹೊಟ್ಟೆಯೊಳಗೆ ವಯಸ್ಸಲ್ಲದ ವಯಸ್ಸಲ್ಲಿ ಜೀವದ ಬೀಜವೊಂದು ಮಿಸುಕಾಡಿಬಿಟ್ಟಿತು. ಪಾಪಾತ್ತಿಗೆ ಇನ್ನೇನು ಮುಟ್ಟು ನಿಲ್ಲುತ್ತಲಿದ್ದ ಗಡಿರೇಖೆಯ ಒಳಗೇ ಈ ಸಾಹಸಕೃತ್ಯವನ್ನು ಕುಟ್ರಪ್ಪನು ಎಸಗಿದ್ದರ ಪರಿಣಾಮವಾಗಿ ತಾನು ಬಿಮ್ಮನಸಿಯಾಗಿರುವುದು ಪಾಪಾತ್ತಿಯ ಅರಿವಿಗೆ ಬಂದ ಚಣದಲ್ಲೇ ಅವಳು ಅವಳಾಗಿ ಉಳಿದಿರಲಿಲ್ಲ.

ಪಾಪಾತ್ತಿಯ ಕರುಳೊಳಗೆ ತನ್ನ ಎಡಬಿಡಂಗಿ ಆಸೆಗಳ ಹೊಡೆತಕ್ಕೆ ಬೀಜವೊಂದು ಮೂಡಿರುವ ವಿಷಯ ತಿಂಗಳೊಪ್ಪತ್ತಿನಲ್ಲಿ ತಿಳಿಯುತ್ತಲೇ ಕುಟ್ರಪ್ಪನೂ ಗರಬಡಿದಂತೆ ಆದವನು ಸಾವರಿಸಿಕೊಂಡು ಎಳೇಪರಂಗಿಯನ್ನು ತಿನ್ನಿಸುವಂತಹ ಬೀಜಪಾತ ಕ್ರಿಯೆಗೆ ಸಹಕಾರಿಯಾಗಬಹುದಾದ ಎಲ್ಲವನ್ನೂ ಪಾಪಾತ್ತಿಯ ಮೇಲೆ ಪ್ರಯೋಗಿಸಿ ನೋಡಲಾಗಿ ಅವನ ಯಾವುದೇ ಪ್ಲಾನುಗಳಿಗೂ ಕ್ಯಾರೆಪಾರೆಯೆನ್ನದೆ ಆ ಬೀಜವು ಅದರ ಪಾಡಿಗದು ಬೆಳೆಯುತ್ತಲಿತ್ತು. ಇದು ಕುಟ್ರಪ್ಪನಿಗೆ ಬೇರೊಂದು ಬಗೆಯ ದಿಗಿಲಿಗೆ ಕಾರಣವಾಗಿ ಅವಳ ಮುಂದೆ ಕುಳಿತು ಈ ಬಗ್ಗೆ ಯಾರಿಗಾದರೂ ಸಂಶಯ ಮೂಡುವಂತೆ ಪಾಪಾತ್ತಿಯು ಹೇಳಿಕೊಂಡರೆ ಅವಳ ಮತ್ತು ಇವನ ಸುಪರ್ದಿಯಲ್ಲಿರುವ ದೇವರು ದಿಂಡಿರುಗಳೆಲ್ಲರೂ ಒಟ್ಟುಸೇರಿ ಇಬ್ಬರನ್ನೂ ಬಲಿ ಪಡೆಯುವುದು ಗ್ಯಾರಂಟಿ ಎಂಬ ಭಯವನ್ನು ಅವಳೊಳಗೆ ಬಿತ್ತಿ ಆಣೆಪ್ರಮಾಣ ಮಾಡಿಸಿಕೊಂಡು ಇದೇ ಗಾಬರಿಯಲ್ಲಿ ಆವತ್ತಿನಿಂದ ಬುಲೆಟ್‌ಮಾಮನ ಸೇಂದಿಅಂಗಡಿಯ ಕಡೆಗೆ; ತಲೆಯೂ ಸೇರಿದಂತೆ ಯಾವುದನ್ನೂ ಹಾಕದೆ ಪಾಪಾತ್ತಿಯ ಕಣ್ಣಿಗೂ ಬೀಳದೆ ಕದ್ದು ತಿರುಗುವುದನ್ನು ಮಾಡುತ್ತಿದ್ದನು. ಅನಾಹುತವೆಸಗಿದವನೇ ಹೀಗೆ ನಡುನೀರೊಳಗೆ ಮುಳುಗಿಸಿದಾಗ ಏನು ಮಾಡಬೇಕೆಂದು ತೋಚದ ಪಾಪಾತ್ತಿಗೆ ಎಂಥದ್ದು ಮಾಡುವುದೆಂದೂ ತಿಳಿಯಂತಾಗಿ ಕುಸಿದೇ ಹೋಗಿದ್ದಳು. ಯಾವತ್ತಿನಂತೆ

ಜೊತೆಗೆ ಮಲಗುವಾಗ ಬಲಗಾಲೆತ್ತಿ ತನ್ನ ಹೆಂಡತಿಯ ಹೊಟ್ಟೆಯ ಮೇಲೆ ಹಾಕಿದ್ದ ಪುತ್ರನಿಗೆ ತನ್ನ ಕಾಲು ಪುಟ್ಟಡುಬ್ಬವೊಂದರ ಮೇಲೆ ಇಟ್ಟಂತೆನಿಸಿ ಪಾಪಾತ್ತಿ ಬಿಮ್ಮನಸಿಯಾಗಿರುವುದರ ಸೂಚನೆ ಸಿಕ್ಕಿಯೇ ಬಿಟ್ಟಿತ್ತು. ಆವತ್ತು ರಾತ್ರಿಯಿಡೀ ಅವಳಿಗೆ ಮಗನೊಡನೆ ಸೇರಿಕೊಂಡು ಬಡಿಯುತ್ತ, ಬೈಯುತ್ತ, ಅಳುತ್ತ ಈ ಅಮಾನುಷಕೃತ್ಯದ ವಾರಸುದಾರನ ಬಗ್ಗೆ ಬಾಯಿ ಬಿಡಿಸಲೆತ್ನಿಸಿ ಸೋತು ಕೊನೆಗೆ ಪಾಪಾತ್ತಿಯನ್ನು ಮನೆಯಿಂದ ಹೊರಗೆ ಕಳಿಸಿ ಅವಳ ಸೀರೆಪಾರೆಗಳೆಲ್ಲವನ್ನೂ ಉಂಡೆಗಟ್ಟಿ ಬೀದಿಗೆಸೆದಿದ್ದನು. ಯಾರಿಗೂ ಮುಖ ತೋರಿಸಲು ಆಗದೆ ಪರಿತ್ಯಕ್ತಳಾದ ಅವಳು ಆನೆದಿಬ್ಬದ ಬಾರೆಯಲ್ಲಿ ಬದುಕುತ್ತಿದ್ದ ಅವಳದೇ ನಡುವಯಸ್ಸಿನ ಗೆಣೆಕಾತಿ ಕೊಡೆಪಾವಿನ ವಾರಾಂಗನೆ ರೇವಮ್ಮನ ತಟಿಗೆಮನೆಯ ಪಾಲಾಗಿಹೋಗಿದ್ದಳು. ಇವೆಲ್ಲವೂ ನಡೆದುಹೋಗಿ ಕೊಡೆಪಾವು ಅನ್ನೋ ಊರು ಪಾಪಾತ್ತಿಯೆಂಬ ಹೆಸರನ್ನು ಮರೆಯಲು ತೊಡಗಿದ್ದ ಸಮಯದಲ್ಲೇ ಪೆರುವಾಯಿಯ ಹುಡುಗರು ದೊಂಬರ ದೇವರಗೊಂಬೆ ಮಾಡಿಸಲು ಬೇಕಾದ ಅಚ್ಚತಾಮ್ರಕ್ಕಾಗಿ ಶನಿಮಾತ್ಮನ ಗುಡಿಯಗಂಟೆ ಕದಿಯಲೆತ್ನಿಸಿ ಭಯಬಿದ್ದು ಪಾಪಪರಿಹಾರಕ್ಕಾಗಿ ಪಾಪಾತ್ತಿಯನ್ನು ಹುಡುಕಿಕೊಂಡು ಬಂದಿದ್ದುದು ನಡೆದಿತ್ತು. ಪಾಪನಾಶಿನಿ ಕೃತ್ಯಕ್ಕೆ ಬೇಕಾಗಿದ್ದ ರೆಕ್ಕೆಹಾವನ್ನು ಅವಳ ಸೂಚನೆಯಂತೆ ಹಿಡಿದುತರಲು ಮಾದರಟ್ಟಿಯ ಕುಟ್ರಪ್ಪನ ಮನೆಯ ಪರಂಗಿಮರವನ್ನು ಹಗಲೊತ್ತಿನಲ್ಲಿ ಅನುಮಾನ ಬರದಂತೆ ಸೂಕ್ಷ್ಮವಾಗಿ ನೋಡಲೆತ್ನಿಸುತ್ತಿದ್ದ ತರೀಕೆರೆಯ ಹುಡುಗರನ್ನು ಕುಟ್ರಪ್ಪನು ಗದರಿಸಿ ಅಲ್ಲಿಂದ ಓಡಿಸಿದ್ದನು. ಆದರೂ ಪ್ರಯತ್ನಬಿಡದ ಆ ಹುಡುಗರು ಕತ್ತಲೊಪ್ಪತ್ತಿನಲ್ಲಿ ಅವರಲ್ಲೇ ನಾಯಿ ಓಡಿಸುವ ಕೋಲಿನಂತಿದ್ದವನೊಬ್ಬನನ್ನು ಮೇಲಕ್ಕೆ ಹತ್ತಿ ರೆಕ್ಕೆಹಾವೇನಾದರೂ ಕಂಡರೆ ಅದನ್ನು ರಪ್ಪನೆ ಕೆಳಗೆ ಉದುರಿಸಲು ಸೂಚನೆ ಕೊಟ್ಟು ಪರಂಗಿ ಮರಕ್ಕೆ ಹತ್ತಿಸಿಬಿಟ್ಟರು. ಮುಕ್ಕಾಲುಭಾಗದವರೆಗೆ ಹತ್ತಿದ ಅವನು ಆ ಟೊಳ್ಳುಕಾಂಡದ ಪರಂಗಿಮರದೊಟ್ಟಿಗೆಯೇ ಥೆಟಥೆಟಥೆಟನೆಂಬ ಶಬುದದೊಟ್ಟಿಗೆ ನೆಲಕ್ಕೆ ಮುರಿದುಕೊಂಡು ಬಿದ್ದ ಶಬ್ದಕೇಳಿ ಮನೆಯೊಳಗೆ ಮಲಗಿದ್ದ ಕುಟ್ರಪ್ಪನು ಕೂಗಾಡಿಕೊಂಡು ಎದ್ದು ಈಚೆಗೆ ಬರುವಷ್ಟರಲ್ಲಿ ಬಿದ್ದವನು ಮೊದಲಾಗಿ ಉಳಿದ ಹುಡುಗರೆಲ್ಲ ಅಲ್ಲಿಂದ ದಿಕ್ಕಿಗೊಬ್ಬೊಬ್ಬರಂತೆ ಚದುರಿ ಕತ್ತಲೆಯೊಳಗೆ ಮಟಾಮಾಯವಾಗಿ ಹೋಗಿದ್ದರು.

ಅದಾಗಿ ಬೆಳಕು ಹರಿಯುವವರೆಗೂ ಕುಟ್ರಪ್ಪನು ಎರಡು ಭಾಗವಾಗಿ ಮುರಿದುಕೊಂಡು ನೆಲದಪಾಲಾಗಿದ್ದ ಪರಂಗಿಮರದ ಸೊಪ್ಪನ್ನು ಬಡಿಯುತ್ತ ಕೂಗಾಡಿಕೊಂಡು ಅಳುತ್ತ, ಆಗಾಗ್ಗೆ ಆ ಮರಕ್ಕೆ ಹಣೆಯನ್ನೊತ್ತಿಕೊಂಡು ಅರಚಾಡುತ್ತ ಇದ್ದುದನ್ನು ನೋಡಿದ ಮಾದರಟ್ಟಿಯ ಮಂದಿಗೆ ಇಲ್ಲೇನಾಗಿದೆ ಎಂಬುದರ ಅರಿವು ಕಡೆಗೂ ಸಿಗಲಿಲ್ಲ. ಯಾರ ಸಮಾಧಾನಕ್ಕೂ ಕ್ಯಾರೇಕೆತ್ತ ಎನ್ನದೆ ತನ್ನಪಾಡಿಗೆ ತಾನು ಪರಂಗಿಮರವು ತಾನೇ ಹೆತ್ತ ಕೂಸೇನೋ ಎಂಬಂತೆ ವಿಲಾಪಿಸುತ್ತಿದ್ದ ಅವನು ಈ

ಪ್ರಸಂಗವಾದ ಬೆಳಗಿನಿಂದ ಯಾರೋ ಅವನ ಪ್ರಜ್ಞೆಯನ್ನೇ ಬೊಗಸೆಯಲ್ಲಿ ತುಂಬಿಕೊಂಡು ಹೋದಂತೆ ಏನನ್ನೂ ಆಡದ, ನೋಡದ, ಕೇಳದ, ಇಟ್ಟಲ್ಲೇ ಇದ್ದುಬಿಡುತ್ತಿದ್ದ ಶಕುನದ ಕವಡೆಯಂತಾಗಿ ಹೋಗಿದ್ದನು. ಮೊದಲಿಂದಲೂ ಆ ಪರಂಗಿಮರದ ಬಗ್ಗೆ ಯಾರಿಗೂ ಅರ್ಥವಾಗದಂಥದ್ದೇನನ್ನೋ ಬೆಳೆಸಿಕೊಂಡಿದ್ದ ಅವನು ದಿನಕಳೆದಂತೆ ತನ್ನ ಪೂಜೆ, ತಾಯತ, ಮಾಟ, ಬಿದ್ದಬೀಳು ಮಂತ್ರ, ಸೇಂದಿಬಾಬುವಿನ ಭಟ್ಟಿಕಳ್ಳು ಎಲ್ಲದರಿಂದಲೂ ದೂರದೂರಕ್ಕೆ ನಡೆಯುತ್ತ ಕುಂತಲ್ಲೇ ಕುಳಿತ ಕಲ್ಲಿನಂತಾದವನು ಒಂದುಬೆಳಗ್ಗೆ ಪರಂಗಿಮರವಿದ್ದ ನೆಲದಮೇಲೆ ಮುಖಕೆಳಗು ಮಾಡಿ ಬಿದ್ದವನಂತೆ ಸತ್ತೇ ಹೋಗಿದ್ದನು. ಇವೆಲ್ಲದಕ್ಕೂ ಒಂದರ್ಥದಲ್ಲಿ ಸಕಾರಣವಾಗಿ ನಿಂತಿದ್ದ ಪೆರುವಾಯಿಯ ದೊಂಬರ ಹುಡುಗರು ಕುಟ್ರಪ್ಪನು ಜೀವಬಿಡುವ ಮೊದಲೇ ಪಾಪಾತ್ತಿಯ ಬಳಿ ಪರ್ಯಾಯ ಪಾಪ ಪರಿಹಾರವೊಂದನ್ನು ಕೇಳಿ ಅವಳಿಂದ ಬೈಯಿಸಿಕೊಂಡು ನಿರ್ವಾಹವಿಲ್ಲದೆ ಪೆರುವಾಯಿಯ ಬಸ್ಸುಹತ್ತಿದ್ದರು.

ಇಳಿಸಂಜೆಯಾದರೆ ತನ್ನ ಸೇಂದಿಅಂಗಡಿಗೆ ಬರುತ್ತಿದ್ದ ಕುಟ್ರಪ್ಪ, ಅವನ ಜೊತೆಗಿನ ಪಾಪಾತ್ತಿಯ ಗೆಣೆತನ, ಇದ್ದಕ್ಕಿದ್ದಂತೆ ಕೊಡೆಪಾವಿನ ಬದುಕಿನಿಂದ ವಿಮುಖನಾಗಿ ನಾಪತ್ತೆಯಾದ ಕುಟ್ರಪ್ಪನು ಸತ್ತೇಹೋದ ವಿಷಯವನ್ನು ಕೇಳಿ ಸೇಂದಿಬಾಬುವೂ ಚಣದೊತ್ತು ನೊಂದುಕೊಂಡಿದ್ದನು. ಯಾವತ್ತೋ ಒಂದು ದಿನ ಮಚ್ಚನುಮನ ಕಳ್ಳುಫ್ಯಾಕ್ಟರಿಯಿಂದ ಭಟ್ಟಿಕಳ್ಳು ತರಲು ಆನೆದಿಬ್ಬಕ್ಕೆ ಹೋಗಿದ್ದ ಸೇಂದಿಬಾಬುವಿಗೆ ಅಲ್ಲಿ ಕೊಡೆಪಾವಿನ ವಾರಾಂಗನೆ ರೇವಮ್ಮನ ತಟಿಗೆಮನೆಯೊಳಗೆ ತುಂಬು ಬಿಮ್ಮನಸಿ ಪಾಪಾತ್ತಿಯನ್ನು ಕಂಡು ಕುಟ್ರಪ್ಪನ ಸಾವಿನಪ್ರವರವನ್ನು ಬಿಚ್ಚಿಟ್ಟು ಇಬ್ಬರ ನಡುವೆಯೂ ಆದುದಾರೂ ಏನೆಂದೂ ಕೇಳಿದ್ದನು. ಪರಂಗಿಮರಕ್ಕೂ ಕುಟ್ರಪ್ಪನಿಗೂ ಇದ್ದ ಯಾರೂ ಅರಿಯದ ರಹಸ್ಯವನ್ನು ಯಾಕಾದರೂ ಇವನಿಗೆ ಹೇಳುವುದೆಂದು ಕಣ್ಣಾವಿಗಳೊಳಗೆ ನೀರು ತಂದುಕೊಳ್ಳಲೂ ಆಗದಷ್ಟು ಬಡಕಲಾಗಿದ್ದ ಪಾಪಾತ್ತಿಯು ಅವನ ಯಾವ ಪ್ರಶ್ನೆಗಳಿಗೂ ತಲೆಯನ್ನೂ ಕೂಡ ಆಡಿಸದಂತೆ ಹೊರಗೆ ನೋಡುತ್ತ ಕುಳಿತಿದ್ದಳು. ಹೊರಗೆ ಕಲ್ಲೆಸೆದಂತೆ ನೆಲತಲುಪುತ್ತಿದ್ದ ಮಳೆಹನಿಗಳು ತನ್ನ ರೆಕ್ಕೆಯನ್ನೇನಾದರೂ ತೂತು ಹೊಡೆಯುಬಹುದೇ ಎಂಬ ಭಯದಲ್ಲಿ ನೀಲಿಚಿಟ್ಟೆಯೊಂದು ತಟಿಗೆಮನೆಯಾಚೆಗೆ ಪರದಾಡುತ್ತಿದ್ದುದನ್ನು ನೋಡುತ್ತಿದ್ದ ಅವಳಿಗೆ ಆ ಒಂದು ಕ್ಷಣದೊಳಗೆ ತಾನೇ ಆ ಚಿಟ್ಟೆಯೂ ಆಗಿರಬಹುದೇ ಎಂಬ ಸಂಶಯವೊಂದು ಕಣ್ಣೊಳಗೆ ತೆವಳಾಡತೊಡಗಿತ್ತು. ಪ್ರಶ್ನೆಯೆಸೆದು ಕುಳಿತಿದ್ದ ಸೇಂದಿಬಾಬುವಿನ ಕಣ್ಣಿಗೆ ಮಳೆಯ ಹೊರತಾಗಿ ನೀಲಿಚಿಟ್ಟೆಯೂ, ತೆಳುರೆಕ್ಕೆಯೂ, ಅದರ ಪರದಾಟವೂ.. ಏನೆಂದರೆ ಏನೂ ನೋಡಲಿಕ್ಕೆ ಸಿಗಲಿಲ್ಲ.

❖

(ಪ್ರಜಾವಾಣಿ – ದೀಪಾವಳಿ ವಿಶೇಷಾಂಕ, 2013)

ಮಠದ ಹೋರಿ

ಹನುಮಂತ ಹಾಲಗೇರಿ

ಎಂದಿನಂಗ ಇವತ್ತು ನನ್ನ ಕಣ್ಣಿ ಉಚ್ಚಾಕ ಬಂದಿದ್ದ ಇರಪಜ್ಜನ ಕಣ್ಣಲ್ಲಿ ಕಣ್ಣೀರಿನ ಪಸೆ. ಅಜ್ಜನ ಕಣ್ಣಾಗ ಏನಾರ ಬಿದ್ದಿರಬಹುದು ಅನಕೊಂಡು ನಾನು ಕಣ್ಣಿ ಬಿಚ್ಚುತ್ತಿದ್ದವನ ಭುಜ ನೆಕ್ಕಿದೆ. ಆತ ಕಣ್ಣೀರ ತೊಟ್ಟಿಕ್ಕಿಸುತ್ತಲೆ ನನ್ನ ದುಬ್ಬದ ಮೇಲೆ ಕೈಯಾಡಿಸಿ ಬಾಲ ನೀಟಿ ಹೊರಕರಕೊಂಡು ಬಂದ. ಇನ್ನೊಂದು ಆಳು ಆ ಕಡೆಯ ಗೋದಲಿಯಲ್ಲಿದ್ದ ಗೌರಿಯನ್ನು ಬಿಚ್ಚಿಕೊಂಡು ಬಂದ. ನನ್ನ ಮತ್ತು ಇರಪಜ್ಜನ ಸಂಬಂಧ ಹತ್ತಾರು ವರ್ಷ ಹಳೆದು. ಯಾವುದೋ ಕಾರಣಕ್ಕೆ ಸಂಸಾರದಲ್ಲಿ ಬಿರುಕು ಬಂದು ಹೆಂಡತಿ ಮಕ್ಕಳನ್ನು ಬಿಟ್ಟು ಈ ಮಠಕ್ಕೆ ಬಂದಿದ್ದ ಅಜ್ಜ ನಮ್ಮಂಥ ದನಗಳನ್ನೆ ತನ್ನ ಮಕ್ಕಳಂತೆ ಜೋಪಾನ ಮಾಡ್ಕಂಡಿದ್ದ. ನಮ್ಮಗಳ ದುಬ್ಬ ನೇವರಿಸುತ್ತಲೇ ತನ್ನ ದುಃಖ ದುಮ್ಮಾನ ಮರೆತಿದ್ದ.

ಹೊರಗಡೆ ರೌಂಡು ಟೊಪಿಗಿಯ, ಇಜಾರ ಹಾಕ್ಕೊಂಡಿದ್ದ ಹೋತದ ಗಡ್ಡದ ಮನುಷ್ಯನ ಗೂಡ ಮಠದ ಮ್ಯಾನೇಜರ್ ಮಾತಾಡಕೋತ ನಿಂತಿದ್ದ. ಇಂಥ ಗಡ್ಡದ ಮಾನವರನ್ನು ಮಠದ ಅಂಗಳದಲ್ಲಿ ನನಗೆ ಇದುವರೆಗೂ ನೋಡಿದ ನೆನಪಿಲ್ಲ. ಗಡ್ಡದಂವ ಗರಿ ಗರಿಯ ಹಾಳೆಗಳ ಕಟ್ಟು ಕೊಟ್ಟಾಗ ಮ್ಯಾನೇಜರನ ಮುಖ ಕಂಡು ಕಾಣದಂತೆ ಅರಳಿತು. ಆತ ಅವನ್ನು ಎಣಿಸಿಕೊಳ್ಳುತ್ತಿರುವಾಗಲೇ ಮಠದ ಆಳುಗಳು ನನಗೆ ಮತ್ತು ಗೌರಿಗೆ ಟ್ರಕ್ ಕೆಳಗೆ ಕಟ್ಟಿಗೆಯ ಪಳಿಯೊಂದನ್ನು ಬಿಟ್ಟು ಅದರ ಮೇಲಿಂದ ಹತ್ತಲು ಒತ್ತಾಯಿಸತೊಡಗಿದರು. ನನಗೆ ಅದರ ಮೇಲೆ ಇಲ್ಲಿಯವರೆಗೆ ಮಾನವರು ಮಾತ್ರ ಅಡ್ಡಾಡಿದ್ದು ಗೊತ್ತಿತ್ತು. ಆದರೆ, ನಮ್ಮಂಥ ದನಗಳು ಕಿ.ಮೀ.ಗಟ್ಟಲೆ ಓಡಿಕೊಂಡೆ ಹೋಗುತ್ತಿದ್ದೆವು. ಮಠದ ಆಳುಗಳು ಏನೇ ಮಾಡಿದರು ನಾನು ಮಾತ್ರ ಕೊಸರಾಡಿಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸತೊಡಗಿದೆ. ನನ್ನ ಬಾಲ ಮುರಿದರು. ಕಟ್ಟಿಗೆಯ ಕೊಡ್ಡದಿಂದ ಹೊಡೆದರು. ಕಲ್ಲಿನಿಂದ ಜಜ್ಜಿದರು. ಆದರೂ ನಾನು ಕೊಸರಾಡುತ್ತಲೇ ಇದ್ದೆ. ಕೊನೆಗೆ ನನ್ನ ಮೂಗಿಗೆ ಕಟ್ಟಿದ್ದ ಮೂಗುದಾರ ಹಿಡಿದು ಒಬ್ಬ ಟ್ರಕ್ ಹತ್ತಿ ನನ್ನನ್ನು ಜಗ್ಗತೊಡಗಿದ. ನೋವು ತಡೆಯಲಾರದೆ ಒದ್ದಾಡತೊಡಗಿದಾಗ ಪ್ರಯಾಸಪಟ್ಟಕೊಂಡು ನನ್ನ ದೇಹವನ್ನು ಟ್ರಕ್ಕಿನೊಳಗೆ ತುರುಕಿದರು. ಟ್ರಕ್ ಹೊರಟಿತು. ಇರಪಜ್ಜನ ಕಣ್ಣುಗಳಲ್ಲಿ ಕಣ್ಣೀರಿನ ಪಸೆ ಮತ್ತಷ್ಟು ದಟ್ಟವಾಗುತ್ತಲೆ ಇತ್ತು.

ತಿರುವೊಂದರಲ್ಲಿ ಗಕ್ಕನೆ ಟ್ರಕ್ ನಿಂತಿತು. ಒಂದು ಮುದಿ ಎಮ್ಮೆಯನ್ನು ಎಳೆದು ತರುತ್ತಿದ್ದರು. ಅದು ತನ್ನ ಜೀವಮಾನದ ಶಕ್ತಿಯನ್ನೆಲ್ಲ ಒಗ್ಗೂಡಿಸಿ ಕೊಸರಿಕೊಳ್ಳಲು ಒದ್ದಾಡುತ್ತಲೇ ಇತ್ತು. ಆದರೆ ಹಠ ಬಿಡದ ಮಾನವರು ಅದನ್ನು ಟ್ರಕ್‌ನೊಳಗೆ ದಬ್ಬಿದರು. ಅದು ಜಾಸ್ತಿ ಕೊಸರಾಡಿದ್ದರಿಂದಲೋ ಏನೊ ಅದರ ಕೋಡಿಗೆ ಗಾಯವಾಗಿ ಹೆಗಲ

ಮೇಲೆಲ್ಲಾ ರಾಮರಗತ ಆತು. ಅದು ಮೇಲೆ ಹತ್ತಿದ ಮೇಲೂ ಕೊಸರಾಡುತ್ತಲೇ ಇತ್ತು. ತನ್ನ ಯಜಮಾನನ ಕಡೆ ಹಿಂಗ್ಯಾಕ ಮಾಡಿದೆ ಎಂದು ದೀನತೆಯಿಂದ ನೋಡುತ್ತಲೇ ಇತ್ತು.

ಟ್ರಕ್ ನಾಲ್ಕೈದು ಹಳ್ಳಿ ದಾಟಿ ಒಂದು ಪಟ್ಟಣದೊಳಗೆ ಮುಂದುವರೆಯಿತು. ಟ್ರಕ್ಕಿನ ನಡುವೆ ಹಗ್ಗಗಳಿಂದ ಕಟ್ಟಿಸಿಕೊಂಡು ನಿಂತಿದ್ದ ನಮ್ಮನ್ನು ಮಾನವರು ವಿಚಿತ್ರ ಖುಷಿಯಿಂದ ನೋಡುತ್ತಿದ್ದರು. ಅಪ್ಪಂದಿರು ತಮ್ಮ ಮಕ್ಕಳನ್ನು ಹೆಗಲ ಮೇಲೆ ಹೊತ್ತುಕೊಂಡು ನಮ್ಮ ಕಡೆ ತೋರಿಸಿ ಆಕ್ಸ್, ಕೌ ಎಂದೋ, ಬಫೆಲೋ ಎಂದೋ ಏನೇನೋ ಹೇಳುತ್ತಿದ್ದರು. ಮಕ್ಕಳು ನಮ್ಮ ನೋಡಿ ಖುಷಿಯಿಂದ ಚಪ್ಪಾಳೆ ತಟ್ಟುತ್ತಿದ್ದರು. ನನಗೆ ಮಾನವರ ಮಕ್ಕಳನ್ನು ನೋಡಿದ ಮೇಲೆ ಮಠದಲ್ಲಿದ್ದ ನನ್ನ ಮಕ್ಕಳು ನೆನಪಿಗೆ ಬರತೊಡಗಿದರು. ನನ್ನ ಮಕ್ಕಳು ಮಠದ ಮಸಾರಿ ಜಮೀನನ್ನು ಗಳೆ ಹೊಡೆಯುತ್ತಿರಬಹುದು. ಹಳೆಯ ನೆನಪೆಲ್ಲ ಒತ್ತರಿಸಿ ಬರತೊಡಗಿದವು.

ನಮ್ಮವ್ವನ ಯಾವನೋ ಒಬ್ಬ ಪುಣ್ಯಾತ್ಮ ರೈತ ಊರ ಹನುಮದೇವರ ಗುಡಿಗೆ ಬಿಟ್ಟಿದ್ದ. ಊರ ಬಸವಿಯಂತೆ ಕಂಡವರ ಹೊಲದಲ್ಲಿ ಮೇಯುತ್ತಿದ್ದ ನನ್ನವ್ವ ಒಬ್ಬ ಅಣ್ಣ ಮತ್ತು ತಂಗಿಯನ್ನು ಹೆತ್ತಿದ್ದಳು. ನಾವು ಮೂವರು ಮಕ್ಕಳು ಸಹ ಅವ್ವನ ಜೊತೆ ಹಸಿರು ಕಂಡಲ್ಲಿ ತಿಂದು ನೀರು ಕಂಡಲ್ಲಿ ಕುಡಿದು ಸುಖವಾಗಿಯೆ ಬೆಳೆದೆವು. ಯಾರ ಹೊಲದಲ್ಲಿಯೆ ಮೇಯ್ದರೂ ಸಹ ದೇವರ ದನಗಳೆಂದು ನಮಗೆ ಕಲ್ಲು ಹೊಡೆಯುತ್ತಿರಲಿಲ್ಲ. ಊರ ಜಮೀನು ಯಾರಪ್ಪನ ಆಸ್ತಿಯೂ ಅಲ್ಲ ಎಂದುಕೊಂಡೆ ನಾವು ಭಾವಿಸಿದ್ದೆವು. ಆದರೆ, ಸ್ವಲ್ಪ ದಿನಗಳಲ್ಲೆ ನಮ್ಮಣ್ಣ ಮತ್ತು ಅಕ್ಕ ಅಗಲುವ ಸಮಯ ಬಂತು. ಊರ ಹಿರಿಯರು ಹನುಮಪ್ಪನಿಗೆ ಬೆಳ್ಳಿಯ ಗದೆ ಮಾಡಿಸುವುದಕ್ಕಾಗಿ ದೇವರ ದನಗಳಾದ ಅಕ್ಕ ಅಣ್ಣನನ್ನು ಒಂದಿನ ಹರಾಜು ಹಾಕಿದರು. ಊರ ಚೌಡಿ ಕಟ್ಟೆ ಮುಂದ ಸೇರಿದ್ದ ಜನರ ಮಧ್ಯೆ ಅಣ್ಣ, ಅಕ್ಕಂದಿರನ್ನು ಜೀವನದಲ್ಲಿ ಇದೆ ಮೊದಲ ಸಲ ಹೀಗೆ ಹಗ್ಗಗಳ ನಡುವೆ ಬಂಧಿಸಿದ್ದರಿಂದ ಅವರು ಹೂಂಕರಿಸುತ್ತಲೆ ಇದ್ದರು. ನಾಲ್ಕೈದು ಹಗ್ಗಗಳಲ್ಲಿ ಅವರನ್ನು ಬಂಧಿಸಿ ಹಿಡಿದುಕೊಂಡಿದ್ದ ದಾಂಡಿಗರು 'ಕಾಡದನ ಇದ್ದಾಂಗಿದಾವೆ. ಇಂಥವನ್ನು ಪಳಗಿಸಿ ಗಳೆ ಹೊಡೆಯೋದೆ ಕಷ್ಟ' ಎಂದು ಏನೇನೊ ಮಾತಾಡಿಕೊಳ್ಳುತ್ತಿದ್ದರು. ಇದೆ ನೆವದಿಂದ ಅಕ್ಕ, ಅಣ್ಣನನ್ನು ಯಾರೂ ತೆಗೆದುಕೊಳ್ಳದೆ ಬಿಟ್ಟರೆ ಸಾಕು ಎಂದು ನನ್ನ ಬಯಕೆಯಾಗಿತ್ತು.

ಆದರೆ ಇಂಥ ದಾಂಡಿಗ ದನಗಳನ್ನು ತೆಗೆದುಕೊಂಡು ಪಳಗಿಸುವುದನ್ನು ತಮ್ಮ ಪ್ರತಿಷ್ಠೆಯಾಗಿಸಿಕೊಂಡಿದ್ದ ಕೆಲವು ಊರ ಪ್ರಮುಖ ಕುಳಗಳು ಹರಾಜಿನಲ್ಲಿ ಒಂದಕ್ಕಿಂತ ಒಂದು ಹೆಚ್ಚು ಮೊತ್ತಕ್ಕೆ ಕೂಗುತ್ತಲೇ ಇದ್ದರು. ಕೊನೆಗೆ ಅಕ್ಕ ಊರ ಮೇಲಿನಮನಿ ಭೀಮಪ್ಪನ ಪಾಲಾದರೆ ಅಣ್ಣ ದುಂಡಪ್ಪ ಸಾವುಕಾರನ ಪಾಲಾದ. ಜನ ಎಲ್ಲ ಚದುರಿದ ಮೇಲೂ ಅವ್ವ ಚೌಡಿ ಕಟ್ಟೆಯ ಹತ್ತಿರವೇ ನಿಂತಿದ್ದಳು. ಆಕೆಯ ಕಣ್ಣಲ್ಲಿ ಜಿನುಗುತ್ತಿದ್ದ

ನೀರು ಈ ಮಾನವರ ಕಣ್ಣಿಗೆ ಬೀಳಲೇ ಇಲ್ಲ. ಅವಳ ಅಂಬಾ ಎಂಬ ಆರ್ತನಾದಕ್ಕೆ ಬೆಲೆಯೇ ಇಲ್ಲದಂತಾಗಿತ್ತು.

ನಾನು ವಯಸ್ಸಿಗೆ ಬರುತ್ತಿದ್ದ ಹೋರಿ ಆಗ. ಅಕ್ಕ ಅಣ್ಣನ ನೆನಪಾಗಿ ಆಗಾಗ ಅವರಿದ್ದ ಮನೆಯ ಕಡೆ ಕಾಲು ಹಾಕುತ್ತಿದ್ದೆ. ಅಕ್ಕ ಏನೋ ಸುಖವಾಗಿದ್ದಳು. ಆಕೆ ಯಾರಿಗೋ ಬಸಿರಾಗಿದ್ದಳು. ನಮ್ಮ ದನಗಳ ಜಾತಿಯಲ್ಲಿ ಯಾರು ಯಾರಿಗೆ ಬೇಕಾದರೂ ಬಸಿರಾಗಬಹುದಾದ್ದರಿಂದ ಅದಕ್ಕೆ ಅಷ್ಟು ತಲೆ ಕೆಡಿಸಿಕೊಳ್ಳಬೇಕಾಗಿರಲಿಲ್ಲ. ಹಚ್ಚಗಿದ್ದಲ್ಲಿ ಮೇಯುವಷ್ಟೆ ಚಂದದ ಹೋರಿಗಳೊಂದಿಗೆ ಕೂಡುವುದು ಆಕಳು ಮಣಕುಗಳಿಗೆ ಸಾಮಾನ್ಯವಾಗಿತ್ತು. ಮನುಷ್ಯ ಜಾತಿಯ ಹಾಗೆ ಜೀವನಪೂರ್ತಿ ಒಂದೆ ಗಂಡನ ಜೊತೆ ಬಾಳ್ವೆ ಮಾಡುವುದು, ಗಂಡ ಸತ್ತರೆ ತಲೆ ಬೋಳಿಸಿಕೊಂಡು ವಿಧವೆತನ ಅನುಭವಿಸುವುದು, ಇನ್ನೊಂದು ಮದುವೆಯಾಗದೆ ಜೀವನದ ಸುಖ ಸಂತೋಷ ಬಲಿ ಕೊಡುವಂಥ ಮೌಢ್ಯ, ಕಂದಾಚಾರಗಳು ನಮ್ಮ ಪಶು ಸಮಾಜದಲ್ಲಿ ಚಾಲ್ತಿಯಲ್ಲಿ ಇಲ್ಲ. ಮೊದಲೆ ನಮ್ಮ ಆಕಳುಗಳು ಋತುಮಾನಕ್ಕೆ ಅನುಗುಣವಾಗಿ ಬೆದೆ ಬರುತ್ತವೆ. ಅವು ಬೆದೆಗೆ ಬಂದಾಗ ಕೆಲಸ ಮುಗಿದುಬಿಡಬೇಕು. ಮನುಷ್ಯರಂಗ ನಾವು ೩೬೫ ದಿನಾನೂ ಅದನ್ನೆ ಮಾಡಕೋತ ಕೂಡುವಂಗಿಲ್ಲ, ಏನೆ ಆಗಲಿ, ಅಕ್ಕ ಹೊಟ್ಟೆ ಬರಿಸಿಕೊಂಡು ಮಂದಸ್ಮಿತೆಯಾಗಿ ಮಂದಗಮನೆಯಂತೆ ಅಡ್ಡಾಡುತ್ತಿರುವುದು ನನಗೆ ಖುಷಿ ಕೊಟ್ಟಿತ್ತು.

ಪಾಪ, ಅಣ್ಣನ ಪರಿಸ್ಥಿತಿಯೇ ಬಾಳ ಕೆಟ್ಟಿದ್ದು, ಊರ ಹೊಲಗಳಲ್ಲೆಲ್ಲ ತಿಂದುಂಡು ಕಾಡದನದಂತೆ ಕೊಬ್ಬಿದ್ದ ಅಣ್ಣನಿಗೆ ಪಳಗಿಸುವುದಕ್ಕಾಗಿ ಹೊಟ್ಟೆತುಂಬಾ ಮೇವು ಹಾಕುತ್ತಿರಲಿಲ್ಲವಂತೆ. ತಿಂಗಳಾನುಗಟ್ಲೆ ಹೊಟ್ಟೆಗೆ ಸರಿಯಾಗಿ ಮೇವು ನೀರಿಲ್ಲದೆ ಅಣ್ಣ ಬಾಳ ಸೊರಗಿದ್ದ. ಅವನ ಮೂಗಿನ ಹೊಳ್ಳೆಗಳಲ್ಲಿ ಅವನಿಗೆ ಹಗ್ಗ ಹಾಯಿಸಿ ಅದಕ್ಕೊಂದು ಹಗ್ಗ ಕಟ್ಟಿದ್ದರು. ಹಗ್ಗ ಜಗ್ಗಿದ ಕಡೆ ಅಂವ ಮುಸುಗುಡುತ್ತ ಹೊರಳಾಡುತ್ತಿದ್ದ. ನಾನು ಅವನನ್ನು ಬೇಟಿಯಾಗಲು ಹೋದ ದಿನ ಅವನ ಕೈಕಾಲುಗಳನ್ನು ಕಟ್ಟಿ ನೆಲಕ್ಕೆ ಕೆಡವಿದ್ದರು. ಅಂವ ಹೂಂಕರಿಸುತ್ತಲೆ ಇದ್ದ. ಯಾವದ್ಯಾವದೋ ಎಣ್ಣಿ, ಅರಿಸಿನ ಪುಡಿಯನ್ನು ಅವನ ತೊಡ್ಡಿಗೆ ಸ್ವಲ್ಪ ಹೊತ್ತು ತಿಕ್ಕಿದರು. ಆಮೇಲೆ ದೊಡ್ಡ ಒನಕಿಯಿಂದ ತೊಡ್ಡಿನ ಮೇಲೆ ಹೊಡೆದರೆ, ಅಣ್ಣ ಜೀವ ಹೋಗುವ ಹಾಗೆ ಅಂಬಾ ಎನ್ನುತ್ತಿದ್ದ. ಆದರೂ ಬಿಡದೆ ತೊಡ್ಡಿನ ಬೀಜಗಳು ಒಡೆದು ರಸ ಆಗುವವರೆಗೂ ಜಜ್ಜುತ್ತಲೇ ಇದ್ದರು.

ಜೀವ ಚುರುಕ್ ಅಂತು. ಈ ಮನುಷ್ಯರಿಗೂ ಯಾವುದೇ ಸುಖ ಅನುಭವಿಸೋ ಮುಂಚೆನೆ ಅವರ ತೊಡ್ಡಬೀಜ ಒಡೆದು ಈ ಮನುಷ್ಯ ಸಮಾಜವೇ ನಿರ್ನಾಮ ಮಾಡಿಬಿಡಬೇಕೆನಿಸುವಷ್ಟು ಸಿಟ್ಟು ಬಂತು.

ಮುಂದೆ ಅಣ್ಣನನ್ನು ನೋಡಲು ಹೋದಾಗಲೆಲ್ಲ ಅಣ್ಣ ಧೇಕುತ್ತ ಸಾಹುಕಾರ ದುಂಡಪ್ಪನವರ ಹೊಲದಲ್ಲೆಲ್ಲ ಕುಂಟೆ ಜಗ್ಗುತ್ತಿದ್ದ. ಒಮ್ಮೊಮ್ಮೆ ಅಣ್ಣ ಸಿಟ್ಟಿಗೆದ್ದು ಕೊಳ್ಳಹರಕೊಂಡು ನಗ ಒಗೆದದ್ದು ಇದೆ. ಬಂಡಿಗೆ ಹೂಡಿದಾಗ ಅಡ್ಡದಾರಿ ಹಿಡಿದು

ಸಾಕಾಗುವಷ್ಟು ಓಡಿದ್ದು ಇದೆ. ಆಗೆಲ್ಲ ಅಣ್ಣನ ಮೈ ತುಂಬಾ ಬಾರುಕೋಲಿನ ಏಟುಗಳು ಗುರುತು ಮೂಡಿಸಿದ್ದರಿಂದ ಈಗೀಗ ಅಣ್ಣ ಮೆತ್ತಗಾಗಿದ್ದಾನೆ. ಜೀವ ಇರುವಷ್ಟು ದಿನ ಈ ಮನುಷ್ಯರು ಹೇಳಿದಷ್ಟು ಕೇಳಕೊಂಡು ಬಿದ್ದರಾತು ಅನಕೊಂಡು ಗೋಣು ಹಾಕುತ್ತಾ ಏದುಸಿರು ಬೀಡುತ್ತಾ ನೊಗ ಎಳದರೆ ಸಾಕು ಎಂದುಕೊಂಡಿರಬೇಕು.

ಆದ್ಯಾಕೋ ಏನೋ, ನಾನಂದ್ರ ಊರ ಆಕಳು ಮಣಕಗೊಳು ಒಂದ ಸಂವನ ಜೊಲ್ಲು ಸುರಿಸುತ್ತಿದ್ದವು. ಅದರಲ್ಲೂ ಬೆದಿಗೆ ಬಂದರಂತೂ ಕಟ್ಟಿದ ಕಣ್ಣಿ ಹರಕೊಂಡು ನನ್ನನ್ನು ಹುಡುಕೊಂಡು ಬಂದು ನನ್ನ ಮೈಗೆ ಮೈ ಹಚ್ಚಿ ಒಂದ ಸಂವನ ತಿಕ್ಕುತ್ತಿದ್ದವು. ಈ ಊರಿಗೆ ನಾನೊಬ್ಬನೆ ರಾಜಹೋರಿ ಅಂತ ನನಗೂ ಖುಷಿ ಆಕ್ಕಿತ್ತು. ನಮ್ಮವ್ವ ನನಗ ಯಾವಾಗಲೂ ಹೇಳತಿದ್ಲು. ನೀನು ಥೇಟ್ ಖಿಲಾರ್ ತಳಿಯ ನಿಮ್ಮಪ್ಪನ್ನೆ ಹೋಲತಿ ಅಂತ. ಅಂವ ನಡದು ಬರತಿದ್ದರ, ದನ–ಜನ ಎಲ್ಲ ಸೈಡಿಗೆ ಸರದು ನಿಂತು ಅಂವನ ಅಂದ ಚಂದ ನೋಡತಿದ್ರಂತ. ಆನಿಯಂಗ ಎತ್ತರ, ಎತ್ತರಕ್ಕೆ ತಕ್ಕಂಗ ಸಮತೂಕದ ಚಂದದ ಮೈ, ನವಿಲಿನ ತಲೆಯ ಹಿಂದೆ ನಿಗುರಿ ನಿಂತ ಹೂಗೊಂಚಲಿನಂತ ಇಣಿ, ಹಾಲಿನ ನೊರೆಯಂಥ ಅಚ್ಚ ಬಿಳಿ ಬಣ್ಣದ ಮೈ, ಗುಲಾಬಿ ಬಣ್ಣದ ಮೂಗು, ಮುಂದಕ್ಕೆ ಎದ್ದು ಬಂದಂತಿದ್ದ ಹಣೆ, ಹೊಳಪುಳ್ಳ ಆಕ್ರೋಶದ ಕಣ್ಣು, ಉದ್ದ ಕಿವಿ, ದಷ್ಟಪುಷ್ಟ ತೊಡೆಗಳ ಹಿಂದೆ ಜೋತು ಬಿದ್ದಿದ್ದ ನೆಲ ತಾಕುತ್ತಿದ್ದ ಉದ್ದ ಬಾಲ, ಬಾಲಕ್ಕೊಂದು ಗೊಂಡೆ, ಎಷ್ಟು ಹೇಳಿದರೂ ಸಾಲೂದಿಲ್ಲ ನಿಮ್ಮಪ್ಪನ ಬಗ್ಗೆ. ಅಂವನ ಗಂಗೆದೊಗಲಿನ ಎದೆಯ ವಿಸ್ತಾರದಲ್ಲಿ ತನ್ನ ನಾಲಿಗೆಯನ್ನು ಆಡಿಸುತ್ತಲೆ ತನ್ನನ್ನು ತಾನು ಮರೆತು ಬಿಡುತ್ತಿದ್ದಳಂತೆ ಅವ್ವ. ಅಪ್ಪನ್ನ ಮುಸು ಮುಸು ಮುಸುಗುಡುವಿಕೆ ಶಬ್ದವೇ ಆಕೆಗೆ ಆಗ ಜಗತ್ತಿನ ಸಂಗೀತವಾಗಿತ್ತಂತೆ.

ಅಣ್ಣನ ಕೊಂಡುಕೊಂಡಿರುವ ದುಂಡಪ್ಪ ಸಾವುಕಾರನೇ ಜಮಖಂಡಿ ದನದ ಜಾತ್ರ್ಯಾಗ ನಮ್ಮಪ್ಪನ ಚೆಲುವಿಕೆಗೆ ಸೋತು ಲಕ್ಷಗಟ್ಟಲೆ ರೊಕ್ಕ ಕೊಟ್ಟು ಅಂವನ ಕೊಂಡುಕೊಂಡು ಬಂದಿದ್ದನಂತ. ಚಕ್ಕಡಿ ರೇಸಿನ ಹುಚ್ಚಿದ್ದ ದುಂಡಪ್ಪ ಸಾಹುಕಾರ, ಅಪ್ಪನಿಗೆ ಸಮನಾದ ಇನ್ನೊಂದು ಹೋರಿಯನ್ನು ಜೊತೆ ಮಾಡಿ, ಇವುಗಳ ಮೇಯಿಸಲಿಕ್ಕಾಗಿಯೇ ಗೋಧಿ, ಜೋಳ, ಸಜ್ಜಿ, ಹುರುಳಿ ಕಾಳುಗಳ ನುಚ್ಚು ಒಡೆಸಿ ದಂದಕ್ಯಾಗ ನಿಟ್ಟ ಕಟ್ಟಿದನಂತ. ದಿನಾ ಸೂರ ಉದಯ ಆಗೋ ಮೊದಲೆ ಎದ್ದು, ಗುಗ್ಗರಿ ತಿನಿಸಿ, ಮ್ಯಾಲ ತತ್ತಿ–ಒಳ್ಳೆಣ್ಣಿ–ಉಪ್ಪದ ಗೊಟ್ಟ ಹಾಕಿ, ಆಳುಗೊಳು ಮೈ ತಿಕ್ಕತಿದ್ರ ಪಕ್ಕದಲ್ಲಿ ನಿಂತಿರುತ್ತಿದ್ದ ದುಂಡಪ್ಪ ಸಾಹುಕಾರ ತನ್ನ ಮೀಸಿ ಹುರಿಗೊಳಿಸುತ್ತಿದ್ದನಂತ. ಸಾಹುಕಾರ ಈ ಹೋರಿಗಳನ್ನು ಮೇಸಾಟಕ್ಕಾಗಿಯೇ ಎರಡ್ಮೂರು ಎಕರೆ ಹೊಲ ಬಿಳಿಜ್ವಾಳ ಬಾಟಿಗೆ ಮೀಸಲಿಟ್ಟಿದ್ದನಂತ.

ಮೇಸಾಟಕ್ಕೆ ಸಾಕಷ್ಟು ಖರ್ಚು ಮಾಡುತ್ತಿದ್ದ ಸಾವುಕಾರ ಬಂಡಿ ರೇಸನಾಗ ಈ ಹೋರಿಗಳು ಸೋತದ್ದ ಖರೆ ಆತ ಅಂದ್ರ ಅಷ್ಟ ಕಷ್ಟನೂ ಕೊಡತಿದ್ದನಂತ. ಅವತ್ತು

ಬಾರುಕೋಲು ಗುಣಿ ಮುರುದು ಹೋಗು ಮಟ ಬಡಿತಿದ್ದನಂತ. ಹಿಂಗಾಗಿ ಬಂಡಿ ರೇಸನ್ಯಾಗ ಜೀವ ಹೋದರೂ ಪರವಾಗಿಲ್ಲ ಸೋಲಬಾರದು ಅಂತ ಎರಡು ಹೋರಿಗಳು ಮಾತಾಡಿಕೊಂಡು ಓಡುತಿದ್ವು. ಯಾವದೇ ಜಾತ್ರಿಗೋದ್ರು ಸಾವುಕಾರ ಈ ಹೋರಿ ಹೂಡಿಕೊಂಡೆ ಹೋಗತಿದ್ದ. ಕೊರಳಿಗೆ ಜೂಲಾ, ಮೈಗೆ ಕೊರಳಗಂಟೆ, ಹಣೆಗೆ ಹಣೆಕಟ್ಟು, ಕೋಡಿಗೆ ಕೋಡಣಸು, ಗಗ್ಗರ, ಗೊಂಡೆ ಎಲ್ಲ ಹಾಕಿದಾಗ ಥೇಟ್ ನಿಮ್ಮಪ್ಪ ಐರಾವತನಂಗ ಕಾಣತಿದ್ದ.

ಹೇಳಿ ಕೇಳಿ ನಿಮ್ಮಪ್ಪನದೂ ಚಲೋ ಖೂಳ ತಿಂದ ಬೆಳದ ದೇಹ. ಎಷ್ಟು ದಿನ ಅಂತ ಸುಮ್ಮನಿರಲಿಕ್ಕ ಸಾದ್ಯ ಆಕೈತಿ. ಅವತ್ತೊಂದಿನ ಸಾವುಕಾರನ ಆಳುಮಗ ಬಂಡಿ ರೇಸ್ ತಾಲಿಮು ಮುಗಿಸಿ ಎರಡು ಹೋರಿ ಹೊಡಕೊಂಡು ಹೊಲಕ ಹೊರಟಿದ್ದ. ನಾನು ಹೇಳಿ ಕೇಳಿ ದೇವರಿಗೆ ಬಿಟ್ಟ ಆಕಳು. ಅಲ್ಲೆ ದಾರಿ ಮಗ್ಗಲು ಮೇಯುತ್ತಿದ್ದೆ. ನಿಮ್ಮಪ್ಪ ಸುಮ್ಮನ ಹಿಂಗ ವಾರೆನೋಟ ನನ್ನ ಕಡೆ ಚಲ್ಲಿಬಿಟ್ಟ ನೋಡು. ನನಗ ಅಷ್ಟ ಸಾಕಾಗಿತ್ತು. ಮೊದಲ ನನಗ ಆ ದಿನ ನಸಿ ಆಗಿತ್ತಂತ ಕಾಣುತ್ತೆ. ನಾನು ಅಂಬಾ ಅನ್ನುತ್ತ ನಿಮ್ಮಪ್ಪನನ್ನು ಬೆನ್ನು ಹತ್ತಿದ್ದೆ. ಹೋರಿಗಳನ್ನು ಹೊಲದಲ್ಲಿ ಮೇಯಲು ಬಿಟ್ಟ ಆಳುಮಗ ಬೇರೆ ಕೆಲಸದಲ್ಲಿ ಮೈ ಮರೆತುಬಿಟ್ಟ. ನಾನು ನಿಮ್ಮಪ್ಪ ನಮ್ಮ ಕೆಲಸದಲ್ಲಿ ಮೈ ಮರೆತೆವು. ಅವತ್ತಿನಿಂದ ಆಳು ಮಕ್ಕಳ ಕಣ್ಣ ತಪ್ಪಿಸಿ ಅಂವ ನನ್ನನ್ನು ಹುಡುಕಿಕೊಂಡು ಬರುತ್ತಲೇ ಇದ್ದ. ನಾನಂತೂ ಸಾವುಕಾರನ ಹೊಲದ ಸುತ್ತಲೇ ಗಿರಕಿ ಹೊಡಿತಿದ್ದೆ. ಆದರೆ, ನಮ್ಮ ಪ್ರೀತಿ ಆಳುಮಕ್ಕಳಿಗೆ ಅನುಮಾನ ಬಂದಿರಬೇಕು. ಈ ಮನುಷ್ಯ ಜಾತಿಯೇ ಹೀಗೆ, ಜಾತಿ ಅಡ್ಡ ಬರುತ್ತೆ ಅನಕೊಂಡು ತಮ್ಮ ಮಕ್ಕಳಿಗೂ ಪ್ರೀತಿ ಮಾಡಾಕ ಬಿಡಂಗಿಲ್ಲ. ನಮ್ಮಂಥ ದನಗೊಳು ಪ್ರೀತಿ ಮಾಡಿದ್ರೂ ಇವುಕ್ಕ ಸಹಿಸಾಕ ಆಗಂಗಿಲ್ಲ. ಆಳುಮಕ್ಕಳು ಸಾವುಕಾರನಿಗೆ ತಿಳಿಸಿ ಒಂದಿನ ಮಸಲತ್ತು ಮಾಡಿಬಿಟ್ಟರು.

ಮರುದಿನ ನಿಮ್ಮಪ್ಪ ಯಾಕ ಹೊಲಕಡೆ ಬಂದಿಲ್ಲ ಅಂತ ನೊಡಾಕ ಹೋದ್ರ ಅಂವ ನರಳಕೋತ ಸಾಹುಕಾರ ಮನಿ ಮುಂದ ಬಿದ್ದಿದ್ದ. ಪಾಪ ಅಂವನ ತೊಡ್ಡು ಬಡದು ತರಡು ಬೀಜ ತೆಗೆದುಬಿಟ್ಟಿದ್ದರು. ಅಂವ ನನ್ನ ಕಡೆ ಸಹ ನೋಡಲಿಕ್ಕಾಗದೆ ಅಳ್ಳುತ್ತಿದ್ದ. ನಾನು ಅಂವನ ಮುಖ ನೋಡಲಿಕ್ಕಾಗದೆ ಓಡಿ ಬಂದುಬಿಟ್ಟೆ. ಮುಂದ ಅಂವ ಯಾವಾಗ ಸಿಕ್ಕರೂ ನನ್ನಿಂದ ಮುಖ ತಪ್ಪಿಸಿಕೊಳ್ಳುತ್ತಿದ್ದ. ತೊಡ್ಡು ಬಡಿದು ಎರಡ್ಮೂರು ತಿಂಗಳು ಕಳೆದಿರಬಹುದು. ಒಮ್ಮೆ ರಾಮದುರ್ಗದಾಗ ಬಂಡಿ ರೇಸ್ನಾಗ ಯಾವದೊ ಒಡ್ಡು ಜಿಗಿಯಾಕ ಹೋಗಿ ಕಾಲು ಮುರುಕೊಂಡು ಬಿಟ್ಟನಂತೆ. ಅಲ್ಲಿಂದ ಅದ ಬಂಡಿಯೊಳಗ ಅಂವನ ಹೇರಕೊಂಡು ಬಂದ್ರು. ನಾನು ಹೋಗಿ ಕಣ್ಣೀರು ಸುರಿಸಿ ಬಂದೆ. ತಿಂಗಳಾನುಗಟ್ಟಲೇ ಜ್ವಾಪಾನ ಮಾಡಿದರೂ ಅಂವ ಮತ್ತೆ ಮೇಲೇಳಲೆ ಇಲ್ಲ. ಕೊನೆಗೊಂದಿನ ಸತ್ತು ಹೋಗಿಬಿಟ್ಟ. ಎಷ್ಟೆ ಆಗಲಿ, ದುಂಡಪ್ಪ ಸಾವುಕಾರನಿಗೆ ಹೆಸರು ತಂದುಕೊಟ್ಟಾವಾಂವ. ಅವತ್ತು ಅಂವನ ಟ್ರ್ಯಾಕ್ಟರ್ ಮ್ಯಾಲ ಕೂಡ್ರಿಸಿ, ಬಾಜಾ

ಬಾಜಂತ್ರಿ ಕರೆಸಿ ಊರುತುಂಬಾ ಮೆರುಣುಗಿ ಮಾಡಿದರು. ಹೊಲದ ಬನ್ನಿಗಿಡದ ಕೆಳಗ ಮಣ್ಣು ಮಾಡಿ ಮ್ಯಾಲ ಗದ್ದುಗಿ ಕಟ್ಟಿಸಿದರು. ಕಥಿ ಹೇಳೋದು ಮುಗಿದ್ರು ಅವ್ವ ಅವತ್ತು ಎಷ್ಟೋ ಹೊತ್ತಿನವರೆಗೆ ಅಳುತ್ತಲೇ ಇದ್ಲು.

ಟ್ರಕ್ ಬಹುಶಃ ಶಾಲೆ ಮುಂದೆ ಬಂದಿದ್ದರಿಂದ ನಿಧಾನವಾಯಿತು. ಶಾಲಾ ಮಕ್ಕಳು ಟ್ರಕ್ಕಿನಲ್ಲಿ ನಮ್ಮನ್ನೂ ನೋಡಿ ಹೋ ಎಂದು ಖುಷಿ ಪಡತೊಡಗಿದರು. ಮುದುಕಿ ಟ್ರಕ್ಕಿನ ಮುಲುಗಾಟದಿಂದ ಗಾಬರಿಯಲ್ಲಿದ್ದಳು. ಮುದಿ ಆಕಳು ಗೌರವ್ವ, 'ಈ ಮಾನವರೇ ಹೀಗೆ, ತಮ್ಮ ಮಕ್ಕಳನ್ನು ನೀಟಾಗಿ ಡ್ರೆಸ್ ಮಾಡಿ ಹೆಗಲ ಮೇಲೆ ಹೊತ್ತುಕೊಂಡು ಶಾಲೆಗೆ ಕಳಿಸತಾರೆ. ಆದ್ರೆ, ನಮ್ಮ ಮಕ್ಕಳನ್ನು ಹೆತ್ತಕರುಳಿಂದ ಅಗಲಿಸತಾರೆ. ಇಣಿಯುದ್ದ ಬೆಳೆದಿದ್ದ, ಇನ್ನು ಕೈಕಾಲು ಬಲಿತಿರದ ನನ್ನ ಮಗನ ತೊಡ್ಡು ಬಡಿದು ತಮ್ಮ ಹೊಲ ಉಳಾಕ ಬಳಸಕೋತಾರ. ತಮ್ಮ ಮಕ್ಕಳಿಗೆ ತೊಡ್ಡು ಬಡಿಯಾಕ ಬಿಟ್ಟಾರ ಇವ್ರು, ತಮ್ಮ ವಂಶ ಮಾತ್ರ ಬೆಳಿಬೇಕು, ನಿಂದೆ ಪಾಡು ನೋಡು. ನಿನ್ನ ವಿಷಯದಾಗ ದೇವರು ಕರುಣೆ ತೋರಿದ, ನಿನ್ನ ತೊಡ್ಡು ಬಡಿಲಾರದ್ದರಿಂದ ಬದುಕು ಪೂರ್ತಿ ಸುಖ ಅನುಭವಿಸುವಂಗಾಯಿತು. ಮಠದೊಳಗ ನಮ್ಮಂಥ ಎಲ್ಲ ಆಕಳುಗೊಳು ನಿನ್ನ ದೆಸೆಯಿಂದ ಮಕ್ಕಳ ಕಾಣುವಂಗಾಯಿತು. ಈ ಮಾನವರಂಗ ಸವತಿ ಮತ್ಸರ ಪಟ್ಟಕೊಳ್ಳಲಾರದ ನಾವೆಲ್ಲರೂ ನಿನ್ನ ಕೂಡ ಸಂಸಾರ ಮಾಡಿದೆವು.'

'ನಿನ್ನ ಮಕ್ಕಳು ನನ್ನ ಮಕ್ಕಳು ಅಲ್ಲೇನ ಗೌರಿ. ನನಗೂ ಕಳ್ಳು ಚುರ್ ಅಂತೈತಿ. ಆದ್ರ ಏನು ಮಾಡೋದು. ಈ ಮಾನವರಿಗೆ ಯಾವಾಗ ಬುದ್ಧಿ ಬರತೈತೋ. ಕರೇವಂದ್ರ ನನಗೂ ಮಠದ ಎಲ್ಲ ಆಕಳುಗಳನ್ನು ಸಂಬಾಳಿಸೋದು ಬಾಳ ಕಷ್ಟ ಆಗತಿತ್ತು. ನಾ ಒಲ್ಲೆಂದ್ರ ಕೇಳತಿದ್ರ ಎಲ್ಲಿ, ಮೊದಮೊದಲು ನನಗೂ ಖುಷಿ ಆಕ್ಕಿತ್ತು. ಆದ್ರ, ಇತ್ತಿತ್ತಲಾಗ ವಯಸ್ಸಾತು ನೋಡು. ಮಠದಾಗ ಯಾವುದಾದ್ರು ಆಕಳು ಬೆದಿಗೆ ಬಂದ್ರ ನನಗ ಜೀಂವಾ ಹೋದಾಂಗ ಆಕ್ಕಿತ್ತು. ಆದ್ರ ಈ ಮಾನವರ ಬಾರುಕೋಲುಗಳ ನೆರಳು ಸದಾ ಬೆನ್ನ ಮ್ಯಾಲ ಇರುತ್ತಿದ್ದುದರಿಂದ ಹ್ಯಾಂಗೋ ಕಷ್ಟಪಟ್ಟು ನಿಮ್ಮಗಳನ್ನು ಸುಧಾರಿಸಬೇಕಾಕ್ಕಿತ್ತು. ಆಸರಿಕಿ, ಬ್ಯಾಸರಕಿ, ಜಡ್ಡು, ಜಾಪತ್ರೆ ನೋಡತಿರಲಿಲ್ಲ ಈ ಹಾಳ ಮನುಷ್ಯರು.'

'ಎಷ್ಟು ಮಕ್ಕಳನ್ನು ಹೆತ್ತಿಲ್ಲ ನಾನು, ಮೊನ್ನೆ ಮೊನ್ನೆವರೆಗೆ ಮಕ್ಕಳನ್ನು ಹಡೆಯೋದೆ ಆತು. ಹದಿನಾರೊ, ಹದಿನೈದೋ, ಸರಿಯಾಗಿ ನೆನಪಾಗುತ್ತಿಲ್ಲ. ಮಕ್ಕಳೊಂದಿಗಿನ ನಮ್ಮ ಬಂಧ ಗಟ್ಟಿಗೊಳ್ಳುವ ಮೊದಲೆ ಅಗಲಿಸಿ ಬಿಡುತ್ತಿದ್ದರು. ಗಂಡಾದರೆ ಹೊಲ ಉಳಾಕ, ಹೆಣ್ಣಾದ್ರೆ ಹೈನಾ ಉನಸಾಕ. ಕೊನೆಗಾಲದಲ್ಲಿ ಒಬ್ಬರು ಮಕ್ಕಳು ನನ್ನ ಕೂಡ ಇರದಂಗ ಮಾಡಿ ಬಿಟ್ಟಿತು ಈ ಮನುಷ್ಯ ಜಾತಿ. ಕೊನಿ ಮಗ ಎಷ್ಟು ಚಂದ ಇದ್ದ. ಅವನ ಬಿಳಿ ಮೈ ಬಣ್ಣ, ಚಂದನ ಕೋಡು, ಹೊಳೆಯೋ ಕಣ್ಣು, ಕೆಚ್ಚಲಾ ಗುದ್ದಿ ಗುದ್ದಿ ಹಾಲು ಕುಡಿಯೋ ರೀತಿ, ಅದ್ರ ಏನು ಮಾಡೋದು, ಅಂವಗ ನನ್ನ ಕಣ್ಮುಂದೆ ತೊಡ್ಡು ಬಡಿದರು. ಎಳಿ ಮಗಾ ಹ್ಯಾಂಗ ಸಹಿಸಕೊಂತೋ ಏನೋ. ಪಾಪ, ಜೀವನದಾಗ

ಒಂದು ಆಕಳುಮಣಕಾನೂ ಹತ್ತಲಿಲ್ಲ. ಸುಖ ಏನಂಬೂದೂ ಅಂವಗ ಗೊತ್ತಾ ಆಗಾಕ ಬಿಡಲಿಲ್ಲ. ಅಂವನ ಜೀವನಾನ ಮುಗಿತು. ಇರೋ ಮಟಾ ಇನ್ನು ಯಂತ್ರದಂಗ ನೊಗ ಹೊರಬೇಕಷ್ಟ.'

'ನಮ್ಮ ಎಮ್ಮಿ ಜಾತಿ ಬದುಕಿನ ಮುಂದ ನಿಮ್ಮಗಳ ಬದುಕು ಎಷ್ಟೋ ಚಂದ ಬಿಡವಾ, ತೊಡ್ಡು ಬಡಿಸಿಕೊಂಡ್ರು ನಿಮ್ಮ ಮಕ್ಕಳು ಕಣ್ಮುಂದೆ ಇರತಾರ. ಆದ್ರ ನಮ್ಮ ಪಾಡ ಯಾರಿಗೂ ಬ್ಯಾಡ.' ಇಷ್ಟೋತನಾ ಟ್ರಕ್‌ನ ಒಂದು ಮೂಲೆಯಲ್ಲಿ ನಿಂತು ಕೇಳಿಸಿಕೊಳ್ಳುತ್ತ ನಿಂತಿದ್ದ ಮುದಿ ಎಮ್ಮೆವ್ವ ನಮ್ಮ ಮಾತುಗಳನ್ನು ಕೇಳಿ ತನ್ನ ಕಷ್ಟಾನೂ ಹೇಳಿಕೊಳ್ಳತೊಡಗಿತು.

'ನಿಮ್ಮ ಗಂಡು ಮಕ್ಕಳು ನಿಮ್ಮ ಕೂಡ ಎರಡ್ವರ್ಷ ಆದ್ರೂ ಆಡಕೋತ ಇರತಾವು. ಹುಟ್ಟಿದ ಮೂರು ತಿಂಗಳಿಗೆ ನಮ್ಮ ಗಂಡುಮಕ್ಕಳನ್ನು ಅಗಲಿಸತಾರು. ನಮ್ಮ ಗಂಡು ಮಕ್ಕಳಿಗೆ ನಮ್ಮ ಕೆಚ್ಚಲ ಹಾಲು ಕುಡಿಯಾಕ ಬಿಡುದಿಲ್ಲವೋ ಇವ್ರು. ಹಿಂಡೂ ಮುಂದ ಅಷ್ಟ ನಮ್ಮ ಕ್ವಾಣಗರಾ ಬಿಡತಾರ. ನಾವು ಕೆಚ್ಚಲದಾಗ ಹಾಲು ತೊರೆ ಬಿಟ್ಟಗಳೇನ ಕ್ವಾಣಕರಾ ಆ ಕಡೆ ಗೂಟಕ್ಕ ಕಟ್ಟಿ ಸೊರ್ರ ಸೊರ್ರ ಅಂತ ಬಕೇಟಗಟ್ಟಲೇ ಹಾಲು ಹಿಂಡಕೋತಾರ. ಪಾಪ ಹೊಟ್ಟಿ ತುಂಬಲಾರದೆ ನಮ್ಮ ಎಳಿ ಮಕ್ಕಳು ಚಡಪಡಿಸತಿರತಾವು. ಅಲ್ಲೆಲ್ಲೋ ಮಷೀನ ಬಾಯಿಗೆ ಕೊಟ್ಟು ಕೊಂದು ತಿಂತಾರಂತವ್ವೋ ನಮ್ಮ ಕ್ವಾಣಗಳನ್ನು. ನಮ್ಮ ಎಳಿಮಕ್ಕಳನ್ನು ಎಳಕೊಂಡು ಹೋಗಿ ತಿನ್ನಾಕರ ಹ್ಯಂಗ ಮನಸ್ಸು ಬರತೈತೋ' ಎಂದು ಎಮ್ಮೆವ್ವ ದುಃಖ ತಡಿಲಾರದೆ ಒಂಯಕ್ ಒಂಯಕ್ ಎಂದು ಅಳತೊಡಗಿದಳು.

ಹೆಣ್ಣಿನ ಕಷ್ಟ ಹೆಣ್ಣಿಗೆ ಬೇಗ ಅರ್ಥ ಆಕ್ಕೈತಿ ಅನ್ನುವಂಗ ಆಕಳವ್ವ ಎಮ್ಮೆವ್ವನ ಹತ್ತಿರಕ್ಕೆ ಸರಿದು, 'ಸಮಾಧಾನ ಮಾಡಕೊಳ್ಳವ್ವ, ಮ್ಯಾಲ ದೇವರದಾನ. ಯಾವದಕ್ಕೂ ದಾರಿ ತೋರಿಸತಾನ' ಎಂದಳು.

ದೇವರ ಸುದ್ದಿ ತೆಗೆದೊಡನೆ ಎಮ್ಮೆವ್ವನ ಅಳು ರೋಷವಾಗಿ ಬದಲಾಯಿತು. ಆ ದೇವರಗೊಳ ಸುದ್ದಿ ಮಾತ್ರ ತೆಗಿಬ್ಯಾಡವ್ವ. ಆ ದೇವರುಗಳ ಹೆಸರು ಹೇಳಕೊಂಡು ಅವ್ರ ವರ್ಷಕ್ಕೊಮ್ಮೆ ನಮ್ಮ ಗಂಡು ಮಕ್ಕಳನ ಕಡಿತಾರ. ನನಗ ಚೊಚ್ಚಲ ಕ್ವಾಣಗರು ಹುಟ್ಟಿದರ ಅದನ್ನು ದುರ್ಗವ್ವ ತಾಯಿಗೆ ಬಿಡತೀನಿ ಅಂತ ನಮ್ಮ ಮನಿ ಒಕ್ಕಲಗಿತ್ತಿ ಬೇಡಿಕೊಂಡಿದ್ದಳಂತ. ಅದ ಪ್ರಕಾರ ನನಗ ಕ್ವಾಣ ಹುಟ್ಟಿದ್ರಿಂದ ಅದನ್ನು ದೇವಿಗೆ ಬಿಟ್ಟಿದ್ರು. ದೇವಿಗೆ ಬೀಡೂದಂದ್ರ ನನಗಾಗ ಏನಂತ ಗೊತ್ತಿರಲಿಲ್ಲ. ಒಟ್ಟಿನೊಳಗ ನನ್ನ ಮಗ ನನ್ನ ಕಣ್ಮುಂದ ಅದನಲಾ ಅಷ್ಟು ಸಾಕು, ಅಂವನ ದೇವರಿಗೆ ಬಿಟ್ಟದ್ದೆ ಚಲೋ ಆತು ಅನಕೊಂಡಿದ್ದೆ. ಅಂವನ್ನೇನೋ ಯಾರೂ ಕರದ ಕಟ್ಟಲಿಲ್ಲ. ನೀರು ಕುಡಿಸಲಿಲ್ಲ. ಕಂಡವರ ಹೊಲ ಹೊಕ್ಕು, ಹಳ್ಳದ ನೀರು ಕುಡ್ದು ಬೀದಿ ಮಗ ಆಗಿ ನನ್ನ ಮೀರಿಸುವಂಗ ಬೆಳದ ನನ್ನ ಮಗ. ಅಂವನ ಕೋಡು ಅನ್ನೋದು ಮರದ ತುಂಡು ಆಗಿದ್ವು, ಅಂವನ

ಕಾಲು ಕೈ ಜಾಲಿಗಿಡದ ತೊಲಿ ಆಗಿದ್ವು. ಅಂವನ ಹಣಿ ಮ್ಯಾಲಿನ ಬಿಳಿ ಚಿಕ್ಕಿ ಏನು, ಅಂವನ ಆನಿಗಾತ್ರದ ಮೈಮಾಟ ಏನು, ಮಿರಿ ಮಿರಿ ಮಿಂಚೋ ಕೂದಲೇನು, ಬಾಳ ಅಂದ್ರ ಬಾಳ ಚಂದ ಇದ್ದ ಮಗ, ಊರ ಎಮ್ಮಿ ಮಣಕಗೊಳೆಲ್ಲ ಅಂವನ ಹಿಂದ ತಿರಗುತಿದ್ವು. ಯಾವದರಾ ಎಮ್ಮಿ ಮಣಕದ ಮ್ಯಾಲ ನನ್ನ ಮಗ ಹತ್ತಿದನಂದ್ರ ಒಟ್ಟ ಹುಸಿ ಹೊಕ್ಕಿರಲಿಲ್ಲ. ವರ್ಷ ತುಂಬುತ್ತಲೇ ಅವುಕ್ಕ ಮಕ್ಕಳ ಭಾಗ್ಯ ಸಿಗತಿತ್ತು. 'ಎವ್ವ ಬೇ ಊರ ತುಂಬಾ ನಿನ್ನ ಸೊಸೆಯಂದ್ರ ಅದಾರು. ಯಾವತ್ತು ಮನಿ ತುಂಬಸಿಕೊಳ್ಳತಿ' ಅಂತ ನನ್ನ ಮುಂದ ಕಣ್ಣ ಹಾರಿಸಿ ನಕಲಿ ಮಾಡತಿದ್ದ. ನಾನು ಮನಸ್ಸು ತುಂಬಾ ನಕ್ಕು ಇಡೀ ಊರಿನ ಹಳ್ಳ, ಕೊಳ್ಳ, ಬದುಬಯಲೆಲ್ಲ ನಮ್ಮದ ಮನಿ ಇದ್ದಂಗಪಾ ಅಂತಿದ್ದೆ. ಒಟ್ಟಿನಲ್ಲಿ ಊರಿನ ಮಣಕಗೊಳು ಮಕ್ಕಳನ ಹಡದು ನಮ್ಮ ಎಮ್ಮಿಜಾತಿಯ ಬಳ್ಳಿ ಎಲ್ಲ ಕಡಿ ಹಬ್ಬಿದ್ರ ಸಾಕು ಅನಕೊಂಡಿದ್ದೆ.

ಅಂತ ಮಗನ ಒಂದಿನ ಆ ದೇವಿ ಮುಂದನ ಕೊಂದುಬಿಟ್ರು. ಕಡಿಯೋದು ಒಂದು ವಾರ ಇರಾಕಲೇ ನನ್ನ ಮಗನ ಕೋಡುಗಳಿಗೆ ಸುಣ್ಣ, ಕೆಮ್ಮಣ್ಣು ಬಳಿದು ಶೃಂಗಾರ ಮಾಡಿದ್ದರು. ಆದ್ರ ಜಾತ್ರಿ ಮೂರು ದಿವಸ ಇರುವಾಗ ನನ್ನ ಮಗನಿಗೆ ಉಪವಾಸ ಇಟ್ಟು ಸುಣ್ಣದ ನೀರು ಸೆರೆ ಕುಡಿಸಿದ್ರಂತ. ನನ್ನ ಕಳ್ಳ ತಡಿಲಾರದೆ ತಿಪ್ಯಾಗ ಅಡ್ಯಾಡಾಕ ಬಿಟ್ಟಾಗ ಹೋಗಿ ಮಗನ್ನ ನೋಡಿ ಬಂದಿದ್ದೆ. ಮಗ ಉಪವಾಸ ಇದ್ದುದಕೋ ಸುಣ್ಣದ ನೀರು ಕುಡಿದುದುಕೋ ತೇಲುಗಣ್ಣು ಮೇಲುಗಣ್ಣು ಬಿಡತಿದ್ದ. ಅವತ್ತ ನನಗೆ ಎಡಗಣ್ಣು ಹಾರಾಕ ಶುರುವಾಗಿತ್ತು. ಜಾತ್ರಿ ದಿನ ಅಂವಂಗ ಕೊಳ್ಳಾಗ ಬೇವಿನ ತಪ್ಪಲಾ ಕಟ್ಟಿ ಊರ ತುಂಬ ಮೆರವಣಿಗಿ ಮಾಡಿದ್ರು. ನನ್ನ ಮನಿ ಮುಂದ ಅಂವನ ಎಳಕೊಂಡು ಹೋಗುವಾಗ ಇದ್ಯಾಕ ಹಿಂಗ ಅಂತ ಜೀವ ಹಳಾಳಿಸಿತು. ಅವತ್ತು ಗುಡಿ ಸುತ್ತ ಹಾಕಿಸುವಾಗ ನನ್ನ ಮಗ ತನ್ನ ಶಕ್ತಿನೆಲ್ಲ ಒಟ್ಟ ಮಾಡಿ ಮನುಷ್ಯರಿಂದ ತಪ್ಪಿಸಿಕೊಂಡು ಹೋಗಾಕ ಬಾಳ ಒದ್ದಾಡಿದನಂತ. ಆದ್ರ ಸಾಧ್ಯ ಆಗಲಿಲ್ಲ. ಮನಷ್ಯರು ನನ್ನ ಮಗನ ಕಾಲಿಗೆ ಕೈಗೆ, ಕೊಳ್ಳಿಗೆ ದಪ್ಪನ ಹಗ್ಗ ಕಟ್ಟಿ ಒಂದ ಸವನ ಆಕಡಿ ಈಕಡಿ ಎಳದಾಡತಿದ್ರಂತ. ಸುತ್ತಲೂ ನಿಂತ ನೋಡುತ್ತಿದ್ದ ಮಂದಿ ಉದೋ ಉದೋ ಎನ್ನುತ್ತಿರುವಾಗಲೇ ಕಳಕ್ ಅಂತ ಹತ್ತಾರು ಸಲ ಹತಾರ ಕೊಡಲಿಗಳಿಂದ ಗೋನು ಕಡಿದರು. ನನ್ನ ಮಗನ ರಗ್ತ ಅವರ ಕಾಲಾಗ ಕಾಲವೆಯಾಗಿ ಹರಿಲಿಕ್ಕತಂತ. ಮಗನ ಚಂಡು ಒಯ್ದು ಗುಡಿಯೊಳಗ ಇಟ್ರು. ಅಂವನ ಬಾಯಾಗ ಅಂವಂದ ಹಿಂಗಾಲು ಇಟ್ಟು ಹಣಿಮ್ಯಾಲ ದೀಪ ಹಚ್ಚಿಟ್ಟಾಗ ದೇವಿ ಶಾಂತ ಆದಲಂತ. ಮುಂದ ಕೇರಿ ಮಂದೆಲ್ಲ ನನ್ನ ಮಗನ ತುಂಡು ತುಂಡು ಮಾಡಿ ಹರಕೊಂಡು ಕುಚ್ಚಿಕೊಂಡು ತಿಂದ್ರಂತ.

'ಮೂರ್ಖ ಮಂದಿ, ನಮ್ಮ ದನದ ಜಾತಿಗೆ ಬುದ್ಧಿ ಇಲ್ಲ ಅಂತಾರ. ತಾವು ಮಾತ್ರ ದೇವರ ಹೆಸರಲ್ಲಿ ಇಂತ ಮೌಢ್ಯಾಚಾರ ಮಾಡತಾರ. ದೇವಿ ಖರೇನ ಶಕ್ತಿಯುಳ್ಳದ್ದಾಗಿದ್ದರೆ ತನ್ನ ಮುಂದ ನನ್ನ ಮಗ ಮೂಕ ಪ್ರಾಣಿ ಬಲಿ ಕೊಡೋದನ್ನು ತಪ್ಪಿಸಬಹುದಿತ್ತು. ನಿಜ

ಹೇಳಬೇಕಂದ್ರ ದೇವರ ಅನ್ನೋದು ಐತೋ ಇಲ್ಲೋ ಅಂತ ಅನುಮಾನ ಬರತೈತಿ ನನಗ' ಅಂದ್ಲು ಎಮ್ಮೆವ್ವ.

ನನಗೂ ಖರೆ ಅನಿಸಿದ್ದರಿಂದ ಹೌದೌದು ಎಂದು ಗೋಣು ಹಾಕಿದೆ. ದೇವರ ಅಂತ ಎತ್ತುಗೊಳಿಗೂ ಹಬ್ಬದ ದಿನ ಪೂಜಿ ಮಾಡ್ತಾರ. ಗಳೆ ಹೊಡಿಯುವಾಗ ನಮಗ ದಣಿವಾಗಿ ಮುಂದ ನಡಿದಿದ್ರ ಬಾರುಕೋಲು ತೊಗೊಂಡ ಬಡಿತಾರ. ವಿಚಿತ್ರ ಐತಿ ಮನುಷ್ಯ ಜಾತಿ. ಆಸೇಕ ಬಿದ್ದಿರುವ ಮನುಷ್ಯ ಇಡಿ ಭೂಮಿನ ತನ್ನ ಹಿಡಿತದೊಳಗ ತೊಗೊಂಡು ತನಗ ಬೇಕಾದಂಗ ಬದಲಾಯಿಸಲಿಕ್ಕ ಹತ್ಯಾನ. ಅಖಂಡ ೮೦ ಕೋಟಿ ಜೀವಚರಗಳ ಬದುಕನ್ನು ಬಲಿ ತೊಗೊಂಡು ತನ್ನ ವಂಶ ಒಂದ ಬೆಳಸಾಕ ಹತ್ಯಾನ. ಗಿಳಿ ಕೈಯಿಂದ ಭವಿಷ್ಯ ಹೇಳಿಸ್ತಾನ. ಕೋತಿ–ಕರಡಿಗಳಿಂದ ಆಟ ಆಡಿಸಿ ಭಿಕ್ಷಾ ಎತ್ತಸ್ತಾನ. ನಾಯಿ ಕೈಯಿಂದ ತನ್ನ ಮನಿ ಕಾಯಿಸ್ತಾನ. ಒಂದ ಪ್ರಾಣಿ ಬೆಕ್ಕಿನಿಂದ ಇನ್ನೊಂದು ಪ್ರಾಣಿ ಇಲಿ ಹಿಡಿಸ್ತಾನ. ಹುಲಿ ಸಿಂಹ ಆನಿಯಂತ ಕಾಡು ಮೃಗಗಳನ್ನೂ ಬಿಟ್ಟಿಲ್ಲ ಈ ಮನುಷ್ಯ. ಅವುಗಳನ್ನು ಪಳಗಿಸಿ ಸರ್ಕಸ್ ಮಾಡಿಸಿ ದುಡ್ಡ ಮಾಡ್ತಾನ. ನಮ್ಮಂತ ಎತ್ತುಗೊಳಿಂದ ವಯಸ್ಸಾಗು ಮಟಾ ಕೂಲಿ ಮಾಡಿಸಿ ಕೊನಿಗೆ ತಿಂದು ಬಿಡ್ತಾನ. ಈ ಭೂಮಿ, ಆಕಾಶ, ಸಮುದ್ರದೊಳಗ ತನಗ ಕಾಣಬರೋ ಎಲ್ಲ ಪ್ರಾಣಿ ಪಕ್ಷಿಗಳನ್ನು ಮಾನವ ಬೇಟಿಯಾಡಿ ತನ್ನ ಹೊಟ್ಟಿಗಿಳಿಸುತ್ತಿದ್ದಾನ. ಈ ಹಿಂದ ನಾವು ಕಾಡಿಗೆ ಮೇಯಾಕ ಹೋದ್ರ ಎಷ್ಟೊಂದು ತರಹದ ಚಂದಾನ ಹಕ್ಕಿಗೊಳು, ಮೊಲ, ಮಿಕಗಳು ಭೇಟಿಯಾಕ್ಕಿದ್ವು. ಈಗ ಆ ಎಲ್ಲ ಜಾತಿ ಮೊಲ ಮಿಕಗಳನ್ನು ಮನುಷ್ಯ ಬ್ಯಾಟಿಯಾಡಿ ಖಾಲಿ ಮಾಡ್ಯಾನ. ಭೂಮಿ ಮ್ಯಾಗಿನ ಕಾಡ ಕಡಿದು ಅಲ್ಲಲ್ಲೆ ಬಯಲು ಮಾಡಿ ತನ್ನ ಕಾಂಕ್ರೀಟ ಬಂಗ್ಲೆಗಳನ್ನು ಎಬ್ಬಸಾಕ ಹತ್ಯಾನ.

ಖರೇವಂದ್ರ ದೇವರು ಭೂಮಿಮ್ಯಾಗಲ ಎಲ್ಲ ೮೦ ಕೋಟಿ ಜೀವರಾಶಿಯನ್ನು ರಕ್ಷಿಸೋ ಶಕ್ತಿ ಬರಲಿ ಅಂತ ಈ ಮನುಷ್ಯನ ತಲ್ಯಾಗ ಬುದ್ಧಿ ಇಟ್ಟನಂತ. ಅಂವಗ ಮಾತಾಡೋ ಶಕ್ತಿ ಕೊಟ್ಟನಂತ. ಆದ್ರ ಬರಬರುತ್ತಾ ಮನುಷ್ಯ ಈ ಉದ್ದೇಶವನ್ನು ಮರತು ಎಲ್ಲ ಜೀವರಾಶಿಯನ್ನು ತಿನ್ನೂದು ಕಲ್ತಾನ. ಬೇಲಿನ ಎದ್ದು ಹೊಲ ಮೇಯ್ದಾಂಗ ಆಗೈತಿ. ಯಾರಿಗೆ ಹೇಳೂನು ನಮ್ಮ ಸಂಕಟ. ಮಠದಲ್ಲಿದ್ದು ಆಗಾಗ ತಿಳಕೊಂಡಿದ್ದ ಕೆಲವು ಸಂಗತಿಗಳನ್ನು ಎಮ್ಮೆವ್ವ–ಆಕಳವ್ವನ ಕೂಡ ಹಂಚಿಕೊಂಡದ್ದರಿಂದ ಸಮಾಧಾನ ಆಯಿತು.

'ಈಗ ಈ ಗಾಡಿ ಹತ್ತಿಸಿದಾರಂದ್ರ ನಮ್ಮನ್ನು ಕೊಂದು ತಿನ್ನಾಕ ಒಯ್ಯಾಕ ಹತ್ಯಾರಂತ ಕಾಣಸತೈತಿ' ಎಮ್ಮಿ ತನ್ನ ಅನುಮಾನ ಹೊರ ಹಾಕಿತು.

ಅದು ನನಗೂ ಗೊತ್ತ ಐತಿ. ಒಂದಿಲ್ಲಾ ಒಂದಿನ ನಮ್ಮ ಮಾಂಸ ಮನುಷ್ಯನ ಹೊಟ್ಟಿ ಸೇರೂದು ಖರೆ ಐತಿ. ನಾಳೆ ತಿನ್ನೋರು ಇವತ್ತು ತಿಂತಾರ ಅಷ್ಟ. ಈ ಭೂಮಿ

ಮ್ಯಾಲ ಇದ್ದಾದ್ರೂ ನಾವು ಏನು ಸಾದ್ಸೂದು ಐತಿ. ಜೀವ ಕಲ್ಲ ಮಾಡ್ಕೊಂಡು ಸುಮ್ಮನಿದ್ರಾತು. ನಾನು ನನ್ನ ಮೂಕ ಭಾಷೆಯಲ್ಲಿ ಸಮಾಧಾನ ಮಾಡಿದೆ.

ಡ್ರೈವರ್‌ಗೆ ಉಚ್ಚಿ ಬಂದಿರಬೇಕು. ಆತ ಗಾಡಿ ಒಂದ ಕಡೆ ತರುಬಿ ಕಾಲು ಮಡಿಯಾಕ ಹತ್ತಿದ. ನಮಗೂ ಉಚ್ಚಿ ಹೆಂಡಿ ಜೋರು ಬಂದಿತ್ತು. ಗಾಡ್ಯಾಕ ಮಾಡಕೊಂಡ್ರ ಡ್ರೈವರ್ ಬಡದ ಗಿಡದಾನು ಅಂತ ಸುಮ್ಮನಿದ್ದೆವು. ಅಷ್ಟರಲ್ಲಿ ಕುರಿ ಹಿಂಡೊಂದು ನಮ್ಮ ಮುಂದ ಹಾದು ಹೋತು. ಆ ಕುರಿ ಹಿಂಡ ಕಾಯಾಕ ಡೊಂಕು ಬಾಲದ ನಾಯಕ ನಾಯಿಯೊಂದು ನಾಲಗಿ ತೆರೆದು ಗಸ್ ಗಸ್ ತೇಕೋತ ಹಿಂದಿಂದ ಹೊಂಟಿತ್ತು.

ಇದ್ದದರಾಗ ಈ ಕುರಿ ಬದುಕು ದೇವರು ಚಲೋ ಇಟ್ಟಾನ. "ಇರುಮಟಾ ಹುಲ್ಲು ಮೇಯ್ಕೊಂಡು ಇರ್ತಾವ. ಒಂದಿನ ಮನುಷ್ಯನ ಹೊಟ್ಟಿ ಪಾಲಾಗ್ತಾವ" ಅಂದ್ಲು ಆಕಳವ್ವ.

'ಅವುದರದರಾ ಏನು ಬದುಕು, ಹುಟ್ಟಿದ ಮೂರು ತಿಂಗಳಿಗೆ ಮಕ್ಕಳನ ಕಳಕೋತಾವ. ಖರೆವಂದ್ರ ಮಂಸಾಹಾರಿಯಾದ ಹುಲಿ, ಸಿಂಹ, ಚಿರತೆ, ತೋಳಗಳಿಗೆ ಆಹಾರ ಸಿಗಲಿ ಅಂತ ನಿಸರ್ಗ ಈ ಕುರಿಗಳನ್ನು ಸೃಷ್ಟಿ ಮಾಡಿರಬೇಕು. ಆದರ ಸ್ವಾರ್ಥಿಯಾದ ಮನುಷ್ಯ ಇವುಗಳನ್ನು ಪಳಗಿಸಿ ತಾನೆ ಸಾಕಿಕೊಂಡು ತಾನೆ ಭಕ್ಷಿಸತೊಡಗಿದ. ಪಾಪ, ಮಾಂಸ ಸಿಗದೆ ಹುಲಿ, ಸಿಂಹ ತೋಳಗಳ ಸಂತತಿಯೇ ಕಡಿಮೆಯಾಗುತ್ತಿದೆ. ಒಂದು ಕಡೆ ಅವುಗಳಿಗೆ ಆಹಾರವಿಲ್ಲದಂತೆ ಮಾಡಿರುವ ಮನುಷ್ಯ, ಇನ್ನೊಂದು ಕಡೆ ಹುಲಿ ಸಿಂಹಗಳ ಸಂತತಿ ನಾಶವಾಗುತ್ತಿದೆ ಎಂದು ಬೊಬ್ಬೆ ಹೊಡಿತಾನ. ಎಂಥ ವಿಚಿತ್ರ' ಎಂದೆ ನಾನು.

ಪಟ್ಟಣ ದಾಟಿ ಮುಂದುವರೆದಂತೆ ಒಂದೆರಡು ಸ್ಕೂಟರ್‌ಗಳಲ್ಲಿ ನಾಲ್ಕೈದು ಮಾನವರು ಟ್ರಕ್‌ನ್ನು ಬೆನ್ನತ್ತಿದರು. ಅವರು ಕಿವಿಯಲ್ಲಿ ಬೆಂಕಿ ಪೊಟ್ಟಣದಂಥ ಪೆಟ್ಟಿಗೆ ಇಟ್ಟುಕೊಂಡು ತಮ್ಮಷ್ಟಕ್ಕೆ ತಾವೇ ಮಾತಾಡಿಕೊಳ್ಳುತ್ತಿದ್ದರಿಂದ ಅವರು ಹುಚ್ಚರಂತೆ ಕಾಣುತ್ತಿದ್ದರು. ಅವರ ಗುರುತು ಸಿಕ್ಕವನಂತೆ ಹೋತದ ಗಡ್ಡದವ ತನ್ನ ಟ್ರಕ್‌ನ್ನು ಜೋರಾಗಿ ಓಡಿಸತೊಡಗಿದ. ಏನೊಂದು ತಿಳಿಯದೆ ಬಾಯಾರಿ ಹೊಟ್ಟೆ ಹಸಿದು ನಾನು ಅಂಬಾ ಎನ್ನುವುದಷ್ಟೆ ನನ್ನ ಕೆಲಸ. ಐದಾರು ನಿಮಿಷಗಳಲ್ಲಿ ಕೇಸರಿ ಬಣ್ಣದ ದ್ವಜ ಹಿಡಿದಿದ್ದ ಒಂದಿಷ್ಟು ಮಂದಿ ನಮ್ಮ ಟ್ರಕ್‌ನ್ನು ಅಡ್ಡಗಟ್ಟಿತು. ಟ್ರಕ್ಕಿನೊಳಗೆ ಕುಳಿತಿದ್ದ ಹೋತದ ಗಡ್ಡದವನನ್ನು ಹೊರಗೆ ಎಳೆದು ಬಡಿಯತೊಡಗಿದರು. ಅವನ ತುಟಿ, ಬಾಯಿ, ತಲೆಯಿಂದ ರಕ್ತ ಸೋರಿದರೂ ಬಿಡದೆ ನೆಲಕ್ಕೆ ಕೆಡೆದು ಜಜ್ಜತೊಡಗಿದರು. ಮಾನವರದೆ ಒಂದು ಗುಂಪು ಇನ್ನೊಬ್ಬ ಮಾನವನನ್ನು ಹೊಡೆಯುತ್ತಿರುವುದು ನನಗೆ ಆ ಕ್ಷಣ ತಮಾಷೆಯಾಗಿ ಕಾಣದೆ, ಬಹುಶಃ ಈ ವ್ಯಕ್ತಿ ಅವರಂತಿರದೆ ಹೋತದ ಗಡ್ಡ ಬಿಟ್ಟಿರುವುದೆ ಅವನು ಹೊಡೆಸಿಕೊಳ್ಳಲಿಕ್ಕೆ ಕಾರಣವಿರಬಹುದು ಎಂದೆನಿಸಿತು. ಏನೆಂಬಾದರೂ ಈ ಮಾನವರ ಮಾನವೀಯತೆಗಿಂತಲೂ ನಮ್ಮಗಳ ಪಶುತ್ವವೇ ಮೇಲು ಎಂದ್ಲು ಎಮ್ಮೆವ್ವ. ನಾವು ಆಗಾಗ ಜಗಳ ಮಾಡ್ತಿವಿ ಖರೆ. ಆದ್ರ ಹಿಂಗ ಧರ್ಮ ದೇವರು ಅಂತ ಅರ್ಥಹೀನ

ಶಬ್ದ ಹಿಡಕೊಂಡು ಹೀಗೆ ಗುಂಪು ಕಟ್ಟಿಕೊಂಡು ಜಗಳ ಮಾಡಿದ್ದಿಲ್ಲ ಅಂತ ನಾನು ಆಕೆಯ ಮಾತಿಗೆ ಸೇರಿಸಿದೆ.

ಈ ಮನುಷ್ಯರಿಗೆ ಮಾನವೀಯತೆಗಿಂತಲೂ ನಮ್ಮ ಪಶುತ್ವವನ್ನೆ ಕಲಿಸಿಕೊಟ್ಟರೆ ಆಗ ಇಡಿ ವಿಶ್ವದಲ್ಲಿ ಶಾಂತಿ ನೆಲೆಸಬಹುದು ಎಂದು ನಾವುಗಳು ಮಾತಾಡಿಕೊಂಡು ಪಿಲಾನು ಮಾಡಿಕೊಳ್ಳುತ್ತಿರುವಾಗಲೇ ನಮ್ಮನ್ನು ಟ್ರಕ್ಕಿನಿಂದ ಮತ್ತೆ ಪ್ರಯಾಸಪಟ್ಟು ಕೆಳಗಿಳಿಸಿದರು. ಆದರೆ, ದಾರಿಯುದ್ದಕ್ಕೂ ನಮಗೆ ಜೊತೆಯಾಗಿ ಆಸರಕಿ ಬ್ಯಾಸರಕಿಗಳನ್ನು ಹೇಳಿಕೊಂಡು ಬಂದಿದ್ದ ಎಮ್ಮೆವ್ವನನ್ನು ಮಾತ್ರ ಇಳಿಸಲೇ ಇಲ್ಲ. ನನ್ನೂ ಇಳಿಸಿ ಎಂಬ ಅವಳ ಮೂಕ ರೋದನೆ ಈ ಮನುಷ್ಯರಿಗೆ ಅರ್ಥವೇ ಆಗಲಿಲ್ಲ. ಮುಂದೆ ಅವಳ ಕಥೆ ಏನಾಯಿತೊ ನಮಗೆ ಗೊತ್ತಾಗಲಿಲ್ಲ.

ಅಲ್ಲಿಂದ ನಮ್ಮನ್ನು ಮತ್ತೆ ಹಿಂದಕ್ಕೆ ಅಂದರೆ ನಾವು ದಾಟಿಕೊಂಡು ಬಂದ ಪಟ್ಟಣಕ್ಕೆ ಕರೆದುಕೊಂಡು ಹೋದರು. ಪಟ್ಟಣದಲ್ಲಿ ಒಂದಿಷ್ಟು ಮಹಿಳೆಯರು ಜರತಾರಿ ಸೀರೆ ಉಟ್ಟುಕೊಂಡು ಕೈಯಲ್ಲಿ ಆರತಿ ಹಿಡಿದುಕೊಂಡು ನಮ್ಮನ್ನು ಎದುರುಗೊಂಡರು. ನಮ್ಮನ್ನು ಊರೆಲ್ಲ ಮೆರವಣಿಗೆ ಮಾಡಿದ್ದು ಖರೆವಂದ್ರು ನಮಗೂ ಬಾಳ ಖುಷಿಯಾತು. ನಮ್ಮನ್ನು ಬಿಡಿಸಿಕೊಂಡು ಬಂದವರಿಗೆ ಹೂಹಾರ ಹಾಕಿ ಎಲ್ಲರೂ ಹೊಗಳಿದ್ದೆ ಹೊಗಳಿದ್ದು.

ಮೇರುಣಗಿ ಮುಗಿದ ಮ್ಯಾಲ ನಮ್ಮನ್ನು ದೊಡ್ಡ ಸಭಾ ಹತ್ತಸಾಕ ನೋಡಿದ್ರು. ಪಾಪ ಆಕಳವ್ವನ ಪರಿಸ್ಥಿತಿ ಬಾಳ ಕೆಟ್ಟಿತ್ತು. ಹೇಳಿ ಕೇಳಿ ಆಕಿ ಹತ್ತ ಹದಿನೈದು ಮಕ್ಕಳನ್ನ ಹಡದಾಕಿ. ಮೈಯ್ಯೊಳಗಿನ ಖಂಡ ಎಲ್ಲ ಕರಗಿ ಕೆಚ್ಚಲು ಅನ್ನೋದು ಜೋತು ಬಿದ್ದಿತ್ತು. ಕಣ್ಣು ಗುಡ್ಡಿ ಒಳಗ ಹೋಗಿತ್ತು. ಬಾಯಾಗ ಎಣಿಸಾಕು ಒಂದು ಹಲ್ಲ ಇರಲಿಲ್ಲ. ಪಾಪ ಹಗಲೆಲ್ಲ ಊಟ ಇರಲಾರದಕ್ಕೆ ನೂಗಿಸಿದ್ರ ಬಿಳುವಂಗ ಆಗಿದ್ಲು. ಅಂತಾಕಿನ ಹೆದರಿಸಿ ಬೆದರಿಸಿ ಮಾಡಿ ಸ್ಟೇಜ್ ಹತ್ತಸಾಕ ನೋಡಿದ್ರು. ಆಕಿ ಹೆದರಕೊಂಡು ಪುತುಪುತು ಹೇತಗೊಂಡಬಿಟ್ಲು. ಸೊರ‍್ರರ‍್ರ ಅಂತ ಉಚ್ಚೆ ಶುರುವಾದು. ಆದ್ರ ಈ ಹುಚ್ಚೆಖೋಡಿ ಜನ ಎಂಥ ದಡ್ಡರೂ ಅಂತಿನಿ. ಆಕಿ ಉಚ್ಚೆನ ಕೆಲವೊಬ್ರು ಚರಗಿ ತಂದು ತುಂಬಕೊಂಡ್ರು. ಮುಖ ಗಂಟ ಹಾಕ್ಕೊಂಡು ಗಂಟಲಕ ಇಳಿಸಿದ್ರು. ನೋಡುತ್ತಿದ್ದ ಜನರ ತೆಲಿ ಮ್ಯಾಲ ಎರಚಿದರು. ನನಗ ಜನರ ಹುಚ್ಚುತನ ನೋಡಿ ಅಯ್ಯೋ ಎನಿಸ್ತು. ನಮ್ಮ ಉಚ್ಚ್ಯಾಗ ನಾವು ಮಲಗಾಕ ಅಸಹ್ಯ ಪಟಗೋತಿವಿ. ಆದ್ರ ಅಂವುನ ಕುಡಿಯೋ ಈ ಜನ ನಮ್ಮಕಿಂತ ದಡ್ಡರೂ ಅಂತ ನನಗ ಅವತ್ತ ಗೊತ್ತಾತು.

ಹಂಗೂ ಹಿಂಗೂ ಮಾಡಿ ಸ್ಟೇಜ್ ಹತ್ತಿಸೇಬಿಟ್ರು. ಸ್ಟೇಜ್ ಎದುರುಗಡೆ ಜನವೋ ಜನ. ಅಲ್ಲಿನ ಝಗಮಗಿಸೋ ಲೈಟು ನೋಡಿ ನಮಗ ಕಣ್ಣಿಗೆ ಕತ್ತಲಾದಂಗ ಆಗಿತ್ತು. ಯಾರೋ ಒಬ್ಬರು ಮಹಾನುಭಾವರು ಭಾಷಣ ಶುರುಹಚ್ಚಿಗೊಂಡ್ರು. ಗೋಮಾತೆ ನಮಗ ಜನ್ಮ ಕೊಟ್ಟ ತಾಯಿ ಇದ್ದಂಗ, ಆಕಿನ ಕೊಂದು ತಿನ್ನೊ ಮಂದಿ ನಮ್ಮ ದೇಶದವರಲ್ಲ. ಅವರನ್ನು ಈ ದೇಶದಿಂದ ಒದ್ದು ಓಡಿಸಬೇಕು ಎಂದು ಏನೇನೋ ಮಾತಾಡುತ್ತಿದ್ದರು. ಪಾಪ ನಮ್ಮ ಸಮ್ಮಂದ ಎಷ್ಟು ಕಾಳಜಿ ತುಗೋತಾರಲ್ಲ ಅಂತ

ನಾನು ಆಕಳವ್ವನ ಕಡೆ ನೋಡಿ ಕಣ್ಣು ಮಿಟುಕಿಸಿದೆ. 'ನಾವು ಮುಪ್ಪಾನ ಕಾಲಕ್ಕ ಒಳ್ಳೆಯವ್ರ ಕೈಯಾಗ ಬಿದ್ದಿವಿ. ಇನ್ನು ನಮ್ಮ ಕಷ್ಟ ತೀರ್ತು. ನಮ್ಮ ರೊಟ್ಟಿ ಜಾರಿ ತುಪ್ಪದಾಗ ಬಿದ್ದಾಂಗ ಆಗೇತಿ. ನೀ ಇನ್ನ ಚಿಂತಿ ಮಾಡಬ್ಯಾಡ' ಅಂತ ನಾನು ಆಕಳವ್ವಗ ಕಣ್ಣಿನಿಂದ್ಲೆ ಸಮಾಧಾನ ಹೇಳಿದೆ. ಆದ್ರ ಆಕಳವ್ವ ಮಾತ್ರ ದುಗುಡದೊಳಗ ಇದ್ಲು.

ಆದ್ರ ಏನು ಮಾಡೂದೈತಿ ನಮ್ಮ ನಸೀಬು ಖೊಟ್ಟಿ. ಹಿಂಗ ಸಮಾಧಾನ ಹೇಳಿ ಒಂದ ತಾಸು ಆಗಿರಲಿಲ್ಲ. ನಮ್ಮ ಕೇಡುಗಾಲ ಶುರುವಾಗಿ ಬಿಟ್ಟಿತ್ತು. ಜನ ಎಲ್ಲ ಕಾರ್ಯಕ್ರಮ ಮುಗಿಸಿ ಹೋಗಿಬಿಟ್ಟಿದ್ರು. ನಮಗ ಎಲ್ಲಿ ಬಿಡಬೇಕು ಅಂತ ಕಾರ್ಯಕ್ರಮ ಸಂಘಟಕರು ಚಿಂತಿ ಮಾಡಾಕ ಹತ್ತಿದ್ರು. ನಮಗ ಗೋಶಾಲಿಗೆ ಕಳಿಸುವವರೆಗೂ ಯಾರದಾದ್ರೂ ಮನೆಯಲ್ಲಿ ವ್ಯವಸ್ಥಾ ಮಾಡಬೇಕಂತ ಭಾಷಣ ಮಾಡಿದಾಂವ ಕೈ ಮುಗಿದು ಕೇಳಿದ್ರೂ ಯಾರೂ ಮುಂದ ಬರಲಿಲ್ಲ. ನಮಗ ನಿಜವಾಗ್ಲೂ ಗಾಬರಿಯಾತು. ತಾಸಿನ ಕೆಳಗ ನಮ್ಮ ಉಚ್ಚಿ ಕೆಳಗ ಬೀಳಲಾರದಂಗ ಬೊಗಸೆಯೊಡ್ಡಿ ಕುಡಿದ, ಸ್ಟೇಜ್ ಮ್ಯಾಲ ನಮ್ಮನ್ನು ಹತ್ತಿಸಿ ಮೆರಿಸಿದ್ದ ಜನ ಈಗ ಒಂದೆರಡು ದಿನದ ಮಟ್ಟಿಗೆ ನಮ್ಮನ್ನು ಮನಿಗೆ ಕರಕೊಂಡು ಹೋಗಾಕ ತಯಾರಿಲ್ಲ ಅಂದ್ರ ಏನನ್ನೋದು ಅಂತ ಬಾಳ ಬ್ಯಾಸರಾತು.

ಕಡಿಕ ಒಬ್ಬ ಪುಣ್ಯಾತ್ಮ ನಮ್ಮನ್ನು ಮನಿಗೆ ಕರಕೊಂಡು ಹೋಗಾಕ ಮುಂದ ಬಂದ. ನಮ್ಮ ಪಾಲಿಗೆ ಅಂವನೇ ದೇವರು ಅನಕೊಂಡು ನಾವಿಬ್ರು ಅವನ ಹಿಂದ ಹೆಜ್ಜೆ ಹಾಕಿದೆವು. ಅವನದೇನೋ ದೊಡ್ಡ ಮನಿನೆ ಇತ್ತು. ಆದ್ರ ನೆಲ ತಳ ತಳ ಕನ್ನಡಿಯಂತ ಪಾಲೀಸ್ ಕಲ್ಲಿನಿಂದ ಹೊಳಿತಿತ್ತು. ಜೀವ ಕಾಲೊಳಗ ಇಟುಕೊಂಡು ನಿಧಾನಕ್ಕೆ ಮನೆಯ ಮೆಟ್ಟಿಲೇರಿ ಮೇಲೆ ಬಂದದ್ದಾಯಿತು. ಮನೆಗೆ ಕರೆತಂದ ಅತಿಥಿಗಳಿಗೆ ಏನಾದರೂ ಮಾಡಬೇಕಲ್ಲ. ಮನೆಯಲ್ಲಿ ಇರುವ ದೊಡ್ಡ ಪಾತ್ರೆಯೊಂದರಲ್ಲಿ ನಮಗಾಗಿ ಅನ್ನ ಬೇಯಿಸಿ ನಮ್ಮಗಳ ಮುಂದೆ ತಂದಿಟ್ಟರು. ಮಠದ ಬದುಗಳಲ್ಲಿ ತಾಜಾ ಹಸಿರು ಹುಲ್ಲು ಮೇಯ್ದ ನಮಗೆ ಈ ಕುಚ್ಚಿದ ಅನ್ನ ತಿನ್ನೂದಾದ್ರೂ ಹ್ಯಾಂಗ. ಹೊಟ್ಟೆ ಚುರುಗುಡುತ್ತಿದ್ದರಿಂದ ಹೆಂಗೋ ಅನ್ನ ನಾಲಿಗೆಯಿಂದ ನೆಕ್ಕುತ್ತಾ ಮೇಯ್ದಿದ್ದಾಯಿತು.

ಕೈಯಲ್ಲಿ ಕಡ್ಡಿಪೆಟ್ಟಿಗೆಯಂಥದ್ದನ್ನು ಕಿವಿಗೆ ಆನಿಸಿಕೊಂಡಿದ್ದ ಹುಡುಗಿಯೊಬ್ಬಳು ಬಂದ್ಲು. ಅವಳು ಮನೆಯ ಮಾಲೀಕನ ಮಗಳಂತೆ. ಆದ್ರೆ ಅವಳು ನಮ್ಮಿಬ್ಬರನ್ನು ನೋಡಿದ ತಕ್ಷಣ ಮೂಗು ಮುಚ್ಚಿಕೊಂಡು 'ಥೂ ಹೊಲಸು ಇವನ್ಯಾರು ಮನೆಯೊಳಗೆ ತಂದಾರ' ಎಂದು ದೊಡ್ಡ ಗಲಾಟೆಯನ್ನೆ ಎಬ್ಬಿಸಿದಳು. ಆಕೆಗೆ ತನ್ನ ಮನೆಯಲ್ಲಿ ನಮ್ಮಂಥ ಅತಿಥಿಗಳನ್ನು ಕಂಡು ದಿಕ್ಕೆ ತೋಚದಂತಾಗಿರಬೇಕು. ಆದರೆ ಆಕೆಯ ಕಿರುಬೆರಳು ಹಿಡಿದುಕೊಂಡಿದ್ದ ಮಗು ಒಂದು ಕೌ ಕೌ, ಬುಲ್ ಬುಲ್ ಎನ್ನುತ್ತಾ ತಾನು ತಿಂದುಳಿಸಿದ್ದ ಚಾಕಲೇಟನ್ನು ನಮ್ಮಗಳ ಬಾಯಿಗೆ ತುರಕಿ ಕುಣಿದು ಕುಪ್ಪಳಿಸಿ ಖುಷಿಪಟ್ಟಿತು. ಮನುಷ್ಯರು ಸಣ್ಣವರಿದ್ದಾಗ ಚಲೋ ಇರತಾರ, ದೊಡ್ಡವರಾದಂಗೆಲ್ಲ ಸಣ್ಣವರಾಗತಾರ ಅಂತ ಮಠದ ಸ್ವಾಮೀಜಿ ಹೇಳಿದ್ದು ನನಗ ಆ ಮಗುವನ್ನು ನೋಡಿ ನೆಪ್ಪಾತು. ತನ್ನ ಚೀರಾಟಕ್ಕೆ

ಯಾರೂ ಕ್ಯಾರೆ ಅನ್ನದ್ದರಿಂದ ಮತ್ತಷ್ಟು ಸಿಟ್ಟಿಗೆದ್ದ ಆ ಹುಡುಗಿ ನಮ್ಮನ್ನು ಹೊಡೆಯಲು ಬಂದಿದ್ದರಿಂದ ನಾವು ಗಾಬರ್ಯಾಗಿ ಪಕ್ಕಕ್ಕೆ ಸರಿದೆವು. ಅಷ್ಟರೊಳಗ ನನ್ನ ಕೋಡಿಗೆ ಕಣ್ಣಿಗೆ ಕಾಣದ್ಯಾವದೋ ಒಂದು ತಾಕಿ ಫಳ್ ಅಂತ ಒಡೆದು ಮನೆ ತುಂಬ ಬಿತ್ತು. ಆ ಹುಡುಗಿಯ ಸಿಟ್ಟು ಇನ್ನಷ್ಟು ಏರುತ್ತಿರುವಾಗಲೇ ಅವರಪ್ಪ ಬಂದ. ಅವನನ್ನು ಟುಸ್ ಪಸ್ ಅಂತ ಇನ್ನಷ್ಟು ಬೈಯ್ದು ನಮಗೆ ಹೊರ ಹಾಕಲು ಹೇಳಿದಳು. ಇವತ್ತೊಂದಿನ ಅಂತ ಅವರಪ್ಪ ಗೋಗರೆದು ಸುಮ್ಮನಾಗಿಸಿದ. ಆ ಪಾಲೀಸ್ ಕಲ್ಲಿನ ಮೇಲೆ ನಿಲ್ಲಲೂ ಆಗದೆ ಮಲಗಲು ಆಗದೆ ಅವತ್ತು ನಿಂತುಕೊಂಡೆ ಕಾಲಹರಣ ಮಾಡಬೇಕಾಯಿತು. ಹೊರಗ ನಿಗಿನಿಗಿ ಉರಿಯೋ ಲೈಟು. ಅಲ್ಲೆಲ್ಲೋ ಚಂದ್ರಾಮ ಲೈಟಿನ ಬೆಳಕಿಗೆ ಹೆದರಿ ಪಲಾಯನಗೈದಿದ್ದ. ಲೈಟುಗಳ ತಾಪ ತಾಳಲಾರದ ಕಣ್ಣು ಮುಚ್ಚಿದೆ. ಹಾಳು ನೆನಪುಗಳು ಮತ್ತೆ ಮುಕುರಿಬಿದ್ದವು.

ಖರೆವಂದ್ರ ಎಷ್ಟು ಚಂದ ಇತ್ತು ಹಳ್ಳಿ ಬದುಕು. ಚಂದ್ರಾಮನ ಬೆಳದಿಂಗಳೊಳಗ ಇಂಥ ರಾತ್ರಿಗಳನ್ನು ಊರ ಆಕಳ ಮಣಕುಗಳ ಕೆಚ್ಚಲು ಮೂಸ ನೋಡಕೋತ ಅಡ್ಡಾಡೋದು ಅಂದ್ರ ಆಗ ನನಗ ಬಾಳ ಖುಷಿಯಾಕ್ಕಿತ್ತು. ಹಿಂಗ ಅಡ್ಡಾಡುತಿರುವಾಗಲೇ ಅದ್ಯಾವದೋ ಪಶು ಸಂಗೋಪನಾ ಇಲಾಖೆಯವರು ನನ್ನನ್ನು ಹುಡುಕಿಕೊಂಡು ಬಂದ್ರು. ಅವರಿಗೆ ನನ್ನಂಥ ಹೋರಿಕರ ಬೇಕಾಗಿತ್ತಂತ. ಊರ ದೈವದವರನ್ನು ಸೇರಿಸಿ ನನ್ನ ತುಗೊಂಡು ಹೋಗ್ತಿವಿ, ರೇಟು ಎಷ್ಟು ಅಂತ ಕೇಳಿದ್ರು. ಊರವರು ಯಾದಕ್ಕ ಬೇಕು ಅಂತ ಕೇಳಿದ್ರು. ನಾವು ದೇಸಿ ಗೋತಳಿಗಳ ಸಂವರ್ಧನಾ ಮಾಡೋರು. ಈ ಹೋರಿ ಬಾಳ ಚಂದ ಐತಿ. ಇದರ ವೀರ‍್ಯ ಸಂಗ್ರಹ ಮಾಡಿ ಕೃತಕ ಗರ್ಭದಾನ ಮಾಡಾಕ ಬಳಸತಿವಿ ಅಂತ ಏನೇನೋ ಹೇಳಿದ್ರು. ಇದು ಹೇಳಿ ಕೇಳಿ ದೇವರಿಗೆ ಬಿಟ್ಟದ್ದು. ಇದನ್ನು ಇಂಥದ್ದಕ್ಕೆಲ್ಲಾ ಮಾರಾಕ ಕೊಡುದಿಲ್ಲ ಅಂತ ಊರು ಹಿರೀಕರು ಹೇಳಿ ಕಳಿಸಿದರು. ಆದ್ರ, ಪಾಪ ಅವರಿಗೆ ನನ್ನಂಥ ಹೋರಿ ಸಿಗಲಿಲ್ಲಂತ ಕಾಣತ್ತೆ. ನಾನು ಹೇಳಿ ಕೇಳಿ ಊರದನ. ನನ್ನ ತಿಂಗಳಿಗೊಮ್ಮೆ ಯಾರಿಗೂ ಗೊತ್ತ ಆಗಲಾರದಂಗ ತಮ್ಮ ಫಾರ್ಮಿಗೆ ಕರಕೊಂಡು ಹೋಗೋರು. ಅಲ್ಲಿ ಮಿಣ್ಣ, ಮಿಣ್ಣ ತರಹದ ಆಕಳು ಮಣಕುಗಳು ಇದ್ದವು. ಅದರಲ್ಲಿ ಕೆಲವು ಫಾರಿನ್ ತಳಿಯ ಆಕಳಂತೆ. ನೋಡಾಕ ಚಂದ ಇರದಿದ್ದರೂ ಅವುಗಳ ಮೈ ಆಕಾರ ಆಕರ್ಷಕವಾಗಿತ್ತು. ಅವುಗಳಲ್ಲಿ ಚಂದದ ಒಂದು ಆಕಳಮಣಕನ್ನು ಎತ್ತರದ ಕಬ್ಬಿಣದ ಕಟಂಜರದೊಳಗ ಕಟ್ಟಿ ಅದರ ಮೇಲೆ ನನ್ನನ್ನು ಹತ್ತಲು ಬಿಡುತಿದ್ದರು. ನಾನು ಉತ್ಸಾಹದಿಂದಲೇ ಹತ್ತಲು ಆರಂಭಿಸುತ್ತಿದ್ದೆ. ಆದರೆ, ಸಮಾಗಮದ ಉತ್ತುಂಗ ಸ್ಥಿತಿಯಲ್ಲಿ ನನ್ನನ್ನು ಆ ಆಕಳಿನಿಂದ ಬೇರ್ಪಡಿಸಿ ನನ್ನ ಹೊಟ್ಟೆಯ ಕೆಳಗೆ ಉದ್ದನೆಯ ಕೊಳವೆಯೊಂದನ್ನು ಹಿಡಿಯುತ್ತಿದ್ದರು.

ಈ ಮಾನವರ ಕೃತಕತೆಗೆ, ಸ್ವಾರ್ಥತನ ಕಂಡು ನನಗೆ ತಲೆ ಚಿಟ್ಟು ಹಿಡಿಯುತ್ತಿತ್ತು. ನಮಗೆ ನಮ್ಮತನವನ್ನೆ ಅನುಭವಿಸಲು ಬಿಡದ ನಮ್ಮ ಬದುಕಿನ ಎಲ್ಲ ಕ್ಷಣಗಳಲ್ಲೂ

ಮೂಗು ತೂರಿಸುವ ಈ ಜನರಿಗೆ ಯಾವಾಗ ಬುದ್ಧಿ ಬರುತ್ತೆ. ತಾವು ಮಾತ್ರ ಬದುಕು ಪೂರ್ತಿ ತಮ್ಮ ಸಂಗಾತಿಯೊಂದಿಗೆ ಮೈಥುನ ಅನುಭವಿಸುವ ಈ ಜನರು ನಮ್ಮ ಪಶುಗಳಿಗೆ ಮಾತ್ರ ಕೃತಕ ಗರ್ಭಧಾರಣೆ ಮಾಡುವ ಮೂಲಕ ಆ ಸುಖದ ಅಸ್ತಿತ್ವವನ್ನೆ ಇಲ್ಲದಂತೆ ಮಾಡುತ್ತಾರೆ. ತಾವು ಹೇಗೆ ಗಬ್ಬ ದರಿಸಿದೇವು, ನನ್ನ ಕರುವಿಗೆ ತಂದೆ ಯಾರು ಎಂಬ ಉತ್ತರ ಸಿಗಲಾರದ ಪ್ರಶ್ನೆಯೊಂದಿಗೆ ನಮ್ಮ ಹಸುಗಳು ಬದುಕು ನೂಕಬೇಕು. ಥೂ ಈ ಮನುಷ್ಯ ಜಾತಿಗೆ ಬೆಂಕಿ ಹಾಕ.

ಊರ ಅಗಸಿ ಬಾಗಿಲಿನ ಮುಂದಿನ ಹಸರಿನಲ್ಲಿ ಮೇಯುತಿದ್ದ ನನ್ನ ನೋಡಿ ಒಂದು ಕೆಂಪು ಕಾರು ನಿಂತುಕೊಂಡಿತು. ಕಾರಿನಿಂದ ಇಳಿದ ಗೊಲ್ಲಕೃಷ್ಣಾನಂದ ಸ್ವಾಮೀಜಿ ನನ್ನ ನೋಡಿ ಈ ಹೋರಿ ಯಾರದು ಎಂದು ವಿಚಾರಿಸತೊಡಗಿದರು. ನಾನು ದೇವರಿಗೆ ಬಿಟ್ಟ ಹೋರಿ ಎಂದು ಗೊತ್ತಾದ ತಕ್ಷಣ ತಾನೂ ಕೂಡ ದೇವರ ಪರಂಪರೆಗೆ ಸೇರಿದವನು. ಹಾಗಾದರೆ ಈ ಹೋರಿ ನಮ್ಮ ಮಠಕ್ಕೆ ಸಲ್ಲಬೇಕು ಎಂದು ಊರ ಹಿರಿಯರನ್ನು ಮರುಳು ಮಾಡಿ ಮಠಕ್ಕೆ ನನ್ನನ್ನು ಕೊಂಡೊಯ್ದರು.

ಹೇಳಿಕೇಳಿ ಅದು ಗೋವುಗಳ ಆರಾಧ್ಯದೈವ ಕೃಷ್ಣ ಪರಂಪರೆಗೆ ಸೇರಿದ ಮಠ. ಸ್ವಾಮೀಜಿಯೂ ಸಹ ದನಗಳೊಂದಿಗೆ ಅಷ್ಟೆ ಅಕ್ಕರೆಯಿಂದ ವರ್ತಿಸುತ್ತಿದ್ದರು. ರಾಜ್ಯದ ತುಂಬೆಲ್ಲಾ ಓಡಾಡಿ ನಿರ್ಗತಿಕ ದನಗಳನ್ನು ಒಟ್ಟೊಗೂಡಿಸಿ ಮಠಕ್ಕೆ ತರಲಾಗುತ್ತಿತ್ತು. ಗೋಜಾತಿಗೆ ಎಲ್ಲಿಯೇ ಆತಂಕ ಎದುರಾದರೂ ಅಲ್ಲಿ ಸ್ವಾಮೀಜಿ ಹಾಜರಿರುತ್ತಿದ್ದರು. ಮಠದ ತುಂಬೆಲ್ಲಾ ಚಂದದ ದಷ್ಟಪುಷ್ಟವಾದ ಗೋವುಗಳ ಫೋಟೋಗಳು, ನೀಲಿಕಾಯದ ಗೋಪಾಲನ ಮೂರ್ತಿಗಳೇ ತುಂಬಿದ್ದವು. ಮಠದ ಹಿಂದೆ ವಿವಿಧ ತಳಿಗಳ ಗೋವುಗಳಿಗಾಗಿ ಕಟ್ಟಿಸಿದ ವಿಶಾಲ ದೊಡ್ಡಿಗಳು. ದೊಡ್ಡಿಗಳ ತುಂಬ ಇರುವ ಆಕಳುಗಳಿಗೆ ಸಂತಾನಪ್ರಾಪ್ತಿ ಮಾಡುವುದೆ ನನ್ನ ಕಾಯಕ. ಮಠದ ಜಮೀನು ಉಳುಮೆಗಾಗಿ ಹತ್ತಾರು ಎತ್ತುಗಳು ಅಲ್ಲಿದ್ದವು. ನಾನು ಆಕಳುಗಳೊಂದಿಗೆ ಸರಸ ಸಲ್ಲಾಪ ಮಾಡುವಾಗ ಅವು ಇರಿಯುವಂತೆ ನನ್ನತ್ತ ನೋಡುತ್ತಿದ್ದರೆ, ನಾನು ಮುಜುಗರದಿಂದ ಆಕಳೊಂದಿಗಿನ ಆಟವನ್ನು ಅರ್ಧಕ್ಕೆ ನಿಲ್ಲಿಸುತ್ತಿದ್ದೆ. ಪಾಪ ಆಕಳೊಂದಿಗಿನ ಒಡನಾಟ ಹೇಗಿರುತ್ತದೆ ಎಂಬುದು ಒಮ್ಮೆಯೂ ರುಚಿ ನೋಡದ ಮುನ್ನವೇ ಅವುಗಳ ತೊಡ್ಡು ಬಡಿಯಲಾಗಿತ್ತು. ನನಗೋ ನೀಗಲಾರದಷ್ಟು ಆಕಳುಗಳು. ನೂರಾರು ಅರಸಿಯರ ನಡುವೆ ಇದ್ದು ಸಂಭಾಳಿಸಲಾಗದ ಮುಸ್ಲಿಂ ನವಾಬನ ಸ್ಥಿತಿ ನನ್ನದು. ಅವುಗಳದೋ ಅರಸಿಯರ ಜನಾನದೊಳಗಿರುವ ಹಿಜ್ಡಾಗಳ ದುಸ್ಥಿತಿ. ಒಂದು ಕಾಲದಲ್ಲಿ ಅರಸಿಯರ ಕಾವಲುಪಡೆಯ ಗಂಡಾಳುಗಳಿಗೆ ಹೀಗೆಯೇ ಶಿಶ್ನ ಛೇದಿಸುತ್ತಿದ್ದರಲ್ಲವೇ. ಎಷ್ಟು ಯತ್ನಿಸಿದರೂ ಗಬ್ಬ ದರಿಸಲಾಗದ ಆಕಳುಗಳು ನನಗೆ ಸವಾಲಾಗುತ್ತಿದ್ದವು. ಅವುಗಳ ತಪ್ಪೋ, ನನ್ನದೋ, ಅದರೆ ಮಠದ ಆಳುಗಳ ಸಂಶಯದ ಕಣ್ಣು ಮಾತ್ರ ನನ್ನ ಮೇಲೆಯೇ.

ನಾನು ಮಠಕ್ಕೆ ಸೇರಿದ ಮೂರ್‍ನಾಲ್ಕು ತಿಂಗಳಿನಲ್ಲಿಯೆ ಮಠದಲ್ಲಿ ಬೃಹತ್ ಕಾರ್ಯಕ್ರಮವೊಂದು ಜರುಗಿತು. ರಾಜ್ಯದ ಮುಖ್ಯಮಂತ್ರಿಗಳು ಸಹ ಮಠಕ್ಕೆ ಬಂದು ಸ್ವಾಮೀಜಿ ಪಾದಧೂಳಿಯನ್ನು ಹಣೆಯ ಮೇಲೆ ಧರಿಸಿ ಪುಳಕಿತರಾದರು. ಅವರ ಮಾತುಗಳು ಇಡಿ ನಾಡಿನ ಕಿವಿಗೆ ಬೀಳಲಿ ಎಂಬ ಸದುದ್ದೇಶದಿಂದ ಆಧುನಿಕ ಮೈಕ್‌ಗಳನ್ನು ಅಳವಡಿಸಿದ್ದರಿಂದ ದೂರದ ದೊಡ್ಡಿಯಲ್ಲಿದ್ದ ನಾವುಗಳು ಕೇಳಿಸಿಕೊಳ್ಳುವಂತಾಯಿತು. ಶ್ರೀಗಳು ಗೋಮಾತೆಯ ರಕ್ಷಣೆಗೆ ಕಂಕಣ ಬದ್ಧರಾಗಿರುವುದು ನಮ್ಮ ಪುಣ್ಯ. ಶ್ರೀಗಳ ಬಹುದಿನಗಳ ಬೇಡಿಕೆಯಂತೆ ನಮ್ಮ ಸರಕಾರ ಗೋಹತ್ಯೆ ನಿಷೇಧ ಕಾನೂನು ಜಾರಿಗೆ ತಂದಿದೆ. ಸ್ವಾಮೀಜಿ ಕಟುಕರ ಕೈಯಿಂದ ಪ್ರತಿ ವರ್ಷ ನೂರಾರು ಗೋಮಾತೆಯರನ್ನು ರಕ್ಷಣೆ ಮಾಡ್ತಾರೆ. ಆದ್ದರಿಂದ ೨೫೦ ಎಕರೆ ಜಮೀನನ್ನು ಈಗಾಗಲೆ ಮಠದ ಹೆಸರಿಗೆ ಹಸ್ತಾಂತರಿಸಲಾಗಿದೆ. ಬೃಹತ್ ಗೋಶಾಲೆಗಾಗಿ ಮಠಕ್ಕೆ ೫ ಕೋಟಿ ರೂ. ಅನುದಾನ ನೀಡಲಾಗಿದೆ. ಮುಂದಿನ ದಿನಗಳಲ್ಲೂ ನಮ್ಮ ಸರಕಾರ ಗೋರಕ್ಷಣೆಗೆ ಎಲ್ಲ ರೀತಿಯ ನೆರವು ನೀಡಲು ಸಿದ್ಧವಿದೆ' ಎಂದು ಸಿಎಂ ಮಾತು ಮುಗಿಸಿದಾಗ ಸಭೆಯಲ್ಲಿ ಚಪ್ಪಾಳೆಗಳ ಕರತಾಡನ.

ನಂತರ ಮಾತನಾಡಿದ ಶ್ರೀಗಳು, ಭಾರತೀಯ ಸನಾತನ ಪರಂಪರೆಯಲ್ಲಿ ಗೋವಿಗೆ ಮಹತ್ವದ ಸ್ಥಾನವಿದೆ. ಗೋವುಗಳ ದೇಹದಲ್ಲಿ ಮುನ್ನೂರಾ ಐವತ್ತು ದೇವತೆಗಳು ನೆಲೆಸಿವೆ. ಗೋರಕ್ಷಣೆಯಿಂದ ಇಷ್ಟೊಂದು ದೇವತೆಗಳ ರಕ್ಷಣೆಯಾಗುತ್ತದೆ ಮತ್ತು ಈ ದೇವತೆಗಳು ನಮ್ಮ ಇಷ್ಟಾರ್ಥಗಳನ್ನು ಪೂರೈಸುತ್ತವೆ. ನಿಮ್ಮ ಇಷ್ಟಾರ್ಥ ಈಡೇರಬೇಕಾದರೆ, ಪ್ರತಿಯೊಬ್ಬರು ನಿಮ್ಮ ಮನೆಯಲ್ಲಿ ಕನಿಷ್ಠ ಒಂದು ಆಕಳನ್ನಾದರೂ ಪಾಲನೆ ಮಾಡಿ. ಜನಾನುರಾಗಿಯಾಗಿರುವ ಮುಖ್ಯಮಂತ್ರಿಗಳ ಪಕ್ಷ ಮತ್ತೆ ಮತ್ತೆ ಅಧಿಕಾರಕ್ಕೆ ಬರುವಂತೆ ಹಾರೈಸಿ ಎಂದು ತಮ್ಮ ಭಾಷಣಕ್ಕೆ ಮಂಗಳಗೈದರು. ಈ ಭಾಷಣಗಳಿಂದ ನನ್ನ ಜೊತೆಗಿದ್ದ ಆಕಳುಗಳ ಸಮೂಹ ಸಹ ಪುಳಕಿತಗೊಂಡು ಮುಖ್ಯಮಂತ್ರಿಗಳನ್ನು ಹಾರೈಸಿದವು.

ಆದರೆ, ಒಂದೆರಡು ಎಮ್ಮೆಗಳು ಸಹ ನಮ್ಮ ದೊಡ್ಡಿಯಲ್ಲಿದ್ದವು. ಸ್ವಾಮೀಜಿಗಳ ಊಟಕ್ಕೆ ಗಟ್ಟಿ ಬೆಣ್ಣೆ ಒದಗಿಸಲು ಈ ಎಮ್ಮೆಗಳನ್ನು ಸಾಕಲಾಗಿತ್ತು. ಮಹಿಳೆಯರ ರಕ್ಷಣೆಗೆ ಸಿಎಂ ಏನಾದರೂ ಅನುದಾನ ಕೊಟ್ಟಾರು ಎಂದು ಅವು ಆಸೆಯಿಂದ ಭಾಷಣ ಕೇಳಿಸಿಕೊಳ್ಳುತ್ತಿದ್ದವು. ಆದರೆ ಭಾಷಣದಲ್ಲಿ ಎಮ್ಮೆಗಳ ಪ್ರಸ್ತಾಪವೇ ಆಗಲಿಲ್ಲ. ಗಟ್ಟಿ ಹಾಲು ನೀಡುವ ನಮ್ಮನ್ನೇಕೆ ನಿರ್ಲಕ್ಷಿಸಲಾಗುತ್ತಿದೆ ಎಂಬುದರ ಬಗ್ಗೆ ತಳಬುಡ ಅರ್ಥವಾಗದೆ ಅವು ಕಣ್ಣು ಒದ್ದೆ ಮಾಡಿಕೊಂಡವು.

ಸ್ವಲ್ಪ ಹೊತ್ತು ಬಿಟ್ಟು ಸಭಾ ಕಾರ್ಯಕ್ರಮದಲ್ಲಿ ದೊಡ್ಡ ಗಲಾಟೆಯೇ ಶುರುವಾಯಿತು. ದಲಿತರ ಆಹಾರ ಕಸಿದುಕೊಳ್ಳುತ್ತಿರುವ ಮುಖ್ಯಮಂತ್ರಿಗೆ ಧಿಕ್ಕಾರ, ಗೋರಕ್ಷಣೆ ನೆಪದಿಂದ ಭೂಮಿ ಕಬಳಿಸುತ್ತಿರುವ ಸ್ವಾಮೀಜಿಗಳಿಗೆ ಧಿಕ್ಕಾರ ಎಂದು ಕೆಲವರು ಕೂಗುತ್ತಿದ್ದರು. ಆ ಕಡೆ ಧಾವಿಸಿದ ಖಾಕಿ ಪಡೆ ಕೂಗುತ್ತಿದ್ದವರ ಹೆಡಮುರಿಗೆ ಕಟ್ಟಿ ಜೀಪಿನಲ್ಲಿ ತುಂಬಿದರು.

ಆ ಗುಂಪಿನಲ್ಲಿ ಕೆಲವು ಹೋತದ ಗಡ್ಡದವರು ಸಹ ಗಡ್ಡ ಬೋಳಿಸಿಕೊಂಡು ಧಿಕ್ಕಾರ ಕೂಗುವ ಗುಂಪಿನಲ್ಲಿ ಸೇರಿಕೊಂಡಿದ್ದರಂತೆ. ಅಂದು ರಾತ್ರಿ ದೊಡ್ಡಿಗೆ ಬಂದಿದ್ದ ಕೆಲವು ಶಿಷ್ಯರು ಸ್ವಾಮೀಜಿಗಳ ಕಿವಿಯೂದಿದರು. ಇದು ಆ ಮುಸಲರದೆ ಮಸಲತ್ತು ಎಂದು ಸ್ವಾಮೀಜಿಗಳು ಸಹ ಕೆಲಕಾಲ ವ್ಯಗ್ರರಾದರು.

ಸ್ವಾಮೀಜಿಯೆಂದರೆ ಬ್ರಹ್ಮಚರ್ಯ ಪಾಲಿಸುವುದು ನಿಯಮ. ಪಾಪ, ಅವರಿಗೂ ಮತ್ತು ಮಠದಲ್ಲಿದ್ದ ತೊಡ್ಡು ಬಡಿಸಿಕೊಂಡಿರುವ ಎತ್ತುಗಳಿಗು ಅಷ್ಟೊಂದು ವ್ಯತ್ಯಾಸವಿರಲಿಲ್ಲ. ಹಂಗ ನೋಡಿದರ ಎತ್ತುಗಳಿಗಿಂತಲೂ ಸ್ವಾಮೀಜಿ ಪರಿಸ್ಥಿತಿ ಬಹಳ ಕೆಟ್ಟದ್ದು. ಎತ್ತುಗಳಿಗಾದರೆ ಬೀಜವನ್ನೆ ಒಡೆದಿರುತ್ತಾರೆ. ಆದರೆ, ಎಲ್ಲವೂ ಇದ್ದು, ಏನನ್ನು ಅನುಭವಿಸಲಾರದ ಹಾಳು ಹಣೆಬರಹ ಸ್ವಾಮೀಜಿಗಳದ್ದು. ಅವರೇನೂ ಇಷ್ಟಪಟ್ಟು ಸ್ವಾಮೀಜಿಗಳಾದವರಲ್ಲ. ಅವರ ಪಾಲಕರು ಅವರನ್ನು ಮಠದ ಮರಿಯಾಗಿ ಬಿಟ್ಟಿದ್ದರಿಂದ ಇಂದು ಈ ಪರಿಸ್ಥಿತಿ. ಲೋಕದ ಕಣ್ಣಲ್ಲಿ ಮಹಾನ್ ವ್ಯಕ್ತಿಗಳಂತೆ ಕಾಣುವ ಸ್ವಾಮೀಜಿ ಒಳಗಡೆ ನಿಸರ್ಗ ಸಹಜ ವ್ಯಕ್ತಿ. ನಮ್ಮಲ್ಲಿ ಪಶು ಸಹಜ ಆಸೆಗಳಿರುವಂತೆ ಅವರಲ್ಲಿ ಮನುಷ್ಯ ಸಹಜ ಆಸೆಗಳಿವೆ. ಆದರೆ, ಈ ಮನುಷ್ಯ ಸಮಾಜ ವಿಧಿಸಿರುವ ಕಟ್ಟುಪಾಡುಗಳಿಂದಾಗಿ ಆಸೆಗಳನ್ನು ಕಷ್ಟಪಟ್ಟು ನಿಗ್ರಹಿಸಬೇಕಾದುದು ಸ್ವಾಮೀಜಿಗಳ ದುರ್ದೈವ. ಹಸಿವು-ನೀರಡಿಕೆಯಷ್ಟೆ ಮೈಥುನವು ಎಲ್ಲರಿಗೂ, ಎಲ್ಲ ಪ್ರಾಣಿಗಳಿಗೂ ಮೂಲ ಅಗತ್ಯ ಅಂತ ಈ ಮನುಷ್ಯ ಲೋಕಕ್ಕೆ ಯಾಕ ತಿಳಿಯೊಲ್ಲದು. ಪಾಪ ಸಣ್ಣ ಮಕ್ಕಳನ್ನು ಮಠದ ಪಟ್ಟಾಧಿಕಾರಿ ಅಂತ ಮಾಡಿ ಅವರಿಂದ ಬದುಕಿನ ಎಲ್ಲ ಸುಖವನ್ನು ಕಸಿದುಕೊಳ್ಳುವುದು ಎಷ್ಟು ಸರಿ. ಅದೂ ದೇವರು ಧರ್ಮದ ಹೆಸರಿನಲ್ಲಿ. ಇಂಥ ಮೌಢ್ಯ ನಮ್ಮ ಪಶು ಸಮಾಜಗಳಲ್ಲಿ ಇಲ್ಲವಲ್ಲ ಅನ್ನೋದೆ ಸಮಾಧಾನದ ಸಂಗತಿ. ಸುಮ್ಮನ ನಮ್ಮ ಪಾಡಿಗೆ ನಾವು ಹಸರು ತಿನಕೊಂಡು ಇರಾಕ ಬಿಡದೆ ನಮಗೂ ಇವರು ದೇವರ ಪಟ್ಟ ಕಟ್ಟತಾರ.

ಪಾಪ ಸ್ವಾಮಿಗೋಳ ಪರಿಸ್ಥಿತಿ ಮಠದಾಗ ಇದ್ದ ಬಂದಿರೋ ನಮ್ಮಂಥವರಿಗೆ ಮಾತ್ರ ಗೊತ್ತು. ದಿನ ರಾತ್ರಿ ಅವರು ಬಂದು ನನ್ನ ಕೊರಳ ಹಿಡಕೊಂಡು ಮೂಕ ಭಾಷೆಯೊಳಗ ತಮ್ಮ ಕಷ್ಟ ಎಲ್ಲ ಹೇಳಕೋತಿದ್ರು. ಕಟುಕರ ಬಾಯಾಗ ಹೋಗಿದ್ರೂ ಪರವಾಗಿಲ್ಲ, ನಿನ್ನಂಗ ನಾನು ಹೋರಿ ಆಗಿ ಹುಟ್ಟಬೇಕಿತ್ತು. ಈ ಕಾವಿ ಅರಬಿ ತೆಗದೊಗೆದು ಎಲ್ಲಾದ್ರೂ ದೂರ ಓಡಿ ಹೋಗಿಬಿಡಬೇಕು ಅಂತ ಒಮ್ಮೊಮ್ಮಿ ಅನಸತೈತಿ. ಆದ್ರ ಎಲ್ಲ ಕಡೆ ಭಕ್ತರಿರೋದ್ರಿಂದ ಎಲ್ಲಿ ಹೋಗಬೇಕು ಅಂತಾನೆ ತಿಳಿವೊಲ್ಲದು. ಬ್ಯಾಡ ಬ್ಯಾಡ ಅನಕೊಂಡರು ಕಾಲ ಸ್ವಾಮಾಡಾಕ ಬಂದಿರೋ ಹೆಣ್ಣುಮಕ್ಕಳ ಮ್ಯಾಲ ಕಣ್ಣ ಅಡ್ಡಾಡತವು. ಬೆನ್ನ ಮ್ಯಾಲ ಅನಾಯಾಸವಾಗಿ ಕೈ ಹೊಕ್ಕಾವು. ಮಠದ ಅಂಗಳದೊಳಗ ಮಹಿಳಾ ಭಕ್ತರು ಮಲಕ್ಕೊಂಡಿದ್ದ ನೋಡಿದರಂತೂ ತಲಿ ಚಿಟ್ಟ ಹಿಡಿತೈತಿ. ಬೇಗ ಮುಪ್ಪು ಯಾಕ ಬರೊಲ್ಲದು, ಇಲ್ಲಂದ್ರ ಬೇಗ ದೇವರ ಪಾದ ಸೇರಬೇಕು ಅಂತ ಅನಸತೈತಿ. ಏನ್ ಬೇಕಾದರೂ ಸಹಿಸಿಕೊಳ್ಳಬಹುದು. ಆದರ ನಮ್ಮ ಎದಿಯೊಳಗ ಒಮ್ಮಿ ಆಸೆ ಹುಟ್ಟಿಕೊಂಡ

ಬಿಟ್ರ ಅದರ ದಾಹ ಸಹಿಸಿಕೊಳ್ಳೋದು ಭಾಳ ಕಷ್ಟ ಐತಿ. ಈಗಂತ್ರೂ ಇಂಟರ್ನೆಟ್ ಕಾಲ ಬಂದು ಅಂಥಿಂಥ ಚಿತ್ರಗಳು ಕೈ ಬೆರಳಿನೊಳಗ ಎಟುಕುವಂಗ ಆಗಿ ನಮ್ಮ ನಿಗ್ರಹಕ್ಕ ಮತ್ತಷ್ಟು ಸವಾಲು ಹಾಕಾಕ ಹತ್ಯಾವು.

ನನ್ನ ಎದೆಯ ಗಂಗೆಗೊರಳು ಹಿಡಕೊಂಡು ಆತಂಕಿತರಾಗಿ ಹಿಂಗ ಕಷ್ಟ ಎಲ್ಲ ಹೇಳಕೋತಿದ್ದರ ಅವರ ಒಳಗಿನ ಕುದಿ, ಮೂರ್ಖ ಭಕ್ತರು ಸ್ವಾಮಿಗೊಳು ಆ ದನಗೊಳ ಮ್ಯಾಲ ಎಷ್ಟು ಜೀವ ಅದಾರು ಅಂಥ ತಪ್ಪ ಅರ್ಥ ಮಾಡಕೊಂಡು ಕೊಂಡಾಡ್ತಾರ.

ನನಗೂ ಇತ್ತಿತ್ತಲಾಗಿ ಸ್ವಾಮಿಗೊಳುದು ಬಾಳ ಜೀವ ನೆನಸತಿತ್ತು. ಪ್ರತಿವರ್ಷ ಚಾತುರ್ಮಾಸ ಆಚರಿಸುವಾಗ ಮಠದಿಂದ ನಾಲ್ಕು ತಿಂಗಳು ಹೊರಗಿರೋದು ಅವರು ಪಾಲಿಸಿಕೊಂಡ ಬಂದ ನಿಯಮ. ಇನ್ನು ಒಂದೂವರೆ ತಿಂಗಳು ಮುಗಿದ ಮೇಲೆ ಅವರು ಮಠಕ್ಕೆ ಬರತಿದ್ರು. ಅಷ್ಟರೊಳಗ ಮಠದ ಮ್ಯಾನೇಜರ್ ಮುದಿ ದನಗಳಿಂದ ಏನು ಉಪಯೋಗ ಇಲ್ಲಂತ ನಮ್ಮನ್ನ ಮಾರಿಬಿಟ್ಟ. ಒಂದ ದಿನ ಮಠದಿಂದ ಹೊರಾಗ ಬಂದ್ರ ಎಷ್ಟೊಂದೆಲ್ಲ ಅನುಭವಿಸಿದೆವು. ಟ್ರಕ್ ನಿಲ್ಲಿಸಿ ಗಡ್ಡವಾಲಾನ ಬಡದರು. ನಮ್ಮನ್ನು ಪಟ್ಟಣ ತುಂಬಾ ಮೆರುಣಗಿ ಮಾಡಿ ಈಗ ಹಿಂಗ ಗಾಜಿನ ಮನಿಯಾಗ ಒಂದಿನ ಕೊಳಿಯುವಂಗ ಮಾಡ್ಯಾರ. ನಿನ್ನೆ ಕುಚ್ಚಿದ ಅನ್ನ ಬೇರೆ ತಿಂದಿದ್ದರಿಂದ ಅದು ಪಚನವಾಗದೇ ಆಕಳವ್ವಗ ನನಗ ಹೇಲಾಟ ಬೇರೆ ಶುರುವಾಗಿ ತಡೆದುಕೊಳ್ಳಾಕ ಆಗದೆ ಹೇಲು ಉಚ್ಚಿ ಅಲ್ಲೆ ಮಾಡಿದ್ದರಿಂದ ನಮ್ಮ ಹೇಸಿಗೆ ನಮಗೆ ಅಸಹ್ಯವಾಗಿತ್ತು. ಮನಿ ತುಂಬಾ ಕೆಟ್ಟ ವಾಸನಿ. ನಮ್ಮ ಸಗಣಿ ಯಾವತ್ತು ಹಿಂಗ ನಾರಿರಲಿಲ್ಲ. ಮನಿ ಮಾಲಕ ಸೈತ ಮೂಗು ಮುಚ್ಚಿಕೊಂಡೆ ಇವತ್ತು ನಮ್ಮನ್ನ ಮನಿಯಿಂದ ಹೊರಗ ತಂದಾನ. ಮುಂದ ಎಲ್ಯೋ ಏನೋ. ಖರೆವಂದ್ರ ಮಠ ಬಿಟ್ಟು ೨೪ ತಾಸು ಆತು. ಇನ್ನು ಸರಿಯಾಗಿ ಹೊಟ್ಟಿಗೆ ಕೂಳ ಬಿದ್ದಿಲ್ಲ.

ಪಟ್ಟಣದ ಒಂದು ಮೂಲೆಯಲ್ಲಿದ್ದ ಗೋಶಾಲೆಗೆ ನಮ್ಮನ್ನು ಕರಕೊಂಡು ಬಂದರು. ಅದು ಮಠದ ಆವರಣಕ್ಕಿಂತಲೂ ದೊಡ್ಡದು. ಅದನ್ನು ಮಾರವಾಡಿಗಳೊಬ್ಬರು ನಡೆಸುತ್ತಿದ್ದರಂತ. ಅಲ್ಲಿ ನಮ್ಮಂಥ ಸಾವಿರಾರು ದನಗಳಿದ್ವು. ಕುಂಟ, ಕೋಡಮುರಕ, ಕುರುಡ, ಬಚ್ಚಬಾಯಿಯ, ಡೂಗು ಬೆನ್ನಿನ, ಎಲುಬುಗೂಡಿನ ತರಾವರಿ ದನಗಳಿಗೆ ಆಶ್ರಯವಾಗಿದ್ದ ಅದು ದನಗಳ ವೃದ್ಧಾಶ್ರಮದಂತಿತ್ತು. ಆ ಎಲ್ಲ ದನಗಳ ದೊಡ್ಡಿ ದಾಟಿಕೊಂಡು ಅಲ್ಪ ಸ್ವಲ್ಪ ಚನ್ನಾಗಿರುವ ದನಗಳ ಹಿಂಡಿನ ಕಡೆ ಆಕಳವ್ವ ಮತ್ತು ನನ್ನನ್ನು ಎಳೆದೊಯ್ಯಲಾಯಿತು. ಅಲ್ಲಿ ಹಾಲು ಹಿಂಡುವ, ಕಾಲಲ್ಲಿ ಕರು ಇರುವ ದನಗಳು ಸಾಕಷ್ಟಿದ್ದವು. ಯಾವ್ಯಾವ ದನಗಳು ಹೆಚ್ಚೆಚ್ಚು ಹಾಲು ಕೊಡುತ್ತಿದ್ದವೋ ಅವುಕ್ಕಷ್ಟ ಚಲೋ ಮೇವು ಹಾಕತಿದ್ರು. ಆದರೆ, ಆ ದೊಡ್ಡಿಯಲ್ಲಿ ನೂರಾರು ಸಂಖ್ಯೆಯಲ್ಲಿ ಆಕಳುಗಳಿದ್ದರೆ, ಎತ್ತುಗಳ ಸಂಖ್ಯೆ ಮಾತ್ರ ಬೆರಳೆಣಿಕೆಯಷ್ಟು. ಹೀಗಾಗಿ ಬೆದೆಗೆ ಬಂದ

ದನಗಳ ಮೇಲೆ ಹತ್ತಿಸುವುದಕ್ಕಾಗಿ ವಿಶೇಷ ರೀತಿಯಲ್ಲಿ ನನ್ನನ್ನು ಮೇಯಿಸತೊಡಗಿದರು. ಆದರೆ, ಮಠದಲ್ಲಿ ಇದ್ದು ಬಂದಿದ್ದಕ್ಕೋ, ವಯಸ್ಸಾದುದರಿಂದ ದೇಹ ಸಹಕರಿಸುತ್ತಿರಲಿಲ್ಲವೋ ಏನೋ, ಇಲ್ಲಿಗೆ ಬಂದ ಮೇಲೆ ಒಂದು ಆಕಳ ಮೇಲೂ ಹತ್ತಲಿಕ್ಕೆ ನನ್ನ ಕೈಲಿ ಆಗಲೊಲ್ಲದು. ನನ್ನನ್ನು ಓಡಾಡಿಸಿ, ಆಕಳ ಕೆಚ್ಚಲನ್ನು ಮೂಸಿ ನೋಡಿಸಿ ಹತ್ತಿಸಲು ಎಷ್ಟೆ ಪ್ರಯತ್ನಿಸಿದರೂ ಕೋಣದ ಮುಂದೆ ಕಿನ್ನುರಿ ಬಾರಿಸಿದಂತಾಗುತ್ತಿತ್ತು. ಕೊನೆಗೆ ನನ್ನೊಂದಿಗೆ ಮಠದಿಂದ ತರಲಾಗಿದ್ದ ಎಲುಬುಗೂಡಿನಂತಿದ್ದ ಆ ಮುದಿ ಆಕಳವ್ವನ ಮೇಲೆ ಹತ್ತಿಸಲು ಪ್ರಯತ್ನಿಸಿದರು. ನನ್ನ ಕೈಯಿಂದ ಸಾಧ್ಯವಾಗಲೇ ಇಲ್ಲ. ಕೆಲವು ದನಗಳಂತೂ ಮೂರ್ಛೆ ಹೋದಂತೆ ಬಿದ್ದುಕೊಂಡಿದ್ದವು. ಬಿದ್ದುಕೊಂಡಿದ್ದ ಕೆಲವಕ್ಕೆ ಜೀವವಿತ್ತೋ ಇಲ್ಲವೋ. ಅಲ್ಲಿಂದ ಹೆಣದ ವಾಸನೆಯಂತೂ ಬರುತ್ತಿತ್ತು. ಜೀವವಿದ್ದಂತಿದ್ದ ಕೆಲವು ದನಗಳಿಗೆ ಯಾವದೋ ಚುಚ್ಚುಮದ್ದನ್ನು ಕೆಲವರು ನೀಡುತ್ತಿದ್ದರು. ಚುಚ್ಚಿಸಿಕೊಂಡ ದನಗಳು ಕೆಲ ಹೊತ್ತಿನಲ್ಲೆ ಸಮಾಧಿ ಸ್ಥಿತಿ ತಲುಪಿದಂತೆ ನಿರಾಳವಾಗಿ ಬಿದ್ದುಕೊಳ್ಳುತ್ತಿದ್ದವು. ನಮ್ಮನ್ನು ಸಹ ಅಲ್ಲಿ ಎರಡು ಮೂರು ದಿನ ಕೂಳು ನೀರಿಲ್ಲದಂತೆ ಕೆಡುವಲಾಯಿತು. ನನಗೆ ಚುಚ್ಚುಮದ್ದು ನೀಡಿ ನನ್ನನ್ನು ಯಾವಾಗ ಸಮಾಧಿ ಸ್ಥಿತಿಗೆ ಏರಿಸುತ್ತಾರೆ ಎಂದು ಕಾಯುವುದಷ್ಟೆ ನನಗೆ ಬಾಕಿ ಇದ್ದ ಕೆಲಸ. ಕೊನೆಗೊಂದು ದಿನ ಮುಂಜಾನೆ ಒಂದಿಬ್ಬರು ಬಂದು ನನ್ನ ಚಪ್ಪೆಯಲ್ಲಿ ಚುಚ್ಚಿ ಉದ್ದವಾದ ಕೊಳವೆಯೊಂದರಲ್ಲಿದ್ದ ರಸವನ್ನು ನನ್ನ ದೇಹಕ್ಕೆ ಹರಿಸಿದರು.

ನಿಧಾನಕ್ಕೆ ಸ್ವಲ್ಪ ಸ್ವಲ್ಪ ಸಂಕಟ. ಎಲ್ಲವೂ ಅಸ್ಪಷ್ಟ, ಅವ್ವನ ಲಾಲಿ. ಅಕ್ಕಳ ಸಂಸಾರ, ಅಪ್ಪನ ಗಾಂಭೀರ್ಯ, ಅಣ್ಣನ ಉಳುಮೆ, ಆಕಳ ಮಣಕುಗಳ ನಾಲಿಗೆಯ ಎಂಜಲು ಪ್ರೀತಿ, ಮಠದ ಶ್ರೀಗಳ ಸಂಕಟದ ಮುಖ, ಎಲ್ಲವೂ ಅಸ್ಪಷ್ಟ. ತಿರುವುಮುರುವು. ಅಶಾಂತತೆಯಲ್ಲಿ ಶಾಂತತೆ.

❖

(ಕರಾವಳಿ ಮುಂಜಾವು – ದೀಪಾವಳಿ ವಿಶೇಷಾಂಕ, 2013)

ಪ್ರೀತಿಯ ಮಡಿಲಲ್ಲಿ ಕುಳಿತ ಪಾತಾರಗಿತ್ತಿ

ಶ್ರೀನಿವಾಸ ಜೋಕಟ್ಟೆ

ಸೂಫಿ ಸಂತರು ಖುದಾನನ್ನು ಪ್ರೀತಿಸಿದರು. ಇನ್ನು ಕೆಲವರು ಪ್ರೀತಿಯೇ ಖುದಾ ಎಂದರು. ಪ್ರೇಮವೇ ಜೀವನ ಎಂದಿದ್ದ ಬುದ್ಧ..

ಪ್ರವಚನ ಕೇಳುತ್ತಿದ್ದ ಶಿವಾನಂದನ ಮೊಬೈಲ್‌ಗೆ ಮೆಸೇಜ್ ಬಂದ ಸದ್ದಾಯಿತು. ನೋಡಿದ. ಆಫೀಸ್‌ನಿಂದ ಬಂದಿತ್ತು. ಈಗ ಓದುವುದು ಬೇಡವೆಂದು ಕಿಸೆಯೊಳಗಿಟ್ಟ. ಆಫೀಸ್‌ನಲ್ಲಿ ಏನೋ ಪ್ರಾಬ್ಲೆಮ್ ಕಾಣಿಸಿದ್ದರ ಪರಿಣಾಮ ರಜೆ ಹಾಕಿದರೂ ಆಫೀಸ್‌ನ ಕಿರಿಕಿರಿ ಇದ್ದದ್ದೇ. ಅಲ್ಲಿ ಪ್ರವಚನ ಮುಂದುವರಿಯುತ್ತಿತ್ತು.

"ಪ್ರೇಮದ ತುಲನೆಯನ್ನು ಒಂದೊಮ್ಮೆ ಪೂಜೆಯ ಜೊತೆಗೆ ಮಾಡುತ್ತಿದ್ದರು. ಪರಮಾತ್ಮನಿಗೆ ಪ್ರೀತಿಯ ಅರ್ಚನೆ ಮಾಡುತ್ತಾ ಮಾಡುತ್ತಾ ಭಕ್ತನೇ ಸ್ವಯಂ ಪರಮಾತ್ಮನಾಗುವ ಸ್ಥಿತಿ ಅಂಥ ಪ್ರೇಮದಲ್ಲಿದೆ. ರಾಧೆ ಯಾವಾಗ ಕೃಷ್ಣ ಆಗ್ತಾಳೆ, ಕೃಷ್ಣ ಯಾವಾಗ ರಾಧೆ ಆಗ್ತಾನೆ.. ಯಾರಿಗೂ ಹೇಳುವುದಕ್ಕೆ ಆಗ್ತಿರಲಿಲ್ಲ."

ಮತ್ತೆ ಮೊಬೈಲ್‌ಗೆ ಮೆಸೇಜ್ ಬಂತು. ಮೊಬೈಲ್ ಕಿಸೆಯಿಂದ ತೆಗೆದು ನೋಡಿದ. ಈಗ ಬಂದದ್ದು ಅಂಕಿತಾಳದ್ದು, ಓದಿದ. "ಸಂಜೆ ಅಂಧೇರಿ ಸ್ಟೇಷನ್‌ಗೆ ಬನ್ನಿ. ಮಾತನಾಡುವುದಿದೆ." ಮೆಸೇಜ್ ಕಳುಹಿಸಿದ್ದಳು. ತುಂಬಾ ದಿನಗಳ ಅನಂತರ ಬಂದಿತ್ತು!

ಶಿವಾನಂದ ಪ್ರವಚನದ ಹಾಲ್‌ನಿಂದ ಹೊರಬಂದ. ಊಟದ ಹೊತ್ತಾಗುತ್ತಾ ಬಂದಿತ್ತು. ನೇರವಾಗಿ ರಸ್ತೆಗೆ ಬಂದ. ಆ ಸಾರ್ವಜನಿಕ ಅನ್ನ ಸಂತರ್ಪಣೆಯಲ್ಲಿ ಕ್ಯೂ ನಿಲ್ಲುವುದು ಬೇಡವೆಂದು ಹೋಟೇಲ್ ಹುಡುಕುತ್ತಾ ನಡೆದ. ಊಟದ ಅನಂತರ ರೂಮಿಗೆ ಹೋಗಿ ಬಟ್ಟೆ ಬದಲಾಯಿಸಬೇಕು. ಸಂಜೆ ಅಂಕಿತಾಳನ್ನು ಭೇಟಿಯಾಗುವುದಿದೆ. ಇವತ್ತು ಏನಾದರೂ ಫಲಿತಾಂಶ ಸಿಗುವುದೋ ನೋಡಬೇಕು. ಬೇಗ ಊಟದ ಶಾಸ್ತ್ರ ಮುಗಿಸಿ ರೂಮಿಗೆ ಹೋಗಿ ಸ್ವಲ್ಪ ನಿದ್ದೆ ಮಾಡಬೇಕು. ಸಂಜೆ ಅಂಕಿತಾಳನ್ನು ಭೇಟಿಯಾದಾಗ ಫ್ರೆಶ್ ಆಗಿರಬೇಕು. ಅವಳಂತೂ ಚೂಡಿ. ಪ್ರತೀ ಸಲವೂ ಹೊಸ ಹೊಸ ಕಲರ್, ಗಮನ ಸೆಳೆಯುತ್ತಾಳೆ. ಅವಳೆದುರು ತಾನೂ ಇಸ್ತ್ರಿ ಹಾಕಿಲ್ಲದ ಬಟ್ಟೆ ಧರಿಸಿದರೆ ಅವಮಾನ. ಟಿ ಶರ್ಟ್ ಹಾಕಿಕೊಳ್ಳಬೇಕು. ಅವಳೇ ಒಮ್ಮೆ ಹೇಳಿದ್ದಿದೆ, "ಯಾಕೆ ಫುಲ್ ಕೈ ಹಾಕ್ಕೊಳ್ತೀರಿ? ಟಿ ಶರ್ಟ್–ಜೀನ್ಸ್ ಒಂದು ದಿನ ಹಾಕಿಕೊಳ್ಳಿ, ನೋಡಬೇಕು ಹೇಗೆ ಕಾಣ್ತೀರಿ.." ಇವತ್ತಾದರೂ ಹಾಗೇ ಅವಳೆದುರು ನಿಂತುಕೊಳ್ಳಬೇಕು.. ಇತ್ಯಾದಿ ಯೋಚಿಸುತ್ತಿದ್ದಂತೆ ಒಂದು ಹೋಟೇಲ್

ಎದುರಿಗೆ ಬಂದು ನಿಂತ. 'ವೆಜ್' ಬೋರ್ಡ್ ಕಾಣಿಸಿತು. ಒಳ ಹೋದ–ಹಸಿವೆ ಜೋರಾಗಿತ್ತು.

❖

'ಪ್ರೇಮ' ಎನ್ನುವ ಶಬ್ದವನ್ನು ಪರಿಚಯಿಸಿದವಳೇ ಅಂಕಿತಾ. ಪ್ರಥಮ ಭೇಟಿ ಅದೇ ಅಂಧೇರಿ ರೇಲ್ವೇ ಸ್ಟೇಷನ್‌ನ ಬ್ರಿಜ್‌ನಲ್ಲಿ ಹದಿನೈದು ನಿಮಿಷ ಪಟ್ಟಾಂಗ ಹೊಡೆದಿದ್ದರು. ಇಂದು ಮತ್ತೆ ಅಲ್ಲೇ ಭೇಟಿ ಆಗಬೇಕಾಗಿತ್ತು.

ಎಷ್ಟು ಬೇಗ ಮೂರು ವರ್ಷ ಕಳೆದುಹೋಯಿತು. ಈ ಮೂರು ವರ್ಷದಲ್ಲಿ ಎಷ್ಟು ಸಲ ಮುನಿಸಿಕೊಂಡಿಲ್ಲ..! ಎಷ್ಟು ಸಲ ಮೆಸೇಜ್ ಕಳುಹಿಸುವುದು ನಿಲ್ಲಿಸಿದ್ದರು! ಅಂಕಿತಾ ಮೂಗಿನ ನೇರಕ್ಕೆ ಕೋಪ ಮಾಡಿಕೊಳ್ಳುವವಳು. ಆದರೆ ಕೆಲವೇ ಕ್ಷಣಗಳಲ್ಲಿ ಶಾಂತವಾಗ್ತಾಳೆ. ಒಂದು ಸಲ ಗುಡ್‌ನೈಟ್ ಹೇಳಿಲ್ಲ ಎಂದು ರಂಪಾಟ ಮಾಡಿದ್ದ ಶಿವಾನಂದ. ಅಂಕಿತಾಳದ್ದು ಹೊಸ ಮೊಬೈಲ್. ಮಾಡಿದ್ದು ಬಂದಿರಲಿಲ್ಲ. ಶಿವಾನಂದನ ಸಿಟ್ಟಿಗೆ ಅಂಕಿತಾ ಸೌಮ್ಯವಾಗಿಯೇ ಹೇಳಿದ್ದಳು– "ವಿಶ್ವಾಸ ಮುಖ್ಯ. ನಿಮಗೆ ಗುಡ್‌ನೈಟ್ ಹೇಳಿದ್ದೆ. ಮೆಸೇಜ್ ಬಂದಿರದಿದ್ದರೆ ನನ್ನದೇನು ತಪ್ಪು? ನಿಮಗೆ ವಿಶ್ವಾಸವಿಲ್ಲದ ಮೇಲೆ ಇನ್ನು ಮೆಸೇಜ್ ಮಾಡುವುದಕ್ಕೆ ಅರ್ಥವಿಲ್ಲ.."

ಹೌದು, ಹೇಳಿದಂತೆ ಒಂದು ವಾರ ಮೆಸೇಜ್ ನಿಂತುಹೋಗಿತ್ತು. ಮತ್ತೆ ರಾಜಿ ಆದ ಅನಂತರ ಶಿವಾನಂದ ಬಹಳ ಎಚ್ಚರವಾಗಿದ್ದ. ಮೆಸೇಜ್‌ನಲ್ಲೇ ಅಂಕಿತಾಳ ನೆನಪು–ಪ್ರೀತಿಯನ್ನು ತುಲನೆ ಮಾಡಲು ಹೋದದ್ದು ತನ್ನ ತಪ್ಪು ಎಂದು ಪಶ್ಚಾತ್ತಾಪ ಪಟ್ಟುಕೊಂಡಿದ್ದ. ಮೆಸೇಜ್‌ನ ಹುಚ್ಚು ಹಿಡಿಸಿದ್ದೇ ಅಂಕಿತಾ.

ಶಿವಾನಂದನಿಗೆ ಪ್ರಥಮ ಭೇಟಿಯ ನೆನಪು ಬಂತು.. ಅವಳು ಧರಿಸಿದ್ದ ಸೀರೆಯ ಚೆಂದ..!

❖

ಅದೊಂದು ದಿನ ಆಫೀಸ್‌ನಲ್ಲಿ ಎಂದಿನಂತೆ ಡ್ಯೂಟಿಯಲ್ಲಿದ್ದಾಗ ಮೆಸೇಜ್ ಬಂದಿತ್ತು. "ಈ ವಾರದ ಸಾಪ್ತಾಹಿಕದಲ್ಲಿ ನೀವು ಮಹಿಳೆಯರ ಕುರಿತಾಗಿ ಬರೆದ ಲೇಖನ ತುಂಬಾ ಹಿಡಿಸಿತು. ಒಬ್ಬ ಪುರುಷನಾಗಿ ನೀವು ಮಹಿಳೆಯ ಅಂತರಂಗಕ್ಕೆ ಇಳಿದು ಬರೆದಿದ್ದೀರಿ.." ಮೆಚ್ಚುಗೆಯನ್ನು ಅಂಕಿತಾ ವ್ಯಕ್ತಪಡಿಸಿದ್ದಳು.

ಶಿವಾನಂದನಿಗೆ ಖುಶಿ, ನಗು ಒಟ್ಟಿಗೆ ಬಂತು. ತಾನೇನು ಬರಹಗಾರನಲ್ಲ, ಅಪರೂಪಕ್ಕೆ ಒಂದೊಂದು ಲೇಖನವಷ್ಟೆ. ಅದು ತನ್ನದೇ ಆಫೀಸ್‌ನ ಮಹಿಳಾ ಉದ್ಯೋಗಿಗಳ ದಿನಚರಿಯನ್ನು ಗಮನದಲ್ಲಿಟ್ಟು ಬರೆದದ್ದು. ತಾನೆಲ್ಲಿ ಮಹಿಳೆಯರ ಅಂತರಂಗಕ್ಕೆ ಇಳಿದಿದ್ದೆ? ಅದು ಸಾಧ್ಯವೇ? ಆಫೀಸ್‌ನ ಎಲ್ಲಾ ಮಹಿಳೆಯರೂ ವಿವಾಹಿತರೇ. ವಿವಾಹಿತರ

ಅಂತರಂಗಕ್ಕೆ ಇಳಿದು ಮಾಡುವುದೇನು? ಇರಲಿ. ಪುಕ್ಕಟೆ ಬಂದ ಪ್ರಶಂಸೆಗೆ "ಥ್ಯಾಂಕ್ಸ್ ಅಂಕಿತಾ" ಎಂದು ರಿಪ್ಲೈ ಕಳುಹಿಸಿದ್ದ.

ಅಲ್ಲಿಂದ ಮೆಸೇಜ್ ರವಾನೆಯಾಗಲು ಆರಂಭವಾಯಿತು. 'ಗುಡ್ ಮಾರ್ನಿಂಗ್'ನಿಂದ ಶುರುವಾಗಿ 'ಗುಡ್‌ನೈಟ್'ಗೆ ಮುಗಿಯುತ್ತಿತ್ತು ದಿನದ ಕತೆಗಳು.

ಹಾಗೇ, ಅಂದಿನ ಮೆಸೇಜ್ ಒಂದು ಬಹಳ ಬಹಳ ಕಾಡಿಸಿತು ಶಿವಾನಂದನಿಗೆ. "ನನಗೊಲಿಯದ ದೇವರು ನಿಮಗೊಲಿಯಲಿ. ನೀವು ಕಂಡ ಕನಸು ನನಸಾಗಲಿ. ಜಗದಲ್ಲಿನ ಸುಖವು ನಿಮ್ಮದಾಗಲಿ. ಆ ಸಂಭ್ರಮ ನೋಡುವ ಭಾಗ್ಯ ನನ್ನದಾಗಲಿ."

ಅಂಕಿತಾಳ ಈ ಮೆಸೇಜ್ ತುಂಬಾ ಖುಷಿ ನೀಡಿತ್ತು. "ಯಾರದ್ದಿದು?" ಕೇಳಿದ್ದ. "ಗೊತ್ತಿಲ್ಲ, ನನಗೆ ಬಂದಿದ್ದ ಮೆಸೇಜ್ ನಿಮಗೆ ಫಾರ್‌ವರ್ಡ್ ಮಾಡಿದ್ದೆ" ಅಂದಳು.

ಶಿವಾನಂದನಿಗೆ ಸ್ವಲ್ಪ ನಿರಾಶೆಯೇ ಆಯಿತು. ತನಗಾಗಿ ಯಾರೋ ಗಣ್ಯರ ಮಾತು ಕಳುಹಿಸಿದ್ದಳೋ. ಅಂದರೆ ಇದು ಅವಳಿಗೆ ಮೊದಲೇ ಬಂದಿದ್ದ ಮೆಸೇಜ್ ಆಗಿತ್ತು. ಅದನ್ನು ತನಗೂ ರವಾನಿಸಿದ್ದಳು. ತಾನು ಸಂಭ್ರಮಪಡುವ ಮೊದಲು ಅಂಕಿತಾ ಕೂಡ ಅವಳಿಗೆ ಕಳುಹಿಸಿದವನನ್ನು ನೆನದು ಸಂಭ್ರಮಪಟ್ಟಿರಬಹುದಲ್ಲವೇ? ಒಂದು ರೀತಿಯಲ್ಲಿ ತನಗೆ ಅದು ಹಳಸಿದ ಮೆಸೇಜ್. ಪುಳಕವಾಗಲಿಲ್ಲ ಅದನ್ನು ಓದಿ.

ಆಗಾಗ ಇಂಥ ಮೆಸೇಜ್‌ಗಳು ಆದಾನ–ಪ್ರದಾನ ಆಗುತ್ತಲೇ ಇದ್ದವು.

ಒಂದು ದಿನ ಮುಖತಃ ಭೇಟಿ ಆಗಲು ನಿಶ್ಚಯಿಸಿದರು. ಬಹಳ ದಿನಗಳಿಂದ ಮೆಸೇಜ್ ಮಾಡುತ್ತಿದ್ದರೇ ಹೊರತು ಭೇಟಿ ಆಗಿದ್ದಿರಲಿಲ್ಲ. ಕೊನೆಗೆ ಅಂಧೇರಿ ರೈಲ್ವೇ ಸ್ಟೇಷನ್‌ನ ಬ್ರಿಜ್‌ನಲ್ಲಿ ಸಿಗೋಣ ಎಂದು ನಿರ್ಧರಿಸಿದರು. "ಬರುವಾಗ ನೀವೇನಾದರೂ ಬೇರೆ ಲೇಖನಗಳನ್ನು ಪ್ರಕಟಿಸಿದ್ದರೆ ತಂದುಬಿಡಿ. ನನಗೆ ಓದಬೇಕು. ಜೆರಾಕ್ಸ್ ತನ್ನಿ.." ಅಂಕಿತಾ ಮೆಸೇಜ್ ಮಾಡಿದ್ದಳು.

ಶಿವಾನಂದ ಅಪರೂಪಕ್ಕೆ ಬರೆದಿದ್ದ ಕೆಲವು ಲೇಖನಗಳ ಜೆರಾಕ್ಸ್ ಮಾಡಿ, ಅವಳಿಗೆಂದೇ ನೀಡಲು ಹೊಸ ಕಾದಂಬರಿಯೊಂದನ್ನು ಖರೀದಿಸಿ ಅದರೊಳಗೆ ತನ್ನ ಲೇಖನಗಳ ಜೆರಾಕ್ಸ್ ಇಟ್ಟು ಪ್ಯಾಕ್ ಮಾಡಿದ್ದ.

ಹೇಳಿದ ಸಮಯಕ್ಕೆ ಇಬ್ಬರೂ ರೇಲ್ವೇ ಬ್ರಿಜ್‌ನಲ್ಲಿ ಭೇಟಿಯಾದರು. ಎಲ್ಲರಂತೆ ಮೊದಲ ಭೇಟಿಯಲ್ಲಿ ಬಹಳಷ್ಟು ನಿರೀಕ್ಷೆಗಳನ್ನು ಇರಿಸಿದ್ದರು. ಕುತೂಹಲವೂ ಇತ್ತು. ಅಂಕಿತಾ ಎಷ್ಟು ಸುಂದರಿ ಇರಬಹುದು? ಇತ್ಯಾದಿ. ಶಿವಾನಂದ ಬೆಳಗ್ಗೆಯಿಂದಲೇ ಭೇಟಿಯ ಕ್ಷಣಕ್ಕಾಗಿ ಹಾತೊರೆಯುತ್ತಿದ್ದ. ಸಮಯ ಕೊನೆಗೂ ಬಂದಿತ್ತು.

"ಸ್ವೀಟ್ ತೆಕ್ಕೊಳ್ಳಿ. ನಾನೇ ಮನೆಯಲ್ಲಿ ಮಾಡಿದ್ದು. ಮೊದಲ ಭೇಟಿಯ ನೆನಪಿಗಾಗಿ" ಅಂಕಿತಾ ಸ್ವೀಟ್ ಪ್ಯಾಕೆಟ್ ನೀಡಿದಳು.

"ನಾನೇನೂ ತಂದಿಲ್ಲ. ಹೊಟೇಲ್‌ಗೆ ಹೋಗೋಣ ಎಂದು ನಿರ್ಧರಿಸಿದ್ದೆ. ಕೆಲವು ಲೇಖನಗಳ ಝೆರಾಕ್ಸ್ ಇದೆ. ಬಿಡುವಿರುವಾಗ ಓದುವಿರಂತೆ.. ಅಂದಂತೆ ನಿಮಗಾಗಿ ಒಂದು ಕಾದಂಬರಿ ಇದೆ. ಯಾರದ್ದೆಂದು ಮನೆಗೆ ಹೋಗಿ ನೋಡಿ. ಒಳ್ಳೆಯ ಕಾದಂಬರಿ. ನಿಮಗಾಗಿ ಪಡೆದದ್ದು" ಎಂದು ಶಿವಾನಂದ ತನ್ನ ಪ್ಯಾಕ್ ನೀಡಿದ.

ಅವರವರ ಆಫೀಸ್–ಕೆಲಸಗಳ ಮಾಹಿತಿಯನ್ನು ವಿನಿಮಯ ಮಾಡಿಕೊಂಡರು.

"ಹೊಟೇಲ್‌ಗೆ ಹೋಗೋಣವೇ? ಒಂದು ಕಾಫಿ ಕುಡಿದು ಆಮೇಲೆ ಬಸ್ಸು ಹತ್ತಿ" ಶಿವಾನಂದ ಅಂತಿಮ ಹಂತಕ್ಕೆ ಬಂದಿದ್ದ.

"ಇವತ್ತು ಬೇಡ. ಅಲ್ಲೆಲ್ಲ ಪರಿಚಯದವರು ಸಿಗ್ತಾರೆ. ಇನ್ನೊಮ್ಮೆ ನೋಡೋಣ. ಮನೆಗೆ ಒಮ್ಮೆ ಬನ್ನಿ. ಇಲ್ಲೇ ಅಂಧೇರಿ ಪೂರ್ವದಲ್ಲಿದೆ.." ಅಂಕಿತಾ ಹೇಳಿದಳು.

"ನಿಮ್ಮಿಷ್ಟ." ಎಂದ ಶಿವಾನಂದ ಬಸ್‌ಸ್ಟಾಪ್‌ವರೆಗೆ ಬಂದು ಅಂಕಿತಾಳನ್ನು ಬೀಳ್ಕೊಟ್ಟ.

ರೂಮಿಗೆ ಬಂದ ಶಿವಾನಂದ ಅವಳು ಕೊಟ್ಟ ಸ್ವೀಟ್ ಪ್ಯಾಕೆಟ್ ಬಿಚ್ಚಿದ. ಸಿಹಿಸಿಹಿ ನೆನಪುಗಳಿಗೆ ರೋಮಾಂಚನಗೊಂಡ. ಚಿಕ್ಕ ಉಡುಗೊರೆ ಬೇರೆ ಇತ್ತು.

'ಪ್ರೇಮ'ವನ್ನು ಪರಿಚಯಿಸಿಕೊಟ್ಟ ಅಂಕಿತಾ ಪ್ರೇಮದ ಬಾಯಾರಿಕೆ ಹೆಚ್ಚಿಸಿದಳು. ಜೊತೆಯಲ್ಲೇ ಪ್ರೇಮದ ದಾರಿಯಲ್ಲಿ ಮುಳ್ಳಿದೆ ಎಂದಳು. ಶಿವಾನಂದ ಮುಂದೆ ಹೋಗುತ್ತಿದ್ದ. ತನ್ನೆದುರಿಗೆ ಅಂಕಿತಾ ಪ್ರೇಮದ ಗಂಗೋತ್ರಿಯಾಗಿ ಹರಿಯುತ್ತಿದ್ದಾಳೆ ಅನಿಸಿತು. ಒಂದಿಷ್ಟು ಭ್ರಮೆಗೆ ಶರಣಾಗುತ್ತಿದ್ದ.

ಆ ರಾತ್ರಿಗೆ ಗುಡ್‌ನೈಟ್ ಮೆಸೇಜ್ ಬಂದಾಗ ಅಂಕಿತಾ ಹೇಳಿದ್ದಳು, "ಸತ್ಯ ಹೇಳಬೇಕೆಂದರೆ ನಿಮ್ಮ ಕೈಯಿಂದ ಈ ದಿನ ಬ್ರಿಜ್ಜಲ್ಲಿ ಪುಸ್ತಕ ಪಡೆದಾಗ, ಸ್ವೀಟ್ ಪ್ಯಾಕೆಟ್ ಕೊಟ್ಟಾಗ ನನ್ನದು ಕೈ ಎಷ್ಟು ನಡುಗುತ್ತಿತ್ತು ಗೊತ್ತೇ? ಆದರೆ ನೀವೆಲ್ಲಿ ನನ್ನ ಕೈ ಗಮನಿಸಿದ್ದೀರಿ! ನನ್ನ ಮುಖವನ್ನೇ ನೋಡುತ್ತಿದ್ದರಿಂದ ನಾನು ಪಾರಾದೆ. ನಿಜಕ್ಕೂ ಹೆದರಿಕೊಂಡಿದ್ದೆ" ನಗು ಬಂತು.

"ಅದೆಲ್ಲ ಎಲ್ಲಿ ಗಮನಿಸಲು ಸಾಧ್ಯ ಅಂಕಿತಾ? ನಾನು ನೋಡಿದ್ದು ನಿನ್ನ ಸೀರೆ ಕಲರ್ ಮಾತ್ರ. ಎಷ್ಟು ಚೆಂದಾಗಿ ಉಟ್ಟುಕೊಂಡಿದ್ದಿ! ನಮ್ಮ ಮೊದಲ ಭೇಟಿಯ ಕುರುಹಾಗಿ ಆ ಸೀರೆಯನ್ನು ತೆಗೆದಿಡು. ಹಳತ್ತಾದಾಗ ಸ್ಟೀಲ್ ಪಾತ್ರೆಯವರಿಗೆ ಎಕ್ಸ್‌ಚೇಂಜ್ ಮಾಡಬೇಡ. ನಾನೇ ಕೊಳ್ಳುತ್ತೇನೆ. ಯಾರಿಗೂ ಕೊಡಬೇಡ. ಅದು ನನಗೆ ಬೇಕು.." ಶಿವಾನಂದ

ಮರು ಮೆಸೇಜ್ ಮಾಡಿದ್ದ. "ಥೂ.. ಏನೆಲ್ಲ ಕಲ್ಪನೆ ನಿಮ್ಮದು. ಆಯ್ತು, ಯಾರಿಗೂ ಕೊಡೋದಿಲ್ಲ" ಅಂದಿದ್ದಳು ಅಂಕಿತಾ.

ಮರುದಿನದಿಂದ ನಾಲ್ಕು ಮೆಸೇಜ್ ಹೆಚ್ಚಿಗೆ ರವಾನೆಯಾಗುತ್ತಿತ್ತು.

"ಪ್ರೀತಿ ಇಲ್ಲದ ಹೃದಯ, ವಿವೇಕ ಇಲ್ಲದ ಮನಸ್ಸು ಕನಸುಗಳಿಲ್ಲದ ಕಣ್ಣು, ಸ್ನೇಹಿತರಿಲ್ಲದ ಬದುಕು ಎಲ್ಲವೂ ಬರಿದು.." ಅಂಕಿತಾಳ ಮೆಸೇಜ್ ಬಂದಿತ್ತು. ಓದಿದ ಶಿವಾನಂದ ಪುಳಕಗೊಳ್ಳಲಿಲ್ಲ. ಅವಳಿಗೆ ಬಂದ ಮೆಸೇಜ್ ಫಾರ್‌ವರ್ಡ್ ಮಾಡಿದ್ದಿರಬಹುದು. ಸ್ವಂತದ್ದು ಖಂಡಿತ ಅಲ್ಲ. "ಯಾವಾಗ ಅಂಕಿತಾ ಸ್ವಂತದ್ದು ಬರೆದದ್ದು ಕಳುಹಿಸುತ್ತಾಳೋ?" ನಕ್ಕುಬಿಟ್ಟ ತನ್ನಷ್ಟಕ್ಕೇ.

ಶಿವಾನಂದನಿಗೆ ಈಗೀಗ ಅಂಕಿತಾ ಬಹಳಷ್ಟು ಕಾಡಿದಳು. ಒಂದು ಸಂಜೆ ಅಂಕಿತಾಳಿಗೆ "ಪ್ರೀತಿಸ್ತೀಯಾ?" ಎಂದು ಮೆಸೇಜ್ ರವಾನಿಸಿದ.

ಮೊಬೈಲ್ ಹಿಡಿದಿದ್ದ ಶಿವಾನಂದನ ಕೈ ಈಗ ನಡುಗಿತ್ತು!

❖

ಇಲ್ಲ, ಅಂಕಿತಾಳ ಉತ್ತರ ಬರಲಿಲ್ಲ. ಶಿವಾನಂದನೂ ಆ ಬಗ್ಗೆ ಮತ್ತೆ ಕೆದಕಲು ಹೋಗಲಿಲ್ಲ. ಆದರೆ ಆಗಾಗ ದಾದರ್‌ನಲ್ಲೋ ಚರ್ಚ್‌ಗೇಟ್‌ನಲ್ಲೋ ಭೇಟಿ ಆಗುತ್ತಿದ್ದರು. "ಪ್ರೀತಿಸ್ತೀಯಾ?" ಎನ್ನುವ ಪ್ರಶ್ನೆಗೆ ಮಾತ್ರ ಅಂಕಿತಾ ಈ ತನಕವೂ ಉತ್ತರಿಸಿರಲಿಲ್ಲ. ಅದನ್ನು ಮತ್ತೊಮ್ಮೆ ಶಿವಾನಂದನೂ ಕೇಳಲಿಲ್ಲ. ಆದರೂ ಅನೇಕ ಕಡೆ ಸುತ್ತಾಡುತ್ತಿದ್ದರು. ಸೀರೆಯಲ್ಲಿ ಬಂದಾಗಲೆಲ್ಲ 'ಮಹಾದೇವ್' ಸೀರಿಯಲ್‌ನ ಪಾರ್ವತಿಯಂತೆ ಕಾಣುತ್ತಿದ್ದೀಯಾ" ಎಂದು ಶಿವಾನಂದ ತಮಾಷೆ ಆಡುತ್ತಿದ್ದ.

ಅಂದು ಜಹಾಂಗೀರ್ ಆರ್ಟ್ ಗ್ಯಾಲರಿಯಲ್ಲಿ ಚಿತ್ರಗಳನ್ನು ವೀಕ್ಷಿಸುತ್ತಿದ್ದಾಗ "ಸೀರೆಯಲ್ಲಿ ನೀನೀಗ ದೇವತೆಯಂತೆ ಕಾಣುತ್ತಿದ್ದಿ" ಎಂದುಬಿಟ್ಟ.

"ಛೀ, ಮನುಷ್ಯರನ್ನು ಯಾರಾದರೂ ದೇವರು ಅನ್ನುತ್ತಾರಾ? ನಿಮಗೇನಾಗಿದೆ?" ಹುಸಿಮುನಿಸು ತೋರಿಸಿದಳು. ಇಬ್ಬರೂ ಹೊರಬಂದಾಗ, "ಅಂಕಿತಾ, ನೀನು ನನ್ನ ಅದೃಷ್ಟ ನನ್ನ ಖುಷಿ. ಜೊತೆಗೆ ನನ್ನ ದೇವರೂ.. ಮರೆಯಲು ಸಾಧ್ಯವೇ ಇಲ್ಲ. ನಿನ್ನ ಭೇಟಿಯ ಅನಂತರ ಬದುಕಿನಲ್ಲಿ ಬಹಳ ಗಟ್ಟಿಯಾಗುತ್ತಿದ್ದೇನೆ. ನಿನ್ನ ಪ್ರವೇಶದಿಂದ ನನಗೆ ಅದೃಷ್ಟ ಸಿಕ್ಕಿತೆಂದೇ ತಿಳಿದಿರುವೆ.." ಶಿವಾನಂದ ಗೇಟ್‌ವೇ ಸುತ್ತಾಡುತ್ತಾ ಹೇಳಿದ.

"ಮುಗಿಯಿತಾ? ಏನಾದರೂ ಇನ್ನೂ ಉಳಿದಿದೆಯೋ ಹೇಳಲು. ಇದು ಬಿಟ್ಟು ಬೇರೆ ಮಾತೇ ಇಲ್ಲವೇ? ಹೀಗೆಲ್ಲ ಹೇಳಿದರೆ ನನಗೆ ಮೆಸೇಜ್ ಮಾಡಲು ಕಿರಿಕಿರಿ ಆಗ್ತದೆ" ಅಂಕಿತಾ ಸ್ವಲ್ಪ ಕೋಪಗೊಂಡಳು.

ಅಲ್ಲಿಂದ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಹೋಗಿ, ಸ್ವಲ್ಪ ಹೊತ್ತು ದರ್ಗಾದ ಎದುರಿನ ತೆರೆಗಳನ್ನು ವೀಕ್ಷಿಸಿದರು. "ನೀನೇನು ಪ್ರಾರ್ಥನೆ ಮಾಡಿದೆ? ನನ್ನ ಕುರಿತು ಏನಾದರೂ ಪ್ರಾರ್ಥಿಸಿದೆಯಾ?" ಶಿವಾನಂದ ಕೇಳಿದ. "ಪ್ರಾರ್ಥನೆ ಎಲ್ಲಾ ನಮ್ಮ ಮನಸ್ಸಂತೋಷಕ್ಕಾಗಿ ಇರುವುದು" ಅಂದಳು ಅಂಕಿತಾ.

"ಎಂದಾದರೂ ಪ್ರವಚನ ಕೇಳಲು ಹೋಗಿದ್ದಿಯಾ? ಭಕ್ತಿಯ ಎದುರಿಗೆ ರಾಧೆ ಯಾವಾಗ ಕೃಷ್ಣ ಆಗ್ತಾಳೆ, ಕೃಷ್ಣ ಯಾವಾಗ ರಾಧೆ ಆಗ್ತಾನೆ ಎಂದು ಗೊತ್ತಾಗುವುದಿಲ್ಲವಂತೆ. ಭಕ್ತಿಗೆ ಅಷ್ಟು ಪರಿವರ್ತನಾ ಶಕ್ತಿ ಇದೆ. ಅದಕ್ಕೆ ಕೆಲವೊಮ್ಮೆ ನೀನೇ ನನ್ನ ದೇವರಾಗಿ ಕಾಣುತ್ತಿ.."

ಶಿವಾನಂದ ಮನಸ್ಸಿನಲ್ಲಿದ್ದುದು ಹೇಳಿದ. ಅಂಕಿತಾ ಪ್ರತಿಕ್ರಿಯಿಸಲಿಲ್ಲ. ಸುಮ್ಮನೆ ಹೂಂಗುಟ್ಟಿದಳು.

❖

ಉದ್ಯಾನ್ ಎಕ್ಸ್‌ಪ್ರೆಸ್ ಮುಂಬಯಿ-ಬೆಂಗಳೂರಿನ ಓಡಾಟದ ನಡುವೆ ಇವರನ್ನು ಇನ್ನಷ್ಟು ಹತ್ತಿರಕ್ಕೆ ತಂದಿತು. ಅನಿರೀಕ್ಷಿತವಾಗಿ ಇಬ್ಬರಿಗೂ ಬೆಂಗಳೂರಿಗೆ ಹೋಗಿ ಬರುವ ಅವಕಾಶವೊಂದು ಸಿಕ್ಕಿತು. ಅಂಕಿತಾಳಿಗೆ ಅವಳ ಆಫೀಸ್‌ನ ಕೆಲಸದ ನೆವ. ಶಿವಾನಂದನಿಗೆ ಯಾವುದೋ ವಿಚಾರಗೋಷ್ಠಿಗೆ ಹೋಗಬೇಕಿತ್ತು. ಇಬ್ಬರೂ ಜೊತೆಯಾಗಿ ಹೋಗಿ ಬರುವುದು ಎಂದು ನಿರ್ಧರಿಸಿದರು. ಅಂಕಿತಾ ಅಪ್ಪನಲ್ಲಿ ಶಿವಾನಂದ ಕೂಡ ಬರುವ ಸುದ್ದಿ ತಿಳಿಸಿ ಒಪ್ಪಿಗೆ ಪಡಕೊಂಡೇ ಎರಡು ಟಿಕೆಟ್ ರಿಟರ್ನ್ ಕೂಡ ಮಾಡಿದ್ದಳು. ಟ್ರೈನ್‌ನಲ್ಲಿ ಇಪ್ಪತ್ತನಾಲ್ಕು ಗಂಟೆ ಪ್ರಯಾಣ. ಹೋಗುವಾಗ ಅಂಕಿತಾ ಮನೆಯಲ್ಲೇ ಅಡುಗೆ ಮಾಡಿದ್ದನ್ನು ತಂದಿದ್ದಳು. ಚೆನ್ನಾಗಿ ಸ್ವೀಟ್ ಮಾಡುತ್ತಾಳೆ ಎಂದಾಗ ಅಡುಗೆ ಏನು ಮಹಾ? ರಾತ್ರಿಗೆ ರೈಲ್ವೆಯ ಊಟ. ಸಾಕಷ್ಟು ಹರಟೆ ಕೊಚ್ಚಿದ್ದರು ಹಗಲಿಡೀ.

ರಾತ್ರಿ ಎದುರುಬದುರಿನ ಸ್ಲೀಪರ್. ಮೈತುಂಬಾ ಬಟ್ಟೆ ಹೊದ್ದುಕೊಂಡು ಅಂಕಿತಾ ಮಲಗಿದ್ದಳು. ನಿದ್ದೆಯಲ್ಲೂ ಬಹಳ ಮುದ್ದಾಗಿ ಕಂಡಳು. ಎಷ್ಟು ಬೇಗ ನಿದ್ದೆ ಬಂದುಬಿಟ್ಟಿತು ಅಂಕಿತಾಳಿಗೆ. ಮೊಬೈಲ್‌ನಲ್ಲಿ ಏನೆಲ್ಲ ಸವಲತ್ತುಗಳಿವೆಯೋ ಎಲ್ಲವನ್ನೂ ಯಾವ ರೀತಿ ಬಳಸಬಹುದೆಂದು ಶಿವಾನಂದನಿಗೆ ದಿನವಿಡೀ ಕಲಿಸಿದ್ದಳು. ಆಯಾಸವಾಗಿತ್ತೇ? ರಾತ್ರಿಗೆ ಎಚ್ಚರವಾದಾಗ ಅಂಕಿತಾಳು ಹೊದ್ದುಕೊಂಡಿದ್ದ ಬಟ್ಟೆಯನ್ನು ಮತ್ತೆ ಸರಿಪಡಿಸಿ ಬಂದು ಮಲಗಿಕೊಂಡ. ಅವಳ ಗಲ್ಲವನ್ನು ಚಿವುಟಿದ. ಇಲ್ಲ ಎಚ್ಚರವಾಗಲಿಲ್ಲ ಅವಳಿಗೆ.

ಮರುದಿನ ಬೆಂಗಳೂರಲ್ಲಿ ಇಳಿದ ಅನಂತರ ಅವರವರ ದಾರಿ ಬೇರೆಯಾಗಿತ್ತು. ಅವಳು ಚಿಕ್ಕಪ್ಪನ ಮನೆಗೆ ಹೋದಳು. ಶಿವಾನಂದ ವಿಚಾರಗೋಷ್ಠಿಯವರು ಮೊದಲೇ

ಬುಕ್ ಮಾಡಿದ್ದ ಹೊಟೇಲ್‌ಗೆ ತೆರಳಿದ. ರಾತ್ರಿ ಮತ್ತೆ ಮೆಜೆಸ್ಟಿಕ್ ರೈಲ್ವೇ ಸ್ಟೇಷನ್‌ನಲ್ಲಿ ಒಟ್ಟಾದರು. ಸಂಜೆಗೆ ಇಬ್ಬರ ಕೆಲಸವೂ ಮುಗಿದಿತ್ತು.

ಮತ್ತೆ ಅದೇ ದೃಶ್ಯ. ಅಂಕಿತಾ ಊಟ ತಂದಿದ್ದಳು. ರಾತ್ರಿಗೆ ಎದುರುಬದುರೇ ಮಲಗಿದ್ದರು. “ಹೊದಿಕೆ ಸರಿಯಾಗಿ ಹೊದ್ದುಕೊಳ್ಳು” ಎಂದ ಶಿವಾನಂದ. ಆಗ ಅಂಕಿತಾ, “ಹೊದಿಕೆ ಸರಿಪಡಿಸಿದ ಅನಂತರ ಗಲ್ಲವನ್ನು ಮುಟ್ಟಬೇಡಿ” ಅಂದಳು. “ಅಯ್ಯೋ ಕಳ್ಳಿ ಗೊತ್ತಿಲ್ಲದಂತೆ ಸುಮ್ಮನಿದ್ದಿಯಾ ನಿನ್ನೆ!” ಎಂದು ಶಿವಾನಂದ ಅಂಕಿತಾಳ ಮೂಗು ಚಿವುಟಿದ. ಮರುದಿನ ಹಗಲಿಡೀ ರೈಲೊಳಗೆ. ರಾತ್ರಿ ಎಂಟಕ್ಕೆ ದಾದರ್‌ಗೆ ಬಂದಿತ್ತು. ತನ್ನ ಹೊಸ ಮೊಬೈಲ್, ಅದರಲ್ಲಿ ಫೇಸ್‌ಬುಕ್.. ಎಲ್ಲವನ್ನೂ ಅಂಕಿತಾ ಪರಿಚಯಿಸಿದಳು. “ಈಗ ಎಲ್ಲರಲ್ಲೂ ಫೇಸ್‌ಬುಕ್ ಇದೆ. ನೀವೂ ಮಾಡಿಬಿಡಿ” ಎಂದಳು ಅಂಕಿತಾ. “ಅಷ್ಟು ಟೈಮ್ ನನ್ನಲ್ಲಿಲ್ಲ” ಅಂದ ಶಿವಾನಂದ, “ತನಗದರಲ್ಲಿ ಆಸಕ್ತಿ ಇಲ್ಲ” ಅಂದುಬಿಟ್ಟ. ರೈಲಿಳಿದು ದಾದರ್‌ನಲ್ಲಿ ಮತ್ತೆ ಬೇರೆಬೇರೆಯಾದರು.

ಆ ರಾತ್ರಿ ಅವರವರ ಮನೆಗೆ ತೆರಳಿದ ಅನಂತರ ಗುಡ್‌ನೈಟ್ ಮೆಸೇಜ್ ಕಳುಹಿಸಿದ ಶಿವಾನಂದ. ಅತ್ತ ಪ್ರತಿಕ್ರಿಯಿಸಿದ ಅಂಕಿತಾ ಗುಡ್‌ನೈಟ್ ಮೊದಲಿಗೆ ಒಂದು ಮಾತು ಹೇಳಿದ್ದಳು ಮೆಸೇಜ್‌ನಲ್ಲಿ–

“ನಮ್ಮನ್ನು ಪ್ರೀತಿಸಿದವರನ್ನೇ ನಾವು ಪ್ರೀತಿಸಬೇಕು” ಶಿವಾನಂದನಿಗೆ ಎರಡು ಸಲ ಓದಿದರೂ ಅರ್ಥವಾಗಲಿಲ್ಲ. ಇಷ್ಟರತನಕ ಏನನ್ನೂ ಹೇಳದವಳು ಈಗ ಯಾಕೆ ಹೀಗೆ ಹೇಳಿದಳು? ಏನಿದರ ಒಗಟು?

“ಪ್ರೀತಿಸ್ತೀಯಾ?” ಅಂತ ಯಾವತ್ತೋ ಕೇಳಿದ್ದೆ ತಾನು. ಈವರೆಗೂ ಅದಕ್ಕೆ ಉತ್ತರಿಸಿರಲಿಲ್ಲ. ಈಗ ಈ ಮಾತಿನ ಅರ್ಥ ಏನಿರಬಹುದು? ಶಿವಾನಂದ ಗೊಂದಲಕ್ಕೀಡಾದ.

❖

ಶಿವಾನಂದ ಮತ್ತೊಮ್ಮೆ ಮೆಸೇಜ್ ಓದಿದ– “ನಮ್ಮನ್ನು ಪ್ರೀತಿಸಿದವರನ್ನೇ ನಾವು ಪ್ರೀತಿಸಬೇಕು” ಅಂಕಿತಾ ಹೇಳುವಂತೆ – ತಾನು ಅವಳನ್ನು ಪ್ರೀತಿಸುವುದು ಅವಳಿಗೂ ಗೊತ್ತಿದೆ. ಆ ನಿಟ್ಟಿನಲ್ಲಿ ಅವಳೂ ತನ್ನನ್ನೇ ಪ್ರೀತಿಸಬೇಕು. ಹಾಗಿದ್ದರೆ ಅವಳಾಗಿಯೇ ಯಾಕೆ ಈತನಕ ಬಹಿರಂಗವಾಗಿ ಹೇಳಿಲ್ಲ? ಒಗಟಿನ ರೂಪದಲ್ಲಿ ಯಾಕೆ ಹೇಳಿದಳು? ಅಥವಾ ತನ್ನನ್ನು ಪ್ರೀತಿಸುತ್ತಿಲ್ಲವೇ?

ಟ್ರೈನ್‌ನಲ್ಲಿ ಬೆಂಗಳೂರಿಗೆ ಹೋಗಿದ್ದಾಗಿನ ದೃಶ್ಯವೊಂದು ನೆನಪಿಗೆ ಬಂತು. ಅವಳೇ ತಂದಿದ್ದಳು ಚಪಾತಿ. ಇಬ್ಬರಿಗೂ ಪ್ರತ್ಯೇಕವಾಗಿ ತಟ್ಟೆಯಲ್ಲಿ ಹಾಕಿದ್ದಳು. ಅಂಕಿತಾ ತಿಂದ

ಅರ್ಧ ಚಪಾತಿಯನ್ನು "ತನಗೆ ಕೊಡು" ಎಂದಿದ್ದ ಶಿವಾನಂದ "ಛೀ, ಎಂಜಲು ತಿನ್ನಬಾರದು. ನಾನೂ ತಿನ್ನುವುದಿಲ್ಲ" ಎಂದು ಸಿಡಿಮಿಡಿಗೊಂಡು ಅಂಕಿತಾ ಹೇಳಿದ್ದು ನೆನಪು ಮಾಡಿಕೊಂಡ.

ಅಂಕಿತಾ ಉತ್ತಮ ಸಂಸ್ಕಾರ ಪಡೆದವಳು ನಿಜ. ಆದರೆ ಪ್ರೀತಿಯ ಮುಂದೆ 'ಎಂಜಲು' ಮಹತ್ವ ಕಳಕೊಳ್ಳುತ್ತದೆ ತಾನೆ! "ನೀನೇ ನನ್ನ 'ದೇವರು' ಎಂದ ಮೇಲೆ ಅಲ್ಲಿ ಎಂಜಲು ಕೂಡ ಪವಿತ್ರವೇ ಅಂಕಿತಾ.." ಇಲ್ಲ, ಶಿವಾನಂದನ ಯಾವ ಮಾತನ್ನೂ ಒಪ್ಪದ ಅಂಕಿತಾ "ಎಂಜಲು ತಿನ್ನಬಾರದು" ಎಂದೇ ಹಟ ಹಿಡಿದಿದ್ದಳು.

ನಿಜಕ್ಕೂ ಅವಳು ತನ್ನನ್ನು ಪ್ರೀತಿಸುತ್ತಿಲ್ಲವೇ? ಶಿವಾನಂದ ತನಗೆ ತಾನೇ ಪ್ರಶ್ನೆ ಹಾಕಿಕೊಂಡ.

ಅಥವಾ ಅಂಕಿತಾ ಬೇರೆ ಯಾರನ್ನಾದರೂ ಪ್ರೀತಿಸುತ್ತಿರಬಹುದೋ? ಅದನ್ನು ಹೇಳಲಾಗದ ತ್ರಿಶಂಕು ಸ್ಥಿತಿಯನ್ನು ಅನುಭವಿಸುತ್ತಿದ್ದಾಳೆಯೋ? ಹಾಗೆಂದೇ ಈ ರೀತಿ ಒಗಟನ್ನು ಹೇಳಿದಳೋ..? ಹಿಂದೊಮ್ಮೆ ಸ್ಟೇಷನ್ ಸುತ್ತಾಡುವಾಗ "ಎಳನೀರು ಕುಡಿಯೋಣವೇ" ಎಂದು ಅಂಗಡಿಗೆ ಹೋಗಿದ್ದರು. ತತ್‌ಕ್ಷಣ ಅಂಕಿತಾ, "ಎರಡು ತೆಕ್ಕೊಳ್ಳೋಣ. ಒಂದರಲ್ಲಿ ಇಬ್ಬರು ಬೇಡ" ಅಂದಿದ್ದದ್ದು ಮತ್ತೆ ನೆನಪಿಸಿಕೊಂಡ.

❖

ಇತ್ತೀಚೆಗೆ ಬಹಳ ದಿನಗಳಾಯ್ತು ಇಬ್ಬರೂ ಬ್ಯುಸಿ. ಈಗೀಗ ಇಬ್ಬರಲ್ಲೂ ಮೆಸೇಜ್ ಇಲ್ಲ. ಕಾಲ್ ಮಾಡೋಣವೆಂದರೆ ಶಿವಾನಂದನಿಗೂ ಸಂಕೋಚ. ಆದರೂ ಪ್ರೀತಿಸಿದ ಅನಂತರ ಹಟ ಏಕೆ? ಅವಳ ಮೆಸೇಜ್‌ನ್ನೇ ನಿರೀಕ್ಷಿಸುವುದೂ ತಪ್ಪು. ಮೆಸೇಜ್ ಮಾಡದಿದ್ದರೆ ತನ್ನನ್ನು ಮರೆತಳು ಎಂದು ಯಾಕೆ ತಿಳಕೊಳ್ಳಬೇಕು? ಮೆಸೇಜ್ ಮಾಡಿದರೆ ಮಾತ್ರ ನೆನಪಿದೆ ಎನ್ನುವುದೂ ತಪ್ಪಾದೀತು. ಓನ್ಲೀ ಮೆಸೇಜ್ ಆರ್ ನಾಟ್ ಲೈಫ್ ಎಂದು ಅಂಕಿತಾಳೇ ಹೇಳಿದ್ದಳು ಒಮ್ಮೆ.

ಕೊನೆಗೂ ಶಿವಾನಂದ ಅಂಕಿತಾಳಿಗೆ ಮೆಸೇಜ್ ಮಾಡಿದ– "ಇನ್ಯಾವಾಗ ಭೇಟಿ ಆಗುತ್ತಿ? ಬಹಳ ದಿನಗಳಾಯ್ತು ಭೇಟಿಯಾಗದೆ. ಮೆಸೇಜ್ ಕೂಡ ಬರುತ್ತಿಲ್ಲ. ಕೋಪನಾ..? ಬ್ಯುಸಿ ಇದ್ದಿಯಾ?"

ಇಲ್ಲ, ಅಂಕಿತಾಳ ರಿಪ್ಲೈ ಬರಲಿಲ್ಲ. ಕಾದ, ನಿದ್ದೆ ಬರುವ ತನಕವೂ. ಶಿವಾನಂದ ಮೊಬೈಲ್ ಮೆಸೇಜ್‌ನ ಸದ್ದು ಮಾಡಲೇ ಇಲ್ಲ.

❖

ಪ್ರವಚನ ಕೇಳಿ ಹೊಟೇಲ್‌ನಲ್ಲಿ ಊಟ ಮಾಡಿ ರೂಮಿಗೆ ಬಂದ ಶಿವಾನಂದ, ಚಾಪೆಯ ಮೇಲೆ ಬಿದ್ದುಕೊಂಡವನಿಗೆ ಹಳೆಯ ಘಟನೆಗಳೆಲ್ಲ ನೆನಪಿಗೆ ಬಂತು. ಇವತ್ತಿನ ದಿನವೇ ಅಲ್ಲವೇ ತಾನು ಅಂಕಿತಾಳನ್ನು ಮೊದಲ ಬಾರಿ ಅಂಧೇರಿ ಬ್ರಿಜ್‌ನಲ್ಲಿ ಭೇಟಿ ಆದದ್ದು. ಇವತ್ತು ಮತ್ತೆ ಮೆಸೇಜ್ ಮಾಡಿ ಆ ಬ್ರಿಜ್‌ನಲ್ಲಿ ಭೇಟಿ ಆಗಲು ತಿಳಿಸಿದ್ದಾಳೆ. ಹಾಗಿದ್ದರೆ ಇವತ್ತಿಗೆ ಮೂರು ವರ್ಷವಾಯಿತು ಭೇಟಿಗೆ ಎಂದು ಅಂಕಿತಾಳಿಗೂ ಗೊತ್ತಿದೆಯೇ? ಇವತ್ತು ಅವಳ ಎದುರಿಗೇ 'ಪ್ರೀತಿಸ್ತೀಯಾ?' ಕೇಳಬೇಕು. ಮುಖಕ್ಕೆ ಮುಖ ಕೊಟ್ಟು ಕೇಳಬೇಕು.. ಎದ್ದು ಕೂತ.

ಶಿವಾನಂದ ಹೊರಡುವ ತಯಾರಿ ಮಾಡಿದ.

❖

ಹೇಳಿದ ಸಮಯಕ್ಕಿಂತ ಅರ್ಧ ಗಂಟೆ ಮೊದಲೇ ಅಂಧೇರಿ ಸ್ಟೇಷನ್‌ಗೆ ಬಂದು ರೈಲ್ವೇ ಬ್ರಿಜ್ಜಲ್ಲಿ ನಿಂತುಕೊಂಡ ಶಿವಾನಂದ. ಕೆಳಗಡೆ ರೈಲುಗಳ ಓಡಾಟ. ತಲೆಯೊಳಗೆ ನೆನಪುಗಳ ಓಡಾಟ. ಹೀಗೇ ಒಬ್ಬನೇ ನಿಂತುಕೊಂಡಿದ್ದ ಶಿವಾನಂದನಿಗೆ ಯಾಕೋ ತಾನು ಮಾಡುತ್ತಿರುವುದು ಸರಿಯೋ ತಪ್ಪೋ ಎನ್ನುವ ಕುರಿತು ದಿಢೀರ್ ಯೋಚನೆ ಆವರಿಸತೊಡಗಿತು..

ಪ್ರೀತಿಯನ್ನು ಒತ್ತಡ ಹಾಕಿ ಮತ್ತೆ ಮತ್ತೆ ಕೇಳಬೇಕೆ? ತನ್ನನ್ನು ನಿಜವಾಗಿ ಪ್ರೀತಿಸುವುದಿದ್ದರೆ ಇಷ್ಟರತನಕ ಅವಳಾಗಿಯೇ ಹೇಳಬೇಕಿತ್ತು. 'ಪ್ರೀತಿಸ್ತೀಯಾ?' ಎಂದು.

ಒಂದು ಸಲ ಕೇಳಿದರೂ ಹಕ್ಕಿಯಂತೆ ಹಾರಿ ಬಂದು, 'ಹೌದು ಪ್ರೀತಿಸ್ತೀನಿ' ಅಂತ ಹೇಳಬಹುದಾಗಿತ್ತು. ಇಲ್ಲ, ಅಂಕಿತಾ ಹೇಳಲಿಲ್ಲ. ಪ್ರೀತಿ ಹೃದಯದಿಂದ ಬರಬೇಕು, ಅದು 'ನಾಲಗೆ'ಯಲ್ಲಿ ಮಾತ್ರ ಬರಬಾರದು. ತಾನು ಕೇಳಿಯಾಗಿದೆ. ಅವಳೂ ಒಗಟಾಗಿ ಹೇಳಿದ್ದಾಳೆ. ಅವಳು ಎಷ್ಟೋ ಜನಕ್ಕೆ ಮೆಸೇಜ್ ಮಾಡುತ್ತಿರುತ್ತಾಳೆ. ಯಾರೋ ಕಳುಹಿಸಿದ್ದನ್ನು ಇನ್ಯಾರಿಗೋ ಕಳುಹಿಸುತ್ತಿರುತ್ತಾಳೆ. ಎಷ್ಟು ಜನ ಅವಳ ಮೆಸೇಜ್‌ಗೆ ತನ್ನಂತೆ ಪುಳಕಗೊಳ್ಳುತ್ತಿರಬಹುದು..? ಇನ್ನೆಂದೂ ತಾನು ಅವಳಲ್ಲಿ ಈ ಬಗ್ಗೆ ಕೇಳಬಾರದು. ಈಗಿದ್ದಂತೆ ಹೀಗೆಯೇ ಇರೋಣ. ಮೆಸೇಜ್‌ಗಾಗಿ ಕಾಯುವುದು ನಿರೀಕ್ಷಿಸುವುದೇ ಬದುಕು ಆಗಿಬಿಟ್ಟರೆ ಅದು ದೊಡ್ಡ ಅಪಾಯಕಾರಿ. ಇನ್ನೆಂದೂ ಅವಳಲ್ಲಿ ಪ್ರೀತಿಯ ಬಗ್ಗೆ ಚಕಾರ ಎತ್ತಬಾರದು.. ಮನಸ್ಸು ಗಟ್ಟಿ ಮಾಡಿಕೊಂಡ.

ಕಿಸೆಯಿಂದ ಮೊಬೈಲ್ ಹೊರತೆಗೆದ ಶಿವಾನಂದ ಮೆಸೇಜ್ ಮಾಡಿದ. "ಅಂಕಿತಾ, ಮೂರು ವರ್ಷದ ಹಿಂದೆ ಇದೇ ಬ್ರಿಜ್ಜಲ್ಲಿ ನಾವು ಭೇಟಿ ಆಗಿದ್ದೆವು. ಆ ನೆನಪೇ ಶಾಶ್ವತ ಇರಲಿ. ಇವತ್ತು ಭೇಟಿಯಾಗುವುದು ಬೇಡ, ನನಗೆ ಬೇರೆ ಕೆಲಸ ಇದೆ, ಕಾಯಬೇಡ."

ಮೊಬೈಲ್‌ನಲ್ಲಿ ಡೆಲಿವರಿ ರಿಪೋರ್ಟ್ ಬಂದ ತತ್‌ಕ್ಷಣ ಶಿವಾನಂದ ಕೆಳಗಿಳಿದು ಫ್ಲ್ಯಾಟ್ ಫಾರ್ಮ್‌ಗಳಿಗೆ ಬಂದ. ಲೋಕಲ್ ರೈಲೊಂದು ನಿಂತಿತ್ತು. ಅದನ್ನು ಹತ್ತಿ ಕೂತವ ನಿರಾಳವಾಗಿ ಉಸಿರುಬಿಟ್ಟ.

❖

(ತರಂಗ – ಫೆಬ್ರವರಿ 21, 2013)

ನೆಲದೂರ ಜನರ ಕಥೆ

ಗವಿಸಿದ್ಧ ಹೊಸಮನಿ

> **‘ಬೆವರೂರ ದಾರಿಯಲಿ ಬೆಳಗಲಿ..**
> **ಬಡವರ ಬದುಕು..**
> **ಹಸಿವು, ನೋವು, ಅವಮಾನ ದೂರಾಗಲಿ, ದುಡಿತದಲಿ**
> **ಚಿಗುರಲಿ ಹೊಸ ಕನಸಿ–ಹೊಸ ಹಾಡು ಮೊಳಗಲಿ..’**

ಪಡುವಣದ ಕೆಂಪು ಕಡಲ ಬಯಲಲ್ಲಿ.. ಸಮುದ್ರದ ಅಲೆಗಳು ಉರಿವ ಬೆಂಕಿಯಂತೆ ಹೊರಡತೊಡಗಿದ್ದವು. ಅವರು, ಆ ಕಡಲ ಬಯಲಿಗೆ ಬಿದ್ದಿದ್ದ ಪುಡಿ ಮೀನುಗಳನ್ನಷ್ಟೇ ಎತ್ತಿಕೊಂಡು ಹೆಜ್ಜೆ ಕಿತ್ತಿದ್ದರು. ಅಲ್ಲಷ್ಟೇ ಗುಂಪಾಗಿ ಬೆಳೆದ ಆ ಮರಗಳು ಹಣ್ಣುದುರಿಸಲು ಸಜ್ಜಾಗತೊಡಗಿದ್ದವು. ಆ ದಿನಗಳಿಡೀ ಬಿಸಿಲಲಿ ಬಾಡಿ, ಬೆವತು, ಬಳಲಿ, ಬರಿ ಕುಂಡೆ ಬಿಟ್ಟು, ಉಪ್ಪು ನೀರಲ್ಲಿ ಮುಳಿಗೆದ್ದು, ಜಿಣುಗು ಮಣ್ಣಲ್ಲಿ ಕಾಲೂರಿ ಬಂದ ಅವರು ಆ ಹಾಡು ಉಲಿಯತೊಡಗುತ್ತಲೇ.. ಅದ್ಯಾಕೋ ಆಗಷ್ಟೇ ಹಳೆಯ ಗಾಂಧಿ ಚಿತ್ರದ ನೋಟು ಹಂಚಿ ಕೂತಿದ್ದ ಆತನ ಕಣ್ಣುಗಳು ಕೆಂಡದಂತೆ ಭಾಸವಾಗಿದ್ದವು.

❖

ಭಾರತ ದೇಶದೊಳಗೊಂದೂರಿನ ಜನರವರು.. ವರ್ಷೊಪ್ಪತ್ತಿಗಾಗುವಷ್ಟು ಜ್ವಾಳ, ಎರಡೊತ್ತಿನ ಊಟಕ್ಕಾಗುವಷ್ಟು ಜ್ವಾಣಿ–ಜಪ್ಪಿ, ಅಡಕಲು ಗಡಿಗೆಯ ಪುಡಿಗಾಸು, ಹರುಕು ಕೌದಿ, ಚಾದಾರ, ಮುಗ್ಗುಮುಗ್ಗಾದ ಬಟ್ಟೆ–ಬರಿ ಹೊದಿಸಿಟ್ಟ ಹಸಿರು ಬಣ್ಣದ ಟ್ರಂಕು, ಇವೆಲ್ಲಾ ತಮ್ಮ ‘ತಾತ–ಮುತ್ತಾತನ ಕಾಲದ ಆಸ್ತಿ’ಯೇನೋ! ಅನ್ನುವಂತೆ ಆ ಜನ ತಲೆ ಮೇಲೆ ಹೊತ್ತಿದ್ದರು.

ಜಿಟಿಜಿಟಿ ಮಳೆಹನಿಯ ಧಾರಾನಗರಿ ಧಾರವಾಡ (ಧಾರವಾರ)ಗೆ ಆಗಾಗ ಬರುವಾಗ.. ‘ಹೂಬಳ್ಳಿ.. ಹೂಬಳ್ಳಿ.. ಕನಸು ಮನಸಿನ ಹೂಬಳ್ಳಿ’ ಎಂದೇ ಹಾಡಿದ್ದ ಸಂತ ಶಿಶುನಾಳ ಶರೀಫ್ ಸಾಹೇಬ್‌ರ ನೆಚ್ಚಿನ ಊರಾದ, ಈಗ ಅದನ್ನೆಲ್ಲಾ ಮರೆತು ನಿಂತಂತಿರುವ ಹುಬ್ಬಳ್ಳಿ ಬಸ್‌ಸ್ಟ್ಯಾಂಡ್‌ನಲ್ಲಿ ಆ ಜನ ಬಸ್ಸಿಗಾಗಿ ಕಾಯತೊಡಗಿದ್ದರು. ಸುಗ್ಗಿಗೆಂದು ಕಡಲ ನಗರಿ ಮಂಗಳೂರಿಗೆ ಹೊರಟಿದ್ದರು.

ಬಸ್‌ಸ್ಟ್ಯಾಂಡ್‌ನ ಆ ಕೊರೆವ ಗದ್ದಲದಲ್ಲೂ ‘ಇನ್ನೂ ಯಾಕ ಬರಲಿಲ್ಲವ್ವಾ ಹುಬ್ಬಳ್ಳಿಯಾಂವ.. ವಾರದಾಗ ಮೂರು ಸರ್ತಿ ಬಂದು ಹೋಗಾಂವಾ..’ ಧಾರವಾಡ

ಆಕಾಶವಾಣಿಯಿಂದ 'ನಾಕುತಂತಿ'ಯ ನಾದ ತೇಲಿ ಬರತೊಡಗಿತ್ತು. ಗದಗ, ರಾಯಚೂರು, ಮೈಸೂರು, ಶಿವಮೊಗ್ಗ, ಬಳ್ಳಾರಿ, ಬೀದರ, ಕಾರವಾರ, ಬೆಂಗಳೂರು, ಬೆಳಗಾವಿ ಅಲ್ಲಲ್ಲಿಗೆ ಹೊರಡಲು ಬಸ್‌ಗಳು ಅಣಿಗೊಂಡು ದಿಕ್ಕುತಪ್ಪಿದಂತೆ ತಿರುಗುತ್ತಿದ್ದವು. ಆಟೋ–ಲಾರಿಗಳು, ನಾನಾ ಮುಖದ ಬೈಕ್‌ಗಳೂ..

ಪಾನ್–ಬೀಡಾ, ಎಲಿ–ಅಡಿಕೆ ಜಗಿದ ಉಗುಳ ಮೇಲೆ ನೊಣ ಗೊಮ್ಮುಗೂಡಿ ಯಾವದೋ ನಾದ ಹೊರಡಿಸಿದ್ದವು. ಅ ಹುಳು ಕಾಲುಕಾಲಿಗೆ ಅಡರುತ್ತಿದ್ದವು. ಎಂದಿನಂತೆ ನಾನು ಪತ್ರಿಕಾ ಕಚೇರಿಗೆ ಹೊರಟಿದ್ದೆ. ಚೆನ್ನಮ್ಮ ಸರ್ಕಲ್ ಸಿಗ್ನಲ್ ದಾಟುತ್ತಲೇ ಬಸ್ ಮಿಸ್ಸಾಗಿ ಆ ಬಸ್‌ಗಾಗಿ ಕಾಯತೊಡಗಿದ್ದ ನನ್ನೆಲ್ಲಾ ಗಮನ ಅತ್ತ ಹರಿಯತೊಡಗಿತು. ಅವರನ್ನು ನೋಡುತ್ತಲೇ ಅಪ್ಪನೊಂದಿಗಿನ ಆ ಸುಗ್ಗಿ ದಿನಗಳು ಮತ್ತೊಮ್ಮೆ ಸಿನೇಮಾ ರೀಲ್‌ನಂತೆ ಸುರುಳಿ ಬಿಚ್ಚಿದವು.

ಮಲೆನಾಡ ಸೆರಗಾಗಿದ್ದರಿಂದ ನೆತ್ತಿ ಸುಡುವಂತಿದ್ದ ನಿಗಿನಿಗಿ ಬಿಸಿಲಿತ್ತು.

ಎಣ್ಣೆಗಾಣದ ತಲೆಗಳು, ಕಿಮುಟು ದೋತ್ರ, ಒಳಂಗಿ ಮೈಮುಚ್ಚುವಷ್ಟೇ ಸೀರೆ, ಕುಪ್ಪಸ, ದಣಿದ ಮೈಯೊಳಗೆ ಹನಿಗೂಡುವ ಬೆವರು, ಸುಡು ಬಿಸಿಲು ತಡೆಯಲು ಸಾಕಾಗುವಷ್ಟಿರುವ ಟಾವೆಲು, ಅವರಿಗೆ ಹೊಂದುವಷ್ಟೇ ಗಂಟು–ಮೂಟೆ, ಕನಸುಗಳೇ ಇಲ್ಲದಂತಿರುವ ಹಸುಗೂಸುಗಳು, ಹಿಡಿಗಾತ್ರದ ಪಕ್ಕಡಿಗೆ ಉಡಿದಾರ–ಪಿನ್ ಬಿಗಿದುಕೊಂಡ ಒಣದೊಗಲ ಹುಡುಗರು ಎಲ್ಲವೂ ಅವರು ಸುಗ್ಗಿಜನ ಅನ್ನಲು ಸಾಕ್ಷಿಯಂತಿದ್ದವು!

ನಾನಾ ನಮೂನೆಯ ಶಬ್ದ ಉಗುಳುವ ಪೊಟ್ಟಣ ಗಾತ್ರದ ಯಂತ್ರ–ಪಿಂಡಗಳು, ಕಣ್ಣಿಗೆ ಕುಕ್ಕುವ ವಿವಿಧ ಗಾತ್ರದ ಕಂದು–ತಿಳಿಬಿಳಿ ಬಣ್ಣದ ವಾಚ್‌ಗಳು, ನಾನಾ ತರಹದ ಹಣ್ಣು–ಹೂಗಳು, ವಸ್ತು, ಒಡವೆ–ವಗೈರೆ, ಕಾಲಿಗಂಟಿದ್ದರೂ ಕತ್ತು ನೋಡುವ ಚಪ್ಪಲಿ–ಬೂಟು, ಮೈಬಣ್ಣಕ್ಕೆ ಹೊಂದುವ ಬಿಗಿ ಉಡುಪು ತೊಟ್ಟವರು, 'ತಮಗೇನು ಸಂಬಂಧವಿಲ್ಲ' ಅನ್ನುವಂತೆ ನಿಂತ ಅವರು ಹೀಗೆ ಎಲ್ಲವೂ ಕಂಡ ಆ ಸುಗ್ಗಿ ಜನ ಸ್ತಬ್ಧಚಿತ್ರಗಳಂತಾಗಿ ನಿಂತಿದ್ದರು. ಹಸಿದಿದ್ದರು.

ಅವರ ಜನುಮ–ಜನುಮದ ಗಂಟು–ಮೂಟೆಗೆ ಅಂಜಿದಂತೆ ಬಸ್ಸುಗಳು ಬಂದ ದಾರಿಗೆ ತಿರುಗುತ್ತಿದ್ದವು. ಬಸ್ಸು ಬರುತ್ತಲೇ ಅವುಗಳ ಬೆನ್ನೇರಿ ಟವೆಲ್ಲು ಹಾಕಿದರೂ ಸೀಟು ಸಿಗದೇ ಇದ್ದುದಕ್ಕೆ ಸುಗ್ಗಿ ಜನರ ಗುಂಪಿನ ಆತನಿಗೆ ಸಾಕುಸಾಕಾಗಿತ್ತು.

ಆ ಜನ, ಮೂಡಣದ ಮೋಡಗೆಂಪೇರಿ ಮುಂಗೋಳಿ ಕೂಗುವ ಹೊತ್ತಿಗೆ ಊರು ಬಿಟ್ಟಿದ್ದರೇನೋ. ಹಸುಗೊಂಡು ಅಲ್ಲೇ ಇದ್ದ ಗೂಡಂಗಡಿಯ ಒಣ ಚುರ್ಮರಿ, ಕಡಲೇಹಿಟ್ಟಿನ ದಾನಿ, ಕಾರ ತಂದು ತಿನ್ನತೊಡಗಿದ್ದರು. ಒಮ್ಮೆಯೂ ಪಟ್ಟಣದತ್ತ ಮುಖ ಮಾಡಿರದ ಆ ಮಕ್ಕಳು, ಅಲ್ಲಲ್ಲೇ ಇಳೆ ಬಿಟ್ಟಿದ್ದ ನಾನಾ ಬಗೆಯ ಹೂ–ಹಣ್ಣುಗಳತ್ತ ಕಣ್ಣು ನೆಟ್ಟಿದ್ದವು.

ಅವರ ಕೈಯಲಿ ಅವನ್ನು ಖರೀದಿಸುವಷ್ಟು ಕಾಸಿರಲಿಲ್ಲ, ನೀರನ್ನೇ ಗುಟುಕರಿಸುತ್ತಿದ್ದರು. ಬಿಸಿಲು ನೆಟನೆತ್ತಿಗೆ ಬಂದಿತ್ತು. ಆಟೋ, ಬಸ್ಸು, ಕಾರು ಇರಿವ ಹರಿದಂತೆ ಹರಿಯತೊಡಗಿದ್ದವು ಹೊಗೆಯುಗುಳುತ್ತಾ..! ಕಪ್ಪು ಬಣ್ಣದ ಗಾಳಿ ಉಣ್ಣುತ್ತಾ ಕುಳಿತ ಅವರು ಮುಂದಿನೂರ ದಾರಿ ಹುಡುಕುತ್ತಲೇ ಇದ್ದರು. ಇಂತಪ್ಪ ಆ ಸುಗ್ಗಿ ಜನರ ಪರಿಚಯ ಹೀಗಿದೆ..

❖

ಅವರದು ಬಯಲು ಸೀಮೆಯ ನೆಲದೂರು. ಕುಗ್ರಾಮವದು. ಹತ್ತನ್ನೆರಡು ಕುಟುಂಬಗಳೇ ಜೀವ ತೇಯುವ ಪ್ರದೇಶವದು. ಎರಡು ಮಣ್ಣಿನ ಮನೆ. ಮೂರ್‍ನಾಲ್ಕು ಹಂಚಿನವು. ಗುಡಿಸಲೇ ಹೆಚ್ಚು. ಸುತ್ತಲೂ ಒಣಕಲು ಗುಡ್ಡ. ಸುಗ್ಗಿ ಬಿಟ್ಟರೆ ಆ ಜನರಿಗೆ ಕಲ್ಲು ಗುಡ್ಡವೇ ಆಸರೆ. ದಿನದ ಬದುಕಿನೊಲೆ ಉರಿಯಲು ಕುರಿ–ದನಗಳು. ಒಂದಿಷ್ಟು ನಾಯಿ. ಇದಿಷ್ಟು ಆ ಹಳ್ಳಿಯ ಬಯೋಡಾಟಾ.

ಮಳೆಯಾಗದೇ ಊರ ಜನ ಕಂಗಾಲಾಗಿ, ಕೆಲಸವೂ ಇಲ್ಲದೇ ಗೇಣು ಹೊಟ್ಟೆ ಹೊರಲು ಮಕ್ಕಳು–ಮರಿಯೊಂದಿಗೆ ಸಂಸಾರ ಸಮೇತ ಆ ಅಪರಾತ್ರಿಯ ವೇಳೆ ಅವರೆಲ್ಲಾ ಸುಗ್ಗಿಗೆ ಹೊರಟದ್ದು ಹೀಗೆ..

ಆವತ್ತು ಊರಿಗೆ ಊರೇ ಎದ್ದಿತ್ತು. ಚಿಮುಣಿ ಬುಡ್ಡಿ ಮತ್ತೊಮ್ಮೆ ಜೀವ ತಂದುಕೊಂಡಿದ್ದವು. ಡಬರಿ, ಟ್ರಂಕು, ಚರಗಿ ಟನ್‌ಪನ್ ನಾದ ಎಬ್ಬಿಸಿದ್ದವು. ಹರಕು ಚೀಲ, ಚಾದಾರ, ಕೌದಿಯ ಚರ್‌ಪರ್ ಶಬ್ದವೂ..! ಸಜ್ಜಾಗುತ್ತಲೇ ಇದ್ದ ಸುಗ್ಗಿ ಜನರನ್ನು ಕರೆದೊಯ್ಯಲು ಆ ಗಾಡಿ ಊರ ಬಯಲಿಗೆ ಬರುತ್ತಲೇ ನಾಯಿಗಳು ಒದರತೊಡಗಿದವು.

'ಹೊತ್ತಾತು ಬಡಾಬಡಾ ತಯಾರಾಗ್ರಿ..' ಗೂನುಬೆನ್ನಿನ ಈರಜ್ಜ, ಹೊಗೆ ಉಗುಳುವಾಗೊಮ್ಮೊಮ್ಮೆ ಹೇಳುತ್ತಿದ್ದ ಇಳಿ ವಯಸ್ಸಿನ ಈರಜ್ಜಗೆ ತಂಡಿ ಮೈ ಹೊಕ್ಕಿತ್ತೇನೋ ಆಗಾಗ ಒಡಕು ಮುಸಿಗೆ 'ಮುಗ್ಗು ತಂಬಾಕ'ನ್ನು ಚಿಟಿಗೆ ಹೆಚ್ಚಿಗೆ ಒತ್ತುತ್ತಿದ್ದ. ಮುಸಿ ಒಡೆದಿತ್ತಾದರೂ ಅದರೊಳಗಿನ ಹೊಗೆ ಗಂಟಲು ಗುದ್ದಿ ಹೊರಬಂದಾಗ ಅವನ ಮಾತು ಚಂಡಿ ಹಿಡಿಯುತ್ತಿದ್ದವು.

ಕೊರವರ ಕೆಂಚವ್ವ ಮಕ್ಕಳನ್ನೆಬ್ಬಿಸಿ ಜ್ವಾಣಿ–ಜಪ್ಪಿ ಹೊರಗಿಡಿಸಿ, ಜಂಗು ಹಿಡಿದ ಬೋರು ಜಗ್ಗಿ ಸೆಗಣಿ ಹಿಡಿದಿದ್ದಳು. 'ಎವ್ವಾ ಬರಮವ್ವ ಮನಿಕಡೆ ಲಕ್ಷ ಇರ್‍ಲೆವಾ..' ಅನ್ನುತ್ತಿದ್ದಳು. ಅಗಸರ ಮರೆವ್ವ ವರ್ಷದ ತನ್ನ ಹಸುಗೂಸಿನ ಬಾಯಿಗೆ ಮೊಲೆತೊಟ್ಟಿಟ್ಟು 'ಎಪ್ಪಾ ದ್ಯಾವಪ್ಪ ನಾ ಹೊಳ್ಳಿ ಮಲೆವ್ವನ ಜಾತ್ರೆಗೆ ಬರ್‍ತೀನಿ.. ಅಲ್ಲಿತ್ನಕ ಹಟ್ಟಿ ಕಡೆ ಲಕ್ಷ್ಯ ಇರ್‍ಲೆಪಾ..' ಮಗನಿಗೆ ಹೇಳತೊಡಗಿದ್ದಳು.

ಒರಟು ರಂಗ, ಆ ಗುಡಿಸಲು ನೆರಕೆಗೆ ಅವಳಿಟ್ಟಿದ್ದ ಆ ಕೆಮ್ಮಣ್ಣು ಪಟ್ಟಿಯತ್ತ ಕಣ್ಣು ನೆಟ್ಟಿದ್ದ. ಗಳಿಗೆ–ಗಳಿಗೆಗೂ ಗುಡಿಸಲು ಖಾಲಿಯಾಗುತಲಿದ್ದವು. ಹಟ್ಟಿಯೊಳಗಿನ ಕುರಿಗಳು ತಿಂದ ಹುಲ್ಲನ್ನು ತಿರುಗಿಸಿ ದವಡೆಗೆ ತಂದು ಅಗೆಯಲಾರಂಭಿಸಿದ್ದವು. ಮರಿಗುರಿಗಳು ಕಟ್ಟಿಗೆಗೆ ಅಂಟಿದ ಮಡಿ ಎಲೆ ಗೀರುತ್ತಾ ತಾಸು ಮೊದಲೇ ಹಾಲುಂಡು ಚಿನ್ನಟ್ಟಿಗೆ ಎಬ್ಬಿಸಿದ್ದವು.

'ಏ ಮುದ್ಕೆ ನಾ ಹೊಕ್ಕೀನಿ ಮನಿಕಡೆ ಜ್ವಾಕಿ.. ಇರು ಒಂದ ಟಗರ ಮರಿನಾ ನಾಯ್ನರಿ ಬಾಯ್ಗೆ ಕೊಟ್ಟಗಿಟ್ಟಿ' ಮುಂಡಜ್ಜ ಹೇಳುತ್ತಾ.. ಜೀವಮ್ಮ ಕಟೆದು ಮಾಡಿದ್ದ ಮಜ್ಜಿಗೆಗೆ ಚಿಟಗಿ ಉಪ್ಪು ಬೆರಸಿ, ಸಿಲ್ವಾರ ತಾಟಿಗೆ ಬಾಗಿಸಿ, ಮೊಮ್ಮಗಳಾದ ಭೀಮವ್ವನೊಂದಿಗೆ ಸುಗ್ಗಿಗಾಡಿ ಏರತೊಡಗಿದ್ದ. ಆಗಲೇ ಐನ್ಯಾರ ಬಸಯ್ಯ ಸಜ್ಜಾಗಿ ಗಾಡಿಯಲಿ ಗಂಟಿಟ್ಟು ಕುಂಡಿ ಊರಿದ್ದ. ತಂಬಾಕಿನ ವಾಸನೆ ಅದೇಗೋ ಅವನ ಡೊಣ್ಣಿ ಮೂಗಿನ ಹೊಳ್ಳೆಗಳಿಗೆ ತಾಕಿ.. ಈರಜ್ಜನ ಮುಸಿಗೆ ತಾನೂ ಬಾಯಿಕೊಟ್ಟು ಒಂದೊಂದೇ ಜುರಿ ಜಗ್ಗುತ್ತಿದ್ದ.

ಒಡ್ಡರ ಪಿಡ್ಡಪ್ಪನೂ ಬಂದಿದ್ದ. ಉಟ್ಟ ಬಟ್ಟೆಯಲ್ಲೇ ಇದ್ದ ರಂಗ, 'ತಾನೇ ಗಾಡಿ ಮಾಲೀಕ' ಅನ್ನುವಂತೆ ಟೆಂಪೋದ ಕ್ಯಾಬೀನ್ ಮೇಲೇರಿ 'ದೌವ್ವ ಹತ್ತಿದ್ರ ಹತ್ರುಪಾಯಿ' ತರಲೇ ಮಾತು ಬೆಳೆಸಿದ್ದ. ಅವನ ಕಣ್ಣೆಲ್ಲಾ ಮಾಳಿಯ ಗುಡಿಸಲತ್ತಲೇ.. ರಂಗ, ಸುಗ್ಗಿಗೆ ಹೊರಟ ಸುಳಿವು ಸಿಕ್ಕು, ಆ ವಿಷ್ಯಾ ಪಾರಿಗೆ ಖಾತ್ರಿಯಾಗಿ ಗುಡಿಸಲೊಳಗೇ ತಡವರಿಸುತ್ತಿದ್ದಳು. ಕೆಂಚವ್ವಳ ಮಗ ದ್ಯಾಮ, ಊರ ಕುರಿ ಕಾಯೋ ಧರ್ಮ ಗಾಡಿ ಏರಿದ್ದರು.

ಊರ ಬೀದಿಗಂಬದ ಲೈಟುಗಳು ಅಲ್ಲಲ್ಲೇ ಹತ್ತಿ ಅವುಗಳಿಂದ ಬಿದ್ದ ನೆರಳು ಉದ್ದಗೇ ಬಿದ್ದಿತ್ತು. ತಿಳಿ ಬೆಳಕಿನ ಜಾಡು ಹಿಡಿದು ಬಂದ ಮುಂಡಜ್ಜ, ಗಾಡಿಯ ಹಿಂದಿನ ಸೀಟಿಗೆ ಒರಗಿದ್ದ. ಧರ್ಮ, 'ಎಜ್ಜಾ ಇನ್ನೂ ಎಷ್ಟ ದುಡಿತಿಯೋ.. ಅಮ್ಮ ದುಡಿಯಾದ ಬಿಡ್ಡಾವಲ್ಲನು..?' ಅನ್ನುತ್ತಲೇ 'ಏನ ಕೇಳ್ತಿಲೇ ಮುದ್ಕ ನನ್ನ ಪಾಡು.. ನಿನ್ನಾಟಿದ್ದಾಗಿಂದ ಹಿಂಗಾ ಸುಗ್ಗಿ ಹೊಂಟೀನಿ, ಇನ್ನೂ ಪರ್ಲ ಹರಿಯಾವಲ್ಲು' ಅನ್ನುತ್ತ ಮುಂಡಜ್ಜ ಮುಖ ಕೆಳ ಹಾಕಿದ್ದ. ಅಷ್ಟೊತ್ತಿಗೆ ಲಕ್ಕಪಕ್ಕ ಅನ್ನುತ್ತಿದ್ದ ಆ ಕಂಬದ ಲೈಟು ಬಂದಾಗಿತ್ತು. 'ಚೋಲೊ ಲೈಟ್ ಹಾಕ್ಸಷ್ಟ ತಾಕತ್ತಿಲ್ಲಂದ್ರ ಯಾಕ ಎಮ್ಮೆಲ್ಲಿ ಆಗ್ಬೇಕು.. ಎಮ್ಮೇಲಂತವಾ ಎಮ್ಮೇಲಿ' ರಂಗ, ಕಣ್ಣು ಉರಿಸುತ್ತಲೇ 'ಅವರ್ಯ್ಯಾಕ ಬೈತಿ.. ಸುಮ್ಕಿರಲೇ' ಎಂದು ಸದಾ ಎಮ್ಮೇಲಿ ಗುಂಪಿನವರ ಜೊತೆ ಇರುತ್ತಿದ್ದ ಬಸಯ್ಯ ಸಿಡುಕಿದ್ದ.

ಇತ್ತ, ಅಗಸಿ ಪಕ್ಕದ ಮಾಳಿಯ ಗುಡಿಸಲಲಿ ತುಸು ಜೋರಾದ ಶಬ್ದ ಹೊರಟಿತ್ತು. ಗುಡಿಸಲಿನಿಂದ ಪರ್ಲಾಂಗ ದೂರದ ಅಲ್ಲಾಸಾಬಜ್ಜನಗುಡಿ ಕಟ್ಟಿಗೆ ಕೂತಿದ್ದ ರಂಗ,

ಮಾಳಿಯ ಗುಡಿಸಲತ್ತ ಕತ್ತು ತಿರುವಿಯೇ ಒಡ್ಡರ ಪಿಡ್ಡಪ್ಪನೊಂದಿಗೆ ಮಾತಿಗಿಳಿದಿದ್ದ. ವಯಸ್ಸಿನಲ್ಲಿ ತನಗಿಂತ ಹಿರಿಯವನಾದರೂ ಪಿಡ್ಡಪ್ಪ ಹೊಂದಿಕೊಳ್ಳುತ್ತಿದ್ದುದರಿಂದ ರಂಗ, ಹೆಚ್ಚಾಗಿ ತನ್ನ ಓರಗೆಯವರ ಜೊತೆಗಿರದೇ ಪಿಡ್ಡಪ್ಪನೊಂದಿಗೆಯೇ ಇರುತ್ತಿದ್ದ. ರಂಗನ ಪ್ರತಿ ಮಾತಿಗೆ ಪಿಡ್ಡಪ್ಪ ತಲೆ ಹಾಕುತಿದ್ದುದು ಕೂಡ ರಂಗ ಆತನ ಜೊತೆಗಿರಲು ಕಾರಣವಾಗಿತ್ತು. ಬೋಳೆ ಸ್ವಭಾವದ ಪಿಡ್ಡಪ್ಪಗೆ ಊರುಜನ 'ಬಾಯಿ ಸತ್ತಾವ' ಅಂತಲೇ ಕರೆಯುತ್ತಿದ್ದರು. ಪಿಡ್ಡಮ್ಮ ಹಾಗನಿಸುವಂತೆ ಕಂಡರೂ, ರಂಗ ಭೇಟಿಯಾದರೆ ಜನರ ಮಾತೆಲ್ಲಾ ಸುಳ್ಳು ಸುಳ್ಳು ಅನ್ನುವಂತೆ ಮಾತಾಡುತ್ತಿದ್ದ.

ಆಗಲೇ ಹೊತ್ತಾಗಿದ್ದರಿಂದ ಮಾಳಿ, ವಾರಮೊದಲೇ ಹುಡುಕಿ ತೊಳೆದಿಟ್ಟಿದ್ದ ಹಳೆಯ ಚೀಲಕ್ಕೆ ಸಾಮಾನು-ಸಟ್ರು ತುಂಬುತ್ತಿದ್ದಳು. ಅವಳ ಮಗ ಯಂಕ, ಕುರಿಗೆ ನೀರು ತೋರಿಸುತ್ತಿದ್ದ. 'ಕೆಟ್ಟನಾ ಎವ್ವಾ.. ಬರ್ಬಾಡ' ತನ್ನವ್ವಳ ಮಾತಿಗೆ ಪಾರಿ ಮುಖ ತಿರುವತೊಡಗಿದ್ದಳು. ಊರಲ್ಲಿ ಯಾವ ಕೆಲಸಗಳೂ ಇಲ್ಲ ಎಂಬುದು ಮಾಳಿಗೆ ಗೊತ್ತಿತ್ತು. ಹರೆಯಕ್ಕೆ ಬಂದವಳನ್ನು ಹೊರಗಡೆ ಹೇಗೆ ಕರೆದುಕೊಂಡು ಹೋಗುವುದೆಂಬ ಚಿಂತೆಯೂ ಆಕೆಯದು. ಆದರೆ, ಹೊಟ್ಟೆ ಹೊರಲು ದುಡಿಯಲೇ ಬೇಕಿತ್ತು. ಮತ್ತಿನ್ನೇನೋ ಯೋಚಿಸಿ, 'ಸಜ್ಜಾಗೆವ್ವಾ' ಅಂದಳು. ತನ್ನವ್ವ ಅಷ್ಟನ್ನುತ್ತಲೇ, ಪಾರಿಗೆ ಮುಗಿಲು ಮೂರುಗೇಣು, ತಡಮಾಡದೇ ಸಜ್ಜಾಗಿ, ಗುಡಿಸಲು ನೆರಕೆಗೆ ಕಣ್ಣಿಟ್ಟು, ಚೀಲ ಎತ್ತಿಕೊಂಡಿದ್ದಳು. ಇತ್ತಲೇ ಕಣ್ಣು ಹಾಯಿಸಿ ಕೂತಿದ್ದ ರಂಗನಿಗೆ, ಪಾರಿಯ ಹೊಸ ಕೆಂಪು ದಡಿಯ ಲಂಗ ಕಾಣುತ್ತಲೇ ಖುಷಿಗೊಂಡಿದ್ದ. ಪಿಡ್ಡಪ್ಪನೊಂದಿಗಿನ ಅವನ ಮಾತು ಮತ್ತಾಗ ಬದಲಾದ ದಾಟಿ ಹಿಡಿದಿದ್ದವು.

ಹಾಗೂ-ಹೀಗೂ ಮನೆಮನೆಗೊಬ್ಬರು, ಇಬ್ಬರು ದಿಬ್ಬಣಕ್ಕೆ ಹೊರಟಂತೆ.. ಬಂಗಾಳಿ-ಬಾರದನ್ ಚೀಲಗಳ ಹೊತ್ತು ಮತ್ತೆ ಬರುವುದಿಲ್ಲವೇನೋ ಅನ್ನುವಂತೆ ಗಾಡಿ ಏರುತ್ತಲೇ ಇದ್ದರು. ಮರೆವ್ವ, ತನ್ನ ಹಸುಗೂಸಿನೊಂದಿಗೆ ನಡುವಿನ ಸೀಟಿಗೆ ಒರಗಿದ್ದಳು. ಕೆಂಚವ್ವಳ ಸಣ್ಣ ಮಗ ದ್ಯಾಮ, ಊರ ಕುರಿಕಾಯೋ ಧರ್ಮ ಟೆಂಪೋದ ಮುಂದಿನ ಸೀಟ್‌ಗಳನ್ನು ರಿಸರ್ವೇಶನ್ ಮಾಡಿಸಿದ್ದರು. ಮೊಮ್ಮಗಳೊಂದಿಗೆ ಪುಂಡಜ್ಜ ಹಿಂದೆ ಕುಳಿತಿದ್ದ. ರಂಗ ಜಬಾದಿ, ಹಿಂದೆ ಕುಳಿತ ಪಾರಿಯ ಮುಖ ಸ್ಪಷ್ಟವಾಗಿ ಕಾಣುವಂತೆ, ಬರೋಬ್ಬರಿ ಡ್ರೈವರ್ ಪಕ್ಕದ ಸೀಟ್‌ಗೆ ಕೂತಿದ್ದ. ಅಲ್ಲಿ ಕುಳಿತರೇ ಡ್ರೈವರ್ ತಲೆ ಮೇಲಿನ ಕಣ್ಣಡಿಯಲ್ಲಿ ಅವಳ ಮುಖ ಕಾಣುತ್ತಿತ್ತು. ರಂಗ, ಹಿಂದೆ ಕುಳಿತ ಪಾರಿಗೆ ಸಿಗ್ನಲ್ ಕೊಡಲೆಂದು, 'ಯೋ ಪಿಡ್ಡಪ್ಪ, ನಿನಗಂತ ಕಣ್ಣೂಡಿ ಹಾಕ್ಸಿಸೀನಿ, ನೋಡೊ' ಎಂದು ಹೋಗಳುಗಣ್ಣೇಲೇ ಹೇಳುತ್ತಿದ್ದ. ಬರೀ ಕುರಿ, ದನ ಕಾದಿದ್ದ ಧರ್ಮಗೆ ಗಾಡಿಯಲಿ ಹೋಗುವ ತುಡಿತ, 'ಬಿಡ್ರಿ ಬಿಡ್ರಿ ಎಲ್ಲಾರೂ ಬಂದ್ರು' ಅನ್ನುತ್ತಲೇ ಇದ್ದ.

ಊರ ಗುಡ್ಡದ ತುದಿ ಆಗಲೇ ಕೆಂಪೇರಿತ್ತು. 'ತಯಾರಾಗುತ್ಲೆ ಏಳು ಹನ್ನೊಂದು ಮಾಡಿದ್ರೆಲ್ಲಾ' ಗಾಡಿ ಹುಡುಗ ರೇಗಿದ್ದ. 'ತನಗಾವುದೂ ಸಂಬಂಧವಿಲ್ಲ' ಅನ್ನುವಂತೆ ಗಾಡಿ ಚೆಲುವು ಮಾಡಿ, ಬ್ರೇಕ್ ತುಳಿದು ಎಕ್ಸ್‌ಲೇಟರ್ ಕೊಟ್ಟು ಒದರಿಸತೊಡಗಿದ. ಆ ಗಾಡಿ ಸಪ್ಪಳಕೆ ಹಟ್ಟಿಯೊಳಗಿನ ಕುರಿ-ಕರು ಎದ್ದು ಕಣ್ಣಿಟ್ಟವು.

ಸುಗ್ಗಿ ಗಾಡಿ ಹೊರಡುತ್ತಲೇ ಆಕಳಿಸುತ್ತ ಎದ್ದು ಬಂದ ಜೂಲಗುಡ್ಡದ ಹನುಮಮ್ಮ, ಐನ್ಯಾರ ಬಸಮ್ಮ, ಶೆಟ್ರ ರುದ್ರಪ್ಪ 'ಜ್ವಾಕಿದಿಂದ ಹೋಗಿ ಬರ್ರೆಪೋ, ದವ್ನ ಹೊಳ್ರಿ' ಅಂದರು. 'ಅಷ್ಟ ಮಾಡ್ತಿವೆಮ್ಮಾ' ಮಾಳಿ, ಮರೆವ್ವ ದನಿಗೂಡಿಸಿದರು. ಗಾಡಿ ಹೊರಡಲು ಸಜ್ಜಾಗಿತ್ತು. ಮರೆವ್ವಳ ಮಗ ದ್ಯಾವ, ಮಾಳಿ ಮಗ ಯಂಕ, ಕೆಂಚವ್ವಳ ಮಗಳು ಬರ್ಮಿ ಗಾಡಿ ಸುತ್ತ ಸೋತ ಮುಖ ಹಾಕಿ ನಿಂತದ್ದನ್ನು ಕಂಡು ಮರೆವ್ವ, ಕೆಂಚವ್ವ ಕಣ್ಣಲ್ಲಿ ನೀರು ತಂದುಕೊಂಡರು. ಗಾಡಿ ಸುತ್ತ ನಾಯಿಗಳೂ ತಿರುಗತೊಡಗಿದ್ದವು. ಗಾಡಿ ಹೊರಡುತ್ತಲೇ ರಂಗ 'ಪುಂಡಪ್ಪಜ್ಜ ಅಮ್ಗ ಟಾಟಾ ಮಾಡೋ' ಅಂತ ಹೇಳಿ ನಗೆಯಾಡಿಸಿದ.

ಊರ ಮರೆತಂತೆ ಗಾಡಿ ಧೂಳೆಬ್ಬಿಸಿ ಹೊರಡುತ್ತಲೇ.. ನಿತ್ಯ ಆ ಎದೆಗಳಿಗೆ ರಾತ್ರಿಯಿಡೀ ಮುಖಮಾಡಿ ಮಲಗುತ್ತಿದ್ದ ಆ ಮಕ್ಕಳು, ಗಾಡಿ ಹೋದ ದಿಕ್ಕಿಗೆ ಉಸಿರು ನೆಟ್ಟು ನಿಲ್ಲತೊಡಗಿದವು. ಆಗಷ್ಟೇ ಉರಿಯಲು ಆರಂಭಿಸಿದ್ದ ಆತ, ನೀರುಣ್ಣುತ್ತಲೇ ಇದ್ದ ಆ ಎಳೆಯ ಕಂಗಳ ನೋಡಿ ಗುಡ್ಡದ ಕಲ್ಲು ಸಂದಿಗೆ ಮರೆಯಾಗಿ, ಕಣ್ಣೀರು ಹಾಕುತ್ತಿದ್ದಾನೋ ಏನೋ ಅನ್ನುವಂತೆ ಬೆಳಕು ಬದಲಾದ ದಾಟಿ ಹಿಡಿದಿತ್ತು.

ವಿಚಿತ್ರವೋ! ಹೊರಟ ಗಾಡಿ ಹಿಂದಲೇ ಊರ ನಾಯಿ ಜೊಲ್ಲು ಸುರಿಸುತ್ತಾ ಓಡತೊಡಗಿದ್ದವು. 'ಹಚ್ಚ್ಯಾ ಹಚ್ಚಾ. ನಿಮ ಹಾರಿ ಗೆಡುವ್ಯಾ..' ರಂಗ ಬೈಯುತ್ತಲೇ 'ಅವ್ಕ್ಯಾಕ ಬೈತಿಲೇ ಅರಬ, ನಾಯಂದ್ರ ಏನಂತ ತಿಳ್ಕೊಂಡಿ ಮಳ್ಳ' ಪುಂಡಜ್ಜ ಹೇಳಿದ. 'ನೋಡಾ ಎವ್ವಾ, ಎಷ್ಟೊತ್ತಾತು ನಾಯಿ ನಮ್ಮಿಂದ ಬರಕತ್ಯಾವು' ಮಾಳಿ ಹೇಳಿದಳು. ನಾಯಿ, ನಂಬಿಗಸ್ಥ ಪ್ರಾಣಿ ಎಂಬುದು ಅವಳ ಮಾತಿನಲ್ಲಿ ವ್ಯಕ್ತವಾಗುತ್ತಿತ್ತು.

ಗಾಡಿಯಾಂವ, ಜೋರಾಗಿ ಒದರಿಸುತ್ತಲೇ ತೇಕುತ್ತಲೇ ಓಡಿ ಬರತೊಡಗಿದ್ದ ನಾಯಿಗಳ ಹೆಜ್ಜೆ ಕಾಣದಾದವು. ಕೆಂಚವ್ವ ಅದ್ಯಾಕೋ ನಿಟ್ಟುಸಿರಿಟ್ಟಳು.

❖

ಚುಮುಚುಮು ಬೆಳಕಿನಲ್ಲಿ ಊರು ಬಿಟ್ಟಿದ್ದ ಗಾಡಿ, ಸಮೀಪದ ಹುಬ್ಬಳ್ಳಿ ಸೇರಿತ್ತು. ನಿತ್ಯವೂ ಅರೇ ನಿದ್ರೆಯಲ್ಲಿರುವ ನಗರ, ಆಗಲೇ ಎದ್ದು ಕೆಲಸದ ಗಡಿಬಿಡಿಯಲ್ಲಿರುವಂತಿತ್ತು. ಗಂಟೆ, ಬೆಳಗಿನ ಎಂಟಾಗಿತ್ತು.

ಕೆಲವರು ಇದೆ ಮೊದಲು ಊರು ಬಿಟ್ಟಿದ್ದರು. ಪಟ್ಟಣದ ತುಂಬಿದ ರಸ್ತೆಗಳು, ಚಿತ್ರವಿಚಿತ್ರವಾಗಿ ತಿರುಗುವ ಗಾಡಿಗಳು, ಜನಜಂಗುಳಿ, ಅಂಗಡಿಗಳು.. ಅವರಲ್ಲಿ ಆವದೋ ಭಾವನೆ ಹೊರಡಿಸಿದ್ದವು.

ಆಗಾಗ ಪಟ್ಟಣಕ್ಕೆ ಬರುತ್ತಿದ್ದ ರಂಗನಿಗೆ ಇದ್ಯಾವುದೂ ಹೊಸತಾಗಿರಲಿಲ್ಲ. ಒಡ್ಡರ ಪಿಡ್ಡಪ್ಪಗೆ ಅದನ್ನಿದನ್ನು ತೋರಿಸುತ್ತಿದ್ದ. ಅಷ್ಟೊತ್ತಿನಿಂದ ಕಣ್ಣು ಪಿಳುಕಿಸದೆ ಕೂತಿದ್ದ ದ್ಯಾಮ, ಧರ್ಮ ಅಲ್ಲಲ್ಲೆ ಕಾಣುವ ಹೂ.. ಹಣ್ಣಂಗಡಿ.. ಜಗಮಗಿಸುವ ಬಟ್ಟೆಯಂಗಡಿಯತ್ತ ಮುಖ ತಿರುವಿದ್ದರು.

ದಿನವಿಡೀ ದನದ ಉಚ್ಚೆ, ಸೆಗಣಿ, ರಾಡಿ ನೀರಿನ ವಾಸನೆ ಕುಡಿಯುತ್ತಿದ್ದ ಪಾರಿ, ನೀಟಾಗಿ ಬಟ್ಟೆ ಧರಿಸಿ ತುಟಿದೆರೆಯದೇ ಮಾತಿಗಿಳಿದಿದ್ದ ಪಟ್ಟಣದ ಥಳುಕು–ಬಳುಕಿನ ಆ ಒಂಟಿ ಹುಡುಗಿಯರತ್ತಲೇ ಕಣ್ಣು ಹಾಯಿಸಿದ್ದಳು. ಸುಳಿವ ಗಾಳಿಯಂತೆ, ಆಗಾಗ ಅವರ ಮೈಯಿಂದೇಳುತ್ತಿದ್ದ ಆ ವಾಸನೆ ಹೀರುತ್ತಾ.. ಯಾವದೋ ಕನಸು ಕಾಣುತಲಿದ್ದಳು.

ಪುಂಡಜ್ಜನ ಮೊಮ್ಮಗಳು ಕಕ್ಕಾಬಿಕ್ಕಿಯಾಗಿತ್ತು. ನೀಟಾಗಿ ಬಟ್ಟೆಯುಟ್ಟು, ಬಣ್ಣಬಣ್ಣದ ಎರಡು ಹಾಳೆ, ವಯರ್ ಹಿಡಿದು, ಅವುಗಳಿಂದಲೇ ನಾದ ಹೊರಡಿಸುವ ಆ ಸಿಟಿ ಹುಡುಗರು.. ಮೈಗೆ ಬಿಗಿಯಾದ ಬಟ್ಟೆ ತೊಟ್ಟು, ಅವನ್ನು ಕೈಯಲ್ಲಿಡಿದು ಬಜಾರ್‌ದಲ್ಲೆ ಮೈ ಅಲ್ಲಾಡಿಸುತ್ತಾ ಹಾಡುತ್ತಿದ್ದ ಆ ಹುಡುಗಿಯರು. ಕೂಗುವ ಮಶೀನ್. ಮಾತಾಡುವ ಬೊಂಬೆ. ಆ ಬಿಳಿ ಬುಡ್ಡಿ ಒತ್ತಿದರೆ ಸಾಕು ಎಲ್ಲಾ ಮಾಹಿತಿ ನೀಡುವ ಅವು. ಎಲ್ಲವನ್ನು ಒಡ್ಡರ ಪಿಡ್ಡಪ್ಪ, ಐನ್ಯಾರ ಬಸಯ್ಯ, ಈರಜ್ಜ ಬೆಕ್ಕಸಬೆರಗಾಗಿ ನೋಡತೊಡಗಿದ್ದರು.

ತುಸು ಚೆಂದಾಗಿದ್ದ ಜನಜಂಗುಳಿ ತುಂಬಿದ್ದ ಅವನ್ನು 'ದೇವರ ಗುಡಿ'ಯೆಂದು ಭಾವಿಸಿ, ದೊಡ್ಡ ದೊಡ್ಡ ಹೋಟೆಲ್, ಬಾರ್‌ಗಳಿಗೆ ಕೆಂಚವ್ವ ಕೈ ಮುಗಿಯತೊಡಗಿದ್ದಳು. ಅದನ್ನು ಕುಡಿದು ದಪ್ಪಾಗುವುದನ್ನು ಎಲ್ಲೋ ಟಿವಿಯಲ್ಲಿ ನೋಡಿದ್ದ, ಕೇಳಿದ್ದ ಅಗಸರ ಮರೆವ್ವ ಅಂತದ್ದನ್ನೇ ತರಸಿ ವರ್ಷದ ಮಗಳು ರಾಧಿಕಾಳ ಬಾಯಿಗೆ ಹಿಂಡಿದ್ದಿಳು. ಮಾಳಿ, ಯಾಕೋ ಮುಖ ಕಿವುಚಿ, ಮೂಗು ಮುಚ್ಚಿಕೊಂಡಿದ್ದಳು.

ಹುಬ್ಬಳ್ಳಿಯ ಚೆನ್ನಮ್ಮ ವಿಶಾಲ ವೃತ್ತದಲ್ಲಿ ಕುದುರೆ ಮೇಲೇರಿ ಖಡ್ಗ ಹಿಡಿದು ಕುಳಿತ ಕಿತ್ತೂರ ಚೆನ್ನಮ್ಮಳ ಪುತ್ಥಳಿ ನೋಡಿದ ಸುಗ್ಗಿ ಹುಡುಗರು 'ಅಲ್ನೋಡು ಕುದುರಿ ಎಷ್ಟ ದೊಡ್ಡದೈತಿ.. ಕೈಯಾಗ ಕತ್ತಿ ನೋಡು' ಅನ್ನುತ್ತ ಚಕಿತಗೊಂಡಿದ್ದವು.

ನಾಕಾಣೆ–ಎಂಟಾಣೆಗಾಗಿ ಅರಳು ಹುರಿದಂತೆ ಮಾತಾಡುತ್ತಾ ಚಕಚಕ ಕೈ ಬಳಸುತ್ತಾ, ಕೈಯಲ್ಲಿ ಪುಂಗಿ ಹಿಡಿದು ಕೂಗುತ್ತಾ, ಹೊಟ್ಟೆ ಹುಣ್ಣಾಗುವಂತೆ ಎಲ್ಲರನು ನಗಿಸುತ್ತಾ.. ಆ ಆಟ ಆಡುವ ಅವರನ್ನು ತಾನು ಆಗಾಗ ಪಟ್ಟಣಕ್ಕೆ ಬಂದಾಗ

ನೋಡುತ್ತಿದ್ದ ಪುಂಡಜ್ಜಗೆ ಅವರನ್ನು ಮತ್ತೊಮ್ಮೆ ನೋಡುವ ಆಸೆಯಾಗಿ ಗಾಡಿಯೊಳಗೇ ಕೂತು ಹುಡುಕುತ್ತಲೇ ಇದ್ದ, ಜೋತರ ಚುಂಗಿನಲ್ಲಿನ ಎಂಟಾಣೆ ಕೈಯಲ್ಲಿ ಹಿಡಿದು ಅವರು ಕಾಣದೇ ನಿದ್ರೆಗೆ ಜಾರಿದ್ದ.

ಎಲ್ಲವೂ ನಡೆಯುತ್ತಲೇ ಯಾವದೋ ಬಣ್ಣದ ಬಸ್ಸು ಬರ್‍ರನೆ ಬಂದು ನಿಂತಿತ್ತು. ಆ ಬಸ್ಸು ಏರಿ ಹೊರಟ ಸುಗ್ಗಿ ಜನರ ಮೊಗದಲ್ಲಿ ಅದೆಂತದ್ದೋ ಖುಷಿ. ಬಸ್ಸು ಕಡಲನಗರಿಯತ್ತ ಮುಖ ಹೊರಳಿಸಿತ್ತು.

❖

ಹೀಗೆ.. ಹುಬ್ಬಳ್ಳಿಗೆ ಬಂದ ಆ ಸುಗ್ಗಿಜನರು, ಚೆನ್ನಮ್ಮ ಸರ್ಕಲ್ ಹತ್ತಿರದ ಹಳೆಯ ಬಸ್ ನಿಲ್ದಾಣದಿಂದ ಮಂಗಳೂರು ಕಡೆಯ ಬಸ್ ಹತ್ತಿದಾಗ ಸಮಯ ಬರೋಬ್ಬರಿ ಸಂಜೆ ೫.೩೫.

ಪಟ್ಟಣದ ಸಾಲು ಅಂಗಡಿ ದೀಪ ಹೊತ್ತಿಕೊಂಡಿದ್ದವು. ನಿತ್ಯ ಬಯಲು ಸೀಮೆಯ ಖಾಲಿ ನೆಲ ತುಳಿಯುತ್ತಿದ್ದ ಆ ಜನಗಳಿಗೆ ರಸ್ತೆ ಪಕ್ಕದ ಗಿಡ–ಗಂಟಿಗಳು ಮನುಷ್ಯರಂತೆ ಭಾಸವಾಗಿದ್ದವು. ಗಿಡದ ಎಲೆಸಂದಿಗೆ ಕಾಣುವ ಲೈಟ್ ಏನನ್ನೋ ನೆನಪಿಸುತ್ತಿದ್ದವು. ಕೊಡಗಾತ್ರದ ಲೈಟು ಹೊತ್ತಿಸಿ ಬರುವ ಆ ಬಸ್ಸುಗಳು ಕಣ್ಣು ಕುಕ್ಕಿ ಮರೆಯಾಗುತ್ತಿದ್ದವು.

ದೂರದಲ್ಲಿ ಕಾಣುವ ಆ ಬೆಂಕಿಗಾತ್ರದ ಬೆಳಕನ್ನು ಪುಂಡಜ್ಜ ಹುಳುಗಣ್ಣುಮಾಡಿ ನೋಡುತ್ತಿದ್ದ. ಮಾಳಿ, ಕೆಂಚವ್ವ, ಈರಜ್ಜ ಆಗಲೇ ಪಿಚಕ್–ಪಿಚಕ್ ಉಗುಳತೊಡಗಿದ್ದರು. ಆತನಿಗೆ ನೋಟು ನೀಡಿ, ಪುಡಿಗಾಸನ್ನು ನಡದ ಸಂದಿಗೆ ಇಳಿಸಿ, ಸಿಟಿಗೆ ತಲೆ ಇಟ್ಟಿದ್ದರು. ಪಿಡ್ಡಪ್ಪನೂ ಎಲೆ ಅಡಿಕೆ ಜಗಿಯತೊಡಗಿದ್ದ. ಆಗಾಗ ವೇಗ ಬದಲಿಸಿಕೊಳ್ಳುತ್ತಲೇ ಬಂದ ಬಸ್ಸು ಆಗಲೇ ಬಣ್ಣದ ಆ ಕಟ್ಟಡದ ಪಕ್ಕ ನಿಂತಿತ್ತು.

ಪಕ್ಕದಲ್ಲಿದ್ದ ಅವರು ಚೀಲ ಹಾಕಿ ಇಳಿದರು. 'ದಾಬಾ ಬಂತ ಏನರ ತಿಂತಿರನು' ರಂಗನ ಮಾತಿಗೆ, 'ಈಗರ ತಿಂದ್ಬಂದಿ ಇನ್ನೂ ಸಾಕಾಗಿಲ್ಲನು.. ನೀನ ತಿನ್ನು.. ಏಟ ತಿಂದ್ರು ನಿನ್ಗ ಸಾಕಾಗುಲ್ಲಾ..' ಮಾಳಿ ಹೇಳಿದ್ದಳು. 'ನಿನ್ನ ಮಗಳ್ನ ತಿಂತೀನಿ' ರಂಗ, ಪಾರಿಕಡೆ ತಿರುಗಿ ಹೇಳಿದ್ದ. ಪಾರಿ ತುಟಿ ಅಗಲಿಸಿದ್ದಳು. ರಂಗ, ಪಿಡ್ಡಪ್ಪನೊಂದಿಗೆ ಕೆಳಗಿಳಿದಿದ್ದ.

ದ್ಯಾಮ, ಧರ್ಮ ಕೆಳಗಿಳಿದು ಉಚ್ಚೆ ಬಿಡತೊಡಗಿದ್ದರು.

ಆ ಕಟ್ಟಡದ ನೀಲಿ ಬಣ್ಣದ ಲೈಟಿಗುಂಟ ಹರಿದ ಪಾರಿಯ ನೋಟ ಪಕ್ಕದಲ್ಲೇ ನಿಂತಿದ್ದ ಆ ಬಸ್ಸಿನತ್ತ ಹರಿದಿತ್ತು. ಕಿಡಕಿಯಿಂದ ಅದು ಕಾಣುತ್ತಲೇ ಭಯಗೊಂಡಳು. ಅವನೆದೆಗೆ ಆತು ಕೂತ ಅವಳನ್ನು ಕಂಡು ಆಕರ್ಷಿತಳಾದಳು. ಬಾಳೂರ ಗೌಡರ ಮನೆಯಲ್ಲಿ ನೋಡಿದ ಸಿನಿಮಾದ ದೃಶ್ಯ ಎದುರಾಗಿದ್ದವು ಅವಳ ಕಂಗಳಿಗೆ.

ಬಸ್ ಮತ್ತೆ ಹೊರಟಿತ್ತು. ಸಬ್ಬ ಸವಾ ರಾತ್ರಿ ಕಿಡಕಿಯಿಂದ ತಂಗಾಳಿ ತೂರಿಬರುತಲಿತ್ತು. ತುಸು ಜೋರಾಗಿಯೇ ಹೊರಟಿದ್ದ ಬಸ್ ದಾರಿಯನ್ನು ಅಷ್ಟಷ್ಟೇ ಸೀಳುತ್ತಿತ್ತು. ಹೀಗೆಯೇ ಮೌನ ಹೊದ್ದ ಕತ್ತಲಲಿ ಹೊರಟಿದ್ದ ಬಸ್‌ನಲಿ ರಂಗ-ಪಾರಿ ಅವರದು ಮೌನ ಪ್ರೇಮದಾಟ.

ರಂಗ ಪಾರಿಯ ಹಿಂದುಗಡೆ ಸೀಟಿಗೆ ಕುಳಿತಿದ್ದ. ಮುಂದೆ ಕುಳಿತಿದ್ದ ಪಾರಿ ಕಿಡಕಿಯತ್ತ ಮುಖ ಚಾಚುತ್ತಲೇ ಅವಳ ಅರ್ಧ ಮೂಗು, ಮುಖ ಕಂಡು ತಡಬಡಿಸುತ್ತಿದ್ದ. ತುಸು ಧೈರ್ಯ ತಂದುಕೊಂಡು ಅವಳ ಕೈ ಬೆರಳ ಮುಖವಿಟ್ಟಿದ್ದ. ಪಾರಿ ನಸುನಗುತ್ತಲೇ ಅವನ ತಲೆಗೂದಲು ಸ್ಪರ್ಶಕೆ ರೆಪ್ಪೆ ಮಡಚಿದಳು.

ಸುಗ್ಗಿ ಆಗಷ್ಟೇ ಮುಗಿದಿತ್ತು. ಅರೆ-ಬರೇ ಹಸಿರಿನಿಂದಾಗಿ ತಿಳಿಗಾಳಿ ಬೀಸುತ್ತಿತ್ತು. ಆ ತಂಡಿಗೆ ಮರೆವ್ವಳ ಮಗಳು ಅಳುತ್ತಿತ್ತು. 'ಏನರ ಹೊಚ್ಚ ಬೇ' ಮುಂಡಜ್ಜ ಹೇಳುತ್ತಿದ್ದ.

ಹೀಗೆ ಅವರ ಪ್ರಯಾಣ ಸಾಗಿತ್ತು.

ಬಸ್ಸಿನ ವೇಗ ಕಡಿಮೆಯಾಗಿತ್ತು. ಸುತ್ತಲೂ ಮತ್ತೆ ದೊಡ್ಡ ದೊಡ್ಡ ನಿಯಾನ್ ದೀಪಗಳು. ಅಷ್ಟೊತ್ತಿನಿಂದ ಒರಟು ನೆಲದೂಡುತ್ತಾ, ತಗ್ಗು-ದಿನ್ನೆ ತುಳಿಯುತ್ತ ಹೊರಟಿದ್ದ ಬಸ್ಸು, ಸಾಪು ರೋಡಿಗೆ ಹೊಂದಿಕೊಂಡು ಹಿಂಡು ಬಸ್ಸಲ್ಲಿ ಬಂದು ಕುಂಡಿ ಊರಿತ್ತು. ಬಸ್ಸು ಅಲ್ಲಿಗೆ ಬರುತ್ತಲೇ ಬಾಳೊತ್ತಿನಿಂದ ಕಿಡಕಿಯಲ್ಲಿಯೇ ಮುಖವಿಟ್ಟಿದ್ದ ಕೆಂಚವ್ವಳ ಮಗ ದ್ಯಾಮ, ನಿಯಾನ್ ಬೆಳಕಿನಲ್ಲಿ ಮಸಕು ಮಸಕಾಗಿ ಕಾಣುತ್ತಿದ್ದ. ಒಂದೊಂದೇ ಅಕ್ಷರ ಗುರುತು ಹಿಡಿಯುತ್ತಾ.. 'ಮ..ಮ..ಮಗಳೂ..ರು. ಹಾ ಮಂಗ್ಳೂರು' ಬಂತು ಅನ್ನುತ್ತಲೇ.. ಮಲಗಿದ್ದ ಸುಗ್ಗಿ ಜನ ಅವಸರವಾಗಿ ಎದ್ದರು.

ಬಸ್ ಮೇಲಿನ ಸಾಮಾನು ಇಳಿಸಿದರು. ಪಿಡ್ಡಪ್ಪನ ಕ್ವಾರಿ ಮೀಸೆ ಕಂಡ ಹುಡುಗರು ಹಲ್ಲು ಕಿರಿದರು. ಕಡಲೇ ಕಾಳು ಮಾರುವ ಹುಡುಗ ನೀಡಿದ ಎಂಟಾನೆಯ ಬಿಸಿಬಿಸಿ ಚಾ ಹೀರಿ ಹೊರಟರು.

❖

'ಬಂದ್ರಂತೂ ಬಂದ್ವೆಪಾ ಕೆಲ್ಸ ಅಥವಾ ಇಲ್ಲಾ' ಈರಜ್ಜ ಹೇಳಿದ. 'ಎಜ್ಜಾ ಅವ್ರ ಬಾ ಅಂದಲ್ಲೆ ಹೋಗನಡಿ ಆ ಮ್ಯಾಲೆ ನೋಡಾಕ ಬರುತ್ತಾ' ರಂಗ ಹೇಳಿದ. 'ಕೆಲ್ಸ ಅದಾವ ನಡ್ರಿ' ಬಸ್ ನಿಲ್ದಾಣದಲಿ ಗಂಟು-ಮೂಟೆ ಹೊತ್ತು ನಿಂತ ಜನರನ್ನು ಕಂಡಿದ್ದ ಮಾಳಿ, ಗಂಟು ಮತ್ತು ಕೂಲಿಯನ್ನು ತಾಳೆ ಹಾಕಿದಂತೆ ಹೇಳಿದಳು.

ಅವರ ಸುತ್ತಲೂ ಬಣ್ಣಬಣ್ಣದ ಕಟ್ಟಡಗಳು.. ಮುಗಿಲೆತ್ತರ ಬೆಳೆದ ಆ ಗಿಡಗಳು.. ಸೀದಾ ಅಲ್ಲಿಗೆ ಬಂದ ಅವರು ತಮ್ಮ ತಲೆಮಾರಿನ ಗುರುತುಗಳಂತಿರುವ ಅವನ್ನು ಆ ಹಳೆಯ ಸೆಡ್ಡಿನಲ್ಲಿ ಹೊಂದಿಸಿಟ್ಟು ಕೂತರು.

ಅಲ್ಲಿ.. ದೂರದೂರಕೆ ಬಾಯ್‌ಬಡಗ–ಕುಡಗೋಲು ಹಿಡಿದ ಜನ.. ಮಣ್ಣು ಹಾಕುವವರು.. ನೀರು ಹೊರುವವರು.. ಕೆಲಸ ಮಾಡಿಸುವ ಅವರು.. ಎಲ್ಲ ಕಂಡು ನೆಲದೂರ ಸುಗ್ಗಿಜನ 'ಕೆಲ್ಸ್ ಇರ್ಬೇಕು' ಮನದಲ್ಲೇ ಅಂದುಕೊಂಡಿದ್ದರು.

ಬೆಳ್ಳಂಬೆಳಗ್ಗೆ ಗರಗರ ಸದ್ದು ಎಬ್ಬಿಸಿದ್ದ ತೆಂಗಿನಗಿಡಗಳತ್ತ ಭೀಮಿ, ಧರ್ಮ ಗಂಟು ಹೊತ್ತೇ ಕಣ್ಣಿಟ್ಟಿದ್ದರು. ಪಕ್ಕದ ಊರಾತ ಹೇಳಿದ ಸೆಡ್ಡಿಗೆ ಬಂದು ಸೇರಿಕೊಂಡರು.

ಸೆಡ್ಡಿಗೆ ಬರುತ್ತಲೇ ಅಲ್ಲಿಯೇ ಕೂತಿದ್ದ ಮುದುಕನೊಂದಿಗೆ ಈರಜ್ಜ ಮಾತು ಬೆಳೆಸಿದ್ದ. 'ಕೆಲ್ಸ ಅದಾವನಪಾ ಎಜ್ಜಾ' ಅನ್ನುವ ಮಾತಿಗೆ ಮುದುಕನೊಬ್ಬ 'ಬಂದ್ರಂತೂ ಬಂದ್ರೆಪಾ.. ಕೆಲ್ಸನಾ ಕಮ್ಮಿ' ಅನ್ನುತ್ತಲೇ ಈರಜ್ಜ 'ಅಲೇ ಇವ್ನವ್ನು' ಅಂದಿದ್ದ. ಮಾಳಿ, ಕೆಂಚವ್ವಳ ಮುಖಮುಖ ನೋಡಿಕೊಂಡಿದ್ದರು.

'ಊರಾಗ ಏನೈತ್ರಿ. ಭೂಮಿ ತೊಳ್ದ ಬಟ್ಲ ಆಗ್ಯಾವ.. ಮಕ್ಳಮರಿ ಕಟ್ಗೊಂಡ ಏನ್ಮಾಡೂದಂತ ಬಂದೀವಿ..' ಪುಂಡಜ್ಜ ಹೇಳಿದ. 'ಸಿಗ್ಬಹುದು ನೋಡಾನ ತಡ್ರಿ' ಅವರ ಮಾತು ಅವರಲ್ಲಿ ತುಸು ಜೀವಕಳೆ ತಂದಿತ್ತು.

ಆಗಲೇ ಸಂಜೆ ಹೊತ್ತು.

'ಇಳ್ಕೊಳ್ಳಾಕ ಸೆಡ್ಡಾದ್ರು ಕೊಟ್ರಲ್ಲ.. ಮಕ್ಳ–ಮರಿ ಬಚ್ಚೆ ಅಕ್ಕಾವು ಮಲ್ಗಾನಡ್ರಿ' ಪುಂಡಜ್ಜ ಮತ್ತೆ ಹೇಳಿದ್ದ. ಸಜ್ಜೆ, ಜೋಳದ ರೊಟ್ಟಿ, ಮೊಸರು, ಗುರೆಳ್ಳುಪುಡಿ ಬೆರಸಿ ಅಲ್ಲಿನ ಸುಗ್ಗಿಜನರೊಂದಿಗೆ ತಿಂದು ಮಲಗಿದರು. ಮರೆವ್ವ ತನ್ನ ಹಸುಳೆಯೊಂದಿಗೆ ಮಲಗಿದಂತೆ, ಮಾಳಿ ಮಲಗಿದ್ದಳು. 'ಕೆಲ್ಸ ಎಲ್ಲೆದವವಾ' ಮುದುಕನ ಮಾತು ರಾತ್ರಿಯಿಡೀ ಅವರ ನಿದ್ರೆಗೆಡಿಸಿತ್ತು.

ಅಲ್ಲೀಗ.. ತುಂಡು ದೋತ್ರ, ದಪ್ಪನೆಯ ದಡಿಸೀರೆ, ಕಿಮುಟು ಟೋಪಿ, ಮೊಲೆ ಮುಚ್ಚುವಷ್ಟೆ ಇರುವ ಜಂಪರು ಹಾಕಿಕೊಂಡು ದುಡಿಯುವ ಜನ, ಪಿಚ್ಚು ಗಣ್ಣುಗಳು, ಕೆದರುಗೂದಲು, ದೂಳಿಟ್ಟ ಕಿವಿ, ನೀರುಗಾಣದ ತುಟಿಗಳು, ಕನಸುಗಾಣದ ಮಕ್ಕಳು, ಕೆಲಸ ಬೇಡಿ ಬಂದವರು, ಕೆಲಸವಿಲ್ಲದೇ ಒದ್ದಾಡುವವರು, ವಿಳಾಸವಿಲ್ಲದಂತಿರುವ ಅವರು..

❖

ಸುಗ್ಗಿಜನ ದಿನ, ವಾರ, ತಿಂಗಳು ಅಲೆದರೂ ಕೆಲಸ ಸಿಗದೇ ಸುಸ್ತಾದರು. ಕೈಯೊಳಗಿನ ಪುಡಿಗಾಸು ಖಾಲಿಯಾಗಿತ್ತು. ಹಗಲು–ರಾತ್ರಿಗಳು ಅವರಿಗೆ

ಹಾವಾಗತೊಡಗಿದವು. ಕೆಲಸ ಇಲ್ಲದ್ದಕ್ಕೆ ಸೆಡ್ಡೂ ಸಿಗದೇ ಅದರ ಪಕ್ಕವೇ ಮುರುಕಲು ಕೋಣೆಯಲ್ಲಿದ್ದರು. ಪುಂಡಜ್ಜ, ಈರಜ್ಜ ಅಲ್ಲಿನ ಕಟ್ಟಡದ ನೆರಳಿಗೆ ಅಡ್ಡಾಗುತ್ತಿದ್ದರು. ತಗಡು ಬಾಗಿಲಿಂದ ಬರುವ ನೀರುಗಾಳಿಗೆ ಅಡ್ಡಾಗುತ್ತಿದ್ದರು. ತಗಡು ಬಾಗಿಲಿಂದ ಬರುವ ನೀರುಗಾಳಿಗೆ ಮರೆವ್ವನ ಮಗಳು ಚೀರುತ್ತಿತ್ತು. ಹೊತ್ತಿಲ್ಲದ ಹೊತ್ತಿಗೆ ಆ ಕಣ್ಣುಗಳು ತನ್ನತ್ತ ದಿಟ್ಟಿಸುತ್ತಲೇ ಮಾಳಿ, ಮೈ ಕಣ್ಣಾಗಿಸುತ್ತಿದ್ದಳು. ನೆರಳಿಲ್ಲದ ಆ ನೆಲ.. ಕೆಲಸವಿಲ್ಲದ ಬೆಳಗು.. ನಿದ್ರೆಯಿಲ್ಲದ ಆ ರಾತ್ರಿಗಳು.. ಹೀಗೆ ಸಾಗಿತ್ತು ಅವರ ಸುಗ್ಗಿಗಾಡ ಬದುಕು..

ಮನೆ–ಮಠ ಬಿಟ್ಟು, ಸುಗ್ಗಿಗೆಂದು ಹಿಗ್ಗಿ ಬಂದ ಕೆಲಜನ ತಿಂಗಳುಗಳೆದರೂ ಕೆಲಸ ಇಲ್ಲದ್ದಕ್ಕೆ ಗಂಟು–ಮೂಟೆ ಕಟ್ಟಿದ್ದರು. ಉಳಿದವರಿಗೂ ಸಾಕುಸಾಕಾಗಿ ಊರಿಗೆ ಹೊರಡಬೇಕು ಅನ್ನುವಷ್ಟರಲ್ಲಿ 'ಕೆಲ್ಸ ಐತಂತ ಸೆಡ್ಡು ಕೊಡ್ತಾರಂತ' ಅನ್ನುವ ಶಬ್ದ ಕೇಳಿ ಅವರ ಮೊಗದಲ್ಲಿ ನೂರಿನ್ನೂರು ನಗೆಯ ಗೆರೆ ಮಾಲ್ಯಾಡತೊಡಗಿದ್ದವು.

ಅವತ್ತೆ ಸುಗ್ಗಿ ಜನ ಪುಟ್ಟಿ–ಸಲಿಕೆ ಹಿಡಿದರು. ಮಣ್ಣನ್ನೇ ನಂಬಿ ಬಂದ ಅವರಿಗೆ ಕೆಲಸ ಸಿಕ್ಕ ಆ ಖುಷಿಯಲಿ ಮಣ್ಣಿಗೆ ಮಣ್ಣಾಗುತ್ತಿದ್ದರು. ಸೌಕಾರನ ಕೈಕಾಲು ಬಿದ್ದು ತಮ್ಮ ಮಕ್ಕಳಿಗೂ ಪುಡಿಗೆಲಸ ಕೊಡಿಸಿಕೊಂಡಿದ್ದರು. ಸಂಜೆ ಹೊತ್ತಿಗೆ ಆತ ಅವರನ್ನೆಲ್ಲಾ ಸಾಲಾಗಿ ನಿಲ್ಲಿಸಿ, ನೋಟು ಹಂಚುತ್ತಲೇ ಸುಗ್ಗಿ ಜನರ ದನಿವೆಲ್ಲಾ ಮಾಯವಾಗಿ, ಹಸಿದ ಹೊಟ್ಟೆ ತುಂಬಿದಂತಾಗಿ, ಮತ್ತೆ ನಾಳಿನ ಕೆಲಸಕ್ಕೆ ಸಜ್ಜಾಗುತ್ತಿದ್ದರು. 'ನಮ್ಗ ಕೆಲ್ಸ ಕೊಟ್ಟಿದ್ಕ ನಿನ್ನ ಹೆಂತಿ ಮಕ್ಳಿಗೆ ಪುಣ್ಯ ಬರ್‍ಲೆಪಾ' ಎಂದು ಮನದಲ್ಲೇ ಹರಿಸುತ್ತಿದ್ದರು. ಸೌಕಾರನನ್ನು ನೆನಪಿಸಿಕೊಂಡು ತುತ್ತಿಟ್ಟುಕೊಳ್ಳುತ್ತಿದ್ದರು. ಅವತ್ತು ಕೆಲಸವಿಲ್ಲವೆಂದರೆ.. ಹತ್ತಿರದಲ್ಲಿದ್ದ ಬಯಲು ಕಡಲಿನತ್ತ ಮಕ್ಕಳು ಓಟ ಕಿತ್ತುತ್ತಿದ್ದವು.. ಹೀಗೆ.. ಕೆಲದಿನ ದುಡಿದರು. ಬೆವರಿಗೆ ಬೆವರಾಗಿ..

ನಡ ಬಾಗಿದ್ದರೂ ಪೀರಜ್ಜ, ಗುರಜ್ಜ ಹರೆಯ ನಾಚುವಂತೆ ಕೆಲಸಕ್ಕಿಳಿಯುತ್ತಿದ್ದರು. ಈರಜ್ಜ ಮಾತುಗಾರ. ಆಗಾಗ ಪಾರಿ ಜೊತೆ ಚಕ್ಕಂದಕ್ಕಿಳಿದಿರುತ್ತಿದ್ದ. ಆತನ ಮಾತಿಗೆ ಕೂಲಿ ಮಕ್ಕಳು ಕೊಕಾಶಿ ನಗುತ್ತಿದ್ದವು. ಪಾರಿಯನ್ನು ಬಹುವಾಗಿ ಪ್ರೀತಿಸುತ್ತಿದ್ದ ರಂಗ, ಈ ನಡುವೆಯೇ ಅವಳನ್ನು ಕಣ್ಣಿಗೊತ್ತಿಕೊಳ್ಳುತ್ತಿದ್ದ; ದುಡಿತದಲಿ.. ಹಕ್ಕಿಹಾಡು ಪೋಣಿಸುತ್ತಿದ್ದ.

ಗಂಡುಬೀರಿಯಂತಿದ್ದ ಪಾರಿಗೂ ರಂಗ ಸಿನೇಮಾ ನಾಯಕನಂತೆ ಕಂಡಿದ್ದ. 'ಪಾರವ್ವ ಲಗ್ನ ಬೇಕೀಗ' ಈರಜ್ಜನ ಮಾತಿಗೆ ಪಾರಿ ನಾಚಿ, ರಾತ್ರಿಯಿಡೀ ರಂಗನ ನೆನಪು ಹೊದ್ದುತ್ತಿದ್ದಳು. ಹೀಗೋ ರಂಗ–ಪಾರಿಯರ ಹರೆಯದಾಟದಲ್ಲಿ ಅವರು ಆಸರಕಿ, ಬ್ಯಾಸರಕಿ ಕಳೆದುಕೊಳ್ಳುತ್ತಿದ್ದರು.

ಸುಗ್ಗಿ ಜನರೊಟ್ಟಿಗೆ ದುಡಿಯಲು ಬಂದಿದ್ದ ಮರೆವ್ವಳದು ತುಸು ನೋವಿನ ಬದುಕು. ಮರೆವ್ವ ಹಾಗೂ ಅವಳ ಹಸುಗೂಸನ್ನು ಕಂಡ ಸುಗ್ಗಿಜನ ಮರಗುತ್ತಿದ್ದರು.

ಈಗೀಗ ಯಾಕೋ.. ಮರೆವ್ವಳ ಎದೆ ಒಣಗತೊಡಗಿತ್ತು. ಅವಳ ಹಸುಳೆ ಒಣಕಲು ಮೊಲೆತೊಟ್ಟನ್ನೇ ಉಂಡು, ಹಾಲು ಬಾರದೆ ಅಳುತಿತ್ತು. ಮಗುವಿಗೆ ತುಟಿ ತೋಯದಷ್ಟೂ ಹಾಲು ಸಿಗದಿದ್ದಾಗ ಅವಳು ಕಣ್ಣೀರುಗರೆಯುತ್ತಿದ್ದಳು. ನೀರಡಿಗೆ ಉಣಿಸಿ ತೆಂಗಿನ ಗಿಡದ ನೆರಳಿಗೆ ಹಾಕಿ ಕೆಲಸಕ್ಕಿಳಿಯುತ್ತಿದ್ದಳು. ತಾನು ತಿಂದು, ಅದು ಹಾಲಾಗಿ ಬರಲು ತಡವಾಗುತ್ತದೆಂದು; ಹಾಲು ಬಂದರೂ ಹೊಟ್ಟೆ ತುಂಬುವುದಿಲ್ಲವೆಂದು; ಹಸಿದ ತನ್ನೊಡಲುಡಿಯ ದಾಹ ಬೇಗ ತಣಿಸಲು ಬುತ್ತಿಯ ಬಿರುಸಾದ ತಂಗಳು ರೊಟ್ಟಿ ತಿಂದು ಪುಡಿ ಮಾಡಿ ಮಗಳ ಬಾಯಿಗಿಡುತ್ತಿದ್ದಳು. ಆ ದಿಕ್ಕಿಲ್ಲದ ಗಿಡದ ಹಾಲು-ಹಣ್ಣು ತಿನಿಸುತ್ತಿದ್ದಳು. ಅದು ತಿಂದು ತುಟಿದೆರೆದಾಗ ನಿಟ್ಟುಸಿರಿಡುತ್ತಿದ್ದಳು.

..ಹೀಗಿತ್ತು ಸುಗ್ಗಿಜನರ ಬದುಕು..!

ರಾತ್ರಿಯೇ ನಾಳಿನ ಕೆಲಸ ಹೊಂದಿಸಿಕೊಳ್ಳುವುದು; ಹೊಟ್ಟೆಗೆ ನೀಗುವಷ್ಟೇ ತಿಂದು ಹಣ ಕೂಡಿಡುವುದು; ಸಾರಿಗಾಗಿ ಮೀನು ತರಲು ಸೆಡ್ಡಿನ ಗಾವೂದ ದೂರದ ಸಮುದ್ರದಂಚಿಗೆ ಮಕ್ಕಳನ್ನು ಕಳುಹಿಸುವುದು; ಸೆಡ್ಡಿನ ಮೂಲೆಯಲ್ಲೇ ಒಲೆಹೂಡಿ ಅನ್ನವನ್ನಷ್ಟೇ ಕುಚ್ಚಿ, ಉಂಡು ಕೆಲಸಕ್ಕೆ ಹೊರಡುವುದು. ಇದು ಸುಗ್ಗಿಜನರ ಎಂದಿನ ದಿನಚರಿಯೂ ಆಗಿತ್ತು.

ಮಣ್ಣಿನ ಸುಗ್ಗಿ ಒಂದೆಡೆಯಾದರೆ, ರಂಗ-ಪಾರಿಯರದು ಮತ್ತೊಂದು ಹಬ್ಬ.

ಅವತ್ತು, ರಂಗ-ಪಾರಿಯರಿಗೆ ಹಬ್ಬದ ಸಂಭ್ರಮ. ಇಬ್ಬರು ತಾಸು ಮೊದಲೇ ಸೆಡ್ಡು ಬಿಟ್ಟಿದ್ದರು. ಪಕ್ಕದ ಸಮುದ್ರದಂಚಿನ ತಂಗಾಳಿ ಸುಳಿಯುತ್ತಿದ್ದುದರಿಂದ ಅವರ ಮೈ ಬಿರಿಯತೊಡಗಿದ್ದರಿಂದ ಹಸಿರು ಪೊದೆಯಲಿ, ರಂಗನ ತೋಳುದೆಕ್ಕೆಯಲಿ ಮಲಗಿದ್ದಳು ಪಾರಿ. ಸಂಜೆ ಹೊತ್ತಿಗೆ ವಿಷಯ ಗೊತ್ತಾಗಿ ತುಸು ಜೋರುಬಾಯಿ ಮಾಡಿದ್ದರೂ ಮನದೊಳಗೆ ರಂಗನನ್ನು ಅಳಿಯನನ್ನಾಗಿಸಿಕೊಳ್ಳಲು ತೀರ್ಮಾನಿಸಿದ್ದಳು ಮಾಳಿ. ರಂಗನೂ ಬರುವ ಊರ ಜಾತ್ರೆಯಲಿ ಪಾರಿ ಕೈ ಹಿಡಿಯಲು ಸಜ್ಜುಗೊಂಡಿದ್ದ.

ನೆಲದೂರ ಸೀಮೆ ಪಕ್ಕದ ಜನ ದುಡಿದಷ್ಟನ್ನು ಹೊಂದಿಸಿಟ್ಟುಕೊಂಡು ಜಾತ್ರೆಗೆ ಹೊರಡುತ್ತಲೇ ಮಗಳ ಮದುವೆ ಯೋಚನೆಯಲ್ಲಿದ್ದ ಮಾಳಿಯೂ ಹಸಿವುಂಡು ದುಡಿದ ದುಡ್ಡನ್ನೆಲ್ಲಾ ಪೆಟ್ಟಿಗೆಗೆ ಹಾಕುತ್ತಿದ್ದಳು.

❖

ಎಂದಿನಂತೆ ಸುಗ್ಗಿಜನ ಕೆಲಸಕ್ಕೆ ಹೋಗಿದ್ದರು. ಮಾಳಿ ಮಗಳನ್ನು ಸೆಡ್‌ನಲ್ಲೇ ಬಿಟ್ಟು ಬಂದಿದ್ದಳು. ಅವರು ಸಂಜೆ ಹೊತ್ತಿಗೆ ಬರುತ್ತಲೇ 'ಸೌಕಾರನ ಮಗಾ ಪಾರಿನ ಹಿಡ್ಕೊಳಾಕ ಬಂದಿದ್ನಂತ' ಸುದ್ದಿಯೊಂದು ಬರಸಿಡಿಲಿನಂತೆ ಬಂದೆರಗಿತ್ತು. ಸೆಡ್ಡಿನ ತುಂಬ ಜನವೋ ಜನ. ಏನಾಯ್ತು? ಅನ್ನುತ್ತಲೇ.. ಮುಸುಗು ಹಾಕಿ

ಕೂತಿದ್ದ ಪಾರಿ ತನ್ನವ್ವಳನ್ನು ತೆಕ್ಕೆ ಬಡೆದು ಅಳುತ್ತಲೇ ಅವಳೆದೆಯಲಿ ಕೆಂಜಲು ಕಡಿಯಲಾರಂಭಿಸಿದ್ದವು. ರಂಗನೆದೆಯಲಿ ಬೆಂಕಿ ದಿಗ್ಗನೇ ಹೊತ್ತಿ ಉರಿದಂತಾಗಿತ್ತು. ಹೆಣ್ಣು ಮಕ್ಕಳು ಸಾಪಳಿಸುತ್ತಿದ್ದರು.

'ಸೌಕಾರ್ನ ಮುಖಾ ನೋಡಿ ಬಿಟ್ಟೇವಿ.. ಇಲ್ಲಂದ್ರ ಅವ್ನ ಅಡ್ಡ ಹಿಡ್ದ ಸೀಳ್ತಿದ್ವಿ' ಸುಗ್ಗಿಯ ಕೆಲ ಜನ ಸಿಟ್ಟಿಗೆದ್ದರು. 'ಸೌಕಾರ್ನ ಎದುರಾಕೊಂಡ್ರ ಕೆಲ್ಸ ಇಲ್ಲಾ' ಅನ್ನುವ ಭಯವೋ, ಕೆಲವರು ತುಟಿ ಬಿಚ್ಚಲಿಲ್ಲ.

ಮಣ್ಣಿಗೆ ಮಣ್ಣಾಗಿ ದುಡಿಯಲು ಬಂದಿದ್ದ ಮಾಳಿ ರಾತ್ರಿಯೇ ಗಂಟು-ಮೂಟೆ ಕಟ್ಟಿ ಮಗಳೊಂದಿಗೆ ಮರುದಿನ ನೆಲದೂರಿಗೆ ಹೊರಟು ನಿಂತಾಗ ಸುಗ್ಗಿಜನರ ಎದೆಗಳೆಲ್ಲಾ ಸುಡತೊಡಗಿದ್ದವು. ಆ ಘಟನೆಯಿಂದ ಸುಕ್ಕನೇ ಸುರಗಿದ್ದ ಪಾರಿ ಮುಖ ನೋಡಿದ ರಂಗ 'ನಾ ಪಾರಿನ್ನ ಲಗ್ನ ಅಕ್ಕೀನಿ..' ಅಂದಾಗ ಮಾಳಿಗೆ ಮರುಜೀವ ಬಂದಂತಾಗಿ ಉಳಿದುಕೊಂಡಳು.

ಮಾರನೇ ದಿನ ಪತ್ರಿಕೆಯಲ್ಲಿ ತನ್ನ ಮಗನ ಸುದ್ದಿ ಕಂಡು ಸಿಟ್ಟಿಗೆದ್ದ ಸೌಕಾರ ಆ ವಾರವಷ್ಟೇ ಕೂಲಿಜನರನ್ನು ದುಡಿಸಿಕೊಂಡು ನಂತರ ಕೆಲಸವಿಲ್ಲವೆಂದು ಸಬೂಬು ಹೇಳಿ ಬೇರೆಯವರಿಗೆ ಕೆಲಸದ ಉಸ್ತುವಾರಿ ಕೊಟ್ಟಿದ್ದ. ಇದು ಅಲ್ಲಿದ್ದ ಸುಗ್ಗಿ ಜನರನ್ನು ಕೆರಳಿಸಿತ್ತಾದರೂ ಸುಮ್ಮನಾಗಿದ್ದರು. ಕೊನೆಗೆ ಎಲ್ಲರೂ ಒಂದಾಗಿ ಕೆಲಸ ಕೊಡಲೇಬೇಕೆಂದು ಆ ಸೆಡ್ಡಿನಲ್ಲೇ ಅಂಡೂರಿದ್ದರು.

❖

ಒಂದಷ್ಟು ದಿನ ಕಳೆದವು.

ಸೌಕಾರ-ಸುಗ್ಗಿಜನರ ಮಧ್ಯ ಸಂಘರ್ಷ ನಡದೇ ಇತ್ತು. 'ಕೆಲ್ಸ ಕೊಡ್ರಿ' ಅನ್ನುವ ಅವರತ್ತ ಆತ ಒಮ್ಮೆಯೂ ತಿರುಗಿ ನೋಡಲಿಲ್ಲ. ಕೂಲಿ ಜನ ದಿಕ್ಕು ತೋಚದೆ ಬೇರೆಡೆ ಕೆಲಸಕ್ಕೆ ಅಲೆದರು. ದಿನ, ವಾರ, ತಿಂಗಳು ಕಳೆದರೂ ಕೆಲಸ ಸಿಗದೆ ಬಳಲಿದರು. ಅರೆಹೊಟ್ಟೆಯಲಿ ಹಾಸಿಗೆ ಹಾಸಿದರು.

ಸದಾ ಕೆಲಸದಲ್ಲಿ ತೊಡಗಿರುತ್ತಿದ್ದ ರಂಗ, ಕೆಲಸವಿಲ್ಲದೇ ದರಿದ್ರದವನಂತಾಗಿದ್ದ. ಊರ ಕನ್ನಡ ಶಾಲೆಯಲ್ಲಷ್ಟೇ ನಾಕಕ್ಷರ ಓದಿದ್ದ ಅವನ ಬಾಯಿ ಚುಟುಚುಟು ಅನ್ನಿಸಿ ಆ ಅಂಗಡಿಯತ್ತ ನಡೆದು ಅವತ್ತು ಆ ಪತ್ರಿಕೆಯೊಂದಿಗೆ ಸೆಡ್ಡಿಗೆ ಬಂದಿದ್ದ. ಅದನ್ನು ಕಂಡು 'ಅಯ್ಯ ನಮ್ಮಪ್ಪಾ.. ನೀ ಓದಿದ್ದೆಂದ್ರ ಇಲ್ಲಿತನ ಯಾಕೆ ಬರ್‍ತಿದ್ದಿ ಬಾ..' ಕೆಂಚವ್ವ ಅಣುಕಿಸತೊಡಗಿದ್ದಳು. 'ಕೆಲ್ಸ ಎಲ್ಲಿ ಸಿಗ್ತಾವಂತ ಪೇಪಾರ್‍ನ್ಯಾಗ ಕೊಟ್ಟಿರ್ತಾರಂತ, ಅದ್ಕ ನೋಡಾಕತ್ತೀನಿ ಸುಮ್ನಿರು' ಅಂದಿದ್ದ ರಂಗ.

'ಕೆಲ್ಸ ಸಿಗ್ತಾವು' ಅಂದಾಕ್ಷಣ ಸುಗ್ಗಿ ಜನರ ಮೈಗೂದಲು ನಿಮಿರಿದವು. ಅವರ ಕಂಗಳು ರಂಗನತ್ತ ಹರಿದವು. ಕೆಲಸವಿಲ್ಲದೆ ಇನ್ನೇನು ಹೊರಡಲು ಅನಿಗೊಂಡಿದ್ದ ಮಾಳಿಗೂ ರಂಗನ ಮಾತಿನಿಂದ ಮೈಯಲ್ಲಿ ಹೊಸಗಾಳಿ ಮಿಸುಕಾಡಿದಂತಾಗಿತ್ತು. 'ಎಲ್ಲೇರ ಯಾಕ ಸಿಗ್ಲಿ.. ಕೆಲ್ಸ ಸಿಕ್ರ ಸಾಕು' ಅನ್ನುತ್ತಿದ್ದ ಅವರ ಕಣ್ಣೆಲ್ಲಾ ಪತ್ರಿಕೆ ಪುಟಗಳತ್ತಲೇ ಹರಿತೊಡಗಿದ್ದವು.

'ಇಂತಾ ಕಾಲ್ದಾಗೂ ಕೆಲ್ಸ ಇಲ್ಲಂದ್ರ ಹೆಂಗ ಅಂತೀನಿ' ಬಸಯ್ಯಜ್ಜ ಹೇಳಿದ್ದ. ಉಳಿದವರ ಮಾತೂ ಹೀಗೆ ಹೊರಡುತ್ತಿದ್ದವು.

ಮತ್ತಾದಿನ ಅಲ್ಲಿ..

ಜನಜಂಗುಳಿ.. ಏನಾಯ್ತು? ಅನ್ನುತ್ತಲೇ.. ನಾಕೊರ್ಷದಿಂದ ಕೆಲ್ಸ ಮಾಡ್ತಿದ್ದ ಹೆಣ್ಮಕ್ಕಳ ಬಿಡ್ಸಿದ್ರಂತ.. ಆ ಹೋಟಲ್ನ ಬ್ಯಾರೆ ದೇಶದವೇನೋ ಖರೀದಿ ಮಾಡುದ್ರಂತ.. ಅವ್ರ ಬ್ಯಾರೆದಾರ್ಗೆ ತಗೋಂತಾರಂತ..' ಆತ ಹೇಳುತ್ತಲೇ.. ಕೆಲಸ ಇಲ್ಲದೆ ಖಾಲಿ ಕುಳಿತ ಸುಗ್ಗಿಜನ ದಂಗಾಗಿದ್ದರು.

'ಬೆತ್ಲಗೊಂಬಿಯಂಗ ಇದ್ರ ಕೆಲ್ಸ ನೋಡವಾ ಈಗ.. ಇದೆಂತಾ ಕಾಲೋ.. ದುಡ್ದಷರ್ಪ್ಪ ದುಡ್ಡಿಲ್ಲ.. ಮನಸ್ಯಾರ್ಗೆ ಬೆಲೆಯಿಲ್ಲ..! ಮರೆವ್ವ ಮೂಗುರಿಸಿದಳು. 'ಎಲ್ಲಾ ಕಡೆ ಹಿಂಗಾ ಆಗೈತಂತ ಬಿಡವಾ.. ಕೆಲ್ಸನ ಇಲ್ಲಂತ..' ಈರಜ್ಜ, ಸುಕ್ಕುಗಟ್ಟಿದ ಮುಖ ಕಿವುಚಿ ಹೇಳಿದ. ಕೆಂಚವ್ವ ಹಣೆಗೆ ಕೈಕೊಟ್ಟಿದ್ದಳು.

ಅಷ್ಟೊತ್ತಿಗೆ ಮತ್ತಲ್ಲಿ 'ಆ ದೇಶದ ಆರ್ಥಿಕ ನೀತಿ ನಮಗೆ ಬೇಡವೇ ಬೇಡ.. ನಮ್ಮ ಸಂಪತ್ತನ್ನು ಲೂಟಿ ಮಾಡಬೇಡಿ.. ಮನುಷ್ಯ ವಿರೋಧಿ ನೀತಿಗೆ ಧಿಕ್ಕಾರ..!' ಯುವಕರ ಗುಂಪೊಂದು ಆ ಸ್ತಬ್ಧ ಚಿತ್ರಗಳೊಂದಿಗೆ ಬೀದಿಗಿಳಿದಿತ್ತು. "ನಮ್ಮ ಹೆಸರು ಹೇಳಿ ಅಲ್ಲಿಗೆ ಹೋದ ನೀವು ನಮ್ಮನ್ನು ಮರೆತಿರಿ.. ದುಡಿಯಲು ಕೆಲಸ ಕೊಡಿ" ಜನರ ಮಧ್ಯೆ ನಿಂತ ಆತ ಮಾತಾಡುತ್ತಲೇ ಇದ್ದ.

ಸುಗ್ಗಿ ಜನ ದೂರದಿಂದಲೇ ದಿಟ್ಟಿಸುತ್ತಿದ್ದರು. "ಉದ್ಯೋಗ ಕೊಡಿ, ತುತ್ತು ಅನ್ನಕ್ಕೆ ಅವಕಾಶ ನೀಡಿರಿ, ನಮ್ಜನ ಬೀದಿ ಪಾಲಾಗಲು ಅವರೇ ಕಾರಣ" ಆ ಮಾತು ಮುಗಿಸುತ್ತಲೇ.. ಅಲ್ಲಿ ಗದ್ದಲೋ ಗದ್ದಲ..! ಖಾಕಿದಾರಿಗಳ ಬೂಟುಗಾಲು, ಲಾಠಿ ಪ್ರಹಾರ ಒಮ್ಮೆಯೂ ಕಂಡಿರದ ಮರೆವ್ವ ಹೌಹಾರಿದಂತಾಗಿದ್ದಳು. ರಂಗ 'ಹೊಡಿರಿ ಹೊಡಿರಿ ಅವ್ನವ್ನು' ಅನ್ನುತ್ತಿದ್ದ. ಮಾಳಿ ಲೊಚಗುಟ್ಟಿದಳು. ಈರಜ್ಜ ಕಣ್ಣು ಪಿಳುಕಿಸಿದ್ದಿಲ್ಲ. ಹುಡುಗರು ಸುಡುತ್ತಿದ್ದ ಸ್ತಬ್ಧ ಚಿತ್ರಗಳತ್ತಲೇ ಕಣ್ಣು ನೆಟ್ಟಿದ್ದರು.

'ಯ್ಯಾವ ದೇಶಾನೋ.. ಏನ ಧಿಕ್ಕಾರೋ..' ಬಸಯಜ್ಜ ಗೊಣಗುತ್ತಿದ್ದ. 'ಏನ ಆರತಿಕ ನೀತೆಂತಪಾ' ಕೆಂಚವ್ವ ಹೇಳಿದ್ದಳು. ಹೈಸ್ಕೂಲ್‌ವರೆಗೆ ಓದಿದ್ದ ಆ ಹುಡುಗ 'ಆರತಿಕ ಅಲ್ಲ ಆರ್ಥಿಕ ನೀತಿ' ಅಂದಿತ್ತು.

'ನೋಡ್ರಬೇ ನಾವೇಷ್ಟ ದುಡುದ್ರು ಅದು ಬ್ಯಾರೆದಾರ್ಗ್ಗೇ..' ರಂಗ ಹೇಳುತ್ತಲೇ 'ಬ್ಯಾರೆದಾರ್ಗೆ ಅಂದ್ರ ಯಾರ್ಗಲೇ' ಈರಜ್ಜ ಕೇಳಿದ್ದ. 'ನಂಗೇನ ಗೊತ್ತೋ ಎಜ್ಜಾ, ಅವ್ರ ಮಾತಾಡ್ತಿದ್ರಪಾ ಹೇಳಿದ್ಯಾ... ನಾವ ದುಡಿತವಲ್ಲಾ ನಮ್ಗ ಎಷ್ಟ ರೊಕ್ಕಾ ಕೊಡಬೇಕು ಅನ್ನುದನ್ನ ಅವ್ರ ಲೆಕ್ಕ ಹಾಕ್ತಾರಂತೆ.. ನಮ್ಜನ ಅವ್ರ ಹೇಳ್ದಂಗ ಕೇಳ್ತಾರಂತ.. ನಮ್ಮ ದೇಶದ ಒಂದಿಷ್ಟ ಮಂದಿ ಅವ್ರ ಏಜೆಂಟ್ರಾಗ್ಯಾರಂತ.. ಅವ್ರ ಯಾರೋ ಏನಪಾ..' ರಂಗ ಹೇಳಿದ.

'ಅವ್ರಂದ್ರ ಯಾರು..' ಕೆಂಚವ್ವ ಹೇಳುತ್ತಲೇ 'ಯಾಂತಾ ಹೇಳ್ಯಾಕ ನಾ ಅವ್ರನ್ನ ನೋಡಿನನು.. ಎಲ್ಲಾರೂ ನಂಗ ಕೇಳ್ತಿರಲ್ಲ..ನಡ್ರಿ..ನಡ್ರಿ..' ರಂಗ ಹೇಳಿದ್ದ.

'ಅಯ್ಯ ಕೆಂಪ ಮಸ್ಡಿವು ಅದಾವಳವು.. ಟಿವ್ಯಾಗ ನೋಡ್ತಿವಲ್ಲ.. ಬೇಶ ಅದಾವು ಬಿಡು ಅವು ಮೂಳಾ.. ತಮ್ಮ ಮೈದ ತಮ್ಗ ಕಬ್ರ ಇಲ್ಲಾ ಅವ್ಕ ಇನ್ನ ಹೊರ್ಗನ್ಯಾರ್ಗೆ ಏನ ಕೆಲ್ಸ ಕೊಡ್ತಾವು..' ಎಲ್ಲಾ ತಿಳಿದಂತೆ ಮಾಳಿ ಸಾಪಳಿಸಿದಳು. 'ಬೇ ಯಾರರ ಯಾಕೆ ಆಗವಲ್ರಾಕ ಸುಮ್ನಿರು ನೀನು' ಪಾರಿ ಹೇಳಿದಳು. ಧರ್ಮ, ಭೀಮಿ ಹಲ್ಲು ತೆಗೆದರು.

'ಮನ್ನೆ ನಮ್ಮೂರ ಹುಡುಗ್ರು ಬೆಂಗ್ಳೂರ್ನಿಂದ ಕೆಲ್ಸ ಇಲ್ಲಂತ ಬಂದ್ರಳ.. ಎಲ್ಲಾ ಕಡೆ ಹಿಂಗಾ ಆಗೈತಿ ಅವ್ವವ್ವು' ಪುಂಡಜ್ಜ ಹೇಳುತ್ತಾ 'ಏಜೆಂಟ್ರ ಅಂದ್ರ ಯಾರಲೇ' ಮತ್ತೆ ಕೇಳಿದ.. 'ನಮ್ಗ ಕೆಲ್ಸ ಕೊಡ್ಲಿಲ್ಲಲ್ಲ ಆ ಸೌಕಾರ್ನಂತವ್ರ ಇರ್ಬೇಕು ಅವ್ರ ಏಜೇಂಟು' ಮುಸಿಯಿಂದ ಹೊಗೆ ಹೊರಡಿಸುತ್ತಿದ್ದ ಈರಜ್ಜ ಹೇಳಿದ. ಕೆಂಚವ್ವ, ಮರೆವ್ವ ಆಕಾಶ ದಿಟ್ಟಿಸಿದ್ದರು.

..ಹೀಗೊ ಸುಗ್ಗಿಜನರ ಮಾತು 'ಕೆಲಸ'ದತ್ತಲೇ ತಿರುಗಿದ್ದವು. ಗದ್ದಲವೂ ಕಡಿಮೆಯಾಗಿತ್ತು. 'ಒಂದು ಕೊಡುತನ.. ಒಂದು ಬಿಡುತಾನ..' ಅವರು ಹೇಳುತ್ತಿದ್ದ ಹಾಡನ್ನು ಗುಣುಗುತ್ತಾ ಸುಗ್ಗಿ ಹುಡುಗರು ಅತ್ತ ಕಾಲು ಕಿತ್ತವು.. 'ತುಂಡ್ಭೂಮಿ ಇತ್ತಂದ್ರ ನಾವ್ಯಾಕ ಬರ್ತಿದ್ವಿ..' ಪುಂಡಜ್ಜ ಹೇಳುತ್ತಲೇ ಸೆಡ್ಡಿನತ್ತ ಹೊರಟಿದ್ದ.

ಆಗಲೇ ಹೊತ್ತಾಗಿತ್ತು. ಮರುದಿನ ಹೊರಡಲು ತೀರ್ಮಾನಿಸಿ ಗಂಟು-ಮೂಟೆ ಕಟ್ಟತೊಡಗಿದರು. ಹತ್ತಿದಷ್ಟು ಉಂಡು ಮಲಗಿದರು. ಹೀಗೆ ಸೆಡ್ಡು ದಿನಗಳೆದಂತೆ ಖಾಲಿಯಾಗತೊಡಗಿದ್ದವು.

ವರ್ಷೊಪ್ಪತ್ತು ದುಡಿದು ಹೋಗಲು ಬಂದಿದ್ದ ನೆಲದೂರ ಜನ, ಸೂರ್ಯೋದಯಕ್ಕೆ ಹೊರಟು ನಿಂತರು. 'ಊರಾಗ ಹನ್ಮಂತ ದೇವ್ರ ಜಾತ್ರೆ ಐತ್ನಡ್ರಿ.. ಮುಗ್ಸಿ ಕೆಲ್ಸ ಸಿಕ್ರ ಮತ್ತು ಬಂದ್ರಾತು' ಪುಂಡಜ್ಜ ಹೇಳಿದ.. 'ಕೆಲ್ಸ, ನಿನ್ನಾಪ್ನ ಒಂದ ತಿಂಗ್ಳ ಕಾಲಿ ಕುಂತಿ, ಇನ್ನೂ ಸಾಕಾಗಿಲ್ಲನು ನಡ್ರಿ.. ನಡ್ರಿ.. ಹೋಗಾನು.." ರಂಗ ಬದಲಾದ ದನಿಯಲ್ಲಿ ಹೇಳಿದ್ದ.

ಹೀಗೆ ಸಡ್ಡಿನಿಂದ ಗಂಟು–ಮೂಟೆ ಹೊತ್ತ ಆ ಸುಗ್ಗಿಜನರ ಪಾದಗಳು ಇನ್ನೇನು ನೆಲದೂರತ್ತ ಹೊರಡುತ್ತವೆ ಅನ್ನುತ್ತಲೇ ಮತ್ತೆ ಆ ಸೆಡ್ಡಿನ ತುಂಬ ಗದ್ದಲೋ ಗದ್ದಲ..! ಸಾವುಕಾರನ ಕೋಣೆಯ ಮುಂದುಗಡೆ ಹರುಕು ಚಪ್ಪಲಿ ಬಿದ್ದಿದ್ದವು. ಅಲ್ಲಿನ ಅವರ ಕೈಯಲ್ಲಿ ಸಲಿಕೆ–ಗುದ್ದಲಿ ಬದಲಾಗಿ ಕೋಲು ಕುಡುಗೋಲು ಇದ್ದವು. ಕಚ್ಚೆ ಹಾಕಿದ್ದ ಅವರೂ ಕೆದರಿದ ಕೂದಲೊಂದಿಗೆ ಸಾಪಳಿಸತೊಡಗಿದ್ದರು. ಕೆಲವೇ ಕೆಲ ಗಳಿಗೆಯಲಿ.. ನೆಲದೂರ ಜನರ ದಿಟ್ಟ ಹೆಜ್ಜೆಗಳೆಲ್ಲಾ ಅದನ್ನಲ್ಲಿ ಸಾರುತ್ತಾ.. ಹೇಳುತ್ತಾ.. ದೇಶದೂರ ಊರಿಗೆ, ಹಳ್ಳಿಹಳ್ಳಿಗೆ ಯಾತ್ರೆ ಹೊರಟವು.. ದೇಶದೇಶಗಳ ಗಡಿ ಮೀರಿ..

ಮಧ್ಯಾಹ್ನದ ಹೊತ್ತಿಗೆ ಅತ್ತ ಬೆತ್ತಲೆಯಾಗಿ ಓಡಿ ಹೋಗಿದ್ದ ಆ ಸುಗ್ಗಿಜನರುಡಿಯ ಮಕ್ಕಳ ದನಿಯೂ ಸಮುದ್ರದಂಚಿನಿಂದ ಅಲೆಅಲೆಯಾಗಿ ಹೊರಟಿತ್ತು. ಮತ್ತದನ್ನೇ ಸಾರುತ್ತಾ.. ಹೇಳುತ್ತಾ..

❖

(ಸಂಜೆ ದರ್ಶನ – ದೀಪಾವಳಿ ವಿಶೇಷಾಂಕ, 2013)

ಆಶೀರ್ವಾದ

ಲಕ್ಷ್ಮಣ ಬದಾಮಿ

ಶ್ರೀಮಠವಿಡಿ ಹೊಸಬಣ್ಣ, ಹೊಸ ಕಳೆಯಿಂದ ತುಂಬಿಕೊಂಡಿತ್ತು. ಆವರಣದ ತುಂಬ ತಳಿರು–ತೋರಣಗಳು, ಪರಪರಿ ಹಾಳೆಯ ಸರಮಾಲೆಗಳು ರಾರಾಜಿಸುತ್ತ ಸಡಗರದ ವಾತಾವರಣವನ್ನು ಎತ್ತಿ ತೋರಿಸುತ್ತಿದ್ದವು. ಹೌದು, ಕಳೆದ ಇಪ್ಪತ್ತು ದಿನಗಳಿಂದ ಸಾಂಗವಾಗಿ ನಡೆದುಕೊಂಡು ಬಂದಿದ್ದ ಪುರಾಣ ಕಾರ್ಯಕ್ರಮ ಇಂದು ಮಹಾಮಂಗಲ ಹೊಂದುತ್ತಲಿತ್ತು.

ಇಷ್ಟೇ ಸಂಭ್ರಮ ತಟ್ಟೆಮನಿ ಸಿದ್ದಪ್ಪನ ಮನೆ, ಮನ ಎರಡನ್ನೂ ಆವರಿಸಿತ್ತು. ನೆರೆದ ಊರು ಮಂದಿಯ ಸಮ್ಮುಖದಲ್ಲಿ ಶ್ರೀಗಳು ಸಿದ್ದಪ್ಪನಿಗೆ ಆಶೀರ್ವಾದ ಮಾಡುತ್ತಾರೆಂದರೆ ಸುಮ್ಮನೆಯೆ?! ಅದಕ್ಕೇ ಸಿದ್ದಪ್ಪ ತನ್ನ ನೆಹರು ಶರ್ಟ್, ರೇಶಿಮೆ ಪಟಗಾ, ಇಸ್ತ್ರಿ ಮಾಡಿಸುವುದು, ಮುಖ ಕ್ಷೌರ ಮಾಡಿಸಿಕೊಳ್ಳುವುದರಲ್ಲಿ ನಿರತನಾಗಿದ್ದನು. ಇದೇ ಮೊದಲ ಬಾರಿಗೆ ಅವನು ತನ್ನ ವೇಷಭೂಷಣದ ಬಗ್ಗೆ ಗಮನ ಕೊಟ್ಟಿದ್ದು. ಯಾವತ್ತೂ ಅವನು ಇಸ್ತ್ರಿ ಬಟ್ಟೆ ತೊಟ್ಟವನಲ್ಲ, ಕ್ಷೌರಿಕನ ಬಳಿಗೆ ಹುಣ್ಣಿಮೆ–ಅಮಾವಾಸ್ಯೆಗೊಮ್ಮೆ ಹೋಗುವವನು. ಅವನಿಗೆ ಇಂಥದ್ದಕ್ಕೆಲ್ಲ ವ್ಯಾಳೆಯಾದ್ರೂ ಎಲ್ಲಿರುತ್ತದೆ..? ಬೆಳಕು ಹರಿಯುವ ಮುಂಚೆಯೇ ಶ್ರೀಮಠದ ಚಾಕರಿ, ಬೆಳಗಾದಾಗಿನಿಂದ ಸಂಜೆತನಕ ಗೌಡ್ರ ಮನೆಯ ಕೆಲಸಗಳು, ಸಂಜೆಯಾಗುತ್ತಿದ್ದಂತೆ ದನಗಳ ಹಾಲು ಹಿಂಡುವುದು, ಇನ್ನೇನು ಮನೆಗೆ ಹೋಗಬೇಕು ಎನ್ನುವುದರೊಳಗಾಗಿ 'ಸಿದ್ದಾ..' ಹಿರೇಗೌಡಶ್ಯಾನಿಯ ಕೂಗು, ಪುಗಶೆಟ್ಟಿ ವ್ವಾರೆ! ಹೀಗೆ ದಿನವೊಂದು ಅವನ ಅರಿವಿಗೆ ಬಾರದಂತೆ ಮುಗಿದು ಹೋಗುತ್ತಿತ್ತು.

ಶ್ರೀಮಠದ ಅಂಗಳ ಗುಡಿಸುವ ಚಾಕರಿಯನ್ನು ಸಿದ್ದಪ್ಪ ತನ್ನವ್ವನಿಂದ ವಹಿಸಿಕೊಂಡು ಮುನ್ನಡೆದಿದ್ದನು. ಲಿಂಗೈಕ್ಯ ಹಿರಿಯ ಶ್ರೀಗಳ ಕರ್ತೃ ಗದ್ದುಗೆಯ ಪೂಜಾಕಾರ್ಯಗಳು ಊರ ಕೋಳಿಗಳು ಕೂಗುವ ಮುನ್ನವೇ ಆರಂಭವಾಗುತ್ತವೆ. ಪಡದಯ್ಯ ಹೂ–ಪತ್ರೆ ಕೀಳುತ್ತಾನೆ, ಶಿವಲಿಂಗ ಜಾಗಟೆ ಬಾರಿಸುತ್ತಾನೆ, ಕುಮಾರ ಮೈಕ್‌ನಲ್ಲಿ ಸುಪ್ರಭಾತ ಮೊಳಗಿಸುತ್ತಾನೆ. ಪಂಚಯ್ಯ ಕನ್ಯೆಯರ ಬಾವಿಗೆ ಹೋಗಿ ನೀರು ಸೇದಿ, ಮೈಮೇಲೆ ಸುರುವಿಕೊಂಡು ಮತ್ತೊಂದು ಕೊಡ ಪೂಜೆಗೆ ತುಂಬಿಕೊಂಡು ಬರುತ್ತಾನೆ. ಇದೇ ವೇಳೆಗೆ ಸಿದ್ದಪ್ಪನು ಅಂಗಳದ ಕಸವನ್ನು ಬಳಿದು ಬಾವಿಗೆ ಹೋಗಿ ಸ್ನಾನ ಮುಗಿಸಿ ಗದ್ದುಗೆ ಮುಂದೆ ಪೂಜೆ ಆಗುವವರೆಗೂ ಕೈ ಜೋಡಿಸಿ ನಿಲ್ಲುತ್ತಾನೆ.

ಶ್ರೀಗಳ ಗದ್ದುಗೆ ಮೇಲೆ ನಿತ್ಯ ಹೂವು ಏರಿಸುವುದು ಒಮ್ಮೆಯೂ ತಪ್ಪಿಲ್ಲವಾದರೂ ಏರಿಸುವ ಕೈಗಳಂತೂ ಬದಲಾಗಿದೆ. ಹಾಗೆಯೇ ಜಾಗಟೆ ಬಾರಿಸುವ, ಹೂವು

ಕೀಳುವ ಕೈಗಳು ಆಗಾಗ ಬದಲಾಗಿವೆ. ಆದರೆ ಅಂಗಳ ಗುಡಿಸುವ ಕಸಬರಿಗೆಯನ್ನು ಹಿಡಿಯುವ ಕೈ ಮಾತ್ರ ಎಂದೂ ಬದಲಾಗಿಲ್ಲ. ಅದನ್ನು ಕಳೆದ ಇಪ್ಪತ್ನಾಲ್ಕು ವರ್ಷಗಳಿಂದ ಸಿದ್ದಪ್ಪನ ಕೈಯೊಂದೇ ಹಿಡಿಯುತ್ತ ಬಂದಿದೆ.

ಈಗಿರುವ ಶ್ರೀಗಳು ಮಠದಲ್ಲಿ ಮೇಲಿಂದ ಮೇಲೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದರು. ಕಾರ್ಯಕ್ರಮ ಮುಗಿದ ಮಾರನೇ ದಿನ ಅದು ಯಾವ ಪ್ರಮಾಣದಲ್ಲಿತ್ತು. ಎಷ್ಟು ಜನ ಸೇರಿದ್ದರು ಎಂಬುದನ್ನು ಸಿದ್ದಪ್ಪ ಆವರಣದಲ್ಲಿ ಕೂಡಿದ ಕಸದಿಂದಲೇ ಅಂದಾಜಿಸುತ್ತಿದ್ದನು. ಇವನ ದೀರ್ಘಕಾಲದ ಸೇವೆಯನ್ನು ಮನಗಂಡು ಪುರಾಣ ಮಂಗಲ ಕಾರ್ಯಕ್ರಮದಲ್ಲಿ ಆಶೀರ್ವಾದ ಮಾಡುವುದಾಗಿ ಸಿದ್ದಪ್ಪನಿಗೆ ಶ್ರೀಗಳು ಹೇಳಿದರು. ಅದಕ್ಕವನು 'ದಿನಾ ಸಣ್ಣ ಮಾಡಿದಾಗೆಲ್ಲ ಮಾಡ್ತಿರೆಲ್ಲ ಬುದ್ಧೀ!!' ಅಂದನು. ಶ್ರೀಗಳು 'ಹಾಂಗಲ್ಲಪಾ ಸಭಾದಾಗ ನಿನಗೆ ಹಾರ ಹಾಕಿ, ಶಾಲು ಹೊದಿಸಿ ಮಾಡೋಣ' ಎಂದರು.

'ಕತ್ತೀಗೆ ಹತ್ತಿಕಾಳು ಯಾಕ್ರಿಯೆಪ್ಪಾ..' ಸಂಕೋಚದಿಂದ ಹೇಳಿದ. ಇಲ್ಲಪ್ಪ ನಿನ್ನ ಸೇವಾ, ನಿನ್ನ ತಾಯಿ ಸೇವಾ ದೊಡ್ಡದು ಅಂತ ನಮಗೆ ದೊಡ್ಡ ಬುದ್ಧಿಯವರು ಹೇಳುತ್ತಿದ್ದರು.' ಶ್ರೀಗಳು ಹೀಗೆಂದ ಮೇಲೆ ಸಿದ್ದಪ್ಪ ಮತ್ತೆ ಮಾತಾಡಲಿಲ್ಲ.

ಗೌಡರು ನಿಧಾನವಾಗಿ ಕಾರಿನಿಂದಿಳಿದು ಖುಶಿಯಿಂದ ಒಳಬಂದು ಸೋಫಾಕ್ಕೆ ಒರಗಿ ಸಿದ್ದಪ್ಪನನ್ನು ಕೂಗಿದರು. ಇದೀಗ ಶ್ರೀಮಠದಿಂದ ಬಂದಿದ್ದ ಅವರು ಕಾರ್ಯಕ್ರಮದಲ್ಲಿ ತಮಗೂ ಆಶೀರ್ವಾದ ಆಗುತ್ತದೆ ಎನ್ನುವುದಕ್ಕಿಂತಲೂ ಸಿದ್ದಪ್ಪನಿಗೆ ಆಗುತ್ತಿರುವುದು ಹೆಚ್ಚು ಸೂಕ್ತ ಅನಿಸಿತ್ತು. ತಾನೇನು ಭೂಮಿಯಾಗ ಬೆಳೆದಿದ್ದರಲ್ಲಿ ಒಂದಿಷ್ಟು ಅನ್ನ ದಾಸೋಹಕ್ಕಂತ ಕೊಡ್ತಿನಿ.

ಇದರಾಗ ನಂದೇನ್ ಮಹಾ..? ಆದರೆ.. ಸಿದ್ದನ ಸಾಧನಾ ಸಣ್ಣದಲ್ಲ. ಅಂವುಗ ಆಶೀರ್ವಾದ ಮಾಡ್ತಿರೋದು ಬರೋಬ್ಬರಿ ಐತಿ ಅಂತ ಗೌಡರಿಗೆ ಅನಿಸಿತ್ತು.

ದನದಕ್ಕಿಯ ಹೆಂಡಿಕಸ ಮಾಡುತ್ತಿದ್ದ ಸಿದ್ದಪ್ಪ ಅದನ್ನು ಮುಗಿಸಿ, ಕೈ ತೊಳೆದುಕೊಂಡು ಗೌಡ್ರು ಕುಂತಿದ್ದ ಹಾಲ್‌ಗೆ ಬಂದನು.

'ಏನೋ ಮಗನ.. ಸ್ವಾಮಿಗೊಳು ನಾಳೆ ಕಾರ್ಯಕ್ರಮದಾಗ ಆಶೀರ್ವಾದ ಮಾಡ್ತಾರಂತಲ್ಲ..' ಎಂದು ನಕ್ಕರು. 'ಏನೋ ಅಂದ್ರು ಯಪ್ಪಾ' ತನಗೇನು ತಿಳಿಯದೆಂಬಂತೆ ಹೇಳಿದನು. 'ನಿನಗ ತಿಳಿಯೂ ಮಾತಲ್ಲ, ಸುಮ್ಮನ ಹೂಂ ಅನ್ನು' ಗೌಡರು ಎಂದಿದ್ದಕ್ಕೆ ಸಿದ್ದಪ್ಪ ಆಯಿತೆಂಬಂತೆ ತಲೆಯಾಡಿಸಿ ಒಳಹೋದನು.

ಹೆಂಡತಿ ಹನುಮವ್ವನಿಗೆ ಸಿದ್ದಪ್ಪ ಅಂದು ಬೇರೆಯಾಗಿಯೇ ಕಾಣಿಸುತ್ತಿದ್ದ. ಊರ ಮಂದಿಯ ನಡುವೆ ತನ್ನ ಗಂಡನಿಗೆ ಮಾಸ್ವಾಮಿಗಳು ಶಾಲು ಹೊಚ್ಚಿ

ಹಾರಾ ಹಾಕ್ತಾರ ಅಂದರ.. ಅವನೊಬ್ಬ ಅಗಾಧ ವ್ಯಕ್ತಿ ಎಂದು ಅವಳಿಗೆ ಅನಿಸುತ್ತಿತ್ತು. ಈ ಮಾತು ಮೊದಲು ಕೇಳಿದಾಗಲಂತೂ ಅವಳು 'ಅವ್ವಾ!!' ಅಂತ ಬಾಯ ಮೇಲೆ ಬೆರಳಿಟ್ಟಿದ್ದಳು. ಯಾವತ್ತೂ ಕುಂಬಳ ಬನಿಯನ್ನಿನಲ್ಲಿ ತಿರುಗುವ ಗಂಡ ಇವತ್ತಾದ್ರೂ ಚೆಂದಾಗಿ ಸಿಸ್ಟಿಮ್ ಕಾಣಬೇಕೆಂದು ಅವಳು ಟ್ರಂಕಿನಲ್ಲಿದ್ದ ನೇರು ಶರ್ಟನ್ನು, ರೇಶಿಮೆ ಪಟಗಾವನ್ನು ಸ್ವಚ್ಛ ತೊಳೆದುಕೊಟ್ಟು ಇಸ್ತ್ರಿ ಮಾಡಿಸಲು ಉಪ್ಪದ್ರ ಹಚ್ಚಿದ್ದಳು. ಪಿಯುಸಿ ಓದುತ್ತಿದ್ದ ಮಗ ರಮೇಶ ತಂದೆಯ ಸನ್ಮಾನ ಕಾರ್ಯಕ್ರಮವನ್ನು ರೆಕಾರ್ಡ್ ಮಾಡಬೇಕೆಂದು ಯಾರದೊ ಮೊಬೈಲ್‌ನ್ನು ಕೇಳಿ ಪಡೆದುಕೊಂಡಿದ್ದನು. ಕಾರ್ಯಕ್ರಮದಲ್ಲಿ ಹೇಗಿರಬೇಕು, ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ತಂದೆಗೆ ಹೇಳಿದನು. ಅದನ್ನು ಕೇಳಿ ಸಿದ್ದಪ್ಪನಿಗೆ ಒಂದಿಷ್ಟು ಅಳುಕು ಮೂಡಿ ತನ್ನೊಳಗೆ 'ತಣ್ಣಗೆ ಇದ್ನೆಲ್ಲೊ ಯಪ್ಪಾ.. ಇದೊಳ್ಳೆ ಫಜೀತಿ ಬಂತು' ಅಂದುಕೊಂಡನು.

ಶಾಸ್ತ್ರಿಗಳು ಪುರಾಣದ ಕೊನೆಯ ಭಾಗ ಓದಿಹೇಳಿ ಸಂಪ್ರದಾಯದಂತೆ ಮತ್ತೆ ಮೊದಲ ಅಧ್ಯಾಯದ ನಾಲ್ಕು ಸಾಲು ಓದಿ ಮಂಗಲ ಹೇಳುತ್ತಿದ್ದಂತೆಯೆ ಸಭೆಯಲ್ಲಿಯೂ 'ಜಯ ಮಂಗಲಂ ಜಯಃ ಪಾರ್ವತಿ ಪತಿ ಶಿವ ಹರಹರ ಮಾದೇವ' ಎಂದು ಘೋಷ ಮೊಳಗಿತು. ಸಿದ್ದಪ್ಪನು ಜನರ ಮಧ್ಯದಲ್ಲಿಂದ ಆ ಘೋಷದಲ್ಲಿ ತನ್ನ ದನಿಯನ್ನು ಸೇರಿಸುತ್ತ ಗದ್ದುಗೆಯ ಕಡೆ ಭಕ್ತಿಯಿಂದ ಕಣ್ಮುಚ್ಚಿ ಕೈಮುಗಿದನು.

ಮುಂದಿನ ಕಾರ್ಯಕ್ರಮವನ್ನು ಕುಮಾರನು ನಿರೂಪಿಸುತ್ತಾ ಶ್ರೀಮಠಕ್ಕೆ ತನು ಮನ ಧನ ಸೇವೆಯನ್ನು ಸಲ್ಲಿಸಿದವರಿಗೆ ಶ್ರೀಮಠದಿಂದ ಆಶೀರ್ವಾದವೆಂದು ಹೇಳಿ ಅನ್ನ ದಾಸೋಹಕ್ಕೆ ಒಂದು ಕ್ವಿಂಟಲ್ ಗೋಧಿಯನ್ನು ನೀಡಿದ ಶ್ರೀಯುತ ರುದ್ರಗೌಡರನ್ನು ವೇದಿಕೆಗೆ ಕರೆದನು.

ವೇದಿಕೆಯ ಮೇಲಿದ್ದ ಎಲ್ಲಾ ಮಾಸ್ವಾಮಿಗಳು, ಗೆಸ್ಟುಗಳು ಎದ್ದು ನಿಂತಿದ್ದರು. ನಡುಮಧ್ಯದಲ್ಲಿ ಗೌಡರನ್ನು ಕುಳ್ಳಿರಿಸಿ ಅವರಿಗೆ ಶಾಲು ಹೊದಿಸಿ, ಹೂವಿನ ಮಾಲೆ ಹಾಕಿ, ವಿವಿಧ ಹಣ್ಣುಕಾಯಿಗಳಿದ್ದ ತಟ್ಟೆಯನ್ನು ಗೌಡರ ಕೈಗಿಡುತ್ತಾ ಫೋಟೊಗ್ರಾಫರ್ ಕ್ಲಿಕ್ಕಿಸುವವರೆಗೂ ಹಾಗೇ ಕೈ ಹಿಡಿದುಕೊಂಡು ನಿಂತಿದ್ದರು. ಸಭಿಕರ ಮಧ್ಯದಲ್ಲಿಂದ ಇದನ್ನೆಲ್ಲ ಬಿಡುಗಣ್ಣಿನಿಂದ ನೋಡುತ್ತಿದ್ದ ಹನುಮವ್ವ ಮತ್ತೊಮ್ಮೆ ಬೆರಗಾದಳು. ತನ್ನ ಹಿರಿಯಾಗೂ ಹಿಂಗ ಆಶೀರ್ವಾದ ಮಾಡುತ್ತಾರಾ!! ಎಂದು, ವೇದಿಕೆಯತ್ತ ನೆಟ್ಟಿದ್ದ ದೃಷ್ಟಿಯನ್ನೀಗ ಗಂಡನತ್ತ ತಿರುಗಿಸಿದಳು. ಅವನು ಸುತ್ತಿರುವ ಪಟಗಾ ಸರಿ ಕುಂತಿದಿಯೋ ಇಲ್ಲೊ.. ಅಂಗಿ ಬುಡ್ಡಿ ಎಲ್ಲಾ ಹಾಕಿದ್ದಾನೋ ಇಲ್ಲೋ.. ಎಂದು ಪರೀಕ್ಷಿಸಿದಳು. ಅವಳ ತೊಡೆ ಮೇಲೆ ತಲೆ ಇಟ್ಟು ಮಲಗಿದ್ದ ಸಣ್ಣ ಮಗಳೂ ಅಪ್ಪನನ್ನು ಆಶೀರ್ವದಿಸುವ ಅಪರೂಪದ ಪ್ರಸಂಗವನ್ನು ಕಣ್ಣಲ್ಲಿ ತುಂಬಿಕೊಳ್ಳಲೆಂದು ಅದನ್ನು ಎಬ್ಬಿಸತೊಡಗಿದಳು.

'ಗೌಡ್ರದು ಮುಗಿದ ತಕ್ಷಣ ನಿನ್ನ ಹೆಸರು ಮೈಕ್‌ನ್ಯಾಗ ಕರಿತಾರಪ್ಪ' ಮಗನು ಉತ್ಸುಕತೆಯಿಂದ ಹೇಳಿದ ತಕ್ಷಣ ಸಿದ್ದಪ್ಪನಿಗೆ ಕಾಲ್ಮಡಿ ಬಂದಂಗ, ಮೈಯೆಲ್ಲ ಬೆವರೊಡದಂಗ ಅನಿಸುತ್ತಿತ್ತು. ಗಟ್ಟಿ ಧೈರ್ಯ ಮಾಡಿಕೊಳ್ಳಲು 'ಶಿವ ಶಿವ, ಗುರು ಸಿದ್ದೇಶ' ಒಂದೇ ಸಮ ಹಿರಿಯ ಸ್ವಾಮಿಗಳನ್ನ ನೆನೆಯತೊಡಗಿದನು.

ಗೌಡ್ರು ಆಶೀರ್ವಾದ ಸ್ವೀಕರಿಸಿ ಕೆಳಗಿಳಿಯುತ್ತಿರುವಾಗಲೆ ಮಹಾದ್ವಾರದ ಬಳಿ ಕಡುಕಪ್ಪು ಬಣ್ಣದ ಸ್ಕಾರ್ಪಿಯೋ ವಾಹನ ಬಂದು ನಿಂತಿತು. ಅದರೊಳಗಿಂದ ಎಮ್ಮೆಲ್ಲೆ ಮತ್ತವರ ಹಿಂಬಳಗ ಇಳಿದು ಸಭಾ ಮಂಟಪದತ್ತ ಬಂದರು. ಇದ್ದಕ್ಕಿದ್ದಂತೆ ಎಮ್ಮೆಲ್ಲೆಯವರು ಅಲ್ಲಿ ಕಾಣಿಸಿಕೊಂಡೊಡನೆ ಸಭೆಯಲ್ಲಿ ಒಂದರೆ ನಿಮಿಷ ಕೋಲಾಹಲವೇ ಉಂಟಾಯಿತೆನ್ನಬೇಕು. ಪ್ರೇಕ್ಷಕಾಂಗಣದಲ್ಲಿ ಕೂಡ ಹೊರಟ ಅವರನ್ನು ವೇದಿಕೆಯಲ್ಲಿದ್ದವರು ಬಿಡದೆ ವೇದಿಕೆಯಲ್ಲಿಯೇ ಕೂಡ್ರಿಸಿದರು. ಎಮ್ಮೆಲ್ಲೆಯ ಅನಿರೀಕ್ಷಿತ ಆಗಮನ ಕೆಲವರಿಗೆ ಗುಮಾನಿ ಮೂಡಿಸಿತ್ತು.

ಆದರೆ ಎಮ್ಮೆಲ್ಲೆಯವರೆಗೆ ತಾನು ಬಂದ ಕಾರಣ ಸ್ಪಷ್ಟವಿತ್ತು ಮತ್ತು ಅಲ್ಲಿ ಸೇರಿದ್ದ ಜನಸಂಖ್ಯೆ ನೋಡಿ ಖುಷಿಯೂ ಆಗಿತ್ತು.

ಶ್ರೀಮಠದ ಸಂಚಾಲಕರಾದ ಶ್ರೀ ಪಂಚಯ್ಯನವರು ಎಮ್ಮೆಲ್ಲೆ ಸಾಹೇಬರಿಗೆ ಪುಷ್ಪಮಾಲಿಕೆ ಅರ್ಪಿಸಿ ಕಾರ್ಯಕ್ರಮಕ್ಕೆ ಸ್ವಾಗತಿಸಬೇಕೆಂದು ನಿರೂಪಕ ಹೇಳಿದೊಡನೆ ಜೋರಾಗಿ ಚಪ್ಪಾಳೆ ಸದ್ದಾಯಿತು. ಬಳಿಕ ಎಮ್ಮೆಲ್ಲೆಯವರನ್ನು ಮಾತನಾಡಲು ಕೋರುತ್ತಿದ್ದಂತೆ ಎಮ್ಮೆಲ್ಲೆ ಸಾಹೇಬರು ತಮ್ಮ ಬಿಳಿ ಜುಬ್ಬಾ ಕೊಡವಿ ಅಣಿಯಾದರು. ಮೊದಲು ಶ್ರೀಮಠದ ಬಗ್ಗೆ, ಶ್ರೀಗಳ ಬಗ್ಗೆ ಹೇಳುತ್ತಾ ತಮ್ಮ ಸರ್ಕಾರ ಯಾವೊತ್ತು ಮಠಗಳ ಅಭಿವೃದ್ಧಿಗೆ ಕಟಿಬದ್ಧವಾಗಿದೆ. ಅದರಂತೆ ಶ್ರೀಮಠಕ್ಕೂ ೫ ಲಕ್ಷ ರೂಪಾಯಿಗಳನ್ನು ಕೊಡಿಸುವ ಕೆಲಸ ನಾನು ತುರ್ತಾಗಿ ಮಾಡುತ್ತೇನೆ ಎನ್ನುತ್ತಿದ್ದಂತೆ ಸಭೆಯಲ್ಲಿ ಮತ್ತೊಮ್ಮೆ ಜೋರು ಚಪ್ಪಾಳೆ ಕೇಳಿದವು. ವೇದಿಕೆಯ ಮೇಲಿದ್ದ ಶ್ರೀಮಠದ ಪೂಜ್ಯರು ಪಂಚಯ್ಯನನ್ನು ಸನ್ನೆ ಮಾಡಿ ಕರೆದು 'ಎಮ್ಮೆಲ್ಲೆಯವರ ಮಾತು ಮುಗಿಯುತ್ತಿದ್ದಂತೆ ಅವರಿಗೆ ಆಶೀರ್ವಾದ ನೀಡುತ್ತೇವೆ' ಎಂದರು. ಪಂಚಯ್ಯನಿಗೆ ತುಸು ಆತಂಕವಾಗಿ, 'ಬುದ್ಧೀ, ಆಶೀರ್ವಾದ ನೀಡಲಿಕ್ಕೆ ಶಾಲು, ಹಾರ ಒಂದು ಸೆಟ್ ಮಾತ್ರ ಐತಿ, ಅದು ಸಿದ್ದಪ್ಪಗ..' ಎಂದು ರಾಗವೆಳೆದನು. ೫ ಲಕ್ಷದ ಮೊತ್ತ ಕೇಳಿ ಉತ್ತೇಜಿತರಾದಂತಿದ್ದ ಶ್ರೀಗಳು ಒಂದು ಬಗೆಯ ಆವೇಗದಲ್ಲಿ 'ಯೇ.. ಅವುಗ ಮತ್ತ ಮಾಡೋಣ. ಮೊದಲ ಈಗ ಹೇಳಿದಷ್ಟು ಮಾಡು' ಎಂದೊಡನೆ ಸೀದ ಬಂದು ನಿರೂಪಕ ಕುಮಾರನ ಕಿವಿಯಲ್ಲಿ ಅದನ್ನು ಉಸುರಿದಾಗ ಅವನು ಆಶ್ಚರ್ಯದಿಂದ ಪಂಚಯ್ಯನ ಮುಖ ನೋಡಿದ. ಪಂಚಯ್ಯ, 'ಇದು ಸನ್ನಿಧಾನದ ಅಪ್ಪಣೆ' ಸಮಾರಂಭದಿಂದಾಗಿ ಸಣ್ಣ ಸ್ವರದಲ್ಲಿಯಾದರೂ ಖಂಡಿತವಾದ ಧ್ವನಿಯಲ್ಲಿ ಹೇಳಿದಾಗ ಕುಮಾರ ಸುಮ್ಮನಾದನು.

ಎಮ್ಮೆಲ್ಲೆಯವರಿಗೆ ಆಶೀರ್ವಾದ ನೆರವೇರಿಸಿ ಬೆಳಗಾವಿಯಿಂದ ಬಂದಿದ್ದ ಶ್ರೀಗಳೋರ್ವರು ಆಶೀರ್ವಚನ ನೀಡಲು ಪ್ರಾರಂಭಿಸುತ್ತಿದ್ದಂತೆ ಮಗ ರಮೇಶ ಎಲ್ಲ ಮನಗಂಡವನಂತೆ ಬೇಸರ ಮತ್ತು ಸಿಟ್ಟಿನಲ್ಲಿ ಅಪ್ಪ-ಅವ್ವನಿಗೆ 'ನಡ್ರೀ ಎಲ್ಲಾ ಮುಗೀತು ಮನಿಗೆ ಹೋಗೋಣು' ಅಂದ. ಹನುಮವ್ವ 'ಅಯ್ಯ ತಮ್ಮ.. ಇನ್ನ.. ನಿಮ್ಮಪ್ಪನ ಹೆಸರ ಕರೀದೆ ಇಲ್ಲ.. ಹೋಗುಣು ಅಂತಿಯಲ್ಲೊ' ಎಂದಿದ್ದಕ್ಕೆ ಸುತ್ತಲೂ ಕುಂತಿರುವ ಮಂದಿಯ ನಡುವೆ ಅವಳಿಗೆ ಹೇಗೆ ಹೇಳಬೇಕೆಂಬುದು ಆ ಹುಡುಗನಿಗೆ ತಿಳಿಯದೆ ಅವನು ಹತಾಶನಾದನು.

ಸ್ವಾಮೀಜಿಯವರ ಆಶೀರ್ವಚನ ನಡೆದಿರುವಾಗಲೆ ಎಮ್ಮೆಲ್ಲೆಯವರು ತಮ್ಮ ಮೊಬೈಲ್‌ನಲ್ಲಿ ಬಿಜಿಯಾದರು. ಆ ಮಾತು ಬೇಗ ಮುಗಿಯಲಾರದವು ಮತ್ತು ಗಹನವಾದವು ಆಗಿದ್ದರಿಂದ ಅದರಿಂದ ಸಭೆಗೆ ತೊಂದರೆಯಾಗಬಾರದೆಂದು ಎಮ್ಮೆಲ್ಲೆಯವರು ವೇದಿಕೆ ಬಿಟ್ಟು ಈ ಕಡೆ ಸೈಡ್‌ಗೆ ಬಂದರು. ಆ ಫೋನ್‌ನಲ್ಲಿ ಸಂಭಾಷಣೆಯು ತುಂಬಾ ಗಂಭೀರವಾದುದೆಂದು ಎಮ್ಮೆಲ್ಲೆಯವರ ಉದ್ವೇಗದಿಂದ ಗೊತ್ತಾಗುತ್ತಿತ್ತು. ಆಡಳಿತ ಪಕ್ಷದಲ್ಲಿ ಭಿನ್ನಮತ ಚಟುವಟಿಕೆ ಹೆಚ್ಚಾಗಿರುವುದರಿಂದ ಅವರಿಗೆ ಬೆಂಗಳೂರಿಗೆ ಬರುವಂತೆ ಕರೆ ಬಂದಿರಬೇಕು. ಅದಕ್ಕಾಗಿ ತಮ್ಮ ಸಂಭಾಷಣೆ ಮುಗಿಯುತ್ತಿದ್ದಂತೆ ಶ್ರೀಗಳ ಅಪ್ಪಣೆ ಪಡೆದು ಅಲ್ಲಿಂದ ತೆರಳಿದರು.

ಸಮಾರಂಭ ಮುಗಿದು ಎಲ್ಲ ಭಕ್ತಾಧಿಗಳು ಪ್ರಸಾದ ಸ್ವೀಕರಿಸಲೆಂದು ಅತ್ತ ಕಡೆ ಎದ್ದುಬಿಟ್ಟರು. ಸಮಾರಂಭ ಮುಗಿಯುವುದನ್ನೇ ಕಾಯುತ್ತಿದ್ದ ರಮೇಶ 'ಎಲ್ಲೀ ಪ್ರಸಾದ? ನಡಿರಿ ಮನೆಗೆ ಹೋಗುಣು' ಜೋರಾಗಿ, ಅಸಮಾಧಾನದಿಂದ ಹೇಳಿದಾಗ ಪ್ರಸಾದವನ್ನು ಕಡೆಗಣಿಸತ್ತಿರುವ ಮಗನಿಗೆ ಸಿದ್ದಪ್ಪ 'ಹೇ..! ಹುಚ್ಚ ಅದಿಯೋ ಶ್ಯಾಣ್ಯಾ ಅದಿಯೋ.. ಹಂಗ್ ಮಾತಾಡಬಾರದು' ಎಂದು ಜಬರಿಸಿದನು.

ಏಕಾಏಕಿ ಎಮ್ಮೆಲ್ಲೆ ಬಂದುಬಿಟ್ಟನೆಂದೂ, ಅವನು ಮಠಕ್ಕೆ ಲಕ್ಷಗಟ್ಟಲೆ ರೊಕ್ಕ ಕೊಡುವನೆಂದ ಮಾತ್ರಕ್ಕೆ ಸಿದ್ದಪ್ಪನನ್ನು ಬಿಟ್ಟು ಅವನಿಗೆ ಸನ್ಮಾನ ಮಾಡಿದ್ದು ಗೌಡರಿಗೆ ಎಳ್ಳಷ್ಟೂ ಮನಸ್ಸಿಗೆ ಬಂದಿರಲಿಲ್ಲ. ಇಂದೋ.. ನಾಳೆಯೋ.. ಎಂದು ದಿನಗಳನ್ನು ಎಣಿಸುತ್ತಿರುವ ಸರ್ಕಾರದಲ್ಲಿರುವ ಎಮ್ಮೆಲ್ಲೆಯ ಮಾತನ್ನು ಶ್ರೀಗಳು ನಂಬಿದರಲ್ಲ..!? ಎಂದು ಗೌಡರು ಹಳಹಳಿಸುತ್ತಿದ್ದರು. ಅವರು ವಿರೋಧ ಪಕ್ಷದ ತಾಲೂಕು ಘಟಕದ ಅಧ್ಯಕ್ಷರಾಗಿದ್ದರಿಂದ ಆಡಳಿತ ಪಕ್ಷದವರ ಮೇಲೆ ಗೌಡರಿಗೆ ಅಷ್ಟು ವಿಶ್ವಾಸವಿರಲಿಲ್ಲ. ಮಠದಲ್ಲಿ ಹೆಚ್ಚು ಹೊತ್ತು ನಿಲ್ಲದೆ ತಮ್ಮ ಕಾರಿನ ಬಳಿ ಬಂದು ಸಿದ್ದಪ್ಪನಿಗಾಗಿ ಅತ್ತಿತ್ತ ಕಣ್ಣಾಡಿಸಿದರು. ಆ ಗದ್ದಲದಲ್ಲಿ ಅವನೆಲ್ಲಿ ಕಾಣಬೇಕು..?

ಭರ್ತಿ..! ಪ್ರಸಾದ ಸ್ವೀಕರಿಸಿದ ಮಂದಿ ರಸ್ತೆ ಅಗಲಕ್ಕೆ ಸಾಲದೆಂಬಂತೆ ತಮ್ತಮ್ಮ ಮನೆಯ ಕಡೆ ನಡೆದಿದ್ದರು. ಅವರ ನಡುವೆ ಮೋಟರ್ ಸೈಕಲ್‌ನವರು ಹಾದಿಗಾಗಿ ಹಾರ್ನ್ ಮಾಡುತ್ತಲಿದ್ದರು. ನಿದ್ದೆಯಲ್ಲಿದ್ದ ಸಣ್ಣವಳನ್ನು ಸಿದ್ದಪ್ಪ ಹೆಗಲ ಮೇಲೆ

ಮಲಗಿಸಿಕೊಂಡಿದ್ದ. ಇನ್ನೊಬ್ಬಳನ್ನು ಹನುಮವ್ವ ಕೈ ಹಿಡಿದುಕೊಂಡು ನಡೆಯುತ್ತಿದ್ದಳು. ಇವರ ಹಿಂದೆ ನಡೆಯುತ್ತಿದ್ದ ಮಗ ಮಾತ್ರ ಯೋಚನೆಯ ಹುದಲಲ್ಲಿ ಸಿಲುಕಿಕೊಂಡಿದ್ದ. ಏನೂ ಆಗೇ ಇಲ್ಲ ಎಂಬಂತೆ ನಡೆದಿದ್ದ ಅಪ್ಪನನ್ನು ಕಂಡು ರಮೇಶನಿಗೆ ಅತೀವ ಆಶ್ಚರ್ಯವಾಗಿತ್ತು. ಈ ಸನ್ನಿವೇಶದಲ್ಲೂ ತುಂಬ ನಿರಾಳವಾಗಿರುವ ಅಪ್ಪನನ್ನು ಮೆಚ್ಚಿಕೊಳ್ಳಬೇಕೋ.. ಅಥವಾ ಅವನಿಗಾಗಿರುವ ಅವಮಾನಕ್ಕೆ ವ್ಯಥೆ ಪಡಬೇಕೋ.. ಎಂಬುದು ಮಗನಿಗೆ ತಿಳಿಯಲಿಲ್ಲ.

ಮತ್ತದೆ ಕೋಳಿ ಕೂಗದ ಮುನ್ನ ಜಾವಿನಲ್ಲಿ ಸಿದ್ದಪ್ಪನು ಶ್ರೀ ಮಠದ ಆವರಣದಲ್ಲಿ ಕಸಬರಿಗೆಯಿಂದ ಚಿತ್ತಾರ ಬರೆದಿದ್ದನು. ನಿನ್ನೆಯ ಜನಸಂದಣಿಯಿಂದ ಕಸ ಹೆಚ್ಚಾಗಿತ್ತು. ತೆಂಗಿನಕಾಯಿಯ ಜುಬ್ಬರ, ಊದುಬತ್ತಿ–ಕರ್ಪೂರಗಳ ಕವರ್ರು, ಕಾಗದದ ತುಣುಕು ಎಲ್ಲ ಕೂಡಿಸಿದಾಗ ಒಂದು ರಾಶಿಯಾಯಿತು. ಮಠದಾಚೆಗೆ ಅದನ್ನು ಚೆಲ್ಲಿ ಅದಕ್ಕೆ ಬೆಂಕಿ ಹೆಚ್ಚಿದನು. ಅದರಲ್ಲಿ ಯಾವ ಘನ ವಸ್ತುಗಳು ಇಲ್ಲದ್ದರಿಂದ ಕಸ ನಿಮಿಷ ಒಂದರಲ್ಲಿಯೇ ಪುರುಪುರು ಉರಿದು ಹೋಯಿತು.

❖

(ವಿಜಯ next – ಮೇ 16, 2013)

ಮತ್ತೆ ಮಳೆ ಬಂತು

ಶಿವಲಿಂಗಪ್ಪ ಹಂದಿಹಾಳು

"ಬುಡಬ್ಯಾಡ್ರಲೇ ಹಿಡಕಳ್ರಿ ಹಿಡಕಳ್ರಿ ಆ ಕಡೆಲಿಂದ ಬರ್‍ರಲೇ, ಬಡಿಗೆ ತಗಂಬರ್ರಿ, ಹಗ್ಗತಗಳ್ರಿ ಇವತ್ತು ಈ ನನ್ಮಗನ್ನ ಜೀವಸಹಿತ ಬುಡ ಪ್ರಸಕ್ತೇ ಇಲ್ಲ. ಈ ನನ್ಮಕ್ಕಳ ಕಾಲಾಗ ಹೆಣ್ಮಕ್ಕಳು ಸೊಂತಾಂಡು ಕೂಡ ಹೊರಗ ಹೋಗಲಾರದಂಗ ಆಗಿ ಮನೆ ಸುತ್ತಮುತ್ತಲೆಲ್ಲಾ ಗೊಬ್ಬು ನಾರಾಕ ಹತ್ತೇತಿ, ಬುಡಬ್ಯಾಡ್ರಲೇ ಹಿಡಕಳ್ರಿ".

ಚಿಂತಗುಂಟೆ ಈರಣ್ಣ ದೊಡ್ಡಕಾಲೇವು ಕಂಟ್ರಪೆಂಟಿಗೆ ಕುಂತ್ಗೊಂಡು ಒಂದೇ ಸಮನೆ ಅರ್‍ಸುತ್ತಿದ್ದ. ಕಾಲಿಲ್ಲದಿದ್ರೂ ಕುಂಟಿಗಾಂತ ಕಳ್ಳರನ್ನ ಹಿಡ್ಯಾಕ ಸವೊತ್ತಿನ್ಯಾಗ ಕಾಲೇವು ತಾಕಲ್ಲ ಬಂದು ಹುಡುಗರನ್ನ ಹುರಿದುಂಬಿಸುತ್ತಿದ್ದ. ಇವರು ಊರಾಗ ಕಳ್ಳತನ ಮಾಡಿ ಹಳ್ಳದ ಬೀಳಿನ ಅಂಚಿಲಿದ್ದ ಪಾರಾಗಿ ಕಾಲೇವು ಮಾರ್ಗವಾಗಿ ಬಂದು ಗುಡ್ಡದಾಗ ವಕ್ಕಂತಿದ್ರು. ಇವರನ್ನು ಹಿಡ್ಕಂಬಕ ದಿವ್ಸಾ ಕಾಲೇವುತಾಕ ಬಂದು ನಿದ್ದೆಗಾತು ಸಾಕಾಗುತ್ತಿತ್ತು ಒಬ್ಬರನ್ನ ಕಳ್ಳರು ಸಿಕ್ಕಿರಲಿಲ್ಲ. ಸದ್ಯ ಶಿವಪ್ಪತಾತನ ಆಶೀರ್ವಾದವೋ ಏನೋ ಸರೀಗೆ ಅಮಾಸೆ ದಿನ ಕಳ್ಳ ಸಿಗೆಬಿದ್ದಿದ್ದ. ಹುಡುಗ್ರು ಅಂಚಿನ ಬಡಿಗೆ ತಗಂಡು ಹಿಂಬಾಲೆತ್ತಿ ಕೊರ್ಲಗುಂದಿ ಕೆರೆ ಸನ್ಯಾಕಲ್ಲ ಹೋಗಿ ದಮ್ಮೂರು ಮಾನಗನ ಹೊಲದಾಗ ಕಳ್ಳನ ಸೆರೆ ಹಿಡಕಂಡಿದ್ರು, ಸಿಕ್ಕ ಕೂಡಲೇ ಮುಖ ಮುಕುಳಿ ನೋಡಲಾರದಂಗೆ ಕಂಡಾಬಟ್ಟೆ ಬಡ್ದಾಬಡ್ದು. ಬಾಯಿಗೆ ಬಂದಂಗ ಏಟೇಟು ಸಂಸ್ಕೃತ ಬರುತ್ತೋ ಅಷ್ಟೂ ಪ್ರತಿಭೆಯನ್ನ ಬೈಗಳ ಮೂಲಕ ಹೊರಹಾಕಿದ್ರು. "ನನ್ನ ಬುಟ್ಟಬುಡ್ರಪ್ಪೋ, ದೇವರಾಣೆಗೂ ನಾನು ಕಳ್ಳ ಅಲ್ಲ. ಬುಟ್ಟು ಬುಡ್ರಪ್ಪೋ" ಎಂದು ಒಂದೇ ಸಮನೆ ಅರ್‍ಸಿದ್ರೂ ಇದ್ಯಾವುದನ್ನು ಲೆಕ್ಕಿಸದೆ ಬಹಳ ದಿನ ಕಾದ ನಂತರ ಸಿಕ್ಕವನನ್ನು ಬದುಕಿದ್ದೂ ಸತ್ತ ಹೆಣ ಹೊತ್ಗಂಡ ಬಂದಂಗೆ ಎರಡು ಕೈ ಕಾಲು ಹಿಡ್ಕಂಡು ಕಂಟ್ರಪೆಂಟಿಗ್ಗೆ ಹೊತ್ಗಂಡ ಬಂದ್ರು ಕಾಲೇವು ಮಿರ್ಜಿ ಮ್ಯಾಲೆ ಅವನ್ನ ಇಳ್ಸಿ ಮತ್ತೆ ಇಚ್ಚ ಬಂದಂಗ ತಲಾಕ ನಾಕೇಟು ಹಾಕಿದ್ರು.

"ನಿಂತಗಳ್ರಲೇ, ನಿಂತಗಳ್ರಿ. ಇನ್ನ ಹೆಚ್ಚು ಬಡುದ್ರೆ ಇವನು ಮ್ಯಾಕ ಹೋದಾನು, ಸಾಕು ಮಾಡ್ರಿ" ಈರಣ್ಣ ಮುದ್ಯಾತ ಆದೇಶಿಸಿದ.

"ಈರಣ್ಣ ಮುದ್ಯಾತ ಇಂತ ನನ್ಮಕ್ಕಳು ಇದ್ರೇಟು ಹೋದ್ರೇಟು ಹಾಕಿಬುಡತೀನು ಬುಡು" ಸಿದ್ಲಿಂಗ ಅಂಚಿನ ಬಡಿಗೆ ಎತ್ತಿ ಗುಡುಗಿದ.

"ಲೇ, ಸಿದ್ಲಿಂಗ ತಡಕಳ್ಳಲೇ ಅದಕಾ ನಿನ್ನ ಹುಡುಗಬಟ್ಟೆ ಅಂಬದು, ಈಸ ದಿನಲಿಂದ ಏಸೊಂದು ಕಳ್ಳತನ ಆಗ್ಯಾವ. ಏಸ ಸಾವ್ರ ರೊಕ್ಕ ಹೋಗ್ಯಾವ, ಏಸ್ತೊಲೆ ಬಂಗಾರ, ಪಾತ್ರೆ ಪಡಗ ಹೋಗ್ಯಾವ, ಏಸ ಎತ್ತುಗಳು ಕಣ್ಣಿ ಬಿಚ್ಯಾರ ಗೊತ್ತತಿಲ್ಲ ನಿನಗೆ"?.

"ಗೊತ್ತು ಬುಡು ಮುದ್ಯಾತ ಈಗೇನು, ಇವನ್ನ ಬುಟ್ಟುಬುಡು ಅಂತೀಯಾ?".

"ಅಂಗಲ್ಲಲೇ, ಈವಾಗ್ಲೇ ಇವನು ಮೆತ್ತಗಾಗ್ಯಾನ, ಇನ್ನ ನಾಕೇಟು ಜಾಸ್ತಿ ಬಿದ್ದು ಅವನು ಒಂಟೋದ್ರೆ, ಈಸದಿನ ಹೋದ ಸ್ವಾಮಾನ ವಾಪಾಸು ಹೆಂಗ ಬರ್ತಾವಲೇ ದಡ್ಡಾ?"

"ಹೌದು ಮುದ್ಯಾತ, ನೀನ್ಹೇಳದೂ ಖರೇವೈತೆ. ನೀನೆ ಹೇಳು, ಈಗ ನಾವೇನು ಮಾಡಾನ?"

"ಇದಪ್ಪಾ ಶಾಣೇರ ಲಕ್ಷಣ. ಈವಾಗ ಇನ್ನೂ ಮೂರು ಗಂಟೆ ಆಗೈತೆ. ಊರಾಗ ಜನ ಇನ್ನೂ ಮಕ್ಕಂಡಿರ್ತಾರ, ಇನ್ನ ಕೋಳಿ ಕೂಗ್ಬೇಕು, ಚುಕ್ಕೆ ಸಾಯ್ಬೇಕು, ಬೆಳಕು ಹರಿಬೇಕು ಇದೆಲ್ಲಾ ಆಗಾಕ ಬಾಳಾ ಹೊತ್ತೈತೆ. ಇವನ್ನ ಓರ್ಬಾಯಿ ಪಂಪಣ್ಣನ ಪೊಂಪಸೆಟ್ಟಿನ ರೂಮಿನ್ಯಾಗ ಬಚ್ಚಿಕ್ಕಿ ನಾವು ಇಲ್ಲೇ ಕಾಲೇವು ಗಡ್ಡಿಗೆ ಮಕ್ಕಂಡು ಮುಂಜೇಲೆ ನಸಿಗ್ಗೆ ಇವನ್ನ ಪಂಚಾಯ್ತಿ ಕಟ್ಟಿಗೆ ಹೊಯ್ದು ಬಿಸ್ಯಾಕನ ಸರೀನಾ?"

ಎಲ್ಲರೂ ಈರಣ್ಣನ ಮಾತಿಗೆ ಹೂಂಗುಟ್ಟಿ, ಕಳ್ಳನ್ನ ರೂಮಿನ್ಯಾಗ ಹಾಕಿ ಗೋಣಿ ತೊಟ್ಟಿನ ಮ್ಯಾಲೆ ಕಾಲೇವು ಗಡ್ಡಿಗೆ ಅಡ್ಡಬಿದ್ದು ಬೆಳಗಾಗುವುದನ್ನ ಕಾದ್ರು.

ಬರೇ ನಮ್ಮೂರಲ್ಲಿ ಅಷ್ಟೇ ಅಲ್ಲ, ಸುತ್ತಮುತ್ತಲ ಊರನ್ಯಾಗೂ ಈ ಗಾಳಿ ಕಾಲ ಬಂತಂದ್ರೆ ಸಾಕು, ಬ್ಯಾಸಿಗೆ ಇನ್ನ ಹೋಗಿರಕಲ್ಲ, ಮಳೆ ಇನ್ನ ಬಂದಿರಕಲ್ಲ, ಬದುಕು ಬಾಳೇವು ಒಂದೂ ಇರಕಲ್ಲ, ಬೇಸು ಉಂಡು ಕುಡ್ದು ಮಜಾ ಮಾಡಿದ ಜನಕ ಬದುಕಿಲ್ಲದೆ, ರೊಕ್ಕ ಇಲ್ಲದೆ ಸುಮ್ನೆ ಮನ್ಯಾಗ ಕುಂದ್ರವಕಂದ್ರೆ ಹೆಂಗಾಗುತ್ತೆ? ಕೈಯ್ಯಿ ಕಡೇಕೆ ಸರುವು ಮಾಡ್ತೇತಿ. ಎಲ್ಲೋ ಮರೆಮಾಚಿದ್ದ ಕಳ್ಳ ಕಸುಬು ಒಮ್ಮೆಲೇ ನೆಪ್ಪಿಗೆ ಬಂದು ಬುಡ್ತತೆ. ರಾತ್ರಿ ಆದ್ರ ಸಾಕು ಕೈಗೆ ಬಾಯ್ಗೆ ಸಿಕ್ಕಿ ಸಿಕ್ಕಿದ್ದನ್ನ ದೋಚಕ ಸುರುವು ಮಾಡ್ತಾರ. ಈ ಕಳ್ರು ನಮ್ಮೂರಿನವರಲ್ಲ. ನೆಣಿಕೆ, ಎಳ್ಳಾರ್ತಿ, ಕೋಗಲದಾಟ, ಗೊಲ್ಲರಹಾಳು ಮುಂತಾದ ಊರುಗಳಿಂದ ತಂಡಪ್ಪ ತಂಡ ಬರ್ತಾರ.

ಈ ಕಾಲದಾಗ ಯಾವೂರಾಗನ್ನ ನೋಡ್ಲಿ ಕಳ್ಳರ ಕಾಟ ಮಾಮೂಲಿ. ಮದುವೆ ಮುಂಜಿ ಇರಬಹುದು; ಇಲ್ಲದಿರಬಹುದು. ಆದ್ರೆ ಕಳ್ಳರ ಗದ್ದಲವಂತೂ ಇದ್ದೇ ಇರುತ್ತೆ. ಈ ಕಳ್ರು, ಹೆಣ್ಣು ಗಂಡು ಸೇರಿ ಭೇದ ಭಾವ ಇಲ್ದಂಗ ಕಳ್ಳತನಕ್ಕ ಇಳಿತಾರ. ರಾತ್ರೆಲ್ಲಾ ಊರ್ರುಗಳಾಕ ಹೋಗಿ ಕಳ್ಳತನ ಮಾಡಿ ಹಗಲೊತ್ತಿನ್ಯಾಗ ಗುಡುದೂರು ಸಣ್ಣಗುಡ್ಡದಾಗ ಕೊಲ್ಲಿನ ಕ್ವಾರ್ಯಾಗ ಬಚ್ಚಿಕಂಡು ಮತ್ತೆ ರಾತ್ರಿ ಪ್ರತ್ಯಕ್ಷ ಆಗ್ತಾರ. ಅಡಿವ್ಯಾಗ ಯಾರ ಕೈಯಾಗಾದ್ರೂ ಸಿಕ್ಕರೆ ನಾವು ಮೊಲ ಹಿಡ್ಯಾಕ ಬಂದೀವಿ, ಕೌಜು ಹಿಡ್ಯಾಕ ಬಂದೀವಿ, ಮೀನು ಬಲೆ ಹಾಕಿದ್ವಿ ಅದಕ್ಕೇ ಇಲ್ಲೇ ಇದ್ವಿ ಅಂತ ಏನೇನೋ ಸುಳ್ಳು ಹೇಳಿ ಕಂಡೋರ ಬಾಯಿ ಮುಚ್ಚಿಸೋವಷ್ಟು ಚಾಲಾಕಿ ಜನ ಇವರು.

ಬೆಳಕಾಗುವುದನ್ನೇ ಕಾಯುತ್ತಾ ಕೋಳಿ ನಿದ್ದೆಯಲ್ಲಿ ನಿರತರಾದ ಚಿಂತಗುಂಟೆ ಈರಣ್ಣನ ಪಡೆಯವರಿಗೆ ಸೂರ್ಯನನ್ನು ಹಿಡಿದೆಳೆದು ತರುವಷ್ಟು ಕಾತರ. ಯುದ್ಧ ಗೆದ್ದಷ್ಟು ಆನಂದ. ಇನ್ನೂ ನಸಿಕಿರುವಾಗ್ಲೇ ಎಲ್ರೂ ಎದ್ರು. ಸಿದ್ಲಿಂಗನ ಕಾಲಿಗೆ ನಗ್ಗಿನ ಮುಳ್ಳು ಚುಚ್ಚಿತ್ತು, ದುಬ್ಬ ಶೀನನ ಅಂಗಿ ತುಂಬ ಅಂಟ್ರಿಕೆ ಹಿಡಕಂಡಿದ್ದವು, ಸಿಂಕೇಟಿಯ ಹೆಬ್ಬೆಳ್ಳು ಎಡವಿ ರಕ್ತ ಒಸರುತ್ತಿತ್ತು. ಇದ್ಯಾವುದನ್ನು ಲೆಕ್ಕಿಸದೆ ಕಳ್ಳನನ್ನ ಊರಿಗೆ ಒಪ್ಪಿಸಿ ವೀರ ಯೋಧರ ಪಟ್ಟ ಅಲಂಕರಿಸಬೇಕೆಂಬ ಉತ್ಕಟ ಇಚ್ಚೆ ಇವರದು. ಅದಕ್ಕೋಸ್ಕರ, ಸಣ್ಣಗುಡ್ಡದಿಂದ ಸೂರ್ಯ ಸಿಡಿಯೋಕೆ ಇನ್ನೂ ಒಂದು ತಾಸಿದ್ದರೂ; ಮೂರು ಕಿಲೋಮೀಟರಿನ ದಾರಿ ಸಾಗೋದ್ರೊಳಗೆ ಬೆಳಕು ಬರಬಹುದೆಂದು ಹೊತ್ತು ಮುಂಕಟ್ಟಿಗೆ ಕಳ್ಳನನ್ನ ಒರ್ಬಾಯಿ ಪಂಪಣ್ಣನ ಪೊಂಪಸೆಟ್ಟಿನಿಂದ ರಿಲೀಸ್ ಮಾಡಿಕೊಂಡು ಊರಿನ ಕಡೆಗೆ ಹೆಜ್ಜೆ ಹಾಕಿದ್ರು. ನಾನು ಕಳ್ಳ ಅಲ್ಲ, ನಾನು ಕಳ್ಳ ಅಲ್ಲ ಅಂತ ವೈಯ್ಯಕ್ಕುತ್ತಿದ್ದ ಕಳ್ಳನ ಬಾಯಿಗೆ ಬಟ್ಟೆ ತುರುಕಿ ಕಾಡು ಹಂದಿಯನ್ನ ಹೊತ್ಗಂಡು ಬಂದಂಗೆ ಅಂಚಿನ ಬಡಿಗೆಗೆ ಕಟ್ಟಿ ಹೊತ್ಗಂಡು ಬಂದ್ರು.

ಅಷ್ಟೊತ್ತಿಗೆ ಹನುಮಂತರಾಯನ ಗುಡ್ಯಾಗ ಎದ್ದೇಳು ಮಂಜುನಾಥ ಎರಡು ಸಲ ತಿರುವಿ ಬಂದಿತ್ತು. ಊರಾಗಿರೋ ಸೊಸೇರಿಗೆಲ್ಲಾ ಅಡ್ಡ ಹೆಸ್ರು ಇಟ್ಟು ಅಣಕಿಸೋ ಕಟಂಬಲಿ ರಾಮಪ್ಪ ಬೆಳ್ಳಂಬೆಳಿಗ್ಗೆ ತಣ್ಣೀರು ಸ್ನಾನ ಮಾಡಿ ಸೂರ್ಯನನ್ನ ಕಾಯುತ್ತಾ ಕುಳಿತಿದ್ದ. ಗುಡ್ಡದ ಗೋಣಮಗ ತಿಮ್ಮಣ್ಣ ಎತ್ತುಗಳು ಹೊಡ್ಕಂಡು ಗಳೇವು ಹೊಡ್ಯಾಕ ಒಂಟಿದ್ದ. ಶಿವಪ್ಪತಾತನ ಗುಡ್ಯಾಗ ಸಾಧು ಸಜ್ಜನ ಸೇವಕರು ಭಜನೆ ಮುಗಿಸಿ ಮನೆ ಕಡೆಗೆ ತೆರಳುತ್ತಿದ್ದರು. ಎಂಡೆಗಸ ಹೊರೋರು, ಕಾಯಿಗಡ್ಡೆ ಮಾರೋರು, ಕಟಿಗೆ ಕಡ್ಯಾಕ ಹೋಗೋರು; ಹೀಗೆ ಹಂದಿಹಾಳು ಎಂದಿನಂತೆ ತನ್ನನ್ನು ತಾನು ಎಬ್ಬಿಸಿಕೊಳ್ಳುತ್ತಿರುವಾಗಲೇ, ಚಿಂತಗುಂಟೆ ಈರಣ್ಣನ ದಂಡು ಹಂದಿಹಾಳು ಹೊಲಮ್ಯಾರೆ ದಾಟಿಗಂಡು ಊರಾಕ ಹೆಜ್ಜೆ ಇಡ್ತು. ಪಂಚಾಯ್ತಿ ಕಟ್ಟೆ ಸಮೀಪಿಸಿದಂತೆ ರೋಡಮ್ಯಾಗಳ ಜನ ಬೆಲ್ಲಕ ಇರುವೆ ಮುಕ್ಕರಿಕೆಂಡಂಗೆ ಮುಕ್ಕರಿಕಂಡ್ರು. ದುಬ್ಬಶೀನ ತಳವಾರ ದುರುಗಯ್ಯನ ಕರಕಬಂದು ಪಂಚಾಯ್ತಿ ಬೀಗ ತೆಗೆಸಿ ಅವನ್ನ ಒಳಗೆ ಹಾಕಿ ವೀರಯೋಧನ ಫೋಜು ಕೊಟ್ಟ. ಅಷ್ಟೊತ್ತಿಗೆ ಊರು ತುಂಬ ಗಬ ಗಬ ಅಂತ ಸುದ್ದಿ ಹಬ್ಬಿಬುಡ್ತು. ಕಳ್ಳನನ್ನ ಹಿಡಕಂಡು ಬಂದ ಸಿದ್ಲಿಂಗ, ದುಬ್ಬಶೀನ, ಸಿಂಕೇಟಿ, ಈರಣ್ಣ ಇವರೆಲ್ಲಾ ರಾತ್ರಿಗೆ ರಾತ್ರಿ ಊರಿನ ಹೀರೋಗಳಾಗಿ ಬಿಟ್ರು. ಗಂಟೆ ಎಂಟಾಗಿರಬಹುದು, ಗ್ರಾಮಪಂಚಾಯ್ತಿ ಅಧ್ಯಕ್ಷ ಲೋಕಪ್ಪ ಮೀಸೆ ತಿರುವಿಕಾಂತ, ಫೋನಿನಾಗ ಏನೇನೋ ಗಟ್ಟಿಗಟ್ಟಿಗೆ ಒದರಿಕಾಂತ ಪಂಚಾಯ್ತಿಗೆ ಬಂದ.

ಸತ್ತ ಹಾವು ಬಡ್ಯಾಕ ನಾನು ಮುಂದು ತಾ ಮುಂದೆನ್ನುವ ಮಂದಿ; “ಇವನನ್ನ ಕೈ ಕಾಲು ಮುರ್ದು ಕಾಲೇವುನಾಕ ಹಾಕಾನ” ಅಂದನೊಬ್ಬ, “ಬ್ಯಾಡ, ಬ್ಯಾಡ ತಲೆಬೋಳಿಸಿ ಬರೇ ಬೆತ್ತಲೆ ಮಾಡಿ ಮೆರವಣಿಗೆ ಮಾಡಾನ” ಅಂದ ಇನ್ನೊಬ್ಬ ಭೂಪ.

ಕುಕ್ಕರಗಾಲಲ್ಲಿ ಕುಂತಿದ್ದ ಈರಣ್ಣ ಮುದ್ಯಾತ ಒಮ್ಮೆಲೇ ಸಿಟ್ಟಾಗಿ "ಸುಮ್ನಿರಲೇ ಕಳ್ಳನಿಗ್ಯಾಕೆ ಮೆರವಣಿಗೆ, ಪೋಲೀಸಿನೋರಿಗೊಪ್ಪಿಸಿದ್ರೆ ಅವರೇ ಮದುವೆ, ಮೆರವಣಿಗೆ ಎಲ್ಲಾ ಮಾಡಿ ನಮ್ಮ ಸ್ವಾಮಾನುಗಳು ವಾಪಾಸು ತಂದು ಕೊಡ್ತಾರ".

"ಹೌದು ಈರಣ್ಣ ಮುದ್ಯಾತ ಹೇಳೋದು ಕರೆಕ್ಟು ಐತೆ" ಹಂಗೇ ಮಾಡಾನಂದ ಅಧ್ಯಕ್ಷ ಲೋಕಪ್ಪ.

ಈ ಪಂಚಾಯ್ತಿ ನೋಡಾಕ ಊರಿನ ಹೆಣ್ಣು ಗೊಂಡು ಬಂದಿದ್ದರು. ಕಾಯಿಗಡ್ಡೆ ಮಾರೋ ಅಂಗಡಿ ಲೊಸಮಮ್ಮ, ಹೋಟೆಲ್ ಹಂಪಮ್ಮ, ಬೀಡಿ ಅಂಗಡಿ ಹುಸೇನ್‌ಬೀ, ಈರವ್ವ ಜೋಗತಿ ಎಲ್ಲರೂ ತಮ್ಮೆಲ್ಲಾ ಕೆಲಸ ಬಿಟ್ಟು ಬಂದಿದ್ರು. ನೆರೆದಿದ್ದ ಈ ಜನಸಾಗರದ ಮಧ್ಯೆ ಇಲ್ಲಿಯವರೆಗೆ ಸುಮ್ಮನಿದ್ದ ಕಳ್ಳ; ಯಪ್ಪೋ ಯಪ್ಪೋ ನಾನು ಕಳ್ಳ ಅಲ್ಲ, ಬುಟ್ಬ ಬುಡ್ರಪ್ಪೋ.. ಅಂದ. ಅಲ್ಲೇ ಕುಂತಿದ್ದ ಕಟ್ಟುಮಸ್ತ ಆಳು ನಾಗಯ್ಯ ಎಡಗಾಲು ಚಪ್ಪಲಿ ಕಿತ್ತಿ "ಸುಳ್ಳು ಹೇಳ್ತೀಯೇನಲೇ ಮಗನೇ" ಎಂದು ಬಾರಿಸಿದ. ಅವನೇಟಿಗೆ ಕಳ್ಳ ಕೆಲ ಹೊತ್ತು ನಿಚ್ಚಳವಾಗಲಿಲ್ಲ. ಲೋಕಪ್ಪ ನೀರು ಹಾಕಿ ಎಬ್ಬಿಸಿದ. ಅವನು ಮತ್ತೆ ಗೋಗರೆಯಲು ಶುರುಮಾಡಿದ. ಯಪ್ಪೋ ಯಪ್ಪೊ ನಾನು ಕಳ್ಳ ಅಲ್ಲ ಬುಟ್ಬು ಬುಡ್ರಪ್ಪೋ. ಈ ಬಾರಿ ಲೋಕಪ್ಪ ಯಾರನ್ನೂ ಹದ್ದು ಮೀರಲು ಬಿಡದೆ ತಾನೇ ಮುಂದೆ ಬಂದು 'ತಮ್ಮಾ ನೀನು ನಿಜ ಹೇಳಿ ತಗೊಂಡೋಗಿದ್ದೆಲ್ಲಾ ವಾಪಾಸು ಕೊಟ್ಟಿಡು. ನಾನು ನಿನಗೆ ಏನೂ ಆಗಲಾರದ ಹಾಗೆ ನೋಡ್ಕಂತೀನಿ'. 'ಇಲ್ಲಪ್ಪೋ ನಾನು ಕಳ್ಳ ಅಲ್ಲ, ನನ್ನ ಮಾತು ನಂಬ್ರಿ'. 'ಲೋಕಪ್ಪಣ್ಣಾ ಈ ನನ್ಮಗ ನಾಟ್ಕ ಮಾಡ್ತಾ ಇದಾನೆ. ಇವನ ಮಾತು ನಂಬಬ್ಯಾಡ' ಸಿದ್ಲಿಂಗ ನಾಕೇಟು ಮುಕುಳಿಗೆ ಒದ್ದ. ಲೋಕಪ್ಪ ಬಿಡಿಸಿಕೊಂಡು 'ಲೇ ಸಿದ್ಲಿಂಗ.. ನಾನು ಮಾತಾಡ್ತಾ ಇದ್ದೀನಲ್ಲಾ ತಡ್ಕ, ಹೇ ತಮ್ಮಾ ಕೊನೇ ಬಾರಿ ಕೇಳ್ತಾ ಇದ್ದೀನಿ ನಿಜ ಹೇಳು; ಇಲ್ಲಾಂದ್ರೆ ಪೋಲೀಸರಿಗೊಪ್ಪಿಸಿದ್ರೆ ಅವರೇ ಎಲ್ಲಾ ಬಿಡ್ಸ್ತಾರೆ.. ನಿನ್ನಿಷ್ಟ'.

"ಇಲ್ಲಪ್ಪೋ ಇಲ್ಲ ಹೇಳ್ತೀನಿ ಹೆಳ್ತೀನಿ. ನನ್ನ ಹೆಸರು ಗಾದಿಲಿಂಗಪ್ಪ ನಮ್ದು ಇಲ್ಲೇ ಬಸರಕೋಡು ನಮ್ಮಪ್ಪನ ಕಾಲದಿಂದ ಬಂದ ನಾಕೆಕರೆ ಹೊಲ ಐತೆ" ಎನ್ನುವಾಗಲೇ,

"ಅಲ್ಲಲೇ ವಕ್ಕಲತನ ಮಾಡೋನು ಕಳ್ಳತನ ಮಾಡಾಕ ನಾಸಿಗೆ ಆಗಕಲ್ಲೇನು.. ನಿನ್ನಂತೋನೂ ಕಳ್ಳತನ ಮಾಡಾಕ ಬಂದಾನ ಅಂದ್ರೆ ನನಗೇ ನಾಸಿಗೆ ಆಗ್ತತಲೇ" ಅಂದಕಾಂತ ಈರಣ್ಣ ಮುದ್ಯಾತ ಅವನೆಡೆಗೆ ಬಡಿಗೆ ಮ್ಯಾಕೆತ್ತಿದ.

"ನಿಂತ್ಗಳ್ಳಪೋ, ನಮ್ಮ ಮನೆ ದೇವ್ರು ಗಾದಿಲಿಂಗಪ್ಪನಾಣೆಗೂ ನಾಸಿಗೆ ಜೊತೆಗೆ ಹೇಸಿಗೆ ಕೂಡ ಆಗ್ತತೆ. ಆದ್ರೆ ಏನಮಾಡ್ಲಿ, ನನಗೆ ನಾಕು ಜನ ಮಕ್ಕಳು. ಅದರಾಗ ಮೂರೆಣ್ಣು, ಒಂದು ಗೊಂಡು. ಮೂವರು ಹೆಣ್ಮಕ್ಕಳು ಮದುವೆ ಮಾಡಾಕ ಹೊಲ

ಅಡವಿಟ್ಟು ಮದುವೆ ಮಾಡಿದೆ; ಆಮ್ಯಾಕ ನಾನಂತೂ ಓದಲಿಲ್ಲ, ನನ್ನ ಮಗನಾದರೂ ಭೇಷ ಓದಿಕೆಂಬ್ಲಿ ಅಂತ ಅವನ್ನ ಇಂಜಿನೀರಿಂಗ್ ಸೇರ್‍ಸೀನಿ. ಹೆಂಗೂ ದೇವರ ಮೇಲೆ ಭಾರ ಹಾಕಿ ಮಾಡಿದ ಸಾಲಾನ ನಾಕೆಕರೆ ಹೊಲದಾಗ ನೆಲ್ಲು ಬೆಳೆದು ತೀರ್‍ಸಾನ ಅಂದ್ರ, ಹ್ವಾದ ಬ್ಯಾಸಿಗೆಲಿದ್ದ ಮಳೆ ಸರೀಗೆ ಬರದೆ ಹಾಕಿದ ಬೆಳೆ ಕೈಗೆ ಬರದಿರ್‍ಲಿ; ಸಾಲಕ್ಕೂ ಸಾಲಲಿಲ್ಲ. ಈ ವರ್ಷ ಮಗ ಇಂಜಿನೀರಿಂಗ್ ಎಲ್ಡನೇ ವರ್ಷ ಓದ್ತಾ ಇದಾನೆ. ಅವನಿಗೆ ಕಾಲೇಜು ಫೀಜು ಕಟ್ಟಬೇಕು, ಭಜ್ಜಿರೆಡ್ಡಿ ಸಾಲದ ಬಡ್ಡಿ ಕಟ್ಟಬೇಕು. ಬ್ಯಾಸಿಗೆ ಮುಗ್ಯಾಕ ಬಂದ್ರೂ, ಭೂಮಮ್ಮ ಬಾಯಿ ತೆರ್‍ಕಂಡು ಕುಂತಾಳ, ಒಣಗಿದ ಬಾಯಿಗೆ ಚಿಂಬ್ರುಸೋಕೂ ಹನಿ ನೀರು ಉದುರುವಲ್ದು. ಇನ್ನ ಈ ವರ್ಷ ಮಳೆ ಬಂದು, ಹೊಲಕ ನೀರು ಬಂದು, ನಾನು ಬೆಳೆ ಬೆಳೆದು ನನ್ನ ಸಾಲ ತೀರ್‍ಸಿದಂಗೆ! ನನ್ನ ಮಗ ಓದಿದಂಗೆ! ಹಿಂಗೇ ಏನೇನೋ ಯೋಚಿಸಿಗಾಂತ ಕುಂತಿರಬೇಕಾದರೆ, ಒತ್ತು ಮುಣಿಗೋಯ್ತು. ಎದ್ದು ಯಾವ ಕಡೆ ಒಂಟ್ನೆನೋ ತಿಳಿದಿರಲಿಲ್ಲ. ಗಾಳಿ ಬೀಸಿದಂಗೆ ಬಂದ್ಬುಟ್ಟೆ. ಮಗನ ಓದು, ಹೆಣಮಕ್ಕಳ ಮದುವೆ ಸಾಲ ಎಲ್ಲಾ ನೆಪ್ಪಿಗೆ ಬಂದು ವಕ್ಕಲತನ ಮಾಡಿ ಅನ್ನ ಹುಟ್ಸೋ ನಾನು ಕನ್ನ ಹಾಕೋ ನಿರ್ಧಾರಕ್ಕೆ ಬಂದೆ. ನಾನೇನ್ಮಾಡ್ಲಿ ಏಳ್ರಪ್ಪೋ ಈ ಪರಿಸ್ಥಿತ್ಯಾಗ ರೊಕ್ಕ ಇಲ್ದಂಗ ಮನಿಗೆ ಹೋದ್ರ ಮರ್ಯಾದೆ ಇಲ್ಲ. ಅಲ್ಲಿ ಅವಮಾನದಿಂದ ಸಾಯೋದಕ್ಕಿಂತ ನಿಮ್ಮ ಕೈಲಿ ಬಡಿಸಿಕೊಂಡು ಸಾಯ್ತೀನಿ. ನನ್ನ ಸಾಯ್ಸಿ ಬುಡ್ರಪ್ಪೋ ನನ್ನ ಸಾಯ್ಸಿ ಬುಡ್ರಿ.."

ಗಾದ್ಲಿಂಗಪ್ಪ ಇಷ್ಟು ಹೇಳಿದ್ರೂ ಯಾರೂ ತುಟಿ ಬಿಚ್ಚಲಿಲ್ಲ. ಅಂಗಡಿ ಲೊಸಮಮ್ಮಳಿಗೆ ತಡಕಂಬಕ ಆಗಲಿಲ್ಲ. 'ಲೋ ಸಿದ್ಲಿಂಗ ನಿನಗೆ ರೋಟನ್ನಾ ಕರ್‍ಣೆ ಅಂಬೋದು ಐತ್ಯಾ? ಏಟೇಟು ದೊಡ್ಡ ಕಳ್ಳತನ ಮಾಡಿದೋರೆಲ್ಲಾ ರಾಜರಂಗೆ ಮೆರಿತಾರೆ, ಈತ ಯಾವ ದೊಡ್ಡ ಮಹಾ ಹೇಳು?' ಅಂದ್ಲು.

'ದಿವಸಕ ನೂರು ಜನರ್‍ನ ಹೋಟೆಲಲ್ಲಿ ನೋಡೋ ನನಗೆ ಯಾರ ಕಳ್ಳ ಯಾರು ಸಾಚಾ ಅಂತ ಸಲೀಸಾಗಿ ಗೊತ್ತಾಗುತ್ತೆ. ನನಗೇನೋ ಈತ ಕಳ್ಳ ಅಂತ ಅನಿಸ್ತಾ ಇಲ್ಲ' ಅಂದ್ಲು ಹೋಟೆಲ್ ಹಂಪಮ್ಮ.

ಈ ಮಾತು ಕೇಳಿ ಲೋಕಪ್ಪ ಬಾಯಿ ಬುಟ್ಟ. 'ಮನ್ಯಾಗ ಕುಂತ್ಗಂಬ, ನಿಮ್ಗೇನು ಗೊತ್ತು? ಯಾವ ಕಳ್ಳಾನೂ ನಾನು ಕಳ್ಳ ಅಂತ ಒಪ್ಪಿಗಂಬಕಲ್ಲ; ನೀವೇನೇ ಹೇಳಿದ್ರೂ ಇವ್ನು ಮಾಡಿರೋದ್ನೆಲ್ಲಾ ಮುಚ್ಚಿಹಾಕಿ ಇವನ್ನ ಬುಡಾಕ ಆಗಲ್ಲ ತಿಳಕಳ್ಳಿ'.

ಈರವ್ವ ಜೋಗತಿಗೆ ನಾಲಿಗೆ ನಿಂದ್ರಲಿಲ್ಲ, 'ಅಲ್ಲಾ ಇಲ್ಲಿ ಸೇರಿರೋ ಗಂಡ್ಸೆಂಬ ಗಂಡ್ಸ್ರು ಎಷ್ಟು ಸಾಚಾಗಳು ಅಂತ ಲೋಕಕೆ ಗೊತ್ತೈತೆ. ನೀವು ಹಿಂದೆ ಮುಂದೆ ಮಾಡಿರೋ ಕೆಲ್ಸಗಳೆಲ್ಲಾ ನನಗೇನೂ ಗೊತ್ತಿಲ್ಲ ಅಂತ ತಿಳ್ಕಂಡೀರಾ ಹೆಂಗೆ? ನಮಗೆ

ಗಂಡಸ್ತನ ಸತ್ತಿರೋಬಹುದು ಆದರೆ ಮನುಷ್ಯತ್ವ ಸತ್ತಿಲ್ಲ. ಆಯಪ್ಪನ ನೋಡಿದ್ರೆ ನಿಮಗೆ ರೋಟನ್ನ ಕರುಣೆ ಬರುವಲ್ದು ಅಂದ್ರೆ ನೀವು ಮನುಷ್ಯರೇ ಅಲ್ಲ'.

ತನ್ನ ವಾರಿಗೆಯವರೆಲ್ಲಾ ಇಷ್ಟೆಲ್ಲಾ ಹೇಳಿದ ಮೇಲೆ ಹುಸೇನ್‌ಬೀ ಕೂಡ ಬಾಯಿ ಬಿಚ್ಚಿದ್ಲು; 'ಅಲ್ಲಾ, ನಾವು ದಿವ್ಸಕ ಗೊತ್ತಿದ್ದು, ಗೊತ್ತಿಲ್ದೆ ಏಸೊಂದು ತೊಪ್ಪು ಮಾಡ್ತೀವಿ. ಮತ್ತೆ ಅಲ್ಲಾನ ಹತ್ರ ಹೋಗಿ ಎಲ್ಲಾ ಭೇಷಾಗ್ಲಿ ಅಂತ ಬೇಡೆಕೆಂತೀವಿ, ಆಯಪ್ಪ ಪಾಪ ಅಷ್ಟೊತ್ತಿಂದ ಬೇಡೆಕೆಂತಾ ಇದಾನೆ ಬುಟ್ಬುಡ್ರಿ'.

'ಏ ಮುದೇಕೆ, ತೊಪ್ಪನ್ನ ಚಮಿಸೋಕೆ ನಾವೇನ್ ದೇವ್ರ ಅಂತ ತಿಳ್ಕಂಡೀಯಾ ಹೆಂಗೆ?' ಸಿಂಕೇಟಿ ಸಿಂಡ್ರಿಸಿಕೊಂಡ.

'ಎಲ್ಲಾ ತೊಪ್ಪನ್ನೂ ಅವ್ನೇ ಚಮಿಸಬೇಕು ಅಂತೇನೂ ಇಲ್ಲ ಸಿಂಕೇಟಿ. ನಿಮ್ಮ ಮೈ ಮ್ಯಾಗ ಹಾಕ್ಕೆಂಡಿರೋ ಮುಸುಗು ತೆಗೆದು ವಳಾಗ ಮುಚ್ಚಿಗೆಂಡಿರೋ ಮನುಷ್ಯತ್ವ ಮೆರೆದು ಚಮಿಸಿದ್ರೆ, ನೀವೂ ದೇವರಾಗಬಹುದು. ಆಗ ನೀವು ಹುಟ್ಟಿದ್ದಕ್ಕೂ ಈಟ ಸಾರ್ಥಕವಾಗ್ತತೆ ತಿಳ್ಕಳಿ'.

ಹುಸೇನ್‌ಬೀ ಉಪದೇಶ, ಈರವ್ವ ಜೋಗತಿ ಈಟಿ, ಹೋಟೆಲ್ ಹಂಪಮ್ಮನ ಅನುಭವದ ಮಾತುಗಳು, ಜೊತೆಗೆ ಗಾದ್ಲಿಂಪ್ಪನ ಕರುಣಾಜನಕ ಕಥೆ, ನೆರೆದವರ್ಯಾರನ್ನೂ ಬಿಡದೆ ಎಲ್ಲರ ಮನಸ್ಸನ್ನು ಒಂದ್ಸಲ ಕಲ್ಸ ಮಲ್ಸಾ ಮಾಡ್ಬಿಡ್ತು.

ಲೋಕಪ್ಪ ಪಂಚಾಯ್ತಿ ಗ್ವಾಡಿಗೆ ಗೋಣು ಕೊಟ್ಟು ಅಲ್ಲಾಡದೆ ನಿಂತುಬುಟ್ಟ.

ಇಲ್ಲಿಯವರೆಗೆ ಕಣ್ಣುಗಳಲ್ಲೇ ಕೊಡ್ಲೆಬಡಿಗೆ ಆಡಿಸುತ್ತಿದ್ದ ಸಿದ್ಲಿಂಗನ ಕಣ್ಣುಗಳು ಒದ್ದೆಯಾದವು. ದುಬ್ಬ ಸೀನನ ಸೆಡವು, ಸಿಂಕೇಟಿಯ ರೋಷ ಮಳ್ಯಾಗಿನ ಕೆಂಡವಾಯ್ತು. ಈರಣ್ಣ ಮುದ್ಯಾತನ ಕೋಲು ಅವನಿಗರಿವಿಲ್ಲದಂತೆಯೇ ನೆಲಕ ಬಿತ್ತು.. 'ಯಪ್ಪೋ ಯಪ್ಪೋ ನಾನು ಕಳ್ಳ ಅಲ್ಲ, ನಾನು ಕಳ್ಳ ಅಲ್ಲ' ಅಂತ ಮತ್ತೆ ಮತ್ತೆ ಲೋಕಪ್ಪನ ಕಾಲಿಗೆ ಬಿದ್ದು ಗೋಗರೆಯುತ್ತಿದ್ದ ಗಾದ್ಲಿಂಗಪ್ಪನ ರೋದನ ಊರು ತುಂಬ ಬೊವ್ವನ ತಪ್ಪಡಿಯ ಶಬ್ದವನ್ನೂ ಮೀರಿಸುವಷ್ಟು ಪ್ರತಿಧ್ವನಿಸಿತು. ಲೋಕಪ್ಪ ಗಾದಿಲಿಂಗಪ್ಪನನ್ನು ರಟ್ಟೆ ಹಿಡ್ದು ಮ್ಯಾಕೆತ್ತಿದ. ಅವನ ಆರ್ತನಾದ ಸುಳ್ಳು ಕೇಕೆಯೆಂದುಕೊಂಡು ಮಜಾ ತಗಳ್ತಿದ್ದ ಜನರ ಮೈ ಈಗ ಒದ್ದೆಯಾಯ್ತು. ಲೋಕಪ್ಪ ಪಂಚಾಯ್ತಿ ಅಧ್ಯಕ್ಷನಾದ್ರೂ ಅವನೂ ರೈತನೇ. ಗಾದಿಲಿಂಗನ ಪರಿಸ್ಥಿತಿಗೆ ಮಮ್ಮಲ ಮರುಗಿದ ಕೆಸರಿನ್ಯಾಗಿನ ಎಮ್ಮೆ ಒದ್ದಾಡಿದಂಗೆ ಆ ಕಡೆ ಈ ಕಡೆ ಗಸ್ತು ತಿರುಗಿದ. ಕೈ ಕೈ ಹಿಸುಕಿಕೊಂಡು ಕಡೆಗೂ ಬಾಯಿಬುಟ್ಟ. 'ಇದು ಬರೀ ಗಾದ್ಲಿಂಗನ ಸಮಸ್ಯೆ ಅಷ್ಟೇ ಅಲ್ಲ, ವಕ್ಕಲತನ ಮಾಡೋ ಎಲ್ಲಾ ರೈತರನ್ನು ಅಕ್ಕಲು ಮಾಡೋ ಸಂದರ್ಭ ಐತೆ. ಹೊಲ ಇದ್ರೂ ಉತ್ತಲಾರದಂಗ ಬಿತ್ತಲಾರದಂಗ ಆಗೀವಿ. ಹಿಂಗೇ ಆದರೆ

ನಮ್ಮ ಮುಂದಿನ ಮಕ್ಕಳು ಹಸುರಿನ ಹೆಸರನ್ನ ಪೇಪರಿನ್ಯಾಗ ನೋಡ್ಡೋ ಕಾಲ ದೂರ ಇಲ್ಲ' ಅಂತ ಎಲ್ರಿಗೂ ಹೇಳ್ದ. ಮಾಡಕ ಮಕ ಮಾಡಿ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟ. ಏನೋ ನಿರ್ಧರಿಸಿ, ಡಾಯರ್‍ರಿನ ಜೋಬಿಗೆ ಕೈಯಾಕಿ ಐನೂರು ರೂಪಾಯಿಯ ಪಾಚು ನೋಟೊಂದನ್ನು ತೆಗೆದು ಅವನ ಕೈಯೊಳಗಿಟ್ಟ. ಲೋಕಪ್ಪ ಗಾದಿಲಿಂಗಪ್ಪನಿಗೆ ರೊಕ್ಕ ಕೊಟ್ಟಿದ್ದು ಉಳಿದವರಿಗೆ ಏನಾಯ್ತೋ; ಈರಣ್ಣ ಮುದ್ಯಾತ ಕೋಲು ಬಿಸಾಕಿ ಗೋಸ್ಯಾಗಳ ಗೊಂಟು ಬಿಚ್ಚಿದ. ಸಿದ್ಲಿಂಗ ಮುಂದೆ ಬಂದ, ಶೀನ ಬಂದ, ಸಿಂಕೇಟಿ ಸರ ಸರ ಬಂದು ಕೈಯಾಗಳ ಉಂಗುರ ಕಿತ್ತಿದ. ಅವನ ಕಥೆಗೆ ಕರಗಿ ಊರವರೆಲ್ಲಾ ಬಂದರು. ಅವನ ಹುಡಿ ತುಂಬಿಸಿದ್ರು. ಗಾದಿಲಿಂಗಪ್ಪ ಏನೂ ಹೇಳದಾದ. ಕ್ಷಣವೊಮ್ಮೆ ಎಲ್ಲರೂ ಸ್ತಬ್ಧರಾಗಿರುವಾಗ ಗಾದ್ಲಿಂಗಪ್ಪ ತುಂಬಿದ ಉಡಿಯನ್ನು ನೋಡಿ ಸುತ್ತಲೂ ದಿಟ್ಟಿಸಿದ. ಊರಿನವರ ಕಣ್ಣುಗಳಲ್ಲೆಲ್ಲಾ ಆತನ ಬಿಂಬ ಕಾಣಿಸಿತು. ಅವರ ಋಣದ ಭಾರವನ್ನು ಹೊರಲಾರದ ಅವನು ಇಂತಹ ಬರಗಾಲದಲ್ಲಿ ತನ್ನ ಎರಡೂ ಕಣ್ಣುಗಳಿಂದ ಸಮೃದ್ಧವಾದ ಜಡಿ ಮಳೆ ತಂದ. ಗಾದ್ಲಿಂಗಪ್ಪ ತಂದ ಮಳೆಗೆ ಮರುಗಿದ ಜನರ ಕಂಗಳಿಂದ ಕೂಡ ಮತ್ತೆ ಮಳೆ ಬಂತು.

❖

(ಕರವೇ ನಲ್ನುಡಿ – ಜನವರಿ, 2013)

ಅನುಬಂಧ

ಲೇಖಕರ ವಿಳಾಸ – ೨೦೧೨ :

೧. **ಡಾ. ಕುಂ. ವೀರಭದ್ರಪ್ಪ**
"ಅನ್ನಪೂರ್ಣ",
ಪೊಲೀಸ್ ಠಾಣೆಯ ಹತ್ತಿರ,
ಕೊಟ್ಟೂರು, ಬಳ್ಳಾರಿ ಜಿಲ್ಲೆ.

೨. **ಡಾ. ಕೆ. ಸತ್ಯನಾರಾಯಣ**
ನಂ.೯, "ಪ್ರಕೃತಿ" ೧೩ನೇ ಮುಖ್ಯರಸ್ತೆ,
೬ನೇ ಅಡ್ಡರಸ್ತೆ, ಆರ್.ಕೆ.ಲೇಔಟ್,
ಪದ್ಮನಾಭನಗರ, ಬೆಂಗಳೂರು–೭೦

೩. **ಬಿ.ಟಿ.ಜಾಹ್ನವಿ**
ನಂ ३೪೯೫/೮,
ರಾಮಕೃಷ್ಣ ನಿಲಯ ಅಪ್‌ಸ್ಟೇರ್ಸ್,
೧೩ನೇ ಕ್ರಾಸ್, ಆಂಜನೇಯ ದೇವಸ್ಥಾನದ ಹತ್ತಿರ,
ವಿದ್ಯಾನಗರ, ದಾವಣಗೆರೆ–೫೭೭ ೦೦೫

೪. **ಡಾ. ಎಂ.ಎಸ್.ವೇದಾ**
"ಆಲಂಪು" ನಂ. ೧೨೫೭,
ಪಡುವಣ ರಸ್ತೆ, ೪ನೇ ಕ್ರಾಸ್,
೪ನೇ ಹಂತ, ಟಿ.ಕೆ.ಬಡಾವಣೆ,
ಕುವೆಂಪು ನಗರ, ಮೈಸೂರು–೫೭೦ ೦೨೩

೫. **ಸುನಂದ ಪ್ರಕಾಶ ಕಡಮೆ**
೯೦, "ನಾಗಸುಧೆ",
ಕಾಳಿದಾಸ ನಗರ ವಿಸ್ತರಣೆ,
ಹುಬ್ಬಳ್ಳಿ–೫೮೦ ೦೩೧

೬. **ಬಿ. ಎಂ. ಹನೀಫ್**
ಮುಖ್ಯ ಉಪಸಂಪಾದಕರು,
'ಸುಧಾ' ವಾರಪತ್ರಿಕೆ, ನಂ. ೭೫,
ಎಂ.ಜಿ.ರಸ್ತೆ, ಬೆಂಗಳೂರು-೫೬೦ ೦೦೧

೭. **ನಾಗಮಂಗಲ ಕೃಷ್ಣಮೂರ್ತಿ**
ಪ್ರಥಮ ದರ್ಜೆ ಸಹಾಯಕರು, ಉಪ ನಿರ್ದೇಶಕರ ಕಛೇರಿ,
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,
ಮಂಡ್ಯ - ೫೭೧ ೪೦೧

೮. **ಡಾ. ಡಿ. ಎಸ್. ಚೌಗಲೆ**
ನಂ. ೭೧೬, "ಚೌರಂಗ"
ರಾಮತೀರ್ಥ ನಗರ,
ಬೆಳಗಾವಿ - ೫೯೦ ೦೧೫

೯. **ಕಣಾದ ರಾಘವ**
ಕೇರಾಫ್ ನರಹರಿ ಕೇಶವ ಭಟ್, ನಂ ೨೬,
ಸೂರ್ಯ ಶಾರದ, ೪ನೇ ಬಿ ಮೇನ್, ೬ನೇ ಕ್ರಾಸ್,
ನವೋದಯ ನಗರ, ಬೆಂಗಳೂರು-೫೬೦ ೦೭೬

೧೦. **ಡಾ. ಟಿ. ಗೋವಿಂದರಾಜು**
೭೬೫, ೪ನೇ ಮೈನ್,
ಕಿರ್ಲೋಸ್ಕರ್ ಬಡಾವಣೆ,
ಹೇಸರಘಟ್ಟ ರಸ್ತೆ, ಬೆಂಗಳೂರು-೫೬೦ ೦೭೩

೧೧. **ಇಂದ್ರಕುಮಾರ್ ಎಚ್. ಬಿ.**
೧೬೪, ಮಾತೃಪಿತೃ ನಿಲಯ,
ಡಿಸಿ.ಎಂ. ಟೌನ್‌ಶಿಪ್, ಸಿ-ಬ್ಲಾಕ್,
ದಾವಣಗೆರೆ-೫೭೭ ೦೦೩
೧೨. **ಡಾ. ಎಚ್. ಎಸ್. ಅನುಪಮಾ**
ಜಲಜ ಜನರಲ್ ಮತ್ತು ಮೆಟರ್ನಿಟಿ ಕ್ಲಿನಿಕ್,
ಕವಲಕ್ಕಿ, ಹೊನ್ನಾವರ ತಾಲ್ಲೂಕು,
ಉತ್ತರಕನ್ನಡ ಜಿಲ್ಲೆ.

೧೩. **ಮಮತಾ ಆರ್.**
w/o ಡಾ. ವಿನೋದ್ ಶೇಟ್
ತಥಾಗತ ಹಾರ್ಟ್‌ಕೇರ್, ನಂ. ೩೨/೬೦,
೨ನೇ ಮುಖ್ಯರಸ್ತೆ (ಕೆನರಾ ಬ್ಯಾಂಕ್ ನಂತರ)
ವೈಯಾಲಿಕಾವಲ್, ಬೆಂಗಳೂರು – ೫೬೦ ೦೦೩

೧೪. **ಎಸ್. ಬಿ. ಜೋಗುರ**
ಎನ್.ಬಿ.ಜ್ಯೋತಿ ಶಾಲೆಯ ಹತ್ತಿರ,
ಜಲದರ್ಶಿನಿ ನಗರ,
ಧಾರವಾಡ – ೫೮೦ ೦೦೩

೧೫. **ಮೋದೂರು ತೇಜ**
ವೆಂಕಟೇಶ್ವರ ನಗರ,
ಚಳ್ಳಕೆರೆ – ೫೭೭ ೫೨೨

೧೬. **ಚನ್ನಪ್ಪ ಅಂಗಡಿ, ಬಮ್ಮನಹಳ್ಳಿ**
ಕೃಷಿ ಅಧಿಕಾರಿ, "ಕಾಯಕ",
೧೪ಎ/೮೫, ಕುಮಾರೇಶ್ವರ ನಗರ,
ಬೆಳಗಾವಿ ರಸ್ತೆ, ಧಾರವಾಡ – ೫೮೦ ೦೦೮

೧೭. **ಮಂಜುನಾಥ ನಾಯ್ಕ್**
ನಂ. ೩೨೦, ೮ನೇ 'ಎ' ಕ್ರಾಸ್,
ಎರಡನೇ ಮೈನ್, ಸೌಂದರ್ಯನಗರ,
ಸಿಡೇದಹಳ್ಳಿ, ನಾಗಸಂದ್ರ ಅಂಚೆ,
ಬೆಂಗಳೂರು – ೫೬೦ ೦೭೩

ಲೇಖಕರ ವಿಳಾಸ – ೨೦೧೩

೧. **ಡಾ. ಅಮರೇಶ ನುಗಡೋಣಿ**
ಪ್ರಾಧ್ಯಾಪಕರು,
ಕನ್ನಡ ವಿಶ್ವವಿದ್ಯಾಲಯ, ಹಂಪಿ,
ವಿದ್ಯಾರಣ್ಯ, ಬಳ್ಳಾರಿ – ೫೮೩ ೨೭೬

೨. **ಡಾ. ಪ್ರಹ್ಲಾದ ಅಗಸನಕಟ್ಟೆ**
ಸಾರ್ವಜನಿಕ ಸಂಪರ್ಕಾಧಿಕಾರಿ,
ಕಿಮ್ಸ್, ಹುಬ್ಬಳ್ಳಿ – ೫೮೦ ೦೨೧

೩. **ಸುಮಂಗಲಾ**
ನಂ. ೧೦೦/೯, ೯ನೇ ಕ್ರಾಸ್,
ಗಂಗೋತ್ರಿ ವೃತ್ತದ ಬಳಿ, ೨೦ನೇ ಮೇನ್,
ಬಿ.ಟಿ.ಎಂ. ಒಂದನೇ ಹಂತ,
ಬೆಂಗಳೂರು – ೫೬೦ ೦೬೮

೪. **ಡಾ. ಲೋಕೇಶ ಅಗಸನಕಟ್ಟೆ**
"ದಶಮಿ", ೧ನೇ ಮುಖ್ಯರಸ್ತೆ,
ತರಳಬಾಳು ಬಡಾವಣೆ,
ಚಿತ್ರದುರ್ಗ – ೫೭೭ ೫೦೨

೫. **ಮಹಂತೇಶ ನವಲಕಲ್**
ವಿದ್ಯಾಪೋಷಕ್, ವಿದ್ಯಾಗಿರಿ
ಯಶೋದಾ ಮಂಗಲ ಸದನ,
ಧಾರವಾಡ – ೫೮೦ ೦೦೪

೬. **ಕಂನಾಡಿಗಾ ನಾರಾಯಣ**
೯, "ಸೃಜನಾ", ೩ನೇ ಮುಖ್ಯರಸ್ತೆ,
ಭುವನೇಶ್ವರಿ ನಗರ, ೮ನೇ ಮೈಲಿ,
ಟಿ.ದಾಸರಹಳ್ಳಿ, ಬೆಂಗಳೂರು – ೫೬೦ ೦೫೭

೭. **ಡಾ. ಬಸು ಬೇವಿನಗಿಡದ**
"ಸಿರಿ ಚೈತ್ರ", ವಿಜಯನಗರ,
ಬನಶಂಕರಿ ನಗರದ ಹತ್ತಿರ,
ಕೆಳಗೇರಿ ರಸ್ತೆ, ಧಾರವಾಡ – ೫೮೦ ೦೦೮

೮. **ಸಂದೀಪ ನಾಯಕ**
ಉಪ ಸಂಪಾದಕರು, ಪ್ರಜಾವಾಣಿ,
ನಂ. ೭೫, ಮಹಾತ್ಮಾಗಾಂಧಿ ರಸ್ತೆ,
ಬೆಂಗಳೂರು – ೫೬೦ ೦೦೧

೯. **ಕನಕರಾಜು ಆರನಕಟ್ಟೆ**
ಆರನಕಟ್ಟೆ ಅಂಚೆ, ಹಿರಿಯೂರು ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ – ೫೭೭ ೫೯೬

೧೦. **ಡಾ. ಮಿರ್ಜಾ ಬಷೀರ್**
೧೬೭, ೯ನೇ "ಸಿ" ಕ್ರಾಸ್,
ಗಂಗೋತ್ರಿ ನಗರ, ಎಸ್.ಐ.ಟಿ. ಬಡಾವಣೆ,
ತುಮಕೂರು – ೫೭೨ ೧೦೩

೧೧. **ಬಸವಣ್ಣೆಪ್ಪ ಕಂಬಾರ**
ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ,
ಪಠ್ಯಪುಸ್ತಕ ವಿಭಾಗ, "ಜ್ಞಾನ ಸಂಗಮ",
ಬೆಳಗಾವಿ – ೫೯೦ ೦೧೮

೧೨. **ಟಿ. ಕೆ. ದಯಾನಂದ**
೧೧೧೬/ಎ, ೨ನೇ ಮಹಡಿ,
೬ನೇ ಮುಖ್ಯರಸ್ತೆ, ೭ನೇ ಬ್ಲಾಕ್,
ಬನಶಂಕರಿ ಮೂರನೇ ಹಂತ,
ಹೊಸಕೆರೆಹಳ್ಳಿ, ಬೆಂಗಳೂರು – ೫೬೦ ೦೮೫

೧೩. **ಶ್ರೀನಿವಾಸ ಜೋಕಟ್ಟೆ**
ಸಂಪಾದಕರು, 'ಸ್ನೇಹ ಸಂಬಂಧ',
ಕರ್ನಾಟಕ ಸಂಘ, ಮೊಗಲ್ ಲೇನ್,
ಮಾತುಂಗ ಪಶ್ಚಿಮ, ಮುಂಬೈ-೪೦೦ ೦೧೬

೧೪. **ಹನುಮಂತ ಹಾಲಿಗೇರಿ**
ಬಸಮ್ಮ ಜಾವೂರ ಲಕ್ಕಲಕಟ್ಟಿ,
ರೋಣ ತಾಲ್ಲೂಕು, ಗದಗ ಜಿಲ್ಲೆ

೧೫. **ಗವಿಸಿದ್ಧ ಹೊಸಮನಿ**
ಉಪಸಂಪಾದಕರು, ವಿಜಯ ಕರ್ನಾಟಕ,
ಸರ್ಕ್ಯೂಟ್‌ಹೌಸ್ ರಸ್ತೆ, ಮೊಹಿಂದರ್ ಪ್ಲಾಜಾ,
ಎರಡನೇ ಮಹಡಿ, ಹುಬ್ಬಳ್ಳಿ – ೫೮೦ ೦೨೯

೧೬. **ಲಕ್ಷ್ಮಣ ಬದಾಮಿ**
ಸಿರೂರ,
ಬಾಗಲಕೋಟೆ ಜಿಲ್ಲೆ – ೫೮೭ ೧೨೦

೧೭. **ಶಿವಲಿಂಗಪ್ಪ ಹಂದಿಹಾಳು**
ಹಂದಿಹಾಳು ಅಂಚೆ
ಬಳ್ಳಾರಿ – ೫೮೩ ೧೦೩